ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೮೪

ಸಾಹಿತ್ಯಮಾಲೆ – ೭೨

ಪ್ರಧಾನ ಸಂಪಾದಕರು

**ಡಾ. ಪ್ರಧಾನ್ ಗುರುದತ್ತ**

# ಮಹಾತ್ಮಾ ಗಾಂಧೀ – ನನ್ನ ತಾತ

## (ಭಾಗ ೨ : ಸ್ವಾತಂತ್ರ್ಯದ ನೀತಿ ನಿರೂಪಕರು)

# ಮಹಾತ್ಮಾ ಗಾಂಧೀ – ನನ್ನ ತಾತ

## (ಭಾಗ ೨ : ಸ್ವಾತಂತ್ರ್ಯದ ನೀತಿ ನಿರೂಪಕರು)

ಮೂಲ

**ಸುಮಿತ್ರಾ ಗಾಂಧೀ ಕುಲಕರ್ಣಿ**

ಅನುವಾದ

**ಪ್ರೊ. ಬಿ.ವೈ. ಲಲಿತಾಂಬ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ

ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ

ಬೆಂಗಳೂರು – ೫೬೦ ೦೫೬

MAHATMA GANDHI - NANNA TATA : Bhaga 2 : Svatantrayada Niti Nirupakaru - (Mahatma Gandhi My Grand Father; Part 2: Policy-maker of Independence); KannadaTranslation of 'Mahatma Gandhi - Mere Pitamah (Part 2: Svatantra Ke Nitikar) by Smt. Sumitra Gandhi Kulakarni; Translation from Hindi into Kannada by Prof. B.Y. Lalithamba Editor-in-Chief : Dr. Pradhan Gurudatta ; Published by Sri P. Narayana Swamy, Registrar, Kuvempu Bhasha Bharathi Pradhikara; Kalagrama, Jnana Bharathi, Behind Bangalore University Campas, Mallattahalli, Bangalore - 560 056; 2010; Pp. xxiv+550, Price : Rs. 250/-

© : ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

ಮುದ್ರಣ : ೨೦೧೦
ಪುಟಗಳು : xxiv + ೫೫೦
ಬೆಲೆ : ರೂ. ೨೫೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ವಿಶ್ವನಾಥ್ ಶೆಟ್ಟಿಗಾರ್**

**ISBN : 978-93-80415-09-3**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦೦೨೦ ದೂ : ೨೩೩೪೨೭೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೪೭/೦೯

ದಿನಾಂಕ : ೦೫.೦೮.೨೦೦೯

# ಮೊದಲ ಮಾತು


ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನು ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.



(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಕಾರಜೋಳ**
ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

೫ ಅಕ್ಟೋಬರ್ ೨೦೧೦

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**

ಕರ್ನಾಟಕ ಸರ್ಕಾರ

**ಬಿ.ಆರ್. ಜಯರಾಮರಾಜೇ ಅರಸ್,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ ೨
ನೆಲ ಮಹಡಿ, ವಿಕಾಸ ಸೌಧ
ಬೆಂಗಳೂರು – ೦೧


# ಹಾರೈಕೆ

"ಜಗದ ಕವಿ, ಯುಗದ ಕವಿ" ಎಂಬ ಪ್ರಶಂಸೆಗೆ ಪಾತ್ರರಾಗಿರುವ ಕುವೆಂಪು ಅವರ ಕೃತಿಗಳು ವಿಶ್ವ ಸಾಹಿತ್ಯಕ್ಕೆ ಕನ್ನಡದ ಅಪೂರ್ವ ಕೊಡುಗೆಗಳೇ ಆಗಿವೆ. ಕನ್ನಡಿಗರಲ್ಲಿ ಕನ್ನಡದ ಕೆಚ್ಚು–ನೆಚ್ಚುಗಳನ್ನೂ, ಆತ್ಮಾಭಿಮಾನವನ್ನೂ ಮೂಡಿಸಿದ್ದ ಈ ರಾಷ್ಟ್ರಕವಿಯ ಸಾಧನೆಗಳನ್ನು ಕನ್ನಡ ನಾಡು ಬಗೆ–ಬಗೆಯಾಗಿ ಸ್ಮರಿಸಿಕೊಂಡಿದೆ. ಅವರ ಹೆಸರಿನಲ್ಲಿ ವಿಶ್ವವಿದ್ಯಾನಿಲಯ, ಅಧ್ಯಯನ ಕೇಂದ್ರಗಳು, ಕಲಾಕ್ಷೇತ್ರಗಳು, ಶಿಕ್ಷಣ ಸಂಸ್ಥೆಗಳು ಸ್ಥಾಪಿತವಾಗಿವೆ. ಇವೆಲ್ಲ ಆ ಮಹಾಚೇತನಕ್ಕೆ ಗೌರವವನ್ನು ಅರ್ಪಿಸುವ ವಿವಿಧ ಬಗೆಗಳೇ ಆಗಿವೆ. ಅವರ ಜನ್ಮಸ್ಥಳವಾದ ಕುಪ್ಪಳ್ಳಿಯಲ್ಲಿ ಸ್ಮಾರಕವನ್ನೂ, ಅಧ್ಯಯನ ಕೇಂದ್ರವನ್ನೂ, ಅಭಯಾರಣ್ಯವನ್ನೂ ಸ್ಥಾಪಿಸುವಲ್ಲಿ ಕರ್ನಾಟಕ ಸರ್ಕಾರ ಸಕ್ರಿಯವಾಗಿ ಪಾಲ್ಗೊಂಡಿದೆ. ಅವರ ಮಹಾಕಾವ್ಯ 'ಶ್ರೀ ರಾಮಾಯಣ ದರ್ಶನಂ' ಅನ್ನು ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಹೊರತರುವ ಯೋಜನೆಗೂ ಕರ್ನಾಟಕ ಸರ್ಕಾರ ನೆರವಾಗಿದೆ. ಅವರ ಸಾಹಿತ್ಯದ ಬಹ್ವಂಶ ಅನೇಕ ಭಾರತೀಯ ಭಾಷೆಗಳಿಗೆ ಮಾತ್ರವಲ್ಲದೆ, ಇಂಗ್ಲಿಷ್‌ನಂಥ ಅನೇಕ ವಿದೇಶಿ ಭಾಷೆಗೂ ಅನುವಾದಗೊಂಡಿದೆ, ಆಶ್ಚರ್ಯವನ್ನು ಮೂಡಿಸಿದೆ. ಇಷ್ಟಾಗಿಯೂ ಅವರ ಹೈಮಾಚಲೋಪಮ ಸಾಧನೆಗೆ ಇವೆಲ್ಲ ಕಿರುಕಾಣಿಕೆಗಳೇ ಆಗಿವೆ. ಈ ಹಿನ್ನೆಲೆಯಲ್ಲಿ ಶ್ರೀ ಕುವೆಂಪು ಅವರ ಸಾಧನೆಗೆ ಯೋಗ್ಯವಾದಂಥ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬ ತನ್ನ ಮಹತ್ವಾಕಾಂಕ್ಷೆಯ ಯೋಜನೆಯ ಫಲವಾಗಿ ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಅವರಣದಲ್ಲಿ ಒಂದು ಬೃಹತ್ ಭವನ ಸಮುಚ್ಚಯವನ್ನು ನಿರ್ಮಿಸಿ 'ಕುವೆಂಪು ಭಾಷಾಭಾರತಿ'ಯನ್ನು ಕರ್ನಾಟಕ ಸರ್ಕಾರ ಆರಂಭಗೊಳಿಸಿದೆ. ಕುವೆಂಪು ಅವರ ಅಭಿಮಾನಿಗಳಿಗೆ, ಶಿಷ್ಯರಿಗೆ ಮತ್ತು ಸಾಹಿತ್ಯ ಪ್ರಿಯರಿಗೆ ಇದು ಇಷ್ಟವಾಗುತ್ತದೆಂದೂ, ಅವರೆಲ್ಲರ ಬಹುಬಗೆಯ ಕನಸುಗಳು ಸಾಕಾರಗೊಳ್ಳುತ್ತವೆಂದೂ ನಂಬಿದ್ದೇವೆ.

'ಕುವೆಂಪು ಭಾಷಾಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರ ಮೀಸಲಾದ ಸಂಸ್ಥೆಯಾಗಿರದೇ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದು ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ ಮತ್ತು

ಅಂತರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ. ಸಾಹಿತ್ಯ ಮತ್ತು ವಿಜ್ಞಾನಗಳನ್ನು ಕುವೆಂಪು ಅವರು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದವರು. ಹೀಗಾಗಿ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ಕ್ಷೇತ್ರಕ್ಕೂ ಭಾಷಾಭಾರತಿ ಕೈಚಾಚಲಿದೆ ಹಾಗೂ ಕನ್ನಡವನ್ನು ಶ್ರೀಮಂತಗೊಳಿಸುವ ದಿಕ್ಕಿನಲ್ಲಿ ಹೆಜ್ಜೆ ಹಾಕಲಿದೆ. ಇದರ ಆಶ್ರಯದಲ್ಲಿ ತೌಲನಿಕ ಸಾಹಿತ್ಯ, ಪತ್ರಿಕೋದ್ಯಮ, ಕಾನೂನು, ವಿಜ್ಞಾನ, ಮಾನವಿಕ ವಿಷಯಗಳು – ಇವುಗಳನ್ನು ಕುರಿತ ಅನುವಾದ ಶಿಕ್ಷಣಗಳು, ವಿದೇಶಿ ಭಾಷೆ ಶಿಕ್ಷಣ ಕಾರ್ಯಕ್ರಮಗಳು ಹಾಗೂ ತರಬೇತಿ ಕಾರ್ಯಕ್ರಮಗಳು ರೂಪುಗೊಳ್ಳಲಿವೆ; ಮಹತ್ವದ ಪ್ರಕಟಣೆಗಳೂ ಹೊರಬರಲಿವೆ. ಹೀಗೆ ಇದೊಂದು 'ಮಿನಿ ವಿಶ್ವವಿದ್ಯಾನಿಲಯ'ವಾಗಿ ಬೆಳೆದು ನಿಲ್ಲಲಿದೆ. ಕುವೆಂಪು ಭಾಷಾಭಾರತಿ ಈಗಾಗಲೇ ಹಲವು ಮಹತ್ವಪೂರ್ಣ ಯೋಜನೆಗಳನ್ನು ರೂಪಿಸಿದೆ. ಕುವೆಂಪು ಸಂಚಯದಂಥ ಮಹಾಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಪ್ರಕಟಿಸುವುದು, ಜಗತ್ತಿನ ಎಲ್ಲ ಭಾಷೆಗಳಲ್ಲಿನ ಶ್ರೇಷ್ಠ ಕೃತಿಗಳ ಅನುವಾದಗಳನ್ನು ಹೊರತರುವುದು, ಕನ್ನಡದ ಶ್ರೇಷ್ಠ ಕೃತಿಗಳನ್ನು ಭಾರತೀಯ ಮತ್ತು ವಿದೇಶಿ ಭಾಷೆಗಳಿಗೆ ಕೊಂಡೊಯ್ಯುವುದು – ಇವೇ ಮೊದಲಾದ ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಸಾಕಾರಗೊಳಿಸುವಲ್ಲಿ ನಾಡಿನ ವಿದ್ವದ್–ಸಮುದಾಯ ಸಹಾಯ–ಸಹಕಾರ–ಮಾರ್ಗದರ್ಶನಗಳನ್ನು ನೀಡಬೇಕೆಂದು ಸರ್ಕಾರ ಬಯಸುತ್ತದೆ. ಕನ್ನಡ ಅನುಷ್ಠಾನದ ಸರ್ಕಾರದ ಯೋಜನೆಗಳಿಗೂ ಇಂಥ ಕಾರ್ಯಕ್ರಮಗಳಿಂದ ಇಂಬು ದೊರೆಯುತ್ತದೆಂದು ನಂಬಿದ್ದೇವೆ, ಇದಕ್ಕೆ ಅಗತ್ಯವಾದ ಎಲ್ಲ ನೆರವನ್ನು ಸರ್ಕಾರ ನೀಡುತ್ತದೆ. ಕುವೆಂಪು ಭಾಷಾಭಾರತಿಯ ಬಹುಮುಖೀ ಕಾರ್ಯಚಟುವಟಿಕೆಗಳು ಇತೋಪ್ಯತಿಶಯವಾಗಿ ಬೆಳೆಯಲಿ; ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳ ಮಹತ್ವಪೂರ್ಣ ಕೇಂದ್ರವಾಗಿ ನಾಡಿನ ಜನರ ಗಮನವನ್ನು ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

(ಬಿ.ಆರ್. ಜಯರಾಮರಾಜೇ ಅರಸ್)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ.ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು, ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಅದು ಅನೇಕ ಮಹತ್ವದ ಪ್ರಕಟಣೆಗಳನ್ನು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಮನು ಬಳಿಗಾರ್)

# ಅರಿಕೆ

ಶ್ರೀ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಉಪಕ್ರಮ ಮತ್ತು ದಣಿವರಿಯದ ಶ್ರಮದ ಫಲವಾಗಿ 'ಮಹಾತ್ಮಾ ಗಾಂಧೀ : ಮೇರೇ ಪಿತಾಮಹ್' ಪುಸ್ತಕದ ಕನ್ನಡ ಆವೃತ್ತಿ ಜನರ ಮುಂದೆ ಬರುತ್ತ ಇದೆ.

ಸುಮಾರು ೧೫ ವರ್ಷಗಳಿಂದ ನಾವು ಬೆಂಗಳೂರಿನ ನಿವಾಸಿಗಳೇ ಆಗಿಬಿಟ್ಟಿದ್ದೇವೆ. ಇಲ್ಲಿಯ ಜನಸಾಮಾನ್ಯರ ಅಭಿಜಾತ ಸೌಜನ್ಯ ಸಹಜವಾಗಿಯೇ ಅವರ ನಡೆನುಡಿಗಳಲ್ಲಿ ಕಾಣದೊರೆಯುತ್ತಿದೆ. ಇಲ್ಲಿಯ ಜನರೆಲ್ಲರೂ ಕಲಾಭಿಮಾನಿಗಳು ಮತ್ತು ಕೋಮಲ ಸ್ವಭಾವದವರು. ಇಲ್ಲಿಯ ಪ್ರಕೃತಿಯೂ ತುಂಬ ರಮ್ಯವಾಗಿದೆ ಹಾಗೂ ಸುಖದಾಯಕವಾಗಿದೆ. ಹೀಗಾಗಿ ಕರ್ನಾಟಕ ರಾಜ್ಯ ಇಡೀ ದೇಶದಲ್ಲೆ. ಜನಪ್ರಿಯವಾಗಿಬಿಟ್ಟಿದೇ ಬಹುದೂರದಲ್ಲಿರುವ ವಿದೇಶಗಳ ಜನರೂ ಇಲ್ಲಿ ಬಂದು ನೆಲಸುತ್ತಿದ್ದಾರೆ. ಇಲ್ಲಿಯ ಮಧುರ ಭಾಷೆಯ ಹಾಗೂ ಸೌಮ್ಯ ಸಂಸ್ಕಾರದ ಸಮಾಜಕ್ಕೆ ಇದರ ಶ್ರೇಯಸ್ಸು ಪೂರ್ಣವಾಗಿ ಸಲ್ಲುತ್ತದೆ. ಈ ಸಮಾಜ ಎಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸುತ್ತದೆ ಹಾಗೂ ತನ್ನವರನ್ನಾಗಿ ಮಾಡಿಕೊಳ್ಳುತ್ತದೆ.

ನಾನು ಚಿಕ್ಕಂದಿನಿಂದಲೂ, ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಆಳವಾದ ವಿದ್ವತ್ತಿನ ಬಗ್ಗೆ ಹಾಗೂ ಸರ್ವಥಾ ಕಲ್ಯಾಣ ಮುಖಿಯಾದ ಆಡಳಿತ ವ್ಯವಸ್ಥೆಯ ಬಗ್ಗೆ ಕೇಳಿದ್ದೆ. ಸರದಾರ್ ವಲ್ಲಭ ಭಾಈ ಪಟೇಲ್ ಅವರ ಮನೆಯಲ್ಲಿ ಶ್ರೀಮನ್ಮಹಾರಾಜರನ್ನು ನೋಡುವ ಸೌಭಾಗ್ಯ ನನಗೆ ದೊರೆತಿತ್ತು. ಇದಕ್ಕೂ ಮೊದಲು ನನ್ನ ತಾತನವರಾಗಿದ್ದ ಬಾಪೂಜಿಯವರು ಅಸ್ವಸ್ಥರಾಗಿದ್ದು, ಅವರ ರಕ್ತದ ಒತ್ತಡ ತುಂಬ ಹೆಚ್ಚಾಗಿಬಿಟ್ಟಿದಾಗ, ಮೈಸೂರಿನ ಮಹಾರಾಜರೇ ಮೈಸೂರಿಗೆ ಬಂದು ವಿಶ್ರಾಂತಿಪಡೆದುಕೊಳ್ಳಬೇಕೆಂದೂ, ಆರೋಗ್ಯವನ್ನು ಉತ್ತಮ ಪಡಿಸಿಕೊಳ್ಳಬೇಕೆಂದೂ ಒತ್ತಾಯಪೂರ್ವಕವಾಗಿ ಅವರನ್ನು ಆಹ್ವಾನಿಸಿದ್ದರೆಂದು ನಾನು ಇನ್ನೂ ಚಿಕ್ಕವಳಾಗಿದ್ದಾಗಲೇ ಕೇಳಿದ್ದೆ. ೧೯೨೭ರಲ್ಲಿ ಗಾಂಧೀಜಿಯವರು ಎರಡು ತಿಂಗಳ ಕಾಲ ಹುಬ್ಬಳ್ಳಿಯಲ್ಲಿ ತಂಗಿದ್ದರು. ಕರ್ನಾಟಕದ ಸಮಶೀತೋಷ್ಣ ವಾಯುಗುಣ ಹಾಗೂ ಕಾವೇರಿಯ ನೀರಿನ ಪ್ರಭಾವದಿಂದಾಗಿ ಬಾಪೂಜಿಯವರ ಆರೋಗ್ಯ ಸುಧಾರಿಸತೊಡಗಿತು. ಮಹಾರಾಜರ ಅರಿವು ಮತ್ತು ನಡೆ–ನುಡಿಗಳ ಜೊತೆಗೆ, ಹೊಸ ಹೊಸ ವಿಚಾರಗಳನ್ನು ಆಳವಾಗಿ ಅರ್ಥಮಾಡಿಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರುವ ಜಾಣ್ಮೆಯನ್ನು ಕಂಡು ಬಾಪೂಜಿ ತುಂಬ ಸಂತೋಷಪಟ್ಟಿದ್ದರು. ವಾಸ್ತವವಾಗಿ ಅವರ ಸೇವೆ ಶುಶ್ರೂಷೆಗಳಿಂದಾಗಿಯೇ ಗಾಂಧೀಜಿಯವರ ಆರೋಗ್ಯವೂ ಸುಧಾರಿಸಿತ್ತು. ಇದು ಸಹಜವೇ. ಪ್ರಾಣದಾನ ಮಾಡಬಲ್ಲಂಥ ಇಲ್ಲಿಯ ನೆಲ ಹಾಗೂ ಇಲ್ಲಿಯ ಜನತೆಯ ಸೇವೆ ಅಖಿಲ ಸೇವೆಯ

ಸ್ವರೂಪದ್ದೇ ಆಗಿದ್ದಿರಬಹುದಾದರೂ, ಆರೋಗ್ಯದಾನ ಮಾಡಿದ ಶ್ರೇಯಸ್ಸಿನ ಹೆಚ್ಚುಪಾಲು ಅವರಿಗೇ ಸಂದಾಯವಾಗಬೇಕು.

ಕೊನೆಯದಾಗಿ, ನಾನು ಇನ್ನೊಂದು ವಿಚಾರವನ್ನು ಉಲ್ಲೇಖಿಸಲೇಬೇಕಾಗಿದೆ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಹಾಗೂ ಖುಷಿ ಇಂಟರ್ ನ್ಯಾಷನಲ್ ಸಂಸ್ಥೆಯ ಶ್ರೀ ರಾಚಪ್ಪ ಅವರ ಒತ್ತಾಯ ವಿಶ್ವಾಸಗಳಿಂದಾಗಿ ನನ್ನ ಹಿಂದೀ ಪುಸ್ತಕದ ಕನ್ನಡ ಆವೃತ್ತಿ ಜನತೆಯ ಮುಂದೆ ಬರುತ್ತಿದೆ. ಈ ಇಬ್ಬರು ಸಜ್ಜನ ಕನ್ನಡಿಗರ ಪ್ರೀತಿ–ವಿಶ್ವಾಸಗಳಿಗಾಗಿ ಹೃದಯಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ಈಗಂತೂ ಈ ಇಬ್ಬರೂ ಗಾಂಧೀ ಕುಟುಂಬದ ಗೌರವಾರ್ಹ ಸದಸ್ಯರೇ ಆಗಿಬಿಟ್ಟಿದ್ದಾರೆ. ಈ ಇಬ್ಬರಿಗೆ ವಂದನೆಗಳನ್ನು ಸಲ್ಲಿಸಲು ಶಬ್ದಗಳೇ ಸಾಲದಾಗಿಬಿಡುತ್ತವೆ, ಸಣ್ಣವಾಗಿ ಬಿಡುತ್ತವೆ.

ಇಂದಿನ ವಿಷಮ ಪರಿಸ್ಥಿತಿಯಲ್ಲಿಯೂ ಕನ್ನಡ ನಾಡಿನ ಜನತೆ ಎದೆಗುಂದದೆ ತನ್ನ ಮಾಧುರ್ಯ ಹಾಗೂ ಸಂಸ್ಕಾರನಿಷ್ಠವಾದ ಶಾಲೀನತೆಗಳೊಂದಿಗೆ ಸದಾ ಪ್ರಸನ್ನ–ಚಿತ್ತವಾಗಿದ್ದುಕೊಂಡು ನಿರಂತರವಾಗಿ ಪ್ರಗತಿಮುಖಿಯಾಗಿ ಸಾಗುತ್ತ ಇರಲಿ ಎಂಬ ಹೃದಯಾಂತರಾಳದ ಶುಭಕಾಮನೆಗಳೊಂದಿಗೆ ಗೌರವಪೂರ್ವಕ ಪ್ರೀತಿ ವಿಶ್ವಾಸಗಳನ್ನು ವ್ಯಕ್ತಪಡಿಸಬಯಸುತ್ತೇನೆ.

೧–೫–೨೦೧೦ **ಸುಮಿತ್ರಾ ಕುಲಕರ್ಣಿ**

ಬೆಂಗಳೂರು

# ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ.ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ : ೦೧.೯.೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚಯವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿತು. ಇದೇ ದಿನಾಂಕ: ೧೯.೦೮.೨೦೦೯ರಂದು ಬೆಳಗ್ಗೆ ೧೧.೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನೆ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು

(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು

(ಇ) ಪ್ರಕಟಣೆಗಳು

**(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :**

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.

(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು

(೩) ಪತ್ರಿಕೋದ್ಯಮ ಮತ್ತು ಭಾಷಾಂತರ

(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ

(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು

(೬) ತೌಲನಿಕ ಸಾಹಿತ್ಯ

(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ **ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್** ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

(ಆ) **ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ **'ಕುವೆಂಪು ಸಂಚಯ'** ಮತ್ತು **'ಪು.ತಿ.ನ ಸಂಚಯ'ಗಳನ್ನು** ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ **ಜಿ.ಎಸ್. ಶಿವರುದ್ರಪ್ಪ** ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು

ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: **ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ** (ಹಿಂದೀ), **ವಿಶ್ವನಾಥ ಸಂಚಯ** (ತೆಲುಗು), **ಆಶಾಪೂರ್ಣದೇವಿ ಸಂಚಯ** (ಬಂಗಾಳಿ), **ಶಿವಶಂಕರ ಪಿಳ್ಳೈ ಮತ್ತು ಎಂ.ಟಿ. ವಾಸುದೇವ ನಾಯರ್ ಸಂಚಯ** (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

**ರಾಷ್ಟ್ರೀಯ ಪ್ರಶಸ್ತಿ :** ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ **ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು** ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

**ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ** : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

(ಇ) **ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳೂ ಸೇರಿದಂತೆ ಇದುವರೆಗೆ ೮೦ಕ್ಕೂ ಹೆಚ್ಚು ಪುಸ್ತಕಗಳನ್ನು ಹೊರತರಲಾಗಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ.ಡಿ.ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್

ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಉಳಿದ ಎಂಟು ಸಂಪುಟಗಳು (೪ ರಿಂದ ೧೧), ವಿಜ್ಞಾನ-ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ-ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

**ಖಾಸಗಿ ಪ್ರಕಾಶಕರ ಸಹಭಾಗಿತ್ವ :** ಖಾಸಗಿ ಪ್ರಕಾಶಕರ ಸಹಾಯ-ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ ಸಲುವಾಗಿ ರಾಜ್ಯ ಸರ್ಕಾರ **ವಿಶೇಷ ಯೋಜನೆ**ಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ-ಸಾಹಿತ್ಯವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ-ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವದ್‌ವಲಯಕ್ಕೆ, ಸಾಹಿತ್ಯ

ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಶ್ರೀಮತಿ ಸುಮಿತ್ರಾ ಗಾಂಧೀ ಕುಲಕರ್ಣಿ ಅವರು 'ಮಹಾತ್ಮಾ ಗಾಂಧೀ: ಮೇರೇ ಪಿತಾಮಹ್' ಎಂಬ ಹೆಸರಿನಲ್ಲಿ ಎರಡು ಭಾಗಗಳಲ್ಲಿ ಹೊರತಂದಿರುವ ಗಾಂಧೀಜಿಯವರ ಜೀವನ ವೃತ್ತಾಂತ ಹಲವು ಕಾರಣಗಳಿಂದ ವಿಶಿಷ್ಟವಾದ ಕೃತಿಯಾಗಿದೆ. ಗಾಂಧೀಜಿಯವರ ಮೊಮ್ಮಗಳಾಗಿ ಗಾಂಧೀಜಿಯವರನ್ನು ಹತ್ತಿರದಿಂದ ಹಾಗೂ ಆತ್ಮೀಯವಾಗಿ ಕಂಡಿರುವ ಅವರು ಕೊಟ್ಟಿರುವ ಚಿತ್ರಣ ವಿಭಿನ್ನವೂ, ಅನನ್ಯವೂ ಆಗಿದೆ. ಗಾಂಧೀಜಿಯವರ ಹತ್ಯೆಯ ವರೆಗಿನ ಅನೇಕ ಘಟನೆಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ದಾಖಲಿಸುವಾಗ ಅವರು ಯಾವುದೇ ಭಾವಾವೇಶಗಳಿಗೆ ಒಳಗಾಗದೆ, ಕೇವಲ ಆರಾಧನಾ ಭಾವವನ್ನೇ ಇರಿಸಿಕೊಳ್ಳದೆ, ಆದಷ್ಟು ವಸ್ತುವಿಷ್ಠವಾದ ನಿರೂಪಣೆಯನ್ನೇ ಮುಂದಿರಿಸಿದ್ದಾರೆ. ಹೀಗಾಗಿ ಈ ಕೃತಿ ಹೆಚ್ಚು ಹೃದ್ಯವಾಗಿ ಪರಿಣಮಿಸಿದೆ. ಆತ್ಮೀಯತೆ ಮತ್ತು ವಸ್ತುನಿಷ್ಠತೆಗಳ ಸಂಗಮವಾಗಿರುವ ಈ ಅಪೂರ್ವ ಕೃತಿ ಗಾಂಧೀಸಾಹಿತ್ಯ ಪ್ರಿಯರೆಲ್ಲರಿಗೂ ಇಷ್ಟವಾಗುತ್ತದೆಂದು ನಂಬಿದ್ದೇವೆ.

ಇಂಥ ಮಹತ್ವದ ಕೃತಿಯನ್ನು ಕನ್ನಡದಲ್ಲಿ ಹೊರತರಲು ಅವಕಾಶಮಾಡಿಕೊಟ್ಟಿರುವ ಶ್ರೀಮತಿ ಸುಮಿತ್ರಾ ಅವರಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಕೃತಜ್ಞವಾಗಿದೆ. ಶ್ರೀಮತಿ ಸುಮಿತ್ರಾ ಅವರನ್ನು ಹತ್ತಿರದಿಂದ ಬಲ್ಲ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ಈ ಕೃತಿಯ ಪ್ರಕಟಣೆಯ ವಿಚಾರದಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿ, ಪ್ರಕಟಣೆಯ ಹಕ್ಕುಗಳನ್ನು ಕೊಡಿಸಿಕೊಟ್ಟಿದ್ದಾರೆ. ಇದಕ್ಕಾಗಿ ಪ್ರಾಧಿಕಾರದ ವತಿಯಿಂದ ಶ್ರೀ ಮನು ಬಳಿಗಾರ್ ಅವರಿಗೆ ವಿಶೇಷ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಸಚಿವರಾದ ಶ್ರೀ ಗೋವಿಂದ ಕಾರಜೋಳ ಅವರು ತಮ್ಮ ವಿದೇಶ ಪ್ರವಾಸದ ಕಾರ್ಯಕ್ರಮಗಳಿಂದಾಗಿ ಈ ಸಮಾರಂಭದಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ. ಕಾರ್ಯಕ್ರಮವನ್ನು ಮುಂದೂಡದೆ. ತಮ್ಮ ಅನುಪಸ್ಥಿತಿಯಲ್ಲಿ ಈ ಕಾರ್ಯಕ್ರಮವನ್ನು ನಡೆಸಿಕೊಂಡು ಹೋಗಬೇಕೆಂಬ ಸೂಚನೆಯನ್ನೂ, ಅನುಮತಿಯನ್ನೂ ನೀಡಿದ ಸನ್ಮಾನ್ಯ ಸಚಿವರಿಗೆ ಪ್ರಾಧಿಕಾರ ವಿಶೇಷವಾದ ವಂದನೆಗಳನ್ನು ಸಲ್ಲಿಸಬಯಸುತ್ತದೆ.

ಸ್ವತಃ ಗಾಂಧೀವಾದಿಯೂ, ಗಾಂಧೀ ತತ್ತ್ವಗಳ ನಿಷ್ಠಾವಂತ ಅನುಯಾಯಿಯೂ ಆಗಿರುವ ಸನ್ಮಾನ್ಯ ಸಚಿವರಾದ ಶ್ರೀ ಸುರೇಶ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಮ್ಮ ನಾಡಿನ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬರೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೂ, ಕೇರಳದ ಮಹಾತ್ಮಾ ಗಾಂಧೀ ವಿಶ್ವವಿದ್ಯಾನಿಲಯದ ನಿವೃತ್ತ ಕುಲಪತಿಗಳೂ ಆಗಿರುವ ಡಾ. ಯು.ಆರ್. ಅನಂತಮೂರ್ತಿ ಅವರು ಈ ಕೃತಿಯನ್ನು ಬಿಡುಗಡೆ ಮಾಡುತ್ತಿರುವುದು ಪ್ರಾಧಿಕಾರಕ್ಕೆ ಸಲ್ಲುತ್ತಿರುವ ವಿಶಿಷ್ಟ ಗೌರವವೆಂದೇ

ನಂಬಿದ್ದೇನೆ. ಇದಕ್ಕಾಗಿ ಸನ್ಮಾನ್ಯ ಸಚಿವರಾದ ಶ್ರೀ ಸುರೇಶ್ ಕುಮಾರ್ ಅವರಿಗೂ, ಡಾ. ಅನಂತಮೂರ್ತಿ ಅವರಿಗೂ ಪ್ರಾಧಿಕಾರ ಕೃತಜ್ಞವಾಗಿದೆ. ಇದನ್ನು ಸಾಧ್ಯವಾಗಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ತಮ್ಮ ಬಿಡುವಿರದ ಕಾರ್ಯಗಳ ನಡುವೆಯೂ ಬಿಡುವುಮಾಡಿಕೊಂಡು ಆದ್ಯತೆಯ ಮೇಲೆ ಈ ಕೃತಿಯ ಮೊದಲ ಭಾಗದ ೧–೨೦೦ ಪುಟಗಳನ್ನು ಅನುವಾದಿಸಿಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ಹಿಂದೀ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ. ಜೆ.ಎಸ್. ಕುಸುಮಗೀತ ಅವರಿಗೂ, ಮೊದಲ ಭಾಗದ ಉಳಿದ ಪುಟಗಳನ್ನೂ, ಎರಡನೆಯ ಭಾಗವನ್ನೂ ಅನುವಾದಿಸಿಕೊಟ್ಟಿರುವ ಇಂದೂರಿನ ಅಹಲ್ಯಾ ಬಾಈ ಮಹಿಳಾ ವಿಶ್ವವಿದ್ಯಾನಿಲಯದ ತೌಲನಿಕ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಶ್ರೀಮತಿ ಬಿ.ವೈ. ಲಲಿತಾಂಬ ಅವರಿಗೂ ಪ್ರಾಧಿಕಾರ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸಬಯಸುತ್ತದೆ. ಕರಡುಗಳ ಪರಿಶೀಲನೆಯಲ್ಲಿ ನೆರವಾಗಿರುವ ಶ್ರೀ ಜೆ.ಎನ್. ಶಾಮರಾವ್ ಅವರಿಗೂ, ಶ್ರೀ ಎನ್.ಎಸ್. ಶಾರದಾ ಪ್ರಸಾದ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ.ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ, ಸುಂದರವಾದ ರಕ್ಷಾಕವಚವನ್ನು ಸಿದ್ಧಪಡಿಸಿಕೊಟ್ಟಿರುವ ಶ್ರೀ ವಿಶ್ವನಾಥ್ ಶೆಟ್ಟಿಗಾರ್ ಅವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ

# ಪರಿವಿಡಿ


| | |
|---|---|
| ಮೊದಲ ಮಾತು | v |
| ಶುಭಾಕಾಂಕ್ಷೆ | vi |
| ಹಾರೈಕೆ | vii |
| ಪ್ರಾಸ್ತಾವಿಕ ನುಡಿ | ix |
| ಅರಿಕೆ | xi |
| ಪೀಠಿಕೆ | xiii |
| ೧. ನಮ್ಮ ದೇಶ | ೩ |
| ೨. ಸಾಬರಮತಿ ಆಶ್ರಮ | ೧೭ |
| ೩. ಚಂಪಾರಣ್ಯ | ೨೪ |
| ೪. ಮಿಲ್ ಕಾರ್ಮಿಕರು | ೩೮ |
| ೫. ಖೇಡಾ ಸತ್ಯಾಗ್ರಹ | ೫೦ |
| ೬. ರೌಲಟ್ ಆ್ಯಕ್ಟ್ | ೫೮ |
| ೭. ನವಜೀವನ | ೬೬ |
| ೮. ಜಲಿಯನ್‌ವಾಲಾಬಾಗ್ | ೭೩ |
| ೯. ಕಾಂಗ್ರೆಸ್ | ೭೯ |
| ೧೦. ಖಾದಿ | ೮೯ |
| ೧೧. ಅಸಹಕಾರ ಚಳವಳಿ | ೧೦೩ |
| ೧೨. ಮೀರಾ ಬಹನ್ | ೧೨೫ |
| ೧೩. ೧೯೨೭ನೇ ಇಸವಿ | ೧೩೦ |
| ೧೪. ೧೯೨೮ರ ಸೈಮನ್ ಕಮೀಷನ್ | ೧೩೭ |
| ೧೫. ಬಾರಡೋಲಿ ಸತ್ಯಾಗ್ರಹ | ೧೪೨ |
| ೧೬. ಕಲ್ಕತ್ತಾ ಕಾಂಗ್ರೆಸ್ | ೧೫೧ |
| ೧೭. ಪೂರ್ಣ ಸ್ವರಾಜ್ಯ ಮತ್ತು ಉಪ್ಪಿನ ಸತ್ಯಾಗ್ರಹ | ೧೫೭ |
| ೧೮. ಡಾಂಡೀ ಯಾತ್ರೆ | ೧೬೭ |
| ೧೯. ದುಂಡು ಮೇಜಿನ ಪರಿಷತ್ತು | ೧೮೧ |
| ೨೦. ಹರಿಜನ ಉಪವಾಸ | ೧೯೨ |
| ೨೧. ಸೇವಾಗ್ರಾಮ | ೨೦೬ |
| ೨೨. ಎರಡನೆಯ ವಿಶ್ವಯುದ್ಧ | ೨೧೫ |

೨೩ ‘ಮಾಡು ಇಲ್ಲ ಮಡಿ’ ಘೋಷಣೆ ೨೨೧
೨೪. ದೇಶ ಕರೆಯಿತು ೨೪೧
೨೫ ಮಹಾದೇವ ದೇಸಾಯಿ ೨೫೩
೨೬. ಜಿನ್ನಾ ಮತ್ತು ಸ್ವಾತಂತ್ರ್ಯ ೨೬೮
೨೭. ಸ್ವಾತಂತ್ರ್ಯದ ರಕ್ಷಕ ೨೮೧
೨೮. ಸ್ವಾತಂತ್ರ್ಯದ ದಿಕ್ಕಿನಲ್ಲಿ ೨೯೧
೨೯. ಮಹಾಕರುಣೆ – ನೋವಾಖಲಿ ೩೦೪
೩೦. ಬಿಹಾರದ ಕೋಮುವಾರು ಬೆಂಕಿ ೩೨೫
೩೧. ಅಗ್ನಿಪರೀಕ್ಷೆ ೩೫೩
೩೨. ಕಲ್ಕತ್ತೆಯ ಚಮತ್ಕಾರ ೩೮೯
೩೩. ರಕ್ತದ ಕಣ್ಣೀರು ೪೧೩
೩೪. ಪ್ರಜಾಪ್ರಭುತ್ವ ೪೩೪
೩೫. ಜೂನಾಗಢ ೪೪೯
೩೬. ಕಾಶ್ಮೀರ ೪೫೭
೩೭. ಹೈದರಾಬಾದ್ ೪೭೧
೩೮. ಆತ್ಮಶುದ್ಧಿ ೪೭೮
೩೯. ಹೇ ರಾಮ್ ! ೪೯೭
೪೦. ಕೊನೆಯ ಬೀಳ್ಕೊಡುಗೆ ೫೧೦
೪೧. ನಮ್ಮ ಪಿತ್ರಾರ್ಜಿತ ಸಂಪತ್ತು ೫೨೪
೪೨. ವಿರಾಸತ್ತಿನ ವ್ಯಾಖ್ಯೆ ೫೩೬

# ಮಹಾತ್ಮಾ ಗಾಂಧೀ – ನನ್ನ ತಾತ

## (ಭಾಗ ೨ : ಸ್ವಾತಂತ್ರ್ಯದ ನೀತಿ ನಿರೂಪಕರು)

# ಅರ್ಪಣೆ

ಸ್ವಾತಂತ್ರ್ಯ ಸಂಗ್ರಾಮದ ಕಥೆಯನ್ನು ಕೇಳಿ
ನನ್ನ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ
ನನ್ನ ಗುರು–ಮಿತ್ರರೂ, ಪಿತೃಸಮಾನರೂ ಆದ

**ಪೂಜ್ಯ ಸ್ವಾಮಿ (ಆನಂದ) ಕಾಕಾ ಅವರಿಗೆ**

ರಾಮಾಭಗತ್‌ರ ಮಗಳಾದ ಸೋಮಲಿಯ
ಸಾಷ್ಟಾಂಗ ಪ್ರಣಾಮಗಳೊಂದಿಗೆ

**ಸುಮಿತ್ರಾ ಗಾಂಧೀ ಕುಲಕರ್ಣಿ**

# ೧. ನಮ್ಮ ದೇಶ

ಭಾರತಕ್ಕೆ ಸ್ವಾತಂತ್ರ್ಯ ಸಿಗುವಲ್ಲಿ ಗಾಂಧೀಜಿಯುವರ ಕೊಡುಗೆ ಅಮೂಲ್ಯವಾದುದು. ಗಾಂಧೀಜಿ ಸತ್ಯನಿಷ್ಠೆ ಹಾಗೂ ಅಹಿಂಸೆಯನ್ನು ತೀವ್ರವಾಗಿ ಸಾಧಿಸಿ, ಪ್ರಬಲರಾಗಿದ್ದು ಬ್ರಿಟಿಷರ ಆಳ್ವಿಕೆಯ ಗುಲಾಮಗಿರಿಯಿಂದ ದೇಶವನ್ನು ಬಿಡುಗಡೆ ಮಾಡಿಸಿದರು. ಸ್ವಾತಂತ್ರ್ಯ ಆಂದೋಳನ ೩೩ ವರ್ಷಗಳ ಕಾಲ ಜರುಗಿತು. ಅದರಲ್ಲಿ ಗಾಂಧೀಜಿ ಸತ್ಯಾಗ್ರಹವನ್ನು ಸಫಲತೆಯಿಂದ ಸಾಧಿಸಿದರು. ಈ ಸತ್ಯಾಗ್ರಹದ ಸಾಧನೆ ಅವರು ದಕ್ಷಿಣ ಆಫ್ರಿಕೆಯಲ್ಲಿದ್ದಾಗಲೇ ಆರಂಭವಾಗಿತ್ತು. ೧೮೯೩ ರಿಂದ ೧೯೧೪ರ ನಡುವೆ ಗಾಂಧೀಜಿ ಆ ಕಾಣದ ದೇಶದಲ್ಲಿ ಎಲ್ಲ ರೀತಿಯ ತೊಡಕು–ಕಷ್ಟಗಳ ನಡುವೆ ಸತ್ಯಾಗ್ರಹದ ಅಜೇಯ ಅಸ್ತ್ರವನ್ನು ಪ್ರಯೋಗಿಸಿದರು. ಬಿಳಿಯರ ಪಶುಸದೃಶ ಆಡಳಿತಕ್ಕೆ ಸವಾಲಾಗಿ ತನ್ನ ಸರ್ವಸ್ವವನ್ನೂ ಅರ್ಪಿಸಿ ನ್ಯಾಯಪೂರ್ಣವಾದ ತನ್ನ ಅಧಿಕಾರಗಳಿಗಾಗಿ ಅಲ್ಲಿ ಹಿಂದೂಸ್ತಾನಿಗಳು (ಭಾರತೀಯರು) ನಿರಾಯುಧರಾಗಿ ಹೋರಾಡಿ ಪ್ರಾಣತ್ಯಾಗ ಮಾಡಿದ್ದರಾದರೂ ತಲೆ ಬಾಗಿರಲಿಲ್ಲ. ಅಂತಹ ಅಜೇಯ ಸತ್ಯಾಗ್ರಹದ ಮುಂದೆ ಆಫ್ರಿಕಾದ ಸೋಲಿಲ್ಲದ ಸರಕಾರ ಕೂಡ ತಲೆ ಬಾಗಿಸಬೇಕಾಯಿತು. ವಿದೇಶದ ಆ ಅಧ್ಯಾಯವನ್ನು ಮುಗಿಸಿ ಗಾಂಧೀಜಿ ತನ್ನ ದೇಶಕ್ಕೆ ಹಿಂದಿರುಗಿದರು. ೧೯೧೫ರ ಜನವರಿಯಲ್ಲಿ ಗಾಂಧೀಜಿ ತನ್ನ ರಾಷ್ಟ್ರೀಯ ಉಡುಪನ್ನು (ಕಾಠಿಯಾವಾಡದ ದಿರುಸು– ದುಕೂಲ, ಪಂಚೆ ಮತ್ತು ಬಿಳಿ ಪೇಟ) ಧರಿಸಿ ಬೊಂಬಾಯಿಯ ಬಂದರಿನಲ್ಲಿ ತನ್ನ ಪತ್ನಿ ಕಸ್ತೂರಬಾರೊಂದಿಗೆ ಬಂದಿಳಿದರು. ಮಾರ್ಗದಲ್ಲಿ ಸ್ಟೀಮರ್ ಸುಖಕರವಾಗಿತ್ತು. ಸಮುದ್ರದ ಹವೆ ಒಗ್ಗಿ ಅವರ ಆರೋಗ್ಯ ಸುಧಾರಿಸಿತು. ಗೋಖಲೆಯವರು ದುರ್ಬಲರಾಗಿದ್ದರೂ ಪೂನಾದಿಂದ ಗಾಂಧೀಜಿಯವರನ್ನು ಭೇಟಿಯಾಗಲೆಂದೇ ಮುಂಬಯಿಯ ಬಂದರಿಗೆ ಹೋಗಿದ್ದರು. ಜೊತೆಯಲ್ಲಿ ಹರಿಲಾಲ್ ಗಾಂಧೀ ಕೂಡ ಇದ್ದರು. ಗೋಖಲೆ ಮತ್ತು ಫಿರೋಜ್‌ಷಹ ಮೆಹ್ತಾರವರು ಗಾಂಧೀಜಿಯವರ ಸ್ವಾಗತಕ್ಕಾಗಿ ಬಹಳ ಭವ್ಯವಾದ ಏರ್ಪಾಡು ಮಾಡಿದ್ದರು. ಬಾಂಬೇ ಮಹಾನಗರದಲ್ಲಿ ಅವರ ಸನ್ಮಾನಕ್ಕಾಗಿ ಮೂರು ದೊಡ್ಡ ಸಭೆಗಳನ್ನೇ ಏರ್ಪಡಿಸಿದ್ದರು. ಸರ್ ಜಹಾಂಗಿರಜೀ ಪಿಟೀಟ್‌ರ ಸುಂದರ ಭವನದಲ್ಲಿ ಸಮಾರಂಭವಿತ್ತು. ಅಲ್ಲಿ ಮತ್ತು ಇನ್ನೊಂದು ಸಭೆಯಲ್ಲಿ ಇಂಗ್ಲಿಷ್‌ನಲ್ಲೇ ಮಾತನಾಡಬೇಕಿತ್ತು. ಆದರೆ ಗುಜರಾತಿ ಸಮಾಜದಲ್ಲಿ ಗಾಂಧೀಜಿ ಗುಜರಾತಿಯಲ್ಲೇ

ಸ್ವಾಗತ ಸಮಾರಂಭಕ್ಕೆ ಕೃತಜ್ಞತೆ ಸಲ್ಲಿಸಿದರು. ಗುಜರಾತಿ ಸಮಾಜದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮೊಹಮದ್ ಆಲಿ ಜಿನ್ನಾ ವಹಿಸಿದ್ದರು, ಅವರ ಮಾತೃಭಾಷೆ ಕೂಡ ಗುಜರಾತಿಯೇ ಆಗಿತ್ತು. ಅವರು ಇಂಗ್ಲಿಷಿನಲ್ಲಿ ಪುಟ್ಟದೊಂದು ಸುಂದರವಾದ ಭಾಷಣ ಮಾಡಿದ್ದರು.

ಬೊಂಬಾಯಿಗೆ ಬಂದ ನಂತರ ಗಾಂಧೀಜಿಯವರಿಗೆ ಅವರ ಪುತ್ರರಾಗಿದ್ದ ಮಣಿಲಾಲ, ರಾಮದಾಸ, ದೇವದಾಸ ಇವರು ಫಿನಿಕ್ಸ್‌ನ ಇತರ ಸ್ನೇಹಿತರೊಂದಿಗೆ ಕೂಡಿ ಮಗನಲಾಲ್ ಗಾಂಧಿಯ ನಾಯಕತ್ವದಲ್ಲಿ ಶಾಂತಿನಿಕೇತನದಲ್ಲಿದ್ದಾರೆಂಬ ವಿಚಾರ ತಿಳಿಯಿತು. ವಿಶ್ವಯುದ್ಧದಿಂದಾಗಿ ಗಾಂಧೀಜಿಯವರ ಕಾರ್ಯಕ್ರಮವೆಲ್ಲಾ ತುಂಡರಿಸಿ ಹೋಗಿತ್ತು. ಫಿನಿಕ್ಸ್‌ನ ಈ ಪಾರ್ಟಿ ೯ ಆಗಸ್ಟ್ ೧೯೧೪ಕ್ಕೆ ಹಿಂದೂಸ್ಥಾನಕ್ಕೆ ಬಂದಿತ್ತು. ಗಾಂಧೀಜಿ ಇಂಗ್ಲೆಂಡ್‌ನಿಂದ ಹಿಂದಿರುಗಲು ತಡವಾಗುತ್ತಿತ್ತು. ಅದರಿಂದಾಗಿ ಈ ೩೦–೩೩ ಹುಡುಗರಿಗೆ ಅಲ್ಲಿಯವರೆಗೂ ಊಟ–ವಸತಿಯ ವ್ಯವಸ್ಥೆ ಮಾಡುವುದೇ ಸಮಸ್ಯೆಯಾಗಿತ್ತು. ರಾಜಕೋಟ್‌ನ ಹಳೆಯ ಸಂಪ್ರದಾಯದ ವಿಧವೆಯರ ಕುಟುಂಬದಲ್ಲಿರಿಸುವುದು ಕೂಡ ಸರಿಹೋಗುತ್ತಿರಲಿಲ್ಲ ವಾದುದರಿಂದ ಗಾಂಧೀಜಿ ದೀನಬಂಧು ಚಾರ್ಲಿ ಆಂಡ್ರೂಸ್‌ಗೆ ಈ ಜವಾಬ್ದಾರಿಯನ್ನ ಒಪ್ಪಿಸಿದರು. ಆಂಡ್ರೂಸ್ ಆಫ್ರಿಕಾದಲ್ಲಿದ್ದಾಗ ಮೂವರು ಭಾರತೀಯರನ್ನು ನಿರಂತರವಾಗಿ ಹೊಗಳುತ್ತಿದ್ದರು. ಅವರಲ್ಲಿ ಮಹಾತ್ಮಾ ಮುಂಶೀರಾಮ್ ಒಬ್ಬರು. ಅವರು ನಂತರದಲ್ಲಿ ಸ್ವಾಮಿ ಶ್ರದ್ಧಾನಂದ ಆದರು. ಹರಿದ್ವಾರದ ಬಳಿಯ ಕನಖಲ್‌ನಲ್ಲಿ ಗುರುಕುಲ ಕಾಂಗಡಿ ಎಂಬ ಸಂಸ್ಥೆಯನ್ನು ನಡೆಸುತ್ತಿದ್ದರು. ಇನ್ನೊಬ್ಬರು ರವೀಂದ್ರನಾಥ ಠಾಕೂರರು, ಶಾಂತಿ ನಿಕೇತನದಲ್ಲಿ ಅವರು 'ವಿಶ್ವಭಾರತಿ' ಎಂಬ ಸಂಸ್ಥೆಯನ್ನು ನಡೆಸುತ್ತಿದ್ದರು. ಮೂರನೆಯವರು – ಅಂದರೆ ಡಾ॥ ಸುಶೀಲ ರುದ್ರರು. ಅವರು ದೆಹಲಿಯಲ್ಲಿ ಸೇಂಟ್ ಸ್ಟೀಫನ್ ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದವರು. ಮಿಷನರಿ ಕಾಲೇಜಿನಲ್ಲಿ ಪ್ರಧಾನ ಅಧ್ಯಾಪಕರಾಗಿ ನಿಯುಕ್ತರಾಗಿದ್ದ ಮೊದಲ ಭಾರತೀಯರು ಪ್ರೊ॥ ರುದ್ರ ಅವರು ಹೆಸರಿಗೆ ಅನುಗುಣವಾಗಿ ಸಜ್ಜನರಾಗಿದ್ದರು. ಮೊದಲು ಈ ಮಕ್ಕಳೆಲ್ಲರು ಮಹಾತ್ಮಾ ಮುಂಶೀಲಾಲರ ಬಳಿ ಗುರುಕುಲ ಕಾಂಗಡಿಯಲ್ಲಿದ್ದರು. ನಂತರದಲ್ಲಿ ದೀನಬಂಧು ಈ ಮಕ್ಕಳನ್ನು ಶಾಂತಿ ನಿಕೇತನಕ್ಕೆ ಕರೆದೊಯ್ದರು, ಮಾರ್ಗದಲ್ಲಿ ಪ್ರಿನ್ಸಿಪಾಲ್ ರುದ್ರರ ಮನೆಯಲ್ಲಿ ದೆಹಲಿಯಲ್ಲೂ ಸ್ವಲ್ಪದಿನ ಉಳಿದುಕೊಂಡಿದ್ದರು. ಈ ಎಲ್ಲರೂ ಗಾಂಧೀಜಿಯವರ ಮಕ್ಕಳನ್ನೂ, ಅವರ ಸ್ನೇಹಿತರನ್ನೂ ತಮ್ಮ ಸಂಸ್ಥೆಗಳಲ್ಲಿ ಬಹಳ ಪ್ರೇಮದಿಂದ ಇಟ್ಟುಕೊಂಡು ನೋಡಿಕೊಂಡರು.

ದೇಶಕ್ಕೆ ಹಿಂದಿರುಗಿದ ಮೇಲೆ ಗಾಂಧೀಜಿ ತಮ್ಮ ಮಕ್ಕಳು ಮತ್ತು ಈ ಫಿನಿಕ್ಸ್ ನಿವಾಸಿಗಳನ್ನು ಭೇಟಿಯಾಗಬೇಕೆಂದು ಕಾತರರಾಗಿದ್ದರು. ಫಿನಿಕ್ಸ್ ಸಮೂಹದ

ಪೂರ್ಣ ಜವಾಬ್ದಾರಿ ಕೊನೆಗೆ ಅವರ ಬೆನ್ನ ಮೇಲೇ ಬಿದ್ದಿತ್ತು. ಎಷ್ಟೋ ತಿಂಗಳುಗಳಿಂದ ಆ ಮಕ್ಕಳಿಗೆ ತಮ್ಮದೆನ್ನುವ ಒಂದು ಜಾಗ ಇರಲಿಲ್ಲ, ಒಂದು ಖಚಿತವಾದ ಕಾರ್ಯಕ್ರಮವಿರಲಿಲ್ಲ. ಆದರೆ ಗಾಂಧೀಜಿ ಮುಂಬಯಿಯ ಸ್ವಾಗತ ಸಮಾರೋಹವನ್ನು ಮುಗಿಸಿಕೊಂಡು ಪೂನಾದಲ್ಲಿ ತಮ್ಮನ್ನು ಭೇಟಿ ಮಾಡಿಕೊಂಡು ಹೋಗಲಿ ಅಂತ ಗೋಖಲೆಯವರು ಇಷ್ಟಪಡುತ್ತಿದ್ದರು. ಹೀಗಾಗಿ ಗಾಂಧೀಜಿ ಬೊಂಬಾಯಿಂದ ಪೂನಾಕ್ಕೆ ಹೋದರು. 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ' ಅನ್ನುವ ಒಂದು ಸಂಸ್ಥೆಯನ್ನು ಗೋಖಲೆಯವರು ನಡೆಸುತ್ತಿದ್ದರು. ದೇಶಸೇವೆ ಆ ಸಂಸ್ಥೆಯ ಉದ್ದೇಶವಾಗಿತ್ತು. ಗಾಂಧೀಜಿ ಆ ದೇಶಪ್ರೇಮಿಗಳನ್ನೆಲ್ಲಾ ಭೇಟಿಯಾದರು. ಗಾಂಧೀಜಿ ಆ ಸಂಸ್ಥೆಯ ಆಜೀವ ಸದಸ್ಯರಾಗಲಿ ಎಂದು ಗೋಖಲೆಯವರ ಇಷ್ಟವಾಗಿತ್ತು.

ಆದರೆ ಗಾಂಧೀಜಿ ಸದಸ್ಯತ್ವಕ್ಕೆ ಸಂಸ್ಥೆಯ ಸದಸ್ಯರು ತೀವ್ರ ವಿರೋಧ ತೋರಿಸಿದರು. ಆದ್ದರಿಂದ ಸದಸ್ಯತ್ವದ ಪ್ರಶ್ನೆಯನ್ನು ಮುಂದೂಡಿ ಗೋಖಲೆ ತಮ್ಮ ಮಿತ್ರ ಡಾ॥ ದೇವ್‌ಗೆ, 'ಗಾಂಧೀಜಿ ಹೆಸರಲ್ಲಿ ಒಂದು ಖಾತೆ ತೆರೆದು ಬಿಡಿ, ಅವರಿಗೆ ಬೇಕಾದ ಕಡೆ ಆಶ್ರಮ ಸ್ಥಾಪಿಸಲಿ. ಅದರ ಪೂರ್ತಿ ಖರ್ಚನ್ನು ನಾನು ಕೊಡ್ತೀನಿ. ಆಶ್ರಮವಂತೂ ನಂದೇ ತಾನೆ' ಎಂದು ಹೇಳಿದರು. ಅವರು ಗಾಂಧೀಜಿಗೆ ಹೇಳಿದರು, 'ನೀನು ನಿಯಮಿತವಾಗಿ ಸಂಸ್ಥೆಯ ಸದಸ್ಯನಾಗಿರದಿದ್ದರೂ ನನಗನ್ನಿಸುವ ಹಾಗೆ ನೀನು ಸದಸ್ಯನಾಗಿಯೇ ಇದ್ದೀಯ. ಗುಜರಾತ್‌ನಲ್ಲಿ ಅಥವಾ ನಿನಗೆ ಇಷ್ಟ ಬಂದ ಕಡೆ ಆಶ್ರಮ ತೆರೆದುಕೋ, ಖರ್ಚಿಗೆ ಚಿಂತೆ ಮಾಡಬೇಡ. ಅದರ ಜವಾಬ್ದಾರಿ ನನ್ನದು, ಇದು ಭಾರತವಪ್ಪಾ, ಆಫ್ರಿಕಾ ಅಲ್ಲ. ಆದ್ದರಿಂದ ನೀನು ಇನ್ನೂ ಒಂದು ವರ್ಷಕಾಲ ದೇಶವನ್ನು ನೋಡು, ಅರ್ಥಮಾಡಿಕೋ. ಆದರೆ ಯಾವ ರಾಜಕೀಯದಲ್ಲೂ ಸಿಲುಕಿಹಾಕಿಕೊಳ್ಳಬೇಡ, ಹೇಳಿಕೆ ಕೊಡ ಬೇಡ.' ಇದರಿಂದಾಗಿ ಗಾಂಧೀಜಿಯವರ ಮನಸ್ಸಿನ ದೊಡ್ಡ ಹೊರೆ ಕಳಚಿತು. ಅವರ ಅಗಾಧ ಸಮಸ್ಯೆಯನ್ನು ಗೋಖಲೆಯವರು ಬಹಳ ಸುಲಭವಾಗಿ ಪರಿಹರಿಸಿದ್ದರು. ದೇಶಕ್ಕೆ ಒಂದು ಗೋಖಲೆಯವರಿಗೆ ತನ್ನನ್ನು ಅರ್ಪಿಸಿಕೊಳ್ಳಬೇಕೆಂದು ಗಾಂಧೀಜಿ ಇಷ್ಟಪಟ್ಟಿದ್ದರು. ಆದರೆ ದೈವೇಚ್ಛೆ ಬೇರೆಯಾಗಿತ್ತು. ಮನುಷ್ಯ ಯಾವಾಗಲೂ ತನ್ನ ಮನಸ್ಸಿನಂತೆ ನಡೆಸಲು ಸಾಧ್ಯವಾಗುವುದಿಲ್ಲ. ಗೋಖಲೆಯವರ ಆರೋಗ್ಯ ಬಹಳ ಹದಗೆಟ್ಟಿತ್ತು. ಕೂರುವುದಕ್ಕೂ–ಏಳುವುದಕ್ಕೂ ಆಗುತ್ತಿರಲಿಲ್ಲ. ಆದರೆ ತಮ್ಮ ಮುದ್ದಿನ ಗಾಂಧಿಗಾಗಿ ಅವರು ತಿಂಡಿ–ತೀರ್ಥದ ವ್ಯವಸ್ಥೆ ಮಾಡಿದ್ದರು. ನಡೆಯುವದಕ್ಕಾಗುತ್ತಿರಲಿಲ್ಲ, ಆದರೂ ಹಠಮಾಡಿ ಸಮಾರಂಭಕ್ಕೆ ಬಂದರು. ಆದರೆ ಸ್ವಲ್ಪ ಹೊತ್ತಿನ ಆಯಾಸದಿಂದಲೇ ಪ್ರಜ್ಞೆತಪ್ಪಿ ಬಿದ್ದರು. ನಂತರ ತನ್ನ ಕೊಠಡಿಗೆ ಹೋಗಿ ಮಲಗಿಕೊಂಡರು. ಹಾಸಿಗೆ ಮೇಲೆ ಮಲಗಿದ್ದುಕೊಂಡೇ ಗೋಖಲೆಯವರು ಒಂದು ವರ್ಷದವರೆವಿಗೂ

ಗಾಂಧೀಜಿ ಭಾರತದರ್ಶನ ಮಾಡಬೇಕು, ಯಾವುದೇ ಆಂದೋಳನದಲ್ಲಿ ಭಾಗವಹಿಸುವುದಾಗಲೀ, ಭಾಷಣ ನೀಡುವುದಾಗಲೀ ಕೂಡದೆಂದು ಗಾಂಧೀಜಿ ಕೈಲಿ ವಚನ ತೆಗೆಸಿಕೊಂಡರು. ಬೊಂಬಾಯಲ್ಲಿ ಗವರ್ನರ್ ಲಾರ್ಡ್ ವಿಲಿಂಗ್‌ಡನ್ ಗಾಂಧೀಜಿಯನ್ನು ಭೇಟಿಯಾಗಲು ಇಚ್ಛಿಸುತ್ತಿದ್ದಾರೆಂದು ಕೂಡ ಗೋಖಲೆ ತಿಳಿಸಿದರು. ಅದರ ಮುಂದಿನ ದಿನ ಗಾಂಧೀಜಿ ಲಾರ್ಡ್ ವಿಲಿಂಗಡನ್ ಅವರನ್ನು ಭೇಟಿಯಾದರು, ಸಂತೋಷಕರವಾದ ಸದ್‌ಭಾವನೆಯಿಂದ ಕೂಡಿ ಮಾತುಕತೆ ಜರುಗಿತು. ಲಾರ್ಡ್ ವಿಲಿಂಗಡನ್ ಗಾಂಧೀಜಿಯವರಿಂದ ಒಂದು ಆಶ್ವಾಸನೆ ಕೋರಿದರು. ಸರಕಾರದ ವಿರುದ್ಧ ಯಾವುದೇ ಕಾರ್ಯ ಕೈಗೊಳ್ಳುವ ಮೊದಲು ಗಾಂಧೀಜಿ ಅವರಿಗೆ ಪೂರ್ವಸೂಚನೆ ನೀಡಬೇಕೆಂದೂ, ಸಮಸ್ಯೆಯನ್ನು ಪರಿಹರಿಸಲು ಗವರ್ನರ್‌ರವರಿಗೆ ಸಹಾಯ ಮಾಡಬೇಕೆಂದೂ ಹೇಳಿದರು. ಗಾಂಧೀಜಿ ತಕ್ಷಣವೇ ಇದಕ್ಕೆ ಒಪ್ಪಿಗೆ ನೀಡಿದರು. ಸತ್ಯಾಗ್ರಹದಲ್ಲಿ ಮುಚ್ಚು–ಮರೆ ಮಾಡಿ ಏನೂ ನಡೆಸುವುದಿಲ್ಲ. ಆದ್ದರಿಂದ ಈ ವಚನವನ್ನು ಪಾಲಿಸಬೇಕಾಗಿತ್ತು. ಬೊಂಬಾಯಿಯಲ್ಲಿ ಲಾರ್ಡ್ ವಿಲಿಂಗಡನ್ ಅವರನ್ನು ಭೇಟಿಯಾದ ನಂತರ ಗಾಂಧೀಜಿ ರಾಜಕೋಟೆಗೆ ಹೋದರು. ಅಲ್ಲಿ ಇಬ್ಬರು ಅಣ್ಣಂದಿರ ಪರಿವಾರವೂ ದುಃಖತಪ್ತವಾಗಿದ್ದವು. ಕಸ್ತೂರಬಾ ಇದಕ್ಕೂ ಮೊದಲೇ ರಾಜಕೋಟ್‌ಗೆ ಹೊರಟುಹೋಗಿದ್ದರು.

ರಾಜಕೋಟ್‌ಗೆ ಹೋಗುವ ಮಾರ್ಗದಲ್ಲಿ ವೀರಮ್‌ಗಾಮ್ ಜಂಕ್ಷನ್‌ನಲ್ಲಿ ಸರಕಾರದ ಸೀಮಾಶುಲ್ಕದ ಅಧಿಕಾರಿಗಳು ಪ್ರಯಾಣಿಕರಿಗೆ ಬಹಳ ತೊಂದರೆ ಕೊಡುತ್ತಿದ್ದರು. ಯಾತ್ರಿಕರ ಗಂಟುಗಳನ್ನು ಬಿಚ್ಚಿಸುತ್ತಿದ್ದರು. ಅವರ ವಸ್ತುಗಳನ್ನೆಲ್ಲಾ ಬಿಸುಡುವುದು, ಹಾಳುಮಾಡುವುದು ಎಲ್ಲಾ ಮಾಡಿ ಪ್ರಾಣಿಗಳ ಹಾಗೆ ವ್ಯವಹರಿಸುತ್ತಿದ್ದರು, ಆ ದಿವಸ ಗಾಂಧೀಜಿಗೆ ಸ್ವಲ್ಪ ಜ್ವರ ಬಂದಿತ್ತು. ಸಾಮಾನೇನೂ ಇರಲಿಲ್ಲ. ಟ್ರೈನ್‌ನ ಬೋಗಿಯ ಒಂದು ಮೂಲೆಯಲ್ಲಿ ಬಿದ್ದುಕೊಂಡಿದ್ದರು. ಆಗ ಬಢವಾಣ ಸ್ಟೇಷನ್‌ನಲ್ಲಿ ಮೋತೀಲಾಲ ದರ್ಜಿ ಎಂಬೊಬ್ಬ ಯುವಕ ಮತ್ತು ಅವನ ಗೆಳೆಯ ಇಬ್ಬರೂ ಗಾಂಧೀಜಿಯನ್ನು ಹುಡುಕುತ್ತಾ ಬಂದರು, ಅವರು ವೀರಮ್‌ಗಾಮ್‌ನ ಸುಂಕದ ಕಟ್ಟೆಯ ತೊಂದರೆಗಳನ್ನು ವಿವರಿಸಿದರು. ಯಾತ್ರಿಕರ ದುಃಖಕಥೆಯನ್ನು ಹೇಳಿದರು, ಗಾಂಧೀಜಿ ಇದರ ನೇತಾರರಾಗಬೇಕೆಂದು ಮಾರ್ಗದರ್ಶನ ನೀಡಬೇಕೆಂದೂ ಅವರು ಕೇಳಿಕೊಂಡರು. ಗಾಂಧೀಜಿಗೆ ಜ್ವರ ಬಂದಿತ್ತು. ಆದರಿಂದ ಮಾತನ್ನು ಹೆಚ್ಚು ಮುಂದುವರಿಸದೆ ಮೋತಿಲಾಲ್ ದರ್ಜಿಯನ್ನ, “ಜೈಲಿಗೆ ಹೋಗಲು ಸಿದ್ಧವಾಗಿರುವೆಯಾ?” ಎಂದು ಪ್ರಶ್ನಿಸಿದರು, “ಜೈಲಷ್ಟೇ ಅಲ್ಲ, ಸಂತೋಷವಾಗಿ ಗಲ್ಲಿನ ಕಂಬಕ್ಕೂ ತಲೆ ಒಡ್ಡಬಲ್ಲೆ, ನಿಮ್ಮ ಮಾರ್ಗದರ್ಶನ ಬೇಕು ಅಷ್ಟೆ” ಅಂದ.

ಅವನು ದರ್ಜಿಯಾಗಿದ್ದರೂ ಕೂಡ ಮೋತೀಲಾಲನ ಸ್ನೇಹಿತರು ಅವನನ್ನು

ಹೊಗಳಿದರು, ಆತ ಒಳ್ಳೆಯ ಸಮಾಜಸೇವಕನಾಗಿದ್ದ, ದಿವಸಕ್ಕೆ ಎಂಟಾಣೆ, ಹನ್ನೆರಡಾಣೆ ಸಂಪಾದಿಸಿದರೆ ಸಾಕು, ಅವನ ಜೀವನ ನಡೆಯುತ್ತಿತ್ತು. ಮಿಕ್ಕ ಸಮಯವನ್ನು ಅವನು ಸಮಾಜ ಸೇವೆಗಾಗಿ ಮುಡಿಪಿಟ್ಟಿದ್ದ. ಮೋತಿಲಾಲ ಮಿಕ್ಕ ಓದು-ಬರಹ ಕಲಿತ ಉಚ್ಚ ಮಟ್ಟದ ಜನರಿಗಿಂತ ಹೆಚ್ಚಾಗಿ ದೇಶಕ್ಕಾಗಿ ಸಮರ್ಪಿತನಾಗಿದ್ದ. ಗಾಂಧೀಜಿ ತಾನು ಏನಾದರೂ ಮಾಡುತ್ತೇನೆಂದು ಅವರಿಗೆ ವಚನಕೊಟ್ಟರು, ಅವರು ಕಠಿಯಾವಾಡದಲ್ಲಿ ಎಲ್ಲ ಕಡೆಯಿಂದಲೂ ಸತ್ಯಾಂಶವನ್ನು ಸಂಗ್ರಹಿಸಿ ವೀರವವ್‌ಗಾವವ್ ಕುರಿತಾಗಿ ಬೊಂಬಾಯಿಯ ಗವರ್ನರ್ ಆಗಿದ್ದ ವಿಲಿಂಗ್‌ಡನ್‌ರೊಂದಿಗೆ ಪತ್ರ ವ್ಯವಹಾರ ನಡೆಸಿದರು. ಆದರೆ ಈ ವಿಷಯ ಕೇಂದ್ರ ಸರಕಾರಕ್ಕೆ ಸೇರಿದ್ದಾಗಿತ್ತು. ಅಲ್ಲಿಂದ ಉತ್ತರವೇ ಬರುತ್ತಿರಲಿಲ್ಲ. ೧೯೧೭ರಲ್ಲಿ ಗಾಂಧೀಜಿ ವೈಸ್‌ರಾಯ್ ಲಾರ್ಡ್ ಚೆಮ್ಸ್‌ಫೋರ್ಡ್‌ರೊಂದಿಗೆ ಹಳೆಯ ಇಮಿಗ್ರೇಷನ್ ಮತ್ತು ಲೇಬರ್ (ಗಿಂಮಿಟ್) ಕಾನೂನು ಕುರಿತಂತೆ ಭೇಟಿಯಾಗಲು ಹೋದರು. ಆಗ ಅವರು ವೀರಮ್‌ಗಾಮ್‌ನ ಕಷ್ಟಗಳ ಬಗೆಗೂ ಹೇಳಿದರು. ಎರಡು ವರ್ಷ ಕಳೆದಿದ್ದರೂ ಗಾಂಧೀಜಿಯ ಅರ್ಜಿ ವಾಯಿಸ್‌ರಾಯ್‌ವರೆಗೆ ತಲಪಿರಲಿಲ್ಲ. ವಾಯಿಸ್‌ರಾಯ್ ಅವರು ತಕ್ಷಣ ಆ ಕಾಗದದನ್ನು ತರಿಸಿಕೊಂಡರು, ಇದರ ಪರಿಣಾಮವಾಗಿ ವೀರಮ್‌ಗಾಮ್‌ನ ಸುಂಕದ ಕಛೇರಿಯನ್ನು ವಜಾ ಮಾಡಲಾಯಿತು. ಯಾತ್ರಿಗಳ ಕಷ್ಟ ಪರಿಹಾರವಾಯಿತು. ಇದು ಹಿಂದೂಸ್ತಾನದಲ್ಲಿ ಪ್ರಥಮ ಸತ್ಯಾಗ್ರಹವಾಯಿತು. ಈ ಚಿಕ್ಕ ಘಟನೆಯಿಂದಾಗಿ ಹಿಂದೂಸ್ತಾನಿಗಳಿಗೆ ತಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳಲು ಅಹಿಂಸೆಯ ಶಿಕ್ಷಣ ದೊರಕಿತು. ಪ್ರಜೆಗಳಿಗೆ ತಮ್ಮ ಅನುಕೂಲಗಳಿಗಾಗಿ ಸತ್ಯಾಗ್ರಹ ಮಾಡುವ ಪೂರ್ತಿ ಹಕ್ಕಿದೆ ಎಂಬುದು ಸಾಬೀತಾಯಿತು. ಈ ಚಿಕ್ಕ ಸತ್ಯಾಗ್ರಹದಿಂದ ಜನರಿಗೆ ಬಹಳ ಬಲ ಬಂತು.

ರಾಜಕೋಟ್‌ನಲ್ಲಿ ಗಾಂಧೀಜಿ ತಮ್ಮ ಅಣ್ಣಂದಿರ ವಿಧವೆಯರನ್ನು ಭೇಟಿಯಾದರು. ದೇಶ ಹಾಗೂ ಮನೆ ಎರಡು ದುಃಸ್ಥಿತಿಯಲ್ಲಿದ್ದವು. ಆದರೆ ಅಣ್ಣಂದಿರ ಪರಿವಾರದಲ್ಲಿ ಯಾರೊಬ್ಬರೂ ಮಗ-ಮಗಳು ಯಾರೂ ಮೋಹನನ ಚಿಕ್ಕಪ್ಪನ ಜೊತೆಗೂಡಿ ಸಮಾಜ ಸುಧಾರಣೆ ಸೇವೆ ಮಾಡುವ ಆಸಕ್ತಿ ಹೊಂದಿರಲಿಲ್ಲ. ದೈವೇಚ್ಛೆ ಅಂದುಕೊಂಡು ಗಾಂಧೀಜಿ ತಮ್ಮ ಮನಸ್ಸನ್ನು ಸರಿಪಡಿಸಿಕೊಂಡರು. ರಾಜಕೋಟೆಯಿಂದ ಕಸ್ತೂರ್‌ಬಾರನ್ನು ಕರೆದುಕೊಂಡು ಅವರು ಶಾಂತಿನಿಕೇತನಕ್ಕೆ ಹೋದರು. ಅಲ್ಲಿ ಮೊದಲ ಬಾರಿಗೆ ಗುರುದೇವರ ದರ್ಶನವಾಯಿತು. ಭೇಟಿಯಾಗಿದ್ದೇ ತಡ ಜನ್ಮಾಂತರದ ಪ್ರೀತಿ ಏರ್ಪಟ್ಟಿತು. ಆಂಡ್ರೂಸ್ ಮತ್ತು ಪಿಯರ್‌ಸನ್, ಮಣಿಲಾಲ, ರಾಮದಾಸ, ದೇವದಾಸ, ಮಗನಲಾಲ ಮತ್ತು ಪ್ರಭುಲಾಲ ಎಲ್ಲರನ್ನೂ ಭೇಟಿಯಾದರು. ಶಾಂತಿ ನಿಕೇತನ ಶೈಕ್ಷಣಿಕ ಸಂಸ್ಥೆಯಾಗಿದ್ದರೂ ಜೀವನ ಶೈಲಿ ಹಳೆಯ ತೆರವಾಗಿತ್ತು. ಬೇಕಾದಷ್ಟು ಜನ ನೌಕರರು, ಊಟದ

ವ್ಯಾಪಕ ಕ್ರಮಗಳೇ ಜಾರಿಯಲ್ಲಿದ್ದವು. ಗಾಂಧೀಜಿ ಶಾಂತಿನಿಕೇತನದಲ್ಲೂ ತನ್ನ ಸ್ವಾವಲಂಬನಾ ಕ್ರಮವನ್ನೇ ಅನುಸರಿಸಿದರು. ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು ಶುರು ಮಾಡಿಕೊಂಡರು. ಇದನ್ನು ನೋಡಿ ಶಾಂತಿನಿಕೇತನದ ಮಿಕ್ಕ ವಿದ್ಯಾರ್ಥಿಗಳೂ ಶೋಕಿಯಿಂದ ಪಾತ್ರೆ ತೊಳೆಯಲಾರಂಭಿಸಿದರು. ಕೈಯಲ್ಲಿ ಅಡುಗೆ ಮಾಡುವುದರಿಂದ ಆರೋಗ್ಯ ಮತ್ತು ಪೋಷಣೆಯ ಕಡೆ ಗಮನ ಇರುತ್ತದೆಯೆಂದು ಆಗ ಗಾಂಧೀಜಿ ಅವರಿಗೆ ವಿವರಿಸಿದರು. ಶಾಂತಿನಿಕೇತನದಲ್ಲಿ ಆಗ ಮೊಟ್ಟ ಮೊದಲು ನೌಕರರನ್ನು ಬಿಡಿಸಿ ಜನ ಖುದ್ದಾಗಿ ಅಡುಗೆ ಮಾಡಿದರು. ಪಿಯಾರ್‌ಸನ್ ಇವರ ಪ್ರಮುಖ ಕಾರ್ಯಕರ್ತರಾಗಿದ್ದರು. ಅವರು ಸ್ವತಃ ಅಡುಗೆ ಮನೆಯಲ್ಲಿ ದೊಡ್ಡ–ದೊಡ್ಡ ಪಾತ್ರೆಗಳನ್ನು ತೊಳೆಯುತ್ತಿದ್ದರು. ವಿದ್ಯಾರ್ಥಿಗಳು ಪಾತ್ರೆ ತೊಳೆಯುವುದರಿಂದ ಬೇಸರಪಡದಿರಲೆಂದು ಅವರ ಮನರಂಜನೆಗಾಗಿ ಆ ಸಮಯದಲ್ಲಿ ಸಿತಾರ್ ವಾದನ ಮಾಡುತ್ತಿದ್ದರು. ಸ್ವಾವಲಂಬನೆಯ ಈ ಪ್ರಯೋಗದಲ್ಲಿ ಶಿಕ್ಷಕರು ವಿದ್ಯಾರ್ಥಿಗಳು ಎಲ್ಲರೂ ಸೇರಿಕೊಂಡಿದ್ದರು. ಗುರುದೇವರು ಬಿಚ್ಚು ಮನಸ್ಸಿನಿಂದ ಹೊಗಳಿದರು, "ನಾನು ಇವತ್ತಿನವರೆಗೂ ಮಾಡಲಾಗದಿದ್ದ ಕೆಲಸವನ್ನು ಗಾಂಧೀಜಿ ಒಂದೇ ದಿವಸದಲ್ಲಿ ಮಾಡಿ ತೋರಿಸಿದರು. ಈ ಸ್ವಾತಂತ್ರ್ಯವೇ ಸ್ವರಾಜ್ಯದ ಕೀಲಿಕೈ" ಅಂದರು. ಗುರುದೇವ ಅವರ ಅಣ್ಣ ಇಬ್ಬರೂ ಗಾಂಧೀಜಿ ಮತ್ತು ಅವರ ಕುಟುಂಬದ ಬಗ್ಗೆ ತಮ್ಮ ಫಿನಿಕ್ಸ್ ಮಿತ್ರರೊಡನೆ ಇವರು ಶಾಂತಿನಿಕೇತನದಲ್ಲೇ ನಿವಾಸ ಹೂಡಲಿ ಅಂತ ಅವರು ಆಶಿಸುತ್ತಿದ್ದರು.

ಶಾಂತಿನಿಕೇತನದಲ್ಲಿ ಕಾಕಾ ಕಾಲೇಲ್ಕರ್, ಆಚಾರ್ಯ ಕೃಪಲಾನಿ, ಮಾಮಾ ಫಡಿಕೆ, ಆಪಾ ಪಟವರ್ಧನ್ ಮತ್ತು ಸಂಸ್ಕೃತ ವಿದ್ವಾಂಸ ಚಿಂತಾಮಣಿ ಶಾಸ್ತ್ರಿ, ಇವರೊಂದಿಗೆ ಗಾಂಧೀಜಿ ಪರಿಚಯವಾಯಿತು. ಸಿಯರ್‌ಸಿನ್ ಮತ್ತು ಚಾರ್ಲಿ ಬಹಳ ಹಿಂದಿನಿಂದ ಇವರನ್ನು ಇಷ್ಟಪಡುತಿದ್ದವರು. ಹೊಸ ಸ್ನೇಹಿತರಲ್ಲಿ ಕ್ಷಿತೀಶ ಮೋಹನ ಬಾಬು, ನಗೇನ ಬಾಬು, ಶರದ್‌ಬಾಬು, ಕಾಲಿ ಬಾಬು ಮುಂತಾದವರೊಡನೆ ಹೆಚ್ಚಿನ ಪರಿಚಯವಾಯಿತು. ಶಾಂತಿ ನಿಕೇತನದಲ್ಲಿ ಇನ್ನೂ ಒಂದು ವಾರ ಕೂಡ ಕಳೆದಿರಲಿಲ್ಲ, ಅಷ್ಟರಲ್ಲೇ ಪೂನಾದಿಂದ ಗೋಖಲೆಯವರು ತೀರಿಕೊಂಡರೆಂದು ತಂತಿ ಬಂತು. ಈ ದುಃಖದ ಸಮಾಚಾರ ಕೇಳಿ ಇಡೀ ದೇಶ ದುಃಖಮಗ್ನವಾಯಿತು. ಶಾಂತಿನಿಕೇತನದಲ್ಲಿ ಎಲ್ಲರೂ ಗಾಂಧೀಜಿಗೆ ಸಮಾಧಾನ ಹೇಳಿದರು, ದಿವಂಗತರ ನೆನಪಿನಲ್ಲಿ ಶೋಕಸಭೆ ನಡೆಸಿ, ಗಾಂಧೀಜಿ ಕಸ್ತೂರಬಾ ಮತ್ತು ಮಗನಲಾಲ ಗಾಂಧಿಯನ್ನು ಕರೆದುಕೊಂಡು ಪೂನಾ ತಲಪಿದರು. ಅಲ್ಲಿ ಅಂತ್ಯಕ್ರಿಯಯನ್ನು ಮುಗಿಸಿಕೊಂಡು, 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯ ಜನರೊಡನೆ ಮಾತುಕತೆ ನಡೆಸಿದರು. ಗೋಖಲೆಯವರ ಪುಣ್ಯಸ್ಮೃತಿಯಲ್ಲಿ ಹೆಚ್ಚು ಚರ್ಚೆ ಮಾಡದೆಯೇ ಸಂಸ್ಥೆಯ ಸದಸ್ಯನಾಗಬೇಕೆಂದು ಗಾಂಧೀಜಿಯವರಿಗನಿಸಿತು.

ಆದರೆ ಅವರ ಸದಸ್ಯತ್ವವನ್ನು ಕುರಿತು ಸಂಸ್ಥೆಯಲ್ಲಿ ವಿಭಜನೆ ಉಂಟಾಗುವ ಸ್ಥಿತಿ ಕಂಡುಬಂತು. ತೀವ್ರವಾದ ಮತಭೇದ ಉಂಟಾಯಿತು. ಸಂಸ್ಥೆಯನ್ನು ಉಳಿಸುವುದಕ್ಕೋಸ್ಕರ, ಸದಸ್ಯರನ್ನು ಧರ್ಮಸಂಕಟದಿಂದ ಪಾರುಮಾಡಲು ಸದಸ್ಯತ್ವದ ಅರ್ಜಿಯನ್ನು ತಾನೇ ಹಿಂದಕ್ಕೆ ಪಡೆಯುವುದು ಒಳಿತೆಂದು ಗಾಂಧೀಜಿಯವರಿಗನ್ನಿಸಿತು. ಗಾಂಧೀಜಿ ಸದಸ್ಯರಾಗುವುದಿಲ್ಲವೆಂದು ಸ್ವತಃ ಹೇಳಿದ ಮೇಲೆ ಸಂಸ್ಥೆಯ ಮೇಲಿದ್ದ ಹೊರೆ ಇಳಿಯಿತು. ಗೋಖಲೆಯವರ ಸಂಸ್ಥೆಯೊಂದಿಗೆ ಜೀವನವಿಡೀ ಸ್ನೇಹವಿತ್ತಾದರೂ ಗಾಂಧೀಜಿ ವೈಧಾನಿಕವಾಗಿ ಅದರ ಸದಸ್ಯರಾಗಲಿಲ್ಲ, ಗೋಖಲೆಯವರ ಶೋಕಸಭೆಯಲ್ಲಿ ಬೊಂಬಾಯಿಯ ಗವರ್ನರ್ ಲಾರ್ಡ್ ವಿಲಿಂಗಡನ್ ಜೊತೆ ಗಾಂಧೀಜಿಯವರು ಕೂಡ ಶ್ರದ್ಧಾಂಜಲಿಯನ್ನು ಅರ್ಪಿಸಿದರು, ಗಾಂಧೀಜಿಯವರ ಆಪ್ತಮಿತ್ರರಾಗಿದ್ದ ಗೋಖಲೆ, ಗಾಂಧೀಜಿಯನ್ನು ಅಪರಿಚಿತ ಪರಿಸ್ಥಿತಿಯನ್ನು ದೇಶದಲ್ಲಿ ಬಿಟ್ಟು ಹೋಗಿದ್ದರು. ಈಗ ಯಾರಿಗೆ ಸಮರ್ಪಿಸುವುದು? ಅದಕ್ಕೆ ಸಮರ್ಥರಾದವರು ಯಾರು, ಗೋಖಲೆಯವರಿಗೆ ಕೊಟ್ಟಿದ್ದ ವಚನ ಕೂಡ ಇತ್ತಲ್ಲ, ಒಂದು ವರ್ಷದ ಮಟ್ಟಿಗೆ ನೋಡುವ, ಕೇಳುವದಿತ್ತು. ಆಂದೋಲನ ಮಾಡಲು ಆತುರವಿತ್ತು.

ಪೂನಾದಿಂದ ಹಿಂದಿರುಗಿದ ಮೇಲೆ ಪುತ್ರ ರಾಮದಾಸ ಮತ್ತು ಕಸ್ತೂರಬಾನನ್ನು ಕರೆದುಕೊಂಡು ಗಾಂಧೀಜಿ ಲಂಡನ್ನಿನ ತನ್ನ ಪರಮ ಮಿತ್ರ ಡಾ|| ಪ್ರಾಣಜೀವನ ಮೆಹ್ತಾರವರನ್ನು ಭೇಟಿಯಾಗಲು ರಂಗೂನ್(ಬರ್ಮಾ)ಗೆ ಹೋದರು. ಆಗ ಬರ್ಮಾ ಹಿಂದೂಸ್ತಾನಕ್ಕೆ ಸೇರಿತ್ತು. ಅಲ್ಲಿಯೂ ಗಾಂಧೀಜಿಯ ಕೀರ್ತಿ ಈಗಾಗಲೇ ತಲಪಿತ್ತು. ಬರ್ಮಾದ– ಇಂದಿನ ಮ್ಯಾನ್ಮಾರ್‌ನ– ನೇಕಾರರು ಮತ್ತು ಬರ್ಮಾ ಹಿಂದುಸ್ತಾನಿಗಳು, ಬುದ್ಧ ಸಾಧುಗಳು ಎಲ್ಲರೂ ಗಾಂಧೀಜಿಯವರಿಗೆ ಭವ್ಯ ಸ್ವಾಗತ ನೀಡಿದರು. ರಂಗೂನ್‌ನಿಂದ ಹಿಂದಿರುಗುತ್ತಾ ಕಲ್ಕತ್ತಾದಲ್ಲಿ ಚಿತ್ತರಂಜನದಾಸರ ಮನೆಯಲ್ಲಿಳಿದುಕೊಂಡರು. ಈ ಪರಿಚಯ ಮೈತ್ರಿಯಲ್ಲಿ ಪರಿಣಮಿಸಿತು. ರಂಗೂನ್‌ಗೆ ಹೋಗುವಾಗ ಗಾಂಧಿ ಪರಿವಾರ ಸರ್. ಭೂಪೇಂದ್ರ ನಾಥ ಬಸು ಅವರ ಮನೆಯಲ್ಲಿ ಇಳಿದುಕೊಂಡಿತು. ಎರಡೂ ಸ್ಥಾನಗಳಲ್ಲಿ ಗಾಂಧೀಜಿಯವರ ಫಲಾಹಾರದ ಅಪಾರ ವ್ಯವಸ್ಥೆ ಮಾಡುವಲ್ಲಿ ಸಮಯ ಶಕ್ತಿ ಎರಡೂ ಖರ್ಚಾಗುತ್ತಿದ್ದವು. ಇಡೀ ಪರಿವಾರ ಈ ಮೂವರ ಸತ್ಕಾರ ಮಾಡುವುದರಲ್ಲಿ ತೊಡಗಿರುತ್ತಿತ್ತು. ಇದನ್ನೆಲ್ಲ ನೋಡಿ ಸ್ವಾವಲಂಬೀ ಮಿತವ್ಯಯಿಯಾದ ಗಾಂಧೀಜಿಯವರಿಗೆ ಒಳಗೇ ಕಷ್ಟವಾಗುತ್ತಿತ್ತು. ಆದರೆ ಸ್ನೇಹಬಂಧನದಿಂದ ವಿವಶರಾಗಿದ್ದರು.

ನವಂಬರ್ ೧೯೧೫ ಹರಿದ್ವಾರದಲ್ಲಿ ಪೂರ್ಣ ಕುಂಭಮೇಳ ನಡೆಯುತ್ತಿತ್ತು. ಶ್ರದ್ಧಾವಂತರ ಆ ದೊಡ್ಡ ಜನ ಸಮೂಹವನ್ನು ವ್ಯವಸ್ಥಿತಗೊಳಿಸಲು ಸ್ವಾಮಿ

ಶ್ರದ್ಧಾನಂದರು ಫಿನಿಕ್ಸ್‌ನ ನಿವಾಸಿಗಳನ್ನೂ ಆಹ್ವಾನಿಸಿದರು. ಮಗನಲಾಲ್ ಗಾಂಧಿ ತನ್ನಿತರ ಮಿತ್ರರನ್ನು ಕರೆದುಕೊಂಡು ಮೊದಲೇ ಹರಿದ್ವಾರವನ್ನು ತಲಪಿದ್ದರು. ಗಾಂಧೀಜಿ ಕೂಡ ರಾಮದಾಸ ಮತ್ತು ಕಸ್ತೂರಬಾ ಅವರನ್ನು ಕರೆದುಕೊಂಡು ಕಲ್ಕತ್ತದಿಂದ ನೇರವಾಗಿ ಹರಿದ್ವಾರಕ್ಕೆ ಹೋದರು. ಅಲ್ಲಿನ ಕೊಳಕು ಮತ್ತೆ ಅವ್ಯವಸ್ಥೆ ಎಂತಹ ಆರೋಗ್ಯವಂತರನ್ನೂ ಹುಚ್ಚರಾಗಿಸುವಂತಿತ್ತು. ಫಿನಿಕ್ಸ್ ನಿವಾಸಿಗಳು ಪಾಯಖಾನೆಯನ್ನು ಶುದ್ಧ ಮಾಡುವ ಕಷ್ಟಕರವಾದ ಕೆಲಸವನ್ನು ತೆಗೆದುಕೊಂಡು ಅಂತ್ಯಜನ ಕೆಲಸ ಕೂಡ ಎಷ್ಟು ಒಳ್ಳೆಯ ರೀತಿಯಲ್ಲಿ ನಿಭಾಯಿಸಬಹುದೆಂಬುದನ್ನು ಎಲ್ಲರಿಗೂ ತೋರಿಸಿಕೊಟ್ಟರು. ಗಾಂಧೀಜಿಯ ಖ್ಯಾತಿ ಇಲ್ಲಿಗೂ ತಲಪಿತ್ತು. ದರ್ಶನ ಪಡೆಯುವರು ಅವರಿಗೆ ಒಂದು ನಿಮಿಷ ಕೂಡ ಬಿಡುವು ಕೊಡುತ್ತಿರಲಿಲ್ಲ. ಟೆಲಿಫೋನ್, ಸಮಾಚಾರ ಪತ್ರಿಕೆಗಳು, ಟೆಲಿಪ್ರಿಂಟರ್ ಇತ್ಯಾದಿ ಏನೂ ಇಲ್ಲದ ಆ ಕಾಲದಲ್ಲಿ ಆ ಶಿಷ್ಯಜನಾಂಗಕ್ಕೆ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದುದೆಲ್ಲಾ ಹೇಗೋ ತಿಳಿದುಹೋಗಿತ್ತು. ಗಾಂಧಿ ಅವರಿಗೆ ಸಹಾಯ ಮಾಡ್ತಾರೆ ಅಂತ ಆ ಜನಗಳಿಗೆ ಹೇಗೆ ತಿಳಿಯುತ್ತಿತ್ತೋ ಏನೋ? ಇಷ್ಟು ದೊಡ್ಡ, ವಿಶಾಲವಾದ ದೇಶದಲ್ಲಿ ಒಬ್ಬರ ಬಾಯಿಂದ ಇನ್ನೊಬ್ಬರಿಗೆ ಇಷ್ಟು ಬೇಗ ಸಮಾಚಾರ ಹೇಗೆ ಹರಡಿಬಿಡುತ್ತಿತ್ತು ಎಂಬುದು ಆ ಭಗವಂತನಿಗೇ ಗೊತ್ತಿರಬೇಕು. ಹರಿದ್ವಾರದಲ್ಲಿ ಪಾಯಾಖಾನೆ ಮಾಡಿದ ಮೇಲೆ ಎಲ್ಲರೂ ಗಂಗಾಸ್ನಾನ ಮಾಡುತ್ತಿದ್ದರು. ಒಂದು ದಿನ ಗಂಗೆಯಲ್ಲಿ ನಿಂತು ಗಾಂಧೀಜಿ ಇನ್ನು ಮುಂದೆ 'ನಾನು ದಿವಸವೂ ಐದು ವಸ್ತುಗಳನ್ನು ಮಾತ್ರ ತಿನ್ನುತ್ತೇನೆ, ಸೂರ್ಯಾಸ್ತವಾದ ಮೇಲೇನೂ ತಿನ್ನುವುದಿಲ್ಲ' ಅಂತ ಪ್ರತಿಜ್ಞೆ ಮಾಡಿದರು. ಖಾಯಿಲೆ ಬಿದ್ದರೂ ಈ ಐದು ವಸ್ತುಗಳಲ್ಲೇ ಔಷಧಿಯ ಲೆಕ್ಕ ಕೂಡ ಸೇರಿಕೊಳ್ಳುತ್ತಿತ್ತು. ಅವರ ಫಲಾಹಾರದ ವ್ಯವಸ್ಥೆಗಾಗಿ ಮಿತ್ರರ ಪರಿವಾರ ತನ್ನ ಸಮಯವನ್ನು ಹಾಳುಮಾಡದಿರಲಿ, ಗಾಂಧೀಜಿ ತನ್ನ ಪೋಷಕರಿಗೆ ಹೊರೆ ಆಗಬಾರದು ಎಂಬ ಉದ್ದೇಶದಿಂದ ಈ ಪ್ರತಿಜ್ಞೆ ಮಾಡಿದ್ದರು. ಅವರು ಜೀವನವಿಡೀ ಈ ವ್ರತವನ್ನು ಪಾಲಿಸಿದರು. ಆಗಲೇ ಅವರು ಗಂಗೆಯುನ್ನು ಸಾಕ್ಷಿ ಮಾಡಿಕೊಂಡು ಪಂಚಮಹಾವ್ರತವನ್ನು ಕೈಗೊಂಡರು. ಅದರಲ್ಲಿ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಸೇರಿತು.

ಹರಿದ್ವಾರದಿಂದ ಗಾಂಧೀಜಿ ಹೃಷಿಕೇಶಕ್ಕೆ ಹೋದರು. ಅಲ್ಲಿ ಸ್ವರ್ಗಾಶ್ರಮವನ್ನು ನೋಡಲು ಹೋದರು. ಇಷ್ಟೊಂದು ನಿಷ್ಠಾವಂತ ಹಿಂದೂ ಆಗಿದ್ದರೂ ನೀವು ಜುಟ್ಟು–ಜನಿವಾರ ಏಕೆ ಧರಿಸಿಲ್ಲ ಅಂತ ಅಲ್ಲಿ ಸ್ವಾಮೀಜಿ ಗಾಂಧೀಜಿಯವರನ್ನು ಕೇಳಿದರು. ವಿದೇಶಗಳಲ್ಲಿ ಜುಟ್ಟು ಶೋಭಿಸಲ್ಲ ಅಂತ ಆರಂಭದಲ್ಲಿ ಜುಟ್ಟು ಹೋಯಿತು. ಆದರೆ ಹುಟ್ಟಿನಿಂದಲೇ ಜನಿವಾರವನ್ನು ವಿರೋಧಿಸಿದ್ದರು. ದೇಶದಲ್ಲಿ ಅಸಂಖ್ಯ ಮಂದಿ ಅಸ್ಪೃಶ್ಯರಾದ ಹಿಂದೂಗಳಿದ್ದಾರೆ. ಅವರಿಗೆಲ್ಲಾ ಉಪನಯನ ಸಂಸ್ಕಾರದ

ಹಕ್ಕು ಇಲ್ಲ ಎಂಬ ಕಾರಣಕ್ಕಾಗಿ ಗಾಂಧೀಜಿ ಜನಿವಾರವನ್ನು ತ್ಯಜಿಸಿದ್ದರು. ತಮ್ಮ ನಾಲ್ಕುಜನ ಮಕ್ಕಳಿಗೂ ಈ ಕಾರಣದಿಂದಲೇ ಅವರು ಉಪನಯನ ಮಾಡಿಸಿರಲಿಲ್ಲ. ಇದರಿಂದಲೇ ಗಾಂಧೀಜೀಯ ಏಳು ಜನ ಮೊಮ್ಮಕ್ಕಳಿಗೂ ಉಪನಯನ ಸಂಸ್ಕಾರ ನಡೆಯಲಿಲ್ಲ. ಈಗ ನಾವು ಹದಿಮೂರು ಜನ ಅಣ್ಣ ತಂಗಿಯರಿಗೆ ೧೪ ಜನ ಗಂಡುಮಕ್ಕಳಿದ್ದಾರೆ. ನಾವು ಯಾರೂ ಯಾರಿಗೂ ಉಪನಯನ ಸಂಸ್ಕಾರವನ್ನು ಮಾಡಿಲ್ಲ.

ಕುಂಭಸ್ನಾನ ಮುಗಿಸಿದ ಬಳಿಕ ಫಿನಿಕ್ಸ್ ಪರಿವಾರ ಎಲ್ಲಿರುವುದು ಅಂತ ಚರ್ಚೆ ನಡೆದಿತ್ತು. ಆರ್ಥಿಕ ಹೊಣೆಗಾರಿಕೆಯನ್ನು ವಹಿಸಲು ಈಗ ಗೋಖಲೆಯವರೂ ಇರಲಿಲ್ಲ. ಗುಜರಾತಿ ಆಗಿದ್ದುದರಿಂದ ಸ್ಥಿರವಾಗಿರುವುದಕ್ಕೆ ಗುಜರಾತ್ ಪ್ರಾಂತವೇ ಸರಿಯಾಗಿರುತ್ತೆ ಅಂತ ಗಾಂಧೀಜಿಗನ್ನಿಸಿತು. ಮಿತ್ರರ ಸಲಹೆ ಮೇರೆಗೆ ಅಹಮದಾಬಾದ್‌ನಲ್ಲಿ ಆಶ್ರಮ ಪದ್ಧತಿಯಂತೆ ಬಂದು ಪರಿವಾರವಾಗಿ ಇರಲು ನಿಶ್ಚಯಿಸಿದರು. 'ಹಿಂದ್ ಸ್ವರಾಜ್'ನಲ್ಲಿ ಚರಖಾ ಕಲ್ಪನೆ ಮಾಡಿರುವ ಹಾಗೆ, ವಸ್ತ್ರ ಸ್ವಾವಲಂಬನೆಯ ಸ್ವಪ್ನವನ್ನು ಸಾಕಾರಗೊಳಿಸಬೇಕೆಂದು ಅಹಮದಾಬಾದನ್ನು ಆರಿಸಿಕೊಂಡರು. ನೂರಾರು ವರ್ಷಗಳಿಂದಲೂ ಅಹಮದಾಬಾದ್ ತನ್ನ ವಸ್ತು ಉದ್ಯೋಗಕ್ಕಾಗಿ ಹೆಸರುವಾಸಿಯಾಗಿತ್ತು. ಚರಖಾ ಆರಂಭ ಅಲ್ಲಿ ಮಾಡುವುದು ಸುಲಭ ಅಂತ ಗಾಂಧೀಜಿಯವರ ಆಸೆ ಮೂಡಿತ್ತು.

### ಸತ್ಯಾಗ್ರಹ ಆಶ್ರಮ ಕೋಚರವ್

೧೯೧೫ರ ಮೇ ೨೫ ರಂದು ಅಹಮದಾಬಾದ್ ಬಳಿ ಕೋಚರವ್ ಎಂಬಲ್ಲಿ ಆಶ್ರಮ ಸ್ಥಾಪನೆಯಾಯಿತು. ಜೀವನಲಾಲ ದೇಸಾಯಿ ಎಂಬ ಬ್ಯಾರಿಸ್ಟರ್ ಒಬ್ಬರು ಗಾಂಧೀಜಿಗೆ ತಮ್ಮ ಬಂಗಲೆಯನ್ನು ಬಾಡಿಗೆಗೆ ಬಿಟ್ಟುಕೊಟ್ಟರು. ಅದರಲ್ಲಿ ಫಿನಿಕ್ಸ್‌ನಿವಾಸಿಗಳು ತಮ್ಮ ಆಶ್ರಮ ತೆರೆದರು. ಗಾಂಧೀಜಿ ಅವರ ಪತ್ನಿ ಕಸ್ತೂರಬಾ ಮತ್ತು ಮಗ ಮಣಿಲಾಲ, ರಾಮದಾಸ, ದೇವದಾಸ ಮತ್ತು ಇಪ್ಪತ್ತೈದು ಮಂದಿ ಸ್ತ್ರೀ ಪುರುಷರು ಅದರಲ್ಲಿದ್ದರು. ಅದರಲ್ಲಿ ೧೩ ಜನ ತಮಿಳರೂ ಇದ್ದರು. ೫ ಮಂದಿ ತಮಿಳು ಮಕ್ಕಳು ಫಿನಿಕ್ಸ್‌ನಿಂದಲೇ ಭಾರತಕ್ಕೆ ಬಂದಿದ್ದರು, ಎಲ್ಲರೂ ಮಿಲ್‌ನ ನೂಲಿನ, ಕೈಚರಖಾದಿಂದ ನೇಯ್ದ ದಪ್ಪಬಟ್ಟೆಯನ್ನು ಧರಿಸುತ್ತಿದ್ದರು. ಒಂದು ಅಡುಗೆಮನೆಯಲ್ಲೇ ಎಲ್ಲರೂ ಊಟಮಾಡಿ, ಎಲ್ಲರೂ ಒಂದೇ ಪರಿವಾರದವರ ಹಾಗೆ ಸಮಾನವಾದ ಊಟ ಮಾಡುತ್ತಿದ್ದರು. ಸಾಕಷ್ಟು ಚರ್ಚೆ ಮಾಡಿ ಈ ಆಶ್ರಮಕ್ಕೆ 'ಸತ್ಯಾಗ್ರಹ ಆಶ್ರಮ'ವೆಂದು ಹೆಸರಿಡಲಾಯಿತು. ಆಶ್ರಮವಾಸಿಗಳು ಆಚರಿಸಬೇಕಾದ ನಿಯಮಗಳನ್ನು ರಚಿಸಲಾಯಿತು. ಸುಲಭವಾಗಿ ನೆನಪಿಟ್ಟುಕೊಳ್ಳಲಿ ಅಂತ ಈ ನಿಯಮಗಳಿಗೆ ಸಂಸ್ಕೃತ ಶ್ಲೋಕದ ಸ್ವರೂಪ ನೀಡಿದರು. ಇದು

ಏಕಾದಶ ವ್ರತ ಯಾವಾಗಲೂ ನೆನಪಿನಲ್ಲಿರಲಿ ಎಂದು ಅದನ್ನು ಪ್ರತಿದಿನ ಸ್ಮರಿಸಲಿ ಎಂಬ ಉದ್ದೇಶದಿಂದ ಈ ಶ್ಲೋಕ ಇವತ್ತಿಗೂ ಆಶ್ರಮದ ಪ್ರಾರ್ಥನೆಯ ಅವಿಭಾಜ್ಯ ಅಂಗವಾಗಿದೆ;

> ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯಾ, ಅಸಂಗ್ರಹ,
> ಶರೀರಶ್ರಮ, ಅಸ್ವಾದ, ಸರ್ವತ್ರ ಭಯವರ್ಜನಃ
> ಸರ್ವಧರ್ಮ ಸಮಾನತ್ವ ಸ್ವದೇಶಿ ಸ್ಪರ್ಶ ಭಾವನಾ
> ಹಿ ಏಕಾದಶ ಸೇವಹಿ ವ್ರತ ನಿಶ್ಚಯೇ ॥

ಈ ವ್ರತಗಳನ್ನು ಕುರಿತಂತೆ ಗಾಂಧೀಜಿಯವರು ಮಂಗಳ ಪ್ರಭಾತ ಎಂಬ ಪುಸ್ತಕವನ್ನೂ ಬರೆದಿದ್ದರು. ಇಂದಿಗೂ ಮಂಗಳ ಪ್ರಭಾತವನ್ನು ಅವರ ಶ್ರೇಷ್ಠ ಕೃತಿಗಳಲ್ಲಿ ಒಂದೆಂದು ಪರಿಗಣಿಸುತ್ತಾರೆ.

ಗಾಂಧೀಜಿಯವರ ಮಕ್ಕಳು ಅವರನ್ನು 'ಬಾಪೂ' ಎಂದು ಕರೆಯುತ್ತಿದ್ದರು. ಅದನ್ನು ನೋಡಿ ಆಶ್ರಮವಾಸಿಗಳೂ ಅವರನ್ನು ಬಾಪೂ ಅಂತಲೇ ಕರೆಯಲಾರಂಭಿಸಿದರು. ನಂತರ ಅವರ ಮಿತ್ರರು, ಜೊತೆಗಾರರು, ಸಮಕಾಲೀನ ದೇಶ–ವಿದೇಶಗಳ ಎಲ್ಲರೂ ಗಾಂಧೀಜಿಯನ್ನು ಬಾಪೂ ಎಂದೇ ಕರೆಯತೊಡಗಿದರು. ನಾವು ಚಿಕ್ಕಮಕ್ಕಳಾಗಿದ್ದುದರಿಂದ ಬಾಪೂ ಜೊತೆಗೆ 'ಜೀ' ಯನ್ನು ಸೇರಿಸಿ ಕರೆಯುತ್ತಿದ್ದೆವು. ನಮ್ಮ ಪೀಳಿಗೆಯವರು 'ಜೀ' ಅನ್ನು ಸೇರಿಸಲೇಬೇಕಾಗಿತ್ತು. ಇಲ್ಲದಿದ್ದರೆ ಗೌರವಕ್ಕೆ ಕುಂದು ಆಗುತ್ತಿತ್ತು.

ಬಾಪೂಜೀ ಅಕ್ಕ ಗೋರೀಗೆ ಗಂಡ ಇರಲಿಲ್ಲ. ಆಮೇಲೆ ಅವರ ಒಬ್ಬಳೇ ಮಗಳು ಧೂಲಿ ಕೂಡ ವಿಧವೆಯಾದಳು. ಅವರ ಒಬ್ಬನೇ ಮಗ ಗೋಕುಲ ಕೂಡ ತೀರಿಕೊಂಡಿದ್ದರಿಂದ ಸೊಸೆ ನಿರ್ಮಲಾ ಕೂಡ ಅವರ ಜೊತೆಯಲ್ಲೇ ಇರುತ್ತಿದ್ದಳು. ಗೋರೀ ಅತ್ತೆ, ಅವರ ಮಗಳು, ಸೊಸೆಯನ್ನು ಕರೆದುಕೊಂಡು ಕೊಚರವ್ ಆಶ್ರಮಕ್ಕೆ ಬಂದು ತನ್ನ ತಮ್ಮನ ಜೊತೆ ಇದ್ದಳು.

೧೯೦೭ರಲ್ಲಿ ಗಾಂಧೀಜಿ ಓದಿದ್ದ ಒಂದು ಲೇಖನದಲ್ಲಿ ಹೆಚ್ಚು ಹಾಲು ಪಡೆಯುವುದಕ್ಕಾಗಿ ಕಲ್ಕತ್ತಾದ ಧನಿಕ ಗೊಲ್ಲರು ತಮ್ಮ ಹಸು–ಎಮ್ಮೆ ಇವುಗಳ ಮೇಲೆ ಫುಕ್ಕಾ ಪದ್ಧತಿಯಲ್ಲಿ ಅತ್ಯಾಚಾರವೆಸಗುತ್ತಿದ್ದರು ಅಂತ ತಿಳಿಸಿದ್ದರು. ಈ ಪದ್ಧತಿಯಲ್ಲಿ ಹಸುವಿನ ಕೆಚ್ಚಲಿನಿಂದ ಕೊನೆಯ ಒಂದು ಹನಿಯನ್ನೂ ಹಿಂಡುತ್ತಾರೆ. ಒಮ್ಮೊಮ್ಮೆ ಅದರಲ್ಲಿ ರಕ್ತ ಕೂಡ ಬರುತ್ತೆ ಅಂತ ತಿಳಿಸಿದ್ದರು. ಅದಾದ ನಂತರ ಗಾಂಧೀಜಿಗೆ ಹಾಲಿನ ಬಗ್ಗೆ ತಿರಸ್ಕಾರ ಮೂಡಿತು. ನಂತರ ಕೇಲನ್‌ಬೇಕ್ ಜೊತೆ ವಿಚಾರ ಮಾಡಿ, ಟಾಲ್‌ಸ್ಟಾಯ್ ಫಾರ್ಮ್‌ನ ಕಾಲದಿಂದಲೂ ಹಾಲಿನಿಂದ ಮಾಡುತ್ತಿದ್ದ ಪದಾರ್ಥಗಳನ್ನೆಲ್ಲಾ ತ್ಯಜಿಸಿಬಿಟ್ಟಿದ್ದರು. ಹಾಲು ತ್ಯಜಿಸಿದರೆ ಬ್ರಹ್ಮಚರ್ಯ ಪಾಲಿಸುವುದು ಸುಲಭವಾಗುತ್ತದೆ ಎಂದು ಗಾಂಧೀಜಿಗೆ ಅನಿಸುತ್ತಿತ್ತು. ಆಫ್ರಿಕಾದ ಸಮಶೀತೋಷ್ಣ

ಹವಾಮಾನ ಮತ್ತು ಫಲವತ್ತಾದ ಭೂಮಿಯ ಹಣ್ಣು–ತರಕಾರಿ ನಂತರ ಅಹಮದಾಬಾದ್ ಒಂದು ಮರಳುಗಾಡಿನ ಹಾಗೆನಿಸುತ್ತಿತ್ತು, ಈ ಬಿಸಿ ಮತ್ತು ಒಣ ಪ್ರದೇಶದಿಂದ ಫಿನಿಕ್ಸ್ ನಿವಾಸಿಗಳ ಮೇಲೆ ದುಷ್ಪರಿಣಾಮ ಆಯಿತು. ಬಡತನದಲ್ಲಿರಬೇಕೆಂದು ನಿರ್ಣಯಿಸಿದ್ದರು. ಅದರಿಂದಾಗಿ ತುಟ್ಟಿ ಬೆಲೆಯ ಹಣ್ಣುಗಳನ್ನು ಖರೀದಿಸುವಂತಿರಲಿಲ್ಲ. ಹಾಲು–ತುಪ್ಪ ವರ್ಜ್ಯ. ಹೀಗಾಗಿ ಗಾಂಧೀಜಿಯ ಮೂವರು ಮಕ್ಕಳ ಆರೋಗ್ಯವೂ ಹಾಳಾಗತೊಡಗಿತು. ನಿಃಶಕ್ತರಾದರು. ಆದರೂ ಆಶ್ರಮನಿಯಮವನ್ನು ಅನುಸರಿಸಲೇಬೇಕಾಗಿತ್ತು. ಇನ್ನೂ ಮೂರು–ನಾಲ್ಕು ಜನಗಳಿಗೆ ತೀರಾ ಪೋಷಣೆ ಇಲ್ಲದ ಆಹಾರ ಪ್ರಯೋಗದಿಂದ ಕ್ಷಯರೋಗ ತಗುಲಿತು. ಆಶ್ರಮವಂತೂ ನಡೆಯುತ್ತಲಿದ್ದಿತು. ಈ ಎಲ್ಲ ಕಷ್ಟಗಳಿಂದ ಕೊನೆಗೆ ಗಾಂಧೀಜಿ ಆಶ್ರಮ ಭೋಜನದಲ್ಲಿ ಹಾಲನ್ನೂ ಸೇರಿಸಿದರು. ಹಾಗಿದ್ದರೂ ತಮ್ಮ ಹಾಲಿನ ವ್ರತವನ್ನು ನಡೆಸುತ್ತಲೇ ಇದ್ದರು. ಅದರಿಂದಲೇ ಅವರ ಪ್ರತಿಜ್ಞೆ ಪ್ರತಿಜ್ಞೆಯಾಗಿಯೇ ಉಳಿದಿತ್ತು.

ಹಿಂದೂಧರ್ಮದಲ್ಲಿರುವ ಅತಿಕೆಟ್ಟ ಪದ್ಧತಿ ಅಂದರೆ 'ಅಸ್ಪೃಶ್ಯತೆ' ಅಂತ ಗಾಂಧೀಜಿಗೆ ಸ್ಪಷ್ಟವಾಗಿ ಅನಿಸಿತ್ತು. ಸವರ್ಣೀಯರು ಅಂತ್ಯಜರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದುದರಿಂದ ಹಿಂದೂಸಮಾಜದ ಬಹುದೊಡ್ಡ ಅಂಗವೇ ತಿರಸ್ಕಾರವಾಗಿತ್ತು. ಇದು ಹಿಂದೂಧರ್ಮದ ದೊಡ್ಡ ದುರ್ಬಲತೆಯಗಿತ್ತು. ಈ ದುರ್ಬಲತೆಯನ್ನೇ ಮುಂದಿಟ್ಟುಕೊಂಡು ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮೀಯರು ಲಕ್ಷಾಂತರ ಅಂತ್ಯಜರು ಮತ್ತು ಆದಿವಾಸಿಗಳನ್ನು ಧರ್ಮ ಪರಿವರ್ತನೆ ಮಾಡುವ ಧೈರ್ಯ ತೋರಿದ್ದರು. ಸಮಾಜದ ತಿರಸ್ಕಾರಕ್ಕೆ ಒಳಗಾಗಿದ್ದ ಈ ವರ್ಗ ಅಶಿಕ್ಷಿತರಾಗಿ, ಬಡವರೂ, ದೀನ–ದಲಿತರಾಗಿದ್ದರು. ಹೀಗಾಗಿ ಈ ವರ್ಗ ಬಹಳ ಹಿಂದುಳಿದಿತ್ತು. ಈ ಒಂದು ಕಾರಣವನ್ನು ಮುಂದಿಟ್ಟು ಪ್ರಪಂಚದಲ್ಲೆಲ್ಲಾ ಇಂದಿಗೂ ಹಿಂದೂ ಧರ್ಮವನ್ನು ಹೀಗಳೆಯಲಾಗುತ್ತದೆ. ಮಿಕ್ಕಧರ್ಮಗಳೆದುರು ಹಿಂದೂಗಳು ತಲೆ ತಗ್ಗಿಸಬೇಕಾಗುತ್ತದೆ. ನಮ್ಮ ಸಮಾಜದಲ್ಲಿ ಈ ಜಾತಿ, ಅಸ್ಪೃಶ್ಯತೆ ಇತ್ಯಾದಿಗಳನ್ನು ನಾಶಮಾಡಿದ್ದೇ ಆದರೆ ಸಹಜವಾಗಿ ಹಿಂದೂಧರ್ಮವನ್ನು ಆದರ್ಶ ಧರ್ಮವೆಂದು ಪರಿಗಣಿಸುತ್ತಾರೆ. ಆದುದರಿಂದಲೇ ಸತ್ಯಾಗ್ರಹ ಆಶ್ರಮ ಸ್ಥಾಪಿಸಿದನಂತರವೇ ಆಶ್ರಮದ ನಿಯಮಗಳನ್ನು ಅನುಸರಿಸಲು ಸಿದ್ಧವಾಗುವ ಯಾವುದೇ ಅಂತ್ಯಜ ಪರಿವಾರ ಆಶ್ರಮದ ಪರಿಸರದಲ್ಲಿ ಬಂದಿರಬಹುದೆಂದು ಗಾಂಧೀಜಿ ಘೋಷಿಸಿದ್ದರು. ಎಲ್ಲ ಮಿತ್ರರೂ, ಸಹಾಯಕರೂ ಈ ಆದರ್ಶಕ್ಕೆ ಬಾಯ್ಮಾತಿನಲ್ಲಿ ಸಹಮತಿ ಸೂಚಿಸಿದ್ದರಾದರೂ ಇಷ್ಟು ಬೇಗನೇ ಈ ಪರಿಸ್ಥಿತಿಯನ್ನು ಎದುರಿಸಬೇಕಾಗ ಬಹುದೆಂಬ ಕಲ್ಪನೆ ಆವರಿಸಿರಲಿಲ್ಲ.

ಯೋಗಾಯೋಗ ಅನ್ನುವಂತೆ, ಸತ್ಯಾಗ್ರಹ ಆಶ್ರಮ ಸ್ಥಾಪಿಸಿದ ಎರಡು–

ಮೂರು ತಿಂಗಳು ತರುಣದಲ್ಲೇ ಅಮೃತಲಾಲ ಠಕ್ಕರ್ (ಠಕ್ಕರ್ ಬಾಬ ಎಂದು ಪ್ರಸಿದ್ಧಿ) ಅವರು ಕಾಠಿಯಾವಾಡದ ಒಂದು ಅಂತ್ಯಜರ ಪರಿವಾರವನ್ನು ಗಾಂಧೀಜೀ ಬಳಿಗೆ ಕಳುಹಿಸಿಕೊಟ್ಟರು. ಆಶ್ರಮದ ನಿಯಮಗಳನ್ನು ಮನಃಪೂರ್ವಕವಾಗಿ ಅನುಸರಿಸುತ್ತೇವೆಂದು ಅವರು ಗಾಂಧೀಜಿಗೆ ವಚನವಿತ್ತರು. ದೂದಾಭಾಯಿ ಬೊಂಬಾಯಲ್ಲಿ ಶಿಕ್ಷಕರಾಗಿದ್ದರು, ಹೆಂಡತಿ ದಾನಿ ಬಹನ್ ಮತ್ತು ಕಂಕುಳ ಮಗು ಲಕ್ಷ್ಮಿಯನ್ನು ಕರೆದುಕೊಂಡು ದೂದಾಭಾಯಿ ಕೊಚರವ್ ಆಶ್ರಮದಲ್ಲಿ ವಾಸ ಮಾಡಲು ಬಂದೇಬಿಟ್ಟರು. ಗಾಂಧೀಜಿ ಹಾರ್ದಿಕ ಸ್ವಾಗತ ನೀಡಿದರು. ಸಮಾಜ ಸುಧಾರಣೆಯ ಮೊದಲ ಪ್ರಯೋಗ ಶುರುವಾಯಿತು. ಈ ಅಂತ್ಯಜರು ಬಂದಿದ್ದೇ ಆಶ್ರಮದಲ್ಲಿ ಗಲಾಟೆ ಶುರುವಾಯಿತು. ಗಾಂಧೀಜಿಯ ಪರಮಭಕ್ತ, ಸಂಬಂಧೀಕ ಮಗನ್‌ಲಾಲ್ ಗಾಂಧಿಯ ಹೆಂಡತಿ ಸಂತೋಷ ಬಿಕ್ಕಿ–ಬಿಕ್ಕಿ ಅಳತೊಡಗಿದಳು, ಬಾಯಿಗೆ ಬಂದ ಹಾಗೆ ಬೈದಳು, ಗೋರೀ ಅತ್ತೆ ತನ್ನ ಮಗಳೂನ್ನೂ ಸೊಸೆಯನ್ನೂ ಕರೆದುಕೊಂಡು ಸನಾತನ ಧರ್ಮವನ್ನು ರಕ್ಷಿಸುವುದಕ್ಕಾಗಿ ಆಶ್ರಮ ಬಿಟ್ಟು ರಾಜಕೋಟೆಗೆ ಹೊರಟುಹೋದಳು. ಅಹಮದಾಬಾದಿನ ಜನ ಅಸಹಕಾರ ಮಾಡಿಬಿಟ್ಟರು, ಆರ್ಥಿಕ ಸಹಾಯವನ್ನು ನಿಲ್ಲಿಸಿದರು. ದೂದಾಭಾಯಿ ತಿಳುವಳಿಕಸ್ಥ, ದಾನಿ ಬಹನ್ ಸಾಮಾನ್ಯಳಾದ ಮಹಿಳೆ, ಎಷ್ಟೋ ತೊಂದರೆಗಳು ಬಂದವು. ತನ್ನ ಹೆಂಡತಿ ಅತ್ತಿದ್ದರಿಂದ ವಿಚಲಿತನಾಗಿ ಮಗನಲಾಲ್ ಗಾಂಧಿ ಗಾಂಧೀಜಿಗೆ ಹೇಳಿದ, “ನನಗೆ ಈ ಘಟನೆಯಿಂದ ಬಹಳ ವ್ಯಥೆಯಾಗಿದೆ, ನಾನು ಆಶ್ರಮದಲ್ಲಿ ಇರಲಾರೆ.” ಇಂತಹ ದುಃಖಕರವಾದ ಸ್ಥಿತಿಯಲ್ಲೂ ಗಾಂಧೀಜಿ ಶಾಂತ, ಸ್ವಸ್ಥಚಿತ್ತರಾಗಿ ನಮ್ರತೆಯಿಂದಿದ್ದರು, ಅವರು ಧೃತಿಗೆಡಲಿಲ್ಲ. ತಮ್ಮ ದೃಢ ನಿರ್ಧಾರದಲ್ಲೂ ಯಾವ ಕೊರತೆಯನ್ನೂ ಬರಗೊಡಲಿಲ್ಲ. ಮಗನಲಾಲನನ್ನು ಅವರು ಮದ್ರಾಸ್‌ನಲ್ಲಿ ಅಡ್ಡಾಡಿ ಬರಲು ಕಳುಹಿಸಿದರು. ಆತನ ಹೆಂಡತಿ ಮಕ್ಕಳು ತಮ್ಮ ತಂದೆ ಬಳಿ ರಾಜಕೋಟೆಗೆ ಹೊರಟುಹೋದರು. ಗಾಂಧೀಜಿ ಅವರ ಹೆಂಡತಿ ಕಸ್ತೂರ ಬಾ ಮತ್ತು ಮೂವರು ಮಕ್ಕಳು ಮಾತ್ರ ಅಲ್ಲೇ ಉಳಿದರು. ಆಶ್ರಮದಿಂದ ಹೋಗುವ ಜನರೆಲ್ಲಾ ಹೊರಟು ಹೋದ ಮೇಲೆ ಗಾಂಧೀಜಿಗೆ ಬಹಿಷ್ಕಾರ ಹಾಕುತ್ತೇವೆಂದು ನಗರದಿಂದ ಸುದ್ದಿ ಬಂತು. ಗಾಂಧೀಜಿ ಇಂತಹ ವಿಪತ್ತನ್ನು ಎದುರಿಸಲು ಸಿದ್ಧವಾಗಿದ್ದರು. ‘ಎಷ್ಟೇ ಕಷ್ಟ ಹೆಚ್ಚು ಕಷ್ಟವಾದರೂ ಭಂಗಿ ಮೊಹಲ್ಲಾದಲ್ಲಿ ಬಂದಿರುತ್ತೇವೆ, ಸ್ವಲ್ಪ ಕೂಲಿನಾಲಿಸಿಗುತ್ತೆ, ಅದರಲ್ಲಿ ಹೊಟ್ಟೆ ಹೊರೆಯುತ್ತೇವೆ’ ಎಂದು ಅವರು ಹೇಳಿದರು. ದಿನಗಳೆದಂತೆ ಸ್ಥಿತಿ ಭಯಂಕರವಾಗುತ್ತಿತ್ತು. ಬಾವಿಯ ಮಾಲೀಕ ನೀರು ಕೊಡುವದನ್ನೂ ನಿಲ್ಲಿಸಿಬಿಟ್ಟ. ಕೆಟ್ಟದಾಗಿ ಬೈಗುಳ ಬೈದ, ಗಾಂಧೀಜಿ ಆಶ್ರಮವಾಸಿಗಳಿಗೆ, ಬೈಗುಳ ಕೇಳಿ ‘ಬೈಯಬೇಡಿ, ಶಾಂತಿಯಿಂದ ನಿಮ್ಮ ಕೆಲಸ ಮಾಡಿ’ ಎಂದು ಹೇಳಿದರು. ಬೈಗುಳಿಗೆ ವಿಚಲಿತರಾಗದಿದ್ದುದನ್ನು ಕಂಡ ಬಾವಿ ಮಾಲೀಕ ಸುಮ್ಮನಾನು ಅವರಿಗೆ ನೀರು

ಮಾತ್ರ ತುಂಬಲು ಬಿಡುತ್ತಿರಲಿಲ್ಲ. ನೀರಿನ ಕಣಗಳು ಬಿದ್ದು ಅವನ ಜಾತಿ ಭ್ರಷ್ಟವಾಗುತ್ತಿತ್ತಲ್ಲ! ೧೫ ವರ್ಷದ ದೇವದಾಸ ಬಹಳ ಬುದ್ಧಿವಂತಿಕೆಯಿಂದ ಬಾವಿಯ ಯಜಮಾನನನ್ನು ಒಲಿಸಿಕೊಂಡು ಆಶ್ರಮಕ್ಕೆ ನೀರು ಕೊಡಿಸಿದ. ಈ ತೆರನಾಗಿ ತಾತ್ಕಾಲಿಕವಾಗಿ ವಿಪತ್ತಿನ ನಿವಾರಣೆಯಾಯಿತು.

ಅಸ್ಪೃಶ್ಯತೆ ನಿವಾರಣೆಯ ಆರಂಭ ಹೀಗಾಗಿತ್ತು. ಆಗಿನ್ನೂ ಹರಿಜನ ಅನ್ನುವ ಪದ ಹುಟ್ಟಿರಲಿಲ್ಲ, ಆ ಪ್ರಯೋಗದಿಂದಾಗಿ ಆಶ್ರಮದ ಆರ್ಥಿಕ ಸ್ಥಿತಿ ಹದಗೆಟ್ಟಿತು. ಮುಂದಿನ ವಾರದ ಖರ್ಚಿಗೂ ಹಣ ಇಲ್ಲದ ಪರಿಸ್ಥಿತಿ ಒದಗಿ ಬಂತು. ಯಾರೂ ಇಲ್ಲದ ಕಡೆ ಭಗವಂತ ಸಹಾಯ ಮಾಡೇ ಮಾಡ್ತಾನೆ. ಮಬ್ಬಾಗಿದ್ದ ಒಂದು ನಿರಾಶವಾದ ಸಂಜೆಯದು, ಆಗ ಆಶ್ರಮದ ಬಾಗಿಲಿನಲ್ಲಿ ದೊಡ್ಡ ಮೋಟಾರೊಂದು ಬಂದು ನಿಂತಿತು. ಆ ದುಃಖಪೂರಿತ ಸಂಜೆಯಲ್ಲಿ ಮಕ್ಕಳೆಲ್ಲಾ ಮೋಟಾರನ್ನು ಸುತ್ತುವರಿದು ನಿಂತರು. ಆ ಸೇಠ್ ಗಾಡಿಯಿಂದ ಇಳಿಯಲೇ ಇಲ್ಲ. ಗಾಂಧೀಜಿ ಆ ಸೇಠನನ್ನು ಭೇಟಿಯಾಗಲು ತಾವೇ ರಸ್ತೆ ಬಳಿಗೆ ಬಂದರು. ಎರಡು ನಿಮಿಷಗಳ ಕಾಲ ಮಾತುಕತೆ ನಡೆಯಿತು, "ನಾನು ಸ್ವಲ್ಪ ಹಣ ಕೊಟ್ಟರೆ ನೀವು ಅದನ್ನು ಸ್ವೀಕರಿಸುವಿರಾ?" ಎಂದು ಆತ ಕೇಳಿದ.

"ಖಂಡಿತವಾಗಿ, ನಾವೀಗ ಅತಿ ದೊಡ್ಡ ಪೇಚಿನಲ್ಲಿದ್ದೀವಿ. ಹಣ ಮುಗಿದು ಹೋಗಿದೆ."

ಮಾರನೆಯ ದಿನ ಬರುವೆನೆಂದು ಹೇಳಿ ಸೇಠ್ ಹೊರಟರು. ಮಾರನೆಯ ದಿನ ಹೇಳಿದ ಸಮಯಕ್ಕೆ ಸರಿಯಾಗಿ ದೊಡ್ಡ ಗಾಡಿ ಆಶ್ರಮದ ಬಾಗಿಲಲ್ಲಿ ಬಂದು ನಿಂತಿತು. ಒಂದು ಚೀಲದಲ್ಲಿ ಸ್ವಲ್ಪ ಹಣ ಕೊಟ್ಟು ಸೇಠ್ ಹೊರಟು ಹೋದರು, ಮಾತುಕತೆ, ಅಭಿವಾದನೆ ಏನೂ ಇಲ್ಲ. ಚೀಲದ ಹಣವನ್ನು ಎಣಿಸಿದಾಗ ಅದರಲ್ಲಿ ಹದಿಮೂರು ಸಾವಿರ ರೂಪಾಯಿಗಳಿದ್ದವು. ಆ ದಾನವೀರ ಸಮಾಜ ಸುಧಾರಕರ ಹೆಸರು ಅಂಬಾಭಾಯಿ ಸಾರಾಭಾಯಿ ಸೇಠ್ ಎಂದು. ಪ್ರಖ್ಯಾತ ಕ್ಯಾಲಿಕೋ ಮಿಲ್ ಮಾಲೀಕ ಆತ. ಈ ಘಟನೆಯನಂತರ ಅನೇಕ ಶ್ರೀಮಂತರು ಗಾಂಧೀಜಿಗೆ ಬಿಚ್ಚುಗೈ ಸಹಾಯವನ್ನೆಷ್ಟೋ ನೀಡಿದರು, ಆದರೆ ಶುಭಾರಂಭ ಮಾಡಿದ ಶ್ರೇಯಸ್ಸು ಅಂಬಾಭಾಯಿಯವರಿಗೇ ಸಲ್ಲುತ್ತೆ. ನಂತರವಂತು ಅಂಬಾಲಾಲರ ಅತಿ ಒಳ್ಳೆಯ ಹೆಂಡತಿ ಸರಳಾದೇವಿ ಹಾಗೂ ದೊಡ್ಡ ಮಗಳು ಮೃದುಲಾ, ಸೇಠಜೀಯ ಧೈರ್ಯಸ್ಥಳೂ ಕರ್ತವ್ಯನಿಷ್ಠೆಯಿಂದ ಕೂಡಿದ ಅತಿ ಸುಂದರಳಾದ ತಂಗಿ ಅನಸೂಯಾ ಬಹನ್ ಸಾರಾಭಾಯಿ ಎಲ್ಲರೂ ಗಾಂಧೀಜೀಯ ಸಮಾಜ ಸೇವಾ ಕಾರ್ಯಕ್ಕೆ ಸೇರಿಕೊಂಡರು.

ಅದೇ ವರ್ಷ ೧೯೦೬ರಲ್ಲಿ ಗಾಂಧೀಜಿಯವರನ್ನು ಕಾಠಿಯಾವಾಡದ ಗೊಂಡಲ್ ರಾಜ್ಯ ನಡೆಸುತ್ತಿದ್ದ ರಸಶಾಲಾದ ದೀಕ್ಷಾಂತ ಸಮಾರಂಭಕ್ಕೆ ಆಹ್ವಾನಿಸಿದರು.

ಆ ಶಾಲೆಯ ಪ್ರಧಾನ ಆಚಾರ್ಯರು ಗಾಂಧೀಜಿಯವರನ್ನು ಮೊಟ್ಟ ಮೊದಲ ಬಾರಿ 'ಮಹಾತ್ಮಾ' ಎಂದು ಸಂಬೋಧಿಸಿದರು. ಅದಾದ ನಂತರ ಗುರುದೇವರು ಕೂಡ ಗಾಂಧೀಜಿಯವರನ್ನು 'ಮಹಾತ್ಮಾ' ಅಂತ ಕರೆಯಲು ಶುರು ಮಾಡಿದರು. ಹೀಗೆ ಗಾಂಧೀಜೀಗೆ 'ಮಹಾತ್ಮಾ' ಅನ್ನುವ ಉಪನಾಮ ಚಾಲ್ತಿಗೆ ಬಂತು, ಆಜೀವನ ಆ ಹೆಸರು ಉಳಿದುಕೊಂಡಿತು. ಗಾಂಧೀಜಿಗೆ 'ಮಹಾತ್ಮಾ' ಅಂತ ಕರೆಸಿಕೊಳ್ಳುವ ಇಷ್ಟ ಖಂಡಿತಾ ಇರಲಿಲ್ಲ. ಆ ಶಬ್ದದಲ್ಲಿ ಅಹಂಕಾರ ಮೂಡುವ ಅವಕಾಶ ಪೂರ್ತಿ ಇತ್ತು. ವಂಚನೆಯ ಭಯ ಕೂಡ ಇರುತ್ತದೆ. ಗಾಂಧೀಜಿಗೆ ಅಂತಹ ಆಡಂಬರವನ್ನು ಕಂಡರೆ ಆಗುತ್ತಿರಲಿಲ್ಲ. ಆದರೆ ದೇಶದ ಜನರಿಗೆ ಗಾಂಧೀಜಿಯ ಬಗ್ಗೆ ಅಷ್ಟು ಪ್ರೇಮ ಉಕ್ಕಿ ಬಂದಿತ್ತು, ಸಹಜವಾಗಿ ಮಹಾತ್ಮಾ ಗಾಂಧಿ ಅನ್ನುವ ಶಬ್ದ ಇಡೀ ವಿಶ್ವದಲ್ಲಿ ಹರಡಿಕೊಂಡಿತು. ಕೊನೆಯವರೆಗೂ ಗಾಂಧೀಜಿಗೆ ಮಹಾತ್ಮಾ ಅಂತ ಕರೆಸಿಕೊಳ್ಳುವುದು ಮಾತ್ರ ಇಷ್ಟವಿರಲಿಲ್ಲ. ದೇಶದ ಜನರ ಪ್ರೀತಿಯ ಮುಂದೆ ಅವರು ವಿವಶರಾಗಿದ್ದರು.

* * * *

# ೨. ಸಾಬರಮತಿ ಆಶ್ರಮ

ಈ ಹದಿಮೂರು ಸಾವಿರ ರೂಪಾಯಿಗಳು ಬಂದದ್ದರಿಂದ ಆಶ್ರಮದ ಖರ್ಚಿನ ವ್ಯವಸ್ಥೆಯಾಯಿತು, ದೇವರು ಗಾಂಧೀಜಿಯ ಮರ್ಯಾದೆ ಉಳಿಸಿದ. ನಗರದ ಮಧ್ಯದಲ್ಲಿದ್ದುಕೊಂಡು ಸಮಾಜ ಸುಧಾರಣೆಯ ಪ್ರಯೋಗಗಳನ್ನು ನಗರದ ಜನರ ಮೇಲೆ ಹೊರಿಸುವುದು ತಪ್ಪಾಗುತ್ತದೆ; ಆಶ್ರಮ ನಗರದ ಹೊರಗೇ ಇರಬೇಕು ಅಂತ ಗಾಂಧೀಜಿ ಯೋಚಿಸಿದರು. ಅದಕ್ಕೆ ಸ್ವತಂತ್ರವಾಗಿ ಭೂಮಿ ಇದ್ದರೆ ಮುಂದೆ ಯಾವಾಗಲೂ ಇಂಥ ವಿಪತ್ತು ಒದಗಿಬರುವುದಿಲ್ಲ ಅಂತ ಯೋಚಿಸಿ ಆಶ್ರಮಕ್ಕೆ ಅನುಕೂಲವಾಗುವಂಥ ಜಾಗವನ್ನು ಹುಡುಕತೊಡಗಿದರು. ನಗರದಿಂದ ಸಾಕಷ್ಟು ದೂರದಲ್ಲಿ ಸಾಬರಮತಿ ಮತ್ತು ಚಂದ್ರಭಾಗಾ ನದಿಯ ಸಂಗಮದಲ್ಲಿ ಜಾಲಿಯ ಮುಳ್ಳುಗಿಡಗಳ ಕಾಡಿತ್ತು. ಒಂದು ಗಜ ಭೂಮಿಗೆ ಒಂದಾಣೆಯ ಲೆಕ್ಕದಲ್ಲಿ ಪಡೆದುಕೊಂಡಿದ್ದ ಆ ಭೂಮಿ ಸತ್ಯಾಗ್ರಹಿಗಳಿಗೆ ಯೋಗ್ಯವಾಗಿದೆ ಎಂದು ಗಾಂಧೀಜಿ ಹೇಳಿದ್ದರು. ಸತ್ಯಾಗ್ರಹಿಗಳಿಗೆ ಈ ಜಾಗದಲ್ಲಿ ಹೆಜ್ಜೆ-ಹೆಜ್ಜೆಗೂ ಮುಳ್ಳು ಚುಚ್ಚುತ್ತದೆ, ಜಾಲಿಯ ಮರ ಕಠೋರವಾಗಿರುತ್ತದೆ, ಬಗ್ಗಿಸಲಾಗುವುದಿಲ್ಲ ಆದ್ದರಿಂದ ಭಡಭಡನೆ ಹತ್ತಿ ಉರಿದು ಆರಿಹೋಗುವಂತಹುದಲ್ಲ. ಆದ್ದರಿಂದ ಜಾಲಿಯ ಸೌದೆ ಉರಿಯಲು ಬಹಳ ಶ್ರೇಷ್ಠ. ಆ ರೀತಿಯಲ್ಲೇ ಸತ್ಯಾಗ್ರಹಿ ತೆಳ್ಳಗಿನ ಶರೀರದವನಾಗಿದ್ದು ಕಠೋರವಾಗಿರಬೇಕು, ಜೀವನದ ಅಗ್ನಿಪರೀಕ್ಷೆಯಲ್ಲಿ ಭಸ್ಮವಾಗಿ ಬೇಗ ಮುಗಿದು ಹೋಗುವಂತಿರಬಾರದು. ಸತ್ವಪರೀಕ್ಷೆ ಎಂಬ ಬೆಂಕಿಯಲ್ಲಿ ಕರಗದೆ ಚಿನ್ನದಂತಾಗಬೇಕು ಎಂಬುದು ಗಾಂಧೀಜಿಯವರು ಹೇಳುತ್ತಿದ್ದ ಮಾತು.

ಆರಂಭದಲ್ಲಿ ಡೇರೆ ಹಾಕಿಕೊಂಡು ಇರಬೇಕಾಯಿತು. ಬಿರುಗಾಳಿ ಮಳೆ ಇವುಗಳಿಂದ ಉಳಿಯಲು ಅಡುಗೆಮನೆಯ ಮೇಲೆ ಮಾತ್ರ ಚಪ್ಪರವನ್ನು ಹಾಕಿದರು. ಆ ವೇಳೆಗೆ ಆಶ್ರಮವಾಸಿಗಳ ಸಂಖ್ಯೆ ನಲವತ್ತಕ್ಕೆ ಏರಿತ್ತು. ಜೊತೆಗಾರರ ಸಹಕಾರದಿಂದ ಕಾಡನ್ನು ಸರಿಪಡಿಸಿದರು. ಸಾಬರಮತಿ ನದೀ ದಂಡೆಯಲ್ಲಿ ಸತ್ಯಾಗ್ರಹ ಆಶ್ರಮವನ್ನು ರಚಿಸಲಾಯಿತು. ಆಶ್ರಮ ಅಂದರೆ ಸಾಧು-ಸಂತರು ಇರುವ ಜಾಗ ಅಂತ ಅಲ್ಲ, ಸಾಧು-ಸಂತರು ಪರ್ವತದ ಗುಹೆಗಳಲ್ಲಿ, ಏಕಾಂತ ಕುಟೀರಗಳಲ್ಲೂ ಇರುತ್ತಾರೆ. ಸಂತರ ಜೊತೆ ಸಾಧಕರೂ ಇರತೊಡಗಿದಾಗ ಅದನ್ನು ಆಶ್ರಮ ಅಂತ ಹೇಳ್ತಾರೆ. ಅದರದ್ದೇ ಆದ ನಿಯಮಗಳು, ಉದ್ದೇಶ ಇವೆಲ್ಲಾ ಇರುತ್ತವೆ. ಗಾಂಧೀಜಿಯವರ

ಆಶ್ರಮ ಅಂದರೆ ಅಲ್ಲಿ ಸತ್ಯದ ಪ್ರಯೋಗಗಳಾದವು. ಈ ಆಶ್ರಮಕ್ಕೆ ಬರುವುದಕ್ಕೆ ಮೊದಲು ಪೂಧೇಶ್ವರನ ಶ್ಮಶಾನ ಘಟ್ಟ ಸಿಗುತ್ತೆ. ಪುರಾಣ ಪ್ರಸಿದ್ಧ ದಧೀಚಿಯ ಆಶ್ರಮ ಇಲ್ಲೇ ಇತ್ತು ಅಂತ ಕಟ್ಟು ಕತೆ ಇದೆ. ದೇವರಾಜ ಇಂದ್ರ ರಾಕ್ಷಸರಾಜನನ್ನು ಕೊಲ್ಲುವುದಕ್ಕಾಗಿ ಆಯುಧಗಳನ್ನು ಮಾಡಲು ದಧೀಚಿಯ ಮೂಳೆಗಳನ್ನು ದಾನವಾಗಿ ಕೇಳಿದ್ದನಂತೆ. ಋಷಿ ಇಂದ್ರನ ಪ್ರಾರ್ಥನೆಯನ್ನು ಒಪ್ಪಿ ಊಟ ಬಿಟ್ಟು ದೇಹದಾನ ಮಾಡಿದ್ದ, ಆಗ ಆ ಮೂಳೆಗಳನ್ನ ಉಪಯೋಗಿಸಿಕೊಂಡು ವಜ್ರಾಸ್ತ್ರವನ್ನು ಮಾಡಿ ದೇವರಾಜ ರಾಕ್ಷಸರ ಸಂಹಾರ ಮಾಡಿದನಂತೆ. ಆಶ್ರಮ ದಾಟಿದ ನಂತರ ಅಹಮದಾಬಾದಿನ ಸೆಂಟ್ರಲ್ ಜೈಲು ಇದೆ. ಸತ್ಯಾಗ್ರಹಿ ಜೈಲಿಗೆ ಹೋಗಲೇಬೇಕಾಗುತ್ತದೆ ಅಂತ ಗಾಂಧೀಜಿ ಹೇಳುತ್ತಿದ್ದರು. ಅದರಿಂದಲೇ ಜೈಲು ಹತ್ತಿರ ಇದ್ದಿದ್ದು ಸರಿಯಾಗಿತ್ತು. ದಧೀಚಿಯ ದೇಹೋತ್ಸರ್ಗ ಆಶ್ರಮವಾಸಿಗಳಿಗೆ ಜೀವನದ ಶ್ರೇಷ್ಠ ಆದರ್ಶವಾಗಿತ್ತು.

ಆರಂಭದಲ್ಲಿ ಮನೆಗಳು ಇರಲಿಲ್ಲವಾದ್ದರಿಂದ ಡೇರೆ ಹಾಕಿಕೊಂಡು ಇರಬೇಕೆಂದು ನಿರ್ಣಯಿಸಿದರು. ಒಂದು ತಿಂಗಳ ನಂತರ ಮಳೆಗಾಲ ಬರುವುದರಲ್ಲಿತ್ತು. ಆ ವೇಳೆಗೆ ಅಡುಗೆಮನೆಯನ್ನು ಸರಿಯಾಗಿ ವ್ಯವಸ್ಥಿತಗೊಳಿಸಲೇ ಬೇಕಾಗಿತ್ತು. ಆರಂಭದಲ್ಲಿ ಜಿನ್ಕ್‌ಶೀಟ್‌ಗಳನ್ನು ಹೊದಿಸಿದರು. ಅದರ ಕೆಳಗೆ ಅಡುಗೆ ಮಾಡುತ್ತಿದ್ದರು. ಈ ಕ್ಷೇತ್ರವೆಲ್ಲಾ ಹಳೆಯದಾಗಿ ಪಾಳು ಬಿದ್ದಿತ್ತು. ಅದರಿಂದ ಇಲ್ಲಿ ಬಹಳ ಹಾವುಗಳು ಇರುತ್ತಿದ್ದವು, ಹಾವುಗಳೆಂದರೆ ಎಲ್ಲರಿಗೂ ಭಯ, ಈ ವಿಷಪೂರಿತ ಹಾವುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸಾಯಿಸುತ್ತಿರಲಿಲ್ಲ. ದೇವರ ದಯೆ ಅಂತ ಹೇಳಬೇಕು, ಹಾವು ಕಡಿದು ಯಾರೂ ಸಾಯಲಿಲ್ಲ; ಅಪಾಯ ಅಂತೂ ಇದ್ದೇ ಇರುತ್ತಿತ್ತು. ಸಾಬರಮತಿಯ ದಂಡೆಯಲ್ಲಿ 'ಭಾರಾ' ಅನ್ನುವ ಒಂದು ಕಳ್ಳರ ಜಾತಿ ವಾಸವಾಗಿರುತ್ತಿತ್ತು. ಅವರು ದಿನ ಬೆಳಗಾದರೆ ಬಂದು ಆಶ್ರಮವಾಸಿಗಳ ಪದಾರ್ಥಗಳನ್ನು ಕದ್ದುಕೊಂಡು ಹೋಗುತ್ತಿದ್ದರು. ಒಲೆಗೆ ಹಾಕುವ ಸೌದೆ, ಹೊರಗೆ ಇಟ್ಟ ಒಲೆ ಕೂಡ ಅಲ್ಲಿ ಸುರಕ್ಷಿತವಾಗಿರುತ್ತಿರಲಿಲ್ಲ. ಕಿಟಕಿಯ ಹತ್ತಿರ ಏನಾದರೂ ಇದ್ದರೂ ಈ ಭಾರಾಗಳು ದೊಣ್ಣೆಯಿಂದ ಎಳೆದು ಬಟ್ಟೆ–ದುಪ್ಪಟ ಇವನ್ನೆಲ್ಲಾ ಎಳೆದುಕೊಂಡು ಹೋಗುತ್ತಿದ್ದರು. ದೇವರ ದಯೆಯಿಂದ ಇಂತಹ ಎಲ್ಲಾ ವಿಪತ್ತುಗಳ ನಡುವೆ ಆಶ್ರಮ ಬೆಳೆಯುತ್ತಲೇ ಇತ್ತು.

ಈ ಸಾಬರಮತಿ ಆಶ್ರಮದಲ್ಲಿ ಆ ಏಕಾದಶ ವ್ರತಗಳು ಆರಂಭವಾಗಿ ಅವುಗಳ ಪಾಲನೆಯಾಯಿತು. ಆಶ್ರಮದ ದಿನಚರ್ಯೆ ಬೆಳಗಿನ ಜಾವ ನಾಲ್ಕುಗಂಟೆಗೆ ಘಂಟಾನಾದದಿಂದ ಆರಂಭಗೊಂಡು ರಾತ್ರಿ ಒಂಬತ್ತು ಗಂಟೆಗೆ ಮಲಗುವ ಘಂಟಾನಾದದಿಂದ ಮುಕ್ತಾಯಗೊಳ್ಳುತ್ತಿತ್ತು. ಬೆಳಿಗ್ಗೆ ಉಪನಿಷತ್ತಿನ ಸ್ತುತಿಯ ಪ್ರಾರ್ಥನೆಯಿಂದ ಆರಂಭ, ಒಂದು ಭಜನೆ, ರಾಮಸ್ಮರಣೆ ಮತ್ತು ಏಳು ದಿನಗಳೂ ಗೀತಾಪಾರಾಯಣ ಈ ಕ್ರಮ ಸಂಜೆ ಗೀತಾ ಪಾರಾಯಣದ ಎರಡನೆ ಅಧ್ಯಾಯದ

ಕೊನೆಯ ೧೯ ಶ್ಲೋಕಗಳು ಪ್ರಾರ್ಥನೆ ಇರುತ್ತಿತ್ತು. ಪಂಡಿತ ನಾರಾಯಣ ಬರೆ ಪ್ರಾರ್ಥನೆ ಮಾಡಿಸುತ್ತಿದ್ದರು. ಅವರು ಪಂಡಿತ ವಿಷ್ಣು ದಿಗಂಬರ ಪಲುಸಿಕರ್ ಅವರ ಶಿಷ್ಯರು. ಗಾಂಧೀಜಿ ಶಾಸ್ತ್ರೀಜಿಯವರನ್ನು ಕೇಳಿ ಬರೆ ಅವರನ್ನು ಪಡೆದುಕೊಂಡಿದ್ದರು. ಪಂಡಿತ್ ಜೀ ಅವರೇ ಆಶ್ರಮದ ಭಜನಾವಳಿ ಮತ್ತು ಪ್ರಾರ್ಥನೆಗೆ ಒಂದು ವ್ಯವಸ್ಥಿತವಾದ ರೂಪವನ್ನು ನೀಡಿ ಆಶ್ರಮವಾಸಿಗಳು ರಾಗ ಸಹಿತ ಹಾಡುವಂತೆ ಶಿಕ್ಷಣ ನೀಡಿದ್ದರು. ಸ್ವರವಿಲ್ಲದೆ ಹಾಡಿದರೆ ಗಾಂಧೀಜಿಗೆ ಇಷ್ಟವಾಗುತ್ತಿರಲಿಲ್ಲ. ಬೆಳಿಗ್ಗೆ ಮತ್ತು ಸಂಜೆಯ ಪ್ರಾರ್ಥನೆ ಆಶ್ರಮದ ಆಧ್ಯಾತ್ಮಿಕ ಸ್ರೋತವಾಗಿತ್ತು. ಆದುದರಿಂದ ಅದನ್ನು ಸ್ವರವಿಲ್ಲದೆ, ಅಶುದ್ಧವಾಗಿ ಹಾಡುವುದು ಅಪರಾಧವೆನಿಸುತ್ತಿತ್ತು.

ಆಶ್ರಮದಲ್ಲಿ ನೌಕರರನ್ನು ಇಡುವ ಪದ್ಧತಿ ಇರಲಿಲ್ಲ. ಸ್ವಾವಲಂಬನೆ ಜೀವನದ ಧ್ಯೇಯವಾಗಿತ್ತು. ಅದರಿಂದ ಪಾಯಖಾನೆ ಸ್ವಚ್ಛಗೊಳಿಸಿವುದು ಅಲ್ಲಿಂದ ಅಡುಗೆ ಮಾಡುವುದು ಹೀಗೆ ಎಲ್ಲಾ ಕೆಲಸವನ್ನೂ ಆಶ್ರಮವಾಸಿ ಅಣ್ಣ–ತಂಗಿಯರು ಒಗ್ಗೂಡಿ ಮಾಡುತ್ತಿದ್ದರು, ಗಾಂಧೀಜಿ ಮತ್ತು ಕಸ್ತೂರಬಾ ಇಬ್ಬರೂ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರು. ಸೊಪ್ಪು ತರಕಾರಿ ಕತ್ತರಿಸುವುದು, ಧಾನ್ಯ ಸ್ವಚ್ಛಗೊಳಿಸುವ ಸಮಯದಲ್ಲಿ ಗಾಂಧೀಜಿ ಜೀವನದ ಪ್ರತಿಯೊಂದು ತರಹೆಯ ವಿಷಯವನ್ನು ಕುರಿತು ಆಶ್ರಮವಾಸಿಗಳಿಗೆ ತಮ್ಮ ಅನುಭವದ ಜ್ಞಾನವನ್ನು ನೀಡುತ್ತಿದ್ದರು. ಆಶ್ರಮದಲ್ಲಿ ಬೇರೆ–ಬೇರೆ ಎಷ್ಟೋ ಚಿಕ್ಕ–ಚಿಕ್ಕ ಮನೆಗಳನ್ನು ಕಟ್ಟಿದ್ದರು. ಗಾಂಧೀಜಿ ಮತ್ತು ಕಸ್ತೂರಬಾರ ಮನೆಯನ್ನು ಹೃದಯ ಕುಂಜ್ ಎಂದು ಕರೆಯುತ್ತಿದ್ದರು. ನಿಜವಾಗಿ ಆ ಮನೆ ಆಶ್ರಮದ ಹೃದಯಕೇಂದ್ರವಾಗಿತ್ತು. ಕ್ರಮೇಣ ಆ ಮನೆ ಇಡೀ ದೇಶದ ಹೃದಯಸ್ಥಾನವಾಯಿತು. ಈ ಆಶ್ರಮದಲ್ಲೇ ಮಹಾದೇವ ದೇಸಾಯಿ, ಕಿಶೋರಲಾಲ್ ಮಶ್ರೂವಾಲಾ, ಸರಹರಿ ಪಾರೀಖ್, ಸ್ವಾಮಿ ಆನಂದ, ವಿನೋಬಾ ಬಾಲಕೋವಾ, ಮೀರಾಬಹನ್, ಮೋತೀಲಾಲ್ ನೆಹರೂ, ರಾಜೇಂದ್ರ ಬಾಬು, ಸರದಾರ್ ಪಟೇಲ್, ಆಚಾರ್ಯ ಕೃಪಲಾನಿ, ಕಾಕಾ ಕಾಲೇಳಕರ್ ಮುಂತಾದ ಮಹಾನುಭಾವರು ಬಂದರು ಮತ್ತು ಗಾಂಧೀಜಿಯ ಆಶ್ರಮ ಪರಿವಾರದಲ್ಲಿ ಒಂದಾದರು. ಯಾರ ಹೆಸರನ್ನು ಹೇಳುವುದು ಮರೆಯುವುದು. ಆ ಪಟ್ಟಿಯಲ್ಲಿ ಪ್ರತಿಯೊಬ್ಬರೂ ವಿಶಿಷ್ಟ ಮಹತ್ವದ ವ್ಯಕ್ತಿಗಳೇ, ಇಲ್ಲಿಂದಲೇ ದೇಶದ ಸ್ವಾತಂತ್ರ್ಯಾಂದೋಳನ ಆರಂಭವಾಯಿತು. ಇಲ್ಲಿಂದಲೇ ಗಾಂಧೀಜಿ ಮೊದಲು 'ಯಂಗ್ ಇಂಡಿಯಾ', ನಂತರ 'ಹರಿಜನ' ಎಂಬ ಸಾಪ್ತಾಹಿಕ ಪತ್ರಿಕೆಗಳನ್ನು ಹೊರಡಿಸಿದ್ದರು. ಈ ಸಾಪ್ತಾಹಿಕಗಳು ಗುಜರಾತಿ, ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಒಟ್ಟಿಗೆ ಮುದ್ರಿತವಾಗುತ್ತಿದ್ದವು. ವಿಚಾರ–ಪ್ರಚಾರ ಮತ್ತು ಸಮಾಜ ಸುಧಾರಣೆ ಇವೆರಡಕ್ಕೂ ಇವು ಒಳ್ಳೆಯ ಮಾಧ್ಯಮಗಳಾಗಿದ್ದವು. ಈ ಆಶ್ರಮದಲ್ಲಿದ್ದುಕೊಂಡೇ ಗಾಂಧೀಜಿ ದೇಶವಿಡೀ ಚರಖಾವನ್ನು ಹುಡುಕಿದ್ದರು.

ಪಂಜಾಬೊಂದನ್ನು ಬಿಟ್ಟು ಸುಮಾರು ಸಮಸ್ತ ದೇಶದಲ್ಲಿ ಚರಖಾ ಮರೆಯಾಗಿ ಹೋಗಿತ್ತು. ಕೊನೆಯಲ್ಲಿ ಬಡ್‌ದಾ ರಾಜ್ಯದ ಒಂದು ಚಿಕ್ಕ ಹಳ್ಳಿಯ ಗುಡಿಸಲಿನ ಕಚರಾಡಬ್ಬಿಯಲ್ಲಿ ಚರಖಾ ಸಿಕ್ಕಿತು. ಹಳೆಯದಾಗಿ, ಜರ್ಜರ, ರೂಪಹೀನವಾಗಿದ್ದರೂ ಅದು ಚರಖಾ ಆಗಿತ್ತು. ಅದರಲ್ಲಿ ನೂಲೆಳೆಯುವ ಪ್ರಯೋಗ ನಡೆಯಿತು. ಒಬ್ಬ ನೇಯ್ಗೆಯವನನ್ನು ವಿಶೇಷವಾಗಿ ಕರೆಸಿ ಕೈಯಿಂದ ದಪ್ಪ ಎಳೆಯನ್ನು ನೂಲುವ ತೆಗೆಯುವ ಕೆಲಸ ಇಲ್ಲಿಂದಲೇ ಆರಂಭವಾಯಿತು. ಆರಂಭದಲ್ಲಿ ೨೬ ಇಂಚಿನ ದಪ್ಪನೆ ಗೋಣಿಚೀಲದಂತಹ ಬಟ್ಟೆ ಆಯಿತು. ಆದರೆ ವಸ್ತ್ರ ಸ್ವಾವಲಂಬನೆ ಮತ್ತು ದೇಶದ ಬಡತನವನ್ನೂ ಪರಿಹರಿಸುವ ಒಂದೇ ಮಾರ್ಗವೆಂದರೆ ಚರಖಾ ಮತ್ತು ಕರಘಾ ಮಗ್ಗ ಆಗಿತ್ತು. ಆ ವಸ್ತ್ರಕ್ಕೆ ನಂತರದಲ್ಲಿ ಖಾದಿ ಎಂಬ ಹೆಸರಿಡಲಾಯಿತು. ಬಹುಶಃ ಕರಿಗದ ಕಡ್ಡಿಯಿಂದಾಗಿ ಈ ಹೆಸರಿಟ್ಟಿರಬಹುದು. ಗಾಂಧೀಜೀ ಈ ಖಾದಿಯಲ್ಲಿ ಪಂಚೆ ತಯಾರಿಸಿದರು. ಕಸ್ತೂರಬಾ ೨೬ ಇಂಚಿನ ಎರಡು ಐದು ಗಜದ ತುಂಡುಗಳನ್ನು ಅಡ್ಡಡ್ಡ ಜೋಡಿಸಿ ಸೀರೆ ಉಟ್ಟರು. ಇಂತಹ ಸೀರೆಯನ್ನು ಉಡುವುದು ಮಡಿಸುವುದು ಒಗೆಯುವಲ್ಲಿ ಪ್ರಾಣ ಹೋಗುತ್ತಿತ್ತು. ಆದರೆ ಸ್ವರಾಜ್ಯ ಹತ್ತಿಯ ನೂಲಿನಿಂದ ಸಿಗುತ್ತದೆಂಬ ದೃಢ ನಂಬಿಕೆ ಇತ್ತು, ಆದುದರಿಂದ ಎಲ್ಲರೂ ಖಾದಿಯನ್ನು ತನ್ನದಾಗಿಸಿಕೊಂಡರು, ಖಾದಿ ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯದ ಉಡುಪಾಗಿ ಉಳಿಯಿತು.

ಈ ಆಶ್ರಮಕ್ಕೆ ಹೊಸದಾಗಿ ಬಂದವರೆಲ್ಲರೂ ಮೊದಲು ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ದೊಡ್ಡ–ದೊಡ್ಡ ವಿದ್ವಾಂಸರು, ಓದಿ ಬರೆದವರು ತರಕಾರಿ ಕತ್ತರಿಸುತ್ತಿದ್ದರು, ಚಪಾತಿ ಒತ್ತಿ, ಸುಡುತ್ತಿದ್ದರು. ಪಾತ್ರೆ ತೊಳೆಯುತ್ತಿದ್ದರು. ಶರೀರ ಶ್ರಮದ ಈ ಮಂತ್ರ ಮೊಟ್ಟಮೊದಲು ಇಲ್ಲೇ ಉದ್ಘೋಷಿತವಾದದ್ದು. ಆ ಆಶ್ರಮದ ವಾತಾವರಣ ಕೂಡ ವಿಚಿತ್ರವಾಗಿತ್ತು. ಕಲಿಯುವುದು, ಕಲಿಸುವುದು ಪ್ರಯೋಗ ಮಾಡುವುದು, ಸಾಹಿತ್ಯ–ತತ್ವಶಾಸ್ತ್ರವನ್ನು ಚರ್ಚಿಸುವುದು ಇವೆಲ್ಲ ಶರೀರಶ್ರಮದ ಜೊತೆ–ಜೊತೆಗೇ ನಡೆಯುತ್ತಿದ್ದವು. ಸತ್ಯದ ಹಠ, ಅದರ ಜೊತೆಗೆ ಕಡು ಬಡವನೊಡನೆಯೂ ಗೌರವದ ಭಾವನೆ ತೋರುವುದು ಅತಿ ಅಗತ್ಯವಾಗಿತ್ತು. ಗುಲಾಮಗಿರಿಯ ಸ್ಥಿತಿಯಲ್ಲಿ ಮಾನವನ ಮರ್ಯಾದೆಯನ್ನು ಉಳಿಸಿಕೊಳ್ಳುವುದು ಅಸಂಭವವಾಗುತ್ತದೆ ಅದರಿಂದಾಗಿ ಸ್ವಾತಂತ್ರ್ಯಕ್ಕಾಗಿ ಸಾಯುವುದಕ್ಕೂ ಸಿದ್ಧವಾಗುವುದು ಸತ್ಯದ ಪೂಜಾರಿಕೆಯ ಆದ್ಯ ಕರ್ತವ್ಯವಾಗುತ್ತದೆ. ಆದುದರಿಂದ ೧೯೩೦ರ ಮಾರ್ಚಿ ೧೨ ರಂದು ಗಾಂಧೀಜಿ ಸ್ವರಾಜ್ಯ ಸಿಕ್ಕ ನಂತರವೇ ಹಿಂದಿರುಗುವೆ ಎಂದು ಈ ಪ್ರತಿಜ್ಞೆ ಮಾಡಿ ಈ ಆಶ್ರಮದಿಂದ ಹೊರಟಿದ್ದರು. ಅಲ್ಲಿಯವರೆಗೂ ಎಲ್ಲಾ ತರಹೆಯ ಕಷ್ಟಗಳನ್ನೂ ಸಹಿಸಿಕೊಂಡು ದೇಶವನ್ನು ಸ್ವಾತಂತ್ರ್ಯಗೊಳಿಸುವ ಪ್ರಯತ್ನ ಮಾಡುವೆವೆಂದಿದ್ದರು. ಇತಿಹಾಸದಲ್ಲಿ ಈ ಮಹಾಪ್ರಯಾಣ ಡಾಂಡೀ ಮಾರ್ಚ್

ಎಂದು ಪ್ರಸಿದ್ಧವಾಗಿದೆ. ಆ ಸಾಮಾನ್ಯವಾದ ಉಪ್ಪಿನ ಸತ್ಯಾಗ್ರಹವು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬುಡವನ್ನೇ ಅಲುಗಾಡಿಸಿ ೧೯೪೭ರಲ್ಲಿ ದೇಶ ಸ್ವತಂತ್ರವಾಯಿತು. ಸ್ವಾತಂತ್ರ್ಯ ಸಿಕ್ಕನಂತರ ಗಾಂಧೀಜಿ ಸ್ವರಾಜ್ಯ ಆಶ್ರಮಕ್ಕೆ ಹಿಂದಿರುಗಲು ಅವಕಾಶವೇ ಆಗಲಿಲ್ಲ ಎಂಬುದು ದುಃಖದ ಸಂಗತಿ. ಆರು ತಿಂಗಳು ಕೂಡ ಇನ್ನೂ ಕಳೆದಿರಲಿಲ್ಲ, ದೇವರು ಅವರ ಕಾರ್ಯಕಾಲವನ್ನು ಪೂರೈಸಿ ತನ್ನ ಬಳಿಗೆ ಕರೆಸಿಕೊಂಡು ಬಿಟ್ಟ. ಈ ಸಮಸ್ತ ಕ್ರಾಂತಿಕಾರಿ ಇತಿಹಾಸದ ಉಗಮಸ್ಥಾನ ಸಾಬರಮತಿಯ ಸ್ವರಾಜ್ಯ ಆಶ್ರಮವೇ ಆಗಿತ್ತು.

ಗಿರಮಿಟ್ (ಒಪ್ಪಂದ) ಪದ್ಧತಿಯ ದುಷ್ಪರಿಣಾಮಗಳು ಆಫ್ರಿಕಾದಲ್ಲಿ ಕಣ್ಣೆದುರಿಗೇ ಇದ್ದವು. ಆದರೆ ಭಾರತ ಸರಕಾರ ಈಗಲೂ ಸ್ಟೀಮರ್‌ಗಳಲ್ಲಿ ಕೂಲಿ ಕೆಲಸಗಾರರನ್ನು ಆರು ತಿಂಗಳ ಅಗ್ರೀಮೆಂಟ್ ಮೇಲೆ ಫಿಜಿ, ಮಾರಿಷಸ್, ದಕ್ಷಿಣ ಆಫ್ರಿಕಾ ಮುಂತಾದ ದೇಶಗಳಲ್ಲಿ ಗುಲಾಮಗಿರಿ ಮಾಡಲು ಕಳುಹಿಸುತ್ತಲೇ ಇತ್ತು. ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಇದನ್ನು ವಿರೋಧಿಸುವ ಕಾರ್ಯ ಆರಂಭಿದ್ದರು. ಗೋಖಲೆಯವರು ತೀರಿಕೊಳ್ಳಲು ಮುಂಚೆ ಈ ಗಿರಮಿಟ್ ಪದ್ಧತಿಯನ್ನು ಮುರಿಯಲು ಪ್ರಯತ್ನಿಸಿದ್ದರು. ಉದಾರಹೃದಯಿಗಳಾಗಿದ್ದ ಮಾಳವೀಯರು ೧೯೧೭ರ ಫೆಬ್ರವರಿಯಲಿ ಈ ಪದ್ಧತಿ ಕುರಿತಾದ ವಿಧೇಯಕವನ್ನು ಕೇಂದ್ರೀಯ ವಿಧಾನ ಸಭೆ ಮುಖಾಂತರ ಪಾಸ್ ಮಾಡಿಸಿದರು. ಆದರೆ ವೈಸ್‌ರಾಯ್ ಲಾರ್ಡ್ ಚೆಮ್ಸ್ ಫೋರ್ಡನು ಅದನ್ನು ತಳ್ಳಿ ಹಾಕಿದ. ಆ ಕುರಿತೂ ಗಾಂಧೀಜಿ ವಾಯಿಸ್‌ರಾಯನ್ನು ಭೇಟಿಯಾದರು. ಆಗಲೇ ವೀರಮ್‌ಗಾಮ್‌ನ ಸುಂಕದ ಮಾತುಕತೆಯೂ ನಡೆದಿತ್ತು. ಆದರೆ ಗಿರಿಮಿಟ್ ಪದ್ಧತಿ ಕುರಿತು ವೈಸ್‌ರಾಯ್ ಒಪ್ಪಿಗೆ ನೀಡಿರಲಿಲ್ಲ. ೧೯೧೭ರಲ್ಲಿ ಗಾಂಧೀಜಿ 'ಗಿರ್‌ಮಿಟ್' ಕುರಿತಂತೆ ದೊಡ್ಡ ಯಾತ್ರೆ ಕೈಗೊಂಡರು. ಎಷ್ಟೋ ಕಷ್ಟ ಅಪಮಾನಗಳನ್ನು ಸಹಿಸಿಕೊಂಡು ೩ನೆಯ ಶ್ರೇಣಿಯಲ್ಲಿ ಒಬ್ಬರೇ ಪ್ರಯಾಣ ಮಾಡುತ್ತಿದ್ದರು. ಸಾಧ್ಯವಾದಲ್ಲೆಲ್ಲಾ ರೈಲ್ವೆ ಅಧಿಕಾರಿಗಳೊಂದಿಗೆ ಪತ್ರ–ವ್ಯವಹಾರ ನಡೆಸಿ ೩ನೆಯ ಶ್ರೇಣಿಯ ಯಾತ್ರಿಕರಿಗಾಗಿ ಏನಾದರೂ ಅನುಕೂಲಗಳನ್ನು ಮಂಜೂರು ಮಾಡಿಸುತ್ತಿದ್ದರು. ಆ ಕಾಲದ ರೈಲುಯಾತ್ರೆಯ ಕಷ್ಟಗಳನ್ನು ಇವತ್ತು ಯೋಚಿಸುವುದಕ್ಕೂ ಆಗಲ್ಲ. ಬೊಂಬಾಯಿಯಲ್ಲಿ ಗಿರಮಿಟ್ ವಿರೋಧಿಸಿ ಸರ್ ಜಹಾಂಗೀರ್ ಪಿಟೀಟರು ಒಂದು ಸಾರ್ವಜನಿಕ ಸಭೆಯನ್ನು ಏರ್ಪಾಟು ಮಾಡಿದ್ದರು. ಆ ಸಭೆಯಲ್ಲಿ ಮಂಡಿಸಬೇಕಾಗಿದ್ದ ಠರಾವನ್ನು ಕುರಿತು ಸಾಕಷ್ಟು ಚರ್ಚೆ ನಡೆಯಿತು. ಈ ಠರಾವಿಗೆ ಒಂದು ಖಚಿತವಾದ ಅವಧಿಯನ್ನು ಗೊತ್ತು ಮಾಡಬೇಕೆಂಬುದು ಗಾಂಧೀಜಿಯವರ ಇಚ್ಛೆಯಾಗಿತ್ತು. ಇಲ್ಲವಾದಲ್ಲಿ ಸರಕಾರ ಈ ವಿಷಯವನ್ನು ವರ್ಷಗಟ್ಟಲೆ ಮುಂದಕ್ಕೆಳೆಯುವ ಸಾಧ್ಯತೆ ಇತ್ತು. ಅಲ್ಲಿಯವರೆಗೂ ಬಡಪಾಯಿಗಳಾದ ನಿರಕ್ಷರಸ್ಥ ಜನರನ್ನು ಸುಳ್ಳು ಭರವಸೆಗಳಡಿಯಲ್ಲಿ ಐದು ವರ್ಷಗಳ ಕಾಲ ಗುಲಾಮಗಿರಿಗೆ

ದೂಡಿ, ತೀವ್ರ ಯಾತನೆ ಮತ್ತು ಸಂತಾಪಕ್ಕೆ ದೂಡುತ್ತಾರೆ ಎಂಬುದು ಉದ್ದೇಶವಾಗಿತ್ತು. ಸಾಕಷ್ಟು ಚರ್ಚೆಯ ನಂತರ ಗಾಂಧೀಜಿಯವರ ಮಾತು ಒಪ್ಪಿಕೊಂಡರು ಮತ್ತು ಠರಾವಿನಲ್ಲಿ ಜುಲೈ ೩೧, ೧೯೧೭ಕ್ಕೆ ಮುಂಚೆ ಗಿರಮಿಟ್ ಪದ್ಧತಿಯ ನಿರ್ಮೂಲನೆ ಆಗಬೇಕೆಂದು ಸ್ಪಷ್ಟವಾಗಿ ಕೇಳಲಾಯಿತು. ಈ ಕಾರ್ಯದಲ್ಲಿ ಪಿಟೀಟ್ ಪರಿವಾರದ ವೃದ್ಧ ಮಹಿಳೆ ಲೇಡಿ ಪಿಟೀಟ್ ಅವರು ಗಾಂಧೀಜಿಗೆ ಸಹಾಯ ಮಾಡಿದರು. ಆಕೆಯ ಮುಂದಾಳತ್ವದಲ್ಲಿ ಮಹಿಳೆಯರ ಒಂದು ಡೆಪ್ಯೂಟೇಷನ್ ವಾಯಿಸ್‌ರಾಯನ್ನು ಭೇಟಿ ಮಾಡಿತು. ಲೇಡಿ ಜಮಶೆಡ್‌ಜೀ ಟಾಟಾ ಮತ್ತು ದಿಲಾಶಾದ್ ಬೇಗಂರಂತಹ ಸಂಪನ್ನ ಗೃಹಸ್ಥ ಪ್ರಸಿದ್ಧ ಮಹಿಳೆಯರು ಇದರಲ್ಲಿ ಭಾಗವಹಿಸಿದರು. ವಾಯಿಸ್‌ರಾಯ್ ಇದರಿಂದ ಪ್ರಭಾವಿತರಾದರು.

ಬೊಂಬಾಯಿಯಿಂದ ಆರಂಭಗೊಂಡ ಈ ಯಾತ್ರೆಯಲ್ಲಿ ಗಾಂಧೀಜಿ ದೇಶದ ಎಲ್ಲಾ ಪ್ರಮುಖ ನಗರಗಳಿಗೂ ಹೋದರು. ಅಲ್ಲಿ ಗಿರಮಿಟ್ ಪದ್ಧತಿಯ ವಿರುದ್ಧ ಜನಜಾಗೃತಿಗೊಳಿಸಿದರು. ಈ ಜಾಗಗಳೆಲ್ಲಾ ಸರಕಾರದ ಬೇಹುಗಾರ ಪೋಲಿಸ್ ಅವರ ಜೊತೆ ಇರುತ್ತಿತ್ತು. ಗಾಂಧೀಜಿ ಅವರುಗಳನ್ನು ಚೆನ್ನಾಗಿ ಗುರುತು ಹಿಡಿಯುತ್ತಿದ್ದರು. ಹಾಗಿದ್ದೂ ಗಾಂಧೀಜಿಗೆ ಈ ಬಗ್ಗೆ ಯಾವ ವಿರೋಧವು ಇರಲಿಲ್ಲ. ಸತ್ಯಾಗ್ರಹಿ ಯಾವುದನ್ನೂ ಮುಚ್ಚು ಮರೆ ಮಾಡಿ ಹೇಳುವುದಿಲ್ಲ. ಅವರು ಎಲ್ಲರಿಗೂ ಕಾಣುವಂತೆ ಆಯೋಜಿಸುತ್ತಾರಾದುದರಿಂದ ಪೋಲಿಸಿಗೆ ಹೆದರುವ ಪ್ರಶ್ನೆ ಏಳುತ್ತಿರಲಿಲ್ಲ. ಆ ದಿನಗಳಲ್ಲಿ ಗಾಂಧೀಜಿ ಒಬ್ಬಂಟಿಯಾಗಿ ೩ನೇ ದರ್ಜೆಯ ಬೋಗಿಗಳಲ್ಲಿ ಯಾತ್ರೆ ಮಾಡುತ್ತಿದ್ದಾಗ ಅವರ ಸಹಯಾತ್ರಿಕರು ಈ ಬೇಹುಗಾರ ಪೋಲಿಸರ ಪ್ರವೇಶವನ್ನು ಕಂಡು ಸಿಡಿಮಿಡಿಗೊಳ್ಳುತ್ತಿದ್ದರು. ಗಾಂಧೀಜಿ ಯಾರೆಂದೂ ಅವರು ಯಾರಿಗೂ ಗೊತ್ತಿರುತ್ತಿರಲಿಲ್ಲವಾದರೂ ಒಬ್ಬ ಸಜ್ಜನ ಸಾಧುವಿಗೆ ಯಾರಾದರೂ ತೊಂದರೆ ಕೊಡುವುದು ಅವರಿಗೆ ಸಹಿಸುತ್ತಿರಲಿಲ್ಲ. ಅವರು ಪೋಲಿಸರ ಜೊತೆ ಜಗಳ ಕಾಯುತ್ತಿದ್ದರು. ಒಮ್ಮೆ ಕರಾಚಿಯಿಂದ ಕಲ್ಕತ್ತಾಗೆ ಹೋಗುತ್ತಿದ್ದಾಗ ಗಾಂಧೀಜಿಗೆ ಟ್ರೈನ್‌ನಲ್ಲಿ ಎಲ್ಲೂ ಜಾಗ ಸಿಗಲಿಲ್ಲ. ಸುಮಾರು ೨೪ ಗಂಟೆಗಳ ಕಾಲ ನಿದ್ದೆ ಇಲ್ಲದೆ, ಊಟ–ನೀರಿಲ್ಲದೆ ನಿಂತೇ ಯಾತ್ರೆ ಮಾಡಿದರು. ಅಲ್ಲಿ ಮಹಾರಾಜಾ ಕಾಸಿಮ್ ಬಾಜಾರ್‌ನ ಅಧ್ಯಕ್ಷತೆಯಲ್ಲಿ ಗಿರ್‌ಮಿಟ್ ವಿರುದ್ಧ ಒಂದು ಆಂದೋಳನ ನಡೆಯಿತು. ಗಾಂಧೀಜಿ ಮಹಾರಾಜರ ಅತಿಥಿಯಾಗಿದ್ದರು. ಅವರ ಅರಮನೆಯಲ್ಲೇ ಅವರ ವಸತಿ ಕೂಡ ಇತ್ತು. ಈ ರೀತಿ ಗಾಂಧೀಜಿ ತೃತೀಯ ಶ್ರೇಣಿಯಲ್ಲಾಗುವ ಕಷ್ಟಗಳ ಬಗೆಗೆ ಚಿಂತಿಸಿದವರಲ್ಲ, ಅದೇ ರೀತಿ ಮಹಾರಾಜರ ಅರಮನೆಯ ಸುಖವನ್ನು ಕುರಿತು ನಿರಾಸಕ್ತರಾಗಿದ್ದವರು. ನೂರಾರು ವರ್ಷಗಳಿಂದ ದಿಕ್ಕಿಲ್ಲದೆ ಅಲೆದ ಜನರಿಗೆಲ್ಲ ಆ ಸಾರ್ವಜನಿಕ ಸಭೆಗಳಲ್ಲಿ ಉತ್ಸಾಹ ಮೂಡುತ್ತಿತ್ತು. ಎಷ್ಟೋ ಮಂದಿ ಆಂಗ್ಲರೂ ಈ ಸಭೆಗಳಲ್ಲಿ ಹಾಜರಿರುತ್ತಿದ್ದರು.

ದೇಶದಲ್ಲಿ ಎಲ್ಲೆಲ್ಲೂ ಗಿರ್‌ಮಿಟ್ ಪದ್ಧತಿಯ ವಿರೋಧ ಪ್ರಕಟವಾದಾಗ, ಆ ಕಾಲದ ದಿನಪತ್ರಿಕೆಗಳಲ್ಲಿ ಈ ಚರ್ಚೆ ಮುಖ್ಯವಾಯಿತು. ಆಗ ೧೮೪೦ ರಿಂದ ನಡೆದುಬಂದಿದ್ದ ಈ ಕೆಟ್ಟ ಪದ್ಧತಿಯನ್ನು ೧೯೧೭ರ ಜುಲೈನಲ್ಲಿ ವಾಯಿಸ್‌ರಾಯನು ಕೊನೆಗೊಳಿಸಿದ. ೧೮೯೪ರಲ್ಲಿ ಮೊದಲ ಬಾರಿಗೆ ಗಾಂಧೀಜಿ ದಕ್ಷಿಣ ಆಫ್ರಿಕೆಯಲ್ಲಿ ಈ ಅಮಾನುಷ ಪದ್ಧತಿಯನ್ನು ವಿರೋಧಿಸಿದ್ದರು. ೨೩ ವರ್ಷಗಳ ಕಾಲ ನಿರಂತರ ಪ್ರಯತ್ನಿಸಿದ ಮೇಲೆ ಈ ಕಳಂಕದ ಪದ್ಧತಿ ಕೊನೆಗೊಂಡಿತು. ಭಾರತದಲ್ಲಿ ದೃಢ ಸತ್ಯಾಗ್ರಹದ ಮೊದಲ ಫಲ ಇದಾಗಿತ್ತು. ವೀರಮ್ ಗಾಮ್‌ನ ಸತ್ಯಾಗ್ರಹ ಸಮ್ಮೇಳನ ಮತ್ತು ಶಿಷ್ಟ ಮಂಡಳದ ಅಹಿಂಸಾಪೂರ್ಣ ಚರ್ಚೆ ಮತ್ತು ಸತ್ಯದ ಶಾಂತ ಒತ್ತಾಯವಾಗಿತ್ತು.

* * * *

# ೩. ಚಂಪಾರಣ್ಯ

೧೯೧೬ರಲ್ಲಿ ಲಕ್ನೋದಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಿತ್ತು. ಗಾಂಧೀಜಿ ಕೂಡ ಅದರಲ್ಲಿ ಭಾಗವಹಿಸಿದರು. ಅಲ್ಲಿ ರಾಜಕುಮಾರ ಶುಕ್ಲಾ ಎಂಬೊಬ್ಬ ಯುವಕ ಅವರ ಬಳಿಗೆ ಬಂದು ಬಿಹಾರದಲ್ಲಿ ನಡೆಯುತ್ತಿದ್ದ ಭಯಂಕರ ಅತ್ಯಾಚಾರಗಳ ವಿವರ ನೀಡಿದ. ಇಡೀ ಪ್ರಪಂಚದಲ್ಲೇ ನೀಲಿಯ ವ್ಯವಸಾಯ ಬಿಹಾರದಲ್ಲಿ ಮಾತ್ರ ನಡೆಯುತ್ತಿತ್ತು. ತಿರಹುತ್ ಡಿವಿಝನ್‌ನಲ್ಲಿ ಎಲ್ಲ ಕಡೆಗಿಂತ ಹೆಚ್ಚಾಗಿ ನೀಲಿ ಉತ್ಪನ್ನವಾಗುತ್ತಿತ್ತು. ಈ ನೀಲಿ ದೇಶ–ವಿದೇಶಗಳಲ್ಲಿ ಅತಿ ಹೆಚ್ಚು ಬೆಲೆಗೆ ಮಾರಾಟವಾಗುತ್ತಿತ್ತು. ಅದರ ವರ್ತಕರು ಮನೆಯಲ್ಲಿ ಕುಳಿತೇ ಭಾರಿ ಹಣ ಗಳಿಸುತ್ತಿದ್ದರು. ಈ ರೀತಿ ಧನವಂತರಾಗುವ ಎಲ್ಲಾ ಸರಳ ಕ್ರಮಗಳನ್ನೂ ಬಿಳಿಯ ಜಮೀನುದಾರರು ಬಾಚಿಕೊಂಡಿದ್ದರು. ಪ್ರತಿಯೊಬ್ಬ ಬಿಳಿಯನ ಬಳಿಯೂ ಸಾವಿರಾರು ಎಕರೆ ಭೂಮಿ ಇರುತ್ತಿತ್ತು. ಬಡ ರೈತರು ವಿವಶರಾಗಿ ನೀಲಿಯ ವ್ಯವಸಾಯ ಮಾಡಬೇಕಾಗುತ್ತಿತ್ತು. ಅವರ ಮೇಲೆ ಬಿಳಿಯರ ಏಕಾಧಿಪತ್ಯವಿತ್ತು. ರೈತರು ಮೈ ಮುರಿದು ಕೆಲಸ ಮಾಡಿದರೆ ಅವರ ಸಂಪಾದನೆ ಅವರ ಬಿಳಿ ಮಾಲೀಕರ ಸಂಪತ್ತಾಗುತ್ತಿತ್ತು. ಈ ರೈತರ ಮೇಲೆ ಬಿಳಿಯ ಜಮೀಂದಾರರು ಗುಲಾಮರ ಹಾಗೆ ತಮ್ಮ ಅಧಿಕಾರ ನಡೆಸುತ್ತಿದ್ದರು, ಭಯಂಕರವಾಗಿ ಹಿಂಸಿಸುತ್ತಿದ್ದರು. ದೇಶ ಪೂರ್ತಿಯಾಗಿ ಬಿಳಿಯರ ವಶದಲ್ಲಿತ್ತು. ಹೊರಗಿನವರ ಸರಕಾರದ ಕಿವಿಗೆ ಈ ದೀನ–ದಲಿತರ ಕೂಗು ತಲಪುತ್ತಲೇ ಇರಲಿಲ್ಲ. ರಾಜಕುಮಾರ ಶುಕ್ಲರು ವಿವೇಕಿಯಾಗಿರಲಿಲ್ಲ. ಆತನಿಗೆ ಹೆಚ್ಚು ತಿಳಿವಳಿಕೆ ಇರಲಿಲ್ಲ. ಆತನ ಪರಿಚಯ ಕೂಡ ಯಾರಿಗೂ ಇರಲಿಲ್ಲ, ಆತ ಆಫ್ರಿಕಾ ಸತ್ಯಾಗ್ರಹ ಕುರಿತು ಸ್ವಲ್ಪ ಕೇಳಿ ತಿಳಿದುಕೊಂಡಿದ್ದ. ಅಪರಿಚಿತರಿಂದ ಕೇಳಿ ತಿಳಿದುಕೊಂಡಿದ್ದುದರಿಂದ ಗಾಂಧೀಜಿ ಇದರಲ್ಲಿ ಸಹಾಯ ಮಾಡಬಹುದೇನೋ ಅಂತ ಆಸೆ ಇಟ್ಟುಕೊಂಡಿದ್ದ. ತಿಳಿವಳಿಕೆ ಇಲ್ಲದಿದ್ದರೂ ಶ್ರದ್ಧೆ–ತಲ್ಲೀನತೆ ಇತ್ತು, ಆರು ತಿಂಗಳ ಕಾಲ ಈ ಹಳ್ಳಿ ಮನುಷ್ಯ ಗಾಂಧೀಜಿ ಹಿಂದೆ–ಹಿಂದೆ ಕಾನಪುರ, ಅಹಮದಾಬಾದ್, ಕಲ್ಕತ್ತಾ ಹೀಗೆ ಸುತ್ತುತ್ತಾ ಇದ್ದ. ಗಾಂಧೀಜಿಯನ್ನು ಹಿಂಬಾಲಿಸುವುದನ್ನು ಬಿಡಲೇ ಇಲ್ಲ. ಕೊನೆಗೆ ೧೯೧೭ರಲ್ಲಿ ಶುರುವಿನಲ್ಲಿ ರಾಜಕುಮಾರ ಶುಕ್ಲರು ಗಾಂಧೀಜಿಯನ್ನು ಕಲ್ಕತ್ತಾದಿಂದ ಪಟ್ನಾಗೆ ಕರೆದುಕೊಂಡು ಹೋಗುವಲ್ಲಿ ಸಫಲರಾದರು.

ಗಾಂಧೀಜಿಗೆ ಪಟ್ನಾ ಪರಿಚಯವೇ ಇರಲಿಲ್ಲ, ರಾಜಕುಮಾರ್ ಶುಕ್ಲರಿಗೆ

ಕೆಲವರ ಪರಿಚಯವಾದರೂ ಖಂಡಿತ ಇರುತ್ತದೆ ಎಂದು ಅವರು ತಿಳಿದಿದ್ದರು. ರಾಜಕುಮಾರ ಶುಕ್ಲರು ಪಟ್ನಾದಲ್ಲಿ ಅವರನ್ನು ರಾಜೇಂದ್ರಬಾಬು ಅವರ ಮನೆಗೆ ಕರೆದೊಯ್ದು. ರಾಜೇಂದ್ರಬಾಬು ಯಾವುದೋ ಖಟ್ಲೆಯ ಸಂದರ್ಭದಲ್ಲಿ ಜಗನ್ನಾಥಪುರಿಗೆ ಹೋಗಿದ್ದರು. ನೌಕರರು ಕೂಲಿಕಾರರಂತಿದ್ದ ಈ ಇಬ್ಬರು ರೈತರನ್ನು ಮನೆಯೊಳಕ್ಕೆ ಬಿಡಲೇ ಇಲ್ಲ. ಹೊರಗೆ ವರಾಂಡದಲ್ಲೇ ತಡೆಹಿಡಿದರು, ಹೊರಗಣ ಪ್ರಸಾಧನವನ್ನು ಸಹಿತ ಬಹಳ ಕಷ್ಟದಲ್ಲಿ ಉಪಯೋಗಿಸಬಿಟ್ಟರು. ಬಾವಿಯಿಂದ ಹೊರಗೆ ಸ್ನಾನ ಮಾಡಿದರೂ ರಾಜೇಂದ್ರ ಬಾಬು ಅವರ ನೌಕರರು ಕೋಪ ಮಾಡಿಕೊಂಡು ನೀರಿನ ಕಣಗಳು ಹಾರಿದರೆ ತಮ್ಮ ಧರ್ಮ ಕೆಟ್ಟು ಹೋಗುತ್ತೆ ಅಂತ ಅನ್ನುತ್ತಿದ್ದರು. ಈ ಘಟನೆಗಳನ್ನೆಲ್ಲಾ ನೋಡಿ ರಾಜಕುಮಾರ ಶುಕ್ಲಾರಿಗೆ ಯಾರ ಪರಿಚಯವೂ ಇಲ್ಲ, ಅವನದು ಇಲ್ಲೇನೂ ನಡೆಯುವುದಿಲ್ಲ ಅಂತ ಗಾಂಧೀಜಿಗೆ ಅರ್ಥವಾಯಿತು. ಆದರೆ ನೀಲಿಯವರ ದೌರ್ಜನ್ಯ ಕೂಡ ಅಸಹ್ಯಕರವಾಗಿತ್ತು ಅನ್ನುವುದರಲ್ಲಿ ಯಾವ ಸಂಶಯ ಕೂಡ ಇರಲಿಲ್ಲ. ಅಂತಹ ಅನ್ಯಾಯವನ್ನು ಪರೀಕ್ಷಿಸಿ ನೋಡುವಲ್ಲಿ ಸತ್ಯಾಗ್ರಹಿ ಹಿಂದೇಟು ಹಾಕುವುದಿಲ್ಲ. ಈ ಕಾರಣ ಗಾಂಧೀಜಿ ಎಲ್ಲಾ ಕಷ್ಟ–ಅನಾದರವನ್ನು ಸಹಿಸಿಕೊಂಡರು, ದೌರ್ಜನ್ಯವನ್ನು ಕುರಿತ ಮಾಹಿತಿಯನ್ನು ಎಲ್ಲಿಂದ ಸಂಗ್ರಹಿಸಬೇಕು ಅನ್ನುವುದು ಕೂಡ ರಾಜಕುಮಾರ್ ಶುಕ್ಲಾಗೆ ಗೊತ್ತಿರಲಿಲ್ಲ. ಗಾಂಧೀಜಿಗೆ ಹೇಗೆ ವಿವರಿಸಿ ತಿಳಿಸುವುದು ಅಂತ ಅವರಿಗೆ ಗೊತ್ತಿರಲಿಲ್ಲ. ಗಾಂಧೀಜಿ ಆಗ ವಿಷಯವನ್ನು ತಮ್ಮ ಕೈಗೆ ತೆಗೆದುಕೊಂಡರು. ಅವರು ಲಂಡನ್‌ನ ತಮ್ಮ ಮಿತ್ರ ಮೌಲಾನಾ ಮಝುರೂಲ್‌ಗೆ ಒಂದು ಚಿಕ್ಕ ಪತ್ರ ಬರೆದರು. ಪತ್ರ ಸಿಕ್ಕೊಡನೆ ಮೌಲಾನಾ ಮೋಟರ್‌ಗಾಡಿಯಲ್ಲಿ ಧಾವಿಸಿ ಬಂದರು. ಗಾಂಧೀಜಿಯವರ ಹೆಸರು ಕೆಲಸ ಇವುಗಳ ಪರಿಚಯ ಅವರಿಗೆ ಚೆನ್ನಾಗಿತ್ತು. ಗಾಂಧೀಜಿ ನೇರವಾಗಿ ಅವರ ಮನೆಗೇ ಬಂದಿರಲಿ ಅಂತ ಆತ ಇಷ್ಟ ಪಟ್ಟರಾದರೂ ಗಾಂಧೀಜಿಗೆ ಬೇಕಾಗಿದ್ದುದು ಅವರ ಮಾರ್ಗದರ್ಶನ ಮಾತ್ರ. ಆ ದಿನ ಸಂಜೆ ಟ್ರೈನಲ್ಲಿ ಮುಝಫರ್ ಪುರಕ್ಕೆ ಹೋಗುವ ನಿರ್ಣಯ ತೆಗೆದುಕೊಂಡರು. ಅಲ್ಲಿಂದಲೇ ಮುಂದೆ ಚಂಪಾರಣ್ಯಕ್ಕೆ ಹೋಗಲು ಸಾಧ್ಯವಿತ್ತು. ಆಗ ಮುಝಫರ್‌ಪುರದಲ್ಲಿ ಜೋಯಿತರಾಂ ಭಗವಾನದಾಸ ಕೃಪಲಾನಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಅವರು ಕಾಕಾ ಕಾಲೇಲ್‌ಕರ್ ಹಾಗೂ ಸ್ವಾಮಿ ಆನಂದರ ಮಿತ್ರರು, ಗಾಂಧೀಜಿ ಜೊತೆ ಒಂದೆರಡು ಸಾರಿ ಭೇಟಿಯಾಗಿದ್ದರು. ಗಾಂಧೀಜಿ ತಾನು ಬರುತ್ತಿದ್ದೇನೆಂದು ಅವರಿಗೆ ತಂತಿ ಕಳುಹಿಸಿದರು, ಆಚಾರ್ಯ ಕೃಪಲಾನಿ ವಿಶಿಷ್ಟ ಸ್ವಭಾವದ ಇಂಗ್ಲಿಷ್ ಅಧ್ಯಾಪಕರಾಗಿದ್ದರು. ಅವರು ತಮ್ಮ ಸಂಬಳವನ್ನೆಲ್ಲಾ ವಿದ್ಯಾರ್ಥಿಗಳಿಗೆ ಹಂಚಿಬಿಡುತ್ತಿದ್ದರು, ಅವರಿಗೆ ತಮ್ಮದು ಅನ್ನುವ ಮನೆಯೇ ಇರಲಿಲ್ಲ. ದಿನವಿಡೀ ಕಾಲೇಜು, ನಂತರ ವಿದ್ಯಾರ್ಥಿಗಳ ನಡುವೆ ಸಮಯ

ಕಳೆಯುತ್ತಿದ್ದರು. ರಾತ್ರಿ ಎಲ್ಲಾದರೆ ಅಲ್ಲೇ ಮಲಗಿಬಿಡುತ್ತಿದ್ದರು.

ಗಿಜಿ–ಗಿಜಿ ತುಂಬಿದ್ದ ಟ್ರೈನ್ ಯಾತ್ರೆ ಮುಗಿಸಿ, ಅರ್ಧ ರಾತ್ರಿಯಾದ ಮೇಲೆ ಗಾಂಧೀಜಿ ಮುಝಫರ್‌ಪುರ ತಲಪಿದರು. ಇಷ್ಟು ಹೊತ್ತಿನಲ್ಲೂ ಪ್ರೊಫೆಸರ್ ಕೃಪಲಾನಿ ತನ್ನ ವಿದ್ಯಾರ್ಥಿ ಸಮುದಾಯದ ಜೊತೆ ಸ್ಟೇಷನ್‌ನಲ್ಲಿ ಕಾದಿದ್ದರು. ಸ್ಟೇಷನ್‌ನಲ್ಲಿ 'ಗಾಂಧೀಜಿ ಝಿಂದಾಬಾದ್' ಘೋಷಣೆಯ ಗುಂಜಾರವ ಮೂಡಿತು. ಕೃಪಲಾನಿ ಮನೆ–ಮಠ ಇಲ್ಲದ ಪ್ರಾಧ್ಯಾಪಕರು, ಯಾವಾಗಲೂ ವಿದ್ಯಾರ್ಥಿಗಳ ನಡುವೆ ಮುಳುಗಿರುತ್ತಿದ್ದರು. ಅದರಿಂದ ರಾತ್ರಿ ತಂಗಲು ಪ್ರೊಫೆಸರ ಮಲ್ಕಾನಿಯವರ ಮನೆಗೆ ಕರೆದುಕೊಂಡು ಹೋದರು. ಕೃಪಲಾನಿಯವರು ಗಾಂಧೀಜೀಗೆ ಬಿಹಾರ್‌ನ ದಯನೀಯ ಸ್ಥಿತಿ ಹಾಗೂ ಚಂಪಾರಣ್ಯದ ವಿಕೃತ ಸ್ಥಿತಿಯನ್ನು ಕುರಿತು ಪರಿಚಯ ನೀಡಿದರು. ಮೂರನೆಯ ದಿನ ಗಯಾಬಾಬು ಗಾಂಧೀಜಿಯನ್ನು ತಮ್ಮ ಮನೆಗೆ ಕರೆದೊಯ್ದರು. ಗಯಾಬಾಬು ಅವರು ಜಯಪ್ರಕಾಶ ನಾರಾಯಣ ಅವರನ್ನು, ಮಾವ ಬ್ರಜಕಿಶೋರ್ ಬಾಬು ಅವರನ್ನು ದರಭಂಗಾದಿಂದ ಮತ್ತು ವಕೀಲ ರಾಜೇಂದ್ರ ಬಾಬು ಅವರನ್ನು ಪುರಿಯಿಂದ ತಂತಿ ಕಳುಹಿಸಿ ಕರೆಸಿದರು. ಇವರಿಬ್ಬರು ಮುಖಂಡರು ಬಂದ ನಂತರ ಚಂಪಾರಣ್‌ನ ಸಮಸ್ಯೆಯನ್ನು ಕುರಿತಂತೆ ಸಾಕಷ್ಟು ಚರ್ಚಿಸಿದರು. ಅಲ್ಲಿನ ಈ ನೇತಾರರ ವಿನಮ್ರತೆ, ಸರಳತೆ, ಒಳ್ಳೆಯತನ ಮತ್ತು ಅಸಾಧಾರಣವಾದ ಶ್ರದ್ಧೆಯನ್ನು ನೋಡಿ ಗಾಂಧೀಜಿ ಗದ್ಗದಿತರಾದರು. ಈ ಮಿತ್ರರ ಜೊತೆ ಅವರಿಗೆ ಜನ್ಮ–ಜನ್ಮದ ಸಂಬಂಧ ಕೂಡಿಕೊಂಡಿತು. ಇಂದು ನಮ್ಮ ಮೂರನೆಯ ಪೀಳಿಗೆಯವರೆಗೂ ಆ ಸಂಬಂಧ ಹಾಗೆ ಗಟ್ಟಿಯಾಗಿದೆ. ಸಾಯುವವರೆವಿಗೂ ರಾಜೇಂದ್ರ ಬಾಬು ಮತ್ತು ಅವರ ಪತ್ನಿ ರಾಜವಂಶೀ ದೇವಿ ನನ್ನ ತಂದೆ–ತಾಯಿ ಮತ್ತು ಚಿಕ್ಕಪ್ಪ–ಚಿಕ್ಕಮ್ಮ ಇವರನ್ನು ತನ್ನ ಮಗ–ಸೊಸೆಯ ಹಾಗೆ ನೋಡಿಕೊಂಡರು, ನನಗೆ ಹಾಗೂ ನನ್ನ ಪತಿ ಗಜಾನನರಿಗೆ ಮಗ–ಸೊಸೆಯ ಹಾಗೆ ಪ್ರೀತಿ–ಆಶೀರ್ವಾದಗಳನ್ನು ನೀಡಿದರು. ರಾಜೇಂದ್ರಬಾಬು ಅವರ ಮಗ ಮೃತ್ಯುಂಜಯ ಬಾಬು ನಮ್ಮ ತಾಯಿಗೆ ಹಿಂದಿ ಕಲಿಸಿದರು. ರಾಮಾಯಣವನ್ನು ಶಬ್ದ–ಅರ್ಥದೊಂದಿಗೆ ಹೇಳಿಕೊಟ್ಟರು. ಇಂದಿಗೂ ಅವರ ಜೊತೆ ಚಿಕ್ಕಪ್ಪನ ತರಹ ಸಂಬಂಧವಿದೆ. ಬ್ರಹಕಿಶೋರ ಬಾಬು ಅವರ ಒಬ್ಬಳೇ ಮಗಳು ಪ್ರಭಾದೇವಿ ಅಳಿಯ ಜಯಪ್ರಕಾಶ ನಾರಾಯಣ ಇಬ್ಬರೂ ನಮ್ಮ ತಂದೆಗೆ ಯಾವಾಗಲೂ ರಕ್ಷಾಬಂಧನ, ಸೋದರ ಬಿದಿಗೆ (ಭೈಯಾದೂಜ್), ದೀಪಾವಳಿಗಳಲ್ಲಿ ತಪ್ಪದೆ ಪತ್ರ ಬರೆಯುತ್ತಿದ್ದರು. ನಮಗೆ ಅವರಿಬ್ಬರೂ ಸೋದರತ್ತೆ ಮತ್ತು ಚಿಕ್ಕಪ್ಪ ಆಗಿದ್ದರು. ಬಿಹಾರದ ಈ ಎಲ್ಲಾ ವಕೀಲರು ವಿನಯಶೀಲರಾಗಿದ್ದರೂ ಕೇಶ್‌ನಹರಾ ವಸೂಲಿ ಮಾಡುವಲ್ಲಿ ಚಟುವಿಕೆಯಿಂದಿರುತ್ತಿದ್ದರು. ಕಡುಬಡವರ ಹತ್ತಿರವೂ ಪೂರ್ತಿ ಫೀಸ್ ವಸೂಲಿ ಮಾಡುತ್ತಿದ್ದರು. ಹಾಗಿಲ್ಲದಿದ್ದರೆ ಅವರ ವ್ಯವಸಾಯದ ಖರ್ಚು, ಮಾನ–

ಮರ್ಯಾದೆಗಳನ್ನು ನಿಭಾಯಿಸುವುದು ಕಷ್ಟವಾಗುತ್ತಿತ್ತು. ಬಿಹಾರ್‌ದಲ್ಲಿ ವಸೂಲಾಗುವ ಫೀಸ್‌ನ ಹಣದ ಮೊತ್ತದ ಬಗ್ಗೆ ಕೇಳಿ ಗಾಂಧೀಜಿ ಗಾಬರಿಗೊಂಡರು. ಇವತ್ತಿಗೂ ಆ ಮೊತ್ತ ಅತಿ ಹೆಚ್ಚೆಂದೆನಿಸುತ್ತದೆ. ಒಬ್ಬೊಬ್ಬ ವಕೀಲನೂ ಒಂದೊಂದು ಕೇಸಿಗೆ ಸಾವಿರಾರು ರೂಪಾಯಿ ವಸೂಲಿ ಮಾಡುತ್ತಿದ್ದ. ಯಾವೊಬ್ಬ ವಕೀಲನೂ ಒಂದು ಸಾವಿರ ರೂಗಳಿಗಿಂತ ಕಡಿಮೆ ತೆಗೆದುಕೊಳ್ಳುತ್ತಿರಲಿಲ್ಲ. ಬ್ಯಾರಿಸ್ಟರ್ ಆಗಿದ್ದರಂತೂ ಒಂದು ಸಾರಿ ಹಾಜರಾಗಲು, ರೂ. ೧೦,೦೦೦ ತೆಗೆದುಕೊಳ್ಳುತ್ತಿದ್ದರು. ಬಡ ಉಳುಮೆಗಾರನಂತೂ ವಕೀಲನಿಗೆ ಫೀಸ್ ಕೊಟ್ಟುಕೊಟ್ಟು ಹಾಳಾಗುತ್ತಿದ್ದ.

ಬ್ರಜಕಿಶೋರ ಬಾಬು ಅವರು ಗಾಂಧೀಜಿಗೆ ನೀಲಿಯ ವ್ಯವಸಾಯವನ್ನು ಕುರಿತಂತೆ ಕ್ರಮವಾಗಿ ವಿಷಯಗಳನ್ನು ತಿಳಿಸಿದರು. ನೀಲಿಯ ಗಿಡ ಸುಂದರವಾಗಿರುತ್ತೆ, ಬಹಳ ಕೋಮಲವಾಗಿರುತ್ತೆ. ಅದಕ್ಕೆ ಬಹಳ ಸೇವೆ ಮಾಡಬೇಕಾಗುತ್ತೆ. ೧೩೦೦ ವರ್ಷಗಳಿಂದ ಯೂರೋಪಿಯನ್ನರಿಗೆ ನೀಲಿಯ ಅನೇಕ ರಾಸಾಯನಿಕ ಉಪಯೋಗಗಳ ಅರಿವು ಇದೆ. ನೀಲಿ ವ್ಯವಸಾಯದ ಬಿಳಿ ಜನ ತಮ್ಮ ಸಂಪಾದನೆಗಾಗಿ ಒಂದು ಕಾನೂನು ಮಾಡಿದ್ದಾರೆ. ಅದಕ್ಕನುಗುಣವಾಗಿ ಪ್ರತಿಯೊಬ್ಬ ರೈತನೂ ತನ್ನ ೩೦ ಕುಂಟೆ ಭೂಮಿಯಲ್ಲಿ ೩ ಕುಂಟೆ ಜಮೀನನ್ನು ಬಿಳಿಯ ಮಾಲೀಕನಿಗಾಗಿ ಉಳಬೇಕು. ಅದರಲ್ಲಿ ನೀಲಿಯ ಉತ್ಪಾದನೆ ಆಗುತ್ತೆ. ದಬ್ಬಾಳಿಕೆ ನಡೆಸಿ ಕೆಲಸ ಮಾಡಿಸುವುದಲ್ಲದೆ ಇದು ಮತ್ತೇನೂ ಅಲ್ಲ. ಈ ಕಾನೂನನ್ನು 'ತಿನಕಠಿಯಾ' ಅಂತ ಹೇಳುತ್ತಾ ಇದ್ದರು. ನೀಲಿಯ ಈ ದಬ್ಬಾಳಿಕೆಯ ವ್ಯವಸಾಯದಿಂದಾಗಿ ಬಡಪಾಯಿ ರೈತ ತನ್ನ ಹೊಲವನ್ನು ಸಂಭಾಳಿಸುವುದಕ್ಕಾಗುತ್ತಿರಲಿಲ್ಲ. ಇದರಿಂದಾಗಿ ಬರಬರುತ್ತಾ ಅವನ ಉತ್ಪಾದನೆ ಮತ್ತು ಸಂಪಾದನೆ ಎರಡೂ ಕಡಿಮೆಯಾಗುತ್ತಿದ್ದವು. ನೀಲಿ ವ್ಯವಸಾಯದ ಬಿಳಿಯರಿಗಾಗಿ ಅವನು ನೀಲಿ ಹುಟ್ಟುಹಾಕದಿದ್ದರೆ ಅವನನ್ನು ಹೊಡೆದು-ಹೊಡೆದು ಮುಗಿಸಿಬಿಡುತ್ತಿದ್ದರು. ಅವನ ಹೆಂಡತಿ-ಮಕ್ಕಳು ಕೂಡ ಮುಫತ್ತಾಗಿ ಹೊಲದಲ್ಲಿ ಕೆಲಸ ಮಾಡಬೇಕಾಗುತ್ತಿತ್ತು. ಅವರೇನಾದರೂ ಉಸಿರೆತ್ತಿದರೆ ಸರಿ, ಅವರ ಗುಡಿಸಲುಗಳನ್ನು ಸುಟ್ಟು ಹಾಕುತ್ತಿದ್ದರು. ಬಡರೈತನಿಗೆ ಮನೆಯೇ ಇಲ್ಲದೆ ಹೋಗುತ್ತಿತ್ತು. ಈ ದೌರ್ಜನ್ಯದ ಕತೆ ಕುರಿತು ಎಲ್ಲೂ ಯಾರಿಗೂ ದೂರು ನೀಡುವಂತಿರಲಿಲ್ಲ. ಬಿಳಿಯರ ಸರಕಾರ ಬಿಳಿ ನೀಲಿಯ ವ್ಯವಸಾಯಗಾರರ ಸ್ವಾರ್ಥ ಸಿದ್ಧಿಸುವಲ್ಲಿ ಸಹಕಾರ ನೀಡುತಿತ್ತು. ಈ ನೀಲಿಯ ರೈತರ ಒಂದೆರಡು ಕಟ್ಟಳೆಗಳು ದಿವಾನರ ಕಚೇರಿಯಲ್ಲಿ ನಡೆಯುತ್ತಿವೆ ಎಂದು ಬ್ರಜಕಿಶೋರಬಾಬು ಮತ್ತು ರಾಜೇಂದ್ರಬಾಬು ತಿಳಿಸಿದರು, ಗಾಂಧೀಜಿ ಆ ಕಾಗದಗಳನ್ನು ನೋಡಿದರು. ಈ ತರಹ ಕೇಸ್ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಅಂತ ಗಾಂಧೀಜಿಗೆ ಸ್ಪಷ್ಟವಾಯಿತು. ನೀಲಿಯ ಬಿಳಿಯರ ದೌರ್ಜನ್ಯಗಳ ಮುಂದೆ ರೈಯತ್ ಆ್ಯಕ್ಟ್‌ದೂ ನಿಷ್ಪ್ರಯೋಜಕವಾಗಿತ್ತು. ಅವರನ್ನು ಭಯಮುಕ್ತರನ್ನಾಗಿಸುವುದೊಂದು

ಉಪಾಯ ಉಳಿದಿತ್ತು. ಮೂರು ಕುಂಟೆಯ ನೀಲಿಯ ಕಾನೂನು ರದ್ದಾಗಬೇಕಾಗಿತ್ತು. ಅದಿಲ್ಲದೆ ಸುಧಾರಣೆ ಸಾಧ್ಯವಿರಲಿಲ್ಲ. ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕೆಂದು ಗಾಂಧೀಜಿ ಎರಡು ದಿನಕ್ಕಾಗಿ ಪಟನಾಗೆ ಬಂದಿದ್ದರು. ಆದರೆ ಚಂಪಾರಣ್ಯದಲ್ಲಿ ಎರಡು ವರ್ಷಗಳಿಗಿಂತ ಹೆಚ್ಚು ಅವಧಿಯ ಕೆಲಸ ಕಾದಿತ್ತು. ಈ ಕೆಲಸಕ್ಕೆ ಅವರಿಗೆ ಬಹಳ ಜನರ ಸಹಾಯ ಬೇಕಾಗಿತ್ತು.

ಇಷ್ಟಾಗಿಯೂ ಬ್ರಜಕಿಶೋರಬಾಬು ಬಹಳ ಉದಾರಿಗಳಾಗಿದ್ದರು. ಅವರು ಗಾಂಧೀಜಿಯನ್ನು 'ನಾವು ಖಂಡಿತ ಸಹಾಯ ಮಾಡುತ್ತೇವೆ. ಆದರೆ ನಿಮಗೆ ಯಾವ ತರಹ ಸಹಾಯ ಬೇಕು? ನಿಮ್ಮ ಅಪೇಕ್ಷೆ ಏನು?' ಎಂದು ಕೇಳಿದರು. ಗಾಂಧೀಜಿ ಮತ್ತು ಬಿಹಾರದ ವಕೀಲರು ಅರ್ಧರಾತ್ರಿಯವರೆಗೂ, ಸತ್ಯಾಗ್ರಹದ ಆಗುಹೋಗುಗಳು, ರೀತಿ–ನೀತಿಗಳನ್ನು ಕುರಿತಂತೆ ಗಂಭೀರವಾಗಿ ಚರ್ಚೆ ನಡೆಸಿದರು. ಅದಾದ ಮೇಲೆ ಬಿಹಾರದ ವಕೀಲರು ಗಾಂಧೀಜೀಯವರ ಮುಖಂಡತ್ವವನ್ನು ಮನಸಾರೆ ಒಪ್ಪಿದರು. ಮೊದಲು ಸಾಕ್ಷಿಗಳನ್ನು ಕೂಡಿಹಾಕಬೇಕಾಗಿತ್ತು. ಎಲ್ಲ ವಕೀಲರೂ ತಮ್ಮ ಕೆಲಸ, ಕೇಸ್, ದಾಖಲೆ, ಸಂಪಾದನೆ ಎಲ್ಲವನ್ನೂ ಒತ್ತಟ್ಟಿಗಿಟ್ಟು ಸಾಕ್ಷಿ ಸಂಗ್ರಹಿಸಿದರು. ಪ್ರತಿಯೊಬ್ಬ ರೈತನ ಜೀವಂತ ಕತೆಯನ್ನು ಉತ್ಪ್ರೇಕ್ಷೆ ಮಾಡದೆ ಹೆದರದೆ ಬರೆದರು. ಈ ಪ್ರಬಲರಾದ ವಕೀಲರು ವಕಾಲತ್‌ನ ಬಿಟ್ಟು ಪಿಟಿಷನ್ ರೈಟರ್‌ಗಳ ಕೆಲಸವನ್ನು ನಿರ್ವಹಿಸಿದರು. ಬಿಹಾರ ಹೇಳಲಾಗದಷ್ಟು ಹಿಂದುಳಿದಿತ್ತು. ಅವರು ಯಾರೂ ಗಾಂಧಿಯ ಹೆಸರನ್ನೂ ಕೇಳಿರಲಿಲ್ಲ. ಆದರೆ ಅದು ಯಾವ ಸಮ್ಮೋಹನವೋ ಜನರ ನಡುವೆ ಈ ಮಾತು ಹರಡಿತು. ದೂರು ನೀಡುವವರ ದೊಡ್ಡ ಗ್ಯಾಂಗ್ ಗಯಾಬಾಬು ಅವರ ಮನೆ ಮುಂದೆ ಸೇರಿತು. ರಾತ್ರೋರಾತ್ರಿ ಈ ಕೆಲಸ ನಡೆಯುತ್ತಿತ್ತು. ಕೊನೆಗೆ ಅವರ ಮನೆಯ ಅಂಗಳಗಳು ಸಾಕಾಗದೆ ಶಾಮಿಯಾನಾ ಹಾಕಿ ದೂರು ಸಂಗ್ರಹಿಸುವ ಕೆಲಸ ನಡೆಯಿತು. ಇಷ್ಟು ಕೇಳಿದ್ದರಿಂದಲೇ ಬಿಹಾರದ ಜನತೆ ಪ್ರಿಯರಾದ ಗಾಂಧೀಜಿಯವರನ್ನು ಕಂಡು ಮರುಳಾದರು. ಈ ನಡುವೆ ಗಾಂಧೀಜಿ ಎಲ್ಲರಿಗೂ ತಿಳಿದಂತೆ ತನ್ನ ನೀತ್ಯನುಸಾರ ಕಲೆಕ್ಟರ್ ಮತ್ತು ನೀಲಿ ವ್ಯವಸಾಯದ ಬಿಳಿಯರನ್ನು ಭೇಟಿಯಾದರು, ಅವರಿಗೆ ರೈತರ ಕಷ್ಟಗಳನ್ನು ವಿವರಿಸಿ ಹೇಳಿದರು ಮತ್ತು ವಿನಮ್ರರಾಗಿ ನ್ಯಾಯವನ್ನು ಬೇಡಿದರು. ಅವರು ಗಾಂಧೀಜಿಯನ್ನ ಥಳಿಸಿದರು. ಹೆದರಿಸಿದರು, ಚಂಪಾರಣ್ಯ ಬಿಟ್ಟು ಹೋಗಲು ಹೇಳಿದರು. ಗಾಂಧೀಜಿ ತಮ್ಮ ಸಹಯೋಗಿಗಳಿಗೆ ತಾವು ಬಿಳಿಯರನ್ನು ಭೇಟಿಯಾದುದರ ವಿವರ ನೀಡಿದರು. ಸರಕಾರ ಅವರನ್ನೇನಾದರೂ ಬೇಗನೇ ಬಂಧಿಸಿದರೆ, ಮುಜ಼ಫರ್‌ಪುರ ಬದಲಾಗಿ ಮೋತಿಹಾರಿನಲ್ಲೇ, ಬೇತಿಯಾದಲ್ಲೇ ಹಿಡಿದರೆ ಒಳ್ಳೆಯದು ಅಂತ ಗಾಂಧೀಜಿಗೆ ಅನಿಸಿತು. ಚಂಪಾರಣ್ಯ ತಿರುಹುತ್ ಡಿವಿಜ಼ನ್‌ನ ಒಂದು ಜಿಲ್ಲೆ, ಮೋತಿಹಾರಿ ಅದರ ಪ್ರಮುಖ ನಗರ,

ರಾಜಕುಮಾರ ಶುಕ್ಲರ ಮನೆಯೂ ಬೇತಿಯಾಗೆ ಹತ್ತಿರದಲ್ಲೇ ಇತ್ತು. ಈ ಜಿಲ್ಲೆಯ ರೈತ ಕಸಬುದಾರರು ಕಡುಬಡುವರು ಹಾಗೂ ಹಿಂಸೆಗೆ ಒಳಗಾಗಿದ್ದವರು. ಆ ಸಮಯಕ್ಕೆ ಸರಿಯಾಗಿ ಮೋತಿಹಾರಿಯ ಬಳಿ ಒಬ್ಬ ರೈತನನ್ನು ಬಿಳಿಯರು ಮಾಲೀಕರು ಸಿಕ್ಕಾಪಟ್ಟೆ ಹೊಡೆದಿದ್ದರು ಅನ್ನುವ ಸುದ್ದಿ ಬಂತು. ಈ ಭಾಗವೆಲ್ಲ ನೇಪಾಳದ ಅಂಚಿನ ಕಣಿವೆಯ ಪ್ರದೇಶವಾದ್ದರಿಂದ ಜೌಗಿನ ಪ್ರದೇಶದ ಮೇಲೆ ನಡೆದುಕೊಂಡು ಹೋಗಬೇಕಾಗುತ್ತಿತ್ತು. ಗಾಂಧೀಜಿನ ಒಂದು ಆನೆಯ ಮೇಲೆ ಕೂರಿಸಿ ಮೋತಿಹಾರಿಗೆ ಕರೆದುಕೊಂಡು ಹೋದರು. ಅವರ ಜೊತೆ ಸಾವಿರಾರು ದೀನದಲಿತರು ಅರ್ಧನಗ್ನರೂ ನಡೆದುಕೊಂಡು ಹೋದರು. ಒಂದು ದೊಡ್ಡ ಜಾತ್ರೆಯೇ ನಡೆದಂತಾಯಿತು. ಅರ್ಧ ರಸ್ತೆ ತಲಪಿದ್ದಿರಬಹುದು, ಅಷ್ಟರಲ್ಲೇ ಬಂಧನದ ವಾರೆಂಟನ್ನು ತೆಗೆದುಕೊಂಡು ಪೋಲಿಸ್‌ರು ಬಂದರು. ತಾಜ್ಹೀರಾತೇ ಹಿಂದ್ ಸೆಕ್ಷನ್ ೧೪೪ರ ಅಡಿಯಲ್ಲಿ ಗಾಂಧೀಜಿಗೆ ಚಂಪಾರಣ್‌ನಿಂದ ಹೊರಟು ಹೋಗಬೇಕೆಂದು ಇಲ್ಲವಾದಲ್ಲಿ ಅವರ ಮೇಲೆ ಕೇಸ್ ಹಾಕಲಾಗುವುದೆಂದೂ ತಿಳಿಸಿತ್ತು. ಗಾಂಧೀಜಿ ಆದೇಶ ಪಾಲನೆ ಮಾಡುವುದಿಲ್ಲವೆಂದು ತಿರಸ್ಕರಿಸಿದರು, ಆಗ ಕೋರ್ಟ್‌ಗೆ ಹಾಜರಾಗಬೇಕೆಂದು ಅವರಿಗೆ ಆದೇಶ ನೀಡಲಾಯಿತು. ಮಾರನೆಯ ದಿನ ಪ್ರದೇಶದಲ್ಲಿ ಅಶಾಂತಿ ಹರಡಿದರೆಂಬ ಅಪರಾಧದಡಿಯಲ್ಲಿ ಕೇಸ್ ನಡೆಸಲಾಯಿತು.

ರಾತ್ರಿಯೆಲ್ಲಾ ಎಚ್ಚರವಿದ್ದು ಗಾಂಧೀಜಿ ಪತ್ರ ಬರೆದರು. ಪರಿಸ್ಥಿತಿಯನ್ನು ಹಿಡಿತದಲ್ಲಿಟ್ಟುಕೊಳ್ಳಲು ಬ್ರಜಕಿಶೋರ ಬಾಬು ಅವರಿಗೆ ಸೂಚನೆಗಳನ್ನು ನೀಡಿದರು. ಗಾಂಧೀಜಿ ವಿರುದ್ಧ ವಾರಂಟ್ ಹೊರಟ ಸುದ್ದಿ ಬೆಂಕಿಯ ಹಾಗೆ ಪ್ರದೇಶದಲ್ಲಿ ಹರಡಿತು. ಮೋತಿಹಾರಿ ಗ್ರಾಮ ಮತ್ತು ಕಛೇರಿಯಲ್ಲಿ ಪ್ರತಿಯೊಂದು ಹಳ್ಳಿಯಿಂದ ಜನ ಗುಂಪು ಸೇರಿದರು. ಗಾಂಧೀಜಿ ಈ ಮಾನವ ಸೈನ್ಯವನ್ನು ನಿಯಮಿತಗೊಳಿಸಿದರು. ಶಾಂತರಾಗಿರುವಂತೆ ತಿಳಿಯ ಹೇಳಿದರು, ಆ ಕ್ಷಣದಿಂದ ಜಿಲ್ಲಾಧೀಶರು, ಪೋಲೀಸ್ ಇನ್ಸ್‌ಪೆಕ್ಟರ್, ಮ್ಯಾಜಿಸ್ಟ್ರೇಟ್‌ರ ನಡುವೆ ಒಂದು ತರಹೆ ಆತ್ಮೀಯತೆ ಮೂಡಿತು. ಆ ಆಂಗ್ಲ ಅಧಿಕಾರಿಗಳು ಗಾಂಧೀಜಿಯವರ ಸಂಯಮ ಸಭ್ಯ ವ್ಯವಹಾರವನ್ನು ನೋಡಿ ಪ್ರಭಾವಿತರಾದರು. ಮಾರನೆಯ ದಿನ ಗಾಂಧೀಜಿ ಕಛೇರಿಯಲ್ಲಿ ಒಬ್ಬ ಅಪರಾಧಿಯ ಹಾಗೆ ಹಾಜರಾದರು, ಗಾಂಧೀಜಿ ವಿರುದ್ಧ ಕೇಸ್ ನಡೆಯಬೇಕಾಗಿತ್ತು, ಆದರೆ ಅಲ್ಲಿ ಬ್ರಿಟಿಷ್ ರಾಜ್ಯ ಖುದ್ದಾಗಿ ಕಟಕಟೆಯಲ್ಲಿ ಬಂದು ನಿಂತಿದ್ದ ಹಾಗೆ ಅನಿಸುತ್ತಿತ್ತು. ಸರಕಾರಿ ವಕೀಲರೂ, ಮ್ಯಾಜಿಸ್ಟ್ರೇಟರೂ ಚಿಂತಾಕುಲರಾಗಿದ್ದರು. ಕೋರ್ಟ್ ಹಾಲ್ ಕಿಕ್ಕಿರಿದು ತುಂಬಿತ್ತು. ಹೊರಗಡೆ ಕೂಡ ಸಾವಿರಾರು ಜನ ನಿಂತಿದ್ದರು. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದಕ್ಕಾಗಿ ಕೇಸನ್ನು ಡಿಸ್‌ಮಿಸ್ ಮಾಡಬೇಕೆಂದು ಸರಕಾರ ಯೋಚಿಸಿತು. ಗಾಂಧೀಜಿ ಕೇಸ್

ನಡೆಸಿ ಅಂತ ಪ್ರಾರ್ಥಿಸಿಕೊಂಡರು, ಅವರು ತಮ್ಮ ಅಪರಾಧವನ್ನು ಒಪ್ಪಿಕೊಳ್ಳುತ್ತಿದ್ದರು. ಒಬ್ಬ ನಾಗರಿಕನಾಗಿ ಅವರು ಚಂಪಾರಣ್ ತ್ಯಜಿಸಿ ಹೋಗಬೇಕು. ಆದರೆ ಅವರ ಅಂತರಾತ್ಮ ಅವರನ್ನು ಚಂಪಾರಣ್‌ನಲ್ಲಿದ್ದುಕೊಂಡು ಅಲ್ಲಿಯ ರೈತರಿಗೆ ಬೆಂಬಲ ನೀಡಿ ಅವರ ಕಷ್ಟ ನೀಗಿಸಬೇಕೆಂದು ಹೇಳುತ್ತಿತ್ತು. ಹಾಗೆ ಮಾಡುವುದರಿಂದ ಸರಕಾರದ ಅವಹೇಳನೆ ಆಗುತ್ತಿತ್ತು. ಇದರಿಂದಾಗಿ ಅವರು ತಮ್ಮ ಅಪರಾಧವನ್ನು ಪೂರ್ತಿಯಾಗಿ ಒಪ್ಪಿಕೊಂಡು ಸಜಾ ಅನುಭವಿಸಲು ಸಿದ್ಧವಾಗಿದ್ದರು. ಅಲ್ಲಿಯವರೆಗೂ ಮೋತಿಹಾರಿಯ ಮ್ಯಾಜಿಸ್ಟ್ರೇಟ್‌ಗೆ ಈ ರೀತಿ ಯಾರಾದರೂ ಅಪರಾಧಿ ತನ್ನ ತಪ್ಪನ್ನು ಒಪ್ಪಿಕೊಳ್ಳಬಹುದೆಂಬ ವಿಷಯ ತಿಳಿದೇ ಇರಲಿಲ್ಲ. ಮ್ಯಾಜಿಸ್ಟ್ರೇಟ್, ಪೋಲಿಸ್, ಕಲೆಕ್ಟರ್ ಪ್ರತಿಯೊಬ್ಬರಿಗೂ ಇದ್ದ ಸಮಸ್ಯೆ ಅಂದರೆ ಇವರಿಗೆ ಏನು ಸಜಾ ಕೊಡಬೇಕು ಅನ್ನುವುದು. ಅದನ್ನು ನಿರ್ಣಯಿಸುವುದಕ್ಕೋಸ್ಕರ ಕೇಸನ್ನ ಮೂರು ದಿನ ಮುಂದಕ್ಕೆ ಹಾಕಿದರು. ಗಾಂಧೀಜಿ ನಡೆದೆಲ್ಲ ಘಟನೆಗಳ ವಿವರವನ್ನು ವೈಸ್‌ರಾಯ್‌ಗೂ, ಪಂಡಿತ ಮದನ ಮೋಹನ ಮಾಳವೀಯರಿಗೂ ತಂತಿ ಮೂಲಕ ಕಳುಹಿಸಿದರು ಮಾರನೆಯ ದಿನ ಬಂಗಾಳದ ಗವರ್ನರ್– ಆಗ ಆತ ಬಿಹಾರಕ್ಕೂ ಗವರ್ನರ್ ಆಗಿದ್ದರು– ಗಾಂಧೀಜಿ ವಿರುದ್ಧ ಹಾಕಿದ್ದ ಕೇಸನ್ನು ಹಿಂದಕ್ಕೆ ತೆಗೆದುಕೊಂಡರು, ಅಷ್ಟೇ ಅಲ್ಲ, ಕಲೆಕ್ಟರ್‌ಗೆ ರೈತರ ದೂರಿನ ಪರೀಕ್ಷೆ ನಡೆಸಬೇಕೆಂದು ಆದೇಶಿಸಿದರು. ಗಾಂಧೀಜಿಗೂ ಪರೀಕ್ಷೆ ಮುಂದುವರಿಸಲು ಅನುಮತಿ ನೀಡಿ ಅವರಿಗೆ ಕಲೆಕ್ಟರ್ ಪೂರ್ಣ ಸಹಕಾರ ನೀಡಬೇಕೆಂದು ಆದೇಶ ನೀಡಿದರು.

ಕಾನೂನಿನ ಸವಿನಯ ವಿರೋಧದ ಈ ಮೊದಲ ಘಟನೆಯನ್ನು ಕುರಿತಂತೆ ದೇಶದಲ್ಲಿ ಎಲ್ಲೆಡೆ ಚರ್ಚೆ ನಡೆಯಿತು. ತೀವ್ರವಾಗಿ ವಿಚಾರಮಂಥನ ಮಾಡಿ ಗಾಂಧೀಜಿ ತಮ್ಮ ದೂರದರ್ಶಿತ್ವ ಹಾಗೂ ಜಾಗೃತ ಬುದ್ಧಿಯಿಂದ ಈ ಘಟನೆಯನ್ನು ರಾಜಕೀಯ ಆಂದೋಳನವಾಗಿ ಮೂಡಿಬರದಂತೆ ತಡೆದರು. ದೇಶದ ಪ್ರಮುಖ ಪತ್ರಕರ್ತರೆಲ್ಲರೂ ಚಂಪಾರಣ್ಯಕ್ಕೆ ಬಂದು ಸೇರಿಕೊಳ್ಳಬಯಸಿದರು. ಆದರೆ ಗಾಂಧೀಜಿ ಇದಕ್ಕೂ ಮೊದಲೇ ಎಲ್ಲಾ ಪ್ರಮುಖ ಸಮಾಚಾರ ಪತ್ರಿಕೆಗಳಿಗೆ ಪತ್ರ ಬರೆದು ಸುದ್ದಿ ವರದಿಗಾರರನ್ನು ಚಂಪಾರಣ್‌ಗೆ ಬರದಿರುವಂತೆ ತಡೆದಿದ್ದರು. ಅವರು ಸ್ವತಃ ೩–೪ ದಿನಗಳಲೇ ಬಹಳ ಸಂಯವಿತವಾದ ಭಾಷೆಯಲ್ಲಿ ಪತ್ರಿಕೆಗಳಿಗೆ ಸಂಕ್ಷಿಪ್ತವಾದ ರಿಪೋರ್ಟನ್ನು ಕಳುಹಿಸುತ್ತಿದ್ದರು. ಉದಾರ ಹೃದಯದ ಮಾಳವೀಯರಿಗೆ ಕೇಸಿನ ಪೂರ್ಣ ಪರಿಚಯ ಇತ್ತು. ಆವಶ್ಯಕತೆ ಇದ್ದಲ್ಲಿ ಯಾವುದೇ ಕ್ಷಣ ತಾವು ಚಂಪಾರಣ್ಯಕ್ಕೆಗೆ ಬರಲು ಸಿದ್ಧವಾಗಿರುವರೆಂದು ಅವರು ಗಾಂಧೀಜಿಗೆ ಪತ್ರ ಬರೆದಿದ್ದರು. ಆದರೆ ಗಾಂಧೀಜಿ ಅವರನ್ನು ಬಿಹಾರಕ್ಕೆ ಬರದೆ ಇರುವಂತೆ ತಡೆದರು. ಈ ಸರಕಾರ ಮತ್ತು ಬಿಳಿಯ ಮಾಲೀಕರು ಕಾಂಗ್ರೆಸ್‌ನ ಹೆಸರನ್ನೂ ದ್ವೇಷಿಸುತ್ತಿದ್ದರಿಂದ ಈ ಪ್ರಕರಣದಲ್ಲಿ ಎಲ್ಲೂ ಕಾಂಗ್ರೆಸ್‌ನ ಹೆಸರನ್ನ ತರಲಿಲ್ಲ.

ಕಾಂಗ್ರೆಸ್‌ನ ವಕೀಲರ ಪಿಷ್ಟಪೇಷಣದ್ದೊಂದು ಗುಂಪು, ಅವರು ಬಾಂಬ್ ಎಸೆಯುವವರು, ರಾಜಕೀಯ ಹತ್ಯೆ ಮಾಡುವವರು, ಆತಂಕವಾದಿಗಳ ಸಮೂಹ ಅದು ಅಂತ ಅವರ ಭಾವನೆ ಇತ್ತು. ರೈತರಿಗೂ ಕಾಂಗ್ರೆಸ್ ಹೆಸರು ಗೊತ್ತಿರಲಿಲ್ಲ. ತಮ್ಮ ಕಾರ್ಯಶಕ್ತಿಯ ಒಳ್ಳೆ ಪರಿಣಾಮಗಳನ್ನು ನೋಡಿ ಜನರಿಗೆ ಕಾಂಗ್ರೆಸ್‌ನ ಪರಿಚಯ ಸಿಗಲಿ, ಯಾವುದೇ ಬಗ್ಗೆ ಶ್ರದ್ಧೆ ಮೂಡುತ್ತದೆ ಅಂತ ಗಾಂಧೀಜಿಗೆ ಅನಿಸಿತ್ತು. ಅದರಿಂದಲೇ ಕಾಂಗ್ರೆಸ್‌ನ ಯಾವ ವ್ಯಕ್ತಿಯೂ ಮೊದಲಾಗಲಿ, ನಂತರವೂ ಚಂಪಾರಣ್‌ಗೆ ಹೋಗಲಿಲ್ಲ. ಈ ಹಿಂದುಳಿದ ಜನರಿಗೆ ಚಂಪಾರಣ್‌ನಿಂದ ಆಚೆ ಇರುವ ಪ್ರಪಂಚದ ಪರಿಚಯ ಇರಲೇ ಇಲ್ಲ. ಹಾಗಿದ್ದರೂ ಅವರು ಎಷ್ಟೋ ವರ್ಷಗಳ ಪ್ರೀತಿ ಇರುವ ಹಾಗೆ ಗಾಂಧೀಜಿಯನ್ನು ತಮ್ಮವರೆಂದು ಪರಿಗಣಿಸಿದರು. ಗಾಂಧೀಜಿಗಂತೂ ಈ ದೀನ–ಹೀನರಾಗಿ ದುಃಸ್ಥಿತಿಯಲ್ಲಿದ್ದ ಹೊಲದ ಕೂಲಿಕಾರರನ್ನು ನೋಡಿ ದಯಾಶೀಲನಾದ ಭಗವಂತನನ್ನೇ ಕಂಡಹಾಗೆ ಭಾಸವಾಯಿತು. ಈ ಜನರಲ್ಲೇ ಗಾಂಧೀಜಿಯ ದರಿದ್ರನಾರಾಯಣ ಶೋಭಿಸುತ್ತಿದ್ದ, ಅವರ ಆರಾಧನೆಯೇ ಅವರ ಲಕ್ಷ್ಯವಾಗಿತ್ತು.

ಚಂಪಾರಣ್ಯದನ ನೀಲಿ ಉದ್ಯಮದ ಬಿಳಿಯರು ಏನೇನೋ ಕಲ್ಪಿಸಿಕೊಂಡು ಇನ್ನೂ ಏನೇನೋ ಆರೋಪಗಳನ್ನು ಹೊರಿಸಿದರು. ಬ್ರಜಕಿಶೋರ್ ಬಾಬು ಅವರ ಹೆಸರನ್ನು ಹಾಳು ಮಾಡುವ ಎಲ್ಲಾ ಪ್ರಯತ್ನಗಳನ್ನು ಮಾಡಿದರು. ಆದರೆ ಗಾಂಧೀಜಿಯನ್ನು ಅವರು ಬದ್‌ನಾಮ್ ಮಾಡಿದಷ್ಟೂ ಅವರ ಲೋಕಪ್ರಿಯತೆ ಹೆಚ್ಚುತ್ತಾ ಹೋಯಿತು. ಗಾಂಧೀಜಿ ಜಾಗ್ರತರಾಗಿದ್ದು, ಆತ್ಮ ಪ್ರಶಂಸೆ ಮಾಡಿಕೊಳ್ಳದೆ ಇದ್ದುದರಿಂದ ಕೆಲಸ ಕೆಡಲಿಲ್ಲ. ಅಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ ದೇಶದ ಮುಖಂಡರುನ್ನು ಇಲ್ಲವೇ ಹಿರಿಯರಾದ ಮಾಳವೀಯರನ್ನು ಚಂಪಾರಣ್ಯಕ್ಕೆ ಕರೆತಂದಿದ್ದರೆ ಖಂಡಿತ ನಷ್ಟವಾಗುತ್ತಿತ್ತು. ಇದು ಗಾಂಧೀಜೀಯ ದೂರದರ್ಶಿತ್ವ ರಾಜಕೀಯ ವಿವೇಕದ ಉದಾಹರಣೆಯಾಗಿತ್ತು.

ಗಾಂಧೀಜಿ ಶೀಘ್ರವಾಗಿ ಈ ತಪಾಸಣಾಕಾರ್ಯವನ್ನು ಮುಗಿಸಬೇಕೆಂದು ಇಷ್ಟಪಡುತ್ತಿದ್ದರು. ಆದರೆ ಮೋರೆಹಾರಿಯ ಗೋರಖ್‌ಬಾಬು ಮನೆಯಲ್ಲಿ ಇಷ್ಟೆಲ್ಲಾ ಮಾಡಲು ಕಷ್ಟವಾಗುತ್ತಿತ್ತು. ಬಹಳ ಚತುರತೆಯಿಂದ ಬ್ರಜಕಿಶೋರಬಾಬು ಒಂದು ದೊಡ್ಡ ಮನೆಯನ್ನು ಬಾಡಿಗೆಗೆ ತೆಗೆದುಕೊಂಡರು. ಅಲ್ಲಿ ಸಾಕ್ಷಿ ತೆಗೆದುಕೊಳ್ಳುವ ಕೆಲಸ ಆರಂಭವಾಯಿತು. ಈ ಪೂರ್ತಿಕೇಸ್‌ನಲ್ಲಿ ಬ್ರಜಕಿಶೋರಬಾಬು ಮತ್ತು ರಾಜೇಂದ್ರ ಬಾಬು ಅವರ ಜೋಡಿ ಮಾತ್ರ ಅಪೂರ್ವವಾಗಿತ್ತು. ಇಬ್ಬರೂ ಗಾಂಧೀಜಿಯ ತೀವ್ರ ಪ್ರೀತಿಪಾತ್ರರಾದದು. ಬ್ರಜಕಿಶೋರಬಾಬು ಸರದಾ ಪದ್ಧತಿ ಅಷ್ಟೊಂದು ಕಠೋರವಾಗಿದ್ದ ಆ ಕಾಲದಲ್ಲಿ ತನ್ನ ಒಬ್ಬಳೇ ಮಗಳು ಪ್ರಭಾವತಿಯನ್ನು ಅವರಿಗೆ ಸಮರ್ಪಿಸಿಬಿಟ್ಟರು. ಆಕೆಯೂ ಒಬ್ಬ ವಿಶಿಷ್ಟವಾದ ಮಹಿಳೆಯೇ. ಪ್ರಭಾವತಿಯ

ಪ್ರೀತಿ, ಉತ್ಸಾಹ, ತಿಳುವಳಿಕೆ, ಹೊಸ ವಿಷಯಗಳನ್ನು ಸ್ವೀಕರಿಸುವ ಶಕ್ತಿ ಕೂಡ ವಿಲಕ್ಷಣ ಸ್ವರೂಪದ್ದಾಗಿದ್ದವು. ಆ ಕಿಶೋರಾವಸ್ಥೆಯಲ್ಲೇ ಪ್ರಭಾವತಿ ಆಜೀವನ ಬ್ರಹ್ಮಚರ್ಯವ್ರತವನ್ನು ಸ್ವಿಕರಿಸಿದಳು. ನಂತರ ಅಮೆರಿಕಾದಲ್ಲಿ ಉನ್ನತ ವ್ಯಾಸಂಗವನ್ನು. ಪಡೆದು ಬಂದ ಸುಂದರ ಯುವಕ ಜಯಪ್ರಕಾಶನ ಜೊತೆ ಆಕೆ ಮದುವೆಯಾಯಿತು. ಆದರೆ ಪ್ರಭಾವತಿ ಮಾತ್ರ ತನ್ನ ಬ್ರಹ್ಮಚರ್ಯೆಯ ವ್ರತವನ್ನು ಬಿಡಲಿಲ್ಲ. ಯಾವುದೇ ಪರಿಸ್ಥಿತಿಯಲ್ಲೂ ಪ್ರಭಾವತಿ ಮಾತ್ರ ತಮ್ಮ ಬ್ರಹ್ಮಚರ್ಯೆಯ ಪ್ರತಿಜ್ಞೆಯನ್ನು ತಪ್ಪದೆ ಪಾಲಿಸಿದರು. ಜೆ.ಪಿ. ಏನೂ ಬ್ರಹ್ಮಚರ್ಯದ ಪ್ರತಿಜ್ಞೆ ಮಾಡಿರಲಿಲ್ಲವಾದರೂ ತನ್ನ ಅರ್ಧಾಂಗಿನಿಯ ಇಂತಹ ನಿರ್ಣಯುವನ್ನು ತಮ್ಮದಾಗಿಸಿಕೊಂಡು ಗೃಹಸ್ಥಾಶ್ರಮದಲ್ಲಿದ್ದುಕೊಂಡೇ ಬ್ರಹ್ಮಚರ್ಯೆಯವನ್ನು ಪಾಲಿಸಿದರು. ದೇಶ–ವಿದೇಶದ ಯಾವ ಇತಿಹಾಸದಲ್ಲೂ ಇಂತಹ ವ್ರತಪಾಲನೆ, ಸಮರ್ಪಿತ ಗೃಹಸ್ಥ ಧರ್ಮ ಇವುಗಳನ್ನು ನಾನು ಕಂಡಿಲ್ಲ.

ರಾಜೇಂದ್ರಬಾಬು ಅವರ ಪೂರ್ತಿ ಪರಿವಾರ ಆಶ್ರಮವಾಸಿಯಾಯಿತು. ಅವರೆಲ್ಲರೂ ಸಾಬರಮತಿ ಆಶ್ರಮದ ಅಭಿನ್ನ ಅಂಗವಾಗಿದ್ದರು. ಅವರ ಪತ್ನಿ ರಾಜವಂಶೀದೇವಿ, ಮಗ ಮೃತ್ಯುಂಜಯ ಬಾಬು ಅವರೆಲ್ಲರನ್ನೂ ಕರೆದುಕೊಂಡು ಅವರು ಸಾಬರಮತಿ ಆಶ್ರಮದಲ್ಲಿ ತಿಂಗಳಾನುಗಟ್ಟಲೆ ಇರುತ್ತಿದ್ದರು. ಆಶ್ರಮವಾಸಿಗಳಿಗೆ ತುಳಸೀ ರಾಮಾಯಣ('ರಾಮಚರಿತ ಮಾನಸ')ವನ್ನು ಕಲಿಸುತ್ತಿದ್ದರು. ರಾಜವಂಶೀದೇವಿ ಗಿಡ್ಡ ಹಾಗೂ ಪುಟ್ಟ ಶರೀರದ ಹೆಂಗಸು. ಆಕೆಯ ವಿನಯ ಸರಳತೆ ಮತ್ತು ಮಧುರ ಸ್ವಭಾವ ನೋಡಿ ಆಶ್ರಮದ ಮಹಿಳೆಯರು ಬಹಳ ಪ್ರಭಾವಿತರಾಗಿದ್ದರು. ಸರಕಾರ ಕೆಲಸದಿಂದ ತೆಗೆದುಹಾಕುವುದಕ್ಕೆ ಮೊದಲೇ ಆಚಾರ್ಯ ಕೃಪಲಾನಿ ಅವರು ತಮ್ಮ ಸರಕಾರಿ ಕಾಲೇಜಿನ ನೌಕರಿಗೆ ರಾಜೀನಾಮೆ ನೀಡಿದರು. ಅವರು ಗಾಂಧೀಜಿಯ ಸಂರಕ್ಷಕನ ಹಾಗೂ ದ್ವಾರಪಾಲಕನ ಕೆಲಸ ತಾವು ತೆಗೆದುಕೊಂಡರು. ಸಾವಿರಾರು ಮಂದಿ ಗಾಂಧೀಜಿಯವರ ದರ್ಶನಕ್ಕೆಂದು ಬಂದು ನುಗ್ಗುತ್ತಿರುವಾಗಲೂ ಅವರು ನಗುನಗುತ್ತಲೇ, ವಿನಮ್ರತೆಯಿಂದ, ಕೆಲವೊಮ್ಮೆ ಕೃತಕ ಕ್ರೋಧ, ಅನೇಕ ಬಾರಿ ಹಾಸ್ಯ ಮಾಡುತ್ತಾ ಗಾಂಧೀಜಿಯವರನ್ನು ಉಳಿಸಿ ಶಿಸ್ತನ್ನು ಉಳಿಸುತ್ತಿದ್ದರು. ಅವರು ಸಿಂಧಿಯಾಗಿದ್ದರಾದರೂ ಬಿಹಾರ್ ನಿವಾಸಿಗಳಿಗಿಂತ ಹೆಚ್ಚಾಗಿ ಬಿಹಾರವನ್ನು ಪ್ರೀತಿಸುತ್ತಿದ್ದರು. ಸಿರಿ–ಸಂಪತ್ತಿನಿಂದ ಕೂಡಿದ ಈ ವಕೀಲರ ಊಟ–ತಿಂಡಿಯ ರೀತಿ–ನೀತಿಗಳೂ ವಿಚಿತ್ರವಾಗಿದ್ದವು. ಪ್ರತಿಯೊಬ್ಬರಿಗೂ ನೌಕರರು, ಅಡುಗೆಯವನು, ಎಲ್ಲಾ ಬೇರೆ–ಬೇರೆ ಇದ್ದವು. ರಾತ್ರಿ ೧೨ ಗಂಟೆವರೆಗೂ ಊಟ ನಡೆಯುತ್ತಿತ್ತು. ಮಧುರವಾಗಿ ಕೀಟಲೆ ಮಾಡುವುದು, ಮೃದುವಾಗಿ ಉಪಹಾಸ್ಯ ಮಾಡಿ ಗಾಂಧೀಜಿ ಅವರ ಸ್ವಭಾವಗಳನ್ನೆಲ್ಲಾ ಬದಲಾಯಿಸಿದರು. ಜಾತಿ ಅಸ್ಪೃಶ್ಯತೆ ಇತ್ಯಾದಿ ಎಲ್ಲವನ್ನೂ ತೊರೆದು ನಿಧಾನವಾಗಿ ಅವರೆಲ್ಲಾ ಒಂದೇ ಅಡುಗೆಮನೆಯಲ್ಲಿ

ಒಟ್ಟಿಗೆ ಕುಳಿತುಕೊಂಡು ಸರಳವಾಗಿ, ಸಮಯುಕ್ಕನುಗುಣವಾಗಿ ಊಟ ಮಾಡತೊಡಗಿದರು. ನೌಕರರ ಸೈನ್ಯವನ್ನು ಹಳ್ಳಿಗೆ ಕಳುಹಿಸಿಬಿಟ್ಟರು. ಸ್ವಾವಲಂಬನ ರೂಢಿಸಿಕೊಳ್ಳಲಾರಂಭಿಸಿರು. ಈ ಕೇಸ್‌ನ ಸಂದರ್ಭದಲ್ಲಿ ಎಲ್ಲರೂ ಶಾಕಾಹಾರಿಗಳಾದರು. ಈ ಏರ್ಪಾಡಿನಿಂದ ಸಮಯ, ಶಕ್ತಿ ಹಣ ಎಲ್ಲವೂ ಉಳಿತಾಯವಾಗತೊಡಗಿತು.

ಇಷ್ಟು ದೊಡ್ಡ ಕೆಲಸಕ್ಕೆ ಹಣದ ಅಗತ್ಯ ಕೂಡ ಅಷ್ಟೇ ಹೆಚ್ಚಾಗಿತ್ತು. ಗಾಂಧೀಜಿ ಆ ಬಡಪಾಯಿ ನೀಲಿ ವ್ಯವಸಾಯದ ದುಡಿಮೆಗಾರರಿಂದ ಏನೂ ತೆಗೆದುಕೊಳ್ಳಲು ಇಷ್ಟಪಡುತ್ತಿರಲಿಲ್ಲ. ಅವರು ಮೊದಲೇ ಬಿಳಿಯ ಮಾಲೀಕರ ಕೈಲಿ ಶೋಷಿತರಾಗಿದ್ದವರು, ಅವರ ಖರ್ಚಿಗೂ ಅವರ ಹತ್ತಿರ ಹಣ ಇರುತ್ತಿರಲಿಲ್ಲ. ವಕೀಲರ ಸಮೂಹ ಹಣವಂತರದ್ದು. ಆದರೆ ಅವರುಗಳೂ ವಕಾಲತ್ತು ಸಂಪಾದನೆಯ ಸಾಧನವನ್ನು ಬೊಂಬಾಯಿನ ಮಿತ್ರರು ಸ್ವೇಚ್ಛೆಯಿಂದ ೧೫೦೦೦ ರೂ. ಕುಳಿಸುತ್ತೇವೆಂದು ಹೇಳಿದರು, ತಂತಿ ಕಳುಹಿಸಿದರು. ಆದರೆ ಗಾಂಧೀಜಿ ಅದನ್ನೂ ಹಿಂದಿರುಗಿಸಿಬಿಟ್ಟರು. ಚಂಪಾರಣ್ ಹೊರಗಿರುವ ಧನಿಕ ಬಿಹಾರಿಗಳು ಕೈಲಾದಷ್ಟು ಕೊಡಲಿ, ಆ ಹಣದಲ್ಲಿ ಕೇಸಿನ ಖರ್ಚು ತೂಗಿಸಬೇಕು ಅಂತ ಗಾಂಧೀಜಿ ಇಷ್ಟಪಡುತ್ತಿದ್ದರು. ಚಂದಾ ಸಾಕಾಗದಿದ್ದರೆ ಬಾಕಿ ಖರ್ಚನ್ನು ರಂಗೂನ್‌ನ ಮಿತ್ರ ಪ್ರಾಣಜೀವನ ಮೆಹ್ತಾ ಅವರ ಹತ್ತಿರ ತೆಗೆದುಕೊಂಡರಾಯಿತೆನ್ನುವುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಡಾ॥ ಮೆಹ್ತಾ ಕೂಡ ತಾರು ಕಳುಹಿಸಿ, ನಿಮಗೆ ಬೇಕಾದಷ್ಟು ಹಣವನ್ನು ನನ್ನಿಂದ ತರಿಸಿಕೊಳ್ಳಿ ಎಂದು ತಿಳಿಸಿದರು. ಈ ಕೇಸ್‌ಗೆ ३೦೦೦ ರೂ. ಗಿಂತ ಸ್ವಲ್ಪ ಕಡಿಮೆ ಖರ್ಚಾಗಿತ್ತು. ಖರ್ಚು ಮುಗಿದ ಮೇಲೆ ಚಂದಾ ಹಣ ಸುಮಾರು ೫೦೦-೬೦೦ ರೂ. ವರೆವಿಗೆ ಉಳಿದಿತ್ತು. ಅದನ್ನು ಅಲ್ಲಿಯ ಕೆಲಸಗಳಿಗಾಗಿ ಉಪಯೋಗಿಸಿದ್ದರು. ೧೯೧೭ರಲ್ಲಿ ३೦೦೦ ರೂ. ಅಂದರೆ ಹಣದುಬ್ಬರದ ಸ್ಥಿತಿನೋಡಿ ಅದಕ್ಕೆ ನೂರುಪಟ್ಟು ಸೇರಿಸಿ ಲೆಕ್ಕ ಮಾಡಿದರೂ ಇವತ್ತು ಒಂದು ಗಂಟೆಯ ಸರದಿಗೆ ३ ಲಕ್ಷ ರೂ.ಗಳಿಗೂ ಹೆಚ್ಚು ಖರ್ಚಾಗುತ್ತದೆ. ಈಚಿನ ದಿನಗಳಲ್ಲಿ ಐಷಾರಾಮದೊಂದಿಗೆ ದೊಡ್ಡ ಹೊಟೇಲುಗಳಲ್ಲಿ ಊಟ-ಕುಡಿತ ಇವುಗಳ ಜೊತೆ ಸಮಾಜ ಸೇವೆ ನಡೆಯುತ್ತದೆ. ಪ್ರತಿಯೊಬ್ಬ ಸಮಾಜ ಕಾರ್ಯಕರ್ತ ಅಷ್ಟಿಷ್ಟು ಹಣ ಮಾಡಿಕೊಳ್ಳದೆ ಇರುವುದಿಲ್ಲ. ಅದರಿಂದಲೇ ಕೆಲಸವಂತೂ ಆಗುವುದಿಲ್ಲ. ಜನರ ಕಷ್ಟಪರಿಹಾರ ಕೂಡ ಆಗುವುದಿಲ್ಲ, ಲಕ್ಷಾಂತರ ರೂ.ಗಳು ಹಾಳಾಗುತ್ತಿರುತ್ತವೆ. ನಿಷ್ಠೆಯಿಂದ ಸಮಾಜ ಸೇವೆ ನಡೆದರೆ ಹೆಚ್ಚು ಖರ್ಚು ಬರುವುದೇ ಇಲ್ಲ. ಹಾಗೆ ಸಾರ್ವಕನಿಕರ ಹಣದ ಮಿತವ್ಯಯ ಪ್ರಾಮಾಣಿಕತೆ ಇವುಗಳಿಗಾಗಿ ರಚನಾತ್ಮಕವಾದ ರಾಜಕೀಯದ ಕಾರ್ಯಕರ್ತರು ಸರಳ ಹಾಗೂ ಪರಿಶ್ರಮದಿಂದ ಕೂಡಿದ ಜೀವನ ನಡೆಸಬೇಕು. ಸಮಾಜ ಸೇವೆ ಮತ್ತು ಫೈವ್

ಸ್ಟಾರ್ ಹೋಟೆಲ್ ಎರಡು ಒಟ್ಟೊಟ್ಟಿಗೆ ಇರಕೂಡದು. ಹೀಗೆ ನಡೆದಷ್ಟೂ ಭ್ರಷ್ಟಾಚಾರ ಬೆಳೆಯುತ್ತದೆ, ಬಡ ಜನರು ಶೋಷಿತರಾಗುತ್ತಲೇ ಇರುತ್ತಾರೆ. ಅದೇ ಮುಂದುವರಿದು ನಂತರದಲ್ಲಿ ಸಾಮಾಜಿಕ, ಕೋಮುವಾರು ಗಲಭೆ, ಲೂಟಿ–ದಂಗೆ ಇವುಗಳಿಗೆ ತಿರುಗುತ್ತದೆ, ಆರ್ಥಿಕ ಅಸಮಾನತೆ ಹಾಗೂ ಕಷ್ಟದ ನೋವು ಅಡಗಿಕಿಕೊಂಡಿದ್ದು ಜ್ವಾಲಾಮುಖಿಯಂತೆ ಇದ್ದಕ್ಕಿದ್ದಹಾಗೆ ಭುಗಿಲೆದ್ದು ಬರುತ್ತದೆ.

ಚಂಪಾರಣ್ಯದಲ್ಲಿ ದೂರುಗಳನ್ನು ದಾಖಲಿಸುವಾಗ ಕಠೋರ ನಿಯಮಗಳನ್ನು ಪಾಲಿಸುತ್ತಿದ್ದರು. ಯಾರೂ ಮನಸೋ ಇಚ್ಛೆ ಬರೆಸುವಂತಿರಲಿಲ್ಲ. ಸುಳ್ಳು–ಸುಳ್ಳೇ ಗೌರವ ಬಿಟ್ಟು, ಅತಿಶಯೋಕ್ತಿಯಿಂದ ಕೂಡಿ ಕಲ್ಪಿಸಿಕೊಂಡು ದೂರುಗಳನ್ನು ದಾಖಲಿಸಲು ಅವಕಾಶವಿರಲಿಲ್ಲ. ಪ್ರಶ್ನೆ–ಪರೀಕ್ಷೆಯ ನಂತರವೇ ದೌರ್ಜನ್ಯದ ವಿವರಗಳನ್ನು ಬರೆಯುತ್ತಿದ್ದರು. ಹೀಗೆ ಮಾಡುವಲ್ಲಿ ಸಮಯ–ಶಕ್ತಿ ಎರಡೂ ಹೆಚ್ಚು ಖರ್ಚಾಗುತ್ತಿದ್ದವಾದರೂ ಸರಿಯಾದ ಘಟನೆಗಳು ಮಾತ್ರ ಭರ್ತಿಯಾಗುತ್ತಿದ್ದವು. ತಲೆ–ಬುಡ ಇಲ್ಲದ ಮಾತುಗಳು ಅಲ್ಲೇ ವಿಲೀನವಾಗಿ ಹೋಗುತ್ತಿದ್ದವು. ಸರಕಾರದ ಕಡೆಯಿಂದ ಒಬ್ಬ ಬೇಹುಗಾರ ಪೋಲೀಸ್ ಈ ಎಲ್ಲ ಹೇಳಿಕೆಗಳ ಸಂದರ್ಭದಲ್ಲಿ ಹಾಜರಿರುತ್ತಿದ್ದ. ಅವನ ಇರುವಿಕೆ ಅಪ್ರಿಯವಾಗುವ ಸಾಧ್ಯತೆಯೂ ಇತ್ತು. ಆದರೆ ಗಾಂಧೀಜಿ ತಿಳಿದಿದ್ದೂ ಅವನ ಇರುವಿಕೆಗೆ ವಿರೋಧ ಪ್ರಕಟಪಡಿಸಲಿಲ್ಲ. ಏಕೆಂದರೆ

೧. ಸತ್ಯಗ್ರಹದಲ್ಲಿ ಏನೂ ಮುಚ್ಚು–ಮರೆ ಇರಕೂಡದು. ಅದರಿಂದ ಪೋಲೀಸ್‌ಗೆ ಮರೆಮಾಚಿ ಹೇಳಿಕೆ ದಾಖಲು ಮಾಡಿಕೊಳ್ಳುವಂಥದ್ದೇನೂ ಇರಲಿಲ್ಲ.

೨. ಪೋಲೀಸರ ಎದುರಿಗೆ ರೈತ ದೂರು ನೀಡುವಾಗ ಅತಿಶಯೋಕ್ತಿ ಪೂರ್ಣವಾಗಿ ವರ್ಣಿಸುವುದಾಗಲೀ, ಸುಳ್ಳು ನೀಡಲು ಹೆದರುತ್ತಿದ್ದ. ಸಹಜವಾಗಿ ಸತ್ಯಾಂಶದ ವರ್ಣನೆ ನೀಡುತ್ತಿದ್ದ.

೩. ಪೋಲೀಸರ ಎದುರಿಗೇ ಇವುಗಳ ಪರೀಕ್ಷಣೆಯಾಗುತ್ತಿದ್ದುದರಿಂದ ಸರಕಾರ ಈ ರಿಪೋರ್ಟನ್ನು ತಿರಸ್ಕರಿಸಲಾಗುತ್ತಿರಲಿಲ್ಲ.

ಈ ಮೂರು ಕಾರಣಗಳು, ಅದಕ್ಕೂ ಹೆಚ್ಚಾಗಿ, ಇಲ್ಲಿಯ ವರೆವಿಗೂ ಪೋಲೀಸರೆದುರಿಗೆ ನಡುಗುತ್ತಿದ್ದ ರೈತನ ಭಯ ಇಲ್ಲಿ ಕೊನೆಗಂಡು ಮೊದಲಬಾರಿಗೆ ಅವನು ಧೈರ್ಯವಾಗಿ ಅಧಿಕಾರದಲ್ಲಿರುವ ಪೋಲಿಸರ ಎದುರಿಗೆ ತನ್ನ ಕಷ್ಟಗಳನ್ನು ವರ್ಣಿಸಲು ಸಾಧ್ಯವಾಯಿತು. ನಿರ್ಭಯವಾಗಿರುವುದು ನಾಗರಿಕತ್ವದ ಮೊದಲ ಗುಣ, ಇಲ್ಲಿಂದಲೇ ಸ್ವರಾಜ್ಯ ಪಡೆಯುವ ಧೈರ್ಯ ಮತ್ತು ನಿಷ್ಠೆ ಹುಟ್ಟುವುದು. ಆಗ ಸಂಯಮ ಸತ್ಯನಿಷ್ಠೆ ಎರಡೂ ಸುಲಭವಾಗುತ್ತದೆ.

ಈ ನೀಲಿಯ ಬಿಳಿಯರ ಅತ್ಯಾಚಾರಕ್ಕಿಂತ ಹೆಚ್ಚಿನ ಚಿಂತೆಯ ವಿಷಯ ಅಂದರೆ ಬಿಹಾರದಲ್ಲಿ ನೂರಾರು ವರ್ಷಗಳಿಂದ ಉಳಿದುಕೊಂಡುಬಂದಿದ್ದ

ಮೂಢತನ, ಅಜ್ಞಾನ, ಭಯಂಕರವಾದ ಬಡತನ. ಹಳ್ಳಿಗಳಲ್ಲಿ ಸಾಮಾನ್ಯ ಶಿಕ್ಷಣದ ಏರ್ಪಾಡೂ ಇರಲಿಲ್ಲವಾದ್ದರಿಂದ ಅದರ ವ್ಯವಸ್ಥೆ ಇಲ್ಲವೆ ವಿಕಾಸ ಸಾಧ್ಯವಿರಲಿಲ್ಲ. ಗ್ರಾಮ ವಿಕಾಸ ಮತ್ತು ಪ್ರಾಥಮಿಕ ಶಿಕ್ಷಣ ಇವಿಲ್ಲದೆ ಈ ಬಡವರಿಗೆ ಸಹಾಯ ಮಾಡಲಾಗುತ್ತಿರಲಿಲ್ಲ. ಈ ಉದ್ದೇಶದಿಂದ ಗಾಂಧೀಜಿಯವರು ಸೇವಾ ಮನೋಭಾವ ಇರುವ ಶಿಕ್ಷಕರು ಬೇಕೆಂದು ಒಂದು ಸಾರ್ವಜನಿಕ ಅಪೀಲನ್ನು ಛಾಪಿಸಿದ್ದರು. ಇದಕ್ಕೆ ಒಳ್ಳೆಯ ಪರಿಣಾಮಗಳು ಕಂಡುಬಂದವು. ಬೆಳಗಾಂನಿಂದ ಬಾಬಾ ಗಂಗಾಧರರಾವ್ ದೇಶಪಾಂಡೆ ಅನ್ನುವವರು ತಕ್ಷಣ ಬಾಬಾ ಸಾಹೇಬ್ ಸೋಮಣ್ಣ, ಪುಂಡಲೀಕ ಮತ್ತು ಅವಂತಿಕಾ ಬಾಯಿ ಗೋಖಲೆಯವರನ್ನು ಬೊಂಬಾಯಿಂದ ಚಂಪಾರಣ್ಯಕ್ಕೆ ಕಳುಹಿಸಿದರು. ತಮಿಳುನಾಡಿನಿಂದ ಆನಂದೀಬಾಬು ವೈಶಂಪಾಯನ ಬಂದರು. ಇದೇ ಸಮಯಕ್ಕೆ ಮಹಾದೇವ ದೇಸಾಯಿ ಮತ್ತು ಅವರ ಆತ್ಮೀಯ ಮಿತ್ರ ನರಹರಿ ಪರಿಚಯ ಗಾಂಧೀಜಿಗಾಯಿತು. ಆ ಇಬ್ಬರು ವಕೀಲ ಮಿತ್ರರು ಅವರ ಪತ್ನಿಯರಾದ ದುರ್ಗಾಬಹನ್ ದೇಸಾಯಿ ಮತ್ತು ಮಣಿಬಹೆನ್ ಪಾರೀಖ್ ಇಷ್ಟೂ ಜನ ಚಂಪಾರಣ್ಯಕ್ಕೆ ಬಂದು ಗಾಂಧೀಜಿಗೆ ನೆರವಾದರು. ಗಾಂಧೀಜಿ ಕಸ್ತೂರ ಬಾ ಮತ್ತು ಮಗ ದೇವದಾಸನನ್ನೂ ಅಲ್ಲಿಗೆ ಕರೆಸಿಕೊಂಡರು. ಈ ಸ್ವಯಂಸೇವಕರು ಆರು ಹಳ್ಳಿಗಳನ್ನು ಆರಿಸಿಕೊಂಡರು. ಪ್ರತಿ ಹಳ್ಳಿಯಲ್ಲೂ ಒಬ್ಬ ಪುರುಷ, ಒಬ್ಬ ಮಹಿಳೆ ಇರತೊಡಗಿದರು. ಹಳ್ಳಿಯವರು ಈ ಸಮಾಜ ಸೇವಕರನ್ನು ಚಾವಡಿಗಳಲ್ಲಿ ಒಂದೊಂದು ಕೊಠಡಿ, ಪುಟ್ಟ ಮನೆ ಕೊಟ್ಟು ಇರಿಸಿದರು. ಧಾನ್ಯ ಕೊಟ್ಟರು. ಮೇಲಿನ ಖರ್ಚಿಗೆ ಬೊಂಬಾಯಿಂದ ಮಿತ್ರರು ಹಣ ಕಳುಹಿಸಿಕೊಟ್ಟಿದ್ದರು. ಬಿಹಾರದ ಹಳ್ಳಿಗಳಿಗೆ ಅಗತ್ಯವಾಗಿದ್ದಷ್ಟು ಅಕ್ಷರ ಜ್ಞಾನಕ್ಕಿಂತ ಹೆಚ್ಚಾಗಿ ಸಭ್ಯ ಜೀವನ ನಡೆಸಲು ಜೀವನದಲ್ಲಿ ಕುಳಿತುಕೊಳ್ಳುವ ಏಳುವ, ಸ್ವಚ್ಛತೆ, ಆರೋಗ್ಯದ ನಿಯಮಗಳನ್ನು ತಿಳಿಯುವ, ಕಲಿಯುವ, ಆಚರಿಸುವ ಅಭ್ಯಾಸ ಅಗತ್ಯವಾಗಿತ್ತು. ದಿ. ಗೋಖಲೆಯವರ ಮಿತ್ರ ಡಾ॥ ದೇವ್ ಆರು ತಿಂಗಳಕಾಲ ನಿರಂತರ ಈ ಹಳ್ಳಿಗಳಲ್ಲಿದ್ದರು, ಜನರ ಶುಶ್ರೂಷೆ ನೆರವೇರಿಸಿದರು. ಹಳ್ಳಿಗಳಲ್ಲಿ ಅಂತಹ ಕಠೋರವಾದ ರೋಗಗಳೇನೂ ಇರುವುದಿಲ್ಲ. ನೆಗಡಿ, ಕೆಮ್ಮು, ಅಜೀರ್ಣ ಮುಂತಾದ ಸಾಮಾನ್ಯ ತೊಂದರೆಗಳಲ್ಲಿ ಮನೆಮದ್ದು, ಪಥ್ಯ, ಸಾಮಾನ್ಯವಾದ ಎಚ್ಚರಿಕೆ ತೆಗೆದುಕೊಂಡರೆ ಸಾಕಾಗುತ್ತದೆ. ನಮ್ಮಜ್ಜಿ ಮತ್ತು ಉಳಿದ ಮಹಿಳೆಯರು ಹಳ್ಳಿಯ ಮಕ್ಕಳನ್ನು ಒಂದುಗೂಡಿಸಿ, ಅವರ ಮೂಗನ್ನು ಸ್ವಚ್ಛಗೊಳಿಸುವುದು, ಗುಳ್ಳೆ ಹೊಪ್ಪಳೆಗಳನ್ನು ಸ್ವಚ್ಛಗೊಳಿಸಿ ಅದಕ್ಕೆ ಬ್ಯಾಂಡೇಜ್ ಕಟ್ಟಿ, ಮಕ್ಕಳ ತಲೆಯಲ್ಲಿದ್ದ ಹೇನು ತೆಗೆಯುವುದು, ಜಡೆ ಹಾಕುವುದು ಮುಂತಾದ ಕೆಲಸಗಳನ್ನ ಶುರು ಮಾಡಿಕೊಂಡರು. ಇದರಿಂದ ಹಳ್ಳಿಯ ಜನರ ಆರೋಗ್ಯ ಸಾಕಷ್ಟು ಸುಧಾರಿಸಿತು. ಹೆಚ್ಚು ದೊಡ್ಡರೋಗ ಕಾಣಿಸಿದಲ್ಲಿ ಡಾ॥ ದೇವ್ ವಾರದಲ್ಲಿ ಒಂದು ಖಚಿತವಾದ

ದಿನ ಅಲ್ಲಿಗೆ ಬರುತ್ತಿದ್ದರು. ಅವರಿಂದ ಡಾಕ್ಟರರ ಚಿಕಿತ್ಸೆಯೂ ನಡೆಯುತ್ತಿತ್ತು. ಇದಕ್ಕಿಂತ ಹೆಚ್ಚಿನ ಕಷ್ಟವೆಂದರೆ ಗಲೀಜು ಕೊನೆಗೊಳಿಸುವುದು. ಹಳ್ಳಿಗಳಲ್ಲಿ ಪಾಯಖಾನೆ ಇರುತ್ತಲೇ ಇರಲಿಲ್ಲ. ಇದ್ದಲ್ಲಿ ಅವು ಬಹಳ ಕೊಳಕಾಗಿರುತ್ತಿದ್ದವು. ವಾಸನೆ, ನೊಣಗಳು ಮುತ್ತಿರುತ್ತಿದ್ದವು. ಈ ಸ್ವಯಂಸೇವಕರು ಪ್ರತಿದಿನ ಬೆಳಿಗ್ಗೆ ಎದ್ದು ರಸ್ತೆ–ಅಂಗಳ ಗುಡಿಸುತ್ತಿದ್ದರು. ಗಲೀಜಾಗಿದ್ದ ನೀರಿನ ಹೊಂಡಗಳನ್ನು ಸ್ವಚ್ಛಗೊಳಿಸಿ, ಅತ್ತಿತ್ತ ಇದ್ದ ಕೊಳಕನ್ನು ತೆಗೆಯುತ್ತಿದ್ದರು, ಅವುಗಳನ್ನು ಮುಚ್ಚುವ ಕೆಲಸವನ್ನೆಲ್ಲಾ ಶುರುಮಾಡಿಕೊಂಡರು. ಎಷ್ಟೋ ಸಾರಿ ಜನ ತಮ್ಮ ಕೊಳಕನ್ನೇ ತೊಳೆದುಕೊಳ್ಳುವುದಕ್ಕೂ ಒಪ್ಪುತ್ತಿರಲಿಲ್ಲ. ಈ ಕಾರ್ಯಕರ್ತರು ಮಾಡುತ್ತಿದ್ದ ಕೆಲಸವನ್ನು ನೋಡಿ ಕೆಲವರು ಹಳ್ಳಿಜನಕ್ಕೂ  ಕೆಲವು ಕಡೆ ಸ್ಫೂರ್ತಿ ಬಂತು, ಗಾಂಧೀಜಿಯ ಮೋಟಾರು ಕಾರು ಅವರ ಮನೆ ವರೆಗೂ ಬರುವಂತಾಗಲಿ ಅಂತ ಅವರು ಇಟ್ಟಿಗೆ, ಕಲ್ಲು ಮಣ್ಣು ಹೊತ್ತು ಹಳ್ಳಿಗೆ ತಾವೇ ರಸ್ತೆಯನ್ನೂ ಕೂಡ ನಿರ್ಮಿಸಿದರು. ಒಂದು ಹಳ್ಳಿಯಲ್ಲಿ ಸೋಮಣ್ಣ ಮತ್ತು ಕಸ್ತೂರಬಾ ಒಟ್ಟೊಟ್ಟಿಗೇ ಕೆಲಸ ಮಾಡುತ್ತಿದ್ದರು. ಅವರಿಬ್ಬರೂ ಕೂಡಿ ಬೊಂಬಿನ ಮತ್ತು ಮರದ ರೆಂಬೆಗಳ ಒಂದು ಕಚ್ಚಾ ಮನೆ ಮಾಡಿ ಅಲ್ಲಿ ಪಾಠಶಾಲೆಯನ್ನು ಶುರು ಮಾಡಿದರು. ಹತ್ತಿರದ ನೀಲಿಯ ಬಿಳಿಯರಿಗೆ ಈ ಪ್ರಗತಿ ಇಷ್ಟವಾಗುತ್ತಿರಲಿಲ್ಲ. ಅವರು ಹೇಗೂ ಕೋಪ ಮಾಡಿಕೊಂಡಿದ್ದವರು ಒಂದು ದಿನ ರಾತ್ರಿ ಈ ಬಂಬಿನ ಮನೆಗೆ ಬೆಂಕಿ ಹಚ್ಚಿದರು. ದೇವರ ದಯೆ ಕಸ್ತೂರಬಾ ಮತ್ತು ಸೋಮಣ್ಣ ಉಳಿದುಕೊಂಡರು. ಆದರೆ ಇವರ ಉತ್ಸಾಹ–ಶ್ರದ್ಧೆಗೇನೂ ಕೊರತೆಯಾಗಲಿಲ್ಲ. ಅವರಿಬ್ಬರೂ ಕಲ್ಲು–ಇಟ್ಟಿಗೆ ಕೂಡಿಸಿ ಇನ್ನೊಂದು ಪಾಠಶಾಲೆ ಕಟ್ಟಬೇಕು ಅಂತ ನಿಶ್ಚಯಿಸಿದರು. ಹಳ್ಳಿಯವರು ಕೂಡ ಬಿಳಿ ಮಾಲೀಕರಿಗೆ ತಮ್ಮ ಪುರುಷಾರ್ಥವನ್ನು ತೋರಿಸಿಕೊಟ್ಟರು. ಬಹುಬೇಗ ಒಂದು ಭದ್ರವಾದ ಸ್ಕೂಲ್ ಕಟ್ಟಡ ನಿರ್ಮಾಣವಾಯಿತು. ಅದನ್ನು ಹಾಗೆ ಸುಡುವುದು ಸುಲಭವಾಗಿರಲಿಲ್ಲ.

ಒಂದು ಸಾರಿ ಗಾಂಧೀಜಿ ಕಸ್ತೂರಬಾ ಜೊತೆ ಮಿತೀಹರವಾ ಹಳ್ಳಿಯ ಬಳಿ ಚಿಕ್ಕ ಕಾಲೋನಿಗೆ ಹೋದರು. ಅಲ್ಲಿ ಕೆಲವರು ಮಹಿಳೆಯರು ತೀರ ಅಸಹ್ಯಕರವಾದ ರೀತಿಯಲ್ಲಿ ಕೊಳಕಾಗಿ ಕಾಣಿಸುತ್ತಿದ್ದರು. ಗಾಂಧೀಜಿ ನಮ್ಮಜ್ಜಿಗೆ ಹೇಳಿದರು, ಈ ಹೆಂಗಸರಿಗೆ ಸ್ವಲ್ಪ ಸ್ವಚ್ಛತೆಯಿಂದ ಇರಲು ಹೇಳು, ಬಟ್ಟೆ ಒಗೆದುಕೊಳ್ಳಲು ಹೇಳು. ಆ ಮಹಿಳೆಯರನ್ನು ಕಸ್ತೂರಬಾ ತಮ್ಮ ಗುಡಿಸಲುಗಳೊಳಕ್ಕೆ ಕರೆದುಕೊಂಡು ಹೋದರು, ಒಳಗಿನ ಸ್ಥಿತಿಯನ್ನು ತೋರಿಸಿ ಹೇಳಿದರು." ಇಲ್ಲಿ ನೋಡಿ, ನಮ್ಮ ಬೀರು, ಮಾಡ್ಯಾರ್ಯಾಕ್ ಯಾವುದೂ ಇಲ್ಲ, ನಮ್ಮ ಬಟ್ಟೆ ಇಟ್ಟೆ ಇಲ್ಲ. ನಮ್ಮ ಶರೀರದ ಮೇಲಿರುವುದಷ್ಟೇ ಸೀರೆ ಇದು. ನಮಗೆ ಇನ್ನೊಂದು ಸೀರೆ ಕೊಡಿಸುವ ಹಾಗೆ ಮಹಾತ್ಮಾಜೀಗೆ ಹೇಳಿ. ಆಗ ನಾವು ಕೊಳಕಾಗಿರುವುದಿಲ್ಲ ಅಂತ ಮಾತು ಕೊಡ್ತೀವಿ" ಅಂದರು. ಇನ್ನೊಂದು ಹಳ್ಳಿಯಲ್ಲಂತೂ ಇಬ್ಬರು

ಮಹಿಳೆಯರು ಗುಡಿಸಲಿನಿಂದ ಹೊರಕ್ಕೆ ಬರಲೇ ಇಲ್ಲ. ಏಕಿರಬಹುದು ಅಂತ ತಿಳಿದುಕೊಳ್ಳುವುದಕ್ಕಾಗಿ ಕಸ್ತೂರ ಬಾ ಅವರ ಗುಡಿಸಲಿನೊಳಕ್ಕೆ ಹೋದರು. ಒಳಕ್ಕೆ ಹೋಗಿ ನೋಡಿದರೆ ಒಳಗೆ ಇಬ್ಬರು ಮಹಿಳೆಯರು ನಗ್ನಸ್ಥಿತಿಯಲ್ಲಿ ಕುಳಿತಿದ್ದರು. ಅವರ ಬಳಿ ಮೈ ಮುಚ್ಚಲು ಬಟ್ಟೆ ಕೂಡ ಇರಲಿಲ್ಲ, ಅವರು ಹೊರಗೆ ಬರುವಂತಿರಲಿಲ್ಲ. ತಮ್ಮ ಶರೀರದ ಮರ್ಯಾದೆಯನ್ನು ಉಳಿಸಿಕೊಳ್ಳಲು ಅವರು ರಾತ್ರಿಯ ಕತ್ತಲಿನಲ್ಲೇ ಮನೆಗೆಲಸಗಳನ್ನು ಕೂಡ ಮಾಡಿಕೊಳ್ಳುತ್ತಿದ್ದರು. ಬಡತನದ ತುತ್ತತುದಿ ಈ ರೀತಿ ಇತ್ತು, ಹಾಗಿದ್ದರೂ ಆ ದುಃಸ್ಥಿತಿಯಲ್ಲೂ ಸಭ್ಯತೆ–ಸೌಹಾರ್ದ ಜೀವಂತವಾಗಿತ್ತು. ಸ್ವಲ್ಪ ಸಹಾನುಭೂತಿ ಸಿಕ್ಕೊಡನೆಯೇ ಆ ಬಡವರ ಪ್ರೇಮ, ಆದರ ಶ್ರದ್ಧೆ–ಭಕ್ತಿ ಜಾಗೃತವಾಗುತ್ತಿದ್ದವು. ಅಜ್ಜಿ ಮತ್ತು ದೇವದಾಸ ಕಾಕಾ ಇಬ್ಬರೂ ಈ ರೀತಿ ಚಂಪಾರಣ್‌ನ ಅತಿ ಹಿಂದುಳಿದ ಬಡ ಕ್ಷೇತ್ರದಲ್ಲಿ ಕೆಲಸ ಮಾಡಿದರು. ಬಿಹಾರದ ಕಾರುಣ್ಯದ ಬಡತನವನ್ನು ನೋಡಿ ಗಾಂಧೀಜಿಗೆ ಕಡಲೆಕಾಯಿ ಮತ್ತು ಖರ್ಜೂರದ ಊಟ ಕೂಡ ತುಟ್ಟಿ ಅನಿಸತೊಡಗಿತ್ತು, ಅಂತಹ ರುಚಿಕರವಾದ ಭೋಜನ ಮಾಡಲು ಅವರಿಗೀಗ ಸಂಕೋಚವಾಗುತ್ತಿತ್ತು. ಆ ಬಡವರ ಮಟ್ಟದ ಸರಳತೆಯನ್ನು ತನ್ನದಾಗಿಸಿಕೊಳ್ಳಲು ಗಾಂಧೀಜಿ ಆ ಕಾಲದಲ್ಲಿ ಒಂದು ಹಿಡಿ ಅಕ್ಕಿ ಅನ್ನ ಮತ್ತು ಉಪ್ಪಿಲ್ಲದೆ ಬೇಯಿಸಿದ ಹಾಗಲಕಾಯಿ ತಿಂದು ಕೆಲಸ ಮಾಡುತ್ತಿದ್ದರು. ಈ ಆಹಾರ ಅಗ್ಗವಾಗಿತ್ತು. ಆರೋಗ್ಯಕರವಾಗಿತ್ತು. ದೇವದಾಸಗಾಂಧಿ ಎಷ್ಟೋ ಬಾರಿ ಅಕ್ಕಿ ಮತ್ತು ಹಾಗಲಕಾಯಿ ಒಟ್ಟಿಗೇ ಬೇಯಿಸಿ ಬಿಡುತ್ತಿದ್ದರು.

೧೯೧೭ರಲ್ಲಿ ಮೊಟ್ಟ ಮೊದಲಬಾರಿಗೆ ದೇಶದಲ್ಲಿ ಗ್ರಾಮಸೇವೆಗೆ ಅಡಿಪಾಯ ಬಿತ್ತು ಹಾಗೂ ಮಹಿಳೆಯರು ಮೊಟ್ಟ ಮೊದಲ ಬಾರಿ ತಮ್ಮ ಸಂಕೋಚವನ್ನು ತೊರೆದು ಸಮಾಜ ಸೇವೆಯಲ್ಲಿ ಭಾಗವಹಿಸಿದರು. ಸ್ತ್ರೀಶಕ್ತಿ ಮತ್ತು ಸ್ತ್ರೀ ಸ್ವಾತಂತ್ರ್ಯ ಆರಂಭ ೧೯೧೭ ರಿಂದ ಭಾರತದಲ್ಲಿ ಆರಂಭವಾಯಿತು. ಪಶ್ಚಿಮ ದೇಶಗಳಲ್ಲಿ ಇನ್ನೂ ಈ ದಿಕ್ಕಿನಲ್ಲಿ ಚಿಂತನೆ ಕೂಡ ಆರಂಭವಾಗಿರಲಿಲ್ಲ. ಮೂರು ತಿಂಗಳ ಕಾಲದಲ್ಲಿ ಸಾಕಷ್ಟು ಸಾಕ್ಷಿಗಳು ಜಮಾ ಆದವು. ಗಾಂಧೀಜಿಯವರ ಮಾತು ಕೇಳಿ ಸರಕಾರ ಗಿರ್ ಎಡವರ್ಡ್ ಗೇಟ್‌ನ ಅಧ್ಯಕ್ಷತೆಯಲ್ಲಿ ಒಂದು ಪರೀಕ್ಷಣಾಸಮಿತಿ ರಚಿಸಿತು. ಬಹಳ ಶ್ರದ್ಧೆ ಮತ್ತು ದೃಢತೆಯಿಂದ ವಿವಾದರಹಿತ ರಿಪೋರ್ಟ್ ಒಂದು ಸಿದ್ಧವಾಯಿತು. ಈ ಸಮಿತಿಯ ಸಲಹೆಗಳನ್ನೆಲ್ಲಾ ಸರಕಾರ ಒಪ್ಪಿಕೊಂಡಿತು. ನೂರು ವರ್ಷಗಳಿಂದ ನಡೆದು ಬಂದಿದ್ದು ತಿಲಕರಿಯೆನ ಅನ್ಯಾಯಪೂರ್ಣ ಕಾನೂನು ಕೊನೆಗೂ ತೆಗೆದುಹಾಕಿದರು. ನೀಲಿಯ ಬಿಳಿಯರು ಎಷ್ಟೋ ಜನ ರೈತರ ಬಾಕಿಯನ್ನು ಚುಕ್ತಾ ಮಾಡಿದರು. ಹೀಗೆ ರೈತರ ಶೋಷಣೆ ಕೊನೆಗೊಂಡಿತು. ಬಡಜನರಿಗೆ ತಮ್ಮ ಕಾಣದ ಶಕ್ತಿಯ ಅರಿವಾಯಿತು. ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಜನತಾ ಜನಾರ್ದನರ ಮೊದಲ ಅಹಿಂಸಕ ಪ್ರಹಾರ ಇದಾಗಿತ್ತು. ಮುಂದೆ ಮೂವತ್ತು ವರ್ಷಗಳ ನಂತರ ಅದೇ ಸ್ವಾತಂತ್ರ್ಯವಾಗಿ ಪರಿಣಮಿಸಿತು.

# ೪. ಮಿಲ್ ಕಾರ್ಮಿಕರು

ಚಂಪಾರಣ್ಯದ ಕೆಲಸವಿನ್ನೂ ಮುಗಿದಿರಲೇ ಇಲ್ಲ. ಅಷ್ಟರಲ್ಲೇ ಅಹಮದಾಬಾದ್‌ನಲ್ಲಿ ಒಂದು ಗಂಭೀರ ಸಮಸ್ಯೆ ಎದುರಾಯಿತು. ೨ನೇ ಫೆಬ್ರವರಿ ೧೯೧೮ರಲ್ಲಿ ಗಾಂಧೀಜಿ ಬೊಂಬಾಯಿಗೆ ಹೋಗಿದ್ದರು. ಅಲ್ಲಿ ಅಹಮದಾಬಾದ್‌ನ ಹೆಸರಾಂತ ಬಟ್ಟೆ ಗಿರಣಿಯು ಮಾಲೀಕ ಅಂಬಾಲಾಲ್ ಸಾರಾಭಾಯಿ ಗಾಂಧೀಜಿಯವರನ್ನು ಭೇಟಿಯಾದರು. ಕೆಲವು ಕಾಗದಪತ್ರಗಳನ್ನು ತೋರಿಸಿ ಬೋನಸ್ ಕುರಿತಾಗಿ ಕಾರ್ಮಿಕರಲ್ಲಿ ಅಸಂತೋಷ ಹರಡಿದೆ, ಬಹುಶಃ ಅವರುಗಳು ಹರತಾಳ ನಡೆಸಬಹುದೆಂದು ಹೇಳಿ ಗಾಂಧೀಜಿಯವರು ಈ ಸಮಸ್ಯೆಯನ್ನು ನಿವಾರಿಸಬೇಕೆಂದು ಇಲ್ಲದಿದ್ದಲ್ಲಿ ಅನಾವಶ್ಯಕವಾಗಿ ನಷ್ಟವಾಗುತ್ತದೆಯೆಂದೂ ಸಾವಿರಾರು ಮಂದಿ ಕಾರ್ಮಿಕರಿಗೆ ಹಾನಿ ಉಂಟಾಗುವುದೆಂದು ಹೇಳಿ ಇದರಿಂದ ನಗರದಲ್ಲಿ ಅಶಾಂತಿ ಹರಡುವುದು ಎಂದರು.

ಈ ರೀತಿ ಒಬ್ಬ ಮಿಲ್ ಮಾಲೀಕನ ಬೇಡಿಕೆಯ ಮೇರೆಗೆ ಗಾಂಧೀಜಿ ಅಹಮದಾಬಾದ್‌ಗೆ ಹೋದರು, ಕಾರ್ಮಿಕರ ಸಮಸ್ಯೆಯ ಪರಿಶೀಲನೆ ನಡೆಸಿದರು. ಜುಲೈ ೧೯೧೭ರಲ್ಲಿ ಅಹಮದಾಬಾದಿನಲ್ಲಿ ಪ್ಲೇಗ್ ಹರಡಿತ್ತು. ನಗರದ ಜನ ಊರು ಬಿಟ್ಟು ಓಡುತ್ತಿದ್ದರು, ಆಗ ಬಟ್ಟೆ ಮಿಲ್ ಮಾಲೀಕರು ಕಾರ್ಮಿಕರ ಸಹಾಯಕ್ಕಾಗಿ ಪ್ಲೇಗ್ ಬೋನಸ್ಸನ್ನು ಜಾರಿಗೊಳಿಸಿದ್ದರು. ಮೇಲಣ ಈ ಹಣದ ಮೊತ್ತ ಆಕರ್ಷಕವಾಗಿದ್ದುದರಿಂದ ಎಷ್ಟೋ ಜನ ಕಾರ್ಮಿಕರು ಪ್ಲೇಗ್‌ನ ಅಪಾಯವನ್ನು ಹೊತ್ತುಕೊಂಡೇ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಈ ಕಾರ್ಮಿಕರಿಗೆ ಸುಮಾರು ಎರಡರಷ್ಟು ವೇತನ ಸಿಗುತ್ತಿತ್ತು. ಪ್ಲೇಗ್‌ನ ಅಪಾಯ ೨–೩ ತಿಂಗಳಲ್ಲೇ ತೀರಿತಾದರೂ ಪ್ಲೇಗ್ ಬೋನಸ್ಸನ್ನು ಮುಂದುವರಿಸಿದರು. ಅಗತ್ಯ ವಸ್ತುಗಳು, ದವಸಧಾನ್ಯಗಳ ಬೆಲೆ ಮೂರು–ನಾಲ್ಕು ಪಟ್ಟು ಏರಿಕೆಯಲ್ಲಿದ್ದುದರಿಂದ ಪ್ಲೇಗ್ ಬೋನಸ್‌ನ್ನು ಮುಂದುವರಿಸಿದರು. ೯–೧೦ ತಿಂಗಳ ನಂತರ ಸ್ಥಿತಿ ಸಾಮಾನ್ಯಕ್ಕೆ ತಿರುಗಿತು. ಆಗ ಮಿಲ್ ಮಾಲೀಕರು ಈ ಪ್ಲೇಗ್ ಬೋನಸ್‌ನ್ನು ನಿಲ್ಲಿಸುವ ಘೋಷಣೆ ಮಾಡಿದರು. ಕಾರ್ಮಿಕರ ಸಂಪಾದನೆ ಅರ್ಧದಷ್ಟು ಕಡಿಮೆಯಾಗುತ್ತದೆಂದು ಅವರು ಚಿಂತಿತರಾಗಿದ್ದರು. ಆ ಪರಿಸ್ಥಿತಿಯಲ್ಲಿ ಎಷ್ಟೋ ಜನ ಕಾರ್ಮಿಕರು ತಮ್ಮ ಅಹವಾಲನ್ನು ತೆಗೆದುಕೊಂಡು ಅನಸೂಯಾ ಬಹನ್ ಸಾರಾಭಾಯಿ ಅವರ ಬಳಿ ಹೋದರು.

ಅನಸೂಯಾ ಬಹನ್ ಸಾರಾಭಾಯಿ ಅವರ ಒಬ್ಬಳೇ ಅಕ್ಕ, ತನ್ನ ತಮ್ಮನ ಜುಬಿಲೀಮಿಲ್‌ನಲ್ಲಿ ಕಾರ್ಮಿಕರ ಮಕ್ಕಳಿಗಾಗಿ ಆಕೆ ಒಂದು ಬಾಲಮಂದಿರವನ್ನು ತೆರೆದಿದ್ದರು. ಹೀಗಾಗಿ ಅನಸೂಯಾ ಬಹನ್ ಕಾರ್ಮಿಕರನ್ನು ಹತ್ತಿರದಿಂದ ಬಲ್ಲವಳಾಗಿದ್ದಳು. ಅವರ ಕಷ್ಟ–ಕಾರ್ಪಣ್ಯಗಳ ಪರಿಚಯ ಆಕೆಗಿತ್ತು. ಪ್ಲೇಗ್ ಬೋನಸ್ ಪೂರ್ತಿ ಕೊಡಲಾಗದಿದ್ದರೂ ಚಿಂತೆಯಿಲ್ಲ, ಕೊನೆಯ ಪಕ್ಷದಲ್ಲಿ ಅದರಲ್ಲಿ ಶೇಕಡಾ ೫೦ ಭಾಗದಷ್ಟು ತುಟ್ಟಿಭತ್ಯವಾಗಿ ಅವರಿಗೆ ನೀಡಬೇಕೆಂಬುದು ಮಿಲ್ ಕಾರ್ಮಿಕರ ಬೇಡಿಕೆಯಾಗಿತ್ತು.

ಅಹಮದಾಬಾದನ್ನು ತಲಪಿ ಗಾಂಧೀಜಿ ಮಿಕ್ಕ ಮಿಲ್ ಮಾಲೀಕರನ್ನು ಭೇಟಿಯಾದರು. ಆದರೆ ಆಗಲೂ ಅವರು ಈ ಸಮಸ್ಯೆಯಲ್ಲಿ ಪೂರ್ತಿಯಾಗಿ ಸಿಲುಕಿರಲಿಲ್ಲ. ಮಿಲ್ ಕಾರ್ಮಿಕರ ಬೇಡಿಕೆಗಳನ್ನು ತಿರಸ್ಕರಿಸಿ ಮಿಲ್‌ಗಳನ್ನೇ ಮುಚ್ಚಿ ಲಾಕ್‌ಔಟ್ ಘೋಷಿಸಬೇಕೆಂದು ಮಿಲ್ ಮಾಲೀಕರು ಯೋಚಿಸಿದ್ದರು. ಈ ರೀತಿ ಪರಿಸ್ಥಿತಿ ದಿನಂಪ್ರತಿ ಬಿಗಡಾಯಿಸುತ್ತಿತ್ತು. ಆಗ ಅಹಮದಾಬಾದ್‌ನ ಆಂಗ್ಲ ಕಲೆಕ್ಟರ್ ೧೧ ಫೆಬ್ರವರಿ ೧೯೧೮ ರಂದು ಪತ್ರ ಬರೆದು ಗಾಂಧೀಜಿ ಸರಕಾರಕ್ಕೆ ಪರಿಸ್ಥಿತಿಯನ್ನು ಪರಿಚಯಿಸಬೇಕೆಂದು ಕೋರಿದ್ದರು. ಮಿಲ್ ಮಾಲೀಕರು ಗಾಂಧೀಜಿಯವರನ್ನು ಮಾತ್ರ ಗೌರವಿಸುತ್ತಾರೆಂದು ಕಲೆಕ್ಟರ್‌ಗೆ ತಿಳಿದಿತ್ತು. ಗಾಂಧೀಜಿ ಮಾತ್ರ ಈ ವಿಸ್ಫೋಟಕ ಪರಿಸ್ಥಿತಿಯನ್ನು ಹದ್ದುಬಸ್ತಿಗೆ ತರಬಲ್ಲರೆಂಬುದು ಅವರಿಗೆ ಗೊತ್ತಿತ್ತು. ಗಾಂಧೀಜಿ ಕಲೆಕ್ಟರ್ ಅವರನ್ನು ಭೇಟಿಯಾದರು. ಅವರಿಗೆ ಕೇಸನ್ನು ವಿವರಿಸಿದರು. ಕಾರ್ಮಿಕರು ಮತ್ತು ಮಿಲ್ ಮಾಲೀಕರೊಂದಿಗೆ ಮಾತುಕತೆ ನಡೆಸಿದರು. ಮಧ್ಯಸ್ಥಿಕೆಯ ಒಂದು 'ಪಂಚಾಯತಿ' ರಚಿಸಬೇಕೆಂದು ನಿರ್ಣಯಿಸಿದರು. ಅದರಲ್ಲಿ ಮಿಲ್ ಮಾಲೀಕರ ಪರವಾಗಿ ಸೇಠ ಅಂಬಾಲಾಲ್ ಸಾರಾಭಾಯಿ, ಗೇರ್ ಜಗುಬಾಯಿ ದಲಪತ್‌ರಾಯ್ ಮತ್ತು ಸೇಠ್ ಚಂದೂಲಾಲ್, ಹಾಗೆಯೇ ಕಾರ್ಮಿಕರ ಪ್ರತಿನಿಧಿಗಳಾದ ಗಾಂಧೀಜಿ, ಚಂದೂಲಾಲ್ ಬ್ಯಾಂಕರ್ ಮತ್ತು ವಲ್ಲಭ ಭಾಯಿ ಪಟೇಲ್ ಇರುವರೆಂದು ನಿರ್ಣಯಿಸಿದರು.

ಪಂಚಾಯತಿ ನಿರ್ಣಯ ನೀಡುವುದಕ್ಕೂ ಮೊದಲೇ ಕೆಲವು ಉತ್ತೇಜಿತರಾದ ಕಾರ್ಮಿಕರು ಹರತಾಳ ಹಿಡಿದರು, ಇದನ್ನು ನೋಡಿ ಮಿಲ್ ಮಾಲೀಕರೆಲ್ಲಾ ಲಾಕ್ ಔಟ್ ಘೋಷಿಸುವುದೆಂದು ನಿಶ್ಚಯಿಸಿದರು. ಖೇಡಾ ಸತ್ಯಾಗ್ರಹಕ್ಕಾಗಿ ಗಾಂಧೀಜಿ ಆಗ ಖೇಡಾಗೆ ಹೋಗಿದ್ದರು. ಅನಸೂಯಾ ಬಹನ್ ಗಾಂಧೀಜಿಗೆ ತಂತಿ ಕಳುಹಿಸಿ ಲಾಕ್‌ಔಟ್‌ನ ಸೂಚನೆ ನೀಡಿದರು. ಗಾಂಧೀಜಿ ತಕ್ಷಣ ಅಹಮದಾಬಾದ್‌ಗೆ ಬಂದರು. ಪಂಚಾಯಿತಿ ನಡೆಯುತ್ತಿರುವಾಗಿನ್ನೂ ಹರತಾಳ ಮಾಡುವುದು ತಪ್ಪಾಗಿತ್ತು. ಗಾಂಧೀಜಿ ತಿಳಿಯ ಹೇಳಿದರು. ನಂತರ ಕಾರ್ಮಿಕರು ಇದನ್ನರ್ಥ ಮಾಡಿಕೊಂಡರು. ಆದರೆ ಈಗ ಮಿಲ್ ಮಾಲೀಕರು ಹಠ ಮಾಡಿದರು. ಕೆಲವರು ಕಾರ್ಮಿಕರು ಹರತಾಳ

ಮಾಡಿದುದರಿಂದ 'ಪಂಚ್' ಅರ್ಥಹೀನವಾಯಿತು. ಆದುದರಿಂದ ಮಿಲ್ ಮಾಲೀಕರು ಪಂಚರ ಫೈಸಲೆಗೆ ಬದ್ಧರಾಗಿರಬೇಕಿರಲಿಲ್ಲ. ಇಷ್ಟಲ್ಲದೆ, ಶೇಕಡಾ ೨೦ ರಷ್ಟು ಹೆಚ್ಚಳದಿಂದ ಸಂತುಷ್ಟನಾಗದ ಕಾರ್ಮಿಕನನ್ನು ಸೇವೆಯಿಂದ ತೆಗೆದು ಹಾಕಲಾಗುವುದೆಂದೂ ಅವರು ಘೋಷಿಸಿದರು. ಗಾಂಧೀಜಿ ಮಿಲ್ ಮಾಲೀಕರಿಗೆ ತಿಳಿಯಹೇಳಲು ಬಹಳ ಪ್ರಯತ್ನಿಸಿದರಾದರೂ ಏನೂ ಪ್ರಯೋಜನವಾಗಲಿಲ್ಲ.

ಗಾಂಧೀಜಿ ಕಾರ್ಮಿಕರೊಂದಿಗೆ ಮಾತನಾಡಿದರು, ಅವರ ಪ್ರತಿನಿಧಿಗಳಾಗಿದ್ದ ಅನಸೂಯಾ ಬಹನ್ ಮತ್ತು ಶಂಕರಲಾಲ್ ಬ್ಯಾಂಕರ್ ಜೊತೆ ಮಾತನಾಡಿದರು. ಗಾಂಧೀಜಿ ಬಾಂಬೆ ಮತ್ತು ಅಹಮದಾಬಾದ್‌ನ ಕಾರ್ಮಿಕರ ವೇತನಶ್ರೇಣಿಗಳನ್ನು ಅಧ್ಯಯನ ಮಾಡಿದರು, ಹಾಗೆಯೇ ಮಿಲ್ ಮಾಲೀಕರ ಸಂಪಾದನೆ ಖರ್ಚಿನ ಪ್ರಮಾಣವನ್ನು ನೋಡಿದರು. ಪ್ರಥಮ ವಿಶ್ವಯುದ್ಧವಾದ ಮೇಲೆ ಮಿಲ್ ಮಾಲೀಕರಿಗೆ ಹೆಚ್ಚಿನ ಲಾಭ ಸಿಗುತ್ತಿತ್ತು. ಇವೆಲ್ಲದರ ಅಧ್ಯಯನ ನಡೆಸಿದ ನಂತರ ಕಾರ್ಮಿಕರ ಬೇಡಿಕೆಗಳ ಹೊರೆಯುನ್ನು ಸುಲಭವಾಗಿ ಭರಿಸುವ ಶಕ್ತಿ ಮಿಲ್ ಮಾಲೀಕರುಗಳಿಗಿದೆಯೆಂದು ಗಾಂಧೀಜಿಗೆ ಭಾಸವಾಯಿತು. ಕಾರ್ಮಿಕರಿಗೆ ೫೦ ಅಲ್ಲ, ಶೇಕಡಾ ೩೫ ಭಾಗ ಹೆಚ್ಚು ವೇತನ ಸಿಗಲೇಬೇಕೆಂದು ಅವರಿಗೆ ಅರಿವಾಯಿತು. ಕಾರ್ಮಿಕರ ನಡುವೆ ತನ್ನ ಅಭಿಪ್ರಾಯವನ್ನು ಇಡುವ ಮುಂಚೆ ಮಿಲ್ ಮಾಲೀಕರೊಡನೆ ನ್ಯಾಯಪೂರ್ಣವಾದ ಈ ಮಾತುಗಳನ್ನಾಡಬೇಕೆಂದು ಅವರು ಇಷ್ಟಪಟ್ಟರು. ಆದರೆ ಮಿಲ್ ಮಾಲೀಕರು ಹಠ ಹಿಡಿದರು. ಅವರ ಪ್ರಕಾರ ಮಾಲೀಕ–ಕಾರ್ಮಿಕರ ನಡುವೆ ತಂದೆ–ಮಗನ ಸಂಬಂಧ ಇದೆಯಾದುದರಿಂದ ಬೇರೆ ಯಾರೂ ಇದರಲ್ಲಿ ತಲೆ ಹಾಕಬಾರದು. ಹೊರಗಿನವರು ತಲೆಹಾಕುವುದರಿಂದ ತಪ್ಪು ಪದ್ಧತಿ ಜಾರಿಗೆ ಬರುತ್ತದೆ. ಕಾರ್ಮಿಕರು ಶೇಕಡಾ ೨೦ರ ಹೆಚ್ಚುವರಿಯಿಂದ ತೃಪ್ತರಾಗಬೇಕು ಎಂದರು. ಎರಡೂ ಪಕ್ಷದವರು ಹಠ ಹಿಡಿದರು. ಕಾರ್ಮಿಕರೆಲ್ಲರೂ ಒಟ್ಟಿಗೆ ತಮ್ಮ ಬೇಡಿಕೆಗಳ ಬಗ್ಗೆ ಒಮ್ಮತದಿಂದಿದ್ದರು, ಅನಸೂಯಾ ಬಹನ್ ಅವರ ಮುಖಂಡರಾಗಿದ್ದರು. ಮಿಲ್ ಮಾಲೀಕರು ಕೂಡ ಮಜ಼ದೂರ್ ಸಂಘಟನೆಯನ್ನು ಎದುರಿಸಲು ಅನುಕೂಲವಾಗುವಂತೆ ಸಂಘವೊಂದನ್ನು ರಚಿಸಿಕೊಂಡರು. ಮಾಲೀಕರ ಸಂಘದ ಅಧ್ಯಕ್ಷರಾಗಿ ಅಂಬಾಲಾಲ್ ಸಾರಾಭಾಯಿ ಚುನಾಯಿತರಾದರು. ಅಹಮದಾಬಾದ್ ನಗರದಲ್ಲಿ ಕೋಲಾಹಲ ಎದ್ದಿತು. ಕಾರ್ಮಿಕರ ಕೇಸ್ ಜೋರಾಗಿತ್ತು. ಆದರೆ ಇಡೀ ಘಟನೆಯೇ ನಾಜೂಕಾಗಿತ್ತು. ಅತ್ತ ಮಜ಼ದೂರ್ ಸಂಘದ ಮುಖಂಡಳು, ಇತ್ತ ತಮ್ಮ ಮಾಲೀಕರ ಸಂಘದ ಅಧ್ಯಕ್ಷ, ಅಲ್ಲದೆ ಇಬ್ಬರೂ ಗಾಂಧೀಜಿಯ ಆಪ್ತಮಿತ್ರರು. ಅಹಮದಾಬಾದ್ ನಗರ ಅಷ್ಟೇ ಅಲ್ಲದೆ ಪೂರ್ತಿ ಗುಜರಾತ್, ದೇಶಪೂರ್ತಿ ಈ ಸಂಗ್ರಾಮವನ್ನು ಗಮನಿಸಿ ನೋಡುತ್ತಿದ್ದರು. ೨೫ ದಿನಗಳ ಕಾಲ ಈ ಸೆಣಸಾಟ ನಡೆಯಿತು. ಒಪ್ಪಂದ ಒಡಮೂಡಲಿ ಎಂದು

ಗಾಂಧೀಜಿ ತೀವ್ರವಾಗಿ ಇಚ್ಛಿಸಿದರಾದರೂ ಮಿಲ್ ಮಾಲೀಕರುಗಳು ಕಾರ್ಮಿಕರ ಹಿತವನ್ನು ತಾವು ಮಾತ್ರ ಚೆನ್ನಾಗಿ ಬಲ್ಲರೆಂದು ಗಾಂಧೀಜಿಯವರ ಮಧ್ಯಸ್ಥಿಕೆ ಬೇಡವೆಂದು ದೃಢತೆಯಿಂದಿದ್ದರು. ಮಾಲೀಕರು ತಮ್ಮ ನಡತೆಯಲ್ಲಿ ಬದಲಾವಣೆ ತರದೇ ಇದ್ದಾಗ ಹೊಂದಾಣಿಕೆಯ ಆಸೆ ಕೊನೆಗೊಂಡು ಗಾಂಧೀಜಿ ಕೊನೆಯಲ್ಲಿ ಕಾರ್ಮಿಕರಿಗೆ ಹರತಾಳ ಮಾಡುವಂತೆ ಸಲಹೆ ನೀಡಿದರು. ಸಾವಿರಾರು ಕಾರ್ಮಿಕರು ಒಂದು ಕಡೆ ಸೇರಲು ಎಲ್ಲೂ ಜಾಗವಿರಲಿಲ್ಲವಾದುದರಿಂದ ಸಾಬರಮತಿಯ ಮರಳ ತೀರಯಲ್ಲಿ ಸಭೆ ಸೇರಿಸಲಾಯಿತು. ಹತ್ತಿರದಲ್ಲಿ ಒತ್ತಾದ ಜಾಲಿ ಮರವಿತ್ತು. ಅದರ ಕೆಳಗೆ ಕುಳಿತೇ ಗಾಂಧೀಜಿ ಕಾರ್ಮಿಕರಿಗೆ ಹರತಾಳದ ಸಲಹೆ ನೀಡಿದರು. ಕಾರ್ಮಿಕ ನಾಯಕರಿಗೆ ಹರತಾಳದ ಮೂಲ ನಿಯಮಗಳನ್ನು ಸ್ಪಷ್ಟವಾಗಿ ತಿಳಿಯ ಹೇಳಿದರು. ಅನಂತರ

೧. ಎಂತಹ ಸ್ಥಿತಿಯಲ್ಲೂ ಹಿಂಸೆಯನ್ನು ಆಶ್ರಯಿಸುವುದಿಲ್ಲ.
೨. ಕೆಲಸಕ್ಕೆ ಹೋಗಬಯಸುವ ಕಾರ್ಮಿಕರಿಗೆ ತೊಂದರೆಕೊಡುವುದಿಲ್ಲ.
೩. ಯಾರಿಂದಲೂ ಭಿಕ್ಷೆ ಬೇಡುವುದಿಲ್ಲ, ದಾನ ತೆಗೆದುಕೊಳ್ಳುವುದಿಲ್ಲ.
೪. ಹರತಾಳದ ಅವಧಿ ಎಷ್ಟೇ ಹೆಚ್ಚಾದರೂ ತಮ್ಮ ಧ್ಯೇಯಕ್ಕೆ ದೃಢವಾಗಿ ಅಂಟಿಕೊಂಡಿರುತ್ತೇವೆ. ಹಣ ಖಾಲಿಯಾದನಂತರ ಬೇರೆ ಯಾವುದಾದರೂ ಕೆಲಸ ಮಾಡಿ ಹೊಟ್ಟೆ ಹೊರೆಯುತ್ತೇವೆ. ಆದರೆ ಭಿಕ್ಷೆ ಬೇಡುವುದಿಲ್ಲ. ಒಪ್ಪಂದ ಮೂಡದೆ ಹರತಾಳ ಮುಗಿಸುವುದಿಲ್ಲ. ಎಂದು ನಿರ್ಣಯ ಕೈಗೊಂಡರು.

ಕಾರ್ಮಿಕರ ವಿಶಾಲ ಸಭೆಯಲ್ಲಿ ಈ ನಾಲ್ಕು ನಿಯಮಗಳನ್ನು ಜೋರಾಗಿ ಉಚ್ಚರಿಸಿ ಸ್ವೀಕರಿಸಲಾಯಿತು. ಬೇಡಿಕೆಗಳು ಈಡೇರುವವರೆವಿಗೂ ಕೆಲಸ ಮಾಡದಿರುವಂತೆ ನಿರ್ಣಯ ಕೈಗೊಂಡು ಹರತಾಳವನ್ನಾರಂಭಿಸಿದರು. ಈ ಸಂದರ್ಭದಲ್ಲಿ ವಲ್ಲಭಭಾಯಿ ಪಟೇಲ್ ಮತ್ತು ಶಂಕರ್ ಲಾಲ್ ಬ್ಯಾಂಕರ್ ಜೊತೆ ಗಾಂಧೀಜಿಯವರಿಗೆ ಕನಿಷ್ಠ ಪರಿಚಯವಾಗಿ ಸಂಬಂಧ ಜೀವನವಿಡೀ ಉಳಿಯಿತು. ಆ ಇಬ್ಬರು ಸಜ್ಜನ ವ್ಯಕ್ತಿಗಳೂ ಅನಸೂಯಾ ಬಹನ್ ಮತ್ತು ಕಾರ್ಮಿಕರ ಪಕ್ಷ ವಹಿಸಿದ್ದರು. ಈಗ ಕಾರ್ಮಿಕರು ಗಾಂಧೀಜಿಯವರ ಸಲಹೆ ಮತ್ತು ಮಾರ್ಗದರ್ಶನವನ್ನು ಒಪ್ಪಿಕೊಂಡರಾದುದರಿಂದ ಗಾಂಧೀಜಿ ಕೂಡ ಕಾರ್ಮಿಕರ ಸಮಗ್ರ ಜೀವನವನ್ನು ತಮ್ಮದಾಗಿಸಿಕೊಂಡರು. ಮೇಲ್ನೋಟದ ಮಾರ್ಗದರ್ಶನದಿಂದ ಕಾರ್ಮಿಕರ ಹಿತ ಸಾಧಿಸಲಾಗುವುದಿಲ್ಲವೆಂದು ಗಾಂಧೀಜಿಗೆ ತಿಳಿದಿತ್ತು. ದೃಢವಾದ ಸಹಾಯ ನೀಡವುದಕ್ಕೆ ಮುಂಚೆ ಅವರ ಪೂರ್ತಿ ಜೀವನವನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕು. ಇಲ್ಲವಾದರೆ ಈ ಬಡ ಕಾರ್ಮಿಕರು ದಾರಿ ತಪ್ಪಿ ಅವರು ಸಾಧಿಸಿದ ಸಫಲತೆ ಬೋಳಾಗಬಹುದೆಂದು ಗಾಂಧೀಜಿ

ಅರಿತಿದ್ದರು. ಕಾರ್ಮಿಕರ ನಡುವೆ ಈ ಪ್ರತಿಜ್ಞೆ ಕೈಗೂಡಿಸಿದ ನಂತರ ಗಾಂಧೀಜಿ ಅದನ್ನು ಅನುಸರಿಸಲು ಅನುಕೂಲವಾಗುವಂತೆ ನಾಲ್ಕು ನಿಯಮಗಳನ್ನು ರಚಿಸಿದ್ದರು. ಅವೆಂದರೆ,

೧. ಕಾರ್ಮಿಕರ ಮನೆಗಳಿಗೆ ಪ್ರತಿ ದಿನ ಭೇಟಿ ನೀಡಿ, ಅವರ ಸುಖ–ದುಃಖಗಳಲ್ಲಿ ಭಾಗವಹಿಸಿ, ಅವರ ಜೀವನ ಶೈಲಿಯ ಕೊರತೆಗಳನ್ನು ಸುಧಾರಿಸಲು ಪೂರ್ತಿ ಪ್ರಯತ್ನಿಸುವುದು.

೨. ಈ ಹೋರಾಟದ ನಡುವೆ ಆಚರಿಸುವ ರೀತಿಯನ್ನು ಕಾರ್ಮಿಕರಿಗೆ ಕಲಿಸಿ ಅವರ ಸಂದೇಹಗಳಿಗೆ ಪರಿಹಾರ ಒದಗಿಸುವುದು.

೩. ಹೋರಾಟದ ಸಿದ್ಧಾಂತಗಳನ್ನು ಪ್ರತಿದಿನ ನಿಗದಿತ ಸ್ಥಾನ ಮತ್ತು ಸಮಯದಲ್ಲಿ ಕಾರ್ಮಿಕರಿಗೆ ತಿಳಿಯಹೇಳುವುದು.

೪. ಪ್ರತಿ ದಿನ ಪತ್ರಿಕೆ ಹೊರಡಿಸಿ ಕಾರ್ಮಿಕರ ನಡುವ ಹಂಚಿ ಎಲ್ಲಾ ಕಾರ್ಮಿಕರಿಗೂ ಸತ್ಯಾಗ್ರಹದ ಮೂಲಕ ಸಿದ್ಧಾಂತಗಳನ್ನು ಅವರು ತಮ್ಮದಾಗಿಸಿಕೊಳ್ಳುವಂತೆ ಪ್ರಯತ್ನಿಸುವುದು.

ಈ ದೃಷ್ಟಿ ಹೊಂದಿ  ಅನಸೂಯಾ ಬಹನ್, ಶಂಕರಲಾಲ್ ಬ್ಯಾಂಕರ್, ಮತ್ತು ಭಗನಲಾಲ್ ಗಾಂಧೀ ಪ್ರತಿದಿನ ಕಾರ್ಮಿಕ ಕಾಲೋನಿಯಲ್ಲಿ ತಿರುಗಾಡ ತೊಡಗಿದರು. ಈ ಸಂಪರ್ಕ ಯಾತ್ರೆಯಲ್ಲಿ ಕಾರ್ಮಿಕರನ್ನು ಕುರಿತಂತೆ ಮಹತ್ವದ ಅಂಶಗಳು ತಿಳಿದವು. ಅವರ ದೈನಂದಿನ ಜೀವನವನ್ನು ಇವರುಗಳು ಮೊದಲ ಬಾರಿಗೆ ತಿಳಿದರು. ಈ ಕಾರ್ಯಕರ್ತರು ಕಾರ್ಮಿಕರ ಸಂಕಷ್ಟಗಳನ್ನು ಹಗುರ ಮಾಡುವಲ್ಲಿ ಕ್ರಿಯಾತ್ಮಕ ಮಾರ್ಗದರ್ಶನ ನೀಡಲು ಸಾಧ್ಯವಾಯಿತು. ಹೀಗೆ ಪ್ರತಿದಿನ ಭೇಟಿಯಾಗುತ್ತಿದ್ದುದರಿಂದ ಕಾರ್ಮಿಕರ ಸಾಹಸ ಅವರ ಮನೋಬಲಕ್ಕೆ ಬೆಂಬಲ ಸಿಗುತ್ತಿತ್ತು. ರೋಗಗ್ರಸ್ತ ಕಾರ್ಮಿಕರಿಗೆ ವೈದ್ಯರ ಸಹಾಯ ನೀಡುವ ಏರ್ಪಾಡು ಆಯಿತು. ಬೇರೆಯ ಕೆಲಸ ಮಾಡಬಯಸುವವರಿಗೆ ಚಿಕ್ಕ–ಪುಟ್ಟ ಕೆಲಸಗಳನ್ನು ಹುಡುಕಿ ಕೊಡಲಾಗುತ್ತಿತ್ತು. ಈ ತರಹ ಸುತ್ತಾಡುವುದಕ್ಕೆ ಮಹತ್ವ ಬೇರೆಯದಾಗಿತ್ತು. ಅದರಲ್ಲೂ ಕಾರ್ಮಿಕರಿಗಾಗಿ ಕೆಲಸ ಮಾಡುವ ಈ ಮಹಿಳೆಯರಿಗೆ ಕಾರ್ಮಿಕರ ಮಾನಸಿಕ ಸ್ಥಿತಿಯ ಪೂರ್ಣ  ಕಲ್ಪನೆ ಸಿಗುತ್ತಿತ್ತು. ನಂತರ ಕಾರ್ಮಿಕರಲ್ಲಿದ್ದ ಕೀಳು ಭಾವನೆ ತಂತಾನೆ ಕಡಿಮೆಯಾಗತೊಡಗಿತು. ಅವರಲ್ಲಿ ಆತ್ಮವಿಶ್ವಾಸ ಬೆಳೆಯಿತು. ಬೈಗೂ–ಬೆಳಗಿನ ಈ ಭೇಟಿಯಲ್ಲದೆ ಕಾರ್ಮಿಕರಿಗೆ ಅವಶ್ಯಕತೆ ಬಿದ್ದಾಗೆಲ್ಲ ಅರ್ಧರಾತ್ರಿಯಲ್ಲೂ ಅನಸೂಯಾ ಬಹನ್ ಮನೆಗೆ ಹೋಗುವ ಧೈರ್ಯ ಬಂತು. ಹಾಗಿಲ್ಲದೆ ಅನಸೂಯಾ ಬಹನ್ ಕೂಡ ಅವರಿಗೆ ಪೂರ್ತಿ ಸಹಾಯ ಮಾಡಲು ತತ್ಪರರಾಗಿರುತ್ತಿದ್ದರು. ಸಬರಮತಿಯ ದಡದಲ್ಲಿ ದೊಡ್ಡ ಜಾಲಿ ಮರದ ಕೆಳಗೆ ಪ್ರತಿ ದಿನ ಸಂಜೆ ಸಾವಿರಾರು ಮಂದಿ ಕಾರ್ಮಿಕರು ಬಂದು ಸೇರುತ್ತಿದ್ದರು. ಗಾಂಧೀಜಿ

ಕೈಬರೆಹದ ಪ್ರತಿಗಳನ್ನು ಹಂಚುತ್ತಿದ್ದರು ಹಾಗೂ ಅವರುಗಳ ಪ್ರತಿಜ್ಞೆಯನ್ನು ಮತ್ತೆ ಮತ್ತೆ ನೆನಪು ಮಾಡಿಕೊಡುತ್ತಿದ್ದರು. ಸ್ವಾಭಿಮಾನ ಮತ್ತು ಶಾಂತಿಯಿಂದ ತಮ್ಮ ಬೇಡಿಕೆಗಳಿಗಾಗಿ ಸ್ಥಿರವಾಗಿ ಹೋರಾಡುವ ಕರ್ತವ್ಯವನ್ನು ಕಾರ್ಮಿಕರಿಗೆ ತಿಳಿ ಹೇಳುತ್ತಿದ್ದರು.

ಪ್ರತಿದಿನವೂ ಕಾರ್ಮಿಕರ ಶಾಂತ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಹೊರಡುತ್ತಿತ್ತು. ಅವರ ಬಿಳಿಯ ಬಾವುಟದ ಮೇಲೆ 'ಏಕ್‌ಟೇಕ್' ಅಂದರೆ ಪ್ರತಿಜ್ಞಾಪಾಲನೆ ಎಂದು ಬರೆದಿರುತ್ತಿತ್ತು. ದೂರ-ದೂರದ ಕಾರ್ಮಿಕರೂ ಪ್ರತಿದಿನ ಮೆರವಣಿಗೆಯಲ್ಲಿ ಹೊರಡುತ್ತಿದ್ದರು. ಸಾಯುವೆವು ಆದರೆ ಪ್ರತಿಜ್ಞೆಯಲ್ಲಿ ಸ್ಥಿರವಾಗಿರುತ್ತೇವೆ ಎಂಬ ಭಾವನೆಯಿಂದಾಗಿ ಹರತಾಳ ನಡೆದೇ ಇತ್ತು. ಆದರೆ ೧೫ ದಿನಗಳ ಲಂಬಿತ ಹರತಾಳವಾದ ನಂತರ ಕಾರ್ಮಿಕರ ಹಣ ಮುಗಿಯುತ್ತಾ ಬಂತು. ಹಾಗಾಗಿ ಸಂಜೆ ಸಭೆಗಳಲ್ಲಿ ಗೈರುಹಾಜರಾಗತೊಡಗಿದರು. ಒಬ್ಬ ದುಡುಕಿನ ಕಾರ್ಮಿಕ ಬೈದೇಬಿಟ್ಟ 'ಗಾಂಧೀಜಿ ಮತ್ತು ಅನುಸೂಯ ಬಹನ್‌ರ ಹರತಾಳದಿಂದ ಏನು ಸಿಗುತ್ತೆ, ಕಾರಲ್ಲಿ ಸುತ್ತುತ್ತಾರೆ, ದಿವಸಾ ಮೂರು ಹೊತ್ತು ಹೊಟ್ಟೆ ತುಂಬಾ ತಿಂತಾರೆ, ಸಭೆಗೆ ಹೋದರೆ ಕಾರ್ಮಿಕರ ಹೊಟ್ಟೆ ತುಂಬುತ್ತಾ?' ಎಂದು.

ಗಾಂಧೀಯವರಿಗೂ ಈ ಮಾತು ಕೇಳಿಬಂತು, ರಾತ್ರಿಯೆಲ್ಲಾ ಉದ್ವಿಗ್ನತೆಯಲ್ಲಿ ಕಳೆದರು. ಮಾರನೆಯ ದಿನ ಸಭೆಯಲ್ಲಿ ಗಾಂಧೀಜಿ ಬಾಯಿಂದ ಸಹಜವಾಗಿ ಈ ಮಾತು ಹೊರಟಿತು. 'ಕಾರ್ಮಿಕರು ಧೈರ್ಯದಿಂದ ಹರತಾಳ ಮುಂದುವರಿಸಿ ಮತ್ತು ತೃಪ್ತಿಕರವಾದ ಒಪ್ಪಂದವಾಗುವವರೆಗೂ ನಾನು ಊಟ ಮಾಡುವುದಿಲ್ಲ, ಮೋಟರಿನಲ್ಲಿ ಕೂರುವುದಿಲ್ಲ' ಎಂದರು.

ಕಾರ್ಮಿಕರಲ್ಲಿ ಮೌನ ಆವರಿಸಿತು ಮತ್ತು ಅನಸೂಯಾ ಬಹನ್ ಕಣ್ಣುಗಳಿಂದ ಕಣ್ಣೀರಿನ ಪ್ರವಾಹ ಹೊರಟಿತು. ಕಾರ್ಮಿಕರು ನುಡಿದರು, 'ನೀವಲ್ಲ, ನಾವು ಉಪವಾಸ ಮಾಡುತ್ತೇವೆ. ನಾವು ನಮ್ಮ ಪ್ರತಿಜ್ಞೆಯನ್ನು ಪಾಲಿಸುತ್ತೇವೆ. ನೀವು ಉಪವಾಸ ಮಾಡಿದಿರೆಂದರೆ ಅನ್ಯಾಯವಾಗುತ್ತೆ.'

ಗಾಂಧೀಜಿ ಹೇಳಿದರು: 'ನೀವು ಉಪವಾಸ ಮಾಡುವ ಅಗತ್ಯವಿಲ್ಲ, ನೀವು ನಿಮ್ಮ ಪ್ರತಿಜ್ಞೆಯಲ್ಲಿ ಸ್ಥಿರವಾಗಿದ್ದರೆ ಸಾಕು. ನಮ್ಮ ಬಳಿ ಹಣ ಖರ್ಚಾಗಿ ಹೋಗಿದೆ ಅಂತ ನನಗೂ ಗೊತ್ತು. ಆದರೆ ಯಾರ ದಾನ, ಭಿಕ್ಷೆ ಪಡೆದು ನಾವು ನಮ್ಮ ಹೋರಾಟ ನಡೆಸಬೇಕಾಗಿಲ್ಲ. ನಿಮಗೆ ಯಾವ ಕೆಲಸ ಸಿಕ್ಕರೂ ತೆಗೆದುಕೊಂಡು ಮಾಡಿ. ನಿಮ್ಮ ಹೆಂಡತಿ-ಮಕ್ಕಳಿಗೆ ಕಷ್ಟವಾಗಬಾರದು, ಒಪ್ಪಂದವಾದ ಮೇಲೆ ನನ್ನ ಉಪವಾಸ ಮುರಿಯುತ್ತದೆ."

ಆಗ ಆಶ್ರಮದಲ್ಲಿ ಮನೆಗಳು ಕಟ್ಟುವುದಕ್ಕೆ ತಳಹದಿ ಹಾಕಲು ಅಗೆಯುತ್ತಿದ್ದರು. ಮರಳು ತುಂಬುವ ಕೆಲಸ ಕೆಲಸಗಾರರೇ ಮನೆ ಕಟ್ಟುವ ಮಾಡಲಿ ಎಂದು ಆಗ

ಗಾಂಧೀಜಿ ನಿರ್ಣಯ ತೆಗೆದುಕೊಂಡರು. ಕೋಮಲ ಶರೀರದ ಅನಸೂಯಾ ಬಹನ್ ನದಿಯ ಮರಳಿನ ಮೊದಲ ಬಾಂಡಲಿಯನ್ನು ತನ್ನ ತಲೆಯ ಮೇಲೆ ಹೊತ್ತರು. ಆಗ ಸಾವಿರಾರು ಜನ ಕೆಲಸಗಾರರು ಮನೆಕಟ್ಟುವ ಕೆಲಸ ಮಾಡಲಾರಂಭಿಸಿದರು. ಹರತಾಳ ಮಾಡುತ್ತಿದ್ದವರಲ್ಲಿ ಪುನಃ ಉತ್ಸಾಹ ಮೂಡಿ ಬಂತು. ಆಶ್ರಮದ ಬಳಿ ಕೂಲಿ ಕೊಡುವ ಹಣ ಮುಗಿಯಿತು. ಕಾರ್ಮಿಕರು ಇನ್ನೂ ಹೆಚ್ಚಾಗಿ ಬರಲಾರಂಭಿಸಿದರು.

ಈ ಉಪವಾಸ ಸತ್ಯಾಗ್ರಹದಲ್ಲಿ ಒಂದು ಕೊರತೆ ಇತ್ತು. ಕಾರ್ಮಿಕರಲ್ಲಿ ಶಿಸ್ತು ಮತ್ತು ಧೈರ್ಯ ಕಡಿಮೆಯಾದದನ್ನು ನೋಡಿ ಈ ಉಪವಾಸ ಕೈಗೊಂಡಿದ್ದ ಕಾರ್ಮಿಕರು ಸ್ವೇಚ್ಛೆಯಿಂದ ಗಾಂಧೀಜಿಯವರ ಮುಂದಾಳತ್ವ ಬೇಕೆಂದು ಬಯಸಿದ್ದರಷ್ಟೇ. ಅದರ ನಿಯಮ ಹಾಗೂ ಶರತ್ತುಗಳನ್ನು ಪಾಲಿಸಬೇಕಾಗಿತ್ತು. ಅದಾದ ನಂತರ ಧೃತಿಗೆಟ್ಟು ನಿಯಮೋಲ್ಲಂಘನೆ ಮಾಡುವುದರಿಂದ, ಪ್ರತಿಜ್ಞಾ–ಭಂಗ ಮಾಡುವುದು ಇತ್ಯಾದಿಗಳಿಂದ ಅಲ್ಲಿಯವರೆಗೆ ಮಾಡಿದ್ದ ತಪಸ್ಸು, ಹಣ ಎಲ್ಲಕ್ಕೂ ದ್ರೋಹ ಬಗೆದಂತಾಗುತ್ತಿತ್ತು. ತಮ್ಮ ನಂಬಿಕೆಯ ಮನುಷ್ಯರೇ ಹೀಗೆ ವ್ಯವಹರಿಸಿದುದರಿಂದ ಗಾಂಧೀಜಿಗಾದ ದುಃಖಕ್ಕೆ ಪ್ರಾಣತ್ಯಾಗದ ಒಂದೇ ಮಾರ್ಗ ಉಳಿದಿತ್ತು. ಕಾರ್ಮಿಕರಿಗಾಗಿ ಈ ಉಪವಾಸ ಸರಿಯಾಗಿಯೇ ಇತ್ತು. ಇದರ ಸಂಕಷ್ಟಗಳ ಹೊರೆ ಮಿಲ್ ಮಾಲೀಕರ ಮೇಲೂ ಬೀಳುತ್ತಿತ್ತು. ಹರತಾಳದಿಂದಲೇ ಮಿಲ್ ಮಾಲೀಕರ ಹೃದಯ ಪರಿವರ್ತನೆ ಆಗಬೇಕಾಗಿತ್ತು. ಅವರಿಗೆ ಗಾಂಧೀಜಿಯ ಬಗೆಗೆ ಗೌರವ ಇತ್ತು. ಉಪವಾಸ ಹೊರೆ ಅವರ ತಲೆಯ ಮೇಲೆ ಬಿತ್ತು ಅನ್ನಲು ಅವರು ಗಾಂಧೀಜಿಗೆ ವಿರುದ್ಧವಾಗಿ ಅಪರಾಧವನ್ನೇನೂ ಮಾಡಿರಲಿಲ್ಲ. ಆದರೂ ಗಾಂಧೀಜಿಯ ಉಪವಾಸವನ್ನು ಅವರು ಕಡೆಗಣಿಸುವುದಕ್ಕೂ ಆಗುತ್ತಿರಲ್ಲಿಲ್ಲ. ಉಪವಾಸ ತೀವ್ರ ಪ್ರೇಮದ ಆಯುಧವಾಗಿರುತ್ತಿತ್ತು. ಪ್ರೀತಿ ಇರುವ ಕಡೆ ಮಾತ್ರ ಉಪವಾಸ ಮಾಡುವವನ ಶರೀರದ ಕಷ್ಟವನ್ನು ನೋಡಿ ಎದುರಿಗಿರುವವನಿಗೆ ಮಾನಸಿಕ ಕಷ್ಟ ಉಂಟಾಗುತ್ತದೆ. ಮನೆಯಲ್ಲಿ ಅಮ್ಮ–ಅಪ್ಪ ಯಾರಾದರೂ ಊಟ ಮಾಡದೆ ಇದ್ದರೆ ಮಕ್ಕಳಿಗೆ ಕಷ್ಟ ಆಗುವ ಹಾಗೆ. ಆಗ ಕ್ಷಮಾಯಾಚನೆ ಮಾಡಿ, ಇಲ್ಲವೆ ಅವರ ಇಷ್ಟವನ್ನು ಪೂರೈಸುವುದಕ್ಕೆ ಅಣಿ ಮಾಡಿಕೊಳ್ಳುವಂತೆಯೇ ರಾಜಕೀಯ ಇಲ್ಲವೇ ಸಾಮಾಜಿಕ ಸಮಸ್ಯೆಗಳು ಬಂದಾಗ ಜೊತೆಗಾರರ ಎದುರು ಉಪವಾಸದ ಮೂಲಕ ಪ್ರೇಮದ ಆಗ್ರಹ ಶುರುವಾಗುತ್ತದೆ. ಈಚೆಗೆ ಚಿಕ್ಕ–ಪುಟ್ಟ ನೇತಾರರು ಗಾಂಧೀಜಿಯ ಅನುಕರಣೆ ಮಾಡಿ ಉಪವಾಸದ ಬೆದರಿಕೆ ಹಾಕುತ್ತಾರೆ. ಸುಳ್ಳುಸುಳ್ಳೇ ಹರತಾಳ ಮಾಡಿಸುತ್ತಾರೆ. ಆ ತರಹೆಯ ಢೋಂಗಿ ಜನ ರಾತ್ರಿ ಕತ್ತಲೆಯಲ್ಲಿ ಆಹಾರ ಸೇವಿಸುತ್ತಾರೆ. ಎಷ್ಟೋ ಜನ ಉಪವಾಸ ಮಾಡಿದರೂ ಮನಸ್ಸಿನಲ್ಲಿ ಎದುರುಗಡೆಯುವನ ಬಗ್ಗೆ ಪ್ರೀತಿಯುಲ್ಲ, ಬದಲಾಗಿ ದ್ವೇಷ ಕೋಪ

ಇಟ್ಟುಕೊಂಡಿರುತ್ತಾರೆ. ಅವರ ಹೆಸರು ಕೆಡಿಸುವ ಉದ್ದೇಶ ಇರುತ್ತದೆ, ಅಂತಹ ಉಪವಾಸಗಳ ಫಲವಾಗಿ ಕೆಟ್ಟ ಪರಿಣಾಮ ಬರುತ್ತದೆ, ಇದು ಬೆದರಿಕೆ ಹಾಕುವ ಒಂದು ಅಯೋಗ್ಯ ಕ್ರಮ, ಎದುರು ಪಕ್ಷವನ್ನು ವಿವಶಗೊಳಿಸುವ ಒಂದು ಕೆಟ್ಟ ಕ್ರಮವಾಗಿರುತ್ತದೆ, ಗಾಂಧೀಜಿ ತನ್ನ ದೇಶದ ಜನರನ್ನು ಅಂತಃಕರಣದಿಂದ ಪ್ರೀತಿಸುತ್ತಿದ್ದರು. ಅವರ ದುಃಖ–ಕಷ್ಟಗಳನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದರು. ಅವರ ಜೀವನದಲ್ಲೆಲ್ಲೂ ವಂಚನೆ ಇರಲಿಲ್ಲ. ಅವರು ಯೋಚಿಸಿದ್ದನ್ನೇ ಮಾಡುತ್ತಿದ್ದರು. ಅವರ ಮಾತು ಕರ್ತವ್ಯದಲ್ಲಿ ವ್ಯತ್ಯಾಸ ಇರಲಿಲ್ಲ.

ಈ ಹರತಾಳದಲ್ಲಿ ಗಾಂಧೀಜಿ ಕಾರ್ಮಿಕರ ನೇತೃತ್ವ ಮಾಡುತ್ತಿದ್ದಾಗಲೂ ಮಿಲ್ ಮಾಲೀಕರ ಬಗೆಗೂ ಅವರಿಗೆ ಪ್ರೀತಿ ಇತ್ತು. ಅವರ ಮೇಲೆ ಅವರು ಅನಾವಶ್ಯಕವಾದ ಒತ್ತಡ ಹಾಕಲು ಇಷ್ಟಪಡುತ್ತಿರಲಿಲ್ಲ. ಉಪವಾಸ ಹರತಾಳದಿಂದಾಗಿ ನಗರದಲ್ಲಿ ಉದ್ವೇಗ ಹೆಚ್ಚಾಗುತ್ತಿತ್ತು. ಅಂಬಾಲಾಲ್ ಸಾರಾಭಾಯಿ ದೃಢವಾಗಿ ಹರತಾಳವನ್ನ ಎದುರಿಸಲಿಚ್ಛಿಸುತ್ತಿದ್ದರು. ಅವರ ಪ್ರೀತಿಯ ಅಕ್ಕ ಕಾರ್ಮಿಕರ ಹಿತಕ್ಕಾಗಿ ಬಲಿದಾನ ಮಾಡುವುದಕ್ಕೆ ಮುಂದಾಗಿದ್ದಳು. ಅಕ್ಕ–ತಮ್ಮ ಇವರ ನಡುವೆ ಭಯಂಕರ ಮನಃಸ್ತಾಪಗಳು ಬಂದಿದ್ದವು. ಗಾಂಧೀಜಿ ಈ ಕಡುಕಷ್ಟದ ಸ್ಥಿತಿಯನ್ನ ಅರ್ಥಮಾಡಿಕೊಂಡರು. ಅಕ್ಕ–ತಮ್ಮ ಇವರ ಪ್ರೀತಿಯಲ್ಲಿ ಬಿರುಕು ಉಂಟಾಗುವುದು ಗಾಂಧೀಜಿಗೆ ಇಷ್ಟವಿರಲಿಲ್ಲ. ಈ ದ್ವೇಷವನ್ನು ತೆಳುವಾಗಿಸಲು ಗಾಂಧೀಜಿ ಅಂಬಾಲಾಲ್ ಸಾರಾಭಾಯಿ ಮತ್ತು ಅನುಸೂಯ ಬಹನ್ ಸಾರಾಭಾಯಿ ಅವರನ್ನು ಕಸ್ತೂರ್‌ಬಾ ಮತ್ತು ತಮ್ಮ ಜೊತೆ ಪ್ರತಿದಿನವೂ ಮಧ್ಯಾಹ್ನದ ಊಟಕ್ಕೆ ಕರೆಯಲು ಶುರುಮಾಡಿದರು. ಕೊನೆಯ ಪಕ್ಷ ಅಷ್ಟು ಹೊತ್ತಿನ ಮಟ್ಟಿಗಾದರೂ ಅಕ್ಕ–ತಮ್ಮ ಹರತಾಳದಿಂದುಂಟಾದ ಮನಸ್ತಾಪವನ್ನು ಮರೆತು ನಿರಾಂತಕವಾಗಿ ಒಂದು ಕಡೆ ಪ್ರೇಮದಿಂದ ಭೇಟಿಯಾಗಬಹುದಾಗಿತ್ತು. ಈ ಭೋಜನದ ಹೊತ್ತಿನಲ್ಲಿ ಅನಸೂಯಾ ಬಹನ್ ಬಡಿಸುತ್ತಿದ್ದಳು. ಅಂಬಾಲಾಲ್ ಊಟ ಮಾಡುತ್ತಿದ್ದರು. ಪ್ರತಿದ್ವಂದ್ವಿಯ ವಿಷಯದಲ್ಲಿ ನಿಮಗೆ ವೈಚಾರಿಕ ಭಿನ್ನತೆ ಇದ್ದರೂ ಶತ್ರುತ್ವ ಇರುವ ಅಗತ್ಯವೇನಿಲ್ಲ. ಗಾಂಧೀಜಿಯವರ ಜೀವನವಿಡೀ ಈ ಗುರಿಯ ವಿಶೇಷತೆ ಇತ್ತು. ಈ ತೆರನಾದ ಸಹೋದರತ್ವದ ಜೊತೆಗೆ ಪೂರ್ತಿ ನಗರ ಗಾಂಧೀಜಿಯ ಉಪವಾಸದಿಂದಾಗಿ ಚಿಂತಿತವಾಗಿತ್ತು. ಅನೇಕ ಚರ್ಚೆಗಳು ನಡೆದು ಕೊನೆಗೆ ಗುಜರಾತಿಯ ಹೆಸರಾಂತ ಸಾಹಿತಿ ಶ್ರೀ ಆನಂದಶಂಕರ ಧ್ರುವ ಅವರು ಮಿಲ್ ಮಾಲೀಕರ ಸಂಘ ಮತ್ತು ಕಾರ್ಮಿಕರ ನಡುವೆ ಮಧ್ಯಸ್ಥಿಕೆ ನಡೆಸಿದರು. ಅವರ ಅಧ್ಯಕ್ಷತೆಯಲ್ಲಿ ಒಂದು ಪಂಚಾಯತಿ ರಚಿತವಾಯಿತು. ಪಂಚಾಯತರು ಸಮಸ್ಯೆಯನ್ನು ಕುರಿತಾಗಿ ವಿಶದವಾಗಿ ಅಧ್ಯಯನ ನಡೆಸಿದರು. ಗಾಂಧೀಜಿಯವರ ಶೇಕಡಾ ೩೫ರ ಹೆಚ್ಚಳದ ಬೇಡಿಕೆ ಸರಿಯಾಗಿದೆ. ಎಂದು ಅಭಿಪ್ರಾಯಪಟ್ಟರು. ಈ ತೆರನಾಗಿ ಕಾರ್ಮಿಕ ಬೇಡಿಕೆಗಳು ಮಂಜೂರಾದವು.

೨೩ ದಿನಗಳ ಸಂಪು ಮುಗಿಯಿತು. ಗಾಂಧೀಜಿಯವರು ಮೂರು ದಿವಸಗಳ ಉಪವಾಸ ಮುಗಿಸಿದರು. ಮಾಲೀಕರು ಸಂತೋಷಗೊಡು ಮಿಠಾಯಿ ಹಂಚಿದರು. ಕಾರ್ಮಿಕರು ಮತ್ತೆ ಕೆಲಸ ಆರಂಭಿಸಿದರು. ಮೆಷಿನ್‌ಗಳ ಧ್ವನಿ ಅಹಮದಾಬಾದ್‌ನಲ್ಲಿ ಗುಂಜಾರವ ಮಾಡಲಾರಂಭಿಸಿತು.

ಈ ಎಲ್ಲ ಘಟನೆಯಲ್ಲಿ ಎರಡು–ಮೂರು ವಿಶೇಷತೆಗಳಿವೆ. ಅಹಮದಾಬಾದ್ ನಗರ ನಿವಾಸಿಗಳು ಮತ್ತು ಸರಕಾರ ಇಬ್ಬರೂ ಈ ಉಪವಾಸ ಸತ್ಯಾಗ್ರಹದಿಂದ ನಗರದಲ್ಲಿ ಅಶಾಂತಿ ಅರಾಜಕತೆ ಹರಡಬಹುದೆಂದು ಹೆದರಿದ್ದರು. ಹತ್ತು ಸಾವಿರ ಕಾರ್ಮಿಕರು ನಗರನಿವಾಸಿಗಳ ಪ್ರಾಣ–ಆಸ್ತಿ ಇವುಗಳಿಗೆ ಅಪಾಯ ತಂದೊಡ್ಡಬಹುದೆಂದು ಭಾವಿಸಿದ್ದರು. ಅಂದುಕೊಂಡಿದ್ದುದಕ್ಕೆ ವಿರುದ್ಧವಾಗಿ ಪೂರ್ತಿ ಶಾಂತಿಯಿಂದ ಕೂಡಿದ, ಗಲಾಟೆ ಇಲ್ಲದೆ ಮೆರವಣಿಗೆಗಳು ಹೊರಟವು, ಸಂಪು ನಡೆಯಿತು. ಹಸಿವಿನಿಂದ ಪೀಡಿತರಾದ ಕಾರ್ಮಿಕರು ಇಷ್ಟೊಂದು ಸಂಯಮದಿಂದ ವರ್ತಿಸಿದ್ದನ್ನು ನೋಡಿ ನಗರದ ಸಾಮಾನ್ಯ ಜನರು ಕೂಡ ಚಕಿತರಾಗಿದ್ದರು. ಎರಡನೆಯದಾಗಿ ಇಷ್ಟು ಜನ ನಿರಕ್ಷರಸ್ಥ, ಅಸಭ್ಯರೆಂದು ಪರಿಗಣಿತರಾದ ಕಾರ್ಮಿಕರಿಗೆ ಗಾಂಧೀಜಿ ಪ್ರತಿಜ್ಞೆ ಮೇಲ್ನೋಟಕ್ಕಾಗಿರುವುದಿಲ್ಲ, ದೇವರನ್ನು ಸಾಕ್ಷಿಯಾಗಿಟ್ಟುಕೊಂಡೇ ಮನುಷ್ಯ ಯಾವ ಸಿದ್ಧಿಯನ್ನೂ ಪಡೆಯಲು ಸಾಧ್ಯ. ಅದನ್ನು ಮುರಿದಲ್ಲಿ ಒಂದು ರೀತಿಯ ಕಳ್ಳತನ ಎಸಗಿದಂತೆ, ದೇವರಿಗೆ ದ್ರೋಹ ಬಗೆದಂತೆ, ಕಾರ್ಮಿಕರು ತಮ್ಮ ಪ್ರತಿಜ್ಞೆಯ ಬಗ್ಗೆ ಉದಾಸೀನತೆ ತೋರಿದ ತಕ್ಷಣ ಗಾಂಧೀಜಿ ತನ್ನ ಪ್ರಾಣವನ್ನೇ ಮುಡಿಪಿಟ್ಟು ಪ್ರತಿಜ್ಞಾಪಾಲನೆಯ ಮಹತ್ವವನ್ನು ಸಿದ್ಧಿಸಿ ತೋರಿದರು. ಇಂತಹ ಶುದ್ಧ ಪ್ರತಿಜ್ಞೆಯಿಂದ ನೈತಿಕ ಶಕ್ತಿ ಜಾಗೃತವಾಗುತ್ತದೆ. ಹಾಗೂ ಎಂತಹ ಕಷ್ಟದಿಂದಲೂ ಅದು ಮನುಷ್ಯನನ್ನು ಪಾರುಮಾಡುತ್ತದೆ. ಮೂರನೆಯದಾಗಿ, ಹಣ ಮುಗಿದು ಹೋದಾಗ, ಕೆಲಸ ಬಿಟ್ಟು ಹೋದಾಗಲೂ ಭಿಕ್ಷೆ ಬೇಡುವುದು ಅಧರ್ಮ, ಭಿಕ್ಷೆ ಬೇಡಲು ಅವಕಾಶಕೊಟ್ಟರೆ ಮನುಷ್ಯತ್ವಕ್ಕೆ ಕೆಟ್ಟ ಹೆಸರು ಬರುತ್ತದೆ. ಈ ಹರತಾಳದಲ್ಲಿ ಸಾವಿರಾರು ಮಕ್ಕಳು ಹಸಿವನ್ನು ತಡೆದುಕೊಂಡರು, ಯಾರೂ ಭಿಕ್ಷೆ ಬೇಡಲಿಲ್ಲ. ೨೩ ದಿನಗಳ ಕಾಲ ಈ ಧರ್ಮಯುದ್ಧದಲ್ಲಿ ಸಾಮಾನ್ಯ ಕಾರ್ಮಿಕನಲ್ಲೂ ಮಾನ–ಮರ್ಯಾದೆ, ಆತ್ಮಗೌರವ ಒಡಮೂಡಿತು. ಕಾರ್ಮಿಕ–ಮಾಲೀಕ ಇಬ್ಬರೂ ಈ ದೇಶದ ನಾಗರಿಕರೇ, ಸಮಾಜ ವಿಕಾಸದಲ್ಲಿ ಇಬ್ಬರೂ ಭಾಗಿಗಳು, ಕಾರ್ಖಾನೆ, ಅದರ ಸಂಪತ್ತು ರಾಷ್ಟ್ರದ ಸಂಪತ್ತು, ಅದನ್ನು ಹಾಳುಮಾಡುವುದು ದೇಶದ್ರೋಹ, ಮಾಲೀಕ ಮ್ಯಾನೇಜಮೆಂಟ್ ಜೊತೆ ವಿಚಾರಭೇದ ಇರಬಹುದು. ಆದರೆ ಒಡೆಯುವುದು ಮುರಿಯುವುದು ಬೈಯುವುದು ತಪ್ಪು. ಈ ಹರತಾಳದ ಮೂಲಕ ಗಾಂಧೀಜಿ ಕಾರ್ಮಿಕರು, ಮಾಲೀಕರು ಮತ್ತು ಸಾಮಾನ್ಯ ನಾಗರಿಕರಿಗೆ ಈ ವಿಷಯಗಳನ್ನು ತಿಳಿಸಿಕೊಟ್ಟರು, ಕಲಿಸಿದರು.

ಕೊನೆಯಲ್ಲಿ ೩೫% ಬೇಡಿಕೆಯನ್ನು ಕುರಿತು ಸಾಕಷ್ಟು ಚರ್ಚೆ ನಡೆಯಿತು.

ಮಜ್ದೂರರು ಒಂದೇ ಸಾರಿ ೫೦% ವೃದ್ಧಿ ಕೇಳಬೇಕು ಅಂತ ಇಷ್ಟಪಟ್ಟಿದ್ದರು. ಆದರೆ ಗಾಂಧೀಜಿ ಅವರಿಗೆ ಎಲ್ಲವನ್ನು ಗುಣಿತ ಮಾಡಿ ನೋಡಿದರೆ ೩೫% ನ್ಯಾಯೋಚಿತ ಅಂತ ತಿಳಿಸಿ ಹೇಳಿದರು. ಅದಕ್ಕೆ ಹೆಚ್ಚಿಗೆ ಬೇಡಿದರೆ ಮಿಲ್ ಮಾಲೀಕರಿಗೆ ಅನ್ಯಾಯವಾಗುತ್ತೆ ಅಂದರೆ ಆ ಕಡೆ ನೋಡಿದರೆ ಮಿಲ್ ಮಾಲೀಕರು ೨೦% ಕೊಡಲು ಸಿದ್ಧವಾಗಿದ್ದರೂ, ಇನ್ನು ೧೫% ಗಾಂಧೀಜಿಗಾಗಿ ಕೊಡ್ತೇವೆ ಅಂದರು. ಪ್ರಾಮಾಣಿಕತೆಯಿಂದ ನ್ಯಾಯಕ್ಕಾಗಿ ಮಾಡಿದ ಹೋರಾಟ ಇದು. ಆದ್ದರಿಂದ ಅಲ್ಲಿ ದಯೆ, ಮಮತೆ, ಕೃಪೆ ಇವುಗಳಿಗೆ ಎಲ್ಲೂ ಅವಕಾಶ ಇರಲಿಲ್ಲ. ಇದರಿಂದ ಕಾರ್ಮಿಕರ ಅಪಮಾನವಾಗುತ್ತಿತ್ತು. ಕೊನೆಗೆ ಕೆಲವರು ಕಾರ್ಮಿಕರು ಹರತಾಳದ ದಿನದ ವೇತನವೂ ಅವರಿಗೆ ಬರಬೇಕೆಂದು ಇಷ್ಟಪಟ್ಟಿದ್ದರು. ಮಜ್ದೂರರು ೨೦% ವೃದ್ಧಿಯುನ್ನು ತಿರಸ್ಕರಿಸಿದುದ್ದರಿಂದ ಲಾಕ್‌ಔಟ್ ಹರತಾಳ ಅನಿವಾರ್ಯವಾಗಿತ್ತು. ೨೫ ದಿನಗಳು ಕಷ್ಟ ಸಹಿಸುವುದು ಅನಿವಾರ್ಯವಾಗಿತ್ತು. ೩೫% ನ ಲಾಭವೂ ದೊರಕಿತಲ್ಲ ಎಂದು ಗಾಂಧೀಜಿ ಅವರಿಗೆ ತಿಳಿಯಹೇಳಿದರು. ಲಾಕ್‌ಔಟ್ ಅವಧಿಗಾಗಿ ಸಂಬಳ ಕೇಳಿದಿರಿ ಅಂದರೆ ಮಾಲೀಕನ ಹಣದಲ್ಲಿ ಈ ಹೋರಾಟ ನಡೆಯಿತು ಅಂತ ಅರ್ಥ ಬರುತ್ತೆ, ಹೀಗೆ ಆಶಿಸುವುದು ನಾಚಿಕೆ ಬಿಟ್ಟು ಭಿಕ್ಷೆ ಬೇಡಿದ ಹಾಗೆ ಆಗುತ್ತೆ, ನ್ಯಾಯದ ಹೋರಾಟ ವಿಪಕ್ಷದ ದಯೆಯಲ್ಲಿಲ್ಲದೆ ತನ್ನ ತಾಕತ್ತಿನ ಮೇಲೆ ನಡೆಯುತ್ತೆ, ಇಲ್ಲದಿದ್ದರೆ ಅದರ ಶಕ್ತಿ ಕುಗ್ಗುತ್ತೆ, ಹರತಾಳ ಮುಗಿದ ನಂತರ ಕಾರ್ಮಿಕರು ತಮ್ಮ ಕಾರ್ಯಕುಶಲತೆಗೆ ಅನುಗುಣವಾಗಿ ಅವರ ಸ್ಥಿತಿ ಕೂಡ ನಿರ್ಧಾರವಾಗುತ್ತದೆಂದು ಅರ್ಥಮಾಡಿಕೊಳ್ಳಬೇಕು. ಪ್ರಾಮಾಣಿಕರಾಗಿದ್ದು ಕಷ್ಟಪಟ್ಟಾಗ ಅವರ ಸ್ಥಿತಿ ಸಹಜವಾಗಿ ಉತ್ತಮವಾಗುತ್ತದೆ ಎಂದರು. ದೇವರು ಅವರ ಪ್ರತಿಜ್ಞೆಯ ಮಾನವನ್ನು ಕಾಪಾಡಿದ, ಮರ್ಯಾದೆಯಿಂದ ಅವರ ಜೊತೆ ಒಪ್ಪಂದವಾಯಿತು. ಮರ್ಯಾದೆ ಕಳೆದುಕೊಂಡ ಮೇಲೆ ಎಲ್ಲ ಸಫಲತೆಯೂ ದುರ್ಬಲವಾಗಿ ಕಾಣಿಸುತ್ತದೆ. ಈ ರೀತಿ ಈ ಧರ್ಮಯುದ್ಧ ಮುಗಿಯಿತು.

ಹರತಾಳದ ಸಮಸ್ಯೆ ಕೊನೆಗೊಂಡ ಮೇಲೆ ಗಾಂಧೀಜಿ ಕಾರ್ಮಿಕರ ಹಿತಕ್ಕಾಗಿ ಒಂದು ಚಿರಂತನ ವ್ಯವಸ್ಥೆ ಇರಬೇಕು, ಅದು ಕಾರ್ಮಿಕರ ವೈಯಕ್ತಿಕ ಸಮಸ್ಯೆಗಳ ನಿವಾರಣೆಗಾಗಿ ಒಂದು ಒಳ್ಳೆಯ ಪ್ರತಿನಿಧಿತ್ವ ನೀಡುವಂತಿರಬೇಕು ಎಂದು ಚಿಂತಿಸಿದರು. ಪರಿಣಾಮವಾಗಿ 'ಮಜೂರ್ ಮಹಾಜನ್' ಎಂಬ ಶ್ರಮಿಕ ಸಂಘಟನೆ ಅಸ್ತಿತ್ವಕ್ಕೆ ಬಂತು. ಅನಸೂಯಾ ಬಹನ್ ಈ ಹೊಸ ಸಂಸ್ಥೆಯ ಮೊದಲ ಅಧ್ಯಕ್ಷಳಾದಳು. ಶಂಕರಲಾಲ್ ಬ್ಯಾಂಕರ್ ಅದರ ಸಲಹಾಕಾರರಾದರು. ವಿಶ್ವದ ಕಾರ್ಮಿಕ ಇತಿಹಾಸದಲ್ಲಿ ಇದೇ ಮೊದಲ ಅಹಿಂಸಾತ್ಮಕ ಹರತಾಳವಾಗಿದ್ದು, ಯಾವುದೇ ತೆರನಾದ ರಕ್ತಪಾತವಾಗಲಿಲ್ಲ ಎಂದೂ ಇದನ್ನು ವರ್ಣಿಸುತ್ತಾರೆ. ೧೯೧೭ರಲ್ಲಿ 'ಪಂಚ್' ನ್ಯಾಯಪೀಠವನ್ನು ರಚಿಸಿ ಅದರ ನಿರ್ಣಯವನ್ನು ಮಂಜೂರು ಮಾಡುವ ಪದ್ಧತಿ

ಜಾರಿಗೆ ಬಂದದ್ದು ಇಂದು ಅಹಮದಾಬಾದಿನಲ್ಲಿ ೮೦ ವರುಷಗಳ ನಂತರವೂ ಅದೇ ರೀತಿ ಜಾರಿಯಲ್ಲಿದೆ. ಅಹಮದಾಬಾದ್ ನಗರದ ೮೦–೯೦ ಬಟ್ಟೆ ಮಿಲ್‌ಗಳ ಮಾಲೀಕರು ಮತ್ತು ಬಟ್ಟೆ ಕಾರ್ಮಿರ ನಡುವೆ ಇಲ್ಲಿಯವರೆಗೂ ಹರತಾಳದಂತಹ ಉಗ್ರಕ್ರಮವನ್ನು ಕೈಗೊಳ್ಳುವಂತಹ ಪರಿಸ್ಥಿತಿ ಒದಗಿ ಬರಲಿಲ್ಲ. ಸಮಸ್ಯೆಗಳು ಬರುತ್ತವೆ. 'ಪಂಚ'ರು ಅದನ್ನು ನಿರ್ಣಯಿಸುತ್ತಾರೆ. ಎರಡೂ ಪಕ್ಷಗಳು ವಿನಮ್ರವಾಗಿ ಪಂಚ ಪರಮೇಶ್ವರರ ನಿರ್ಣಯವನ್ನು ಒಪ್ಪಿಕೊಳ್ಳುತ್ತಾರೆ. ನಮ್ಮ ದೇಶವಲ್ಲದೆ, ಪ್ರಪಂಚದಲ್ಲೇ 'ಮಜೂರ್ ಮಹಾಜನ್' ಒಂದು ದೃಢವಾದ ಸಂಸ್ಥೆಯಾಗಿದೆ. ಕಾರ್ಮಿಕರೂ ಮಹಾಜನ್ ಅಂದರೆ ಶ್ರೇಷ್ಠಿಗಳು ಗಾಂಧೀಜಿ ಕಾರ್ಮಿಕರನ್ನು ಸಮಾಜದ ಕೆಳಮಟ್ಟದಿಂದ ಮೇಲೆತ್ತಿ ಶ್ರೇಷ್ಠತೆ ನೀಡಿದರು. ಕಾರ್ಮಿಕರ ಮಾನ–ಮರ್ಯಾದೆ ಘೋಷಿತವಾದವು. ಮಜೂರ್ ಮಹಾಜನ್ ಅಹಿಂಸೆ ಮತ್ತು ಸತ್ಯಾಗ್ರಹದ ಮುಖಾಂತರ ಕಾರ್ಮಿಕರ ಹಿತರಕ್ಷಣೆ ಮಾಡುತ್ತಿರುವವರೆವಿಗೂ ಅದರ ಸಂಘಟಿತ ಶಕ್ತಿ ಅಸೀಮವಾಗಿರುತ್ತದೆ ಮತ್ತು ಪರಿಣಾಮ ಸುಖಕರವಾಗಿರುತ್ತದೆ.

ಇಂದು ನಾವು ನೋಡುತ್ತಿರುವ ದೃಶ್ಯವೇ ಬೇರೆಯದು. ಕಾರ್ಮಿಕ ಮುಖಂಡರು ಕಾರ್ಮಿಕರಿಂದ ನಿಯಮಿತವಾಗಿ ಹಣ ವಸೂಲು ಮಾಡುತ್ತಾರೆ. ಹರತಾಳ ಮಾಡಿಸುತ್ತೇವೆಂದು ಹೇಳಿ ಮ್ಯಾನೇಜ್‌ಮೆಂಟ್‌ಗೆ ಬೆದರಿಕೆ ನೀಡುತ್ತಿರುತ್ತಾರೆ. ಹರತಾಳ ಮಾಡಿಸುವುದೂ ಒಂದು ವ್ಯವಸಾಯದ ಹಾಗೆ ಆಗಿದೆ. ಹಾಗಾಗಿ ಕಾರ್ಮಿಕರು–ಮಾಲೀಕರ ನಡುವೆ ದಿನಂಪ್ರತಿ ವೈಮನಸ್ಯ ಹೆಚ್ಚಾಗುತ್ತಿರುತ್ತದೆ. ಉದ್ಯೋಗಪತಿಗಳು, ಕಾರ್ಖಾನೆ, ಅಲ್ಲಿ ಕೆಲಸ ಮಾಡುವ ಕಾರ್ಮಿಕರು ಈ ಮೂರು ವರ್ಗ ದೇಶದ ಅಮೂಲ್ಯ ಸಂಪತ್ತು. ಈ ಮಾತು ಅರಿವಾಯಿತೆಂದರೆ ವೈಮನಸ್ಯ, ಶೋಷಣೆ ಕಡಿಮೆಯಾಗುತ್ತದೆ. ಕಾರ್ಖಾನೆಗಳು ಉತ್ಪಾದನೆಗೂ ಜನರನ್ನು ಎದುರಿಸಲೇಬೇಕಾಗುತ್ತದಲ್ಲ, ಉತ್ಪಾದನೆ ಕಡಿಮೆಯಾಗುವುದರಿಂದ, ಕಾರ್ಖಾನೆ ಹಾಳಾಗುತ್ತದೆ. ಅದರಿಂದ ದೇಶಕ್ಕೆ ನಷ್ಟ, ಅದರಿಂದ ಬಜೆಟ್‌ನಲ್ಲಿ ಕೊರತೆ ಬರುತ್ತೆ, ಅದು ಪ್ರತ್ಯಕ್ಷ–ಪರೋಕ್ಷ ತೆರಿಗೆ ರೂಪದಲ್ಲಿ ದೇಶದ ಜನರಿಂದ ವಸೂಲು ಮಾಡಬೇಕಾಗುತ್ತೆ, ಅದರಲ್ಲಿ ಬಡ ಕಾರ್ಮಿಕರ ಸಂಖ್ಯೆ ಹೆಚ್ಚಾಗಿರುವುದಿಂದ ಅವರಿಗೇ ಹೆಚ್ಚು ನಷ್ಟವಾಗುತ್ತದೆ. ಮ್ಯಾನೇಜ್‌ಮೆಂಟ್ ಜೊತೆ ವಿಚಾರಭೇದ ಇರುತ್ತೆ, ಆದರೆ ಅವರ ಜೊತೆ ಹೋರಾಟದ ರೀತಿ ಬೇರೆ ಆಗಬಹುದು. ಕಾರ್ಖಾನೆಗೆ ನಷ್ಟ ಮಾಡಿಸುವುದು, ಕಚ್ಚಾ ಸಾಮಗ್ರಿ, ವಿದ್ಯುತ್, ನೀರು ಹಾಳುಮಾಡುವುದು, ಉತ್ಪಾದನೆ ಕಡಿಮೆ ಮಾಡುವುದು ಇದೆಲ್ಲಾ ನಷ್ಟದ ವ್ಯಾಪಾರಗಳು. ಅದರಲ್ಲಿ ಕಾರ್ಮಿಕರೇ ಕಾರ್ಮಿಕರಿಗೆ ನಷ್ಟ ಮಾಡಿಸುತ್ತಾರೆ. ಮಝದೂರ್ ಮುಖಂಡನಿಗೇನೂ ನಷ್ಟವಿಲ್ಲ, ಅವನು ಕಾರ್ಮಿಕನನ್ನು ಉತ್ತೇಜಿಸಿ ಹರತಾಳ ಮಾಡಿಸುವುದು ಬಿಟ್ಟರೆ ಏನನ್ನೂ ಮಾಡುವುದಿಲ್ಲ, ಮಿಲ್ ಮಾಲೀಕರು ಕೂಡ ಆರಾಮವಾಗಿ ತಮ್ಮ ಬಂಡವಾಳ

ಸರಕಾರಿ ಸಹಾಯ ಪಡೆದು ಬದುಕಿಕೊಳ್ಳುತ್ತಾರೆ. ಆದರಿಂದಲೇ ಗಾಂಧೀಜಿ ಹೇಳುತ್ತಿದ್ದುದು ಪ್ರಾಮಾಣಿಕತೆ ಮತ್ತು ದೃಢತೆಯಿಂದ ಕಾರ್ಮಿಕರು ಸ್ವಯಂ ಜಾಗೃತರಾಗಬೇಕು. ಅಂತಹ ಪ್ರಾಮಾಣಿಕವಾದ ಕೆಲಸವನ್ನು ಪ್ರಪಂಚದ ಯಾವುದೇ ಶಕ್ತಿ ಶೋಷಿತಗೊಳಿಸಲಾಗದು, ತೊಂದರೆ ಕೊಡುವುದಾಗುವುದಿಲ್ಲ, ಆದರೆ ಅದರ ಕೀಲಿಕೈ ಕಾರ್ಮಿಕರ ಕೈಲಿದೆ. ಈಗ ಅದೆಲ್ಲೋ ಕಳೆದುಹೋಗಿದೆ ಅಂತ ಅನ್ನಿಸುತ್ತದೆ.

* * * *

# ೫. ಖೇಡಾ ಸತ್ಯಾಗ್ರಹ

ಕಾರ್ಮಿಕರ ಹರತಾಳ ಸಮಸ್ಯೆಯಿಂದ ಮುಕ್ತರಾದ ನಂತರ ಗಾಂಧೀಜಿ ಚಂಪಾರಣ್‌ಗೆ ಹೋಗಿ ಸಮಾಜೋತ್ಥಾನದ ಮೂಲಭೂತ ಕಾರ್ಯಗಳನ್ನು ಮಾಡಬೇಕೆಂದುಕೊಂಡಿದ್ದರು. ಗುಜರಾತ್‌ನ ಖೇಡಾ ಜಿಲ್ಲೆಯಲ್ಲಿ ಮೋಹನದಾಸ ಪಂಡ್ಯ ಎಂಬ ಒಬ್ಬ ಒಳ್ಳೆಯ ಕರ್ತವ್ಯನಿಷ್ಠರಾಗಿ, ಸೇವಾಭಾವನೆ ಹೊಂದಿದ್ದ ವ್ಯಕ್ತಿಯಾಗಿದ್ದರು. ಕ್ಷಾಮದಿಂದ ಖೇಡಾ ಜಿಲ್ಲೆಯ ಫಸಲು ಪೂರ್ತಿಯಾಗಿ ಹಾಳಾಗಿ ಹೋಗಿದೆ ಅಂತ ಅವರು ಗಾಂಧೀಜಿಗೆ ಸೂಚನೆ ನೀಡಿದರು. ರೈತರು ಕಂದಾಯ ಕಟ್ಟುವ ಸ್ಥಿತಿಯಲ್ಲಿ ಇರಲೇ ಇಲ್ಲ. ಆದರೆ ಸರಕಾರಕ್ಕೆ ರೈತರ ಕಷ್ಟವನ್ನು ತೆಗೆದುಕೊಂಡು ಏನು ಮಾಡಬೇಕಿತ್ತು. ಸರಕಾರ ನಿರ್ದಯವಾಗಿ ಕಂದಾಯ ವಸೂಲಿ ನಡೆಸಿತ್ತು. ಒಳ್ಳೆಯ ಸ್ಥಿತಿಯಲ್ಲಿದ್ದ ರೈತರ ನೇಗಿಲು, ಎತ್ತು, ಮನೆ, ಜಮೀನು ಎಲ್ಲವನ್ನೂ ಕಂದಾಯದ ಹೆಸರಿನಲ್ಲಿ ಜಪ್ತಿ ಮಾಡಿಕೊಳ್ಳುತ್ತಿದ್ದರು. ಹರಾಜು ಹಾಕುತ್ತಿದ್ದರು. ಹೀಗೆಯೇ ಮುಂದುವರಿದಲ್ಲಿ ಖೇಡಾ ಜಿಲ್ಲೆಯ ಪರಿಶ್ರಮಿಗಳಾದ ರೈತರು ಹಾಳಾಗಿ ಹೋಗುವಂತಿತ್ತು. ಈ ಅನ್ಯಾಯ ಕುರಿತು ಬೊಂಬಾಯಿಯ ಗವರ್ನರ್‌ಗೂ ದೂರು ಕೊಡಲಾಗಿತ್ತು.

ವಲ್ಲಭ ಭಾಯಿ ಪಟೇಲರ ಅಣ್ಣ ವಿಟ್ಠಲ್ ಭಾಯಿ ಪಟೇಲ್ ಬಾಂಬೆ ವಿಧಾನಸಭಾ ಸದಸ್ಯರಾಗಿದ್ದರು. ಅವರಿಗೂ ಲಿಖಿತವಾಗಿ ಮನವಿ ಮಾಡಲಾಗಿತ್ತು. ಆದರೆ ಸರಕಾರದ ಮೇಲೆ ಯಾವ ಪ್ರಭಾವವೂ ಬೀಳಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಗಾಂಧೀಜಿ ಖೇಡಾಗೆ ಹೋಗುವುದು ಅನಿವಾರ್ಯವಾಯಿತು. ಆಗ ಅವರು ಗುಜರಾತ್ ಸಭೆಯ ಅಧ್ಯಕ್ಷರು ಕೂಡ ಆಗಿದ್ದರು, ಸಭೆಯ ಕಡೆಯಿಂದಲೂ ಅರ್ಜಿ ಕಳುಹಿಸಿದರು. ಆದರೆ ಸರಕಾರ ಆ ದಿಕ್ಕಿನಲ್ಲಿ ಗಮನ ಕೊಡಲೇ ಇಲ್ಲ, ಗಾಂಧೀಜಿ ಖೇಡಾಕ್ಕೆ ಹೋಗಿ ಕಲೆಕ್ಟರನ್ನು ಭೇಟಿಯಾದರು. ರೈತರು ನಿಜವಾಗಿಯೂ ಬಹಳ ಕಷ್ಟದಲ್ಲಿದ್ದಾರೆಂದು  ವಿನಂತಿಸಿಕೊಂಡರು. ಅವರು ನ್ಯಾಯಸಂಗತವಾದ ಸಾಧಾರಣವಾದ ಬೇಡಿಕೆಗಳನ್ನು ಮುಂದಿಟ್ಟಿದ್ದಾರಾದುದರಿಂದ ಅದನ್ನು ಒಪ್ಪಿಕೊಳ್ಳಲು ಸರಕಾರಕ್ಕೆ ಯಾವ ಕಷ್ಟವೂ ಇರಲಿಲ್ಲ. ಅಹಮದಾಬಾದಿನ ಸಮಸ್ಯೆ ಪಂಚರ ನಿಯುಕ್ತಿಯಿಂದ ಪರಿಹಾರವಾಗಿದ್ದ ಹಾಗೆಯೇ ಕಂದಾಯದ ಸಮಸ್ಯೆ ಕೂಡ ಮಾತುಕತೆ ನಡೆಸಿ ಪರಿಹರಿಸಬಹುದಾಗಿತ್ತು. ನಾಲ್ಕಾಣೆ ಫಸಲು ಬಂದಿದ್ದರೂ

ಕಂದಾಯ ವಸೂಲಿ ಮಾಡುವ ಉತ್ಸಾಹದಲ್ಲಿ ಸರಕಾರ ಫಸಲ್ ಆರು ಆಣೆಯಷ್ಟು ಬಂದಿದೆಯೆಂದು ಘೋಷಿಸಿತು. ಇದು ತಪ್ಪೆಂದರೆ ತಪ್ಪಾಗಿತ್ತು. ಗಾಂಧೀಜಿಯವರು ಕಲೆಕ್ಟರ್ ಮುಂದೆ ಲೆಕ್ಕ ಸಂಖ್ಯೆ ಕೊಟ್ಟು ಎಲ್ಲಾ ವಿಷಯಗಳನ್ನೂ ವಿವರಿಸಿದರಾದರೂ ಕಲೆಕ್ಟರ್ ಅವರ ಮಾತನ್ನು ಕೇಳಲೇ ಇಲ್ಲ. ಜಪ್ತಿ ಶುರುಮಾಡಿ ಬಿಟ್ಟರು. ಇರುವ ಒಂದು ಮಾರ್ಗ ಅಂದರೆ ಸತ್ಯಾಗ್ರಹ ಮಾತ್ರ ಅಂತ ಆಗ ಗಾಂಧೀಜಿಗೆ ಅರಿವಾಯಿತು. ಗುಜರಾತಿನಲ್ಲಿ ಸಾಮಾನ್ಯವಾಗಿ ಪಟೇಲರೇ ರೈತರಾಗಿರುತ್ತಾರೆ. ಆದರೆ ಸಾಮಾನ್ಯವಾಗಿ ಅವರಿಗೆ ಪಾಟೀದಾರ್ ಅಂತ ಹೇಳುವುದು ರೂಢಿಯಲ್ಲಿದೆ. ಈ ಪಾಟೀದಾರರ ಜೊತೆ ದೀರ್ಘವಾಗಿ ಚರ್ಚಿಸಿದರು. ಆಗ ಸರಕಾರಕ್ಕೆ ಎದುರಾಗಿ ಸತ್ಯಾಗ್ರಹ ಮಾಡಲು ನಿಶ್ಚಯಿಸಿದರು. ನದಿಯಾದ್ ಅನಾಥಾಲಯದ್ದು ದೊಡ್ಡ ಮನೆ ಇತ್ತು, ಅಲ್ಲೇ ಸತ್ಯಾಗ್ರಹದ ಕಾರ್ಯಾಲಯವನ್ನು ತೆರೆದರು. ಇದು 'ಖೇಡಾ ಸತ್ಯಾಗ್ರಹ' ಅಂತ ಇತಿಹಾಸಪ್ರಸಿದ್ಧವಾಯಿತು. ವಲ್ಲಭ ಭಾಯಿ ಪಟೇಲರು ತಮ್ಮ ವಕಾಲತ್ತನ್ನು ಬಿಟ್ಟು ಈ ಸತ್ಯಾಗ್ರಹಕ್ಕೆ ಸೇರಿಕೊಂಡರು, ಅದಾದ ನಂತರ ಅವರು ವಕಾಲತ್ತು ಮಾಡಲಾಗಲೇ ಇಲ್ಲ. ಸಮಾಜ ಸೇವೆಯ ಎಷ್ಟೋ ಸಮಸ್ಯೆಗಳು ಅವರಿಗೆ ವಕಾಲತ್ ಮಾಡಲು ಬಿಡಲೇ ಇಲ್ಲ. ವಲ್ಲಭ ಭಾಯಿ ಪಟೇಲರಷ್ಟೇ ಅಲ್ಲದೆ ಶಂಕರ್‌ಲಾಲ್ ಬ್ಯಾಂಕರ್, ಮಹಾದೇವ ದೇಸಾಯಿ, ಮೋಹನ್‌ಲಾಲ್ ಪಂಡ್ಯಾ ಮತ್ತು ಶಂಕರಲಾಲ್ ಪುರೋಹಿತ, ಮುಂತಾದ ಎಷ್ಟೋ ಜನ ಬೇರೆಯ ಕಾರ್ಯಕರ್ತರು ಖೇಡಾ ಸತ್ಯಾಗ್ರಹದಲ್ಲಿ ತೀವ್ರವಾಗಿ ಕೆಲಸ ಮಾಡಿದರು. ಮನವಿದಾರರ ಸಾರ್ವಜನಿಕ ಸಭೆಯಲ್ಲಿ ಒಂದು ಬಿನ್ನವತ್ತಳೆಯನ್ನು ಸಿದ್ಧಪಡಿಸಿದರು. ಇದರ ಮುಖ್ಯಾಂಶಗಳೆಂದರೆ, ಫಸಲು ನಾಲ್ಕಾಣೆಗಿಂತ ಕಡಿಮೆ ಬಂದಿದೆಯಾದುದರಿಂದ ಕಂದಾಯ ವಸೂಲಿ ಕಾನೂನಿನಡಿಯಲ್ಲಿ ಯಾವ ರೈತನೂ ಮುಂದಿನ ವರ್ಷದವರೆಗೂ ಕಂದಾಯ ಕೊಡುವುದಿಲ್ಲ. ಸರಕಾರ ಕಂದಾಯ ವಸೂಲಿಯನ್ನು ನಿಲ್ಲಿಸಿದ್ದೇ ಆದರೆ ಸುಸ್ಥಿತಿಯಲ್ಲಿರುವ ರೈತರು ಸ್ವತಃ ಕಂದಾಯದ ಎರಡನೆ ಕಂತು ಪಾವತಿ ಮಾಡುತ್ತಾರೆ, ಬಲ ತೋರಿಸಿದರೆ ಮಾತ್ರ ಒಂದು ಪೈಸಾ ಕೂಡ ಕೊಡುವುದಿಲ್ಲ, ಸಮರ್ಥರಾಗಿದ್ದ ರೈತರು ಸತ್ಯಾಗ್ರಹದಲ್ಲಿ ಭಾಗವಹಿಸಿ ತಮ್ಮ ಬಡ ರೈತ ಬಂಧುಗಳ ಬೇಡಿಕೆಯನ್ನು ಬಲಪಡಿಸಬೇಕೆಂದು ಇಚ್ಛಿಸಿದರು. ಈ ಬಡವರ ವಸ್ತುಗಳು ಹರಾಜು ಹಾಕದಿರುವಂತಾದರೆ ಸಾಕು ಎಂಬುದು ಅವರ ಉದ್ದೇಶವಾಗಿತ್ತು. ಈ ಬಿನ್ನವತ್ತಳೆಯನ್ನು ನೋಡಿ ಕಲೆಕ್ಟರ್ ಕೆಂಡವಾದ, ಅವನು ಸತ್ಯಾಗ್ರಹಿಗಳ ಹೊಲಗಳನ್ನು ವಶಪಡಿಸಿಕೊಂಡ. ೫–೧೦ ರೂ.ಗಳ ಕಂದಾಯಕ್ಕಾಗಿ ಸಾವಿರಾರು ರೂಪಾಯಿಗಳ ಭೂಮಿಯನ್ನು ನೀರಿನ ಹಾಗೆ ಮಾರಿಸಿದ. ಬೆಳೆದು ನಿಂತಿದ್ದ ಫಸಲನ್ನು ಕಬಳಿಸಲು ಒಂದು ಹೊಸ ಕ್ರಮವನ್ನು ಹುಡುಕಿದ. ರೈತರು ಈ ದೌರ್ಜನ್ಯವನ್ನು ಸಹಿಸಿಕೊಂಡರು. ಒಂದೊಂದು ಕಡೆ ಹೆದರಿ ಕಂದಾಯ

ಕಟ್ಟಿದರಾದರೂ ಅವರ ಸಂಖ್ಯೆ ಅತಿ ಕಡಿಮೆ ಇತ್ತು.

ಚಂಪಾರಣ್ಯ ದೂರ ಬಿಹಾರದಲ್ಲಿತ್ತು, ಅದರಿಂದ ಜನರಿಗೆ ಅದರ ಪರಿಚಯ ಇರಲಿಲ್ಲ, ಆದರೆ ಗುಜರಾತ್ ಬೊಂಬಾಯಿ ಪ್ರಾಂತ್ಯದ ಹಸುರು ತುಂಬಿದ ಭಾಗವಾಗಿತ್ತು. ಈ ಸತ್ಯಾಗ್ರಹ ಗುಜರಾತ್‌ನ್ನು ದೇಶದ ಕಣ್ಮುಂದೆ ತಂದು ನಿಲ್ಲಿಸಿತು. ಗುಜರಾತಿನ ಜನ ಹೆಚ್ಚು ಜಾಗೃತರಾಗಿರುತ್ತಾರೆ. ಬೊಂಬಾಯಿ ಮತ್ತು ಮಿಕ್ಕ ಮಹಾನಗರಗಳ ಶ್ರೀಮಂತರು ಈ ಸತ್ಯಾಗ್ರಹಕ್ಕೆ ಚಂದಾ ಮಳೆ ಸುರಿಸಿದರು. ಸತ್ಯಾಗ್ರಹ ಹಣದ ಬಲದ ಮೇಲೇನೂ ನಡೆಯುವುದಿಲ್ಲ. ಹಾಗೆ ನೋಡಿದರೆ ಸತ್ಯಾಗ್ರಹಕ್ಕೆ ಬಹಳ ಕಡಿಮೆ ಹಣ ಬೇಕಾಗುತ್ತೆ, ಆದರೆ ಜನರ ಭಾವನೆಗಳನ್ನು ಯಾರೂ ತಡೆಯುವವರು ಇರಲಿಲ್ಲ. ಪ್ರತಿದಿನ ಪತ್ರಿಕೆಗಳಲ್ಲಿ ಖೇಡಾ ಸತ್ಯಾಗ್ರಹದ ಸುದ್ದಿ ಮುದ್ರಿತವಾಗುತ್ತಿತ್ತು. ಇದರಿಂದ ಗುಜರಾತಿ ಜನರಲ್ಲಿ ವಿಶೇಷವಾದೊಂದು ಉತ್ಸಾಹ ಉಮ್ಮಳಿಸಿತು. ದೀನ–ಹೀನ–ದಲಿತರಲ್ಲೂ ಸ್ವಾಭಿಮಾನ ಜಾಗೃತವಾಗಬೇಕು ಅನ್ನುವುದು ಸತ್ಯಾಗ್ರಹದ ಮುಖ್ಯ ಧ್ಯೇಯವಾಗಿರುತ್ತದೆ. ಧೈರ್ಯದಿಂದ ಅನ್ಯಾಯವನ್ನು ವಿರೋಧಿಸುವಂತಾಗಬೇಕು. ಬಡಪಾಯಿ ರೈತರು ಸರಕಾರಿ ಆಫೀಸರ್ ಹೆಸರು ಕೇಳಿದರೆ ಸಾಕು, ಗಡಗಡ ನಡುಗುತ್ತಿದ್ದರು. ಹಾಗೆ ಹೆದರಿದ್ದ ಜನರಿಗೆ ಸರಕಾರಿ ಆಫೀಸರ್ ನಿಮ್ಮ ಯಜಮಾನ ಅಲ್ಲ, ನಿಜವಾಗಿ ನೋಡಿದರೆ ಅವನು ಜನರ ಸೇವಕ, ಪ್ರತಿಯೊಬ್ಬ ಸರಕಾರಿ ಆಫೀಸರ್‌ಗೂ ಈ ರೈತರಿಂದ ವಸೂಲಿಯಾದ ಕಂದಾಯದ ಹಣದಿಂದಲೇ ಸಂಬಳ ಕೊಡಲಾಗುತ್ತದೆ. ಜನರ ಹಣದಿಂದ ಬದುಕುವವನು ಜನರ ಸೇವಕ, ಅವನನ್ನು ಕಂಡು ಹೆದರಲು ಕಾರಣವೇ ಇಲ್ಲ. ಧೈರ್ಯದೊಂದಿಗೆ ಪೂರ್ತಿ ಸಭ್ಯವ್ಯವಹಾರ ಕೂಡ ಮುಖ್ಯವಾಗುತ್ತದೆ. ಅಸಭ್ಯ ಸತ್ಯಾಗ್ರಹಿ ಆಗುವುದು ಒಂದು ವ್ಯತಿರೇಕ. ಗುಜರಾತ್‌ನ ಮನವಿದಾರ ಸಮೂಹ ತನ್ನ ಅಹಂಕಾರಕ್ಕೆ ಹೆಸರುವಾಸಿಯಾದ್ದು. ಆ ಜಮೀನಿನ ಮಾಲೀಕ ತನ್ನ ಭೂಮಿಯನ್ನು ಬಹಳ ಪ್ರೀತಿಸುತ್ತಾನೆ. ಒಂದು ಚೂರು ಭೂಮಿಗಾಗಿ ಸಾಯುವುದಕ್ಕೆ ಕೊಲ್ಲುವುದಕ್ಕೂ ಅವನು ಹೇಸುವುದಿಲ್ಲ. ತನ್ನ ಭೂಮಿಯ ಅಹಂಕಾರದಲ್ಲಿ ಅವನು ಮೆರೆಯುತ್ತಾನೆ. ಅಂತಹ ಪಾಟೀದಾರನನ್ನು ಧೈರ್ಯಶಾಲಿಯಾಗಿ ಮಾಡುವುದೇನೂ ಕಷ್ಟವಾಗಿರಲಿಲ್ಲ. ಆದರೆ ಸಭ್ಯತೆ ಅವನ ಸಹಜ ಸ್ವಭಾವವೂ ಆಗಿರಲಿಲ್ಲ.

ಸತ್ಯಾಗ್ರಹಿಯ ಸಭ್ಯತೆ ನೋಟಕ್ಕಾಗಿ ಅಲ್ಲ, ಅವನು ಸಹಜವಾಗಿಯೇ ಸಭ್ಯವಾಗಿರುತ್ತಾನೆ. ತನ್ನ ಶತ್ರುವಿಗೂ ಕೆಟ್ಟದಾಗಲೆಂದು ಅವನು ಯೋಚಿಸುವುದಿಲ್ಲ, ಇದನ್ನ ಅರ್ಥಮಾಡಿಕೊಳ್ಳುವುದು ಕಠಿಣವಾಗಿದ್ದರೂ ಸತ್ಯಾಗ್ರಹದ ಹೊರತು ಜನರಲ್ಲಿ ಉತ್ಸಾಹ ತುಂಬಿತ್ತು, ಖೇಡಾ ಜಿಲ್ಲೆಯೇ ಅಲ್ಲಾಡಿತು. ಅಧಿಕಾರಿಗಳು ಇನ್ನೂ ಒಪ್ಪಂದಕ್ಕೆ ತಯಾರಿರಲಿಲ್ಲ. ಸರಕಾರ ಸತ್ಯಾಗ್ರಹಿಗಳನ್ನು ಇಲ್ಲಿಯವರೆಗೂ ಬಂಧಿಸಿರಲಿಲ್ಲ, ಅದೇ ಸಮಯಕ್ಕೆ ಸರಿಯಾಗಿ ಒಂದು ಈರುಳ್ಳಿ ಹೊಲವನ್ನು

ತಹಸೀಲ್ದಾರ ಅನ್ಯಾಯವಾಗಿ ಜಪ್ತಿ ಮಾಡಿಕೊಂಡ. ಆಗ ಮೋಹನ್‌ಲಾಲ್ ಪಂಡ್ಯಾಗೆ ಆ ಹೊಲದ ಫಸಲನ್ನು ಕತ್ತರಿಸುವಂತೆ ಗಾಂಧೀಜಿ ಅನುಮತಿ ನೀಡಿದರು. ಮೋಹನ್‌ಲಾಲ್ ಪಂಡ್ಯಾ ಬಹಳ ಉತ್ಸಾಹ ಇಟ್ಟುಕೊಂಡ ಮನುಷ್ಯ. ಇಷ್ಟು ದೊಡ್ಡ ಸತ್ಯಾಗ್ರಹ ಏಳುವುದು ಅವನಿಗೆ ಇಷ್ಟವಿರಲಿಲ್ಲ. ಜೊತೆಗೆ ಇಲ್ಲಿಯವರೆವಿಗೂ ಯಾರೊಬ್ಬರನ್ನೂ ಜೈಲಿಗೆ ಹಿಡಿದು ಹಾಕಿರಲೂ ಇಲ್ಲ, ಅವರು ಜೈಲಿಗೆ ಹೋಗಬೇಕು ಅಂತ ತುಂಬಾ ಕಾತರರಾಗಿದ್ದರು. ಗಾಂಧೀಜಿಯ ಅನುಮತಿ ಸಿಕ್ಕ ತಕ್ಷಣ ೭–೮ ಜನಗಳನ್ನು ಜೊತೆ ಮಾಡಿಕೊಂಡು ಮೋಹನಲಾಲ್ ಪಂಡ್ಯಾ ಎಲ್ಲರೂ ನೋಡುತ್ತಿರುವ ಹಾಗೆಯೇ ಹೊಲದಿಂದ ಈರುಳ್ಳಿಯನ್ನು ಕತ್ತರಿಸಿದರು. ಈಗ ಸರಕಾರ ಇವರಗಳನ್ನು ಬಂಧಿಸಲೇಬೇಕಾಯಿತು. ಮಾರನೆಯ ದಿನ ಕಛೇರಿಯಲ್ಲಿ ಮೋಹನಲಾಲ್ ಪಂಡ್ಯಾ ವಿರುದ್ಧ ಭಾರತೀಯ ಕಾನೂನಿನ ೩೭೯ನೆಯ ಸೆಕ್ಷನ್ ಅಡಿಯಲ್ಲಿ ಕಳ್ಳತನದ ಕೇಸ್ ಜಾರಿಯಾಯಿತು. ಈ ಕೇಸನ್ನು ನೋಡುವುದಕ್ಕಾಗಿ ಮೈಲುಗಳು ದೂರ ಜನ ಸಂದಣಿ ಕಿಕ್ಕಿರಿದು ನೆರೆಯಿತು. ಅಪರಾಧಿಗಳು ತಮ್ಮ ಅಪರಾಧವನ್ನು ಒಪ್ಪಿಕೊಂಡರು. ಮೋಹನಲಾಲ್ ಮತ್ತು ಅವರ ಬೆಂಬಲಿಗರಿಗೆ ಜೈಲು ವಾಸವಾಯಿತು. ಕಛೇರಿಯಿಂದ ಜೈಲಿನ ಬಾಗಿಲವರೆಗೆ ಎಲ್ಲ ದರ್ಶಕರು ಈ ಅಪರಾಧಿಗಳನ್ನು ಹಿಂಬಾಲಿಸಿ ನಡೆದರು. 'ಪ್ಯಾಜ಼್ ಚೋರ್ ಮೋಹನಲಾಲ್ ಕೀ ಜೈ' (ಈರುಳ್ಳಿ ಕಳ್ಳ ಮೋಹನಲಾಲ್‌ನಿಗೆ ಜಯವಾಗಲಿ) ಎಂದು ಘೋಷಣೆ ಹಾಕಿದರು. ಜನರಲ್ಲಿದ್ದ ಜೈಲಿನ ಭಯ ದೂರಾಯಿತು. ದೌರ್ಜನ್ಯ ಅನ್ಯಾಯ ಹೆಚ್ಚಾದಷ್ಟು ರೈತರು ಉತ್ಸಾಹದಿಂದ ಕಾನೂನು ಮುರಿದು ಜೈಲಿಗೆ ಹೋಗಲಾರಂಭಿಸಿದರು.

ಆಗ ಒಬ್ಬ ತಹಸೀಲ್ದಾರ ಕಂದಾಯ ಮನ್ನಾಮಾಡುವ ಪ್ರಸ್ತಾಪವನ್ನು ಗಾಂಧೀಜಿಯವರ ಮುಂದಿಟ್ಟ. ಒಂದು ತಹಸೀಲ್‌ನಿಂದ ಜಿಲ್ಲೆ ಆಗುವುದಿಲ್ಲವಲ್ಲ, ಆಗ ಗಾಂಧೀಜಿ ಕಲೆಕ್ಟರ್‌ನನ್ನು ಭೇಟಿಯಾದರು. ಆತನೂ ಕಂದಾಯ ಮನ್ನಾ ಘೋಷಣೆಯನ್ನು ಸಮರ್ಥಿಸಿದ. ಹೀಗೆ ಸತ್ಯಾಗ್ರಹದ ಪ್ರತಿಜ್ಞೆ ಪೂರ್ತಿಯಾಯಿತು. ಖೇಡಾ ಸತ್ಯಾಗ್ರಹ ಗುಜರಾತ್ ಮೂಲೆ–ಮೂಲೆಯ ರೈತನಲ್ಲೂ ಜಾಗೃತಿ ತಂದಿತು. ಆಗಿನಿಂದಲೂ ಈ ರೈತರು ರಾಜಕೀಯ ಮತ್ತು ಸತ್ಯಾಗ್ರಹದಲ್ಲಿ ಮುಂದುವರೆದರು. ಈ ಸತ್ಯಾಗ್ರಹದಲ್ಲಿ ವಲ್ಲಭಭಾಯಿ ಪಟೇಲ್‌ರಿಗೂ ತಮ್ಮ ಜೀವನೋದ್ದೇಶದ ಅರಿವಾಯಿತು. ಈ ರೀತಿ ಗುಜರಾತ್‌ನ ಜನರ ಮನಸ್ಸಿನಲ್ಲಿ ಸತ್ಯಾಗ್ರಹ ಬೇರುಬಿಟ್ಟಿತ್ತು. ಅವರ ನೂರಾರು ವರ್ಷಗಳ ಭಯದ ಮೂಲೋಚ್ಚಾಟನೆಯಾಯಿತು.

೧೯೧೮ರಲ್ಲಿ ಲಾರ್ಡ್ ಚೆಮ್ಸ್‌ಫೋರ್ಡ್‌ನು ದೆಹಲಿಯಲ್ಲಿ ಯುದ್ಧ ಸಹಾಯತಾ ಪರಿಷತ್ತನ್ನು ಏರ್ಪಡಿಸಿದ, ಗಾಂಧೀಜಿಯವರನ್ನು ಇದಕ್ಕೆ ಆಮಂತ್ರಿಸಿದರು. ಗಾಂಧೀಜಿಗೆ ಈ ಸಭೆಗೆ ಹೋಗುವ ಇಚ್ಛೆ ಇರಲಿಲ್ಲ. ಆದರೆ ಸರಕಾರ ಲೋಕಮಾನ್ಯ

ತಿಲಕ್, ಮೌಲಾನಾ ಶೌಕತ್ ಅಲಿ, ಮೌಲಾನಾ ಮಹಮದ್ ಅಲಿ ಮುಂತಾದ ಮುಖಂಡರನ್ನು ಈ ಸಭೆಗೆ ಕರೆದಿರಲಿಲ್ಲ. ಹಿಂದೂ–ಮುಸಲ್ಮಾನರ ನಡುವೆ ಹೆಚ್ಚು ಸ್ನೇಹವೂ ಇರಲಿಲ್ಲ ಎಂದು ಆಫ್ರಿಕಾದಲ್ಲಿದ್ದಾಗಿನಿಂದಲೂ ಗಾಂಧೀಜಿಗೆ ಅನಿಸುತ್ತಿತ್ತು. ಆದ್ದರಿಂದ ಎರಡೂ ಧರ್ಮದವರ ನಡುವೆ ಸ್ನೇಹವಿರಲಿ ಎಂದು ಅವರು ನಿರಂತರ ಪ್ರಯತ್ನಿಸುತ್ತಿದ್ದರು. ಹಿಂದೂಸ್ತಾನಕ್ಕೆ ಹಿಂದಿರುಗಿದ ನಂತರ ಡಾ॥ ಅಬ್ದುಲ್ ರಹಮಾನ್ ಮುಂತಾದವರ ಜೊತೆ ಗಾಂಧೀಜಿಗೆ ನಿಕಟ ಸ್ನೇಹ ಇತ್ತು. ಆಫ್ರಿಕಾದಿಂದ ಹಿಂದಿರುಗಿದ ಮೇಲೆ ಗಾಂಧೀಜಿ ವಿಶೇಷವಾಗಿ ಪ್ರಯತ್ನಪಟ್ಟು ಅಲಿ ಸಹೋದರರ ಜೊತೆ ಪರಿಚಯ ಮಾಡಿಕೊಂಡಿದ್ದರು. ಪ್ರತಿಭಟನೆ ಮಾಡಿದ ಅಲಿ ಸಹೋದರರನ್ನು ಸರಕಾರ ಜೈಲಿಗೆ ಕಳುಹಿಸಿತ್ತು. ಗಾಂಧೀಜಿ ಈ ಸಹೋದರರೊಡನೆ ಜೈಲಿನಲ್ಲಿ ಭೇಟಿಯಾಗಲು ಎಷ್ಟೋ ಸಾರಿ ಅನುಮತಿ ಕೇಳಿದರಾದರೂ ಸರಕಾರ ಅವರ ಇಚ್ಛೆಯನ್ನು ತಿರಸ್ಕರಿಸಿತ್ತು. ಈ ದಿನಗಳಲ್ಲೇ ಎಷ್ಟೋ ಜನ ಮುಸ್ಲಿಮ್ ಸೋದರರು ಗಾಂಧೀಜಿಯವರನ್ನು ಮುಸ್ಲಿಂ ಲೀಗ್‌ನ ಕಲಕತ್ತಾ ಸಭೆಗೆ ಆಮಂತ್ರಿಸಿದರು. ಅಲ್ಲಿ ಅವರುಗಳನ್ನು ಉದ್ದೇಶಿಸಿ ಗಾಂಧೀಜಿ ಮಾತನಾಡಿದರು. ನಂತರ ಅಲೀಗಢ ಮುಸ್ಲಿಂ ಯುನಿವರ್ಸಿಟಿಯಲ್ಲಿ ಗಾಂಧೀಜಿಯವರನ್ನು ಕರೆದಾಗ ಅವರು ಅಲ್ಲಿಗೆ ಹೋದರು ಮತ್ತು ವಿದ್ಯಾರ್ಥಿಗಳಿಗೆ ದೇಶಕ್ಕಾಗಿ ಫಕೀರರಾಗುವಂತೆ ಆಹ್ವಾನಿಸಿದರು. ಗಾಂಧೀಜಿಯವರು ತಮ್ಮ ಹಿಂದುತ್ವದ ಸನ್ಮಾನ ಅಥವಾ ಸತ್ವವನ್ನೆಂದೂ ಕುಂದಲು ಬಿಡುತ್ತಿರಲಿಲ್ಲ, ಆದರೆ ಒಳ್ಳೆಯ ದೇಶಭಕ್ತ ಮುಸಲ್ಮಾನರನ್ನು ಹುಡುಕಿ ಅವರ ಜೊತೆ ಸಂಬಂಧ ಇಟ್ಟುಕೊಳ್ಳುತ್ತಿದ್ದರು. ಅಹಿಂಸೆಯ ನಿಜವಾದ ಒರೆಗಲ್ಲು ಹಿಂದೂ–ಮುಸ್ಲಿಂರ ಏಕತೆಯಲ್ಲಿದೆ ಎಂದು ಅವರು ದೃಢವಾಗಿ ನಂಬಿದ್ದರು. ಅವರ ಈ ಅಭಿಪ್ರಾಯ ಸತ್ಯವೆಂದು ಸಿದ್ಧವಾಯಿತು. ಹಿಂದೂ–ಮುಸ್ಲಿಂರ ಏಕತೆಯ ಮಂಟಪದಲ್ಲೇ ಗಾಂಧೀಜಿ ಹುತಾತ್ಮರಾದರು.

ಸರಕಾರ ಖಿಲಾಫತ್ ಆಂದೋಲನದಿಂದಾಗಿ ಅಲಿ ಬಂಧುಗಳನ್ನು ಜೈಲಿನಲ್ಲಿಟ್ಟಿತ್ತು. ಗಾಂಧೀಜಿ ಖಿಲಾಫತ್‌ನ್ನು ಸಮರ್ಥಿಸಿದ್ದನ್ನು ಕುರಿತು ದೇಶದಲ್ಲಿ ಸಾಕಷ್ಟು ಟೀಕೆಗಳು, ಅಪ್ರಿಯ ವಾತಾವರಣ ನಿರ್ಮಿತವಾಗಿತ್ತು. ಮುಸಲ್ಮಾನರನ್ನು ದೇಶದ ಅವಿಭಾಜ್ಯ ಅಂಗ ಎಂದು ನೀವು ಭಾವಿಸುವುದಾದರೆ ನಾವು ಅವರ ಆಸೆ–ಆಕಾಂಕ್ಷೆಗಳನ್ನು ಹಂಚಿಕೊಳ್ಳಬೇಕು ಮತ್ತು ಖಿಲಾಫತ್ ಬೇಡಿಕೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮುಸ್ಲಿಮರಿಗೆ ನ್ಯಾಯ ಸಿಗಬೇಕು, ಅದಕ್ಕೆ ನಾವು ಸಹಕಾರ ನೀಡಬೇಕು ಎಂದು ಗಾಂಧೀಜಿ ಹೇಳುತ್ತಿದ್ದರು. ಬ್ರಿಟಿಷ್ ಪ್ರಧಾನಮಂತ್ರಿ ಲಾಯಡ್ ಜಾರ್ಜ್‌ನು ಖಿಲಾಫತ್‌ನ ಬೇಡಿಕೆಗೆ ಸೈದ್ಧಾಂತಿಕವಾಗಿ ಒಪ್ಪಿಗೆ ನೀಡಿದ್ದ, ಆದ್ದರಿಂದ ಹೆಚ್ಚು ಚರ್ಚಿಸದೆ ಖಿಲಾಫತ್ ಬೇಡಿಕೆ ಪೂರೈಸುವ ಸಮಾನಜನಕ ಬೇಡಿಕೆಗಾಗಿ ಮುಸಲ್ಮಾನರಿಗೆ ಸಹಕಾರ ನೀಡುವುದು ಸರಿಯೆಂದು ಗಾಂಧೀಜಿಗೆ

ಅನಿಸಿತ್ತು. ಗುಣ–ದೋಷ ನೋಡುವ ಪ್ರಶ್ನೆ ಇರಲೇ ಇಲ್ಲ. ಗಾಂಧೀಜಿ ಈ ವಿಷಯಗಳನ್ನೆಲ್ಲಾ ಕುರಿತು ವೈಸ್‌ರಾಯ್ ಜೊತೆ ಮಾತನಾಡಲು ಇಚ್ಛಿಸುತ್ತಿದ್ದರು, ಅದು ಸಾಧ್ಯವಾಗುತ್ತಿರಲಿಲ್ಲ. ತಂಡಗಳಿಗೆ ಆದುದರಿಂದ ಆ ಕಾನ್‌ಫರೆನ್ಸ್‌ನಲ್ಲಿ ಇಂಗ್ಲೆಂಡಿನ ಸೈನ್ಯಕ್ಕೆ ಹೊಸ ರಂಗರೂಟ್‌ಗಳನ್ನು ಹೇಗೆ ಮತ್ತು ಎಲ್ಲಿ ಭರ್ತಿ ಮಾಡಬೇಕು ಎಂಬುದೆಲ್ಲಾ ಕುರಿತು ಚರ್ಚೆ ನಡೆಯಿತು. ಈ ಸಭೆಯಲ್ಲಿ ವೈಸ್‌ರಾಯ್ ಎದುರು ಗಾಂಧೀಜಿ ತನ್ನ ವಿಚಾರಗಳನ್ನು ಹಿಂದಿಯಲ್ಲಿ ಸಲ್ಲಿಸಿದರು. ಮೊಟ್ಟ ಮೊದಲ ಬಾರಿ ಬಿಳಿಯರ ಸರಕಾರ ರಾಷ್ಟ್ರೀಯ ಭಾಷೆಗೆ ಮಾನ್ಯತೆ ನೀಡಿತು. ಅವರ ಮುಖಂಡರೊಬ್ಬರು ಇಂಗ್ಲಿಷ್ ವೈಸ್‌ರಾಯ್ ಎದುರು ಹಿಂದಿಯಲ್ಲಿ ಮಾತನಾಡುವ ಹಠ ತೋರಿದರೆಂದು ದೇಶದ ಎಲ್ಲೆಡೆ ಜನರು ಸಂತೋಷಪಟ್ಟರು. ಸರಕಾರಕ್ಕೆ ಸೈನ್ಯದಲ್ಲಿ ಭರ್ತಿಮಾಡಲು ಸಹಾಯ ಮಾಡುವ ವಚನ ನೀಡಿ ಗಾಂಧೀಜಿ ಅಹಮದಾಬಾದಿಗೆ ಹಿಂದಿರುಗಿದರು. ಮುಸಲ್ಮಾನರ ಖಿಲಾಫತ್ ಕುರಿತು ವಾಯಿಸ್‌ರಾಯ್‌ಗೆ ಬೇರೆಯ ಪತ್ರ ಬರೆದರು. ಅಹಮದಾಬಾದ್‌ಗೆ ಬಂದು ಗಾಂಧೀಜಿ ನದಿಯಾದ್‌ಗೆ ಹೋದರು. ಹಳ್ಳಿಗಳಲ್ಲೆಲ್ಲಾ ಸುತ್ತಾಡಿ ಸೈನ್ಯಕ್ಕೆ ಭರ್ತಿಯಾಗುವಂತೆ ಜನರಿಗೆ ಹೇಳಿದರು, ಖೇಡಾ ಸತ್ಯಾಗ್ರಹದ ಸಂದರ್ಭದಲ್ಲಿ ಗಾಂಧೀಜಿಗೆ ಕೇಳದೆಯೇ ಜನ ಸಹಾಯತೆಯನ್ನು ತಲಪಿಸುತ್ತಿದ್ದರು. ಆದರೆ ಸೈನ್ಯದಲ್ಲಿ ಭರ್ತಿ ಮಾಡುವ ಬಗ್ಗೆ ಯಾವೊಬ್ಬ ರೈತನೂ ಗಾಂಧೀಜಿಗೆ ಸಹಾಯ ನೀಡಲಿಲ್ಲ, ಯಾತ್ರೆಗಾಗಿ ಎತ್ತಿನ ಗಾಡಿ ಕೂಡ ಕೊಡಲಿಲ್ಲ. ಇಷ್ಟಾದ ಮೇಲೆ ಆ ರೈತರಿಂದ ಊಟವನ್ನು ಅಪೇಕ್ಷೆ ಮಾಡುವುದು ಸರಿ ಇರಲಿಲ್ಲ, ಆ ದಿನಗಳಲ್ಲಿ ಗಾಂಧೀಜಿ ಕಡಲೆಕಾಯಿ ಮತ್ತು ಬೆಲ್ಲ ತಿನ್ನುತಿದ್ದರು. ಹಣ್ಣು–ಒಣ ಹಣ್ಣುಗಳು ಸಿಗುವುದು ಕಷ್ಟವಾಗಿತ್ತು. ಅಷ್ಟು ತುಟ್ಟಿಯ ಆಹಾರವನ್ನು ಗಾಂಧೀಜಿ ತಿನ್ನಲು ಇಷ್ಟಪಡುತ್ತಿರಲೂ ಇಲ್ಲ. ಉಡಿಯಲ್ಲಿ ಕಡಲೆಕಾಯಿ ಮತ್ತು ಬೆಲ್ಲವನ್ನಿಟ್ಟುಕೊಂಡಿರುತ್ತಿದ್ದರು. ದಿವಸಕ್ಕೆ ೪೦–೪೫ ಮೈಲು ಯಾತ್ರೆ ಮಾಡುತ್ತಿದ್ದರು. ಹೀಗೆ ಶರೀರವನ್ನು ದಂಡಿಸಿ, ಅವ್ಯವಸ್ಥಿತ ಆಹಾರ ಸೇವಿಸಿದ್ದರಿಂದ ಗಾಂಧೀಜಿಯವರ ಆರೋಗ್ಯ ಹದಗೆಟ್ಟಿತು ಮತ್ತು ಸ್ವಲ್ಪ ರಕ್ತಭೇದಿಯಾಯಿತು. ಆದರೆ ಅವರು ಆ ಕಡೆ ಗಮನ ಕೊಡಲಿಲ್ಲ. ರಾಜ್ಯಕ್ಕಾಗಿ ಸೈನಿಕರನ್ನು ಭರ್ತಿ ಮಾಡಿಸಬೇಕೆಂದು ಹಳ್ಳಿಗಳಲ್ಲೆಲ್ಲಾ ಅಡ್ಡಾಡುತ್ತಿದ್ದರು, ಈ ಸಮಯದಲ್ಲಿ ಗಾಂಧೀಜಿ ಸಾಕಷ್ಟು ಶಾರೀರಿಕವಾಗಿ ಸುಸ್ತಾಗಿದ್ದರು, ವಿಶ್ರಾಂತಿಗೆ ಸ್ವಲ್ಪವೂ ಸಮಯವಿರಲಿಲ್ಲ. ಈ ಓಡಾಟದ ಮಧ್ಯೆ ಒಂದು ದಿನ ಅಹಮದಾಬಾದಿಗೆ ಹೋಗಬೇಕಾಯಿತು. ಅಲ್ಲಿ ಒಂದು ಹಬ್ಬಕ್ಕಾಗಿ ಕಸ್ತೂರಬಾ ಎಣ್ಣೆ ಹಾಕಿ ಗೋಧಿಯ ದಲಿಯಾ ಮಾಡಿದ್ದರು, ಅದರ ಜೊತೆ ಹೆಸರುಕಾಳ ಹುಗ್ಗಿಯನ್ನೂ ಮಾಡಿಸಿದ್ದರು. ಗಾಂಧೀಜಿಗೆ ಇವೆರಡೂ ಪ್ರಿಯವಾದ ಪದಾರ್ಥಗಳೇ. ಕಸ್ತೂರಬಾಗೆ ಸಂತೋಷ ನೀಡಲು ಅವರು ಸ್ವಲ್ಪ ತಿಂದರು,

ರುಚಿಹತ್ತಿತ್ತು, ಎರಡು ಪದಾರ್ಥಗಳನ್ನು ಇಷ್ಟದಿಂದ ತಿಂದರು. ಬಹುಶಃ ಇವೆರಡೂ ಪದಾರ್ಥಗಳಿಂದಾಗಿ ಅವರಿಗೆ ಭಯಂಕರ ಆಮಶಂಕೆ ಹಿಡಿದುಕೊಂಡಿತು. ನದಿಯಾದ್‌ಗೆ ಹೋಗುವುದು ಅನಿವಾರ್ಯವಾಗಿತ್ತು. ಆದ್ದರಿಂದ ಯಾರಿಗೂ ಹೇಳದೇ ಅವರು ನಡೆದುಕೊಂಡೇ ಸಾಬರಮತಿ ಸ್ಟೇಷನ್‌ಗೆ ಹೋದರು. ಹೆಚ್ಚೆಂದರೆ ಎರಡು ಮೈಲು ದೂರ ಇದ್ದಿರಬಹುದು. ಆದರೆ ಅವರಿಗೆ ಅಷ್ಟು ದೂರ ಕೂಡ ನಡೆಯಲಾಗಲಿಲ್ಲ. ವಲ್ಲಭಭಾಯಿ ಅಹಮದಾಬಾದ್ ಸ್ಟೇಷನ್‌ನಿಂದ ಅವರಿಗೆ ಜೊತೆ ಸಿಕ್ಕರು. ಗಾಂಧೀಜಿಯವರ ಸ್ಥಿತಿ ನೋಡಿ ಅವರಿಗೆ ಏನೋ ಕಷ್ಟವಾಗುತ್ತಿದೆ ಎಂದು ಅರ್ಥವಾಯಿತು. ಆದರೆ ಗಾಂಧೀಜಿ ಕರುಳು ಹಿಂಡುತ್ತಿದ್ದ ಆ ನೋವನ್ನು ಅಡಗಿಸಿಕೊಂಡರು.

ರಾತ್ರಿ ಹತ್ತು ಗಂಟೆಗೆ ನದಿಯಾದ್ ತಲಪಿ ಅರ್ಧಮೈಲು ದೂರದಲ್ಲಿದ್ದ ಅನಾಥಾಶ್ರಮಕ್ಕೆ ಹೋಗಬೇಕಾಗಿತ್ತು. ಇಷ್ಟು ಕಡಿಮೆ ದೂರ ನಡೆಯವುದೂ ೧೦ ಮೈಲು ನಡೆದಷ್ಟು ಕಷ್ಟವಾಯಿತು. ಅನಾಥಾಶ್ರಮವನ್ನು ತಲುಪಿ ಗಾಂಧೀಜಿ ತಮ್ಮ ಕೊಠಡಿಯ ಬಳಿ ಕಮೋಡನ್ನು ಇರಿಸಿಕೊಂಡರು. ರಾತ್ರಿ ಕಳೆಯುವುದರೊಳಗಾಗಿ ೪೦–೫೦ ಬಾರಿ ರಕ್ತಭೇದಿಯಾಯಿತು. ಜೊತೆಗಾರರೆಲ್ಲಾ ಗಾಬರಿಯಾದರು. ಡಾಕ್ಟರ್ ಬಂದರಾದರೂ ಗಾಂಧೀಜಿ ಔಷಧಿ ತೆಗೆದುಕೊಳ್ಳಲು ಸಿದ್ಧರಿರಲಿಲ್ಲ, ಪಾಪ ಎಲ್ಲರೂ ಚಿಂತಿತರಾಗಿದ್ದರು. ಅಹಮದಾಬಾದಿಗೆ ಸಮಾಚಾರ ತಲುಪಿತು. ಅಂಬಾಲಾಲ್ ಸಾರಾಭಾಯಿ ಮತ್ತು ಅವರ ಪತ್ನಿ ಸರಳಾದೇವಿ ಕಸ್ತೂರಬಾನ ಕರೆದುಕೊಂಡು ನಡಿಯಾದ್‌ಗೆ ಬಂದರು. ಕಾರಿನಲ್ಲಿ ಮಲಗಿಸಿಕೊಂಡು ಗಾಂಧೀಜಿಯನ್ನು ಸಾರಾಭಾಯಿ ತಮ್ಮ ಮನೆಗೆ ಅಹಮದಾಬಾದ್‌ಗೆ ಕರೆದುಕೊಂಡು ಬಂದರು. ಎರಡು ಮೂರು ದಿನ ಕಾಯಿಲೆ ಬಿದ್ದಿದ್ದಕ್ಕೆ ಗಾಂಧೀಜಿಯವರ ಆರೋಗ್ಯ ಪೂರ್ಣ ಕೆಟ್ಟುಹೋಯಿತು. ಸಾರಾಭಾಯಿ ದಂಪತಿಗಳು ಬಹಳ ಪ್ರೀತಿಯಿಂದ ಅವರ ಸೇವೆ ಮಾಡಿದರು. ಆದರೆ ಗಾಂಧೀಭಾಯಿಗೆ ಆಶ್ರಮ ಬಿಟ್ಟರೆ ಇನ್ನೆಲ್ಲೂ ಶಾಂತಿ ಸಿಗುತ್ತಿರಲಿಲ್ಲ, ಆಮಶಂಕೆ ವಾಸಿಯಾಯಿತು. ಆದರೆ ತೀರಾ ನಿತ್ರಾಣ. ಒಂದು ದಿನ ರಾತ್ರಿ ಇನ್ನೇನು ಕೊನೆಯುಸಿರು ಎಳೆಯುವ ಸ್ಥಿತಿ, ಮಾತನಾಡಲು ಆಗುತ್ತಿರಲಿಲ್ಲ, ಸೋತು ಹೋಗುತ್ತಿದ್ದರು. ಗೀತಾಪಾಠ ಕೇಳುತ್ತಿದ್ದರು, ಇನ್ನು ಬದುಕುಳಿಯುವುದಿಲ್ಲ ಅಂತ ಅವರಿಗೆ ಮನಸ್ಸಿನಲ್ಲಿ ಅನಿಸಿತ್ತು. ಡಾಕ್ಟರ್ ಪರೀಕ್ಷಿಸಿ ನೋಡಿ ಮೃತ್ಯು ಭಯವಿಲ್ಲ ಅಂದರು. ಮಿತ್ರರ ಬಲವಂತದ ಮೇರೆಗೆ ಬೊಂಬಾಯಿ ಬಳಿ ಸಹ್ಯಾದ್ರಿಯ ಕಣಿವೆಯಲ್ಲಿ ಆರೋಗ್ಯ ಪಡೆಯುವ ಉದ್ದೇಶದಿಂದ ಮಾಥೇರಾನ್‌ಗೆ ಹೋದರು. ಆದರೆ ಇಲ್ಲಿ ನೀರು ಚೆನ್ನಾಗಿ ಇರಲಿಲ್ಲವಾದುದರಿಂದ ಬೊಂಬಾಯಿಗೆ ಬಂದರು. ಅಲ್ಲಿ ಡಾ॥ ದಲಾಲ್ ಅವರನ್ನು ಪರೀಕ್ಷಿಸಿದರು. ಗಾಂಧೀಜಿ ಇಂಜೆಕ್ಷನ್ ತೆಗೆದುಕೊಳ್ಳುತ್ತಿರಲಿಲ್ಲ, ಇಂಜೆಕ್ಷನ್‌ನಲ್ಲಿ ಮಾಂಸದ ಅಂಶ ಇರುತ್ತೆ ಅಂತ ಅವರಿಗೆ

ಅನುಮಾನವಿತ್ತು. ಇಂಜೆಕ್ಷನ್‌ನಲ್ಲಿ ಶುದ್ಧ ವನಸ್ಪತಿ ತತ್ವಗಳಿರುತ್ತವೆಂದು ಡಾ॥ ದಲಾಲ್ ಗಾಂಧೀಜಿಗೆ ತಿಳುವಳಿಕೆ ನೀಡಿದರು. ರಕ್ತಕ್ಕೆ ಇಂಜೆಕ್ಷನ್ ಕೊಟ್ಟರೆ ಬೇಗ ಪರಿಣಾಮ ಬೀರುತ್ತೆ ಅಂದರು. ಆಗ ಗಾಂಧೀಜಿ ಇಂಜೆಕ್ಷನ್ ತೆಗೆದುಕೊಂಡರು. ಗಾಂಧೀಜಿ ಹಾಲು ಕುಡಿದರೆ ಶರೀರಕ್ಕೆ ಶಕ್ತಿ ಬರುತ್ತೆ ಅಂತ ಡಾ॥ ದಲಾಲ್ ಬಯಸಿದರು. ಅವರು ಗಾಂಧೀಜಿಯನ್ನು "ನಿಮ್ಮ ಈ ಹಾಲಿನ ವ್ರತ ಏನು, ಎಂತದ್ದು?" ಅಂತ ವಿಚಾರಿಸಿದರು. ಗಾಂಧೀಜಿ ತಮ್ಮ ವ್ರತದ ಕಥೆಯನ್ನು ವಿವರಿಸಿದರು. ಗಾಂಧೀಜಿ ಇದನ್ನೆಲ್ಲಾ ವಿಸ್ತಾರವಾಗಿ ವಿವರಿಸಿದಾಗ ಅಲ್ಲಿ ಕಸ್ತೂರಬಾ ನಿಂತಿದ್ದರು, ಆಕೆ ಹೇಳಿದರು, "ಹಾಗಾದರೆ ಮೇಕೆ ಹಾಲು ಕುಡಿಯಬಹುದು, ಅದರಲ್ಲಿ ವ್ರತ ಹಾಳಾಗುವುದಿಲ್ಲ." ಡಾ॥ ದಲಾಲ್‌ಗೆ ಈ ಸಮಸ್ಯಾಪೂರ್ತಿ ಸರಿಯೆಂದು ತೋರಿತು. ಗಾಂಧೀಜಿಯವರ ಶರೀರ ತೀವ್ರವಾಗಿ ಕರಗಿ ಹೋಗಿತ್ತಾದುದರಿಂದ ಅವರು ಈ ರೀತಿ ವ್ರತ ಮುರಿಯಲು ಒಪ್ಪಿಕೊಂಡರು. ಮೇಕೆ ಹಾಲು ಕುಡಿಯಲಾರಂಭಿಸಿದರು. ಪ್ರತಿಜ್ಞೆಯ ಶುದ್ಧ ಭಾವನೆಯಲ್ಲಿ ಈ ರೀತಿ ಸೂಕ್ಷ್ಮ ದೋಷ ಬಂತು. ಗಾಂಧೀಜಿಗೆ ಇದರ ಪಶ್ಚಾತ್ತಾಪ ಬದುಕಿರುವವರೆಗೂ ಇದ್ದೇ ಇತ್ತು. ದೇಶಸೇವೆಗಾಗಿ ಪ್ರತಿಜ್ಞೆಯ ಮಾತುಗಳನ್ನು ರಕ್ಷಿಸಿ ತೃಪ್ತರಾದರು.

ಆ ವೇಳೆಗೆ ಗಾಂಧೀಜಿಯವರಿಗೆ ಪೈಲ್ಸ್‌ನ ಆಪರೇಷನ್ ಕೂಡ ಮಾಡಬೇಕಾಯಿತು. ಆದರೆ ಹಾಲಿನ ಪಥ್ಯದಿಂದ ಅವರ ಆರೋಗ್ಯ ಸರಿ ಹೋಯಿತು. ಈ ಆಮಶಂಕೆಯ ನಂತರ ಅವರು ಹೆಚ್ಚು ಹೊತ್ತು ನಿಂತು ಭಾಷಣ ಮಾಡಲು ಆಗುತ್ತಿರಲಿಲ್ಲ. ಸ್ವಲ್ಪ ಹೊತ್ತಿನಲ್ಲೇ ಶರೀರ ನಡುಗಲಾರಂಭಿಸುತ್ತಿತ್ತು. ಆದುದರಿಂದ ಕುಳಿತುಕೊಂಡೇ ಭಾಷಣ ಮಾಡಬೇಕಾಗುತ್ತಿತ್ತು. ಹೀಗಾಗಿ ೪೦–೫೦ ಮೈಲು ದೂರ ನಡೆಯುವುದನ್ನು ಬಿಡಬೇಕಾಗಿ ಬಂತು.

* * * *

# ೬. ರೌಲಟ್ ಆ್ಯಕ್ಟ್

ಗಾಂಧೀಜಿ ರೋಗದಿಂದ ಹಾಸಿಗೆ ಹಿಡಿದಿರುವಾಗಲೇ ರೌಲಟ್ ಬಿಲ್‌ನ ಒಂದು ಪ್ರತಿ ಓದಿದರು. ಪ್ರಥಮ ವಿಶ್ವಯುದ್ಧದ ಸಂದರ್ಭದಲ್ಲಿ ಬ್ರಿಟಿಷ್ ಸರಕಾರ ಜಸ್ಟಿಸ್ ರೌಲಟ್‌ರ ಅಧ್ಯಕ್ಷತೆಯಲ್ಲಿ ದೇಶದ್ರೋಹ ಕುರಿತಂತೆ ಕಾನೂನು ಮಾಡುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಿದ್ದಿತು. ೧೯೧೮ರ ಜುಲೈ ತಿಂಗಳಿನಲ್ಲಿ ರೌಲಟ್ ಸಮಿತಿಯ ವರದಿ ಮುದ್ರಿತವಾಯಿತು. ಕೇಂದ್ರೀಯ ಶಾಸನ ಸಭೆಯಲ್ಲಿ ಈ ರಿಪೋರ್ಟ್‌ನ್ನು ಇಡಲಾಗಿ ಒಂದು ವಿಧೇಯಕ ಅಂಗೀಕೃತವಾಯಿತು. ಅದನ್ನೇ ರೌಲಟ್ ಆ್ಯಕ್ಟ್ ಎಂದು ಕರೆದರು. ಈ ವಿಧೇಯಕದಲ್ಲಿ ದೇಶದ್ರೋಹವನ್ನು ಎಷ್ಟು ವಿಸ್ತೃತವಾಗಿ ಇಟ್ಟಿದ್ದರೆಂದರೆ ಯಾವುದೇ ಚಳುವಳಿ–ವಿರೋಧಿಸುವುದು, ಅಹಿಂಸಾತ್ಮಕವಾಗಿದ್ದರೂ ಅದನ್ನು ದೇಶದ್ರೋಹ ಅಂತ ಪರಿಗಣಿಸಲಾಗುತ್ತಿತ್ತು. ಅನ್ಯಾಯದ ವಿರುದ್ಧ ಧ್ವನಿ ಎತ್ತಿದರೆ ಸಾಕು, ಈ ವಿಧೇಯಕ ಅದನ್ನು ಅಪರಾಧವೆಂದುಬಿಡುತ್ತಿತ್ತು, ಅಂತಹ ಅಪರಾಧಗಳಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತಿತ್ತು. ಇಷ್ಟಲ್ಲದೆ ಅಪರಾಧಿ ಅನ್ನಿಸಿಕೊಂಡವನಿಗೆ ಅಪೀಲ್ ಮಾಡುವ ಹಕ್ಕು ಇರಲಿಲ್ಲವೆನ್ನುವುದು ಹೆಚ್ಚಿನ ಚಿಂತೆಗೆ ಕಾರಣವಾಗಿತ್ತು. ಈ ದೇಶದ್ರೋಹದ ಕೇಸುಗಳ ವಿಷಯ ಸಮಾಜಕ್ಕೆ ತಿಳಿಯುವುದೇ ಬೇಡವೆಂದು, ಜನ ಇದನ್ನು ವಿರೋಧಿಸಬಾರದು ಎಂದು ಅವುಗಳನ್ನು ಗೋಪ್ಯವಾಗಿ ಕೋರ್ಟ್‌ಗಳಲ್ಲಿ ನಡೆಸುವ ವ್ಯವಸ್ಥೆ ಮಾಡಲಾಗಿತ್ತು. ಈ ರೀತಿ ಈ ಗುಲಾಮ ದೇಶದ ಗುಲಾಮಗಿರಿಯ ಬೇಡಿಗಳನ್ನು ಬಹಳ ಕಠೋರವಾಗಿಸಲಾಗಿತ್ತು. ವ್ಯಕ್ತಿ ಅತಿ ನಿರ್ದೋಷಿಯಾಗಿದ್ದರೂ, ಅಹಿಂಸಾಪಾಲಕನಾಗಿದ್ದರೂ ದೇಶದ್ರೋಹಿ ಎಂದು ಹೇಳಿ ಅವನನ್ನು ಗಲ್ಲಿಗೇರಿಸಬಹುದಾಗಿತ್ತು, ದೇಶದಿಂದ ಗಡೀಪಾರು ಮಾಡಬಹುದಾಗಿತ್ತು. ಇದು ಭಾರತೀಯ ಸ್ವಾಭಿಮಾನವನ್ನು ಅವರ ಸ್ವಾತಂತ್ರ್ಯವನ್ನು ಹೊಸಗಿ ಹಾಕುವ ಒಂದು ಭಯಂಕರ ಕುತಂತ್ರವಾಗಿತ್ತು. ಸತ್ಯಾಗ್ರಹ ಮಾಡುವವನನ್ನು ದೇಶದ್ರೋಹ ಮಾಡಿದನೆಂದು ಹೇಳಿ ಈ ವಿಧೇಯಕದ ಅಡಿಯಲ್ಲಿ ಗಲ್ಲಿಗೇರಿಸಬಹುದಾಗಿತ್ತು. ಪೂರ್ತಿಯಾಗಿ ಸರ್ವಾಧಿಕಾರಿ ಮನೋವೃತ್ತಿಯ ಈ ಕಾನೂನನ್ನು ಓದಿ ಗಾಂಧೀಜಿ ಚಕಿತರಾದರು. ಇದರಿಂದಂತೂ ದೇಶದ ಪ್ರತಿಯೊಬ್ಬ ಮನುಷ್ಯನನ್ನು ಗುಲಾಮನನ್ನಾಗಿ ಪರಿವರ್ತಿಸಿದ್ದಂತಾಯಿತು. ಸ್ವಾಭಿಮಾನವುಳ್ಳ ಯಾರೊಬ್ಬನೂ ಈ ಅಪಮಾನವನ್ನು

ಸಹಿಸಲು ಸಾಧ್ಯವಿರಲಿಲ್ಲ. ಇದನ್ನು ವಿರೋಧಿಸಲು ಒಂದು ಸ್ವರಾಜ್ಯ ಸಭೆಯನ್ನು ಕರೆದರು. ಈ ವಿಷಯದ ಚರ್ಚೆಗಾಗಿ ಬೊಂಬಾಯಿಯಲ್ಲಿದ್ದ ೧೬ ಮಂದಿ ಸ್ನೇಹಿತರನ್ನು ಗಾಂಧಿಜಿ ತನ್ನ ರೋಗದ ಕೋಣೆಗೆ ಕರೆಸಿಕೊಂಡಿದ್ದರು, ಅಬ್ದುಲ್ಲಾ ಬ್ರೈಲವಿ, ಹೊರ್ನಿಮನ್, ಉಮರ್ ಸುಭಾನಿ, ಶಂಕರಲಾಲ್ ಬ್ಯಾಂಕರ್, ಅನಸೂಯಾ ಬಹನ್, ಸಾರಾಭಾಯಿ, ಸರೋಜಿನೀ ನಾಯ್ಡು, ಮಹದೇವ ದೇಸಾಯಿ, ಸ್ವಾಮಿ ಆನಂದ ಅವರಲ್ಲಿ ಪ್ರಮುಖರು. ಅಲ್ಲಿಯವರೆವಿಗೂ ತನ್ನದೇ ಆದ ಯಾವ ಪತ್ರಿಕೆಯನ್ನು ಗಾಂಧೀಜಿ ಹೊರಡಿಸಿರಲಿಲ್ಲ. ಆವಶ್ಯಕತೆ ಬಿದ್ದಾಗೆಲ್ಲ 'ಕ್ರಾನಿಕಲ್' ಮತ್ತು 'ಫ್ರೀ ಪ್ರೆಸ್'ನಲ್ಲಿ ಮನಬಿಚ್ಚಿ ತನ್ನ ಅಭಿಪ್ರಾಯ ಪ್ರಕಟಪಡಿಸುತ್ತಿದ್ದರು. ರೌಲಟ್ ಆ್ಯಕ್ಟ್‌ನ್ನು ವಿರೋಧಿಸಿ ಈ ಸ್ವರಾಜ್ಯ ಸಭೆ ಒಂದು ಪ್ರತಿಜ್ಞಾ ಪತ್ರವನ್ನು ಸಿದ್ಧಪಡಿಸಿತು. ಬೊಂಬಾಯಿಯ ಅನೇಕ ಸೇಠರು ಈ ಪ್ರತಿಜ್ಞಾ ಪತ್ರಕ್ಕೆ ಸಹಿ ಹಾಕಿದರು. ಮಾರ್ಚಿ ೧೯೧೯ ರಲ್ಲಿ ಈ ರೌಲಟ್ ಆ್ಯಕ್ಟ್ ಕೇಂದ್ರೀಯ ಶಾಸನ ಸಭೆಯಿಂದ ಸಕ್ರಮವಾಗಿ ಅಂಗೀಕೃತವಾಗಿ ಕಾನೂನು ಆಯಿತು.

ದಕ್ಷಿಣ ಆಫ್ರಿಕಾ ಮತ್ತು ನಟೇಶನ್ ಕಾಲದಿಂದಲೂ ಗಾಂಧೀಜಿಯವರಿಗೆ ಕಸ್ತೂರಿ ರಂಗಂ ಅವರ ಪರಿಚಯವಿತ್ತು. ಭಾರತಕ್ಕೆ ಹಿಂದಿರುಗಿದ ಮೇಲೆ ಕಸ್ತೂರಿ ರಂಗಂ ಅವರು ಮದ್ರಾಸ್‌ಗೆ ಬರುವಂತೆ ಗಾಂಧೀಜಿಯವರನ್ನು ಬಲವಂತ ಮಾಡಿ ಕರೆಯುತ್ತಿದ್ದರು. ಪ್ರತಿ ೩–೪ ತಿಂಗಳುಗಳಿಗೊಮ್ಮೆ ಕಸ್ತೂರಿ ರಂಗಂ ಅವರು ಪ್ರೀತಿಯಿಂದ ಕರೆಯುತ್ತಲೇ ಇರುತ್ತಿದ್ದರು. ಪ್ರಾಣಾಂತವಾಗಿದ್ದ ಈ ರೋಗದಿಂದ ಇನ್ನೂ ಚೇತರಿಸಿಕೊಂಡಿರಲಿಲ್ಲವಾದರೂ ಗಾಂಧೀಜಿ ಕಸ್ತೂರಬಾ ಮತ್ತು ಮಹಾದೇವ ದೇಸಾಯಿ ಅವರನ್ನು ಕರೆದುಕೊಂಡು ಬೊಂಬಾಯಿಂದ ಮದ್ರಾಸಿಗೆ ಹೋದರು. ನೇರ ಹಾಗೂ ಸರಳ ಶುದ್ಧ ಹೃದಯಿಗಳಾದ ದಕ್ಷಿಣ ಭಾರತದ ಭಕ್ತಜನರಿಗೆ 'ಸಿಗಿರಮಿಟ್ ಪದ್ಧತಿ'ಯ ಕಾಲದಿಂದಲೂ ಗಾಂಧೀಜಿಯನ್ನು ಕಂಡರೆ ಬಹಳ ಪ್ರೀತಿ. ಗಾಂಧೀಜಿಗೂ ಅಷ್ಟೆ. ದಕ್ಷಿಣ ಭಾರತವನ್ನು ಅವರು ತನ್ನ ಸ್ವಂತ ಮನೆಯ ಹಾಗೆಯೇ ಪ್ರೀತಿಸುತ್ತಿದ್ದರು. ಹೀಗೆ ದಕ್ಷಿಣ ಭಾರತ–ಗಾಂಧೀಜಿ ಇಬ್ಬರಿಗೂ ಪರಸ್ಪರ ಒಬ್ಬರೊಬ್ಬರ ಮೇಲೆ ಹಕ್ಕು ಅಧಿಕಾರ ಇರುವಂತಹ ಸಂಬಂಧ ಏರ್ಪಟ್ಟಿತ್ತು. ಮದ್ರಾಸಿನಲ್ಲಿ ಗಾಂಧೀಜಿಯವರನ್ನು ಕಸ್ತೂರಿರಂಗನ್ ಅವರ ಆಪ್ತಮಿತ್ರ ವಕೀಲ ರಾಜಗೋಪಾಲಚಾರಿ ಮನೆಯಲ್ಲಿ ಇಳಿಸಿದರು. ಅಲ್ಲಿಂದ ಮೊದಲುಗೊಂಡು ರಾಜಾಜೀ ಜೊತೆ ಪರಿಚಯ, ನಂತರದಲ್ಲಿ ಮಿತ್ರರಾದರು, ಕೊನೆಯಲ್ಲಿ ಬೀಗರು ಕೂಡ ಆದರು. ಮದ್ರಾಸ್‌ನಲ್ಲಿ ಅನೇಕ ಸಭೆಗಳು ಚರ್ಚೆಗಳು ನಡೆಯುತ್ತಿದ್ದವು. ಆದರೆ ಗಾಂಧೀಜಿಯ ಹೃದಯದಲ್ಲಿ ರೌಲಟ್ ಆ್ಯಕ್ಟ್‌ನ ಮುಳ್ಳು ನಾಟಿಕೊಂಡಿತ್ತು. ಅದನ್ನು ವಿರೋಧಿಸಲು ಯಾವ ಮಾರ್ಗವೂ ಕಂಡುಬರುತ್ತಿರಲಿಲ್ಲ. ಸತ್ಯಾಗ್ರಹ ಹೇಗೆ, ಎಲ್ಲಿ ಮಾಡುವುದು ಅಂತ ಏನೆಂದೂ ತಿಳಿಯುತ್ತಿರಲಿಲ್ಲ. ಈ ಚಿಂತೆಯಲ್ಲೇ

ದೈನಂದಿನ ನಿಯಮಕ್ಕೂ ಮುಂಚೆ ಬೆಳಗಿನ ಜಾವ ನಾಲ್ಕು ಗಂಟೆಗೇ ಗಾಂಧೀಜಿ ಎದ್ದು ಕುಳಿತರು. ಇಂತಹ ಘೋರವಾದ ಕಾನೂನನ್ನು ವಿರೋಧಿಸಲು ದೇಶದಲ್ಲಿ ಎಲ್ಲ ಕಡೆ ಹರತಾಳ ಹೂಡಬೇಕು ಅಂತ ಅರೆನಿದ್ದೆಯಲ್ಲೇ ಆಲೋಚನೆ ಮಾಡಿದರು. ಬೆಳಗಾದ ಮೇಲೆ ಗಾಂಧೀಜಿ ರಾಜಾಜಿಗೆ ತಮ್ಮ ಭಾವನೆಗಳನ್ನು ವಿವರಿಸಿದರು. ಸತ್ಯಾಗ್ರಹ ಆತ್ಮಶುದ್ಧಿಯ ವಿಧಾನ ಹಾಗೂ ಸ್ವಾಭಿಮಾನವನ್ನು ರಕ್ಷಿಸುವುದು ಧರ್ಮಯುದ್ಧ, ಅದಕ್ಕಾಗಿ ಇಡೀ ದೇಶದಲ್ಲಿ ಒಂದು ದಿನದ ಹರತಾಳವನ್ನು ಆಚರಿಸಬೇಕು. ಉಪವಾಸ, ಪ್ರಾರ್ಥನೆಯಲ್ಲಿ ದಿನ ಕಳೆಯಬೇಕು ಅಂದರು, ರಾಜಗೋಪಾಲಚಾರಿ ಅವರಿಗೆ ಈ ಸಲಹೆ ಬಹಳ ಇಷ್ಟವಾಯಿತು. ಹೆಚ್ಚು ಸಮಯವಿರಲಿಲ್ಲ, ದೇಶ ದೊಡ್ಡದಾಗಿತ್ತು. ಹಾಗಿದ್ದರೂ ಅಂತಹ ಕಾನೂನುಗಳನ್ನು ಆದಷ್ಟು ಬೇಗನೇ ವಿರೋಧಿಸಬೇಕು. ಮಾರ್ಚ್ ೩೦ರಂದು ಹರತಾಳ ಆಚರಿಸಬೇಕು ಎಂದು ದಿನವನ್ನು ಗೊತ್ತುಪಡಿಸಿದರು. ಇಷ್ಟು ಕಡಿಮೆ ಅವಧಿಯಲ್ಲಿ ಇಡೀ ದೇಶದಲ್ಲಿ ಜನರನ್ನು ಸಿದ್ಧಪಡಿಸುವ ಕೆಲಸ ಕಷ್ಟದ್ದಾಗಿತ್ತು. ಆದರೆ ಬೊಂಬಾಯಿ, ಮದ್ರಾಸ್, ಬಿಹಾರ್, ಸಿಂಧ್ ಪ್ರಾಂತ್ಯಗಳಲ್ಲಿ ಗಾಂಧೀಜಿಯ ಕರೆಯ ಮೇರೆಗೆ ಜನ ಹರತಾಳ ಮಾಡುತ್ತಾರೆ ಎಂದವರಿಗೆ ನಂಬಿಕೆ ಇತ್ತು. ಇಷ್ಟು ಪ್ರಾಂತ್ಯಗಳಲ್ಲಿ ಗಂಪು ಕೂಡಿದರೂ ಸಾಕಷ್ಟೇ ಪ್ರಭಾವ ಬೀರಬಹುದಿತ್ತು. ಹೀಗಾಗಿ ಗಾಂಧೀಜಿ ಮತ್ತು ರಾಜಗೋಪಾಲಚಾರಿಯವರಿಗೆ ಸಾಕಷ್ಟು ಧೈರ್ಯ ಮತ್ತು ನಂಬಿಕೆ ಇತ್ತು.

ಹರತಾಳ ಮಾಡಬೇಕು ಎಂದು ಒಮ್ಮೆ ನಿಶ್ಚಯಿಸಿದ ಮೇಲೆ ಮದ್ರಾಸ್‌ನ ಮಿತ್ರರೆಲ್ಲಾ ಕೂಡಿಕೊಂಡರು. ಗಾಂಧೀಜಿ ಒಂದು ಚಿಕ್ಕ ಹೇಳಿಕೆಯನ್ನು ಸಿದ್ಧಪಡಿಸಿದರು. ೧೯೧೯ರ ಮಾರ್ಚಿ ೩೦ರಂದು ಹರತಾಳ ನಡೆಸುವುದೆಂದು ಘೋಷಿಸಿದರು. ನಂತರ ಈ ದಿನಾಂಕವನ್ನು ಬದಲಾಯಿಸಿ ಏಪ್ರಿಲ್ ೬ ಎಂದು ನಿಶ್ಚಯಿಸಿದರು. ಸಿದ್ಧತೆಗಳಿಗೆ ಬಹಳ ಕಡಿಮೆ ಸಮಯವಿತ್ತು. ಆ ಕಾಲದಲ್ಲಿ ಪೋಸ್ಟ್, ತಂತಿ ಇವೆಲ್ಲ ಬಹಳ ಚಟುವಟಿಕೆಯಿಂದ ಕೆಲಸ ಮಾಡುತ್ತಿದ್ದವು. ಮುಖ್ಯವಾದ ಊರುಗಳಿಗೆ ಮಿತ್ರರಿಗೆ ತಾರು ಕಳಿಸಿದರು, ಪತ್ರ ಪೋಸ್ಟ್ ಮಾಡಿ ವಿಷಯ ತಿಳಿಸಿದರು. ಗಾಂಧೀಜಿ ತಕ್ಷಣ ದಕ್ಷಿಣ ಭಾರತದ ಒಂದು ಚಿಕ್ಕ ಯಾತ್ರೆ ಮಾಡಿದರು. ಏಪ್ರಿಲ್ ೪ ರಂದು ಗಾಂಧೀಜಿ ಬೊಂಬಾಯಿಗೆ ಬಂದು ತಲುಪಿದರು. ಏಪ್ರಿಲ್ ೬ ರಂದು ಹರತಾಳದಲ್ಲಿ ಬೊಂಬಾಯಿಯ ಜನರೊಂದಿಗೆ ಕುಳಿತುಕೊಳ್ಳಬೇಕೆಂಬುದು ಅವರ ಅಭಿಪ್ರಾಯವಾಗಿತ್ತು.

ತಾರು ತಲಪುವಲ್ಲಿ ಸ್ವಲ್ಪ ಅಸ್ತವ್ಯಸ್ತತೆ ಕಂಡುಬಂತು. ದೆಹಲಿಯಲ್ಲಿ ಸ್ವಾಮಿ ಶ್ರದ್ಧಾನಂದರು ಮಾರ್ಚಿ ೩೦ ಕ್ಕೆ ಹರತಾಳವೆಂದು ನಿಶ್ಚಯಿಸಿದರು. ಅದನ್ನು ಬದಲಾಯಿಸಿ ಏಪ್ರಿಲ್ ೬ ಅಂತ ಮಾಡಲು ಅವರಿಗೆ ಇಷ್ಟವಾಗಲಿಲ್ಲ. ಸ್ವಾಮೀಜಿ ಮತ್ತು ಹಕೀಮ ಅಜಮಲ್‌ಖಾನ್‌ನ ಮುಂದಾಳತ್ವದಲ್ಲಿ ದೆಹಲಿಯಲ್ಲಿ ಜನ ಹರತಾಳ

ಮಾಡಿದರು. ಸ್ವಾಮೀಜಿ ಮತ್ತು ಹಕೀಮ್ ಸಾಹೆಬರು ಜಾಮಾ ಮಸೀದಿಯಲ್ಲಿ ಒಂದು ದೊಡ್ಡ ಸಭೆಯನ್ನು ಏರ್ಪಡಿಸಿದರು. ಹಿಂದೂ –ಮುಸ್ಲಿಮರು ಜೊತೆಗೂಡಿ ಈ ಹರತಾಳದಲ್ಲಿ ಭಾಗವಹಿಸಿದ್ದು ಹಿಂದೆಂದೂ ಘಟಿಸದ ಘಟನೆಯಾಗಿತ್ತು. ಜಾಮಾ ಮಸೀದಿಯ ಅಂಗಳದಲ್ಲಿ ಸ್ವಾಮೀಜಿ ತೀವ್ರ ಪ್ರಭಾವಶಾಲಿಯಾದೊಂದು ಭಾಷಣ ನೀಡಿದರು. ನಂತರ ಇಬ್ಬರೂ ನೇತಾರರ ಹಿಂದೆ ಹೋರಾಡುವದೊಂದು ಮೆರವಣಿಗೆ ಹೊರಟಿತ್ತು. ಅದರಲ್ಲಿ ವಂದೇ ಮಾತರಮ್ ಹಾಗೂ ಅಲ್ಲಾಹೋ ಅಕಬರ್‌ನ ಘೋಷಣೆಗಳು ಪ್ರತಿಧ್ವನಿಸುತ್ತಿದ್ದವು. ದೆಹಲಿ ನಗರದ ಜನಜೀವನ ಪೂರ್ತಿಯಾಗಿ ನಿಸ್ಪಂದಿತವಾಯಿತು. ಜನರ ಈ ಪ್ರತೀಕಾರದ ಪ್ರದರ್ಶನವನ್ನು ಸರಕಾರ ಸಹಿಸಲಿಲ್ಲ, ಪೋಲೀಸ್ ಆ ನಿಶ್ಶಸ್ತ್ರರಾದ ಗುಂಪಿನ ಮೇಲೆ ಗೋಲಿಬಾರ್ ಮಾಡಿದರು. ಅನೇಕರು ಅಲ್ಲೇ ಹುತಾತ್ಮರಾದರು. ಎಷ್ಟೋ ಜನರಿಗೆ ಗಾಯಗಳಾದವು. ಸರಕಾರದ ದಮನಚಕ್ರ ತೀವ್ರವಾಗಿತ್ತು. ಈ ಸಮಾಚಾರಗಳನ್ನೆಲ್ಲಾ ಕೇಳಿ ಗಾಂಧೀಜಿ ಏಪ್ರಿಲ್ ೬ ರಂದು ಬೊಂಬಾಯಿಯ ಹರತಾಳವನ್ನು ಮುಗಿಸಿ ೭ ನೆಯ ತಾರೀಖಿನಂದು ದೆಹಲಿಗೆ ಹೋಗುವೆನೆಂದು ನಿಶ್ಚಯಿಸಿದರು. ಪೂರ್ತಿ ಉತ್ತರ ಭಾರತದಲ್ಲಿ ಜೋರಾಗಿ ಹರತಾಳ ನಡೆಯಿತು. ದೆಹಲಿಯಲ್ಲಿ ನಡೆದಂತೆಯೇ ಎಲ್ಲ ಕಡೆಯೂ ಪೋಲೀಸರು ದೌರ್ಜನ್ಯ ನಡೆಸಿದರು. ಲಾಹೋರ್, ಅಮೃತಸರ, ಅಂಬಾಲಾ, ಜಲಂಧರ್‌ಗಳು ಭುಗಿಲೆದ್ದವು. ಸೈಫುದ್ದೀನ್ ಕಿಚಲೂ ಮತ್ತು ಡಾ॥ ಸತ್ಯಪಾಲರು ಒತ್ತಾಯ ಮಾಡಿ ಗಾಂಧೀಜಿಯನ್ನು ಪಂಜಾಬಿಗೆ ಕರೆದರು.

ಬೊಂಬಾಯಿಯಲ್ಲಿ ಏಪ್ರಿಲ್ ೬ ರಂದು ಹರತಾಳ ಏರ್ಪಡಾಗಿತ್ತು. ಚೌಪಾಟಿಯ ಕಡಲತಡಿಯಲ್ಲಿ ದೊಡ್ಡ ಸಭೆ ನಡೆಯಿತು. ಇಡೀ ಊರಿನಲ್ಲಿ ಹರತಾಳ ನಡೆಯಿತು. ಎಲ್ಲಾ ವಹಿವಾಟುಗಳೂ ನಿಂತುಹೋದವು, ಚೌಪಾಟಿಯಿಂದ ಮಾಧವಬಾಗ್‌ವರೆಗೂ ಮಾನವ ಸೈನ್ಯ ಕಿಕ್ಕಿರಿದು ನೆರೆದಿತ್ತು. ಗಾಂಧೀಜಿಯವರ ಆತ್ಮೀಯ ಮಿತ್ರರಾಗಿದ್ದ ಸ್ವಾಮಿ ಆನಂದರು ತಾವು ಕಣ್ಣಾರೆ ಕಂಡ ಈ ಕತೆಯನ್ನು ನನಗೆ ಬಹಳ ವರ್ಷ ಹಿಂದೆ ಹೇಳಿದ್ದರು. ಆ ಸಮಯದಲ್ಲಿ ಗಾಂಧೀಜಿ ಬರೆದಿದ್ದ 'ಹಿಂದ್ ಸ್ವರಾಜ್' ಮತ್ತು ರಸ್ಕಿನ್‌ನ ಶ್ರೇಷ್ಠ ಗ್ರಂಥ ಅನುವಾದ 'ಸರ್ವೋದಯ'ವನ್ನು ಮುದ್ರಿಸುವ, ಮಾರುವ, ಇಲ್ಲವೇ ಮನೆಯಲ್ಲಿಟ್ಟುಕೊಳ್ಳುವಂತಿಲ್ಲವೆಂದು ಪ್ರತಿಬಂಧಕಾಜ್ಞೆ, ಹೊರಟಿತ್ತು. ಈ ಎರಡು ಪುಸ್ತಕಗಳಿಂದ ಜನಜಾಗೃತಿ ಹೆಚ್ಚಾಗಿ, ಅವರು ಉಗ್ರರಾಗಬಹುದೆಂದು ಸರಕಾರಕ್ಕೆ ಭಯವಿತ್ತು. ಈ ಎರಡೂ ಪುಸ್ತಕಗಳ ಹತ್ತು ಸಾವಿರ ಪ್ರತಿಗಳನ್ನು ಸ್ವಾಮಿ ಆನಂದ್ ಮತ್ತು ಉಮರ್ ಸುಭಾನಿಯವರು ಏಪ್ರಿಲ್ ೫ರ ರಾತ್ರೋರಾತ್ರಿ ಮುದ್ರಿಸಿದರು ಮತ್ತು ಬೆಳಿಗ್ಗೆ ಹರತಾಳ ನಡೆಯುವಾಗಲೇ ಮಾರಾಟ ಮಾಡಿದರು. ನಗರದ ಶ್ರೀಮಂತ ಪಾರಸಿ, ಹಿಂದೂ ಮತ್ತು ಮುಸ್ಲಿಂ ಮಹಿಳೆಯರು ಇವನ್ನು ಮಾರಿದರು, ನಾಲ್ಕಾಣೆಯ ಪುಸ್ತಕವನ್ನು ಜನ ೧೦ ರೂ.

ಅಷ್ಟೇ ಅಲ್ಲ ಜೇಬಿನಿಂದ ಸಿಕ್ಕಷ್ಟು ಹಣ ಕೊಟ್ಟು ಕೊಂಡರು. ಜನರಲ್ಲಿ ಕೊನೆ ಇಲ್ಲದ ಉತ್ಸಾಹ ಕಂಡುಬಂದಿತ್ತು. ಚೌಪಾಟಿಯಲ್ಲಿ ಶ್ರೀಮತಿ ಸರೋಜಿನಿ ನಾಯ್ಡು ಮತ್ತು ಗಾಂಧೀಜಿಯವರ ಭಾಷಣ ನಡೆಯಿತು. ಈ ಲಕ್ಷಾಂತರ ಜನಸಂದಣಿಯಲ್ಲೇ ಸ್ವದೇಶೀ ಮತ್ತು ಹಿಂದೂ–ಮುಸ್ಲಿಂ ಏಕತೆಯ ಪ್ರತಿಜ್ಞೆಯನ್ನು ತೆಗೆದುಕೊಳ್ಳಬೇಕೆಂದು ಕೆಲವರು ಇಷ್ಟಪಟ್ಟರು. ಆದರೆ ಗಾಂಧೀಜಿ ಆ ತೆರನಾದ ಭಾವುಕತೆಗೆ ಒಳಗಾಗುವವರಾಗಿರಲಿಲ್ಲ. ಏಪ್ರಿಲ್ ೭ ರಂದು ಬೆಳಿಗ್ಗೆ ಸಮುದ್ರ ತೀರದಲ್ಲಿ ಪ್ರತಿಜ್ಞೆ ತೆಗೆದುಕೊಳ್ಳಲಾಗುವುದೆಂದು ಅವರು ಘೋಷಿಸಿದರು. ಬರಬೇಕಾದವರು ಅಲ್ಲಿಗೇ ಬನ್ನಿ ಎಂದರು. ಮಾರನೆಯ ದಿನ ಹೆಚ್ಚೆಂದರೆ ೫೦ ಮಂದಿ ಪ್ರತಿಜ್ಞೆ ತೆಗೆದುಕೊಳ್ಳಲು ಬಂದಿದ್ದರು. ಜನ ಜಾತ್ರೆಗೆ ಬರುತ್ತಾರೆ, ಕೆಲಸ ಮಾಡುವುದರಲ್ಲಿ ಆಸಕ್ತರಾಗಿರುವುದಿಲ್ಲ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯ, ಇವತ್ತಿಗೂ ಅಷ್ಟೆ. ಜಾತ್ರೆಯನ್ನೇ ಸತ್ಯವೆಂದು ಭಾವಿಸಿ ಜನರಿಂದ ಪ್ರತಿಜ್ಞೆ ಮಾಡುವಂತಹ ಗಂಭೀರವಾದ ಹೆಜ್ಜೆ ತೆಗೆದುಕೊಳ್ಳುತ್ತೇವೆ. ಇವತ್ತು ಪ್ರತಿಜ್ಞೆ ಮಾಡಿಸುವವನಿಗೂ ಗೊತ್ತು, ಈ ಪ್ರತಿಜ್ಞೆಯಲ್ಲಿ ತಾಕತ್ತೇನೂ ಇಲ್ಲ ಎಂದು, ಬದ್ಧತೆ ಎಂಬುದೇನೂ ಇಲ್ಲವೇ ಇಲ್ಲ. ಈ ಸಾಮೂಹಿಕ ಪ್ರತಿಜ್ಞೆ ಬರಿಯ ನೋಟವಾಗಿ ಉಳಿಯುತ್ತದೆ. ಅದರಿಂದೇನೂ ಪ್ರಯೋಜನವಿಲ್ಲ ಚಿಟಿಕಿ ಹೊಡೆಯುವುದರೊಳಗಾಗಿ ಇಡೀ ಸಮಾಜ ಸುಳ್ಳು ಹೇಳುವುದು; ಮೋಸ ಮಾಡುವುದು ಜೊತೆಗೆ ಚಾರಿತ್ರ್ಯಹೀನವಾಗುವುದನ್ನು ಕಲಿಯುತ್ತಾರೆ. ಗಾಂಧೀಜಿ ಪ್ರತಿಜ್ಞೆಯ ಗಂಭೀರತೆಯನ್ನು ಅರಿತಿದ್ದರು. ಅವರು ಯಾವಾಗಲೂ ಜನರನ್ನು ಅಂತಹ ನಾಟಕ ಕಟ್ಟದಿರುವಂತೆ ತಡೆದರು. ಪ್ರತಿಜ್ಞೆ ಮುರಿಯುವುದೆಂದರೆ ದೇವರಿಗೆ ಮೋಸ ಮಾಡಿದಂತೆ, ಗಾಂಧೀಜಿ ಅದನ್ನು ಸಹಿಸುತ್ತಿರಲಿಲ್ಲ.

ಏಪ್ರಿಲ್ ೭ರ ಸಂಜೆ ಗಾಂಧೀಜಿ ಟ್ರೈನ್‌ನಲ್ಲಿ ದೆಹಲಿಗೆ ಹೊರಟರು. ಅವರ ಜೊತೆ ಮಹಾದೇವ ದೇಸಾಯಿ ಕೂಡ ಇದ್ದರು. ೮ ಏಪ್ರಿಲ್ ೧೯೧೯ಕ್ಕೆ ಪಲವಲ್ ಬಳಿ ಟ್ರೈನ್‌ನ್ನು ವಿಶೇಷವಾಗಿ ನಿಲ್ಲಿಸಿ ಅವರನ್ನು ಪಂಜಾಬ್‌ಗೆ ಹೋಗದಿರುವಂತೆ ತಡೆದರು. ಆಗ ಗಾಂಧೀಜಿ ಮಹಾದೇವ ದೇಸಾಯಿ ಅವರನ್ನು ಸ್ವಾಮಿ ಶ್ರದ್ಧಾನಂದರ ಸಹಾಯಕರಾಗಿ ದೆಹಲಿಗೆ ಕಳುಹಿಸಿದರು. ಪೋಲೀಸರು ಗಾಂಧೀಜಿಯವರನ್ನು ಒಂದು ಗೂಡ್ಸ್‌ವ್ಯಾನ್‌ನಲ್ಲಿ ಕೂರಿಸಿ ಬೊಂಬಾಯಿಗೆ ಹಿಂದಿರುಗಿ ಕರೆತಂದಿತು. ಆದರೆ ಗಾಂಧೀಜಿಯವರನ್ನು ಬಂಧಿಸಿದ ಸುದ್ದಿ ಬೊಂಬಾಯಿ ನಗರವನ್ನು ಹುಚ್ಚಾಗಿಸಿತು. ದಂಗೆ ಏಳುವ ಭಯ ತಲೆದೋರಿತು. ಗಾಂಧೀಜಿ ರೇವಾಶಂಕರ ಝುವೇರಿಯ ಮನೆ ಮಣಿಭವನಕ್ಕೆ ತಲಪುವಷ್ಟರಲ್ಲೇ ಉಮರ್ ಸುಭಾನಿ ಮತ್ತು ಅನಸೂಯಾ ಬಹನ್ ಇಬ್ಬರೂ ಅಲ್ಲಿಗೆ ಬಂದರು. ಜನ ಬಹಳ ಉತ್ತೇಜಿತರಾಗಿರುವರೆಂದು ತಿಳಿಸಿ ಗಾಂಧೀಜಿಯವರನ್ನು ಅವರು ಮೋಟರಿನಲ್ಲಿ ಪಾಯಧೂನಿಗೆ ಕರೆದೊಯ್ದರು. ಗುಂಪು ಕಿಕ್ಕಿರಿದಿತ್ತಾದುದರಿಂದ ಮೋಟರು

ತೆವಳುತ್ತಿತ್ತು. ಗಾಂಧೀಜಿಯನ್ನು ನೋಡಿ ಜನ ನಲಿದಾಡಿದರು. ವಂದೇ ಮಾತರಂ, ಅಲ್ಲಾಹೋ ಅಕಬರ್‌ನ ಹರ್ಷಧ್ವನಿಯಿಂದ ಮಹಾನಗರದ ಆಕಾಶ ಪ್ರತಿಧ್ವನಿಸಿತು. ಜನರು ಶಾಂತರಾಗುವಂತೆ ಗಾಂಧೀಜಿ ತಿಳಿಯಹೇಳಿದರು. ಗುಂಪು ಸ್ವತಃ ಮೆರವಣಿಗೆಯಾಗಿ ಪರಿವರ್ತನೆಗೊಂಡು ಗಾಂಧೀಜಿಯವರ ಮೋಟರು ಗಾಡಿಯೊಂದಿಗೆ ನಡೆಯತೊಡಗಿತು. ಎದುರಿನಿಂದ ಕುದುರೆ ಸವಾರಿಯ ಪೋಲೀಸರ ಗುಂಪೊಂದು ಬಂತು. ಈ ಅಪಾರ ಜನಸಮೂಹದ ಮೇಲೆ ಕಮೀಷನರನು ಕುದುರೆ ಮೇಲೆ ಕುಳಿತು ಬಂದಿದ್ದರೂ ಪೋಲೀಸರ ಗುಂಪನ್ನು ಹರಿಯಬಿಟ್ಟ. ಗುಂಪು ಹಿಂದೆ–ಮುಂದೆ ಹೋಗಲು ಅವಕಾಶವೇ ಇರಲಿಲ್ಲ. ಅದರಿಂದ ಬಹಳ ಜನ ಪೋಲೀಸರ ಕುದುರೆಗಳ ಕಾಲ ಕೆಳಗೆ ತುಳಿತಕ್ಕೊಳಗಾದರು. ಕೈ, ಕಾಲು ಮುರಿದವು. ಪ್ರಾಣ–ಹಣ ಎಲ್ಲಾ ಹೋದವು. ಈ ಭಯಂಕರ ಭೂಕಂಪನದಿಂದ ಹೇಗೋ ತಪ್ಪಿಸಿಕೊಂಡು ಗಾಂಧೀಜಿ ಪೋಲೀಸ್ ಕಮೀಷನರ್‌ನ ಕಛೇರಿಯನ್ನು ತಲುಪಿದರು. ಅಲ್ಲಿದ್ದ ಪ್ರತಿಯೊಬ್ಬನೂ ಅಡಿಯಿಂದ ಮುಡಿಯವರೆಗೆ ಶಸ್ತ್ರಗಳಿಂದ ಸಜ್ಜಿತನಾಗಿದ್ದ, ಯುದ್ಧಕ್ಕೆ ಪೂರ್ತಿಯಾಗಿ ಸಜ್ಜಾಗಿದ್ದ ಹಾಗಿತ್ತು. ಗಾಂಧೀಜಿ ಪೋಲೀಸರ ನಿರ್ದಯತೆಯ ಕುರಿತಾಗಿ ದೂರು ಕೊಟ್ಟರು, ಪೋಲೀಸ ಕಮೀಷನರ್ ಕೋಪದಿಂದ ಕೆಂಡವಾಗಿದ್ದ. ಈ ಕಾಡುಜನರ ಪರಿಚಯ ಅವರಿಗಿರಲಿಲ್ಲವೆಂದು ಆತ ಗಾಂಧೀಜಿಗೆ ವ್ಯಂಗ್ಯವಾಗಿ ನುಡಿದ, ಜನರು ಹಿಡಿತಕ್ಕೆ ಸಿಗದ ಪ್ರಾಣಿಗಳೆಂದೂ, ಲಾಠಿಪ್ರಹಾರ ಮಾಡಿ ಅವರನ್ನು ವಶಕ್ಕೆ ತರಲು ಸಾಧ್ಯವಿಲ್ಲವೆಂದೂ ಹೇಳಿದ. ಅಮೃತಸರ, ಅಹಮದಾಬಾದ್‌ನಲ್ಲಿ ದಂಗೆಗಳಾಗಲು ಗಾಂಧೀಜಿಯೇ ಕಾರಣವೆಂದ, ಗಾಂಧೀಜಿ ಕೊಡುತ್ತಿರುವ ತಪ್ಪು ಸಲಹೆಗಳಿಂದಲೇ ಈ ಎಲ್ಲ ದಂಗೆಗಳು ನಡೆಯುತ್ತಿರುವುದೆಂಬುದು ಆ ಪೋಲೀಸ್ ಕಮೀಷನರ್‌ನ ಅಭಿಪ್ರಾಯವಾಗಿತ್ತು. ಗಾಂಧೀಜಿ ದೆಹಲಿಯಿಂದ ಮುಂದೆ ಉತ್ತರ ಭಾರತಕ್ಕೆ ಹೋಗೇ ಇರಲಿಲ್ಲ. ಅಮೃತಸರದ ಜನ ಅವರನ್ನು ನೋಡಿರಲೂ ಇಲ್ಲ. ಅವರ ಬಗ್ಗೆ ಕೇಳಿರಲೂ ಇಲ್ಲ. ಅಂತಹ ತಲೆ–ಬುಡ ಇಲ್ಲದ ದೋಷಾರೋಪ ಮಾಡುತ್ತಿದ್ದ ಕಮೀಷನರ್‌ನಿಂದ ತಿಳುವಳಿಕೆಯನ್ನು ಅಪೇಕ್ಷಿಸುವುದೂ ತಪ್ಪಾಗುತ್ತಿತ್ತು. ಸಂಜೆ ಮತ್ತೊಮ್ಮೆ ಚೌಪಾಟಿಯಲ್ಲಿ ಸಭೆಯಾಯಿತು. ಗಾಂಧೀಜಿಯವರು ಶಾಂತರಾಗಿರುವಂತೆ ಜನರಿಗೆ ತಿಳಿಯಹೇಳಿದರು. ಸತ್ಯಾಗ್ರಹಿಗೆ ನಿಜವಾದ ಧೈರ್ಯ ಬೇಕು, ಆತನ ಮೇಲೆ ಆಕ್ರಮಣ ಮಾಡಿದಾಗಲೂ ಉತ್ತೇಜಿತರಾಗಬಾರದು, ಧೈರ್ಯದಿಂದ ಎದುರಿಸಬೇಕು ಎಂದರು.

ಗಾಂಧೀಜಿ ಮತ್ತು ಅನಸೂಯಾ ಬಹನ್ ಅವರನ್ನು ಬಂಧಿಸಿದ್ದಾರೆಂದು ಅಹಮದಾಬಾದಿನಲ್ಲಿ ಸುಳ್ಳು ಸುದ್ದಿ ಹರಡಿತು. ಇದನ್ನು ಕೇಳಿದೊಡನೆಯೇ ನಗರದ ಕಾರ್ಮಿಕರು ತಟಕ್ಕನೆ ರೋಷಪೂರಿತರಾದರು. ಅವರು ಒಬ್ಬ ಸಾರ್ಜೆಂಟನನ್ನು ಕೊಂದರು. ನಾಡಿಯಾದ್‌ನಲ್ಲಿ ರೈಲು ಹಳಿಗಳನ್ನು ಕಿತ್ತುಹಾಕಿದರು.

ವೀರಮ್‌ಗಾಮ್‌ನಲ್ಲಿ ಒಬ್ಬ ಸರಕಾರಿ ಅಧಿಕಾರಿಯನ್ನು ಕೊಂದರು. ಈ ಅಶಾಂತಿಯ ಹಿನ್ನೆಲೆಯಲ್ಲಿ ಸರಕಾರ ಅಹಮದಾಬಾದಿನಲ್ಲಿ ಮಾರ್ಷಲ್ ಲಾ ಅನ್ನು ಘೋಷಿಸಿತು. ಎಲ್ಲ ಕಡೆ ಸಶಸ್ತ್ರ ಸೈನಿಕರನ್ನು ನಿಲ್ಲಿಸಿದರು. ಜನರ ಮೇಲೆ ಅತ್ಯಾಚಾರವೆಸಗತೊಡಗಿದರು. ಈಗ ಸರಕಾರ ಅವರ ಮೇಲೆ ಮತ್ತೂ ಹೆಚ್ಚಾಗಿ ಅಪರಾಧ ಹೊರಿಸುತ್ತಿತ್ತು. ಗಾಂಧೀಜಿ ಬೊಂಬಾಯಿಂದ ಅಹಮದಾಬಾದ್‌ಗೆ ಹೋದರು. ಸ್ಟೇಷನ್‌ನಿಂದ ನೇರವಾಗಿ ಅವರು ಪೋಲೀಸ್ ಕಮೀಷನರ್ ಕಛೇರಿಗೆ ಹೋದರು. ಆತ ಕೋಪದಿಂದ ಗುಡುಗುತ್ತಿದ್ದ. ಗಾಂಧೀಜಿ ದಂಗೆಗಳಿಗಾಗಿ ಕ್ಷಮೆ ಯಾಚಿಸಿದರು. ಅವರು ಎಲ್ಲಾ ಅಪರಾಧಗಳ ಹೊಣೆ ತನ್ನದೆಂದರು. ಒಂದು ಸಾರ್ವಜನಿಕ ಸಭೆಯಲ್ಲಿ ಜನರಿಗೆ ತಿಳಿಯ ಹೇಳಿ ಶಾಂತಗೊಳಿಸಿದರು. ಆಗ ಅಹಮದಾಬಾದ್ ನಗರದಿಂದ ಮಾರ್ಷಲ್ ಲಾವನ್ನು ತೆಗೆದುಹಾಕಲಾಯಿತು. ತಮ್ಮ ಕಾರ್ಮಿಕರು ಈ ತೆರನಾಗಿ ಹಿಂಸಾಚಾರ ಮಾಡಿದರೆಂದು ಗಾಂಧೀಜಿ ದುಃಖಪಟ್ಟರು, ಕಾರ್ಮಿಕರು ತಮ್ಮ ತಪ್ಪೊಪ್ಪಿಕೊಳ್ಳಬೇಕೆಂದು ಅವರು ಕಾರ್ಮಿಕರಿಗೆ ಹೇಳಿ ಪೋಲೀಸ್ ಕಮೀಷನರ್ ಬಳಿ ಅವರಿಗಾಗಿ ಕ್ಷಮಾಯಾಚನೆ ಮಾಡಿದರು. ಆದರೂ ಎರಡೂ ಪಕ್ಷಗಳು ಗಾಂಧೀಜಿಯವರ ಮಾತಿಗೆ ಕಿವಿಕೊಡಲಿಲ್ಲ. ಅಹಮದಾಬಾದಿನ ಕೆಲವರು ಮಿತ್ರರು ಸತ್ಯಾಗ್ರಹವನ್ನು ತಡೆಹಿಡಿಯುವಂತೆ ಕೇಳಿಕೊಂಡರು. ಆದರೆ ಆ ಒತ್ತಾಯ ಅಗತ್ಯವಿರಲಿಲ್ಲ. ಹಿಂದೂಸ್ತಾನದ ಜನ ಇನ್ನೂ ಶಾಂತಿಪೂರ್ವಕವಾಗಿ ಚಳವಳಿ ನಡೆಸುವುದನ್ನು ಅರ್ಥಮಾಡಿಕೊಂಡಿಲ್ಲವೆಂಬ ನಿರ್ಧಾರಕ್ಕೆ ಗಾಂಧೀಜಿ ತಲುಪಿದರು. ಸಮಾಜ ಈ ಮೂಲಭೂತ ತತ್ವವನ್ನು ಅರ್ಥಮಾಡಿಕೊಳ್ಳುವವರೆಗೆ ದೇಶವ್ಯಾಪಕವಾದ ಆಂದೋಲನಕ್ಕೆ ಕರೆ ನೀಡುವುದು ತಪ್ಪಾಗುತ್ತದೆಂದು ಗಾಂಧೀಜಿಗೆ ಅನ್ನಿಸಿತು. ಅಹಮದಾಬಾದ್‌ನಿಂದ ಗಾಂಧೀಜಿ ನಡಿಯಾದ್‌ಗೆ ಹೋದರು. ಅಲ್ಲಿ ನಡೆದಿದ್ದ ವಿನಾಶವನ್ನು ನೋಡಿ ಗಾಂಧೀಜಿಗೆ ಆಶ್ಚರ್ಯವಾಯಿತು. ಆಗ ಅವರು ಒಂದು ಸಾರ್ವಜನಿಕ ಸಭೆಯಲ್ಲಿ ತಮ್ಮ ಹಿಮಾಲಯದಂತಹ ದೊಡ್ಡ ತಪ್ಪನ್ನು ಎಲ್ಲರೆದುರೂ ಒಪ್ಪಿಕೊಂಡರು.

ಕಾನೂನಿನ ಸವಿನಯ ಭಂಗಕ್ಕೆ ಜನರಿಗಿನ್ನೂ ಪೂರ್ತಿಯಾಗಿ ತರಬೇತಿ ಸಿಕ್ಕಿಲ್ಲವೆಂಬ ಭಯಂಕರ ತಪ್ಪನ್ನು ಅರಿತ ನಂತರ ಆಂದೋಲನವನ್ನು ಮುಂದುವರಿಸುವುದು ತಪ್ಪಾಗುತ್ತದೆಂದು ಗಾಂಧೀಜಿಗೆ ಅನ್ನಿಸಿತು. ಸ್ವೇಚ್ಛೆಯಿಂದ ಕಾನೂನನ್ನು ಅನುಸರಿಸುವ ವ್ಯಕ್ತಿಗೆ ಮಾತ್ರ ಕಾನೂನನ್ನು ಸವಿನಯ ಮುರಿಯುವ ಹಕ್ಕೂ ಇರುತ್ತದೆ. ಸಾಮಾನ್ಯವಾಗಿ ಜನರು ಹೆದರಿ, ಶಿಕ್ಷೆಯ ಭಯದಿಂದ ಕಾನೂನು ಪಾಲಿಸುತ್ತಾರೆ. ವಿವೇಕವಂತನಾಗಿ ಸ್ವೇಚ್ಛೆಯಿಂದ ಕಾನೂನು ಪಾಲಿಸುವವನಿಗೆ ಕಾನೂನಿನ ನೀತಿ ಹಾಗೂ ಅನೀತಿಯ ಅಂತರವನ್ನು ತಿಳಿಯುವ ಸೂಕ್ಷ್ಮ ಶಕ್ತಿ ದೊರೆಯುತ್ತದೆ. ಅಂತಹ ತಿಳುವಳಿಕಸ್ಥ, ಸ್ಥಿರಬುದ್ಧಿಯ ಜನರೇ ಸೀಮಿತವಾಗಿ

ಕಾನೂನು ಭಂಗದ ಅಧಿಕಾರ ಪಡೆದಿರುತ್ತಾರೆ. ದೇಶದ ಸಾಮಾನ್ಯ ನಾಗರಿಕ ಸತ್ಯಾಗ್ರಹದಿಂದ ಈ ಸೂಕ್ಷ್ಮ ಹಾಗೂ ಮಹತ್ವದ ಅಂತರವನ್ನು ಅರ್ಥಮಾಡಿಕೊಳ್ಳಲಾಗಿಲ್ಲವೆಂದು ಗಾಂಧೀಜಿಗೆ ಅನಿಸಿತು. ನಮ್ಮ ಸಾಮಾನ್ಯ ಜನ ಈ ಅಂತರವನ್ನು ತಿಳಿದುಕೊಳ್ಳುವ ಮಟ್ಟಕ್ಕೆ ಎಂದೂ ಬರುವುದಿಲ್ಲವೇನೋ, ಅಂತಹ ಪರಿಸ್ಥಿತಿಯಲ್ಲಿ ಸಮಾಜದ ಕೆಲವೇ ಪ್ರಬುದ್ಧರಾದ ಮನುಷ್ಯರಿಗೆ ಸತ್ಯಾಗ್ರಹದ ಹಕ್ಕಿರುತ್ತದೆ ಎಂದುಕೊಂಡು ಗಾಂಧೀಜಿ ಸವಿನಯ ಸತ್ಯಾಗ್ರಹ ಮತ್ತು ಅಹಿಂಸಾತ್ಮಕ ಹೋರಾಟದ ಮೂಲ ಪ್ರಶಿಕ್ಷಣವನ್ನು ಬೊಂಬಾಯಿಂದ ಆರಂಭಿಸಿದರು. ಕೆಲವರು ಸ್ವಯಂಸೇವಕರು ಹಾಗೆ ಧೈರ್ಯದಿಂದ ಕೆಲಸ ಮಾಡಲು ಸಿದ್ಧವಾದರೂ ಅಂತಹ ಆದರ್ಶ ಸತ್ಯಾಗ್ರಹ ಪುನಃ ನಡೆಯಲೇ ಇಲ್ಲ. ಈ ರೀತಿ ರೌಲಟ್ ಆ್ಯಕ್ಟ್ ವಿರುದ್ಧ ಮಾಡಿದ ಸತ್ಯಾಗ್ರಹವನ್ನು ಗಾಂಧೀಜಿ ತಡೆಹಿಡಿಯಲೇಬೇಕಾಯಿತು. ಕೆಲವರಿಗೆ ನಿರಾಶೆಯಾಯಿತು. ಕೆಲವರಂತೂ ಗಾಂಧೀಜಿಯನ್ನು ಮೂದಲಿಸಿದರು. ಇಂದೂ ಬಹುಶಃ ಈ ಸಾರ್ವಜನಿಕ ಒಪ್ಪಿಗೆಯನ್ನು ಜನ ಅರ್ಥ ಮಾಡಿಕೊಳ್ಳಲಾಗಿಲ್ಲ. ಆದರೆ ತಪ್ಪೆಂದು ತಿಳಿದ ಮೇಲೆ ಅದರ ಪರಿಣಾಮದ ಭಯವನ್ನು ಒಪ್ಪಿಕೊಳ್ಳದಿದ್ದರೆ ದೊಡ್ಡ ಅಪರಾಧವಾಗುತ್ತಿತ್ತಾದುದರಿಂದ ಗಾಂಧೀಜಿಯ ವಿರುದ್ಧವಾದ ಸತ್ಯನಿಷ್ಠೆ ಅದನ್ನು ಸಹಿಸುವ ಸ್ಥಿತಿಯಲ್ಲಿರಲಿಲ್ಲ.

* * * *

## ೭. ನವಜೀವನ

೧೯೧೯ರಲ್ಲಿ ಬೊಂಬಾಯಿಂದ ಒಂದು ಪ್ರಭಾವಪೂರ್ಣವಾದ ಇಂಗ್ಲಿಷ್ ಪತ್ರಿಕೆ ಪ್ರಕಟವಾಗುತ್ತಿತ್ತು. ಅದರ ಹೆಸರು 'ಬಾಂಬೆ ಕ್ರಾನಿಕಲ್' ಅಂತಿತ್ತು. ಅದರ ಮಾಲೀಕರು ಉಮರ್ ಸುಪಾನಿ ಅಂತ, ಅಬ್ದುಲ್ಲಾ ಬರೇಲನಿ ಅವರ ಜೊತೆಗಾರರಾಗಿದ್ದರು. ಆಗ ಕ್ರಾನಿಕಲ್‌ನ ಸಂಪಾದಕರಾಗಿದ್ದವರು ಒಬ್ಬ ಸಮರ್ಥ ಹಾಗೂ ಲೋಕಪ್ರಿಯರಾಗಿದ್ದ ಐರಿಷ್ ವ್ಯಕ್ತಿ ಹೋರ್ನಿಮನ್. ಅವರು ದೇಶದ ಪರಾಧೀನತೆಯನ್ನ ಉಗ್ರವಾಗಿ ವಿರೋಧಿಸುತ್ತಿದ್ದರು. ತನ್ನ ವಿಚಾರಗಳನ್ನು ಧೈರ್ಯವಾಗಿ ಪ್ರಕಟಪಡಿಸುತ್ತಿದ್ದರು. ತನ್ನ ಸಂಪಾದಕೀಯದಲ್ಲಿ ಹೋರ್ನಿಮನ್ ರೌಲಟ್ ಆ್ಯಕ್ಟ್ ಮತ್ತು ಸರಕಾರದ ದಮನ ನೀತಿಯನ್ನು ಕಟುವಾಗಿ ಟೀಕಿಸುತ್ತಿದ್ದರು. ಟೀಕೆ ಕಟುವಾಗಿದ್ದಾಗ್ಯೂ ಸ್ವಭಾವತಃ ಹೋರ್ನಿಮನ್ ಅಹಿಂಸಾತ್ಮಕವಾಗಿದ್ದವರು. ಜನ ಸರಕಾರವನ್ನು ವಿರೋಧಿಸಿ ಗಲಾಟೆ ಗದ್ದಲ ಎಬ್ಬಿಸುವುದು, ಹಿಂಸಾಮಾರ್ಗ ಅನುಸರಿಸುವುದು ಎಲ್ಲಾ ಅವರಿಗಿಷ್ಟವಾಗುತ್ತಿರಲಿಲ್ಲ. ಅವರು ನಿಜವಾದ ಸತ್ಯಾಗ್ರಹಿ ಆಗಿದ್ದವರು. ಅದರಿಂದಲೇ ಗಾಂಧೀಜಿಯವರ 'ಸ್ವರಾಜ್ಯ ಸಭೆ'ಯ ಮೊದಲ ಸದಸ್ಯರೂ ಆಗಿದ್ದರು. ಸರಕಾರವನ್ನು ವಿರೋಧಿಸುವುದು ಮತ್ತು ಜನರ ಪಕ್ಷ ವಹಿಸಿ ಅವರು ಲೋಕಪ್ರಿಯರಾಗಿದ್ದರು. ಅದರಿಂದಾಗಿ ಅವರನ್ನು ಬಂಧಿಸಿ ಕೇಸ್ ನಡೆಸುವಷ್ಟು ಸರಕಾರಕ್ಕೆ ಧೈರ್ಯವೇ ಇರಲಿಲ್ಲ. ಅದರಿಂದ ಒಂದು ರಾತ್ರಿ ಸರಕಾರ ಹೋರ್ನಿಮನ್‌ರನ್ನು ಬಂಧಿಸಿ ಇಂಗ್ಲೆಂಡ್‌ಗೆ ಹೊರಟಿದ್ದ ಸ್ಟೀಮರ್ ಒಂದರಲ್ಲಿ ಬಂದ್ ಮಾಡಿ ದೇಶದಾಟಿಸಿಬಿಟ್ಟರು. ಈ ರೀತಿ 'ಕ್ರಾನಿಕಲ್' ತನ್ನ ಸಮರ್ಥ ಸಂಪಾದಕನನ್ನು ಕಳೆದುಕೊಂಡುಬಿಟ್ಟಿತು. ಅಲ್ಲಿಯವರೆಗೂ ಗಾಂಧೀಜಿ ಹಿಂದಿಯಲ್ಲಿ ಯಾವ ಪತ್ರಿಕೆಯನ್ನು ಹೊರಡಿಸಿರಲಿಲ್ಲ. ಆಗಾಗ್ಗೆ 'ಕ್ರಾನಿಕಲ್'ನಲ್ಲಿ ಲೇಖನಗಳನ್ನು ಬರೆಯುತ್ತಿದ್ದರು

ಆಗ ಶಂಕರಲಾಲ್ ಬ್ಯಾಂಕರ್ ಜೊತೆ ಉಮರ್ ಸುಮಾನಿ ದೈನಿಕ ಪತ್ರಿಕೆಯಲ್ಲದೆ 'ಯಂಗ್ ಇಂಡಿಯಾ' ಎಂಬ ಸಾಪ್ತಾಹಿಕ ಪತ್ರಿಕೆ ಕೂಡ ಪ್ರಕಟಿಸುತ್ತಿದ್ದರು. ಹೋರ್ನಿಮನ್ ಅವರ ಅನುಪಸ್ಥಿತಿಯಲ್ಲಿ ಗಾಂಧೀಜಿ ಈ ಎರಡೂ ಪತ್ರಿಕೆಗಳನ್ನು ನೋಡಿಕೊಂಡರೆ, ಮತ್ತು ಅವುಗಳಲ್ಲಿ ಲೇಖನಗಳನ್ನು ಭರ್ತಿ ಮಾಡುವ ಜವಾಬ್ದಾರಿಯನ್ನು ಹೊತ್ತುಕೊಂಡರೆ ಸಮಾಚಾರ ಮತ್ತು ವಿಚಾರಗಳ ಪ್ರಚಾರದ

ಗುಣಮಟ್ಟ ಚೆನ್ನಾಗಿರುತ್ತದೆ ಎಂಬುದು ಈ ಮಿತ್ರರ ಇಷ್ಟವಾಗಿತ್ತು. ಇಷ್ಟು ದೊಡ್ಡ ಹೊಣೆಗಾರಿಕೆಯನ್ನು ತೆಗೆದುಕೊಳ್ಳುವುದೋ ಬೇಡವೋ ಎಂಬುದನ್ನು ಗಾಂಧೀಜಿ ಯೋಚಿಸುತ್ತಿರುವಾಗಲೇ ಸರಕಾರ 'ಕ್ರಾನಿಕಲ್'ನ ಕಛೇರಿಯನ್ನು ವಶಕ್ಕೆ ತೆಗೆದುಕೊಂಡು ಸೀಲ್ ಮಾಡಿಬಿಟ್ಟಿತು. ಆಗ ಕ್ರಾನಿಕಲ್ ಕೊರತೆಯನ್ನು 'ಯಂಗ್ ಇಂಡಿಯಾ' ಮೂಲಕ ಪೂರೈಸಿ ಸಾಪ್ತಾಹಿಕವಾಗಿದ್ದ ಆ ಪತ್ರಿಕೆಯನ್ನು ಅರ್ಧ ಸಾಪ್ತಾಹಿಕವಾಗಿ ಪರಿವರ್ತಿಸಿ ಪ್ರಕಟಿಸುವಂತೆ ಗಾಂಧೀಜಿಯನ್ನು ಮಿತ್ರರು ಒತ್ತಾಯಪಡಿಸಿದರು. ಜನರಿಗೆ ಸತ್ಯಾಗ್ರಹದ ಸೂಕ್ಷ್ಮ ರಹಸ್ಯವನ್ನು ತಿಳಿಸಬೇಕಾದ ಅಗತ್ಯವಿದೆಯೆಂದು ಗಾಂಧೀಜಿಗೂ ಗೊತ್ತಿತ್ತು. ಅಂತಹ ಸಾಮೂಹಿಕ ತರಬೇತಿ ನೀಡುವುದಕ್ಕೆ ಪತ್ರಿಕೆಯ ಮಾಧ್ಯಮ ಅನಿವಾರ್ಯವಾಗಿತ್ತು. ಕೊನೆಯಪಕ್ಷ ಈ ಪತ್ರಿಕೆಯ ಮುಖಾಂತರ ಹೆಚ್ಚಾಗಿ ಹೋಗಿತ್ತು. ಸರಕಾರ ಪ್ರಜೆಗಳನ್ನು ಅರೆದು ನುಂಗಲು ಮುಂದಾಗಿತ್ತು. ಸತ್ಯಾಗ್ರಹ ಮಾಡುವ ಮುಂಚೆ ಗಾಂಧೀಜಿ ವೈಸ್‌ರಾಯ್‌ಗೆ ವಿವರಿಸಿ ಪಂಜಾಬ್‌ಗೆ ಹೋಗಲು ಅನುಮತಿ ಕೇಳಿದ್ದರು. ಆದರೆ ಪಂಜಾಬ್‌ನ ಗವರ್ನರ್ ಆಡ್‌ನಾಯರ್ ಮತ್ತು ವೈಸ್‌ರಾಯ್ ಇಬ್ಬರೂ ಗಾಂಧೀಜಿಗೆ ಪಂಜಾಬ್‌ಗೆ ಹೋಗಲು ಅನುಮತಿ ನೀಡಲಿಲ್ಲ. ಆದೇಶವನ್ನು ತಳ್ಳಿಹಾಕಿ ಹೋಗಿದ್ದಲ್ಲಿ ಸಹಾಯವೂ ಸಿಗುತ್ತಿರಲಿಲ್ಲ. ಜೈಲಿನಲಿ ಬಂಧಿತರಾಗಬೇಕಿತ್ತಷ್ಟೆ. ಈ ತರಹೆಯ ಸತ್ಯಾಗ್ರಹದಿಂದ ಏನೂ ಉಪಯೋಗವಾಗುತ್ತಿರಲಿಲ್ಲ. ಹೀಗೆ ಗಾಂಧೀಜಿ ಬಹಳ ಚಿಂತಿತರಾಗಿದ್ದರು. ಆಗ ಉಮರ್ ಸುಮಾನಿಯ 'ಯಂಗ್ ಇಂಡಿಯಾ' ವಾರಕ್ಕೆ ಎರಡು ಸಾರಿ ಪ್ರಕಟವಾಗ ತೊಡಗಿತು. ಗಾಂಧೀಜಿ ಲೇಖನಗಳನ್ನು ಪೂರೈಸುವ ಜವಾಬ್ದಾರಿಯನ್ನು ತಾವು ವಹಿಸಿಕೊಂಡರು. ಆದರೆ ಇಂಗ್ಲಿಷ್ ಮಾಧ್ಯಮದಲ್ಲಿ ಸತ್ಯಾಗ್ರಹದ ರಹಸ್ಯವನ್ನು ತಿಳಿಸಲಾಗುತ್ತಿರಲಿಲ್ಲ. ಇಂಗ್ಲಿಷ್ ಎಷ್ಟು ಜನಕ್ಕೆ ತಾನೆ ತಿಳಿಯುತ್ತಿತ್ತು? ಸಾಮಾನ್ಯ ಜನರಿಗಂತೂ ಇಂಗ್ಲಿಷ್‌ನ ಒಂದು ಶಬ್ದವೂ ತಿಳಿಯುತ್ತಿರಲಿಲ್ಲ. ಆಗ ಉಮರ್ ಸುಮಾನಿಯ ಮಾಲೀಕತ್ವದಲ್ಲಿ ಗುಜರಾತಿನಲ್ಲಿ 'ನವಜೀವನ' 'ಸತ್ಯ' ಎಂಬ ಮಾಸಪತ್ರಿಕೆ ಆಹಮದಾಬಾದ್‌ನಿಂದ ಹೊರಡುತ್ತಿತ್ತು. ಅದರ ಪೂರ್ತಿ ಖರ್ಚನ್ನು ಉಮರ್ ಸುಮಾನಿ ಕೊಡುತ್ತಿದ್ದರು. ಉಮರ್ ಸುಮಾನಿ ಬೊಂಬಾಯಿನ ಪ್ರಸಿದ್ಧ ಮಿಲ್ ಮಾಲೀಕರಾಗಿದ್ದರು. ಅವರು ಉತ್ಸಾಹಿಗಳು, ಕರ್ಮಠರು, ನೀತಿವಂತ ಮತ್ತು ಉದಾರಿಗಳೂ ಆಗಿದ್ದರು, ಚಿಕ್ಕ ವಯಸ್ಸಿನಲ್ಲೇ ತೀರಿಕೊಂಡರು. ಇಲ್ಲದಿದ್ದರೆ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯ ಮುಖಂಡರಾಗಿರುತ್ತಿದ್ದರು. ರಾಷ್ಟ್ರೀಯ ಮುಸ್ಲಿಮರಿಗೆ ಅವರು ಆದರ್ಶಪ್ರಾಯರಾಗಿದ್ದರು. ಉಮರ್ ಸುಮಾನಿ ಅವರು ಅಹಮದಾಬಾದಿನ ತಮ್ಮ ಪತ್ರಿಕೆಯನ್ನು ಗಾಂಧೀಜಿಗೆ ನೀಡಿದರು. ಇಂದುಲಾಲ್ ಯಾಜ್ಞಿಕ್ ಅ ಪತ್ರಿಕೆಯ ಸಂಪಾದಕರಾಗಿದ್ದರು. ಅದರಿಂದ ಅವರು ಗಾಂಧೀಜಿಯ ಜೊತೆ ಕೆಲಸ ಮಾಡಲು ಒಪ್ಪಿಕೊಂಡರು. ಈಗ ಗಾಂಧೀಜಿ ಬೊಂಬಾಯಿಂದ 'ಯಂಗ್ ಇಂಡಿಯಾ', ಅಹಮದಾಬಾದ್‌ನಿಂದ 'ನವಜೀವನ' ಸಾಪ್ತಾಹಿಕ ಪತ್ರಿಕೆಗಳು ಹೊರಡಿಸಿದರು.

ಆದರೆ ಹೀಗೆ ಎರಡು ಕಡೆಗಳಿಂದ ಎರಡು ಪತ್ರಿಕೆಗಳನ್ನು ಹೊರಡಿಸುವುದು ಕಷ್ಟವಾಗುತ್ತಿತ್ತು. ವ್ಯರ್ಥದ ಖರ್ಚೂ ಬೇರೆ, ಅಷ್ಟರೊಳಗೆ ಸರಕಾರ 'ಕ್ರಾನಿಕಲ್' ಮೇಲಣ ಪ್ರತಿಬಂಧಕಾಜ್ಞೆಯನ್ನು ಹಿಂತೆಗೆಯಿತು. ಆಗ ಎಲ್ಲರಿಗೂ ಉತ್ಸಾಹ ಬಂದಿತು. ಆಗ 'ಯಂಗ್ ಇಂಡಿಯಾ' ಪುನಃ ಸಾಪ್ತಾಹಿಕವಾಯಿತು. 'ಯಂಗ್ ಇಂಡಿಯಾ' ಮತ್ತು 'ನವಜೀವನ' ಆಗ ಎರಡನ್ನೂ ಅಹಮದಾಬಾದ್‌ನಿಂದಲೇ ಹೊರಡಿಸಬೇಕೆಂದೂ, ಅದರಿಂದ ಅವುಗಳ ಸಂಪಾದನೆ ಮಾಡಲು ಅನುಕೂಲವಾಗುವುದೆಂದೂ ನಿರ್ಣಯಿಸಿದರು.

ಹೀಗೆ ರೌಲಟ್ ಆ್ಯಕ್ಟ್‌ನ ದಮನ ನೀತಿಯಿಂದಾಗಿ, ಪ್ರಜೆಗಳಿಗೆ ಸತ್ಯಾಗ್ರಹದ ರಹಸ್ಯ ತಿಳಿಸಲು ಅದರ ತರಬೇತಿ ನೀಡಲು 'ನವಜೀವನ'ದ ಸಾಪ್ತಾಹಿಕ ೭ ಡಿಸೆಂಬರ್ ೧೯೧೯ ರಂದು ಅಹಮದಾಬಾದ್‌ನಿಂದ ಪ್ರಕಟವಾಗತೊಡಗಿತು. ಗಾಂಧೀಜಿ ಅದರ ಮೊದಲ ಸಂಪಾದಕರಾದರು. ಇಲ್ಲಿಯವರೆವಿಗೂ 'ನವಜೀವನ'ದ ೬೦೦ ಪ್ರತಿಗಳು ಮುದ್ರಣವಾಗುತ್ತಿದ್ದವು. ಗಾಂಧೀಜಿ ಸಂಪಾದಕರಾದನಂತರವೇ 'ನವಜೀವನ' ಕ್ಕೆ ೨೫೦೦ ಮಂದಿ ಗ್ರಾಹಕರಾದರು. ಬಾಂಬೆಯ ಅಂಗಡಿಗಳಲ್ಲಿ ಮಾರಾಟಕ್ಕಾಗಿ ಇನ್ನೂ ೨೦೦೦ ಪ್ರತಿಗಳಿಗಾಗಿ ಆರ್ಡರ್ ಬಂತು. ಹೀಗೆ ಗುಜರಾತಿ 'ನವಜೀವನ'ದ ೫೦೦೦ ಪ್ರತಿಗಳು ಮುದ್ರಣ ಕಂಡವು, ಒಂದು ದಿವಸದಲ್ಲೇ ಅಷ್ಟೂ ಪತ್ರಿಕೆಗಳು ಖರ್ಚಾಗಿ ಹೋದವು. ಮುಂದಿನ ವಾರ ೬೦೦೦ ಪ್ರತಿಗಳನ್ನು ಮುದ್ರಿಸಿದರು. ಅದೂ ಸಾಕಾಗಲಿಲ್ಲ. ಆಗ ಸಪ್ತಾಹದ ಮಧ್ಯದಲ್ಲೇ ಅದರ ಮರು ಆವೃತ್ತಿಯನ್ನು ಹೊರತರಬೇಕಾಯಿತು. ಪ್ರಪಂಚದ ಇತಿಹಾಸದಲ್ಲೇ ಬಹುಶಃ ಹೀಗೆ ಒಂದು ಪತ್ರಿಕೆಯ ಎರಡೆರಡು ಮರುಆವೃತ್ತಿಗಳನ್ನು ಹೊರತರಬೇಕಾದದ್ದೂ ಹಾಗೂ ಅದು ಸಾಲದೆ ಕೊರತೆ ಬಿದ್ದದ್ದು ಇದೊಂದೇ ಮಾದರಿ ಇದ್ದಿರಬೇಕು. ಸಾಪ್ತಾಹಿಕಗಳ ಬೆಲೆ ಕೂಡ ಒಂದಾಣೆ, ವಾರ್ಷಿಕ ಚಂದಾ ಮೂರೂವರೆ ರೂಪಾಯಿ ಇಡಲಾಗಿತ್ತು. ಇಷ್ಟೊಂದು ಮುದ್ರಿಸಲು ಹಳೆಯ ನಟವರ್ ಪ್ರೆಸ್ ಚಿಕ್ಕದಾಯಿತು. ಹೀಗೆ ಈ ಎರಡೂ ಸಾಪ್ತಾಹಿಕಗಳನ್ನು ಮುದ್ರಿಸಲು ಸ್ವತಂತ್ರವಾದ ಸಮರ್ಥವಾದ ಪ್ರೆಸ್ ಬೇಕಾಗಿತ್ತು. ನಗರದ ಮಿಕ್ಕ ಪತ್ರಿಕೆಗಳು ಹೀಗೆ ವಿರೋಧ ಪ್ರಕಟಿಸುವ ಲೇಖನಗಳನ್ನು ಮುದ್ರಿಸಿ ಸರಕಾರದ ಕೋಪಕ್ಕೆ ಗುರಿಯಾಗಲು ಸಿದ್ಧವಿರಲಿಲ್ಲ. ಅವರ ಮೇಲೆ ವಿಪತ್ತು ತರಿಸುವುದೂ ಕೂಡ ಯೋಗ್ಯವಲ್ಲ. ಹೀಗಾಗಿ ಬಹಳ ಹುಡುಕಿದ ಮೇಲೆ ಹತ್ತು ಸಾವಿರ ರೂಪಾಯಿ ಕೊಟ್ಟು ಮನಹರ ಪ್ರಿಂಟಿಂಗ್ ಪ್ರೆಸ್ ಎಂಬ ಮುದ್ರಣಾಲಯವನ್ನು ಖರೀದಿಸಿದರು. ಅದರ ಹೆಸರು 'ನವಜೀವನ ಮುದ್ರಣಾಲಯ' ಎಂದಿಟ್ಟರು. ಅಕ್ಟೋಬರ್ ೧೯೧೯ ರಿಂದ 'ಯಂಗ್ ಇಂಡಿಯಾ' ಕೂಡ ಅಹಮದಾಬಾದ್‌ನಿಂದ ಮುದ್ರಿತವಾಯಿತು. ಎರಡು ತಿಂಗಳಲ್ಲೇ 'ನವಜೀವನ'ದ ೨೦೦೦೦ ಪ್ರತಿಗಳು, 'ಯಂಗ್ ಇಂಡಿಯಾ'ದ ೧೨೦೦೦ ಪ್ರತಿಗಳು ಬಿಕ್ರಿಯಾದವು.

ಗಾಂಧೀಜಿಯವರ ಸಮೂಹ ಮಾಧ್ಯಮದಲ್ಲಿ ೨–೩ ವಿಶೇಷತೆಗಳಿದ್ದವು.

ಮೊದಲನೆಯದಾಗಿ, ಜಾಹಿರಾತುಗಳನ್ನು ಸ್ವೀಕರಿಸುತ್ತಿರಲಿಲ್ಲ. ವಿಚಾರ ಸ್ವಾತಂತ್ರ್ಯ ಮುಖ್ಯ ಎಂಬುದು ಉದ್ದೇಶ. ಸಮಾಜೋಪಯೋಗಿಯಾಗಿ ಪತ್ರಿಕೆ ಹೊರಬಂದಾಗ ಅದನ್ನು ನಡೆಸಲು ಕಷ್ಟವಾಗುವುದಿಲ್ಲ. ಆರ್ಥಿಕ ಲಾಭಕ್ಕಾಗಿ ಜಾಹಿರಾತುಗಳನ್ನು ತೆಗೆದುಕೊಂಡು ಪತ್ರಿಕೆಯ ನೀತಿಗೆ ಅಡ್ಡಿ ತರುವುದು ಗಾಂಧೀಜಿಗೆ ಇಷ್ಟವಿರಲಿಲ್ಲ. ಈ ಎರಡೂ ಸಾಪ್ತಾಹಿಕಗಳು ಗಾಂಧೀಜಿಗೆ ಸಮಾಜಕ್ಕೆ ಸಂಯಮವನ್ನು ಕಲಿಸುವ ಸಾಧನಗಳಾಗಿದ್ದವು. 'ಇಂಡಿಯನ್ ಒಪಿನಿಯನ್‌ನಲ್ಲಿ ಚಿಂತನೆ–ಯೋಚನೆ ಮಾಡದೆ ನಾನು ಒಂದು ಪದವನ್ನು ಬಳಸಿಲ್ಲ' ಎನ್ನುತ್ತಾರೆ. ಸ್ವತಃ ಗಾಂಧೀಜಿ ತನ್ನ ಜೊತೆಗಾರರು ಹಾಗೂ ಮಿತ್ರರಿಗೆ ವಿಚಾರಗಳನ್ನು ತಿಳಿಯಹೇಳಲು ಈ ಪತ್ರಿಕೆಗಳು ಸಾಧನವಾಗಿದ್ದವು. ಜನರ ಭಾವನೆಗಳನ್ನು ಪ್ರಕಟಪಡಿಸುವುದು ಪತ್ರಿಕೆಯ ಕೆಲಸ, ಅವು ಪ್ರಜೆಗಳಿಗೆ ಸರಿಯಾದ ದಿಕ್ಕಿನಲ್ಲಿ ಯೋಚಿಸಲು ಪ್ರೇರಕವಾಗಬೇಕು. ಕೊನೆಗೆ ಜನರಲ್ಲಿರುವ ಕುಂದುಕೊರತೆಗಳನ್ನು ಎಷ್ಟೇ ಕಷ್ಟವಾದರೂ ಸಹಿಸಿಕೊಂಡು ಧೈರ್ಯವಾಗಿ ಅವರಿಗೆ ತಿಳಿಯ ಹೇಳುವುದು ಸಮೂಹ ಮಾಧ್ಯಮದ ಕರ್ತವ್ಯ. 'ನವಜೀವನ'ವನ್ನು ಕುರಿತು ಗಾಂಧೀಜಿ ನವಜೀವನದಲ್ಲಿ ವಿಚಾರಹೀನವಾದ ಒಂದು ವಾಕ್ಯ ಇರುವುದಿಲ್ಲ. ಅನಾವಶ್ಯಕವಾದ ವಿಶೇಷಣಗಳಿರುವುದಿಲ್ಲ. ನಿಜವಾಗಿ ಹೇಳಬೇಕೆಂದರೆ ಸತ್ಯವನ್ನು ವಿಶೇಷಗಳ ಶೃಂಗಾರದಿಂದ ಅಲಂಕರಿಸುವ ಅಗತ್ಯವಿರುವುದಿಲ್ಲ. ಸತ್ಯದಲ್ಲಿರುವ ಸೌಂದರ್ಯ ವಿಶೇಷಣಗಳ ಹೊರೆ ಹೊತ್ತಿರುವ ಸತ್ಯದಲ್ಲಿರುವುದಿಲ್ಲ. ಪ್ರಜೆಗಳ ಶಾಶ್ವತ ಸುಖ ಇರುವುದರ ಪ್ರವೃತ್ತಿಯನ್ನು ಹುಡುಕಿ ಅದನ್ನು ನಡೆಸಲು ಜನರಿಗೆ ಸಹಾಯ ನೀಡುವುದು, ಅವರಿಗೆ ಮಾರ್ಗದರ್ಶನ ನೀಡುವುದು ನಿಜವಾದ ಸಮೂಹ ಮಾಧ್ಯಮದ ಧರ್ಮ ಎನ್ನುತ್ತಾರೆ.

೧೯೧೯ರ ಅಕ್ಟೋಬರ್‌ವರೆಗೆ ಗಾಂಧೀಜಿ ಇಂಗ್ಲಿಷ್, ಗುಜರಾತಿ ಸಾಪ್ತಾಹಿಕಗಳ ಮೂಲಕ ಜನರಿಗೆ ಸಾಧ್ಯವಾದಷ್ಟು ಸತ್ಯಾಗ್ರಹದ ಶಿಕ್ಷಣ ನೀಡಲಾರಂಭಿಸಿದರು. 'ನವಜೀವನ' ಮತ್ತು 'ಯಂಗ್ ಇಂಡಿಯಾ'ಗಳ ಜನಪ್ರಿಯತೆ ದಿನಂಪ್ರತಿ ಹೆಚ್ಚುತ್ತಿತ್ತು. ಆದರೆ ಮೊದಲ ಹತ್ತು ತಿಂಗಳ ಕೊನೆಯಲ್ಲಿ 'ನವಜೀವನ' ಮುದ್ರಣಾಲಯಕ್ಕೆ ಒಟ್ಟು ೧೪೦೦೦ ರೂ.ಗಳ ನಷ್ಟವಾಯಿತು. ಗಾಂಧೀಜಿ ಪ್ರಕಾರ ಯಾವ ಕೆಲಸವಾದರೂ ನಷ್ಟದಲ್ಲಿ ನಡೆಸುವುದೂ ಒಂದು ತೆರನಾದ ಕಳ್ಳತನವೇ. ಯೋಗ್ಯವಾದ ಕೆಲಸವಾದಲ್ಲಿ ಸಮಾಜ ಅದನ್ನು ಖಂಡಿತ ಎತ್ತಿಹಿಡಿಯುತ್ತದೆ. ಆದರೆ ನಷ್ಟದಲ್ಲಿ ನಡೆಸುವುದು ತಪ್ಪು, ಆದುದರಿಂದ ವ್ಯವಸ್ಥೆ ತಂತ್ರದಲ್ಲಿ ಸುಧಾರಣೆ ತರುವ ಉದ್ದೇಶದಿಂದ 'ನವಜೀವನ' ಮತ್ತು 'ಯಂಗ್ ಇಂಡಿಯಾ' ಎರಡರ ವ್ಯವಸ್ಥೆಯ ಜವಾಬ್ದಾರಿಯನ್ನು ಗಾಂಧೀಜಿ ಸ್ವಾಮೀ ಆನಂದರಿಗೆ ವಹಿಸಿದರು. ಒಂದು ವರ್ಷದಲ್ಲೇ ಗಾಂಧೀಜಿಯ ಪ್ರೇರಣಾತ್ಮಕ ಶಬ್ದಗಳಿಂದ ಜನರಲ್ಲಿ ಅಸಾಧಾರಣ ಜಾಗೃತಿ ಮೂಡಿತು. ಸ್ವಾಮೀ ಆನಂದರ ಚತುರ ವ್ಯವಸ್ಥೆಯಿಂದ ಎರಡೂ ಪತ್ರಿಕೆಗಳು ಸ್ವಾಯತ್ತ (ಸ್ವಾಶ್ರಯ)ಗಳಾದವು. ಹಳೆಯ ಸಾಲತೀರಿತು. 'ನವಜೀವನ'ದ ಎರಡನೆ

ವರ್ಷ ೧೯೨೧ರಲ್ಲಿ ಆಗಸ್ಟ್ ತಿಂಗಳಿನಲ್ಲಿ ಹಿಂದಿ 'ನವಜೀವನ' ಹೊರಕ್ಕೆ ಬಂತು. ಹರಿಭಾವೂ ಉಪಾಧ್ಯಾಯ ಅದರ ಮೊದಲ ಸಂಪಾದಕರಾದರು. ಈ ವರ್ಷ 'ನವಜೀವನ' ಸುಮಾರು ಅರ್ಧ ಸಾಪ್ತಾಹಿಕವಾಗಿಬಿಟ್ಟಿತ್ತು. ಎಷ್ಟೋ ಸಾರಿ ಎರಡನೆಯ ಆವೃತ್ತಿ ಮುದ್ರಿಸಬೇಕಾಗುತ್ತಿತ್ತು. 'ನವಜೀವನ'ದ ೪೦೦೦೦ ಹಾಗೂ 'ಯಂಗ್ ಇಂಡಿಯಾ'ದ ೨೫೦೦೦ ಮತ್ತು ಹಿಂದಿ 'ನವಜೀವನ'ದ ೫೦೦೦೦ ಪ್ರತಿಗಳು ಮುದ್ರಿತವಾಗುತ್ತಿದ್ದವು.

ಹೀಗೆ ಗಾಂಧೀಜಿಯವರ ಕೈಗೆ ಸಮಾಚಾರ ಪತ್ರಿಕೆಯೆಂಬ ಅಮೋಘ ಅಸ್ತ್ರ ಸಿಕ್ಕಿತು. ನಮ್ರ ಹಾಗೂ ಸತ್ಯನಿಷ್ಠವಾದ ಜ್ವಾಲೆಯ ಹಾಗಿರುವ ಲೇಖನಗಳ ಮುಖಾಂತರ ಗಾಂಧೀಜಿ ದೇಶವಾಸಿಗಳಿಗೆ ಚಿಂತಿಸಲು ಮತ್ತು ಕರ್ತವ್ಯ ನಿಷ್ಠರಾಗಲು ಪ್ರೇರೇಪಿಸಿದರು. ದೇಶವಾಸಿಗಳಲ್ಲಿದ್ದ ನೂರಾರು ವರ್ಷಗಳ ಭಯ ಸ್ವಲ್ಪ–ಸ್ವಲ್ಪವಾಗಿ ಕರಗತೊಡಗಿತು. ಒಂದು ವಿಚಿತ್ರವಾದ ಆಸೆ ಅಂಕುರಿತವಾಗಿ ದೃಢತೆ ಮೂಡಿ ದೀನ–ಹೀನ ಜನರಲ್ಲಿ ತೇಜಸ್ಸು ಸಂಚರಿಸಿತು. ಈ ಲೇಖನಗಳನ್ನು ಓದಿ ಜನರ ಮೌನ ದೂರವಾಯಿತು. ಮತ್ತು ಗುಲಾಮ ಪ್ರಜೆಗಳು ಧೈರ್ಯವಂತರಾಗಿ ಸಮರ್ಥ ನಾಗರಿಕನ ಗೌರವದೊಂದಿಗೆ ನಿಲ್ಲತೊಡಗಿದರು. ಮಹದೇವ ದೇಸಾಯಿ 'ಯಂಗ್ ಇಂಡಿಯಾ'ದ ಸಂಪಾದಕರಾಗಿದ್ದರು. ಸಾಪ್ತಾಹಿಕಗಳು ಗಾಂಧೀಜಿಯ ಲೇಖನ ಹಾಗೂ ವಿಚಾರಗಳಿಂದ ತುಂಬಿರುತ್ತಿದ್ದವು. ಸರಕಾರ ಸತ್ಯಾಗ್ರಹದ ಇಂತಹ ಪ್ರಚಾರವನ್ನು ತಡೆಯಲಾಗಲಿಲ್ಲ. ಆದುದರಿಂದ ೧೦ ಮಾರ್ಚ್ ೧೯೨೨ ರಂದು ಗಾಂಧೀಜಿಯನ್ನು ವಶಕ್ಕೆ ತೆಗೆದುಕೊಂಡು ಆರು ವರ್ಷಗಳಿಗಾಗಿ ಬಂಧಿಸಿತು. ಆಗ ಸ್ವಾಮಿ ಆನಂದ್ ಅವರು ವ್ಯವಸ್ಥೆಯೊಂದಿಗೆ ಸಂಪಾದಕತ್ವದ ಜವಾಬ್ದಾರಿ ಕೂಡ ತೆಗೆದುಕೊಂಡರು. ಅವರು ಕೂಡ ಜೈಲಿಗೆ ಹೋದಾಗ ಗಾಂಧೀಜಿಯ ಮೂರನೆಯ ಮಗ ರಾಮದಾಸ ಗಾಂಧಿ ಸಂಪಾದನೆ ಹಾಗೂ ವ್ಯವಸ್ಥೆಯ ಜವಾಬ್ದಾರಿ ವಹಿಸಿಕೊಂಡರು. ಅವರಿಗೆ 'ಇಂಡಿಯನ್ ಒಪಿನಿಯನ್'ನ ಅನುಭವವಿತ್ತು. ಆದುದರಿಂದ ಯುವಕ ರಾಮದಾಸನಿಗೆ ಈ ಕೆಲಸ ಕಷ್ಟದ್ದಾಗಿರಲಿಲ್ಲ. ಈ ರೀತಿ ಯಾರೊಬ್ಬ ಜೈಲಿಗೆ ಹೋದಾಗಲು ಯಾರಾದರೂ ಒಬ್ಬರೂ ಹೊರಗಿರುತ್ತಿದ್ದರು. ಆತನೇ ಸಂಪಾದಕನಾಗುತ್ತಿದ್ದ. ಸತ್ಯಾಗ್ರಹವಂತೂ ಮನುಷ್ಯನ ಅಂತರಾತ್ಮದ ಕರೆತಾನೆ ಆಗಿರುತ್ತದೆಯಲ್ಲವೇ? ಸೇನಾಪತಿ ಇಲ್ಲದಿದ್ದರೂ ಅದಕ್ಕೆಲ್ಲಿ ಏನೂ ವಿಶೇಷ ಕೊರತೆ ಆಗುವುದಿಲ್ಲ. ಚಿಕ್ಕ–ದೊಡ್ಡ ಸತ್ಯಾಗ್ರಹಿಗಳು ಎಲ್ಲರೂ ತಮ್ಮ ಕರ್ತವ್ಯವನ್ನರಿತಿದ್ದರು. ಓದಿ–ಬರೆಯಲು ಆಗುವವರು ಕೂಡ ಸತ್ಯಾಗ್ರಹವನ್ನು ನಡೆಸುವವರಾಗುತ್ತಿದ್ದರು. ಸರಕಾರ ಅದರ ಮುದ್ರಣಕ್ಕೆ ಪ್ರತಿಬಂಧಕಾಜ್ಞೆ ಹೊರಡಿಸುವವರೆಗೂ ಮೂರೂ ಸಾಪ್ತಾಹಿಕಗಳು ನಿಯಮಿತವಾಗಿ ಶುಕ್ರವಾರದ ದಿನ ಮುದ್ರಿತಗೊಂಡು ಭಾನುವಾರದಂದು ಜನರನ್ನು ತಲಪುತ್ತಿದ್ದವು. ಆ ಕಾಲದಲ್ಲಿ ಭಾನುವಾರ ಕೂಡ ಪೋಸ್ಟ್‌ಮೆನ್‌ಗೆ ರಜಾ ಇರುತ್ತಿರಲಿಲ್ಲ. ದೇಶದ ಜನ ಭಾನುವಾರ ಬೆಳಗಾದೊಡನೆ

ಪತ್ರಿಕೆಯನ್ನೆದುರು ನೋಡುತ್ತಿದ್ದರು. 'ಯಂಗ್ ಇಂಡಿಯಾ' ಮತ್ತು ಹಿಂದಿ ಗುಜರಾತಿಯ 'ನವಜೀವನ'ದ ಒಂದೊಂದು ವಾಕ್ಯವನ್ನು ಬಿಡದೆ ಓದುತ್ತಿದ್ದರು. ಅದರ ಬೆಲೆ ಒಂದಾಣೆ ಇತ್ತು ಅಷ್ಟೆ. ದೇಶ ಬಡವಾಗಿತ್ತು. ಅದರಿಂದ ಒಂದು ಪತ್ರಿಕೆಯನ್ನ ೩೦–೪೦ ಮಂದಿ ಓದುತ್ತಿದ್ದರು. ಗಾಂಧೀಜಿ ಜೈಲಿನಲ್ಲಿದ್ದಾಗ ಸ್ವಾಮಿ ಆನಂದರು ಗಾಂಧೀಜಿಯವರ ಲೇಖನಗಳನ್ನು ಸಂಗ್ರಹಿಸಿ ಪುಸ್ತಕವಾಗಿ ಮುದ್ರಿಸಲು ಆರಂಭಿಸಿದ್ದರು. ಆ ವರ್ಷದಲ್ಲಿ 'ನವಜೀವನ' ಮುದ್ರಣಾಲಯ ದೊಡ್ಡ ಪುಟ್ಟ ೨೫ ಪುಸ್ತಕಗಳನ್ನು ಪ್ರಕಟಪಡಿಸಿತು. ನಂತರ 'ನವಜೀವನ'ದಲ್ಲಿ ಗಾಂಧೀಜಿ ಬರೆದಿದ್ದ 'ದಕ್ಷಿಣ ಆಫ್ರಿಕಾದ ಸತ್ಯಾಗ್ರಹ'ವನ್ನು ಧಾರಾವಾಹಿಯಾಗಿ ಪ್ರಕಟಿಸತೊಡಗಿದರು. ಗಾಂಧೀಜಿ ತಮ್ಮ ಆತ್ಮಕತೆಯನ್ನು ಕೂಡ 'ನವಜೀವನ'ದಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದ್ದರು.

ಇಂದು 'ನವಜೀವನ' ಮುದ್ರಣಾಲಯದ ಬಳಿ ಅಹಮದಾಬಾದ್ ನಗರದ ಮಧ್ಯೆ ೬೦ ಎಕರೆ ಭೂಮಿಯಲ್ಲಿ ಇದರ ಭವ್ಯ ಭವನವಿದೆ. ಎಲ್ಲಾ ಅನುಕೂಲಗಳಿದ್ದಾಗ್ಯೂ 'ನವಜೀವನ' ಪ್ರೆಸ್ ಹೊಸದನ್ನೇನೂ ಮುದ್ರಿಸುತ್ತಿಲ್ಲ. ಇರುವ ಪುಸ್ತಕಗಳ ಮಾರಾಟವಾಗುವುದಿಲ್ಲ. ಬಾಪೂಜಿಯ 'ಆತ್ಮಕತೆ'ಯ ಹೊಸ ಸಂಪುಟಗಳಲ್ಲಿ ಒತ್ತಕ್ಷರಗಳ ತಪ್ಪು, ಕಾಗದದಲ್ಲಿ ಜಿಪುಣತನವಿದೆ. ಪುಟಗಳೇ ಮಾಯವಾಗಿದೆ. ೧೯೨೧ರಲ್ಲಿ 'ನವಜೀವನ ಪ್ರೆಸ್' ಕಾಲೂಪುರ್ ಸ್ಟೇಷನ್ ಎದುರು ಒಂದು ಸಣ್ಣಗಲ್ಲಿಯಲ್ಲಿ ಕತ್ತಲಿನಿಂದ ಕೂಡಿದ ಮನೆಯಲ್ಲಿತ್ತು. ಅದೇ ಕಗ್ಗತ್ತಲ ಗಲ್ಲಿಯಲ್ಲಿ ಅಂತಹ ಉಜ್ವಲ ಸಾಪ್ತಾಹಿಕಗಳು ಪ್ರಕಟವಾಗುತ್ತಿದ್ದವು. ಈ ನವಜೀವನದ ಕತೆಯನ್ನು ಸ್ವಾಮೀ ಆನಂದರು ನನಗೆ ಹೇಳಿದ್ದರು. ಗಾಂಧೀಜಿ ನಿರಂತರವಾಗಿ ಪ್ರವಾಸದಲ್ಲಿರುತ್ತಿದ್ದರು. ದೇಶದ ಮೂಲೆ ಮೂಲೆಗೂ ಹೋಗಿ ಕಷ್ಟದಲ್ಲಿದ್ದ ಬಡವರನ್ನು ಭೇಟಿಯಾಗುತ್ತಿದ್ದರು. ಎಂತಹ ಸ್ಥಿತಿಯಲ್ಲೂ ಸಮಯಕ್ಕೆ ಸರಿಯಾಗಿ ಮುದ್ರಿಸಲು ಲೇಖನ–ಟಿಪ್ಪಣಿ ಮುಂತಾದವು ಅಂಚೆ ಮೂಲಕ ಅಹಮದಾಬಾದ್‌ನ ಪ್ರೆಸ್‌ಗೆ ತಲುಪುತ್ತಿತ್ತು. ಗಾಂಧೀಜಿ ಜೊತೆಗೆ ಮಹದೇವ ದೇಸಾಯಿ, ಕಿಶೋರಲಾಲ್ ಮಶ್ರೂವಾಲಾ ಎಂಬಿಬ್ಬರು ಹೆಸರಾಂತ ಜನಪ್ರಿಯ ಲೇಖಕರಿದ್ದರು. ಅಂದಂದಿನ ಘಟನೆಗಳನ್ನು ಕುರಿತು ಸತ್ಯ ನ್ಯಾಯದೊಂದಿಗೆ ಅದರ ವಿಶ್ಲೇಷಣೆ ಇರುತ್ತಿತ್ತು. ಟಿಪ್ಪಣಿಗಳಿರುತ್ತಿದ್ದವು. ಪತ್ರಮುಖೇನ ಬಂದ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಲಾಗುತ್ತಿತ್ತು ಮತ್ತು ಆಶ್ರಮದ ದಿನಚರ್ಯೆಯ ವಿವರಣೆ ಕೂಡ ಈ ಸಾಪ್ತಾಹಿಕಗಳ ಸಾಮಗ್ರಿಯಾಗಿರುತ್ತಿತ್ತು.

'ಇಂಡಿಯನ್ ಒಪೀನಿಯನ್'ನ ಕಾಲದಿಂದಲೂ ಗಾಂಧೀಜಿ ಜಾಹಿರಾತುಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಆದುದರಿಂದ ಹಣದ ಕೊರತೆ ಯಾವಾಗಲೂ ಇರುತ್ತಿತ್ತು. ಜಾಹಿರಾತುಗಳು ಇಲ್ಲದೆ ಇದ್ದುದರಿಂದ ಈ ಪತ್ರಿಕೆಗಳು

ತಮ್ಮ ಸ್ವತಂತ್ರ ನೀತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗಿತ್ತು. ಸ್ವಾಮೀ ಕಾಕಾ (ಸ್ವಾಮಿ ಆನಂದ್) ಈ ಪ್ರೆಸ್‌ನಲ್ಲಿ ಪೀರ್, ಅಡುಗೆಯವನು, ನೀರನ್ನು ಹೊತ್ತುತರುವವನು ಯಾಂತ್ರಿಕವಾಗಿ ಟೈಪ್‌ಸೆಟ್ ಮಾಡುವುದು, ಗ್ಯಾಲಿ ತಿದ್ದುವುದು ಪೇಪರ್ ಮೇಲೆ ಕೈಯಿಂದಲೇ ವಿಳಾಸ ಬರೆಯುವುದು, ಕೈಯಿಂದಲೇ ಪತ್ರಿಕೆ ಮಡಿಸುವುದು, ರ್‍ಯಾಪರ್ ಸುತ್ತಿ ಸ್ಟಾಂಪ್ ಹಚ್ಚುವದು– ಈ ಎಲ್ಲಾ ಕೆಲಸ ಇಬ್ಬರು ಮೂವರು ಸೇರಿ ಮಾಡುತ್ತಿದ್ದೆವೆಂದು ಹೇಳುತ್ತಿದ್ದರು. ಆ ಕೆಲವು ವರ್ಷಗಳು ಸ್ವಾಮೀ ಕಾಕಾ ಅವರೇ ಕಾಲೂಪುರದ ಕೊಂಪೆಯಿಂದ ಹೊರಕ್ಕೆ ಬಂದಿದ್ದರು. ಪ್ರೆಸ್‌ನಲ್ಲೇ ಒಂದಿಷ್ಟು ಊಟ ಮಾಡುತ್ತಿದ್ದರು, ಇಲ್ಲೇ ರಾತ್ರಿ ೨–೩ ಗಂಟೆವರೆಗೂ ಒಂದು ಕಂಬಳಿಯ ಮೇಲೆ ಮಲಗುತ್ತಿದ್ದರು. ವಾರದಲ್ಲಿ ಒಂದೆರಡು ಸಾರಿ ಸರದಾರ್ ಪಟೇಲರು ತಮ್ಮ ಪ್ರಿಯಮಿತ್ರನನ್ನು ಹುಡುಕಿಕೊಂಡು ಕಾಲೂಪುರಕ್ಕೆ ಹೊರಟು ಹೋಗುತ್ತಿದ್ದರು. ದಯೆ ತೋರಿ ಕೋಪ ಮಾಡಿಕೊಂಡು ಸ್ವಾಮಿ ಕಾಕಾನ ಅಲ್ಲಿಂದ ಹೊರಕ್ಕೆ ಎಳೆದುಕೊಂಡು ಹೋಗಿ ತಮ್ಮ ಈ ಸ್ವಾಮೀಗೆ ಸ್ವಲ್ಪ ಸರಿಯಾದ ಊಟವನ್ನು ಮಾಡಿಸುತ್ತಿದ್ದರಂತೆ. ಸ್ವಾಮಿ ಆನಂದರ ಬಿಳಿ ಬಣ್ಣದ ಮೇಲೆ ಪ್ರೆಸ್ ಶಾಯಿ ಮತ್ತು ಟಾಯಿಪ್‌ನ ಅಕ್ಷರಗಳ ಮಸಿ ಇವುಗಳು ಮೆತ್ತಿಕೊಂಡಿರುತ್ತಿದ್ದವು. ಹಾಗಿದ್ದರೂ ಸಾಪ್ತಾಹಿಕಗಳ ಮೇಲೆಲ್ಲೂ ಅದರ ಕಲೆ–ಮಸಿ ಎಂದೂ ಅಂಟಿಕೊಂಡಿರುತ್ತಿರಲಿಲ್ಲ, ಅಕ್ಷರಗಳು ತಪ್ಪಾಗಿ ಅಥವಾ ವ್ಯಾಕರಣದ ತಪ್ಪುಗಳು ಎಂದೂ ಕಂಡುಬರಲಿಲ್ಲ. ಗಾಂಧೀಜಿ ಒಳ್ಳೆಯ ಶುದ್ಧವಾದ ಮುದ್ರಣವನ್ನು ಕುರಿತು, ಶಬ್ದಾರ್ಥ ಮತ್ತು ವಾಕ್ಯರಚನೆ ಕುರಿತು ಬಹಳ ಜಾಗೃತರಾಗಿರುತ್ತಿದ್ದರು. ಸ್ವಾಮಿ ಕಾಕಾ ಅಂತೂ ಪರಿಪೂರ್ಣ ಶುದ್ಧತಾವಾದಿ, ಅವರ ಸೂಕ್ಷ್ಮ ದೃಷ್ಟಿಯಿಂದ ಯಾವೊಂದು ಸಣ್ಣ ತಪ್ಪೂ ಉಳಿದು ಹೋಗುತ್ತಿರಲಿಲ್ಲ. ಅಷ್ಟಲ್ಲದೆ ಬೇರೆಯವರು ತಪ್ಪು ಮಾಡಿದರೂ ಅವರು ಸಹಿಸುತ್ತಿರಲಿಲ್ಲ. ಆಗ ಅಂತಹ ಸ್ವಚ್ಛ, ಒಳ್ಳೆಯ ಮುದ್ರಣ 'ನವಜೀವನ' ಪ್ರೆಸ್‌ನಲ್ಲಾಗುತ್ತಿತ್ತು. ಸರದಾರ್ ಪಟೇಲ್‌ನ ನಾವು ೧೩ ಜನ ಮೊಮ್ಮಕ್ಕಳು ದಾದಾ ಅಂತ ಕರೆಯುತ್ತಿದ್ದೆವು. ಅವರು ಸ್ವಾಮಿ ಕಾಕಾನ ಪ್ರೆಸ್‌ನ ಹುಳು ಅಂತ ಕರೆಯುತ್ತಿದ್ದರು. ಇವತ್ತಿನ ಆಧುನಿಕ ಸಾಧನಗಳು 'ನವಜೀವನ'ಕ್ಕೂ ಲಭ್ಯವಾಗಿದ್ದರೆ, ಸಾಪ್ತಾಹಿಕಗಳ ಮುದ್ರಣಕ್ಕೆ ಉಪಯೋಗವಾಗಬಹುದಿತ್ತು. ಆದರೆ ಇಂತಹ ಐಷಾರಾಮಗಳ ನಡುವೆ ಅದು ಪ್ರಜ್ವಲಿತವಾಗುತ್ತಿರಲಿಲ್ಲವೆಂದು ಕೂಡ ಒಂದೆಡೆ ಅನಿಸುತ್ತದೆ. ಅಭಾವಗಳ ನಡುವೆಯೇ ಉತ್ಸಾಹದ ಜ್ವಾಲೆ ಹೊರ ಮೂಡುವುದು, ಬೆಳೆಯುವುದು, ಆಗಲೇ ರಾಷ್ಟ್ರೋತ್ಥಾನದ ಕೆಲಸ ಕೂಡ ಮುಂದುವರಿಯುವುದು. ಅಂತಹ ಅಭಾವ ಮತ್ತು ಕಷ್ಟಕಾರ್ಪಣ್ಯಗಳ ನಡುವೆಯೇ ಪ್ರಪಂಚದ ಪ್ರತಿಯೊಂದು ಕ್ರಾಂತಿಯ ಜನ್ಮದ ಇತಿಹಾಸ ಅಡಗಿರುತ್ತದೆ.

* * * *

# ೮. ಜಲಿಯನ್ ವಾಲಾಬಾಗ್

ಪಂಜಾಬ್‌ನ ದುಃಸ್ಥಿತಿಯನ್ನು ಕುರಿತ ಹಾಗೆ ಸುದ್ದಿ ಸುಮಾರು ಪ್ರತಿದಿನವೂ ಬೊಂಬಾಯಿ – ಅಹಮದಾಬಾದ್‌ಗೆ ತಲುಪುತ್ತಿದ್ದು ಗಾಂಧೀಜಿ ಅಲ್ಲಿಯವರೆವಿಗೂ ಪಂಜಾಬಿಗೆ ಬರಲಾಗಿರಲಿಲ್ಲ. ಜನ ಅಲ್ಲಿಂದ ಒಂದೇ ಸಮನೆ ಕರೆಯುತ್ತಿದ್ದರು. ಆದರೆ ಸರಕಾರ ಗಾಂಧೀಜಿಗೆ ಪಂಜಾಬಿಗೆ ಹೋಗಲು ಅನುಮತಿ ಕೊಡುತ್ತಿರಲಿಲ್ಲ. ಪಂಜಾಬಿನ ಗವರ್ನರ್ ಆಗಿದ್ದ ಸರ್ ಮೈಕೆಲ್ ಒಡವಾಯರ್ ಅಲ್ಲಿನ ಅಶಾಂತಿ–ದಂಗೆ ಇವಕ್ಕೆಲ್ಲಾ ಗಾಂಧೀಜಿನೇ ಕಾರಣ ಅಂತ ಅವರ ಮೇಲೆ ತಪ್ಪುಹಾಕಿದ್ದ. ಆದರೆ ಗಾಂಧೀಜಿ ಮಾತ್ರ ಪಂಜಾಬಿಗೆ ಕಾಲಿಟ್ಟಿರಲೂ ಇಲ್ಲ. ಮತ್ತೊಂದು ಕಡೆ ನೋಡಿದರೆ, ಕೆಲವರು ಪಂಜಾಬಿ ಯುವಕರು ಪಂಜಾಬಿನಲ್ಲಿ ಮಾರ್ಷಲ್ ಲಾ ಜಾರಿಗೊಳಿಸಿರುವುದಕ್ಕೆ ಗಾಂಧೀಜಿಯೇ ಕಾರಣ ಅಂತ ಹೇಳಿ ಅವರನ್ನು ದೂರುತ್ತಿದ್ದರು. ಗಾಂಧೀಜಿ ಏನಾದರೂ ಪಂಜಾಬಿಗೆ ಬಂದರೆ ಅವರನ್ನು ಸಾಯಿಸಿಬಿಡುತ್ತೇವೆ ಅಂತ ಹೇಳುತ್ತಿದ್ದರು. ಗಾಂಧೀಜಿ ನಿರಂತರವಾಗಿ ವೈಸ್‌ರಾಯ್‌ಗೆ ಅವೇದನ ಪತ್ರ, ತಂತಿ ಕಳುಹಿಸುತ್ತಲೇ ಇದ್ದರು. ಆದರೆ ಪ್ರತಿಯೊಂದು ಬಾರಿಯೂ ಅದನ್ನು ತಿರಸ್ಕರಿಸಲಾಗುತ್ತಿತ್ತು. ಗಾಂಧೀಜಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಪಂಜಾಬ್‌ಗೆ ಹೋಗಿದ್ದರೆ ಅವರನ್ನು ಪಂಜಾಬಿನ ಸರಹದ್ದಿನಲ್ಲೇ ಬಂಧಿಸಿ ಅವರು ಪಂಜಾಬಿಗೆ ಪ್ರವೇಶಿಸದಂತೆ ತಡೆಯಲಾಗುತ್ತಿತ್ತು. ಗಾಂಧೀಜಿ ಯಾವುದೇ ಬರಿಯ ಮಾನಸಿಕ ತೃಪ್ತಿ ಅಥವಾ ಪ್ರಚಾರಕ್ಕಾಗಿ ಸತ್ಯಾಗ್ರಹ ಮಾಡಬಯಸುತ್ತಿರಲಿಲ್ಲ. ಗಾಂಧೀಜಿಯನ್ನು ಬಂಧಿಸಿದ್ದರೂ ಜನರು ಅಶಾಂತರಾಗಿ ಏನುಬೇಕಾದರೂ ಮಾಡಬಹುದಿತ್ತು. ಆಗ ಸರಕಾರ ಮತ್ತಷ್ಟು ತೀವ್ರವಾಗಿ ಜನರನ್ನು ತುಳಿಯಬಹುದಾಗಿತ್ತು. ಹೀಗಾಗಿ ಗಾಂಧೀಜಿ ಇಬ್ಬಂದಿಯ ಸ್ಥಿತಿಯಲ್ಲಿದ್ದರು. ಪಂಜಾಬಿನಿಂದ ಬೊಂಬಾಯಿ ಅಹಮದಾಬಾದ್‌ಗೆ ಯಾರಾದರೂ ಬಂದಾಗ, ಗಾಂಧೀಜಿ ಅವರ ಮೂಲಕ ಪಂಜಾಬಿನ ಜನರಿಗೆ ಧೈರ್ಯ ಹೇಳಿ ಅಹಿಂಸೆಯ ಮಾರ್ಗವನ್ನು ತಿಳಿಸಿಕೊಡುತ್ತಿದ್ದರು. ಆದರೆ ಅವೆಲ್ಲಾ ಚೆನ್ನಾಗಿ ನಡೆಯಲು ಹೇಗೆ ಸಾಧ್ಯವಿತ್ತು? ಸರಕಾರ ಗಾಂಧೀಜಿ ಪಂಜಾಬಿಗೆ ಹೋಗದ ಹಾಗೆ ತಡೆಹಾಕಿ ಕುಳಿತಿತ್ತಲ್ಲ.

ಈ ಮಧ್ಯೆ ಅಮೃತಸರದಲ್ಲಿ ೧೯೧೯ರ ಏಪ್ರಿಲ್ ೧೩ ರಂದು ಜಲಿಯನ್

ವಾಲಾಬಾಗ್‌ನಲ್ಲಿ ವೈಶಾಖಿ ಉತ್ಸವ ಇತ್ತು. ಸಾಮಾನ್ಯವಾಗಿ ಜಾತ್ರೆಗಳಲ್ಲಿ ನಡೆಯುವ ಹಾಗೆ ಇಲ್ಲೂ ಭಾಷಣಗಳಾಗುತ್ತಿದ್ದವು. ಸುಮಾರು ೬೦೦೦ ಜನ ಹೆಂಗಸರು–ಗಂಡಸರು, ಮಕ್ಕಳು ಆ ಉದ್ಯಾನದಲ್ಲಿ ಸೇರಿದ್ದರು. ಭಾಷಣಗಳು ನಡೆದಿದ್ದವು. ಆಗ ಅಲ್ಲಿನ ಸೇನೆಯ ಕಮಾಂಡರ್ ರೆಜಿನಾಲ್ಡ್ ಡಾಯರ್ ಅನ್ನುವವರು ಬಡಪಾಯಿ ಜನರ ಮೇಲೆ ಗೋಲಿಬಾರ್ ಮಾಡುವಂತೆ ಆದೇಶವಿತ್ತರು, ಹತ್ತು ನಿಮಿಷಗಳ ಕಾಲ ಗೋಲಿಬಾರ್ ಆಯಿತು. ಉದ್ಯಾನಕ್ಕೆ ಆರು ಅಡಿ ಎತ್ತರದ ಗೋಡೆ ಇತ್ತು. ಜನ ಓಡಿ ತಮ್ಮ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದರೆ ಯಾವ ಮಾರ್ಗವೂ ಇರಲಿಲ್ಲ. ಜನ ಅಲ್ಲೇ ಗುಂಡು ತಾಗಿ ಸತ್ತರು. ಅಷ್ಟಾದರೂ ಕಮಾಂಡರ್ ಜನರಲ್ ಡಾಯರ್‌ಗೆ ತೃಪ್ತಿಯಾಗಲಿಲ್ಲ. ಆಗ ೪೦೦೦ ಜನ ಗಾಯಗೊಂಡವರಿಗೆ ಯಾವ ಉಪಚಾರವೂ ಇಲ್ಲದೆ ಆ ಉದ್ಯಾನದಲ್ಲೇ ಬಿದ್ದಿರಲು ಬಿಟ್ಟ. ದಯೆ ತೋರಿ ಯಾರೂ ಒಂದು ಗುಟುಕು ನೀರು ಕುಡಿಸುವುದು ಕೂಡ ಸಾಧ್ಯವಿರಲಿಲ್ಲ. ಊರಿನಲ್ಲಿ ಮಾರ್ಷಲ್ ಲಾ ಜಾರಿಗೊಳಿಸಿದರು. ಅಮೃತಸರದ ಒಂದು ಮೊಹಲ್ಲಾನ ಲೋಗಢ್‌ಗಲೀ ಅಂತ ಕರೆಯುತ್ತಿದ್ದರು. ಅಲ್ಲಿ ದೊಡ್ಡ ಶ್ರೀಮಂತ ವ್ಯಾಪಾರಿಗಳು ವಾಸವಾಗಿರುತ್ತಿದ್ದರು. ಕಮಾಂಡರ್ ಜನರಲ್ ಡಾಯರ್‌ನು ಆ ಬೀದಿಯಲ್ಲಿ ಹೋಗುವ ಜನರು ತೆವಳಿಕೊಂಡು ಹೋಗುವುದನ್ನು ಅನಿವಾರ್ಯಗೊಳಿಸಿದ, ಇದು ತೀವ್ರ ಅಪಮಾನಕರವಾದ ವಿಷಯವಾಗಿತ್ತು. ಜನರನ್ನು ಬೆತ್ತಲೆ ಮಾಡಿ ಚಾಟಿಯಿಂದ ಹೊಡೆದರು. ಜನರು ಜಲಿಯನ್ ವಾಲ್‌ಬಾಗ್‌ನ ರಸ್ತೆ ಮೇಲೆ ಹೊಟ್ಟೆಯ ಮೇಲೆ ಮಲಗಿ ತೆವಳಿಕೊಂಡು ಹೋಗುವಂತೆ ಆದೇಶ ನೀಡಿದ. ಒಂದೂವರೆ ಸಾವಿರಕ್ಕೂ ಮಿಕ್ಕ ಯಾವ ತಪ್ಪು ಮಾಡಿಲ್ಲದ ಜನ ಆ ಉದ್ಯಾನದಲ್ಲಿ ಸತ್ತರು. ಸತ್ತವರಲ್ಲಿ ಹೆಂಗಸರು–ಗಂಡಸರು, ಮಕ್ಕಳು–ಮರಿ, ಹಿಂದೂ–ಮುಸಲ್ಮಾನ–ಸಿಖ್ ಎಲ್ಲಾ ಜಾತಿ–ಧರ್ಮಗಳಿಗೂ ಸೇರಿದ ಜನರಿದ್ದರು. ಸರಿಯಾಗಿ ಯೋಜನಾಬದ್ಧವಾಗಿ ಈ ಘಟನೆ ನಡೆಯುವಂತೆ ಯೋಜಿಸಲಾಗಿತ್ತು. ಈ ಜಲಿಯನ್ ವಾಲಾಬಾಗ್‌ಗೆ ಜನ ಆನಂದಿಸಲು ಬಂದಿದ್ದರು. ಆದ್ದರಿಂದಲೇ ಅಷ್ಟು ದೊಡ್ಡ ಸಂಖ್ಯೆಯಲ್ಲಿ ಹೆಂಗಸರು, ಮಕ್ಕಳು ಅಲ್ಲಿಗೆ ಬಂದಿದ್ದರು. ರಾಜಕೀಯದ ಸಭೆಯನ್ನು ನಡೆಸುವ ಯಾವ ಉದ್ದೇಶವೂ ಇರಲಿಲ್ಲ. ಭಾಷಣಗಳೂ ಸಾಮಾನ್ಯ ವ್ಯಕ್ತಿಗಳೇ ಮಾಡಿದ್ದು, ಸ್ಟೇಜ್ ಸಿಕ್ಕರೆ ಸಾಕೆಂದು ಹಾತೊರೆಯುವ ಜನ ಭಾಷಣ ನೀಡಿದ್ದು. ಆದರೆ ಕಮಾಂಡರ್ ಜನರಲ್ ಡಾಯರ್‌ನ ಉದ್ದೇಶ ಸ್ಪಷ್ಟವಾಗಿತ್ತು. ಜಾತ್ರೆ ನಡೆಯುತ್ತಿರುವ ಸಮಯಕ್ಕೆ ಸರಿಯಾಗಿ ಅಲ್ಲಿ ತೋಟಕ್ಕೆ ಮಷೀನ್ ಗನ್ ಕೊಟ್ಟು ಸೈನ್ಯವನ್ನು ಕಳುಹಿಸಿದ. ತಿಳಿದೂತಿಳಿದೂ ನಿಶ್ಶಸ್ತ್ರರಾಗಿದ್ದ ಜನರನ್ನು ಹುಲ್ಲು ಮೆದೆಯನ್ನು ಸುಡುವ ಹಾಗೆ ಸುಟ್ಟು ಹಾಕಿದ. ಕಮಾಂಡರ್ ಜನರಲ್ ಡಾಯರ್ ಹಿಂದೂಸ್ಥಾನಿ ಜನರನ್ನು ಹೆದರಿಸಿ, ಇನ್ನೊಂದು ಸಾರಿ ಅವರು ವಿರೋಧಿಸುವುದಾಗಲಿ, ಹರತಾಳ

ಮಾಡುವ ಧೈರ್ಯವಾಗಲಿ ಮಾಡಬಾರದಂತಾಗಬೇಕು ಎಂಬುದು ಅವನ ಸ್ಪಷ್ಟ ಉದ್ದೇಶವಾಗಿತ್ತು. ಈ ಸಂಹಾರದಿಂದ ದೇಶ ಎಲ್ಲೆಡೆ ಜಾಗೃತವಾಯಿತು. ಗಾಂಧೀಜಿಯವರ ಮನಸ್ಸಿನಲ್ಲಿ ಬ್ರಿಟಿಷ್ ರಾಜ್ಯವನ್ನು ಕುರಿತು ಉಳಿದಿದ್ದ ಅಲ್ಪಸ್ವಲ್ಪ ಮಮತೆಯೂ ಈ ಅತ್ಯಾಚಾರದ ಕರುಣ ಗಾಥೆ ಕೇಳಿ ಮಾಯವಾಗಿಬಿಟ್ಟಿತು. ಈ ಘಟನೆಯ ನಂತರ ಹಿಂದೂಸ್ತಾನದಿಂದ ಬ್ರಿಟಿಷರ ಬೇರನ್ನು ಕಿತ್ತು ಬಿಸಾಡಲು ಅವರು ದೃಢ ಸಂಕಲ್ಪ ಮಾಡಿದರು.

ಈ ದಂಗೆ, ಮತ್ತು ಮಹಾಹತ್ಯೆಯ ಪರೀಕ್ಷೆ ನಡೆಸಲು ಸರಕಾರ ಹಂಟರ್ ಸಮಿತಿಯನ್ನು ರಚಿಸಿತು. ಪಂಜಾಬಿನಲ್ಲಿ ಸುಮಾರು ಎಲ್ಲಾ ಮುಖಂಡರು ಬಂಧಿತರಾಗಿ ಜೈಲಿನಲ್ಲಿದ್ದರು, ಆದುದರಿಂದ ಹಿರಿಯರಾದ ಮಾಳವೀಯರ ಮುಂದಾಳತ್ವದಲ್ಲಿ ಪಂಜಾಬಿಗೆ ಸಹಾಯ ನೀಡುವ ಈ ಕೆಲಸವನ್ನು ದೇಶದ ಇತರೆ ಮುಖಂಡರುಗಳು ವಹಿಸಿಕೊಂಡರು. ಎಲ್ಲರಿಗೂ ಮೊದಲು ದೀನಬಂಧು ಆ್ಯಂಡ್ರೂಸ್ ಪಂಜಾಬಿಗೆ ಬಂದರು. ಹೃದಯ ಕರಗಿಸುವ ಅವರ ಪತ್ರಗಳನ್ನು ಓದಿ ಗಾಂಧೀಜಿ ದ್ರವಿತರಾದರು. ಸಮಾಚಾರ ಪತ್ರಗಳಲ್ಲಿ ನೀಡಿದ್ದ ವಿವರಗಳಿಗಿಂತ ಬಹಳ ಹೆಚ್ಚಿನ ಬಿಭತ್ಸ ಕಾಂಡ ಅಲ್ಲಿ ಜರುಗಿತ್ತೆಂದು ದೀನಬಂಧು ಅವರ ಪತ್ರಗಳಿಂದ ಅರಿವಾಯಿತು. ಈ ಎಲ್ಲಾ ಘಟನೆಗಳಿಂದ ಗಾಂಧೀಜಿ ಅತೀವ ವ್ಯಗ್ರರಾಗಿ ತಾವು ಪಂಜಾಬಿಗೆ ಹೋಗಲು ಅನುಮತಿ ನೀಡುವಂತೆ ವೈಸ್‌ರಾಯ್ ಬಳಿ ಮತ್ತೆ ಮತ್ತೆ ಕೋರಿಕೆ ಸಲ್ಲಿಸಿದರು. ಕೊನೆಗೆ, ಅಕ್ಟೋಬರ್ ೧೯೧೯ರಲ್ಲಿ ಗಾಂಧೀಜಿಗೆ ಅಮೃತಸರಕ್ಕೆ ಹೋಗಲು ಅನುಮತಿ ನೀಡಲಾಯಿತು. ಗಾಂಧೀಜಿ ಅಮೃತಸರ ತಲಪಿದ್ದು ನೋಡಿ ಪಂಜಾಬ್‌ಜನ ತೀವ್ರವಾಗಿ ಆಹ್ಲಾದಿತರಾದರು. ಸ್ಟೇಷನ್ ಒಳಗೆ–ಹೊರಗೆ ಲಕ್ಷಾಂತರ ಜನರ ಸಮೂಹ ಕಾದುನಿಂತಿತ್ತು. ಪಂಜಾಬಿಗಳ ಪ್ರೀತಿಯನ್ನು ನೋಡಿ ಜನ್ಮಾಂತರಗಳಿಂದ ದೂರ ಉಳಿದಿದ್ದ ಮಿತ್ರರು ಕೂಡಿಕೊಂಡ ಹಾಗೆ ಅನ್ನಿಸುತ್ತಿತ್ತು. ಹಿಂದೂ–ಮುಸ್ಲಿಂ ಎರಡೂ ಸಮುದಾಯಗಳ ಜನರಿಂದ ಅಮೃತಸರ ತುಳುಕಾಡಿತು. ಮದನಮೋಹನ್ ಮಾಳವೀಯ, ಮೋತಿಲಾಲ್ ನೆಹರೂ ಮತ್ತು ಸ್ವಾಮಿ ಶ್ರದ್ಧಾನಂದರೂ ಈ ಸಂದರ್ಭದಲ್ಲಿ ಅಮೃತಸರಕ್ಕೆ ಬಂದಿದ್ದರು. ಮೋತೀಲಾಲ ನೆಹರೂ ಅವರ ಜೊತೆ ಗಾಂಧೀಜಿಯವರದ್ದು ಇದು ಮೊದಲ ಆತ್ಮೀಯ ಭೇಟಿಯಾಗಿತ್ತು. ಅಮೃತಸರದಲ್ಲಿ ಜನಸಮುದಾಯದ ಅಲೆ ಉಕ್ಕಿ ಬರುತ್ತಿತ್ತು. ಪಂಜಾಬ್‌ನ ಸ್ಥಿತಿ, ಸರಕಾರದ ಬೇಜವಾಬ್ದಾರಿತನ –ಇವನ್ನು ನೋಡಿ ಈ ಮುಖಂಡರು ಹಂಟರ್ ಸಮಿತಿಯನ್ನು ಬಹಿಷ್ಕರಿಸಲು ನಿಶ್ಚಯಿಸಿದರು. ಆಗ ಕಾಂಗ್ರೆಸ್ ವತಿಯಿಂದ ಒಂದು ಖಾಸಗಿ ಸಮಿತಿ ರಚಿಸಿ, ಆ ಸಮಿತಿಗೆ ಪರಿಶೀಲಿಸಿ ರಿಪೋರ್ಟ್ ಕೊಡುವ ಜವಾಬ್ದಾರಿ ವಹಿಸಲಾಯಿತು. ಹಿರಿಯರಾದ ಮಾಳವೀಯರು, ಪಂಡಿತ್ ಮೋತೀಲಾಲ್ ನೆಹರೂ, ಬಂಗಾಳದ ಚಿತ್ತರಂಜನ ದಾಸ್, ಬಡೋದಾದ

ಅಬ್ಬಾಸ್ ತೈಯಾಬ್‌ಜೀ, ಪೂನಾದ ಶ್ರೀಜಯಕರ್ ಮತ್ತು ಗಾಂಧೀಜಿ ಈ ಸಮಿತಿಯ ಸದಸ್ಯರೆಂದು ನಾಮಾಂಕಿತರಾದರು. ಇವರೆಲ್ಲರೂ ಬೇರೆ ಬೇರೆ ಕಡೆ ಕೆಲಸ ಮಾಡುವುದಕ್ಕಾಗಿ ಹಂಚಿಹೋದರು. ಸಮಿತಿಯ ಕೆಲಸಗಳ ಸುವ್ಯವಸ್ಥೆ ರಿಪೋರ್ಟ್ ಬರೆಯುವುದು, ಆ ವಿಷಯವಾಗಿ ಹೆಚ್ಚು–ಹೆಚ್ಚು ಹಳ್ಳಿಗಳಲ್ಲಿ ಸುತ್ತಿ ತಪಾಸಣೆ ನಡೆಸುವ ಕೆಲಸ ಗಾಂಧೀಜಿಯದಾಗಿತ್ತು. ಈ ರೀತಿ ಪಂಜಾಬಿನ ಚಿಕ್ಕ ಹಾಗೂ ದೊಡ್ಡ, ದೂರ ದೂರದ ಹಳ್ಳಿಗಳಿಗೆ ಹೋಗುವ ಅಲಭ್ಯ ಅವಕಾಶ ಗಾಂಧೀಜಿಗೆ ದೊರಕಿತ್ತು. ಪರದೆಹಾಕುವ ಪಂಜಾಬಿನ ಮಹಿಳೆಯರೂ ಪರದೆಯನ್ನು ತೊರೆದು ಗಾಂಧೀಜಿ ಅವರೊಂದಿಗೆ ಸೇರಿದರು. ಎಲ್ಲಾ ವಯಸ್ಸಿನ ಹೆಂಗಸರು ಮಕ್ಕಳು ಯಾವಾಗಲೂ ಗಾಂಧೀಜಿಯವರನ್ನು ಸುತ್ತುವರಿದಿರುತ್ತಿದ್ದರು ಹಾಗೂ ತಾವು ಕೈಲಿ ನೇಯ್ದ ಹತ್ತಿಯ ನೂಲಿನ ರಾಶಿಯನ್ನು ಗಾಂಧೀಜಿಯವರ ಪಾದಗಳಿಗೆ ಅರ್ಪಿಸುತ್ತಿದ್ದರು.

ಈ ಪರೀಕ್ಷಣಾ ಸಮಿತಿಯಿಂದ ಆದ ಮತ್ತೊಂದು ಪರೋಕ್ಷ ಲಾಭ ಎಂದರೆ ಇಲ್ಲಿಯವರೆಗೂ ಗಾಂಧೀಜಿ ವ್ಯವಹಾರದಲ್ಲಿರುವ ಚರಖಾವನ್ನು ಹುಡುಕುತ್ತಿದ್ದರಲ್ಲ ಅದು ಜೀವಂತವಾಗಿ ಈ ಪಂಜಾಬಿನ ಪರಿಶ್ರಮಿ ಮಹಿಳೆಯರ ಬಳಿ ಸಿಕ್ಕಿತು. ಪಂಜಾಬ್ ಖಾದಿಯ ವ್ಯಾಪಕ ಕೇಂದ್ರವಾಗಬಲ್ಲುದು ಎಂದು ಇಲ್ಲಿ ತಿಳಿಯಿತು. ತಪಾಸಣೆಯಿಂದ ಯಾರೂ ಕಂಡೂ ಕೇಳದ ಸತ್ಯಾಂಶಗಳು ಹೊರಬಿದ್ದವು. ಪಂಜಾಬ್‌ನ ಆಫೀಸರ್‌ಗಳ ಕ್ರೌರ್ಯ ಸೈನ್ಯದ ಹತ್ಯಾ ಮನೋಭಾವ ಇವುಗಳ ಅರಿವಾಗಿ ಗಾಂಧೀಜಿ ಒಳಗೆ ಸಂತಪ್ತರಾಗಿ ಮೆತ್ತಗಾದರು. ಪಂಜಾಬ್ ಬ್ರಿಟಿಷ್ ಸರಕಾರಕ್ಕೆ ಇಷ್ಟೊಂದು ಜನ ಸೈನಿಕರನ್ನು ಕೊಡುತ್ತಿತ್ತು. ಅಂತಹುದರಲ್ಲಿ ಅದೇ ಪಂಜಾಬ್ ಇಷ್ಟೊಂದು ಪುಕ್ಕಲು ಆದದ್ದು ಹೇಗೆ? ಈ ಅಮಾನುಷ ಅತ್ಯಾಚಾರಗಳನ್ನು ಈ ರೀತಿ ಹೇಗೆ ಸಹಿಸುತ್ತಾ ಹೋಯಿತು? ಎಂಬುದು ನಿಜವಾಗಿಯೂ ಆಶ್ಚರ್ಯದ ಮಾತಾಗಿತ್ತು. ಈ ಘಟನೆ ನಡೆದು ೭೮ ವರ್ಷಗಳಾಗಿ ಇಂದು ಇಲ್ಲಿ ಪ್ರಜಾತಂತ್ರ ಸ್ಥಾಪಿತವಾಗಿದೆ. ಆದರೆ ಕಳೆದ ಮೂರು ವರ್ಷಗಳ ಹಿಂದೆಯೂ ಆ ಪ್ರದೇಶ ಹೊಡೆ–ತರಿಯುವ ಅಪರಾಧಗಳ ಬೀಡಾಗಿತ್ತು. ಪಂಜಾಬ್ ಆತಂಕವಾದಿಗಳ ಅತ್ಯಾಚಾರವನ್ನು ಸಹಿಸಿದ್ದು ಹೇಗೆ? ಗಾಂಧೀಜಿ ಸ್ವತಃ ಪರೀಕ್ಷಣಾ ಸಮಿತಿಯ ರಿಪೋರ್ಟನ್ನು ಬರೆದರು. ಆ ರಿಪೋರ್ಟ್‌ನಲ್ಲಿ ಎಲ್ಲಾ ಸತ್ಯಾಂಶಗಳ ವಿವರವಿತ್ತು. ಎಲ್ಲೂ ಯಾವುದೇ ಅತಿಶಯೋಕ್ತಿ ಎಂಬುದಿರಲಿಲ್ಲ. ಗಾಂಧೀಜಿ ಭಾವುಕರಾಗಿ ಎಷ್ಟೇ ದುಃಖ ವ್ಯಥೆ ಪಡುತ್ತಿದ್ದರಾದರೂ ರಿಪೋರ್ಟ್ ಬರೆಯುವ ಸಂದರ್ಭದಲ್ಲಿ ಒಂದೊಂದು ಮಾತನ್ನೂ, ಪ್ರತಿಯೊಂದು ಶಬ್ದವನ್ನೂ ವಿಚಾರಮಂಥನ ನಡೆಸಿಯೇ ಬರೆಯುತ್ತಿದ್ದರು. ಅವರ ರಿಪೋರ್ಟ್‌ನಲ್ಲಿ ಯಾವುದನ್ನೂ ಹೆಚ್ಚು ಮಾಡಿ ಬರೆಯುತ್ತಿರಲಿಲ್ಲ. ಯಾವುದೇ ಅತಿಶಯೋಕ್ತಿಯಿಂದ ಕೂಡಿದ ಅಂಶ ಸತ್ಯದ

ತಮಾಷೆಯಾಗಿಬಿಡುತ್ತಿತ್ತು. ಅತಿಶಯೋಕ್ತಿಯನ್ನು ಆಧರಿಸಿ ಜನ ಸಮಾಜವನ್ನು ತಪ್ಪುದಾರಿಗೆ ಕೊಂಡೊಯ್ಯುತ್ತಾರೆ. ಈಚೆಗೆ ಹೀಗೆ ಅತಿಶಯೋಕ್ತಿ ಮಾಡುವುದು. ಮಾಮೂಲಿ ಸ್ವಭಾವವಾಗಿ ಬಿಟ್ಟಿದೆ. ಅತಿಶಯೋಕ್ತಿಯಿಂದ ನ್ಯಾಯ ಸಂಗತವಾದ ಯಾವುದೇ ನಿರ್ಣಯ ತೆಗೆದುಕೊಳ್ಳಲಾಗುವುದಿಲ್ಲ. ಗಾಂಧೀಜಿಗೆ ಈ ಅಪಾಯದ ಒಳ್ಳೆಯ ಅರಿವಿತ್ತು. ಆದುದರಿಂದ ಅವರ ಲೇಖನಗಳಲ್ಲಿ ರಿಪೋರ್ಟ್‌ನಲ್ಲಿ ಭಾಷಣ ಎಲ್ಲೂ ಅತಿಶಯೋಕ್ತಿ ಇರುತ್ತಿರಲಿಲ್ಲ. ಈ ಶುದ್ಧ ಸತ್ಯನಿಷ್ಠೆಯಿಂದಾಗಿ ಅವರ ಶತ್ರುಗಳು ಕೂಡ ಅವರ ಮೇಲೆ ಅಸತ್ಯದ ಆರೋಪವನ್ನು ಹೊರಿಸಲಾಗಲಿಲ್ಲ. ಅಷ್ಟೇ ಅಲ್ಲ, ದೊಡ್ಡ ದೊಡ್ಡ ಆಂಗ್ಲ ಅಧಿಕಾರಿಗಳು ಕೂಡ ಗಾಂಧೀಜಿಯವರ ಪಕ್ಷಪಾತಹೀನ ರಿಪೋರ್ಟ್‌ನ್ನು ಶಬ್ದಶಃ ಸ್ವೀಕರಿಸುತ್ತಿದ್ದರು. ಗಾಂಧೀಜಿ ಶುದ್ಧ ಸತ್ಯವನ್ನಾಧರಿಸಿ ಬರೆದ ಈ ರಿಪೋರ್ಟ್‌ನಲ್ಲಿ ಅನೇಕ ಹೃದಯವಿದ್ರಾವಕ ಘಟನೆಗಳ ಸತ್ಯಾಂಶಗಳ ವರ್ಣನೆ ನೀಡಿದರು. ಕಟು ಶಬ್ದಗಳನ್ನುಪಯೋಗಿಸಿ ಸರಕಾರವನ್ನು ನಿಂದಿಸಿದರು. ಇವತ್ತಿನವರೆಗೂ ಆ ರಿಪೋರ್ಟ್‌ನ ಯಾವುದೇ ಸತ್ಯಾಂಶವನ್ನು ಎಲ್ಲೂ ಯಾರೂ ಖಂಡಿಸಿಲ್ಲ. ಆ ರಿಪೋರ್ಟ್‌ನಿಂದಾಗಿ ಕಮಾಂಡರ್ ಜನರಲ್ ಡಾಯರ್ ಮೇಲೆ ಲಂಡನ್‌ನ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಕೇಸ್ ನಡೆಯಿತು. ನಂತರ ಅವರನ್ನು ಕೆಲಸದಿಂದ ತೆಗೆದು ಹಾಕಿದರು. ಆತನಿಗಾದ ಸಜಾ ಇದು. ಇದು ಆ ರಿಪೋರ್ಟ್ ಮತ್ತು ಗಾಂಧೀಜಿಯ ಸತ್ಯನಿಷ್ಠೆಯ ಅಳತೆಗೋಲಾಗಿತ್ತು.

ಪಂಜಾಬ್‌ನ ಈ ಹೇಯ ಅಪಮಾನವನ್ನು ದೇಶ ಮತ್ತು ಸಮಾಜ ಎಲ್ಲವೂ ತನ್ನ ಅಪಮಾನವೆಂದೇ ಭಾವಿಸಿದವು. ಪಂಜಾಬಿನ ಜಲಿಯನ್‌ವಾಲಾ ಕಾಂಡವು ದೇಶದ ಗುಲಾಮಗಿರಿಯ ದುಃಸ್ಥಿತಿಯನ್ನು ದೂರ ತಳ್ಳಿ ಸ್ವರಾಜ್ಯ ಪಡೆಯಲು ತಲ್ಲೀನರಾಗುವಂತೆ ಜನರನ್ನು ಪ್ರೇರಿಸಿತು. ಈ ಕ್ರೂರ ಹತ್ಯಾಕಾಂಡದಿಂದ ದುಃಖಿತರಾಗಿ ಗುರುದೇವ ಠಾಕುರರು ಅವರಿಗೆ ಬ್ರಿಟಿಷ್ ಸರಕಾರ ನೀಡಿದ್ದ 'ಸರ್' ಎಂಬ ಉಪಾಧಿಯನ್ನು ಹಿಂದಿರುಗಿಸಿಬಿಟ್ಟರು. ಅಂತಹ ನಿರ್ದಯಿ, ಸುಳ್ಳು ಸ್ವಾರ್ಥಿ ರಾಜ್ಯ ನೀಡಿದ ಉಪಾಧಿಯಲ್ಲಿ ಯಾವ ಗೌರವವೂ ಇರುತ್ತಿರಲಿಲ್ಲ. ಗುರುದೇವರಂತಹ ಕವಿ ಹೃದಯ ಇಂತಹ ನರಸಂಹಾರದಿಂದ ಚಿಂತಿತವಾಗಿ 'ಸರ್' ಉಪಾಧಿಯನ್ನು ಹಿಂದಿರುಗಿಸಿದರು.

ಪಂಜಾಬ್‌ನಿಂದ ಹೊರಡುವಾಗ ಗಾಂಧೀಜಿ ಅಮೃತಸರದ ಜನರಿಗೆ ಒತ್ತಾಯ ಮಾಡಿ ಈ ಕೆಳಗಣ ಮೂರು ಮಾತುಗಳನ್ನು ಹೇಳಿದರು:

–ಯಾವಾಗಲೂ ಯಾರಿಗೂ ಹೆದರಬೇಡಿ.

–ಸತ್ಯ ನುಡಿಯಿರಿ

–ದೇಶದ ಬಡತನ ತೊಲಗಿಸಲು ಸ್ವದೇಶಿ ವಸ್ತುಗಳನ್ನು ಬಳಸಿ.

ಇಂದು ಸುಮಾರು ಏಳು ದಶಕಗಳ ನಂತರವೂ ಈ ಮೂರು ಮಾತುಗಳು

ಶಬ್ದಶಃ ಅಷ್ಟೇ ಸತ್ಯವಾಗಿವೆ. ಆದರೆ ಪಂಜಾಬಾಗಲಿ, ನಾವು ಎಲ್ಲ ಭಾರತ ವಾಸಿಗಳು ಈ ಮೂರರಲ್ಲಿ ಯಾವುದನ್ನಾದರೂ ಜೀವನದಲ್ಲಿ ಅಳವಡಿಸಿಕೊಂಡಿದ್ದೇವೆಯೇ? ಅದಕ್ಕೂ ಮುಂದೆ ಜೀವನದ ಈ ಆದಿಮೌಲ್ಯಗಳನ್ನು ನಮ್ಮ ಜೀವನಕ್ಕೆ ಅಳವಡಿಸಿಕೊಳ್ಳ ಬಯಸುತ್ತೇವೆಯೇ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ನಾವು ಭಾರತೀಯರು ನಮ್ಮ ಹೃದಯದೊಳಗೇ ಹುಡುಕಬೇಕು. ಇಲ್ಲದಿದ್ದರೆ, ಸ್ವಾತಂತ್ರ್ಯದ ಈ ಸ್ವರ್ಣಜಯಂತಿಯಲ್ಲಿ ನಾವು ದಿಗ್ಭ್ರಮಿತರಾದೇವು. ಮೇಲ್ನೋಟಕ್ಕೆ ನಮ್ಮ ಸ್ವಾತಂತ್ರ್ಯ ಉಳಿದುಕೊಂಡಿದ್ದರೂ ಆರ್ಥಿಕ ದೃಷ್ಟಿಯಿಂದ ದೇಶದ ಮಾರ್ಕೆಟ್ ವಿದೇಶಿ ವಸ್ತುಗಳಿಂದ ತುಂಬಿದೆ. ಚಿಕ್ಕ ಮಕ್ಕಳು ಕೂಡ ವಿದೇಶಿ ಐಸ್‌ಕ್ರೀಮ್ ಮತ್ತು ಆಟದ ವಸ್ತುಗಳಿಗಾಗಿ ಹಠ ಮಾಡುತ್ತಾರೆ, ತಮ್ಮ ಮಕ್ಕಳನ್ನು ತೃಪ್ತಿಪಡಿಸುವುದಕ್ಕಾಗಿ ಅಪ್ಪ–ಅಮ್ಮ ಹೆಚ್ಚು ಬೆಲೆ ತೆತ್ತು ಮಕ್ಕಳಿಗಾಗಿ ಆ ವಸ್ತುಗಳನ್ನು ಕೊಳ್ಳುತ್ತಾರೆ. ದೇಶದ ಸಂಪಾದನೆ ಹೀಗೆ ವಿದೇಶಗಳಿಗೆ ಹರಿದುಹೋಗುತ್ತದೆ ಮತ್ತು ದೇಶವಾಸಿಗಳು ಭಯಂಕರ ತುಟ್ಟಿಯ ನಡುವೆ ತೊಳಲುತ್ತಿದ್ದಾರೆ.

ಅದಲ್ಲದೆ ಈ ದಿನದ ರಾಜಕೀಯ ನೇತಾರ ಸತ್ಯಕ್ಕೆ ಪಟ್ಟು ಹಿಡಿಯುವುದಿಲ್ಲ. ಅಂತಹ ಅಸತ್ಯದ ನಡುವೆ ಸಮಾಜದಲ್ಲಿ ಮತ್ತೊಮ್ಮೆ ಪುಕ್ಕಲುತನ ಮನೆ ಮಾಡಿಕೊಂಡಿದೆ. ಅದರ ಪ್ರಚಂಡ ಸ್ವರೂಪ ದಿನ ದಿನ ಹೆಚ್ಚುತ್ತಿರುವ ಹಿಂಸೆ–ಅರಾಜಕತೆಯಲ್ಲಿ ಕಾಣಿಸುತ್ತಲಿದೆ. ಇದೇ ಏನು ನಮ್ಮ ಸ್ವಾತಂತ್ರ್ಯ? ಇದಕ್ಕಾಗಿಯೇ ಇಷ್ಟು ಜನ ಹುತಾತ್ಮರಾದರೇನು? ಎಂಬ ಪ್ರಶ್ನೆ ಇದರಿಂದಾಗಿ ನಮ್ಮ ಹೃದಯದಲ್ಲಿ ಮೂಡುತ್ತದೆ.

* * * *

# ೯. ಕಾಂಗ್ರೆಸ್

ಮಾರ್ಷಲ್ ಲಾನಲ್ಲಿ ಪಂಜಾಬ್ ಸರಕಾರ ನೂರಾರು ಜನ ನಿರಪರಾಧಿಗಳಾದ ಪಂಜಾಬಿಗಳನ್ನು ಜೈಲಿನಲ್ಲಿ ಬಂಧಿಸಿಟ್ಟಿತ್ತು. ಈ ಕಾರಣವಿಲ್ಲದ ಬರ್ಬರ ಅತ್ಯಾಚಾರಗಳಿಂದಾಗ ದೇಶ ಒದ್ದಾಡಿ ಹೋಯಿತು. ನಾಲ್ಕೂ ಕಡೆಯಿಂದ ಸರಕಾರವನ್ನು ಜನ ತೀವ್ರವಾಗಿ ನಿಂದಿಸುತ್ತಿದ್ದರು. ಈ ಸ್ಥಿತಿಯಲ್ಲಿ ಪಂಜಾಬಿಗಳನ್ನು ಹೆಚ್ಚುದಿನ ಜೈಲಿನಲ್ಲಿಡುವುದು ಸಾಧ್ಯವಿರಲಿಲ್ಲ. ಆದುದರಿಂದ ಸಾಕಷ್ಟು ಜನರನ್ನು ಸರಕಾರ ಬಿಡುಗಡೆ ಮಾಡುತ್ತಿತ್ತು. ಹಿಂದಿನ ತಿಂಗಳುಗಳಲ್ಲಿ ಪಂಜಾಬ್ ಬಹಳ ಕಷ್ಟಗಳನ್ನು ಎದುರಿಸಿತ್ತು. ಡಿಸೆಂಬರ್ ೧೯೧೯ರ ಕಾಂಗ್ರೆಸ್ ಅಧಿವೇಶನವನ್ನು ಅಮೃತಸರದಲ್ಲಿ ನಡೆಸುವುದೆಂದು ನಿರ್ಣಯಿಸಿದರು. ಮಾರ್ಷಲ್ ಲಾ ಆತಂಕ ಇರುವಾಗ ಪಂಡಿತ್ ಮೋತಿಲಾಲ್ ನೆಹರೂ ತನ್ನ ಅತಿ ಹೆಚ್ಚಾಗಿದ್ದ ವಕಾಲತ್ತನ್ನು ಬಿಟ್ಟು ಪಂಜಾಬಲ್ಲೇ ಇರತೊಡಗಿದ್ದರು. ಅದರಿಂದಾಗಿ ಅವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಚುನಾಯಿಸಿದರು. ಸ್ವಾಮಿ ಶ್ರದ್ಧಾನಂದರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಇಲ್ಲಿಯವರೆಗಿನ ಕಾಂಗ್ರೆಸ್ ಅಧಿವೇಶನಕ್ಕೆ ಗಾಂಧೀಜಿ ಪ್ರೇಕ್ಷಕರಾಗಿ ಹೋಗುತ್ತಿದ್ದರು. ಮಾತನಾಡಿದರೂ ಹಿಂದಿಯ ಪರವಾಗಿ ಅಥವಾ ಪ್ರವಾಸಿ ಭಾರತೀಯರ ಸಂಕಷ್ಟಗಳನ್ನು. ಕುರಿತಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ಈ ಸಾರಿ ಪರಿಸ್ಥಿತಿ ಬದಲಾಯಿಸಿತ್ತು.

ಚಂಪಾರಣ್ಯ, ಖೇಡಾ ಸತ್ಯಾಗ್ರಹ, ಸ್ವರಾಜ್ಯ ಸಭೆ, ರೌಲಟ್ ಬಿಲ್ ಮತ್ತು ಜಲಿಯನ್ ವಾಲಾ ಉದ್ಯಾನ ಘಟನೆ –ಇವುಗಳಿಂದ ದೇಶದಲ್ಲಿ ಕೋಲಾಹಲವುಂಟಾಗಿತ್ತು. ಮೊದಲ ವಿಶ್ವಯುದ್ಧ ಕೂಡ ಮುಗಿದಿತ್ತು. ಆಡಳಿತದಲ್ಲಿ ಸ್ವಲ್ಪ ಸುಧಾರಣೆ ತಂದು ಭಾರತೀಯರಿಗೆ ಸ್ವಲ್ಪ ತಿಳಿಸಿ ಪರಿಸ್ಥಿತಿಯನ್ನು ಸರಿಪಡಿಸಬಹುದು ಅಂತ ಸರಕಾರಕ್ಕೆ ಅನ್ನಿಸಿತು. ಈ ಉದ್ದೇಶದಿಂದ ಬ್ರಿಟಿಷ್ ಸರಕಾರ ೧೯೧೯ ರಲ್ಲಿ ಲಾರ್ಡ್ ಮಾಂಟೆಗ್ಯೂ ಮತ್ತು ಲಾರ್ಡ್ ಚೆಮ್ಸ್‌ಫೋರ್ಡ್ ನಿರ್ದೇಶನದಲ್ಲಿ ಒಂದು ಸಮಿತಿಯನ್ನು ರಚಿಸಿದರು. ಅವರು ಹಿಂದೂಸ್ತಾನದ ಆಡಳಿತದಲ್ಲಿ ಕೆಲವು ಸುಧಾರಣೆಗಳನ್ನು ಸೂಚಿಸಿದರು. ಈ ಸುಧಾರಣೆಗಳು ಅಷ್ಟೇನೂ ಪರಿಣಾಮಕಾರಿಯಾಗಿ ಇರಲಿಲ್ಲ. ಅವು ಮನಸ್ಸನ್ನು ಹಗುರಮಾಡುವ ಪ್ರಯತ್ನಗಳಾಗಿದ್ದವು, ಅಷ್ಟೆ. ಕೆಲವು ರಿಯಾಯಿತಿಗಳೂ ಮಂಜೂರಾದವು. ಅದರಿಂದ

ಏನೂ ಪ್ರಯೋಜನವಾಗುವದಿರಲಿಲ್ಲ. ಅಮೃತಸರ ಕಾಂಗ್ರೆಸ್‌ನಲ್ಲಿ ಈ ರಿಯಾಯಿತಿಗಳನ್ನು ಕುರಿತು ಸಾಕಷ್ಟು ಚರ್ಚೆ ನಡೆಯಿತು. ಕಾಂಗ್ರೆಸ್ ಅಧಿವೇಶನದ ದಿನವೇ ಸರಕಾರ ಲಾಲಾ ಲಾಜಪತರಾಯ್ ಹಾಗೂ ಲಾಲಾ ಹರಕಿಶನಲಾಲ ಅವರನ್ನು ಜೈಲಿನಿಂದ ಬಿಡುಗಡೆ ಮಾಡಿತು. ಅವರಿಬ್ಬರೂ ಅಧಿವೇಶನದಲ್ಲಿ ಹಾಜರಾಗಿದ್ದರು. ಅಲಿ ಬಂಧುಗಳು ಜೈಲಿನಿಂದ ಬಿಡುಗಡೆಯಾಗಿ ನೇರವಾಗಿ ಅಮೃತಸರದ ಅಧಿವೇಶನಕ್ಕೆ ಬಂದಿದ್ದರು. ಗಾಂಧೀಜಿಗೆ ಸರಕಾರದ ಈ ಸುಧಾರಣೆಗಳೇನೂ ಇಷ್ಟವಾಗಿರಲಿಲ್ಲವಾದರೂ ಸರಕಾರದ ಈ ಪ್ರಚಾರವನ್ನು ಸದ್‌ಭಾವನೆಯಿಂದ ನೋಡಬೇಕು ಅಂತ ಅವರಿಗೆ ಅನ್ನಿಸಿತು. ಸರಕಾರ ಈ ಬದಲಾವಣೆಗಳನ್ನು ಒಪ್ಪಿಕೊಂಡಿದ್ದೇ ಆದರೆ ಮುಂದಣ ಬೇಡಿಕೆಗಳಿಗೆ ಅನುಕೂಲ ಅನ್ನಿಸಿತು. ಅದಕ್ಕೆ ವಿರುದ್ಧವಾಗಿ ಲೋಕಮಾನ್ಯ ತಿಲಕ್ ಮತ್ತು ದೇಶಬಂಧು ಚಿತ್ತರಂಜನ್ ದಾಸ್ ಅವರಂತಹ ಅನುಭವಿಗಳಾದ ಮಹಾ ನೇತಾರರಿಗೆ ಈ ಬದಲಾವಣೆಗಳು ಒಪ್ಪಿಗೆಯಾಗಿರಲಿಲ್ಲ. ಸರಕಾರಿ ಸೇವಾ ಭಾವನೆ ಕುರಿತು ಅವರಿಗೆ ಸ್ವಲ್ಪವೂ ಗೌರವವಿರಲಿಲ್ಲ. ಹಿರಿಯರಾದ ಮಾಳವೀಯರು ಯಾವ ಪಕ್ಷಕ್ಕೆ ಸೇರಿದವರೂ ಆಗಿರಲಿಲ್ಲ. ಹೀಗಾಗಿ ಮತಭೇದ ಉಂಟಾಗಿ ಕಾಂಗ್ರೆಸ್ ಎರಡು ಬಣಗಳಾಗಿ ಒಡೆಯಿತು. ಇಂತಹ ಗೌರವಯುತ ಮಹಾನುಭಾವರೊಂದಿಗೆ ಅವರ ವೈಚಾರಿಕ ಭೇದ ಉಂಟಾಯಿತೆಂದು ಗಾಂಧೀಜಿಗೆ ದುಃಖವಾಯಿತು. ಅಧಿವೇಶನ ಬಿಟ್ಟು ಅಹಮದಾಬಾದಿಗೆ ಹೊರಟುಹೋದರೆ ಸಮಸ್ಯೆ ಪರಿಹಾರವಾಗುತ್ತದೆಂದು ಅವರಿಗನ್ನಿಸಿತು. ಎಲ್ಲ ನೇತಾರರ ನಡುವಣ ಈ ಭಿನ್ನಾಭಿಪ್ರಾಯಗಳಿಂದ ಅವರು ಕೋಪಗೊಂಡಿದ್ದರು.

ಅಮೃತಸರದಲ್ಲಿ ಹಿರಿಯರಾದ ಮಾಳವೀಯರು ಗಾಂಧೀಜಿಯವರನ್ನು ತಮ್ಮ ಕೊಠಡಿಯಲ್ಲೇ ಉಳಿಸಿಕೊಂಡಿದ್ದರು. ಅದನ್ನು ಕೊಠಡಿ ಅನ್ನುವದೇನು, ಅದೊಂದು ತೆರೆದ ಛತ್ರದ ಹಾಗಿತ್ತು. ಯಾವಾಗಲೂ ಅಲ್ಲಿ ಜನ ಬರುತ್ತ ಹೋಗುತ್ತ ಇರುತ್ತಿದ್ದರು. ಅವರ ಹತ್ತಿರ ಗಂಟೆಗಟ್ಟಲೆ ಕುಳಿತು ಅವರ ಸಮಯ ಹಾಳು ಮಾಡುತ್ತಿದ್ದರು. ಕೊಠಡಿಯಲ್ಲಿ ಕಾಲಿಡುವುದಕ್ಕೂ ಜಾಗ ಇರುತ್ತಿರಲಿಲ್ಲ. ಅದರಲ್ಲೇ ಅವರು ಅತ್ಯಂತ ಸರಳವಾಗಿ, ನಮ್ರತೆಯಿಂದ ಎಲ್ಲರ ಜೊತೆಗೂ ಇರುತ್ತಿದ್ದರು. ಮಧುರ ವ್ಯವಹಾರ ನಡೆಸುತ್ತಿದ್ದರು, ಗಾಂಧೀಜಿಗೂ ಈ ಗುಜು ಗುಂಪಿನ ಒಂದು ಮೂಲೆಯಲ್ಲಿ ಮಂಚ ಸಿಕ್ಕಿತ್ತು. ಅವರ ಜೊತೆ ಇಷ್ಟು ಹತ್ತಿರವಾಗಿ ಇದ್ದುದರಿಂದ ಗಾಂಧೀಜಿಗೆ ದೇಶದ ಎಷ್ಟೋ ಸಮಸ್ಯೆಗಳು ಅರ್ಥವಾದುವು. ಮಾಳವೀಯರು ಕೂಡ ಅಣ್ಣನ ರೀತಿ ಔದಾರ್ಯ ತೋರಿ ಗಾಂಧೀಜಿಗೆ ಎಲ್ಲವನ್ನೂ ಕಲಿಸುತ್ತಿದ್ದರು. ಗಾಂಧೀಜಿ ಈ ವಿವಾದದಿಂದ ದುಃಖಿತರಾಗಿದ್ದಾರೆಂದೂ ಹಾಗೂ ಅವರು ಅಧಿವೇಶನವನ್ನು ತ್ಯಜಿಸಿ ಹೊರಟುಹೋಗಬೇಕೆಂದಿದ್ದಾರೆಂದೂ ತಿಳಿದೊಡನೆಯೇ

ಮಾಳವೀಯ ಅವರಿಗೆ ದುಃಖವಾಯಿತು. ಅಧ್ಯಕ್ಷ ಮೋತಿಲಾಲ ನೆಹರೂ ಮತ್ತು ಮಾಳವೀಯ ಅವರು, ಹೊರಟುಹೋಗಬೇಕೆಂದಿದ್ದ ಗಾಂಧೀಜಿ ಪ್ರಸ್ತಾಪವನ್ನು ಒಪ್ಪಲಿಲ್ಲ. ಪಂಜಾಬಿನ ಜನರಿಗೂ ಬಹಳ ಬೇಸರವಾಯಿತು. ತಮ್ಮ ಅತಿಥಿ ಮಧ್ಯದಲ್ಲೇ ಎದ್ದು ಹೋಗುವುದು ಅವರಿಗೆ ಹಿತವಾಗಲಿಲ್ಲ. ಗಾಂಧೀಜಿ ದೇಶಬಂಧು, ಲೋಕಮಾನ್ಯ ಹಾಗೂ ಶ್ರೀ ಜಿನ್ನಾರೊಂದಿಗೆ ಸಾಕಷ್ಟು ಚರ್ಚೆ ನಡೆಸಿದರು. ಆದರೆ ಎಲ್ಲೂ ಒಮ್ಮತ ಮೂಡಿ ಬರುತ್ತಿರಲಿಲ್ಲ. ಪ್ರತಿನಿಧಿಗಳ ನಡುವಣ ಈ ಮತಭೇದವನ್ನು ಕುರಿತು ಅಗತ್ಯ ಬಿದ್ದಲ್ಲಿ, ಮತದಾನ ಮಾಡಬಹುದೆನಿಸಿದರೂ ಹಾಗೆ ಮತದಾನ ಮಾಡುವ ವ್ಯವಸ್ಥೆ ಕೂಡ ಇರಲಿಲ್ಲ. ಕಾಂಗ್ರೆಸ್ ಅಧಿವೇಶನದಲ್ಲಿ ಒಂದು ಸಮಾವೇಶ ಸೇರುತ್ತದೆ, ಅದರಲ್ಲಿ ಆರಿಸಿದ ಪ್ರತಿನಿಧಿಗಳು ಮತ್ತು ಸಾಮಾನ್ಯ ಜನರು, ಮತ್ತು ಒಬ್ಬ ದರ್ಶಕನ ನಡುವೆ ಯಾವುದೇ ವ್ಯತ್ಯಾಸ ಇರುವುದಿಲ್ಲ. ಆಗ ಲಾಲಾ ಹರಕಿಶನ್ ಲಾಲ್ ಅವರು ಗುಪ್ತವಾಗಿ ಓಟಿಂಗ್ ಮಾಡಿಸುವ ಆಶ್ವಾಸನೆ ನೀಡಿದರು. ಆಗ ಗಾಂಧೀಜಿ ತನ್ನ ಠರಾವನ್ನು ಸಿದ್ಧಪಡಿಸಿದರು. ಮಾಳವೀಯರು ಹಾಗೂ ಜಿನ್ನಾ ಅವರಿಗೆ ಸಮರ್ಥನೆ ನೀಡಬೇಕೆಂದಿದ್ದರು. ಎರಡು ಬಣಗಳ ನಡುವೆ ಯಾವುದೇ ಕಹಿಯಾಗಲೀ, ಉಗ್ರವಾದ ಮಾತುಕತೆ ಇರಲಿಲ್ಲವಾದರೂ ಪ್ರಾಥಮಿಕ ಮೂಲಭೂತವಾದ ಮಾತುಗಳಲ್ಲೇ ಮತಭೇದ ಇತ್ತು. ಆದರೂ ಈ ವಿವಾದದಿಂದ ವಾತಾವರಣ ಗಡುಸಾಗಿತ್ತು. ಬಡಪಾಯಿಗಳಾದ ಸಾಮಾನ್ಯ ಜನರು ಈ ಬಣಗಳ ದೆಸೆಯಿಂದ ಬೇಸರಗೊಂಡಿದ್ದರು. ಜಯರಾಮ, ದೌಲತ್‌ರಾಮ್ ಅವರು ಒಂದು ಬದಲಾವಣೆಯನ್ನು ಸೂಚಿಸಿದಾಗ ಎರಡು ಪಕ್ಷಗಳು ಒಪ್ಪಿಕೊಳ್ಳುತ್ತವೆಂದು ಗಾಂಧೀಜಿಗೆ ಅನ್ನಿಸಿತು. ಮಾಳವೀಯರಿಗೆ ಇದು ತಿಳಿದೊಡನೆಯೇ ಅವರು ಲೋಕಮಾನ್ಯರ ಜೊತೆ ಬದಲಾವಣೆ ಕುರಿತು ಮಾತನಾಡಿದರು. ದೇಶಬಂಧು ಅವರಿಗೆ ಒಪ್ಪಿಗೆಯಾದರೆ ನನಗೇನೂ ಅಡ್ಡಿ ಇಲ್ಲವೆಂದು ಲೋಕಮಾನ್ಯರು ಹೇಳಿದರು. ಆಗ ದೇಶಬಂಧು ಅವರು ಸ್ವಲ್ಪ ಸರಳವಾದರು. ಅವರು ಬಿಪಿನ ಚಂದಪಾಲರ ಒಪ್ಪಿಗೆಗಾಗಿ ಅವರ ಕಡೆಗೆ ನೋಡಿದರು. ಮಾಳವೀಯ ಅವರಿಗೆ ಅಷ್ಟು ಸಾಕಾಗಿತ್ತು. ದೇಶಬಂಧು ಅವರು ಆಗಲಿ ಅಂತ ಹೇಳುವುದಕ್ಕೂ ಮೊದಲೇ ಸುಧಾರಣೆಯ ಆ ಕಟ್ಟನ್ನು ತೆಗೆದುಕೊಂಡು 'ಒಪ್ಪಿಗೆಯಾಗಿದೆ' ಎಂದು ಘೋಷಿಸಿಬಿಟ್ಟರು. ಪಂಡಾಲ್ ಚಪ್ಪಾಳೆಗಳಿಂದ ತುಂಬಿಹೋಯಿತು. ಈ ಒಪ್ಪಂದದಿಂದಾಗಿ ಗಾಂಧೀಜಿಗೆ ಜವಾಬ್ದಾರಿ ಹೆಚ್ಚಾಯಿತು. ಇಲ್ಲಿಯವರೆವಿಗೂ ಗಾಂಧೀಜಿ ಕಾಂಗ್ರೆಸ್ ಕ್ರಮಗಳಿಂದ ಸ್ವಲ್ಪ ಹೊರಗೇ ಉಳಿದಿದ್ದರು. ಈಗ ಕಾಂಗ್ರೆಸ್‌ನಲ್ಲಿ ಸಿಲುಕತೊಡಗಿದರು.

ಲೋಕಮಾನ್ಯ ದೇಶಬಂಧು ಮತ್ತು ಮೋತಿಲಾಲಜಿ ಇವರುಗಳು ಗಾಂಧೀಜಿ ನೀಡಿದ ಪಂಜಾಬ್ ರಿಪೋರ್ಟ್‌ನಿಂದ ಪ್ರಭಾವಿತರಾಗಿದ್ದರು. ಸಮಿತಿಯ ಪ್ರಮುಖ ಠರಾವುಗಳನ್ನು ಮಂಡಿಸಲು ತಯಾರಾಗುತ್ತಿದ್ದ ಪ್ರಾರೂಪಗಳಲ್ಲಿ ಈ ಮೂವರು

ನೇತಾರರು ಅದರ ಜೊತೆ ಸೇರಿಸತೊಡಗಿದರು. ಡ್ರಾಫ್ಟ್ ಪ್ರಾರೂಪವನ್ನು ತಯಾರಿಸುವುದು ಬಹಳ ಸೂಕ್ಷ್ಮವಾದ ಕೆಲಸವಾಗಿರುತ್ತೆ, ಕೆಲವರು ಅಪ್ಪಿ–ತಪ್ಪಿ ಇಂತಹ ವಿಷಯ ಸಮಿತಿಗಳ ಸಭೆಗಳಿಗೆ ಹಾಜರಾಗುವುದೂ ಉಂಟು. ಈಗಲೂ ಹಾಗೇ ಆಗುತ್ತಿದೆ. ಆಗ ಕೂಡ ಹಾಗೇ ಆಗುತ್ತಿತ್ತು.

೧೯೧೯ರ ದೊಡ್ಡ ಸಭೆ– ಅಧಿವೇಶನದ ಸಭೆಯಲ್ಲಿ ಮೂರು ಮಹತ್ವದ ಠರಾವುಗಳು ಅಂಗೀಕೃತವಾದವು :

– ಜಲಿಯನ್‌ವಾಲ ಸ್ಮಾರಕ ನಿಧಿ ಸಂಗ್ರಹಿಸುವುದು

– ಕೈ ನೂಲು ಮತ್ತು ಕೈ ಮಗ್ಗಕ್ಕೆ ಪ್ರಾಮುಖ್ಯ ನೀಡುವುದು

– ಕಾಂಗ್ರೆಸ್ ಸಂವಿಧಾನವನ್ನು ಸಿದ್ಧಪಡಿಸುವುದು

ಈ ಮೂರೂ ಕೆಲಸಗಳನ್ನು ಗಾಂಧೀಜಿಯವರಿಗೇ ಒಪ್ಪಿಸಲಾಯಿತು. ಮಾಳವೀಯ ಅವರು ಚಂದಾ ಸಂಗ್ರಹಿಸುವುದರಲ್ಲಿ ನಿಪುಣರಾಗಿದ್ದರು. ಅವರು ಕೇಳಿದರೆ ರಾಜ–ಮಹಾರಾಜರು ಔದಾರ್ಯದಿಂದ ಹಣ ನೀಡುತ್ತಿದ್ದರು. ಆದರೆ ಜಲಿಯನ್ ವಾಲಾ ಸ್ಮಾರಕದಲ್ಲಿ ರಾಜ–ಮಹಾರಾಜರ ಹಣದಿಂದ ಕಾರ್ಯ ಜರುಗುತ್ತಿರಲಿಲ್ಲ. ಆಫ್ರಿಕಾದಲ್ಲಿದ್ದಾಗಿನಿಂದಲೂ ಗಾಂಧೀಜಿಯ ಚಂದಾ ಸಂಗ್ರಹ ಮಾಡುವ ಶಕ್ತಿ ಹೇಗಿತ್ತೆಂದು ಎಲ್ಲರಿಗೂ ತಿಳಿದಿತ್ತು. ಆದುದರಿಂದ ಈ ದಂಡ ಸಂಗ್ರಹದ ಜವಾಬ್ದಾರಿಯನ್ನು ಗಾಂಧೀಜಿಗೆ ವಹಿಸಿದರು. ಬೊಂಬಾಯಿಯ ಮಿತ್ರರು ಉದಾರವಾಗಿ ಹಣ ನೀಡಿದರು. ೫ ಲಕ್ಷ ರೂ.ಗಳಿಗಿಂತ ಹೆಚ್ಚು ಹಣವನ್ನು ನಿಧಿ ಹೆಸರಿನಲ್ಲಿ ಸಂಗ್ರಹಿಸಿ ಬ್ಯಾಂಕ್‌ನಲ್ಲಿ ಜಮಾ ಮಾಡಲಾಯಿತು. ಈ ಘಟನೆಯಲ್ಲಿ ಹಿಂದೂ, ಮುಸಲ್ಮಾನ, ಸಿಖ್ ಈ ಮೂವರ ರಕ್ತವೂ ಹರಿದಿತ್ತು. ಈ ಮೂರೂ ಪಂಗಡಗಳಿಗೆ ತೃಪ್ತಿ ನೀಡುವಂತಹ ಯಾವ ಸ್ಮಾರಕವನ್ನು ಸಿದ್ಧಪಡಿಸುವುದೆಂಬ ಬಗ್ಗೆ ಸ್ವಾತಂತ್ರ್ಯ ಸಿಗುವವರೆಗೂ ಅಮೃತಸರದ ಜನ ನಿರ್ಣಯಿಸಲಾಗಿರಲಿಲ್ಲ. ಗಾಂಧೀಜಿ ಮೂರು ಬಣಗಳನ್ನು ಒಂದುಗೂಡಿಸಲು ಬಹಳ ಪ್ರಯತ್ನಪಟ್ಟರು, ಆದರೆ ದಿನಗಳೆದಂತೆ ಅವರ ನಡುವೆ ವೈಮನಸ್ಯ, ತಪ್ಪು ತಿಳುವಳಿಕೆ ಮತ್ತು ಕಟು ಭಾವನೆಗಳ ಕೊಚ್ಚೆಯಲ್ಲಿ ಈ ಬಣಗಳು ಮುಳುಗುತ್ತಲೇ ಹೋದವು. ಗಾಂಧೀಜಿ ಚಂದಾ ಅಂತೂ ಸಂಗ್ರಹಿಸಿದರು. ಆದರೆ ಅವರು ಬದುಕಿದ್ದಾಗ ಸ್ಮಾರಕದ ವ್ಯವಸ್ಥೆ ಆಗಲೇ ಇಲ್ಲ. ಇಂದು ಕೂಡ ಒಳ್ಳೆಯ ಸ್ಮಾರಕ ಕಟ್ಟಿದ್ದಾರೆ ಇಲ್ಲವೋ ಗೊತ್ತಿಲ್ಲ. ಈಗಂತೂ ವೈಮನಸ್ಯದ ವಿಷ ತೀವ್ರವಾಗಿ ಹರಡಿದೆ. ಈಗ ನಡೆಯುವ ರಕ್ತಪಾತಗಳನ್ನು ನೋಡಿದರೆ ಜಲಿಯನ್ ವಾಲಾ ಕಾಂಡ ಬರಿಯ ಸುಳ್ಳು ಹೋರಾಟದ ಹಾಗೆ ಕಾಣಿಸುತ್ತದೆ.

ಗಾಂಧೀಜಿ ಬಹಳ ಪರಿಶ್ರಮ ವಹಿಸಿ ಸರಿಯಾದ ಹಾಗೂ ಅತಿ ಕಡಿಮೆ ಶಬ್ದಗಳನ್ನು ಬಳಸಿ ತಮ್ಮ ವಿಚಾರಗಳನ್ನು ಪ್ರಕಟಪಡಿಸುವ ಕಲೆಯನ್ನು ಸಾಧಿಸಿದ್ದರು.

ಆ ನಾಯಕರುಗಳಿಗೆ ಈ ವಿಷಯ ತಿಳಿದಿತ್ತು. ಅವರು ಗಾಂಧೀಜಿಗೆ ಕಾಂಗ್ರೆಸ್ ಸಂವಿಧಾನವನ್ನು ಸಿದ್ಧಪಡಿಸುವ ಜವಾಬ್ದಾರಿ ನೀಡಿದರು. ಇಲ್ಲಿಯವರೆಗೂ ಗೋಖಲೆಯವರು ಮಾಡಿಕೊಟ್ಟಿದ್ದ ಕೆಲವು ನಿಯಮಗಳನ್ನಿಟ್ಟುಕೊಂಡು ಕಾಂಗ್ರೆಸ್‌ನ ಕಾರ್ಯಗಳು ನಡೆಯುತ್ತಿದ್ದವು. ಗೋಖಲೆಯವರೇ ಈ ನಿಯಮಗಳ ಅಡಿಗಲ್ಲು ಸಿದ್ಧಪಡಿಸಿ ಇತಿಹಾಸ ರಚಿಸಿ ತನ್ನ ಮಾನಸಪುತ್ರ ಗಾಂಧಿಗೆ ಅದನ್ನು ತಿಳಿಸಿದ್ದರು. ಆದರೆ ಈಗ ಕಾಂಗ್ರೆಸ್ ಸಂಸ್ಥೆಯ ಕಾರ್ಯಕ್ಷೇತ್ರ ವಿಸ್ತಾರ ಪಡೆದಿತ್ತು. ಆ ಕಾಲದಲ್ಲಿ ಅಧಿವೇಶನ ಮುಗಿದ ನಂತರ ವ್ಯವಸ್ಥಿತವಾಗಿ ಕೆಲಸ ಮಾಡುವ ವ್ಯವಸ್ಥೆಯೇ ಇರಲಿಲ್ಲ. ಅಧಿವೇಶನದಲ್ಲಿ ಠರಾವುಗಳು ಪಾಸಾಗುತ್ತಿದ್ದವು, ಭಾಷಣಗಳಾಗುತ್ತಿದ್ದವು. ಅದರ ಅನುಸರಣೆಯ ವ್ಯವಸ್ಥೆ ಇರಲೇ ಇಲ್ಲ, ಈಗ ಪರಿಸ್ಥಿತಿ ಬದಲಾಗಿತ್ತು. ರೌಲಟ್ ಬಿಲ್, ಅವುಗಳ ದೌರ್ಜನ್ಯ, ಅದಾದ ನಂತರ ಅಂತಹ ಎಷ್ಟೋ ಪರಿಸ್ಥಿತಿಗಳು ಹುಟ್ಟಿಕೊಳ್ಳುತ್ತಿದ್ದವು. ಅವುಗಳಿಗೆಲ್ಲಾ ಕಾಂಗ್ರೆಸ್ ತೀರಾ ಸಿದ್ಧವಾಗಿರಲೇ ಇಲ್ಲ, ಹೀಗಾಗಿ ಕಾಂಗ್ರೆಸ್‌ಗೆ ಹೊಸ ಗಟ್ಟಿ ವಿಧಾನವನ್ನು (ನಿಯಮಾವಳಿ) ಸಿದ್ಧಪಡಿಸುವುದು ಅತಿ ಅವಶ್ಯವಾಗಿತ್ತು.

ಲೋಕಮಾನ್ಯರು ಮತ್ತು ದೇಶಬಂಧು ಅಂತಹವರ ಚಿಂತನೆಗೆ ಜನ ಬೆಲೆ ಕೊಡುತ್ತಾರೆಂಬುದನ್ನು ಗಾಂಧೀಜಿ ಕಂಡುಕೊಂಡಿದ್ದರು. ಆದರೆ ಈ ಇಬ್ಬರು ಮುಖಂಡರಿಗೂ ಕಾರ್ಯದ ಒತ್ತಡ ಹೆಚ್ಚಾಗಿತ್ತು. ದೊಡ್ಡವರು ಅವರು, ಅವರನ್ನು ಈ ಕೆಲಸಕ್ಕೆ ಸೇರಿಕೊಳ್ಳುವುದಕ್ಕೆ ಹೇಳಿದರೆ ಏನೂ ಪ್ರಯೋಜನವಾಗುತ್ತಿರಲಿಲ್ಲ. ಆದುದರಿಂದ ಗಾಂಧೀಜಿ ಜವಾಬ್ದಾರಿಯನ್ನು ಒಪ್ಪಿಕೊಳ್ಳುವುದಕ್ಕೆ ಮುಂಚೆ ಈ ಇಬ್ಬರು ಮುಖಂಡರನ್ನೂ ಸಂವಿಧಾನ ಸಮಿತಿಗೆ ಸೇರಿಸುವಂತೆ ಒತ್ತಾಯ ಪಡಿಸಿದರು. ಇದರ ಒಳ್ಳೆಯ ಪರಿಣಾಮ ಮೂಡಿ ಬಂತು. ಲೋಕಮಾನ್ಯರು ಕೇಳ್ಕರ್ ಮತ್ತು ದೇಶಬಂಧು ಐ.ಬಿ ಸೇನ್ ಅವರನ್ನು ನಾಮಾಂಕನ ಮಾಡಿದರು. ವಿಚಿತ್ರ ಸಂಗತಿ ಎಂದರೆ ಈ ಸಂವಿಧಾನ ಸಮಿತಿ ಎಂದೂ ಎಲ್ಲೂ ಕೂರಲೇ ಇಲ್ಲ. ಕೆಲಸಗಳೆಲ್ಲವೂ ಪತ್ರ ಮುಖೇನ ನಡೆದವು ಮತ್ತು ಗಾಂಧೀಜಿ ಅವರು ರಚಿಸಿದ್ದ ಸಂವಿಧಾನವನ್ನು ೧೯೨೦ರಲ್ಲಿ ಒಮ್ಮತದಿಂದ ಕಾಂಗ್ರೆಸ್ ಸ್ವೀಕರಿಸಿತು. ಈ ಜವಾಬ್ದಾರಿಯ ಜೊತೆ ನಿಜವಾದ ಅರ್ಥದಲ್ಲಿ ಗಾಂಧೀಜಿ ಕಾಂಗ್ರೆಸ್‌ಮಯವಾದರು.

ಕಾನೂನಿನ ತಿಳಿವು, ಭಾಷೆಯ ಸಾರ್ಥಕ ಪ್ರಯೋಗ, ಕಡಿಮೆ ಶಬ್ದ ಪ್ರಯೋಗ ಮತ್ತು ಪ್ರಾರೂಪ ತಯಾರಿಸುವ ಅಪೂರ್ವ ಕುಶಲತೆ ಇವುಗಳಿಂದಾಗಿ ಗಾಂಧೀಜಿಗೆ ರಿಪೋರ್ಟ್ ಮಾಡುವ ಹಾಗು ಬರೆಯುವ ಕೆಲಸ ಕೊಡುತ್ತಿದ್ದರು. ಅವರು ಸಿದ್ಧಪಡಿಸಿದ ಸಂವಿಧಾನ ಇವತ್ತಿನ ಎಲ್ಲ ಬಣಗಳ ಕಾಂಗ್ರೆಸ್‌ಗೂ ಸಂವಿಧಾನವಾಗಿದೆ. ಅವರು ಬರೆದ ಸಂವಿಧಾನದ ಒಂದು ಶಬ್ದವನ್ನೂ ಇವತ್ತಿನವರೆಗೂ ಬದಲಾಯಿಸಿಲ್ಲ. ಅಷ್ಟೇ ಅಲ್ಲ, ಆ ಸಂವಿಧಾನದ ಒಂದು ಅರ್ಧವಿರಾಮ ಪೂರ್ಣವಿರಾಮವನ್ನು

ಕೂಡ ಬದಲಾಯಿಸುವ ಧೈರ್ಯ ಯಾರಿಗೂ ಇಲ್ಲ. ಜನತಾ ಪಾರ್ಟಿ ಮತ್ತು ಸೋಷಿಯಲಿಸ್ಟ್ ಪಾರ್ಟಿಯ ಸಂವಿಧಾನ ಕೂಡ ಗಾಂಧೀಜಿಯವರು ಬರೆದ ಸಂವಿಧಾನದ ಮೂಲದ ಮೇಲೆ ರಚಿತವಾಗಿರಬೇಕೆಂದು ನಾನು ಭಾವಿಸುತ್ತೇನೆ. ಗಾಂಧೀಜಿ ಆ ಸಂವಿಧಾನದ ಬಗೆಗಿನ ಚರ್ಚೆಯಲ್ಲಿ ೧೫೦೦ ಪ್ರತಿನಿಧಿಗಳು ಭಾಗವಹಿಸಬೇಕೆಂದು ಸಂಖ್ಯೆಯ ಸಲಹೆ ನೀಡಿದ್ದರು, ಆದರೆ ದೇಶಬಂಧು ಅವರ ಸಲಹೆಯ ಮೇರೆಗೆ ಅದನ್ನು ೬೦೦೦ಕ್ಕೆ ಏರಿಸಲಾಯಿತು. ಹೆಚ್ಚು ಜನ ಪ್ರತಿನಿಧಿಗಳಿದ್ದರೆ ಹೆಚ್ಚು ಒಳ್ಳೆಯ ಕೆಲಸವಾಗುತ್ತದೆಂದು ಜನರಿಗೆ ಅನಿಸುತ್ತದೆ. ಸಂಖ್ಯೆ ಹೆಚ್ಚಿದರೆ ಒಳ್ಳೆಯ ಕೆಲಸ ಆಗುತ್ತದೆಂಬುದೇನೂ ಇಲ್ಲ. ಸಂಖ್ಯೆ ಕಡಿಮೆ ಇದ್ದರೂ ನಿಷ್ಠೆಯಿಂದ ಕೂಡಿ, ತಮ್ಮ ಮೇಲೆಯೇ ನಿರ್ಭರರಾಗಿರುವ ಪ್ರತಿನಿಧಿಗಳು ಪ್ರಜಾತಂತ್ರವನ್ನು ಇನ್ನೂ ಹೆಚ್ಚು ಚೆನ್ನಾಗಿ ರಕ್ಷಿಸಬಲ್ಲರು ಎಂದು ಗಾಂಧೀಜಿ ಹೇಳುತ್ತಿದ್ದರು. ಹಾಗೆ ಹೇಳಬೇಕೆಂದರೆ ೧೦೦೦೦ ಪ್ರತಿನಿಧಿಗಳಿರಬೇಕೆಂದು ಜನತೆ ಹಠ ಮಾಡುತ್ತಿತ್ತು. ತೀವ್ರ ಚರ್ಚೆಯ ನಂತರ ಕೊನೆಯಲ್ಲಿ ೬೦೦೦ ಮಂದಿ ಪ್ರತಿನಿಧಿಗಳಿರಬೇಕೆಂಬ ಸೂಚನೆಗೆ ಒಪ್ಪಿಗೆ ಸಿಕ್ಕಿತು.

ಈ ಸಂವಿಧಾನ ಗಾಂಧೀಜಿಯವರ ದಕ್ಷತೆಯ ಶ್ರೇಷ್ಠ ಉದಾಹರಣೆಯಾಗಿತ್ತು. ಆಗ ಗಾಂಧೀಜಿಯರವರಿಗೆ ೫೦ ವರ್ಷ ವಯಸ್ಸು. ಈ ಸಂವಿಧಾನಕ್ಕೆ ನಾಗಪುರ ಕಾಂಗ್ರೆಸ್‌ನಲ್ಲಿ ಒಮ್ಮತದ ಒಪ್ಪಿಗೆ ಸಿಕ್ಕಿತು. ಈ ನಾಗಪುರದ ಕಾಂಗ್ರೆಸ್‌ನಲ್ಲೇ ಅಂತ್ಯಜರನ್ನು ಕುರಿತ ಠರಾವು ಅಂಗೀಕೃತವಾಯಿತು. ಅಸ್ಪೃಶ್ಯತೆಯನ್ನು ಕೊನೆಗೊಳಿಸುವ ಜವಾಬ್ದಾರಿ ಕಾಂಗ್ರೆಸ್‌ನ ಹಿಂದೂಗಳು ತೆಗೆದುಕೊಂಡರು. ಖಾದಿಯ ಪ್ರಸ್ತಾವವನ್ನು ಅಂಗೀಕರಿಸಿ ಕಾಂಗ್ರೆಸ್ ದೇಶದ ೩೦ ಕೋಟಿ ಬಡವರ ಜೊತೆ ತನ್ನನ್ನು ಒಂದಾಗಿಸಿತು. ಈಗ ಕಾಂಗ್ರೆಸ್ ಬಡವರಿಗಾಗಿ ಪೂರ್ತಿ ಸಮರ್ಪಿತವಾಗಿತ್ತು. ಹಿಂದೂ ಮುಸಲ್ಮಾನರ ಏಕತೆ ಕೂಡ ಕಾಂಗ್ರೆಸ್‌ನ ಮೂಲಮಂತ್ರವಾಯಿತು. ಖಿಲಾಫತ್ ಕುರಿತು ದೆಹಲಿಯಲ್ಲಿ ಒಂದು ಸಭೆ ಜರುಗಿತ್ತು. ಹಕೀಮ್ ಅಜಮಲ್ ಖಾನ್ ಮತ್ತು ಶ್ರೀ ಆಸಫ್ ಆಲೀ ಅವರು ಗಾಂಧೀಜಿಯವರನ್ನು ವಿಶೇಷವಾಗಿ ಒತ್ತಾಯಪೂರ್ವಕ ಈ ಸಭೆಗೆ ಬರುವಂತೆ ಆಮಂತ್ರಿಸಿದರು. ಪಂಜಾಬ್ ಪರೀಕ್ಷಣಾಕಾರ್ಯದ ನಡುವೆ ಸ್ವಲ್ಪ ಬಿಡುವುಮಾಡಿಕೊಂಡು ಗಾಂಧೀಜಿ ದೆಹಲಿಗೆ ಹೋಗಿದ್ದರು. ಆಗ ಖಿಲಾಫತ್‌ಗೆ ನೆರವು ನೀಡಿದ್ದರಿಂದ ಗೋಹತ್ಯಾ ನಿಷೇಧದ ಕಾನೂನನ್ನು ಅಂಗೀಕರಿಸಿ ಹಿಂದೂಗಳನ್ನು ಸಂತುಷ್ಟಗೊಳಿಸಬೇಕೆಂದು ಕೆಲವು ಮುಸ್ಲಿಂ ಬಂಧುಗಳು ಇಷ್ಟಪಟ್ಟರು. ಆದರೆ ಗಾಂಧೀಜಿ ಮೌಲಾನಾ ಅಬ್ದುಲ್ ಬಾರಿಗೆ ಹಿಂದೂ ಮುಸ್ಲಿಮರು ಸೋದರರು, ಆದುದರಿಂದ ಅವರಲ್ಲಿ ಈ ತೆರನಾದ ವ್ಯಾಪಾರ ಸರಿಯಾದುದಲ್ಲ ಎಂದು ತಿಳಿಸಿದರು. ಖಿಲಾಫತ್‌ನ ಸಮಸ್ಯೆ ನಿಜವಾಗಿದ್ದೇ ಆದರೆ ಪ್ರತಿಯೊಬ್ಬ ಹಿಂದೂ ಬೆಂಬಲ ನೀಡಬೇಕು ನಂತರ ಖಿಲಾಫತ್‌ನಲ್ಲಿ ಜೊತೆ ಕೂಡದಿದ್ದರೆ ಬೇಡ, ಈ ರೀತಿ ಈ

ವಿಷಯವನ್ನು ಕುರಿತು ತೀವ್ರ ಚರ್ಚೆ ನಡೆಯಿತು. ಗಾಂಧೀಜಿಗೆ ಹಿಂದಿ ಸರಿಯಾಗಿ ಬರುತ್ತಿರಲಿಲ್ಲ. ಆದರೆ ತನ್ನ ಅರೆ–ಬರೆ ಉರ್ದುವಿನಲ್ಲೇ ಅವರು ತನ್ನ ಮಾತನ್ನು ಎಲ್ಲರಿಗೂ ತಿಳಿಸಿದರು. ಅದನ್ನು ಅವರುಗಳು ಒಪ್ಪಿಕೊಂಡರು. ಈ ಸಭೆಯಲ್ಲೇ ಗಾಂಧೀಜಿ ಎಲ್ಲರಿಗಿಂತ ಮೊದಲು 'ನಾನ್ ಕೋ ಆಪರೇಷನ್', 'ಅಸಹಕಾರ' ಎಂಬ ಪದವನ್ನು ಬಳಸಿದರು. ಅನ್ಯಾಯಪೂರ್ಣ ಸರಕಾರಕ್ಕೆ ಎದುರಾಗಿ ಸತ್ಯಾಗ್ರಹ ಮಾಡುವುದು ಒಂದಾದರೆ, ಆ ಸರಕಾರದ ಯಾವೊಂದು ಕೆಲಸದಲ್ಲೂ ಸಹಕಾರ ಕೊಡದೆ, ಅಸಹಯೋಗ ಮಾಡುವುದು ಒಂದು ಬೇರೆ ತೆರನಾದ ಅಹಿಂಸಾತ್ಮಕ ಶಸ್ತ್ರವಾಗಿತ್ತು. ಪ್ರಪಂಚದ ಯಾವುದೇ ಸರಕಾರ ಎಂತಹ ಕಾನೂನು ಮಾಡಿದರೂ, ಜನ ಅದನ್ನು ಒಪ್ಪಿಕೊಂಡು ಅನುಸರಿಸುವವರೆವಿಗೂ ಆ ಕಾನೂನು ಪುಸ್ತಕಗಳಲ್ಲಿ ಮಾತ್ರವೇ ಉಳಿಯುತ್ತದೆ, ಜನತಾ ಜನಾರ್ದನ ಒಪ್ಪಿಕೊಂಡ ಮೇಲೆ ಮಾತ್ರ ಆ ಕಾನೂನಿಗೆ ಬೆಲೆ ಬರುತ್ತದೆ; ಹಾಗೆ ಒಪ್ಪಿಕೊಂಡ ಮೇಲೆ ಆ ಕಾನೂನನ್ನು ಗೌರವ ಮರ್ಯಾದೆಯಿಂದ ಅನುಸರಿಸುವುದು ಆ ಜನರ ಕರ್ತವ್ಯವಾಗುತ್ತದೆ. ಯಾವುದೇ ಕಾನೂನನ್ನು ಸಮಾಜ ತಿರಸ್ಕರಿಸಿ ಸ್ವೇಚ್ಛೆಯಿಂದ ಅದನ್ನು ಉಲ್ಲಂಘಿಸಿದಾಗ ಆ ಕ್ಷಣ ಕಾನೂನು ಅರ್ಥಹೀನವಾಗುತ್ತದೆ, ಸರಕಾರಿ ಸತ್ವ ಮುಗಿದುಹೋಗುತ್ತದೆ. ಎಂತಹ ರಾಜ್ಯವಾಗಿದ್ದರೂ ಅದರ ಗೌರವ ಮರ್ಯಾದೆ ಇವುಗಳು ಪ್ರಜೆಯ ಒಪ್ಪಿಗೆಯ ಮೇಲೆ ಆಶ್ರಿತವಾಗಿರುತ್ತವೆ. ಹಿಂದೂ ಮುಸ್ಲಿಂ ಏಕತಾ ಸಭೆಯಲ್ಲಿ ಜನರಿಗೆ ಸ್ಪಷ್ಟವಾದ ಮಾತುಗಳಲ್ಲಿ ತನ್ನ ಜನರಿಗೆ ಈ ವಿಷಯ ತಿಳಿಯ ಹೇಳಿದರು. ಆ ಸಂದರ್ಭದಲ್ಲಿ 'ಅಸಹಯೋಗ' ಎಂಬ ಪದವನ್ನು ಮೊದಲ ಬಾರಿ ಬಳಸಿದರು. ಅದಾದ ನಂತರ ಆ ಪದ ಸಾಮಾನ್ಯ ಸಾಧಾರಣ ಬಳಕೆಯ ಪದವಾಯಿತು. ಸಮಾಜ ಅದನ್ನು ತನ್ನ ಭಾಷೆಯಲ್ಲಿ ಒಂದಾಗಿಸಿತು. ನಾಗಪುರ ಕಾಂಗ್ರೆಸ್ ಈ ಅಸಹಯೋಗವನ್ನು ತನ್ನ ಪ್ರಸ್ತಾವದ ಮೂಲ ಶಬ್ದವಾಗಿಸಿಕೊಂಡಿತು.

ಇದೇ ನಾಗಪುರ ಕಾಂಗ್ರೆಸ್‌ನಲ್ಲಿ ಗಾಂಧೀಜಿಯವರ ಒತ್ತಾಯದ ಮೇರೆಗೆ ತಿರಂಗಾ (ಮೂರು ಬಣ್ಣದ) ಬಾವುಟಕ್ಕೆ ಒಪ್ಪಿಗೆ ನೀಡಿದರು. ಅಲ್ಲಿಯವರೆವಿಗೂ ಕಾಂಗ್ರೆಸ್‌ಗೆ ತನ್ನದೇ ಆದ ಚಿಹ್ನೆಯಾಗಲಿ, ಬಾವುಟವಾಗಲೀ ಇರಲಿಲ್ಲ. ಈಗ ಚಿಂತನೆಯಿಂದ ಮೂಡಿದ ಮೂರು ಬಣ್ಣಗಳ ಬಾವುಟ ಸ್ವಾತಂತ್ರ್ಯ ಹೋರಾಟದ ಗೌರವದಿಂದ ಕೂಡಿದ ಪ್ರತೀಕವಾಯಿತು. ಅದರ ಕೇಸರಿ ಬಣ್ಣ ಹಿಂದೂಗಳ ಪ್ರತೀಕವಾಗಿ, ಹಸುರು ಮುಸಲ್ಮಾನರ, ಮತ್ತು ಬಿಳಿ ಇತರ ಚಿಕ್ಕ ಮತಗಳ ಜನರಿಗಾಗಿ ಇಡಲಾಗಿತ್ತು. ಬಿಳಿಯ ನಡುವೆ ನೀಲಿ ಬಣ್ಣದ ಚರಖಾ ಇಟ್ಟಿದ್ದರು. ನೀಲಿ ಸಿಖ್‌ರ ಬಣ್ಣವಾಗಿತ್ತು. ಚರಖಾ ದೇಶದ ಆರ್ಥಿಕ ವ್ಯವಸ್ಥೆಯ ಪ್ರತೀಕವಾಗಿತ್ತು.

ಈ ಬಾವುಟದ ಮತ್ತೊಂದು ಅರ್ಥವನ್ನು ಡಾ॥ ರಾಧಾಕೃಷ್ಣನ್ ನನಗೆ ತಿಳಿಸಿದ್ದರು. ಅದರಂತೆ ಬಾವುಟದ ಕೇಸರಿ ಬಣ್ಣ ತ್ಯಾಗ ಬಲಿದಾನದ ಸಂಕೇತವಾಗಿದ್ದು

ಬಿಳಿ ಸರಳತೆ ಮತ್ತು ಶಾಂತಿಯ ಸಂಕೇತ, ಹಸಿರು ಕೃಷಿ ಉತ್ಪನ್ನಗಳ ಮತ್ತು ಭಾರತದ ಫಲವತ್ತಾದ ಸಸ್ಯ ಶ್ಯಾಮಲಾ ಭೂಮಿಯ ಪ್ರತೀಕ. ನೀಲಿ ವಿಷ್ಣುವಿನ ಬಣ್ಣವೆಂದು ಭಾವಿಸಲಾಗಿದೆ. ಚರಖಾ ನಮ್ಮ ಆರ್ಥಿಕ ವ್ಯವಸ್ಥೆ ಮತ್ತು ಸ್ವಾವಲಂಬನೆಯ ಜನಾರ್ದನ, ಹೀಗೆ ಜನತಾ ಜನಾರ್ದನ ಮಹಾವಿಷ್ಣುವಿಗೆ ಕಾಂಗ್ರೆಸ್ ಬಾವುಟದಲ್ಲಿ ಮಧ್ಯದ ಸ್ಥಾನ ನೀಡಲಾಗಿದೆ.

ಆರಂಭ ಕಾಲದಲ್ಲಿ ಕಾಂಗ್ರೆಸ್ ಅಧಿವೇಶನದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ರಾಷ್ಟ್ರಗೀತೆ 'ಗಾಡ್ ಸೇವ್ ದ ಕಿಂಗ್' (ಸಮ್ರಾಟ ಚಿರಾಯುವಾಗಲಿ) ಎಂದು ಹಾಡುತ್ತಿದ್ದರು, ಆದರೆ ೧೯೨೦ ರಲ್ಲಿ ಅದರ ಔಚಿತ್ಯ ಕಳೆದುಹೋಯಿತು. ಸಾಮ್ರಾಜ್ಯವೇ ಬೇಡವಾದ ಮೇಲೆ, ಈ ಸತ್ಯಾಗ್ರಹಿಗಳಿಗೆ ಆ ರಾಷ್ಟ್ರಗೀತೆಯಿಂದ ಆಗಬೇಕಾದುದೇನೂ ಇರಲಿಲ್ಲ. ಆಗ ಬಂಕಿಮಚಂದ್ರ ಚಟರ್ಜಿ ಅವರು ರಚಿಸಿದ್ದ 'ವಂದೇ ಮಾತರಮ್' ಗೀತೆ ಪ್ರತಿಯೊಂದು ಅಧಿವೇಶನದಲ್ಲೂ ಹಾಡತೊಡಗಿದರು. 'ಆನಂದ ಮಠ' ನಾಟಕಕ್ಕಾಗಿ ಬಂಕಿಮ್ ಬಾಬು ಈ ಗೀತೆಯನ್ನು ನಾಲ್ಕು ಚರಣಗಳಲ್ಲಿ ರಚಿಸಿದ್ದರು. ಆದರೆ ಅದರ ಮೊದಲ ಚರಣವನ್ನು ಮಾತ್ರ ಸಾಮಾನ್ಯವಾಗಿ ಹಾಡುತ್ತಾರೆ.

ವಂದೇ ಮಾತರಮ್ ।
ಸುಜಲಾಂ ಸುಫಲಾಂ
ಮಲಯಜ ಶೀತಲಾಂ
ಸಸ್ಯಶ್ಯಾಮಲಾಂ
ಮಾತರಮ್.
ಶುಭ್ರ ಜ್ಯೋತ್ಸ್ನಾ ಪುಲಕಿತ ಯಾಮಿನೀಮ್
ಫುಲ್ಲ ಕುಸುಮಿತ ದ್ರುಮದಲ ಶೋಭಿನೀಮ್
ಸುಹಾಸಿನೀಂ ಸುಮಧುರ ಭಾಷಿಣೀಮ್
ಸುಖದಾಂ ವರದಾಂ ಮಾತರಮ್
ಸಪ್ತಕೋಟಿಕಂಠ ಕಲಕಲ ನಿನಾದ ಕರಾಲೇ
ದ್ವಿಸಪ್ತಕೋಟಿ ಭುಜೈರ್ಧೃತಖರ ಕರವಾಲೇ
ಅಬಲಾ ಕೇನೋ ಮಾಂ ಏತೋ ಬಲೇ
ಬಹುಬಲ ಧಾರಿಣೀಂ
ನಮಾಮಿ ತಾರಿಣೀಂ
ರಿಪುದಲವಾರಿಣೀಂ
ಮಾತರಮ್.
ತುಮಿ ವಿದ್ಯಾ ತುಮಿ ಧರ್ಮ

ತುಮಿ ಹೃದಿ ತುಮಿ ಮರ್ಮ
ತ್ವಂ ಹಿ ಪ್ರಾಣಾಃ ಶರೀರೇ
ವಾಹುತೇ ತುಮಿ ಮಾ ಶಕ್ತಿ
ಹೃದಯೇ ತುಮಿ ಮಾ ಭಕ್ತಿ
ತೊಮಾರಹ ಪ್ರತಿಮಾ ಗಡಿ
ಮಂದಿರೇ ಮಂದಿರೇ ಮಾತರಂ
ತ್ವಂ ಹಿ ದುರ್ಗಾ ದಶಪ್ರಹರಣಧಾರಿಣೀ
ಕಮಲಾ ಕಮಲದಲವಿಹಾರಿಣೀ
ವಾಣೀ ವಿದ್ಯಾದಾಯಿನೀ
ನಮಾಮಿ ತ್ವಾಂ
ನಮಾಮಿ ಕಮಲಾಂ
ಅಮಲಾಂ ಅತುಲಾಂ
ಸುಜಲಾಂ ಸುಫಲಾಂ
ಮಾತರಮ್.
ವಂದೇ ಮಾತರಮ್.

ಈ ಸುಂದರ ದೇಶದ ಸ್ತುತಿ ಮಾಡುತ್ತಾ ಈ ಗೀತೆಯ ಒಂದೊಂದು ಶಬ್ದವನ್ನೂ ಬರೆದಿದ್ದಾರೆ. ೧೯೪೭ರಲ್ಲಿ ನಾವೆಲ್ಲ ಮಕ್ಕಳು, ಸಂದಿಗೊಂದಿಗಳಲ್ಲಿ ಈ ಗೀತೆಯನ್ನೇ ಹಾಡುತ್ತಿರುತ್ತಿದ್ದೆವೆಂದು ನನಗಿನ್ನೂ ನೆನಪಿದೆ. ನಾನು ಆಗ ಸುಮಾರು ೭–೮ ವರ್ಷದವಳಾಗಿರಬಹುದು. ನಮ್ಮಜ್ಜಿ ಕಸ್ತೂರಬಾ ಜೊತೆ ಸೂರತ್ ಜಿಲ್ಲೆಯಲ್ಲಿ ಯಾತ್ರೆಗೆ ಹೋಗಿದ್ದೆ. ಒಂದು ಸಣ್ಣ ಹಳ್ಳಿಯಲ್ಲಿ ನಮ್ಮಜ್ಜಿ ಆದಿವಾಸಿಗಳಿಗೆ ಭಾಷಣ ಮಾಡಿದ್ದರು. ಅಲ್ಲಿಗೆ ಇನ್ನೂ ಯಾರೂ ಹಾಡುವವರಿರಲಿಲ್ಲ. ಕುರುಬರೂರಲ್ಲಿ ಗಾಜೇಂ ಮಾಣಿಕ್ಯ (ಅಂಧೋಂ ಮೇಂ ಕಾನಾ ರಾಜಾ) ಎಂಬಂತೆ 'ವಂದೇ ಮಾತರಮ್' ನನಗೆ ಹಾಡಲು ಹೇಳಿದರು. ಆ ಕಾಲದಲ್ಲಿ ರಾಷ್ಟ್ರಗೀತೆಯನ್ನು ಹೇಳದೆ ಯಾವೊಂದು ಶುಭಕಾರ್ಯ, ಸಾರ್ವಜನಿಕ ಕಾರ್ಯ ಆರಂಭ ಮಾಡುವುದರ ಕಲ್ಪನೆ ಕೂಡ ನಾವು ಮಾಡುತ್ತಿರಲಿಲ್ಲ. ೧೯೪೭ರ ವರೆಗೂ ಈ ಗೀತೆಯ ವರ್ಚಸ್ಸಿತ್ತು. ಈ ರೀತಿ ನಾಗಪುರ ಅಧಿವೇಶನ ಕಾಂಗ್ರೆಸ್‌ಗೆ ಅದರ ಸಂವಿಧಾನ, ಬಾವುಟ, ರಾಷ್ಟ್ರಗೀತೆಯನ್ನು ನೀಡಿತು. ಇವತ್ತೂ ಕಾಂಗ್ರೆಸ್ ಅಧಿವೇಶನ ಧ್ವಜ ವಂದನೆ, 'ವಂದೇ ಮಾತರಮ್' ಹೇಳಿ ಆರಂಭವಾಗುತ್ತೆ.

ಇಂದು ಜನ ಗಣ ಮನ ನಮ್ಮ ರಾಷ್ಟ್ರಗೀತೆ. ಕಿಂಗ್ ಜಾರ್ಜ್‌ನ ರಾಜ್ಯಾಭಿಷೇಕ ನಡೆದಾಗ ಕವಿಶ್ರೇಷ್ಠ ರವೀಂದ್ರನಾಥ ಠಾಕೂರರು ಬರೆದಿದ್ದ ಗೀತೆ ಇದು. ಗಮನಿಸಿ

ನೋಡಿದರೆ ಈ ಗೀತೆ ಒಬ್ಬ ವ್ಯಕ್ತಿಯ ಸ್ತುತಿಗೇ ವಿಸ್ತರಿಸಿದೆ, ಸ್ವಾತಂತ್ರ್ಯ ಬಂದ ನಂತರ ಆ ವ್ಯಕ್ತಿಯ ಮಹತ್ತನ್ನು ಭಾರತ ದೇಶಕ್ಕೆ ಆರೋಪಿಸಿ ಅದಕ್ಕೆ ರಾಷ್ಟ್ರಗೀತೆಯ ಸಮ್ಮಾನ ನೀಡಲಾಯಿತು. ನಾವು ದೇಶವಾಸಿಗಳು ಇದು ನಮ್ಮ ದೇಶದ ಆರಾಧನೆ ಎಂದು ಆನಂದಿಸಿದೆವು. 'ವಂದೇ ಮಾತರಮ್' ಮತ್ತು ಅದರ ಕರ್ಮಠವಾದ ಸಮರ್ಪಣೆ ಬಿಟ್ಟು ಹೋಗಿ ಸ್ವಾತಂತ್ರ್ಯ ಬಂದ ನಂತರ ನಾವು ಬಾವುಟದ ಮಧ್ಯ ಇದ್ದ ಚರಖಾವನ್ನು ತೆಗೆದು ಪಂಡಿತ್ ಜವಾಹರಲಾಲ ನೆಹರೂ ಅವರ ಒತ್ತಾಯದ ಮೇರೆಗೆ ಅಶೋಕನ ಧರ್ಮಚಕ್ರವನ್ನು ಸ್ಥಾಪಿಸಿದೆವು. ಇದು ಧರ್ಮ ಸಮಭಾವ ಮತ್ತು ಏಕಚಕ್ರ ನ್ಯಾಯದ ಪ್ರತೀಕವಾಗಿ ಸರಿಯಾಗಿತ್ತು. ಮಿಕ್ಕ ಸರ್ವಧರ್ಮ ಸಮಭಾವ ಶಬ್ದವನ್ನು ಸಂವಿಧಾನದಲ್ಲಿ ಇಡದೆ ಧರ್ಮನಿರಪೇಕ್ಷ ಎಂಬುದನ್ನು ಇಟ್ಟಿದ್ದಾರೆ. ಅದಕ್ಕೆ ಯಾವ ಅರ್ಥವೂ ಇಲ್ಲ, ಸಮಭಾವವನ್ನು ಅರ್ಥಮಾಡಿಕೊಳ್ಳಬಹುದಾದರೂ, ಧರ್ಮದ ಮೇಲೆ ಪ್ರತಿ ಔದಾಸೀನ್ಯ ಭಾವ ಅಥವಾ ಅದನ್ನು ಪರಿಗಣಿಸದಿರುವುದು ಯಾವ ಸಮಾಜಕ್ಕೂ ಸರಿಯಲ್ಲ. ಅದಲ್ಲದೆ ಇದರ ಮತ್ತೊಂದು ಮುಖವೂ ಇದೆ. ಕರ್ತವ್ಯನಿರತನಾಗಿರುವುದು ಧರ್ಮಪಾಲನೆಯೇ. ಚರಕ ಈ ಕರ್ಮವನ್ನು ಬಿಂಬಿಸುತ್ತದೆ. ನಮ್ಮ ದೇಶದಲ್ಲಿ ಕೋಟ್ಯಂತರ ಜನ ಬಡವರಿರುವಾಗ ಆರ್ಥಿಕ ಸ್ವಾವಲಂಬನೆಯ ಪ್ರತೀಕವಾಗಿ ಚರಖಾ ಹೆಚ್ಚು ಉಪಯುಕ್ತವಾಗಿರುತ್ತಿತ್ತು ಮತ್ತು ನಿರಂತರವಾಗಿ ನಮ್ಮ ಗಮನ ಬಡವರ ಸಮಸ್ಯೆಗಳ ಕಡೆಗೇ ಕೇಂದ್ರಿತವಾಗಿರುತ್ತಿತ್ತು. ಸ್ವಾತಂತ್ರ್ಯ ಸಿಕ್ಕ ಅನಂತರ ಗಂಭೀರವಾದ ವಿಷಯಗಳನ್ನು ಕಡೆಗಣಿಸಿ, ಕನಸು ಕಾಣುವ ಪ್ರಪಂಚದ ಆಕರ್ಷಕ ಮೃಗಮರೀಚಿಕೆಯ ಹಿಡಿತದಲ್ಲಿ ನಾವು ಸಿಲುಕಿಕೊಂಡಿದ್ದೇವೆ ಮತ್ತು ಕಠೋರ ವಾಸ್ತವದಿಂದ ದೂರವಾಗಿ ಶಬ್ದಗಳ ಮಾಯಾಜಾಲದಲ್ಲಿ ಮುಳುಗುತ್ತಿದ್ದೇವೆ. ಗಾಂಧೀ ಯುಗದಲ್ಲಿ ಕಾಂಗ್ರೆಸ್ ಇಂತಹ ಶಬ್ದಜಾಲದಿಂದ ದೂರ ಇರುತ್ತಿತ್ತು. ಅದೇ ಅದರ ಲೋಕಪ್ರಿಯತೆ ಮತ್ತು ಸಾಮರ್ಥ್ಯದ ರಹಸ್ಯವಾಗಿತ್ತು.

* * * *

# ೧೦. ಖಾದಿ

೧೯೦೮ರ ವರೆಗೂ ಗಾಂಧೀಜಿಗೆ ಚರಖಾ ಅಥವಾ ಮಗ್ಗ ಅಂದರೆ ಏನೂ ಅಂತ ಗೊತ್ತಿರಲಿಲ್ಲ. ೧೯೦೮ರಲ್ಲಿ ದಕ್ಷಿಣ ಆಫ್ರಿಕಾದ ಸಮಸ್ಯೆಯನ್ನು ತೆಗೆದುಕೊಂಡು ಗಾಂಧೀಜಿ ಲಂಡನ್‌ಗೆ ಹೋಗಿದ್ದರು. ಅಲ್ಲಿ ಎಷ್ಟೋ ಜನ ಹಿಂದೀ ಕ್ರಾಂತಿಕಾರಿಗಳೊಂದಿಗೆ ಭೇಟಿ ಮಾಡಿದರು. ಅವರ ಜೊತೆ ದೇಶೋತ್ಥಾನವನ್ನ ಕುರಿತಂತೆ ಗಂಭೀರ ಚರ್ಚೆಗಳಾದವು. ಅವರೆಲ್ಲರೂ ಹಿಂಸಾಮಾರ್ಗವನ್ನನುಸರಿಸಿ ದೇಶದ ಪರಾಧೀನತೆಯನ್ನ ಬಡತನವನ್ನು ದೂರ ಮಾಡಬೇಕು ಅಂತ ಪಟ್ಟು ಹಿಡಿದಿದ್ದರು. ಈ ದೇಶಬಂಧುಗಳ ಜೊತೆ ಮಾತನಾಡುವಾಗ ಚರಖಾ ಇಲ್ಲದೇ ಸ್ವರಾಜ್ಯ ಸಿಗುವುದು ಅಸಾಧ್ಯ ಅಂತ ಗಾಂಧೀಜಿಗೆ ಸ್ಪಷ್ಟವಾಗಿ ಅನ್ನಿಸಿತು. ಪ್ರತಿಯೊಬ್ಬ ಹಿಂದೂಸ್ತಾನಿಯೂ ಕೈಯಿಂದ ಬಟ್ಟೆ ನೇಯುವುದು ಅಗತ್ಯವಾಗಿತ್ತು. ನವೆಂಬರ್ ೧೯೦೯ಕ್ಕೆ ಲಂಡನ್‌ನಿಂದ ಹಿಂದಿರುಗುವಾಗ ಗಾಂಧೀಜಿ 'ಕಿಲಡೋನನ್ ಕಾಸಲ್' ಅನ್ನುವ ಒಂದು ಜಹಜಿನಲ್ಲಿ ಬರುವಾಗ 'ಹಿಂದ್ ಸ್ವರಾಜ್' ಎಂಬ ಪುಸ್ತಕವನ್ನು ಬರೆದರು. ದೇಶದ ಬಡತನವನ್ನ ದೂರ ಮಾಡಬೇಕಾದರೆ ಊಟ ತಿಂಡಿಯ ಪದಾರ್ಥಗಳ ಸ್ವಾವಲಂಬನೆ, ಬಟ್ಟೆಯ ಸ್ವಾವಲಂಬನೆ ಅಗತ್ಯ ಅಂತ ಆಗ ಗಾಂಧೀಜಿಗೆ ಮನವರಿಕೆಯಾಯಿತು. ಊಟ (ರೋಟಿ)ದ ನಂತರ ಮನುಷ್ಯನಿಗೆ ಬಟ್ಟೆಯ ಅವಶ್ಯಕತೆ ಉಂಟಾಗುತ್ತೆ, ಬಟ್ಟೆಯ ಅಗತ್ಯವನ್ನು ಮನೆಯಂಗಳದಲ್ಲಿ ಮನೆಯ ಜನರ ಪರಿಶ್ರಮದಿಂದ ಆಗುವುದಾದರೆ ಬಡವ ಕೂಡ ತನ್ನ ಶರೀರವನ್ನು ಮುಚ್ಚಿಕೊಳ್ಳಬಲ್ಲ, ಸ್ವಲ್ಪ ಹಣವೂ ಉಳಿಯುತ್ತದೆ. ಸ್ವಲ್ಪ ಸಂಪಾದನೆ ಕೂಡ ಮಾಡಬಹುದು. ಮೆಷಿನ್‌ನಿಂದ ನೇಯ್ದ ಬಟ್ಟೆಯನ್ನು ತೊಡುವುದರಿಂದ ಕಡಿಮೆ ಆದಾಯದ ಹೆಚ್ಚು ಭಾಗ ವಿದೇಶಕ್ಕೆ ಇಲ್ಲವೆ ಮಿಲ್ ಮಾಲೀಕರ ವಶಕ್ಕೆ ಹೋಗುತ್ತೆ. ಆಗ ಎಂತಹ ಪರಿಸ್ಥಿತಿಯಲ್ಲೂ ಬಡವ ಮತ್ತಷ್ಟು ಬಡವನಾಗುತ್ತಾ ಇರುತ್ತಾನೆ. ಪರಾವಲಂಬನೆ ಈ ದೊಡ್ಡ ಮೌಲ್ಯವನ್ನು ತೆರಬೇಕಾಗುತ್ತದೆ. ಆದ್ದರಿಂದ ವಸ್ತ್ರ ಸ್ವಾವಲಂಬನೆಯ ವಿಷಯವನ್ನು ಯೋಚಿಸುತ್ತಾ ಇರುವಾಗ ಗಾಂಧೀಜಿಗೆ ಚರಖಾ ವಿಷಯ ತಲೆಗೆ ಬಂದಿತ್ತು.

೫೦೦೦ ವರ್ಷಗಳ ಹಿಂದೆ ದೇಶದಲ್ಲಿ ಬಟ್ಟೆ ಮಿಲ್‌ಗಳೇನೂ ಇರಲಿಲ್ಲವಲ್ಲ. ಎಲ್ಲರೂ ತಮ್ಮ ಮೈ ಮುಚ್ಚಿಕೊಳ್ಳುತ್ತಿದ್ದರು. ಇಷ್ಟಲ್ಲದೆ ನಮ್ಮ ದೇಶದ ಬಟ್ಟೆ ಸಮುದ್ರದ

ಮಾರ್ಗವಾಗಿ ಬೇರೆ ದೇಶಗಳಿಗೆ ನಿರ್ಯಾತವಾಗುತ್ತಿತ್ತು. ಆ ಕಾಲದಲ್ಲಿ ಇದು ಸಂಭವವಾಗುತ್ತಿತ್ತು. ಅಂದಲ್ಲಿ ೨೦ನೆಯ ಶತಮಾನದಲ್ಲಿ ಇದೇನೂ ಕಷ್ಟವಾಗಬೇಕಾಗಿಲ್ಲ. ಇಂತಹ ಚಿಂತನೆಗಳ ನಡುವೆ ಗಾಂಧೀಜಿಯವರು ಆರ್ಥಿಕ ವ್ಯವಸ್ಥೆಯ ಕೇಂದ್ರದಲ್ಲಿ ಚರಖಾವನ್ನು ಇಟ್ಟರು. ಪ್ರತಿಯೊಬ್ಬ ಮನುಷ್ಯನಿಗೂ ಮೈಗೆ ತೊಡಲು ಬಟ್ಟೆ ಬೇಕೇಬೇಕು, ಬಟ್ಟೆ ಕೈಯಲ್ಲಿ ತಯಾರಾದರೆ ಸಂಪಾದನೆ ಹೆಚ್ಚಾಗುತ್ತೆ, ಆಫ್ರಿಕಾ ಸತ್ಯಾಗ್ರಹದ ವೇಳೆಯಲ್ಲಿ ಈ ಚಿಂತನೆ ಹೆಚ್ಚು ಬೆಳೆದಿರಲಿಲ್ಲ, ಆದರೆ ೧೯೧೫ರಲ್ಲಿ ಸ್ವದೇಶಕ್ಕೆ ಹಿಂದಿರುಗಿದಾಗ ಜನರ ಕಡುಬಡತನವನ್ನ ನೋಡಿ ಅವರ ಹೃದಯ ಚರಖಾವನ್ನು ಹುಡುಕತೊಡಗಿತು. ಯಾವುದಾದರೂ ವಿಷಯದ ಸತ್ಯ ತಿಳಿಯಿತೆಂದರೆ ಸರಿ, ಗಾಂಧೀಜಿ ಅದನ್ನೇ ಹಿಡಿದುಕೊಂಡು ಹೊರಡುತ್ತಿದ್ದರು. ಅದನ್ನು ಪಡೆದುಕೊಂಡೇ ಅವರಿಗೆ ನಿರಾಳವಾಗುತ್ತಿದ್ದುದು.

ಬ್ರಿಟಿಷರ ೧೦೦–೧೫೦ ವರ್ಷಗಳ ಆಡಳಿತದ ಅವಧಿಯಲ್ಲಿ ಹಿಂದೂಸ್ಥಾನದಲ್ಲಿ ಬಟ್ಟೆ ತಯಾರಿಸುವ ವಿಕಸಿತ ಉದ್ಯೋಗ ಹಾಳಾಗಿಹೋಗಿತ್ತು. ಉದ್ದೇಶಪೂರ್ವಕವಾಗಿ ಹಾಳುಮಾಡಿದ್ದರು ಅಂತಲೇ ಹೇಳಬಹುದು. ಸಾಮಾನ್ಯ ಜನರಿಂದ ವ್ಯವಸ್ಥಿತವಾದ ರೀತಿಯಲ್ಲಿ ಹಣ ಎಳೆಯುವ ಉಪಾಯ ಇದಾಗಿತ್ತು. ಹೀಗಾಗಿ ದೇಶದಲ್ಲಿ ದಟ್ಟ ದಾರಿದ್ರ್ಯತೆ ಹರಡಿಕೊಂಡಿತ್ತು. ಈ ದಟ್ಟ ದಾರಿದ್ರ್ಯ ಅನಾಯಾಸವಾಗಿ ಹಬ್ಬಿತ್ತು. ತಿಳಿಯದೆ ಏನೂ ಬಂದಿರಲಿಲ್ಲ. ಅದರ ಹಿಂದೆ ಯೋಜನಾಬದ್ಧ ರೀತಿಯ ಕೂಟನೀತಿ ಇತ್ತು. ಈ ವಿಶಾಲವಾದ ದೇಶವನ್ನು ಬರಿಯ ಸೈನ್ಯಶಕ್ತಿಯಿಂದ ವಶದಲ್ಲಿಟ್ಟುಕೊಂಡಿರಲು ಸಾಧ್ಯವಿಲ್ಲ ಅಂತ ಈಸ್ಟ್ ಇಂಡಿಯಾ ಕಂಪನಿ ನಂತರದಲ್ಲಿ ಬ್ರಿಟಿಷ್ ಸರಕಾರ ಇವೆರಡಕ್ಕೂ ಅರ್ಥವಾಗಿತ್ತು. ರಾಜ್ಯದ ಮಹತ್ವಾಕಾಂಕ್ಷಿ ಹಾಗೂ ಸ್ವಾರ್ಥಿಗಳಾದ ಆ ದಿಗ್ಗಜರು ಪ್ರತಿಯೊಬ್ಬ ಹಿಂದೂಸ್ಥಾನಿಯನ್ನೂ ಪರಾಧೀನತೆ ಅನ್ನುವ ಬೇಡಿಯಲ್ಲಿ ಕಟ್ಟಿ ಹಾಕಿ ಅವರನ್ನು ಗುಲಾಮರನ್ನಾಗಿ ಮಾಡಿಕೊಳ್ಳಬೇಕು, ಎಂದೂ ಅವರು ತಲೆ ಎತ್ತಬಾರದು ಅಂತ ಯೋಜಿಸಿದ್ದರು. ಅದಕ್ಕೆ ಅವರು ಬಹಳ ಒಳ್ಳೆಯದೊಂದು ಕ್ರಮವನ್ನು ಚಿಂತನೆ ಮಾಡಿ ಹುಡುಕಿಕೊಂಡರು. ದೇಶದ ಸ್ವಾವಲಂಬನೆಯನ್ನು ಪೂರ್ತಿಯಾಗಿ ಹಾಳು ಮಾಡಿ, ವಿದೇಶದ ಮೇಲೆ ಪ್ರತಿಯೊಂದಕ್ಕೂ ನಿರ್ಭರರಾಗುವಂತೆ ಮಾಡಿದರೆ, ಈ ದೇಶದ ಐಶ್ವರ್ಯ ಸ್ವಾಭಾವಿಕವಾಗಿಯೇ ಇಂಗ್ಲೆಂಡ್‌ಗೆ ಹೋಗುತ್ತದೆ, ಮತ್ತೆ ಬಡ ಹಿಂದೂಸ್ಥಾನ ಅವರ ಕೃಪಾಪಾತ್ರರಾದ ಮೇಲೆ ಸ್ವಾತಂತ್ರ್ಯದ ವಿಷಯ ಯೋಚಿಸುವುದಕ್ಕೂ ಹೋಗುವುದಿಲ್ಲ ಅನ್ನುವುದು ಅವರ ಯೋಚನೆಯಾಗಿತ್ತು. ಇಂಗ್ಲೆಂಡ್ ಹಿಡಿಗಾತ್ರ ಜನರಿರುವ ಚಿಕ್ಕದೇಶ. ಅವರ ಹತ್ತಿರ ಉತ್ಪತ್ತಿ, ಪ್ರಾಕೃತಿಕವಾದ ಉತ್ಪತ್ತಿ ತೀರ ಕಡಿಮೆ. ಇಂಗ್ಲೆಂಡ್‌ನವರು ತಮ್ಮ ಊಟ–ತಿಂಡಿಯ ಪದಾರ್ಥಗಳನ್ನು ಕೂಡ ಯಾವಾಗಲೂ ವಿದೇಶಗಳಿಂದ ತರಿಸಿಕೊಳ್ಳಬೇಕಾಗುತ್ತಿತ್ತು. ಇಂದಿಗೂ

ಇಂಗ್ಲೆಂಡ್ ಸಾಕಷ್ಟು ಆಹಾರಪದಾರ್ಥಗಳಿಗೆ ಯೂರೋಪನ್ನು ಅವಲಂಬಿಸಿದೆ. ಅಂತಹ ಪರಿಸ್ಥಿತಿಯಲ್ಲಿ ಇಂಗ್ಲೆಂಡ್‌ವಾಸಿಗಳಿಗೆ ಕೆಲಸ ಊಟ ಕೊಡುವುದಕ್ಕಾಗಿ ಇಂಗ್ಲೆಂಡ್‌ನ ಧೂರ್ತ ರಾಜನೀತಿಜ್ಞರು ಹಿಂದೂಸ್ತಾನಿಗಳನ್ನು ಪರಾಧೀನರನ್ನಾಗಿ ಮಾಡುವಂತಹ ಒಂದು ಚಮತ್ಕಾರಿಕ ನೀತಿಯನ್ನು ಕಂಡುಹಿಡಿದರು. ಒಂದೊಂದಾಗಿ, ಬಹಳ ನಿಷ್ಠುರವಾಗಿ ಗೃಹ ಉದ್ಯೋಗಗಳ ಉತ್ಪಾದನೆಯನ್ನು, ಸ್ವಾವಲಂಬನೆಯನ್ನು ಪೂರ್ತಿಯಾಗಿ ನಾಶಪಡಿಸಿದ್ದರು. ಸಾವಿರಾರು ವರ್ಷಗಳಿಂದ ಹಿಂದೂಸ್ತಾನದ ಮಲ್‌ಮಲ್, ರೇಷ್ಮೆ, ಕ್ರಿಮಬಾಬ್ ಪ್ರಪಂಚದಲ್ಲೇ ಹೆಸರುವಾಸಿಯಾಗಿದ್ದವು. ಈ ಹಸ್ತಉದ್ಯೋಗವನ್ನು ನಾಶಪಡಿಸುವುದರಿಂದ ವ್ಯಾಪಾರ ಪೂರ್ತಿ ತಮ್ಮ ಕೈವಶವಾಗುತ್ತದೆ ಮತ್ತು ಅದರಿಂದ ಹಿಂದೂಸ್ತಾನದ ಆರ್ಥಿಕ ಸ್ವಾತಂತ್ರ್ಯ ಸಮಾಪ್ತಿಗೊಳ್ಳುತ್ತೆ ಎಂದು ಆಂಗ್ಲರು ಅರಿತರು. ೩೦ ಕೋಟಿ ಭಾರತೀಯರ ಬಟ್ಟೆ ಕಸಿದುಕೊಂಡು ಇಂಗ್ಲೆಂಡ್ ತನ್ನ ಮಿಲ್‌ಗಳ ಬಟ್ಟೆಯನ್ನು ಅವರ ಮೇಲೆ ಹೊರಿಸಿದ್ದರು. ಹೀಗೆ ಬ್ರಿಟನ್ ಅಂತರ್ರಾಷ್ಟ್ರೀಯ ಮತ್ತು ಹಿಂದೂಸ್ತಾನದ ಒಳಗಣ ವ್ಯಾಪಾರವನ್ನು ತನ್ನ ಕೈವಶ ಮಾಡಿಕೊಂಡು ಬಹಳ ಸುಲಭವಾಗಿ ಆರ್ಥಿಕ ಮತ್ತು ರಾಜಕೀಯ ನಿಯಂತ್ರಣವನ್ನು ತನ್ನ ವಶಕ್ಕೆ ತೆಗೆದುಕೊಂಡಿತು.

೨೦ನೆಯ ಶತಮಾನದ ವೇಳೆಗಾಗಲೇ ಹಿಂದೂಸ್ತಾನ ಪೂರ್ತಿಯಾಗಿ ಶೋಷಿತವಾಗಿತ್ತು. ರೈತನೆಂದರೆ ಬರಿಯ ಒಂದು ಅಸ್ಥಿಪಂಜರವಾಗಿ ಅವನುಳಿದಿದ್ದ. ಗಾಂಧೀಜಿ ಹಿಂದ್ ಸ್ವರಾಜ್‌ನಲ್ಲಿ ಬರಿಯ ನೈತಿಕ ರಾಜಕೀಯ ಸಮಸ್ಯೆಯ ಪರಿಹಾರವನ್ನಷ್ಟೇ ಯೋಚಿಸದೇ ಆರ್ಥಿಕ ಪ್ರಶ್ನೆಯ ಪರಿಹಾರ ಕೂಡ ಸೂಚಿಸಿದ್ದರು. ಸಮಾಜದ ವ್ಯವಸ್ಥೆ, ಆರ್ಥಿಕ ಮೂಲದ ಮೇಲೆ ಆಶ್ರಿತವಾಗಿರುತ್ತದೆ ಎಂಬುದನ್ನು ಗಾಂಧೀಜಿ ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಆದ್ದರಿಂದ ಸ್ವರಾಜ್ಯ ಪಡೆಯುವ ಮಾಧ್ಯಮ ವಸ್ತ್ರಸ್ವಾವಲಂಬನೆ ಎಂದು ಗಾಂಧೀಜಿಗೆ ನಂಬಿಕೆಯಾಗಿತ್ತು. ಬಟ್ಟೆಗಳ ಯಂತ್ರ ಕಾರ್ಖಾನೆಗಳಿಗೆ ಬದಲಾಗಿ ಪ್ರತಿಯೊಂದು ಮನೆಯಲ್ಲೂ ಚರಖಾ ನಡೆದರೆ, ಆಗ ಪ್ರತಿಯೊಬ್ಬ ಮನುಷ್ಯನೂ ಆರ್ಥಿಕ ಸ್ವಾವಲಂಬನೆಯ ಜೊತೆಗೆ ತನ್ನ ಗೌರವವನ್ನು ಸಂಪಾದಿಸಿಕೊಳ್ಳುತ್ತಾನೆ. ಅದೇ ಸ್ವಾತಂತ್ರ್ಯದ ಪರಿಭಾಷೆಯಾಗುತ್ತದೆ. ಭಾಗ್ಯ ವಿಚಿತ್ರದ ತಿರುಗಣಿಯಾಗಿರುತ್ತದೆ. ಗಾಂಧೀಜಿ ಗುಲಾಮಗಿರಿಯನ್ನು ತೊಡೆದು ಹಾಕಿಸಲು ಭಗೀರಥ ಪ್ರಯತ್ನವನ್ನೇ ನಡೆಸಿದರು. ಅದೇ ಗುಲಾಮಗಿರಿಯನ್ನು ನಮ್ಮ ಮುಖಂಡರು ಇವತ್ತು ಎಲ್ಲಾ ಮಾನ–ಸಮ್ಮಾನಗಳ ಜೊತೆ ಅದನ್ನು ಪುನಃ ತಂದಿದ್ದಾರೆ. ವ್ಯತ್ಯಾಸ ಇಷ್ಟೇ, ಮೊದಲು ಬರಿಯ ಇಂಗ್ಲೆಂಡ್ ನಮ್ಮನ್ನು ಹೀರಿ ಹಾಕುತ್ತಿತ್ತು. ಇವತ್ತು ಅಮೇರಿಕಾದ ಮಾರ್ಗದರ್ಶನದಲ್ಲಿ ಅಂತರರಾಷ್ಟ್ರೀಯ ಹಣಕಾಸಿನ ವಿಶ್ವಬ್ಯಾಂಕ್ (World Bank) ಸಂಸ್ಥೆ ಭಾರತವನ್ನು ಎಲ್ಲಾ ರೀತಿಯಲ್ಲೂ ಶೋಷಿಸಲು ಆರಂಭಿಸಿದೆ. ಆಟದ ಸಾಮಾನು, ಬಟ್ಟೆ–ಊಟ–ತಿಂಡಿಯ

ಪದಾರ್ಥಗಳೆಲ್ಲವೂ ಪರದೇಶಗಳ ಉದ್ಯೋಗಪತಿಗಳ ಕೈವಶವಾಗುತ್ತಿವೆ. ನಾವು ದೇಶವಾಸಿಗಳು ಇದು ಯಾವುದರ ಅರಿವೂ ಇಲ್ಲದೆ ಬಣ್ಣ ಬಣ್ಣದ ವಸ್ತುಗಳ ಆಸೆಯಲ್ಲಿ ಸಂತೋಷವಾಗಿ ನಮ್ಮ ಸ್ವಾತಂತ್ರ್ಯವನ್ನು ಅವರ ಕಠೋರ ಹಸ್ತಗಳಿಗೆ ಒಪ್ಪಿಸುತ್ತಿದ್ದೇವೆ. ಮುಂದಿನ ಹತ್ತು ವರ್ಷಗಳಲ್ಲಿ ನಾವು ಪೂರ್ತಿಯಾಗಿ (ಕೈ ಕಾಲು ಕಳೆದುಕೊಂಡು) ಕುಂಟರಂತಾಗಿ ದೇಶ ವಸಾಹತುವಾಗಲಿದೆ. ೧೯೧೫ರಲ್ಲಿ ಗಾಂಧೀಜಿ ದೇಶಕ್ಕೆ ಹಿಂದಿರುಗಿದರು. ಆಗ ದೇಶದಲ್ಲಿ ಚರಖಾ ಹೆಸರೆಲ್ಲೂ ಇರಲಿಲ್ಲ. ೫೦೦೦ ವರ್ಷಗಳು ಹಳೆಯ ಈ ಕಲೆ ವಿದೇಶಿಯರ ಷಡ್ಯಂತ್ರ (ಕುತಂತ್ರ) ದಿಂದಾಗಿ ಲುಪ್ತವಾಗಿ ಹೋಗಿತ್ತು. ಆದರೆ ಗಾಂಧೀಜಿ ಅದನ್ನು ಹುಡುಕುತ್ತಲೇ ಇದ್ದರು.

ವಿದೇಶಿ ಮಿಲ್‌ಗಳ ಬಟ್ಟೆಯನ್ನುಡದೆ ಗಾಂಧೀಜಿ ಮತ್ತು ಆಶ್ರಮವಾಸಿಗಳು ಕೈಯಿಂದ ನೂತಿದ್ದ ದಪ್ಪಬಟ್ಟೆಯನ್ನು ಎಲ್ಲಿಂದಲೋ ಸಂಗ್ರಹಿಸಿದರು. ಮತ್ತು ಒರಟಾದ ದಪ್ಪಬಟ್ಟೆ ಧರಿಸಲಾರಂಭಿಸಿದರು. ಆದರೆ ಆ ಬಟ್ಟೆ ಕೂಡ ಶುದ್ಧ ಸ್ವದೇಶಿ ಆಗಿರಲಿಲ್ಲ. ನೇಯಲು ದಾರವನ್ನು ಬಟ್ಟೆಯ ಮಿಲ್‌ಗಳಿಂದಲೇ ಕೊಳ್ಳಬೇಕಾಗುತ್ತಿತ್ತು. ಸಾಬರಮತಿ ಆಶ್ರಮದಲ್ಲಿ ಮೊದಲ ಮನೆಯನ್ನು ನೂಲುಯಂತ್ರ ಇಡುವುದಕ್ಕಾಗಿ ಕಟ್ಟಿದ್ದರು. ನೇಯ್ಗೆ ಮಾತ್ರ ಯಾರಿಗೂ ಬರುತ್ತಿರಲಿಲ್ಲ. ಆಗ ಪಾಲನಪುರದಿಂದ ಒಬ್ಬ ನೇಯ್ಗೆಯವರನ್ನು ಕರೆಸಿದರು. ಉತ್ತರ ಗುಜರಾತ್‌ನಲ್ಲಿ ಪಾಲನಪುರ ಎಂಬೊಂದು ನಗರ ರೇಷ್ಮೆಯ ಪಟೋಲ ಸೀರೆಗಳ ಉದ್ಯೋಗಕ್ಕೆ ಒಂದು ಕಾಲದಲ್ಲಿ ಪ್ರಸಿದ್ಧವಾಗಿತ್ತು. ಇಂದಿಗೂ ಅಲ್ಲಿಯ ಸೂಕ್ಷ್ಮ ಕಲಾಕುಶಲತೆ ಅದ್ಭುತವಾಗಿರುತ್ತದೆ. ಒಂದು ಸೀರೆ ನೇಯಲು ನೇಯ್ಗೆಯವನ ಪರಿವಾರ ಸುಮಾರು ಒಂದು ವರ್ಷ ಕಾಲ ತೆಗೆದುಕೊಳ್ಳುತ್ತದೆ. ಆದ್ದರಿಂದ ಒಂದು ಸೀರೆಯ ಬೆಲೆ ಮೂವತ್ತು ಸಾವಿರ ರೂ.ಗಳಿಂದ ಒಂದು ಲಕ್ಷರೂ. ಗಳವರೆಗಾಗುತ್ತದೆ. ಈ ಪಾಲನಪುರದಿಂದ ಹೆಚ್ಚು ವೇತನಕ್ಕಾಗಿ ಒಬ್ಬ ನೇಯ್ಗೆಯವ ಬಂದ. ಆ ನೇಯ್ಗೆಯವನು ಉಪಾಯಗುಣ ಕಲಾಕುಶಲತೆಯ ರಹಸ್ಯವನ್ನು ಅವನು ತಿಳಿಸಿರಲಿಲ್ಲ. ಆದರೆ ಅವನಿಗೆ ಆಶ್ರಮವಾಸಿಗಳ ಕರ್ತವ್ಯಶಕ್ತಿ ಎಷ್ಟರ ಮಟ್ಟಿನದೆಂಬ ಕಲ್ಪನೆ ಇರಲಿಲ್ಲ. ಅವನು ಅಲ್ಪ–ಸ್ವಲ್ಪ ಕಲಿಸಿದ್ದ ನಿರಂತರ ಪರಿಶ್ರಮ ಸಾಧಿಸಿ, ಮಗನಲಾಲ್ ಗಾಂಧಿಯು ನೇಯ್ಗೆಯವನು ಕಲಿಸಿದ್ದಷ್ಟನ್ನೇ ರೂಢಿಸಿಕೊಂಡು ನೇಯ್ಗೆಯ ವಿದ್ಯೆಯನ್ನು ಸಿದ್ಧಿಸಿಕೊಂಡ ನಂತರ ಕೈಮಗ್ಗದ ನೇಯ್ಗೆ ಶುರುವಾಯಿತು. ಆದರೂ ನೂಲೆಳೆಯ ಸಮಸ್ಯೆ ಹಾಗೆಯೇ ಉಳಿದಿತ್ತು. ಈ ಮಗ್ಗಗಳಲ್ಲಿ ಮಿಲ್ ಎಳೆಗಳಲ್ಲಿ ನೇಯ್ಗೆಯಾಗುತ್ತಿತ್ತು ಮತ್ತು ಇಜಿಪ್ಷಿಯನ್ ಹತ್ತಿಯ ನೂಲೇ ಅದರಲ್ಲಿ ಉಪಯೋಗವಾಗುತ್ತಿದ್ದುದು. ಹಿಂದೂಸ್ತಾನದ ಹತ್ತಿಯ ಎಳೆ ಬಹಳ ಚಿಕ್ಕದಾಗಿರುತ್ತಿತ್ತು. ಅದರ ಎಳೆಗಳು ಒಂದೇ ಸಮ ಕತ್ತರಿಸಿ ಹೋಗುತ್ತಿದ್ದವು. ಮಿಲ್ ನಡೆಸುವವರು

ಆ ತರಹೆ ನಷ್ಟ ಅನುಭವಿಸಲು ಒಪ್ಪುತ್ತಿರಲಿಲ್ಲ. ಹೀಗಾಗಿ ಹಿಂದೂಸ್ತಾನದಲ್ಲಿ ಇಜಿಪ್ಟಿನ ಹತ್ತಿ ಮತ್ತು ಮ್ಯಾಂಚೆಸ್ಟರ್‌ನ ಬಟ್ಟೆಗಳೇ ತುಂಬಿದ್ದವು. ಆಶ್ರಮವಾಸಿಗಳು ಮಿಲ್ ದಾರ ಉಪಯೋಗಿಸುತ್ತಿದ್ದುದರಿಂದ ದಾರದ ಎಳೆ ಮಾಡುವ ಮಿಲ್‌ಗಳ ಲಾಭ ಹೆಚ್ಚಾಗುತ್ತಿತ್ತು. ಈ ಆಶ್ರಮವಾಸಿಗಳು ದಾರದ ಎಳೆಗಳ ಮಿಲ್‌ನ ದಳ್ಳಾಳಿಗಳಾಗಿದ್ದರೋ ಎಂಬಂತೆ ಅನಿಸುತ್ತಿತ್ತು. ಆದ್ದರಿಂದ ಕೈ ಎಳೆಗಳ ಅವಶ್ಯಕತೆ ಅನಿವಾರ್ಯವಾಗಿತ್ತು. ಈ ಸಂಕಷ್ಟ ಮತ್ತು ಮಿಲ್ ಮಾಲೀಕರ ಶೋಷಕ ಬುದ್ಧಿಯನ್ನು ನೋಡಿ ಗಾಂಧೀಜಿ ಚರಖಾವನ್ನು ಹುಡುಕುವಲ್ಲಿ ತಲ್ಲೀನರಾದರು. ಗೋಖಲೆಯವರು ತೀರಿಕೊಂಡ ನಂತರ ಭಾರತ ಯಾತ್ರೆಯಲ್ಲಿ ಅವರು ಚರಖಾವನ್ನು ಹುಡುಕುತ್ತಿದ್ದರು. ಒಂದೆರಡು ಚರಖಾಗಳು ಸಿಕ್ಕವಾದರೂ ಅದನ್ನು ಉಪಯೋಗಿಸುವ ರೀತಿ ಯಾರಿಗೂ ಗೊತ್ತಿರಲಿಲ್ಲ. ಸಮಯ ಕಳೆದಂತೆಲ್ಲಾ ಚರಖಾವನ್ನು ನಿರಂತರ ಹುಡುಕತೊಡಗಿದರು. ಆಶ್ರಮಕ್ಕೆ ಬಂದ ಎಲ್ಲಾ ತರಹೆಯ ಆಗಂತುಕರ ಬಳಿ ಅವರು ಚರಖಾ ಬಗ್ಗೆ, ನೂಲು ತೆಗೆಯುವ ಕುರಿತು ಪ್ರಶ್ನಿಸುತ್ತಿದ್ದರು. ಈ ಕಲೆ ಮಹಿಳೆಯರಿಗೆ ವಿಶೇಷವಾಗಿ ಗೊತ್ತಿದ್ದುದರಿಂದ ಆ ನೂರು ವರ್ಷಗಳ ಅವಧಿಯಲ್ಲಿ ಆ ಕಲೆ ಮರೆಯಾಗಿ ಹೋಗಿತ್ತು. ದೂರದ ಯಾವುದೋ ಹಳ್ಳಿಯಲ್ಲಿ ಅಪ್ಪಿ-ತಪ್ಪಿ ಒಬ್ಬಿಬ್ಬರು ಮಹಿಳೆಯರಿಗೆ ಆ ಕಲೆ ಗೊತ್ತಿದ್ದಿರಬಹುದು. ಪುರುಷರಿಗೆ ಮಹಿಳೆಯರಿಗೆ ಈ ಕಲಾ ಕುಶಲತೆಯನ್ನು ಕುರಿತು ಯಾವ ತಿಳುವಳಿಕೆಯೂ ಇರಲಿಲ್ಲ. ಯಾರಾದರೂ ಮಹಿಳೆಯೇ ಈ ಮಾಹಿತಿ ಸಂಗ್ರಹಿಸುವ ಸಾಧ್ಯತೆ ಇತ್ತು.

೧೯೧೭ರಲ್ಲಿ ಗಾಂಧೀಜಿ ಗುಜರಾತ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಚುನಾಯಿತರಾದರು. ನರ್ಮದಾ ನದೀತೀರ ಭರೂಚ್‌ನಲ್ಲಿ ಆಗ ಅಧಿವೇಶನ ಜರುಗಿತ್ತು. ಅಲ್ಲೂ ಚರಖಾನ ಹುಡುಕುತ್ತಲೇ ಇದ್ದರು. ಭರೂಚ್‌ನಲ್ಲಿ ಗಂಗಾಬಹನ್ ಮಜೂಮ್‌ದಾರ್ ಎಂಬೊಬ್ಬ ಕರ್ಮಠಳೂ, ಧೈರ್ಯಸ್ಥೆಯೂ ಆದ ಮಹಿಳೆಯ ಪರಿಚಯ ಆಯಿತು ಆಕೆ ಒಬ್ಬಂಟಿ, ಆಕೆಯ ಪತಿ ತೀರಿಹೋಗಿದ್ದರು. ಮಕ್ಕಳು-ಮರಿ ಇರಲಿಲ್ಲ. ಆಕೆ ತನ್ನ ಆಲೋಚನೆಗಳ ಪರಿಣಾಮವಾಗಿಯೇ ಅಸ್ಪೃಶ್ಯತೆಯನ್ನು ತನ್ನ ಬಾಳಿನಿಂದ ಹೊರದೂಡಿಬಿಟ್ಟಿದ್ದಳು. ಬಂಧು-ಬಾಂಧವರ ಬೆದರಿಕೆಯ ಬಂಧನವನ್ನು ಧೈರ್ಯವಾಗಿ ಕಿತ್ತೊಗೆದು. ಸಮಾಜದ ಉದ್ಧಾರದಕಾರ್ಯಗಳಲ್ಲಿ ತನ್ನದೇ ಆದ ರೀತಿಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಳು. ಚರಖಾ ಕುರಿತ ತನ್ನ ಮನದಾಸೆಯನ್ನು ಗಾಂಧೀಜಿ ಆಕೆಗೆ ಹೇಳಿದರು. ಗಂಗಾಬಹನ್ ಈ ಭಗೀರಥ ಕಾರ್ಯವನ್ನು ವಹಿಸಿಕೊಂಡಳು. ಚಳಿ-ಮಳೆ-ಬಿಸಿಲು ಯಾವುದರ ಪರಿವೆ ಇಲ್ಲದೆ ಯಾವ ಶ್ರಮವೂ ಇಲ್ಲದೆ ಆಕೆ ಹಳ್ಳಿಗಳು, ಮನೆಗಳು, ಎಲ್ಲಾ ಸುತ್ತಿದಳು. ಜನರ ಹಳೆ ವಸ್ತುಗಳ ಸಂಗ್ರಹದಲ್ಲಿ ಮುರಿದ ಛಾವಣಿಗಳ ಮೇಲೆ ಜರ್ಜರಿತವಾದ ಮನೆಗಳ ಅಟ್ಟಗಳಲ್ಲಿ ಹುಡುಕುತ್ತಾ ತಿರುಗಿದಳು. ಕೊನೆಗೆ ಮಹಾರಾಜಾ

ಗಾಯಕವಾಡನ ಖಡ್‌ದಾ ರಾಜ್ಯದ ಬೀಜಾಪುರ ಎಂಬ ಹಳ್ಳಿಯ ಪುಟ್ಟದೊಂದು ಮನೆಯ ಛಜ್ಜಾ ಮೇಲೆ ಒಂದು ಮುರಿದಿದ್ದ ಧೂಳಿನಿಂದ ತುಂಬಿದ್ದ ಚರಖಾ ಸಿಕ್ಕೇಬಿಟ್ಟಿತು. ಬಹಳ ಬೇಡಿ ಗಂಗಾಬಹನ್ ಆ ಮುಸ್ಲಿಂ ಮನೆಯಾತನಿಂದ ಆ ಚರಖಾ ಪಡೆದು ಅದನ್ನು ರಿಪೇರಿ ಮಾಡಿಸಿ ಅದನ್ನು ಉಪಯೋಗಿಸುವ ರೀತಿಯನ್ನು ಕಲಿತಳು. ಮನುವಿನ ಕಾಲದ ಆ ಚರಖಾವನ್ನು ತೆಗೆದುಕೊಂಡು ಆಕೆ ಸಾಬರಮತಿ ಆಶ್ರಮಕ್ಕೆ ಬಂದಳು. ಆಶ್ರಮವೆಲ್ಲಾ ಈ ಅದ್ಭುತ ಅನ್ವೇಷಣೆಯನ್ನು ನೋಡಿ ಕುಣಿದಾಡಿತು. ಗಾಂಧೀಜಿಯ ಉತ್ಸಾಹ ಆನಂದ ಇಮ್ಮಡಿಸಿತು. ಈಗ ಹಿಂದೂಸ್ತಾನದ ಹಸಿವಿನಿಂದ ನರಳುವ ಅರ್ಧ ಬೆತ್ತಲೆಯ ರೈತನಿಗೆ ಊಟ–ತಿಂಡಿಯ ಸಹಾಯಕ ಸಾಧನ ಸಿಗಲಿದೆ ಎಂಬಾಸೆ ಜಾಗೃತವಾಯಿತು. ಪರದಾ ಪದ್ಧತಿಯ ಹಿಂದುಳಿದ ಮಹಿಳೆಯರ ಕೂಡ ತಮ್ಮ ಒಲೆ, ಬೀಸುವಕಲ್ಲು ಮತ್ತು ಮಕ್ಕಳ ನಡುವೆ ಸಮಯ ಸಾಧಿಸಿ ಮನೆಯಲ್ಲಿ ಕುಳಿತೇ ಚರಖಾ ನಡೆಸಿ ಸ್ವತಂತ್ರವಾಗಿ ಸಂಪಾದನೆ ಮಾಡಬಲ್ಲರು ಮತ್ತು ಅವಳ ಭಯಂಕರವಾದ ಬಡತನ ದೂರವಾಗುವುದು ಎಂದನ್ನಿಸಿತು.

ಚರಖಾ ಏನೋ ಬಂತು, ಆದರೆ ಹತ್ತಿರ ಲಡಿ ಸಿಗುತ್ತಿರಲಿಲ್ಲ. ಬೀಜಾಪುರ್ ಹಳ್ಳಿಯ ಜನ ತಮ್ಮ ಮುರಿದಿರುವ ಚರಖಾ ಸರಿಮಾಡಿ ನೂಲುತ್ತೇವೆಂದು ನಂಬಿಕೆ ನೀಡಿದರು. ಆದರೆ ಅವರ ಹತ್ತಿರ ಹತ್ತಿ ಲಡಿಗಳಿರಲಿಲ್ಲ. ಗಾಂಧೀಜಿ ಉಮರ್ ಸುಭಾನಿಗೆ ಇದನ್ನ ಹೇಳಿದರು. ಆತ ತನ್ನ ಮಿಲ್ಲಿನ ಹತ್ತಿಯಿಂದ ಮಾಡಿದ ಲಡಿಗಳನ್ನು ಗಾಂಧೀಜಿಗೆ ಕಳುಹಿಸಿಕೊಟ್ಟರು. ಇದರಿಂದಲೂ ಸಮಸ್ಯೆ ದೂರ ವಾಗುವಂತಿರಲಿಲ್ಲ. ಉಮರ್ ಸುಭಾನಿ ಉದಾರಿಗಳು. ಬೇಡಿದಷ್ಟು ಲಡಿಗಳನ್ನು ಕಳುಹಿಸಿಕೊಡುತ್ತಿದ್ದರು. ಆದರೆ ಆ ಸಜ್ಜನನ ಉಪಕಾರವನ್ನು ಪಡೆಯುತ್ತಲೇ ಇರುವುದೂ ಸರಿಯಲ್ಲ ಅನಿಸುತ್ತಿತ್ತು. ಅದಲ್ಲದೆ, ಈ ಲಡಿಗಳು ಮೆಷಿನ್‌ನಿಂದ ಮಾಡಿದ್ದವು. ಹಳೆಯ ಕಾಲದಲ್ಲಿ ಮೆಷಿನ್‌ನಿಂದ ಮಾಡಿದ ಲಡಿಗಳೇನೂ ಸಿಗುತ್ತಿರಲಿಲ್ಲ. ಆದರೆ ಅವರು ಲಡಿ ಹೇಗೆ ಮಾಡುತ್ತಿದ್ದರು ಅನ್ನುವುದು ಕೂಡ ಗೊತ್ತಿರಲಿಲ್ಲ. ಲಡಿ ಮಾಡುವವನನ್ನು ಹುಡುಕುವ ಜವಾಬ್ದಾರಿಯನ್ನು ಗಂಗಾ ಬಹನ್ ತಾನು ಹೊತ್ತುಕೊಂಡಳು.

ಆಕೆ ಒಬ್ಬ ದಾರ ತೆಗೆಯುವವನನ್ನು ಹುಡುಕಿದಳು. ಅವನು ತಿಂಗಳಿಗೆ ೩೦ ರೂ. ಸಂಬಳ ಬೇಕು ಅಂದ, ಆ ಕಾಲದ ೩೦ ರೂ. ಅಂದರೆ ಇವತ್ತಿನ ೩೦,೦೦೦ ರೂ.ಗೆ ಸಮ. ಆದರೆ ಗಾಂಧೀಜಿ ಎಷ್ಟೇ ಹೆಚ್ಚಾದರೂ ಹಣ ಕೊಟ್ಟು ನೂಲುವ ಲಡಿ ಮಾಡುವ ಕಲೆಯನ್ನು ತಮ್ಮದಾಗಿ ಮಾಡಿಕೊಳ್ಳಬಯಸುತ್ತಿದ್ದರು. ಆಗ ಹತ್ತಿಯ ಹುಡುಕಾಟ ಶುರುವಾಯಿತು. ಯಶವಂತ ಪ್ರಸಾದ ದೇಸಾಯಿ ಎಂಬ ಒಬ್ಬರು ಹತ್ತಿಯನ್ನು ತಂದರು. ಇಬ್ಬರು ವಿದ್ಯಾರ್ಥಿಗಳನ್ನು ಆ ನೂಲುವವನ ಬಳಿ ತರಬೇತಿಗಾಗಿ ತಯಾರು ಮಾಡಲಾಯಿತು. ಆ ರೀತಿ ಹತ್ತಿ ಸರಿ ಮಾಡುವುದು,

ಲಡಿ ಮಾಡುವುದು ಶುರುವಾಯಿತು. ಆಗ ಇವೆಲ್ಲಾ ಬೀಜಾಪುರದಲ್ಲಿ ನಡೆಯುತ್ತಿದ್ದಾಗ, ಸಾಬರಮತಿ ಆಶ್ರಮದಲ್ಲಿ ಮಗನಲಾಲ ಗಾಂಧೀ ಚರಖಾ ಪ್ರಯೋಗ ನಡೆಸುತ್ತಿದ್ದರು. ಮತ್ತೆ ಆ ಎಳೆಗಳಿಂದ ಖಾದಿ ನೇಯ್ಗೆ ಕೂಡ ಆರಂಭವಾಯಿತು. ಮೊದಲ ಖಾದಿ ೧೭ ಆಣೆ ಗಜದ ಹಾಗೆ ತಯಾರಾಯಿತು. ಅಷ್ಟು ಖರ್ಚಿನಲ್ಲಿ ಮಿಲ್‌ನ ಪಂಚೆ ಪೂರ್ತಿ ಸಿಗುತ್ತಿತ್ತು. ಆದರೆ ಗಾಂಧೀಜಿಗೆ ಈ ಖರ್ಚೆಲ್ಲಾ ಒಪ್ಪಿಗೆ ಇತ್ತು. ಎಷ್ಟೋ ಜನ ಸ್ನೇಹಿತರೂ ಆ ದಪ್ಪ ಹೆಚ್ಚು ಬೆಲೆಯ ಬಟ್ಟೆಯನ್ನು ನಗು–ನಗುತ್ತಾ ಕೊಂಡಿದ್ದರು.

ಈ ಎಲ್ಲಾ ಸಂದರ್ಭದಲ್ಲಿ ಗಾಂಧೀಜಿ ಆಮಶಂಕೆಯಿಂದ ಸರಿಹೋದ ಮೇಲೆ ಬೊಂಬಾಯಿನಲ್ಲಿ ರೇವಾಶಂಕರಝುವೇರಿಯ ಮಣಿ ಭವನದಲ್ಲಿ ನಿಶ್ಶಕ್ತರಾಗಿ ಮಲಗಿದ್ದರು. ಆದರೆ ಅವರ ಹೃದಯ ಮಾತ್ರ ಚರಖಾದಲ್ಲೇ ನೆಟ್ಟಿತ್ತು. ಮಣಿ ಭವನದ ಕೆಳಗೆ, ರಸ್ತೆ ಮೇಲೆ, ಹಾಸಿಗೆ ರಜಾಯಿ, ದಿಂಬು ಹೊಲೆಯುತ್ತೇನೆ ಅಂತ ಕೂಗು ಹಾಕುತ್ತಾ ಪ್ರತಿದಿನ ಹಾಸಿಗೆ ಹೊಲೆಯುವವರು ರಸ್ತೆಯಲ್ಲಿ ಹೋಗುತ್ತಿದ್ದರು. ಹಾಸಿಗೆಯ ಹತ್ತಿ ಹೊಡೆಯುವವನು ಎಳೆ ತೆಗೆಯುವ ಹತ್ತಿಯನ್ನು ಸಿದ್ದಪಡಿಸಬಲ್ಲ ಅಂತ ಗಾಂಧೀಜಿಗೆ ಯೋಚನೆ ಬಂತು. ಅವನನ್ನು ಮೇಲಿನ ಅಂತಸ್ತಿಗೆ ಕರೆಸಿಕೊಂಡರು. ಅವನು ಬಂದ ಆದರೆ ಹೆಚ್ಚು ಹಣ ಕೇಳ್ತಾ ಇದ್ದ. ಅವನಿಗೆ ಹೆಚ್ಚು ಹಣ ಕೊಟ್ಟು ದುರಾಸೆ ತೋರಿಸಿದರು. ಆಗ ಅವನು ಲಡಿ ಮಾಡಿಕೊಡುತ್ತೇನೆಂದು ಒಪ್ಪಿಕೊಂಡ. ಬೊಂಬಾಯಲ್ಲೂ ನೂಲು ತೆಗೆಯುವವರನ್ನು ಹುಡುಕುತ್ತಲೇ ಇದ್ದರು. ಎಲ್ಲೋ ಗುಡಿಸಲುಗಳಿಂದ ನೂಲು ತೆಗೆಯುವ ಒಬ್ಬರು ಬಂದರು. ಅವರು ೩೦ ಗ್ರಾಂ ಎಳೆ ತೆಗೆಯುವುದಕ್ಕೆ ಒಂದು ರೂಪಾಯಿ ಕೇಳಿದರು. ಅವರಿಬ್ಬರು ಮಣಿ ಭವನದಲ್ಲಿ ಎಳೆ ತೆಗೆಯಲು ಶುರು ಮಾಡಿದರು. ಬೀಜಾಪುರಕ್ಕೆ ಹೋಲಿಸಿದರೆ, ಇವರು ಬಹಳ ಹೆಚ್ಚು ಹಣ ತೆಗೆದುಕೊಳ್ಳುತ್ತಿದ್ದರು. ಇದು ಕಳ್ಳತನದ ಹಾಗೆ, ಅವರು ತಮ್ಮ ಬೆಲೆ ಇಳಿಸಲು ತಯಾರಾಗಿರಲಿಲ್ಲ. ಅವರನ್ನು ಬಿಡಲೇ ಬೇಕಾಯಿತು. ಆದರೆ ಇಷ್ಟು ದಿನಗಳಲ್ಲೇ ಅವಂತಿಕಾ ಬಾಯಿ ಮತ್ತು ಶಂಕರಲಾಲ ಬ್ಯಾಂಕರನ ವೃದ್ಧತಾಯಿ ಮತ್ತು ವಸುಮತಿ ಬಹನ್ ಇಬ್ಬರೂ ಚರಖಾ ನಡೆಸುವುದನ್ನು ಕಲಿತುಬಿಟ್ಟಿದ್ದರು. ಆ ಚರಖಾ ಧ್ವನಿ ಕೇಳಿಯೇ ಗಾಂಧೀಜಿಗೆ ಆನಂದವಾಗುತ್ತಿತ್ತು. ಅವರ ಆರೋಗ್ಯ ಸುಧಾರಿಸತೊಡಗಿತು. ಅ ದಿನಗಳಲ್ಲೇ ಹರಿಜನರೊಬ್ಬರೂ ರಾಮ್‌ಜೀ ಬಾಯಿ ಮತ್ತು ಅವರ ಪತ್ನಿ ಗಂಗಾ ಆಶ್ರಮದಲ್ಲಿ ಬಂದು ನೆಲಸಿದರು. ಅವರಿಬ್ಬರು ಆಶ್ರಮವಾಸಿಗಳಿಗೆ ನೇಯ್ಗೆಯನ್ನು ಕಲಿಸಿದರು.

ಆರಂಭದಲ್ಲಿ ೨೬ ಇಂಚಿನ ಖಾದಿ ನೇಯ್ಗೆಯಾಯಿತು. ಈ ದಪ್ಪ ಬಟ್ಟೆಯನ್ನು ನಮ್ಮಜ್ಜಿ ತನ್ನ ಕೈಯಿಂದ ಅಡ್ಡಡ್ಡ ಜೋಡಿಸಿ ತನಗೆ ೫೨ ಇಂಚಿನ ಸೀರೆ ಮಾಡಿಕೊಂಡು ಉಡಕ್ಕೆ ಶುರು ಮಾಡಿದರು. ಗೋಣಿಚೀಲದ ಹಾಗಿದ್ದ ಆ ಬಟ್ಟೆಯನ್ನ ನಮ್ಮಜ್ಜಿ ತನ್ನ ಕೋಮಲವಾದ ಸೊಂಟದ ಮೇಲೆ ಹೇಗೆ ಕಟ್ಟುತ್ತಿದ್ದಳೋ, ಅದರ ಪಲ್ಲೂನ

ಹೇಗೆ ತಡೆದುಕೊಳ್ಳುತ್ತಿದ್ದಳೋ ದೇವರಿಗೇ ಗೊತ್ತು, ಆಕೆ ಯಾವಾಗಲೂ ಗುಂಡ–ಗುಂಡಗೆ ಸುಂದರವಾಗಿದ್ದವಳು, ದಪ್ಪ ಗೋಣಿಚೀಲವಾದರೂ ಅವರ ಮೈ ಮೇಲೆ ಅದು ಚೆನ್ನಾಗೇ ಕಾಣಿಸುತ್ತಿತ್ತು. ನಾವುಗಳು ಅಂತಹ ದಪ್ಪ ಬಟ್ಟೆಯನ್ನುಟ್ಟು ಹೊರಗೆ ಹೋಗುವುದಕ್ಕೆ ಲಾಯಕ್ಕಾಗಿ ಕಾಣಿಸುವುದೇ ಇಲ್ಲ. ಮಹಿಳೆಯರು ತಮ್ಮ ಕುಶಲತೆಯಿಂದ ಖಾದಿಯನ್ನು ಸ್ವೀಕರಿಸಿದರು. ಆದರೆ ಗಂಡಸರು ೨೬ ಇಂಚು ಪನ್ನದ ಪಂಚೆಯನ್ನು ಉಡುವುದು ಕಷ್ಟವಾಗಿತ್ತು. ಗಾಂಧೀಜಿ ಈ ಅಭಾವದಿಂದ ದಿಗಿಲುಪಟ್ಟರು. ಅವರು ಶುದ್ಧ ಖಾದಿಧಾರಿ ಆಗಬೇಕು ಅಂತ ಬಹಳ ಬಯಸಿದ್ದವರು. ಅವರು ಪಾಪ ಆ ಗಂಗಾಬಹನ್‌ಗೆ ಒಂದು ತಿಂಗಳ ಅವಧಿಯಲ್ಲಿ ೫೦ ಇಂಚ್ ಪನ್ನದ ಪಂಚೆಗೆ ಅರ್ಹವಾದ ಖಾದಿ ಸಿದ್ಧಪಡಿಸುವ ಹಾಗೆ, ಅದಿಲ್ಲದಿದ್ದರೆ ೨೬ ಇಂಚಿನ ಲಂಗೋಟಿಯನ್ನೇ ಕಟ್ಟಿಕೊಳ್ಳುವೆನೆಂದು ನೋಟೀಸ್ ಕೊಟ್ಟರು. ೫೦ ಇಂಚಿನ ಮಗ್ಗ ಸಿಗುವುದು ಕಷ್ಟವಾದರೂ ಗಂಗಾಬಹನ್ ಮಜೂಮದಾರ್ ಗಂಡಸರ ಇಂತಹ ಬೇಡಿಕೆಗೆ ಹೆದರುವವಳಾಗಿರಲಿಲ್ಲ. ಆಕೆ ಬಹಳ ಸಮರ್ಥಳಾಗಿದ್ದ ಮಹಿಳೆ. ಬಹುಶಃ ಎಲ್ಲಿಂದಲೋ ೫೦ ಇಂಚಿನ ಮಗ್ಗ ತಂದಳೋ ಅಥವಾ ಬೊಂಬಾಯಿಂದ ಮಾಡಿಸಿ ತಂದಳೋ, ಒಂದು ತಿಂಗಳು ಕಳೆಯುವುದರೊಳಗಾಗಿ ಗಾಂಧೀಜಿಗೆ ೫೦ ಇಂಚಿನ ಖಾದಿ ಪಂಚೆ ಸಿಕ್ಕಿತ್ತು. ೧೯೨೦ರ ವರೆಗೂ ಚರಖಾ ಮತ್ತು ಕರಘಾ ಇವೆರಡರಲ್ಲೂ ಸಾಕಷ್ಟು ಸುಧಾರಣೆಗಳಾದವು. ಅವರ ಯಂತ್ರ – ಕೀಲುಗಳು ಆಶ್ರಮದ ಕಾರ್ಯಾಗಾರದಲ್ಲಿ ಮಾಡತೊಡಗಿದರು. ಎಲ್ಲ ಆಶ್ರಮವಾಸಿಗಳು ಆಶ್ರಮ ಪ್ರೇಮಿ ಜನರು ಚರಖಾ ತಿರುಗಿಸುವುದನ್ನು ಕಲಿತರು. ಕಾಂಗ್ರೆಸ್ ಅಧಿವೇಶನಗಳಲ್ಲೂ ಗಾಂಧೀಜಿ ತಮ್ಮ ಜೊತೆ ಚರಖಾವನ್ನು ತೆಗೆದುಕೊಂಡು ಹೋಗುತ್ತಿದ್ದರು. ನೂಲು ತೆಗೆಯದೆ ಊಟ ಮಾಡುವುದಿಲ್ಲವೆಂದು ಗಾಂಧೀಜಿ ನಿಯಮವನ್ನೇ ಮಾಡಿಕೊಂಡಿದ್ದರು. ನಿಧಾನವಾಗಿ ಖಾದಿ ಪ್ರಚಾರ ಹೆಚ್ಚಾಯಿತು. ಮೊದಲು ಮುಖಂಡರು ಖಾದಿಯನ್ನು ತಮ್ಮದಾಗಿಸಿಕೊಂಡರು. ಅನಂತರ ದೇಶದಲ್ಲಿ ಎಲ್ಲೆಡೆ ಖಾದಿ ಸಂಚರಿಸತೊಡಗಿತು. ಆಗ ಗಾಂಧೀಜಿ ಅಖಿಲ ಭಾರತೀಯ ಚರಖಾ ಸಂಘವನ್ನೇ ಸ್ಥಾಪಿಸಿದರು. ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ, ಮಣಿಪುರದಿಂದ – ಅಸ್ಸಾಂನಿಂದ ಕಠಿಯಾವಾಡಿ ಮತ್ತು ಉತ್ತರ ಪಶ್ಚಿಮದಲ್ಲಿ ಸೀಮಾಂತ ಪ್ರದೇಶದಲ್ಲಿ ಖಾದಿ ಉತ್ಪಾದನೆ ಮತ್ತು ವಿತರಣ ಕೇಂದ್ರಗಳು ಸುಮಾರು ದೇಶದಲ್ಲಿ ಎಲ್ಲ ಕಡೆ ಸ್ಥಾಪಿತವಾದವು. ಖಾದಿ ತೊಡುವುದು ಒಂದು ಫ್ಯಾಷನ್ ಆಯಿತು ಮತ್ತು ಸ್ವಾತಂತ್ರ್ಯಾಂದೋಳನದ ಬಲಶಾಲಿ ಸಾಧನವಾಯಿತು. ಅದು ಬಿಳಿ ಖಾದಿ ಬಟ್ಟೆ ಮತ್ತು ಬಿಳಿ ಟೋಪಿ ಸಭ್ಯರ ಉಡುಪಾಯಿತು. ಗಾಂಧೀಜಿ ಬಹಳ ವಿಚಾರ ಮಾಡಿ ಬಿಳಿ ಟೋಪಿಯ ಪ್ರಚಾರ ಮಾಡಿದ್ದರು. ಬಿಳಿ ಬಣ್ಣ ಬೇಗ ಕೊಳಕಾಗಿ ಕಾಣುವುದರಿಂದ ಸ್ವಚ್ಛವಾಗಿ ಕಾಣುವುದಕ್ಕೋಸ್ಕರ ತಕ್ಷಣ ಒಗೆಯಬೇಕಾಗುತ್ತದೆ.

ಇದರಿಂದ ಸ್ವಚ್ಛತೆಯ ಅಭ್ಯಾಸವಾಗುತ್ತದೆ ಮತ್ತು ಕೊಳಕನ್ನು ಮುಚ್ಚಿಡುವ ಕೆಟ್ಟ ಆಚರಣೆಯಿಂದಲೂ ಉಳಿದುಕೊಳ್ಳುತ್ತಾರೆ. ಕೊಳಕನ್ನು ಮುಚ್ಚಿಡುವುದು ಕೂಡ ಒಂದು ತೆರನಾದ ಅಸತ್ಯವೇ, ಬಿಳಿ ಟೋಪಿ ಅನಾಯಾಸವಾಗಿ ಜನರನ್ನು ಅಸತ್ಯದಿಂದ ಉಳಿಸುತ್ತದೆ. ಈ ಬಿಳಿಟೋಪಿಯನ್ನು ಜನರು ಗಾಂಧಿ ಟೋಪಿ ಎಂದು ಕರೆದು ದೇಶಪ್ರೇಮಿಗಳ ಯೂನಿಫಾರ್ಮ್ ಆಯಿತು. ಖಾದಿಯ ಈ ವಿಕಾಸಕ್ಕೆ ವಿನೋಬಾರವರು ತುಂಬಾ ಸಹಕಾರ ನೀಡಿದರು. ಎಲ್ಲರಿಗಿಂತಲೂ ಶ್ರೇಷ್ಠವಾದ ಮತ್ತು ಅತಿ ಹೆಚ್ಚು ನೂಲನ್ನು ಅವರು ತೆಗೆಯುತ್ತಿದ್ದರು. ಅವರು ಪುಟ್ಟ ತಕಲಿಯನ್ನು ತಮ್ಮದಾಗಿಸಿಕೊಂಡರು. ತಕಲಿಯ ಮಿನಿಪೋರ್ಟೆಬಲ್ ಚರಖಾವನ್ನೂ ಮಾಡಿಕೊಂಡರು. ಅವರಲ್ಲಿ ವಿನೋಬಾಜಿ ತನಗೆ ಅಗತ್ಯವಿದ್ದಷ್ಟು ಬಟ್ಟೆಯನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು.

೧೯೨೪ರ ನಂತರ ಖಾದಿ ಪ್ರಚಾರಕ್ಕಾಗಿಯೇ ವಿಶೇಷವಾಗಿ ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆವರೆಗೆ ಯಾತ್ರೆ ಮಾಡಿದರು. ದೂರ–ದೂರದ ಪ್ರಾಂತಗಳಲ್ಲಿ ಚಿಕ್ಕ ಚಿಕ್ಕ ಕಸಬಾ (ಊರು) ಗಳಿಗೂ ಹೋಗಿ ಅಲ್ಲಿ ಖಾದಿಯನ್ನು ಸ್ಥಾಪಿಸಿದರು. ಪ್ರತಿಯೊಂದು ಕಡೆಯೂ ಖಾದಿ ಉದ್ಯೋಗ ನಡೆಯಿತು. ಕೋಟ್ಯಂತರ ಜನರಿಗೆ ಖಾದಿ ತೊಡುವುದನ್ನು ಕಲಿಸಿಕೊಟ್ಟರು. ೧೨೦೦ ಗಜ ನೂಲು ನೂತು ಜಮಾ ಮಾಡಿದ ನಂತರವೇ ಯಾರಿಗೂ ಸದಸ್ಯತ್ವ ಸಿಗುವ ನಿಯಮವನ್ನು ಜಾರಿಗೆ ತಂದರು. ಎಷ್ಟೋ ವರ್ಷಗಳವರೆಗೆ ಈ ನಿಯಮ ಪಾಲನೆ ನಡೆಯಿತು. ಕಾಂಗ್ರೆಸ್ ಅಧಿವೇಶನದಲ್ಲಿ ಸಂದರ್ಭದಲ್ಲಿ ಸಾವಿರಾರು ಚರಖಾಗಳು ತಿರುಗಿ ಮಣಗಳ ಗಟ್ಟಲೆ ಸದಸ್ಯತ್ವದ ನೂಲೆಳೆಗಳು ಪಂಡಾಲಿನಲ್ಲಿ ಜಮಾ ಆಗುತ್ತಿತ್ತು. ಒಂದು ಚಿಕ್ಕ ಬೆಟ್ಟದ ರೀತಿ ಅದು ಕಾಣಿಸುತ್ತಿತ್ತು. ಇಲ್ಲಿಯವರೆಗೂ ಮಳೆಗಾಲ ನಿಂತ ನಂತರ ಮನೆಯಲ್ಲಿ ಬೀಡಿ ಸೇದುತ್ತಾ ಕೆಲಸವಿಲ್ಲದೆ ಮನೆಯಲ್ಲಿ ಕುಳಿತುಕೊಂಡು ಜಗಳ ಜಂಜಾಟಗಳಲ್ಲಿ ಸಿಲುಕಿರುತ್ತಿದ್ದ ರೈತರು ಈಗ ಬೆಳಗು ಬೆಳಗು ಚರಖಾ ನಡೆಸತೊಡಗಿದರು. ಅವರ ಮನೆಯ ಹೆಂಗಸರು ಚರಖಾ ನಡೆಸಿ ಸಮಯ ಸಿಕ್ಕಾಗೆಲ್ಲ ದೊಡ್ಡ ವಯಸ್ಸಿನ ಮಹಿಳೆಯರನ್ನು ಕರೆದುಕೊಂಡು, ಮಕ್ಕಳು ಕೂಡ ಚರಖಾ ನಡೆಸಲು ಶುರು ಮಾಡುತ್ತಿದ್ದರು. ಹೀಗೆ ಈ ಹೊಲದ ಕೆಲಸಗಾರರು ಮತ್ತು ಚಿಕ್ಕ ರೈತರ ಸಂಪಾದನೆ ಹೆಚ್ಚಾಯಿತು. ಅವರ ಜೀವನ ವಿಧಾನದಲ್ಲಿ ಉತ್ತಮ ಪರಿವರ್ತನೆ ಕಂಡುಬಂತು. ಬಡಮಕ್ಕಳಿಗೂ ಸ್ವಲ್ಪ ಹಾಲು ಹೊಟ್ಟೆ ತುಂಬಾ ದವಸ ಧಾನ್ಯ ಸಿಗತೊಡಗಿತು. ಈ ಖಾದಿ ಪ್ರಚಾರದಿಂದಾಗಿ ಬ್ರಿಟಿಷ್ ರಾಜ್ಯ ಬಹಳ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿತು. ಲಂಕಾಷೈರ್ ಮತ್ತು ಮ್ಯಾಂಚೆಸ್ಟರ್‌ನ ಮಿಲ್ಲುಗಳ ರಫ್ತು ಕಡಿಮೆಯಾಗಿ ಮುಚ್ಚತೊಡಗಿದವು. ಆ ಮಿಲ್ಲುಗಳಲ್ಲಿ ಮಾಡಿದ ವಸ್ತುಗಳ ವಿಲೇವಾರಿ ಕಡಿಮೆಯಾಗಿ ಬ್ರಿಟನ್ನಿನ ಸಮೃದ್ಧಿಗೆ ದೊಡ್ಡ ಪೆಟ್ಟು ತಗಲಿತು.

ಈ ಖಾದಿ ಆಂದೋಲನದ ಶುಭ ಪರಿಣಾಮ ಸ್ವಾತಂತ್ರ್ಯದಲ್ಲಿ ಕಾಣಿಸಿತು, ಬ್ರಿಟಿಷ್ ರಾಜ್ಯದ ಅವನತಿ ಆರಂಭವಾಯಿತು. ಇಂದು ಇಂಗ್ಲೆಂಡಿನ ಮೂರನೆ ದರ್ಜೆಯ ಮಧ್ಯಮ ವರ್ಗದ ಚಿಕ್ಕದೇಶವಾಗಿ ಉಳಿದಿದೆ. ಅದರ ರಾಜ್ಯ ಕಾಂತಿ ಗೌರವ, ವೈಭವ ಎಲ್ಲಾ ಮಾಯವಾಗಿದೆ. ಅದಕ್ಕೆ ಮೂಲ ಕಾರಣ ಈ ಖಾದಿ ಪ್ರಚಾರವೇ ಆಗಿತ್ತು.

ಇಂದು ಎಲ್ಲೆಲ್ಲೂ ಜನ ಖಾದಿ ಇವತ್ತು ಎಷ್ಟು ಪ್ರಾಸಂಗಿಕವಾಗಿದೆ ಎಂದು ಪ್ರಶ್ನೆ ಕೇಳುತ್ತಾರೆ. ನಮ್ಮ ಸ್ವತಂತ್ರ ದೇಶದ ನಮ್ಮ ಮಿಲ್‌ಗಳಲ್ಲಿ ತಯಾರಾಗುವ ಬಟ್ಟೆ ಕೂಡ ಸ್ವದೇಶಿಯೇ, ಖಾದಿಗೆ ಸಮವಾಗಿಯೇ ಇದೆ ಎಂದು ಹೇಳುತ್ತಾರೆ. ಗುಲಾಮಗಿರಿಯ ದಿನಗಳಲ್ಲಿ ವಿದೇಶಿಬಟ್ಟೆಗಳನ್ನು ಬಹಿಷ್ಕರಿಸುವುದು ಯೋಗ್ಯವಾಗಿತ್ತು. ಆದರೆ ಸ್ವತಂತ್ರ ದೇಶದಲ್ಲಿ, ಖಾದಿಯ ಹಠ ಅರ್ಥವಿಲ್ಲದ್ದು, ಖಾದಿಯ ಉಪಯೋಗದಲ್ಲಿ ಭಾವುಕತೆ ಬಿಟ್ಟರೆ ಇವತ್ತು ಅದರ ಉಪಯೋಗ ಏನೂ ಇಲ್ಲ ಅನ್ನುತ್ತಾರೆ. ಖಾದಿಯ ವಿಕಾಸಕ್ಕಾಗಿ ಸರಕಾರ ಕೂಡ ಒಮ್ಮೆ ಶೇ. ೩೦–೪೦ ರಷ್ಟು ರಿಯಾಯಿತಿಯನ್ನು ನೀಡುತ್ತದೆ. ಗಾಂಧೀಜಿ ಹೆಸರಿನಲ್ಲಿ ಅಷ್ಟು ದಾನ ಮಾಡುತ್ತೆ, ಈ ರಿಯಾಯಿತಿಯ ನೆಪದಲ್ಲಿ ಬೇಕಾದಷ್ಟು ತಿರುಗ–ಮುರುಗ ಮಾಡ್ತಾರೆ. ಮಿಲ್‌ದಾರದ ಖಾದಿಯನ್ನು ಮಾರುತ್ತಾರೆ. ಕೆಲವು ಕಡೆಯಂತೂ ಕಾಗದದಲ್ಲಿ ಮಾತ್ರ ಖಾದಿ ಅಂತ ಬರೆದಿರುತ್ತಾರೆ. ಸರಕಾರದಿಂದ ರಿಬೇಟ್ ವಸೂಲು ಮಾಡಿಕೊಳ್ತಾರೆ, ಹೀಗೆ ಖಾದಿ ಹೆಸರು ಹೇಳಿ ಎಲ್ಲಾ ತರಹೆಯಲ್ಲೂ ಹಣ ತಿಂದು ಹಾಕುತ್ತಾರೆ. ಗಾಂಧೀಜಿ ಹೆಸರಿನಲ್ಲಿ ಖಾದಿಯ ಗಂಗಾ ಪ್ರವಾಹದಲ್ಲಿ ಎಷ್ಟು ಹಣ ಹೊಡೆದರೆ ಅಷ್ಟೇ ಲಾಭ ಅಂತ ಜನ ಯೋಚಿಸುತ್ತಾರೆ. ಒಂದೊಂದು ಸಾರಿ ಇದನ್ನೆಲ್ಲಾ ನೋಡಿ ದುಃಖವಾಗುತ್ತೆ. ಖಾದಿಯನ್ನು ತ್ಯಜಿಸಿದರೆ ಕೊನೆಯ ಪಕ್ಷ ಅಧರ್ಮದ ಜೊತೆ ಸಂಬಂಧವಾದರೂ ಕಳೆಯುತ್ತೆ ಅಂತ ಅಂದುಕೊಳ್ಳುತ್ತೇನೆ. ಖಾದಿ ಜೊತೆ ನಾವು ಹುಟ್ಟಿರುವುದರಿಂದ ಅದರ ಜೊತೆ ಹುಟ್ಟಿದ ಪ್ರೇಮ ನಮಗೆ ಇದೆ ಅನ್ನುವುದು ನಿಜವಿರಬಹುದು. ಆದರೆ ಗಂಭೀರವಾಗಿ ಯೋಚಿಸಿ ನೋಡಿದರೆ ಸ್ವಾತಂತ್ರ್ಯ ಸಿಕ್ಕ ಮೇಲೆ ಕೂಡ ಖಾದಿಯ ನಿಜವಾದ ಉಪಯೋಗ ಕಡಿಮೆಯಾಗಿಲ್ಲ ಅಂತ ನನಗೆ ಅನ್ನಿಸುತ್ತದೆ. ಅದರ ಮಹತ್ವ ಇನ್ನೂ ಹೆಚ್ಚಾಗಿದೆ ಅಂತ ಹೇಳಬಹುದು.

ಖಾದಿ ದೇಶದ ಪರಮ ಹಿತದ ಸಾಧನೆ ಹೇಗೆ ಏಕೆ ಆಗಿದೆ ? ಅಂದಾಗ ಗಾಂಧೀಜಿ ಎಷ್ಟೋ ಸಾರಿ ಬರೆದಿದ್ದಾರೆ.

ನೂಲು ತೆಗೆಯುವುದು ಮತ್ತು ಖಾದಿಯ ಉಪಯೋಗ ಈ ಕೆಳಕಂಡಂತಿವೆ:
ಕೆಲಸವಿಲ್ಲದ ಬಡವ ನಾಲ್ಕು ಕಾಸು ಸಂಪಾದಿಸಬೇಕು ಅಂದರೆ ಅವನಿಗೆ ಖಾದಿ ಒಂದು ಶ್ರೇಷ್ಠ ಉದ್ಯೋಗ.
ಲಕ್ಷಾಂತರ ಜನಗಳಿಗೆ ನೂಲಲು ಬರುತ್ತದೆ

ತಕ್ಷಣ ಕಲಿತುಕೊಳ್ಳಬಹುದು
ನೂಲುವ ಕೆಲಸಕ್ಕೆ ಅತಿ ಕಡಿಮೆ ಹಣ ಇದ್ದರೂ ಸಾಕಾಗುತ್ತದೆ.
ಚರಖಾನ ಬಹಳ ಸುಲಭವಾಗಿ ಮಾಡಬಹುದು.
ನೂಲುವುದನ್ನು ಯಾರೂ ತಿರಸ್ಕರಿಸುವುದಿಲ್ಲ.
ಕ್ಷಾಮದ ಕಾಲದಲ್ಲಿ ಚರಖಾ ಉತ್ತಮವಾದ ಪರಿಹಾರ ಕಾರ್ಯವಾಗಬಲ್ಲದು.
ಚರಖಾದಿಂದಲೇ ಹಳ್ಳಿಯ ಹಣ ಹಳ್ಳಿಯಲ್ಲೇ ಉಳಿಯುವ ಹಾಗೆ ಮಾಡಬಹುದು.
ಚರಖಾದಿಂದ ಸಿಕ್ಕ ಪುಟ್ಟ ಸಫಲತೆಯಿಂದ ಲಕ್ಷಾಂತರ ಮಂದಿಗೆ ಲಾಭ ಸಿಗುವ ಸಾಧ್ಯತೆ ಇದೆ.
ಸಹಯೋಗ ಮತ್ತು ಸಹಕಾರದ ಅತ್ಯುತ್ತಮ ಸಾಧನ ಇದು.

ಮೇಲೆ ಬರೆದಿರುವ ಈ ಸತ್ಯಾಂಶಗಳನ್ನು ಇವತ್ತಿನ ದಿನ ಕೂಡ ಯಾರೂ ತಳ್ಳಿಹಾಕುವಂತಿಲ್ಲ.

ಸ್ವಾತಂತ್ರ್ಯ ಸಿಗುವುದಕ್ಕೆ ಮುಂಚೆ ಅವಿಭಾಜ್ಯವಾಗಿದ್ದ ಈ ದೇಶದಲ್ಲಿ ೩೩ ಕೋಟಿಯ ಜನಸಂಖ್ಯೆ ಇತ್ತು. ಪ್ರತಿ ವರ್ಷ ನಮ್ಮ ದೇಶದ ಜನಸಂಖ್ಯೆ ಶೇಕಡಾ ೨ ರಷ್ಟು ಹೆಚ್ಚಾಗುತ್ತಿದೆ. ನಿರುದ್ಯೋಗದ ಪ್ರಮಾಣ ಕೂಡ ಹೆಚ್ಚಾಗುತ್ತಿದೆ ಪ್ರತಿವರ್ಷ ಹೆಚ್ಚು ಹೆಚ್ಚು ಜನ ಬಡತನದ ರೇಖೆಗಿಂತ ಕೆಳಕ್ಕೆ ಹೋಗುತ್ತಿದ್ದಾರೆ. ರೂಪಾಯಿನ ಬೆಲೆ ೪ ಪೈಸಾಗಳಷ್ಟು ಆಗಿ ಉಳಿದಿದೆ. ಇದೆಲ್ಲವೂ ಹಣದುಬ್ಬರದ ಪರಿಣಾಮಗಳು ಬಡತನ ಹೆಚ್ಚಾಗುತ್ತಿದೆ. ಅದಕ್ಕೆ ಕಾರಣವೆಂದರೆ ಉತ್ಪಾದನೆ ಪರಿಶ್ರಮ ತೀರ ಕಡಿಮೆ, ಅದರಿಂದ ಕಾಳಸಂತೆ, ಕಪ್ಪು ಹಣ, ಅದರ ಫಲವಾಗಿ ಎಷ್ಟೋ ಸಾಮಾಜಿಕ ದೋಷಗಳು ಹೆಚ್ಚಾಗುತ್ತಿವೆ. ಕೆಲಸಗಳೇ ಇಲ್ಲದೆ ಹಳ್ಳಿಗಳು ಖಾಲಿಯಾಗುತ್ತಿವೆ ನಗರಗಳಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದೆ. ಈ ಸಾಮಾಜಿಕ ಅಸಮತೋಲನದ ಅವ್ಯವಸ್ಥೆ, ಅಶಾಂತ ಅರಾಜಕತೆ ಉಂಟಾಗಿದೆ. ಹಣದ ಕೊರತೆ, ನಿರುದ್ಯೋಗ, ಇವು ಇಂತಹ ವಿಷಮ ಪರಿಸ್ಥಿತಿ ಉಂಟಾಗಲು ಕಾರಣ. ಉತ್ಪಾದನೆಯನ್ನು ಹೆಚ್ಚಿಸಿ ಜನರಿಗೆ ಕೆಲಸ ಕೊಟ್ಟು ಮಾತ್ರ ಇಂತಹ ಪರಿಸ್ಥಿತಿಯನ್ನ ನೀಗಬಹುದು. ಖಾದಿಯೇ ಇದಕ್ಕೆ ಸರಿಯಾದ, ಶುದ್ಧವಾದ ಪರಿಹಾರ ನೀಡಬಲ್ಲುದು, ಪ್ರಾಮಾಣಿಕತೆಯಿಂದ ಖಾದಿ ಉತ್ಪಾದನೆ ಆದರೆ, ಪುನಃ ಮನೆಗಳಲ್ಲಿ ಚರಖಾ ತಿರುಗತೊಡಗಿ, ನೂಲು ತೆಗೆಯುವವರಿಗೆ ಹಣಕ್ಕೆ ಬದಲಾಗಿ ಸಾಬೂನು, ಅದು–ಇದು ಕೊಡದೆ ಅವರಿಗೆ ಪೂರ್ತಿ ಹಣ ಕೊಟ್ಟರೆ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಖಾದಿ ಉತ್ಪನ್ನಗಳಿಂದ ಹಳ್ಳಿಗಳು ಪುನಃ ನೆಲಸುತ್ತವೆ. ರೈತರು ಅವರ ಮಕ್ಕಳು ಸ್ವಾಭಿಮಾನದೊಂದಿಗೆ ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳಬಹುದು. ಮಿಕ್ಕ ಉತ್ಪತ್ತಿಯಲ್ಲಿ ಲಾಭ ಗಳಿಸಿಕೊಳ್ಳಲಾಗುತ್ತದೆ, ಆಗ ಇವತ್ತಿನ ಯುವಕ ಉದ್ಯೋಗಕ್ಕಾಗಿ ಅಲೆಯುವುದೂ

ಇಲ್ಲ ಚರಖಾವನ್ನು ತಿರುಗಿಸಿಕೊಳ್ಳಬಲ್ಲ, ಬೀದಿ ಮೂಲೆಯಲ್ಲಿರುವ ಪಾನ್‌ವಾಲಾ ಹತ್ತಿರವಾಗಲಿ, ಹೆಂಡದ ಪಡಖಾನೆಯಲ್ಲಿ ಕೆಟ್ಟ ಅಭ್ಯಾಸಗಳಿಗೆ ಗುರಿಯಾಗುವುದು ಇದೆಲ್ಲಾ ತಪ್ಪುತ್ತೆ. ಸುಮ್ಮ–ಸುಮ್ಮನೆ ಕೆಟ್ಟ ಕೆಲಸಗಳನ್ನು ಮಾಡಿ ಸಿಕ್ಕಿಹಾಕಿಕೊಳ್ಳುವುದಕ್ಕೆ ಅವರಿಗೆ ಪುರುಸೊತ್ತೇ ಸಿಗಲ್ಲ. ಆಗ ಯುವಕರು ಕಳ್ಳರು, ಗೂಂಡಾಗಳು ಇರುವ ಗುಂಪಿನಲ್ಲಿ ಸಿಕ್ಕಿಹಾಕಿಕೊಳ್ಳುವುದೂ ಇಲ್ಲ, ಪ್ರಾಮಾಣಿಕವಾಗಿ ಸಂಪಾದಿಸುವುದರಲ್ಲಿ ತೊಡಗಿಸಿಕೊಳ್ಳುತ್ತಾರೆ. ತನ್ನ ಮೇಲೆ ನಿರ್ಭರವಾಗುವಂತಹ ಸಮೃದ್ಧಿಯಿಂದ ಮಾತ್ರ ಸಮಾಜದಲ್ಲಿ ಶಾಂತಿ, ಸಮತೋಲನ ಸಮನ್ವಯ ನಿರ್ಮಾಣವಾಗುತ್ತೆ.

ಸಮಾಜದ ತೀವ್ರ ಸಮಸ್ಯೆ ಬಡತನವಲ್ಲ, ನಿರುದ್ಯೋಗ. ನಿರುದ್ಯೋಗದಿಂದ ಕಷ್ಟಗಳು, ಅದರಿಂದ ದಂಗೆ ಆಗುತ್ತೆ. ನಿರುದ್ಯೋಗ ದೂರವಾದರೆ ಬಡತನ ಸಹಜವಾಗಿ ದೂರವಾಗುತ್ತೆ, ನಮ್ಮ ದೇಶದಲ್ಲಿ ಬಡತನ ಭಯಂಕರ ಸ್ವರೂಪದ್ದಾಗಿದೆ. ಚರಖಾ ಆ ನಿರುದ್ಯೋಗವನ್ನು ನಾಶಮಾಡುವ ಪರಿಹಾರವಾಗುತ್ತೆ, ಬೆಳ್ಳಿ ನಾಣ್ಯ, ನೂರು ರೂಪಾಯಿಗಳ ನೋಟು ಇವೆಲ್ಲಾ ಐಶ್ವರ್ಯದ ಸಂಕೇತಗಳು, ನಿಜ. ಆದರೆ ಅದು ಸಂಪತ್ತಲ್ಲ, ಪರಿಶ್ರಮದ ಸಂಗ್ರಹಕ್ಕೆ ಸಂಪತ್ತು ಅಂತ ಹೇಳುತ್ತಾರೆ. ಅದನ್ನು ನಾವು ನೋಟುಗಳನ್ನು ಕೊಟ್ಟು ಕೊಳ್ಳಲು ಪ್ರಯತ್ನಿಸುತ್ತೇವೆ.

ಅದರಿಂದ ಜನರಿಗೆ ಉದ್ಯೋಗ ಸಿಕ್ಕಿ ಮರ್ಯಾದೆಯಿಂದ ಸಂಪಾದಿಸುವ ಮಾರ್ಗ ಸಿಕ್ಕರೆ ಲಕ್ಷಾಂತರ ಜನ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಬಹುದು. ಅವಶ್ಯಕತೆಗಳನ್ನ ಪೂರೈಸುವ ಪದಾರ್ಥವೇ ಸಂಪತ್ತು ಆಗುತ್ತೆ. ಚರಖಾ ಹಾಗೆ ಸಂಪಾದಿಸುವ ಸುಗಮವಾದ ಸಾಧನವಾದ್ದರಿಂದ ಸ್ವಾತಂತ್ರ್ಯಪೂರ್ವಕಾಲದ ಹಾಗೆ ಇವತ್ತು ಕೂಡ ಚರಖಾ ಅವಶ್ಯಕತೆ ಇದೆ. ಹೋಟೆಲಿನ ಊಟ ಕಡಿಮೆ ಬೆಲೆಯದ್ದೂ ಆಗಲ್ಲ, ಅದರಿಂದ ಯಾವ ಲಾಭವೂ ಸಿಗಲ್ಲ. ಅದೇ ರೀತಿ ಹೊರಗಿನಿಂದ ಕೊಂಡ ಬಟ್ಟೆ ನಮಗೆ ಎಂದೂ ಲಾಭದಾಯಕವಾಗಿರಲಿಲ್ಲ. ಗೃಹಿಣಿಯರು ಮನೆಯಲ್ಲಿ ಹಣದ ಚರ್ಚೆ ನಡೆಸದೇ ಅಡುಗೆ ಮಾಡುವ ಹಾಗೆಯೇ ಮನೆಯಲ್ಲಿ ಬಟ್ಟೆಯ ಉತ್ಪಾದನೆ ಕೂಡ ನಡೆಯಬಲ್ಲದು. ಗೃಹಿಣಿ ಮಾಡಿದ ಅಡಿಗೆ ಜೊತೆ ಹೋಟೆಲ್ ಎಂದೂ ಸ್ಪರ್ಧಿಸುವುದಕ್ಕಾಗುವುದಿಲ್ಲ. ಸ್ವಲ್ಪ ಪ್ರಯತ್ನ ಪಟ್ಟರೆ ಸಾಕು, ಪ್ರತಿಯೊಬ್ಬನೂ ಚರಖಾ ನಡೆಸಬಹುದು. ಹಳ್ಳಿಯ ಉತ್ಪನ್ನಗಳ ಮೇಲೆಯೇ ನಗರಗಳ ಆರ್ಥಿಕ ಸ್ಥಿತಿ ಆಶ್ರಿತವಾಗಿರುತ್ತದೆ. ಅದರಿಂದ ಪಟ್ಟಣದ ಜನ ಪುರಸೊತ್ತು ಮಾಡಿಕೊಂಡು ಚರಖಾ ನಡೆಸಲೇಬೇಕು. ದೇಶದ ಅತಿ ದೊಡ್ಡ ಮಧ್ಯಮ ವರ್ಗ ಚರಖಾ ತಿರುಗಿಸತೊಡಗಿದರೆ ಅವರ ಮರ್ಯಾದೆಯೂ ಹೆಚ್ಚಾಗುತ್ತೆ, ನಿರುದ್ಯೋಗ ಬಡತನ ಎಲ್ಲಾ ದೂರವಾಗುತ್ತೆ. ಚರಖಾ ತಿರುಗಿಸುವುದನ್ನು ಎಷ್ಟೋ ಜನ ಸೋಮಾರಿಗಳ ಕೆಲಸ, ವ್ಯರ್ಥದ ಕೆಲಸ ಅಂತ ತಿಳಿದಿದ್ದಾರೆ. ಯಂತ್ರಗಳು ಕಾರ್ಖಾನೆ ಇವುಗಳ ಮುಂದೆ ಚರಖಾ ಕೀಳಾಗಿ ಕಾಣಿಸಬಹುದು. ಆದರೆ ಇದು ಹಾಗೆ ಯೋಚಿಸುವವರ ದೃಷ್ಟಿ ಅಷ್ಟೆ. ಚರಖಾ ಗುಂಜಾರದಲ್ಲಿರುವ ಆತ್ಮೀಯತೆಯನ್ನು ಕಂಪ್ಯೂಟರ್

ಮುರಿಯಲಾಗುವುದಿಲ್ಲ. ದೇಶದ ಕೋಟ್ಯಂತರ ಜನರ ನಿರುದ್ಯೋಗವನ್ನು ದೂರಗೊಳಿಸಿ ಅವರಿಗೆ ಕೆಲಸ ಕೊಡಿಸುವ, ಹಣ ನೀಡುವ ಸರಳ ಸಾಧನವೆಂದರೆ ಅದು ಚರಖಾ ಮಾತ್ರ.

ಜನ ಚರಖಾ ತಿರುಗಿಸುವ ಕಡೆ, ಖಾದಿ ಉತ್ಪನ್ನಗಳಾಗುವ ಕಡೆ ಕಷ್ಟ ಪಡದೆ ಸಮಾಜದ ವ್ಯವಸ್ಥಿತವಾದ ಸಹಯೋಗ ಸಿಗುತ್ತೆ, ಸಂಘಟನೆ ಆಗುತ್ತೆ, ಖಾದಿ ಉತ್ಪಾದಿಸುವುದಕ್ಕೆ ಸಹಯೋಗ ಬೇಕಾಗುತ್ತೆ, ಸಮಾಜದಲ್ಲಿರುವ ಬೇರೆ ಬೇರೆ ಜಾತಿ ಧರ್ಮದ ಜನ ಉತ್ಪಾದನೆ ಮಾಡಿ ಜೊತೆ ಕೂಡಿಕೊಳ್ಳುತ್ತಾರೆ. ಇದರಿಂದಾಗಿ ಆತಂಕ ವೈಮನಸ್ಯ ಕಡಿಮೆಯಾಗುತ್ತೆ, ಸಂಘಟಿತವಾದ ಹಳ್ಳಿ ರಚಿತವಾಗುತ್ತೆ, ಖಾದಿ ಜೊತೆಗೆ ಮಿಕ್ಕ ಕರಕುಶಲ ಉದ್ಯೋಗಗಳಿಗೂ ಆಶ್ರಯ ಸಿಗುತ್ತೆ, ಆಗ ಸಹಜವಾಗಿ ಹಳ್ಳಿಯ ಆರ್ಥಿಕ ಸಾಮಾಜಿಕ ಸ್ಥಿತಿ ದೃಢವಾಗುತ್ತೆ, ಆ ರೀತಿ ಸ್ವಾವಲಂಬಿಯಾಗಿ ಪ್ರಬಲವಾಗಿರುವ ಸಮಾಜದ ಮೇಲೆ ಯಾರೂ ಆಕ್ರಮಣ ಮಾಡುವುದಕ್ಕಾಗುವುದಿಲ್ಲ. ಅದರಲ್ಲಿ ಒಡಕು ಹುಟ್ಟುಹಾಕುವುದಕ್ಕಾಗುವುದಿಲ್ಲ.

ಖಾದಿ ಉಡುವ–ತೊಡುವುದರಿಂದ ಇವತ್ತಿನ ಉಚ್ಚ ವರ್ಗಕ್ಕೆ ವಿಶೇಷವಾಗಿ ಲಾಭವಾಗುತ್ತೆ, ಸಮಾಜದಲ್ಲಿ ಉಗ್ರತೆ, ಅನ್ಯಾಯ ಹೆಚ್ಚಾಗುತ್ತಿದೆ ಅನ್ನುವ ಮಾತು ನಮಗೆ ಸದಾ ಕೇಳಿ ಬರುತ್ತಿರುತ್ತೆ, ಧನಿಕ ವರ್ಗದಲ್ಲಿ ಈ ಆತಂಕ ಬಹಳ ಹೆಚ್ಚಾಗಿದೆ. ಅದರಿಂದ ಮನೆಯ ಜನಗಳು–ಅದರಲ್ಲೂ ವಿಶೇಷವಾಗಿ ಮಹಿಳೆಯರು–ನಿದ್ರೆ ಮಾತ್ರೆಯನ್ನು ತೆಗೆದುಕೊಂಡು ಮಲಗುತ್ತಾರೆ. ಚರಖಾದ ಶಾಂತ, ಆರೋಗ್ಯಕರವಾದ ಧ್ವನಿಯಲ್ಲಿ ಮನಸ್ಸಿನ ಉದ್ವೇಗ, ಆತಂಕ ಇವುಗಳನ್ನು ನಮಗೆ ಗೊತ್ತಿಲ್ಲದ ಹಾಗೆ ದೂರ ಮಾಡುವ ಮೋಹಕ ಶಕ್ತಿ ಅಡಗಿದೆ.

ಹೀಗೆ ಖಾದಿಯ ಆರ್ಥಿಕ ಸಾಮಾಜಿಕ ಮಹತ್ವ ಈ ದಿನ ಬಹಳ ಹೆಚ್ಚಾಗಿದೆ. ಖಾದಿಯ ಭಾವನೆಯೇ ಅತಿಶ್ರೇಷ್ಠವಾದದ್ದು. ಖಾದಿಯನ್ನು ನಂಬುವ ಜನ ದೇಶಪ್ರೇಮಿಗಳಾಗಿರುತ್ತಾರೆ. ಕಾನೂನು ಶಾಂತಿಗೆ ಬೆಲೆಕೊಡುತ್ತಾರೆ, ಅದನ್ನು ಅನುಸರಿಸುತ್ತಾರೆ. ಅಂತಹ ಪ್ರಜೆಗಳು (ವಿದೇಶಗಳಿಂದ) ಕದ್ದು ತಂದ ಪದಾರ್ಥಗಳನ್ನು ಇಷ್ಟಪಡುವುದೂ ಇಲ್ಲ, ಕೊಂಡುಕೊಳ್ಳುವುದೂ ಇಲ್ಲ. ಸಹಜವಾಗಿ ಇದರಿಂದ ಕಪ್ಪು ವ್ಯಾಪಾರ, ಆರ್ಥಿಕ ಅಸಮಾನತೆಯಿಂದಾಗಿ ಆಗುವ ಅಪರಾಧಗಳು ಕಡಿಮೆಯಾಗುತ್ತೆ. ಸಮಾಜ ಆರೋಗ್ಯಕರವಾದ ರಚನಾತ್ಮಕ ಕಾರ್ಯಕ್ರಮಗಳ ದಿಕ್ಕಿನಲ್ಲಿ ಮುಂದುವರಿಯುತ್ತದೆ.

ಗಾಂಧೀಜಿ ಭಾದ್ರಪದ ಮಾಸದ ಕೃಷ್ಣಪಕ್ಷದಲ್ಲಿ ದ್ವಾದಶಿಯ ದಿನ ಹುಟ್ಟಿದ್ದರು. ಆ ದಿವಸ ಚರಖಾ ತಿರುಗಿಸುವದು, ನೂಲು ನೀಡಿ ಶ್ರದ್ಧಾಂಜಲಿ ನೀಡುವ ಕೆಲಸದಲ್ಲಿ ದೇಶದ ಜನ ಮುಂದಾಗುತ್ತಿದ್ದರು. ೧೯೬೪ರ ಜನವರಿವರೆಗೂ ನೆಹರೂಜೀ ಈ ಕ್ರಮವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದರು. ಪ್ರತಿವರ್ಷ

ಅಕ್ಟೋಬರ್ ೨, ರಂದು ಗಾಂಧೀಜಿಯವರ ನಿರ್ವಾಣದ ದಿನ ಜನವರಿ ೩೦ ರಂದು ಸಾಮೂಹಿಕ ಪ್ರಾರ್ಥನೆಯಾದ ನಂತರ ಪ್ರಧಾನ ಮಂತ್ರಿ ಜವಾಹರ್ ಲಾಲ ನೆಹರೂ ಸ್ವತಃ ಒಂದು ಗಂಟೆ ಕಾಲ ರಾಜಘಾಟ್‌ನಲ್ಲಿ ಸಾಮೂಹಿಕ ನೂಲು ಯಜ್ಞದಲ್ಲಿ ಭಾಗವಹಿಸುತ್ತಿದ್ದರು. ಇವತ್ತಿನ ಮಂತ್ರಿಗಳು ತಮ್ಮ ಸುರಕ್ಷತೆಯ ಚಿಂತೆಯಲ್ಲಿ ಕಮಾಂಡೋಗಳ ಮಧ್ಯೆ ಕುಳಿತಿರುತ್ತಾರೆ ಅಂತ ಅನ್ನುವ ಮಾತು ತೀರ ನಿರಾಶೆಯನ್ನುಂಟುಮಾಡುತ್ತದೆ. ರಾಜಘಾಟ್‌ನ ಪ್ರಾರ್ಥನ ಭೂಮಿಗೆ ಬಂದು ಅಲ್ಲಿ ಪತ್ರಕರ್ತರು ಅವರು ಫೋಟೋ ತೆಗೆಯುವವರೆಗೂ ಇದ್ದು, ಔಪಚಾರಿಕವಾಗಿ ಹಾಜರಿಕೊಟ್ಟು ಹೊರಟುಹೋಗುತ್ತಾರೆ. ಪಾಪ, ಅವರಿಗೆ ನೂಲುವುದಕ್ಕೆ ಬರುವುದೂ ಇಲ್ಲ, ಚರಖಾ ಅಂದರೆ ದೇಶದ ಬಡಜನರ ಜೊತೆ ಅವರಿಗೆ ಯಾವ ಸಾಮಂಜಸ್ಯ ಕೂಡಾ ಇಲ್ಲ. ನಿಷ್ಠೆ, ಪ್ರಜಾಹಿತದ ಪ್ರಾಮಾಣಿಕತೆಯ ಆ ದಿನಗಳು ಕಳೆದುಹೋದವು. 'ತೇಹಿನೋಃ ದಿವಸಾಃ ಗತಾಃ'.

ಆ ದಿನಗಳು ನಿಜವಾಗಿ ಕಳೆದುಹೋಗಿವೆ. ಹಾಗಾದರೆ ನಾವು ಸ್ವಾವಲಂಬನೆಯಿಂದ ಬಂದ ಉತ್ಸಾಹ ಆತ್ಮಸ್ಥೈರ್ಯ ಮತ್ತು ಪುರುಷಾರ್ಥವನ್ನು ಕಳೆದುಕೊಂಡು ಪುನರ್ಹ ಗುಲಾಮಗಿರಿಯಲ್ಲಿ ಸಿಲುಕಿಕೊಳ್ಳಬಯಸುತ್ತೇವೇನು? ನಮ್ಮ ತಂದೆ–ತಾಯಿಗಳು ನಮಗೆ ಸ್ವಾತಂತ್ರ್ಯ ನೀಡಿದರು. ನಾವು ಇವತ್ತು ನಮ್ಮ ಮಕ್ಕಳಿಗೆ ಅಪಮಾನ, ಆತ್ಮವಂಚನೆ ನಮಗೆ ನಾವೇ ಮೋಸ ಮಾಡಿಕೊಳ್ಳುವ ಹಳ್ಳಕ್ಕೆ ದೂಡಿಕೊಳ್ಳಬಯಸುತ್ತೇವೇನು? ಈ ಮೂಲಭೂತ ಪ್ರಶ್ನೆಗೆ ನಾವೆಲ್ಲರೂ ಉತ್ತರ ನೀಡಬೇಕು.

* * * *

# ೧೧. ಅಸಹಕಾರ ಚಳವಳಿ

೧೯೨೦ ರ ಆಗಸ್ಟ್ ೧ನೆಯ ತಾರೀಖು ಬೊಂಬಾಯಿಯಲ್ಲಿ ಲೋಕಮಾನ್ಯ ತಿಲಕರು ತೀರಿಕೊಂಡರು. ಅವರ ಶವಯಾತ್ರೆಯಲ್ಲಿ ಲಕ್ಷಾಂತರ ಜನ ಪಾಲ್ಗೊಂಡಿದ್ದರು. ನಮ್ಮ ಚಿಕ್ಕಪ್ಪ ದೇವದಾಸ ಗಾಂಧಿ ಹೇಳಿದ ಪ್ರಕಾರ ಅಂತಹ ದುಃಖ ಸಂತಪ್ತ ದೃಶ್ಯವನ್ನು ಬೊಂಬಾಯಿಯಲ್ಲಿ ಇದಕ್ಕೆ ಮೊದಲು ಯಾವಾಗಲೂ ಅವರು ನೋಡಿಯೇ ಇರಲಿಲ್ಲವಂತೆ. ಆಕಾಶ ಬಿರಿದು ಹೋಗುವ ಹಾಗೆ ಜನ ಕೂಗು ಹಾಕಿ ಲೋಕಮಾನ್ಯರ ಪಾರ್ಥಿವ ಶರೀರವನ್ನು ಚೌಪಾಟಿಯ ಮರಳಿನಲ್ಲಿ ಸಮುದ್ರದೆದುರು ಅಗ್ನಿದಾಹ ಮಾಡಲಾಯಿತು. ಎಂತಹ ಧೈರ್ಯಶಾಲಿಗಳೂ, ಗಂಭೀರ ವ್ಯಕ್ತಿತ್ವದ ಜನರ ಕಣ್ಣುಗಳಿಂದಲೂ ಕಣ್ಣೀರು ಧಾರೆಯಾಗಿ ಹರಿಯಿತು. ಸ್ವರಾಜ್ಯದ ಪ್ರಥಮ ಸೈನಿಕ ತೀರಿಕೊಂಡರು. ಆ ದಿನ ಗಾಂಧೀಜಿ ಬೊಂಬಾಯಲ್ಲೇ ಇದ್ದರು. ಪಟವರ್ಧನರು ಅರ್ಧರಾತ್ರಿ ವೇಳೆಯಲ್ಲಿ ಗಾಂಧೀಜಿಗೆ ಫೋನ್ ಮಾಡಿ ಈ ದುಃಖದಾಯಕ ಘಟನೆಯ ಸುದ್ದಿ ತಿಳಿಸಿದರು. ಗಾಂಧೀಜಿ ಸ್ತಬ್ಧರಾದರು, ಅವರ ಬಾಯಿಂದ 'ನನ್ನ ಆಸರೆ ಕಳೆದು ಹೋಯಿತು' ಎಂಬ ಮಾತು ಸಹಜವಾಗಿ ಹೊರಮೂಡಿದವು. ಗಾಂಧೀಜಿ ಹಾಗೂ ತಿಲಕರ ನಡುವೆ ಎಷ್ಟೋ ವಿಷಯಗಳಲ್ಲಿ ಒಮ್ಮತವಿರಲಿಲ್ಲ. ಆದರೆ ಅವರಿಬ್ಬರೂ ಪರಸ್ಪರವಾಗಿ ಶ್ರದ್ಧೆ-ನಂಬಿಕೆಯನ್ನಿಟ್ಟಿದ್ದರು. ದೇಶದಲ್ಲಿ ಮೊಟ್ಟ ಮೊದಲು 'ಸ್ವರಾಜ್ಯ ನನ್ನ ಜನ್ಮಸಿದ್ಧ ಅಧಿಕಾರ' ಎಂದು ಘೋಷಿಸಿದವರು ತಿಲಕರು. ಗಾಂಧೀಜಿಯವರ ವಿಲಕ್ಷಣತೆಯನ್ನು ಅವರು ಕಂಡುಕೊಂಡಿದ್ದರು. ಗೋಖಲೆಯವರ ಹಾಗೆಯೇ ತಿಲಕರೂ ಕೂಡ, ಅವರು ಬಲವಂತ ಮಾಡಿದ್ದರಿಂದ ಗಾಂಧೀಜಿ ಕಾಂಗ್ರೆಸ್ ಸಂವಿಧಾನವನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು. ತಿಲಕರೇ ಇಲ್ಲ ಅಂದ ಮೇಲೆ ಆ ಸಂವಿಧಾನವನ್ನು ಸರಿಯಾಗಿದೆ ಅಂತ ದೃಢೀಕರಿಸುವವರು ಯಾರು ಅಂತ ಗಾಂಧೀಜಿಗೆ ಅನ್ನಿಸಿತು. ತನ್ನ ಹಿರಿಯ ಮಿತ್ರ ತಿಲಕರಿಗೆ ತಾನು ಸಿದ್ಧಪಡಿಸಿದ ಸಂವಿಧಾನವನ್ನು ಅರ್ಪಿಸುತ್ತೇನೆ. ಸಂವಿಧಾನಕ್ಕೆ ತಿಲಕರ ಪ್ರತಿಕ್ರಿಯೆ ಹೇಗೆಯೇ ಇದ್ದರೂ ಅದನ್ನ ಉಪಹಾರ ಅಂತ ತಿಳಿದು ಸ್ವೀಕರಿಸುತ್ತೇನೆ ಅಂತ ಗಾಂಧೀಜಿ ಭಾವಿಸಿದ್ದರು. ಗಾಂಧೀಜಿ ನತಮಸ್ತಕರಾಗಬಹುದಾಗಿದ್ದ ಅಂತಹ ತೇಜಸ್ವಿಯಾದ ವ್ಯಕ್ತಿ ಯಾರೂ ಇನ್ನು ಉಳಿದಿರಲಿಲ್ಲ.

ತಿಲಕರ ನೆನಪಿನಲ್ಲಿ ಒಂದು ಲಕ್ಷ ರೂಪಾಯಿಗಳ ನಿಧಿ ಸಂಗ್ರಹಿಸಬೇಕೆಂದು

ಕಾಂಗ್ರೆಸ್ ನಿರ್ಣಯಿಸಿತು. ದೇಶದಲ್ಲಿ ಮಾಳವೀಯ ಅವರಂತೆ ನಿಧಿ ಸಂಗ್ರಹಿಸುವ ಬೇರೆ ಯಾವ ವ್ಯಕ್ತಿಯೂ ಇರಲಿಲ್ಲ. ಅವರನಂತರ ಗಾಂಧೀಜಿಯ ಸ್ಥಾನ ಬರುತ್ತಿತ್ತು. ಈ ದೊಡ್ಡ ನಿಧಿಯನ್ನು ಸಂಗ್ರಹಿಸುವ ಜವಾಬ್ದಾರಿಯನ್ನು ಸ್ವಾಭಾವಿಕವಾಗಿ ಗಾಂಧೀಜಿಗೆ ವಹಿಸಿದರು. ಬೇರೆ ಅವರು ಇಂತಿಂತಹ ಪ್ರಾಂತ್ಯದಿಂದ ಇಷ್ಟಿಷ್ಟು ನಿಧಿ ಸಂಗ್ರಹಿಸಬೇಕೆಂದು ಗಾಂಧೀಜಿ ನಿಶ್ಚಯಿಸಿದರು. ಮತ್ತೆ ದೇಶದಲ್ಲಿ ಎಲ್ಲಾ ಕಡೆ ಯಾತ್ರೆ ಮಾಡಿದರು. ಕಡುಬಡವ ಕೂಡ ಸ್ವರಾಜ್ಯ ಫಂಡ್‌ಗೆ ತನ್ನ ತಾಮ್ರದ ಕಾಸು ಕೊಟ್ಟು ಧನ್ಯವಾಗಲಿ ಅನ್ನುವುದು ಉದ್ದೇಶವಾಗಿತ್ತು. ಜನ ದಿವಂಗತ ಮುಖಂಡನ ನೆನಪಿನಲ್ಲಿ ಕೈ ತೊರೆದು ದಾನ ಮಾಡಿದರು. ೩೧ ಜುಲೈ ೧೯೨೧ ರಂದು ಗಾಂಧೀಜಿ ಪುನಃ ಬೊಂಬಾಯಿಗೆ ಬಂದರು. ರಾತ್ರಿ ಎಂಟು ಗಂಟೆಗೆ ದೇಶದ ಲೆಕ್ಕಗುಣಿತ ಜೋಡಿಸಿದರು, ಒಂದು ಕೋಟಿಗೆ ಹತ್ತು–ಹನ್ನೆರಡು ಲಕ್ಷ ಕಡಿಮೆ ಬೀಳುತ್ತಿತ್ತು. ಕೋಟಿಯ ಸಂಖ್ಯೆಯನ್ನು ತಲಪುವುದಕ್ಕಾಗುವುದಿಲ್ಲ ಅಂತ ಜನರಿಗೆ ಅನ್ನಿಸಿತು, ಕೊರತೆಯಾಗುತ್ತೆ, ಅನ್ನಿಸಿತು. ಆದರೆ ಗಾಂಧೀಜಿಗೆ ವಿಚಿತ್ರವಾದ ನಂಬಿಕೆ, ಅವರು ಹೇಳಿದರು– ಇನ್ನೂ ನಾಲ್ಕು ಗಂಟೆ ಬಾಕಿ ಇದೆ. ಈಗಲೇ ಖಾತೆ ಮುಚ್ಚಿ, ಬಿಡಬೇಡಿ ತಡೆಯಿರಿ. ರಾತ್ರಿ ಕಳೆಯುವುದರೊಳಗಾಗಿ ಕೋಟಿಯ ಗಲ್ಲಾ ತುಂಬುತ್ತೆ. ಅಂದ ಹಾಗೆ ದೇವರ ದಯೆ, ದೇಶದ ಜನರ ಪ್ರೀತಿ, ಆ ಕಾಲದಲ್ಲಿ ರಾತ್ರಿ ವೇಳೆಯಲ್ಲೂ ತಂತಿ ಬಂತು. 'ಬಂಗಾಳ ಸ್ವರಾಜ್ ಫಂಡ್‌ನಲ್ಲಿ ೧೫ ಲಕ್ಷ ರೂಪಾಯಿಗಳನ್ನು ತುಂಬುತ್ತೆ' ಅಂತ. ಕೋಟಿ ರೂಗಳ ನಿಧಿ ಜಮಾ ಆಯಿತು.

ಈ ಸಮಯದಲ್ಲೇ ಹಿಂದೂ–ಮುಸ್ಲಿಂ ಏಕತೆಯ ಸಮ್ಮೇಳನದಲ್ಲಿ ಗಾಂಧೀಜಿ ಮೊದಲ ಬಾರಿಗೆ 'ಅಸಹಯೋಗ (ಅಸಹಕಾರ)' ಎಂಬ ಪದವನ್ನು ಬಳಸಿ, ಜನರಿಗೆ ಅದರ ಅರ್ಥವನ್ನು ವಿವರಿಸಿದರು. ಆರಂಭದಲ್ಲಿ ಜನ ಈ ಶಬ್ದವನ್ನು ಗಮನಿಸಲಿಲ್ಲ. ಆದರೆ ೩–೪ ತಿಂಗಳುಗಳಲ್ಲೇ ದೇಶದ ಎಲ್ಲ ಕಡೆಗಳಿಂದಲೂ ಅಸಹಕಾರದ ಕೂಗೆಬ್ಬಿತು. ಅದರಲ್ಲಿ ಮೊಟ್ಟ ಮೊದಲು ಗುಜರಾತ್ ರಾಜಕೀಯ ಪರಿಷತ್ತಿನಲ್ಲಿ ಅಸಹಕಾರದ ಠರಾವನ್ನು ಅಂಗೀಕರಿಸಲಾಯಿತು.

ಪ್ರಾಂತ್ಯ ಸಭೆಗಳು ಈ ತೆರನಾದ ಗಂಭೀರ ವಿಷಯಗಳನ್ನು ತೆಗೆದುಕೊಂಡು ಮುಂದುವರಿಯುವುದು ಸರಿಯಾಗುವುದಿಲ್ಲವೆಂದು ಜನರಿಗೆ ಅನ್ನಿಸಿತು. ಹಿಂದಕ್ಕೆ ಹೋಗುವ ವಿಷಯಗಳಿಗೆ ಕೇಂದ್ರ ಸಂಸ್ಥೆಯ ಅನುಮತಿ ಅಗತ್ಯವಾಗಿರುತ್ತದೆ ಎಂದು ಗಾಂಧೀಜಿ ಅವರಿಗೆ ತಿಳುವಳಿಕೆ ನೀಡಿದರು. ಮುಂದಕ್ಕೆ ಹೋಗುವ ಹಕ್ಕಂತೂ ಎಲ್ಲರಿಗೂ ಇರುತ್ತದೆಂದೂ ಪ್ರಾಂತ್ಯಗಳಿಂದ ಈ ತೆರನಾದ ಸಲಹೆಗಳು ಬಂದಲ್ಲಿ ಕಾಂಗ್ರೆಸ್‌ಗೆ ಮಾರ್ಗ ಸರಳವಾಗುವುದೆಂದೂ ತಿಳಿಸಿದರು. ಈ ವಿಷಯ ಕುರಿತು ಸಾಕಷ್ಟು ಚರ್ಚೆಗಳಾದವು, ಆ ದಿನಗಳಲ್ಲಿ ಚರ್ಚೆಗಳಾಗುತ್ತಿದ್ದದು ಕೂಡ ಆ ದಿನಗಳ ವಿಶೇಷತೆ ಇದ್ದಿರಬೇಕು. ವೈಚಾರಿಕ ಭೇದ ಪ್ರಕಟವಾಗುತ್ತಿತ್ತು. ಹಾಗಿದ್ದರೂ

ಅದರಿಂದಾಗಿ ವೈಮನಸ್ಯ ಅಥವಾ ಕಟುಶಬ್ದಗಳ ಪ್ರಯೋಗ ಇದು ಯಾವುದೂ ಆಗಲಿಲ್ಲ. ಗುಜರಾತ್‌ನ ಈ ಪರಿಷತ್ತಿನ ಅಧ್ಯಕ್ಷರಾಗಿ ಬಡೋದಾ ಮಹಾರಾಜರ ದಿವಾನರಾಗಿದ್ದ ಅಬ್ಬಾಸ್ ತೈಯ್ಯಾಬೀ ಆಗಿದ್ದರು. ಅಸಹಕಾರದ ಠರಾವಿಗೆ ಮತದಾನ ಅಗತ್ಯವಾಯಿತು. ಭಾರಿ ಬಹುಮತದೊಂದಿಗೆ ಅಸಹಕಾರದ ಪ್ರಸ್ತಾವ ಸ್ವೀಕರಿಸಿದರು. ಇದಕ್ಕೆ ವಲ್ಲಭಭಾಯಿ ಪಟೇಲ್‌ರಿಗೆ ಹೆಚ್ಚಿನ ಶ್ರೇಯಸ್ಸು ಸಿಗಬೇಕು. ಅವರು ಜನರಿಗೆ ತಿಳಿಯ ಹೇಳುತ್ತಿದ್ದರು. ಸರಿಯಾದ ವಿಚಾರಗಳ ಪ್ರಚಾರ ಮಾಡುತ್ತಿದ್ದರು. ಹೀಗೆ ಮತದಾನಕ್ಕೆ ಯೋಜನೆ ಹಾಕುತ್ತಿದ್ದರು, ದೇಶದೆಲ್ಲೆಡೆ ಅಸಹಕಾರದ ಗಾಳಿ ಬೀಸಿತು. ಆಗ ಈ ಅಸಹಕಾರದ ವಿಷಯವನ್ನು ಚರ್ಚಿಸುವುದಕ್ಕಾಗಿಯೇ ಒಂದು ಅಧಿವೇಶನವನ್ನು ಕರೆಯಬೇಕೆಂದು ಅಖಿಲ ಭಾರತೀಯ ಕಾಂಗ್ರೆಸ್‌ಗೆ ಅನ್ನಿಸಿತು. ಆಗ ಸೆಪ್ಟೆಂಬರ್ ೧೯೨೦ಕ್ಕೆ ಕಲ್ಕತ್ತಾದಲ್ಲಿ ವಿಶೇಷ ಅಧಿವೇಶನದ ವ್ಯವಸ್ಥೆ ಆಯಿತು. ಜಲಿಯನ್ ವಾಲಾಬಾಗ್ ಮಹಾಸೇನಾನಿ ಲಾಲಾ ಲಜಪತರಾಯ್ ಈ ಅಧಿವೇಶನದ ಅಧ್ಯಕ್ಷರಾಗಿ ಚುನಾಯಿತರಾದರು. ಕಾಂಗ್ರೆಸ್ ಖಿಲಾಫತ್‌ಗಳಷ್ಟೆ ಅಲ್ಲದೆ (ಜನರಿಗಾಗಿ) ಬೊಂಬಾಯಿ ಮತ್ತು ಕಲ್ಕತ್ತಾ ನಡುವೆ ಗಾಡಿಗಳು ಹೊರಟವು. ಕಲ್ಕತ್ತಾದಲ್ಲಂತೂ ಅತಿ ದೊಡ್ಡ ಸಂಖ್ಯೆಯಲ್ಲಿ ಡೆಲಿಗೇಟ್ಸ್ ಮತ್ತು ದರ್ಶಕರ ಸಮೂಹ ನೆರೆದಿತ್ತು.

ಮೌಲಾನಾ ಶೌಕತ್ ಅಲಿಯವರ ಇಚ್ಛೆಯಂತೆ ಗಾಂಧೀಜಿ ಟ್ರೈನಲ್ಲೆ ಅಸಹಕಾರದ ಪ್ರಸ್ತಾವವನ್ನು ಸಿದ್ಧಪಡಿದರು. ಅಸಹಕಾರದ ವಿಚಾರವೇ ತೀರ ಹೊಸದಾಗಿದ್ದುದರಿಂದ ಅದಕ್ಕೆ ವ್ಯವಸ್ಥಿತ ಶಬ್ದಗಳು ಇನ್ನೂ ಸ್ಪಷ್ಟವಾಗಿ ಹೊರಮೂಡಿರಲಿಲ್ಲ. ಆದರಿಂದ ಆರಂಭದಲ್ಲಿ ಅದನ್ನು ಶಬ್ದಗಳಲ್ಲಿ ಹೆಣೆಯುವುದೇ ಕಷ್ಟವಾಗಿತ್ತು. ಆದರೆ ಗಾಂಧೀಜಿ ಹೊಸ ವಿಷಯಗಳ ವಿಚಾರವಾಗಿ ಸೂಕ್ಷ್ಮವಾಗಿ ಚಿಂತನೆ ನಡೆಸಿ ಅದನ್ನು ಬರೆಯುವುದು, ಮಾತನಾಡುವುದರಲ್ಲಿ ವಿಶೇಷ ಪರಿಣತಿ ಹೊಂದಿದ್ದರು. ಪ್ರಸ್ತಾವದ ನಿಜವಾದ ಪ್ರಾಣ 'ಅಹಿಂಸಕ ಆಂದೋಳನ'ದ ಎಂಬ ಶಬ್ದದಲ್ಲಿತ್ತು. ಟ್ರೈನ್‌ನಲ್ಲಿ ಇದಕ್ಕಾಗಿ ಕುಳಿತು ಗಾಂಧೀಜಿಯವರು ಪ್ರಸ್ತಾವಕ್ಕೆ ಒಂದು ನಿಶ್ಚಿತ ಆಕಾರ ಕೊಟ್ಟಿದ್ದು ಒಳ್ಳೆಯದಾಯಿತು. ಅದಿಲ್ಲದಿದ್ದರೆ ಕಲ್ಕತ್ತಾ ಕಾಂಗ್ರೆಸ್‌ನ ಪೀಠದಲ್ಲಿ ಈ ಪ್ರಸ್ತಾವವನ್ನು ಕುರಿತು ಭಯಂಕರ ವಾಗ್ಯುದ್ಧ ನಡೆಯುವ ಸಂದರ್ಭವಿತ್ತು. ಅದನ್ನು ಯಾರೂ ಸಮರ್ಥಿಸಬಹುದು, ಯಾರೂ ವಿರೋಧಿಸಬಹುದೆಂದು ಗೊತ್ತಿರಲಿಲ್ಲ. ಕೊನೆಗೆ ಅಧ್ಯಕ್ಷರಾಗಿದ್ದ ಲಾಲಾಜಿ ಏನು ಹೇಳಬಹುದೆಂದು ಕೂಡ ಗಾಂಧೀಜಿಗೆ ಗೊತ್ತಿರಲಿಲ್ಲ. ಡಾ॥ ಆ್ಯನಿ ಬೆಸೆಂಟ್, ಮಾಳವೀಯಜೀ, ವಿಜಯ ರಾಘವಾಚಾರಿ, ಪಂಡಿತ ಮೋತಿಲಾಲ ನೆಹರೂ, ದೇಶಬಂಧು ಮುಂತಾದ ಮಹಾರಥಿಗಳು ವೇದಿಕೆಯ ಮೇಲೆ ಕುಳಿತಿದ್ದರು. ಗಾಂಧೀಜಿಯವರ ಪ್ರಸ್ತಾವದಲ್ಲಿ ಪಂಜಾಬ್ ಅತ್ಯಾಚಾರ ಮತ್ತು ಖಿಲಾಫತ್ ಸಂದರ್ಭದಲ್ಲಿ ಅಸಹಕಾರವನ್ನು ಉಲ್ಲೇಖಿಸಿದ್ದರು. ಮದ್ರಾಸ್‌ನ ವಿಜಯರಾಘವಾಚಾರಿಗೆ ಇದು ಸರಿ ಎನಿಸಲಿಲ್ಲ.

ಯಾವುದೇ ಒಂದು ಅನ್ಯಾಯ ಸ್ಥಾನ ಇವುಗಳನ್ನು ಮಾತ್ರ ಇಟ್ಟುಕೊಂಡು ಅಸಹಕಾರ ಮಾಡುವುದು ಸರಿಯಲ್ಲವೆಂದು ಅವರಗನ್ನಿಸಿತು. ಸ್ವರಾಜ್ಯ ಇಲ್ಲದಿರುವುದೇ ಅತಿ ದೊಡ್ಡ ಅನ್ಯಾಯ ಅತ್ಯಾಚಾರ ಆಗಿರುವಾಗ ಗುಲಾಮಗಿರಿಯನ್ನು ವಿರೋಧಿಸಿ ಅಸಹಕಾರ ಚಳವಳಿಯನ್ನು ದೇಶಾದ್ಯಂತ ನಡೆಸುವುದು ಅಗತ್ಯವಾಗಿತ್ತು. ಮೋತಿಲಾಲರೂ ಪ್ರಸ್ತಾವದಲ್ಲಿ 'ಸ್ವರಾಜ್ಯ' ಎಂಬ ಪದವನ್ನು ಬಳಸಲೇ ಬೇಕಾಗಿತ್ತೆಂದರು. ಗಾಂಧೀಜಿಗೆ ಈ ಸಲಹೆ ಸಾಧುವೆನಿಸಿತು. ಹೀಗಾಗಿ ಪ್ರಸ್ತಾವದಲ್ಲಿ ಸ್ವರಾಜ್ಯದ ಬೇಡಿಕೆಯನ್ನೂ ಸೇರಿಸಲಾಯಿತು. ಬಹಳ ಚರ್ಚೆಯ ನಂತರ ಸಮಿತಿಯು ಪ್ರಸ್ತಾವವನ್ನು ಒಪ್ಪಿಕೊಂಡಿತು.

ಎಲ್ಲದಕ್ಕೂ ಮೊದಲು ಮೋತಿಲಾಲ್ ನೆಹರೂ ಅವರು ಅಹಿಂಸಾತ್ಮಕ ಅಸಹಕಾರ ಪ್ರಸ್ತಾವವನ್ನು ಒಪ್ಪಿಕೊಂಡರು. ದೇಶಬಂಧುವಿಗೆ ಈ ವಿಚಾರ ಹಿಡಿಸಿತಾದರೂ ದೇಶದ ಜನರ ಸಾಮರ್ಥ್ಯದ ಬಗ್ಗೆ ಅವರಿಗೆ ಅನುಮಾನವಿತ್ತು.

ಆದ್ದರಿಂದ ಕಲ್ಕತ್ತಾದಲ್ಲಿ ಅವರು ಇದನ್ನು ಸಮರ್ಥಿಸಲಿಲ್ಲ. ದೇಶಬಂಧು ಮತ್ತು ಲಾಲಾಜೀ ಅವರು ನಾಗಪುರ ಕಾಂಗ್ರೆಸ್‌ನಲ್ಲಿ ಅಸಹಕಾರಕ್ಕೆ ಪೂರ್ತಿ ಒಪ್ಪಿಗೆ ನೀಡಿದರು. ಈ ಸಂದರ್ಭದಲ್ಲಿ ಎಲ್ಲರಿಗೂ (ಜನರಿಗೆ) ಹಾಗೂ ವಿಶೇಷವಾಗಿ ಗಾಂಧೀಜಿಗೆ ಲೋಕಮಾನ್ಯ ತಿಲಕ್ ಅವರು ಇಲ್ಲದಿದ್ದುದು ಬಹಳ ಬೇಸರವಾಯಿತು. ಲೋಕಮಾನ್ಯರು ಬದುಕಿದ್ದಿದ್ದರೆ, ಅಸಹಕಾರ ಚಳವಳಿಯನ್ನು ಒಪ್ಪಿಕೊಳ್ಳುತ್ತಿದ್ದರು. ಅವರ ಅಮೂಲ್ಯ ಮಾರ್ಗದರ್ಶನ ಸಿಕ್ಕು ಬಹಳ ಉಪಯೋಗವಾಗುತ್ತಿತ್ತು.

ವಿಶೇಷ ಅಧಿವೇಶನದ ಈ ಠರಾವು ೧೯೨೦ರ ಡಿಸೆಂಬರ್‌ನಲ್ಲಿ ನಾಗಪುರದಲ್ಲಿ ನಡೆದ ಸಾಮಾನ್ಯ ಅಧಿವೇಶನದಲ್ಲಿ ವೈಧಾನಿಕವಾಗಿ ಒಪ್ಪಿಗೆ ಪಡೆಯಿತು. ಒಮ್ಮತದಿಂದ ಸ್ವೀಕೃತವಾಯಿತು. ಕಲ್ಕತ್ತಾದಂತೆ ನಾಗಪುರದಲ್ಲಿ ಭಾರಿ ಸಂಖ್ಯೆಯಲ್ಲಿ ಪ್ರತಿನಿಧಿಗಳು ಸೇರಿದ್ದರು. ಸುಮಾರು ೧೪೦೦೦ ಪ್ರತಿನಿಧಿಗಳು ಈ ಅಧಿವೇಶನದಲ್ಲಿ ಹಾಜರಿದ್ದರು. ನಾಗಪುರ ಅಧಿವೇಶನಕ್ಕೆ ಶ್ರೀ ವಿಜಯರಾಘವಾಚಾರಿ ಚುನಾಯಿತರಾಗಿದ್ದರು.

ಈ ನಾಗಪುರ ಅಧಿವೇಶನದಲ್ಲಿ ಕಾಂಗ್ರೆಸ್ ಸಂವಿಧಾನ ಕುರಿತು, ಕಾಂಗ್ರೆಸ್‌ನ ಧ್ಯೇಯೋದ್ದೇಶಗಳ ಬಗ್ಗೆ ದೀರ್ಘ ಚರ್ಚೆ ನಡೆಯಿತು. ಸ್ವರಾಜ್ಯ ಪಡೆಯುವುದು ಕಾಂಗ್ರೆಸ್ ಗುರಿ ಎಂದು ಗಾಂಧೀಜಿ ಹೇಳಿದರು. ರಾಜ್ಯಾಡಳಿತ ಜೊತೆಗಿದ್ದುಕೊಂಡು ಸ್ವರಾಜ್ಯ ಅವಶ್ಯಕ ಎಂಬುದೊಂದೇ ಕಾಂಗ್ರೆಸ್‌ನ ಗುರಿಯಾಗಬಹುದಿತ್ತು. ಮಾಳವೀಯರು ಮತ್ತು ಮೊಹಮದ್ ಆಲಿ ಜಿನ್ನಾ ಅವರು (ಬ್ರಿಟಿಷ್) ಸಾಮ್ರಾಜ್ಯ ಶಾಹಿಯಲ್ಲಿದ್ದುಕೊಂಡೇ ಸಿಗುವ ಸ್ವರಾಜ್ಯವನ್ನು ಪಡೆದು ಸಂತೋಷಪಟ್ಟುಕೊಂಡಿರಬೇಕೆಂದು ಅಭಿಪ್ರಾಯಪಟ್ಟರು. ಆದರೆ ಒಟ್ಟು ಪ್ರತಿನಿಧಿಗಳು ಈ ಅಭಿಪ್ರಾಯಕ್ಕೆ ಸಹಮತಿ ನೀಡಲಿಲ್ಲ. ಈ ಸ್ವರಾಜ್ಯವನ್ನು ಪೂರ್ತಿ ಅಹಿಂಸಾತ್ಮಕ ರೀತಿಯಿಂದ ಪಡೆಯಬೇಕು ಎಂದು ಗಾಂಧೀಜಿ ಪಟ್ಟುಹಿಡಿದಿದ್ದರು. ಕೆಲವರು

ಮುಖಂಡರು ಮಾರ್ಗ ಹಿಂಸಾತ್ಮಕ ಅಹಿಂಸಾತ್ಮಕ ಯಾವುದಾದರೂ ಸರಿ ಸ್ವರಾಜ್ಯ ಸಿಕ್ಕರೆ ಸಾಕು ಎಂದರು. ಕೊನೆಗೆ ಎಲ್ಲರೂ ಒಮ್ಮತದಿಂದ ಅಹಿಂಸಾತ್ಮಕ ಮಾರ್ಗದಿಂದ ಸ್ವರಾಜ್ಯ ಪಡೆಯುವುದು ಕಾಂಗ್ರೆಸ್‌ನ ಗುರಿ ಎಂದು ಒಪ್ಪಿಕೊಂಡರು. ಹೀಗೆ ೧೯೨೦ರಲ್ಲಿ ಅಹಿಂಸಾತ್ಮಕ ಅಸಹಕಾರ ಚಳವಳಿಯನ್ನು ತಮ್ಮ ಗುರಿ ಎಂದು ದೇಶ ಒಪ್ಪಿಕೊಂಡಿತು.

ಅಸಹಕಾರ ಚಳವಳಿಗಾಗಿ ಗಾಂಧೀಜಿ ದೇಶದಲ್ಲಿ ಹಲವಾರು ಕಡೆಗೆ ಹೋದರು. ವಕೀಲರು ಕೋರ್ಟ್ ಕಛೇರಿಗಳನ್ನು ತ್ಯಜಿಸಿದರು. ಯುವಕರು ಸ್ಕೂಲ್ ಕಾಲೇಜುಗಳಲ್ಲಿ ಓದುವುದನ್ನು ತ್ಯಜಿಸಿದರು. ವಿದೇಶಿ ಬಟ್ಟೆಗಳನ್ನು ಕಾಮದಹನದ ಹಾಗೆ ಸುಟ್ಟರು. ಹೆಂಡ ಅಂಗಡಿಗಳ ಮೇಲೆ ದೇಶದ ಮಹಿಳೆಯರು ಧರಣಿ ಹೂಡಿದರು. ವಿದೇಶಿ ಬಟ್ಟೆ ಮತ್ತು ಹೆಂಡದ ಪಡಖಾನೆಗಳ ಮುಂದೆ ಧರಣಿ ಪಿಕೆಟಿಂಗ್‌ಗಳಾಗುತ್ತಿದ್ದವು. ಅದರಲ್ಲಿ ಸಮಾಜದ ಶ್ರೇಷ್ಠವರ್ಗದ ಮಹಿಳೆಯರು ತಮ್ಮ ಸಂಕೋಚ ತೊರೆದು ಕೆಲಸ ಮಾಡುತ್ತಿದ್ದರು. ಮೋತಿಲಾಲ ನೆಹರೂ ಅವರ ಸುಕೋಮಲೆ ಪತ್ನಿ ಸ್ವರೂಪರಾಣಿ ನೆಹರೂ ಮತ್ತು ಕೋಟ್ಯಧೀಶ ಸರ್ ಜಹಾಂಗೀರ್ ಪಿಟೀಟ್‌ನ ಒಬ್ಬಳೇ ಮಗಳು ಮೀರಾ ಬಹನ್ ಮತ್ತು ಗಾಂಧೀಜಿ ಅವರ ಹೆಂಡತಿ ಕಸ್ತೂರಬಾ ಗಾಂಧೀ, ದಾದಾಭಾಯಿ ನವರೋಜಿಯವರ ಮೂವರು ಹೆಣ್ಣುಮಕ್ಕಳು ಮುಂತಾದ ಅನೇಕ ಮಹಿಳೆಯರು ಮನೆಯ ಸುಖವನ್ನು ತೊರೆದು ಧೂಳು–ಬಿಸಿಲಿನಲ್ಲಿ ಬೀದಿಗಳಲ್ಲಿ ಹೊರಟರು, ಹೆಂಡದಂಗಡಿಗಳ ಮುಂದೆ ಧರಣಿ ಕುಳಿತರು. ಮನೆಗಳಿಗೆ ಹೋಗಿ ವಿದೇಶಿ ಬಟ್ಟೆ ಸಂಗ್ರಹಿಸಿ ಅವುಗಳನ್ನು ಸುಡತೊಡಗಿದರು. ಹಿಂದೆಂದೂ ಕಾಣದ ಸಾಮಾಜಿಕ ಕ್ರಾಂತಿಯೊಂದರ ಆರಂಭ ಇದಾಗಿತ್ತು. ನೆನ್ನೆಯವರೆಗೂ ನಾಲ್ಕು ಗೋಡೆಗಳಾಚೆಗೇ ಹೋಗದಿದ್ದ ಮಹಿಳೆಯರು ಕಷ್ಟವೆನ್ನುವುದನ್ನೇ ಅರಿಯದ ಕೋಮಲ ಶರೀರದ ಮಹಿಳೆಯರು ತಮ್ಮ ಸರ್ವಸ್ವವನ್ನು ತ್ಯಜಿಸಿ ಚಳವಳಿಯಲ್ಲಿ ಮುನ್ನುಗಿದ್ದರು.

ಅಸಹಕಾರದ ಈ ಯಾತ್ರೆಯಲ್ಲಿ ಗಾಂಧೀಜಿ ದಕ್ಷಿಣದಲ್ಲಿ ಮಧುರೈ ತಲುಪಿದರು. ಅವರು ಹೋದಲ್ಲೆಲ್ಲಾ ವಿದೇಶಿ ಬಟ್ಟೆಗಳನ್ನು ಸುಡಲು ಮತ್ತು ದೇಶಕ್ಕಾಗಿ ವಿದೇಶಿ ಸರಕಾರದ ಜೊತೆ ಅಸಹಕಾರ ಮೂಡುವಂತೆ ಜನರಲ್ಲಿ ವಿನಂತಿಸುತ್ತಿದ್ದರು. ಮಧುರೈನ ಮೀನಾಕ್ಷಿ ಮಂದಿರದ ವಿಶಾಲ ಅಂಗಳದಲ್ಲಿ ಗಾಂಧೀಜಿಯವರು ತಮ್ಮ ಈ ವಿನಂತಿಯನ್ನು ಪುನರುಚ್ಚರಿಸಿದರು. ಆಗ ಪ್ರೇಕ್ಷಕರಲ್ಲಿದ್ದ ಒಬ್ಬ ಬಡ ಯುವಕ "ನನ್ನ ಹತ್ತಿರ ಇರುವುದು ಇಷ್ಟೇ ಬಟ್ಟೆ. ಇದನ್ನು ಸುಟ್ಟೆನಾದರೆ ಏನು ತೊಡಲಿ?" ಎಂದು ಕೇಳಿದ. ಗಾಂಧೀಜಿ "ನೀನು ಇಂತಹ ಲುಂಗಿ ಒಂದನ್ನು ಕಟ್ಟಿಕೊಂಡಿದ್ದು ಬಿಡು. ಆದರೆ ವಿದೇಶಿ ಬಟ್ಟೆಗಳನ್ನು ಸುಡುವುದೇ ಧರ್ಮ" ಎಂದರು. ಆದರೆ ರಾತ್ರಿಯಲ್ಲಾ ಗಾಂಧೀಜಿ ಬಹಳ ಚಿಂತೆಯಲ್ಲಿದ್ದರು. ಗಾಂಧೀಜಿಯವರ ಕಿವಿಗಳಲ್ಲಿ

ಆ ಬಡ ಯುವಕನ ಶಬ್ದಗಳು ಕೊರೆಯುತ್ತಿದ್ದವು. ಬೆಳಗಾದ ನಂತರ ಅವರು ತಮ್ಮ ಮಿತ್ರ ರಾಜಾಜಿಗೆ ಹೇಳಿದರು: ದೇಶದ ಬಡಜನರಲ್ಲಿ ನಾನೂ ಒಬ್ಬನಾಗುವುದಕ್ಕೋಸ್ಕರ ಇನ್ನು ಮುಂದೆ ಮಂಡಿವರೆಗೆ ಇರುವ ಪಂಚೆಯನ್ನಷ್ಟೇ ಧರಿಸುತ್ತೇನೆ. ಷರ್ಟ್ ಮುಂತಾದ ಹೊಲಿದ ಬಟ್ಟೆಗಳನ್ನು ಹಾಕಿಕೊಳ್ಳುವುದಿಲ್ಲ. ೧೯೨೦ರಲ್ಲಿ ಶೇಕಡಾ ೧.೫ ಗಜ ಬಟ್ಟೆ ಜನರಿಗೆ ಸಿಗುವಂತಿತ್ತು. ಗಾಂಧೀಜಿ ತಮ್ಮ ಆವಶ್ಯಕತೆಯನ್ನು ದೇಶದ ಕಡುಬಡವನಾದ ವ್ಯಕ್ತಿಯ ಮಟ್ಟಕ್ಕೆ ಸೀಮಿತಗೊಳಿಸಿದರು. ರಾಜಾಜಿ ಈ ಘೋರ ತ್ಯಾಗಕ್ಕೆ ವಿರೋಧ ಸೂಚಿಸಿದರು. ಚಳಿಗಾಲದ ಕಷ್ಟಗಳನ್ನು ಅವರಿಗೆ ನೆನಪು ಮಾಡಿಸಿದರು. ಗಾಂಧೀಜಿ ಮಾತ್ರ ತಮ್ಮ ನಿರ್ಣಯದ ಬಗ್ಗೆ ದೃಢ ಚಿತ್ತರಾಗಿದ್ದರು. ಆ ದಿನದ ಸಾಮಾನ್ಯ ಸಭೆಗವರು ತುಂಡು ಪಂಚೆ ಉಟ್ಟು ಹೋದರು. ಅಂದಿನಿಂದ ಅವರು ಪೂರ್ತಿ ಬಟ್ಟೆ ಧರಿಸಲೇ ಇಲ್ಲ. ಡಿಸೆಂಬರ್‌ನಲ್ಲಿ ಭಯಂಕರ ಚಳಿ ಮತ್ತು ಮಂಜಿನಲ್ಲೂ ವಿದೇಶ ಮತ್ತು ಯೂರೋಪಿನ ಯಾತ್ರೆಯಲ್ಲು ಅವರು ತುಂಡುಪಂಚೆ ಉಟ್ಟು, ಸಾಕ್ಸ್ ಬೂಟ್ಸ್ ಇಲ್ಲದೇ, ಬರಿ ಚಪ್ಪಲಿಯಲ್ಲಿ ಹೊರಟರು, ಬರಿ ಶಾಲೊಂದನ್ನು ಹೊದ್ದು ಮಂಜುಗಾಳಿಯನ್ನು ತಡೆದರು. ೨೦ ನೇ ಡಿಸೆಂಬರ್ ೧೯೨೧ ರ ದಿನವದು, ಆ ದಿನ ಗಾಂಧೀಜಿ ತಮ್ಮ ದೇಶವಾಸಿಗಳ ಬಡತನವನ್ನು ಪೂರ್ತಿಯಾಗಿ ತನ್ನದಾಗಿಸಿಕೊಂಡರು.

ಆ ಕಾಲದ ೨೦೦೦ ಮೈಲು ಉದ್ದ ಹಾಗೂ ೨೦೦೦ ಮೈಲು ಅಗಲದ ಈ ದೇಶದಲ್ಲಿ ಗಾಂಧೀಜಿ ಹೋದ ಕಡೆಯಲ್ಲೆಲ್ಲಾ ಸಾವಿರಾರು ಸಂಖ್ಯೆಯಲ್ಲಿ ಬಡ ಈ ದೇಶದ ಅರ್ಧನಗ್ನ ಜನ ಉತ್ಸಾಹದಿಂದ ನುಗ್ಗಿ ಬರುತ್ತಿದ್ದರು. ಗಾಂಧೀಜಿಯವರ ಮಾತುಗಳನ್ನು ಕೇಳಿ ನೂರಾರು ವರ್ಷಗಳ ಗುಲಾಮಗಿರಿಯನ್ನು ಮರೆತು ಆ ಭಾರತೀಯರು ಗೌರವದಿಂದ ಮೆರೆದರು. ತಮ್ಮ ಗೌರವವನ್ನು ಕಾಪಾಡಿಕೊಳ್ಳಲು ದೇಶಪ್ರೇಮಕ್ಕಾಗಿ ಸಾಯುವುದಕ್ಕೂ ಸಿದ್ಧರಾದರು. ಬಂಗಾಳದಲ್ಲಿ ದೇಶಬಂಧು ಚಿತ್ತರಂಜನ್ ದಾಸರು ಲಕ್ಷಾಂತರ ರೂಪಾಯಿಗಳ ವರಮಾನದ ತಮ್ಮ ವಕಾಲತ್ತನ್ನು ತ್ಯಜಿಸಿದರು. ತಮ್ಮ ವೈಭವೋಪೇತ ಭವನ, ಸಂಪತ್ತು, ಎಲ್ಲವನ್ನು ದೇಶಕ್ಕಾಗಿ ದಾನ ಮಾಡಿದರು. ಈ ದಾನ ಮಾಡಿದ ಮೇಲೆ ದೇಶಬಂಧು ಅವರ ಮನೆಯಲ್ಲಿ ಸಂಜೆ ಅಡುಗೆಗಾಗಿ ಒಂದು ಪಾತ್ರೆ ಕೂಡ ಉಳಿದಿರಲಿಲ್ಲ. ಆದರೆ ದೇಶಬಂಧು ಅವರ ಪತ್ನಿ ವಾಸಂತಿ ದೇವಿ ಪತಿಯ ತ್ಯಾಗದ ಸಹಧರ್ಮಿಣಿಯಾಗಿದ್ದರು. ಆ ಸಂಜೆ ಆಕೆ ಮಣ್ಣಿನ ಪಾತ್ರೆಗಳಲ್ಲೇ ಅನ್ನ ಬೇಯಿಸಿದರೇ ಹೊರತು ದಾನ ಮಾಡಿದ ವಸ್ತುಗಳ ಕಡೆ ಕಣ್ಣು ಹಾಯಿಸಲಿಲ್ಲ. ಕಲ್ಕತ್ತೆಯ ಪ್ರಸಿದ್ಧ ಬೇಲತಾನಾ ರೋಡ್‌ನಲ್ಲಿ ಇವತ್ತಿಗೂ ಆ ವಿಶಾಲ ಬಂಗಲೆಯಲ್ಲಿ ಚಿತ್ತರಂಜನ್ ಸೇವಾಸದನ ಎಂಬ ಸಂಸ್ಥೆ ನಡೆಯುತ್ತಿದೆ. ದೇಶಬಂಧುವಿನ ಈ ಬಲಿದಾನದಿಂದ ಬಂಗಾಳ ಜಾಗೃತಗೊಂಡಿತು. ಬಿಹಾರದಲ್ಲಿ ರಾಜೇಂದ್ರಬಾಬು ಮತ್ತು ಬ್ರಜಕಿಶೋರಬಾಬು

ತಮ್ಮ ವಿಶಾಲವಾದ ಜಮೀಂದಾರಿ ಮತ್ತು ಸಮೃದ್ಧವಾಗಿದ್ದ ವಕಾಲತ್ತು ಇವುಗಳನ್ನು ದೇಶಕ್ಕಾಗಿ ಸಮರ್ಪಿಸಿದರು. ಇಬ್ಬರೂ ರೈತರ ರೀತಿಯಲ್ಲಿ ಮೇಲಕ್ಕೆ ಪಂಚೆ ಕಟ್ಟಿ ದಪ್ಪಬಟ್ಟೆಯ ಕುರ್ತಾ ತೊಟ್ಟರು. ಬ್ರಜಕಿಶೋರಬಾಬು ಅವರಂತೂ ತನ್ನ ೧೬ ವರುಷದ ಮಗಳು ಪ್ರಭಾವತಿಯನ್ನು ದೇಶಸೇವೆಗಾಗಿ ಗಾಂಧೀಜಿಗೆ ಅರ್ಪಿಸಿದರು. ಆ ದಿನದಿಂದ ಪ್ರಭಾವತಿಬಹನ್ ನಮ್ಮ ಮನೆಯ ವಿಶಿಷ್ಟ ಸದಸ್ಯಳಾದಳು. ನಮ್ಮಜ್ಜಿಗೆ ಹೆಣ್ಣು ಮಕ್ಕಳಿಲ್ಲದಿದ್ದರೂ ಪ್ರಭಾವತಿಯನ್ನು ತನ್ನ ಮಗಳಾಗಿಸಿಕೊಂಡರು. ಗಾಂಧೀಜಿಗೆ ಅನೇಕರು ಹೆಣ್ಣು ಮಕ್ಕಳ ಹಾಗಿರುವವರಿದ್ದರು. ಆದರೆ ಕಸ್ತೂರಬಾ ಅಜ್ಜಿ ಪ್ರಭಾವತಿಗೆ ಮಾತ್ರ ಆ ಸ್ಥಾನ ಅಧಿಕಾರ ನೀಡಿದ್ದರು. ಕೊನೆಯಲ್ಲಿ ಸಾಯುವಾಗ ಆಗಾಖಾನ್ ಜೈಲಿನಲ್ಲಿ ಅಜ್ಜಿ ಪ್ರಭಾವತಿಯನ್ನು ನೆನಪುಮಾಡಿಕೊಂಡರು. ಕಠೋರವಾದ ಇಂಗ್ಲಿಷ್ ಸರಕಾರ ಕೂಡ ಮೃತ್ಯುವಿನ ಸಮಯದ ಅವರ ಅಂತಿಮ ಇಚ್ಛೆಗೆ ಕರಗಿ ೧೯೪೪ರಲ್ಲಿ ಭಾಗಲಪುರ ಜೈಲಿನಲ್ಲಿದ್ದ ಪ್ರಭಾವತಿಯವರನ್ನು ಆಗಾಖಾನ್ ಜೈಲಿಗೆ ಬದಲಾಯಿಸಿದ್ದರು. ಕೊನೆಯವರೆಗೂ ಆಕೆ ನಮ್ಮಜ್ಜಿಯ ಸೇವೆ ಮಾಡುತ್ತಿದ್ದರು. ಗಾಂಧೀಜಿಯರಿಂದ ಪ್ರೇರಿತರಾಗಿ ಎಷ್ಟೋ ಜನ ಮಹಿಳೆಯರೂ ಜೀವನ ಕ್ರಮವನ್ನೇ ಬದಲಾಯಿಸಿಕೊಂಡಿದ್ದರು. ಅವರೆಲ್ಲರೂ ತ್ಯಾಗದಿಂದ ಕೂಡಿ ತಪಸ್ವಿನಿಯರಾಗಲು ಪ್ರಯತ್ನಿಸಿದರು. ಆದರೆ ಅವರಲ್ಲಿ ಯಾರೂ ಪ್ರಭಾವತಿಯ ಸಮ ಬರಲಿಲ್ಲ.

ಈ ಆಂದೋಳನದಲ್ಲಿ ಸಾವಿರಾರು ವಿದ್ಯಾರ್ಥಿಗಳು ಸ್ಕೂಲು ಕಾಲೇಜುಗಳನ್ನು ಬಹಿಷ್ಕರಿಸಿದರು. ಆದುದರಿಂದ ಅವರಿಗೆ ಶಿಕ್ಷಣ ತರಬೇತಿ ನೀಡುವ ವ್ಯವಸ್ಥೆ ಮಾಡಬೇಕಾದುದು ಗಾಂಧೀಜಿಗೆ ಅಗತ್ಯವೆನಿಸಿತು. ಈ ಭಾವನೆಯಿಂದ ಗಾಂಧೀಜಿಯವರು ಐದು ಶಿಕ್ಷಣ ಸಂಸ್ಥೆಗಳನ್ನು ರಚಿಸಿದರು. ಅಹಮದಾಬಾದ್‌ನಲ್ಲಿ 'ಗುಜರಾತ್ ವಿದ್ಯಾಪೀಠ' ಆರಂಭವಾಯಿತು. ಆಚಾರ್ಯ ಕಾಕಾ ಕಾಲೇಲಕರ್ ಮತ್ತು ಆಚಾರ್ಯ ಕೃಪಲಾನಿ ಈ ವಿದ್ಯಾಪೀಠದಲ್ಲಿ ಪ್ರಾಧ್ಯಾಪಕರಾದರು. ಪಟ್ನಾದಲ್ಲಿ 'ರಾಷ್ಟ್ರೀಯ ವಿದ್ಯಾಪೀಠ', ವಾರಾಣಾಸಿಯಲ್ಲಿ 'ಕಾಶೀ ವಿದ್ಯಾಪೀಠ' ಮತ್ತು ದೆಹಲಿಯಲಿ 'ಜಾಮಿಯ ಮಿಲಿಯಾ', ಪೂನಾದಲ್ಲಿ 'ತಿಲಕ್ ವಿದ್ಯಾಪೀಠ' ಇವು ರಚಿತವಾದವು. ಈ ಐದೂ ಸಂಸ್ಥೆಗಳು ೧೯೨೦ರಲ್ಲಿ ಆರಂಭವಾದವು. ಇವೆಲ್ಲಾ ಇವತ್ತಿನವರೆವಿಗೂ ನಡೆಯುತ್ತಿವೆ. ಸ್ವಾತಂತ್ರ್ಯಾಂದೋಳನದ ಆ ೨೦ ವರ್ಷಗಳ ನಡುವೆ ಈ ಸಂಸ್ಥೆಗಳ ಅನೇಕ ಮುಖಂಡರು ಮತ್ತು ನಿಜವಾದ 'ಸ್ವಯಂ ಸೇವಕ'ರನ್ನು ಕೊಟ್ಟಿತ್ತು. ಈ ಸಂಸ್ಥೆಗಳು ವಾಸ್ತವವಾಗಿ ಪ್ರಾಚೀನ ಕಾಲದ ಗುರುಕುಲ ಪದ್ಧತಿಯ ಚಿತ್ರವನ್ನು ನೀಡುತ್ತಿದ್ದವು. ಬೇರೆ ಸಂಸ್ಥೆಗಳ ಅನುಭವ ನನಗಿಲ್ಲವಾದರೂ ಸಾಬರಮತಿ ಆಶ್ರಮದ ಪಾಠಶಾಲೆಯಲ್ಲಿ ನನ್ನನ್ನು ನಮ್ಮಜ್ಜನೇ ಸೇರಿಸಿದ್ದರು. ಅಲ್ಲಿನ ವಾತಾವರಣದಲ್ಲಿ ನಿಷ್ಠೆ, ಪರಿಶ್ರಮ, ಜ್ಞಾನದ ಹಸಿವು ಇವುಗಳ ನಡುವೆ ಸರಳ ಆನಂದ, ರಸಿಕತೆ ಮತ್ತು ಹಾಸ್ಯ – ವಿನೋದ, ಸ್ಫೂರ್ತಿ ಸಿಗುತ್ತಿತ್ತು. ಗಾಂಧೀಜಿ ಗುಜರಾತ್

ವಿದ್ಯಾಪೀಠಕ್ಕಾಗಿ ವಿಶೇಷವಾಗಿ ಬಾಲಸುಲಭ ಪುಸ್ತಕವನ್ನು ಸ್ವತಃ ಬರೆದಿದ್ದರು.

ಗಾಂಧೀಜಿಯ 'ಅ, ಆ, ಇ.' ಯ ಮೊದಲ ಪುಸ್ತಕದ ಹೆಸರು 'ಚಾಲಣಗಾಡಿ' ಅಂತ. ಇಂದಿಗೂ ಅದು ಆದರ್ಶ ಆರಂಭಿಕ ಪುಸ್ತಕವಾಗಿದೆ. ಅದರಲ್ಲಿ ಮಕ್ಕಳಿಗೆ ಸಹಜವಾಗಿ ಸಂಸ್ಕೃತಿಯ ಜೊತೆಗೆ ಅಕ್ಷರಜ್ಞಾನ ಕೂಡ ಸಿಗುತ್ತದೆ. ದೊಡ್ಡ ದೊಡ್ಡ ವಿದ್ವಾಂಸರು ಈ ಸಂಸ್ಥೆಗಾಗಿ ಪಾಠ್ಯಕ್ರಮವನ್ನು ಸಿದ್ಧಪಡಿಸಿದ್ದರು. ಈ ಸಂಸ್ಥೆಗಳಲ್ಲಿ ಶೈಕ್ಷಣಿಕ ಮಟ್ಟ ಹೆಚ್ಚು ಉನ್ನತ ಮತ್ತು ಗಟ್ಟಿಯದಾಗಿತ್ತು. ಈ ಸಂಸ್ಥೆಗಳಿಂದ ಹೊರಮೂಡಿದ ವಿದ್ಯಾರ್ಥಿಗಳು ಸಮಾಜದಲ್ಲಿ ಆದರ್ಶ ನಾಗರಿಕರಾಗಿದ್ದರು. ಕೆಲವರಂತೂ ಸಮಾಜ ಸೇವಾಧರ್ಮವನ್ನು ತಮ್ಮದಾಗಿಸಿಕೊಂಡರು. ಕೆಲವರು ಸಾಹಿತ್ಯದ ಮುಖಾಂತರ ದೇಶಸೇವೆ ಮಾಡಿದರು. ಆ ಕಾಲದಲ್ಲಿ ಗುಜರಾತ್‌ನಲ್ಲಿ ಒಂದು ಸಾಹಿತ್ಯ ಕ್ರಾಂತಿಯೇ ಮೂಡಿ ಬಂತು ಮತ್ತು ಹಳೆ ಶೈಲಿಯ ಕ್ಲಿಷ್ಟ ಗುಜರಾತಿ ದೂರವಾಗಿ ಸರಳ ಓಜಸ್ಸಿನ ಗುಜರಾತಿಯಲ್ಲಿ ಸಾಹಿತ್ಯ ರಚನೆಯಾಗತೊಡಗಿತು. ಕೆಲವರು ಇಂಗ್ಲಿಷ್, ಫ್ರೆಂಚ್ ಮತ್ತು ಬಂಗಾಳಿ ಭಾಷೆಯ ಶ್ರೇಷ್ಠ ಪುಸ್ತಕಗಳ ಅನುವಾದ ಎಷ್ಟು ಸುಂದರವಾಗಿ ಮಾಡಿದರೆಂದರೆ ಅವು ಅನುವಾದದ ಹಾಗೆ ಅನಿಸುತ್ತಲೇ ಇರಲಿಲ್ಲ. ಸಾನಾಭಾಯಿ ಭಟ್ ಅವರು ಗುಜರಾತಿಯಲ್ಲಿ ರಾಮಾಯಣ, ಮಹಾಭಾರತದ ಮುಖ್ಯಪಾತ್ರಗಳ ಕುರಿತು ಚಾರಿತ್ರ್ಯ ಚಿತ್ರಣ ಮತ್ತು ಕತೆಗಳನ್ನು ಬರೆದರು. ಅವು ಆ ಕಾಲದ ಮಕ್ಕಳ ಮನಸ್ಸಿನ ಮೇಲೆ ಕಥಾಸಾರ ಮತ್ತು ಉಪದೇಶ ಇವುಗಳನ್ನು ಅವರ ಜೀವನವಿಡಿ ಮೂಡಿಸಿದವು. ಕಾಕಾ ಸಾಹೇಬ್, ಮಹಾದೇವ ದೇಸಾಯಿ, ನರಹರಿ ಪಾರೀಖ್ ಮತ್ತು ಸ್ವಾಮಿ ಆನಂದ್ ಮುಂತಾದವರು 'ಸಾಹಿತ್ಯ ಕಲ್ಲೋಲ' ಎಂಬ ಏಳು ಪುಸ್ತಕಗಳ ಸಂಪೂರ್ಣ ಸಂಕಲನ ಸಿದ್ಧಪಡಿದರು. ನಮ್ಮ ದೇಶ ವಿದೇಶಗಳ ಸಾಹಿತ್ಯದ ಉತ್ತಮ ಕೃತಿಗಳ ರೂಪಾಂತರಣ ಈ ಸಂಕಲನದಲ್ಲಿತ್ತು. ನೀವು ನಂಬುವಿರೋ ಇಲ್ಲವೋ ನಾನು ೧೦ ವರ್ಷದವಳಾಗಿದ್ದಾಗ ಓದಿದ್ದು ಆ ಪುಸ್ತಕಗಳು ಮತ್ತು ಅನುವಾದ ಇವತ್ತು ೭೦ ವರ್ಷಗಳ ಈ ವಯಸ್ಸಿನಲ್ಲೂ ನನಗೆ ಉಪಯೋಗಿಯಾಗಿವೆ. ಇವತ್ತಿಗೂ ಆ ಇಂಗ್ಲಿಷ್, ಫ್ರೆಂಚ್‌ನ ಅನುವಾದಗಳ ಆಸರೆ ಮೇಲೆ ನಾನು ನನ್ನ ಅಭಿಪ್ರಾಯಗಳನ್ನು ಪ್ರಕಟಪಡಿಸುತ್ತೇನೆ. ಆ ಕಾಲದ ಸಾಹಿತ್ಯ ಸಿಂಚನ ನನ್ನ ಜೀವನದಲ್ಲಿ ಇಂದಿಗೂ ಸೌಂದರ್ಯ ಬೋಧ ಮತ್ತು ರಸಾಸ್ವಾದ ನೀಡುತ್ತದೆ. ಆಗ ವಿದ್ಯಾಪೀಠದಲ್ಲಿ 'ಶಿಕ್ಷಣ ಮತ್ತು ಸಾಹಿತ್ಯ' ಎಂಬ ಮಾಸಪತ್ರಿಕೆ ಪ್ರಕಟವಾಗುತ್ತಿತ್ತು. ಅದರಲ್ಲಿ ಹೆಸರುವಾಸಿಯಾದ ಫ್ರೆಂಚ್ ವಿದ್ವಾಂಸ ವಿಕ್ಟರ್ ಹ್ಯೂಗೋನ 'ಲೆ ಮಿಸರೆಬಲ್ಸ್'ನ ಅನುವಾದ 'ದರಿದ್ರ ನಾರಾಯಣ' ಎಂಬ ಹೆಸರಿನಲ್ಲಿ ಧಾರಾವಾಹಿಯಾಗಿ ಬರುತ್ತಿತ್ತು. ನನಗಾಗ ಚಿಕ್ಕ ವಯಸ್ಸು, ಆದರೆ ಬಹಳ ಆತುರ ಆಸಕ್ತಿಯಿಂದ ನಾನದನ್ನು ಓದುತ್ತಿದ್ದೆ. ಅನಂತರ ೧೫ ವರ್ಷದ ವಯಸ್ಸಿನಲ್ಲಿ 'ಲೆ ಮಿಸರೆಬಲ್ಸ್'ನ ಮೂಲ

ಪುಸ್ತಕವನ್ನು ಇಂಗ್ಲಿಷ್‌ನಲ್ಲಿ ಓದಿದೆ. ಆಗ ಗಾಂಧೀಜಿ 'ಕ್ಯಾಬಿನೆಟ್ ಮಿಷನ್'ನ ವಿಚಾರವಾಗಿ ಶಿಮ್ಲಾದಲ್ಲಿದ್ದರು. ನಾನೂ ನನ್ನ ಚಿಕ್ಕಪ್ಪ ದೇವದಾಸ್ ಗಾಂಧೀ ಜೊತೆ ಶಿಮ್ಲಾಗೆ ಹೋಗಿದ್ದೆ. ಆಗ ಬಾಪೂಜಿ ನಾನು 'ಲೆ ಮಿಸರೆಬಲ್ಸ್' ಓದುತಿದ್ದುದನ್ನು ನೋಡಿ ಆಶ್ಚರ್ಯಪಟ್ಟರು. 'ನಿನಗೆ ಇದರ ಇಂಗ್ಲಿಷ್ ಅರ್ಥವಾಗುತ್ತೇನು?' ಎಂದವರು ನನ್ನನ್ನು ಕೇಳಿದರು. ಪೂರ್ತಿ ಅರ್ಥ ಆಗುವುದಿಲ್ಲವಾದರೂ ಸಾಕಷ್ಟು ಅರ್ಥ ಮಾಡಿಕೊಳ್ಳುತ್ತೇನೆ ಎಂದು ನಾನು ಉತ್ತರಿಸಿದೆ. ನಮ್ಮಜ್ಜ ಅದಕ್ಕೆ ಮುಂದೆ ಏನೂ ಹೇಳಲಿಲ್ಲವಾದರೂ ನನ್ನ ಓದು, ಅರ್ಥಮಾಡಿಕೊಳ್ಳುವ ಶಕ್ತಿ ಇವರೆಡೂ ಅವರಿಗೆ ತೃಪ್ತಿನೀಡಿದವೆಂದು ನಾನು ಭಾವಿಸುತ್ತೇನೆ. ಅದಾದನಂತರ ನಾನು ಈ ಜೀವನದಲ್ಲಿ ಕೊನೆಯ ಪಕ್ಷ ಹತ್ತು ಬಾರಿಯಾದರೂ ಜೀವನದ ಬೇರೆ ಬೇರೆ ಸಮಯಗಳಲ್ಲಿ ಆ ಪುಸ್ತಕ ಓದಿದ್ದೇನೆ. ಇವತ್ತಿಗೂ ಆ ಕಾದಂಬರಿಯ ಕಥಾನಾಯಕ 'ಜ್ಯಾಂ ವಲ್ಜಾ' ನನ್ನ ಜೀವನದ ಆದರ್ಶವಾಗಿದ್ದಾನೆ. 'ಜ್ಯಾಂ ವಲ್ಜಾ' ಅಷ್ಟು ಕಷ್ಟಗಳು ನನ್ನ ಮೇಲೆ ಆವರಿಸುವವರೆಗೂ ನಾನು ಜೀವನದಲ್ಲಿ ಸೋಲನ್ನು ಒಪ್ಪಿಕೊಳ್ಳುವುದಿಲ್ಲವೆಂದು ನಿರ್ಣಯಿಸಿದ್ದೇನೆ.

ಪ್ರಯಾಗರಾಜ ಇಲಹಾಬಾದ್ (ಅಲಹಾಬಾದ್) ನಲ್ಲಿ ಪಂ. ಮೋತಿಲಾಲ ನೆಹರು ಮತ್ತು ಐಶ್ವರ್ಯವಂತ ಪತ್ನಿ ಸ್ವರೂಪರಾಣಿಯವರು ತಮ್ಮೆಲ್ಲ ಸಾಂಸಾರಿಕ ಸುಖವನ್ನು ತೊರೆದು ಸರಳ ಜೀವನವನ್ನು ತಮ್ಮದಾಗಿಸಿಕೊಂಡರು. ಮೋತಿಲಾಲ್ ನೆಹರು ಎಷ್ಟು ದೊಡ್ಡ ವಕೀಲರಾಗಿದ್ದರೆಂದರೆ ಒಂದು ಸಾರಿ ಕೋರ್ಟ್‌ನಲ್ಲಿ ವಕಾಲತ್ತು ಮಾಡಲು ೫೦೦೦ ರೂ. ತೆಗೆದುಕೊಳ್ಳುತ್ತಿದ್ದರು. ಅವರು ರಾಜ-ಮಹರಾಜರುಗಳ ಕೇಸ್ ತೆಗೆದುಕೊಂಡು ವಕಾಲತ್ ನಡೆಸುತ್ತಿದ್ದರು. ರಾಜರ ಠೀವಿಯಿಂದಲೇ ಬದುಕಿದ್ದರು. ಅವರೂ ಅವರ ಬ್ಯಾರಿಸ್ಟರ್ ಮಗ ಜವಾಹರಲಾಲ ಇಬ್ಬರೂ ಜೈಲಿಗೆ ಹೋಗುವುದಕ್ಕಾಗಿ ಪೂರ್ವಸಿದ್ಧತೆ ಹಾಗೆ ಭೂಮಿಯ ಮೇಲೆ ಹಾಸಿಗೆ ಇಲ್ಲದೆ ಮಲಗಲು ಆರಂಭಿಸಿದರು. ಅಪ್ಪ-ಮಗ ಇಬ್ಬರೂ ತಮ್ಮ ಲಕ್ಷಾಂತರ ರೂಪಾಯಿಗಳ ವಕಾಲತ್ತನ್ನು ಬಿಟ್ಟರು. ಮತ್ತು ದೇಶಸೇವೆ, ಅಸಹಕಾರದ ಬಿರುಗಾಳಿಗೆ ತಮ್ಮನ್ನು ಸಿಲುಕಿಸಿಕೊಂಡರು. ಪೂರ್ತಿ ಪರಿವಾರವೇ ತನ್ನ ರಾಜವೈಭವದ ಜೀವನವನ್ನು ತ್ಯಜಿಸಿ ಸರಳ ಜೀವನದ ವ್ರತ ವಹಿಸಿತು. ಪಂಜಾಬ್‌ನಲ್ಲಿ ಲಾಲಾ ಲಾಜಪತರಾಯ್ ಅವರು ತನ್ನ ವಕಾಲತ್ತು, ತೋಟ-ಮುಗ್ಗಟ್ಟು, ಆಸ್ತಿ ಎಲ್ಲವನ್ನು ತ್ಯಜಿಸಿ ದೇಶದ ಹೆಸರಲ್ಲಿ ಸನ್ಯಾಸ ವಹಿಸಿದರು. ಸತ್ಯಾಗ್ರಹ ನಡೆದ ಕಡೆ, ಅತ್ಯಾಚಾರ ನಡೆದಲ್ಲೂ ಲಾಲಾಜಿ ಎಲ್ಲರಿಗಿಂತ ಮುಂಚೆ ಹಾಜರಾಗುತ್ತಿದ್ದರು. ಅವರು ಪಾರದರ್ಶಕವಾಗಿ ನಿರ್ಭೀತರಾಗಿದ್ದರು. ರಾಜಕೀಯ ತಿಳುವಳಿಕೆ ಶ್ರೇಷ್ಠ ದರ್ಜೆಯದಾಗಿತ್ತು. ಮದ್ರಾಸ್‌ನಲ್ಲಿ ರಾಜಾಜಿ ತನ್ನ ಪ್ರತಿಭೆಯಿಂದ ಕೂಡಿದ ವಕಾಲತ್ತನ್ನು ಪೂರ್ತಿಯಾಗಿ ತ್ಯಜಿಸಿ ಗಾಂಧೀಜಿಯ ಅಸಹಕಾರ ಆಂದೋಳನಕ್ಕೆ ದುಮುಕಿದರು.

ಇವರು ದಕ್ಷಿಣ ಭಾರತದ ಬ್ರಾಹ್ಮಣ, ವಿಲಕ್ಷಣವಾದ ವ್ಯಕ್ತಿಯಾಗಿದ್ದರು. ಅವರ ಕುಶಾಗ್ರಬುದ್ಧಿ, ಧರ್ಮನಿಷ್ಠೆ ಮತ್ತು ಕುಶಲತೆ ಅದ್ಭುತವಾಗಿತ್ತು. ಅವರು ರಾಜಕೀಯದಲ್ಲಿ ಇಲ್ಲದೆ ಹೋಗಿದ್ದರೆ ಒಬ್ಬ ಸಾಹಿತಿ ಉಪನಿಷತ್ತುಗಳ ಭಾಷ್ಯಕಾರನ ಹಾಗೆ ಪ್ರಖ್ಯಾತಿ ಪಡೆಯುತ್ತಿದ್ದರು. ಅವರ ಸರಳತೆ, ವಿನೋದ ಮತ್ತು ಕಡಿಮೆ ಮಾತಿನಲ್ಲಿ ಅತಿ ಹೆಚ್ಚು ಹೇಳುವ ಯೋಗ್ಯತೆ ಕೂಡ ತೀಕ್ಷ್ಣವಾಗಿತ್ತು. ಅವರ ಪತ್ನಿ ಐದು ಮಕ್ಕಳನ್ನು ಬಿಟ್ಟು ಚಿಕ್ಕ ವಯಸ್ಸಿನಲ್ಲೇ ತೀರಿಕೊಂಡಿದ್ದಳು. ಮನೆ ಹಾಳಾಗಿಹೋಗಿತ್ತು. ಚಿಕ್ಕ ಮಗಳು ಲಕ್ಷ್ಮಿಗೆ ಆಗ ಒಂದೂವರೆ ವರ್ಷ. ಆದರೆ ರಾಜಾಜಿ ಸುಖ ವೈಭೋಗವನ್ನು ತ್ಯಜಿಸಿ ತನ್ನ ಮಕ್ಕಳು ಮರಿ ಜೊತೆ ಆಶ್ರಮ ಜೀವನ ಮತ್ತು ಬಡತನವನ್ನು ತಮ್ಮದಾಗಿಸಿಕೊಂಡರು. ಸಿಂಧ್‌ನಲ್ಲಿ ಜಯರಾಮ ದಾಸ್, ದೌಲತರಾಮ್, ಮಹಾರಾಷ್ಟ್ರದಲ್ಲಿ ಗಂಗಾಧರರಾವ್ ದೇಶಪಾಂಡೆ ಮತ್ತು ಶಂಕರರಾವ ದೇವ್, ಬೊಂಬಾಯಿಯಲ್ಲಿ ವಿಠಲಭಾಯಿ ಪಟೇಲ ಮತ್ತು ಸರೋಜಿನಿ ನಾಯ್ಡು, ಮಧ್ಯಪ್ರದೇಶದ ವರ್ಧಾದಲ್ಲಿ ಸೇಠ್ ಜಮನಾಲಾಲ ಬಜಾಜ್, ಗುಜರಾತ್‌ನಲ್ಲಿ ವಲ್ಲಭಭಾಯಿ ಪಟೇಲ್, ಬಡೌದಾ ಮಹಾರಾಜರ ದಿವಾನ ಅಬ್ಬಾಸ್ ತೈಯ್ಯಬ್‌ಜೀ ಮತ್ತು ಆತನ ಕೃಷ್ಣಭಕ್ತ ಮಗಳು ರೆಹಾನಾ ತೈಯ್ಯಬ್‌ಜೀ ಮುಂತಾದ ಅನೇಕ ಜನರು ತಮ್ಮ ಜೀವನಶೈಲಿಯನ್ನೇ ಬದಲಾಯಿಸಿಕೊಂಡರು. ತಮ್ಮ ಸಂಪತ್ತನ್ನೆಲ್ಲಾ ತ್ಯಜಿಸಿ, ದೇಶಕ್ಕಾಗಿ ಸರ್ವಸ್ವವನ್ನು ಅರ್ಪಿಸಿ ಸ್ವಾತಂತ್ರ್ಯ ಹೋರಾಟಕ್ಕೆ ದುಮುಕಿದರು. ಸ್ವೇಚ್ಛೆಯಿಂದ ಒಮ್ಮೆ ಎಲ್ಲ ಸುಖಗಳನ್ನು ತ್ಯಜಿಸಿದ ನಂತರ ಒಮ್ಮೆಯೂ ಆ ಕಡೆ ತಿರುಗಿ ನೋಡಲಿಲ್ಲ. ಹಿಮ್ಮೆಟ್ಟಿ ಸಂಪತ್ತಿನ ಆಸೆ ಕೂಡ ತೋರಲಿಲ್ಲ. ಸಾವಿರಾರು ಸಂಖ್ಯೆಯಲ್ಲಿ ಆತ್ಮ ಬಲಿದಾನ ಮಾಡುವ ಅಂತಹ ದೇಶಭಕ್ತರಿರುವ ದೇಶದಲ್ಲಿ ಈ ಭೂಮಿ ಅಪೂರ್ವವಾದುದು. ೧೯೨೧–೨೨ರಲ್ಲಿ ನಾ ಮುಂದೆ ತಾ ಮುಂದೆ ಎಂದು ಬಲಿದಾನದ ಸ್ಪರ್ಧೆಯ ಹಾಗೆ ಮೂಡಿತ್ತು. ಆ ದಿನಗಳ ಗಾಳಿಯೇ ಅಷ್ಟು ವಿಚಿತ್ರದ್ದಿರಬೇಕು. ಸಂಪತ್ತಿನ ಮೋಹವನ್ನು ಅವರು ನೋಡು–ನೋಡುತ್ತಿದ್ದಂತೆಯೇ ತ್ಯಜಿಸಿಬಿಡುತ್ತಿದ್ದರು.

ಆ ತೆರನಾದ ಬಿರುಗಾಳಿಯ ದಿನಗಳಲ್ಲಿ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನದ ಗೌರವವನ್ನು ಗುಜರಾತಿಗೆ ನೀಡಬೇಕೆಂದು ಗುಜರಾತ್ ವಿನಂತಿಸಿತು. ಈ ರೀತಿ ೧೯೨೧ ರ ಡಿಸೆಂಬರ್‌ನಲ್ಲಿ ಮೊದಲ ಬಾರಿ ಅಹಮದಾಬಾದ್‌ನಲ್ಲಿ ಕಾಂಗ್ರೆಸ್ ಅಧಿವೇಶನ ಜರುಗಿತ್ತು. ವಲ್ಲಭಭಾಯಿ ಪಟೇಲ್ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ದೇಶಬಂಧು ಕಾಂಗ್ರೆಸ್‌ನ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ತಮ್ಮ ಬಾಗಿಲಿಗೆ ದೇಶಪ್ರೇಮಿಗಳ (ಬೀಗರ ತಂಡದಂಥ) ಮೆರವಣಿಗೆ ಬಂದಿದೆ ಎಂದು ಗುಜರಾತ್‌ಗೆ ಅನ್ನಿಸಿತು. ಸರದಾರ್ ಪಟೇಲರು ತಮ್ಮ ಸಹೋದರ ಡಾಹ್ಯಾಭಾಯಿಯ ಮದುವೆಯಲ್ಲಿ ಏನೂ ಮಾಡಲಿಲ್ಲವಾದರೂ ಈ ಕಾಂಗ್ರೆಸ್ ಅಧಿವೇಶನಕ್ಕಾಗಿ

ಅಪೂರ್ವ ಸಿದ್ಧತೆಗಳನ್ನು ಮಾಡಿದ್ದರು. ಮಿಲ್ ಮಾಲೀಕರು, ಮತ್ತು ಜೈನ ಸೇಠ್‌ಗಳ ಆ ನಗರದಲ್ಲಿ ಹಣ ಮತ್ತು ವ್ಯವಸ್ಥೆಯ ಕೊರತೆಯ ಪ್ರಶ್ನೆ ಏಳುತ್ತಿರಲಿಲ್ಲ. ಪ್ರತಿಯೊಬ್ಬ ರಾಷ್ಟ್ರ ಮುಖಂಡನಿಗೂ ತಂಗಲು ಸುಂದರವಾದ ವ್ಯವಸ್ಥೆ ಮತ್ತು ಪ್ರತಿನಿಧಿಗಳು ಇರಲು, ಕೂರಲು ಒಳ್ಳೆಯ ವ್ಯವಸ್ಥೆ ಮಾಡಲಾಗಿತ್ತು. ನಾನು ಹುಟ್ಟೇ ಇರಲಿಲ್ಲ. ಆದರೆ ಕಾಕೋರಿ ಕಾಂಡದ ಬಾಬು ತ್ರಿಲೋಕಿ ಸಿಂಹ ಮತ್ತು ಕೇಶವ ದೇವ ಮಾಳವೀಯ ಅವರು ನನಗೆ ಅಹಮದಾಬಾದ್ ಕಾಂಗ್ರೆಸ್‌ನ ವರ್ಣನೆ ನೀಡಿದ್ದರು. ತಾವು ಕಾಂಗ್ರೆಸಿಗರಾಗಿರದೆ ಗಂಡಿನ ದಿಬ್ಬಣವದವರೇನೋ ಅನ್ನುವ ಭಾವನೆ ಅವರಿಗೆ ಬಂದಿತ್ತಂತೆ. ದಿವಸ ಮೂರು ಸಾರಿ ಊಟ, ಆಗ ವಲ್ಲಭಭಾಯಿ ಪಟೇಲರು ಗಾಂಧೀಜಿಯ ಸರಳ ಭೋಜನವನ್ನು ಒತ್ತಟ್ಟಿಗೆ ಸರಿಸಿ ಅವರಿಗೆ ಮಹಾಭೋಜನದ ಏರ್ಪಾಡು ಮಾಡಿದ್ದರು. ಅಧಿವೇಶನದ ಮಂಟಪವನ್ನು ಮೊಟ್ಟ ಮೊದಲ ಬಾರಿ ಖಾದಿಯಲ್ಲಿ ಸಜ್ಜುಗೊಳಿಸಲಾಗಿತ್ತು. ಗುಜರಾತ್‌ನ ಮರಗೆಲಸದವರು ಮತ್ತು ಕುಂಬಾರರು ತಮ್ಮ ಕರಕುಶಲತೆಯಿಂದ ಒಂದಕ್ಕಿಂತ ಮತ್ತೊಂದು, ಹೀಗೆ ಸುಂದರವಾದ ಸ್ವಾಗತಕಮಾನುಗಳನ್ನು ಸಿದ್ಧಪಡಿಸಿದರು. ದೇಶದಲ್ಲಿ ಮೊದಲ ಬಾರಿಗೆ ಖಾದಿಯ ವಿಶಾಲ ಪ್ರದರ್ಶನವಾಯಿತು. ದೇಶದ ಮೂಲೆ ಮೂಲೆಗಳಿಂದ ಗೃಹೋದ್ಯೋಗದ ಉತ್ಕೃಷ್ಟ ಮಾದರಿಗಳು ಬಂದವು. ಮೊಟ್ಟ ಮೊದಲ ಬಾರಿ, ಕಾಂಗ್ರೆಸ್ ಅಧಿವೇಶನವನ್ನು ಏರ್ಪಡಿಸುವ ನಿಯಂತ್ರಿಸುವ ಜನ ಯಾವ ಗುಲಾಮದೇಶದ ಜನರೂ ಆಗಿಲ್ಲ, ಅವರು ಬಲಯುತವಾದೊಂದು ರಾಷ್ಟ್ರದ ಸ್ವತಂತ್ರ ನಾಗರಿಕರೆಂಬ ಅನುಭವವಾಯಿತು.

ಆದರೆ ಆಂಗ್ಲರ ಸರಕಾರ ಈ ಎಲ್ಲ ಉತ್ಸಾಹ ನೋಡಿ ಗಾಬರಿಗೊಂಡಿತು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ದೇಶಬಂಧು ದಾಸ್ ಅವರು ಅಹಮದಾಬಾದ್ ತಲುಪುವುದಕ್ಕೂ ಮುಂಚೆ ಅಧ್ಯಕ್ಷರ ಸ್ಪೆಷಲ್ ಟ್ರೈನ್‌ನಿಂದ ಬಂಧಿಸಿ ಕೈದು ಮಾಡಿದರು. ಅಧ್ಯಕ್ಷನನ್ನು ಹಿಡಿದು ಹಾಕಿದ ಮೇಲೆ ಸತ್ಯಾಗ್ರಹಿಗಳ ಉತ್ಸಾಹ ತಣ್ಣಗಾಗುವುದೆಂದು ಸರಕಾರ ಭಾವಿಸಿದ್ದಿರಬೇಕು, ಆದರೆ ಸರಕಾರಿ ಅಧಿಕಾರಿಗಳು ಯೋಚಿಸಿದ್ದು ತಪ್ಪಾಯಿತು. ದೇಶಬಂಧು ಅವರನ್ನು ಬಂಧಿಸಿದ ನಂತರ ದೆಹಲಿಯ ಹಕೀಮ ಅಜಮಲ್ ಖಾನನ್ನು ಕಾಂಗ್ರೆಸ್ ಅಧ್ಯಕ್ಷನಾಗಿ ಆರಿಸಿತು. ಅವರ ಅಧ್ಯಕ್ಷತೆಯಲ್ಲಿ ಅಹಮದಾಬಾದ್ ಅಧಿವೇಶನ ನಡೆಯಿತು. ಕಾಂಗ್ರೆಸ್ ಸೆಷನ್ ನಂತರ ಪ್ರತಿನಿಧಿಗಳು ತಮ್ಮ ತಮ್ಮ ಪ್ರಾಂತ್ಯಗಳಿಗೆ ತಲಪಿದರು. ನಂತರ ಸರಕಾರ ಬಂಧಿಸುವ ಕಾರ್ಯ ಆರಂಭಿಸಿತು. ದೇಶದ ದೊಡ್ಡ ದೊಡ್ಡ ನೇತಾರರನ್ನೆಲ್ಲಾ ಹಿಡಿದು ಜೈಲಿಗೆ ಹಾಕಿದರು. ಅಸಹಕಾರ ಆಂದೋಳನ ಬಿರುಗಾಳಿಯ ವೇಗದಲ್ಲಿ ನಡೆಯತೊಡಗಿತು. ಈ ವೇಳೆಗೆ ಸುಮಾರು ೨೦೦೦೦ ಜನರು ಬಂಧಿತರಾಗಿದ್ದರು. ಅಷ್ಟರಲ್ಲಿ ೪ ಫೆಬ್ರವರಿ ೧೯೨೨ರಂದು ಉತ್ತರ ಪ್ರದೇಶದ ಗೋರಖಪುರದ ಬಳಿ ಚೌರಿ

ಚೌರಿ ಎಂಬ ಹಳ್ಳಿಯಲ್ಲಿ ಶಾಂತ–ಅಹಿಂಸಾತ್ಮಕ ಮೆರವಣಿಗೆ ಹೊರಟಿತು. ಅದೊಂದು ಚಿಕ್ಕಹಳ್ಳಿ ಪೋಲೀಸ್ ಚೌಕಿಯ ಬಳಿ ಮೆರವಣಿಗೆ ಹೋಗುತ್ತಿತ್ತು. ಆಗ ಕೆಲವು ಜನ ಪೋಲೀಸ್‌ನವರು ಈ ದೇಶಪ್ರೇಮಿಗಳನ್ನು ಛೇಡಿಸಿದರು ಮತ್ತು ಅಸಹಕಾರ ಚಳವಳಿಗಾರರನ್ನು ಹರಕು ಚಿಂದಿಯಾದ ಸೈನ್ಯವೆಂದು ಹೇಳಿ ಗೇಲಿ ಮಾಡಿದರು. ಆ ಮೆರವಣಿಗೆಯಲ್ಲಿ ಎಷ್ಟೋ ಜನ ಯುವಕರು ಕೂಡ ಇದ್ದರು. ಅವರಿಗೆ ಆ ಕೀಳು ಹಾಸ್ಯ ಸಹಿಸಲಾಗಲಿಲ್ಲ. ಅವರೂ ಒಂದೆರಡು ಮಾತುಗಳನ್ನಾಡಿದರು. ಆಗ ಪೋಲೀಸ್ ಆವೇಶಗೊಂಡಿತು. ಥಾನೇದಾರ್ ಹಠಾತ್ತನೆ ಆ ಶಾಂತ ಮೆರವಣಿಗೆಯ ಮೇಲೆ ಗೋಲಿಬಾರ್ ಮಾಡುವಂತೆ ಆದೇಶ ನೀಡಿದ. ಗೋಲಿಬಾರ್ ಆಯಿತು. ಒಬ್ಬ ಸತ್ಯಾಗ್ರಹಿ ಅಲ್ಲೇ ಸತ್ತ, ಆ ಶಾಂತ ಸಮುದಾಯಕ್ಕೆ ಈ ನಿಷ್ಪಾಪ ಹತ್ಯೆ ಸಹಿಸಲಾಗಲಿಲ್ಲ. ಈ ಅಹಿಂಸಕ ಗುಂಪು ದುಃಖ ಹಾಗೂ ಅವಮಾನದಿಂದಾಗಿ ಉತ್ತೇಜಿತಗೊಂಡು ಕ್ರೋಧಪೂರಿತವಾಯಿತು. ಯಾವ ತರಹೆಯ ಹಿಂಸೆಯನ್ನು ಮಾಡುವ ಉದ್ದೇಶವೂ ಇಲ್ಲದಿದ್ದರೂ ಇವರಗಳು ಪೊಲೀಸ್ ಚೌಕಿಗೆ ಬೆಂಕಿ ಹಚ್ಚಿದರು. ಹತ್ತು–ಹನ್ನೆರಡು ಮಂದಿ ಪೋಲೀಸ್ ಕಾನ್‌ಸ್ಟೇಬಲ್‌ಗಳು ಆ ಉರಿಯುವ ಚೌಕಿಯಲ್ಲೇ ಸುಟ್ಟು ಸತ್ತರು. ಈ ಎದೆಬಿರಿಯುವ ಘಟನೆಯ ಸುದ್ದಿ ದೇವದಾಸ್‌ಗಾಂಧಿ ಮುಖಾಂತರ ಗಾಂಧೀಜಿಗೆ ತಾರು ಬಂದಾಗ ಅವರು ಬೆಚ್ಚಿಬಿದ್ದರು. ಅಸಹಕಾರದ ಅಹಿಂಸಾತ್ಮಕ ಚಳವಳಿ ಕೈಮೀರಿಹೋಗಿ ಹೀಗೆ ಹಿಂಸೆಯಲ್ಲಿ ಪರಿವರ್ತನೆಗೊಂಡರೆ ಸತ್ಯಾಗ್ರಹದ ಶಕ್ತಿಯೇ ಹಾಳಾಗಿ ಹೋಗುವುದೆಂದು ಅವರಿಗನ್ನಿಸಿತು. ವಿನಾಶವಾಗುತ್ತದೆ, ಸರಕಾರ ಇಂತಹ ತಪ್ಪಿಗಾಗಿಯೇ ಕಾದು ಕುಳಿತಿದೆ. ಹಿಂಸಾತ್ಮಕ ಗುಂಪನ್ನು ಮತ್ತು ಭಯಂಕರ ಹಿಂಸೆಯಿಂದ ವಶಕ್ಕೆ ತರುವುದು ಸಾಮಾನ್ಯ ಆಡಳಿತಜ್ಞನ ಮೂಲಮಂತ್ರವಾಗಿರುತ್ತದೆ. ಆಶ್ರಿತ ಜನರ ಮೇಲೆ ತನ್ನ ಅಧಿಕಾರದ ದರ್ಪವನ್ನು ಒಡ್ಡಿ ಇನ್ನೊಮ್ಮೆ ಅವರು ಉಸಿರು ತೆಗೆಯದಂತೆ ಮಾಡಲು ಅಧಿಕಾರಿಯಾದವನು ಅವಕಾಶಕ್ಕಾಗಿ ಕಾಯುತ್ತಿರುತ್ತಾನೆ. ಅಹಿಂಸಾತ್ಮಕ ಆಂದೋಳನದಲ್ಲಿ ಹಿಂಸೆ ಮುಂದಾಗುವ ಮೊದಲೇ ಸತ್ಯಾಗ್ರಹವನ್ನು ನಿಲ್ಲಿಸುವುದೇ ಶ್ರೇಯಸ್ಕರವೆಂದು ಗಾಂಧೀಜಿಗನ್ನಿಸಿತು. ಅಮೃತ ಕುಂಭವನ್ನು ದೂಷಿತಗೊಳಿಸಲು ಒಂದು ತೊಟ್ಟು ವಿಷ ಸಾಕು. ಚೌರಿಚೌರ ಅಸಹಕಾರ ಚಳವಳಿ ವಿಷದಲ್ಲಿ ಮಿಂದ ಘಟನೆಯಾಗಿತ್ತು. ಅನೇಕ ಮಿತ್ರರಿಗೆ ಗಾಂಧೀಜಿಯವರ ಈ ವಿಚಾರಗಳು ಹಿಡಿಸಲಿಲ್ಲ. ಬಡಪಾಯಿಗಳು, ಜೈಲಿಗೆ ಹೋದ ಮುಖಂಡರು ಮತ್ತು ೨೦೦೦೦ ಸತ್ಯಾಗ್ರಹಿಗಳಿಗೆ ಇದರಿಂದ ಎಷ್ಟು ಕಷ್ಟ– ನಿರಾಶೆಯಾಗುತ್ತದೆಂಬ ತರ್ಕವನ್ನು ಅವರು ಒಡ್ಡಿದ್ದರು. ಅವರು ಸರ್ವಸ್ವ ತ್ಯಾಗ ಮತ್ತು ಜೈಲಿನ ಕಷ್ಟ ಎಲ್ಲಾ ವ್ಯರ್ಥವಾಗುತ್ತದೆ ಎಂದರು. ಆದರೆ ಗಾಂಧೀಜಿಗೆ ಪರಿಸ್ಥಿತಿಯ ಸ್ಪಷ್ಟ ತಿಳಿವಳಿಕೆ ಇತ್ತು. ಅವರ ಬಡಪಾಯಿ ಸಹೋದ್ಯೋಗಿಗಳ ಮೇಲೆ ಸರಕಾರ ಆಕ್ರಮಣ ಮಾಡುವುದು ಅವರಿಗಿಷ್ಟವಿರಲಿಲ್ಲ.

ಸತ್ಯವನ್ನು ಸಾಧಿಸುವಾಗ ಕ್ಷಣಿಕ ಅಸತ್ಯದ ನಿರ್ವಾಹ ಕೂಡ ಕಠಿಣವಾಗಿರುತ್ತದೆ. ಆ ಕ್ಷಣಿಕ ಮೋಹದಕ್ಕೆ ಸಿಗುವ ಶಿಕ್ಷೆ ಯಾವಾಗಲೂ ಭಯಾನಕವಾಗಿರುತ್ತದೆ. ಅಸತ್ಯ ಮತ್ತು ಹಿಂಸೆಯ ಪುನರಾವರ್ತನೆಯಾಗುವುದು ಹಾಗೂ ಅದರ ಶಿಕ್ಷೆ ಸಮಾಜಕ್ಕೆ ತಗುಲುವುದು ಗಾಂಧೀಜಿಗೆ ಇಷ್ಟವಿರಲಿಲ್ಲ. ಚೌರಿ ಚೌರದ ಈ ಚಿಕ್ಕ ತಪ್ಪನ್ನು ಗಾಂಧೀಜಿ ತಮ್ಮದೆಂದು ಭಾವಿಸಿದರು. ಜೊತೆಗಾರರಿಗೆ ಅದರ ಸೂಕ್ಷ್ಮ ಸತ್ಯವನ್ನು ತಿಳಿಯಹೇಳಿದರು. ಸತ್ಯಾಗ್ರಹವನ್ನು ನಿಲ್ಲಿಸಿದರು. ಇಡೀ ದೇಶ ಸ್ತಬ್ಧಗೊಂಡಿತು. ಬಾಬು ತ್ರಿಲೋಕಸಿಂಹ ಈ ಅಸಹಕಾರ ಚಳವಳಿಯಲ್ಲಿ ತೀವ್ರವಾಗಿ ಕೆಲಸ ಮಾಡಿದ್ದರು. ಅವರು ಹೇಳುತ್ತಿದ್ದರು, ಈ ರೀತಿ ಅಡಚಣೆ ಬಾರದೆ ಹೋಗಿದ್ದರೆ, ಆ ತರಹೆಯ ಹಿಂಸಾತ್ಮಕ ದಂಗೆ ಆಗದೆ ಇದ್ದಿದ್ದರೆ ಆಂದೋಳನ ಅಡಚಣೆ ಇಲ್ಲದೆ ನಡೆದಿದ್ದರೆ ೧೯೨೨ರಲ್ಲಿ ಚಿಕ್ಕ ಅವಧಿಯಲ್ಲಿದ್ದ ತೀವ್ರತೆ, ಆ ವಿರಾಟ್ ಶಕ್ತಿಯೆದುರಿಗೆ ಬ್ರಿಟಿಷ್ ಸರಕಾರ ಉಳಿಯುವುದು ಕಷ್ಟವಾಗುತ್ತಿತ್ತು. ಎರಡನೆ ವಿಶ್ವಯುದ್ಧಕ್ಕೆ ೧೮ ವರ್ಷ ಮೊದಲೇ ದೇಶ ಸ್ವಾಧೀನವಾಗಿರುತ್ತಿತ್ತು. ಅಂದರೆ ನಿಜವಾಗಿ ಯೋಚಿಸಬೇಕು, ಆಗ ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾಗಿ ದೇಶಬಂಧು ಚಿತ್ತರಂಜನ್ ದಾಸ್ ಆಗಿರುತ್ತಿದ್ದರು. ವಿಠಲ್ ಭಾಯಿ ಪಟೇಲ್, ಲಾಲ ಲಾಜಪತರಾಯ್, ಸ್ವಾಮಿ ಶ್ರದ್ಧಾನಂದ, ಮೋತಿಲಾಲ ನೆಹರೂನಂತಹ ಮಹಾನಾಯಕರು ಬದುಕಿರುತ್ತಿದ್ದರು. ಹಿಂದೂ–ಮುಸಲ್ಮಾನರಲ್ಲಿ ಬಂಧುತ್ವ ಉಳಿದಿರುತ್ತಿತ್ತು. ಪಾಕಿಸ್ತಾನ ಬೇಕೆಂಬ ಬೇಡಿಕೆ ಇರುತ್ತಿರಲಿಲ್ಲ. ವಿದೇಶಿ ಸರಕಾರ ಕೋಮುವಾದದ ಗಲಭೆಗಳನ್ನು ನಂತರ ಆರಂಭ ಮಾಡಿಸಿತಲ್ಲ, ಅದೂ ಆಗುತ್ತಿರಲಿಲ್ಲ. ರಾಷ್ಟ್ರದಲ್ಲಿ ಐಕ್ಯ ನೆಲೆಸಿರುತ್ತಿತ್ತು. ಯಾವ ಗೋಡ್ಸೆಯೂ ಗಾಂಧೀಜಿಯ ಪ್ರಾಣ ತೆಗೆಯಹೋಗುತ್ತಿರಲಿಲ್ಲ. ಆದರೆ ವಿಧಿಯ ವಿಧಾನವನ್ನು ಯಾರೂ ಓದಲಾಗದು! ಚೌರಿ ಚೌರ ಎಲ್ಲವನ್ನೂ ನಾಶಪಡಿಸಿತು. ಭಾರತದ ಇತಿಹಾಸ ಬೇರೆಯದೇ ತಿರುವು ಪಡೆಯಿತು.

೧೦ ಮಾರ್ಚ ೧೯೨೨ರಂದು ಸರಕಾರ ಅಹಮದಾಬಾದಿನಲ್ಲಿ ಗಾಂಧೀಜಿಯನ್ನು ಸೆರೆ ಹಿಡಿಯಿತು. ಜಿಲ್ಲಾ ಮ್ಯಾಜಿಸ್ಟ್ರೇಟ್ ಬ್ರೂಮ್‌ಫೀಲ್ಡ್‌ನ ಕೋರ್ಟಿನಲ್ಲಿ ರಾಜದ್ರೋಹದ ವಿಶ್ವವಿಖ್ಯಾತ ಕೇಸ್‌ನಲ್ಲಿ ಗಾಂಧೀಜಿ ಮೇಲೆ ಕೇಸ್ ನಡೆಯಿತು. ಜಡ್ಜಿ ಬ್ರೂಮ್‌ಫೀಲ್ಡ್ ಮತ್ತು ಆರೋಪಿ ಗಾಂಧೀ ಇಬ್ಬರೂ ಸೌಹಾರ್ದಯುತ ವ್ಯಕ್ತಿತ್ವದ ಶ್ರೇಷ್ಠ ಪರಿಚಯ ನೀಡಿದರು. ತನ್ನ ಅಪರಾಧವನ್ನೊಪ್ಪಿಕೊಂಡು ಗಾಂಧೀಜಿ ಸಂಕ್ಷಿಪ್ತವಾಗಿ ಸತ್ಯಾಗ್ರಹದ ಇತಿಹಾಸ ಮತ್ತು ವಿಶ್ಲೇಷಣೆ ನೀಡಿದರು. ಗಾಂಧೀಜಿ ಹೀಗೆ ಹೇಳಿದರು: "೩೦ ಕೋಟಿ ನಿರಪರಾಧಿಗಳನ್ನು ಗುಲಾಮರನ್ನಾಗಿ ಮಾಡಿಟ್ಟಿರುವ ಅನ್ಯಾಯ ರಾಜ್ಯ ಜನರ ಊಟ–ಕೆಲಸವನ್ನು ಕಿತ್ತುಕೊಂಡು ನರಭಕ್ಷಕನ ಹಾಗೆ ಶೋಷಣೆ ನಡೆಸುತ್ತಿದೆ, ಅದನ್ನು ಸಹಿಸುವುದು ದೇವರಿಗೆ ಮತ್ತು ಮಾನವನ ಗೌರವಕ್ಕೆ ದ್ರೋಹ ಮಾಡಿದಂತೆ,

ಈ ಅತ್ಯಾಚಾರಿ ರಾಜ್ಯ ಕೋಟ್ಯಂತರ ಜನರನ್ನು ನಪುಂಸಕರನ್ನಾಗಿ ಮಾಡಿಟ್ಟಿದೆ. ಅದಕ್ಕೆ ಸಹಕಾರ ನೀಡುವುದು ಸತ್ಯಕ್ಕೆ ಅನ್ಯಾಯವಾಗುತ್ತದೆ." ಆದುದರಿಂದ ಈ ಆಂದೋಳನದ ನಡೆದಿತ್ತು. ಆದರೆ ಸತ್ಯಾಗ್ರಹದಲ್ಲಿ ಹಿಂಸಾತ್ಮಕ ತತ್ತ್ವದ ದೋಷ ಬಂದುದರಿಂದ ಅದರ ಶಕ್ತಿ ಕುಂದುವುದರಲ್ಲಿತ್ತು. ಆ ದೈವೀಶಕ್ತಿಯನ್ನು ಸಂಗ್ರಹಿಸುವುದಕ್ಕಾಗಿಯೇ ಗಾಂಧೀಜಿ ಚಳವಳಿಯನ್ನು ನಿಲ್ಲಿಸಿದ್ದರು. ಗಾಂಧೀಜಿ ತನ್ನ ಅಪರಾಧವನ್ನು ಒಪ್ಪಿಕೊಂಡರು. ಆದರೆ ಸ್ಪಷ್ಟವಾಗಿ ಇಂತಹ ಹಿಂಸಾಚಾರ ನಡೆಸುವ ರಾಜ್ಯದ ವಿರುದ್ಧ ಅಹಿಂಸಾತ್ಮಕ ರಾಜದ್ರೋಹ ಮಾಡಿ ಸ್ವತಂತ್ರತೆ ಪಡೆಯುವುದು ನಮ್ಮ ಜೀವನದ ಒಂದೇ ಗುರಿ. ಆದುದರಿಂದ ಸಂತೋಷವಾಗಿ ನನ್ನ ಅಪರಾಧ ಒಪ್ಪಿಕೊಳ್ಳುತ್ತೇನೆಂದೂ ಜಡ್ಜ್ ಅವರಿಗೆ ಅತಿ ಕಠಿಣ ಸಜೆ ನೀಡಿ ತನ್ನ ಕರ್ತವ್ಯವನ್ನು ಪೂರೈಸಬೇಕೆಂದು ಹೇಳಿದರು.

ರಾಜದ್ರೋಹದ ಈ ಕಠಿಣವಾದ ಕೇಸು ಮೂರು ಗಂಟೆಗಳ ಕಾಲದಲ್ಲಿ ಮುಕ್ತಾಯವಾಯಿತು. ಜಡ್ಜ್ ಬ್ರೂಮ್‌ಫೀಲ್ಡ್ ತಮ್ಮ ಆರೋಪಿಯ ಪ್ರಾರ್ಥನೆ ಮತ್ತು ಶ್ರೇಷ್ಠತೆ ನೋಡಿ ಅಭಿಭೂತರಾಗಿ ಅವರು ಫೈಸಲೆ ನೀಡುತ್ತಾ ಹೇಳಿದರು: "ಪ್ರಪಂಚದ ಇತಿಹಾಸದಲ್ಲಿ ಇಂತಹ ಆರೋಪಿ ಮತ್ತೊಬ್ಬ ಆಗಿರಲಿಲ್ಲ. ಹೀಗೆ ವರ್ತಿಸಿರಲಿಲ್ಲ." ನಮ್ಮ ಕೋರ್ಟ್‌ಗಳಲ್ಲಿ ನ್ಯಾಯಾಧೀಶರು ಎದ್ದು ನಿಲ್ಲುವುದಿಲ್ಲ. ಆರೋಪಿ ನಿಂತಿರುತ್ತಾನೆ. ಬ್ರೂಮ್‌ಫೀಲ್ಡ್‌ರಿಗೆ ಅಪ್ರಿಯವಾದ ನಿರ್ಣಯ ನೀಡುವಾಗ ದುಃಖವಾಯಿತು. ಆರೋಪಿಯೊಂದಿಗೆ ಅವರೂ ನಿಂತುಕೊಂಡರು ಕ್ಷಮೆ ಯಾಚಿಸುತ್ತಾ ಅವರು ಅಪರಾಧಿ ಗಾಂಧೀಜಿಗೆ ೧೦ ಮಾರ್ಚ್ ೧೯೨೨ರಂದು ಆರು ವರ್ಷಗಳ ಸಜಾ ವಿಧಿಸಿದರು.

ಕೋರ್ಟ್ ಒಳಗೆ–ಹೊರಗೆ ಸಾವಿರಾರು ಜನ ಸೇರಿದ್ದರು. ಅವರು ತಮ್ಮ ಕಿರೀಟವಿಲ್ಲದ ರಾಜನ ಮಾತು ಕೇಳಿದರು. ಜೀವನದ ದರ್ಶನ ಪಡೆದರು. ಬಹುಶಃ ಅವರು ಕೆಲಕ್ಷಣ ಕಾಲ ಕೌಟುಂಬಿಕ ಮಾಯಾಮೋಹದ ಹಿಡಿತದಿಂದ ಮುಕ್ತರಾದರೆಂದು ತೋರುತ್ತದೆ.

ಕಛೇರಿಯ ಬಳಿ ಇದ್ದ ಸಾವಿರಾರು ಜನರ ಗುಂಪಿನ ಘೋಷಣೆಗಳ ನಡುವೆ ಗಾಂಧೀಜಿಯವರನ್ನು ಆಶ್ರಮದ ಬಳಿ ಇದ್ದ ಸಾಬರಮತಿ ಜೈಲಿಗೆ ಕರೆ ತಂದರು. ಸಾಬರಮತಿ ಆಶ್ರಮದ ಬಳಿ ಜೈಲುವಾಸ ಸಾಮೀಪ್ಯವನ್ನು ಸಿದ್ಧಗೊಳಿಸಿತು. ಆಫ್ರಿಕಾದ ಜೈಲಿಗೆ ಹೋಲಿಸಿ ನೋಡಿದಾಗ ಹಿಂದೂಸ್ತಾನದ ಜೈಲು ಸಾಕಷ್ಟು ಸ್ವಚ್ಛವಾಗಿತ್ತು. ಗಾಂಧೀಜಿಗೆ ಬೇರೆಯದೊಂದು ಕೋಣೆ ಕೊಟ್ಟಿದ್ದರು. ಮುಂದೆ ಅಂಗಳವಿತ್ತು. ಬೈಗು ಬೆಳಿಗ್ಗೆ ಸೂರ್ಯನ ದರ್ಶನ, ಆಕಾಶ ದರ್ಶನ ಎರಡೂ ಆಗುತ್ತಿತ್ತು. ಪಕ್ಷಿಗಳ ಉಲಿ, ಅಳಿಲುಗಳ ಓಡಾಟ ಇವುಗಳ ನಡುವೆ ಜೈಲಿನ ಕಷ್ಟ ಕಡಿಮೆಯಾಗುತ್ತಿತ್ತು. ಕೆಲವು ದಿನ ಸಾಬರಮತಿ ಜೈಲಿನಲ್ಲಿ ಇಟ್ಟ ನಂತರ

ಗಾಂಧೀಜಿಯನ್ನು ಪೂನಾ ಬಳಿ ಸೆಂಟ್ರಲ್ ಜೈಲಿನಲ್ಲಿಟ್ಟರು.

ಆರು ವರ್ಷಗಳ ದೀರ್ಘವಾದ ಸಜಾ ಆದರೂ ಗಾಂಧೀಜಿ ನಿಶ್ಚಿಂತೆಯಿಂದಿದ್ದರು. ಜೈಲಿನಲ್ಲಿ ಓದಲು –ಬರೆಯಲು ಅವರಿಗೆ ಸಾಮಗ್ರಿ ನೀಡಲಾಗಿತ್ತು. ಹಾಗಾಗಿ ಈ ಕಾರಾವಾಸದಲ್ಲಿ ಗಾಂಧೀಜಿ ಅನೇಕ ಇಂಗ್ಲಿಷ್ ಪುಸ್ತಕಗಳನ್ನು ಓದಿದರು. ದಕ್ಷಿಣ ಆಫ್ರಿಕಾದ ಇತಿಹಾಸವನ್ನು ಬರೆದರು. ಈ ಇತಿಹಾಸ ನಿಜವಾಗಿಯೂ ಶ್ರೇಷ್ಠವಾದೊಂದು ಪುಸ್ತಕವಾಗಿದೆ. ಓದುವ ಹವ್ಯಾಸದ ಮತ್ತಿನಲ್ಲಿ ಗಾಂಧೀಜಿ ತಮ್ಮ ಆರೋಗ್ಯದ ಕಡೆ ಗಮನ ನೀಡಲೇ ಇಲ್ಲ. ಅಲ್ಪ–ಸ್ವಲ್ಪ ತಿಂದು ಸುಮ್ಮನಿದ್ದು ಬಿಡುತ್ತಿದ್ದರು. ನಿರಂತರವಾಗಿ ಓದುತ್ತಿದ್ದರು. ಒಳಗಿಂದೊಳಗೇ ಅನಾರೋಗ್ಯ ಅವರನ್ನು ಆವರಿಸುತ್ತಿತ್ತು. ಓದುವುದರಲ್ಲಿ ತಲ್ಲೀನರಾಗಿ ಅವರು ಆ ಕಡೆ ಗಮನ ಹರಿಸಲೇ ಇಲ್ಲ. ಅಸ್ತವ್ಯಸ್ತತೆಯಲ್ಲಿ ಅರ್ಧ ಆಹಾರ ಬೇರೆ, ಇದರಿಂದ ಅವರಿಗೆ ಪೂರ್ತಿಯಾಗಿ ಹೊಟ್ಟೆ ಕೆಟ್ಟಿತು. ಅದರಲ್ಲೇ ಎಲ್ಲ ರೋಗಗಳು ಹುಟ್ಟಿಕೊಳ್ಳುತ್ತಿವೆ. ೧೧ ಜನವರಿ ೧೯೨೪ರಂದು ಗಾಂಧೀಜಿ ಪೂರ್ತಿಯಾಗಿ ಅಶಕ್ತರಾದರು. ಜೈಲಿನ ಡಾಕ್ಟರು ಬಹಳ ಒಳ್ಳೆಯವರೂ, ಬುದ್ಧಿವಂತರೂ ಆಗಿದ್ದರು. ಅವರು ಗಾಂಧೀಜಿಯವರನ್ನು ತಕ್ಷಣ ಪೂನಾ ನಗರದ ಒಂದು ದೊಡ್ಡ ಸಾಸೂನ್ ಆಸ್ಪತ್ರೆಗೆ ಭರ್ತಿ ಮಾಡಿಸಿದರು. ಅಲ್ಲಿಯ ಮುಖ್ಯ ಸರ್ಜನ್ ಕರ್ನಲ್ ಮೆಡೋಕ್ ಅದೇ ರಾತ್ರಿ ಗಾಂಧೀಜಿಗೆ ಅಪೆಂಡಿಸೈಟಿಸ್‌ನ ಅಪರೇಷನ್ ಮಾಡಿದರು. ಎರವಾಡ ಜೈಲಿನಲ್ಲಿ ಡಾಕ್ಟರ್ ಸ್ವಲ್ಪವಾದರೂ ಬೇಜವಾಬ್ದಾರಿ ಏನಾದರೂ ತೋರಿದ್ದರೆ ಅಥವಾ ಡಾ॥ ಮೆಡೋಕ್ ಏನಾದರೂ ತಕ್ಷಣ ಆಪರೇಷನ್ ಮಾಡದಿದ್ದರೆ ಕೀವು ತುಂಬಿ ಅಪೆಂಡಿಕ್ಸ್ ಹೊಟ್ಟೆಯಲ್ಲೇ ಒಡೆದುಹೋಗುತ್ತಿತ್ತು. ಗಾಂಧೀಜಿ ಬದುಕುಳಿಯುವುದೂ ಕಷ್ಟವಾಗುತ್ತಿತ್ತು. ಆದರೆ ಡಾ॥ ಮೆಡೋಕರು ಕಾರ್ಯಪ್ರವೃತ್ತರಾದುದರಿಂದ ರಾತ್ರಿಯಲ್ಲೇ ಆಪರೇಷನ್ ಆಯಿತು. ಗಾಂಧೀಜಿಯ ಪ್ರಾಣ ಉಳಿಯಿತು. ಗಾಂಧೀಜಿ ಇನ್ನೂ ಆಸ್ಪತ್ರೆಯಲ್ಲಿರುವಾಗಲೇ ೫ ಫೆಬ್ರವರಿ ೧೯೨೪ರಂದು ಸರಕಾರ ಯಾವ ಶರತ್ತೂ ಹಾಕದೇ ಅವರನ್ನು ಬಿಡುಗಡೆ ಮಾಡಿತು. ಗಾಂಧೀಜಿ ಬಹಳ ನಿಃಶಕ್ತರಾಗಿದ್ದರು. ಆದ್ದರಿಂದ ಸ್ವಲ್ಪ ದಿನ ಸಾಸೂನ್ ಆಸ್ಪತ್ರೆಯಲ್ಲೇ ಇದ್ದರು.

ಆ ಸಂದರ್ಭದಲ್ಲಿ ದೇಶದ ದೊಡ್ಡ ದೊಡ್ಡ ಮುಖಂಡರು ಪ್ರಿಯಮಿತ್ರರು ಗಾಂಧೀಜಿಯವರನ್ನು ನೋಡಲು ಪೂನಾಗೆ ಬಂದರು. ಇಡೀ ದೇಶವೇ ಗಾಂಧೀಜಿಯನ್ನು ನೋಡಲು ಉತ್ಸಾಹದಿಂದ ತುಂಬಿ ಬರುತ್ತಿರುವಂತೆ ಸ್ವಲ್ಪ ದಿನ ಅನಿಸುತ್ತಿತ್ತು. ಪಂಜಾಬಿನಿಂದ ಲಾಲಾ ಲಾಜಪತರಾಯ್ ಬಂದರು. ಗಾಂಧೀಜಿಯವರನ್ನು ಇಷ್ಟು ದುರ್ಬಲ ಸ್ಥಿತಿಯಲ್ಲಿ ನೋಡಿ ಸ್ವಲ್ಪ ಹೊತ್ತು ಅವರ ಬಾಯಿಂದ ಮಾತೇ ಹೊರಡಲಿಲ್ಲ. ಕಣ್ಣಿಂದ ಒಂದೇ ಸಮನೇ ಕಣ್ಣೀರು ಸುರಿಯುತ್ತಿತ್ತು. ಕೇಂದ್ರ ವಿಧಾನಸಭೆ ಸದಸ್ಯ ಶ್ರೀ ರಂಗಸ್ವಾಮಿ ಮತ್ತು ಅವರ ವಯಸ್ಸಾದ ತಾಯಿ

ಬಂದರು. ಇವರನ್ನು ನೋಡಿ ಆ ತಾಯಿ–ಮಗನ ಸ್ಥಿತಿ ಕೂಡ ಅದೇ ರೀತಿಯಾಗಿತ್ತು. ರಂಗಸ್ವಾಮಿಗೆ ತಮ್ಮ ಅಳುವನ್ನು ತಡೆಯಲು ಆಗಲೇ ಇಲ್ಲ. ಕಲ್ಕತ್ತಾದಿಂದ ದೇಶಬಂಧು ಮತ್ತು ವಾಸಂತಿ ದೇವಿ ನೋಡಲು ಬಂದರು. ಈ ಅಣ್ಣ ಬಹಳ ಮುದ್ದಿನಿಂದ ಗಾಂಧೀಜಿಯ ಬೇಜವಾಬ್ದಾರಿತನಕ್ಕಾಗಿ ಪ್ರೀತಿಯಿಂದ ಬೈದರು. ದೇಶಬಂಧುಗಳು ಅವರ ಪತ್ನಿ ಕೂಡ ಗಾಂಧೀಜಿಯವರನ್ನು ಬಹಳ ಇಷ್ಟಪಡುತ್ತಿದ್ದರು. ಮೋತಿಲಾಲ ನೆಹರೂ ತನ್ನ ಪುತ್ರ ಜವಾಹರ ಲಾಲನನ್ನು ಕರೆದುಕೊಂಡು ಪೂನಾಕ್ಕೆ ಬಂದು ಸ್ವಲ್ಪ ದಿನ ಇದ್ದರು. ಗಾಂಧೀಜಿಯ ಚಿಕಿತ್ಸೆ ಸರಿಯಾಗಿ ನಡೆಯುತ್ತಿದೆಯೋ ಇಲ್ಲವೋ ಎಂದು ಮೋತಿಲಾಲರು ಚಿಂತಿತರಾಗಿದ್ದರು. ಆಗ ಪ್ರಸಿದ್ಧ ಭಕ್ತಕವಿ ಮತ್ತು ಗಾಯಕ ದಿಲೀಪ್ ಕುಮಾರರಾಯ್ ಪೂನಾದಲ್ಲಿದ್ದರು. ಪ್ರತಿದಿನ ಆಸ್ಪತ್ರೆಗೆ ಹೋಗಿ ಅಲ್ಲಿ ಭಜನೆಗಳಿಂದ ಭಕ್ತಿರಸವೆಂಬ ಗಂಗೆಯನ್ನೇ ಹರಿಸುತ್ತಿದ್ದರು. ಗಾಂಧೀಜಿ ಸಂಗೀತದ ಆ ಭಾವಲಹರಿಯಲ್ಲಿ ಮುಳುಗಿಹೋಗುತ್ತಿದ್ದರು. ಈ ಎಲ್ಲ ಧುರಂಧರ ಅತಿಥಿಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಚಾರ್ಲಿ ಆ್ಯಂಡ್ರೂಸ್ ಬಹಳ ಕುಶಲತೆಯಿಂದ, ವಿನಯದಿಂದ ನಿರ್ವಹಿಸುತ್ತಿದ್ದರು. ನಂತರದಲ್ಲಿ ದೇವದಾಸ್ ಚಿಕ್ಕಪ್ಪ ಮತ್ತು ಅಜ್ಜಿ ಕೂಡಾ ಪೂನಾಕ್ಕೆ ಬಂದರು. ಆಗ ಆ್ಯಂಡ್ರೂಸ್‌ಗೆ ಕೆಲಸ ಸ್ವಲ್ಪ ಕಡಿಮೆಯಾಯಿತು. ಆಗ ರಾಮದಾಸ್ ಜೈಲಿನಲ್ಲಿದ್ದರು. ಪೂನಾದಿಂದ ಯಾತ್ರೆ ಕೈಗೊಳ್ಳುವಷ್ಟು ಶಕ್ತಿ ಕೂಡಿಕೊಂಡ ನಂತರ ಗಾಂಧೀಜಿ ಮತ್ತು ಅವರ ಸಹಯೋಗಿಗಳು ಬೊಂಬಾಯಿಯಲ್ಲಿ ಸಿಂಧಿಯ ಸ್ಟೀಮ್ ನ್ಯಾವಿಗೇಷನ್ ಕಂಪನಿಯ ಮಾಲೀಕ ಅಧ್ಯಕ್ಷ ಶಾಂತಿಕುಮಾರ ಮೊರಾರ್ಜಿಯ ಮನೆಯಲ್ಲಿ ಜುಹೂನ 'ಪಾಮವನ' ಬಂಗಲೆಯಲ್ಲಿ ಎರಡೂವರೆ ತಿಂಗಳು ವಿಶ್ರಾಂತಿಗಾಗಿ ಉಳಿದರು. ಎಷ್ಟೇ ಕಡಿಮೆ ಮಾಡಿದರೂ ಗಾಂಧೀಜಿಯವರ ಪಾರ್ಟಿ ೨೦ – ೨೫ ರ ಸಂಖ್ಯೆಯ ತಲಪುತ್ತಲೇ ಇತ್ತು. ಇದ್ದುದು ವಿಶ್ರಾಂತಿ ಪಡೆಯುವುದಕ್ಕಾಗಿ, ಆದರೆ ರಾತ್ರಿ ಬೆಳಿಗ್ಗೆ ಅವರನ್ನು ನೋಡಲು ಬರುವವರ ಗುಂಪು ಇದ್ದೇ ಇರುತ್ತಿತ್ತು. ಜುಹೂನ ಏಕಾಂತ ಬಂಗಲೆ ಛತ್ರದ ಹಾಗೆ ಇರುತ್ತಿತ್ತು. ಆದರೆ ಶಾಂತಿಕುಮಾರರ ತಾಳ್ಮೆ ಬಹಳ ಹೆಚ್ಚಿನದು. ಬೆಳಿಗ್ಗೆ ೪ ಗಂಟೆಯಿಂದ ರಾತ್ರಿ ಹನ್ನೆರಡು ಗಂಟೆವರೆಗೂ ಗಾಂಧೀಜಿ ಮತ್ತವರ ಗುಂಪಿನ ಅನುಕೂಲಗಳನ್ನು ಒದಗಿಸುತ್ತಾ ಶಾಂತಿಕುಮಾರರು ಸ್ವಲ್ಪವೂ ಬೇಸರಗೊಳ್ಳದೆ ಆಯಾಸ ತೋರದೆ ಇರುತ್ತಿದ್ದರು.

ಗಾಂಧೀಜಿ ಜೈಲಿನಲ್ಲಿರುವಾಗಲೇ ಡಿಸೆಂಬರ್ ೧೯೨೨ರಲ್ಲಿ ಗಯಾದಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ದೇಶಬಂಧು ಅದರ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು, ಅವರ ಮುಂದಾಳುತನದಲ್ಲಿ ಮೋತಿಲಾಲ ನೆಹರೂ, ಕೇಳ್ಕರ್, ಹಕೀಂ ಅಜ್ಮಲ್ ಖಾನ ಮುಂತಾದವರು ಪ್ರಸ್ತಾವವನ್ನು ಪಾಸು ಮಾಡಿದರು. ೧೯೨೦ರಲ್ಲಿ ಮಾಂಟೆಗೋ ಚೆಮ್ಸ್ ಫೋರ್ಡ್ ಸುಧಾರಣೆಯ ಅಡಿ ಕೇಂದ್ರ

ವಿಧಾನ ಸಭೆಯ ಚುನಾವಣೆಗಳಲ್ಲಿ ಭಾಗವಹಿಸಿ ಹೋರಾಡಬೇಕೆಂದು ನಿರ್ಣಯಿಸಿದರು. ದೇಶದಲ್ಲಿ ಅಸಹಕಾರ ಚಳವಳಿಯ ಬೆಂಕಿ ಹರಡಿತ್ತು. ಆ ಕಾಲದ ಘೋಷಣೆ ಎಂದರೆ ಸರಕಾರವನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದಿತ್ತು. ಆ ಸ್ಥಿತಿಯಲ್ಲಿ ಚುನಾವಣೆಗೆ ಸ್ಪರ್ಧಿಸುವುದೆಂದರೆ ಸರಕಾರಿ ವ್ಯವಸ್ಥೆಗೆ ಸಹಕಾರ ನೀಡಿದಂತೆಯೇ ಆಗುತ್ತಿತ್ತು. ವಲ್ಲಭಭಾಯಿ ಪಟೇಲ್ ಮತ್ತು ಜಮನಾಲಾಲ್ ಬಜಾಜರು ಠರಾವನ್ನು ವಿರೋಧಿಸಿದರು. ಸಾಕಷ್ಟು ಚರ್ಚೆ ನಡೆಯಿತು. ಪ್ರಸ್ತಾವಕ್ಕೆ ಮತದಾನ ಮಾಡುವುದು ಅನಿವಾರ್ಯವಾಯಿತು. ಅಧ್ಯಕ್ಷರ ಪ್ರಸ್ತಾವವನ್ನು ಅಧಿವೇಶನದಲ್ಲಿ ಯಾರೂ ಪರಿಗಣಿಸಲಿಲ್ಲ. ಇದೆಲ್ಲಾ ಹೇಗಾಯಿತು ಎಂದು ಪ್ರಸ್ತಾವವನ್ನು ಸಮರ್ಥಿಸಿದವರು ಚಕಿತಗೊಂಡಿದ್ದರು. ನಂತರ ಈ 'ಕೌನ್ಸಿಲ್ ಎಂಟ್ರಿ' ಯವರು ತಮ್ಮ 'ಸ್ವರಾಜ್ಯ ಪಾರ್ಟಿ' ಒಂದನ್ನು ಕಟ್ಟಿದರು. ಕಾಂಗ್ರೆಸ್ಸಿಗರು 'ಸ್ವರಾಜ್ಯ ಪಾರ್ಟಿ'ಯ ಒಳಗೆ ಕೇಂದ್ರೀಯ ವಿಧಾನ ಸಭೆಯ ಚುನಾವಣೆಗೆ ಸ್ಪರ್ಧಿಸಿದರು. ಆದರೆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಒಂದು ಪೈಸಾವನ್ನು ಉಪಯೋಗಿಸಲಿಲ್ಲ. ಕೊನೆಗೆ ಕಾಂಗ್ರೆಸ್ ಪ್ರತಿನಿಧಿಗಳು ೧೯೨೨ರ ಗಯಾ ಕಾಂಗ್ರೆಸ್‌ನಲ್ಲಿ ಚುನಾವಣೆಯನ್ನು ವಿರೋಧಿಸಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಪ್ರಕಟಪಡಿಸಿಯೇ ಬಿಟ್ಟರು. ಸ್ವರಾಜ್ಯ ಪಾರ್ಟಿಯಲ್ಲಿ ದೇಶದ ಹೆಸರಾಂತ ಮುಖಂಡರಿದ್ದರಾದರೂ ಅವರು ಕಾಂಗ್ರೆಸ್ ಮತ್ತು ಅದರ ಪ್ರತಿನಿಧಿಗಳ ಇಷ್ಟವನ್ನು ಗೌರವಿಸಿದರು. ಅವರಿಂದ ಹಣ ಸಹಾಯ ಇಚ್ಛಿಸಲಿಲ್ಲ. ಇದು ಸೂಕ್ಷ್ಮವಾದ ಸೈದ್ಧಾಂತಿಕ ವಿಷಯವಾಗಿತ್ತು. ಗಾಂಧೀಜಿ ಜೈಲಿನಲ್ಲಿದ್ದರು, ಜನರು ಅವರ ಅಭಿಪ್ರಾಯವನ್ನು ಕಾಂಗ್ರೆಸ್‌ನ ಈ ಮತದಾನದಲ್ಲಿ ಪ್ರಕಟಪಡಿಸಿದ್ದರು. ವಿರೋಧವಾಗುವುದು ಸಹಜವೇ ಆಗಿತ್ತು. ಆದರೆ ಅದರಲ್ಲಿ ಕಟುತೆ ಉಂಟಾಗುತ್ತಿರಲಿಲ್ಲ ಮತ್ತು ಹಣದ ಲೆಕ್ಕ-ಪತ್ರ ಶುದ್ಧವಾಗಿರುತ್ತಿತ್ತು.

೧೯೨೪ರಲ್ಲಿ ಜೈಲಿನಿಂದ ಬಿಡುಗಡೆಯಾದ ನಂತರ ಗಾಂಧೀಜಿ ಸ್ವತಃ ಕೌನ್ಸಿಲ್ ಎಂಟ್ರಿಯನ್ನು ವಿರೋಧಿಸುತ್ತಿದ್ದರು. ಸ್ವರಾಜ್ಯ ಪಾರ್ಟಿ ಮತ್ತು ಕಾಂಗ್ರೆಸ್ ನಡುವೆ ಇದ್ದ ವೈಚಾರಿಕ ವಿವಾದವನ್ನು ದೂರಗೊಳಿಸಿದರು. ಎರಡೂ ಪಾರ್ಟಿಗಳು ಒಂದಾದವು. ೧೯೨೪ ರ ಕೊನೆಯಲ್ಲಿ ಅಹಮದಾಬಾದನಲ್ಲಿ ಪುನಃ ಕಾಂಗ್ರೆಸ್ ಅಧಿವೇಶನ ನಡೆಯಿತು. ಮತ್ತೊಂದು ವಿಷಯವಾಗಿ ಮೋತಿಲಾಲ ನೆಹರೂ ಮತ್ತು ದೇಶಬಂಧು ಅವರಿಟ್ಟ ಠರಾವು ರದ್ದಾಯಿತು. ಈ ಸೋಲನ್ನು ಗಾಂಧೀಜಿ ತಮ್ಮದೇ ಸೋಲು ಎಂದು ಭಾವಿಸಿದರು. ಹೀಗೆ ಪರಾಜಯದ ನಿರಾಶೆಯನ್ನು ಗಾಂಧೀಜಿ ತಮ್ಮ ಮಿತ್ರರ ಮಟ್ಟಿಗಾಗಲಿ ಸಂಸ್ಥೆಯಲ್ಲಾಗಲೀ ಇರಲು ಬಿಡಲಿಲ್ಲ. ೧೯೨೬ರಲ್ಲಿ ದೇಶಬಂಧು ಬಹಳ ಖಾಯಿಲೆ ಬಿದ್ದರು. ಗಾಂಧೀಜಿ ಅವರನ್ನು ನೋಡಲು ಡಾರ್ಜಿಲಿಂಗ್‌ಗೆ ಹೋದರು ಮತ್ತು ಖಾಯಿಲೆ ಇದ್ದ ತಮ್ಮ ಮಿತ್ರನೊಂದಿಗೆ

ಹತ್ತು ದಿನಗಳ ಕಾಲ ಅಲ್ಲಿದ್ದರು. ಈ ಕೊನೆಯ ದಿನಗಳಲ್ಲಿ ದೇಶಬಂಧು ಮತ್ತು ಗಾಂಧೀಜಿ ಬಹಳ ಗೌರವಾದರ ಮತ್ತು ಪ್ರೀತಿಯಿಂದ ಇದ್ದರು. ಗಾಂಧೀಜಿ ಅವರಿಗೆ ನಗು–ನಗುತ್ತಾ ಧೈರ್ಯ ಹೇಳುತ್ತಾ ಅವರ ಕಷ್ಟಕರವಾದ ದಿನಗಳನ್ನು ಆನಂದಮಯಗೊಳಿಸಿದರು. ದೇಶಬಂಧು ಅವರು ತೀರಿಕೊಂಡನಂತರ ದೇಶಬಂಧು ಅವರ ಆಗತಾನೆ ವಿಧವೆಯಾಗಿದ್ದ ಪತ್ನಿ ವಾಸಂತಿ ದೇವಿಯವರನ್ನು ನೋಡಲು ಕಲ್ಕತ್ತಾಗೆ ಹೋದರು. ದೇಶಬಂಧು ಇಲ್ಲವಾದರು. ದೇಶದ ಒಬ್ಬ ಶ್ರೇಷ್ಠ ಮುಖಂಡ ಚಿರನಿದ್ರೆಯಲ್ಲಿ ಮಲಗಿದರು. ಸ್ವಾತಂತ್ರ್ಯ ಹೋರಾಟ ಸ್ವಲ್ಪ ತಣ್ಣಗಾಯಿತು. ಆದರೆ ಈ ಇಬ್ಬರೂ ಮಿತ್ರರ ಸ್ನೇಹ ವಾಸಂತಿ ದೇವಿ ಬದುಕಿದ್ದ ವರೆಗೂ ಶಾಶ್ವತವಾಗಿತ್ತು. ಈಗ ೧೫ ವರುಷಗಳ ಹಿಂದೆ ದೇಶಬಂಧು ಅವರ ಮೊಮ್ಮಗ ಸಿದ್ಧಾರ್ಥ ಶಂಕರ್ ರಾಯ್ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಯಾಗಿದ್ದರು. ನಾನು ಆಗಿನ್ನೂ ಹೊಸದಾಗಿ ರಾಜ್ಯ ಸಭೆಯ ಸದಸ್ಯಳಾಗಿದ್ದೆ. ಅಹಮದಾಬಾದಿನ ಗಾಂಧೀ ನಗರದಲ್ಲಿ ಕಾಂಗ್ರೆಸ್ ಅಧಿವೇಶನ ಇತ್ತು. ನಾನು ಒಬ್ಬಳೇ ಪಂಡಾಲ್‌ನಲ್ಲಿ ಕುಳಿತಿದ್ದೆ, ಸಿದ್ಧಾರ್ಥಜೀ ನನ್ನ ಬಳಿಗೆ ಬಂದರು, ತಮ್ಮ ಪರಿಚಯ ನೀಡಿದರು. ನಾನಂದೆ : 'ನಿಮ್ಮ ಪರಿಚಯ ಯಾರಿಗಿಲ್ಲ? ನೀವಂತೂ ನಮ್ಮ ಲೋಕಪ್ರಿಯ ಯುವ ಮುಖಂಡರು.'

ಸಿದ್ಧಾರ್ಥ ಅಂದರು: 'ಅದರಿಂದ ನಾನು ನಿಮ್ಮನ್ನು ಭೇಟಿಯಾಗಲು ಬಂದಿಲ್ಲ, ನಿಮ್ಮಜ್ಜಿ ನಮ್ಮಜ್ಜ (ತಾಯಿಯ ತಂದೆ) ಇಬ್ಬರೂ ಆಪ್ತ ಮಿತ್ರರಾಗಿದ್ದವರು. ಆ ಸಂಬಂಧದಿಂದ ನಾವಿಬ್ಬರೂ ಸೋದರ ಸೋದರಿಯರ ಹಾಗೆ, ಅದರಿಂದ ಕಳೆದುಹೋಗಿದ್ದ ನಮ್ಮಕ್ಕನನ್ನು ನಾನು ಹುಡುಕಿಕೊಂಡು ಬಂದಿದ್ದೇನೆ'. ಈ ಪ್ರೀತಿಯಿಂದ ನಾನು ಅಭಿಭೂತಳಾದೆ. ಅವತ್ತಿನಿಂದಲೂ ನಮ್ಮಿಬ್ಬರ ನಡುವೆ ಅಕ್ಕ ತಮ್ಮನ ಪ್ರೀತಿ ಏರ್ಪಟ್ಟಿತು. ಇಂದಿಗೂ ನಮ್ಮ ನಡುವೆ ಆ ಸಂಬಂಧ ಉಳಿದುಕೊಂಡು ಬಂದಿದೆ. ಈ ಸಂಬಂಧ ಇರುವುದರಿಂದಲೇ ಸಿದ್ಧಾರ್ಥ ಸ್ವತಃ ನಮ್ಮ ಅಹಮದಾಬಾದ್ ಮನೆಗೆ ನನ್ನ ಪತಿ ಪ್ರೊಫೆಸರ್ ಗಜಾನನ ಕುಲಕರ್ಣಿ ಅವರನ್ನು ಭೇಟಿಯಾಗಲು ಬಂದರು. ನಾನು ಕಲ್ಕತ್ತಾ ಅಧಿವೇಶನಕ್ಕೆ ಹೋದಾಗ ಸ್ವಾಗತ ಸಮಿತಿ ಅಧ್ಯಕ್ಷ ಮತ್ತು ಬಂಗಾಳದ ಮುಖ್ಯಮಂತ್ರಿ ಪುನಃ ಪಂಡಾಲಿಗೆ ಬಂದು ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋದರು. ರೋಗಿಯಾಗಿದ್ದ ತಮ್ಮ ತಾಯಿಯೊಂದಿಗೆ ಭೇಟಿ ಮಾಡಿಸಿದರು. ಇವೆಲ್ಲಾ ಪೂರ್ವಜರ ಆಶೀರ್ವಾದದ ಫಲ ಅಂತ ನಾನು ಭಾವಿಸುತ್ತೇನೆ. ದೇಶಬಂಧು ಅವರು ತೀರಿಕೊಂಡ ಮೇಲೆ ಗಾಂಧೀಜಿ ಅವರ ಪುಣ್ಯ ಸ್ಮರಣೆ ಮತ್ತು ಅವರ ಇಚ್ಛೆಯನ್ನು ಗೌರವಿಸಿ ಚುನಾವಣೆಯ ರಾಜಕೀಯವನ್ನು ಒಪ್ಪಿಕೊಂಡರು. ೧೯೨೬ರಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಸಾಕಷ್ಟು ಬಹುಮತದಿಂದ ಜಯ ಗಳಿಸಿತು. ಅದರ ಕೀರ್ತಿ ಗಾಂಧೀಜಿಯವರಿಗೆ ಸೇರುತ್ತದೆ, ಆದರೆ ಗಾಂಧೀಜಿ

ಎಂದೂ ಯಾವ ಚುನಾವಣೆಯಲ್ಲೂ ಸ್ಪರ್ಧಿಸಲಿಲ್ಲ. ಅವರು ತಮ್ಮ ಖಾದಿ ಕೆಲಸದಲ್ಲಿ ಚರಖಾ ನೂಲು ತೆಗೆಯುವ ಮೂಲಭೂತವಾದ ರಚನಾತ್ಮಕ ಕಾರ್ಯದಲ್ಲಿ ತೊಡಗಿದ್ದರು. ಗುಲಾಮ ದೇಶ ಸ್ವಾತಂತ್ರ್ಯ ಅನುಭವಿಸಲು ಯೋಗ್ಯವಾಗಲಿ ಅನ್ನುವದು ಉದ್ದೇಶವಾಗಿತ್ತು.

ಈ ಅಸಹಕಾರ ಚಳವಳಿಯಿಂದ ಎರಡು ಪರಿಣಾಮಗಳು ಸ್ಪಷ್ಟವಾಗಿ ಮೂಡಿಬಂದವು. ಒಂದು ಕಾಂಗ್ರೆಸ್ ಗಾಂಧೀಜಿಯನ್ನು ತಮ್ಮ ಅತಿ ದೊಡ್ಡ ನಾಯಕ ಅಂತ ಒಪ್ಪಿಕೊಂಡಿತ್ತು. ಎರಡನೆಯದಾಗಿ, ದೇಶದ ಪ್ರತಿಯೊಂದು ಮೂಲೆಯಲ್ಲಿ ಕೊನೆಯ ಪಕ್ಷ ೨೫೦ ಚಿಕ್ಕ ದೊಡ್ಡ ಮುಖಂಡರು ವೈಯಕ್ತಿಕವಾಗಿ ಗಾಂಧೀಜಿಯ ಶ್ರೇಷ್ಠ ಅನುಯಾಯಿಗಳಾದರು. ಅವರಲ್ಲಿ ಎಷ್ಟೋ ಜನ ಮೊದಲ ಶ್ರೇಣಿಯ ನಾಯಕರೂ ಆಗಿದ್ದರು. ಇದಲ್ಲದೆ ಪ್ರತಿಯೊಂದು ಹಳ್ಳಿ–ಬೀದಿ–ಕೊಂಪೆಯಲ್ಲಿ ಬೇಕಾದಷ್ಟು ಜನ ದೇಶಸೇವಕರಿದ್ದರು, ಅವರುಗಳು ತಮ್ಮ ಸರ್ವಸ್ವವನ್ನು ಕಳೆದುಕೊಂಡರೂ ಸಮಾಜಸೇವೆಯ ಕೆಲಸವನ್ನು ಬಿಡಲಿಲ್ಲ. ಅವರುಗಳು ಜೈಲಿಗೆ ಹೋದರು. ಸರ್ಕಾರ ಅವರ ಮನೆ–ಮಠ, ವೈಭವ, ಜಮೀನು, ಎತ್ತು, ನೇಗಿಲು ಎಲ್ಲವನ್ನೂ ವಶಕ್ಕೆ ತೆಗೆದುಕೊಂಡುಬಿಟ್ಟಿತು. ಅವರ ಮಕ್ಕಳು–ಮರಿ, ತಂದೆ–ತಾಯಿ ಒಬ್ಬಂಟಿಯಾದರು. ನಾಶವಾಗಿ ಹೋದರು. ಆದರೆ ಈ ಸತ್ಯಾಗ್ರಹಿಗಳಾದ ಸ್ವಯಂ ಸೇವಕರ ದೇಶ–ಪ್ರೇಮ ಹೆಚ್ಚಾಗುತ್ತಲೇ ಹೋಯಿತು. ನಾವು ಈಚೆಗೆ 'ಫ್ರೀಡಮ್ ಫೈಟರ್ಸ್'ಗೆ ಪಿಂಚಣಿ ಕೊಡುತ್ತೇವೆ, ಅದರಲ್ಲಿ ಎಷ್ಟೋ ಜನ ಬೋಗಸ್ ಕೂಡ ಇದ್ದಾರೆ. ಸುಳ್ಳು ಸರ್ಟಿಫಿಕೇಟ್ ಕೊಟ್ಟು ಪಿಂಚಣಿ ತೆಗೆದುಕೊಂಡಿದ್ದಾರೆ. ಆದರೆ ಆ ಕಾಲದಲ್ಲಿ ಯಾವ ಸತ್ಯಾಗ್ರಹಿಯೂ ತನಗೇನಾದರೂ ಸಿಗುತ್ತೆ ಅನ್ನುವ ಲೋಭದಿಂದ ಜೈಲಿಗೆ ಹೋಗಿರಲಿಲ್ಲ. ದೇಶಸೇವೆ ಮಾಡಿರಲಿಲ್ಲ. ಅವರುಗಳು ರಾಷ್ಟ್ರದ ಸೈನಿಕರಾಗಿದ್ದರು. ತಮ್ಮ ಕರ್ತವ್ಯ ನಿರ್ವಹಿಸುತ್ತಾ ಎಷ್ಟೋ ಜನ ಗೊತ್ತಿಲ್ಲದ ಸ್ವಯಂಸೇವಕರು ತೀರಿಕೊಂಡರು. ದೇಶಕ್ಕಾಗಿ ಬಲಿಯಾದರು. ಇವತ್ತು ನಮ್ಮ ಬಳಿ ಅವರ ಹೆಸರೂ ಇಲ್ಲ ಅವರ ಪರಿವಾದವರು ಯಾರೂ ಸರಕಾರದವರೆಗೆ ಹೋಗಿಯೂ ಇಲ್ಲ, ಅವರ ಕುಟುಂಬ ಸ್ವಾತಂತ್ರ್ಯ ಪಡೆಯುವ ಗುರಿಯ ರಸ್ತೆಯಲ್ಲೇ ಹರಿದು ಹಂಚಿಹೋಯಿತು. ಆದರೆ ಆ ಸ್ವಯಂಸೇವಕರ ಸೇವೆ, ತ್ಯಾಗ, ಬಲಿದಾನ ನಮಗೆ ಈ ದಿನ ಸ್ವಾತಂತ್ರ್ಯ ಸಮೃದ್ಧಿ ನೀಡಿದೆ. ನಾವು ಅವರನ್ನ ಮರೆತರೆ ಅವರಿಗೇನೂ ನಷ್ಟವಿಲ್ಲ, ಚಿತ್ರಗುಪ್ತರ ಲೆಕ್ಕದ ಪುಸ್ತಕದಲ್ಲಿ ಅವರ ಪುಣ್ಯ ಅಂಕಿತವಾಗಿದೆ. ಆದರೆ ಮರೆತ ನಮಗೆ ಏನು ಸಜಾ ಸಿಗುತ್ತೆ ಅನ್ನುವುದು ದೇವರಿಗೆ ಗೊತ್ತು, ಅಸಹಕಾರ ಚಳವಳಿ ನಂತರ ೧೦–೨೦ ಸಾವಿರ ಮಂದಿ ಸ್ವಯಂಸೇವಕರನ್ನು ಸಿದ್ಧಪಡಿಸಿ ಕೊಟ್ಟಿದ್ದೇ ಅತಿ ದೊಡ್ಡ ಕೊಡುಗೆಯಾಗಿತ್ತು. ಅಗಿನಿಂದಲೇ ಪರಿಚಿತ ಮಿತ್ರರು ಮತ್ತು ಈ ಸಾವಿರಾರು ಮಂದಿ ಸ್ವಯಂ ಸೇವಕರು ಅವರನ್ನು ಗಾಂಧೀಜಿ

ಅನ್ನುವುದನ್ನು ಬಿಟ್ಟು ಬಾಪೂಜಿ ಅಂತ ಕರೆದರು. ಗಾಂಧೀಜಿಯವರ ಮಕ್ಕಳು ತಮ್ಮ ತಂದೆಯನ್ನು 'ಬಾಪೂಜಿ' ಅನ್ನುತ್ತಿದ್ದರು. ಸುಮಾರು ಇಡೀ ದೇಶ ಗಾಂಧೀಜಿಯನ್ನು 'ಬಾಪೂ' ಅಂತ ಕರೆಯಲಾರಂಭಿಸಿತು. ಚಿಕ್ಕ ವಯಸ್ಸಿನ ಮಕ್ಕಳು 'ಬಾಪೂಜಿ' ಅಂದರು.

ಆಪರೇಷನ್ ಆದನಂತರ ಗಾಂಧೀಜಿಯ ಆರೋಗ್ಯ ಸ್ವಲ್ಪ ಸುಧಾರಿಸಿತು. ಆಗ ಅವರು ದೆಹಲಿಗೆ ಹೋದರು. ಆ ಕಡೆ ನಾರ್ತ್ ವೆಸ್ಟ್ ಫ್ರಾಂಟಿಯರ್ (ವಾಯವ್ಯ ಪ್ರಾಂತ್ಯ)ದ ಕೋಹಾಟ್ ನಗರದಲ್ಲಿ ಕೋಮುವಾರು ಗಲಭೆಗಳಾದವು. ಅಲ್ಲಿ ಮುಸಲ್ಮಾನರು ಹಿಂದೂಗಳನ್ನು ಕೊಂದರು. ಅವರ ಮನೆಗಳನ್ನು ಸುಟ್ಟರು. ಈ ಘಟನೆಯ ಪ್ರತಿಕ್ರಿಯೆ ಇಡೀ ದೇಶದಲ್ಲಿ ಕಾಣಿಸಿಕೊಂಡಿತು. ಅಲ್ಲಲ್ಲೇ ಹಿಂದೂ–ಮುಸ್ಲಿಂ ದಂಗೆಗಳಾದವು. ಈ ಕೋಮುವಾರು ಹತ್ಯೆ ಅನ್ಯಾಯಗಳಿಂದ ಬಾಪೂಜಿಗೆ ಬಹಳ ಕೋಪ ಬಂತು. ಅವರು ತಮ್ಮ ಜೀವನವಿಡೀ ಈ ಎರಡೂ ಧರ್ಮಗಳಿಗೆ ಸ್ನೇಹ–ಸಂಬಂಧಗಳನ್ನು ಕಲಿಸುತ್ತಲಿದ್ದರು. ಸ್ವದೇಶಕ್ಕೆ ಹಿಂದಿರುಗಿದಾಗಿನಿಂದಲೂ ಮುಸಲ್ಮಾನರೊಂದಿಗೆ ವಿಶೇಷ ಸಂಬಂಧ ಬೆಳೆಸಲು ಪ್ರಯತ್ನಿಸುತ್ತಿದ್ದರು, ಹಿಂದೂ ಮುಸಲ್ಮಾನರಿಬ್ಬರೂ ಒಂದೇ ಧ್ವನಿಯಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಮಾತನಾಡುವಂಥ ಎಲ್ಲಾ ಸಭೆ–ಸಮ್ಮೇಳನಗಳಿಗೆ ಗಾಂಧೀಜಿ ಹೋಗುತ್ತಿದ್ದರು. ಗಾಂಧೀಜಿ ಪೂರ್ತಿ ನಿಷ್ಠೆಯಿಂದ ಅಲಿ ಬಂಧುಗಳನ್ನು ಜೈಲಿನಿಂದ ಬಿಡುಗಡೆ ಮಾಡಿಸಲು ಪ್ರಯತ್ನಪಟ್ಟಿದ್ದರು. ಇಷ್ಟೆಲ್ಲ ಪ್ರೀತಿ ಇರುವಾಗ ಇದೆಂಥ ಹುಚ್ಚಾಟ? ಅಣ್ಣ–ತಮ್ಮಂದಿರು ಒಬ್ಬರ ಕುತ್ತಿಗೆಯನ್ನು ಮತ್ತೊಬ್ಬರು ಕಡಿಯುವುದು, ಅವರ ಮನೆಗಳನ್ನು ಸುಡುವುದೆಂದರೇನು? ಜನರಿಗೆ ಸರಿಯಾಗಿ ಮಾರ್ಗದರ್ಶನ ನೀಡುವುದು ತಮ್ಮ ಕರ್ತವ್ಯವೆಂದು ಗಾಂಧೀಜಿ ಭಾವಿಸಿದ್ದರು. ತಮ್ಮ ಶುದ್ಧವಾದ ಭಾವನೆಯಲ್ಲಿ ಏನೋ ಕೊರತೆ ಇರಬೇಕು, ಅದಕ್ಕೆ ಹಿಂದೂ–ಮುಸಲ್ಮಾನರು ಇಂಥ ಹುಚ್ಚಾಟ ಮಾಡುತ್ತಿದ್ದಾರೆ ಅಂತ ಅವರಿಗನ್ನಿಸಿತು. ಅಂತಹ ತಪ್ಪಿಗೆ ಗಾಂಧೀಜಿ ಬಳಿ ಒಂದೇ ಉಪಾಯ ಇದ್ದಿದ್ದು. ಈ ಎಲ್ಲಾ ನೀಚ ಅಪರಾಧಗಳಿಗಾಗಿ ಸ್ವತಃ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ. ಭಗವಂತನ ಹತ್ತಿರ ಕ್ಷಮೆಯಾಚಿಸುತ್ತೇನೆ ಅಂದುಕೊಂಡು, ಅದಕ್ಕಾಗಿ ಆತ್ಮಶುದ್ಧಿ ಪಡೆಯಲು ಉಪವಾಸ ಮಾಡವೆನೆಂದೂ ನಿರ್ಧರಿಸಿದರು. ಇದರಿಂದಾಗಿ ದೇಶದ ಜನರಿಗೆ ಸನ್ಮತಿ ಸಿಗಲಿ ಎಂದು ನಿಶ್ಚಯಿಸಿದರು.

೧೭ ಸೆಪ್ಟೆಂಬರ್ ೧೯೨೪ ರಂದು ದೆಹಲಿಯಲ್ಲಿ ಡಾ॥ ಅಂಗಾರಿ ಅವರ ಮನೆಯಲ್ಲಿ ಗಾಂಧೀಜಿ ೨೧ ದಿನಗಳ ಉಪವಾಸ ಆರಂಭಿಸಿದರು. ಆಪರೇಷನ್ ಆಗಿ ಇನ್ನೂ ಎಂಟು ತಿಂಗಳಾಗಿದ್ದಿರಬಹುದು ಅಷ್ಟೆ. ಶರೀರದ ದೌರ್ಬಲ್ಯ ಇನ್ನೂ ದೂರವಾಗಿರಲಿಲ್ಲ. ಆದರೆ ಹಿಂದೂ–ಮುಸ್ಲಿಮರ ಈ ವೈಮನಸ್ಯವನ್ನು ನೋಡುವುದರ ಬದಲು ಸಾಯುವುದೇ ಒಳ್ಳೆಯದು ಎಂದವರಿಗನ್ನಿಸಿತು: 'ದೇವರು ಇಷ್ಟಪಟ್ಟರೆ

೨೧ ದಿನಗಳಾದ ನಂತರ ಪುನಃ ಆರೋಗ್ಯ ಸುಧಾರಿಸಬಹುದು. ಸಮಾಜ ಸೇವೆಯ ವ್ರತ ನಿಭಾಯಿಸಬಹುದು. ಆದರೆ ಈಗಂತೂ ಪ್ರಾಯಶ್ಚಿತ್ತ ಪರಮಕರ್ತವ್ಯ.' ಈ ಸಮಾಚಾರದಿಂದ ದೇಶ ಕುಗ್ಗಿ ಹೋಯಿತು. ಹಿಂದೂ–ಮುಸ್ಲಿಮರಿಬ್ಬರೂ ಪಶ್ಚಾತ್ತಾಪದ ದುಃಖದಲ್ಲಿ ಮುಳುಗಿದರು. ಇಡೀ ದೇಶ ತನ್ನ ಉಸಿರು ಕಟ್ಟಿಕೊಂಡು ತನ್ನ ಪ್ರಿಯ ನೇತಾರನ ಪ್ರಾಣಕ್ಕಾಗಿ ಪ್ರಾರ್ಥನೆಯಲ್ಲಿ ಮುಳುಗಿತು. ಅಲ್ಲಲ್ಲಿ ಪ್ರಾರ್ಥನೆಗಳಾದವು, ಅಖಂಡ ಜ್ಯೋತಿ ಬೆಳಗಿಸಿದರು. ನಮಾಜ್ ಮಾಡಿದರು. ದೇಶವಾಸಿಗಳ ಚಿಂತೆ ಹೆಚ್ಚಾಗಿ ವಾತಾವರಣವೆಲ್ಲಾ ದುಃಖಪೂರಿತವಾಯಿತು. ದೇಶದ ಮೇಲೇನೊ ವಿಪತ್ತು ಬಂದಿದೆ ಅನ್ನಿಸಿತು. ಈ ಉಪವಾಸದ ದಿನಗಳಲ್ಲೇ ಮೋತಿಲಾಲ್ ನೆಹರೂ ಅವರ ಮೊಮ್ಮಗಳು ಬಾಲಕಿ ಇಂದಿರಾ ಮೊದಲ ಬಾರಿಗೆ ಗಾಂಧೀಜಿಯವರನ್ನು ಭೇಟಿಯಾದಳು. ಆ ಫೋಟೋ ಇಡೀ ಪ್ರಪಂಚಕ್ಕೆ ಗೊತ್ತಿದೆ, ಉಪವಾಸದ ಆ ಪವಿತ್ರ ವಾತಾವರಣದಲ್ಲಿ ಹಿಂದೂ–ಮುಸ್ಲಿಂ ಏಕತೆ ಪುನಃ ಏರ್ಪಟ್ಟಿತು. ಆದರೆ ಹೇಗೋ ಕಷ್ಟದಿಂದ ೨೧ ದಿನಗಳು ಕಳೆದವು. ದೇಶದ ಕೋಟ್ಯಂತರ ಜನರಿಗೆ ಅವರು ಬದುಕುವ ನೈಜ ಮಾರ್ಗವನ್ನು ತೋರುವಂತಾಗಲೆಂದೋ ದೇವರು ಅಂತೂ ಗಾಂಧೀಜಿಯ ಪ್ರಾಣವನ್ನು ಕಾಪಾಡಿದ.

೧೯೨೬ರ ಮಧ್ಯೆ ಶ್ರದ್ಧಾನಂದರು ಖಾಯಿಲೆ ಬಿದ್ದರು, ಆಗ ಗಾಂಧೀಜಿಯವರ ಆಂಗ್ಲ ಮಾನಸ ಪುತ್ರಿ ಮೀರಾ ಬಹನ್ ಸ್ವಾಮೀಜಿ ಬಳಿ ಇದ್ದುಕೊಂಡು ಹಿಂದೀ–ಉರ್ದೂ ಕಲಿಯುತ್ತಿದ್ದಳು. ಒಂದು ದಿನ ಅಬ್ದುಲ್ ರಶೀದ್ ಎಂಬೊಬ್ಬ ಯುವಕ ಸ್ವಾಮೀಜಿಯವರ ಕಾಲಾಳಿಗೆ ನೀರು ತರಲು ಹೇಳಿದ. ಸ್ವಾಮೀಜಿಯವರ ಸೇವಕ ಕೊಠಡಿಯಿಂದ ಹೊರಕ್ಕೆ ಹೋದೊಡನೆ ಅಬ್ದುಲ್ ರಶೀದನು ಚೂರಿಯಿಂದ ತಿವಿದು ಸ್ವಾಮೀಜಿಯನ್ನು ಕೊಂದ. ಆದರೆ ಸ್ವಾಮೀಜಿಯ ಸೇವಕ ಗಂಗಾಶರಣ ಬಹಳ ಜಾಗೃತನಾದ ವ್ಯಕ್ತಿಯಾಗಿದ್ದುದರಿಂದ ಶಬ್ದ ಕೇಳಿದೊಡನೆ ಓಡಿಬಂದು ರಶೀದನನ್ನು ಗಟ್ಟಿಯಾಗಿ ಹಿಡಿದುಕೊಂಡ. ರಶೀದನು ಗಂಗಾಶರಣರನ್ನು ಚೂರಿಯಿಂದ ಇರಿದ, ಅವನ ತೊಡೆಯ ಮೇಲೆ ಚೂರಿಯ ಗಾಯವಾಯಿತು. ಆದರೆ ಗಂಗಾಶರಣ ರಶೀದನನ್ನು ಬಿಡಲೇ ಇಲ್ಲ. ಈ ಹೊಡೆದಾಟದ ಗಲಾಟೆ ಕೇಳಿ ಅಲ್ಲೇ ಹತ್ತಿರದ ಕೊಠಡಿಯಲ್ಲಿ ಕುಳಿತಿದ್ದ ಮೀರಾ ಬಹನ್ ಮತ್ತು ಮಿಕ್ಕವರೆಲ್ಲ ಓಡಿಬಂದರು. ಆದರೆ ಸ್ವಾಮೀಜಿ ತೀರಿಕೊಂಡಿದ್ದರು. ಅವರು ರಶೀದನನ್ನು ಪೋಲೀಸರ ವಶಕ್ಕೆ ಒಪ್ಪಿಸಿದರು. ಅವನ ಮೇಲೆ ಕೇಸ್ ನಡೆಯಿತು; ಗಲ್ಲಿಗೇರಿಸಿದರು. ಆದರೆ ಆ ಕಾಲದ ಇಂಗ್ಲಿಷ್ ಸರಕಾರಕ್ಕೆ ಈ ಸತ್ಯಾಗ್ರಹಿಗಳ– ಅದರಲ್ಲೂ ಶ್ರದ್ಧಾನಂದರ ಬಗ್ಗೆ ಬಹಳ ಕೋಪವಿತ್ತು. ಸಾಮಾನ್ಯವಾಗಿ ರಾಜಕೀಯ ಕೊಲೆಗಾರನ ಮೃತ ಶರೀರವನ್ನು ಮನೆಯವರಿಗೆ ಕೊಡುತ್ತಿರಲಿಲ್ಲ. ಸಮಾಜದಲ್ಲಿ ಅದರಿಂದ ಪುನಃ ಅಶಾಂತಿ ಹರಡದಿರಲಿ ಅನ್ನುವ ಉದ್ದೇಶವಿರುತ್ತಿತ್ತು. ಇದು ಹಳೆಯ ಪದ್ಧತಿ

ಪ್ರಪಂಚದಲ್ಲಿ ಎಲ್ಲ ಕಡೆ ಇದೇ ಪದ್ಧತಿ ಜಾರಿಯಲ್ಲಿದೆ. ಆದರೆ ಇಂಗ್ಲಿಷ್ ಸರಕಾರ ಕೋಮುವಾರು ಗಲಭೆ ಮಾಡಬೇಕು ಅಂತ ಸ್ವತಃ ಇಚ್ಛಿಸುತ್ತಿತ್ತಾದ್ದರಿಂದ ಕೊಲೆಗಾರ ರಶೀದನ ಮೃತಶರೀರವನ್ನು ಮನೆಯವರಿಗೆ ಕೊಟ್ಟುಬಿಟ್ಟರು. ಆತನ ಶವದ ಮೆರವಣಿಗೆಯಲ್ಲಿ ೨–೩ ಸಾವಿರ ಜನ ಸೇರಿದ್ದರು. ಆ ಮುಸಲ್ಮಾನರು ರಶೀದನನ್ನು ಹುತಾತ್ಮನನ್ನಾಗಿಸಿದರು. ಉದ್ರಿಕ್ತವಾಗಿದ್ದ ಆ ಗುಂಪು ಶ್ಮಶಾನದಿಂದ ಹಿಂದಿರುಗಿದಾಗ ಫೈಜ್ ಬಾಝಾರ್‌ನ (ಇಂದಿನ ದರಿಯಾಗಂಜ್) ಹಿಂದೂ ಅಂಗಡಿಗಳನ್ನು ಲೂಟಿ ಹೊಡೆದರು. ಪೊಲೀಸರು ಕೈಕಟ್ಟಿಕೊಂಡು ಇದನ್ನೆಲ್ಲಾ ನೋಡುತ್ತಾ ಕುಳಿತಿದ್ದರು. ಎರಡೂ ಪಂಗಡಗಳ ಜನ ಸೌಹಾರ್ದದಿಂದ ಇರುವುದು ಇಂಗ್ಲಿಷ್ ಪೋಲೀಸ್ ಅಧಿಕಾರಿಗಳಿಗೆ ಬೇಕಿರಲಿಲ್ಲ. ಬಡಪಾಯಿ ಮುಸ್ಲಿಮರು ಈ ಇಂಗ್ಲಿಷ್‌ರ ಮುಷ್ಟಿಯಲ್ಲಿ ಸಿಲುಕಿಕೊಂಡಿದ್ದರು. ಸ್ವಾಮೀಜಿಗೂ ಅಲೌಕಿಕ ದೇಶಪ್ರೇಮವಿತ್ತು. ಕೌಪೀನ ಧರಿಸಿ ಅವರು ಆರ್ಯಸಮಾಜದಲ್ಲಿ ಸನ್ಯಾಸ ದೀಕ್ಷೆ ಪಡೆದಿದ್ದರು. ಆಗಿನಿಂದ ಮಹಾತ್ಮ ಮುಂಶೀರಾಮ್ ಸ್ವಾಮಿ ಶ್ರದ್ಧಾನಂದರಾದರು. ಭಾರತೀಯ ಪ್ರಾಚೀನ ಪರಂಪರೆಗನುಗುಣವಾಗಿ ಅವರು ಗಂಗಾತೀರದಲ್ಲಿ ಕಾಂಗಡಿ ಗ್ರಾಮದಲ್ಲಿ ಹುಡುಗರಿಗಾಗಿ ಒಂದು ಗುರುಕುಲವನ್ನು ಸ್ಥಾಪಿಸಿದ್ದರು. ಆ ಕಾಲದಲ್ಲಿ ಗುರುಕುಲ ಕಾಂಗಡಿ ಒಂದು ಉತ್ಕೃಷ್ಟ ಶಿಕ್ಷಣದ ಮತ್ತು ಚಾರಿತ್ರ್ಯ ನಿರ್ಮಾಣದ ರಾಷ್ಟ್ರಪ್ರೇಮಿ ಸಂಸ್ಥೆಯಾಗಿತ್ತು. ಅಲ್ಲಿಂದ ಪದವಿ ಪಡೆದು ಹೊರಬಂದ ವ್ಯಕ್ತಿಗಳು ೫೦ ವರ್ಷಗಳ ಕಾಲ ಸಮಾಜದ ಸೇವೆ ಮತ್ತು ದೇಶಸೇವೆಯ ಶ್ರೇಷ್ಠ ಕಾರ್ಯ ನಿರ್ವಹಿಸಿದರು. ಸ್ವಾತಂತ್ರ್ಯ ಹೋರಾಟದ ವೇಳೆ ಈ ಸಂಸ್ಥೆ ಅನೇಕ ವೀರರನ್ನು ಭಾರತಕ್ಕೆ ನೀಡಿತು. ಅವರಲ್ಲಿ ಉತ್ತರ ಪ್ರದೇಶದ ಗುಡ್ಡಗಾಡು ಜನರ ನಡುವೆ ಕೆಲಸ ಮಾಡಿ ಜೀವನವನ್ನು ಸವೆಸಿದ ಪಂಡಿತ ಧರ್ಮದೇವ ಶಾಸ್ತ್ರಿ ಮತ್ತು ಸುಪ್ರಸಿದ್ಧ ಸಂಸತ್ ಸದಸ್ಯರಾಗಿದ್ದ ಪ್ರಕಾಶವೀರಶಾಸ್ತ್ರಿ ಮತ್ತು ಡೆಹರಾಡೂನ್‌ನಲ್ಲಿ ಹುಡುಗಿಯರಿಗಾಗಿ ಗುರುಕುಲವನ್ನು ಸ್ಥಾಪಿಸಿದ ಪಂಡಿತ ರಾಮದೇವ ಶಾಸ್ತ್ರಿಗಳ ಹೆಸರನ್ನು ವಿಶೇಷವಾಗಿ ಉಲ್ಲೇಖಿಸಬಹುದು.

ಈ ಹತ್ಯಾಕಾಂಡವು ಸ್ವಾಮಿ ಶ್ರದ್ಧಾನಂದರ ಶರೀರವನ್ನಷ್ಟೇ ಕೊಲ್ಲಲಿಲ್ಲ, ಹಿಂದೂ–ಮುಸ್ಲಿಂ ಏಕತೆ ಮತ್ತು ಭಾರತದ ಅಖಂಡತೆಯನ್ನೇ ಖೂನಿ ಮಾಡಿತ್ತು.

* * * *

# ೧೨. ಮೀರಾ ಬಹನ್

ವಿದೇಶದ ನೌಕಾ ಸೇನೆಯ ಕಮಾಂಡರ್ ಅಡ್‌ಮಿರಲ್ ಸ್ಲೇಡ್‌ನ ಸುಂದರ ಮಗಳು ಮೆಡಲಿನ್ ಸ್ಲೇಡ್ ೧೯೨೫ರಲ್ಲಿ ಸಾಬರಮತಿಯಲ್ಲಿ ಬಾಪೂಜಿ ಬಳಿಗೆ ಬಂದಿದ್ದಳು. ಮೆಡಲಿನ್ ಚಿಕ್ಕಂದಿನಿಂದಲೂ ಸ್ವಲ್ಪ ವಿಶಿಷ್ಟ ಸ್ವಭಾವದವಳು. ಆಕೆ ಹುಟ್ಟಿದ್ದು ವಿದೇಶದ ಒಬ್ಬ ದೊಡ್ಡ ಶ್ರೀಮಂತನ ಮನೆಯಲ್ಲಿ, ಆಕೆಯ ತಾಯಿಯ ತಂದೆ–ತಾಯಿ (ಅಜ್ಜ–ಅಜ್ಜಿ) ಜೊತೆ ಸಾಮಾನ್ಯವಾಗಿ ಅವರ ಹಳ್ಳಿಯ ಜಮೀನುದಾರಿಯನ್ನ ನೋಡಿಕೊಂಡು ಹೊಲ–ಕಾಡು, ತೋಟ ಇವುಗಳ ನಡುವೆಯೇ ಬೆಳೆದಿದ್ದಳು. ಚಿಕ್ಕಂದಿನಲ್ಲಿ ಅವಳು ಪ್ರಕೃತಿಯ ಉಪಾಸಕಳಾದಳು, ಆದುದರಿಂದ ಅವಳಜ್ಜ ಹುಡುಗಿಗಾಗಿ ಒಂದು ಪುಟ್ಟ ಮೇಕೆಗಾಡಿ ಮಾಡಿಸಿಕೊಟ್ಟಿದ್ದರು. ಅವಳು ಗಾಡಿಯಲ್ಲಿ ಕುಳಿತು ಪಾರ್ಕಿನಲ್ಲಿ ಅಡ್ಡಾಡುತ್ತಿದ್ದಳು. ಸ್ವಲ್ಪ ದೊಡ್ಡವಳಾದ ಮೇಲೆ ಮೆಡಲಿನ್ ಕುದುರೆ ಸವಾರಿ ಕಲಿತಳು. ದೂರ–ದೂರದ ಕಾಡುಗಳಲ್ಲಿ ಅವಳು ಕುದುರೆಯ ಮೇಲೆ ಸುತ್ತಾಡುತ್ತಿದ್ದಳು. ಹೀಗೆ ಚಿಕ್ಕಂದಿನಲ್ಲೇ ಪ್ರಾಣಿಗಳ ಪ್ರೇಮ ಅವಳಿಗೆ ಈ ಕಾರಣಗಳಿಂದಾಗಿ ಬಟ್ಟೆ–ಬರೆ, ಒಡವೆ ಅಲಂಕಾರದ ಶೋಕಿ ಅವಳಲ್ಲಿ ಬೆಳೆಯಲೇ ಇಲ್ಲ. ೧೫ ವರ್ಷದ ವಯಸ್ಸಿನಲ್ಲಿ ಖ್ಯಾತ ಸಂಗೀತ ವಿದ್ವಾಂಸ ಬಿತ್ಹೋವನ್ ರಚಿಸಿದ ಸಂಗಿತವನ್ನು ಕೇಳಿ ಭಾವಾಭಿಭೂತಳಾಗಿದ್ದಳು. ಅದಾದ ನಂತರ ಪ್ರಾಪಂಚಿಕ ಮೋಹದಿಂದ ದೂರವಾದ ಹಾಗೆ ಆಯಿತು. ಒಂದು ವಿಚಿತ್ರವಾದ ಮುಗ್ಧತೆ ಅವಳಲ್ಲಿ ತುಂಬಿಕೊಂಡಿತು. ಸಂಗೀತದ ದೈವೀಶಕ್ತಿ ಮೆಡಲಿನ್‌ಳನ್ನು ಆವರಿಸಿ ಅವ್ಯಕ್ತ ಶ್ರದ್ಧಾ–ಭಕ್ತಿಗಳು ಅವಳಲ್ಲಿ ತುಂಬಿತ್ತು.

ಯುವತಿ ಮೆಡಲಿನ್‌ಗೆ ಫ್ರೆಂಚ್ ದಾರ್ಶನಿಕ ರೋಮೇ ರೋಲಾನ ವಿಚಾರಗಳು ಬಹಳ ಇಷ್ಟವಾಗುತ್ತಿದ್ದವು. ರೋಮೇ ರೋಲಾ ಸ್ವಿಟ್ಜರ್ಲೆಂಡಿನ ವಿಲೆನೆಟ್ ಎಂಬ ಹಳ್ಳಿಯಲ್ಲಿ ಸರೋವರದ ದಡದಲ್ಲಿ ತನ್ನ ತಂಗಿಯ ಜೊತೆ ವಾಸವಾಗಿದ್ದರು. ಆಕೆ ಸುಂದರವಾಗಿ ಪಿಯಾನೋ ನುಡಿಸುತ್ತಿದ್ದಳು. ಅವರು ಆರು ಸಂಪುಟಗಳಲ್ಲಿ ಬರೆದಿರುವ 'ಜ್ಯಾಕ್ರಿಸ್ಟೋಫ್' ಎಂಬೊಂದು ಪುಸ್ತಕ ಬಹಳ ಹೆಸರುವಾಸಿಯಾಗಿದೆ. ಮೆಡಲಿನ್ ಅವರನ್ನು ಭೇಟಿಯಾದಳು. ಮಾತಾಡುತ್ತಿರುವಾಗ ರೋಮೇ ರೋಲಾ " 'ಮಹಾತ್ಮಾ ಗಾಂಧಿ' ಎಂಬ ಚಿಕ್ಕಪುಸ್ತಕವೊಂದನ್ನು ಬರೆದಿದ್ದೇನೆ. ಅದು ಮುದ್ರಿತವಾಗುತ್ತಿದೆ" ಎಂದು ತಿಳಿಸಿದರು. ಮೆಡಲಿನ್ ಗಾಂಧಿ ಹೆಸರು

ಕೇಳಿರಲಿಲ್ಲವಾದ್ದರಿಂದ ರೋಮೇ ರೋಲಾ ಅವಳಿಗೆ ಆತ ಇನ್ನೊಬ್ಬ ಏಸುಕ್ರಿಸ್ತ ಎಂದರು. ರೋಮೇ ರೋಲಾರ ಪುಸ್ತಕ ಪ್ರಕಟವಾದೊಡನೆಯೇ ಮೆಡಲಿನ್ ಅದನ್ನು ಓದುತ್ತಿದ್ದಂತೆ ಅವಳ ಹೃದಯ ಆಶ್ಚರ್ಯಚಃತವಾಗುತ್ತಿತ್ತು. ಆ ಕ್ಷಣ ತಾನು ಹುಡುಕುತ್ತಿದ್ದ ವ್ಯಕ್ತಿ ತನಗೆ ಸಿಕ್ಕರೆಂದು ಮೆಡಲಿನ್‌ಗೆ ಅನ್ನಿಸಿತು. ಅವಳ ಮುಂದಣ ಜೀವನ ಗಾಂಧೀಯವರ ಚರಣಗಳಿಗೆ ಅರ್ಪಿತವಾಯಿತು.

ಮೆಡಲಿನ ಆ ಕ್ಷಣ ಹಿಂದೂಸ್ತಾನಕ್ಕೆ ಹೋಗಬೇಕೆಂದು ನಿರ್ಧರಿಸಿದಳು. ಟಿಕೆಟ್‌ನ್ನು ಕೊಂಡಳು. ಆದರೆ ಪೂರ್ವಸಿದ್ಧತೆ ಇಲ್ಲದೆ ಹಿಂದೂಸ್ತಾನಕ್ಕೆ ಹೋಗುವುದು ಮೂರ್ಖತನವಾದೀತು, ಗಾಂಧೀಜಿಗೆ ಅನ್ಯಾಯ ಮಾಡಿದ ಹಾಗಾಗುತ್ತದೆಂದು ಅವಳು ಯೋಚಿಸಿದಳು. ಆಕೆ ಆಶ್ರಮದ ನಿಯಮಗಳನ್ನು ಗಮನದಿಂದ ಓದಿದಳು. ಅದರಂತೆ ತಾನು ಆಚರಿಸಲು ಆರಂಭಿಸಿದಳು. ನೆಲದ ಮೇಲೆ ಕುಳಿತುಕೊಳ್ಳುವ ಅಭ್ಯಾಸ ಮಾಡಿಕೊಂಡಳು, ಶಾಕಾಹಾರಿಯಾದಳು. ನೂಲುವ ಹಿಂಜಿ ಮಾಡುವ ನೇಯುವ ಅಭ್ಯಾಸ ಮಾಡತೊಡಗಿದಳು. ಗಾಂಧೀಜಿಯ ೨೧ ದಿನಗಳ ಉಪವಾಸದ ಸುದ್ದಿ ಕೇಳಿ ದುಃಖಿತಳಾದಳು. ಈ ತಾಪದಲ್ಲಿ ಗಾಂಧೀಜಿ ಏನಾದರೂ ತೀರಿಕೊಂಡರೆ? ಅವಳು ಹೆದರಿದಳು. ಉಪವಾಸ ಯಾವ ಅಡಚಣೆಯೂ ಇಲ್ಲದೆ ಮುಗಿದಾಗ ಅವಳ ಮನಸ್ಸಿಗೆ ಸ್ವಲ್ಪ ಶಾಂತಿ ದೊರಕಿತು. ಆಗ ಮೊಟ್ಟ ಮೊದಲು ಆಕೆ ಗಾಂಧೀಜಿಗೆ ಪತ್ರ ಬರೆದಳು. ಅದರ ಜೊತೆ ೨೦ ಪೌಂಡ್‌ನ ಒಂದು ಚೆಕ್ ಮತ್ತು ಹೆಣೆಸಿದ ಉಲ್ಲನ್ ಬಟ್ಟೆಗಳ ನಮೂನೆಗಳನ್ನು ಕಳುಹಿಸಿದಳು ಹಾಗೂ ಆಶ್ರಮದಲ್ಲಿರಲು ಅನುಮತಿ ಬೇಡಿದಳು. ಪ್ರವಾಸದಲ್ಲಿದ್ದ ಗಾಂಧೀಜಿಗೆ ಪತ್ರ ತಡವಾಗಿ ತಲುಪಿತು. ಆದರೆ ಆಗಲೇ ಉತ್ತರ ಬರೆದರು. ಹಿಂದೂಸ್ತಾನದ ಕಠೋರ ಹವಾಗುಣ, ಆಶ್ರಮ ಜೀವನದ ಕಷ್ಟಗಳನ್ನು ಕುರಿತು ಗಾಂಧೀಜಿ ಮೆಡಲಿನ್‌ಗೆ ಎಚ್ಚರಿಕೆ ನೀಡಿದರು. ಆದರೆ ಮೆಡಲಿನ್ ಇವೆಲ್ಲವನ್ನೂ ಸಹಿಸಿಕೊಂಡು ಗಾಂಧೀಜಿಯವರ ಆಶ್ರಮದಲ್ಲಿ ಇರಬಯಸುತ್ತಿದ್ದಳು.

೧೧ ಸೆಪ್ಟೆಂಬರ್ ೧೯೨೫ರಂದು ಬೆಳಿಗ್ಗೆ ಮಹಾದೇವ್ ದೇಸಾಯಿ ಮತ್ತು ವಲ್ಲಭಭಾಯಿ ಪಟೇಲರು ಮೆಡಲಿನ್‌ನ್ನು ಬರಮಾಡಿಕೊಳ್ಳಲು ಅಹಮದಾಬಾದ್ ಸ್ಟೇಷನ್‌ಗೆ ಹೋದರು. ಟಾಂಗಾದಲ್ಲಿ ಕುಳಿತು ಆಶ್ರಮಕ್ಕೆ ಹೋಗಬೇಕಾಗಿತ್ತು. ಬಾಪೂಜಿಯವರನ್ನು ಭೇಟಿಯಾಗಬೇಕೆಂಬ ತೀವ್ರ ಇಚ್ಛೆಯಿಂದಾಗಿ ಟಾಂಗಾ ಪ್ರಯಾಣ ಆಕೆಗೆ ಬಹಳ ದೂರದ ಪ್ರಯಾಣ ಎನಿಸಿತು. ಕೊನೆಗೆ ಆಶ್ರಮದ ಹೃದಯ ಕುಂಜ ತಲುಪಿದಳು. ತಲುಪಿ ಗಾಂಧೀಜಿಯ ಚರಣಗಳಡಿ ಬಿದ್ದಳು, ಆ ದಿನದಿಂದ ಇಬ್ಬರ ನಡುವೆ ತಂದೆ – ಮಗಳ ಭಾವನೆ ಉದ್ಭವಿಸಿ ಜೀವನದ ಕೊನೆಯವರೆಗೂ ಅದೇ ಭಾವ ಉಳಿದುಕೊಂಡಿತ್ತು. ಬಾಪೂಜಿ ಈ ೩೩ ವರುಷದ ಕನ್ನೆಗೆ ಮೀರಾ ಎಂದು ಹೆಸರಿಟ್ಟರು. ಮೆಡಲಿನ್ ತನ್ನ ಹೆಸರನ್ನು

ಸಾರ್ಥಕಪಡಿಸಿಕೊಂಡಳು. ಆಕೆಗೆ ಪುನರ್ಜನ್ಮವಾಯಿತು. ಮೀರಾ ಆಶ್ರಮದ ಎಲ್ಲಾ ಕೆಲಸಗಳನ್ನೂ ಬಹಳ ಸುಂದರವಾಗಿ ಮಾಡುತ್ತಿದ್ದಳು. ಹಿಂದಿ, ಉರ್ದು ಕಲಿಯುವುದಕ್ಕಾಗಿ ಆಕೆ ದೆಹಲಿಯಲ್ಲಿ ಸ್ವಾಮಿ ಶ್ರದ್ಧಾನಂದರ ಬಳಿ ಕೆಲವು ದಿನ ಇದ್ದಳು. ನಮ್ಮ ಜೊತೆ ಆಕೆ ಬಹಳ ಒಳ್ಳೆಯ ಹಿಂದೂಸ್ತಾನಿ ಮಾತನಾಡುತ್ತಿದ್ದಳು. ಆರಂಭದಲ್ಲಿ ಆಶ್ರಮವನ್ನು ಸ್ವಚ್ಛಗೊಳಿಸುವ ಕೆಲಸ ಆಕೆಯದಾಗಿತ್ತು. ಬೆಳಿಗ್ಗೆ ಆಕೆ ಜನ ನೋಡಿ ಚಕಿತರಾಗದಷ್ಟು ಚೆನ್ನಾಗಿ ಆಶ್ರಮವನ್ನೆಲ್ಲಾ ಗುಡಿಸಿ ಸ್ವಚ್ಛಗೊಳಿಸುತ್ತಿದ್ದಳು. ಗಾಂಧೀಜಿಯವರ ಸೇವೆಯನ್ನು ಆಕೆ ಪೂರ್ತಿ ಭಕ್ತಿ ಭಾವನೆಯಿಂದ ಕುಶಲತೆಯಿಂದ ನೆರವೇರಿಸುತ್ತಿದ್ದಳು. ಇಂಗ್ಲಿಷರ ಚೊಕ್ಕಟ, ಕುಶಲತೆ ಮತ್ತು ಏಕಾಗ್ರತೆಯೊಂದಿಗೆ ಅವಳು ಆಶ್ರಮ ಜೀವನದಲ್ಲಿ ಬೆರೆತುಹೋಗಿದ್ದಳು. ಗಾಂಧೀಜಿ ಯೋಚಿಸಿದ್ದನ್ನು ಮತ್ತೆ ಮತ್ತೆ ನೋಡಬೇಕೆನಿಸುತ್ತಿತ್ತು. ಅದರಿಂದಾಗಿ ಅದನ್ನು ಸಂಗ್ರಹಿಸುವ ಇಚ್ಛೆ ಉಂಟಾಗುತ್ತಿತ್ತು. ನಮ್ಮ ಬಾಲ್ಯದ ಪ್ರಪಂಚದಲ್ಲಿ ಕಾಗದದ ಕುದುರೆಗಳೇ ನಮ್ಮ ಶ್ರೇಷ್ಠವಾದ ಆಟದ ಸಾಮಾನುಗಳಾಗಿದ್ದವು. ಆದರೆ ಆ ಕಾಲದಲ್ಲಿ ಜೀವನದಲ್ಲಿ ಇದು ನನ್ನದು ಅಂತ ಹೇಳುವುದಕ್ಕೆ ಏನೂ ಇರಲಿಲ್ಲ. ಇಡೀ ಆಶ್ರಮ ನಮ್ಮದಾಗಿತ್ತು. ಎಲ್ಲ ಕಡೆ ನಾವು ನಿರಾತಂಕವಾಗಿ ಅಲೆಯುತ್ತಿದ್ದೆವು. ಒಂದು ಪೆಟ್ಟಿಗೆ ಮೇಜು ಯಾವುದೂ ನಮ್ಮದು ಅಂತ ಇರಲಿಲ್ಲ. ಆದ್ದರಿಂದ ಆ ಸುಂದರ ಕೃತಿಗಳನ್ನು ಜೋಪಾನ ಮಾಡಿ ಇಡಲಾಗಲಿಲ್ಲ. ಆ ಕಾಗದದ ಕುದುರೆಗಳು ಎಲ್ಲೋ ಕಳೆದು ಹೋದವೆನ್ನುವ ದುಃಖ ಆಗಲೂ ಇತ್ತು. ಇಂದು ನಮ್ಮ ಮಕ್ಕಳಿಗೆ ಮೀರಾಬಹನ್ ಕಲಾಕುಶಲತೆಯನ್ನು ತೋರಿಸುವಂತಿಲ್ಲವಲ್ಲ ಅನ್ನುವ ಕಾರಣಕ್ಕಾಗಿ ಆ ದುಃಖ ಇಮ್ಮಡಿಯಾಗಿದೆ.

ಮೀರಾ ಬಹನ್‌ಗೆ ತೀವ್ರವಾದ ಸೌಂದರ್ಯಪ್ರಜ್ಞೆ ಇತ್ತು. ಆಕೆ ಮಾಡಿದ್ದೇ ಒಂದು ಕಲಾಕೃತಿಯಾಗುತ್ತಿತ್ತು. ಸೇವಾಶ್ರಮದ ಬಂಬು ಮತ್ತು ಗಾರೆ ಸೇರಿಸಿ ಕಟ್ಟಿದ್ದ ಗುಡಿಸಲುಗಳ ಗೋಡೆಗಳ ಮೇಲೆ ಆಕೆ ಮಣ್ಣಿನಿಂದಲೇ ಆಕರ್ಷಕವಾದ ತೆಂಗಿನ ಗಿಡಗಳನ್ನು ಬಿಡಿಸಿ, ಮಧ್ಯದಲ್ಲಿ 'ಓಂ' ಅಂತ ಬರೆದಿದ್ದಳು. ಇಂದಿಗೂ ಸೇವಾಶ್ರಮದ ಜನ ಈ ಮಣ್ಣಶಿಲ್ಪವನ್ನು ಬಹಳ ಹುಷಾರಾಗಿ ಕಾಪಾಡಿಕೊಂಡಿದ್ದಾರೆ. ಆಧುನಿಕ ಭಾರತದಲ್ಲಿ ಯಾರೇ ಒಬ್ಬ ನಿಷ್ಣಾತನಾಗಿರುವ ಶಿಲ್ಪಿ ಅಂತಹ ಸುಂದರವಾದ ತೆಂಗಿನ ಮರದ ಶಿಲ್ಪವನ್ನು ಬಿಡಿಸಬಲ್ಲ ಅಂತ ನನಗಂತೂ ಅನಿಸಲ್ಲ. ಮೀರಾ ಬಹನ್ ಐದೇ ನಿಮಿಷದಲ್ಲಿ ಆ ಆಕೃತಿಗಳಲ್ಲಿ ಪ್ರಾಣ ತುಂಬಿದ್ದಳು. ನಮ್ಮ ಆಶ್ರಮದಲ್ಲಿ ಬಣ್ಣ, ಜಾತಿ ಯಾವುದರ ಭೇದ-ಭಾವವೂ ಇರಲಿಲ್ಲ. ಆದರೆ ಮೀರಾ ಬಹನ್ ತನ್ನ ಹಸ್ತಕುಶಲತೆ, ಕುಳಿತುಕೊಳ್ಳುವುದು, ಮಾತನಾಡುವು ನಯ ಮತ್ತು ಯಾವಾಗಲೂ ಸರಳತೆಯಿಂದ ಇರುವುದು, ಪರಿಶ್ರಮ ಇವುಗಳೆಲ್ಲದರಲ್ಲೂ ಒಂದು ತನ್ನದೇ ಆದ ಮನ-ಮೋಹಕ ವ್ಯಕ್ತಿತ್ವದವಳಾಗಿದ್ದಳು.

ನಂತರದಲ್ಲಿ ಸೇವಾಗ್ರಾಮದ ಬಿಸಿಲಲ್ಲಿ ಆಕೆಯ ಆರೋಗ್ಯ ನೆಟ್ಟಗಿರುತ್ತಿರಲಿಲ್ಲ. ಆಕೆ ಹೃಷಿಕೇಶದ ಬಳಿ ಇರತೊಡಗಿದಳು, ಅದರಲ್ಲೂ ಆಕೆಗೆ ಹಸುಗಳೆಂದರೆ ಬಹಳ ಪ್ರೀತಿ. ಅಲ್ಲಿದ್ದು ಕೊಂಡು ಆಕೆ ಗೋ ಸೇವಾ ಕಾರ್ಯ ಶುರು ಮಾಡಿಕೊಂಡಳು. ತನ್ನ ಆಶ್ರಮಕ್ಕೆ 'ಪಶುಲೋಕ' ಅಂತ ಹೆಸರು ಇಟ್ಟಳು, ಸುತ್ತಾಡುವುದುಕ್ಕೋಸ್ಕರ ಒಂದು ಕುದುರೆಯನ್ನಿಟ್ಟುಕೊಂಡಳು; ಅದಕ್ಕೆ 'ಸಜೀಲಾ' ಅಂತ ಹೆಸರು ಇಟ್ಟಳು' ಸೀರೆ ಉಟ್ಟು ಕುದುರೆ ಸವಾರಿ ಮಾಡುವುದು ಕಷ್ಟವಾಗುತ್ತಿತ್ತು. ಬಾಪೂಜಿಗೆ ಪಂಜಾಬಿ ಮಹಿಳಾ ಉಡುಪು ಸಲವಾರ್–ಕಮಿೂಜ಼್ ಬಹಳ ಇಷ್ಟವಾಗುತ್ತಿತ್ತು, ಅದರಿಂದ ಮಿೂರಾ ಬಹನ್ ಬಾದಾಮಿ, ಕಾವಿ ಬಣ್ಣದ ಸಲವಾರ್ ಕಮಿೂಜ಼್ ಧರಿಸುತ್ತಿದ್ದಳು. ಎತ್ತರಕ್ಕೆ ಚೆನ್ನಾಗಿದ್ದಳು, ಬಹಳ ಆಕರ್ಷಕವಾಗಿ ಕಾಣಿಸುತ್ತಿದ್ದಳು. ಬಾಪೂಜಿ ನನಗೂ ಸಲವಾರ್ ಹಾಕಿಕೋ ಅಂತ ಬಲವಂತ ಮಾಡಿದ್ದರು. ನನಾಗಾಗಿ ಲಾಹಾರ್‌ನಿಂದ ವಿಶೇಷವಾಗಿ ಸಲವಾರ್‌ನ ಒಂದು ಜೋಡಿ ಹೊಲೆದು ಬಂತು, ಆದರೆ ಆಗ ದಪ್ಪ ಖಾದಿ ಉಡುವಕಾಲ. ದುಪ್ಪಟಿ ಹಾಗಿದ್ದ ಬಟ್ಟೆಯಿಂದ ಮಾಡಿದ ಸಲವಾರ್ ಹಾಕಿಕೊಂಡರೆ ನಾನು ಅದರಲ್ಲಿ ಮುಳುಗಿ ಹೋಗಿರುತ್ತಿದ್ದೆ. ಅದನ್ನು ಕೈಯಿಂದ ಒಗೆಯುವುದು, ಸ್ವಚ್ಛಗೊಳಿಸುವುದರಲ್ಲಿ ನನ್ನ ಪ್ರಾಣ ಹೋಗುತ್ತಿತ್ತು. ಇದರಿಂದಾಗಿ ನಾನು ಸಲವಾರ್ ಕಮಿೂಜ಼ನ್ನು ಹಾಕಿಕೊಳ್ಳಲಾಗಲಿಲ್ಲ.

'ಪಶುಲೋಕ' ಒಂದು ದೊಡ್ಡ ಸಂಸ್ಥೆಯಾದಾಗ ಮೀರಾ ಬಹನ್ ಅದನ್ನು ಉತ್ತರ ಪ್ರದೇಶ ಸರಕಾರಕ್ಕೆ ದಾನ ಮಾಡಿಬಿಟ್ಟಳು. ಕೇದಾರನಾಥದ ಬಳಿ 'ಗೋಪಾಲ ಆಶ್ರಮ'ವನ್ನು ಕಟ್ಟಿಕೊಂಡು ಇರತೊಡಗಿದಳು. ಬಾಪೂಜಿ ಸಾವಿನ ಸುದ್ದಿ ಕೇಳಿ ಅವಳು ಸ್ತಬ್ಧಳಾದಳು. ನಂತರ ಆಕೆ ಹೇಳಿದಳು: 'ಅವರು ಒಂದಾದರು. ನನಗೆ ದೇವರು ಬಾಪು ಇಬ್ಬರೇ ಇದ್ದದ್ದು, ಈಗ ಅವರಿಬ್ಬರೂ ಒಂದಾದರು.' ಮೀರಾಬಹನ್ ನಮ್ಮ ತಂದೆ ಮತ್ತು ದೇವದಾಸ್ ಕಾಕಾಗೆ ದೆಹಲಿಯಲ್ಲಿ ಬಾಪೂಜಿಗೆ ಮೊದಲೇ ತನ್ನ ಸಾವಿನ ಅರಿವಾಗಿತ್ತು. ಎಂದು ಹೇಳಿದ್ದಳು. ೧೯೪೭ರ ಡಿಸೆಂಬರ್‌ನಲ್ಲಿ ಮೀರಾ ಬಹನ್ ಬಾಪೂಜಿಯನ್ನು ಕೇಳಿದ್ದಳು "ಪಶುಲೋಕ ದ ಗೋಶಾಲೆಯ ಉದ್ಘಾಟನೆಗಾಗಿ ಹೃಷಿಕೇಶಕ್ಕೆ ಬರಲು ಪುರಸೊತ್ತು ಮಾಡಿಕೊಳ್ಳುವಿರಾ?"

ಬಾಪೂಜಿ ಅದಕ್ಕೆ "ನಾನು ಬರುವ ಮಾತು ಬೇಡ, ಹೆಣದ ಮೇಲೆ ಆಶ್ರಿತಳಾದರೆ ಏನು ಪ್ರಯೋಜನ?" ಅಂದಿದ್ದರು.

ಈ ಮಾತುಗಳು ಬಹಳ ಭಯಂಕರವಾಗಿದ್ದುದರಿಂದ ಮೀರಾ ಬಹನ್ ಇದನ್ನು ಯಾರೊಂದಿಗೂ ಹೇಳಲಿಲ್ಲ. ಸುಮ್ಮನೆ ಹೃದಯದಲ್ಲಿಟ್ಟುಕೊಂಡಳು, ದೇವರಲ್ಲಿ ಪ್ರಾರ್ಥಿಸಿಕೊಂಡಳು. ಅದು ಭವಿಷ್ಯವಾಣಿಯಾಗಿದ್ದು ಒಂದು ತಿಂಗಳೊಳಗೇ ಸತ್ಯವಾಯಿತು. ಬಾಪೂಜಿ ಕೊನೆಗಂಡ ನಂತರವೂ ಹತ್ತಿಪ್ಪತ್ತು ವರ್ಷಗಳ ಕಾಲ ಬಹುಶಃ ಆಕೆ ಭಾರತದಲ್ಲೇ ಇದ್ದಳು. ಆಕೆಯ ಹೃದಯ ಭಾರತೀಯ ಸಂಸ್ಕೃತಿಯಿಂದ

ಕೂಡಿತ್ತು. ಆಕೆಯ ಮನದಲ್ಲಿ ಸನ್ಯಾಸದ ಭವ್ಯ ಭಾವನೆ ಇತ್ತು. 'ಪಶುಲೋಕ'ದಲ್ಲಿ ಸಾಕಷ್ಟು ಭೂಮಿ ಇತ್ತು. ಆಕೆ ಅದರ ಒಂದು ಭಾಗ ಭೂಮಿಯನ್ನು ರೈತರಿಗೆ ಕೊಟ್ಟು ಅಲ್ಲೊಂದು ಆದರ್ಶವಾದ ಹಳ್ಳಿಯನ್ನು ನಿರ್ಮಿಸಿದ್ದಳು. ವಿನೋಬಾಗೆ ಭೂದಾನದ ಕಲ್ಪನೆ ಬಾಪೂಜಿ ತೀರಿಕೊಂಡ ನಂತರ ಮೂಡಿತು. ಆದರೆ ಮೀರಾ ಬಹನ್ ಭೂದಾನದ ಕೆಲಸವನ್ನು ಬಾಪೂಜಿ ಬದುಕಿದ್ದಾಗಲೇ ಆರಂಭ ಮಾಡಿಕೊಂಡಿದ್ದಳು. ಇಂದು ಆ ಹಳ್ಳಿಯಲ್ಲಿ ಜನ ಅತಿ ವ್ಯವಸ್ಥಿತವಾಗಿ ಸುಖವಾಗಿ ಬಾಳುತ್ತಿದ್ದಾರೆ. ಮೀರಾ ಬಹನ್ ತಾನು ಪೂರ್ವಜನ್ಮದಲ್ಲಿ ಭಾರತೀಯ ಮಹಿಳೆಯಾಗಿದ್ದೆ ಎಂದು ಜೀವನವಿಡೀ ನಂಬಿದ್ದವಳು. ಚಿತ್ರಗುಪ್ತನ ಒಕ್ಕಣಿಕೆ ಪ್ರಕಾರ ಆಕೆ ಇಂಗ್ಲೆಂಡ್‌ನಲ್ಲಿ ಹುಟ್ಟಿದ್ದರೂ, ಆಕೆಯ ಕರ್ಮಭೂಮಿ ಕೊನೆಗೂ ಭಾರತವೇ ಆಗಿತ್ತು. ಜೀವನದ ಕೊನೆಗಾಲದಲ್ಲಿ ಆಕೆಯು ಬಹಳ ಶೂನ್ಯತೆಯನುಭವಿಸಿದಳು. ಆಗ ಆಕೆ ವಿಯನ್ನಾ ಬಳಿ ಒಂದು ಕಾಡಲ್ಲಿ ಆಸ್ಟ್ರಿಯ ದೇಶದಲ್ಲಿರತೊಡಗಿದಳು. ಬಿಥೋವನ್ ಆಸ್ಟ್ರಿಯನ್ ಆಗಿದ್ದರು. ತನ್ನ ಮೊದಲ ಪ್ರೇರಕನ ಬಳಿ ಮೀರಾ ಬಹನ್‌ಗೆ ಸ್ವಲ್ಪ ಸುಖ ಸಿಕ್ಕಿತು. ಆದರೆ ಅಲ್ಲೂ ಆಕೆ ಪೂರ್ತಿ ಭಾರತೀಯ ಪದ್ಧತಿಯಲ್ಲೇ ಬದುಕಿದ್ದಳು. ೧೯೮೩ರಲ್ಲಿ ಕೊನೆ ಕ್ಷಣದವರೆಗೂ ಆಸ್ಟ್ರಿಯಾದಲ್ಲಿದ್ದ ಮೀರಾ ಬಹನ್ ಭಾರತಪ್ರೇಮಿಯಾಗಿದ್ದಳು. ಸೇವಾಗ್ರಾಮದ ಆಶ್ರಮವೂ ಬಾಪೂಜಿಯ ಈ ಮಗಳ ಜೊತೆ ಕೊನೆಯವರೆವಿಗೂ ಸಂಬಂಧ ನಿರ್ವಹಿಸಿತು ಮತ್ತು ಆಸ್ಟ್ರಿಯಾದ ಖರ್ಚನ್ನು ಆಶ್ರಮ ಕಳಿಸುತ್ತಿತ್ತು. ಭಾರತ ಸರಕಾರಕ್ಕೆ ಮೀರಾ ಬಹನ್ ಬಗೆಗೆ ಗೌರವವಿತ್ತು. ಆದುದರಿಂದ ಭಾರತೀಯ ರಾಜದೂತರು ಸದಾ ಮೀರಾ ಬಹನ್‌ಳ ಅನುಕೂಲ ಕುರಿತು ಗಮನ ಹರಿಸುತ್ತಿದ್ದರು. ೧೯೮೨ರಲ್ಲಿ ಇಂದಿರಾ ಗಾಂಧಿ ಮೀರಾ ಬಹನ್‌ಗೆ 'ಪದ್ಮವಿಭೂಷಣ'ವನ್ನಿತ್ತು, ಗೌರವಿಸಿದರು. ಮೀರಾ ಬಹನ್ ವಾಸ್ತವವಾಗಿ ಭಾರತೀಯಳೇ ಆಗಿದ್ದಳು. ಆಕೆಯ ಸೇವೆಗಳಿಗೆ ಯೋಗ್ಯ ಸನ್ಮಾನ ನೀಡಿದ್ದೂ ಸರಿಯಾಗಿತ್ತು.

* * * *

# ೧೩. ೧೯೨೭ನೇ ಇಸವಿ

ಹೊಟ್ಟೆಯ ಈ ದೊಡ್ಡ ಆಪರೇಷನ್, ೨೧ ದಿನಗಳ ಉಪವಾಸ ಮತ್ತು ಮೈಮುರಿಯುವ ಪಾದಯಾತ್ರೆ– ಇವುಗಳಿಂದೆಲ್ಲಾ ಬಾಪೂಜಿಗೆ ಬಹಳ ಆಯಾಸವಾಗಿತ್ತು. ಅಸಹಕಾರ ಚಳವಳಿಯ ಕೆಲಸಗಳಿಂದಾಗಿ ಆಶ್ರಮದ ವಿಕಾಸಕ್ಕೆ ಪೂರ್ತಿ ಸಮಯ ಕೊಡಲಾಗುತ್ತಿರಲಿಲ್ಲ. ಸತ್ಯಸಾಧನೆ, ಅದರ ಪ್ರಯೋಗಗಳು –ಇವೇ ಅವರ ಜೀವನದ ಏಕೈಕ ಗುರಿಯಾಗಿತ್ತಾದುದರಿಂದ ಸ್ವಲ್ಪ ಸಮಯ ಹೊರಗಣ ಚಟುವಟಿಕೆಗಳನ್ನು ಒತ್ತಟ್ಟಿಗಿಟ್ಟು ವಿಚಾರಶೀಲ ಆತ್ಮಚಿಂತನೆ ಮಾಡುವುದು ಅಗತ್ಯವಾಗಿತ್ತು. ಹೊರಗಿನ ಈ ಓಡಾಟಗಳನ್ನು ನಿಯಂತ್ರಿಸಿ ಮನುಷ್ಯ ತನ್ನೊಳಗೇ ಇಣುಕುವುದಕ್ಕೆ ಅವಕಾಶ ಕೊಡದೆ ಇದ್ದರೆ ಪ್ರಜ್ಞೆ ಪಡೆಯುವುದು ಕಷ್ಟ. ಪ್ರಜ್ಞೆಯೇ ಪಂಥ, ಅದೇ ಶಾಶ್ವತ, ಸತ್ಯದರ್ಶನದ ಬಳಿಗೆ ನಮ್ಮನ್ನು ತಲುಪಿಸಬಲ್ಲದು. ಇಂತಹ ಕೆಲವು ವಿಚಾರಗಳು ಬಂದು ೧೯೨೭ರಲ್ಲಿ ಬಾಪೂಜಿ ಪೂರ್ತಿ ಒಂದು ವರ್ಷದವರೆಗೆ ಸಾಬರಮತಿ ಆಶ್ರಮದಲ್ಲೇ ಇರಬೇಕೆಂದು ನಿರ್ಧರಿಸಿದರು. ಕೊನೆಗೂ ಒಂದು ವರ್ಷಕ್ಕೂ ಹೆಚ್ಚು ಸಮಯ ಅಲ್ಲೇ ಇದ್ದರು. ಆ ಒಂದು ವರ್ಷದಲ್ಲಿ ಬಾಪೂಜಿ ಬಹಳ ಕೆಲಸಗಳನ್ನು ಮಾಡಿದರು. 'ಯಂಗ್ ಇಂಡಿಯಾ' ಮತ್ತು 'ನವಜೀವನ'ಗಳ ಮೂಲಕ ಬಹಳ ತೇಜಸ್ವಿಯಾದ, ಕ್ರಾಂತಿಕಾರಕ ವಿಚಾರಗಳನ್ನು ದೇಶದಲ್ಲೆಲ್ಲೆಡೆ ಹರಡಿದರು. ಈ ವಿಚಾರ ಪ್ರಚಾರಗಳ ಮುಖಾಂತರ ಅವರು ಎಲ್ಲಾ ವಯಸ್ಸಿನವರಿಗೂ ಚಿಂತಿಸಿ ಅದನ್ನು ಪಾಲಿಸುವುದನ್ನು ಕಲಿಸಿದರು. ನಿರುತ್ಸಾಹಿಗಳಾಗಿದ್ದವರಿಗೆ ಆಧ್ಯಾತ್ಮಿಕ ಶಕ್ತಿಯಿಂದ ಹುಟ್ಟಿದ ಸಾಹಸ ನೀಡಿದರು. ಅವರಿಗೆ ರಾಷ್ಟ್ರವೆಲ್ಲಾ ಒಂದು ವಿಶಾಲವಾದ ವಿಶ್ವವಿದ್ಯಾನಿಲಯವಾಗಿತ್ತು. ಅದರಲ್ಲಿ ಕಲಿಯುವುದು, ಕಲಿಸುವುದು ಕರ್ತವ್ಯವಾಗುತ್ತದೆ. ಆದುದರಿಂದ ಅವರು ಲೇಖನಗಳನ್ನು ಬರೆದು, ಆ ಮುಖಾಂತರ ಜನರನ್ನು ಜಾಗೃತಗೊಳಿಸುತ್ತಿದ್ದರು. ಸ್ಥಿರವಾಗಿದ್ದುಕೊಂಡು ಅವರು ಆಶ್ರಮದ ಜೀವನದ ಪ್ರತಿಯೊಂದು ಕ್ರಿಯೆಗೂ ಶಕ್ತಿ ಕೊಡಿಸಿದರು. ಆಶ್ರಮ ಇಡೀ ದೇಶದ ಪ್ರಯೋಗಶಾಲೆಯಾಗಿತ್ತು. ದಿನವಿಡೀ ನಡೆಯುವ ಪ್ರತಿಯೊಂದು ಕಾರ್ಯವನ್ನೂ ಹೊಸದಾಗಿ ತಾರ್ಕಿಕ ಚಿಂತನೆಗೆ ಒಳಪಡಿಸಿದರು. ಒಲೆ, ಹಿಟ್ಟು ಬೀಸುವ ಕಲ್ಲು, ಚಿಮಣಿಯಿಂದ ಹೊಗೆ ಹೇಗೆ ಸರಿಯಾಗಿ ಹೋಗುವಂತೆ ಮಾಡುವುದು, ಅಥವಾ ಪಾಯಖಾನೆ ಸ್ವಚ್ಛಗೊಳಿಸುವ ರೀತಿ, ತೋಟದಲ್ಲಿ ಯಾವಾಗ ನೆಡಬೇಕು, ಕೀಳಬೇಕು,

ಹಣ್ಣಿನ ಗಿಡಗಳನ್ನು ಕಸಿ ಮಾಡುವ ಬಗೆ, ಚರಖಾ ತಿರುಗಿಸುವ ರೀತಿ, ಅದು ಬೇಗ ತಿರುಗುವ ರೀತಿ, ಖಾದಿ ಸಿದ್ಧಪಡಿಸುವ, ಓದು–ಬರಹ ಭಾಷೆಯ ಹೊಸ ಪದಗಳ ಬರೆಯುವ ರೀತಿ, ವೇದಾಂತ ಉಪನಿಷತ್ತುಗಳ ಗುಹ್ಯ ರಹಸ್ಯವನ್ನು ಕುರಿತು ಚಿಂತನ– ಮನನ –ಇವಕ್ಕೆಲ್ಲ ಒಟ್ಟಿಗೆ ಒಂದೇ ರೀತಿ ಬೆಲೆ ಕೊಡಲಾಗುತ್ತಿತ್ತು.

ಆಗ ಬಾಪೂಜಿ ಸರ್ವೋತ್ತಮ ಚರಖಾಗೆ ೫೦೦ ರೂಪಾಯಿಗಳ ಇನಾಮು ಕೊಡಲಾಗುವುದೆಂದು ಘೋಷಿಸಿದ್ದರು. ಎಷ್ಟೋ ಜನ ಯುವಕರು ಈ ಹೊಸ ಡಿಜೈನ್‌ನಲ್ಲಿ ತಲ್ಲೀನರಾಗಿದ್ದರು. ಅವುಗಳಲ್ಲಿ ಪ್ರಭುದಾಸ ಗಾಂಧಿಯ ಎರಡು ತಕಲಿಗಳಿರುವ ಚರಖಾವನ್ನು ಶ್ರೇಷ್ಠವೆಂದು ಪರಿಗಣಿಸಬೇಕಾಗಿತ್ತು. ಆದರೆ ಆಗ ಅದನ್ನು ಕೂಡ ಬಹುಮಾನ ನೀಡಲು ತಕ್ಕುದೆಂದು ಒಪ್ಪಲಿಲ್ಲ. ಒಂದು ಅಂಬರ್ ಚರಖಾದಲ್ಲಿ ಮೂರು, ನಾಲ್ಕು, ಆರು ಹೀಗೆ ಸಾಕಷ್ಟು ತಕಲಿಗಳನ್ನು ಹಾಕಬಹುದು, ಆದರೆ ನನಗೆ ಅಂಬರ್ ಚರಖಾ ಬಗ್ಗೆ ಯಾವ ಅನುರಾಗವೂ ಹುಟ್ಟುವುದಿಲ್ಲ. ಅದು ಶುದ್ಧ ಗ್ರಾಮೋದ್ಯೋಗದ ಉತ್ಪಾದನೆ ಕೂಡ ಅಲ್ಲ ಎಂದು ನನಗನಿಸುತ್ತದೆ. ಆದರೆ ಚರಖಾದ ಈ ಹರಹನ್ನು ಮರೆತುಬಿಡಿ, ಆ ಕಾಲದಲ್ಲಿ ಆಶ್ರಮದಲ್ಲಿ ಸಮರ್ಪಿತರಾದ, ಬುದ್ಧಿವಂತರೂ ಶಕ್ತಿಶಾಲಿಗಳೂ, ಚಾರಿತ್ರ್ಯವುಳ್ಳವರೂ ಆದ ಅನೇಕ ಸಾಧಕರು ಒಂದೇ ಸಮಯದಲ್ಲಿ, ಒಂದು ಜಾಗದಲ್ಲಿ ಸೇರಿಕೊಂಡಿದ್ದರು. ಇದೊಂದು ಆಶ್ಚರ್ಯಕರ ಘಟನೆಯಾಗಿತ್ತು. ವಾತಾವರಣವೆಲ್ಲ ಶರೀರ ಶ್ರಮದಿಂದ ಧ್ವನಿಸುತ್ತಿತ್ತು. ಅದರ ಜೊತೆ ಸಂಗೀತ, ಸಾಹಿತ್ಯ, ಶಿಕ್ಷಣ, ಚಿಂತನೆ, ವೇದಾಂತ, ಚರ್ಚೆ– ಇವೆಲ್ಲಾ ನಡೆಯುತ್ತಿದ್ದವು.

ಸಂಸ್ಕೃತ ಮತ್ತು ಉಪನಿಷತ್ತುಗಳಲ್ಲಿ ನಿಷ್ಣಾತರಾಗಿದ್ದ ವಿನೋಬಾಜೀ ನೂಲೆಳೆಯುವುದು, ಹತ್ತಿ ಬಿಡಿಸುವುದು ಮತ್ತು ಗ್ರಾಮ ನೈರ್ಮಲ್ಯ, ಇವೆಲ್ಲ ಮಾಡುತ್ತಿದ್ದರು. ಮಾಡಿಸುತ್ತಿದ್ದರು. ಜನರಿಗೆ ಸಂಸ್ಕೃತ ಕಲಿಸುತ್ತಿದ್ದರು. ಉಪನಿಷತ್ತು, ಅದ್ವೈತ ವೇದಾಂತ, ಬ್ರಹ್ಮವಿದ್ಯೆ, ಇವುಗಳನ್ನು ನೀಡುತ್ತಿದ್ದರು. ಅವರಣ್ಣ ಬಾಲಕೋವಾ ಭಾವೆ ಚಿತ್ರಕಲೆ ಮತ್ತು ಸಂಗೀತದಲ್ಲಿ ಪ್ರಾವೀಣ್ಯ ಪಡೆದಿದ್ದರು. ಅವರು ಚರಖಾ ತಿರುಗಿಸುತ್ತಿದ್ದರು. ಹೊಲದಲ್ಲಿ ಎಂಟು ಘಂಟೆ ಉಳುತ್ತಿದ್ದರು. ಆಶ್ರಮವಾಸಿಗಳಿಗೆ ಸಿತಾರ್ ಕಲಿಸುತ್ತಿದ್ದರು. ಪಂಡಿತ ಖರೆ ಅವರ ಸಂಗೀತದ ತರಗತಿಗಳು ಒಂದು ಸ್ಕೂಲಿನ ಹಾಗೇ ನಡೆಯುತ್ತಿದ್ದವು. ರಾಜೇಂದ್ರಬಾಬು ಅಜಾತಶತ್ರುಗಳು; ಆ ಸ್ವಭಾವದ ಅವರು ರಾಮಾಯಣ ಓದಿ ತಿಳಿಸುತ್ತಿದ್ದರು. ಆ ಮಾಧ್ಯಮದಿಂದ ಹಿಂದಿ ಕಲಿಸುತ್ತಿದ್ದರು. ಅವರ ತರಗತಿಗಳಲ್ಲಿ ಮಹಿಳಾ ಭಕ್ತರು ಹೆಚ್ಚಾಗಿರುತ್ತಿದ್ದರು. ಕೇದಾರನಾಥಜೀ, ಕಿಶೋರಿಲಾಲಭಾಯಿ ಮಶ್ರೂವಾಲಾ ಭಗವದ್ದರ್ಶನದ ಸಾಧನೆಯಲ್ಲಿ ತೊಡಗಿರುತ್ತಿದ್ದರು. ಅವರಿಬ್ಬರಿಗೂ ಸರ್ಪ ಸಮ್ಮೋಹನದ ಮಂತ್ರ ಸಿದ್ಧಿ ಇತ್ತು. ಎದುರಿಗೆ ಎಗರುವ ಹಾವನ್ನು ಮಂತ್ರದಲ್ಲಿ ಹಿಡಿದಿಡುವ ಕುಶಲತೆ

ನಾಥ್‌ಜೀಗೆ ಮತ್ತು ಕಿಶೋರಿಲಾಲ್‌ಭಾಯಿಗಿತ್ತು. ಈ ಮಂತ್ರಸಿದ್ಧಿಗಾಗಿ ಸಾಕಷ್ಟು ನಿಯಂತ್ರಣದಲ್ಲಿರ ಬೇಕಾಗುತ್ತದೆ. ರಜಸ್ವಲೆಯಾದ ಮಹಿಳೆಯನ್ನು ಮುಟ್ಟುವಂತಿಲ್ಲ. ಹಿಟ್ಟು ಬೀಸುವ, ಧಾನ್ಯ ಕುಟ್ಟುವ ಶಬ್ದ ಇದ್ದಲ್ಲಿ ಊಟ ಮಾಡಬಾರದು. ಎಲ್ಲಕ್ಕಿಂತ ಹೆಚ್ಚಾಗಿ ರಾತ್ರಿ–ಅರ್ಧರಾತ್ರಿ ಮಳೆ–ಬಿರುಗಾಳಿ ಇರುವಾಗ, ಅಂಥ ಯಾವ ಸಂದರ್ಭದಲ್ಲೂ ಯಾರಿಗಾದರೂ ಹಾವು ಚೇಳು ಕಚ್ಚಿದೆ, ಕುಟುಕಿದೆ ಎಂಬ ಸೂಚನೆ ಬಂದರೆ ತಕ್ಷಣ ಅಲ್ಲಿಗೆ ಹೋಗಲೇಬೇಕು ಎಂಬ ನಿಯಮವಿತ್ತು. ಇಂತಹ ಕೆಲವು ಕಟ್ಟುಪಾಡುಗಳನ್ನು ಪಾಲಿಸಿದರೆ ಮಾತ್ರ ಹಾವಿನ ವಿಷವನ್ನು ನಿಮಿಷದಲ್ಲಿ ತೆಗೆದು ಹಾಕಬಹುದಾಗಿತ್ತು. ಮತ್ತು ಜನಗಳ ಪ್ರಾಣವನ್ನುಳಿಸುತ್ತಿದ್ದರು. ಅಂತಹ ಸಿದ್ಧಿಗೆ ನಿರಂತರವಾದ ಸಾಧನೆ ಬೇಕೇಬೇಕು. ನಾಥಜೀ ಮತ್ತು ಕಿಶೋರಿಲಾಲ ಕಾಕಾ ಇಬ್ಬರೂ ಇದನ್ನು ಸಾಧಿಸಿಕೊಂಡಿದ್ದರು. ಮಹಾದೇವ ದೇಸಾಯಿ, ನರಹರಿ ಪಾರೀಖ್ ಮತ್ತು ಸ್ವಾಮಿ ಆನಂದ ಈ ಮೂವರು ಒಂದು ಶುಭ ತ್ರಿಪುಟಿ(ತ್ರಿವಳಿ)ಗಳು. ಅವರ ಸಹವಾಸ ಯಾವಾಗಲೂ ಶುದ್ಧವಾಗಿ ಪವಿತ್ರವಾದ ರಸಿಕತೆಯ ಝರಿಯಾಗಿರುತ್ತಿತ್ತು. ಅವರ ಬಳಿ ನದಿಯಲ್ಲಿ ಬಟ್ಟೆ ಒಗೆಯುವುದು, ಪಾಯಖಾನೆ ಸ್ವಚ್ಛಗೊಳಿಸುವುದು, ಹಸಿ ಸೌದೆಯ ಹೊಗೆಯಿಂದ ತುಂಬಿದ ಒಲೆ ಊದುವುದು, ತಲೆ ಸುಡುವ ಬಿಸಿಲಲ್ಲಿ ನಡೆಯುವಂತಹ ಕ್ಷುದ್ರ ಕಾರ್ಯ ಕೂಡ ರಸಮಯವಾಗಿದ್ದು ಮನರಂಜನೆ ಸಿಗುತ್ತಿತ್ತು. ಸಮಯ ಹೇಗೆ ಕಳೆಯಿತೆಂಬುದೇ ತಿಳಿಯುತ್ತಿರಲಿಲ್ಲ.

ಸ್ವಾಮಿ, ಕಾಕಾ ಅಂತೂ ಬಾಲಬ್ರಹ್ಮಚಾರಿಗಳು, ಆದರೆ ಮಹಾದೇವ ಕಾಕಾ ಅವರ ಪತ್ನಿ ದುರ್ಗಾ ಕಾಕಿ ಮತ್ತು ನರಹರಿ ಕಾಕಾ ಅವರ ತಂಗಿ ಮೋಟಿ, ದಪ್ಪಗಿದ್ದಾಳೆಂದು ದೊಡ್ಡವಳೆಂದೂ ಗುರುತಿಸಲಾಗುತ್ತಿದ್ದ ಮಣಿ ಬಹನ್– ಈ ಇಬ್ಬರು ಮಹಿಳೆಯರೂ ಅವರ ಮಕ್ಕಳೂ ತೇಜಸ್ವಿಗಳು. ಅವರು ಮಧುರವಾದ ಹಾಸ್ಯ–ನಗುವಿನಲ್ಲೂ ನಿಷ್ಣಾತರಾಗಿದ್ದವರು. ಕಾಕಾ ಕಾಲೇಲ್‌ಕರ್ ಅವರಂತೂ ಹುಟ್ಟಾ ಶಿಕ್ಷಕರು, ಅವರಿಗೆ ತಿಳಿಯದ ವಿಷಯ ಒಂದಿರಲಿಲ್ಲ. ಎಲ್ಲರಿಗೂ ಒಂದಿಲ್ಲೊಂದು ವಿಷಯ ಕುರಿತು ಕಲಿಸುತ್ತಿದ್ದರು. ಅಂತರಿಕ್ಷದಲ್ಲಿರುವ, ನಕ್ಷತ್ರಗಳ ಪ್ರಪಂಚ ಅಥವಾ ಪ್ರಪಂಚದ ಭೂಗೋಳ ಇವನ್ನು ಕಲಿಸುವುದೇ ಸ್ವಭಾವವಾಗಿ ಬಿಟ್ಟಿತ್ತು. ರಾತ್ರಿಯ ಕತ್ತಲಿನಲ್ಲಿ ಅವರು ಆಕಾಶದರ್ಶನ ಮಾಡುತ್ತಿದ್ದರು. ಜನರಿಗೆ ಆಕಾಶದ ನಕ್ಷತ್ರಗಳ ಪರಿಚಯ ನೀಡುತ್ತಿದ್ದರು. ಕಾಕಾ ಸಾಹೇಬ್ ಅವರ ಸಾನ್ನಿಧ್ಯದಲ್ಲಿ ಸಾಹಿತ್ಯ ಸಂಸ್ಕೃತ, ವೇದಾಂತ ಕಾವ್ಯ, ಭೂಗೋಳ, ದರ್ಶನ ಮೀಮಾಂಸೆ ಇತ್ಯಾದಿ ಅನೇಕ ವಿಷಯಗಳ ಜ್ಞಾನ ಸಿಗುತ್ತಿತ್ತು. ಅಂತಹ ಧುರಂಧರ ವ್ಯಕ್ತಿ ಅಲ್ಲಿ ಎಲ್ಲರ ಜೊತೆ ಸಹಜೀವನ ನಡೆಸುತ್ತಿದ್ದರು. ಪರಸ್ಪರ ಕ್ಲೇಶ ಮನಸ್ತಾಪ ಆಗುತ್ತಿರಲಿಲ್ಲ. ಇದರ ಶ್ರೇಯಸ್ಸು ಬಾಪೂಜಿಯದು ಬಾಪೂಜಿ ವ್ಯಕ್ತಿತ್ವ ಅಂಥದ್ದು, ಬಾಪೂಜಿ ಇದ್ದಲ್ಲಿ ಪ್ರತಿಯೊಬ್ಬರೂ ತನ್ನ ಅಹಂನಿಂದ ಮೇಲ್ಬಂದು ಸಮರ್ಪಿತರಾಗುತ್ತಿದ್ದರು.

ಹೃದಯ ಕುಂಜದಲ್ಲಿ ಕುಳಿತು ಬಾಪೂಜಿ ಈ ಪ್ರತಿಭಾಪೂರ್ಣ ಸಮಾಜದ ಸಂದೇಹ ಕಷ್ಟಗಳನ್ನು ಪರಿಹರಿಸುತ್ತಿದ್ದರು. ಎಲ್ಲರನ್ನು ಒಟ್ಟಿಗೆ ಇರಿಸುತ್ತಿದ್ದರು. ಈ ಪ್ರಖರ ವಿದ್ವಾಂಸರು ಮತ್ತು ಶ್ರೇಷ್ಠ ತಪಸ್ವಿಗಳಿಗೆ ಬಾಪೂಜಿ ತಂದೆ–ತಾಯಿ–ಗುರು–ಮಿತ್ರ ಎಲ್ಲಾ ಆಗಿದ್ದರು. ಬಾಪೂಜಿ ಬಳಿಗೆ ಬಂದು ಈ ಸಾಧಕರು ತಮ್ಮ ಪೂರ್ವಾಶ್ರಮ ಮತ್ತು ಸಮಾಜದ ಸಂಕುಚಿತ ಸಂಸ್ಕಾರಗಳನ್ನು ಮರೆತು ಒಂದು ಹೊಸ ಜನ್ಮವನ್ನೇ ಪಡೆದಿದ್ದರು. ಗೀತೆಯಲ್ಲಿ ಭಗವಾನ್ ಕೃಷ್ಣ ಅರ್ಜುನನಿಗೆ ಕ್ಷೇತ್ರ ಸನ್ಯಾಸದ ಉಪದೇಶ ನೀಡಿದ್ದ. ಬಾಪೂಜಿ ಅದೇ ಕ್ಷೇತ್ರ ಸನ್ಯಾಸವನ್ನು ಪ್ರಯೋಗ ಮಾಡಿದರು ಮತ್ತು ಒಂದು ಒಂದೂವರೆ ವರ್ಷ ಆಶ್ರಮವಾಸಿಗಳಿಗಾಗಿ ತೀವ್ರ ಸಂತೋಷದ ಶುಭಮಂದಿರದ ದ್ವಾರವನ್ನು ತೆರೆದರು. ಒಂದು ಅಪೂರ್ವ ದಿವ್ಯತೆಯಲ್ಲಿ ವಾತಾವರಣ ಸುಗಂಧಿತವಾಗಿರುತ್ತಿತ್ತು.

ಆ ದಿವಸಗಳಲ್ಲೇ ೨೭ ಫೆಬ್ರವರಿ ೧೯೨೮ರಂದು ನನ್ನ ತಂದೆ ತಾಯಿಯ ವಿವಾಹ ವಸಂತ ಪಂಚಮಿಯ ದಿನ ಬೆಳಿಗ್ಗೆ ಆಶ್ರಮದಲ್ಲೇ ಜರುಗಿತ್ತು. ಅದೊಂದು ಆದರ್ಶ ಲಗ್ನದ ಸಮಾರಂಭ ಆಗಿದ್ದಿರಬಹುದು ಅಂತ ಅನ್ನಿಸುತ್ತದೆ. ಸ್ವರಾಜ್ಯ ಆಶ್ರಮ ಪರಿಸರದಲ್ಲಿ ಬಾಪೂಜಿಯ ಮೂರನೆ ಮಗ ರಾಮದಾಸ್ ಗಾಂಧಿಯ ಲಗ್ನ ಮಂಟಪವನ್ನು ರಚಿಸಲಾಗಿತ್ತು. ಕನ್ಯೆಯ ಮನೆಗೆ ದಿಬ್ಬಣ ಹೊರಡುವ ಬದಲು ಕನ್ಯಾಪಕ್ಷವನ್ನು ಆಗ್ರಹಪೂರ್ವಕ ಕರೆದು ಆಶ್ರಮದ ಆತಿಥ್ಯವನ್ನು ಸ್ವೀಕರಿಸುವಂತೆ ಬೇಡಿಕೊಳ್ಳಲಾಗಿತ್ತು. ಮದುವೆಯಾಗಲಿಚ್ಛಿಸುವ ರಾಮದಾಸ್ ಗಾಂಧೀ ಮತ್ತು ನಿರ್ಮಲಾ ಓರಾ ಇಬ್ಬರೂ ಬೆಳ್ಳಂಬೆಳಿಗ್ಗೆ ಆಶ್ರಮದ ಅಂಗಳವನ್ನು ಗುಡಿಸಿ ಸಾರಿಸಿದರು. ಗೋಶಾಲೆಯನ್ನು ತೊಳೆದರು. ನದೀಸ್ನಾನ ಮಾಡಿ ಕಲಶದಲ್ಲಿ ಹೊಸನೀರು ತಂದು ಗೋಪೂಜೆ ಮಾಡಿದರು. ಆಗ ಕೈಯಿಂದ ನೂಲು ತೆಗೆದು ನೇಯ್ದು ಶುಭ್ರವಾದ ಉಡುಪಿನಿಂದ ಅಲಂಕೃತರಾಗಿ ಇಬ್ಬರೂ ಯಜ್ಞಮಂಟಪದಲ್ಲಿ ಕುಳಿತರು. ನಾಲ್ಕು ಬಾಳೆ ಗಿಡಗಳ ಸುಂದರ ಮಂಟಪ ಕಟ್ಟಿದ್ದರು. ಮಧ್ಯದಲ್ಲಿ ಹಸುವಿನ ಸಗಣಿಯಿಂದ ಸಾರಿಸಿದ್ದ ಹವನ ಕುಂಡ ರಚಿಸಿದ್ದರು. ಅಕ್ಕಿಯನ್ನು ಬೀಸಿ, ಅದರ ಮತ್ತು ಅರಿಶಿಣ ಕುಂಕುಮದ ರಂಗೋಲಿ ಇಟ್ಟಿದ್ದರು. ಕುಂಕುಮ ಅಕ್ಷತೆ ಮತ್ತು ಹೂವು ಮನೆಯಲ್ಲೇ ಇತ್ತು. ನೂಲಿನ ಒಂದು ಲಡಿಯನ್ನು ಕುಂಕುಮದ ಬಣ್ಣದಲ್ಲಿ ಅದ್ದಿ ಪವಿತ್ರ ದಾರ (ಅದನ್ನ ಮೌಲಿ ಕಂಕಣ) ಅಂತ ಹೇಳುತ್ತಾರೆ ಸಿದ್ಧಪಡಿಸಿದ್ದರು. ಪೇಟೆಯಿಂದ ನಾಲ್ಕಾಣೆಗೆ ನಾಲ್ಕು ತೆಂಗಿನ ಕಾಯಿಗಳು ಬಂದಿದ್ದವು. ಸ್ವಲ್ಪ ಸಮಿತ್ತು ಮತ್ತು ಕರ್ಪೂರ ತರಿಸಿದ್ದರು. ಕಾಕಾ ಸಾಹೇಬ್ ಅಂತಹ ಸಾರಸ್ವತ ಬ್ರಾಹ್ಮಣರು ಶ್ರೇಷ್ಠ ಪುರೋಹಿತರಾಗಿದ್ದರು. ಅವರು ಮಧುರ ಸ್ವರದಲ್ಲಿ ಶುದ್ಧ ಸಂಸ್ಕೃತ ಉಚ್ಚಾರಣೆಯೊಂದಿಗೆ ವಿವಾಹದ ಶ್ಲೋಕಗಳನ್ನು ಉಚ್ಚರಿಸಿದರು. ನವ ದಂಪತಿಗಳಿಗೆ ವಿವಾಹದ, ಗೃಹಸ್ಥ ಜೀವನದ ಮಹತ್ವವನ್ನು ತಿಳಿಸಿದರು. ನಂತರ

ಅಗ್ನಿ ಸಪ್ತಪದಿಯೊಂದಿಗೆ ವಿವಾಹ ಪ್ರತಿಜ್ಞೆಯ ಕೊಳುಕೊಡೆ ನಡೆದು ವಿವಾಹ ಕಾರ್ಯ ನಿರ್ವಿಘ್ನವಾಗಿ ನೆರವೇರಿತು.

ತೆಂಗಿನಕಾಯಿ ಕಲ್ಲುಸಕ್ಕರೆ ಹಾಕಿ ಮಾಡಿದ ಮೃಷ್ಟಾನ್ನವನ್ನು ಅತಿಥಿಗಳಿಗೆ ನೀಡಿದರು. ಸಾಧು ತಂದೆ ಮೋಹನದಾಸ್ ಗಾಂಧೀ ತನ್ನ ವಿವಾಹಿತ ಪುತ್ರನಿಗೆ ಮತ್ತು ಸೊಸೆಗೆ ಆಶ್ರಮ ಭಜನಾವಳಿಯ ಒಂದೊಂದು ಪ್ರತಿ ನೀಡಿ ನೂಲು ತೆಗೆಯುವ ತಕಲಿಯನ್ನು ಉಪಹಾರವಾಗಿ ನೀಡಿದರು. ಸಂತುಷ್ಟಳಾದ ಅತ್ತೆ ತನ್ನ ಗಂಡನೊಂದಿಗೆ ನೆಯ್ದ ಒಂದು ಕೆಂಪಂಚಿನ ಸೀರೆ ಮತ್ತು ಕೆಂಪು ಗಾಜಿನ ಬಳೆ, ಕೆಂಪುಬಣ್ಣದ ಮರದ ಡಬ್ಬಿಯಲ್ಲಿ ಸೊಸೆಗೆ ಸಿಂಧೂರವನ್ನಿತ್ತಳು. ಆ ಸೀರೆ ದುಪ್ಪಟಿಯ ಹಾಗೆ ದಪ್ಪಗಿದ್ದಿರಬಹುದಾದರೂ ಆ ಕಡೆ ಯಾರೂ ಗಮನ ಹರಿಸಲಿಲ್ಲ. 'ಅಖಂಡ ಸೌಭಾಗ್ಯವತೀ ಭವ' ಎಂಬ ಆಶೀರ್ವಾದದೊಂದಿಗೆ ಆಶ್ರಮವಾಸಿ ಮಹಿಳೆಯರು ಸೊಸೆಯನ್ನು ಸ್ವಾಗತಿಸಿದರು. ಉತ್ಸಾಹಿತನಾದ ಮೈದ ದೇವದಾಸನು ಈ ಎಲ್ಲ ಸಮಾರಂಭದ ಏರ್ಪಾಡು ಚೆನ್ನಾಗಿ ಮಾಡಿದ್ದ ಮತ್ತು ಯಾವುದೋ ಗಮನದಲ್ಲಿದ್ದು ಸ್ವಲ್ಪ ಚಿಂತಿತರಾಗಿದ್ದ ಹಳೆ ಪರಂಪರೆಯ ಬೀಗರೂ ಈ ತೀರ ಬೇರೆ ತರಹೆಯ ಸಂಸ್ಕಾರವಿಧಿ ಮತ್ತು ವ್ಯವಸ್ಥೆಗೆ ಪೂರ್ತಿ ಸಹಕಾರ ನೀಡಿದರು. ದೇವದಾಸ ತನ್ನ ಪ್ರೀತಿಯ ಅಣ್ಣ ಮತ್ತು ಪ್ರೀತಿಯ ಹೊಸ ಅತ್ತಿಗೆಗೆ ತಾನೇ ನೂಲಿ ನೇಯ್ದ ದುಪ್ಪಟ ನೀಡಿದ. ತಂದೆಯಿಲ್ಲದ ಆ ಸೊಸೆ ತನ್ನ ತೌರು ಮನೆಯಿಂದ ನಾಲ್ಕು ಚಿನ್ನದ ಬಳೆಗಳನ್ನು ತೊಟ್ಟು ಬಂದಿದ್ದಳು. ಸಿದ್ಧಾಂತವಾದಿಗಳಾದ ಮಿಕ್ಕ ಆಶ್ರಮವಾಸಿಗಳು ತಡೆಯುವುದಕ್ಕೂ ಮುಂಚೆ ವಿಚಾರವಂತಳಾದ ಅತ್ತೆ ಸೊಸೆಗೆ ಇದು ಬಡವರ ಮನೆಯೆಂದು ಇಲ್ಲಿ ಚಿನ್ನ ಶೋಭಿಸುವುದಿಲ್ಲವೆಂದೂ ತಿಳಿಯಹೇಳಿದಳು. ಈ ಮನೆಯಲ್ಲಿ ಗಾಜಿನ ಬಳೆಗಳೇ ಶೋಭಿಸುತ್ತವೆ, ಮನುಷ್ಯನ ಜೀವನದಲ್ಲಿರುವ ಸುಖ ಗಾಜಿನ ಬಳೆಯ ಹಾಗೆಯೇ ಆಕರ್ಷಕವಾಗಿದ್ದು ನಾಜೂಕಾಗಿರುತ್ತದೆ. ಈ ಸೌಭಾಗ್ಯವನ್ನು ಗಾಜಿನ ಈ ನಾಜೂಕಾದ ಬಳೆಗಳ ಹಾಗೆಯೇ ಬಹಳ ಎಚ್ಚರದಿಂದ ಕಾಪಾಡಬೇಕಾಗುತ್ತದೆ. ಅದರಿಂದ ಗಾಜಿನ ಒಡೆದು ಹೋಗುವ ಬಳೆಗಳೇ ಸೌಭಾಗ್ಯದ ಉತ್ತಮ ಪ್ರತಿಮೆಗಳು ಎಂದರು. ವಿವೇಕಿಯಾದ ಸರಳ ಮನಸ್ಸಿನ ಸೊಸೆಯೂ ಸಿದ್ಧಾಂತವಾದಿಯಾಗಿದ್ದ ೨೦ ವರ್ಷಗಳ ಯುವತಿಯಾಗಿದ್ದಳು. ಅವಳು ತಕ್ಷಣ ನಾಲ್ಕೂ ಚಿನ್ನದ ಬಳೆಗಳನ್ನು ತನ್ನ ಕೋಮಲ ಕರಗಳಿಂದ ಕಳಚಿ ಅತ್ತೆಯ ಕೈಲಿಟ್ಟಳು. ಆಶ್ರಮದಲ್ಲಿ ವೈಯಕ್ತಿಕ ಆಸ್ತಿ ಎಂಬುದಿರಲಿಲ್ಲ. ಆದುದರಿಂದ ಈ ನಾಲ್ಕು ಚಿನ್ನದ ಬಳೆಗಳನ್ನು ಆಶ್ರಮ ಕೋಶದಲ್ಲಿಟ್ಟರು. ಉತ್ತಮ ಗೃಹಸ್ಥಾಶ್ರಮದ ಆರಂಭ ಈ ರೀತಿ ದಾನದಿಂದಾಯಿತು. ಅತ್ತೆ ಮನೆಯ ಆ ಮೊದಲ ದಿನದಿಂದ ನನ್ನಮ್ಮ ಚಿನ್ನದಿಂದ ಸುಲಭವಾಗಿ ಮುಕ್ತಿ ಪಡೆದಳು. ಇವತ್ತಿನವರೆವಿಗೂ ಅದೇ ರೀತಿ ಸರಳವಾಗಿ ಬದುಕಿದ್ದಾಳೆ. ನನ್ನಮ್ಮ ಚಿನ್ನವಾಗಲಿ,

ಜರಿ ಸೀರೆಯಾಗಲಿ ಉಟ್ಟು–ತೊಟ್ಟಿದ್ದನ್ನು ಇವತ್ತಿನವರೆಗೆ ಯಾರೂ ನೋಡಿಲ್ಲ. ನವ ವಧು–ವರರು ಆಶ್ರಮವಾಸಿಗಳೆಲ್ಲರಿಗೂ ನಮಸ್ಕಾರ ಮಾಡಿದರು. ಜನರು ಸ್ವಸ್ತಿ ವಾಚನ ಮಾಡಿದರು. ತಂದೆಯ ಮನೆಯ ಚಿಕ್ಕ ಪರಿವಾರದಿಂದ ಹೊರಟು ಒಂದೇ ಬಾರಿಗೆ ಸೊಸೆ ೧೫೦ ಮಂದಿಯ ಅವಿಭಕ್ತ ಕುಟುಂಬಕ್ಕೆ ಬಂದು ಸೇರಿದ್ದಳು. ತನ್ನ ಅತ್ತೆಯಲ್ಲದೆ ಅಲ್ಲಿ ಬಾಪೂಜಿಯೊಂದಿಗಿದ್ದ ಮಿತ್ರರು, ಅನುಯಾಯಿಗಳು, ಅವರ ಪತ್ನಿಯರು ಈ ಹೊಸ ಸೊಸೆಗೆ ಅತ್ತೆ, ಅತ್ತಿಗೆಯರಂತಿದ್ದರು. ಈ ಮಹಿಳೆಯರೂ ಈ ಹೊಸ ಸೊಸೆಗೆ ಅತ್ತಿಗೆ– ನಾದಿನಿಯರ ಅಧಿಕಾರವನ್ನು ಯಾವಾಗಲೂ ತೋರಿದ್ದರು. ಬಾಪೂಜಿ ಆಧುನಿಕ ವಿಚಾರಗಳ ಸಮಾಜ ಸುಧಾಕರಾಗಿದ್ದರು. ಅವರು ಮಹಿಳೆಯರನ್ನು ಮತ್ತೆ ಪುರುಷರನ್ನು ಸಮಾನರೆಂದು ಪರಿಗಣಿಸುತ್ತಿದ್ದರು. ಆದರೆ ಆಶ್ರಮದ ಮಹಿಳೆಯರು ಸಮಾಜ ಸುಧಾರಣೆಯನ್ನು ಇನ್ನೂ ಅರ್ಥಮಾಡಿಕೊಂಡಿರಲಿಲ್ಲ. ಆದುದರಿಂದ ಅತ್ತೆ–ನಾದಿನಿಯರ ಕಟು ಭಾಷೆ ಮತ್ತು ಟೀಕೆಗಳ ಅನುಭವವಾಯಿತು. ಸೊಸೆ ನೀಮೂ ಇದನ್ನೆಲ್ಲಾ ಶಾಂತಿಯಿಂದ ಸಾವರಿಸಿಕೊಂಡಳು ಮತ್ತು ೨೦–೨೫ ಜನ ಸೊಸೆಯರನ್ನು ಜೀವನವಿಡೀ ಆದರಿಸಿ ಸೇವೆ ಮಾಡಿದಳು ಮತ್ತು ಅನೇಕ ಭಾವಂದಿರು, ಅತ್ತಿಗೆಯರು, ನಾದಿನಿಯರ ಜೋರು ಜಬರ್ದಸ್ತನ್ನು ಸಾವರಿಸಿದಳು. ಇವೆಲ್ಲಕ್ಕೂ ಪ್ರೀತಿಯ ಮೈದ ದೇವದಾಸ ದೊಡ್ಡ ಆಧಾರವಾಗಿದ್ದ. ಆತ ತನ್ನ ಹೊಸದಾಗಿ ಬಂದ ಅತ್ತಿಗೆಯನ್ನು ತನ್ನ ತಾಯಿ ಮತ್ತು ಆಶ್ರಮದ ಪ್ರಖರ ಅಗ್ನಿಪರೀಕ್ಷೆ ಇವುಗಳಿಂದಾಗಿ ನಿರಂತರ ಉಳಿಸುತ್ತಿದ್ದರು.

ಈ ಸಮಾರಂಭಕ್ಕಾಗಿ ಪೂರ್ತಿಖರ್ಚು ರೂ. ೧–೨೫ ಪೈಸೆ. ಜೀವನದ ಬೇರೆ ಬೇರೆ ಸಂಸ್ಕಾರಗಳ ಶುಭದ ಮಂಗಳದ ನಿರ್ವಾಹ ಕಡಿಮೆ ಖರ್ಚಿನಲ್ಲೂ ಆಗುತ್ತದೆಂಬ ದೃಢ ನಂಬಿಕೆ ನನಗಿದೆ. ನಮ್ಮಲ್ಲಿ ಗಾಜಿನ ಕರಿಮಣಿ ಸರದಲ್ಲಿ ಮಂಗಳ ಸೂತ್ರ ಆಗುತ್ತದೆ. ಈ ಕರಿಮಣಿ ಇಲ್ಲದೆ ಬರಿಯ ಚಿನ್ನದಿಂದ ಸೌಭಾಗ್ಯದ ರಕ್ಷಣೆ ಆಗುವುದಿಲ್ಲ. ಮುಂಗೈಗೆ ಗಾಜಿನ ಬಳೆ ಮದುವೆಯಲ್ಲಿ ಬೇಕೇ ಬೇಕು, ಹಣೆಯ ಸಿಂದೂರ ಬಹಳ ಅಗ್ಗ, ಒಂದೂ ಕಾಲು ರೂಪಾಯಿಯಲ್ಲಿ ಜೀವನವಿಡೀ ಮುಂದಲೆಯನ್ನು ತುಂಬಿಡಬಹುದು. ಸೌಭಾಗ್ಯದ ಪ್ರತಿಯೊಂದು ಪದಾರ್ಥವೂ ಅತಿ ಅಗ್ಗ, ಕಡುಬಡವ ಕೂಡ ಅದನ್ನು ನಿರ್ವಹಿಸಬಹುದು. ಅಂತಹ ವ್ಯವಸ್ಥೆ ಇರದೆ ಇದ್ದಿದ್ದರೆ ಬಡವ ಎಂದೂ ಮದುವೆಯಾಗಲಾಗುತ್ತಿರಲಿಲ್ಲ. ಇಂದಿನ ಮದುವೆಗಳಲ್ಲಿ ಬೇಕಾಬಿಟ್ಟಿ ಖರ್ಚು ಮಾಡುವುದನ್ನು ನೋಡಿ ಆಶ್ಚರ್ಯವಾಗುತ್ತದೆ. ಸ್ವಲ್ಪ ಅಸಹ್ಯವೆನಿಸುತ್ತದೆ. ಇದೆಂಥ ಡಂಭ ಆಡಂಬರ! ಇಂಥ ಪ್ರದರ್ಶನದಲ್ಲಿ ಸಾತ್ವಿಕ ಸಮರ್ಪಣೆ ಸಾಧ್ಯವೇ ಇಲ್ಲ. ಇವತ್ತಿನ ಶ್ರೀಮಂತರು ಹೆಚ್ಚು ಖರ್ಚು ಮಾಡಬಲ್ಲ ಅನಾಗರಿಕ ಸ್ಪರ್ಧೆಯಲ್ಲಿ ಮುಂದಾಗಿದ್ದಾರೆ. ದಿಬ್ಬಣದವರಿಗೂ

ನಾಚಿಕೆಯಾಗುವುದಿಲ್ಲ. ಮನೆ ಬಳಕೆಯ ವಸ್ತುಗಳ ಜೊತೆಗೆ ಮೋಟರ್ ಕಾರು, ಟಿ.ವಿ. ಮುಂತಾದ ಅತಿ ದುಬಾರಿಯ ಪದಾರ್ಥಗಳನ್ನು ಕೇಳುತ್ತಾರೆ. ಬರಲಿರುವ ತಮ್ಮ ಅಳಿಯನಿಗೆ ತನ್ನ ಹೆಂಡತಿಗಾಗಿ ಬಟ್ಟೆ ಒಡವೆ ಕೊಡಿಸುವ ಶಕ್ತಿಯೂ ಇರುವುದಿಲ್ಲವೆನೋ ಅನ್ನುವ ಹಾಗೆ ಹೆಣ್ಣಿನ ಕಡೆಯಿಂದ ಮದುವೆಯಲ್ಲಿ ಪದಾರ್ಥಗಳನ್ನು ಸಂಗ್ರಹಿಸುತ್ತಾರೆ. ಈ ಪದಾರ್ಥಗಳು ಬರುತ್ತವೆಂಬ ಆಸೆಯಲ್ಲಿ ಪ್ರೀತಿ, ಪ್ರಾಮಾಣಿಕತೆಯ ಭಾವನೆ ಉಳಿಯುವುದೇ ಇಲ್ಲ. ಅದರಿಂದ ಮುಂದೆ ಜೀವನದಲ್ಲಿ ಪ್ರೀತಿ ಅನ್ನುವುದು ಇಲ್ಲದೆ ಬರಿ ವ್ಯಾಪಾರ–ವ್ಯವಹಾರ ಉಳಿದುಕೊಳ್ಳುತ್ತದೆ, ಆಗ ದುಃಖ–ನಿರಾಶೆಯೇನಾದರೂ ಆವರಿಸಿತು ಅಂದರೆ, ಆತಂಕ, ಜಗಳ, ಅಸುರಕ್ಷೆ ಇವುಗಳು ಆಕ್ರಮಿಸುತ್ತವೆ. ಸಭ್ಯತೆಯನ್ನು ಮರೆತುಬಿಡುತ್ತಾರೆ.

ನಾವೆಲ್ಲರೂ ಭಾರತೀಯರು, ನಮ್ಮ ಅಧ್ಯಾತ್ಮ ತೀವ್ರವಾಗಿ ಜಾಗೃತವಾಗಿದೆ. ನಾವು ಸಾಯುವಾಗ ಒಂದು ಹುಲ್ಲುಕಡ್ಡಿಯನ್ನೂ ಒಯ್ಯುವುದಿಲ್ಲ ಅಂತ ನಮಗೆ ಗೊತ್ತಿದೆ. ಹಾಗಾದ ಮೇಲೆ ಇದೆಂಥ ನೂಕು ನುಗ್ಗಲು, ಮಾಯೆಯ ದುರಾಸೆ, ಅದರಲ್ಲಿ ಹೊಟ್ಟೆಕಿಚ್ಚು ದ್ವೇಷವಲ್ಲದೆ ಯಾವ ಕೋಮಲ ಭಾವನೆಗೂ ಅವಕಾಶವೇ ಇರುವುದಿಲ್ಲ.

* * * *

# ೧೪. ೧೯೨೮ರ ಸೈಮನ್ ಕಮೀಷನ್

ಚಂಪಾರಣ್ಯದಿಂದ ಆರಂಭಗೊಂಡು ಈ ಹತ್ತು ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಸಾಕಷ್ಟು ಕೋಲಾಹಲ ಉಂಟಾಗಿತ್ತು. ಅದರಿಂದ ಬ್ರಿಟಿಷ್ ಸರಕಾರ ಒಳಗಿಂದೊಳಗೇ ೧೮೫೭ರ ದಂಗೆಯು ಮರುಕಳಿಸಿದರೇನು ಮಾಡುವುದೆಂದು ಹೆದರುತ್ತಿತ್ತು. ಇಂಗ್ಲಿಷ್ ಅಧಿಕಾರಿಗಳು ಕೂಡ ತಮ್ಮ ಬಂಗಲೆಗಳಲ್ಲಿದ್ದುಕೊಂಡೆ ಹೆದರಿಕೊಂಡೇ ಇರುತ್ತಿದ್ದರು. ಕೆಲವರಂತೂ ಜೇಬಿನಲ್ಲಿ ಪಿಸ್ತೂಲ್ ಇಟ್ಟುಕೊಳ್ಳತೊಡಗಿದರು. ಗಾಂಧೀಜಿ ಅವರ ಲೇಖನ, ಪ್ರವಚನ ಮತ್ತು ಮಾಡುತ್ತಿದ್ದ ಪ್ರವಾಸಗಳಿಂದ ಜನರಲ್ಲಿ ಜಾಗೃತಿ ಮೂಡಿತ್ತು. ಖಾದಿ ಪ್ರಚಾರದಿಂದ ಸರಕಾರದ ಸಂಪಾದನೆ ಕಡಿಮೆಯಾಗುತ್ತಿತ್ತು. ಅಹಿಂಸಾತ್ಮಕ ಅಸಹಕಾರದಿಂದ ಎಲ್ಲಾ ಕೆಲಸಗಳು ನಿಂತುಹೋದ ಹಾಗಾಗಿತ್ತು. ಜನರ ಮನದಿಂದ ಸರಕಾರದ ಭಯ ದೂರವಾಗಿತ್ತು. ಮತ್ತು ಸರಕಾರದ ಅಪಹಾಸ್ಯ ಆರಂಭವಾಗಿತ್ತು. ವಿದೇಶಗಳಲ್ಲಿ ಸರಕಾರದ ಪರಿಸ್ಥಿತಿ ಬಟ್ಟಬಯಲಾಗಿತ್ತು. ಬಿಳಿಯರು ಈಗ ಅಹಂಕಾರದಿಂದ ತಲೆ ಎತ್ತಿ ತಿರುಗುವುದು ಕಷ್ಟವಾಗತೊಡಗಿತ್ತು. ಪ್ರಪಂಚದಲ್ಲಿ ಇಂಗ್ಲಿಷರ ಗೌರವ ಕಡಿಮೆಯಾಗತೊಡಗಿತ್ತು. ಈ ಎಲ್ಲ ಪರಿಸ್ಥಿತಿಗಳಿಂದ ಚಿಂತೆಗೊಂಡು ವಿದೇಶಿ ಸರಕಾರ ಒಂದು ಪಾರ್ಲಿಮೆಂಟರಿ ಸಮಿತಿಯನ್ನು ರಚಿಸಿತು. ಅದರ ಅಧ್ಯಕ್ಷರು ಸರ್ ಜಾನ್ ಸೈಮನ್‌ರಾಗಿದ್ದರು. ಅವರೊಬ್ಬ ಪ್ರಸಿದ್ಧ ಬ್ಯಾರಿಸ್ಟರು, ಲಂಡನ್‌ನ ಪ್ರೀವಿ ಕೌನ್ಸಿಲ್‌ನ ಒಂದು ಕೇಸಿನಲ್ಲಿ ಮೋತಿಲಾಲ್ ನೆಹರೂ ಅವರೊಂದಿಗೆ ಆತ ಕೆಲಸ ಮಾಡಿದ್ದರು. ಆದ್ದರಿಂದ ಸ್ವಲ್ಪ ಪರಿಚಯವಿತ್ತು. ಹಿಂದೂಸ್ತಾನದಲ್ಲಿ ತಿರುಗಿ ಪರಿಸ್ಥಿತಿಯನ್ನು ತಿಳಿದು, ತಂತ್ರದಲ್ಲಿ ಸ್ವಲ್ಪ ಸುಧಾರಣೆ ಸೂಚಿಸಿದಲ್ಲಿ ಸರಕಾರ ಹಿಂದೂಸ್ತಾನಿಗಳಿಗೆ ಸ್ವಲ್ಪ ಪರಿಹಾರ ನೀಡುವಂತಾಗಲಿ ಎಂಬುದು ಉದ್ದೇಶವಾಗಿತ್ತು. ಆದರೆ ಈ ಸುಧಾರಣೆ ಬರಿ ಕಣ್ಣೊರೆಸುವ ತಂತ್ರವಾಗಿತ್ತು. ಈ ಚಿನ್ನದ ಪಕ್ಷಿಯಂತಹ ಭಾರತ ತಮ್ಮ ಕೈಹಿಡಿತದಿಂದ ಬಿಡಿಸಿಕೊಂಡು ಹೋಗುವ ಉದ್ದೇಶವೇನೂ ಸರಕಾರಕ್ಕಿರಲಿಲ್ಲ. ಈ ದೇಶದವರು ಸ್ವತಃ ರಾಜ್ಯ ನಡೆಸಿಕೊಂಡು ಹೋಗಲಿ ಅಂತ ಸರಕಾರವೇನೂ ಇಷ್ಟಪಡುತ್ತಿರಲಿಲ್ಲ. ಇಂಗ್ಲಿಷರ ಆಡಳಿತ ಸ್ವಲ್ಪ ಸಡಿಲವಾದರೂ ಇಂಗ್ಲೆಂಡಿನ ಶಕ್ತಿಸಂಪನ್ನತೆಯ ಮಾರ್ಗವೇ ಮುಚ್ಚಿ ಹೋಗುತ್ತಿತ್ತು. ಇಂಗ್ಲಿಷ್ ಸರಕಾರ ಭಿಕ್ಷುಕತನವನ್ನು ಕೊಂಡುಕೊಳ್ಳಲು ಸಿದ್ಧವಾಗಿರಲಿಲ್ಲ.

೧೯೧೯ ರಲ್ಲಿ ಮಾಂಟೆಗ್ಯೂ ಚೆಮ್ಸ್‌ಫೋರ್ಡ್‌ನ ಸುಧಾರಣೆಯಿಂದಲೂ

ಏನೂ ಪ್ರಯೋಜನವಿರಲಿಲ್ಲ. ಮೋತಿಲಾಲ ನೆಹರೂ ಮತ್ತು ಚಿತ್ತರಂಜನ್ ದಾಸ ಇಬ್ಬರೂ ಕೌನ್ಸಿಲ್ ಸದಸ್ಯರಾಗಿದ್ದರು. ಇಬ್ಬರಿಗೂ ಅಕರ್ಮಣ್ಯತೆಯಿಂದ ಬೇಸರವಾಗಿತ್ತು. ಸ್ವರಾಜ್ಯ ಪಾರ್ಟಿಯ ಒಬ್ಬಿಬ್ಬರು ಸದಸ್ಯರನ್ನು ಸರಕಾರ ಮಂತ್ರಿಗಳನ್ನಾಗಿ ಮಾಡಿತ್ತು. ಅವರುಗಳು ಸಂತೋಷಪಟ್ಟುಕೊಂಡು ಸರಕಾರದ ಪ್ರಶಂಸೆ ಮಾಡುತ್ತಿರುತ್ತಿದ್ದರು. ಶ್ರೀನಿವಾಸ ಶಾಸ್ತ್ರಿಗಳನ್ನಂತೂ ಸರಕಾರ ತನ್ನ ಪ್ರತಿನಿಧಿಯ ಹಾಗೆ ವಿದೇಶ ಯಾತ್ರೆಗೂ ಕಳುಹಿಸಿತ್ತು. ಅಲ್ಲಿ ಅವರು ಕಾಂಗ್ರೆಸ್ ಪಾರ್ಟಿಯನ್ನು ಚಳವಳಿಯನ್ನು ಟೀಕಿಸುತ್ತಿದ್ದರು ಮತ್ತು ಸರಕಾರದ ಪ್ರಶಂಸೆ ಮಾಡುತ್ತಿದ್ದರು. ಇಂಪೀರಿಯಲ್ ಕಾಂಗ್ರೆಸ್‌ನ ತೇಜ ಬಹಾದುರ್ ಸಪ್ರೂ ಬಹಳ ಗೌರವದಿಂದ ಇಂಗ್ಲಿಷ್ ಸರಕಾರದ ಚಕ್ರವರ್ತಿತ್ವದ ಶ್ರೇಷ್ಠ ನಮೂನೆಯೆಂದರೆ ಭಾರತ ಅಂತ ಘೋಷಣೆ ಮಾಡಿದ್ದರು. ಅವರು ಇಂಗ್ಲಿಷರ ನಕಲು ಮಾಡುತ್ತ ದೇಶದ ಜನರ ಮೇಲೆ ತಮ್ಮ ನವಾಬಗಿರಿ ತೋರಿಸಿ, ಊಟ–ಉತ್ಸವಗಳಿಗೆ ಬಡದೇಶದ ಲಕ್ಷಾಂತರ ರೂ. ಗಳನ್ನು ಖರ್ಚು ಮಾಡುತ್ತಿದ್ದರು. ಆ ಭಾರತೀಯ ಸಹಾಯಕರು ತಮ್ಮ ಮಾಲೀಕರಿಗಿಂತಲೂ ಹೆಚ್ಚು ಕೆಳಮಟ್ಟಕ್ಕಿಳಿದಿದ್ದರು. ಅವರಲ್ಲಿ ಸ್ವಾಭಿಮಾನವಾಗಲಿ, ನ್ಯಾಯಪರತೆ, ದೇಶಪ್ರೇಮ ಏನೊಂದೂ ಇರಲಿಲ್ಲ. ಅವರು ವಿಲಾಯಿತಿಗಳ ನಕಲು ಮಾಡುವ ನಕಲಿ ಸಾಹೇಬರುಗಳಾಗಿದ್ದರು. ಇಂಗ್ಲಿಷ್ ಸರಕಾರ ಈ ಸ್ವಾರ್ಥಿಗಳೂ, ಚರಿತ್ರಹೀನರೂ ಆಗಿದ್ದ ಜನರಿಗೆ 'ಸರ್,' 'ನೈಟ್', 'ಲಾರ್ಡ್,' 'ರಾಯ್‌ಬಹಾದುರ್', 'ಖಾನ್ ಬಹಾದುರ್' ಎಂದು ಮುಂತಾಗಿ ಬಿರುದುಗಳನ್ನು ನೀಡಿ ತಾನು ಕೊಂಡುಕೊಂಡಿರುತ್ತಿತ್ತು. ಇಂತಹ ಜನ ದೇಶವನ್ನು ಮಾರಿ ತಮ್ಮ ಸುಖ–ಸಂಪತ್ತನ್ನು ಭೋಗಿಸುತ್ತಾ ಪ್ರಪಂಚವನ್ನೇ ಮರೆತಿದ್ದರು.

ಸೈಮನ್ ಕಮೀಷನ್‌ನಿಂದ ಏನಾದರೂ ಉಪಯೋಗವಾಗಬಹುದೆಂಬ ನಂಬಿಕೆ ಗಾಂಧೀಜಿಗೆ ಎಳ್ಳಷ್ಟೂ ಇದ್ದಿರಲಿಲ್ಲ. ಏಳು ಜನ ಸದಸ್ಯರಿದ್ದ ಆ ಕಮೀಷನ್‌ನಲ್ಲಿ ಒಬ್ಬ ಭಾರತೀಯನೂ ಇಲ್ಲದಿದ್ದ ಮೇಲೆ ಅದೆಂಥ ಕಮೀಷನ್ ಅನ್ನಿಸಿಕೊಂಡೀತು! ಮಾಂಟೆಗ್ಯೂ ಚೆಮ್ಸ್‌ಫೋರ್ಡ್ ರಿಫಾರಂನಲ್ಲಿ ಕೊನೆಯ ಪಕ್ಷ ಲಾರ್ಡ್ ಸಿಹ್ನಾನನ್ನು ಸೇರಿಸಿಕೊಂಡಿದ್ದರು. ಈಗ ಆ ತೆರನಾದ ಪ್ರದರ್ಶನದ ಆವಶ್ಯಕತೆ ಕೂಡ ಅವರಿಗೆ ಕಂಡುಬಂದಿರಲಿಲ್ಲ. ಈ ಎಲ್ಲ ಕಾರಣಗಳಿಂದ ಸೈಮನ್ ಕಮೀಷನ್ನನ್ನು ಬಹಿಷ್ಕರಿಸಬೇಕೆಂದು ಕಾಂಗ್ರೆಸ್ ನಿರ್ಣಯಿಸಿತು. ಕಾಂಗ್ರೆಸ್‌ನ ಮುಖಂಡರು, ಅಥವಾ ನಿಯೋಗದ ಯಾರೂ ಅ ಕಮೀಷನ್‌ನ್ನು ಭೇಟಿಯಾಗಲಿಲ್ಲ. ಸಾಕ್ಷಿಯನ್ನಾಗಲೀ ಮನವಿಯನ್ನಾಗಲೀ ಕಮೀಷನ್‌ಗೆ ಕೊಡಲಿಲ್ಲ. ಕಮೀಷನ್ ಹೋದಲ್ಲೆಲ್ಲ ಜನ ಅವರಿಗೆ ಕರಿಬಾವುಟ ತೋರಿ 'ಗೋ ಬ್ಯಾಕ್ ಸೈಮನ್' ಅಂತ ಘೋಷಣೆಗಳನ್ನು ಕೂಗಿದರು. ಚಿಕ್ಕ ಪುಟ್ಟ ಮಕ್ಕಳಿಗಂತೂ ಏನೂ ಅರ್ಥವಾಗುತ್ತಿರಲಿಲ್ಲವಲ್ಲ, ಅವರಿಗೆ ಇಂಗ್ಲಿಷ್ ಭಾಷೆಯ ಒಂದು ಶಬ್ದ ಕೂಡ ಬರುತ್ತಿರಲಿಲ್ಲವಾದರೂ 'ಗೋ ಬ್ಯಾಕ್ ಸೈಮನ್' ಅಂತ ಹಾಡಿ ಹಾಡಿ ಇಂಗ್ಲಿಷರನ್ನು ಅವಮಾನಪಡಿಸುತ್ತಿದ್ದರು. ತೀರ

ಹಿಂದುಳಿದ ಹಳ್ಳಿಗಳಲ್ಲಿ ಕೂಡ ಕಮೀಷನ್‌ನನ್ನು ವಿರೋಧಿಸಿ ಮೆರವಣಿಗೆ ಹೊರಟಿತು. ಕಮೀಷನ್‌ನ ಸಂಸತ್ ಸದಸ್ಯರು ಹೆದರಿ ಹಿಂದಿನ ರಸ್ತೆಯಿಂದ ಮರೆಸಿಕೊಂಡು ದೇಶದ ಯಾತ್ರೆ ಮಾಡಿದರು. ಈ ಕಮೀಷನ್‌ನ ಶ್ರೇಷ್ಠತೆ ಮತ್ತು ಮಹತ್ವವನ್ನು ಉಳಿಸುವುದಕ್ಕೋಸ್ಕರ ಸರಕಾರ ಅಲ್ಲಲ್ಲಿ ಶಾಂತವಾಗಿ ಹೊರಟಿದ್ದ ಮೆರವಣಿಗೆಗಳ ಮೇಲೂ ನಿರ್ದಯವಾಗಿ ಆಕ್ರಮಣ ಮಾಡಿಸಿತು. ಲಾಲ ಲಜಪತರಾಯ್ ಇಂಥದ್ದೇ ಒಂದು ಮೆರವಣಿಗೆಯನ್ನು ಲಾಹೌರ್‌ನಲ್ಲಿ ತಾನು ಮುಂದಾಗಿ ನಡೆಸುತ್ತಾ ಸಚಿವಾಲಯದ ಎದುರಿಗೆ ರಸ್ತೆ ಬದಿಯಲ್ಲಿ ನಿಂತಿದ್ದರು. ಒಬ್ಬ ಬಿಳಿಯ ಸಾರ್ಜೆಂಟ್ ಅವರನ್ನು ಚೆನ್ನಾಗಿ ಲಾಠಿಯಿಂದ ಥಳಿಸಿದ. ಲಾಲಾಜಿ ಮುದುಕರಾಗಿದ್ದರು. ಅಶಕ್ತರಾಗಿದ್ದರು. ಇಂತಹ ಮೆರವಣಿಗೆಗಳಲ್ಲಿ ಹೊಡೆದಾಟ ಕಲ್ಪನೆ ಕೂಡ ಅವರಿಗಿತ್ತು. ಆದರೆ ತನ್ನ ಸ್ನೇಹಿತರನ್ನು ಒಂಟಿಯಾಗಿ ಬಿಟ್ಟು ಅವರುಗಳು ದೊಣ್ಣೆ ಏಟು ತಿನ್ನಲಿ ಅಂತ ಸುಮ್ಮನೆ ಇದ್ದು ಬಿಡುವ ಸ್ವಭಾವದವರು ಅವರಾಗಿರಲಿಲ್ಲ. ಖಾಯಿಲೇ ಇದ್ದರೂ ಅವರು ಮೆರವಣಿಗೆಯ ಮುಖಂಡತ್ವ ವಹಿಸಿದರು. ಲಾಲಾಜೀಗೆ ಆರೋಗ್ಯ ಸರಿಯಿಲ್ಲ, ನಿಃಶಕ್ತರಾಗಿದ್ದಾರೆ ಅನ್ನುವುದು ಆ ಯುವಕ ಬಿಳಿಯನಿಗೂ ಕಾಣಿಸುತ್ತಾ ಇತ್ತು. ಆದರೆ ಆ ಕಾಲದಲ್ಲಿ ಬಿಳಿಸೈನಿಕರ ಮುಖದಲ್ಲಿ ತಿರಸ್ಕಾರ, ಬರ್ಬರತೆ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅವರು ಕಾಡುಮನುಷ್ಯರ ಹಾಗೆ ವ್ಯವಹಾರ ಮಾಡುವುದಕ್ಕೆ ಮುಂದಾಗುತ್ತಿದ್ದರು ಅನ್ನುವುದು ಸ್ಪಷ್ಟವಾಗಿ ಕಾಣುತ್ತಿತ್ತು. ೧೭ ಸಾರಿ ಲಾಲ್‌ಜೀಗೆ ಲಾಠಿ ಏಟು ಬಿತ್ತು. ಆ ಒಂದೊಂದು ಏಟು ರಾಜ್ಯಕ್ಕೆ ಬಿದ್ದಿತ್ತು. ಲಾಲಾಜೀಗೆ ಹೀಗೆ ಹೊಡೆದು ಅವಮಾನ ಮಾಡಿದರು. ಇದರ ನೋವು ಇಡೀ ದೇಶದ ಜನರಿಗಿತ್ತು. ಆದರೆ ಗುಲಾಮತನದ ವಿವಶತೆಯಿಂದಾಗಿ ಯಾರೊಬ್ಬರೂ ಏನೂ ಮಾಡಲಾಗಲಿಲ್ಲ. ಆ ಏಟಿನಿಂದ ಲಾಲಾಜಿ ಎದೆಗೆ ಜೋರಾಗಿ ಪೆಟ್ಟು ತಗುಲಿತ್ತು. ಮೊದಲೇ ಅವರು ಹೃದಯರೋಗಿಯಾಗಿದ್ದವರು. ಈ ಗಾಯ, ಅದಕ್ಕೂ ಹೆಚ್ಚಾಗಿ ಅಸಹಾಯಕತೆಯಿಂದ ಅವರ ಬದುಕುವ ಇಚ್ಛೆಯೇ ಕೊನೆಗೊಂಡಿತು. ೩–೪ ತಿಂಗಳುಗಳಲ್ಲೆ ಅವರ ಬೆಟ್ಟದಂತಹ ಶರೀರ ಕರಗಿಹೋಯಿತು. ಚಿರನಿದ್ರೆಯಲ್ಲಿ ಮುಳುಗಿದರು. ಭಾರತದ ಮುದ್ದಿನ ವೀರ ತೀರಿಕೊಂಡ. ಅವರ ಸಮ ಬೇರೆ ಯಾರಿಗೂ ಧೈರ್ಯವಿರಲಿಲ್ಲ. ಪಂಜಾಬ್ ಒಂದೇ ಅಲ್ಲ, ಇಡೀ ದೇಶ ಅನಾಥವಾಗಿ ಹೋಯಿತು.

ಲಾಲಾಜೀಯನ್ನು ನಿರ್ದಯವಾಗಿ ಹೊಡೆದಿದ್ದರ ಅವಮಾನದಿಂದಾಗಿ ದೇಶ ಒದ್ದಾಡಿ ಹೋಯಿತು. ಇದು ರಾಷ್ಟ್ರದ ಗೌರವಕ್ಕೆ ಬಿದ್ದ ಪೆಟ್ಟಾಗಿತ್ತು. ಲಾಲಾಜೀಯ ಸಾವಿನಿಂದ ಕೋಪ ತೀವ್ರ ವಿಷಾದವಾಗಿ ಪರಿಣಮಿಸಿತು. ಆ ವಿಷಾದದಿಂದ ಕೂಡಿದ ವಾತಾವರಣ ಭಗತ್‌ಸಿಂಹನಿಗೆ ಜನ್ಮ ನೀಡಿತು. ಕೋಪದಿಂದ ಒದ್ದಾಡಿ ಭಗತ್‌ಸಿಂಹ ಮತ್ತು ಅವನ ಜೊತೆಗಾರರಾದ ಬಿ.ಕೆ. ದತ್ತ ದೆಹಲಿಯ ಕೇಂದ್ರ ವಿಧಾನಸಭೆಯ ದರ್ಶಕರ ಗ್ಯಾಲರಿಯಿಂದ ಎರಡು ಬಾಂಬ್‌ಗಳನ್ನು ಕೆಳಗೆ ಸದನ ಸಭಾಗಾರದೊಳಕ್ಕೆ ಬಿಸುಟರು. ಯಾರಿಗೂ ಹೆಚ್ಚು ಏಟು ಬೀಳಲಿಲ್ಲ. ಗಲಾಟೆ

ಮಾಡಿ, ಅವ್ಯವಸ್ಥೆಯನ್ನುಂಟುಮಾಡಬೇಕೆಂದೇ ಈ ಬಾಂಬ್‌ನ್ನು ಎಸೆದಿದ್ದುದು ಎಂದು ಭಗತ್‌ಸಿಂಹ ವಿವರಣೆ ನೀಡಿದ್ದ. ಈ ಒಂದು ಘಟನೆಯ ನಂತರ ದೇಶದಲ್ಲಿ ಅಂತಹ ಘಟನೆಗಳ ಸರಮಾಲೆ ನಡೆಯಿತು. ಅವರೆಲ್ಲರ ಮೇಲೂ ಕೂಟನೀತಿಯ ಕೇಸ್ ನಡೆಯಿತು. ಎಷ್ಟೋ ಜನರನ್ನು ಜೈಲಿಗೆ ತಳ್ಳಿದರು. ಆ ಕೇಸ್‌ಗಳೆಲ್ಲವೂ ಲಾಹೌರ್ ಕೂಟನೀತಿ ಎಂಬ ಹೆಸರಿನಲ್ಲಿ ಪ್ರಖ್ಯಾತವಾಗಿವೆ. ಈ ಕೈದಿಗಳನ್ನು ಜೈಲು ಮತ್ತು ಕಛೇರಿಗಳಲ್ಲಿ ಅವಮಾನಪಡಿಸಿ ಹಿಂಸಿಸಲಾಗುತ್ತಿತ್ತು. ಈ ಅವಮಾನಗಳಿಗೆ ಸೇಡು ತೀರಿಸಿಕೊಳ್ಳಲು ಆ ಕೈದಿಗಳು ಉಪವಾಸ ಸತ್ಯಾಗ್ರಹ ಮಾಡಿದರು. ನಾವು ದೇಶಪ್ರೇಮಿಗಳಾದ ಕೈದಿಗಳೇ ಹೊರತು ಕೊಲೆಗಡುಕರೂ ಕಳ್ಳರೂ ಅಲ್ಲ, ರಾಜಕೀಯ ಕೈದಿಗಳ ಸಮ್ಮಾನ ನೀಡಿ ಅವರನ್ನು ಜೈಲಿನಲ್ಲಿರಿಸಬೇಕು; ಅವರ ಅಪಮಾನ ದೇಶಕ್ಕೆ ಅಪಮಾನ ಮಾಡಿದಂತೆ ಎಂಬುದು ಅವರ ಬೇಡಿಕೆಯಾಗಿತ್ತು.

ಜವಾಹರಲಾಲಾಜೀ ಲಾಹೌರ್‌ಗೆ ಹೋಗಿದ್ದರು. ಆಗ ಈ ಕೈದಿಗಳ ಉಪವಾಸ ೩ನೆಯ ದಿನ ತಲುಪಿತ್ತು. ಜವಾಹರಲಾಲಜೀ, ಭಗತ್‌ಸಿಂಹ ಮತ್ತು ಜತೀಂದ್ರ ದಾಸ ಲಾಹೌರ್ ಜೈಲಿನಲ್ಲಿ ಭೇಟಿಯಾದರು. ಆಗ ಅವರಿಬ್ಬರೂ ನಿಃಶಕ್ತರಾಗಿ ಮಲಗಿದ್ದರು. ಬುದ್ಧಿವಂತನಾಗಿದ್ದ ಭಗತ್‌ಸಿಂಹ ಶಾಂತವಾಗಿದ್ದರು. ಆತ ಬಹಳ ನಮ್ರವಾಗಿ ಮಾತನಾಡಿದರು. ಆತನ ಮಾತುಗಳಲ್ಲಿ ಆಕ್ರೋಶವಂತೂ ಪ್ರಕಟವಾಗಲಿಲ್ಲ ಎಂದು ಜವಾಹರ್‌ಲಾಲಜೀಗೆ ಅನಿಸಿತ್ತು. ಜತೀಂದ್ರದಾಸ್ ಅಂತು ಇನ್ನೂ ಹೆಚ್ಚು ಮೃದು ಸ್ವಭಾವದ ಕೋಮಲಳಾದ ಸುಂದರಿಯ ಹಾಗೆ ಕಾಣಿಸುತ್ತಿದ್ದರು. ನಂತರ ಉಪವಾಸದ ಅರುವತ್ತೊಂದನೆಯ ದಿನ ಜತೀಂದ್ರ ಜೈಲಿನಲ್ಲೇ ಕೊನೆಯುಸಿರೆಳೆದರು. ಯಾರಾದರೂ ತನ್ನ ಗಡೀಪಾರಾಗಿರುವ ಚಿಕ್ಕಪ್ಪ ಅಜಿತ್‌ಸಿಂಹರನ್ನು ಪತ್ತೆ ಹಚ್ಚಲಿ ಎಂಬುದು ಭಗತ್‌ಸಿಂಹರ ಆಸೆಯಾಗಿತ್ತು. ೧೯೦೭ರಲ್ಲಿ ಲಾಲಾಲಾಜಪತರಾಯ್ ಅವರ ಜೊತೆಗೆ ಸರ್ದಾರ್ ಅಜಿತ್ ಸಿಂಹರನ್ನೂ ಸರ್ಕಾರ ಗಡೀಬಾರುಮಾಡಿತು. ಜವಾಹರಲಾಲರು ಸಾಕಷ್ಟು ಪ್ರಯತ್ನಪಟ್ಟರಾದರೂ ಅಜಿತ್‌ಸಿಂಹರ ಬಗ್ಗೆ ಏನೂ ತಿಳಿಯಲಿಲ್ಲ. ಭಗತ್‌ಸಿಂಹರಿಗೆ ಗಲ್ಲು ಶಿಕ್ಷೆ ವಿಧಿಸಿದರು. ಆ ವೀರ ನಗು–ನಗುತ್ತಲೇ ಹುತಾತ್ಮನಾದ.

ಭಗತ್‌ಸಿಂಹರು ಚಿರಪರಿಚಿತರಾದ ಕಾರ್ಯಕರ್ತರೇನೂ ಆಗಿರಲಿಲ್ಲವೆಂದು ಜವಾಹರಲಾಲಜೀ ತಮ್ಮ ಆತ್ಮಕಥೆಯಲ್ಲಿ ಬರೆದಿದ್ದಾರೆ. ಭಗತ್‌ಸಿಂಹ ಉಗ್ರವಾದಿಯೂ ಆಗಿರಲಿಲ್ಲ. ಆತನೊಬ್ಬ ಸಾಮಾನ್ಯ ರಾಷ್ಟ್ರಪ್ರೇಮಿ ಆಗಿದ್ದ. ಲಾಲಾಜೀಗಾದ ಅವಮಾನವನ್ನು ಆತ ಸಹಿಸಿಕೊಳ್ಳಲಾಗಲಿಲ್ಲ. ಆದುದರಿಂದ ತನ್ನ ವಿದ್ರೋಹವನ್ನು ಪ್ರಕಟಪಡಿಸಲು ಈ ಕ್ರಮವನ್ನು ಹಿಡಿದಿದ್ದ. ಲಾಲಾಜೀಯವರ ಸಾವಿಗೆ ಬದಲಾಗಿ ಭಗತ್‌ಸಿಂಹ ತೋರಿದ ಪ್ರತೀಕಾರ, ಅವನ ಬಲಿದಾನವನ್ನು ನೋಡಿ ತುಳಿತಕ್ಕೀಡಾಗಿದ್ದ ಭಾರತೀಯ ಸಮಾಜ ಮುಗ್ಧಗೊಂಡಿತು. ದೇಶ ಭಗತ್‌ಸಿಂಹನ ಕೇಸನ್ನು ಸೂಕ್ಷ್ಮವಾಗಿ

ಗಮನಿಸಿತು. ಆತನ ಬಲಿದಾನವನ್ನು ಜನ ಇವತ್ತಿಗೂ ಬಹಳ ಗೌರವದಿಂದ ನೋಡುತ್ತಾರೆ. ಭಗತ್‌ಸಿಂಹ ರಾಷ್ಟ್ರಕ್ಕಾದ ಅಪಮಾನದ ಸೇಡನ್ನು ತೀರಿಸಿದ್ದ. ದೇಶ ಹಿಂಸೆ ಅಥವಾ ಉಗ್ರವಾದಕ್ಕೆ ಪ್ರಾಶಸ್ತ್ಯ ನೀಡುತ್ತದೆಂದೂ ಅಲ್ಲಿ ನಿಜವಾಗಿ ಹೇಳಬೇಕೆಂದರೆ ಗಾಂಧೀಜಿ ಬಂದ ಮೇಲೆ ೧೫ ವರ್ಷಗಳಲ್ಲಿ ಜನ ಮತ್ತು ಯುವಕರು ಅಹಿಂಸಾತ್ಮಕ ಸತ್ಯಾಗ್ರಹ ಸರಿಯೆಂದು ಒಪ್ಪಿಕೊಂಡಿದ್ದರು, ಉಗ್ರವಾದಕ್ಕೆಂದೂ ಬೆಲೆ ಕೊಟ್ಟಿರಲಿಲ್ಲ.

ಇದೇ ಸಮಯಕ್ಕೆ ಲಕ್ನೋದಲ್ಲಿ ಸೈಮನ್ ಕಮೀಷನನ್ನು ತೀವ್ರವಾಗಿ ವಿರೋಧಿಸಿ ವಿಶೇಷ ಮೆರವಣಿಗೆಗಳು ಹೊರಟರು. ಜವಾಹರಲಾಲಜೀ ಅದರ ಮುಂದಾಳತ್ವ ವಹಿಸಿದರು. ಸರಕಾರ ಸೆಕ್ಷನ್ ೧೪೪ ಜಾರಿಗೊಳಿಸಿತ್ತು. ಆದರೆ ಲಕ್ನೋದ ಜನ ಈ ತೆರನಾದ ಪ್ರತಿಬಂಧಕಾಜ್ಞೆಗಳಿಗೆ ಮಹತ್ವ ನೀಡುತ್ತಿರಲಿಲ್ಲ. ಜವಾಹರಲಾಲ್‌ಜೀ ಮೇಲೆ ಎರಡು ಬಾರಿ ಲಾಠಿ ಛಾರ್ಜ್ ಆಯಿತು. ಎರಡನೆಯ ಸಾರಿಯಂತೂ ಬಹಳ ಏಟು ಬಿತ್ತು, ಜೊತೆಗಾರರು ಬಲವಂತವಾಗಿ ತಮ್ಮ ನೇತಾರನನ್ನು ಕುದುರೆಯ ಕಾಲಡಿಗಳ ಮಧ್ಯದಿಂದ ಲಾಠಿಯ ಪ್ರಹಾರದ ನಡುವೆ ದೇಹಸಹಿತ ಎತ್ತಿ ದೂರ ಮಾಡಿದರು. ದೇಶದ ಸೌಭಾಗ್ಯ ಪಂಡಿತ್‌ಜೀ ಉಳಿದುಕೊಂಡರು. ಏಟು ತಿನ್ನುತ್ತಿರುವಾಗ ಮನಸ್ಸು ಏನನ್ನುತ್ತಿತ್ತು ಅನ್ನುವುದನ್ನು ಜವಾಹರಲಾಲ್‌ಜೀ ಬಹಳ ಚೆನ್ನಾಗಿ ಬರೆದಿದ್ದಾರೆ. ಅವರು ಯಾರಿಗೆ ಹೆದರಿಕೆ ಆಗಲ್ಲ? ಶರೀರಕ್ಕೆ ಹೊಡೆಯುತ್ತಿದ್ದರೆ ತಪ್ಪಿಸಿಕೊಂಡು ಓಡಬೇಕು ಅಂತ ಮನಸ್ಸಿಗೆ ಅನಿಸುತ್ತದೆ. ಆದರೆ ನನ್ನ ಮರ್ಯಾದೆ ಉಳಿಸಿಕೊಳ್ಳುವುದಕ್ಕೋಸ್ಕರ ದೇಶಪ್ರೇಮದಿಂದಾಗಿ ಮನುಷ್ಯ ಅಲ್ಲಿಂದ ಓಡಿ ಹೋಗುವುದಿಲ್ಲ, ತನ್ನ ಮುಂದಿರುವ ಕರ್ತವ್ಯವನ್ನು ಹೆದರದೆ ನಿರ್ವಹಿಸುವುದನ್ನೇ ಧೈರ್ಯ ಅನ್ನುವುದು ಅನ್ನುತ್ತಾರೆ. ಜವಾಹರಲಾಲಾಜೀ ಈ ಧೈರ್ಯವನ್ನು ಚೆನ್ನಾಗಿ ತೋರಿಸಿಕೊಟ್ಟರು. ಅನ್ಯಾಯವನ್ನು ವಿರೋಧಿಸಿ ಏಟುಗಳನ್ನು ತಿಂದರು. ಹೀಗೆ ಸೈಮನ್ ಕಮೀಷನ್‌ಅನ್ನು ವಿರೋಧಿಸಿ ಎಷ್ಟೋ ಜನ ಏಟುಗಳನ್ನು ತಿಂದರು. ಸಾವಿರಾರು ಮಂದಿ ಜೈಲಿಗೆ ಹೋದರು. ದೇಶದ ಎಲ್ಲಾ ಶಾಂತ–ಉಗ್ರ ದಳಗಳ ಜನ, ಎಲ್ಲಾ ಪಕ್ಷಗಳವರೂ, ಮುಸಲ್ಮಾನರೂ ಕೂಡ, ಕಾಂಗ್ರೆಸ್‌ನ ಈ ಯಾತ್ರೆಯಲ್ಲಿ ಪೂರ್ತಿ ಸಹಕಾರ ನೀಡಿದರು. ಈ ಒಗ್ಗಟ್ಟು ಸರಕಾರಕ್ಕೆ ಬಹಳ ಘಾತಕವಾದ ತಿರುವು ಆಗಿ ಕಂಡಿತ್ತು. ಕಮೀಷನ್‌ನ ಕೃಪೆಯಿಂದ ದೇಶದ ಜನ ಇಂಗ್ಲಿಷ್‌ನ ಎರಡು ಶಬ್ದಗಳು 'ಗೋ ಬ್ಯಾಕ್' ಅನ್ನು ಕಲಿತಿದ್ದರು. ಈ 'ಗೋಬ್ಯಾಕ್' ನ ಘೋಷಣೆಯಿಂದ ಸೈಮನ್ ಕಮೀಷನ್ ಬಹಳ ಫಜೀತಿ ಪಟ್ಟು ಇಂಗ್ಲೆಂಡ್‌ಗೆ ಹಿಂದಿರುಗಿತು.

* * * *

# ೧೫. ಬಾರಡೋಲಿ ಸತ್ಯಾಗ್ರಹ

೧೯೨೧ ರಲ್ಲಿ ಗುಜರಾತ್‌ನಲ್ಲಿ ಮಳೆ ಕಡಿಮೆಯಾಗಿ ಹೆಚ್ಚು ಕಡಿಮೆ ದುರ್ಭಿಕ್ಷದ ಸ್ಥಿತಿ ಏರ್ಪಟ್ಟಿತು. ಹೊಲ ಗದ್ದೆಗಳು ಒಣಗಿ ನಿಂತಿದ್ದವು. ಸುಮಾರು ಶೇಕಡಾ ಇಪ್ಪತ್ತರಷ್ಟು ಬೆಳೆ ಕೂಡ ಆಗಿರಲಿಲ್ಲ. ಸರಕಾರಿ ಅಧಿಕಾರಿಗಳು ಫಸಲು ಬಂದಿರದಿದ್ದರೂ ಅದರ ವಿಷಯವಾಗಿ ಯಾವಾಗಲೂ ಮನಸ್ಸಿಗೆ ಬಂದ ಹಾಗೆ ಬರೆಯುತ್ತಿದ್ದರು. ಅವರ ಮೇಲಣ ಅಧಿಕಾರಿಗಳು ಅಂಕಿ– ಸಂಖ್ಯೆ ನೋಡಿ ತಮ್ಮ ಕೆಳಗಿರುವ ಅಧಿಕಾರಿಗಳ ಬಗ್ಗೆ ಕೃಪಾದೃಷ್ಟಿ ಇಟ್ಟಿರಲೆಂದು ಈ ಸರಕಾರಿ ಅಧಿಕಾರಿಗಳು ಇಳುವರಿ ಏರಿಸಿ ಲೆಕ್ಕ ಬರೆಯುತ್ತಿದ್ದರು. ೧೯೧೮ರಲ್ಲಿ ನಡೆದ ಖೇಡಾ ಸತ್ಯಾಗ್ರಹದಿಂದ ಬಡವರಲ್ಲಿ ಅಪೂರ್ವವಾದ ಸಾಹಸ ನಂಬಿಕೆ ಮೂಡಿತ್ತು. ರೈತರ ಭಯ ಸ್ವಲ್ಪ ಕಡಿಮೆಯಾಗಿತ್ತು. ಬಾರಡೋಲಿ ತಹಸೀಲ್‌ನವರು ೧೯೨೧ ರಲ್ಲಿ ಕ್ಷಾಮ ಬಂದಿದ್ದಾಗ ಕಂದಾಯ ಕಟ್ಟಿರಲಿಲ್ಲ. ಆಗ ಸರಕಾರಿ ಅಧಿಕಾರಿಗಳು ಏನೂ ಹೇಳಲಾಗದೆ ಸುಮ್ಮನಿದ್ದರಾದರೂ ಒಳಗೇ ಕುದಿಯುತ್ತಿದ್ದರು. ಬಾರಡೋಲಿ ತಹಸೀಲು ಮತ್ತಲ್ಲಿಯ ಕೃಷಿಕರ ಈ ಉದ್ಧಟತನವನ್ನು ಅಕ್ಷಮ್ಯ ಅಪರಾಧ ಅಂತ ಪರಿಗಣಿಸಿದ್ದರು. ಈ ಎಲ್ಲ ಕಾರಣಗಳಿಂದ ೧೯೨೮ರಲ್ಲಿ ಕೇಳದೆ, ಹೇಳದೆ ಸರಕಾರ ತಹಸೀಲ್‌ನ ಕಂದಾಯವನ್ನು ಶೇಕಡಾ ೬೬ ರಷ್ಟು ಹೆಚ್ಚಿಸಿಬಿಟ್ಟಿತು. ಬಾರಡೋಲಿ ತಹಸೀಲ್ ಯಾವಾಗಲೂ ಸಂಪನ್ನವಾಗಿಯೇ ಇತ್ತು, ಇಲ್ಲಿಯ ಭೂಮಿ ಫಲವತ್ತಾಗಿದೆ. ಗುಜರಾತ್‌ನ ಕೃಷಿಕ ಯಾವಾಗಿನಿಂದಲೂ ಪರಿಶ್ರಮಿಯೇ.ಅವನ ಪರಿಶ್ರಮದಿಂದ ಬಾರಡೋಲಿಯಲ್ಲಿ ಚೆನ್ನದಂಥ ಫಸಲು ಬರುತ್ತಿತ್ತು. ಜೊತೆಗೆ ಈ ಕ್ಷೇತ್ರದ ಜನ ಆಫ್ರಿಕಾಗೆ ಹೋಗಿ ಧನಿಕರಾಗಿ ಸಂಪನ್ನರಾಗಿ ಹಿಂದಿರುಗಿದ್ದರು. ಅವರು ಕೃಷಿಯಲ್ಲಿ ಪ್ರವೀಣರಾಗಿದ್ದರು. ಅದರಿಂದ ಅವರ ವ್ಯವಸಾಯ ಬಹಳ ಸಫಲವಾಗಿತ್ತು. ಬಾರಡೋಲಿ ರೈತ ತಿಂದು–ಕುಡಿದು ಸಂಪನ್ನನಾಗಿದ್ದುದರಿಂದ ಸರಕಾರ ಅವರ ಬಳಿ ಚರ್ಚಿಸದೇ ಅವರ ಕಂದಾಯವನ್ನು ಹೆಚ್ಚು ಮಾಡಿಬಿಟ್ಟಿದ್ದರು. ಬಾರಡೋಲಿಯ ರೈತರಿಗೆ ಈ ಏಕಪಕ್ಷೀಯ ಅನ್ಯಾಯವನ್ನು ಸಹಿಸಲಾಗಲಿಲ್ಲ.

೧೯೨೮ರಲ್ಲಿ ದೇಶದಲ್ಲಿ ಎಲ್ಲೆಡೆ ಗಾಂಧಿಯ ಅಸಹಕಾರದ ಗಾಳಿ ಬೀಸಿತ್ತು. ಅಹಮದಾಬಾದ್ ಅಲ್ಲಿಂದ ೨೦೦ ಮೈಲು ದೂರ ಕೂಡ ಇರಲಿಲ್ಲ. ಗಾಂಧೀಜಿ ಮತ್ತು ಅವರ ಆಶ್ರಮ ಗುಜರಾತಿಗಳದೂ ಅಂತ ತಾನೆ ಕರೆಸಿಕೊಳ್ಳಲಾಗುತ್ತಿತ್ತು!

ಈ ಎಲ್ಲಾ ಪರಿಸ್ಥಿತಿಯಿಂದ ಬಾರಡೋಲಿಯ ರೈತರ ಧೈರ್ಯ ಹೆಚ್ಚಾಯಿತು. ಇವರು ಎಲ್ಲರೂ ಸೇರಿ ಅನ್ಯಾಯದ ಈ ಸರಕಾರವನ್ನು ವಿರೋಧಿಸಲು ನಿರ್ಣಯಿಸಿದರು. ಕಂದಾಯ ಹೆಚ್ಚಿಸಿರುವದಲ್ಲ, ಕಂದಾಯವನ್ನು ಕೊಡುವುದೇ ಇಲ್ಲ ಅಂತ ಅಂದುಕೊಂಡರು. ರಾಜ್ಯದ ಜೊತೆ ಇಂತಹ ದುಃಸಾಧ್ಯವಾದ ಕದನ ಆಡುವುದಕ್ಕೆ ಒಬ್ಬ ಕುಶಲನಾಗಿದ್ದ ಸೇನಾಪತಿ ಬೇಕೇ ಬೇಕಾಗಿತ್ತು. ಗಾಂಧೀಜಿಯಂತೂ ಯಾವಾಗಲೂ ಪ್ರವಾಸದಲ್ಲೇ ತೊಡಗಿರುತ್ತಿದ್ದರು. ಅದರಿಂದ ಅವರ ಜೊತೆಗೆ ವಲ್ಲಭ ಭಾಯಿ ಪಟೇಲ ಒಳ್ಳೆಯ ಸ್ಥಿರ ಸಾರಥ್ಯ ಕೊಡುವುದಕ್ಕೆ ಸರಿಹೋಗುತ್ತದೆ ಎಂದು ರೈತರು ಯೋಚಿಸಿದರು. ಬಾರಡೋಲಿಯಲ್ಲಿ ಎಷ್ಟೋ ಜನ ರೈತರು ತಮ್ಮ ಕಿವಿಗಳಲ್ಲಿ ಚಿನ್ನದ ಹತ್ಕಡಕು ಮತ್ತು ಕಡಗ, ಷರ್ಟಿನಲ್ಲಿ ಬೆಳ್ಳಿಯ ಬಟನ್ ಹಾಕಿಕೊಂಡು ಸಾಕಷ್ಟು ಧೈರ್ಯ ಹೊತ್ತು ಅಹಮದಾಬಾದ್‌ನಲ್ಲಿ ವಲ್ಲಭಭಾಯಿ ಅವರ ಮನೆಗೆ ಹೋದರು. ಸ್ಥಿತಿ ಏನು ಅಂತ ಅವರಿಗೆ ವಿವರವಾಗಿ ತಿಳಿಸಿದರು. ಅನಂತರ ವಲ್ಲಭಬಾಯಿ ಅವರು ಆ ಆಹ್ವಾನವನ್ನು ಒಪ್ಪಿಕೊಂಡು, ಈ ಸತ್ಯಾಗ್ರಹಕ್ಕೆ ಮುಂದಾಳತ್ವ ನೀಡಿ ಸರಕಾರಕ್ಕೆ ಪಾಠ ಕಲಿಸುವಂತೆ ಬೇಡಿದರು. ಇದರಿಂದ ಬಡವರಿಗೆ ನ್ಯಾಯ ಸಿಗುವಂತಾಗಲಿ ಅಂದರು.

ವಲ್ಲಭಭಾಯಿ ಕೂಡ ಅಂತಿಂಥ ಆಟಗಾರರಾಗಿರಲಿಲ್ಲ. ಈ ರೀತಿ ಎರಡೂವರೆ ದಿವಸಗಳ ಉತ್ಸಾಹ ನೋಡಿ ಬೇವಕೂಫನಾಗುವುದಕ್ಕೆ ಅವರೂ ಸಿದ್ಧವಾಗಿರಲಿಲ್ಲ. ರೈತ ಮತ್ತು ಬನಿಯಾ ಹೇಳುವುದೇನು? ಬೇಕಾದಾಗ ಮೀಸೆ ತಗ್ಗಿಸಿ ಜೀ ಹುಝೂರ್ ಅಂತಾನೆ, ವಲ್ಲಭಬಾಯಿಯನ್ನ ಹೋಳಿಯ ಬೆಂಕಿಗೆ ದೂಡಿ ಅವನನ್ನು ಹೋಮದಲ್ಲಿ ಉರಿಯುವುದಕ್ಕೆ ತೆಂಗಿನಕಾಯಿ ಹಾಕುವ ಹಾಗೆ ದೂಡಿ ತಾನು ಅಲ್ಲಿಂದ ತಪ್ಪಿಸಿಕೊಂಡುಬಿಡುತ್ತಾನೆ. ವಲ್ಲಭಭಾಯಿ ತನ್ನ ವಕೀಲನ ರೂಪವನ್ನು ಸಾಕಾರಪಡಿಸಿಕೊಂಡು ಸತ್ಯಾಗ್ರಹದ ಕಷ್ಟಗಳನ್ನೆಲ್ಲಾ ರೈತರಿಗೆ ವಿವರಿಸಿದರು. ಸರಕಾರ ಭೂಮಿ ಕಾಣಿ ಎಲ್ಲವನ್ನು ಹೇಗೆ ವಶಪಡಿಸಿಕೊಳ್ಳುತ್ತೆ, ದೊಣ್ಣೆ ಏಟು ತಿನ್ನ ಬೇಕಾಗುತ್ತೆ, ಜೈಲಿನಲ್ಲಿ ನುಚ್ಚುನೂರಾಗಲೇಬೇಕಾಗುತ್ತೆ, ಜಾತಿ ಮತ್ತೆ ಆಚಾರ–ವಿಚಾರ, ಮಡಿ–ಮೈಲಿಗೆ ಎಲ್ಲವೂ ಬಿಟ್ಟು ಹೋಗುತ್ತೆ, ಪಾಯಖಾನೆ ಕೂಡ ತೊಳೆಯಬೇಕಾಗುತ್ತೆ, ಅಂತ ಎಲ್ಲಾ ವಿವರಿಸಿದರು. ಬಾರಡೋಲಿಯ ರೈತರು ಪರಿಸ್ಥಿತಿಯನ್ನು ಸ್ವಲ್ಪ ಅರ್ಥಮಾಡಿಕೊಂಡು, ಸತ್ಯಾಗ್ರಹದ ಗಂಭೀರತೆ ಏನು ಅಂತ ತಿಳಿದುಕೊಳ್ಳಲಿ ಅನ್ನುವುದು ವಲ್ಲಭಭಾಯಿ ಅಭಿಪ್ರಾಯವಾಗಿತ್ತು. ಇದೇನೂ ಆಟ ಅಲ್ಲವೆಂದು ರೈತರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಸಾಕಷ್ಟು ಕಠೋರವಾಗಿ ಸತ್ಯಾಗ್ರಹದ ಒರೆಗಲ್ಲಿನ ಮಾತುಗಳನ್ನು ವಲ್ಲಭಭಾಯಿ ಅವರಿಗೆ ತಿಳಿಸಿದರು. ಆದರೆ ರೈತರು ದೃಢವಾಗಿ ನಿಶ್ಚಯಿಸಿಕೊಂಡು ಬಂದಿದ್ದರು. ಆಗ ವಲ್ಲಭಭಾಯಿ ಅವರನ್ನು ಇನ್ನೊಂದು ಮುಖ್ಯವಾದ ಪ್ರಶ್ನೆ ಕೇಳಿದರು. ‘ಎಷ್ಟು ಜನ

ರೈತರು ಸಾಯವುದಕ್ಕೂ ಸಿದ್ಧವಾಗಿದ್ದಾರೆ?'

'ಎಲ್ಲರೂ!'

ತಟಕ್ಕನೆ ನೀಡಿದ ಈ ಉತ್ತರದಲ್ಲಿ ವಲ್ಲಭ ಭಾಯಿಗೆ ನಂಬಿಕೆ ಬರಲಿಲ್ಲ. ಅವರೂ ಸ್ಪಷ್ಟವಾಗೇ ಹೇಳಿದರು. ಈ ರೀತಿ ಅಸ್ಪಷ್ಟವಾಗಿ ಕೆಲಸಕ್ಕೆ ಬಾರದ ಮಾತು ಆಡುವುದರಲ್ಲಿ ಏನೂ ತಾಕತ್ತಿಲ್ಲ, ಸಂದರ್ಭ ಬಂದಾಗ ತನ್ನ ತಲೆಯನ್ನು ಕತ್ತರಿಸಿ ಕೊಟ್ಟು ತನ್ನ ಪ್ರತಿಜ್ಞೆಯಿಂದ ಜರುಗದೆ ಇರಬೇಕು, ಅಂತಹ ಜನರ ಹೆಸರು ಹೇಳಿ, ಆಗ ಮಾತು ಮುಂದುವರಿಸಬಹುದು.

ಕೃಷಿಕ ಸಂಘ ಬಾರಡೋಲಿಗೆ ಹಿಂದಿರುಗಿತು. ಅಲ್ಲಿ ಈ ರೈತರು ಒಂದು ಸಾರ್ವಜನಿಕ ಸಭೆ ಕರೆದರು. ತಮ್ಮ ಮಿತ್ರರೊಂದಿಗೆ ಚರ್ಚೆ ನಡೆಸಿದರು. ಭಾಷಣಗಳಾದವು. ಸಂದೇಹಗಳನ್ನು ನಿವಾರಿಸಿದರು. ಧೈರ್ಯ ಅನ್ನುವುದು ಒಂದು ಚಮತ್ಕಾರದಿಂದ ಕೂಡಿದ ರಸಾಯನ ಇದ್ದ ಹಾಗೆ ಇರುತ್ತೆ, ಧೈರ್ಯಶಾಲಿಯಾದ ಕುಂಟನೂ ಓಡತೊಡಗುತ್ತಾನೆ. ಮೂಕ ಮಾತನಾಡುವುದಕ್ಕಾರಂಭಿಸುತ್ತಾನೆ. ಕಡಿಮೆ ಮಾತನಾಡುವ ರೈತರಲ್ಲಿ ಧೈರ್ಯ ಮೂಡಿ ಈಗ ಅವರು ತಮಗೆ ಒಳ್ಳೆಯದೇನು ಕೆಟ್ಟದ್ದೇನು ಅನ್ನುವುದನ್ನು ಕುರಿತು ಕಲೆತು ಮಾತನಾಡುವ ಸ್ಥಿತಿಗೆ ತಲಪಿದ್ದರು. ತಮ್ಮ ನಿಜವಾದ ಹಕ್ಕುಗಳಿಗಾಗಿ ಸಾಯುವುದಕ್ಕೂ ಸಿದ್ಧವಾಗಿದ್ದರು. ವಲ್ಲಭಭಾಯಿಯವರು ಕೇಳಿದ ಪಟ್ಟಿಯ ವಿಷಯವನ್ನು ರೈತರು ಅಷ್ಟೇ ಗಂಭೀರವಾಗಿ ತೆಗೆದುಕೊಂಡರು. ಏನೂ ಆಗುತ್ತಲೇ ಇಲ್ಲವೇನೋ ಅನ್ನುವ ರೀತಿಯಲ್ಲಿ ಸಾಯವುದಕ್ಕೆ ಸಿದ್ಧವಾಗಿದ್ದ ಪ್ರತಿಯೊಬ್ಬ ರೈತನೂ ತನ್ನ ಹೆಸರನ್ನು ಈಗಿನ ಕಾಲದಲ್ಲಿ ಜನ ಚಂದಾ ಕೊಡುವವರ ಹೆಸರನ್ನು ಬರೆಸುವ ಹಾಗೆಯೇ ಬರೆಸಿದರು. ಅಲ್ಲೇ ಸಭೆಯಲ್ಲಿ ಅಣ್ಣ, ತಮ್ಮ, ಮಗ, ಚಿಕ್ಕಪ್ಪ, ಮಾವ ಎಲ್ಲರ ಜೊತೆ ಚರ್ಚಿಸದೆ ಸಲಹೆ ಪಡೆಯದೆ ಯಾವ ಪರಿವಾರ ಯಾರನ್ನು ಸಾಯುವುದಕ್ಕಾಗಿ ಮುಂದೂಡುತ್ತದೆಂದು ಯೋಚಿಸದೆ ತಕ್ಷಣ ನಿರ್ಣಯ ತೆಗೆದುಕೊಂಡು ಬಾರಡೋಲಿಯ ರೈತರು ಸಾಯಲು ಸಿದ್ಧವಾಗಿದ್ದವರ ಪಟ್ಟಿ ತಯಾರಿಸಿದರು. ಈ ಪಟ್ಟಿಯನ್ನು ತೆಗೆದುಕೊಂಡು ರೈತ ಮಂಡಳಿ ಪುನಃ ವಲ್ಲಭಭಾಯಿ ಅವರ ಬಳಿಗೆ ಬಂತು.

ಸಾಯಲು ಸಿದ್ಧವಾಗಿರುವವರ ಪಟ್ಟಿಯನ್ನು ಕೇಳಿದವನೂ ಧನ್ಯ, ತನ್ನ ನಾಯಕನ ಬಗೆಗೆ ಮನಸ್ಸಿನಲ್ಲಿ ಅದ್ಭುತವಾಗಿ ಶ್ರದ್ಧೆಯನ್ನಿಟ್ಟಿದ್ದ ಈ ರೈತರು ಕೂಡಾ ಧನ್ಯರು, ಅವರ ಒಂದು ಮಾತಿಗೆ ಕಟ್ಟುಬಿದ್ದು ಸಾಯಲು ಸಿದ್ಧರಾದ ಅವರೆಲ್ಲಾ ಧನ್ಯರು!

ಆಗ ವಲ್ಲಭಭಾಯಿ ರೈತರಿಗೆ, 'ಈಗ ಹೋಗಿ ಬಾಪೂ ಬಳಿ ಆಶೀರ್ವಾದ ಪಡೆದು ಬನ್ನಿ' ಅಂದರು

ರೈತರ ಡೆಪ್ಯುಟೇಷನ್ ಸತ್ಯಾಗ್ರಹ ಆಶ್ರಮವನ್ನು ತಲುಪಿತು. ಗಾಂಧೀಜಿಗೆ

ತಮ್ಮ ಕತೆಯನ್ನೆಲ್ಲಾ ಹೇಳಿಕೊಂಡರು. ಇಷ್ಟೆಲ್ಲಾ ಸ್ಪಷ್ಟವಾದ ನಂತರ ಗಾಂಧೀಜಿಯವರ ಆಶೀರ್ವಾದ ಸಿಗಲೇಬೇಕಿತ್ತು. ವಲ್ಲಭ ಭಾಯಿ ಪಟೇಲರ ಸಾರಥ್ಯದಲ್ಲಿ ಬಾರಡೋಲಿ ಸತ್ಯಾಗ್ರಹದ ಸಿದ್ಧತೆಗಳಾದವು.

ಸರದಾರ್ ಪಟೇಲರು ಬಾರಡೋಲಿ ಆಶ್ರಮವನ್ನು ತನ್ನ ಪ್ರಮುಖ ಕೇಂದ್ರವಾಗಿ ಮಾಡಿಕೊಂಡರು. ಅಲ್ಲಿಂದ ಸತ್ಯಾಗ್ರಹದ ಸಂಚಾರವನ್ನು ಆರಂಭಿಸಿದರು. ಬಾರಡೋಲಿ ಆಶ್ರಮಕ್ಕೆ ಸ್ವರಾಜ್ ಆಶ್ರಮವೆಂದು ಹೆಸರಿಟ್ಟರು. ೧೯೨೨ರಿಂದ ಬಾರಡೋಲಿ ಆಶ್ರಮದಲ್ಲೂ ನೂಲು ತೆಗೆಯುವುದು, ನೇಯುವುದು ನಡೆಯುತ್ತಿತ್ತು, ಒಂದು ಸುಂದರವಾದ ಉಪವನದ ಹಾಗೆ ಅಲ್ಲಿ ಆಶ್ರಮ ಇತ್ತು, ನಮ್ಮ ತಂದೆ ರಾಮದಾಸ್ ಗಾಂಧೀ ಬಾರಡೋಲಿ ಆಶ್ರಮದ ವ್ಯವಸ್ಥಾಪಕರಾಗಿದ್ದರು. ವಿಧಿಯ ವಿಧಾನ ವಿಚಿತ್ರವಾಗಿರುತ್ತದೆ. ಕಟುವಾಗಿ ಮಾತನಾಡುವ ಸರದಾರರು ಹಾಗೂ ಮಿತಭಾಷಿ ರಾಮದಾಸ್ ಇವರ ನಡುವೆ ಹೇಳಲಾಗದ ಸಂಬಂಧ ಮತ್ತು ಅವರಿಬ್ಬರೂ ಈ ಸತ್ಯಾಗ್ರಹದ ಸಂದರ್ಭದಲ್ಲಿ ಇಷ್ಟು ಆತ್ಮೀಯರಾಗಿರಬೇಕೇ! ಸ್ವರಾಜ್ಯ ಆಶ್ರಮದ ವ್ಯವಸ್ಥಾಪಕರಾಗಿದ್ದ ನಮ್ಮ ತಂದೆಯನ್ನು ನಾವು ಅಣ್ಣ ಅಂತ ಕರೆಯುತ್ತಿದ್ದೆವು. ಅವರು ಈ ಸತ್ಯಾಗ್ರಹದಲ್ಲಿ ಪೂರ್ತಿ ತಲ್ಲೀನರಾಗಿದ್ದರು. ನಮ್ಮ ತಂದೆ ಸರದಾರ್ ಪಟೇಲರಿಗೆ ಯಾವಾಗಲೂ ಸಹಕಾರ ನೀಡಿದರು. ಸತ್ಯಾಗ್ರಹದಿಂದ ದೇಶದ ಎಲ್ಲಾ ಕಡೆಗಳಿಂದಲೂ ರಾತ್ರಿ ಬೆಳಿಗ್ಗೆ ಅನ್ನದೆ ನೂರಾರು ಜನ ಅತಿಥಿಗಳು ಬಾರಡೋಲಿಗೆ ಬರುತ್ತಿದ್ದರು. ಅವರೆಲ್ಲರ ವ್ಯವಸ್ಥೆಯನ್ನೂ ನಮ್ಮ ತಂದೆ ನೋಡಿಕೊಳ್ಳಬೇಕಾಗಿತ್ತು. ಅಷ್ಟು ಜನರಿಗೆ ಊಟ ತಿಂಡಿ ತಂಗುವ ವ್ಯವಸ್ಥೆ ತುಂಬಾ ದೊಡ್ಡ ಜವಾಬ್ದಾರಿಯಾಗಿತ್ತು. ಸತ್ಯಾಗ್ರಹದ ಐದು–ಆರು ತಿಂಗಳು ಸರದಾರರು ನಮ್ಮ ತಂದೆ–ತಾಯಿಯ ಜೊತೆಯಲ್ಲೇ ಇದ್ದರು. ಸರದಾರರು ಮತ್ತವರ ಮಗಳು ಮಣಿಬೆನ್ ಪಟೇಲ್ ಮತ್ತೆ ಕೆಲವರು ವಿಶೇಷ ಮಿತ್ರರು ಆಶ್ರಮದ ಸಾಮೂಹಿಕ ಭೋಜನಾಲಯದಲ್ಲಿ ಭೋಜನ ಮಾಡದೆ ನಮ್ಮ ಮನೆಯಲ್ಲೇ ಊಟ ಮಾಡುತ್ತಿದ್ದರು. ನಮ್ಮಮ್ಮ ನಿರ್ಮಲಾ ಗಾಂಧೀ ಪ್ರತಿ ದಿವಸವೂ ಹತ್ತು ಇಪ್ಪತ್ತು ಜನರಿಗೆ ವ್ಯವಸ್ಥಿತವಾಗಿ ರುಚಿಕರವಾದ ಅಡುಗೆ ಮಾಡುತ್ತಿದ್ದಳು. ಬಾರಡೋಲಿ ಆಶ್ರಮದಲ್ಲಿ ಮತ್ತು ಅಹಮದಾಬಾದ್ ಆಶ್ರಮದಲ್ಲಿ ಒಂದೇ ರೀತಿ ಚಟುವಟಿಕೆ ಇತ್ತಾದರೂ ಊಟ–ತಿಂಡಿಯಲ್ಲಿ ಸಾಕಷ್ಟು ಅಂತರವಿತ್ತು. ಸರದಾರರಿಗೆ ಊಟದ ಪ್ರಯೋಗಗಳ ಬಗ್ಗೆ ವಿಶೇಷ ಆಸಕ್ತಿ ಇರಲಿಲ್ಲ. ಬಾಪೂಜಿ ಅಂತೂ ಸ್ವಾದೇಂದ್ರಿಯಗಳ ನಿಯಂತ್ರಣದಲ್ಲಿ ನಂಬಿಕೆ ಇಟ್ಟಿದ್ದವರು. ಆದರಿಂದ ಅಹಮದಾಬಾದ್‌ನಲ್ಲಿ ಸಾಮೂಹಿಕ ಭೋಜನವಾಗುತ್ತಿತ್ತು. ಸಾದಾ ಭೋಜನದ ಗುರಿ ಇತ್ತು. ಬಾರಡೋಲಿಯಲ್ಲಿ ಕೆಲವು ಕಾರ್ಯಕರ್ತರಿಗೆ ಅವರ ಅಡುಗೆ ಮನೆ ಬೇರೆಯೇ ಇತ್ತು. ವಿದ್ಯಾರ್ಥಿಗಳಿಗೆ ಪ್ರತಿದಿನವೂ ವ್ಯವಸ್ಥಿತವಾಗಿ ಮುಖ್ಯವಾಗಿ ಅಡುಗೆ ಮನೆಯಲ್ಲಿ ಅಡುಗೆಯನ್ನು

ಸಿದ್ಧಪಡಿಸುತ್ತಿದ್ದರು. ಹೀಗೆ ಬಿಡಿ–ಬಿಡಿಯಾಗಿ ತಿನ್ನುವ ವ್ಯವಸ್ಥೆ ಇತ್ತು. ಆದರೆ ಸ್ವಾವಲಂಬನೆ ಮತ್ತು ಶರೀರ ಶ್ರಮಕ್ಕೆ ಅಷ್ಟೇ ಮಹತ್ವ ಇಲ್ಲೂ ಇತ್ತು. ಅದರಿಂದ ಯಾರೊಬ್ಬರ ಮನೆಯಲ್ಲೂ ನೌಕರ ಇರಲಿಲ್ಲ. ಮನೆಯ ಒಲೆ, ಬೀಸುವ ಕಲ್ಲು, ಪಾತ್ರೆ, ಪೊರಕೆ, ಬಟ್ಟೆ ಒಗೆಯುವುದು ಎಲ್ಲಾ ಕೆಲಸಗಳನ್ನು ನಮ್ಮಮ್ಮ ತನ್ನ ಕೈಯಿಂದ ಮಾಡುತ್ತಿದ್ದಳು. ಇಷ್ಟು ಜನ ಅತಿಥಿಗಳನ್ನು ನೋಡಿಕೊಳ್ಳುತ್ತಿದ್ದಳು. ಇಂತಹ ತೀವ್ರತೆಯಿಂದ ಕೂಡಿದ ದಿನಗಳಲ್ಲಿ ಸರದಾರ ಪಟೇಲರು ಮತ್ತು ನಮ್ಮ ತಂದೆ ಇವರಿಬ್ಬರ ನಡುವೆ ತಂದೆ–ಮಗನ ಅನನ್ಯ ಸಂಬಂಧ ಏರ್ಪಟ್ಟಿತು. ಸರದಾರ್ ಪಟೇಲರಿಗೆ ಒಬ್ಬ ಮಗ, ಒಬ್ಬಳು ಮಗಳು ಇದ್ದರು. ಆದರೆ ಮಗ ಡಾಹ್ಯ ಭಾಯಿ ಜೊತೆ ಆ ರೀತಿಯ ಆತ್ಮೀಯತೆ ಇತ್ತೋ ಇಲ್ಲವೋ ಎಂಬ ವಿಷಯವಾಗಿ ನನಗೆ ಅನುಮಾನವಿದೆ. ನಮ್ಮ ತಾಯಿ ಕೂಡ ಸರದಾರರನ್ನು ತಮ್ಮ ಮಾವ ಅಂತಲೇ ಭಾವಿಸಿ ಗೌರವದಿಂದ ಅವರ ಸೇವೆ ಮಾಡಿದಳು. ನಾವು ಮೂರು ಜನ ಮಕ್ಕಳೂ ಸರದಾರ್ ಅವರನ್ನು 'ದಾದಾ' (ಅಜ್ಜ) ಅಂತಲೇ ಕರೆಯುತ್ತಿದ್ದೆವು. ಈ ಸಂಬಂಧ ಈಗ ಮೂರು ಪೀಳಿಗೆಗಳಿಂದಲೂ ಹೀಗೆಯೇ ನಡೆದುಕೊಂಡು ಬಂದಿದೆ. ಸರದಾರರ ಮೊಮ್ಮಗ ವಿಪಿನ್ ಪಟೇಲ್ ಇವತ್ತಿಗೂ ಆ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ವಿಪಿನ್‌ಗೆ ನಾನೊಬ್ಬಳೇ ಸಹೋದರಿ ಇರುವುದು. ನನ್ನ ಮಕ್ಕಳಿಗೆ ವಿಪಿನ್ ಪಟೇಲ್ ಮಾವ ಆಗಿದ್ದಾರೆ. ಸತ್ಯಾಗ್ರಹದ ಸಮಾಚಾರ ಗಾಳಿಯ ವೇಗದಲ್ಲಿ ತಹಸೀಲ್‌ನ ಪ್ರತಿಯೊಬ್ಬ ವ್ಯಕ್ತಿಗೂ, ಮಹಿಳೆ–ಪುರುಷರೆಲ್ಲರಿಗೂ ತಿಳಿಯಿತು. ಬಾಪೂಜಿ ತಮ್ಮ ಪ್ರತಿನಿಧಿಯಾಗಿ ಮಹಾದೇವ ದೇಸಾಯಿಯವರನ್ನು ಬಾರಡೋಲಿಗೆ ಕಳುಹಿಸಿಕೊಟ್ಟರು. ಸತ್ಯಾಗ್ರಹ ಘೋಷಿಸಲೆಂದು ಕರೆದಿದ್ದ ಒಂದು ದೊಡ್ಡ ಸಾರ್ವಜನಿಕ ಸಭೆಯಲ್ಲಿ ಮಹಾದೇವ ಕಾಕಾ ಕಬೀರ್ ಸಾಹೇಬರ ಭಜನೆಯನ್ನು ಹಾಡಿ ತನ್ನ ಭಾಷಣ ಮಾಡಿದ್ದರು ;

"ಶೂರ್ ಸಂಗ್ರಾಮ್ ಕೋ ದೇಖ್ ಭಾಗೇ ನಹ್ಣೀ ।
ದೇಖ್ ಭಾಗೇ, ಸಾಯ್ಣೀ ಶೂರ್ ನಹ್ಣೀ ॥"

(ಶೂರ ಸಂಗ್ರಾಮ ನೋಡಿ ಓಡುವುದಿಲ್ಲ,
ನೋಡಿ ಓಡುವವ ಹೇ ದೇವ, ಶೂರನಲ್ಲ.)

ಸಾವಿರಾರು ಜನ ಈ ಭಜನೆಯ ಪಂಕ್ತಿಗಳನ್ನು ಪುನರುಚ್ಚರಿಸಿದ್ದರು. ಆ ದಿವಸ ಜನರ ಉತ್ಸಾಹ ಮತ್ತು ಶೌರ್ಯ ವಿಶಿಷ್ಟ ಸ್ವರೂಪದ್ದಾಗಿತ್ತೆಂದು ನಮ್ಮ ತಂದೆ ಹೇಳುತ್ತಿದ್ದರು. ಸಾಯುವುದಕ್ಕೆ ಸಿದ್ಧತೆಗಳು ನಡೆದಿದ್ದವಾದರೂ ಸಾವಿನ

ಭಯ ಯಾರಿಗೂ ಇರಲಿಲ್ಲ. ನಗುತ್ತಾ–ನಗುತ್ತಾ ದಿಬ್ಬಣಕ್ಕೆ ಹೊರಟಿರುವ ಹಾಗನಿಸುತ್ತಿತ್ತು. ಪ್ರತಿಯೊಬ್ಬರೂ ಸರಕಾರಕ್ಕೆ ಸವಾಲೊಡ್ಡಿ ದೇಶದ ಹೆಸರಲ್ಲಿ ಹುತಾತ್ಮರಾಗ ಹೊರಟಿದ್ದರು. ಈ ವಾತಾವರಣದಲ್ಲಿ ಬಾರಡೋಲಿ ತಹಸೀಲ್‌ನ ಪ್ರತಿಯೊಬ್ಬ ವ್ಯಕ್ತಿಯೂ ಕಂದಾಯ ಕಟ್ಟುವುದಿಲ್ಲವೆಂದು ಹೇಳಿ, ಅಹಿಂಸಾತ್ಮಕ ವಿರೋಧ ಮಾಡುವುದಾಗಿ ಎಲ್ಲರೆದುರಿಗೆ ಪ್ರತಿಜ್ಞೆ ಮಾಡಿದ್ದರು. ಈ ಘಟನೆಯಿಂದ ದೇಶದಲ್ಲಿ ಎಲ್ಲೆಡೆ ಕುತೂಹಲ ಮೂಡಿತು. ಕಡು ಬಡವ ರೈತ ಕೂಡ ತನ್ನ ಮೌನವನ್ನು ದೂರಗೊಳಿಸಿ ಆಸೆತುಂಬಿದ ಕಣ್ಣುಗಳಿಂದ ಬಾರಡೋಲಿ ಸತ್ಯಾಗ್ರಹದ ಸಮಾಚಾರಗಳಿಗಾಗಿ ಕಾಯತೊಡಗಿದ. ಪ್ರಪಂಚದ ಜನ ನಕ್ಷೆಯಲ್ಲಿ ಬಾರಡೋಲಿ ತಹಸೀಲನ್ನು ಹುಡುಕತೊಡಗಿದರು, ಬಾರಡೋಲಿಯ ರೈತರು ಸುದ್ದಿಯ ಆಕರ್ಷಣೆಯಾದರು.

ಸರದಾರ್ ಅವರು ತಮಗೆ ಸಹಾಯವಾಗಲಿ ಮತ್ತು ಸತ್ಯಾಗ್ರಹ ಸರಿಯಾಗಿ ನಡೆಯಲಿ ಎಂಬ ಉದ್ದೇಶದಿಂದ ಗುಜರಾತಿನ ಕೆಲವು ಕಾರ್ಯಕರ್ತರನ್ನು ಬಾರಡೋಲಿಗೆ ಕರೆಸಿಕೊಂಡಿದ್ದರು. ಆಫ್ರಿಕಾದ ಫಿನಿಕ್ಸ್ ಆಶ್ರಮದಿಂದ ಬಂದಿದ್ದ ಇಮಾಮ್ ಸಾಹೇಬರು ಅಹಮದಾಬಾದ್‌ನಿಂದ ಬಂದರು. ಬಡೌದಾದಿಂದ ಅಬ್ಬಾಸ್ ದಾದಾ ಬಂದರು. ಖೇಡಾದಿಂದ ಈರುಳ್ಳಿಯ ಪ್ರಸಿದ್ಧ ವ್ಯಾಪಾರಿ ಮೋಹನಲಾಲ ಪಂಡ್ಯಾ ಬಂದರು. ನಡಿಯಾದ್‌ನ ಠಾಕೂರ್ ಗೋಪಾಲದಾಸ್ ಮತ್ತು ಅವರ ಶೂರ ವೀರಳಾದ ಪತ್ನಿ ಭಕ್ತಿಬಾ ಬಂದರು. ಭರೂಚ್‌ನಿಂದ ಡಾ॥ ಚಂದೂಲಾಲ ದೇಸಾಯಿ, ಸೂರತ್‌ನ ಕಲ್ಯಾಣಜೀ ಮತ್ತು ಕುಂವರಜೀ ಭಾಯಿ, ಮೆಹ್ತಾ ಬಂಧು, ರಾಸ್‌ನಿಂದ ರವಿಶಂಕರ ಮಹಾರಾಜ್ ಮತ್ತು ಸೌರಾಷ್ಟ್ರದ ಪ್ರಸಿದ್ಧ ಲೋಕಪ್ರಿಯ ಕವಿಗಳಾಗಿದ್ದ ಧೂಲ್‌ಚಂದ್ ಭಾಯಿ ತನ್ನ ಭಜನಮಂಡಳಿಯೊಂದಿಗೆ ಬಾರಡೋಲಿಗೆ ಬಂದಿದ್ದರು. ಅವರು ಶೌರ್ಯಗಾನ ಮಾಡಿ ಸತ್ಯಾಗ್ರಹದ ಸೈನಿಕರ ಉತ್ಸಾಹವನ್ನು ದ್ವಿಗುಣಗೊಳಿಸುತ್ತಿದ್ದರು. ಚಿಕ್ಕವರು ದೊಡ್ಡವರು ಕೂಡಿ ಒಟ್ಟು ಸುಮಾರು ೩೦೦ ಜನ ಸ್ವಯಂಸೇವಕರು ಸರದಾರರ ಸಹಾಯಕ್ಕಾಗಿ ಬಾರಡೋಲಿಗೆ ಬಂದಿದ್ದರು. ಆ ಜನ ತಹಸೀಲ್‌ನಲ್ಲಿ ಎಲ್ಲ ಕಡೆಗಳಲ್ಲೂ ಹರಡಿಕೊಂಡರು. ಪ್ರತಿಯೊಂದು ಹಳ್ಳಿಯಲ್ಲೂ ಈ ನಿಷ್ಠಾವಂತ ಸತ್ಯಾಗ್ರಹಿಗಳು ಎರಡು ಮೂರು ಮಂದಿ ಡೇರೆ ಹಾಕಿಕೊಂಡು ರೈತರ ಈ ಹೋರಾಟಕ್ಕೆ ಪ್ರಾಣಪಣದಿಂದ ಸಹಾಯ ನೀಡಿದರು. ಆಗ ಬಾರಡೋಲಿ ತಹಸೀಲ್‌ನಲ್ಲಿ ೧೩೦ ಹಳ್ಳಿಗಳಿದ್ದವು. ಮಹಿಳೆಯರು ಪುರುಷರು ಮತ್ತು ಮಕ್ಕಳು ಸೇರಿಸಿ ಒಟ್ಟು ೮೬೦೦೦ ದ ಜನಸಂಖ್ಯೆ ಇತ್ತು. ೮೬೦೦೦ ಜನರಲ್ಲಿ ೮೦೦೦೦ ಜನರ ನರನಾಡಿಗಳಲ್ಲಿ ಯುದ್ಧದ ರಣಭೇರಿಯ ಶೌರ್ಯನಾದ ರಣ ರಣಿಸುತ್ತಿತ್ತೆಂದು ಹೇಳಿದರೆ ಅತಿಶಯೋಕ್ತಿ ಏನಲ್ಲ. ಇಷ್ಟೊಂದು ಜನ ಅನುಭವಸ್ಥ ಸತ್ಯಾಗ್ರಹಿಗಳು ಮತ್ತು ಸರದಾರರು ಸುಂದರವಾಗಿ ನಿರ್ವಹಿಸಿದ್ದುದರಿಂದ

ಬಾರಡೋಲಿಯ ಸ್ವರೂಪವೇ ಬದಲಾಗಿತ್ತು.

ಹೋರಾಟಕ್ಕಾಗಿ ನಡೆದ ವ್ಯವಸ್ಥೆ ಸಿದ್ಧತೆ ಸರಕಾರಕ್ಕೆ ಸಹಿಸಲು ಆಗಲಿಲ್ಲ. ಎಲ್ಲಕ್ಕೂ ಮೊದಲು ರವಿಶಂಕರ ಮಹಾರಾಜರನ್ನು ಬಂಧಿಸಲಾಗಿತ್ತು. ನಂತರದಲ್ಲೂ ಅವರಂತಹ ಸರ್ವಾಂಗ ಸಂಪೂರ್ಣ ಆಂದೋಳನಕರ್ತನಾರೂ ಕಂಡುಬರಲಿಲ್ಲ. ಗುಜರಾತ್‌ನಲ್ಲಿ ಅವರನ್ನು ಯಾವಾಗಲೂ ಮಹಾರಾಜ್ ಎಂದೇ ಕರೆದಿದ್ದಾರೆ. ೧೯೮೪ರಲ್ಲಿ ಒಂದು ನೂರು ವರ್ಷ ವಯಸ್ಸಿನಲ್ಲಿ ಅವರು ತೀರಿಕೊಂಡರು. ರವಿಶಂಕರ್ ಮಹಾರಾಜ್ ಅವರ ಬಂಧನದ ಸುದ್ದಿಯನ್ನು ಕೇಳಿ ಬಾಪೂಜಿ ಬಾರಡೋಲಿಗೆ ಸಂದೇಶ ಕಳುಹಿಸಿ, 'ಮಹಾರಾಜರಂತಹ ಶ್ರೇಷ್ಠ ಬ್ರಾಹ್ಮಣನಿಂದ ಸತ್ಯಾಗ್ರಹ ಮಾಡಿ ಜೈಲಿಗೆ ಹೋಗುವುದಾರಂಭವಾಗಿದೆಯಾದ್ದರಿಂದ ಖಂಡಿತ ಸಫಲತೆ ಸಿಗುತ್ತದೆ' ಎಂದರು. ನಿಜವಾಗಿಯೂ ಮಹಾರಾಜ್ ಅವರು ಶ್ರೇಷ್ಠ ಬ್ರಾಹ್ಮಣ ಅಷ್ಟೇ ಅಲ್ಲ, ನರರತ್ನವಾಗಿದ್ದರು. ಬೇರೆ ಮಾನವರಿಗಿಂತಲೂ ಒಂದು ಹಿಡಿಯಷ್ಟೆ ಹೆಚ್ಚು ಎತ್ತರದ ವ್ಯಕ್ತಿತ್ವ ಅವರದ್ದು. ಅವರಂತಹ ಮಾನವತೆ ಅಲಭ್ಯವಾಗಿತ್ತು.

ಪ್ರತಿದಿನ ಸಂಜೆ ಸತ್ಯಾಗ್ರಹದ ವಿವರಣೆ, ಪತ್ರಿಕೆ ಮುದ್ರಿತವಾಗುತ್ತಿತ್ತು. ಅದರಲ್ಲಿ ಇಪ್ಪತ್ತನಾಲ್ಕು ಗಂಟೆಯ ಎಲ್ಲಾ ಸಮಾಚಾರಗಳೂ ಎಲ್ಲೆಲ್ಲಿ ಯಾರು ಯಾರು ಬಂಧಿತರಾದರು, ಕಾರ್ಯಕ್ರಮ ಏನಿತ್ತು ಅಥವಾ ಸರಕಾರ ಯಾರ ಮನೆ ಸೀಲ್ ಮಾಡಿತು ಎಂದೂ, ಜೊತೆಗೆ ದೇಶದ ಎಲ್ಲೆಡೆಯ ಮುಖಂಡರ ಸಂದೇಶಗಳು ಮುದ್ರಿತವಾಗುತ್ತಿದ್ದವು. ಒಂದು ಗಂಟೆಯೊಳಗೆ ಅದರ ಹತ್ತು ಸಾವಿರ ಪ್ರತಿಗಳು ಖರ್ಚಾಗಿ, ಒಂದೊಂದು ಪ್ರತಿಯನ್ನು ೧೫ ರಿಂದ ೨೦ ಜನ ಓದುತ್ತಿದ್ದರೆಂದು ನಮ್ಮ ತಂದೆ ಹೇಳುತ್ತಿದ್ದರು. ಸರದಾರರ ಓಜಸ್ಸಿನಿಂದ ತುಂಬಿದ ಮಾತು ಕೇಳಿ ಪ್ರತಿಯೊಬ್ಬ ದೀನ–ಹೀನ ರೈತನೂ ಸ್ವರಾಜ್ಯದ ಪ್ರಬಲ ಸೈನಿಕನಾಗಿದ್ದ. ಆರು ತಿಂಗಳ ಕಾಲ ಪೂರ್ತಿ ಈ ಯುದ್ಧ ನಡೆಯಿತು. ಸತ್ಯಾಗ್ರಹಿಗಳೂ ರೈತರೂ ಜೈಲುಗಳನ್ನು ತುಂಬಿದರು. ಸರ್ಕಾರ ಒಡವೆ, ವಸ್ತು, ಭೂಮಿ, ಮನೆ, ಹಸು, ಎತ್ತು, ಎಮ್ಮೆ ಎಲ್ಲವನ್ನೂ ವಶಕ್ಕೆ ತೆಗೆದುಕೊಂಡರು. ಸಾವಿರಾರು ಜನರನ್ನು ನಿರ್ದಯವಾಗಿ ಹೊಡೆದರು. ಜನರು ಭಾರೀ ಶಿಕ್ಷೆ ಅನುಭವಿಸಿದರು. ಆದರೆ ರೈತರು ಬಾಗಲಿಲ್ಲ, ಎಲ್ಲೂ ಸತ್ಯಾಗ್ರಹದ ನಿಯಮಗಳ ಉಲ್ಲಂಘನೆಯಾಗಲಿಲ್ಲ. ಅಹಿಂಸಕ ಧೈರ್ಯದಿಂದ ಎಲ್ಲ ರೈತರೂ ಸರಕಾರದ ಅತ್ಯಾಚಾರಗಳನ್ನು ಸಹಿಸಿಕೊಂಡರು. ಈ ಚಳವಳಿಯಲ್ಲಿ ಪುರುಷರು ಜೈಲಿಗೆ ಹೋದಾಗ, ಅಶಿಕ್ಷಿತ ಮಹಿಳೆಯರು ಸರಕಾರಕ್ಕೆ ಉಗ್ರ ಅಸಹಕಾರವನ್ನು ತೋರಿದರಂತೆ. ಬೇಕಾದಷ್ಟು ಅತ್ಯಾಚಾರಗಳು ನಡೆದವಾದರೂ ಜನ ಬಾಗಲಿಲ್ಲ. ಈ ಸತ್ಯಾಗ್ರಹದಲ್ಲಿ ನಮ್ಮ ತಂದೆ ಕೂಡ ಸಾಕಷ್ಟು ಏಟು ತಿಂದರು. ಕೊನೆಗೆ ಜೈಲಿಗೆ ಹೋದರು. ಬಹಳ ದುಃಸ್ಥಿತಿ ನಿರ್ಮಿತವಾಯಿತು. ಆಗ ಬೊಂಬಾಯಿಯ ಗವರ್ನರ್ (ಆ ಕಾಲದಲ್ಲಿ

ಗುಜರಾತ್ ಮತ್ತು ಬೊಂಬಾಯಿ ಒಂದಾಗಿತ್ತು) ಸರದಾರರನ್ನು ಬಂಧಿಸಲು ನಿಶ್ಚಯಿಸಿದರು. ಗಾಂಧೀಜಿಗೆ ಈ ಸುದ್ದಿ ಸಿಕ್ಕ ತಕ್ಷಣ ಅವರು ಸರದಾರರಿಗೆ ತಂತಿ ಕಳುಹಿಸಿ 'ನನ್ನ ಅಗತ್ಯವೇನಾದರೂ ಇದ್ದರೆ ತಿಳಿಸಿ, ನಾನು ಬರಲು ಸಿದ್ಧವಾಗಿದ್ದೇನೆ' ಎಂದು ತಿಳಿಸಿದರು.

ಸರದಾರರು ಉತ್ತರ ಕೊಟ್ಟು ತಾರು ಕಳುಹಿಸಿ ಬನ್ನಿ ಎಂದರು. ಮೂರನೆಯ ದಿನ ಬಾಪೂಜಿ ಬಾರಡೋಲಿಗೆ ಬಂದರು. ಸತ್ಯಾಗ್ರಹಿಗಳು ಮತ್ತು ಬಾರಡೋಲಿಯ ಜನರ ಉತ್ಸಾಹ ಇಮ್ಮಡಿಸಿತು. ಪರಿಸ್ಥಿತಿಯನ್ನು ಹತೋಟಿಗೆ ತರಲು ಕಷ್ಟವಾಗಿದೆ ಎಂದು ಬೊಂಬಾಯಿ ಸರಕಾರಕ್ಕೆ ಅನಿಸಿತು. ಮುಖಂಡರನ್ನು ಜೈಲಿಗೆ ಕಳುಹಿಸುವುದರಿಂದ ಸತ್ಯಾಗ್ರಹ ಇನ್ನೂ ಉಗ್ರವಾಗುತ್ತದೆ, ಮತ್ತು ರೈತರ ನಿಶ್ಚಯ ಇನ್ನೂ ದೃಢವಾಗುತ್ತದೆ ಎಂದರಿವಾಯಿತು. ತಿಳುವಳಿಕೆಯ ಒಂದೇ ಮಾರ್ಗ ಉಳಿದಿತ್ತು, ಒಪ್ಪಂದ. ಬೊಂಬಾಯಿ ಗವರ್ನರ್ ಮಾತುಕತೆಗಾಗಿ ಸರದಾರ್ ಪಟೇಲರನ್ನು ಪೂನಾಗೆ ಕರೆಸಿದರು. ಈ ಮಾತುಕತೆಯಾದ ಮೇಲೆ ಸಮಾಧಾನವಾಯಿತು. ಸತ್ಯಾಗ್ರಹವನ್ನು ನಿಲ್ಲಿಸಿದರು. ಸರಕಾರ ಒಂದು ಪಂಚಾಯಿತಿ ರಚಿಸಿತು. ಕಂದಾಯ ಕುರಿತು ಅದು ವಿವರವಾಗಿ ಪರೀಕ್ಷಣೆ ನಡೆಸಿತು. ಅದಕ್ಕೆ ರೈತ ಮುಖಂಡರಿಂದಲೂ ಸಹಕಾರವನ್ನು ಪಡೆದುಕೊಳ್ಳಲಾಯಿತು. ಎರಡೂ ಪಕ್ಷಗಳಿಗೆ ನ್ಯಾಯ ದೊರಕುವ ಹಾಗೆ ಆಗ ಕಂದಾಯದ ನ್ಯಾಯಪೂರ್ಣ ವ್ಯವಸ್ಥೆ ಏರ್ಪಟ್ಟಿತು.

ದೇಶದಲ್ಲೆಲ್ಲಾ ಈ ವಿಜಯದಿಂದ ಉತ್ಸಾಹದ ಅಲೆ ಎದ್ದಿತು. ಸತ್ಯಾಗ್ರಹದ ಬಲಶಾಲಿಯಾದ ಶಸ್ತ್ರ ರಾಜ್ಯಾಧಿಪತ್ಯವನ್ನು ಬಾಗುವಂತೆ ವಿವಶಗೊಳಿಸಿತು. ಇದನ್ನು ನೋಡಿ ದೇಶದ ಜನರೆಲ್ಲರಲ್ಲೂ ಅದರಲ್ಲೂ ವಿಶೇಷವಾಗಿ ರೈತರ ಹೃದಯದಲ್ಲಿ ಆಸೆ–ಉತ್ಸಾಹ ಸಂಚರಿಸಿತು ಮತ್ತು ಆತ್ಮವಿಶ್ವಾಸ ಜಾಗೃತವಾಯಿತು. ಬಾರಡೋಲಿ ಹೆಸರು ವಿಜಯದ ಪ್ರತೀಕವಾಯಿತು, ಈ ಸತ್ಯಾಗ್ರಹದ ಸಂಪೂರ್ಣ ನೇತೃತ್ವ ವಲ್ಲಭಭಾಯಿ ಪಟೇಲರು ವಹಿಸಿದ್ದರು. ಇಂತಹ ಶಿಷ್ಯರನ್ನು ಸಿದ್ಧಗೊಳಿಸಿದ ಬಾಪೂಜಿಯಂತಹ ಗುರುಗಳು ಧನ್ಯರು, ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶ ನೀಡಿ ನಂಬಿಕೆಗಳಿಸುವ ಅಮೂಲ್ಯವಾದ ಅವಕಾಶ ಕೂಡ ಅವರೇ ನೀಡಿದ್ದದ್ದು, ಸರದಾರರಂಥ ಶಿಷ್ಯರು ಕೂಡ ಧನ್ಯರು. ತನ್ನೆಲ್ಲ ಸಫಲತೆಯ ಗೌರವದ ನಡುವೆ ಕೂಡ ತನ್ನ ಗುರುವನ್ನವರು ಮರೆತಿರಲಿಲ್ಲ. ಅಹಂಕಾರದಿಂದ ಗುರುವನ್ನು ತನಗಿಂತ ಕೀಳೆಂದು ಭಾವಿಸುವಂಥ ತುಚ್ಛ ಕಾರ್ಯವನ್ನು ಅವರು ಮಾಡಿರಲಿಲ್ಲ. ಬಹುಶಃ ಗುಲಾಮಗಿರಿಯ ಆ ಯುಗದಲ್ಲಿ ಆತ್ಮವಿಶ್ವಾಸ ದೃಢವಾಗಿತ್ತು. ಗುರು, ಶಿಷ್ಯ, ಮಿತ್ರ, ಸಹಚರ, ನಾಯಕ ಕಾರ್ಯಕರ್ತರ ನಡುವೆ ಹೊಟ್ಟೆಕಿಚ್ಚು ಸಣ್ಣತನ ತೋರಲು ಮನಸ್ಸೇ ಆಗುತ್ತಿರಲಿಲ್ಲ. ಈ ಸತ್ಯಾಗ್ರಹವಾದ ನಂತರ ವಲ್ಲಭಬಾಯಿ ಪಟೇಲ್

ಬಾರಡೋಲಿಗಷ್ಟೇ ಅಲ್ಲದೆ ಸಮಸ್ತ ಹಿಂದೂಸ್ಥಾನಕ್ಕೆ ಸರದಾರ್ ಆದರು. ಅವರ ಹೆಸರೇ ಕ್ರಮೇಣ ಮರೆತು ಸರದಾರ್ ಉಪನಾಮದಿಂದಲೇ ಅವರನ್ನು ಜನ ಗುರುತಿಸತೊಡಗಿದರು. ಈಗವರು ಬಾರಡೋಲಿ ಅಥವಾ ಗುಜರಾತ್‌ಗಷ್ಟೇ ಸರದಾರ್ ಆಗಿರದೆ, ಸಮಸ್ತ ದೇಶಕ್ಕೆ ಸರದಾರ್ ಆದರು. ಚಿಕ್ಕವರು ದೊಡ್ಡವರೆಲ್ಲರೂ ಅವರನ್ನು ಸರದಾರ್ ಪಟೇಲ್ ಎಂದೇ ಕರೆಯತೊಡಗಿದರು. ಇಂದಿಗೂ ಅದೇ ಪದ್ಧತಿ ಜಾರಿಯಲ್ಲಿದೆ.

* * * *

# ೧೬. ಕಲ್ಕತ್ತಾ ಕಾಂಗ್ರೆಸ್

೧೯೨೮ರ ಕೊನೆ, ನಿಯಮಾನುಸಾರ ಕಾಂಗ್ರೆಸ್ ಅಧಿವೇಶನ ಕಲ್ಕತ್ತಾದಲ್ಲಿ ಆಯೋಜಿಸಿದ್ದರು. ಮೋತಿಲಾಲ್ ನೆಹರೂ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ಇದಕ್ಕೆ ಮುಂಚೆ ದೇಶದಲ್ಲಿ ಎಲ್ಲಾ ಪಾರ್ಟಿಗಳ ಸಮ್ಮೇಳನ ಒಂದು ಜರುಗಿತ್ತು. ಅದರಲ್ಲಿ ಮೋತಿಲಾಲರಿಗೆ ದೇಶಕ್ಕೆ ಒಂದು ಸಂವಿಧಾನ ತಯಾರುಪಡಿಸುವ ಜವಾಬ್ದಾರಿ ವಹಿಸಿದ್ದರು. ಎಲ್ಲರಿಗೂ ಒಪ್ಪಿಗೆಯಾಗುವಂಥ ಒಂದು ಸಂವಿಧಾನವನ್ನು ಆಗ ಮೋತಿಲಾಲರು ಸಿದ್ಧಪಡಿಸಿದರು. ಇತಿಹಾಸದಲ್ಲಿ ನೆಹರೂ ರಿಪೋರ್ಟ್ ಎಂದು ಅದು ಪ್ರಸಿದ್ಧವಾಗಿದೆ. ಈ ರಿಪೋರ್ಟ್‌ನ್ನು ಅವರು ಬಹಳ ಕಷ್ಟದಿಂದ ಹಾಗೂ ಆಶಂಕೆಗಳ ನಡುವೆ ಸಿದ್ಧಪಡಿಸಿದ್ದರು. ಸುಮಾರು ಪ್ರತಿಯೊಂದು ಪ್ರಶ್ನೆಗೂ ಪರಿಹಾರ ಕಂಡುಕೊಳ್ಳಬೇಕಾದರೆ ಕಷ್ಟವಾಗುತ್ತಿತ್ತು. ಗಾಂಧೀಜಿ ಈ ಎಲ್ಲಾ ಪಾರ್ಟಿಗಳ ಸಮ್ಮೇಳನ ನಡೆದಾಗ ಅಲ್ಲಿ ಇರಲಿಲ್ಲ. ಅವರು ತಮ್ಮ ಅಭಿಪ್ರಾಯ ನೀಡಿರಲಿಲ್ಲ. ನೆಹರೂ ರಿಪೋರ್ಟ್‌ನಲ್ಲಿ ಪೂರ್ತಿ ಸ್ವರಾಜ್ಯವನ್ನು ಕೇಳದೆ ಆಂಶಿಕವಾಗಿ ಸ್ವಾತಂತ್ರ್ಯವನ್ನು ಬೇಡಿದ್ದರು. ನಾಗರಿಕರ ಮೂಲ ಅಧಿಕಾರಗಳನ್ನು ಹಾಗೂ ರಾಜರು ಮತ್ತು ಜಮೀನುದಾರರ ಹತ್ತಿರ ಇದ್ದ ಎಲ್ಲೆ ಮೀರಿದ ಭೂಮಿಯ ಮೇಲಣ ಅಧಿಕಾರವನ್ನು ಇದರಲ್ಲಿ ಸಂರಕ್ಷಿಸಿದ್ದರು. ಆದರೆ ಇದು ದೇಶದ ನಾಯಕರುಗಳಿಗೆ ಅಥವಾ ಸಾಮಾನ್ಯ ಜನತೆಗೆ ಒಪ್ಪಿಗೆಯಾಗುವ ವಿಷಯವಾಗಿರಲಿಲ್ಲ. ಕಳೆದ ೧೦–೧೫ ವರ್ಷಗಳಲ್ಲಿ ದೇಶದ ಜನ ಇಂಥ ಅನೇಕ ಸಂದರ್ಭಗಳನ್ನು ಕಂಡಿದ್ದರು. ಈಗ ಜನರು ಚಿಕ್ಕ ಪುಟ್ಟ ಸುಧಾರಣೆಗಳ ವಿಷಯವಾಗಿ ಆಸಕ್ತಿ ಕಳೆದುಕೊಂಡಿದ್ದರು. ರಾಜಕೀಯದ ದೃಷ್ಟಿಯಿಂದ ದೇಶ ಸಾಕಷ್ಟು ಪ್ರಗತಿಯನ್ನು ಸಾಧಿಸಿತ್ತು. ಜನರಲ್ಲಿ ಜಾಗೃತಿ ಮೂಡಿತ್ತು. ವಿಚಾರವಂತಿಕೆ ಬೆಳೆದಿತ್ತು. ಅದರಂತೆ ಆ ರೀತಿಯ ಡೊಮಿನಿಯನ್ ಸ್ಟೇಟಸ್– ಅಂದರೆ ಅರ್ಧಶಾಸಕೀಯ ಸ್ವಾತಂತ್ರ್ಯ– ಜನರಿಗೆ ತೃಪ್ತಿ ಕೊಡುತ್ತಿರಲಿಲ್ಲ. ಸುಮಾರು ಮನೆಗಳಲ್ಲೆಲ್ಲಾ ಈ ಚರ್ಚೆಯ ಉದ್ವೇಗವನ್ನು ಕಾಣಬಹುದಾಗಿತ್ತು. ಚಿಕ್ಕವರು ದೊಡ್ಡವರ ಮಧ್ಯೆ ವಿಚಾರಭೇದ ಮಾಮೂಲಾಗಿ ಕಂಡುಬರುತ್ತಿತ್ತು. ಆದರೆ ನೆಹರೂ ರಿಪೋರ್ಟ್‌ನಿಂದ ಹುಟ್ಟಿಕೊಂಡ ಉದ್ವೇಗ, ಮನಸ್ತಾಪ ಅಸಹ್ಯಕರವಾಗಿತ್ತು. ಗಾಂಧೀಜಿ ಕಾಂಗ್ರೆಸ್‌ನಿಂದ ಮುಕ್ತರಾಗಿ ತಮ್ಮ ರಚನಾತ್ಮಕ ಕಾರ್ಯಗಳು ಮತ್ತು ಖಾದಿಯ ಕೆಲಸಗಳಲ್ಲಿ ತೊಡಗಿಕೊಂಡಿದ್ದರು.

ಕಾಂಗ್ರೆಸ್ ಈಗ ಸಾಕಷ್ಟು ಬಲವಾಗಿತ್ತು. ಅದರಿಂದ ಗಾಂಧೀಜಿ ಅಧಿವೇಶನಕ್ಕೆ ಹೋದರು. ಕಾಂಗ್ರೆಸ್ ಕಾರ್ಯಕ್ರಮಗಳ ವಿಷಯವಾಗಿ ಹೆಚ್ಚಿಗೇನೂ ಮಾತನಾಡುತ್ತಿರಲಿಲ್ಲ. ಇಂತಹ ವಾತಾವರಣದಲ್ಲಿ ಕಲ್ಕತ್ತಾದಲ್ಲಿ ಅಧಿವೇಶನ ನಡೆಯಬೇಕಾಗಿತ್ತು. ಆದರೆ ಅಧ್ಯಕ್ಷರಾಗಿದ್ದ ಮೋತಿಲಾಲರಿಗೆ ಜನರ ಮನಸ್ಸಿನಲ್ಲಿ ಅನುಮಾನಗಳಿರುವುದು ಗೊತ್ತಿತ್ತು. ಅದರಲ್ಲೂ ಯುವಕರ ಗುಂಪೊಂದು ಉಗ್ರವಾಗಿ ವಿರೋಧಿಸಬಹುದೆಂಬುದರ ಕಲ್ಪನೆ ಇತ್ತು. ಈ ಯುವಕರ ಗುಂಪಿನಲ್ಲಿ ಇಬ್ಬರು ತೇಜಸ್ವಿಗಳಾದ ಮುಖಂಡರಿದ್ದರು. ಅವರಲ್ಲಿ ಒಬ್ಬರು ಅಧ್ಯಕ್ಷರ ಮಗ ಜವಾಹರಲಾಲ, ಮತ್ತಿನ್ನೊಬ್ಬರು ಸುಭಾಷಚಂದ್ರ ಬೋಸರು. ಈ ಇಬ್ಬರು ಯುವಕರು ಸೀಮಿತವಾಗಿ ಕೇಳಿದ್ದ ಈ ಸ್ವರಾಜ್ಯದ ಪ್ರಸ್ತಾವವನ್ನು ಸಭೆಯಲ್ಲಿ ಎಲ್ಲರೆದುರು ಖಂಡಿಸಬೇಕೆಂದು ತೀರ್ಮಾನಿಸಿದ್ದರು. ಹೀಗಾಗಿ ತಂದೆ – ಮಗ ಇಬ್ಬರ ಮಧ್ಯೆ ರಾಷ್ಟ್ರಪ್ರೇಮಿ ಜೋಡಿಗಳ ಮಧ್ಯೆ ವೇದನೆಯಿಂದ ಕೂಡಿದ ಉದ್ವೇಗ ತುಂಬಿಕೊಂಡಿತ್ತು. ವಿಷಯ ಎಷ್ಟರಮಟ್ಟಿಗೆ ಮುಂದುವರಿದಿತ್ತು ಅಂದರೆ ಜವಾಹರಲಾಲ ಮತ್ತು ಸುಭಾಷ್– ಈ ಇಬ್ಬರೂ ಆಗ ಕಾಂಗ್ರೆಸ್ ಸಚಿವರು– ಅವರು ತಮ್ಮ ರಾಜೀನಾಮೆ ನೀಡಿ ಸ್ವತಂತ್ರವಾಗಿ ಕೆಲಸ ಮಾಡಬೇಕು ಅಂತ ಮನಸ್ಸು ಮಾಡಿದ್ದರು. ಇನ್ನೊಂದು ಕಡೆ ಭಾವೀ ಅಧ್ಯಕ್ಷರು, ನೆಹರೂ ರಿಪೋರ್ಟ್‌ನ ಕರ್ತೃ ತಂದೆ ಮೋತಿಲಾಲ ನೆಹರೂ ಅವರ ಅಭಿಪ್ರಾಯ– ಸಲಹೆ ಒಪ್ಪಿಗೆಯಾಗದಿದ್ದರೆ ತಾನು ಅಧ್ಯಕ್ಷನಾಗುವ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸಿದ್ಧವಿಲ್ಲ ಎಂದು ಘೋಷಿಸಿಬಿಟ್ಟಿದ್ದರು. ಇಂತಹ ಮನಃಸ್ತಾಪದಲ್ಲೇ ಮೋತಿಲಾಲರು ಗಾಂಧೀಜಿಗೆ ಪತ್ರ ಬರೆದು 'ನನ್ನ ತಲೆಯ ಮೇಲೆ ಮುಳ್ಳಿನ ಕಿರೀಟ ತೊಡಿಸಿ ನೀವು ದೂರ ಕುಳಿತು ತಮಾಷೆ ನೋಡುತ್ತಾ ಇದ್ದರೆ ನಡೆಯಲ್ಲ, ನಿಮ್ಮ ಸಹಾಯ ಬಹಳ ಬೇಕಾಗಿದೆ. ನೀವೇ ಸ್ಥಿತಿಯನ್ನು ಹತೋಟಿಗೆ ತರಲು ಸಾಧ್ಯ' ಎಂದು ತಿಳಿಸಿದರು.

ಅಪ್ಪ–ಮಗನ ಮಧ್ಯೆ ಇದ್ದ ಈ ಮನಸ್ತಾಪವನ್ನು ಬಾಪೂಜಿ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಬಾಪೂಜಿ ತಮ್ಮ ಹಿರಿಯ ಮಿತ್ರನಿಗೆ ಸಹಾಯ ಮಾಡಲು ಮುಂದಾದರು. ಕಾಂಗ್ರೆಸ್ ಸೆಷನ್‌ನಲ್ಲಿ ತೀವ್ರವಾಗಿ ಚರ್ಚೆಗಳಾದವು. ಗಾಂಧೀಜಿ ಎಲ್ಲ ಗುಂಪುಗಳ ಚರ್ಚೆಯನ್ನು ಪೂರ್ತಿ ಕೇಳಿಸಿಕೊಂಡರು. ಮಧ್ಯಸ್ಥಿಕೆ ವಹಿಸಿದರು. ವಿರೋಧಿಗಳ ಗುಂಪಿಗೆ ಗಾಂಧೀಜಿ ಹೇಳಿದರು: ಇನ್ನು ಎರಡು ವರ್ಷಗಳೊಳಗಾಗಿ ನೆಹರೂ ರಿಪೋರ್ಟ್‌ನ್ನು ಸರಕಾರ ಜಾರಿಗೆ ತರದೆ ಇದ್ದರೆ, ನಾನು ತಕ್ಷಣ ಸ್ವರಾಜ್ಯದ ಬೇಡಿಕೆಗೆ ಸಹಕಾರ ನೀಡುತ್ತೇನೆ ಅಂತ ಆಶ್ವಾಸನೆ ನೀಡಿದರು. ಆದರೆ ಯುವಕರಿಗೆ ಸ್ವರಾಜ್ಯಕ್ಕೆ ಎರಡು ನಿಮಿಷ ತಡ ಮಾಡಿದರೂ ಅದನ್ನು ಸಹಿಸುವುದಕ್ಕಾಗುತ್ತಿರಲಿಲ್ಲ. ಆಗ ಮತ್ತಷ್ಟು ಚರ್ಚೆಗಳಾದವು. ಬಿಸಿ–ಬಿಸಿ ವಾದ–ವಿವಾದ ನಡೆಯಿತು. ಕೊನೆಗೆ ಎರಡು ವರ್ಷ ಎಂದಿದ್ದ ಗಡುವನ್ನು ಒಂದು

ವರ್ಷಕ್ಕೆ ಇಳಿಸಿದರು. ಎಲ್ಲಾ ಪಾರ್ಟಿಗಳೂ ನೆಹರೂ ರಿಪೋರ್ಟ್‌ನ್ನು ಕಾಂಗ್ರೆಸ್ ಅನುಮೋದಿಸಿದುವು. ಡಿಸೆಂಬರ್ ೩೧,೧೯೨೮ರ ಒಳಗಾಗಿ ಬ್ರಿಟಿಷ್ ಸಾಮ್ರಾಜ್ಯ 'ಸಂಸ್ಥಾನಿಕ ಸ್ವರಾಜ್ಯ'ವನ್ನು (ಡೊಮಿನಿಯನ್ ಸ್ಟೇಟಸ್) ಕೊಡದಿದ್ದರೆ, ಪೂರ್ಣ ಸ್ವರಾಜ್ಯದ ಪ್ರಸ್ತಾವವನ್ನು ಸ್ವೀಕರಿಸಲಾಗುವುದೆಂದು ಸ್ಪಷ್ಟಪಡಿಸಿದರು. ಜವಾಹರಲಾಲ್‌ಜೀ ಏನೋ ಈ ಪ್ರಸ್ತಾಪವನ್ನು ಒಪ್ಪಿಕೊಂಡರು. ಆದರೆ ಸುಭಾಷಚಂದ್ರ ಬೋಸ್ ಈ ವಿಳಂಬಕ್ಕೆ ಒಪ್ಪಲಿಲ್ಲ. ತುಂಬಿದ ಸಭೆಯಲ್ಲಿ ಗಾಂಧೀಜಿಯವರ ಈ ಪ್ರಸ್ತಾಪಕ್ಕೆ ಸುಭಾಷ್‌ಚಂದ್ರ ಬೋಸರು ಸೂಚಿಸಿದ್ದ ತಿದ್ದುಪಡಿಯ ಬಗ್ಗೆ ಮತದಾನ ನಡೆಸಿದರು. ಇದು ಕಾಂಗ್ರೆಸ್‌ನ ಸ್ಪಷ್ಟವಾದ ಪ್ರಜಾತಂತ್ರದ ಪ್ರಶಂಸೆಯೇ ಆಗಿತ್ತು. ಗಾಂಧೀಜಿಯಂತಹ ಸರ್ವೋಚ್ಚ ಮುಖಂಡರು ವೇದಿಕೆ ಮೇಲೆ ಕುಳಿತಿದ್ದರು. ೯೦೦ ಪ್ರತಿನಿಧಿಗಳು ಸುಭಾಷಚಂದ್ರ ಬೋಸರ ತಿದ್ದುಪಡಿಗೆ ಸಮರ್ಥನೆ ನೀಡಿದರು. ಗಾಂಧೀಜಿಯವರ ಪ್ರಸ್ತಾವ ೧೩೦೦ ಮತಗಳನ್ನು ಪಡೆದು ಅನುಮೋದಿತವಾಯಿತು. ಪಂಡಿತ ಮೋತಿಲಾಲ ನೆಹರೂ ಈಗ ಮೊದಲ ಬಾರಿಗೆ ಸ್ವಲ್ಪ ನಿಶ್ಚಿಂತರಾದರು. ಅವರು ಗಾಂಧೀಜಿಗೆ 'ಇಂದು ನೀವು ನನ್ನ ಮರ್ಯಾದೆ ಕಾಪಾಡಿದಿರಿ' ಎಂದರು.

ಬಿರುಸಿನ ತೇಜಸ್ವಿ ಯುವಕರಿಗೆ ಈ ಸಲಹೆ ಇಷ್ಟವಿರಲಿಲ್ಲವಾದರೂ ಜವಾಹರಲಾಲಜೀಗೆ ಗಾಂಧೀಜಿ ಹೀಗೆ ಮಧ್ಯಸ್ಥಿಕೆ ಮಾಡಿದ್ದು ಒಳ್ಳೆಯದಾಯಿತು, ಇಲ್ಲದಿದ್ದರೆ ಕಾಂಗ್ರೆಸ್ ಒಡೆದೇ ಹೋಗುತ್ತಿತ್ತು ಅಂತ ಅನ್ನಿಸಿತು. ಮುಂದಿನ ದಿನಗಳಲ್ಲಿ ಬ್ರಿಟಿಷ್ ಸರಕಾರಕ್ಕೆ ನೆಹರೂ ರಿಪೋರ್ಟ್‌ನ್ನು ಜಾರಿಗೆ ತರುವ ಇಚ್ಛೆ ಇರಲಿಲ್ಲವೆಂಬುದೂ ಸ್ಪಷ್ಟವಾಗಿ ತಿಳಿಯಿತು. ಈಗ ರಾಷ್ಟ್ರಾದ್ಯಂತ ಆಂದೋಳನ ಮಾಡುವುದೊಂದೇ ಉಪಾಯ ಉಳಿದಿದ್ದುದು, ಅದಕ್ಕೆ ಸಂಘಟಿತವಾದ ಕಾಂಗ್ರೆಸ್ ಬೇಕೇಬೇಕಾಗಿತ್ತು. ಅಂತಹ ಹೋರಾಟ ಗಾಂಧೀಜಿ ಇಲ್ಲದೆ ಹೇಗೆ ಆಗಲು ಸಾಧ್ಯವಿತ್ತು? ಜವಾಹರಲಾಲಜೀ ಕಾಂಗ್ರೆಸ್ ಸಚಿವ ಸ್ಥಾನಕ್ಕೆ ನೀಡಿದ ರಾಜಿನಾಮೆ ಪತ್ರವನ್ನು ಹಿಂದಕ್ಕೆ ಪಡೆದರು. ಅಧ್ಯಕ್ಷರಾಗಿದ್ದ ತಮ್ಮ ತಂದೆಯ ಆಶ್ರಯದಲ್ಲಿ ಕಾಂಗ್ರೆಸ್ ಕೆಲಸ ಮಾಡತೊಡಗಿದರು.

ಒಂದು ವರ್ಷದಲ್ಲಿ ಸರಕಾರಕ್ಕೆ ಪೂರ್ಣ ಸ್ವರಾಜ್ಯಕ್ಕೆ ಕರೆ ನೀಡಲು ಮನೆಯಲ್ಲಿ ಕುಳಿತು ಸಿದ್ಧತೆ ಮಾಡಲಾಗುತ್ತಿರಲಿಲ್ಲ. ಸರಿಯಾಗಿ ಸಿದ್ಧತೆ ಇಲ್ಲದೆ ಯಾವ ವಸ್ತು ಕೂಡ ಸಿಗುವುದಿಲ್ಲ. ಸ್ವರಾಜ್ಯದಂತಹ ಅಮೂಲ್ಯ ಸಂಪತ್ತನ್ನು ಪಡೆಯುವುದಕ್ಕಾಗಿ ಸಾಕಷ್ಟನ್ನೇ ಮಾಡಬೇಕಾಗಿತ್ತು. ಇಂತಹ ವಿಶಾಲ ದೇಶದ ಮೂವತ್ತು ಮೂರು ಕೋಟಿ ಜನರನ್ನು ಎಚ್ಚರಗೊಳಿಸಲು ೩೬೫ ದಿನಗಳು ಸಾಕಾಗುತ್ತಿರಲಿಲ್ಲ. ಆದರೂ ಯುವಕರು ಬಯಸಿದರು. ಅರುವತ್ತು ವರ್ಷ ವಯಸ್ಸಿನ ಗಾಂಧೀಜಿ ಸ್ವರಾಜ್ಯಕ್ಕೆ ಸಿದ್ಧತೆಯನ್ನು ಆರಂಭಿಸಿಬಿಟ್ಟರು. ದೇಶದ ಪ್ರತಿಯೊಂದು ಮೂಲೆಗೂ ಹೋಗಿ ಪ್ರಾಣಪಣದಿಂದ ಜನತಾ ಜನಾರ್ದನರನ್ನು ಜಾಗೃತಗೊಳಿಸತೊಡಗಿದರು. ಅಸ್ಸಾಂನ

ಕಾಜೀರಂಗಾದಿಂದ ಡಿಬ್ರೂಗಢ, ಜೋರಾಹಾಟ್‌ನಿಂದ ಆರಂಭಿಸಿ ಪಶ್ಚಿಮದ ವಾಯವ್ಯ ಮೂಲೆಯ ಕೋಹಾಟಬನ್ನು, ಜಲಾಲಾಬಾದ್, ಪೇಷಾವರ್ ಮತ್ತು ಉತ್ತರದಲ್ಲಿ ಪಂಜಾಬ್‌ನ ಸ್ವರ್ಣ ಮಂದಿರದಿಂದ ದಕ್ಷಿಣದಲ್ಲಿ ಕನ್ಯಾಕುಮಾರಿವರೆಗೆ ಗಾಂಧೀಜಿ ಆಸೇತು ಒಂದೇ ಸಮ ಪ್ರವಾಸ ಕೈಗೊಂಡರು. ರೈಲುಗಾಡಿ, ಮೋಟಾರು, ಎತ್ತಿನಗಾಡಿ, ಮುಂತಾದವು ಏನೂ ಇಲ್ಲದಿದ್ದರೆ ಕಾಲ್ನಡಿಗೆಯಲ್ಲಿ ಹೊರಟರು. ಆದರೆ ಎಲ್ಲೂ ನಿಲ್ಲಲಿಲ್ಲ. ಆ ಕಾಲದಲ್ಲಿ ರೇಡಿಯೋ, ಟೆಲಿಫೋನ್ ಏನೊಂದು ಇರಲಿಲ್ಲ. ರಾಷ್ಟ್ರಮಟ್ಟದ್ದೊಂದು ಪತ್ರಿಕೆ ಕೂಡ ಇರಲಿಲ್ಲ. ಆದರೆ ಜನರ ಬಾಯಿಂದ ಪೂರ್ಣ ಸ್ವರಾಜ್ಯದ ಈ ಸಂದೇಶ ಪುಟ್ಟ ಪುಟ್ಟ ೪–೫ ಗುಡಿಸಲುಗಳಿರುವ ಹಳ್ಳಿಗಳವರೆಗೂ ವಾಯುವೇಗದಲ್ಲಿ ಹರಡಿಕೊಂಡಿತು. ಬಾರಡೋಲಿ ಸತ್ಯಾಗ್ರಹದಿಂದ ವಾತಾವರಣ ನಿರ್ಮಾಣವಾಗಿಯೇ ಇತ್ತು. ಈಗ ಪೂರ್ಣ ಸ್ವರಾಜ್ಯದ ಸ್ವಪ್ನ ಪೂರ್ಣ ಸಾಕಾರಗೊಳ್ಳುವುದೆಂದು ಅನಿಸತೊಡಗಿತ್ತು. ಮುದುಕರು, ಹೆಂಗಸರು, ಮಕ್ಕಳು ಎಲ್ಲರೂ ತಮ್ಮ ನೂರಾರು ವರ್ಷಗಳಿಂದ ಕೂಡಿಕೊಂಡಿದ್ದ ಜಡತೆಯನ್ನು ಝಾಡಿಸಿ ಎದ್ದು ನಿಂತರು. ಸ್ವರಾಜ್ಯದ ಜೊತೆಗೇ ಅಸ್ಪೃಶ್ಯತಾ ನಿವಾರಣೆ, ಮದ್ಯ ನಿಷೇಧ, ಕೋಮು ಸೌಹಾರ್ದ ಮತ್ತು ಸ್ತ್ರೀಶಕ್ತಿ ಜಾಗೃತಿಯ ಮಹಾಮಂತ್ರವನ್ನು ಗಾಂಧೀಜಿ ಜನರಿಗೆ ಕಲಿಸುತ್ತಾ ಮುನ್ನಡೆದಿದ್ದರು. ೧೯೨೯ರ ಅಖಂಡ ಹಿಂದೂಸ್ತಾನದಲ್ಲಿ ಬ್ರಹ್ಮದೇಶ (ಬರ್ಮಾ) ಮತ್ತು ಶ್ರೀಲಂಕಾ ಕೂಡ ಸೇರಿಕೊಂಡಿದ್ದವು. ಅದರಿಂದ ರಂಗೂನ್ ಮತ್ತು ಇರಾವತಿ ನದಿಯ ದಡದ ಊರುಗಳವರೆಗೆ ಮತ್ತು ಲಂಕಾದಲ್ಲಿ ಕೊಲಂಬೋ, ಕ್ಯಾಂಡಿ ಮತ್ತು ಜಾಫನಾದಂತಹ ಚಿಕ್ಕ ಪುಟ್ಟ ದ್ವೀಪಗಳವರೆಗೆ ಗಾಂಧೀಜಿ ವಿಚಾರಗಳ ಪ್ರಚಾರ ಮಾಡುತ್ತಾ ತಲುಪಿದ್ದರು.

ಈ ಪ್ರವಾಸದಲ್ಲಿ ಜನಜಾಗೃತಿ ಮೂಡಿಸುವುದಷ್ಟೇ ಅಲ್ಲದೆ ಖಾದಿ ಪ್ರಚಾರದ ಕೆಲಸವೂ ನಡೆಯುತ್ತಿತ್ತು. ಇಡೀ ದೇಶದ ಪ್ರತಿಯೊಂದು ಜಿಲ್ಲೆಯ ಪ್ರಮುಖ ಹಳ್ಳಿಗಳಿಗೆ ಗಾಂಧೀಜಿ ಹೋಗಿ ಸ್ವತಃ ನಿಂತು ಥಾನುಗಟ್ಟಲೆ ಖಾದಿಯನ್ನು ಹರಾಜು ಹಾಕುತ್ತಿದ್ದರು. ಹೀಗೆ ಗಾಂಧೀಜಿ ಖಾದಿ ಕಾರ್ಯಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಸಂಗ್ರಹಿಸಿದರು. ಇವತ್ತಿಗೂ ಎಷ್ಟೋ ಜನರು ತಮ್ಮ ಬಳಿ ಮೋಹನದಾಸ ಕರಮಚಂದ ಗಾಂಧಿ ಹಸ್ತಾಕ್ಷರ ಮಾಡಿರುವ ರಸೀದಿಗಳನ್ನು ಸುರಕ್ಷಿತವಾಗಿಟ್ಟಿರುವ ಸಾಧ್ಯತೆ ಇದೆ. ಈ ಹಸ್ತಾಕ್ಷಾರದ ಆಸೆಯಿಂದ ಲಕ್ಷಾಂತರ ಮಂದಿ ಖಾದಿಯನ್ನು ಖರೀದಿಸಿ ಧರಿಸಿದರು. ಪ್ರತಿಯೊಂದು ದೊಡ್ಡ ಹಳ್ಳಿ ಮತ್ತು ಪಟ್ಟಣದಲ್ಲಿ ಗಾಂಧೀಜಿಗೆ ಜನರು ಚಿನ್ನ–ಬೆಳ್ಳಿ ಅಥವಾ ಶ್ರೀಗಂಧದ ಪೆಟ್ಟಿಗೆಗಳಲ್ಲಿ ಅಥವಾ ಫ್ರೇಂನಲ್ಲಿ ಸಜ್ಜುಗೊಳಿಸಿ ಮಾನಪತ್ರ ನೀಡುತ್ತಿದ್ದರು. ಬಾಪೂಜಿ ಅಂತೂ ಸನ್ಯಾಸಿಗಳು, ಅವರು ಈ ತೆರನಾದ ಯಾವ ಗೋಜಿಗೂ ಸಿಲುಕಿದವರಲ್ಲ. ಅವರ ನೆನಪಿನಲ್ಲಿ ಎಂದಾದರೂ ಒಂದು ಸಂಗ್ರಹಾಲಯವಾಗಲೆಂದವರು ಎಂದೂ ಆಶಿಸಿದದವರಲ್ಲ, ಈ ವಸ್ತುಗಳೆಲ್ಲಾ

ಅವರ ಲೋಕಪ್ರಿಯತೆಯ ಸಾಕ್ಷಿಗಳಾದಾವೆಂದು ಚಿಂತಿಸಲಿಲ್ಲ. ತಮ್ಮ ನಾಲ್ಕು ಗಂಡು ಮಕ್ಕಳು ಮತ್ತು ಮೊಮ್ಮಕ್ಕಳೆಲ್ಲರನ್ನೂ ಅವರು ಪ್ರೀತಿಸುತ್ತಿದ್ದರು. ಆದರೆ ಅವರಿಗಾಗಿಯೂ ಏನನ್ನಾದರೂ ಸಂಗ್ರಹಿಸಬೇಕೆಂಬ ಭಾವನೆಯೂ ಅವರಿಗಿರಲೇ ಇಲ್ಲ. ಆದ್ದರಿಂದ ಬಾಪೂಜಿ ಆ ಬೆಲೆಬಾಳುವ ಮಾನಪತ್ರಗಳನ್ನು ಮತ್ತು ಚಿನ್ನ–ಬೆಳ್ಳಿ ಶ್ರೀಗಂಧದ ಪೆಟ್ಟಿಗೆಗಳೊಂದಿಗೆ ಹೆಚ್ಚು ಬೆಲೆಗೆ ಹರಾಜು ಹಾಕುತ್ತಿದ್ದರು. ಗಾಂಧೀಜಿ ಕೈಯಿಂದ ಅಂತಹ ಬೆಲೆಬಾಳುವ ಪದಾರ್ಥಗಳನ್ನು ಕೊಳ್ಳಲು ಜನ ಪೈಪೋಟಿಯಿಂದ ಬೆಲೆ ಏರಿಸುತ್ತಿದ್ದರು. ಹರಾಜಿನ ಬೆಲೆ ಹೆಚ್ಚು ಹೆಚ್ಚಾಗುತ್ತಿತ್ತು. ಈ ಹಣವನ್ನೆಲ್ಲಾ ಖಾದಿ ಕೇಂದ್ರಗಳಿಗಾಗಿ ಉಪಯೋಗಿಸುತ್ತಿದ್ದರು. ಈ ರೀತಿ ೧೯೨೯ರಲ್ಲಿ ಗಾಂಧೀಜಿ ಒಂದೇ ಸಮ ೨೦–೨೧ ಗಂಟೆಗಳ ಕಾಲ ಕೆಲಸಮಾಡಿದರು. ಈ ಪ್ರವಾಸದಲ್ಲಿ ನಮ್ಮಜ್ಜಿ ಮತ್ತು ಮಹಾದೇವ ಕಾಕಾ ನಿರಂತರವಾಗಿ ಬಾಪೂಜಿ ಜೊತೆಗಿದ್ದರು.

ಆ ದಿವಸಗಳಲ್ಲಿ ಕೆಲಸ ಹೆಚ್ಚು, ಪ್ರವಾಸದ ಆಯಾಸಲು ನಿರಂತರವಾಗಿ ಭೇಟಿಯಾಗ, ಬರುವ ಜನ– ಇದರಿಂದ ಬಾಪೂಜಿಯ ರಕ್ತದೊತ್ತಡ ಏರಿತು. ಅವರಂತೂ ಔಷಧ ತೆಗೆದುಕೊಳ್ಳುತ್ತಿರಲಿಲ್ಲ. ಅದರಿಂದ ಪ್ರಾಕೃತಿಕ ಚಿಕಿತ್ಸೆ ಮಾಡಿಕೊಂಡು ಸರಿಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ನಿಯಮಿತವಾಗಿ ಬೆಳ್ಳುಳ್ಳಿ ತಿಂದರು. ಪ್ರತಿದಿನ ತಲೆಯ ಮೇಲೆ ಮಣ್ಣಿನ ಪಟ್ಟಿ ಕಟ್ಟಿದರು. ಮತ್ತು ನಮ್ಮಜ್ಜಿ ಪ್ರತಿ ದಿನ ದಿವಸಕ್ಕೆ ಎರಡು ಸಲ ಅವರ ತಲೆ ಮೇಲೆ, ಕಾಲ್ಗಳ ಮೇಲೆ ತುಪ್ಪ ಹಾಕಿ ಮಾಲೀಸು ಮಾಡುತ್ತಿದ್ದರು. ಆದರೆ ಬಾಪೂಜಿಯವರ ಜೀವನ ನಿರಂತರ ಸಂಘರ್ಷದಿಂದ ಕೂಡಿತ್ತಾದ್ದರಿಂದ ಸಾಯುವವರೆಗೂ ಅವರಿಗೆ ರಕ್ತದೊತ್ತಡದ ತೊಂದರೆ ಇದ್ದೇ ಇತ್ತು. ೧೯೨೯ರಲ್ಲಿ ಬೊಂಬಾಯಿಂದ ಪೂನಾಕ್ಕೆ ಹೋಗುತ್ತಿರುವಾಗ ಬಾಪೂಜಿಗೆ ಹೃದಯಾಘಾತವಾಯಿತು. ಡಾಕ್ಟರರು ಪೂರ್ತಿ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದರು. ಆದರೆ ಬಾಪೂಜಿಗೆ ಪೂರ್ಣ ವಿಶ್ರಾಂತಿ ಸಿಗಲು ಸಾಧ್ಯವಾಗುತ್ತಿರಲಿಲ್ಲ. ವಿಶ್ರಾಂತಿಯಲ್ಲೂ ಚರಖಾದಲ್ಲಿ ನೂಲು ತೆಗೆಯುತ್ತಿದ್ದರು. ನವಜೀವನಕ್ಕೆ ಲೇಖನಗಳನ್ನು ಬರೆಯುತ್ತಿದ್ದರು. ಮಾನಸಿಕವಾಗಿ ದೈಹಿಕವಾಗಿ ಶ್ರಮ ಕಡಿಮೆಯಾಗಲೇ ಇಲ್ಲ. ಅವರಿಗೆ ಅನಾರೋಗ್ಯ, ಅದರಿಂದ ಪೂನಾದಿಂದ ಅಹಮದಾಬಾದ್‌ಗೆ ಹೋಗಿ ವಿಶ್ರಾಂತಿ ಪಡೆಯಬೇಕೆಂದಿದ್ದರು. ಆದರೆ ಅಹಮದಾಬಾದಿನ ಭಯಂಕರವಾದ ಬಿಸಿಲು, ಅದರಲ್ಲಿ ಅವರ ಆರೋಗ್ಯ ಸುಧಾರಿಸಲು ಸಾಧ್ಯವೇ ಇರಲಿಲ್ಲ. ಆಗ ರಾಜಾಜಿ ಬಹಳ ದೂರದೃಷ್ಟಿಯಿಂದ ಬಾಪೂಜಿಯ ತಂಗಣೆಗೆ ಬೆಂಗಳೂರು ನಗರದ ಬಳಿ ಇದ್ದ ನಂದಿಬೆಟ್ಟದಲ್ಲಿ ವ್ಯವಸ್ಥೆ ಮಾಡಿದರು. ದಕ್ಷಿಣ ಭಾರತದ ಎಲ್ಲಾ ಕಾರ್ಯಕ್ರಮಗಳೂ ನಂದಿಬೆಟ್ಟದಿಂದ ನಡೆಯುತ್ತಿದ್ದವಾದ್ದರಿಂದ ಬಾಪೂಜಿಗೆ ಪ್ರವಾಸದ ಅಗತ್ಯವೇ ಮುಗಿದುಹೋಯಿತು. ಹೀಗೆ ಬಹಳ ಬುದ್ಧಿವಂತಿಕೆಯಿಂದ

ರಾಜಾಜಿ ಗಾಂಧೀಜಿಯನ್ನು ಅಹಮದಾಬಾದಿನ ಭಯಂಕರವಾದ ಬಿಸಿಲಿನಿಂದ ಉಳಿಸಿದರು. ಮೈಸೂರು ಪ್ರಾಂತ್ಯದಲ್ಲಿನ ಈ ತಂಗಣಿಯಿಂದ ಅವರಿಗೆ ವಿಶ್ರಾಂತಿ ಸಿಕ್ಕಿತು. ಬಾಪೂಜಿ ನಾಲ್ಕು ತಿಂಗಳ ಕಾಲ ಪೂರ್ತಿ ನಂದಿ ದುರ್ಗದಲ್ಲಿದ್ದರು. ಮತ್ತು ದಕ್ಷಿಣದ ಬಗ್ಗೆ ಅವರ ಪ್ರೀತಿ ಮತ್ತಷ್ಟು ಗಾಢವಾಯಿತು. ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್ ಮತ್ತವರ ಅಧಿಕಾರಿಗಳು ಸತತವಾಗಿ ಅವರನ್ನು ಭೇಟಿಮಾಡಲು ಬರುತ್ತಿದ್ದರು. ಸಮಾಜ ಸುಧಾರಣೆ, ವ್ಯವಸಾಯ, ಗೋರಕ್ಷಣೆ, ಶಿಕ್ಷಣ ಮತ್ತು ಖಾದಿ ಕುರಿತು ಚರ್ಚೆ ಮಾಡುತ್ತಿದ್ದರು. ಮೈಸೂರು ಮಹಾರಾಜರು ಬಾಪೂಜಿಯ ಸಲಹೆಗಳನ್ನು ಪರಿಪಾಲಿಸಿದರು. ಈ ಸುಧಾರಣಾ ನೀತಿಯಿಂದ ಮೈಸೂರು ರಾಜ್ಯ ದೇಶದ ಮಿಕ್ಕ ಕ್ಷೇತ್ರಗಳಿಗಿಂತಲೂ ಹೆಚ್ಚು ನ್ಯಾಯಪೂರ್ಣವಾಗಿತ್ತು. ಅದರಿಂದ ಅಲ್ಲಿಯ ಪ್ರಜೆಗಳೂ ಹೆಚ್ಚು ಸುಖದಿಂದಿದ್ದರು.

ಇದೇ ಸಂದರ್ಭದಲ್ಲಿ ಒಂದು ಘಟನೆಯನ್ನು ಉಲ್ಲೇಖಿಸಬೇಕು. ಬಾಪೂಜಿಯವರ ಗುಂಪಿಗೆ ಮನೋರಂಜನೆ ನೀಡಬೇಕೆಂದು ರಾಜಾಜಿಯವರು ವಿಶೇಷವಾದ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು. ಮೈಸೂರು ರಾಜ್ಯ ಬಹಳ ಸುಂದರವಾಗಿದೆ. ಸುಂದರವಾದ ಪ್ರೇಕ್ಷಣೀಯ ಸ್ಥಾನಗಳೂ ಬಹಳ ಇವೆ. ಒಂದು ದಿನ ಶರಾವತಿ ನದಿಯ ಪ್ರಸಿದ್ಧ ಜಲಪಾತ ಗೇರುಸೊಪ್ಪೆಗೆ ಹೋಗುವ ಕಾರ್ಯಕ್ರಮ ಏರ್ಪಡಿಸಿದರು. ಕಾಕಾ ಸಾಹೇಬ್ ಮುಂತಾದ ಕೆಲವರು ಒಂದು ದಿವಸದ ಆ ಯಾತ್ರೆಗೆ ಹೊರಡಲೂ ಸಿದ್ಧವಾದರು. ಬಾಪೂಜಿಯನ್ನವರು ೯೦೦ ಅಡಿ ಎತ್ತರದಿಂದ ಬೀಳುವ ಆ ಪ್ರಪಾತ ನೋಡಲು ನೀವು ಬನ್ನಿ ಎಂದು ಬಲವಂತ ಮಾಡಿದರು. ಗಾಂಧೀಜಿ ಅದಕ್ಕೆ 'ಅದರಲ್ಲಿ ನೋಡುವುದೇನಿದೆ? ಗೇರುಸೊಪ್ಪೆಗಿಂತ ಎತ್ತರದ ಆಕಾಶದಿಂದ ಪ್ರತಿದಿನವೂ ಮಳೆಯ ಜಲಪಾತವಾಗುತ್ತಲೇ ಇರುತ್ತದೆ' ಎಂದು ಉತ್ತರಿಸಿದರು. ಆಗ ರಾಜಾಜಿ 'ಕೊನೆಯ ಪಕ್ಷ ಮಹಾದೇವ ದೇಸಾಯಿಗೆ ಈ ಪಿಕ್‌ನಿಕ್‌ಗೆ ಹೋಗಲು ಅನುಮತಿ ನೀಡಿ' ಎಂದರು.

ಬಾಪೂಜಿ ತಕ್ಷಣ ಹೇಳಿದರು. 'ಮಹಾದೇವನ ಗೇರುಸೊಪ್ಪೆ ನಾನಿದ್ದೇನಲ್ಲ!' ಎಂದು

ನಿಜವಾಗಿ ಮಹಾದೇವ ಕಾಕಾ ಗೇರುಸೊಪ್ಪೆ ನೋಡಲು ಹೋಗಲಿಲ್ಲ. ಮಹಾದೇವ ಕಾಕಾರ ಮಟ್ಟಿಗೆ ಸಮಸ್ತ ಬ್ರಹ್ಮಾಂಡವೇ ಬಾಪೂಜಿ ಚರಣಗಳಲ್ಲಿ ಅಡಗಿತ್ತು.

* * * *

# ೧೭. ಪೂರ್ಣ ಸ್ವರಾಜ್ಯ ಮತ್ತು ಉಪ್ಪಿನ ಸತ್ಯಾಗ್ರಹ

೧೯೨೯ರಲ್ಲಿ ಕಾಂಗ್ರೆಸ್ ಅಧಿವೇಶನ ಲಾಹೌರಿನಲ್ಲಿ ನಡೆಯಿತು. ಡಿಸೆಂಬರ್ ೩೧ಕ್ಕೆ ಕಲ್ಕತ್ತಾ ಅಧಿವೇಶನದಲ್ಲಿ ಮಂಡಿಸಿದ್ದ ಅವಧಿ ಮುಗಿದುಹೋಗಲಿತ್ತು. ಆದರೆ ಲಾರ್ಡ್ ಇರ್ವಿನ್‌ಗೆ ಹಿಂದೂಸ್ತಾನಕ್ಕೆ ವಸಾಹತು ರಾಜ್ಯದ ದರ್ಜೆಯನ್ನು ನೀಡುವ ಉದ್ದೇಶ ಇರಲಿಲ್ಲ. ಐದನೆಯ ಜಾರ್ಜ್‌ನ ವೈಭವಕ್ಕೆ ಅದರಿಂದ ಕೊರತೆ ತರುವ ಇಷ್ಟ ಅವನಿಗಿರಲಿಲ್ಲ. ಜಲಿಯನ್ ವಾಲಾಬಾಗ್‌ನ ಘಟನೆ ನಡೆದು ಪೂರ್ತಿ ಹತ್ತು ವರ್ಷ ಕಳೆದ ಮೇಲೆ ಪಂಜಾಬ್‌ನಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯುತ್ತಿತ್ತು. ಇದರಲ್ಲಿ ಪೂರ್ಣ ಸ್ವರಾಜ್ಯದ ಪ್ರಸ್ತಾವ ಅಂಗೀಕೃತವಾಗಬೇಕಾಗಿತ್ತು. ಸ್ವರಾಜ್ಯಕ್ಕಾಗಿ ಹೋರಾಟ ಮಾಡುವಾಗ ಗಾಂಧೀಜಿ ಕಾಂಗ್ರೆಸ್‌ಗೆ ನೇತೃತ್ವ ನೀಡಿದರೆ ಸರಿಯಾಗಿರುತ್ತೆ ಅಂತ ಪ್ರತಿನಿಧಿಗಳು ಇಷ್ಟಪಡುತ್ತಿದ್ದರು. ಆದರೆ ಬಾಪೂಜಿ ಈ ಇನ್ನೊಂದು ವಿಶೇಷ ಹೊಣೆಯನ್ನು ತಾವೇ ಹೊರುವುದಕ್ಕೆ ಇಷ್ಟಪಡುತ್ತಿರಲಿಲ್ಲ. ಕೊನೆಯವರೆಗೂ ಅವರಿಗೆ ಒತ್ತಾಯ ಹಾಕಿ ಚರ್ಚೆ ನಡೆಸುತ್ತಲೇ ಇದ್ದರು. ಆಗ ಗಾಂಧೀಜಿ ಜವಾಹರಲಾಲರ ಹೆಸರನ್ನು ಪಾಸು ಮಾಡಿಸಿದರು. ಜವಾಹರಲಾಲಜೀಯನ್ನು ಕೇಳಲೂ ಇಲ್ಲ. ಅವರಿಗೆ ಬಹಳ ಮುಜುಗರವಾಯಿತಂತೆ, ಕೊನೆಗೆ ಅವರು ಮುಖಂಡರಾಗಲೇಬೇಕಾಯಿತು. ಹೀಗೆ ಕಲ್ಕತ್ತಾ ಕಾಂಗ್ರೆಸ್‌ನ ಅಧ್ಯಕ್ಷ ಅಪ್ಪ ಮೋತಿಲಾಲ ಆದರೆ, ೧೯೨೯ರಲ್ಲಿ ಲಾಹೌರ್ ಕಾಂಗ್ರೆಸ್‌ನ ಅಧ್ಯಕ್ಷನಾಗಿ ಮಗ ಜವಾಹರಲಾಲ ಚುನಾಯಿತರಾದರು. ಮೊದಲ ಸಾರಿ ದೇಶ ಪ್ರಪಂಚ ಎರಡೂ 'ಬಾಪ್ ಸೆ ಬಡಾ ಸವಾಯ' (ಗುರುವುನು ಮಿಂಚಿನ ಶಿಷ್ಯುಡು ಅನ್ನುವ ಹಾಗೆ) ಅನ್ನುವ ಮಾತು ಸಾರ್ಥಕವಾಯಿತು.

ಡಿಸೆಂಬರ್ ೩೧, ಲಾಹೌರ್‌ನಲ್ಲಿ ನಡುಗಿಸುವ ಚಳಿಯಲ್ಲಿ ಸೂರ್ಯೋದಯದ ಸಮಯ, ರಾವಿ ನದಿಯ ದಡದಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ ಮಹಾಸಮಿತಿ ಸ್ವತಂತ್ರ ಭಾರತದ ಘೋಷಣೆಯನ್ನು ಹಾಕಿ ಆಜ಼ಾದ್ ಹಿಂದ್‌ನ ತಿರಂಗಾ ಝಂಡಾವನ್ನು ದೇಶದ ಯುವ ನೇತಾರ ಹಾರಿಸಿದರು. ಲಕ್ಷಾಂತರ ಜನ ಬಾಲಸೂರ್ಯನ ಕೋಮಲವಾದ ಕಿರಣಗಳನ್ನು ಸಾಕ್ಷಿ ಮಾಡಿಕೊಂಡು 'ವಂದೇ ಮಾತರಂ' ಹಾಡಿದರು ಮತ್ತು ಪೂರ್ತಿ ನಿಷ್ಠೆಯಿಂದ ಉಲ್ಲಾಸದಿಂದ ಧ್ವಜ ವಂದನೆ ಮಾಡಿದರು. ಎಲ್ಲರ ಹೃದಯಗಳಲ್ಲೂ ಸ್ವಾತಂತ್ರ್ಯದ

ಸುಖಕರವಾದ ಉನ್ಮಾದ ಇತ್ತು. ಒಂದು ಅವ್ಯಕ್ತವಾದ ಗಾಂಭೀರ್ಯ ಕೂಡ ಇತ್ತು. ಸ್ವರಾಜ್ಯವನ್ನು ಘೋಷಿಸಿದ್ದಾಯಿತು, ಆದರೆ ಬ್ರಿಟಿಷ್ ಸಾಮ್ರಾಜ್ಯದ ಆಳ್ವಿಕೆಯನ್ನು ಹೊರದೂಡು ಬೇಕಾಗಿತ್ತುಲ್ಲ. ಮುಂದೆ ಬರಲಿದ್ದ ಯುದ್ಧ ಭಯಂಕರವಾಗಿರಲಿತ್ತು. ತಮ್ಮ ಪ್ರೀತಿಯ ಜನರನ್ನು ತೊರೆದು, ಜೈಲಿಗೆ ಹೋಗಿ, ಮನೆಯ ಸುಖ, ಪ್ರಿಯ ಜನರ ಅಗಲಿಕೆ ಕೂಡಿ ಉದಾಸವಾದ ಹಗಲು–ರಾತ್ರಿಗಳನ್ನು ಕಳೆಯಬೇಕಾಗಿತ್ತು. ಪುನಃ ಲಾಠಿ ಪ್ರಹಾರಗಳಿಂದ ನಾಶ ಆಗಲೇಬೇಕಾಗಿತ್ತು. ಆದರೆ ಇಷ್ಟೆಲ್ಲಾ ಬೆಲೆ ತೆತ್ತಾದರೂ ಸ್ವಾತಂತ್ರ್ಯ ಬೇಕೇ ಬೇಕಾಗಿತ್ತು.

ಗಾಂಧೀಜಿ ಸ್ವರಾಜ್ಯದ ಪ್ರಸ್ತಾವವನ್ನು ಪಾಸು ಮಾಡಿಸಿದರು. ಬಹಳ ಉತ್ಸಾಹದಿಂದ, ಧೀರ–ಗಂಭೀರವಾಗಿ ಭಾಷಣಗಳನ್ನು ಮಾಡಿ ಮುಗಿಸಿ, ನಂತರದಲ್ಲಿ ಪ್ರಸ್ತಾವ ಒಟ್ಟಾರೆಯಾಗಿ ಅಂಗೀಕೃತವಾಯಿತು. ಡಿಸೆಂಬರ್ ೩೧ರ ರಾತ್ರಿ ಕಳೆದ ತಕ್ಷಣ, ಹೊಸ ವರ್ಷದ ಮೊದಲ ದಿನ ಆರಂಭವಾಯಿತು. ಆಗ ಯಾವ ತೊಂದರೆಯೂ ಇಲ್ಲದೆ, ಸುಲಭವಾಗಿ ಅದೇ ಸಮಯಕ್ಕೆ ಸರಿಯಾಗಿ ಸ್ವರಾಜ್ಯದ ಈ ಪ್ರಸ್ತಾವ ಚಪ್ಪಾಳೆಗಳ ಒಟ್ಟು ಶಬ್ದದೊಂದಿಗೆ ಅನುಮೋದನೆ ಪಡೆಯಿತು. ಈ ಪ್ರಸ್ತಾವ ಅಂಗೀಕೃತವಾದೊಡನೆ ಕಾಂಗ್ರೆಸ್ ಅಧಿವೇಶನದಲ್ಲಿ ಕುಳಿತುಕೊಂಡು ಗಾಂಧೀಜಿ ಪೂರ್ಣ ಸ್ವರಾಜ್ಯದ ಪ್ರತಿಜ್ಞೆಯನ್ನು ಬರೆದೇಬಿಟ್ಟರು. ಅಧಿವೇಶನ ಮುಗಿದ ಮೇಲೆ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿದ ನಂತರ ಒಂದು ನಿಶ್ಚಯಿಸಿದ ದಿನ ಈ ಪ್ರತಿಜ್ಞೆಯನ್ನು ಸಾರ್ವಜನಿಕವಾಗಿ ಓದಬೇಕು ಎಂದೂ ನಿಶ್ಚಯಿಸಿದರು. ಮೋತಿಲಾಲರು ಈ ಅತಿ ಗಂಭೀರವಾದ ಪ್ರತಿಜ್ಞೆ ತೆಗೆದುಕೊಳ್ಳುವುದಕ್ಕೆ ವಸಂತ ಪಂಚಮಿಯ ಸದಾ ಶುಭ ಮುಹೂರ್ತ ಸರಿಯಾಗಿರುತ್ತದೆ, ಅದರಿಂದ ಆ ದಿನ ಬೆಳಿಗ್ಗೆ ೧೦ ಗಂಟೆಗೆ ದೇಶದಲ್ಲಿ ಎಲ್ಲಾ ಕಡೆಗಳಲ್ಲೂ ಒಂದೇ ಸಮಯ, ಒಟ್ಟಿಗೆ ಓದಬೇಕು ಅಂತ ಸಲಹೆ ನೀಡಿದರು. ಎಲ್ಲರಿಗೂ ಈ ವ್ಯವಸ್ಥೆ ಸರಿಯಾಗಿರುತ್ತದೆ ಅಂತ ಅನ್ನಿಸಿತು. ೧೯೩೦ರ ವಸಂತ ಪಂಚಮಿ ಜನವರಿ ೨೬ ರಂದು ಬರಲಿತ್ತು. ಅದರಿಂದ ಜನವರಿ ೨೬ ಪೂರ್ಣ ಸ್ವರಾಜ್ಯದ ಪವಿತ್ರವಾದ ಬೇಡಿಕೆಯ ಶುಭದಿನವೆಂದು ಘೋಷಿಸಿದರು. ಹೀಗೆ ಆಗಿನಿಂದ ಜನವರಿ ೨೬ ರಂದು ನಮ್ಮ ದೇಶದ ಇತಿಹಾಸದ ಮಹತ್ವಪೂರ್ಣ ದಿನಾಂಕವಾಯಿತು. ಆ ದಿನವೇ ಸ್ವಾತಂತ್ರ್ಯ ಪಡೆಯುವ ಪ್ರತಿಜ್ಞೆಯನ್ನು ತೆಗೆದುಕೊಂಡರು.

ಲಾಹೌರನ್ ಗಡಿನಾಡಿನ (ಫ್ರಾಂಟಿಯರ್) ಒಂದು ದೊಡ್ಡ ಸಂಘದ ಮುಖಂಡ ಅಬ್ದುಲ್ ಗಫಾರ್ ಖಾನ್ ಆಗಿದ್ದರು. ಅವರನ್ನು ಮುಂದಿಟ್ಟುಕೊಂಡು ಈ ಸಂಘ ಮೊದಲ ಬಾರಿಗೆ ಕಾಂಗ್ರೆಸ್‌ನ ಈ ಅಧಿವೇಶನದಲ್ಲಿ ಭಾಗವಹಿಸಿತು. ಉದಾತ್ತ ಸ್ವಭಾವದ ಸಶಕ್ತರಾದ ಈ ಯುವಕರು ಸ್ವರಾಜ್ಯ ಬೇಡುತ್ತಿದ್ದ ರೀತಿ ಆಕರ್ಷಕವಾಗಿತ್ತು. ಅವರು ಬಹಳ ಕಡಿಮೆ ಮಾತನಾಡುತ್ತಿದ್ದರು. ಚರ್ಚೆ–ವಿವಾದದಲ್ಲಿ

ತೊಡಗಿಸಿಕೊಳ್ಳುತ್ತಿರಲಿಲ್ಲ. ಆದರೆ ಮಾಡಬೇಕಾದದ್ದನ್ನು ಸುಮ್ಮನೆ ಮಾಡುತ್ತಿದ್ದರು. ಮೊದಲ ಬಾರಿಗೆ ಈ ದೂರದ ಗಡಿನಾಡಿನ ಈ ಯುವಕರಿಗೆ ಅಖಂಡ ಭಾರತದ ಅನುಭವವಾಯಿತು. ದರ್ಶನ ಆಯಿತು. ಕೇರಳ ಮತ್ತು ಮದ್ರಾಸ್‌ನ ಪ್ರತಿನಿಧಿಗಳು ಕೂಡ ಈ ಪಠಾನರ ಸಂಬಂಧೀಕರಾಗಿದ್ದರೇನೋ ಅನ್ನುವ ರೀತಿ ಭಾವನೆಗಳು ಬೆಸೆದುಹೋದವು.

ಲಾಹೌರ್ ಕಾಂಗ್ರೆಸ್ ಅಧಿವೇಶನ ಮುಗಿಯಿತು. ಆನಂತರ ಮೋತಿಲಾಲರು ಸ್ವರಾಜ್ಯ ಪಾರ್ಟಿಯ ಎಲ್ಲಾ ಮಂತ್ರಿಗಳು, ಕೇಂದ್ರೀಯ ವಿಧಾನ ಸಭೆಯ ಸದಸ್ಯರು ರಾಜೀನಾಮೆ ನೀಡಿ ಸರಕಾರದಿಂದ ಹೊರಕ್ಕೆ ಬರುವಂತೆ ಆದೇಶ ಹೊರಡಿಸಿದರು. ಮೂರು ನಾಲ್ಕು ಜನರನ್ನು ಬಿಟ್ಟು ಮಿಕ್ಕೆಲ್ಲರೂ ಮಂತ್ರಿ ಪದವಿಗೆ ರಾಜೀನಾಮೆ ನೀಡಿದರು. ಕಾಂಗ್ರೆಸ್ ಸ್ವಾತಂತ್ರ್ಯವನ್ನು ಘೋಷಿಸಿತ್ತು. ಆದರೆ ದೇಶ ಇದಕ್ಕೆ ಹೇಗೆ ಪ್ರತಿಕ್ರಿಯಿಸುತ್ತದೆ, ಈ ಘೋಷಣೆಯನ್ನು ದೇಶದ ಜನ ಹೇಗೆ ಸ್ವಾಗತಿಸುತ್ತಾರೆ ಅಥವಾ ಹೋರಾಟ ಎಲ್ಲಿಂದ ಶುರು ಮಾಡುವುದು ಅಂತ ಏನೊಂದು ಯಾರಿಗೂ ಗೊತ್ತಿರಲಿಲ್ಲ.

ಬಾಪೂಜಿ ತಮ್ಮ ಭಾಷಣದಲ್ಲಿ ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧವಾದ ಅಧಿಕಾರವಷ್ಟೇ ಅಲ್ಲ, ಅದು ನಮ್ಮ ಪವಿತ್ರ ಕರ್ತವ್ಯ ಕೂಡ. ಸ್ವಾತಂತ್ರ್ಯ ಸಿಗುವವರೆಗೂ ಹಿಂದೂಸ್ತಾನಿಗಳ ಪುರುಷತ್ವಕ್ಕೆ ಒಂದು ಕಳಂಕ ಅಂಟಿಕೊಂಡಿರುತ್ತದೆ, ಈ ಕಳಂಕ ಮಾನವನ ಸನ್ಮಾನ, ಮರ್ಯಾದಾಭಂಗ ಆಗಿರುತ್ತದೆ, ಅದರಿಂದ ಅಸಹನೀಯವಾದದ್ದು' ಅಂತ ಹೇಳಿದ್ದರು.

ಲಾಹೌರ್ ಕಾಂಗ್ರೆಸ್ ಅಧಿವೇಶನ ಮುಗಿಯಿತು. ಜನರೆಲ್ಲಾ ತಮ್ಮ ಊರುಗಳಿಗೆ ಹಿಂದಿರುಗಿದರು. ದೇಶದಲ್ಲಿ ಎಲ್ಲಾ ಕಡೆ ಸಹಜವಾಗಿ ಒಂದು ಉತ್ಸಾಹ ಸ್ಫೂರ್ತಿ ಅನುಭವಕ್ಕೆ ಬಂತು. ಹಳ್ಳಿಗಳಲ್ಲಿ, ಮನೆಗಳಲ್ಲಿ ಜನ ೨೬ ಜನವರಿ ೧೯೩೦ರಂದು ಸ್ವಾತಂತ್ರ್ಯ ದಿನಾಚರಣೆ ಮಾಡಿದರು. ಗಂಭೀರವಾಗಿ ಶಾಂತಿಯಿಂದ ಪ್ರತಿಜ್ಞೆ ತೆಗೆದುಕೊಂಡರು : "ಗುಲಾಮಗಿರಿಯನ್ನು ಸಹಿಸುವುದು, ದೇವರು ಮತ್ತು ದೇಶಕ್ಕೆ ದ್ರೋಹ ಬಗೆದಂತೆ, ಬ್ರಿಟಿಷ್ ಸಾಮ್ರಾಜ್ಯದ ಆಶ್ರಯದಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ ದೇಶ ಶೋಷಿತವಾಗಿದೆ. ಸಾಮಾಜಿಕ ಸಾಮ್ರಾಜ್ಯ ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಪತನವಾಗಿದೆ. ಆದ್ದರಿಂದ ಪೂರ್ತಿ ಸ್ವರಾಜ್ಯ ಸಿಗುವವರೆಗೂ ನಾವು ಈ ಅಧಮರ ಆಳ್ವಿಕೆಯ ಜೊತೆ ಅಸಹಕಾರ ಮಾಡುತ್ತೇವೆ ಮತ್ತು ಕಾನೂನಿನ ಸವಿನಯ ಭಂಗ (ಮುರಿಯುತ್ತೇವೆ) ಮಾಡುತ್ತೇವೆ."

ಈ ಪ್ರತಿಜ್ಞೆ ತೆಗೆದುಕೊಂಡಾಗ ಯಾರೂ ಭಾಷಣ ಮಾಡಿರಲಿಲ್ಲ. ಈ ಸಂದರ್ಭದಲ್ಲಿ ಮಾತನಾಡಿದ್ದರೆ ಆ ಮಾತುಗಳಿಂದ ಗಾಂಭೀರ್ಯದಲ್ಲಿ ಕೊರತೆ ಉಂಟಾಗುತ್ತಿತ್ತು. ಈಗ ಕರ್ತವ್ಯವನ್ನು ಮಾತ್ರ ಮಾಡಬೇಕಾಗಿತ್ತು. ಜಂಬ ಕೊಚ್ಚಿಕೊಳ್ಳದೆ,

ಮಾತನಾಡದೆಯೇ ಅದು ಚೆನ್ನಾಗಿ ಆಗುತ್ತದೆ. ಸ್ವಾತಂತ್ರ್ಯ ಸಿಗುವವರೆಗೂ ಪ್ರಾಣವನ್ನು ಮುಡಿಪಾಗಿಟ್ಟು ಸತ್ಯಾಗ್ರಹ ಮಾಡಿ, ಅವಕಾಶ ಬಂದಾಗ ಸಂತೋಷದಿಂದ ಸಾವನ್ನು ಅಪ್ಪಿಕೊಂಡು ತೋರಿಸಬೇಕಾಗಿತ್ತು. ಇಂತಹ ದೃಢ ನಿಶ್ಚಯದ ಪುರುಷಾರ್ಥದಿಂದ ಮಾತ್ರ ಸ್ವಾತಂತ್ರ್ಯ ಸಿಗಬೇಕು ಎಂಬುದನ್ನು ಪ್ರತಿಯೊಬ್ಬ ಭಾರತದ ನಿವಾಸಿಯೂ ಅರ್ಥಮಾಡಿಕೊಂಡಿದ್ದ. ಅದರಿಂದ ಮಾತಿನ ಉಪಯೋಗ ಇಲ್ಲಿರಲಿಲ್ಲ.

ಲಾಹೌರ್ ಕಾಂಗ್ರೆಸ್ ಮುಗಿದ ನಂತರ ನಾಯಕರುಗಳೆಲ್ಲರೂ ತಮ್ಮ ಕ್ಷೇತ್ರಗಳಿಗೆ ಹಿಂದಿರುಗಿದರು. ಆದರೆ ಅವರಲ್ಲಿ ಅತಿ ದೊಡ್ಡ ಮುಖಂಡರು ಕೂಡ ಸರಕಾರವನ್ನು ಯಾವಾಗ, ಹೇಗೆ, ಎಲ್ಲಿಂದ ವಿರೋಧಿಸುವುದಕ್ಕೆ ಶುರು ಮಾಡಬೇಕು ಎಂಬ ಕಲ್ಪನೆ ಕೂಡ ಮಾಡಿರಲಿಲ್ಲ. ಸಾಮಾನ್ಯವಾಗಿ ಈ ತರಹ ಮೂಲದ ಸಮಸ್ಯೆಗಳ ಹೊರೆಯನ್ನು ಗಾಂಧೀಜಿ ಮೇಲೆ ಹೊರಿಸುತ್ತಿದ್ದರು. ಗಾಂಧೀಜಿ ಯಾವುದಾದರೂ ಉಪಯೋಗಕರವಾದ ಮಾರ್ಗವನ್ನು ಹುಡುಕಿ ತೆಗೆಯುತ್ತಾರೆ ಎಂದು ನಾಯಕರು ಕಾರ್ಯಕರ್ತರುಗಳೆಲ್ಲರಿಗೂ ಗೊತ್ತಿತ್ತು. ಬಾಪೂಜಿಗೆ ತಮ್ಮ ದೇಶ, ಮತ್ತು ದೇಶದ ಜನರ ವಿಷಯ ಚೆನ್ನಾಗಿ ಗೊತ್ತಿತ್ತು. ಜೊತೆಗೆ ಅವರು ಸತ್ಯದ ಮಾರ್ಗ ಹುಡುಕುವುದರಲ್ಲಿ ನಿರಂತರವಾಗಿ ತೊಡಗಿಕೊಂಡಿರುತ್ತಿದ್ದರು. ಈ ಒಂದೇ ದೃಷ್ಟಿಯಿಂದ ಅವರು ಎಲ್ಲ ಪ್ರಶ್ನೆಗಳನ್ನು ಪರಿಹರಿಸುತ್ತಿದ್ದರು. ೨೬ ಜನವರಿ ೧೯೩೦ ರಂದು ದೇಶದ ಜನರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಶಪಥ ಮಾಡಿದರು. ಆದರೆ ವಿದೇಶಿಗಳ ಆಳ್ವಿಕೆಯನ್ನು ಖಂಡಿಸುವುದು ಇನ್ನೂ ಬಾಕಿ ಇತ್ತು. ಬರಿಯ ಬುದ್ಧಿಜೀವಿಗಳನ್ನಿಟ್ಟುಕೊಂಡು ಇಂತಹ ಹೋರಾಟ ನಡೆಸುವುದಕ್ಕಾಗುತ್ತಿರಲಿಲ್ಲ. ದೇಶದ ಮೂವತ್ತಮೂರು ಕೋಟಿ ಜನರಲ್ಲಿ ಮೂರು ಲಕ್ಷ ಜನ ಮಾತ್ರ ಓದು–ಬರಹ ಕಲಿತಿದ್ದರು. ಅದರಿಂದ ಈ ಆಂದೋಳನ ಎಲ್ಲರಿಗೂ ಸೇರಿ, ಎಲ್ಲರನ್ನೂ ಸೇರಿಸಿಕೊಂಡು ನಡೆಸಬೇಕಾಗಿತ್ತು. ದೇಶದ ಕಿರಿಯ ನಾಗರಿಕ ಕೂಡ ಈ ಹೋರಾಟದ ಮೈದಾನದ ಮೊದಲ ಪಂಕ್ತಿಯ ಸೈನಿಕನಾಗಬೇಕು ಅನ್ನುವುದು ಸತ್ಯಾಗ್ರಹ ಸಂಗ್ರಾಮದ ಉದ್ದೇಶವಾಗಿತ್ತು. ಇಂತಹ ಧರ್ಮಯುದ್ಧದಲ್ಲಿ ಸ್ವಯಂಸೇವಕನಾದವನಿಗೆ ಸತ್ಯಾಗ್ರಹದ ಗುರಿ ಏನು, ಅದರ ರೀತಿ–ನೀತಿ ಏನು, ಅದರಲ್ಲಿ ತನ್ನ ಕರ್ತವ್ಯ ಏನು ಅಂತ ಸ್ಪಷ್ಟವಾಗಿ ಅರ್ಥವಾಗಿರಬೇಕು. ಮುಖಂಡರು ಜೈಲಿಗೆ ಹೋದಾಗಲು ತಾನು ಹೋರಾಟವನ್ನು ಮುಂದುವರಿಸಿಕೊಂಡು ಹೋಗುವಂತಿರಬೇಕು. ಸ್ವಾತಂತ್ರ್ಯ ಹೋರಾಟ ಸಂಸತ್ತು ಅಥವಾ ಕಛೇರಿ ಹೋರಾಟವಾಗಿರಲಿಲ್ಲ. ಆದುದರಿಂದ ಅದು ವಿಧಿವತ್ತಾದ, ಕಾನೂನಿನ ಪಿಷ್ಟ ಪೇಷಣದಿಂದ ಲಕ್ಷ್ಯಕ್ಕೆ ತಲಪುವುದಾಗಿರಲಿಲ್ಲ. ಬಹಳ ಕಠಿಣವಾದ ಸಮಸ್ಯೆಗಳಿಗೂ ಬಹಳ ನೇರವಾದ ಮತ್ತು ಸರಳ ಪರಿಹಾರವನ್ನು ಕಂಡು ಹಿಡಿಯುವ ವಿಶೇಷ ಯೋಗ್ಯತೆ ಬಾಪೂಜಿಗಿತ್ತು. ಅದರಿಂದ ಭ್ರಮೆ ಹುಟ್ಟುವ ಸಾಧ್ಯತೆ ಇರುತ್ತಲೇ ಇರಲಿಲ್ಲ. ಒಂದು ದಿನ ಮಲಗಿರುವ ಹಾಗೆಯೇ ಸಾಲ್ಟ್ ಕಮೀಷನ್‌ನ ರಿಪೋರ್ಟ್‌ನ್ನ ಓದುತ್ತಿರುವಾಗ ಉಪ್ಪಿನ ಮೇಲೆ ಎಂತೆಂತಹ ವ್ಯಾಪಕವಾದ ಟ್ಯಾಕ್ಸ್ ಹಾಕುತ್ತಾರೆ

ಅನ್ನುವದರ ವಿವರಣೆ ಓದಿದರು. ಒಂದು ಬೊಗಸೆಯಷ್ಟು ಸಮುದ್ರದ ನೀರನ್ನು ಕೂಡ ಮನೆಗೆ ತೆಗೆದುಕೊಂಡು ಹೋಗಿ ಅದರಿಂದ ಉಪ್ಪು ಮಾಡಿದರೂ ಅಪರಾಧವಾಗುತ್ತದೆಂದು ಈ ವರದಿಯಿಂದ ತಿಳಿಯಿತು. ಬಡಪಾಯಿಗಳಾದ ಬೆಸ್ತರಿಗೆ ಸಮುದ್ರದ ಅಂಚಿನಲ್ಲಿದ್ದುಕೊಂಡೂ ತಮಗಾಗಿ ಉಪ್ಪು ಮಾಡಿಕೊಳ್ಳುವ ಅಧಿಕಾರ ಅವರಿಗಿರಲಿಲ್ಲ. ೧೯೨೦ರಲ್ಲಿ ಬಾಪೂಜಿ ಬೊಂಬಾಯಿಯಲ್ಲಿ ಖಾಯಿಲೆಯಲ್ಲಿದ್ದರು. ಆಗ ಕೂಡ ಅವರಿಗೆ ಉಪ್ಪಿನ ಕಾನೂನಿನ ಅನ್ಯಾಯದಿಂದ ಬೇಸರವಾಗಿತ್ತು. ಆದರೆ ಅನಾರೋಗ್ಯ ಜೊತೆಗೆ ರೌಲಟ್ ಬಿಲ್‌ನ ವ್ಯಸ್ತತೆ, ಹೀಗಾಗಿ ಅದು ಗಮನದಿಂದ ಸರಿದಿತ್ತು. ಈಗ ಈ ರಿಪೋರ್ಟ್‌ನಿಂದ ದೇವರು ಗಾಂಧೀಜಿಗೆ ಸ್ವರಾಜ್ಯ ಸಂಗ್ರಾಮದ ದಿಕ್ಕು ತೋರಿಸಿದ. ಪ್ರತಿಯೊಬ್ಬ ಮನುಷ್ಯನಿಗೂ ಜೀವನದಲ್ಲಿ ಉಪ್ಪು ಬೇಕೇ ಬೇಕಾಗುತ್ತೆ. ಉಪ್ಪಿನ ವಿಷಯದಲ್ಲಿ ಬಡವ–ಸಾಹುಕಾರ ಅನ್ನುವ ಭೇದ ಇರುವುದಿಲ್ಲ. ಕಾಡಿನಲ್ಲಿ ವಾಸ ಮಾಡುವ ಪ್ರಾಣಿಗಳಿಗಾಗಿ ಸರಕಾರ ಅಲ್ಲಲ್ಲೇ ಉಪ್ಪಿನ ಮಂಕರಿ ಇಡಿಸಿರುತ್ತೆ. ಕಾಡಿನ ಪ್ರಾಣಿಗಳು ಕೂಡ ಉಪ್ಪು ನೆಕ್ಕಿ ತಮ್ಮ ಶರೀರಕ್ಕೆ ಅಗತ್ಯವಾದ ರಸಾಯನವನ್ನು ಪೂರೈಸಿಕೊಳ್ಳಲಿ ಅಂತ, ಈ ತರಹ ತೀರ ಅಗತ್ಯವಾದ ವಸ್ತುವಿನ ಮೇಲೆ ಸರಕಾರ ಟ್ಯಾಕ್ಸ್ ಹಾಕಿತ್ತು. ಬಡವನ ರೊಟ್ಟಿ ಮತ್ತು ಉಪ್ಪು ಅಥವಾ ಅನ್ನದಿಂದಲೂ ಸಂಪಾದನೆ ವಸೂಲು ಮಾಡಕ್ಕೆ ಹೊರಟಿರುವುದಿದೆಂಥ ಸರಕಾರ? ಇದು ತುತ್ತ ತುದಿಯ ನಿರ್ದಯತೆ, ಸಂಪತ್ತಿನ ಲೋಲುಪ ಸರಕಾರದ ಎದುರು ಉಪ್ಪು ತಯಾರು ಮಾಡಿ ಕಾನೂನನ್ನು ಸವಿನಯವಾಗಿ ಮುರಿದು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸವಾಲೊಡ್ಡಬೇಕು ಅಂತ ಬಾಪೂಜಿ ನಿಶ್ಚಯಿಸಿಬಿಟ್ಟರು.

ಉಪ್ಪು ಮಾಡುವ ಸರಳವಾದ ಕ್ರಮ ಅಂದರೆ ಸಮುದ್ರದ ನೀರನ್ನು ಒಣಗಿಸಿದರೆ ಕೆಳಗೆ ಸಹಜವಾಗಿ ಉಪ್ಪು ಉಳಿದುಕೊಳ್ಳುತ್ತದೆ. ತನ್ನ ಕೈಯಿಂದ ಉಪ್ಪು ತಯಾರಿಸಿ ಈ ದೇಶದಲ್ಲೆಲ್ಲಾ ಹರಡಿರುವ ಸತ್ಯಾಗ್ರಹವನ್ನು ಆರಂಭಿಸುವುದು ಅಂತ ಬಾಪೂಜಿ ನಿರ್ಧಾರಕ್ಕೆ ಬಂದರು. ಇದಕ್ಕಾಗಿ ಕಾಲ್ನಡಿಗೆಯಲ್ಲಿ ಸಮುದ್ರದ ದಡದವರೆಗೂ ಹೋಗಬೇಕು, ಬಡವರ ಹತ್ತಿರ ಹೋಗಿ ಬರುವ ವಾಹನ ಸೌಲಭ್ಯ ಇರುತ್ತಿರಲಿಲ್ಲ. ಇದರಿಂದ ಕಾಲ್ನಡಿಗೆಯಲ್ಲಿ ಹೋಗುವುದೇ ಸರಿಯಾಗಿರುತ್ತಿತ್ತು. ಉಪ್ಪು ಎಲ್ಲರೂ ಉಪಯೋಗಿಸುವ ಪದಾರ್ಥ, ಅದರಿಂದ ಆ ಕಾನೂನನ್ನು ಮುರಿಯುವುದು ಇನ್ನೂ ಸುಲಭವಾಗಿತ್ತು. ಹಂಡೆಗಳಲ್ಲಿ ಉಪ್ಪು ನೀರನ್ನು ಕುದಿಸಿದರೆ ಈ ಕಾನೂನನ್ನು ಸವಿನಯವಾಗಿ ಮುರಿಯಬಹುದಾಗಿತ್ತು. ಇದನ್ನು ಯಾರು ಬೇಕಾದರೂ ಮಾಡಲಾಗುತ್ತಿತ್ತು. ಈ ಸತ್ಯಾಗ್ರಹಕ್ಕೋಸ್ಕರ ಸೂರತ್ ನಗರದ ದಕ್ಷಿಣಕ್ಕೆ ಅರಬ್ಬಿ ಸಮುದ್ರ ತೀರದಲ್ಲಿದ್ದ ಡಾಂಡಿ ಎನ್ನುವ ಒಂದು ಚಿಕ್ಕ ಹಳ್ಳಿಯನ್ನು ಗುರುತಿಸಿಕೊಂಡರು. ದಾಂಡಿಯಲ್ಲಿ ಹೆಚ್ಚೆಂದರೆ ೨೦–೨೫ ಮನೆಗಳಿದ್ದವು, ಅಷ್ಟೇ. ಆದರೆ ಹತ್ತಿರದಲ್ಲಿ ಬಡೌದಾ ರಾಜ್ಯದ ನವಸಾರಿ ಪಟ್ಟಣದ ಶ್ರೇಷ್ಠಿಗಳು ಬಹಳ

ಉತ್ಸಾಹಿತರಾಗಿದ್ದರು. ದಾಂಡಿ ಬ್ರಿಟಿಷ್ ರಾಜ್ಯಕ್ಕೆ ಸೇರಿದ್ದ ಒಂದು ಹಳ್ಳಿ ಆಗಿತ್ತಾದರೂ ಗಾಂಧೀಜಿಯ ಸೇವೆ ಮಾಡಲು ಮತ್ತು ಸತ್ಯಾಗ್ರಹದ ಗಂಗೆಯ ಪವಿತ್ರ ಸಾನ್ನಿಧ್ಯದ ಶುಭ ಅವಕಾಶ ನವಸಾರಿಯ ನಿವಾಸಿಗಳಿಗೆ ಸಿಗಬೇಕು ಅಂತ ಆ ಸೇಠಿಗಳು ಪಟ್ಟು ಹಿಡಿದಿದ್ದರು. ಬಡೌದಾ ರಾಜ ಸಯ್ಯಾಜಿರಾವ್ ಗಾಯಕವಾಡರಿಗೂ ಗಾಂಧೀಜಿ ಕುರಿತು ಬಹಳ ಶ್ರದ್ಧೆ–ಭಕ್ತಿ ಇತ್ತು. ಅವರು ಅಸಹಕಾರ ಆಂದೋಳನಕ್ಕೆ ಹಿಂದೆ–ಮುಂದೆ ನೋಡದೆ ಸಕ್ರಿಯರಾಗಿ ಸಹಾಯ ಮಾಡುತ್ತಿದ್ದರು. ವಿಶೇಷವಾಗಿ ಬಾರಡೋಲಿ ಸತ್ಯಾಗ್ರಹ ನಡೆಯುತ್ತಿದ್ದಾಗ, ಸರಕಾರ ರೈತರ ಭೂಮಿ ಆಸ್ತಿ ಎಲ್ಲಾ ಜಪ್ತಿ ಮಾಡಿಕೊಂಡುಬಿಟ್ಟಿತ್ತು. ಆಗ ಸಾವಿರಾರು ಮಂದಿ ರೈತರು ಮನೆ–ಮಠ ಕಳೆದುಕೊಂಡಿದ್ದರು. ಆಗ ಸಯ್ಯಾಜಿರಾವ್ ಅವರು ಬಡೌದಾ ರಾಜ್ಯದಲ್ಲಿ ಆಶ್ರಯ ಕೊಟ್ಟಿದ್ದರು. ಅವರುಗಳು ಇರುವುದಕ್ಕೆ ವ್ಯಾಪಕವಾದ ವ್ಯವಸ್ಥೆ ಮಾಡಿದ್ದರು. ಇವರೆಲ್ಲರೂ ಆಹ್ವಾನ ಕೊಟ್ಟು ಒತ್ತಾಯ ಮಾಡಿದ್ದರಿಂದ ಅತಿ ಚಿಕ್ಕ ಹಳ್ಳಿ ದಾಂಡಿಗೆ ಇತಿಹಾಸದ ಇಷ್ಟು ದೊಡ್ಡ ಪ್ರಯೋಗ ನಡೆಸುವ ಗೌರವ ಸಿಕ್ಕಿತ್ತು.

೬ನೇ ಏಪ್ರಿಲ್ ೧೯೩೦ರಂದು ಸವಿನಯ ಭಂಗ ದಿವಸ ಎಂದು ಘೋಷಿಸಿದರು. ಇದಕ್ಕೆ ಮುಂಚೆ ರೌಲಟ್ ಬಿಲ್‌ನ ವಿರೋಧಿಸುವುದಕ್ಕಾಗಿ ಹರತಾಳ ಮಾಡಿದ ದಿವಸ ಕೂಡ ಏಪ್ರಿಲ್ ೬ ನೇ ತಾರೀಖೇ ಆಗಿತ್ತು. ಆ ಕಾಲದಲ್ಲಿ ಏಪ್ರಿಲ್ ೬ ರಿಂದ ೧೩ನ್ನು 'ಜಲಿಯನ್‌ವಾಲಾಬಾಗ್ ಸಪ್ತಾಹ' ಅಂತ ಕರೆಯುತ್ತಿದ್ದರು. ಹೀಗಾಗಿ ಏಪ್ರಿಲ್ ೬ನ್ನು ಆರಿಸಿಕೊಂಡಿದ್ದೂ ಸರಿಯಾಗಿತ್ತು. ಅಹಮದಾಬಾದ್‌ನಿಂದ ದಾಂಡಿಗೆ ಕಾಲ್ನಡಿಗೆಯಲ್ಲಿ ಹೋಗುವುದು ಅಂತ ನಿಶ್ಚಯಿಸಿದರು. ಗಾಂಧೀಜಿ ಈ ಕಾಲ್ನಡಿಗೆಯ ಈ ಯಾತ್ರೆಗಾಗಿ ೭೯ ಜನ ಆಶ್ರಮವಾಸಿಗಳನ್ನು ತಮ್ಮ ಜೊತೆಗೆ ಆರಿಸಿಕೊಂಡು ತೆರಳುವುದು ಅಂತ ನಿಶ್ಚಯ ಮಾಡಿಕೊಂಡರು. ಈ ದೊಡ್ಡ ಯಾತ್ರೆಗೆ ೧೨ ಮಾರ್ಚಿ ೧೯೩೦ರ ಬೆಳಿಗ್ಗೆ ೬ ಗಂಟೆಗೆ ಹೊರಡುವುದು ಅಂತಲೂ ಆಂದೋಳನದಲ್ಲಿ ನಿರ್ಧರಿಸಿದರು. ಸಾಬರಮತಿ ಆಶ್ರಮದಲ್ಲಿದ್ದವರೆಲ್ಲರೂ ಭಾಗವಹಿಸಿಬೇಕು ಅಂತ ಉತ್ಸಾಹದಿಂದಿದ್ದರು, ಆದರೆ ಚೆನ್ನಾಗಿ ಯೋಚಿಸಿ ಬಾಪೂಜಿ ಈ ಮಹಾಯಾತ್ರೆಗೆ ಹೋಗುವವರನ್ನು ಆರಿಸಿದ್ದರು. ಇದಕ್ಕೆ ಮಹಾದೇವ ದೇಸಾಯಿಯನ್ನು ಸೇರಿಸಿಕೊಳ್ಳಲಿಲ್ಲ. ಯಾತ್ರೆಯ ವ್ಯವಸ್ಥೆಯೆಲ್ಲಾ ಅವರ ಮೇಲೇ ಇದ್ದಿದ್ದು, ಅದರಿಂದ ಅವರಿಗೆ ಜೈಲಿಗೆ ಹೋಗುವ ಸೌಭಾಗ್ಯ ನೀಡಲಿಲ್ಲ. ಅದೇ ರೀತಿಯಲ್ಲಿ ಸ್ವಾಮಿ ಆನಂದ್ 'ನವಜೀವನ್' ನಡೆಸಬೇಕಾಗಿತ್ತು, ಅದು ಅವರ ಜವಾಬ್ದಾರಿಯಾಗಿತ್ತು. ಆದ್ದರಿಂದ 'ನವಜೀವನ' ಕಾರ್ಯಾಲಯದಿಂದ ಹೊರಗೆ ಹೋಗುವುದಕ್ಕೂ ಅವರಿಗೆ ಪುರಸೊತ್ತಿರಲಿಲ್ಲ. ದೂರ ಆಫ್ರಿಕಾದಿಂದ ಬಾಪೂಜಿ ಮಗ ಮಣಿಲಾಲ ಗಾಂಧಿ ತಮ್ಮ ಕೆಲಸ ಬಿಟ್ಟು ಸತ್ಯಾಗ್ರಹದ ಕರೆ ಕೇಳಿ ಫಿನಿಕ್ಸ್‌ನಿಂದ ಹಿಂದೂಸ್ತಾನಕ್ಕೆ ಹೊರಟು ಬಂದರು. ಅವರು ಕೂಡಾ ದಾಂಡಿ ಮಾರ್ಚ್‌ನ ೭೯

ವೀರರಲ್ಲಿ ಒಬ್ಬರಾಗಿದ್ದರು. ಆಗ ಆಶ್ರಮಕ್ಕೆ ಬಂದು ಹೋಗುವ ಜನ ಬಹಳ ಹೆಚ್ಚಾಗಿತ್ತು. ಪ್ರಾರ್ಥನಾ ಸ್ಥಳ ಸಾಕಾಗುತ್ತಿರಲಿಲ್ಲ. ಆದರಿಂದ ನದಿಯ ದಡದಲ್ಲಿ ಪ್ರಾರ್ಥನೆ ಮಾಡುತ್ತಿದ್ದರು. ಈ ನದಿದಡದಲ್ಲಿ ಒಂದು ಸಂಜೆ ಬಾಪೂಜಿ ೭೯ ಜನರ ಹೆಸರನ್ನು ಬಿಡುಗಡೆ ಮಾಡಿದ್ದರು. ಅದರಲ್ಲಿ ಅಬ್ಬಾಸ್ ಅನ್ನುವ ಖಾದಿ ಕಾರ್ಯಾಲಯದ ಒಬ್ಬ ಹುಡುಗನ ಹೆಸರು ಕೂಡ ಇತ್ತು. ಮಾರನೆ ದಿನ ಪತ್ರಿಕೆಯವರು ಅಬ್ಬಾಸ್‌ನನ್ನು ಅಬ್ಬಾಸ್ ತೈಯಬ್‌ಜೀ ಅಂತ ಭಾವಿಸಿ ಮುದ್ರಿಸಿಬಿಟ್ಟರು. ತೈಯಬ್ ಬಡೌದಾ ರಾಜನ ದರಬಾರ್‌ನಲ್ಲಿ ಮ್ಯಾಜಿಸ್ಟ್ರೇಟ್ ಆಗಿದ್ದರು. ಅವರಿಗೆ ೮೦ಕ್ಕೂ ಹೆಚ್ಚು ವಯಸ್ಸು ಆಗಿತ್ತು. ತನ್ನ ಹೆಸರು ಓದಿ ಅಬ್ಬಾಸ್ ಅವರು ಕುಣಿದಾಡಿದರು. ತನ್ನ ಹೆಂಡತಿ ಮತ್ತು ಮಗಳು ರೆಹಾನಾನ ಕರೆದುಕೊಂಡು ಸಾಬರಮತಿ ಆಶ್ರಮಕ್ಕೆ ಬಂದುಬಿಟ್ಟರು. ಆಗ ತಪ್ಪು ತಿಳಿಯಿತು. ಆದರೆ ಒಂದು ಸಾರಿ ಹೆಸರು ಮುದ್ರಿತವಾದ ಮೇಲೆ ಮುಂಚೂಣಿಗೆ ಸೇರಿಕೊಂಡೇಸೇರಿಕೊಳ್ಳುತ್ತೇನೆ ಅಂತ ಅಬ್ಬಾಸ್ ಸಾಹಬ್ ಹಠಹಿಡಿದು ಕೂತರು. ಆದರೆ ತೈಯಬ್ ದಾದ ಇಷ್ಟು ದೂರದ ಆಂದೋಳನವನ್ನು ಹೇಗೆ ನಡೆಸುತ್ತಾರೆ ಅನ್ನುವುದು ಪ್ರಶ್ನೆಯಾಗಿತ್ತು. ಆಗ ಹೀಗೆ ನಿರ್ಣಯಿಸಿದರು: ಬಾಪೂಜಿ ಜೈಲಿಗೆ ಹೋದರೆ ಆ ಮೇಲೆ ತೈಯಬ್‌ಜೀ ಉಪ್ಪು ಸತ್ಯಾಗ್ರಹವನ್ನು ನಿರ್ವಹಿಸುವುದು, ಅವರೂ ಬಂಧನಕ್ಕೊಳಗಾದಾಗ ಸರೋಜಿನಿ ನಾಯ್ಡು ಸೇನಾಪತಿತ್ವ ವಹಿಸಿಕೊಳ್ಳುವುದು ಅಂದರು. ಹೀಗೆ ನಿಶ್ಚಯಿಸಿದಾಗ ಅಬ್ಬಾಸ್ ದಾದಾಗೆ ಶಾಂತಿ ಸಿಕ್ಕ ಹಾಗೆ ಆಯಿತು. ಅವರು ಆಗ ಕಾಲ್ನಡಿಗೆ ಬಿಟ್ಟು ರೈಲಿನಲ್ಲಿ ಹೋಗಿ ದಾಂಡಿ ತಲಪಿದರು. ಈ ದಾಂಡಿ ಯಾತ್ರೆಯ ಭಜನ ಮಂಡಳಿಯ ಪ್ರಮುಖರಾಗಿದ್ದವರು ಪಂಡಿತ ಖರೆ ಅವರು. ಅವರೂ ತಮ್ಮ ಚಿಕ್ಕ ತಂಬೂರಿಯನ್ನು ತೆಗೆದುಕೊಂಡು ಯಾತ್ರೆಯ ಜೊತೆಯಲ್ಲಿ ಹೊರಟಿದ್ದರು. ಎಲ್ಲ ತಾಣಗಳಲ್ಲೂ ಭಜನೆ, ವಂದೇ ಮಾತರಂ ನಂತರವೇ ಭಾಷಣ ಇರುತ್ತಿತ್ತು. ಪೂರ್ತಿ ದೇಶ, ಪ್ರಪಂಚದ ಎಲ್ಲ ಕಡೆಗಳಿಂದಲೂ ಮಾರ್ಚ್ ೧೨ನ್ನು ಉತ್ಸುಕರಾಗಿ ಜನ ಕಾಯ ತೊಡಗಿದರು. ಗಾಂಧೀಜಿ ಖುದ್ದಾಗಿ ದಾಂಡಿ ಕೂಚ್‌ನ ಯಾತ್ರಿಕರಿಗಾಗಿ ಯಾತ್ರೆಯ ನಿಯಮಗಳನ್ನು ರಚಿಸಿದ್ದರು. ಪ್ರತಿಯೊಬ್ಬ ಯಾತ್ರಿಕನೂ ತನ್ನ ಬೆನ್ನ ಮೇಲೆ ಚೀಲದಲ್ಲಿ ಹೊರುವುದಕ್ಕೆ ಆಗುವಷ್ಟು ಸಾಮಾನನ್ನು ಮಾತ್ರ ಕೊಂಡೊಯ್ಯಬೇಕಾಗಿತ್ತು. ಉಪ್ಪಿನ ಸತ್ಯಾಗ್ರಹದ ತೀರ ಸೂಕ್ಷ್ಮವಾದ ವ್ಯವಸ್ಥೆಯನ್ನು ಬಾಪೂಜಿ ಸ್ವತಃ ಪರೀಕ್ಷಿಸಿ ನೋಡಿದರು. ಮಹಾದೇವ ದೇಸಾಯಿ ಮತ್ತು ಸರದಾರ್ ಪಟೇಲರು ಅದನ್ನು ಕಾರ್ಯರೂಪಕ್ಕೆ ತಂದರು. ೨೫ ದಿನಗಳ ಈ ಕಾಲ್ನಡಿಗೆಯ ಯಾತ್ರೆಯಲ್ಲಿನ ತಂಗುದಾಣಗಳ ವ್ಯವಸ್ಥೆ ಮಾಡಿದರು. ಗುಜರಾತ್‌ನ ಎಲ್ಲಾ ಕಾರ್ಯಕರ್ತರೂ ಈ ಮಹಾಭಿಯಾನಕ್ಕೆ ಸೇರಿಕೊಂಡರು. ಹಳ್ಳಿಯಲ್ಲಿ ಉಪ್ಪಿನ ಸತ್ಯಾಗ್ರಹದ ಸಂದೇಶವನ್ನು ತಲಪಿಸಿದರು. ಅದರ ನಿಯಮ ಉದ್ದೇಶ ಇವುಗಳನ್ನು

ಪೂರ್ತಿ ಸಮಾಜಕ್ಕೆ ಸರಿಯಾಗಿ ತಿಳಿಸಿದರು. ತಪ್ಪುಮಾಡಿ ಪೂರ್ತಿ ಕೆಲಸ ದೂಷಿತವಾಗದಿರಲಿ ಎಂದು ಯಾವ ತಪ್ಪು ತಿಳಿವಳಿಕೆಗೂ ಅವಕಾಶ ಸಿಗದ ಹಾಗೆ ಎಚ್ಚರಿಕೆ ವಹಿಸಿದರು. ಪ್ರತಿಯೊಬ್ಬ ಸತ್ಯಾಗ್ರಹಿಯು ತನ್ನ ಕರ್ತವ್ಯವೇನು ಅಂತ ಸ್ಪಷ್ಟವಾಗಿ ತಿಳಿದುಕೊಂಡಿದ್ದ, ಅವರು ತಮಗೆ ನಿಶ್ಚಿತವಾದ ಜಾಗದಿಂದಲೇ ಸತ್ಯಾಗ್ರಹಕ್ಕೆ ಹತ್ತಿರವಿರುವ ಸಮುದ್ರ ತೀರಕ್ಕೆ ತಲುಪಿ ಉಪ್ಪು ತಯಾರಿಸಿ ಕಾನೂನು ಮುರಿಯಬೇಕಾಗಿತ್ತು.

ನಮ್ಮ ತಂದೆ ಬಾರಡೋಲಿ ಆಶ್ರಮದ ವ್ಯವಸ್ಥಾಪಕರಾಗಿದ್ದರು. ದಾಂಡಿ ಮಾರ್ಗದಲ್ಲಿ ಬಾರಡೋಲಿ ಇರಲಿಲ್ಲ. ಆದರೆ ಇಷ್ಟು ದೊಡ್ಡ ಸತ್ಯಾಗ್ರಹ ಆಗುತ್ತಿರುವಾಗ ನಮ್ಮ ತಂದೆ ಮತ್ತವರ ಆತ್ಮೀಯ ಮಿತ್ರರಾಗಿದ್ದ ಕಲ್ಯಾಣಜೀ ಭಾಯಿ ಮತ್ತು ಕೇಶವ ಭಾಯಿ ಸ್ವರಾಜ್ಯದ ಈ ಸಮಾರಂಭದಲ್ಲಿ ನುಗ್ಗದೆ ಇರಲು ಸಾಧ್ಯವೇ ಇರಲಿಲ್ಲ. ಸಮಸ್ತ ಬಾರಡೋಲಿ ತಹಸೀಲ್ ಈ ಯುದ್ಧದಲ್ಲಿ ಪುನಃ ನುಗ್ಗಲು ತನ್ಮಯವಾಗಿತ್ತು. ಈ ಯುವಕರು ಸೂರತ್ ಬಳಿ ಭೀಮರಾಡ್ ಎಂಬ ಹಳ್ಳಿಯಲ್ಲಿ ಏಪ್ರಿಲ್ ೬ರಂದು ಉಪ್ಪು ತಯಾರಿಸಿ ಕಾನೂನು ಮುರಿಯಬೇಕೆಂದು ನಿರ್ಣಯ ತೆಗೆದುಕೊಂಡರು. ಬಾರಡೋಲಿ ಜನರಿಗೆ ಸಮುದ್ರ ತಟ ಹತ್ತಿರದಲ್ಲಿತ್ತು. ಆದ್ದರಿಂದ ಏಪ್ರಿಲ್ ೩ ರಂದು ರಾಮದಾಸ್ ಗಾಂಧಿಯನ್ನು ಮುಂದಾಳಾಗಿಟ್ಟುಕೊಂಡು ಸುಮಾರು ೫೦೦ ಜನ ಬಾರಡೋಲಿಯಿಂದ ಹೊರಟಿದ್ದರು. ಆಗ ನಮ್ಮ ತಂದೆಗೆ ೩೨ ವರ್ಷ ವಯಸ್ಸು, ಆಗ ತಾನೆ ಮದುವೆಯಾಗಿ ಬಂದಿದ್ದ ಇಪ್ಪತ್ತು ವರ್ಷದ ಹೆಂಡತಿ ಮನೆಯಲ್ಲಿದ್ದಳು. ಈ ಹೋರಾಟದಲ್ಲಿ ಯಾರು ಬದುಕುಳಿದು ಬರುತ್ತಾರೋ ಇಲ್ಲವೋ ಅಂತ ಕೂಡ ಗೊತ್ತಿರಲಿಲ್ಲ. ಇದು ತಲೆಯನ್ನು ಬಲಿಕೊಟ್ಟು ಹೋರಾಡುವ ಹೋರಾಟವಾಗಿತ್ತು. ಆದರೆ ರಾಮದಾಸ್ ಗಾಂಧೀ ಮತ್ತವರ ಸ್ನೇಹಿತರು ಇಲ್ಲವೆ ಸಾವಿರಾರು ಸತ್ಯಾಗ್ರಹಿಗಳು ಇದರ ಪರಿಣಾಮ ಏನಾಗುತ್ತದೆ ಎಂದು ಒಂದು ನಿಮಿಷ ಕೂಡ ಯೋಚಿಸಲಿಲ್ಲ. ಅವರನ್ನು ಅವರ ತಾಯಿ ಅಕ್ಕ–ತಂಗಿಯರು, ಹೆಂಡತಿ ಯಾರೂ ತಡೆಯಲಿಲ್ಲ. ಆ ಪರಾಕ್ರಮಿ ಮಹಿಳೆಯರು ಎಲ್ಲಾ ತಿಳಿದಿದ್ದರೂ ರಾಷ್ಟ್ರಕ್ಕೋಸ್ಕರ ಲಾಠಿಗಳ ಏಟನ್ನು ತಿನ್ನಲು ಸರ್ರನೆ ಹರಿದು ಬರುವ ಗುಂಡುಗಳ ಸುರಿಮಳೆಯನ್ನು ಎದುರಿಸಲು ತಮ್ಮ ಮುದ್ದುಮಕ್ಕಳ ಹಣೆಯ ಮೇಲೆ ಕುಂಕುಮ ಅಕ್ಷತೆ ಇಟ್ಟು ಅವರನ್ನು ರಣಭೂಮಿಗೆ ಕಳುಹಿಸಿಕೊಟ್ಟಿದ್ದರು. ಅ ಸತ್ಯಾಗ್ರಹಿಗಳಂತೂ ಯಾರನ್ನೂ ಸಾಯಿಸುವ ಮಾತಂತೂ ಇರಲೇ ಇಲ್ಲ. ಇವರೆಲ್ಲಾ ಅಹಿಂಸಕ ಸೈನಿಕರಾಗಿದ್ದವರು. ಆದ್ದರಿಂದ ದೇಶಕ್ಕಾಗಿ ಸಾಯುವುದೊಂದೇ ಅವರ ಗುರಿಯಾಗಿತ್ತು.

ಬಾಪೂಜಿ ಈ ಮಹಾ ಪ್ರಯಾಣದ ಕಮಾಂಡರ್–ಇನ್–ಚೀಫ್ ಆಗಿದ್ದರೆ ಸರೋಜಿನಿ ನಾಯ್ಡು– ಪ್ರೀತಿಯಿಂದ ಅಕೆಯನ್ನು ಕಾಲಾ ಜಾನ್ ಅಂತ

ಕರೆಯುತ್ತಿದ್ದರು– ಫೀಲ್ಡ್ ಮಾರ್ಷಲ್ ಆಗಿದ್ದರು. ದೇಶದ ಜನ ಎಲ್ಲೆಡೆ ನಾವು ಸತ್ತರೂ. ಚಿಂತೆಯಿಲ್ಲ. ಆದರೆ ಏಪ್ರಿಲ್ ೬ ರಂದು ಎಲ್ಲಾದರೆ ಅಲ್ಲಿ ಹಂಡೆಗಳಲ್ಲಿ ಉಪ್ಪು ಖಂಡಿತ ತಯಾರಿಸಿಯೇ, ತಯಾರಿಸುತ್ತೇವೆ, ಈ ವಿದೇಶಿಯವರ ಆಳ್ವಿಕೆಯನ್ನು ಸವಿನಯವಾಗಿ ಖಂಡಿಸುತ್ತೇವೆ, ಪರಿಣಾಮ ಏನೇ ಆದರೂ ಅನುಭವಿಸುತ್ತೇವೆ ಅಂತ ನಿರ್ಧಾರ ಮಾಡಿಕೊಂಡಿದ್ದರು. ೨ ಮಾರ್ಚ ೧೯೩೦ರಂದು ಗಾಂಧೀಜಿ ವೈಸ್‌ರಾಯ್ ಲಾರ್ಡ್ ಇರ್ವಿನ್‌ಗೆ ಸವಿನಯ ಕಾನೂನು ಮುರಿಯುವ ಪೂರ್ವಸೂಚನೆ ನೀಡಿದರು. ತಾರೀಖು, ವಾರ, ಸಮಯ ಎಲ್ಲವನ್ನೂ ಘೋಷಿಸಿದರು. ಸರಕಾರಕ್ಕೆ ತಿಳಿಸುವುದಕ್ಕೋಸ್ಕರ ಕಾರ್ಯಕ್ರಮದ ಒಂದು ಪ್ರತಿಯನ್ನು ಕೂಡ ಲಗತ್ತಿಸಿದರು. ಇಂಗ್ಲಿಷ್ ಸರಕಾರ ಬಂಧಿಸುವುದಕ್ಕಾಗಲಿ, ಗುಂಡು ಹಾರಿಸುವುದಕ್ಕಾಗಲೀ ಯಾವುದೇ ತರಹ ತೊಂದರೆ ಆಗದಿರಲಿ ಎಂದು ಮೊದಲೇ ವೈಸ್‌ರಾಯ್‌ಗೆಎಲ್ಲ ಸೂಚನೆಗಳನ್ನು ಕಳುಹಿಸಿಕೊಟ್ಟಿದ್ದರು. ಆಗ ಕೂಡ ಗಾಂಧೀಜಿ ದೇಶದ ಮನಸ್ಥಿತಿ ಹೇಗಿದೆ ಅಂತ ವೈಸ್‌ರಾಯ್‌ಗೆ ತಿಳಿಸಿ, ಒಪ್ಪಂದ ಮಾಡಿಕೊಳ್ಳುವಂತೆ ನಮ್ರವಾಗಿ ವಿನಂತಿಸಿಕೊಂಡಿದ್ದರು. ಆದರೆ 'ವಿನಾಶಕಾಲೇ ವಿಪರೀತ ಬುದ್ಧಿ' ಅಂತ ಹೇಳುತ್ತಾರಲ್ಲ ಹಾಗೆ, ಆದರೆ ಇರ್ವಿನ್ ಈ ಸಂಧಿಯ ರೂಪದ ಪತ್ರಕ್ಕೆ ಗಮನ ಕೊಡಲೇ ಇಲ್ಲ. ಸರಕಾರ ಬಂದೂಕು ಹಿಡಿದಿದ್ದ ಸೈನಿಕರಿಗೆ, ಲಾಠಿ ಹಿಡಿದಿದ್ದ ಸಿಪಾಯಿಗಳ ಸೈನ್ಯಕ್ಕೆ ಈ ನಿಃಶಸ್ತ್ರರಾಗಿದ್ದ ಜನರ ಸೊಂಟ ಮುರಿಯಿರಿ ಅಂತ ಆಜ್ಞೆ ಮಾಡಿತು. ಸತ್ಯ ಸಾಧಕರ ಬಳಿ ಈಗ ಸವಿನಯ ಭಂಗ ಬಿಟ್ಟರೆ ಬೇರೆ ಯಾವ ಮಾರ್ಗವೂ ಉಳಿದಿರಲಿಲ್ಲ. ಅದು ಬೆದರಿಕೆ ಆಗಿರಲಿಲ್ಲ. ಇದು ಅನಿವಾರ್ಯವಾದ ಧರ್ಮಯುದ್ಧ ಆಗಿತ್ತು. ಬಾಪೂಜಿ ತಮ್ಮ ಇಂಗ್ಲಿಷ್ ಮಿತ್ರ ರೆಜಿನಾಲ್ಡ್ ರೆನಾಲ್ಡ್ ಕೈಯಲ್ಲಿ ಈ ತಿಳುವಳಿಕೆ ನೀಡುವ ಪತ್ರವನ್ನ ಲಾರ್ಡ್ ಇರ್ವಿನ್‌ಗೆ ಕಳುಹಿಸಿಕೊಟ್ಟಿದ್ದರು. ಯಾವಾಗಲೇ ಆಗಲಿ, ಇಂಥ ಮಹತ್ವದ ಪತ್ರಗಳನ್ನು ಹಿರಿಯರ ಬಳಿಗೆ ಕಳುಹಿಸುವಾಗ ಬಾಪೂಜಿ ಅಂಚೆಯನ್ನು ಉಪಯೋಗಿಸದೆ ಯಾರಾದರೂ ಒಳ್ಳೆ ಗುಣವಂತನ ಕೈಲೇ ಸಂದೇಶ ಮುಟ್ಟಿಸುತ್ತಿದ್ದರು. ಬಾಪೂಜಿಗೆ ಏನು ಅಂದರೆ ಶುದ್ಧ ಗುಣವಂತನ ಒಂದು ಪುಣ್ಯದ ಮಹಿಮೆ, ಇಂತಹ ಸಂದೇಶದ ಸಫಲವಾಗಲಿಕ್ಕೆ ಸಹಾಯ ಮಾಡುತ್ತದೆ ಅಂತ ನಂಬಿಕೆ

ಒಂದು ಚಿಟಿಕೆ ಉಪ್ಪು ಸಾಮ್ರಾಜ್ಯವನ್ನು ವಿಧ್ವಂಸ ಮಾಡುವ ಮಾಂತ್ರಿಕ ಔಷಧಿ ಆಯ್ತು, ಇದು ಬಹಳ ಚೆನ್ನಾಗಿ ಕೆಲಸ ಮಾಡಿತು. ಆದರೆ ಸರಕಾರ ಮಾರ್ಚ ೧೨ರ ವರೆಗೆ ಕಾಯಲಿಲ್ಲ. ಬಾರಡೋಲಿ ಸತ್ಯಾಗ್ರಹದ ಸಮಯದಿಂದಲೂ ಬೊಂಬಾಯಿ ಸರಕಾರ ಸರದಾರ್ ಪಟೇಲರ ಮೇಲೆ ಕುದಿಯುತ್ತಾ ಇತ್ತು. ಈ ಉಪ್ಪಿನ ಸತ್ಯಾಗ್ರಹದ ಸಿದ್ಧತೆಯಲ್ಲಿ ಸರದಾರ ಪಟೇಲರು ತನು–ಮನ ಸಮರ್ಪಿಸಿ ತೊಡಗಿಕೊಂಡಿದ್ದರು. ಸರಕಾರಕ್ಕೆ ಇದು ಸಹಿಸಲಿಲ್ಲ. ೭ ಮಾರ್ಚ ೧೯೩೦

ರಂದು ಸರಕಾರ ಸರದಾರ್ ಪಟೇಲರನ್ನು ಹಿಡಿದು ಜೈಲಿಗೆ ಹಾಕಿತು. ಉಪ್ಪಿನ ಸತ್ಯಾಗ್ರಹಕ್ಕೆ ಇದು ಮೊದಲ ಆಹುತಿ ಆಯಿತು.

* * * *

# ೧೮. ಡಾಂಡೀ ಯಾತ್ರೆ

೧೧ ಮಾರ್ಚ್ ೧೯೩೦ ರ ಕಾಳರಾತ್ರಿ, ಅಂದು ಸಾಬರಮತಿ ಆಶ್ರಮದಲ್ಲೂ ಬಹುಶಃ ಯಾರೂ ನಿದ್ದೆ ಮಾಡಿರಲಾರರು. ಎಲ್ಲರೂ ತಮ್ಮ ಪದಾರ್ಥಗಳನ್ನು ಜೋಡಿಸಿಕೊಳ್ಳುತ್ತಿದ್ದರು. ಜೊತೆಗೆ ಆ ಶಾಂತಿಯಲ್ಲಿ ಮನದಲ್ಲೇ ತಮ್ಮವರಿಂದ ಕೊನೆಯ ಸಾರಿ ಬೀಳ್ಕೊಡುಗೆ ಪಡೆಯುತ್ತಿದ್ದರು. ಆದರೆ ಯಾರಿಗೂ ಹಿಂದಿರುಗಿ ಬರುವ ಕಲ್ಪನೆ ಇರಲಿಲ್ಲ. ಎಲ್ಲರೂ ಹೆಣದ ಬಟ್ಟೆ (ಕಫನ್) ಕಟ್ಟಿಕೊಂಡು ಹೊರಟಿದ್ದರು. ಯಾರ ಕಣ್ಣಿಗಳಲ್ಲೂ ನಿದ್ದೆ ಇರಲಿಲ್ಲ. ಆದರೆ ಈ ಮಹಾಭಿನಿಷ್ಕ್ರಮಣದ ಯೋಗಿ ತನ್ನೆಲ್ಲ ಕೆಲಸಗಳನ್ನು ಮುಗಿಸಿಕೊಂಡು ಶಾಂತ ಹಾಗೂ ಆರೋಗ್ಯಕರವಾದ ಮನಸ್ಸಿನಿಂದ ನಿದ್ದೆ ಮಾಡಿದ್ದರು. ಮಲಗುವುದಕ್ಕೆ ಮುಂಚೆ ಯಾರೋ ಗಾಂಧೀಜಿಯವರನ್ನು ರಾತ್ರಿಯೇ ಬಂಧಿಸಲಾಗುವುದೆಂಬ ಸುದ್ದಿ ತಂದಿದ್ದರು. ಸಾಬರಮತಿ ರೈಲ್ವೆ ಸ್ಟೇಷನ್‌ನ ಯಾರ್ಡ್‌ನಲ್ಲಿ ಸ್ಪೆಷಲ್ ಟ್ರೇನ್ ನಿಂತಿರುವುದಾಗಿ, ಅದು ಗಾಂಧೀಜಿಯನ್ನು ನೇರವಾಗಿ ಬರ್ಮಾಗೆ ಕರೆದೊಯ್ದು ಮಾಂಡಲೆ ಜೈಲಿನಲ್ಲಿಡಲಾಗುವುದೆಂದು ತಿಳಿಸಿದರು. ಆ ಜೈಲಿನಲ್ಲಿ ಲೋಕಮಾನ್ಯರು ಆರು ವರ್ಷಗಳ ಜೈಲುವಾಸ ಮಾಡುತ್ತಿದ್ದರು. ಅಲ್ಲೇ ತಿಲಕರು ಗೀತಾ ರಹಸ್ಯವನ್ನೂ ಬರೆದಿದ್ದು. ಅಲ್ಲಿಯ ತಣ್ಣಗಿನ ವಾತಾವರಣದಿಂದಾಗಿ ಲೋಕಮಾನ್ಯರ ಆರೋಗ್ಯ ಕೆಟ್ಟು ಕೊನೆಗಾಲದವರೆಗೂ ರೋಗದಲ್ಲೇ ನರಳುತ್ತಿದ್ದರು. ಈ ಸಮಾಚಾರ ಕೇಳಿ ಬಾಪೂಜಿ 'ಎಲ್ಲಾ ದೇವರ ಕೈಲಿದೆ' ಅಂದರು. ತಮ್ಮ ಚಿಂತೆಯನ್ನೆಲ್ಲಾ ದೇವರಿಗರ್ಪಿಸಿ, ಮುಖ್ಯವಾದ ಪತ್ರಗಳನ್ನು ಬರೆದು ಬಾಪೂಜಿ ನಿದ್ದೆ ಮಾಡಿದರು.

ಬೆಳಿಗ್ಗೆ ೪ ಗಂಟೆಗೆ ಪ್ರಾರ್ಥನೆ ಜರುಗಿತು. ಸಂಗೀತ ಪ್ರವೀಣರಾದ ಪಂಡಿತ ನಾರಯಣ ಮೋರೇವಾರ್ ಖರೆ ಅವರು 'ವೈಷ್ಣವ ಜನ' ಭಜನೆ ಮಾಡಿದರು ಮತ್ತು ಆಶ್ರಮವಾಸಿಗಳು ರಾಮಧುನ್ ಹಾಡಿದರು. ಪಂಡಿತಜೀ ಈ ಸತ್ಯಾಗ್ರಹ ಆಶ್ರಮದ ಭಕ್ತಿಭಾವನೆ ಹಾಗೂ ಲಾಲಿತ್ಯದ ಮೂಲ ಸ್ರೋತವೇ ಆಗಿದ್ದವರು. ಗಾಂಧೀಜಿಯ ಬಗ್ಗೆ ಪ್ರೀತಿಯಿದ್ದುದರಿಂದ ಪ್ರಪಂಚದ ಮೋಹ, ಒಳ್ಳೆಯ ಗಾಯಕರೆಂದು ಸಿಕ್ಕಿದ ಹೆಸರು ಎಲ್ಲವನ್ನು ತೊರೆದು ಮಹಾಪಂಡಿತ ವಿಷ್ಣು ದಿಗಂಬರ್ ಶಾಸ್ತ್ರಿಯವರ ಈ ಪಟ್ಟ ಶಿಷ್ಯ ಸಾಬರಮತಿ ಆಶ್ರಮದಲ್ಲಿ ಕುಟುಂಬದೊಂದಿಗೆ ಬಂದು ನೆಲೆಸಿದ್ದರು. ಆ ಕಾಲದಲ್ಲಿ ಅವರು ಪ್ರತಿಯೊಬ್ಬ

ಆಶ್ರಮವಾಸಿಗೂ ಶುದ್ಧ ಸಂಸ್ಕೃತ ಉಚ್ಚಾರಣೆ ಮತ್ತು ಸ್ವರಬದ್ಧ, ತಾಳಬದ್ಧವಾಗಿ ಶಾಸ್ತ್ರೀಯ ರಾಗಗಳಲ್ಲಿ ರಚಿಸಿದ ಪ್ರಾರ್ಥನೆಯನ್ನು ಕಲಿಸಿದ್ದರು. ಅವರು ನಿರಂತರ ಪರಿಶ್ರಮಪಟ್ಟು ಮೂಲಭೂತವಾದ ಮೌಲ್ಯಗಳನ್ನಾಧರಿಸಿ ಭಕ್ತಿಭಾವದಲ್ಲಿ ತಲ್ಲೀನರಾಗಿ ದೇಶದ ಎಲ್ಲಾ ಪ್ರಮುಖ ಭಾಷೆಗಳ ಶ್ರೇಷ್ಠ ಭಜನೆಗಳನ್ನು ಆರಿಸಿ ಆಶ್ರಮ ಭಜನಾವಳಿಯನ್ನು ಸಿದ್ಧಗೊಳಿಸಿದ್ದರು. ಇವತ್ತಿಗೂ ಆ ಭಜನಾವಳಿ ಅಷ್ಟೇ ಪ್ರೇರಣಾದಾಯಕವಾಗಿದೆ. ಭಜನೆಗಳ ರಾಗ–ತಾಳ ಎರಡನ್ನೂ ಅವರು ನಿರ್ಧರಿಸಿದ್ದರು. ಪಂಡಿತ್‌ಜೀ ಶ್ರಮವಹಿಸಿ ಆಶ್ರಮವಾಸಿಗಳಿಗೆ ಬೆಳಿಗ್ಗೆ – ಸಂಜೆ ನಿಯಮಿತವಾಗಿ ಪ್ರಾರ್ಥನೆ ಮತ್ತು ಸಂಗೀತದ ತರಬೇತಿ ನೀಡಿದ್ದರು. ಅದರಿಂದ ಒಂಟಿಯಾಗಿ ಇಲ್ಲವೇ ಎಲ್ಲೇ ಸಮೂಹದಲ್ಲಾದರೂ ಅವರುಗಳು ಭಜನೆಗಳನ್ನು ತಾಳ ಲಯದೊಂದಿಗೆ ಸ್ವರಸಹಿತ ಹಾಡಬಲ್ಲವರಾಗಿದ್ದರು. ಈ ಭಜನಾವಳಿಯಲ್ಲಿ ಪ್ರತಿಯೊಂದು ಭಾಷೆ ಮತ್ತು ಎಲ್ಲಾ ಧರ್ಮಗಳ ಒಳ್ಳೆಯ ಭಜನೆಗಳನ್ನು ಸೇರಿಸಿದ್ದರು. ಉಪನಿಷತ್ತು, ಭಗವದ್ಗೀತೆಯ ಶ್ಲೋಕಗಳನ್ನೂ ಅರ್ಥದೊಂದಿಗೆ ಕೊಟ್ಟಿದ್ದರು. ಆಗ ಅದರ ಬೆಲೆ ನಾಲ್ಕಾಣೆ ಇತ್ತು. ಈಗ ಎರಡು ರೂಪಾಯಿ ಆಗಿದೆ. ಈ ಪ್ರಖರವಾದ ಕೊಂಕಣಿ ಕುಟುಂಬಕ್ಕೆ ಸ್ಪೃಶ್ಯ ಅಸ್ಪೃಶ್ಯರ ಭಾವನೆಗಳನ್ನು ತೊರೆದು ಆಶ್ರಮ ಜೀವನವನ್ನು ತಮ್ಮದಾಗಿಸಿಕೊಳ್ಳುವುದು ಎಷ್ಟು ಕಷ್ಟವಾಗಿದ್ದಿರಬಹುದು ಎಂದು ಊಹಿಸಬಹುದು. ಈ ಧರ್ಮನಿಷ್ಠವಾದ ಮಹಾರಾಷ್ಟ್ರಿಯನ್ ಕುಟುಂಬ ಆಶ್ರಮವನ್ನು ತನ್ನದಾಗಿಸಿಕೊಡು ನೂರಾರು ವರ್ಷಗಳ ಹಳೆಯ ರೂಢಿಗಳನ್ನು ತೊರೆಯಿತು. ಶ್ರಮ, ಸರಳತೆ ಮತ್ತು ಸಮರ್ಪಣಾ ಭಾವದಿಂದ ಆಶ್ರಮ ಜೀವನವನ್ನು ಸಮೃದ್ಧಗೊಳಿಸಿದರು. ಪಂಡಿತರ ಮಗಳು ಮಯೂರಿಗೆ ದೈವದತ್ತವಾದ ಸಂಗೀತದ ಜ್ಞಾನವಿತ್ತು. ತೀರ ಮೂರು ವರ್ಷದ ಮಗುವಾಗಿದ್ದಾಗಲೇ ಇನ್ನೂ ಸರಿಯಾಗಿ ಮಾತನಾಡುವುದಕ್ಕೂ ಬರದಿದ್ದಾಗ ಕೂಡ ಅವಳು ಆಶ್ರಮ ಪ್ರಾರ್ಥನೆ ಮತ್ತು ತುಕರಾಮ್‌ರ ಭಜನೆ ಹಾಡಿದ್ದಳಂತೆ. ಆಗಿನಿಂದಲೂ ಜೀವನ ಪೂರ್ತಿ ಕುಮಾರಿಯಾಗಿದ್ದುಕೊಂಡೇ ಆಕೆ ಸಂಗೀತದ ಸಾಧನೆಯಲ್ಲಿ ಸಮಯವನ್ನು ಕಳೆದಿದ್ದಳು. ಇವತ್ತಿಗೂ ಸಂಗೀತಪ್ರೇಮಿಗಳಾಗಿದ್ದ ಅವರ ತಂದೆಯ ಅನುಕರಣೆ ಮಾಡಿ ಅಹಮದಾಬಾದ್‌ನಲ್ಲಿ ಶಾಸ್ತ್ರೀಯ ಸಂಗೀತದ ಸಂಸ್ಥೆಯನ್ನು ನಡೆಸಿಕೊಂಡು ಭಜನೆ–ಕೀರ್ತನೆ ಮಾಡುತ್ತಿರುತ್ತಾಳೆ.

೧೨ರ ಮಾರ್ಚ ಬೆಳಿಗ್ಗೆ ಅಷ್ಟು ಹೊತ್ತಿಗೆ ನದಿ ತೀರದಲ್ಲಿ ಮೊದಲ ಪ್ರಾರ್ಥನೆ ನಡೆಯಿತು. ನಿತ್ಯಕರ್ಮಗಳಿಂದ ನಿವೃತ್ತರಾಗಿ ೫–೪೫ ಗಂಟೆಗೆ ಎಲ್ಲರೂ ಸಾಬರಮತಿ ಆಶ್ರಮದ ಮುಖ್ಯದ್ವಾರದ ಬಳಿ ಸೇರಿಕೊಂಡರು. ಆಗ ಪಂಡಿತರು ಮೊದಲು 'ವೈಷ್ಣವ ಜನತೋ' ವನ್ನು ಹಾಡಿದರು. ನಂತರ 'ವಂದೇ ಮಾತರಂ' ಹಾಡಿದರು. ನಂತರ ಆಶ್ರಮದ ಮಹಿಳೆಯರು ಯಾತ್ರಿಕರಿಗೆಲ್ಲ ಕುಂಕುಮ – ಅಕ್ಷತೆ ನೀಡಿ

ಕಳುಹಿಸಿಕೊಟ್ಟರು ಮತ್ತು ಬಾಪೂಜಿಯವರಿಗೆ ನಮಸ್ಕಾರ ಮಾಡಿದರು. ತಮ್ಮ ನಾಯಕನನ್ನು ಬೀಳ್ಕೊಡಲು ಅಹಮದಾಬಾದ್ ನಗರ ಮತ್ತು ಹತ್ತಿರ ಹತ್ತಿರ ವಾಸ ಮಾಡುತ್ತಿದ್ದವರೆಲ್ಲ ರಾತ್ರಿಯಿಂದಲೇ ಆಶ್ರಮದ ಬಾಗಿಲಲ್ಲಿ ಬಂದು ನಿಂತಿದ್ದರು. ಈ ಯಾತ್ರೆಗಾಗಿ ನೇಮಿತರಾಗಿದ್ದ ಯಾತ್ರಿಕರ ಸಂಖ್ಯೆ ೮೦ ಆಗಿತ್ತಾದರೂ ಕೊನೆಯ ಪಕ್ಷ ಹತ್ತು ಸಾವಿರ ಮಂದಿಯಾದರೂ ಅನೌಪಚಾರಿಕವಾಗಿ ಈ ಜನರ ಮುಂದೆ ಹಾಗೂ ಹಿಂದೆ ಹೊರಟಿದ್ದರು. ಸುಮಾರು ೩೦–೪೦ ಸಮಾಚಾರ ಪತ್ರಿಕೆಗಳ ಸುದ್ದಿ ಸಂಪಾದಕರು ಅವರ ಜೊತೆ ಹೊರಟಿದ್ದರು. ಅವರ ಜೊತೆ ಇಂಗ್ಲೆಂಡ್ ಅಮೆರಿಕಾದ ಅನೇಕ ಪತ್ರಿಕೆಗಳ ಸುದ್ದಿ ಸಂಪಾದಕರು ಕೂಡ ಇದ್ದರು. ಮೂರು ಲಾರಿ(ಟ್ರಕ್)ಗಳಲ್ಲಿ ತುಂಬಿಕೊಂಡು ಫಿಲ್ಮ್ ತೆಗೆದುಕೊಳ್ಳುವವರ ಗುಂಪು ಮೆರವಣಿಗೆಯ ಮುಂದೆ ನಡೆಯುತ್ತಿತ್ತು. ಜನರ ತೀವ್ರ ಉತ್ಸಾಹ ಮೇರೆ ಮೀರಿತ್ತು. ಜನರ ಈ ಗುಂಪು ಮೃತ್ಯುವನ್ನು ಆಲಿಂಗಿಸಲು ಹುಡುಕತ್ತಾ ಮನೆ–ಮಠ ಎಲ್ಲವನ್ನು ಒತ್ತಟ್ಟಿಗಿಟ್ಟು ಹೊರಟಿತ್ತು, ಹಾಗಾಗಿ ಅವರೆಲ್ಲ ಸಂತೋಷದಿಂದ ತಮ್ಮ ನಾಯಕನನ್ನು ಹಿಂಬಾಲಿಸುತ್ತಿದ್ದರು. ರಸ್ತೆಯಲ್ಲಿ ಅಲ್ಲಿ ಹತ್ತಿರದಲ್ಲೇ ವಾಸಿಸುತ್ತಿದ್ದ ಹಳ್ಳಿಜನರು ಗಾಂಧೀ ದರ್ಶನಕ್ಕಾಗಿ ಉತ್ಸಾಹದಿಂದ ನುಗ್ಗಿಬರುತ್ತಿದ್ದರು. ಅಹಮದಾಬಾದಿನ ಸರಹದ್ದಿನಲ್ಲಿ ಚಂದೋಲಾ ಕೆರೆಯ ಬಳಿ ಗಾಂಧೀಜಿ ನಿಂತರು. ಅವರು ಅಹಮದಾಬಾದ್‌ನ ಶ್ರಮಿಕರು ಹಾಗೂ ಹಳ್ಳಿಯವರಿಗೆ ಹಿಂದಿರುಗಲು ತಿಳಿಸಿ, ಹೆಂಡ ಕುಡಿಯುವುದನ್ನು ನಿಲ್ಲಿಸಲು, ಅಸ್ಪೃಶ್ಯತೆಯನ್ನು ತೊಡೆದು ಹಾಕುವಂತೆ ತಿಳಿಸಿ, ಖಾದಿ ಪ್ರಚಾರ ಮತ್ತು ಒಗ್ಗಟ್ಟಿಗಾಗಿ ಶ್ರಮಿಸುವಂತೆ ಒತ್ತಾಯಪೂರ್ವಕವಾಗಿ ಹೇಳಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಏಪ್ರಿಲ್ ೬, ೧೯೩೦ರಂದು ಸವಿನಯ ಕಾನೂನು ಮುರಿಯುವ ಈ ಚಳವಳಿಯಲ್ಲಿ ಕ್ರಿಯಾತ್ಮಕವಾಗಿ ಕೆಲಸ ಮಾಡಲು ತಿಳಿಸಿದರು. ಆಗ ಮಾತ್ರ ಸಾವಿರಾರು ಜನರ ಆ ಗುಂಪು ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿತು. ದಶರಥಪುತ್ರ ಶ್ರೀರಾಮ ಕೂಡ ಸರಯೂ ನದಿಯ ದಡದಲ್ಲಿ ಬಹುಶಃ ಇದೇ ರೀತಿ ಅಯೋಧ್ಯೆಯ ಜನರಿಗೆ ಹಿಂದಿರುಗಲು ತಿಳಿಸಿದ್ದಿರಬೇಕು.

ಪ್ರತಿಯೊಂದು ತಂಗುದಾಣದಲ್ಲಿ ಲಕ್ಷಾಂತರ ಜನರ ಗುಂಪು ಗಾಂಧೀಜಿ ಮತ್ತು ಅವರ ಸಂಗಡಿಗರಿಗೆ ನಮಸ್ಕಾರ ಸಲ್ಲಿಸಿ ಗಾಂಧೀಜಿಯವರು ಅಹಿಂಸೆಯ ವಿಶ್ಲೇಷಣೆ ಮಾಡುವುದನ್ನು ಶಾಂತರಾಗಿ ಕೇಳಿಸಿಕೊಳ್ಳುತ್ತಿದ್ದರು. ತಂಗುದಾಣಗಳಲ್ಲಿ ಪ್ರೇಮದಿಂದ ಗದ್ಗದರಾಗಿ ಜನ ಈ ಯಾತ್ರಿಕರ ಅನುಕೂಲಕ್ಕಾಗಿ ಅನೇಕ ತರಹೆ ವ್ಯವಸ್ಥೆ ಮಾಡುತ್ತಿದ್ದರು. ಲಕ್ನೋ ಹಾಗೆ ಸೂರತ್ ಕೂಡ ಊಟ–ತಿಂಡಿ ನೀಡಿ ಸ್ವಾಗತಿಸುವುದಕ್ಕೆ ಹೆಸರು ಗಳಿಸಿದ್ದವರು. ಅದರಿಂದಲೇ ಬಹುಶಃ ಜನ ಅವರನ್ನು 'ಸೂರತೀ ಲಾಲಾ' ಅಂತ ಕೂಡ ಕರೆಯುವುದು. ಸೂರತ್ ಜಿಲ್ಲೆಯಲ್ಲಿ ಯಾತ್ರಿಕರ ಅನುಕೂಲಕ್ಕಾಗಿ ವಿಶೇಷ ಏರ್ಪಾಡು ಮಾಡಿದ್ದರು. ಗಜೇರಾ ಎಂಬ ಹಳ್ಳಿಯ

ಪ್ರಾರ್ಥನಾಸಭೆಯಲ್ಲಿ ಕೆಲವು ಜನರು ದೂರ ಬೇರೆಯಾಗಿ ಕುಳಿತಿದ್ದರು. ಹೀಗೆ ದೂರವೇಕೆ ಕುಳಿತಿದ್ದಾರೆಂದು ಗಾಂಧೀಜಿ ಕೇಳಿದಾಗ ಆ ಜನರು ಅಸ್ಪೃಶ್ಯರೆಂಬುದು ತಿಳಿಯಿತು. ಆಗ ಗಾಂಧೀಜಿ ಸ್ಪೃಶ್ಯರ ಆ ದೊಡ್ಡ ಸೈನ್ಯವನ್ನು ಕುರಿತು ಹೀಗೆ ಹೇಳಿದರು. 'ನಮ್ಮೀ ಯಾತ್ರಿಕರ ಸಂಘ ಮತ್ತು ನಾನು ಕೂಡ, ಅಸ್ಪೃಶ್ಯರೇ ಆ ಜನರನ್ನು ಬೇರ್ಪಡಿಸಿ ದೂರ ಕುಳ್ಳಿರಿಸುವುದು ಅಗತ್ಯವೆನ್ನುವುದಾದರೆ ಸ್ವತಃ ಬಾಪೂಜಿ (ತಾವು ಕೂಡ) ಈ ಭಂಗಿ(ಚಮ್ಮಾರರ)ಗಳ ಜೊತೆ ಕುಳಿತೇ ಪ್ರವಚನ ನೀಡುವರೆಂದೂ, ಹೇಳಿ ಅವರು ಅಲಂಕರಿಸಿದ್ದ ವೇದಿಕೆಯನ್ನು ತ್ಯಜಿಸಿ ಆ ಅಸ್ಪೃಶ್ಯರ ನಡುವೆ ಹೋಗಿ ಕುಳಿತರು. ಆ ದಿನದಿಂದ ಮತ್ತೇನಲ್ಲದಿದ್ದರೂ ಯಾತ್ರಾವೇಳೆಯಲ್ಲಿ ಸ್ಪೃಶ್ಯ – ಅಸ್ಪೃಶ್ಯರ ಭೇದ–ಭಾವ ದೂರವಾಗಿದ್ದು ಸ್ವಲ್ಪ ಸಮಯದವರೆವಿಗೆ ಮೇಲು–ಕೀಳಿನ ಭೇದಭಾವ ನಾಶವಾಯಿತು.

ಒಂದು ದಿನ ಬಾಪೂಜಿ ರಾತ್ರಿ ಬಹಳ ಹೊತ್ತಾದರೂ ತಮ್ಮ ಅಂಚೆ ನೋಡುತ್ತಿದ್ದರು. ಇನ್ನೂ ನಿದ್ದೆಗಾಗಿ ಕಣ್ಣು ಹತ್ತಿತ್ತು, ಅಷ್ಟರಲ್ಲೇ ಅವರಿಗೆ ಟಪ್–ಟಪ್ ಎಂದು ಶಬ್ದ ಕೇಳಿಸಲಾರಂಭಿಸಿತು. ಬೆಳಿಗ್ಗೆ ಎದ್ದು ಕೇಳಿದಾಗ ಅಲ್ಲಿ ಆದಿವಾಸಿ ಮಹಿಳೆಯರು ಈ ಯಾತ್ರಿಕರಿಗೆ ತಿಂಡಿಗಾಗಿ ಜೋಳ–ಸಜ್ಜೆಯ ರೊಟ್ಟಿ ತಟ್ಟುತ್ತಿದ್ದರೆಂದು ತಿಳಿದುಬಂತು. ಗಾಂಧೀಜಿ ಒಳಗಿಂದೊಳಗೇ ಬೇಸರಗೊಂಡು ಸುಮ್ಮನಾದರು. ಮಾರನೆಯ ದಿನ ಮಾರ್ಗದಲ್ಲಿ ನಾಲೆ ದಾಟಬೇಕಾಗಿತ್ತು. ರಸ್ತೆ ತುಂಬಾ ಕೆಟ್ಟದಾಗಿತ್ತು. ಬೆಳ್ಳಂಬೆಳಿಗ್ಗೆ ಯಾತ್ರೆ ಶುರುವಾದಾಗ ಇನ್ನೂ ಕತ್ತಲು ಇದ್ದೇ ಇತ್ತು. ಅದರಿಂದಾಗಿ ಹರಕು ಚಿಂದಿ ಉಟ್ಟ ಇಬ್ಬರು, ಆದಿವಾಸಿಗಳು ತಮ್ಮ ತಲೆಯ ಮೇಲೆ ಉರಿಯುತ್ತಿದ್ದ ಕಿಟ್‌ಸನ್ ಲೈಟ್ ಹೊತ್ತು ಮುಂದೆ ನಡೆಯುತ್ತಿದ್ದರು. ಆ ಕಡಿದಾದ ಕಷ್ಟಕರ ಮಾರ್ಗದಲ್ಲಿ ಉರಿಯುವ ಹೊರೆಯನ್ನು ಹೊತ್ತು ಬಾಗಿದ್ದ ಅವರ ಸಣಕಲು ಕಾಲುಗಳು ನಡುಗುತ್ತಿದ್ದವು. ಹಳ್ಳಿಯ ಒಬ್ಬ ಉತ್ಸಾಹಿ ಕಾರ್ಯಕರ್ತ ಈ ಆದಿವಾಸಿಗಳಿಗೆ ಬೇಗ ನಡೆಯುವಂತೆ ಹೇಳಿ ಜೋರಾಗಿ ಮುಷ್ಟಿಕಟ್ಟಿ ಹೊಡೆದ. ಗಾಂಧೀಜಿಗೆ ಇನ್ನು ಹೆಚ್ಚು ತಡೆಯುವುದಾಗಲಿಲ್ಲ. ಉದ್ದುದ್ದನೆ ಹೆಜ್ಜೆ ಹಾಕಿ ಓಡುವ ಹಾಗೆ ಅವರು ಮುಂದಕ್ಕೆ ಹೊರಟುಹೋದರು. ಭಟಗಾಂನಲ್ಲಿ ತಂಗಬೇಕಾಗಿತ್ತು. ಅಲ್ಲಿ ಪ್ರಾರ್ಥನಾಸಭೆಯಲ್ಲಿ ಅವರ ಹೃದಯದಿಂದ ದುಃಖ ಉಮ್ಮಳಿಸಿ ಹೊರಟಿತು. ಬೆಳಗಿನ ಬೆಂಕಿ ಜ್ವಾಲೆ ಮಾತಿನ ಮೂಲಕ ಹೊರಕ್ಕೆ ಹೊಮ್ಮಿತು. ಮಹಾದೇವ ದೇಸಾಯಿ ಆ ಭಾಷಣದ ಸಾರಾಂಶವನ್ನು ತಮ್ಮ ಡೈರಿಯಲ್ಲಿ ಬರೆದಿದ್ದಾರೆ. ಅದನ್ನು ಇಲ್ಲಿ ಉದ್ಧರಿಸುವ ಆಸೆಯನ್ನು ನಾನು ಮೆಟ್ಟಿನಿಲ್ಲುವುದಕ್ಕಾಗುತ್ತಿಲ್ಲ.

"ಇಂದು ನಾವು ಶೂದ್ರರೆಂದು ತಿಳಿದಿರುವವರನ್ನು ನಮ್ಮ ಸ್ವಂತ ಅಣ್ಣ–ತಂಗಿಯರೆಂದು ತಿಳಿದ ದಿನ ನಮಗೆ ನಿಜವಾದ ಸ್ವಾತಂತ್ರ್ಯ ಸಿಗುತ್ತದೆ. ಈ ಅಪರಿಚಿತ ಮಹಿಳೆಯರು ರಾತ್ರಿ ಎದ್ದು ರೊಟ್ಟಿ ತಟ್ಟುವುದು ಸಾಯುವಂತಿರುವ

ಈ ಆದಿವಾಸಿಗಳ ಈ ದುರ್ಬಲ ಭುಜಗಳ ಮೇಲೆ ಇದೆಂಥ ಹೊರೆ! ನಮಗಾಗಿ ಇಷ್ಟು ಭಾರವಾದ ದೀಪ ಹೊತ್ತು ಹಳ್ಳ ಕೊಳ್ಳದ ರಸ್ತೆ ಮೇಲೆ ನಡೆಯುವಾಗ ಅಲ್ಲೆ ಎಲ್ಲಾದರೂ ಬಿದ್ದು ಅವರ ಕತೆ ಮುಗಿದು ಹೋದರೆ, ಆ ದೀನ–ಹೀನ ಸ್ಥಿತಿಯಲ್ಲಿರುವ ನಮ್ಮ ಸಹೋದರರಿಂದ ನಾವು ಇಂಥ ಕೆಲಸಗಳನ್ನು ಹೇಗೆ ಮಾಡಿಸುವುದಕ್ಕೆ ಆಗುತ್ತದೆಯೆ? ಅವನೇ ಯಾವಾಗಲಾದರೂ ಹಿಂದೂಸ್ತಾನದ ವೈಸ್‌ರಾಯ್ ಆಗಬಹುದು. ಅವನು ನಮ್ಮ ಪ್ರತಿನಿಧಿಯಾಗಿ ಆರಿಸಿಬರಬಹುದು. ನನ್ನ ಊಟ ತಿಂಡಿ ಆವಾಸಕ್ಕಾಗಿ ನೀವು ಇಷ್ಟು ಹಣ ಖರ್ಚು ಮಾಡುವುದಾದರೆ ವೈಸ್‌ರಾಯ್ ಸಂಬಳದ ವಿಷಯವಾಗಿ ನೀವು ಏನೂ ಮಾತನಾಡುವುದಕ್ಕಾಗುವುದಿಲ್ಲ. ಈಗ ಒಂದು ಲಕ್ಷ ಬಿಳಿ ಜನ ನಮ್ಮ ಮೇಲೆ ಅಧಿಕಾರ ನಡೆಸುತ್ತಿದ್ದಾರೆ, ನಮ್ಮನ್ನು ಲೂಟಿ ಮಾಡಿ ಕಬಳಿಸುತ್ತಿದ್ದಾರೆ. ಈ ಅತ್ಯಾಚಾರವನ್ನು ನಮ್ಮಿಂದ ಸಹಿಸುವುದಕ್ಕಾಗುತ್ತಿಲ್ಲ. ನಾವು ೩೦ ಕೋಟಿ ಜನ ಒಬ್ಬರನ್ನೊಬ್ಬರು ಲೂಟಿ ಮಾಡತೊಡಗಿದೆವೆಂದರೆ ಹುಡುಕಿದರೂ ನಮ್ಮ ಮೂಳೆ ಕೈಗೆ ಸಿಗುವಂತಿರುವುದಿಲ್ಲ. ಈ ಹೋರಾಟದಲ್ಲಿ ಲಕ್ಷಾಂತರ ಮಂದಿ ಸೈನಿಕರು ಹೊರಮೂಡುತ್ತಾರೆ. ಅವರುಗಳು ಈ ತೆರನಾದ ದುಂದುವೆಚ್ಚ ಮಾಡಲಾರಂಭಿಸಿದರೆ ನಿಮ್ಮ ಈ ಪವಿತ್ರ ಸಂಗ್ರಾಮ ಆಗ ದೂಷಿತವಾಗುತ್ತದೆ.

"ಆದ್ದರಿಂದ ನಾನು ತಾರ್ಕಿಕವಾಗಿ ಹೇಳುತ್ತಿದ್ದೇನೆ. ನಾನು ಹೀಗೆ ಹೇಳುತಿದ್ದೀನಿ ಅಂತ ನಾನು ಹೋರಾಟಬಿಟ್ಟು ಓಡಿಹೋಗ್ತಿನಿ ಅಂತ ಭಾವಿಸಬೇಡಿ, ಪ್ರತಿಜ್ಞೆ ಮಾಡಿ ಹೊರಟಿದ್ದೇನೆ. ಕಾಗೆ ಹಾಗೆ ನಾಯಿ ಹಾಗೆ ಸತ್ತರೂ ಸರಿ, ಸ್ವರಾಜ್ಯಬೇಕು ಅಂತ ಅವಸರ ಪಟ್ಟು ಅತ್ತುಕೊಂಡು ಹೊಡೆಸಿಕೊಂಡು ಸಾಯಬೇಕಾಗಿ ಬಂದರೂ ನಾನು ಹಿಂದಿರುಗುವವನಲ್ಲ" ಅಂದರು.

೬೭ ವರ್ಷಗಳ ನಂತರ ಆ ಶೋಷಣೆ ಇವತ್ತೂ ನಡೆಯುತ್ತಿದೆ. ಆದರೆ ನಮ್ಮ ಹೃದಯ ಕಲ್ಲಾಗಿ ಹೋಗಿದೆ. ನಮಗೆ ಏನೂ ಅನಿಸುವುದಿಲ್ಲ. ಆ ದರ್ಶನಕ್ಕಾಗಿ ಬಂದಿದ್ದ ಸಭಾಸದರೂ ನಮಗಿಂತ ಹೆಚ್ಚು ಸಂವೇದನೆ ಹೊಂದಿದ್ದರು ಎಂದನಿಸುತ್ತದೆ. ಸಭೆ ತುಂಬಶಾಂತಿಯಿಂದ ಕೂಡಿತ್ತು. ಸ್ವಯಂಸೇವಕರಾಗಿದ್ದ ಕಾರ್ಯಕರ್ತರು ನಾಚಿಕೆಯಿಂದ ಸ್ತಬ್ಧರಾದರು. ಅವರ ರಕ್ತ ಒಣಗಿಹೋಯಿತು. ತಕ್ಷಣ ಎಲ್ಲಾ ರೀತಿ ನೀತಿಗಳನ್ನು ಬದಲಾಯಿಸಲಾಯಿತು. ಲಕ್ಷಾಧಿಪತಿ ಸರ್ ಜಹಾಂಗೀರ್ ಪಿಟೀಟ್‌ನ ಅತಿ ಸುಂದರಳಾದ ನ್ಯಾಯಮೂರ್ತಿ ಮಗಳು, ಮೀರಾಬೆನ್ ಪಿಟೀಟ್ ಮತ್ತು ಸೂರತ್‌ನ ಕಲ್ಯಾಣ್‌ಜೀ ಭಾಯಿ ಮೆಣಸಿನ ಕಾಯಿ ಮಸಾಲೆ ಪದಾರ್ಥಗಳ ಪೊಟ್ಟಣ ಕಟ್ಟಿಕೊಂಡು ರಾತ್ರಿ ನಡೆದು ಮುಂದಿನ ತಂಗುದಾಣಕ್ಕೆ ತಲಪಿದರು. ಅಲ್ಲಿ ಊಟ ತಿಂಡಿ ವ್ಯವಸ್ಥೆ ಸರಿಯಾಗಿ ಸರಳವಾಗಿ ನಡೆಯಿತು. ಕಿಟ್‌ಸನ್ ಲೈಟಿನ ಬದಲಾಗಿ ಮರದ ದೊಣ್ಣೆಯ ಕೋಮಲವಾದ ಪಂಜು

ಬಂತು. ಗಾಂಧೀಜಿ ನಿಂಬೆಹಣ್ಣು ಒಂದನ್ನು ಬಿಟ್ಟು ಮಿಕ್ಕೆಲ್ಲಾ ಹಣ್ಣುಗಳನ್ನು ಬಿಟ್ಟುಬಿಟ್ಟರು. ಚರಖಾಕ್ಕೆ ಬದಲಾಗಿ ತಕಲಿ ಬಂತು. ಗಾಂಧೀಜಿಗೆ ಈಗ ಸ್ವಲ್ಪ ನೆಮ್ಮದಿಯಾಯಿತು.

ಮುಂದಿನ ತಂಗುದಾಣದಲ್ಲಿ ಗಾಂಧೀಜಿ ಭಾರತದ ಹಳ್ಳಿಗಳನ್ನು ವರ್ಣಿಸಿದರು. "ಗುಜರಾತ್‌ನಲ್ಲಿ ಇಂತಹ ಬಡಹಳ್ಳಿಗಳಲ್ಲಿ ಉತ್ತರ ಹಿಂದೂಸ್ತಾನದಲ್ಲಿ ರಾತ್ರಿ ದೀಪ ಸಹಿತ ಇಲ್ಲದ ಎಷ್ಟೋ ಹಳ್ಳಿಗಳ ಮುಂದೆ ನಾನು ಹಾದು ಹೋಗಿದ್ದೀನಿ. ನಾಯಿಗಳು ಬೊಗಳುತ್ತವೆ ಅಷ್ಟೆ, ಗುಜರಾತ್‌ನ ಮನೆಗಳಿಗೆ ಹೋಲಿಸಿದರೆ ಅಲ್ಲಿ ಮನೆಗಳು ಪಾಳುಬಿದ್ದಿರುವ ಹಾಗೆನಿಸುತ್ತದೆ. ಅಳು ಬರುತ್ತೆ, ದೇವರೇ ! ಗಂಗಾ ಯಮುನೆಯ ಫಲವತ್ತಾದ ಭೂಮಿಯಲ್ಲಿ ಉಡಲು ತೊಡಲು ಒಂದು ಹರಕಲು ಚಿಂದಿ ಕೂಡ ಇರುವುದಿಲ್ಲ. ಬಾಗಿಲು ಮುಚ್ಚಿ ಹರಕಲು ಚಿಂದಿಯನ್ನು ಸುತ್ತಿಕೊಂಡು ಮಲಗುತ್ತಾರೆ. ಮನೆ ಬರೀ ಕಚಡಾ ತಿಪ್ಪೆ, ಮತ್ತೆ ಜನ ಅನ್ನದ ಅಗಳು ಬೊಗಸೆ ನೀರಿಗಾಗಿ ಒದ್ದಾಡುತ್ತಾರೆ. ನನಗೆ ಯಾರಾದರೂ ಹಣ ಕೊಟ್ಟರೆ, ಅವರಿಗಾಗಿ ನಾನು ಬಾವಿ ತೋಡಿಸುತ್ತೇನೆ. ಪ್ರತಿಯೊಂದು ಮನೆಗೂ ಹಸು ಚರಖಾ ಕೊಡುತ್ತೇನೆ. ಆ ಪಾಳುಬಿದ್ದಿರುವ ಮನೆಗಳನ್ನು ದುರಸ್ತು ಮಾಡಿಸುತ್ತೇನೆ. ಸಂಪತ್ತಿದ್ದರೆ ತೋಟ ಮಾಡಿಸಿಕೊಡುತ್ತೇನೆ. ಆದರೆ ನಮ್ಮ ಕರ್ತವ್ಯ ತಿಳಿದುಕೊಂಡೇ ಈ ಹೋರಾಟಕ್ಕೆ ದುಮುಕಬೇಕು. ಈ  ರಾಕ್ಷಸ ಸರಕಾರದ ಜೊತೆ ಹೋರಾಡಬೇಕಾದರೆ ಘೋಷಣೆ ಕೂಗಿದರೆ, ಅಹಂಕಾರದಿಂದ ಕೆಲಸ ನಡೆಯುವುದಿಲ್ಲ. ಅಹಿಂಸೆ ಕುರುಡಾಗಿ ಜೀರ್ಣವಾದ ಚಿಂದಿ ಸ್ಥಿತಿಯ ಹಾಗೆ ಕಾಣಿಸುತ್ತದೆಂಬುದು ನಿಜ, ಆದರೆ ಅದರ ಜೊತೆ ಜನರ ದೈವೀಶಕ್ತಿ ಕೂಡಿಕೊಂಡರೆ ನಮ್ಮ ವಿರೋಧಿ ಸಪ್ಪೆಯಾಗುತ್ತಾನೆ, ಆಗ ಅವನಲ್ಲಿ ಸಹಜವಾಗಿ ದೈವೀಶಕ್ತಿ ಮೂಡುತ್ತದೆ, ಆ ಆದಿಶಕ್ತಿಯ ಎದುರು ಪ್ರಪಂಚದ ಯಾವ ರಾಜ್ಯವೂ ನಿಲ್ಲಲಾರದು, ಇಷ್ಟ ಇಲ್ಲದಿದ್ದರೂ ಅವರು ಬಾಗಲೇಬೇಕಾಗುತ್ತದೆ.

ಈ ಯಾತ್ರೆಗೆ ದೇಶ–ವಿದೇಶಗಳಿಂದ ಸುದ್ದಿ ಸಂಪಾದಕರು ಕಾಲ್ನಡಿಗೆಯಲ್ಲಿ ಹೊರಟಿದ್ದರು. ಅವರಿಗೆ ಇದೊಂದು ಅಪೂರ್ವಯಾತ್ರೆಯಾಗಿತ್ತು. ಮಾರ್ಚ್ ತಿಂಗಳಲ್ಲಿ ತೀವ್ರವಾಗುತ್ತಿದ್ದ ಬಿಸಿಲಲ್ಲಿ, ಯಾವ ಆಸರೆಯೂ ಇಲ್ಲದೆ ಇವರೆಲ್ಲರೂ ಗಾಂಧೀಜಿ ಜೊತೆಗೆ ನಡೆದರು. ಮಧ್ಯದ ತಾಣದಲ್ಲಿ ಒಂದು ಸಾರಿ ಜವಾಹರಲಾಲ ಮತ್ತು ಮೋತಿಲಾಲ ಭೇಟಿಯಾಗಬಂದರು. ಅದೇ ಸಂದರ್ಭದಲ್ಲಿ ಕಾಂಗ್ರೆಸ್‌ನ ಮುಂದಿನ ಕಾರ್ಯಕ್ರಮಗಳ ಬಗ್ಗೆ ತೀರ್ಮಾನಿಸಿದರು. ಎಲ್ಲಾ ಮುಖಂಡರು ಮತ್ತು ಕಾಂಗ್ರೆಸ್ ಅಧ್ಯಕ್ಷ, ಅಥವಾ ವರ್ಕಿಂಗ್ ಕಮಿಟಿಯ ಸದಸ್ಯರೆಲ್ಲಾ ಬಂಧನಕ್ಕೊಳಗಾದರೆ, ಪ್ರತಿಯೊಬ್ಬ ಪ್ರಾಂತ್ಯ ಸಮಿತಿಯ ಅಧ್ಯಕ್ಷನಾದವನು ಬೇರೆ ಸದಸ್ಯರನ್ನು ನಾಮಾಂಕನಗೊಳಿಸಿಕೊಳ್ಳಲು ಅಧಿಕಾರ ನೀಡಲಾಯಿತು. ಅಂದರೆ

ಮುಖಂಡರುಗಳು ಜೈಲುವಾಸಕ್ಕೆ ಹೋಗುತ್ತಿದ್ದ ಹಾಗೆ ಕಾಂಗ್ರೆಸ್ ಕಾರ್ಯಾಲಯ ಮುಚ್ಚದ ಹಾಗೆ ಹೊಸ ಹೊಸ ಜನ ಸತ್ಯಾಗ್ರಹ ನಡೆಸಲಿ ಎಂಬುದು ಅವರ ಉದ್ದೇಶ ಆಗಿತ್ತು. ಆಗ ಕೆಲವು ದಿವಸ ಎಂತಹ ಪರಿಸ್ಥಿತಿ ಅಂದರೆ ಎಲ್ಲಾ ಜಿಲ್ಲಾ ಸಮಿತಿಗಳನ್ನೂ ಯಾರಾದರೊಬ್ಬ ಮಹಿಳೆ ನಡೆಸಿಕೊಂಡು ಹೋಗುತ್ತಿದ್ದರು, ಹೆಚ್ಚು ಜನ ಗಂಡಸರು ಜೈಲಿನೊಳಗಿದ್ದರು. ಅದರಿಂದ ಮಹಿಳೆಯರೇ ಸಂಸ್ಥೆಯನ್ನು ನಡೆಸುತ್ತಿದ್ದರು. ಈ ನಡುವೆ ಕಮಲಾ ನೆಹರೂ ಅಲಹಾಬಾದ್ ಸಮಿತಿಯ ಕೆಲಸವನ್ನು ಬಹಳ ಚೆನ್ನಾಗಿ ನಡೆಸಿದ್ದರು.

ಮಧ್ಯದ ತಾಣದಲ್ಲಿ ಅಬ್ಬಾಸ್ ತೈಯ್ಯಬ್‌ಜೀ ಮತ್ತು ಫೀಲ್ಡ್ ಮಾರ್ಷಲ್ ಸರೋಜಿನಿ ನಾಯ್ಡು ಕೂಡ ಬಾಪೂಜಿ ಜೊತೆ ಕಾಲ್ನಡಿಗೆ ಯಾತ್ರೆಗೆ ಸೇರಿಕೊಂಡಿದ್ದರು, ದೇಶದ ಜನರೆಲ್ಲ ಬರುತ್ತಿದ್ದರು. ಈ ವಿಶ್ವಪ್ರಸಿದ್ಧ ಕೂಚ್‌ನ ಪುಣ್ಯವನ್ನು ತೆಗೆದುಕೊಂಡು ಹಿಂದಿರುಗುತ್ತಿದ್ದರು. ಎಷ್ಟು ಜನಗಳ ಹೆಸರನ್ನು ಎಣಿಸಲಿ? ಯಾರನ್ನು ಬಿಡಲಿ? ನನ್ನ ತಾಯಿ ನಿರ್ಮಲಾ ಗಾಂಧೀಗೆ ಆಗ ನಾನು ನಾಲ್ಕು ತಿಂಗಳ ಮಗು. ನನ್ನನ್ನು ಕಂಕುಳಲ್ಲಿ ಎತ್ತಿಕೊಂಡು ಐದು ದಿನ ಈ ಪಾದಯಾತ್ರೆ ಮಾಡಿದ್ದರಂತೆ. ಅಮ್ಮ ನನಗೆ ಹಾಲು ಮಾತ್ರ ಕುಡಿಸುತ್ತಿದ್ದಳು. ಬಾಕಿ ವೇಳೆ ಉತ್ಸಾಹಿತರಾಗಿದ್ದ ಯಾತ್ರಿಕರು ಒಬ್ಬರಾದ ಮೇಲೆ ಒಬ್ಬರ ಹಾಗೆ ನನ್ನನ್ನು ಎತ್ತಿಕೊಂಡಿರುತ್ತಿದ್ದರಂತೆ, ಹಾಗೆ ಯಾತ್ರೆ ಮಾಡಿದ್ದು ಅಂತ ಹೇಳುತ್ತಾರೆ. ೨೫ ದಿವಸಗಳಲ್ಲಿ ೨೪೧ ಮೈಲುಗಳ ಯಾತ್ರೆ ಮುಗಿಸಿ ೫ನೇ ಏಪ್ರಿಲ್ ಮಧ್ಯಾಹ್ನ ಈ ಸೈನಿಕರ ಸಂಘ ದಾಂಡೀ ಸಮುದ್ರ ತೀರವನ್ನು ತಲಪಿತು. ಹತ್ತಿರದ ಕರಾಡಿ ಹಳ್ಳಿಯಲ್ಲಿ ಗಾಂಧೀಜಿಗೆ ಬೊಂಬುಗಳ ಗುಡಿಸಲು ಮಾಡಿದರು. ಮಿಕ್ಕವರೆಲ್ಲಾ ಮರಳ ಮೇಲೆ ಆಕಾಶದ ಕೆಳಗೆ ಮಲಗಿಕೊಂಡರು. ಮಾರನೆಯ ದಿನ ಭಗವಾನ್ ಸೂರ್ಯಮೂಡಿ ಬರುವುದಕ್ಕೂ ಮೊದಲೆ ಕೆಂಪುಬಣ್ಣ ಪಶ್ಚಿಮ ದಿಕ್ಕಿನ ಅರಬ್ಬೀ ಸಮುದ್ರವನ್ನು ಕುಂಕುಮದ ಬಣ್ಣಕ್ಕೆ ತಿರುಗಿಸುತ್ತಿತ್ತು. ಆಗ ಸಾಮೂಹಿಕ ಪ್ರಾರ್ಥನೆ ನಂತರ ಗಾಂಧೀಜಿ ಸಮುದ್ರದಲ್ಲಿ ಸ್ನಾನ ಮಾಡಿದರು. ಸೂರ್ಯನಿಗೆ ಅರ್ಘ್ಯ ನೀಡಿದರು. ಆಗ ಜಲಿಯನ್ ವಾಲಾಬಾಗ್‌ನ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಿ ಅಲ್ಲಲ್ಲಿ ಪ್ರಾಕೃತಿಕವಾಗಿ ಉಪ್ಪು ಕಟ್ಟಿದ್ದನ್ನು ನೋಡಿ ಅದರ ಪದರಗಳನ್ನು ಎತ್ತಿ ಅವರ ಜೊತೆ ಸಾವಿರಾರು ಮಂದಿ ಮಹಿಳೆಯರೂ ಪುರುಷರೂ ಮುಷ್ಟಿ ತುಂಬಾ ಉಪ್ಪನ್ನೆತ್ತಿ ಸರಕಾರಿ ಕಾನೂನನ್ನು ಸವಿನಯವಾಗಿ ತೊಡೆದರು. ಲಕ್ಷಾಂತರ ಜನರ ಮನಸ್ಸಿನಲ್ಲಿ ಎಷ್ಟೋ ದಿನಗಳಿಂದ ಕವಿದಿದ್ದ ಸರಕಾರದ ಭಯ ಈ ಚಿಟಿಕೆ ಉಪ್ಪು ಎತ್ತಿ ದೂರವಾಯಿತು. ಭಯ ಮಾಯವಾಯಿತು. ಹಿಂದೂಸ್ತಾನಿ ನಿರ್ಭಯನಾದ. ಸ್ವತಂತ್ರ ವ್ಯಕ್ತಿಯ ಮೊಟ್ಟ ಮೊದಲ ಲಕ್ಷಣ ಅವನ ನಿರ್ಭಯತೆ ಆಗಿರುತ್ತದೆ. ಗಾಂಧೀಜಿಯವರ ಕೈಲಿ ತಯಾರಾದ ಉಪ್ಪಿನ ಪೊಟ್ಟಣ ೧೫೦೦ ರೂ. ಗಳಿಗೆ ಹರಾಜಾಯಿತು.

ಈ ಘಟನೆಯಿಂದಾಗಿ ಇಡೀ ದೇಶ ತಲ್ಲಣಿಸಿತು. ಸರಕಾರಿ ದಮನ ಚಕ್ರ ಆರಂಭವಾಯಿತು. ರಾತ್ರಿ ಬೆಳಿಗ್ಗೆ ಎನ್ನದೆ ಸತ್ಯಾಗ್ರಹಿಗಳ ಬಂಧನಗಳಾದವು. ತಟತಟ ಲಾಠಿಗಳು ಶಬ್ದ ಮಾಡಿದವು. ಸತ್ಯಾಗ್ರಹಿಗಳ ತಲೆಗಳು ಒಡೆದವು. ಈ ದೌರ್ಜನ್ಯಗಳೆದುರು ಗಾಂಧೀಜಿಯ 'ನವಜೀವನ' ಸ್ವಾಮಿ ಆನಂದರ ಪ್ರಾತಿನಿಧ್ಯದಲ್ಲಿ ಲಾವಾ ಉಗುಳುತ್ತಿತ್ತು. ದಾಂಡಿಯಿಂದ ಗಾಂಧೀಜಿ ಬರೆದರು: `I want world sympathy in this battle of right against might' (ಸರಕಾರದ ವಿರುದ್ಧ ಸತ್ಯದ ಈ ಹೋರಾಟದಲ್ಲಿ ನನಗೆ ಪ್ರಪಂಚದ ಸಹಾನುಭೂತಿ ಬೇಕು.)

ಗಾಂಧೀಜಿ ಲಾರ್ಡ್ ಇರ್ವಿನ್‌ಗೆ ಜ್ವಲಂತ ಪತ್ರವನ್ನು ಬರೆದು ಧರಾಸಣಾದ ಸರಕಾರಿ ಉಪ್ಪಿನ ಕೇಂದ್ರದ ಕಡೆಗೆ ಸತ್ಯಾಗ್ರಹಿಗಳು ಪ್ರಯಾಣ ಮಾಡುವರೆಂದು ತಿಳಿಸಿದರು. ಇನ್ನು ಗಾಂಧೀಜಿಯನ್ನು ಹೊರಗಿಡುವುದು ಹೊರೆಯಾಯಿತು. ೫ ಮೇ ೧೯೩೦ ರ ರಾತ್ರಿಯ ಕತ್ತಲೆಯಲ್ಲಿ ಪೋಲೀಸರು ಬಂದು ಬಾಪೂಜಿಯನ್ನು ಹಿಡಿದುಕೊಂಡು ವಿಶೇಷ ರೈಲಿನಲ್ಲಿ ಪೂನಾಗೆ ಕೊಂಡೊಯ್ದು ಯರವಾಡಾ ಜೈಲಿಗೆ ಹಾಕಿದರು.

ಈಗ ವಯಸ್ಸಾದ ಅಬ್ಬಾಸ್ ತೈಯ್ಯಾಬ್‌ಜೀ ಮುಖಂಡರಾದರು. ಸರೋಜಿನಿ ನಾಯ್ಡು ಫೀಲ್ಡ್ ಮಾರ್ಷಲ್ ಆದರು. ಧರಾಸಣಾ ಗೋದಾಮಿನ ಮೇಲೆ ಆಕ್ರಮಣಕ್ಕಾಗಿ ಇವರುಗಳು ಹೊರಟಾಗ ಪೋಲೀಸ್ ಕಮೀಷನರ್‌ನು ಅಬ್ಬಾಸ್ ಸಾಹಬ್‌ಗೆ ಈ ಅನಧಿಕೃತ ಜನಸೈನ್ಯ ಕಾನೂನಿಗೆ ವಿರುದ್ಧವಾದ್ದದ್ದೆಂದು ಹೇಳಿ ತಕ್ಷಣ ಅವರನ್ನೂ ಅವರ ಜೊತೆಗಾರರನ್ನೂ ಬಂಧಿಸಿದ. ಆಗ ಜೊತೆಗಾರರ ಒತ್ತಾಯದ ಮೇರೆಗೆ ಸರೋಜಿನಿ ನಾಯ್ಡು ಮತ್ತು ಮಣಿಲಾಲ ಗಾಂಧಿ ಏರ್ಪಾಡು ಮಾಡುವ ನೆಪದಲ್ಲಿ ಎದುರು ಪಂಕ್ತಿಯಲ್ಲಿ ನುಸುಳಿಕೊಂಡು ಹೋದರು. ಮಾರನೆ ದಿನ ಆರಿಸಿದ ಕೆಲವರನ್ನು ಸರೋಜಿನಿ ಮತ್ತು ಮಣಿಲಾಲ ಗಾಂಧಿಯ ಮುಖಂಡತ್ವದಲ್ಲಿ ಧರಾಸಣಾನ ಉಪ್ಪಿನ ಗೋದಾಮಿನ ಮೇಲೆ ಮುತ್ತಿಗೆ ಹಾಕಿದರು. ಆಗ ಪೊಲೀಸ್ ಬಹಳ ಕಠೋರವಾಗಿ ಸತ್ಯಾಗ್ರಹಿಗಳ ಮೇಲೆ ಲಾಠಿ ಛಾರ್ಜ್ ಮಾಡಿತು. ಮಣಿಲಾಲ್ ಗಾಂಧೀಗೆ ಭಯಂಕರವಾಗಿ ಏಟುಗಳು ಬಿದ್ದವಾದರೂ ಅವರು ಹಿಂಜರಿಯಲಿಲ್ಲ. ಆಫ್ರಿಕಾದಿಂದ ಅವರು ಬಂದುದು ಸಾರ್ಥಕವಾಯಿತು. ಬಾಪೂಜಿಗೆ ಬದಲು ಅವರ ಮಗ ಧರಾಸಣದ ಲಾಠಿ ಏಟುಗಳನ್ನು ತಿಂದರು. ಸಮುದ್ರದ ಅಲೆಗಳ ಹಾಗೆ ಲೈನುಗಟ್ಟಲೆ ಸ್ವಯಂ ಸೇವಕರು ಮುಂದುವರಿದರು ಮತ್ತು ಏಟುಗಳನ್ನು ಸಹಿಸುತ್ತಾ ಮೂರ್ಛೆ ಹೋದರಾದರೂ ತನ್ನನ್ನು ಉಳಿಸಿಕೊಳ್ಳಲೋಸುಗ ಒಂದು ಬೆರಳನ್ನು ಎತ್ತಲಿಲ್ಲ. ಬಾಯಿಂದ ಉಸ್ಸೆಂದು ಕೂಡ ಧ್ವನಿ ಹೊರಡಿಸಲಿಲ್ಲ.

ಸರಕಾರ ದಂಗೆಗೆ ಮೊದಲು ೧೮೧೮ರ ಒಂದು ಹಳೆಯ ಕಾನೂನಿನ

ಹೆಸರು ಹೇಳಿ ಗಾಂಧೀಜಿಯನ್ನು ಕೇಸ್ ಹಾಕದೆ, ವಿಚಾರಣೆ ನಡೆಸದೆ, ಅನಿಶ್ಚಿತ ಅವಧಿಗಾಗಿ ಜೈಲಿನಲ್ಲಿ ಬಂಧಿಸಿಟ್ಟಿತ್ತು. ಅವರನ್ನು ದಂಗೆಕೋರ, ದೇಶದ್ರೋಹಿ ಶತ್ರು ಎಂದೆಲ್ಲಾ ಘೋಷಿಸಿದರು. ಸರಕಾರ ಕ್ರೂರಿಯಾಯಿತು. ನಾಗರಿಕ ಅಧಿಕಾರಗಳನ್ನು ಕಿತ್ತುಕೊಂಡು ವಿಚಾರ ಸ್ವಾತಂತ್ರ್ಯಕ್ಕೆ ಮುಟ್ಟುಗೋಲುಹಾಕಿತು. ಸತ್ಯಾಗ್ರಹಿಗಳಿಂದ ಜೈಲುಗಳು ತುಂಬಿಹೋದಾಗ ಸರಕಾರ ಡೇರೆಗಳ ಜೈಲುಗಳನ್ನಾರಂಭಿಸಿತು. ಇವರಂತೂ ಸ್ವೇಚ್ಛೆಯಿಂದ ಜೈಲುವಾಸವನ್ನು ಒಪ್ಪಿಕೊಂಡಿದ್ದುದರಿಂದ ಇವರುಗಳು ತಪ್ಪಿಸಿಕೊಂಡು ಹೋಗುವರೆಂಬ ಭಯ ಇರಲೇ ಇಲ್ಲ. ಸರಕಾರ ಈ ಕೈದಿಗಳಿಗೆ ಕಠೋರ ಶಿಕ್ಷೆ ನೀಡಿತು. ಭೀಮರಾಡ್ ಹಳ್ಳಿಯಲ್ಲಿ ನಮ್ಮ ತಂದೆಯೂ ಉಪ್ಪು ಮಾಡಿದ ಅಪರಾಧಕ್ಕಾಗಿ ಬಂಧನಕ್ಕೊಳಗಾಗಿದ್ದರು. ಸರಕಾರ ಅವರ ಕೈಲಿ ಭಾರಿ ಬೀಸುವ ಕಲ್ಲಿನಲ್ಲಿ ಬೀಸಿಸಿತು. ಮತ್ತು ಇಂಗ್ಲಿಷ್ ಜೇಲರ್ ಎದುರು ಜೈಲಿನ ಟೋಪಿ ತೆಗೆಯಲಿಲ್ಲವೆಂದು ಅವರಿಗೆ ಸಶ್ರಮ ಶಿಕ್ಷೆಯ ದಂಡನೆಯನ್ನು ನೀಡಿದರು. ನಮ್ಮ ತಂದೆ ಇವನ್ನೆಲ್ಲಾ ಸುಮ್ಮನೆ ಸಹಿಸಿದರು.

ಈ ಸತ್ಯಾಗ್ರಹದಲ್ಲಿ ಮಹಿಳೆಯರು ಕೂಡ ಬಹಳ ಧೈರ್ಯದಿಂದ ಏಟು ತಿಂದು  ಜೈಲಿಗೆ ಹೋದರು. ಕೆಲವು ದಿನಗಳ ನಂತರ ನಮ್ಮಜ್ಜಿ ಮತ್ತು ಮಿಕ್ಕ ಆಶ್ರಮವಾಸಿ ಮಹಿಳೆಯರು ಕೂಡ ಬಂಧಿಸಲ್ಪಟ್ಟರು. ಆಗ ನಮ್ಮ ತಾಯಿ ಆಶ್ರಮದ ಖಾದಿ ಭಂಡಾರವನ್ನು ನಡೆಸಿದಳು. ಆಶ್ರಮದ ಕಕ್ಕಸ್ಸನ್ನು ತೊಳೆದು ಅಡುಗೆ ಮಾಡಿ ಈ ಮೂರು ಕೆಲಸಗಳನ್ನು ತಾನೊಬ್ಬಳೇ ನಿರ್ವಹಿಸಿದಳು. ಅವರ ಇಡೀ ಕುಟುಂಬ ಜೈಲಿನಲ್ಲಿತ್ತು. ಅತ್ತೆ, ಮಾವ, ಮೈದ, ಭಾವ, ಗಂಡ ಎಲ್ಲರೂ ಜೈಲಿನಲ್ಲಿದ್ದರು. ಸಮಾಧಾನಪಟ್ಟುಕೊಳ್ಳಲು ಆರುತಿಂಗಳ ಮಗಳೊಬ್ಬಳಾದ ನಾನು ಮಾತ್ರ ಅವರ ಬಳಿ ಇದ್ದೆ.

ಮೊದಲ, ಎರಡನೆಯ, ಮೂರು, ನಾಲ್ಕನೆಯ ಹಂತದ ದೇಶದ ಎಲ್ಲ ಮುಖಂಡರು ಕಾರ್ಯಕರ್ತರು ಜೈಲಿನಲ್ಲಿ ಕೈದಿಗಳಾಗಿದ್ದರು. ಮಹಿಳೆ, ಪುರುಷ, ವಿದ್ಯಾರ್ಥಿನಿ, ಶಿಕ್ಷಕ, ವ್ಯಾಪಾರಿ, ಉದ್ಯೋಗಪತಿ, ಶ್ರಮಿಕ, ರೈತ, ನೌಕರಿ ಮಾಡುವ. ಚಿಕ್ಕ–ದೊಡ್ಡ ಕುಶಲ ಕರ್ಮಿಗಳು, ವ್ಯವಹಾರಸ್ಥರು, ಎಲ್ಲರೂ ಜೈಲಿಗೆ ಹೋದರು. ಅಲ್ಲಲ್ಲಿ ಮೆರವಣಿಗೆ ಹೊರಡುತ್ತಿತ್ತು ಮತ್ತು ಲಾಠಿಛಾರ್ಜ್ ನಡೆಯುತ್ತಿತ್ತು. ವಿದೇಶಿ ಪದಾರ್ಥಗಳು ಮತ್ತು ವಿದೇಶಿ ಬಟ್ಟೆಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಿದರು. ಸರಕಾರ ಕಾಂಗ್ರೆಸ್ಸನ್ನು ಕಾನೂನುಬಾಹಿರವೆಂದು ಘೋಷಿಸಿತು. ಮತ್ತು ಅಧ್ಯಕ್ಷ ಜವಾಹರಲಾಲ ನಂತರ ಅಸ್ಥಾಯಿ ಅಧ್ಯಕ್ಷರಾಗಿದ್ದ ಮೋತಿಲಾಲ ನೆಹರೂ ಅವರನ್ನು ಜೂನ್ ೧೯೩೦ರಲ್ಲಿ ಬಂಧಿಸಿತು. ಈ ಹೋರಾಟದ ಆರಂಭದಲ್ಲಿ ಮೋತಿಲಾಲರು ತಮ್ಮ ಮನೆಯನ್ನು ದೇಶಕ್ಕಾಗಿ ದಾನವಾಗಿ ನೀಡಿದರು. ನೆಹರೂ ಕುಟುಂಬದ

ಸ್ವರೂಪರಾಣಿ, ವಿಜಯಲಕ್ಷ್ಮಿ, ಕೃಷ್ಣಾ ಮತ್ತು ಕಮಲಾ ನೆಹರೂ ಎಲ್ಲ ಮಹಿಳೆಯರು ಜ್ಯೇಷ್ಠ ಮಾಸದ ಉರಿಬಿಸಿಲಿನಲ್ಲಿ ಮದ್ಯದಂಗಡಿಗಳ ಎದುರು ಧರಣಿ ಕೂತರು. ಎಲ್ಲಕ್ಕಿಂತ ಹೆಚ್ಚಾಗಿ ಆಶ್ಚರ್ಯ ಮೂಡಿಸುವ ಹೋರಾಟ ಪೇಷಾವರನಲ್ಲಿ ನಡೆಯಿತು. ಗಲಭೆ ಹರಡಬಹುದೆಂಬ ಅನುಮಾನದಿಂದ ಸರಕಾರ ಅಲ್ಲಿದ್ದ ನಿಃಶಸ್ತ್ರರಾದ ಪಠಾಣರ ಮೇಲೆ ಲಾಠಿ ಛಾರ್ಜ್ ಮಾಡಿತು. ಅನೇಕ ಸ್ವಯಂಸೇವಕರು ಕುದುರೆ ಕಾಲುಗಳ ತುಳಿತಕ್ಕೆ ಒಳಗಾದರು. ನೂರಾರು ಜನರು ಸಾವಿಗೊಳಗಾದರು. ಆದರೆ ಅಹಿಂಸೆಯ ಪಾಠವನ್ನು ತಮ್ಮದಾಗಿಸಿಕೊಂಡಿದ್ದರಿಂದ ಸುಮ್ಮನಿದ್ದು ಈ ಕುಪಿತ ಸ್ವಭಾವದ ಏಟುಗಳನ್ನು ತಿಂದರು. ಆದರೆ ಪೋಲೀಸರ ಮೇಲೆ ಕೈ ಎತ್ತಲಿಲ್ಲ. ಸರಕಾರದ ಮುಂದೆ ಬಾಗಲೂ ಇಲ್ಲ, ಸರಹದ್ದಿನ ಜನರ ಈ ಅಹಿಂಸಾತ್ಮಕ ಸತ್ಯಾಗ್ರಹದ ಪ್ರದರ್ಶನ ಹಿಂದೆಂದೂ ಕಾಣದ್ದಾಗಿತ್ತು. ಸರಕಾರಿ ದೌರ್ಜನ್ಯ ಬೊಂಬಾಯಿ ಮೇಲೆ ತೀವ್ರವಾಗಿ ನಡೆಯಿತು. ಅಲ್ಲಿ ಹೆಚ್ಚು ಜನ ಶ್ರಮಿಕರಿದ್ದರು. ಸಾಮಾನ್ಯವಾಗಿ ಪ್ರತಿದಿನವೂ ಅಲ್ಲಿ ಸವಿನಯ ಕಾನೂನು ಭಂಗ ನಡೆಯುತ್ತಿತ್ತು. ನಂತರ ಲಾಠಿ ಛಾರ್ಜ್ ಆಗುತ್ತಿತ್ತು. ಹತ್ತು ತಿಂಗಳು ಕಾಲ ಈ ದಮನ ಚಕ್ರ ನಡೆಯಿತು. ಆದರೆ ಜನ ಧೃತಿಗೆಡಲಿಲ್ಲ. ಸರಕಾರ ಎಲ್ಲಾ ತರಹ ತೊಂದರೆ ಕೊಡುತ್ತಿತ್ತು. ಆದರೆ ವಿಲಾಯಿತಿ ಸರಕಾರದ ಈ ದಮನನೀತಿ ದೇಶದ ಜನರ ಉತ್ಸಾಹವನ್ನಾಗಲಿ, ಸ್ವಾತಂತ್ರ್ಯ ಹೋರಾಟವನ್ನಾಗಲಿ ಕೊನೆಗೊಳಿಸಲಾಗಲಿಲ್ಲ. ಮೊದಲ ಬಾರಿ ಭಾರತದ ಇತಿಹಾಸದಲ್ಲಿ ನಮ್ರತೆ ಹಾಗೂ ದೃಢತೆಯಿಂದ ಜನರು ಅನ್ಯಾಯವನ್ನೆದುರಿಸಿದರು. ಅದಕ್ಕಾಗಿ ಎಷ್ಟೇ ಸಹಿಸಬೇಕಾದರೂ ಕೊನೆಯಲ್ಲಿ ಇಂತಹ ಅಹಿಂಸಾತ್ಮಕ ಪ್ರತೀಕಾರದೆದುರು ಸರಕಾರ ಬಾಗಲೇಬೇಕಾಯಿತು.

ಸರಕಾರ ಸತ್ಯಾಗ್ರಹಿಗಳನ್ನು ಆಡು ಕುರಿಗಳ ಹಾಗೆ ಜೈಲಿನಲ್ಲಿ ತುಂಬಿ ಇಟ್ಟಿತ್ತು. ಅನ್ಯಾಯ ಮಾಡುವುದು ಮಾಡುತ್ತಲೇ ಇತ್ತು, ಅಷ್ಟಾಗಿಯೂ ಯಾವೊಬ್ಬ ಸತ್ಯಾಗ್ರಹಿ ಕೂಡ ಸಮಾಧಾನ ಮಾಡಲಿ ಅಂತ ಬೇಡಿಕೊಳ್ಳಲಿಲ್ಲ. ಆದರೆ (ಬ್ರಿಟಿಷ್) ರಾಜ್ಯ ಈ ಉಪ್ಪು ಸತ್ಯಾಗ್ರಹದಿಂದ ಬೇಸತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ ಸರ್ ತೇಜ್ ಬಹಾದೂರ್ ಸಪ್ರೂ ಮತ್ತು ಜಯಕರ್ ಇಬ್ಬರೂ ಒಪ್ಪಂದದ ಪ್ರಸ್ತಾಪ ಮಾಡಿದರು. ಮೊದಲು ಅವರಿಬ್ಬರೂ ಯರವಾಡಾ ಜೈಲಿನಲ್ಲಿ ಗಾಂಧೀಜಿಯವರನ್ನು ಭೇಟಿಯಾದರು. ಅವರ ಹಾಗೂ ಗಾಂಧೀಜಿಯವರ ವಿಚಾರಗಳ ನಡುವೆ ಯಾವುದೇ ಹೊಂದಾಣಿಕೆಯೂ ಇರಲಿಲ್ಲ. ಒಪ್ಪಂದದ ಯಾವ ಮಾರ್ಗವನ್ನೂ ಬಿಡಬಾರದಾಗಿದ್ದುದರಿಂದ ಗಾಂಧೀಜಿ ಅವರಿಬ್ಬರಿಗೂ ಪತ್ರ ನೀಡಿ ಜವಾಹರಲಾಲ ನೆಹರೂ, ಮತ್ತೆ ಮೋತಿಲಾಲ ನೆಹರೂ ಬಳಿಗೆ ನೈನಿ ಜೈಲಿಗೆ ಕಳುಹಿಸಿದರು. ನೈನಿ ಜೈಲಿನಲ್ಲೂ ಎರಡು ದಿನಗಳ ಕಾಲ ಚರ್ಚೆ ನಡೆಯಿತು. ಆದರೆ ನಿರ್ಣಯಕ್ಕೆ ತಲುಪುವುದು ಕಷ್ಟವಾಗಿತ್ತಾದ್ದರಿಂದ ಮೋತಿಲಾಲಜೀ, ಜವಾಹರಲಾಲಜೀ ಮತ್ತು

ಕಾಂಗ್ರೆಸ್ ಸಚಿವರಾಗಿದ್ದ ಡಾ॥ ಸೈಯದ್ ಮಹಾಮೂದ್‌ನ್ನು ಟ್ರೈನ್‌ನಲ್ಲಿ ಪೂನಾಗೆ ಕರೆತಂದರು. ವರ್ಕಿಂಗ್ ಕಮಿಟಿಯ ಸ್ಥಾಯಿ ಸದಸ್ಯರಾಗಿದ್ದ ಸರದಾರ್ ಪಟೇಲ್ ಮತ್ತು ಜಯರಾಮದಾಸ್ ದೌಲತರಾಮ್‌ನನ್ನೂ ಯರವಾಡಾ ಜೈಲಿಗೆ ಕರೆತಂದರು. ಹೀಗೆ ಜೈಲುವಾಸದಲ್ಲಿ ಮೂರು ದಿವಸಗಳವರೆವಿಗೂ ನಿರಂತರವಾಗಿ ಚರ್ಚೆ ನಡೆಯಿತು. ಸಪ್ರೂ, ಜಯಕರ್ ರಾಜಕೀಯ ವಿಚಾರಗಳು ಮತ್ತು ಕಾಂಗ್ರೆಸ್‌ನ ಸ್ವರಾಜ್ಯದ ಕಲ್ಪನೆ– ಇವುಗಳಲ್ಲಿ ಆಕಾಶ– ಪಾತಾಳದಷ್ಟು ಅಂತರ ಇತ್ತು. ಹಾಗಾಗಿ ಯಾವ ಸ್ಪಷ್ಟ ಒಪ್ಪಂದಕ್ಕೂ ಎಡೆ ಇರಲಿಲ್ಲ. ಆದರೆ ಗಾಂಧೀಜಿ ಒಪ್ಪಂದದ ಕನಿಷ್ಠ ಷರತ್ತುಗಳನ್ನು ಒಂದು ಪತ್ರದಲ್ಲಿ ಬರೆದು ಈ ಇಬ್ಬರು ಸಭ್ಯರ ಕೈಲಿ ಕೊಟ್ಟು ಸರಕಾರಕ್ಕೆ ಕಳುಹಿಸಿದರು.

ಮೋತಿಲಾಲರ ಆರೋಗ್ಯ ಮೊದಲೇ ಕೆಟ್ಟಿತ್ತು. ಜೈಲಿನ ಕಷ್ಟಗಳಿಂದ ಮತ್ತು ಮಾನಸಿಕ ಚಿಂತೆಗಳಿಂದ ಅವರು ಮತ್ತೂ ಖಾಯಿಲೆ ಬಿದ್ದರು. ಆದರಿಂದ ಸರಕಾರ ಅವರನ್ನು ಬಿಡುಗಡೆ ಮಾಡಿತು. ಅವರ ಮನೆಯವರುಗಳು ಅವರನ್ನು ಆಗ್ನೇಯ ಏಷ್ಯಾ ಯಾತ್ರೆಗೆ ಕರೆದುಕೊಂಡು ಹೋಗಬೇಕೆಂದಿದ್ದರು. ಆದರೆ ಅವರು ಯಾತ್ರೆಯ ಶ್ರಮವನ್ನು ಕೂಡ ಸಹಿಸುವ ಸ್ಥಿತಿಯಲ್ಲಿರಲ್ಲಿಲ್ಲ. ಕಲ್ಕತ್ತೆಗೆ ಹೋಗಿ ಯಾತ್ರೆಯನ್ನು ನಿಲ್ಲಿಸಬೇಕಾಗಿ ಬಂತು, ಕಲ್ಕತ್ತೆಯಲ್ಲಿ ಡಾ॥ ವಿಧಾನಚಂದ್ರ ರಾಯ್ ಅವರು ಚಿಕಿತ್ಸೆ ಮಾಡುತ್ತಿದ್ದರು. ಆದರೆ ಮೋತಿಲಾಲರು ದಿನೇ ದಿನೇ ಕ್ಷೀಣಿಸುತ್ತಿದ್ದರು. ಅಷ್ಟರಲ್ಲಿ ಸರಕಾರ ಕಮಲಾ ನೆಹರೂರನ್ನು ಬಂಧಿಸಿತು. ಆಗ ಅವರು ಕಲ್ಕತ್ತಾದಿಂದ ಅಲಹಾಬಾದಿಗೆ ಬಂದರು. ಬಂದು ಕಾಂಗ್ರೆಸಿನ ಕೆಲಸಗಳಿಗೆ ತೊಡಗಿಸಿಕೊಂಡರು. ಆದರೆ ಅವರ ಆರೋಗ್ಯ ಕೆಡುತ್ತಾ ಹೋಯಿತು. ಆಗ ೨೬ ಜನವರಿ ೧೯೩೧ರಂದು ಸ್ವಾತಂತ್ರ್ಯ ಘೋಷಿಸಿದ ಮೊದಲ ಜಯಂತಿಯ ದಿನ ಜವಾಹರಲಾಲರನ್ನು ಅವರ ರೋಗಿಷ್ಠ ತಂದೆಯನ್ನು ನೋಡಲೆಂದು ಬಿಡುಗಡೆ ಮಾಡಿದರು. ಗಾಂಧೀಜಿಯನ್ನೂ ಯರವಾಡಾ ಜೈಲಿನಿಂದ ಬಿಡುಗಡೆ ಮಾಡಿದರು. ಬಾಂಬೆ ನಗರ ಅವರ ದರ್ಶನಕ್ಕಾಗಿ ಹಂಬಲಿಸಿತು. ಮೋತಿಲಾಲಜೀಗೆ ಖಾಯಿಲೆಯಾಗಿದ್ದುದರಿಂದ ಬೊಂಬಾಯಲ್ಲಿ ಒಂದು ಅತಿ ದೊಡ್ಡ ಸಭೆಯನ್ನು ಉದ್ದೇಶಿಸಿ ಮಾತನಾಡಿ ಗಾಂಧೀಜಿ ತಕ್ಷಣ ಅಲಾಹಾಬಾದ್‌ಗೆ ಬಂದರು. ಬಾಪೂಜಿ ಬಂದುದದರಿಂದ ಮೋತಿಲಾಲಜೀಯ ಆರೋಗ್ಯ ಸ್ವಲ್ಪ ಸುಧಾರಿಸಿದಂತೆನಿಸಿದ್ದರಿಂದ ಅವರನ್ನ ಲಕ್ನೋದ ದೊಡ್ಡ ಆಸ್ಪತ್ರೆಯಲ್ಲಿ ಶುಶ್ರೂಷೆಗಾಗಿ ಕರೆತಂದರು. ಗಾಂಧೀಜಿ ಕೂಡ ಜೊತೆಯಲ್ಲೇ ಹೋದರು. ಆದರೆ ಜೀವನದ ಕೊನೆಯ ಕ್ಷಣವನ್ನು ಯಾರೂ ಮುಂದೂಡಲಾಗುವುದಿಲ್ಲ. ಲಕ್ನೋದಲ್ಲಿ ಎರಡು ದಿನಗಳು ಕೂಡ ಇರಲಿಲ್ಲ. ಮೋತಿಲಾಲರು ತೀರಿಕೊಂಡರು. ಮೋತಿಲಾಲರ ಪಾರ್ಥಿವ ಶರೀರವನ್ನು ಮೋಟಾರಿನಲ್ಲಿ ಅಲಹಾಬಾದಿಗೆ ತರಲಾಯಿತು. ಅವರ ಪತ್ನಿ ಸ್ವರೂಪರಾಣಿ ಅವರೊಂದಿಗೆ ಗಾಂಧೀಜಿ ಮತ್ತೊಂದು

ಕಾರಿನಲ್ಲಿ ಅಲಹಾಬಾದಿಗೆ ಬಂದರು. ೬ ಫೆಬ್ರವರಿ ಸಂಜೆ ಸಂಗಮದಲ್ಲಿ ಮೋತಿಲಾಲರ ಶರೀರದ ಅಂತ್ಯಕ್ರಿಯೆ ನಡೆಯಿತು. ಸತ್ಯಾಗ್ರಹದ ಒಬ್ಬ ತೀಕ್ಷ್ಣ ಮಹಾರಥಿ ಹೊರಟು ಹೋದರು. ಸ್ವರೂಪರಾಣಿ ಮತ್ತು ದುಃಖಪೂರಿತವಾದ ಪರಿವಾರದೊಂದಿಗೆ ಎರಡು ದಿನಗಳ ಕಾಲ ಗಾಂಧೀಜಿ ಇದ್ದರು.

ಗಾಂಧೀಜಿ ಅಲಹಾಬಾದಿನಲ್ಲಿದ್ದಾಗಲೇ ಲಾರ್ಡ್ ಇರ್ವಿನ್‌ನ ಮಂತ್ರಾಲೋಚನೆಗಾಗಿ ಅವರಿಗೆ ಕರೆ ಕಳುಹಿಸಿದ. ಗಾಂಧೀಜಿ ದೆಹಲಿಗೆ ಹೋದರು. ವೈಸ್‌ರಾಯ್ ಅವರನ್ನು ಭೇಟಿ ಮಾಡಿದರು. ಗಾಂಧೀಜಿ ವರ್ಕಿಂಗ್ ಕಮಿಟಿಯ ಸದಸ್ಯರನ್ನು ದೆಹಲಿಗೆ ಕರೆಸಿಕೊಂಡರು, ಎಲ್ಲರೂ ಮೂರು ವಾರಗಳ ಕಾಲ ದೆಹಲಿಯಲ್ಲಿದ್ದರು. ನಿರಂತರವಾಗಿ ಚರ್ಚೆ– ಚಿಂತನೆಗಳು ನಡೆದವು. ಗಾಂಧೀಜಿ ಲಾರ್ಡ್ ಇರ್ವಿನ್ ಜೊತೆ ಮತ್ತೆ ಮತ್ತೆ ಭೇಟಿ ಮಾಡುತ್ತಲಿದ್ದರು. ಮೂಲಭೂತವಾದ ಪ್ರಶ್ನೆಗಳಿಗಂತೂ ಉತ್ತರ ಸಿಗಲಿಲ್ಲ. ಹಾಗಿದ್ದರೂ ಎಷ್ಟೋ ವಿಷಯಗಳನ್ನು ಕುರಿತಂತೆ ಒಪ್ಪಂದಗಳು ಶುರುವಾದವು. ಚಿಕ್ಕ–ಪುಟ್ಟ ಪ್ರಶ್ನೆಗಳು ಇತ್ಯರ್ಥಗಳಾದ ನಂತರ ಮೂಲಭೂತ ವಿಷಯಗಳ ಚರ್ಚೆಗೆ ಅವಕಾಶ ಸಾರುತ್ತದೆಂದೆನಿಸಿತು. ಗಾಂಧೀಜಿ ಡಾ॥ ಅನ್ಸಾರಿಯವರ ಮನೆಯಲ್ಲಿ ತಂಗಿದ್ದರು. ಅವರನ್ನು ಭೇಟಿಯಾಗಲು ಎಲ್ಲಾ ತರಹೆಯ ಜನರೂ ಬರುತ್ತಿದ್ದರು. ನೆನ್ನೆಯವರೆಗೂ ಗಾಂಧೀಜಿ ಮತ್ತು ಕಾಂಗ್ರೆಸ್ ಎರಡನ್ನೂ ವಿರೋಧಿಸುತ್ತಿದ್ದ ಜನ ಕೂಡ ಗಾಂಧೀಜಿಯವರನ್ನು ಭೇಟಿ ಮಾಡಿ ತಮ್ಮ ಒಪ್ಪಿಗೆ ಹಾಗೂ ಸಹಕಾರ ಪ್ರಕಟಪಡಿಸುತ್ತಿದ್ದರು. ಗಾಂಧೀಜಿಯ ಗ್ರಹಬಲ ಉತ್ತಮವಾಗುತ್ತಿದೆಯೆಂದು ಜನರಿಗನ್ನಿಸುತ್ತಿತ್ತು. ಅವರನ್ನು ಸರಿಯಾಗಿ ಇಟ್ಟುಕೊಂಡರೆ ಸರಿಹೋಗುತ್ತದೆ ಅಂತ ಅವರ ಭಾವನೆ, ಮನುಷ್ಯ ಸ್ವಭಾವವನ್ನು ಯಾವಾಗಲೂ ಬದಲಾಯಿಸುವುದಿಲ್ಲ. ಅವನಲ್ಲಿ ಸ್ವಾರ್ಥ ಸಾಮಾನ್ಯವಾಗಿ ಜಾಗೃತವಾಗಿರುತ್ತದೆ, ೪ ಮಾರ್ಚಿ ೧೯೩೧ರಂದು ಗಾಂಧೀಜಿ ಲಾರ್ಡ್ ಇರ್ವಿನ್‌ರನ್ನು ಭೇಟಿಯಾಗಲು ಹೋದರು. ರಾತ್ರಿ ೨ ಗಂಟೆಗೆ ವೈಸಾರಾಯ್ ಅವರನ್ನು ಭೇಟಿಯಾಗಿ ಅವರು ಡಾ॥ ಅನ್ಸಾರಿಯವರ ಮನೆಗೆ ಹಿಂದಿರುಗಿದರು. ವರ್ಕಿಂಗ್ ಕಮಿಟಿ ಸದಸ್ಯರು ಅವರ ದಾರಿ ಕಾಯುತ್ತಿದ್ದರು. ಲಾರ್ಡ್ ಇರ್ವಿನ್ ಜೊತೆ ಗಾಂಧೀಜಿ ಒಪ್ಪಂದ ಮಾಡಿಕೊಂಡು ಬಂದಿದ್ದರು. ಹಿಂದೂಸ್ತಾನದ ಪರವಾಗಿ ಗಾಂಧೀಜಿ ಒಪ್ಪಂದ ಪತ್ರದ ಮೇಲೆ ಸಹಿ ಹಾಕಿದ್ದರು. ವೈಸ್‌ರಾಯ್ ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿಯಾಗಿದ್ದರು. ಸಾವಿರಾರು ವರ್ಷಗಳು ಕಳೆದ ಮೇಲೆ ಈಗ ಮೊದಲ ಬಾರಿಗೆ ಸಮಸ್ತ ದೇಶವನ್ನು ಒಬ್ಬ ವ್ಯಕ್ತಿ ಪ್ರತಿನಿಧಿಸಿದ್ದರು. ಐದನೆ ಜಾರ್ಜ್ ಚಕ್ರವರ್ತಿಯ ಪ್ರತಿನಿಧಿಯ ಜೊತೆ ಸಮಾನ ಸ್ಪರ್ಧಿಯಾಗಿ ಅವರು ಹಸ್ತಾಕ್ಷರ ಮಾಡಿದ್ದರು. ಗಾಂಧೀ–ಇರ್ವಿನ್ ಕರಾರು ಆದ ನಂತರ ಉಪ್ಪಿನ ಸತ್ಯಾಗ್ರಹದ ರಾಜಕೀಯ ಕೈದಿಗಳೆಲ್ಲರೂ ಬಿಡುಗಡೆಯಾದರು.

ಈ ಸತ್ಯಾಗ್ರಹದಲ್ಲಿ ಕೂಡ ಬಾರಡೋಲಿ ಜನ ಉತ್ಸಾಹದಿಂದ ಕೆಲಸ ಮಾಡಿದ್ದರು. ಜನ ಭಯಂಕರವಾಗಿ ಏಟುಗಳನ್ನು ತಿಂದಿದ್ದರು. ಎಷ್ಟೋ ಜನಗಳ ಮನೆ–ಆಸ್ತಿ ಎಲ್ಲವನ್ನೂ ಸರಕಾರ ಜಪ್ತಿ ಮಾಡಿಕೊಂಡಿತ್ತು. ಅದರಲ್ಲಿ ನಮ್ಮ ಬಾರಡೋಲಿಯ ಮನೆ ಕೂಡ ಜಪ್ತಿ ಆಗಿತ್ತು. ನಮ್ಮ ತಂದೆಯೇನೋ ಆಗ ಜೈಲಿನಲ್ಲಿದ್ದರು. ಆದರೆ ಅವರು ಜಪ್ತಿ ಮಾಡವುದಕ್ಕೆಂದು ಬಂದಾಗ ನಮ್ಮಮ್ಮ ಬಟ್ಟೆ ಒಗೆಯುತ್ತಿದ್ದರಂತೆ, ಆಗ ಉಟ್ಟುಕೊಂಡಿದ್ದ ಬಟ್ಟೆಯಲ್ಲೇ ಅವರನ್ನು ಮನೆಯಿಂದ ಹೊರಕ್ಕೆ ಹಾಕಿದ್ದರು. ಇಸ್ಮಾಯಿಲ್ ಅಂತ ಒಬ್ಬ ಕರುಣಾಳು ಥಾನೇದಾರ, ಅವನು ನಮ್ಮಮ್ಮನಿಗೆ ನಾಲ್ಕು ಜೋಡಿ ಬಟ್ಟೆ, ಮತ್ತೆ ಒಂದು ಶಾಲು ತೆಗೆದುಕೊಳ್ಳುವುದಕ್ಕೆ ಅವಕಾಶ ನೀಡಿದ ಅಂತ ನಮ್ಮಮ್ಮ ಹೇಳುತ್ತಾರೆ. ಗುಜರಾತ್‌ನಲ್ಲಿ ಸಾವಿರಾರು ಮನೆಗಳಿಗೆ ಆ ರೀತಿ ನೋಟೀಸ್ ಬಂದಿತ್ತು. ಆ ಜನರು ನೀಡಿದ ಬಲಿದಾನ ಅಪೂರ್ವವಾದದ್ದು. ಬಹಳ ಎದೆಗಾರಿಕೆಯನ್ನ ಅವರು ತೋರಿಸಿದ್ದರು. ಅದಕ್ಕಾಗಿ ಬಾಪೂಜಿ ಇಡೀ ಗುಜರಾತ್‌ನ ಯಾತ್ರೆ ಕೈಗೊಂಡಿದ್ದರು. ಬಾರಡೋಲಿಯಲ್ಲಿ ಮೊದಲನೆ ಬಾರಿಗೆ ಬಾಪೂಜಿ ನಮ್ಮಜ್ಜಿ ಇಬ್ಬರೂ ತಮ್ಮ ಮಗ ರಾಮದಾಸ್ ಮತ್ತು ಸೊಸೆ ನಿರ್ಮಲಾ ಬಳಿ ಅತಿಥಿಗಳಾಗಿ ಜೊತೆಯಲ್ಲಿ ಉಳಿದರು. ಈ ಸತ್ಯಾಗ್ರಹದಲ್ಲಿ ಎಷ್ಟೋ ಜನ ರೈತರು ಕಂದಾಯ ಕಟ್ಟಿರಲಿಲ್ಲ. ಕರಾರು ಮಾಡಿಕೊಂಡಾಗ ಶರತ್ತು ಪ್ರಕಾರ, ಕಂದಾಯ ಕಟ್ಟಲು ಶಕ್ತಿ ಇರುವವರು ಕಂದಾಯ ಕಟ್ಟಬೇಕು ಎಂಬ ಇತ್ತು. ಬಾಪೂಜಿ ಕೊಟ್ಟ ವಚನವನ್ನು ನಿರ್ವಹಿಸಬೇಕಾಗಿತ್ತು. ಅದಕ್ಕಾಗಿ ರೈತರು ಬನಿಯಾಗಳ ಹತ್ತಿರ ಸಾಲ ತೆಗೆದುಕೊಂಡು ಕಂದಾಯ ಕಟ್ಟಿದರು.

ಕೇಂದ್ರದ ವಿಧಾನ ಸಭೆಯ ಮೇಲೆ ಬಾಂಬು ಎಸೆದನೆಂಬ ಅಪರಾಧಕ್ಕಾಗಿ ಸರದಾರ್ ಭಗತ್‌ಸಿಂಹ, ರಾಜಗುರು, ಮತ್ತು ಸುಖದೇವನಿಗೆ ಗಲ್ಲು ಶಿಕ್ಷೆ ವಿಧಿಸಿದ್ದರು. ಈ ವೀರರ ಪ್ರಾಣ ಉಳಿಯಲಿ ಅಂತ ಇಡೀ ದೇಶವೇ ಬಯಸುತ್ತಿತ್ತು. ಗಾಂಧೀಜಿ ಕೂಡ ಸರಕಾರದ ಜೊತೆ ಸುದೀರ್ಘ ಪತ್ರ ವ್ಯವಹಾರ ನಡೆಸಿದರು. ಆದರೆ ಪ್ರಯತ್ನಗಳೆಲ್ಲಾ ವಿಫಲವಾದವು. ವಿಲಾಯತಿ ಸರಕಾರ ದಯೆ ತೋರಿಸಿ ಎಂಬ ಪ್ರಾರ್ಥನಾ ಪತ್ರವನ್ನು ತಿರಸ್ಕರಿಸಿಬಿಟ್ಟಿತು. ಆ ವರ್ಷ ಕರಾಚಿಯಲ್ಲಿ ಸರದಾರ ಪಟೇಲರು ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ಮೂರು ಜನ ಯುವಕ ಕ್ರಾಂತಿಕಾರಿಗಳನ್ನು ಉಳಿಸಲು ಯೋಗ್ಯತೆ ಇಲ್ಲದಿರುವ ಸಂಘವನ್ನು ಎತ್ತಿ ಬಿಸುಟು ಪುನಃ ಆಂದೋಳನವನ್ನು ಆರಂಭಿಸಬೇಕು ಎಂದರು ಸುಭಾಷ್ ಬಾಬೂ. ಭಗತ್‌ಸಿಂಹರನ್ನು ಗಲ್ಲಿಗೇರಿಸಿದ್ದಕ್ಕಾಗಿ ಕರಾಚಿಯಲ್ಲಿ ಕೆಲವು ಜನರು ಗಾಂಧೀಜಿಗೆ ಕಪ್ಪು ಬಾವುಟ ಕೂಡ ತೋರಿಸಿದರು. ಕರಿ ಹೂಗಳ ಹಾರವನ್ನು ಉಪಹಾರವಾಗಿ ನೀಡಿದರು. 'ನಾಚಿಕೆಗೇಡು' ಎಂದು ಘೋಷಣೆ ಕೂಗಿದರು. ಗಾಂಧೀಜಿ ಅದನ್ನೂ

ಸ್ವೀಕರಿಸಿದರು. ಕಾಂಗ್ರೆಸ್ ವೇದಿಕೆಯಿಂದ ೫೦೦೦ ಜನಗಳೆದುರಿಗೆ ಗಾಂಧೀಜಿ ಹೃದಯಕರಗುವಂಥ ಭಾಷಣ ಮಾಡಿದರು. ಆಗ ಯುವಕರಿಗೆ ಸತ್ಯವೇನೆಂದು ತಿಳಿಯಿತು. ಅವರ ರೋಷ ದೂರವಾಯಿತು. ಕಾಂಗ್ರೆಸ್ ಗಾಂಧೀ – ಇರ್ವಿನ್ ಕರಾರಿಗೆ ಒಪ್ಪಿಗೆ ನೀಡಿತು.

* * * *

# ೧೯. ದುಂಡು ಮೇಜಿನ ಪರಿಷತ್ತು

ಗಾಂಧೀ–ಇರ್ವಿನ್ ಕರಾರು ಯಾರಿಗೂ ಇಷ್ಟವಾಗಿರಲಿಲ್ಲ. ಕಾಂಗ್ರೆಸ್ಸು ಸರಕಾರ ನಮಗೆ ಅಂತಹ ವಿಶೇಷವಾದದ್ದು ಏನನ್ನೂ ಕೊಡಲಿಲ್ಲ. ಸುಮ್ಮ–ಸುಮ್ಮನೆ ಪ್ರಚಂಡವಾಗಿದ್ದ ಸತ್ಯಾಗ್ರಹದ ಬೆಂಕಿಯನ್ನು ಆರಿಸಿಬಿಟ್ಟರು ಎಂದು ಯೋಚಿಸುತ್ತಿತ್ತು. ಹಾಗಿದ್ದರೂ ಸತ್ಯಾಗ್ರಹಿಗಳು ಹೈಕಮಾಂಡ್‌ನ ಆದೇಶವನ್ನು ಪಾಲಿಸಿದ್ದರು. ಈ ಸತ್ಯಾಗ್ರಹಿಗಳಿಗಿಂತ ಮೊದಲು ಸರಕಾರಿ ಅಧಿಕಾರಿಗಳಿಗೆ ಈ ಒಪ್ಪಂದ ಫಲಕಾರಿಯಾಗುವುದು ಇಷ್ಟವಿರಲಿಲ್ಲ. ಐ.ಸಿ.ಎಸ್. ಅಧಿಕಾರಿಗಳು ಗಾಂಧೀಜಿಯನ್ನು ಅರ್ಥಮಾಡಿಕೊಳ್ಳಲಿಲ್ಲ. ಒಬ್ಬ ಹಿಂದೂಸ್ತಾನಿ ಹೀಗೆ ವೈಸ್‌ರಾಯ್ ಜೊತೆ ಆತನ ಸಮಾನಸ್ಪರ್ಧಿಯೆಂಬಂತೆ ಮಹತ್ವಗಳಿಸುವುದಾಗಲೀ, ಸಮಾನನೆಂಬಂತೆ ಒಪ್ಪಂದ ಪತ್ರಕ್ಕೆ ಸಹಿ ಮಾಡುವುದಾಗಲೀ ಇಷ್ಟವಾಗಿರಲಿಲ್ಲ. ಈಗ ಗಾಂಧೀಜಿಯ ಹಿರಿಮೆ ಇನ್ನೂ ಹೆಚ್ಚಾಗಿ ಹೋಗಿತ್ತು. ಅದು ಅವರಿಗೆ ಏನೇನೂ ಇಷ್ಟವಾಗಿರಲಿಲ್ಲ. ಈ ಮುದುಕನ ಬಲ ಹೇಗಾದರೂ ಕಡಿಮೆಯಾದರೆ ಸರಿಹೋಗುತ್ತೆ ಎಂಬುದು ಅವರಿಚ್ಛೆ ಆಗಿತ್ತು. ಸರಕಾರದ ಹಗ್ಗ ಅವ್ಯಕ್ತವಾಗಿ ಗಾಂಧೀ ಮತ್ತವನ ಲಕ್ಷಾಂತರ ಜೊತೆಗಾರರ ಕೈಗೆ ಹೊರಟು ಹೋಗಿದೆ ಅಂತ ಅವರಿಗನ್ನಿಸುತ್ತಿತ್ತು. ಸರಕಾರಿ ಅಧಿಕಾರಿಗಳ ಬಳಿ ಸರಕಾರಿ ಬಲ ಮತ್ತೆ ಕಾನೂನಿನ ಬಿಗಿ ಇತ್ತು. ಆದರೆ ಒಂದು ಸೂಕ್ಷ್ಮವಾದ ಸರಕಾರಿ ಶಕ್ತಿ ಈ ದರಿದ್ರ ಭಿಕಾರಿಗಳ ಹತ್ತಿರಕ್ಕೆ ಹೊರಟುಹೋಗಿತ್ತು. ಸರಕಾರಕ್ಕೆ ಈ ವಿಷಯ ಸಹಿಸುವುದು ಇನ್ನೂ ಕಷ್ಟಕರವಾಗಿತ್ತು. ಈ ತರಹ ಮನೋಭಾವನೆಗಳಿಂದಾಗಿ ಸರ್ಕಾರದ ಅಧಿಕಾರಿಗಳು ತುಂಬಾ ತೊಂದರೆ ಕೊಡುತ್ತಲೇ ಇರುತ್ತಿದ್ದರು. ಕಠಿಣವಾಗಿ ವರ್ತಿಸುತ್ತಿದ್ದರು. ಬಂಗಾಳದಲ್ಲಂತೂ ಈ ಕರಾರು ಪತ್ರ ಕಿಂಚಿತ್ತೂ ಪ್ರಭಾವ ಬೀರಿರಲಿಲ್ಲ. ಅಲ್ಲಿ ಸಾವಿರಾರು ಜನ ಕೇಸೇ ಇಲ್ಲದೆ ಜೈಲುಗಳಲ್ಲಿ ಕೊಳೆಯುತ್ತಿದ್ದರು. ಸರಕಾರ ಅವರುಗಳನ್ನು ಅಪರಾಧ ಕಲ್ಪಿಸಿ, ಅಥವಾ ಸಣ್ಣ–ಪುಟ್ಟ ಅಪರಾಧ ಮಾಡಿದರು ಅನ್ನುವ ಕಾರಣಕ್ಕೆ ಬಂಧಿಸಿಟ್ಟಿತ್ತು. ಈ ಅತ್ಯಾಚಾರಗಳ ಪರಂಪರೆಯಿಂದ ಬಂಗಾಳದಲ್ಲಿ ಚಿಕ್ಕ–ಪುಟ್ಟ ಉಗ್ರವಾದ ಇತ್ತು, ಆದರೆ ಅವಕ್ಕೇನೂ ಮಹತ್ವ ಇರಲಿಲ್ಲ. ಈ ಉಗ್ರವಾದದ ಹೆಸರಿನಲ್ಲಿ ಸರಕಾರ ಅವರ ಮೇಲೆ ಬಹಳ ಅನ್ಯಾಯ ಹೊರಿಸಿ, ನಿರ್ದೋಷಿಗಳಾದ ಸತ್ಯಾಗ್ರಹಿಗಳನ್ನು ಬಹಳ ಕಠೋರವಾಗಿ ದಂಡಿಸುತ್ತಿತ್ತು. ಈ ಉಗ್ರವಾದದ ಹಿಂಸಾತ್ಮಕ

ಮಾರ್ಗದಿಂದಾಗಿ ಕಾಂಗ್ರೆಸ್ ಕೂಡ ಅಲ್ಲಿ ಸಫಲವಾಗಲಾಗುತ್ತಿರಲಿಲ್ಲ. ಈ ರೀತಿಯ ಆಡಳಿತದ ಕಾರಣಗಳಿಂದ ಬಂಗಾಳದಲ್ಲಿ ಎಲ್ಲೂ ಶಾಂತಿ ಇರಲಿಲ್ಲ. ಸರಕಾರ ಅಲ್ಲಿ ಕಠಿಣವಾದ ಆರ್ಡಿನೆನ್ಸ್ ಹಾಕಿತು. ನಾಗರಿಕ ಸ್ವಾತಂತ್ರ್ಯ ಮುಗಿದುಹೋಯಿತು.

ಉತ್ತರ ಪ್ರದೇಶದಲ್ಲೂ ಬಹಳ ಹಿಂದಿನಿಂದ ಜಮೀನುದಾರಿ ಪದ್ಧತಿ ಜಾರಿಯಲ್ಲಿತ್ತು. ಆ ಹೊರೆಯಲ್ಲಿ ರೈತರು ತುಳಿತಕ್ಕೆ ಒಳಗಾಗಿದ್ದರು. ಸತ್ಯಾಗ್ರಹ ನಡೆಯುತ್ತಿದ್ದಾಗ ಸರಕಾರ ಈ ರೈತರ ಜಮೀನನ್ನು ಜಪ್ತಿ ಮಾಡಿಕೊಂಡಿತು. ಒಪ್ಪಂದ ಆದ ಮೇಲೆ ಕೂಡ ನಿರ್ದಯವಾಗಿ ಅವರಿಂದ ಬಾಕಿ ವಸೂಲು ಮಾಡುತ್ತಿದ್ದರು. ಆ ರೈತರು ಬುದ್ಧಿವಂತರಾಗಿದ್ದರು, ಅದರಿಂದ ಕಾಂಗ್ರೆಸ್‌ನ ಶಿಸ್ತನ್ನು ಒಪ್ಪಿಕೊಂಡು ದಂಗೆ ಎದ್ದಿರಲಿಲ್ಲ. ಬೇರೆ ಯಾವುದಾದರೂ ದೇಶ ಆಗಿದ್ದಿದ್ದರೆ ಇಂತಹ ಸ್ಥಿತಿಯಲ್ಲಿ ದೊಡ್ಡದಾಗಿ ಆಂದೋಳನ ಆರಂಭವಾಗಿಬಿಟ್ಟಿರುತ್ತಿತ್ತು. ಆದರೆ ಕಾಂಗ್ರೆಸ್ ನಾಯಕರು ಉತ್ತರ ಪ್ರದೇಶದ ಸ್ಥಿತಿಯನ್ನು ಹಿಡಿತದಲ್ಲಿಟ್ಟುಕೊಂಡಿದ್ದರು. ವೈಸ್‌ರಾಯ್‌ಗೆ ಗಾಂಧೀಜಿ ಈ ಕೃಷಿಕರ ವಿಷಯವಾಗಿ ಪುನಃ ಪುನಃ ಬರೆಯುತ್ತಿದ್ದರು. ಆದರೆ ಅದರಿಂದ ಯಾವುದೇ ಪ್ರಯೋಜನವಾಗಿರಲಿಲ್ಲ. ಸಂಧಿ ಆಗುವುದಕ್ಕೆ ಮುಂಚೆ ಗಡಿನಾಡಿನಲ್ಲಿ ಎಷ್ಟೋ ಅತ್ಯಾಚಾರಗಳು ನಡೆದವು. ಆದರೆ ಒಪ್ಪಂದದ ಕಿಂಚಿತ್ತೂ ಪ್ರಯೋಜನ ಈ ಪ್ರದೇಶಕ್ಕೆ ಸಿಗಲಿಲ್ಲ. ಹಳೆಯ ಹಿಂಸೆಯ ಅಭ್ಯಾಸ ಆಗಿಬಿಟ್ಟಿದೆ ಎಂದು ಹೇಳಿ ಅವರು ಅಹಿಂಸೆಯ ಸತ್ಯಾಗ್ರಹಿಗಳಾಗಿದ್ದಾರೆ ಅಂತ ಅವರನ್ನು ಸರಕಾರ ಎಂದೂ ನಂಬಲಿಲ್ಲ. ಸತ್ಯಾಗ್ರಹ ನಡೆಯುತ್ತಿದ್ದಾಗ ಈ ನಿಃಶಸ್ತ್ರ ಪಠಾಣರ ಮೇಲೆ ಸರಕಾರ ಗುಂಡು ಹಾರಿಸಿತ್ತು. ಅಲ್ಲಿ ನಾಗರಿಕರ ಸರಕಾರ ಇರಲಿಲ್ಲ. ಸೈನ್ಯಾಡಳಿತ ಜಾರಿಯಲ್ಲಿತ್ತು. ಮಿಲಿಟರಿ ಉಗ್ರವಾಗಿತ್ತು. ಅದರಿಂದ ಜನರ ಮೇಲೆ ಅತ್ಯಾಚಾರಗಳು ನಡೆಯುತ್ತಿದ್ದವು. ಇದನ್ನೆಲ್ಲಾ ವಿರೋಧಿಸಿ ಅಬ್ದುಲ್ ಗಫಾರ್ ಖಾನ್ ಪ್ರತಿಯೊಂದು ಹಳ್ಳಿಯಲ್ಲೂ ಸುತ್ತಿ ಅಹಿಂಸಾತ್ಮಕ ಸತ್ಯಾಗ್ರಹಿಗಳ ಗುಂಪೊಂದನ್ನ ಸಿದ್ಧಪಡಿಸಿದ್ದರು. ಈ ಹೋರಾಟಗಾರರ ಕುರ್ತಾ ಕೆಂಪು ಬಣ್ಣದಿಂದ ಕೂಡಿರುತ್ತಿತ್ತು. ಅದಕ್ಕೆ ಲಾಲ್ (ಕೆಂಪು) ಕುರ್ತಾ ದಳ ಅಂತ ಹೆಸರು ಕೊಟ್ಟಿದ್ದರು. ಈ ಗುಂಪನ್ನು ದೈವಸಹಾಯಕರು ಅಂತ ಕೂಡ ಕರೆಯುತ್ತಿದ್ದರು, ಸರಹದ್ದಿನ (ಗಡಿನಾಡಿನ) ಪ್ರತಿಯೊಂದು ಹಳ್ಳಿಯಲ್ಲೂ ಈ ದೈವ ಸಹಾಯಕರ ಒಂದು ಶಾಖೆ ಇರುತ್ತಲೇ ಇತ್ತು. ೧೯೩೧ರಲ್ಲಿ ಈ ಗುಂಪು ಪೂರ್ತಿಯಾಗಿ ಕಾಂಗ್ರೆಸ್‌ನಲ್ಲಿ ವಿಲೀನವಾಗಿ ಹೋಯಿತು. ಈ ಹೋರಾಟಗಾರರ ಜಾತಿಯ ಅಹಿಂಸೆ, ಕಾರ್ಯನಿಷ್ಠೆ ಕೂಡ ಅಪೂರ್ವವಾಗಿತ್ತು. ಅವರ ನಾಯಕ ಅಬ್ದುಲ್ ಗಫಾರ್ ಖಾನ್ ಅಂತ. ಆತ ಗಾಂಧೀಜಿಯವರ ವಿಚಾರಗಳನ್ನು ಎಷ್ಟರಮಟ್ಟಿಗೆ ಅರಗಿಸಿಕೊಂಡಿದ್ದನೆಂದರೆ ಆತನನ್ನು ಗಡಿನಾಡು ಗಾಂಧೀ ಅಂತಲೇ ಗುರುತಿಸುತ್ತಿದ್ದರು. ಈ ದೈವಸಹಾಯಕರು ದೇಶದ ಕಾರ್ಯಕರ್ತರ ಜೊತೆ ಹೆಚ್ಚಾಗಿ ಮೇಳಯಿಸಿಕೊಂಡರು. ಇಂತಹ

ಅಹಿಂಸಕವಾದ ಗಡಿನಾಡಿನಲ್ಲಿ ಕೂಡ ಇಂಗ್ಲಿಷರ ಅನ್ಯಾಯ ಕಡಿಮೆಯಾಗಲಿಲ್ಲ. ದಿನಂ ಪ್ರತಿ ಹೆಚ್ಚುತ್ತಲೇ ಇತ್ತು. ಬಾಪೂಜಿ ಸರಹದ್ದಿಗೆ ಹೋಗ ಬಯಸುತ್ತಿದ್ದರು. ಆದರೆ ಸರಕಾರ ಸರಹದ್ದನ್ನು ಸೀಲ್ ಮಾಡಿಬಿಟ್ಟಿತ್ತು. ಇದರಿಂದ ಒಪ್ಪಂದದ ಯುಗದಲ್ಲಿ ಸತ್ಯಾಗ್ರಹ ಮಾಡಿ ಕಾನೂನನ್ನು ಮುರಿಯುವುದು ಸರಿಯಲ್ಲವೆಂದು ಬಾಪೂಜಿಗೆ ಅನಿಸಿತು.

ಇಷ್ಟು ಕಷ್ಟಗಳ ಜೊತೆಗೆ ಲಾರ್ಡ್ ಇರ್ವಿನ್ ಜಾಗಕ್ಕೆ ಬೊಂಬಾಯಿಯ ಹಳೆ ಗವರ್ನರ್ ಲಾರ್ಡ್ ವಿಲಿಂಗಡನ್ ವೈಸ್‌ರಾಯ್ ಆಗಿ ಬಂದರು. ರಾಜಕೀಯ ಸಮಸ್ಯೆಗಳ ನಿಯಮಗಳು ರಾಜಕೀಯ ನೀತಿಗಳ ಮೇಲೆ ನಿರ್ದರಿಸಲಾಗುತ್ತವೆಯೇ ಹೊರತು ಯಾವುದೇ ಒಬ್ಬ ವ್ಯಕ್ತಿಯನ್ನಾಧರಿಸಿ ನಿರ್ಧರಿಸುವುದಿಲ್ಲ. ಹಾಗಿದ್ದರೂ ನಿಯಮಗಳಿಂದ ವ್ಯಕ್ತಿ ಹೊರತಾಗುವುದಿಲ್ಲ. ಯಾವುದೇ ಒಬ್ಬ ವಿಶಿಷ್ಟ ವ್ಯಕ್ತಿಯ ಪ್ರಭಾವ ನೀತಿಯನ್ನು ನಿರ್ಧರಿಸುವುದಕ್ಕಾಗಿ ಅಲ್ಲದಿದರೂ, ನೀತಿಯನ್ನು ಪಾಲಿಸುವಾಗ ಖಂಡಿತ ಬೀಳುತ್ತದೆ. ಲಾರ್ಡ್ ವಿಲಿಂಗಡನ್ 'ಗಾಂಧೀಜಿ ಒಬ್ಬ ಕುತಂತ್ರಿ, ಅವನನ್ನು ಗಡೀಪಾರು ಮಾಡಬೇಕು, ಬುಡಸಹಿತ ಅವನನ್ನು ನಾಶಮಾಡಿದರೆ ಮಾತ್ರ ಸಾಮ್ರಾಜ್ಯ ಉಳಿದುಕೊಳ್ಳುತ್ತದೆ' ಎಂಬ ಅಭಿಪ್ರಾಯವನ್ನಿಟ್ಟುಕೊಂಡು ಅವನು ವೈಸ್‌ರಾಯ್ ದೇಶವನ್ನು ನಡೆಸಲಾರಂಭಿಸಿದ. ಕಾಂಗ್ರೆಸ್‌ನ ಯಾವ ಬೇಡಿಕೆಯನ್ನೂ ಅರ್ಥ ಮಾಡಿಕೊಳ್ಳಲಿಲ್ಲ. ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಲಿಲ್ಲ. ದೇಶದಲ್ಲಿ ಎಲ್ಲೆಡೆ ಕಠಿಣತೆಯ ಅನುಭವವಾಗತೊಡಗಿತು. ದೇಶದಲ್ಲಿದ್ದ ಸಹಜ, ಶಾಂತ, ಸರಳ ವಾತಾವರಣ ಆತಂಕದಲ್ಲಿ ಪರಿವರ್ತನೆಗೊಂಡಿತು. ಈ ವಾತಾವರಣ ಇರುವಾಗ ಇಂಗ್ಲೆಂಡಿನ ಸರಕಾರ 'ದುಂಡು ಮೇಜಿನ ಪರಿಷತ್ತ' ನ್ನು ಆಯೋಜಿಸಿತು. ಕಾಂಗ್ರೆಸ್‌ಗೆ ಇಂತಹ ಸಮ್ಮೇಳನಗಳಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. ಮೊದಲ ದುಂಡು ಮೇಜಿನ ಪರಿಷತ್ತಿನಿಂದ ಯಾವ ಪರಿಣಾಮ ಕೂಡ ಹೊರಬರಲಿಲ್ಲ. ಎರಡನೆ ದುಂಡು ಮೇಜು ಪರಿಷತ್ತು ಏನಾದರೂ ಮಾಡಬಲ್ಲುದು ಎಂದು ಅನಿಸುತ್ತಿರಲಿಲ್ಲ. ಈ ಸಮ್ಮೇಳನದ ಭಾರತೀಯ ನಾಯಕರು ಆಗಾಖಾನ್ ಆಗಿದ್ದರು. ಹಿಂದ್‌ಗೆ ಸ್ವರಾಜ್ಯ ಸಿಗುವುದು ಬಿಡುವುದರಿಂದ ಆಗಾಖಾನ್‌ಗೇನೂ ಆಗುವದಿರಲಿಲ್ಲ. ಅವರಿಗೆ ಸಾಮ್ರಾಜ್ಯದ ಪ್ರತಿನಿಧಿತ್ವ ಬೇಕಾಗಿತ್ತು ಅಷ್ಟೇ. ಈ ಪರಿಷತ್ತಿನಲ್ಲಿ ತರಹಾವರಿ ಹಿಂದೂಸ್ತಾನಿಗಳನ್ನು ಕರೆದಿದ್ದರು. ಅವರೆಲ್ಲರೂ ಪಟ್ಟಭದ್ರ ಹಿತಾಸಕ್ತಿಗಳನ್ನು ರಕ್ಷಿಸುವವರಾಗಿದ್ದರು ಅಷ್ಟೇ. ದೇಶದ ಜನರ ಬಗ್ಗೆ ಅವರಿಗೆ ಯಾವ ಚಿಂತೆಯೂ ಇರಲಿಲ್ಲ. ರಾಜ–ಮಹಾರಾಜರು, ಹಿಂದೂ–ಮುಸಲ್ಮಾನರು, ಈ ತರಹ ಪರಿಷತ್ತಿನಲ್ಲಿ ಸದಸ್ಯರಿದ್ದರು. ಆದರೆ ಅವರಷ್ಟೂ ಜನರನ್ನು ಕೂಡಿಸಿದರೂ ಅವರು ಹತ್ತು ಕೋಟಿ ಜನರನ್ನು ಕೂಡ ಪ್ರತಿನಿಧಿಸುತ್ತಿರಲಿಲ್ಲ. ಆ ರೀತಿಯ ಪರಿಷತ್ತಿನಲ್ಲಿ ಹೋಗುವುದೇಕೆ, ಹೋಗಿ ಏನು ಮಾಡಬೇಕು ಅನ್ನುವುದು ಕಾಂಗ್ರೆಸ್ಸಿನ ಸಮಸ್ಯೆ

ಆಗಿತ್ತು. ದೇಶದ ಮೂರು ಪ್ರಾಂತ್ಯಗಳಲ್ಲಿ ಅಶಾಂತಿ ಹರಡಿತ್ತು. ಯಾವಾಗ ಅದು ವಿಸ್ಫೋಟವಾಗುತ್ತೆ ಅಂತ ಹೇಳುವ ಸ್ಥಿತಿ ಇರಲಿಲ್ಲ. ದೇಶದಲ್ಲಿ ಬೆಂಕಿ ಬಿದ್ದಿರುವಾಗ ದೂರ ಲಂಡನ್ನಿನಲ್ಲಿ ಮಾತುಕತೆ ನಡೆಯುವುದು ವ್ಯರ್ಥವಾಗಿತ್ತು. ಆದರೆ ವಿಲಾಯಿತಿ ಸರಕಾರ ಕಾಂಗ್ರೆಸ್ ಖಂಡಿತ ಈ ಪರಿಷತ್ತಿನಲ್ಲಿ ಭಾಗವಹಿಸಬೇಕು ಅಂತ ಒತ್ತಾಯ ಪಡಿಸುತ್ತಿತ್ತು. ದೇಶ ಮತ್ತು ಪ್ರಪಂಚದಲ್ಲಿ ಕಾಂಗ್ರೆಸ್ ಲೋಕಪ್ರಿಯತೆ ಗಳಿಸಿತ್ತು. ಅದರ ನೈತಿಕ ಶಕ್ತಿಯ ಒತ್ತಡವಿತ್ತು. ಅದರಿಂದ ಕಾಂಗ್ರೆಸ್ ಅನುಪಸ್ಥಿತವಾಗಿದ್ದರೆ ದುಂಡು ಮೇಜಿನ ಪರಿಷತ್ತು ಪೂರ್ತಿ ನಿರರ್ಥಕವಾಗುತ್ತಿತ್ತು. ಹೀಗಾಗಿ ಕೊನೆಯ ಕ್ಷಣದವರೆಗೂ ವೈಸ್‌ರಾಯ್ ಗಾಂಧೀಜಿಗೆ ಶಿಮಲಾಗೆ ಕರೆ ಕಳುಹಿಸುತ್ತಲೇ ಇದ್ದರು, ಅವರ ಜೊತೆ ಏನೇನೋ ಒಪ್ಪಂದ ಮಾಡಿಕೊಳ್ಳುತ್ತಾ ಕಾಂಗ್ರೆಸ್ ಪರಿಷತ್‌ನ ಈ ನಿಯಂತ್ರಣವನ್ನು ಸ್ವೀಕರಿಸಲಿ ಅಂತ ಪ್ರಯತ್ನಿಸುತ್ತಲೇ ಇದ್ದರು. ಈ ಪರಿಸ್ಥಿತಿಯಲ್ಲಿ ೧೯೩೧ರಲ್ಲಿ ಆಗಸ್ಟ್ ತಿಂಗಳಲ್ಲಿ ಗಾಂಧೀಜಿಯನ್ನು ತಮ್ಮ ಒಬ್ಬ ಪ್ರತಿನಿಧಿಯಾಗಿ ಲಂಡನ್‌ಗೆ ಕಳುಹಿಸಲು ಕಾಂಗ್ರೆಸ್ ನಿರ್ಧರಿಸಿತು. ಮೂವತ್ತ ಮೂರು ಕೋಟಿ ಜನರ ಆಸೆ–ಆಕಾಂಕ್ಷೆಗಳನ್ನು ಗಾಂಧೀಜಿಯೊಬ್ಬರು ಮಾತ್ರ ಪ್ರತಿನಿಧಿಸಬಲ್ಲರು ಎಂದು ಕಾಂಗ್ರೆಸ್ ನಾಯಕರು ದೃಢವಾಗಿ ನಂಬಿದ್ದರು. ಸರೋಜಿನಿ ನಾಯ್ಡು ಕೂಡ ಈ ಪರಿಷತ್ತಿಗೆ ಹೋಗಿದ್ದರಾದರೂ ಆಕೆ ಭಾರತೀಯ ಮಹಿಳೆಯರನ್ನು ಪ್ರತಿನಿಧಿಸಲು ಹೋಗಿದ್ದರು. ಕಾಂಗ್ರೆಸ್ ಹೈಕಮಾಂಡ್ ಅವರಿಗೆ ಅನುಮತಿ ನೀಡಿತ್ತು.

೧೯೩೧ರ ಆಗಸ್ಟ್ ಕೊನೆಯಲ್ಲಿ ಲಂಡನ್‌ಗೆ ಹೋಗುವುದಕ್ಕಾಗಿ ಬಾಪೂಜಿ ಸ್ಟೀಮರ್‌ನಲ್ಲಿ ಬೊಂಬಾಯಿಂದ ಹೊರಟರು. ಅವರೊಂದಿಗೆ ಮಹಾದೇವ ಕಾಕಾ, ಪ್ಯಾರೇಲಾಲಜೀ, ದೇವದಾಸ್ ಕಾಕಾ ಮತ್ತು ಮೀರಾ ಬಹನ್ ಹೊರಟರು. ಅವರ ಕೆಲವು ಪ್ರಿಯಮಿತ್ರರು ವಿದೇಶದ ಚಳಿಯಲ್ಲಿ, ಹೆಸರಾಂತ ದೊಡ್ಡ ಮನುಷ್ಯರ ನಡುವೆ ಬಾಪೂಜಿ ಉದ್ದನೆಯ ಉಡುಪನ್ನು ಧರಿಸಿಬೇಕೆಂದು ಸಲಹೆ ನೀಡಿದರು. ಅದಕ್ಕೆ ಬಾಪೂಜಿ ತಾವು ಹಸಿವಿನಿಂದ ಕೂಡಿ ಬೆತ್ತಲೆ ಇರುವ ಜನರ ಪ್ರತಿನಿಧಿ; ಜಮೀನುದಾರರ ಪ್ರತಿನಿಧಿಯಲ್ಲ; ನನ್ನ ಯಜಮಾನ ದರಿದ್ರ ನಾರಾಯಣ; ಅದರಿಂದ ಅವರ ರೀತಿಯಲ್ಲೇ ಹೋಗುವೆನೆಂದು ತಿಳಿಸಿದರು. ಲಂಡನ್‌ನಲ್ಲಿ ಕೂಡ ಚಕ್ರವರ್ತಿಯ ಗಾರ್ಡ್‌ನ್ ಪಾರ್ಟಿಗೆ ಬಾಪೂಜಿ ಮಂಡಿಯ ವರೆಗಿನ ಪಂಚೆಯನ್ನುಟ್ಟೇ ಹೋಗಿದ್ದರು.

ಈ ಮಿತ್ರರುಗಳೇ ಮಹಾದೇವ ಕಾಕಾ ಮತ್ತು ದೇವದಾಸ್‌ಗೆ ವಿದೇಶಕ್ಕೆ ಅನುಕೂಲಕರವಾಗುವಂಥ ಸಾಕಷ್ಟು ಜೊತೆ ಉಡುಪುಗಳನ್ನ ಸಿದ್ಧಪಡಿಸಿ ಸುಂದರವಾದ ದೊಡ್ಡ ಪೆಟ್ಟಿಗೆಗಳಲ್ಲಿ ತುಂಬಿ ಕೊಟ್ಟಿದ್ದರು. ಬೊಂಬಾಯಿಯಲ್ಲಿ ಕೊನೆಯ ಹೊತ್ತಿನಲ್ಲಿ ಅವಸರವಿರುವಾಗ ಏನೂ ತಿಳಿಯಲಿಲ್ಲವಾದರೂ ಸ್ಟೀಮರ್ ಹೊರಟಾಗ ಇವರ ಸಾಮಾನುಗಳನ್ನು ನೋಡಿ ಗಾಂಧೀಜಿ ಚಕಿತರಾದರು. ಅವರು

ಈ ಮೂವರಿಗೂ ನನಗೂ ಸ್ವಲ್ಪ ಮಟ್ಟಿಗೆ ಲಂಡನ್ನಿನ ಅನುಭವವಿದೆ. ಈ ಸಾಮಾನೆಲ್ಲಾ ಕೆಲಸಕ್ಕೆ ಬಾರದ್ದು, ನಾವು ಬಡದೇಶದ ಬಡವರ ಪ್ರತಿನಿಧಿಗಳು, ಶ್ರೀಮಂತರ ರೀತಿ–ನೀತಿಗಳನ್ನು ನಮ್ಮದಾಗಿಸಿಕೊಳ್ಳುವುದು ನಮಗೆ ಶೋಭಿಸುವುದಿಲ್ಲ ಎಂದರು. ಸಾಮಾನನ್ನೆಲ್ಲಾ ಆರಿಸಿ ಕಡಿಮೆ ಮಾಡಿಕೊಳ್ಳಲಾಯಿತು. ಈ ಸುಂದರವಾದ ಪೆಟ್ಟಿಗೆಗಳನ್ನು ಸಮುದ್ರಕ್ಕೆ ಅರ್ಪಿಸಿಲಾಯಿತು. ಈ ಯಾತ್ರೆ ಮಾಡುವಾಗಲೂ ಬಾಪೂಜಿ ಬಡವರ ರೀತಿಯಲ್ಲೆ ಡೆಕ್‌ಮೇಲೆ ಇರುತ್ತಿದ್ದರು. ಈ ಸ್ಟೀಮರ್‌ನಲ್ಲೇ ಹಿರಿಯರಾದ ಮಾಳವೀಯರು, ಘನಶ್ಯಾಮದಾಸ್ ಬಿಡಲಾ, ಮತ್ತು ಸರೋಜಿನಿ ನಾಯ್ಡು ಕೂಡ ಯಾತ್ರೆ ಮಾಡುತ್ತಿದ್ದರು. ಎಲ್ಲರೂ ಸ್ವತಂತ್ರ ಪ್ರತಿನಿಧಿಗಳಾಗಿ ಲಂಡನ್ನಿನ ದುಂಡು ಮೇಜು ಪರಿಷತ್ತಿಗಾಗಿ ಹೊರಟಿದ್ದರು. ಮಾಳವೀಯ ಅವರು ಗಂಗಾಜಲವನ್ನು ಬಿಟ್ಟೇನನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಅದರಿಂದ ಅವರ ಗಂಗಾಜಲ ಅವರೊಟ್ಟಿಗೆ ಹೊರಟಿತು. ಲಂಡನ್ ತಲಪಿದ ಮೇಲೆ ಬಾಪೂಜಿ ಒಳ್ಳೆಯ ಹೋಟಲುಗಳಲ್ಲಿ ತಂಗದೆ ಈಸ್ಟ್ ಲಂಡನ್ನಿನ ಒಂದು ಬಡವರ ಕಾಲೋನಿಗೆ ಹೋಗಿದ್ದರು. ಲಂಡನ್ ನಗರದ ಬಡವರು ಈ ಭಾರತೀಯನ ಸರಳತೆ ಮತ್ತು ತೀವ್ರ ಸಹಾನುಭೂತಿಯನ್ನು ಕಂಡು ಅಭಿಭೂತರಾದರು. ಇಡೀ ಕಾಲೋನಿಯೇ ಗಾಂಧಿಯ ಮಿತ್ರನಾಯಿತು. ಗಾಂಧೀಜಿ ಹೋದಲ್ಲೆಲ್ಲ ಜನರ ಗುಂಪು ಅವರ ಹಿಂದೆಯೇ ಹೊರಡುತ್ತಿತ್ತೆಂದು ದೇವದಾಸ್ ಕಾಕಾ ನನಗೆ ಹೇಳಿದ್ದರು. ಬಡವರಾದ ಅಶಿಕ್ಷಿತ ಮಹಿಳೆಯರು ಗಾಂಧೀಜಿಗೆ ಬಹಳ ಹೊಂದಿಕೊಂಡಿದ್ದರು. ಹಾಗೂ ಅವಕಾಶ ಸಿಕ್ಕಾಗಲೆಲ್ಲ ಬೆಳಿಗ್ಗೆ ಸಂಜೆ ಯಾವಾಗಲೂ ಗಾಂಧೀಜಿಯ ಬಳಿ ಓಡಾಡುತ್ತಿದ್ದರು. ಶಾಕಾಹಾರಿಗಳಾಗಿದ್ದ ಈ ಅತಿಥಿಗಳಿಗಾಗಿ, ಏನಾದರೂ ತಿಂಡಿಯ ಪದಾರ್ಥಗಳನ್ನು ಮಾಡಿ ಅವರಿಗೆ ಕೊಟ್ಟು ಹೋಗುತ್ತಿದ್ದರು.

ದುಂಡು ಮೇಜಿನ ಪರಿಷತ್ತಿನಲ್ಲಿ ಮಾತನಾಡುವ ದಿನ ಘನಶ್ಯಾಮದಾಸ್ ಬಿಡಲಾ ಅವರು ಜೊತೆಗಿದ್ದರು. 'ಬಾಪೂ, ಮಾತನಾಡುವುದಕ್ಕಾಗಿ ಸಿದ್ಧತೆ ಪೂರೈಸಿದಯೇ ಅಥವಾ ಏನು ಮಾತನಾಡುವುದೆಂದು ಯೋಚಿಸಿ ಆಗಿದೆಯೇನು' ಎಂದು ಬಿಡಲಾ ಕೇಳಿದರು.

ಅದಕ್ಕೆ ಬಾಪೂಜಿ ಇಲ್ಲಿಯವರೆಗೂ ಏನೂ ಯೋಚಿಸಿಲ್ಲ. ದೇವರು ಪ್ರೇರೇಪಿಸುತ್ತಾನೆ. ನಾನೇನು ವಿಶೇಷ ಪ್ರಭಾವ ಬೀರುವ ಅಗತ್ಯವಿಲ್ಲ. ನೇರವಾದ ಸರಳವಾದ ಭಾಷೆಯಲ್ಲಿ ನಮಗೆ ಸ್ವಾತಂತ್ರ್ಯಬೇಕು ಅಂತ ಹೇಳಬೇಕು, ಅಷ್ಟೆ. ಎಂದರು.

ಬಿಡಲಾಜೀಗೆ ಚಿಂತೆ ಒಂದು ಕಡೆ; ಆಶ್ಚರ್ಯ ಬೇರೆ, ಇಂತಹ ಮಹತ್ವದ ರಾಜಕೀಯ ಪರಿಷತ್ತಿನ ವಿಷಯವಾಗಿ ಗಾಂಧೀಜಿ ಇಷ್ಟೊಂದು ಉದಾಸೀನವಾಗಿದ್ದರೆ ಹೇಗೆ ಅಂತ. ಪರಿಷತ್ತಿನೆದುರು ಬಾಪೂಜಿ ಮಾತನಾಡಲು ನಿಂತಾಗ ಒಂದು

ಟಿಪ್ಪಣಿಯಾಗಲಿ, ನೋಟ್ ಆಗಲಿ, ಯಾವುದೂ ಇಲ್ಲದೆ ಅವರು ಅದ್ಭುತವಾಗಿ ಇಂಗ್ಲಿಷ್‌ನಲ್ಲಿ ವಾಕ್‌ಪಟುತ್ವದಿಂದ ಧಾರಾಪ್ರವಾಹದಿಂದ ಮಾತನಾಡಿದರು. ಈ ರಾಜ–ಮಹಾರಾಜರು ಮುಸಲ್ಮಾನರು, ಅಸ್ಪೃಶ್ಯರನ್ನು ಬಿಟ್ಟರೂ ದೇಶದಲ್ಲಿ ಹದಿನೈದು ಕೋಟಿ ಜನ ಬಡವರಿಗಿರುವ ಒಂದೇ ಒಂದು ಸಂಸ್ಥೆಯೆಂದರೆ ಕಾಂಗ್ರೆಸ್ ಎಂದು ಅವರು ನುಡಿದರು. ಅಂತಹ ಕಾಂಗ್ರೆಸ್ ಸ್ವರಾಜ್ಯದ ಆಜ್ಞೆ ನೀಡಿ ಗಾಂಧೀಜಿಯನ್ನು ತನ್ನ ಪರ ವಹಿಸಿ ಮಾತನಾಡಲೆಂದು ವಿಲಾಯತ್‌ಗೆ ಕಳುಹಿಸಿಕೊಟ್ಟಿದೆ. ಕಾಂಗ್ರೆಸ್‌ಗೆ ಸ್ವಾತಂತ್ರ್ಯ ಬೇಕು; ಭಾರತದ ಕೋಟ್ಯಂತರ ಜನರಿಗೆ ತಡ ಮಾಡದೆ ಸ್ವಾತಂತ್ರ್ಯ ನೀಡಿ ಎಂಬುದು ಅದರ ಬೇಡಿಕೆ, ಮೂವತ್ತು ಮೂರು ಕೋಟಿ ಜನರ ಈ ದೇಶ ಯಾರ ಹತ್ಯೆಯನ್ನೂ ಮಾಡಬೇಕಾಗಿಲ್ಲ ಅದಕ್ಕಾಗಿಯೇ ಅದಕ್ಕೆ ಚಾಕು ಬೇಡ, ಯಾರಿಗೂ ವಿಷ ಉಣಿಸಿ ಕೊಲ್ಲುವುದು ಬೇಕಾಗಿಲ್ಲ, ಅದರಿಂದ ಅದಕ್ಕೆ ವಿಷದ ಬಟ್ಟಲೂ ಬೇಡ, ಹಿಂಸೆಯ ಯುದ್ಧ ಬೇಕಿಲ್ಲ. ಅದರಿಂದ ಕತ್ತಿ ಭಲ್ಲೆ ಪಿಸ್ತೂಲ್ ಬಾಂಬು ಗ್ರೆನೇಡ್ ಸಿಡಿಮದ್ದು ಬೇಕಾಗಿಲ್ಲ. ಅಂತಹ ಹಿಂದೂಸ್ತಾನಕ್ಕೆ ಒಂದು ದೃಢವಾದ ನಿಶ್ಚಯವಿದೆ; ಇಂಗ್ಲಿಷ್ ರಾಜ್ಯವನ್ನು ತಿರಸ್ಕರಿಸ ಬೇಡಿ ಎಂದು ಹೇಳಲು ಧೈರ್ಯ ಬೇಕಷ್ಟೇ, ಈಗ ಈ ದೇಶ 'ಬೇಡ' ಎನ್ನಲು ಕಲಿಯುತ್ತಿದೆ ಎಂದರು.

ಆದರೆ ದುಂಡು ಮೇಜಿನ ಈ ಕುಂಭಮೇಳದಲ್ಲಿ ಸಿಗುವಂಥದ್ದೇನೂ ಇರಲಿಲ್ಲ. ಈ ಸಮ್ಮೇಳನದಿಂದ ಏನಾದರೂ ಪರಿಣಾಮ ಮೂಡಲಿ ಎಂಬ ಇಚ್ಛೆ ಬ್ರಿಟಿಷ್ ಸರಕಾರಕ್ಕೆ ಮೊದಲಿಂದಲೂ ಇರಲಿಲ್ಲ. ಆರಂಭದಿಂದಲೇ ಪರಿಷತ್ತಿನಲ್ಲಿ ಕೋಮುವಾದಕ್ಕೆ ಸುಮ್ಮ–ಸುಮ್ಮನೆ ಹೆಚ್ಚಿಗೆ ಮಹತ್ವ ಕೊಟ್ಟಿದ್ದರು. ಈ ಸಮ್ಮೇಳನದಲ್ಲಿ ಕೋಮುವಾದಿ ಪ್ರಶ್ನೆಗಳ ಚೌಕಾಸಿ ವ್ಯಾಪಾರದಲ್ಲಿ ಸಿಲುಕಿಸಿ, ದೇಶದ ನಿಜವಾದ ಆವಶ್ಯಕತೆ, ಮೂಲಭೂತ ವಿಷಯಗಳನ್ನು ಕುರಿತಂತೆ ಗಮನ ಹರಿಸಬಾರದೆಂಬುದೇ ಸಾಮ್ರಾಜ್ಯದ ಯೋಜನೆ ಇದ್ದಿದ್ದು ಕೂಡ. ರಾಜಕೀಯ ಆರ್ಥಿಕ ವಿಷಯಗಳನ್ನು ಕುರಿತು ಯಾವ ಚರ್ಚೆಯೂ ನಡೆಸುವ ಇಚ್ಛೆ ಸರಕಾರಕ್ಕಿರಲಿಲ್ಲ. ಗಾಂಧೀಜಿ ಈ ತಮಾಷೆಗಳು, ವಿಷಯಗಳ ತಿರುವು ಮುರುವನ್ನೆಲ್ಲಾ ಅರ್ಥಮಾಡಿಕೊಂಡಿದ್ದರು. ಅಂಬೇಡ್ಕರ್, ಆಗಾಖಾನ್ ಮತ್ತು ಪ್ರತಿಯೊಂದು ಧರ್ಮಕ್ಕೆ ಸೇರಿದ ಜನರೂ ತಮ್ಮ ಹಕ್ಕುಗಳಿಗಾಗಿ ಹಠ ಮಾಡಲಿ ಅಂತಿತ್ತು ಅವರ ಇಷ್ಟ. ಆದರೆ ಸ್ವಾತಂತ್ರ್ಯದ ಬೇಡಿಕೆ ವಿಷಯದಲ್ಲಿ ಐಕಮತ್ಯ ಇರಲಿ ಎಂಬುದು ಗಾಂಧೀಜಿಯ ಇಷ್ಟವಾಗಿತ್ತು. ಆದರೆ ಈ ಏಕಮತದ ಸಮರ್ಥನೆಗೆ ಸದಸ್ಯರು ಒಪ್ಪಲಿಲ್ಲ. ನಿಜವಾಗಿಯೂ ಕೋಮುವಾದಕ್ಕೆ ಎಲ್ಲೂ ಏನೂ ಮಹತ್ವ ಇರಲಿಲ್ಲ. ಧರ್ಮದ ಸೂಕ್ಷ್ಮತೆಗಳನ್ನು ತೆಗೆದುಕೊಂಡು ಶ್ರೀಸಾಮಾನ್ಯರುಗಳಿಗೆ ಯಾವ ಆಸಕ್ತಿ ಕೂಡ ಇರಲಿಲ್ಲ. ಅವರಿಗೆ, ರೊಟ್ಟಿ (ಅನ್ನ), ಬಟ್ಟೆ, ಮನೆ ಮತ್ತು ಸ್ವಲ್ಪ ಗೌರವ ಮರ್ಯಾದೆ

ಉಳಿದುಕೊಳ್ಳಬೇಕಾಗಿತ್ತು. ಅದು ಸ್ವತಂತ್ರ ಭಾರತದಲ್ಲಿ ಮಾತ್ರ ಸಿಗುತ್ತಿತ್ತು. ಹೀಗೆ ಸಾಂಪ್ರದಾಯಿಕ ಸಮಸ್ಯೆ ಒಂದು ಸೋಗು ಅಂತ ಅನ್ನುವುದು ಸ್ಪಷ್ಟವಾಗಿತ್ತು. ಅದರ ನೆಪದಲ್ಲಿ ಸರಕಾರ ದೇಶವನ್ನು ಸ್ವತಂತ್ರಗೊಳಿಸಲು ಇಷ್ಟಪಡುತ್ತಿರಲಿಲ್ಲ. ಯಾವೊಬ್ಬ ಸಜ್ಜನ ಪ್ರತಿನಿಧಿ ಕೂಡ ಆ ದುಂಡು ಮೇಜಿನ ಪರಿಷತ್ತಿನಲ್ಲಿ ಗಾಂಧೀಜಿಯವರು ಮಂಡಿಸಿದ ಸ್ವಾತಂತ್ರ್ಯದ ಪ್ರಸ್ತಾವಕ್ಕೆ ಸಮರ್ಥನೆ ನೀಡಲಿಲ್ಲ. ಹೀಗೆ ಯಾವ ನಿರ್ಣಯವನ್ನು ತೆಗೆದುಕೊಳ್ಳದೆಯೇ ಪರಿಷತ್ತು ಮುಗಿಯಿತು. ಗಾಂಧೀಜಿಯವರ ಅನುಮಾನಗಳೆಲ್ಲವೂ ಸತ್ಯವೆಂದು ಸಿದ್ಧವಾದವು.

ಲಂಡನ್‌ನಲ್ಲಿರುವಾಗ ಗಾಂಧೀಜಿ ಲಂಕಾಶೈರ್‌ಗೂ ಹೋಗಿದ್ದರು. ಭಾರತದಲ್ಲಿ ಖಾದಿ ಉತ್ಪತ್ತಿ, ಅದನ್ನ ಹೆಚ್ಚು ಜನ ಬಳಸಲಾರಂಭಿಸಿದ ಮೇಲೆ ಲಂಕಾಶೈರ್‌ನ ಬಟ್ಟೆ ಮಿಲ್‌ಗಳೆಲ್ಲಾ ನಿಷ್ಕ್ರಿಯವಾಗಿದ್ದವು. ಅಲ್ಲಿಯ ಜನಕ್ಕೆ ಗಾಂಧಿಯ ಮೇಲೆ ಬಹಳ ಕೋಪ, ಸಾಯಿಸ್ತೀವಿ ಅಂತ ಬೆದರಿಕೆ ಕೂಡ ಹಾಕುತ್ತಿದ್ದರು. ಬಾಪೂಜಿ ಆ ಸ್ಥಿತಿಯಲ್ಲಿ ಲಂಕಾಶೈರ್‌ಗೆ ಹೋಗದೆ ಹೆದರಿಕೊಂಡು ಇರುವುದು ಸಾಧ್ಯವೇ ಇರಲಿಲ್ಲ. ಬಾಪೂಜಿ ಲಂಕಾಶೈರ್ ಮಿಲ್ ಕಾರ್ಮಿಕರ ಮೊಹಲ್ಲೆಗೆ ಹೋದರು. ಆರಂಭದಲ್ಲಿ ಕಾರ್ಮಿಕರು ಗಾಂಧೀಜಿ ಮೇಲೆ ಬಹಳ ಕಿರುಚಾಡಿದರು, ಬೈದರು. ಗಾಂಧೀಜಿ ಆ ಕಾರ್ಮಿಕರಿಗೆ ಭಾರತದ ಕೋಟ್ಯಂತರ ಮಂದಿ ಹಸಿವು-ಬೆತ್ತಲೆಯಿಂದ ಒದ್ದಾಡುತ್ತಿರುವ ಕರುಣಾಜನಕ ಸ್ಥಿತಿಯನ್ನು ವರ್ಣಿಸಿದರು. ಚರಖಾ ಮತ್ತು ಖಾದಿ ಉತ್ಪಾದನೆ ಆ ಬಡವರಿಗೆ ಇರುವ ಒಂದೇ ಆಧಾರ ಅಂತ ವರ್ಣಿಸಿದರು. ಹೀಗೆ ಸ್ಪಷ್ಟವಾಗಿ ನಮ್ರತೆಯಿಂದ ನುಡಿದು ಸಿದ್ಧಪಡಿಸಿದಾಗ ಆ ಬಿಳಿಯ ಮಿಲ್ ಕಾರ್ಮಿಕರ ಹೃದಯ ಕರಗಿಹೋಯಿತು. ಆಗ ಅವರಿಗೂ ಹಿಂದ್ ನಿವಾಸಿಗಳ ಕಷ್ಟ ಕಂಡು ಸಹಾನುಭೂತಿ ಉಂಟಾಯಿತು. ತಮಗೆ ಕೆಲಸ ಇಲ್ಲದಿರುವುದಕ್ಕೆ ಗಾಂಧೀಜಿಯನ್ನು ದೂಷಿಸಿದ್ದನ್ನು ಮರೆತು ಅವರು ಗಾಂಧೀಜಿಯವರ ಸ್ನೇಹಿತರೂ, ಪ್ರಶಂಸಕರೂ ಆದರು.

೮೪ ದಿನಗಳ ಕಾಲ ಆ ದೇಶದಲ್ಲಿದ್ದು ನಂತರ ಗಾಂಧೀಜಿ ಪ್ಯಾರಿಸ್‌ಗೆ ಹೋದರು. ಪ್ಯಾರಿಸ್ ಜನ ಗಾಂಧೀಜಿಗೆ ಮಾರು ಹೋದರು. ಅಲ್ಲಿಂದ ಬಾಪೂಜಿ ರೋಮಾ ರೋಲಾನ ಭೇಟಿಯಾಗಬೇಕೆಂದು ಸ್ವಿಜ಼ರ್‌ಲೆಂಡಿನ ಬಿಲನೇವ್‌ಗೆ ಹೋದರು. ಅಲ್ಲಿ ಅವರ ಜೊತೆ ಮೂರು ದಿನ ಇದ್ದರು. ರೋಮಾ ರೋಲಾ ೧೯೨೪ರಲ್ಲಿ ಬಾಪೂಜಿಯದೊಂದು ಜೀವನ ಚರಿತ್ರೆಯನ್ನು ಬರೆದಿದ್ದರು. ರೋಮಾ ರೋಲಾ, ಸಾಮ್ಯವಾದದ (ಕಮ್ಯುನಿಸಂ) ಕಡೆಗೆ ವಾಲುತ್ತಿದ್ದರು. ಇಬ್ಬರು ಮಿತ್ರರ ನಡುವೆಯೂ ಆತ್ಮೀಯವಾಗಿ ಮಾತುಕತೆ ನಡೆಯಿತು. ರೋಮಾ ರೋಲಾ ಪಿಯಾನೊ ನುಡಿಸಿ ಮಧುರವಾದ ಸಂಗೀತವನ್ನು ಬಾಪೂಜಿಗೆ ಕೇಳಿಸಿದ್ದರೆಂದು ದೇವದಾಸ್ ಕಾಕಾ ಹೇಳುತ್ತಿದ್ದರು. ರೋಮಾ ರೋಲಾನಿಂದ ಬೀಳ್ಕೊಂಡು

ಬಾಪೂಜಿ ರೋಮ್‌ಗೆ ಹೋದರು. ಅಲ್ಲಿ ಪೋಪ್‌ರನ್ನು ಭೇಟಿಯಾದರು. ಇಟಲಿಯ ಸರ್ವಾಧಿಕಾರಿ ಮುಸೋಲಿನಿಯುನ್ನು ಭೇಟಿಯಾದರು. ಬಾಪೂಜಿಗೆ ಸರ್ವಾಧಿಕಾರಿಯನ್ನು ಭೇಟಿಯಾಗಲು ಇಚ್ಛೆ ಇರಲಿಲ್ಲ. ಆದರೆ ರೋಮೇರೋಲಾನ ವೈಯಕ್ತಿಕವಾಗಿ ಬಾಪೂಜಿಯನ್ನು ಒತ್ತಾಯಪಡಿಸಿ ಮುಸೋಲಿನಿಯ ಭೇಟಿ ತಮಗೆ ಹೇಗನ್ನಿಸಿತೆಂದು ತಿಳಿಸಲು ಹೇಳಿದರು. ಮುಸೋಲಿನಿ ತನ್ನ ಜೀವನದಲ್ಲಿ ಮೊದಲ ಬಾರಿ ತನ್ನ ಭವನದ ಬಾಗಿಲವರೆಗೂ ಹೋಗಿ ಬಹಳ ನಮ್ರತೆಯಿಂದ ಬಾಪೂಜಿಯನ್ನು ಸ್ವಾಗತಿಸಿದರು. ಅಷ್ಟೇ ಅಲ್ಲ, ಒಂದು ಸುಂದರವಾದ ಬಟ್ಟೆಯ ಮೇಲೆ ಮಾನಪತ್ರವನ್ನು ಮುದ್ರಿಸಿ ಅದಕ್ಕೆ ತನ್ನ ಸಹಿ ಮಾಡಿ ಅದನ್ನು ಬಾಪೂಜಿಗೆ ಉಪಹಾರವಾಗಿ ನೀಡಿದರು. ಇವತ್ತು ಕೂಡ ಆ ದೊಡ್ಡ ನೀಲಿ ಬಣ್ಣದ ರುಮಾಲು ನನ್ನ ಬಳಿ ಇದೆ. ಬಾಪೂಜಿ ಬಹುಶಃ ಅದನ್ನು ನಮ್ಮ ತಂದೆಗೆ ಕೊಟ್ಟಿರಬಹುದು; ಆದರೆ ಮುಸೋಲಿನಿ ಕಿಂಚಿತ್ತಾದರೂ ಬಾಪೂಜಿ ಮೇಲೆ ಪ್ರಭಾವ ಬೀರಲಿಲ್ಲ. ಮೈಕೇಲ್ ಆಂಜಲೋ ರಚಿಸಿದ ಸೀಸ್ಟೈಲ್ ಚಾಪೆಲ್‌ನಲ್ಲಿ ಏಸುಕ್ರಿಸ್ತನ ಭವ್ಯವಾದ ಮೂರ್ತಿಯನ್ನು ಬಾಪೂಜಿ ಎವೆ ಇಕ್ಕದೆ ನೋಡಿದರು. ಆ ಕರುಣಾಮಯವಾಗಿದ್ದ ಮೂರ್ತಿಯನ್ನು ನೋಡಿ ಬಾಪೂಜಿಯ ಕಣ್ಣು ತೇವವಾದವು. ಈ ಮೂರು ನಾಲ್ಕು ತಿಂಗಳ ಯಾತ್ರೆಯ ನಡುವೆ ಬಾಪೂಜಿಯವರ ಚಲನ–ವಲನವನ್ನು ಗಮನಿಸುವುದಕ್ಕೋಸ್ಕರ ಬ್ರಿಟಿಷ್ ಸರಕಾರ ಇಬ್ಬರು ಗೂಢಚರರನ್ನು ಅವರ ಹಿಂದೆ ಬಿಟ್ಟಿತ್ತು. ಬಾಪೂಜಿ ಮುಚ್ಚು–ಮರೆ ಮಾಡಿ ಏನೊಂದನ್ನೂ ಮಾಡುತ್ತಿರಲಿಲ್ಲ. ಕೆಲವು ದಿನಗಳೂ ನಂತರ ಆ ಇಬ್ಬರು ಪೋಲೀಸ್ ಅಧಿಕಾರಿಗಳು ಬಾಪೂಜಿ ಪರಿವಾರಕ್ಕೆ ಸೇರಿದವರ ಹಾಗಾದರು. ಯುರೋಪ್ ಬಿಟ್ಟು ಹೊರಟಾಗ, ಬಿಂಡಿಸಿ ರೇವು ಪಟ್ಟಣದಲ್ಲಿ ಈ ಇಬ್ಬರು ಗೂಢಚರರೂ ಬಾಪೂಜಿಯನ್ನು ಕಳುಹಿಸಿ ಕೊಡುವಾಗ ಉದಾಸರಾದರು. ಸ್ವಜನರು ಯಾರೋ ದೂರವಾಗುತ್ತಿರುವ ಹಾಗೆ ಅವರಿಗನ್ನಿಸಿತು. ಬಾಪೂಜಿ ಅವರಿಬ್ಬರಿಗೂ ಬೆಲೆ ಬಾಳುವ ಗಡಿಯಾರಗಳನ್ನು ಉಪಹಾರವಾಗಿ ನೀಡಿದರು.

೨೮ ಡಿಸೆಂಬರ್ ೧೯೩೧ ರಂದು ಬಾಪೂಜಿ ಸ್ವದೇಶಕ್ಕೆ ಹಿಂದಿರುಗಿದರು. ಬೊಂಬಾಯಿ ಜನರು ಅವರನ್ನು ಭವ್ಯವಾಗಿ ಸ್ವಾಗತಿಸಿದರು. ಆದರೆ ದೇಶದ ವಾತಾವರಣ ತಣ್ಣಗಿತ್ತು. ಹವೆಯಲ್ಲಿ ಸರಕಾರದ ಕಠೋರತೆ ಅನುಭವವಾಗುತ್ತಿತ್ತು. ಅದೇ ದಿನ ಸಂಜೆ ೩ ಲಕ್ಷ ಮಂದಿ ಬೊಂಬಾಯಿ ನಿವಾಸಿಗಳೆದುರು ಬಾಪೂಜಿ ಭಾಷಣ ಮಾಡಿ, 'ಈ ಸರಕಾರ ನಮ್ಮೆಲ್ಲರನ್ನೂ ನಪುಂಸಕರನ್ನಾಗಿ ಮಾಡ ಹೊರಟಿದೆ. ಹಿಂದಿನ ಹೋರಾಟದಲ್ಲಿ ಜನ ಲಾಠಿ ಏಟನ್ನು ಮಾತ್ರ ತಿಂದಿದ್ದರು. ಈಗ ಬರಲಿರುವ ಹೋರಾಟದಲ್ಲಿ ಗುಂಡೇಟು ತಿನ್ನಲು ಸಿದ್ಧವಾಗಿರಬೇಕು. ಆವಶ್ಯಕತೆ ಉಂಟಾದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹತ್ತಿಪ್ಪತ್ತು ಲಕ್ಷ ಜನರು ಪ್ರಾಣಾಹುತಿ ನೀಡುವುದಕ್ಕೂ

ನಾನು ಹಿಂಜರಿಯುವುದಿಲ್ಲ' ಎಂದು ಹೇಳಿದರು. ಗಾಂಧೀಜಿಯವರ ಹೃದಯದಲ್ಲಿ ಹಿಡಿದಿಟ್ಟಿದ್ದ ರೋಷ ಉಕ್ಕೇರಿತ್ತು, ದೇಶದಲ್ಲಿ ಎಲ್ಲೆಲ್ಲೂ ದಂಗೆಗಳಾಗುತ್ತಿದ್ದವು? ಕಾನ್ಪುರದಲ್ಲಿ ಹಿಂದೂ ಮುಸ್ಲಿಂ ದಂಗೆಯನ್ನು ಶಾಂತಪಡಿಸುತ್ತಾ ಧಾರ್ಮಿಕ ಏಕತೆಗಾಗಿ ಯುವಕರ ಮುಖಂಡ ಶ್ರೀ ಗಣೇಶ ಶಂಕರ ವಿದ್ಯಾರ್ಥಿ ತನ್ನ ಪ್ರಾಣತ್ಯಾಗ ಮಾಡಿದ. ಗಣೇಶ್ ಶಂಕರ ವಿದ್ಯಾರ್ಥಿ ಬಹಳ ಪರಾಕ್ರಮಿ, ದೂರದರ್ಶಿ ಹಾಗೂ ತಿಳುವಳಿಕಸ್ಥ ಯುವಕರಾಗಿದ್ದರು. ಪ್ರಚಾರ ಬೇಕೆಂಬಾಸೆ ಇಲ್ಲದೆ, ಸುಮ್ಮನೆ ಶಾಂತನಾಗಿ ಕೆಲಸ ಮಾಡುತ್ತಿದ್ದ ಆ ಯುವಕನನ್ನು ಕೆಲವರು ಹುಚ್ಚರು ಕೊಂದುಹಾಕಿದರು. ಕೋಮುವಾದದ ವಿಷ ಭಯಂಕರವಾಗಿತ್ತು.

ಬಾಪೂಜಿ ಲಂಡನ್‌ನಿಂದ ಹಿಂದಿರುಗಿದ ನಂತರ ವೈಸ್‌ರಾಯ್‌ಗೆ ಪತ್ರವೊಂದನ್ನು ಬರೆದು ದೇಶದ ದೃಷ್ಟಿಕೋನವನ್ನು ತಿಳಿಸಿಕೊಡಲು ಪ್ರಯತ್ನಿಸಿದರು. ಸವಿನಯ ಅಸಹಕಾರ ಮಾಡಲು ಪ್ರತಿಯೊಬ್ಬ ನಾಗರಿಕನಿಗೂ ಅಧಿಕಾರವಿದೆ. ಹಿಂಸೆ, ವಿದ್ರೋಹದೆದುರು ಸತ್ಯಾಗ್ರಹ ಬಹಳ ಉತ್ತಮವಾದ ಮಾರ್ಗ, ಸತ್ಯಾಗ್ರಹಿಗಳ ಬೇಡಿಕೆಗಳನ್ನು ಅರ್ಥಮಾಡಿಕೊಂಡು ಸರಕಾರ ಆಳಬೇಕು ಎಂದರು. ಆದರೆ ವಿಲಿಂಗ್‌ಡನ್ ಕಠೋರವಾಗಿಬಿಟ್ಟಿದ್ದರು. ಅವರಿಗೆ ಉಗ್ರವಾದಿಗಳು ಇಷ್ಟವಾಗುತ್ತಿದ್ದರು. ಅಹಿಂಸಕ ಸತ್ಯಾಗ್ರಹದ ಹೆಸರು ಕೇಳಿದರೇ ದ್ವೇಷ. ಜನವರಿ ೧೯೩೨ಕ್ಕೆ ಸರಕಾರ ಬಾಪೂಜಿ, ಸರದಾರ್ ಮತ್ತು ಮಹಾದೇವ ಕಾಕಾನ ಜೈಲಿಗೆ ಹಾಕಿತು. ತೀವ್ರವಾಗಿ ಅವರ ಮೇಲೆ ಅನ್ಯಾಯ ಮಾಡಲಾರಂಭಿಸಿತು. ಕಾಂಗ್ರೆಸ್ ಮುಂತಾದ ರಾಷ್ಟ್ರೀಯ ಸಂಸ್ಥೆಗಳನ್ನು ಕಾನೂನುಬಾಹಿರವೆಂದು ಘೋಷಿಸಿದರು. ಭೂಮಿ–ಆಸ್ತಿ, ಮನೆ, ಮೋಟಾರು ಕಾರು ಕೊನೆಗೆ ಬ್ಯಾಂಕ್ ಖಾತೆಯನ್ನು ಕೂಡ ಸ್ವಾಧೀನಪಡಿಸಿಕೊಂಡರು. ಕಠೋರವಾಗಿ ಸೆನ್ಸಾರ್‌ಶಿಪ್‌ನ್ನು ಜಾರಿಗೊಳಿಸಿದರು. ಮೆರವಣಿಗೆ, ಸಮ್ಮೇಳನ, ಸಭೆ, ಭಾಷಣಗಳ ಮೇಲೆ ಪ್ರತಿಬಂಧಕಾಜ್ಞೆ ಹಾಕಿದರು. ಪತ್ರಿಕೆಗಳನ್ನು, ಪ್ರೆಸ್‌ಅನ್ನು ವಶಕ್ಕೆ ತೆಗೆದುಕೊಂಡರು. ದೇಶ ಹೆಚ್ಚು ಕಡಿಮೆ ಮಾರ್ಷಲ್ ಲಾನಲ್ಲಿ ಸಿಲುಕಿಕೊಂಡಿತು. ನಾಗರಿಕ ಸ್ವಾತಂತ್ರ್ಯದ ಕುತ್ತಿಗೆ ಹಿಸುಕಿದರು. ಜನವರಿ ತಿಂಗಳಲ್ಲಿ ೧೫೦೦೦ ಜನ ಜೈಲಿಗೆ ಹೋದರು.  ಫೆಬ್ರವರಿಯಲ್ಲಿ ೧೮೦೦೦ ಜನರನ್ನು ಸರಕಾರ ಹಿಡಿಯಿತು. ಜನವರಿ ೧೯೩೨ರಲ್ಲಿ ನಮ್ಮ ತಂದೆ ಪುನಃ ಬಂಧನಕ್ಕೊಳಗಾದರು ಮತ್ತು ನಮ್ಮ ಬಾರಡೋಲಿಯ ಮನೆಯನ್ನು ಎರಡನೆ ಬಾರಿ ವಶಕ್ಕೆ ತೆಗೆದುಕೊಂಡರು. ಈ ಸಾರಿಯ ಜಪ್ತಿ ಬಹಳ ಕಠೋರವಾಗಿತ್ತು. ಉಟ್ಟ ಬಟ್ಟೆಯಲ್ಲಿ ನಮ್ಮಮ್ಮ ನನ್ನ ಮನೆಯಿಂದ ಹೊರಕ್ಕೆ ಹಾಕಿದ್ದರು. ಅಮ್ಮನ ಕಂಕುಳಲ್ಲಿ ೨೦ ದಿನಗಳ ಹಿಂದೆ ತಾನೆ ಹುಟ್ಟಿದ್ದು ಮಗು, ನನ್ನ ತಮ್ಮ ಕಾನ್ಹಾ ಇದ್ದ. ನಮಗೆ ಸಹಾಯ ನೀಡುವವರೆಲ್ಲರೂ ಜೈಲಿನಲ್ಲಿದ್ದರು. ನಮ್ಮ ಹಾಗೆಯೇ ಸಾವಿರಾರು ಜನ ಮಹಿಳೆಯರು ಮತ್ತು ಮಕ್ಕಳು ಅಸಹಾಯಕರಾಗಿದ್ದರು. ಈ ಬಾರಿ ಜೈಲಿನಲ್ಲಿ ಮಹಿಳೆಯರ ಬಗ್ಗೆ

ಬಹಳ ಕಠೋರವಾಗಿ ವರ್ತಿಸಲಾಗುತ್ತಿತ್ತು. ಮಾಮೂಲಿ ಅಪರಾಧಕ್ಕೆ ಕೂಡ ಎರಡೆರಡು ವರ್ಷಗಳ ಕಠಿಣ ಸಜಾವನ್ನು ವಿಧಿಸುತ್ತಿದ್ದರು. ಮೇಜಿಸ್ಟ್ರೇಟ್ ಸಜಾ ನೀಡುವುದರ ಜೊತೆಗೆ ಕಟೂಕ್ತಿಗಳನ್ನೂ ಆಡಿ ಬೈಯುತ್ತಿದ್ದುದು ಎಲ್ಲರ ಅನುಭವವಾಗಿತ್ತು. ಸರಕಾರದ ಈ ರೌದ್ರ ರೂಪ ಜೈಲಿನಲ್ಲೂ ನಡೆಯುತ್ತಿತ್ತು. ರಾಜಕೀಯ ಕೈದಿಗಳನ್ನು ಖೂನಿ ಮಾಡಿದ ಅಪರಾಧಿಗಳಿಗಿಂತ ಹೆಚ್ಚು ಕಠೋರತೆಯಿಂದ ಜೈಲಿನಲ್ಲಿರಿಸಲಾಗುತ್ತಿತ್ತು. ಚಿಕ್ಕ ಅಪರಾಧಕ್ಕೂ ಚಾಟಿಯಿಂದ ಹೊಡೆಯುವುದು ಸಾಮಾನ್ಯವಾಗಿತ್ತು. ೩೦ ಜನವರಿ ೧೯೩೨ರಂದು ಸರಕಾರ ಒಂದು ಗುಪ್ತ ಆದೇಶ ಹೊರಡಿಸಿ ಸತ್ಯಾಗ್ರಹಿಗಳಿಗೆ ರಿಯಾಯಿತಿ ತೋರಿಸುವ ಅಗತ್ಯವಿಲ್ಲ, ವಾಸ್ತವವಾಗಿ ಈ ವರ್ಗದ ಕೈದಿಗಳನ್ನು ಅಂಕುಶದಲ್ಲಿಟ್ಟು ಅವರನ್ನು ಕಠೋರವಾಗಿ ನಡೆಸಿಕೊಳ್ಳಬೇಕು ಎಂದು ತಿಳಿಸಲಾಗಿತ್ತು. ೧೯೩೩ರ ಏಪ್ರಿಲ್‌ನಲ್ಲಿ ಲಂಡನ್ನಿನ ಸಂಸತ್ತಿನಲ್ಲಿ ಬ್ರಿಟಿಷ್ ಸರಕಾರ ಒಂದು ಚರ್ಚೆಯಲ್ಲಿ ೧೯೩೨ರ ಆಂದೋಳನದಲ್ಲಿ ಭಾರತದಲ್ಲಿ ೫೦೦ ಜನರಿಗೆ ಚಾಟಿ ಏಟು ಕೊಡಲಾಗಿತ್ತೆಂದು ಒಪ್ಪಿಕೊಂಡಿತು. ಅದರಲ್ಲಿ ಜೈಲಿನೊಳಗೆ ಚಿಕ್ಕ ಪುಟ್ಟ ಚಾಟಿ ಏಟುಗಳ ಉಲ್ಲೇಖ ಇರಲಿಲ್ಲ. ತ್ರಿವರ್ಣ ಧ್ವಜವನ್ನು ಇಳಿಸುವುದು, ಹರಿಯುವುದು, ಹೊಸಕುವುದು ಸುಡುವುದು– ಇವೆಲ್ಲಾ ತೀವ್ರ ಅಪಮಾನದ ಕಾರ್ಯಗಳಾಗಿದ್ದವು. ಏಪ್ರಿಲ್ ೬ ರಿಂದ ೧೩ ಜಲಿಯನ್‌ವಾಲಾಬಾಗ್‌ನ ರಾಷ್ಟ್ರೀಯ ಸಪ್ತಾಹದಲ್ಲಿ ಜವಾಹರಲಾಲ ನೆಹರೂ ಅವರು, ವಯೋವೃದ್ಧರಾಗಿದ್ದ ತಾಯಿ ಸ್ವರೂಪರಾಣಿ ಸ್ವಯಂ ಸೇವಕರ ಒಂದು ದಳದೊಂದಿಗೆ ಅಲಹಾಬಾದಿನ ರಸ್ತೆಯ ಮೇಲೆ ಹೋಗುತ್ತಿದ್ದರು. ಅವರಿಗೂ ಛಡೀ ಏಟು ಹಾಕಿದರು. ಆಕೆ ಗಾಯಗೊಂಡು ರಸ್ತೆಯಲ್ಲೇ ಮೂರ್ಛೆಹೋದರು. ಸುಮಾರು ಹೊತ್ತಾದ ಮೇಲೆ ಕೆಲವರು ಆಕೆಯನ್ನು ಹೊತ್ತುಕೊಂಡು ಅವರ ಮನೆಗೆ ಹೋದರು. ಅಲಹಾಬಾದ್ ನಿವಾಸಿಗಳು ಈ ರೀತಿಯ ಅತ್ಯಾಚಾರದಿಂದ ಬಹಳ ಕ್ರೋಧಗೊಂಡರು. ಆಗ ಸರಕಾರ ಅವರ ಮೇಲೆ ಗುಂಡು ಹಾರಿಸಿತು. ಎಷ್ಟೋ ಜನ ಗಾಯಗೊಂಡರು, ಎಷ್ಟೋ ಜನ ತೀರಿಕೊಂಡರು.

೧೯೩೨–೩೩ರ ರಾಜಕೀಯ ಕೈದಿಗಳು ಬಹಳ ಯಾತನೆಗೊಳಗಾಗಿದ್ದರು, ಸುಮಾರು ದೇಶದಲ್ಲಿ ಎಲ್ಲೆಡೆ ಇದೇ ಕ್ರಮಜಾರಿಯಲ್ಲಿತ್ತು. ಆದರೆ ಬಂಗಾಳದಲ್ಲಿ ಮತ್ತು ಸರಹದ್ದಿನಲ್ಲಿ ನಗ್ನ ರಾಕ್ಷಸೀ ಕೃತ್ಯಗಳ ದಾಳಿ ನಡೆದಿತ್ತು. ಅವರನ್ನು ತಮ್ಮ ಮನೆಗಳಿಂದಲೇ ಹೊರಹಾಕಿದ್ದರು. ಅನುಮತಿ ಇಲ್ಲದೆ ಅವರು ಎಲ್ಲೂ ಹೋಗುವ ಹಾಗಿರಲಿಲ್ಲ. ಬಲಿದಾನದ ವೇದಿಕೆ ಸತ್ಯಾಗ್ರಹಿಗಳ ಆಹುತಿಯಿಂದ ಉರಿಯುತ್ತಿತ್ತು. ಸತ್ಯಾಗ್ರಹದ ಈ ಭೀಕರತೆ ಇದ್ದಾಗಲೂ ಈ ಬಾರಿ ಜೈಲು ವಾಸದಲ್ಲಿ ಬಾಪೂಜಿಗೆ ಸುಖವಿತ್ತು. ಸರದಾರ್ ದಾದಾ ಮತ್ತು ಮಹಾದೇವ ಕಾಕಾ ಇಬ್ಬರೂ ಬಾಪೂಜಿ ಜೊತೆಗಿದ್ದರು. ಇದರಿಂದ ಹೇಳತೀರದ ಆನಂದವಿತ್ತು. ಸರದಾರರು ತಮ್ಮ ಹಾಸ್ಯ–

ಪರಿಹಾಸ್ಯ, ತಮಾಷೆಗೆ ಹೆಸರಾದವರು. ಪ್ರತಿಯೊಂದು ಮಾತಿನಲ್ಲೂ ವಿನೋದ ಹುದುಗಿರುತ್ತಿತ್ತು. ಅದರಿಂದ ಜೈಲುವಾಸದ ಕಾಡಿನಲ್ಲೂ ಸಂತೋಷವಿತ್ತು. ಸರದಾರ ದಾದಾ ಸಂಸ್ಕೃತ ಕಲಿಯಲು ಪ್ರಯತ್ನಿಸುತ್ತಿದ್ದರು. ಆದರೆ ಅವರ ಪಾಟೀದಾರ (ರೈತನೇ ಪಟೇಲ) ನಾಲಗೆ ಸಂಸ್ಕೃತ ಶಬ್ದಗಳನ್ನು ಉಚ್ಚರಿಸುವಾಗ ತಿರುಗಾ–ಮುರುಗಾ ಆಗುತ್ತಿತ್ತು. ಅವರು ಸ್ವತಃ ತಮ್ಮ ತಪ್ಪುಗಳು, ಅಶುದ್ಧ ಉಚ್ಚಾರಣೆ ಕುರಿತು ನಗುತ್ತಿದ್ದರು. ಈ ನಡುವೆ ಮಾತನಾಡುತ್ತಿರುವಾಗ ಜೈಲ್ ಅಧೀಕ್ಷಕ ಸರಕಾರ ಇವರ ಅನುಕೂಲ ನೀಡುವುದಕ್ಕಾಗಿ ತಿಂಗಳೊಂದಕ್ಕೆ ೩೦೦ ರೂ. ಖರ್ಚು ಮಾಡುತ್ತಿದೆಯೆಂದು ತಿಳಿಸಿದರು. ಇನ್ನು ಕೇಳಿ ಬಾಪೂಜಿಗೆ ಬಹಳ ದುಃಖವಾಯಿತು. ಅವರು ವೈಸ್‌ರಾಯ್‌ಗೆ ಪತ್ರ ಬರೆದು ತನ್ನ ಮೇಲೆ ತಿಂಗಳಿಗೆ ೩೦೦ ರೂ.ಗಳಿಗಿಂತ ಹೆಚ್ಚು ಖರ್ಚು ಮಾಡಬಾರದೆಂದು ತಿಳಿಸಿದರು. ಈ ಅಪವ್ಯಯ ಯಾರ ಹಣದಿಂದ ಮಾಡುತ್ತಿದ್ದಾರೆ? ಹಿಂದೂಸ್ತಾನ ಸರಕಾರದ ಖರ್ಚೆಲ್ಲವೂ ದೇಶದ ಜನರ ಬೆವರು ಸುರಿಸಿದ ಸಂಪಾದನೆಯಿಂದ ತಾನೆ? ಕಷ್ಟಪಟ್ಟು ಸಂಪಾದಿಸಿದ ಈ ಹಣವನ್ನು ಪೋಲು ಮಾಡಲು ಇಂಗ್ಲಿಷರಿಗೆ ಹಕ್ಕಿಲ್ಲ ಎಂಬುದು ಗಾಂಧೀಜಿಯ ವಾದವಾಗಿತ್ತು. ನಮ್ಮಲ್ಲಿ ಯಾರಾದರೂ ಇಂದು ಹಾಗೆ ಯೋಚಿಸಿದ್ದಿದ್ದರೆ? ಬರೆಯಲು ಧೈರ್ಯ ತೋರಿದ್ದರೆ ! ಸರಕಾರದ ಮಂತ್ರಿ ಅಥವಾ ಅಧಿಕಾರಿ ಮಿತವ್ಯಯವನ್ನು ಜಾರಿಗೊಳಿಸುವ ದೃಢತೆಯನ್ನು, ಸಚ್ಚಾರಿತ್ರ್ಯವನ್ನು ತೋರಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು !

* * * *

# ೨೦ ಹರಿಜನ ಉಪವಾಸ

೧೭ ಆಗಸ್ಟ್ ೧೯೩೨ರಂದು ಹಿಂದೂಸ್ತಾನದ ಚುನಾವಣಾ ನೀತಿ ಕುರಿತು ಬ್ರಿಟಿಷ್ ಪ್ರಧಾನ ಮಂತ್ರಿ ರ್‍ಯಾಮ್ಸೆ ಮ್ಯಾಕಡೊನಾಲ್ಡ್ ಎಂಬುವವನು ಆದೇಶ ಹೊರಡಿಸಿದ. ಅದು ಇತಿಹಾಸದಲ್ಲಿ 'ಕಮ್ಯೂನಲ್ ಅವಾರ್ಡ್' ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿದೆ. ಈ ವಿಷಯ ಕುರಿತಂತೆ ದುಂಡು ಮೇಜಿನ ಪರಿಷತ್ತಿನಲ್ಲಿ ಚರ್ಚೆಯಾಗಿತ್ತು. ಆಗಲೂ ಗಾಂಧೀಜಿ ಅದನ್ನು ಘೋರವಾಗಿ ವಿರೋಧಿಸಿದ್ದರು.ಸಮಾಚಾರ ಪತ್ರಿಕೆಗಳಲ್ಲಿ ಮತ್ತೊಮ್ಮೆ ಉಲ್ಲೇಖ ಪ್ರಕಟವಾದಾಗ ಜೈಲಿನಿಂದಲೇ ಗಾಂಧೀಜಿ ವಿದೇಶಿ ಸರಕಾರದೊಂದಿಗೆ ಈ ಕುರಿತು ಪತ್ರ ವ್ಯವಹಾರ ನಡೆಸಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದರು. ದುಂಡು ಮೇಜಿನ ಪರಿಷತ್ತು, ಅನಂತರ ಬ್ರಿಟಿಷ್ ಸರಕಾರ ಪತ್ರಗಳನ್ನು ಬರೆದು ಶಾಂತಿಯಿಂದ ಇರಲು ಗಾಂಧೀಜಿಗೆ ಹೇಳಿ, ಸರಕಾರ ಗಾಂಧೀಜಿಯೊಂದಿಗೆ ಚರ್ಚೆ ನಡೆಸದೆ ಈ ದಿಕ್ಕಿನಲ್ಲಿ ಯಾವುದೇ ಆದೇಶವನ್ನು ಹೊರಡಿಸುವುದಿಲ್ಲವೆಂದು ತಿಳಿಸಿತು.

ಕಮ್ಯೂನಲ್ ಅವಾರ್ಡ್ ಮೂಲಕ ಚುನಾವಣಾ ಕ್ಷೇತ್ರಗಳನ್ನು ಭೌಗೋಳಿಕವಾಗಿ ನಿರ್ಧರಿಸದೆಯೇ ಜಾತಿ ಭೇದವನ್ನು ಆಧಾರ ಮಾಡಿಕೊಳ್ಳಬೇಕೆಂಬ ಮಸೂದೆ ಇಟ್ಟಿತ್ತು ಎಂದು ಸಂಕ್ಷಿಪ್ತವಾಗಿ ಹೇಳಬಹುದು. ಅತಿ ಸರಳವಾಗಿ ಹೇಳಬಹುದಾದರೆ ಇದರ ಪ್ರಕಾರ ಹರಿಜನರು ಹರಿಜನರಿಗೆ, ಕ್ರಿಶ್ಚಿಯನ್ನರು ಕ್ರಿಶ್ಚಿಯನ್ನರಿಗೇ ಮತ ನೀಡಬೇಕಾಗಿತ್ತು. ಹೀಗೆ ಪ್ರತಿಯೊಂದು ಪ್ರಮುಖ ಧರ್ಮ, ಜಾತಿಯ ಮತದಾರರ ಪಟ್ಟಿ ಬೇರೆ–ಬೇರೆಯಾಗಿಯೇ ತಯಾರಾಗುತ್ತಿತ್ತು. ಮತ್ತವರು ತಮ್ಮ ಜಾತಿ ಬಂಧುವನ್ನು ಮಾತ್ರ ಆರಿಸಬೇಕಾಗುತ್ತಿತ್ತು. ಒಬ್ಬ ಹರಿಜನ ಬನಿಯಾ ಅಥವಾ ಬ್ರಾಹ್ಮಣನಿಗೆ ಮತ ನೀಡದೆ ಹರಿಜನ ಬಂಧುವಿಗೆ ಮಾತ್ರ ಓಟು ನೀಡಬಹುದಾಗಿತ್ತು. ಈ ಅವಾರ್ಡ್‌ನ ಪರಿಣಾಮ ಅಸ್ಪೃಶ್ಯತೆಗಿಂತ ಭಯಂಕರವಾದುದಾಗಿರುತ್ತಿತ್ತು. ಸಮಾಜ ಇಲ್ಲಿಯವರೆಗೂ ಜಾತಿ ಆಧಾರದ ಮೇಲೆ ಭೇದ–ಭಾವ ಮಾಡುತ್ತಿತ್ತು. ಆದರೂ ಒಟ್ಟಾರೆಯಾಗಿ ಭಾರತ ಒಂದು ರಾಷ್ಟ್ರವಾಗಿತ್ತು. ಈ ಅವಾರ್ಡ್‌ನಿಂದ ದೇಶ ಪೂರ್ತಿಯಾಗಿ ಜಾತಿ ಸಂಪ್ರದಾಯಗಳಲ್ಲಿ ಹರಿಹಂಚಿ ಹೋಗುತ್ತಿತ್ತು ಮತ್ತು ಹಿಂದುಳಿದ ಜನ ಎಂದೆಂದಿಗೂ ಹಿಂದುಳಿದೇ ಇರಬೇಕಾಗುತ್ತಿತ್ತು. ಅಸ್ಪೃಶ್ಯತೆ ತೀವ್ರವಾಗುತ್ತಿತ್ತು. ದುಂಡು ಮೇಜಿನ ಹರಿಜನರು ಮತ್ತು ಮುಸಲ್ಮಾನ

ಮಿತ್ರರು ಹಾಗೂ ಸರಕಾರ ಈ ಸಲಹೆಯನ್ನು ಪಾಸು ಮಾಡಿಸಿದ್ದರು. ಆಗ ಪರಿಷತ್ತಿನಲ್ಲೇ ಬಾಪೂಜಿ ಅದನ್ನು ವಿರೋಧಿಸಿದ್ದರು. ಅಲ್ಲದೆ, ಈ ಹೊಸ ವ್ಯವಸ್ಥೆಗೆ ಬದಲಾಗಿ ಹಿಂದೂ ಧರ್ಮವೇ ನಿರ್ಮೂಲವಾದರೆ ಒಳ್ಳೆಯದು, ನೂರಾರು ವರ್ಷಗಳಿಂದ ಅಸ್ಪೃಶ್ಯತೆಯೆಂಬ (ಘೃಣಿತ) ಪದ್ಧತಿ ನಡೆದು ಬಂದಿದ್ದು ದೇಶ ಹಾಗೂ ಸಮಾಜಕ್ಕೆ ಕಳಂಕಕಾರಿಯಾಯಿತು. ಈಗ ೨೦ನೆಯ ಶತಮಾನದ ಈ ಉನ್ನತ ರಾಜಕೀಯದಲ್ಲೂ ಈ ಕೆಟ್ಟ ರೀತಿಗೆ ಸ್ಥಾಯಿರೂಪ ಕೊಡುವುದು ಭಯಂಕರವಾದ ತಪ್ಪಾಗುತ್ತದೆ, ಪಾಪವಾಗುತ್ತದೆ. ಅದಕ್ಕೆ ಪ್ರಾಯಶ್ಚಿತ್ತ ಕೂಡ ಇರುವುದಿಲ್ಲವೆಂದು ಹೇಳಿ ಅವರು ವಿರೋಧಿಸಿದ್ದರು.

ಇಷ್ಟು ಸ್ಪಷ್ಟವಾಗಿ ಅಭಿಪ್ರಾಯ ವ್ಯಕ್ತಪಡಿಸಿರುವುದರಿಂದ ಬ್ರಿಟಿಷ್ ಸರಕಾರ ಇದನ್ನು ಅರ್ಥ ಮಾಡಿಕೊಂಡು ಈ ತಪ್ಪು ನೀತಿಯನ್ನೆಂದೂ ಜಾರಿಗೊಳಿಸುವುದಿಲ್ಲವೆಂದು ಗಾಂಧೀಜಿ ಯೋಚಿಸಿದ್ದರು. ಪ್ರಪಂಚದ ಯಾವ ದೇಶದಲ್ಲೂ ಹೀಗೆ ಜಾತಿವಾದವನ್ನು ಆಧರಿಸಿ ಮತದಾರರ ಪಟ್ಟಿಯನ್ನು ತಯಾರಿಸುವುದಿಲ್ಲ. ಪ್ರಪಂಚದ ಬೇರೆ ದೇಶಗಳಲ್ಲೂ ಜಾತಿ–ಧರ್ಮದ ಸಮಸ್ಯೆ ಆಗಲೂ ಇತ್ತು, ಈಗಲೂ ಇದೆ. ಕೆನಡಾದಲ್ಲಿ ಇಂಗ್ಲಿಷ್ ಮತ್ತು ಫ್ರೆಂಚ್ ಪ್ರಜೆಗಳು ಯಾವಾಗಲೂ ಪರಸ್ಪರ ದ್ವೇಷದ ಭಾವನೆ ಇಟ್ಟುಕೊಂಡಿರುತ್ತಾರೆ. ೧೯೬೮ರ ಚುನಾವಣೆಯಲ್ಲಿ ಕೂಡ ಇಂಗ್ಲಿಷ್‌ನವರದ್ದು ಶೇಕಡಾ ಒಂದರಷ್ಟು ಹೆಚ್ಚು ಮತಗಳಿದ್ದವು. ಬೆಲ್ಜಿಯಂನಲ್ಲಿ ಫ್ರೀಸಿಯನ್ ಮತ್ತು ರೋಮಾನಿಕ ಮತ್ತು ವಾಲೂನ್ ಯೇವರದ್ದು ಈ ತರಹೆಯ ಸಮಸ್ಯೆಯೇ ಆಗಿದೆ. ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಫ್ರೆಂಚ್, ಜರ್ಮನ್, ಇಟಾಲಿಯನ್ ಮತ್ತು ರೋಮಾನಿಕ್ ಹೀಗೆ ನಾಲ್ಕು ರೀತಿಯ ಜನ ವಾಸವಾಗಿದ್ದಾರೆ. ಆದರೆ ಅಲ್ಲಿ ಬೇರೆ ಮತದಾರರ ಪಟ್ಟಿಗಳೇನೂ ಇಲ್ಲ. ಇಂಗ್ಲೆಂಡಿನಲ್ಲೂ ಸ್ಕಾಟಿಷ್, ಐರಿಷ್, ವೆಲ್ಷ್ ಮುಂತಾದ ಜನಾಂಗದವರಿದ್ದಾರೆ. ಈಗ ಇಷ್ಟೊಂದು ಮಂದಿ ಭಾರತೀಯರು, ಪಾಕೀಸ್ತಾನಗಳು ಮತ್ತು ಆಫ್ರಿಕನ್ನರು ಇದ್ದಾರೆ. ಅವರ ಸಂಖ್ಯೆ ಹೆಚ್ಚುತ್ತಲೇ ಹೋಗಿದೆ. ಆದರೆ ಅಲ್ಲಿ ಸ್ಕಾಟಿಷ್, ಐರಿಷ್ ಹೀಗೆ ಮತದಾರರ ಪಟ್ಟಿ ಮಾಡುವ ಬಗ್ಗೆ ಯಾವಾಗಲೂ ಯಾವ ಬ್ರಿಟಿಷ್ ಪ್ರಧಾನ ಮಂತ್ರಿಯೂ ಯೋಚಿಸಿಲ್ಲ.

ಹಿಂದೂಸ್ತಾನದ ವಿಷಯವಾಗಿ, ನಾವು ದೇಶದಲ್ಲಿ ವಾಸಮಾಡುವ ಜನ ಪರಸ್ಪರ ಕಾದಾಡಲಿ, ಬೇರೆಯಾಗಲಿ ಅದರಿಂದ ಇಂಗ್ಲಿಷ್‌ರಿಗೆ ಲಾಭ ಅಂತ ಇಂಗ್ಲಿಷ್ ಸರಕಾರ ಸ್ಪಷ್ಟವಾಗಿ ಬಯಸುತ್ತಿತ್ತು. ಎರಡು ಬೆಕ್ಕುಗಳ ಜಗಳದಲ್ಲಿ ಯಾವಾಗಲೂ ಕೋತಿಗೇ ಲಾಭ, ಹಿಂದೂಸ್ತಾನದಲ್ಲೂ ಜನ ತಮ್ಮ–ತಮ್ಮಲ್ಲೇ ಕಾದಾಡುತ್ತಾ ಇರುವವರೆಗೂ ವಿದೇಶೀಯರ ತಾಕತ್ತು ಜಯಿಸುತ್ತೆ. ಈ ಕಮ್ಯೂನಲ್ ಅವಾರ್ಡ್‌ನಿಂದ ಜನ ಗಲ್ಲಿಗಲ್ಲಿಗಳಲ್ಲೂ ಹಂಚಿಹೋಗಲಿ, ದೇಶದ ಅಖಂಡತೆ

ತುಂಡರಿಸಲಿ, ಆಗ ಇಂಗ್ಲಿಷ್‌ನವರು ಸುಖವಾಗಿ ಈ ವಿಶಾಲವಾದ ಕ್ಷೇತ್ರವನ್ನು ಶೋಷಿಸುತ್ತಾ ಇರಬಹುದು ಅನ್ನುವ ಒಂದೇ ಒಂದು ಉದ್ದೇಶ ಈ ಕಮ್ಯೂನಲ್ ಅವಾರ್ಡಿನಲ್ಲಡಗಿತ್ತು. ಐಶ್ವರ್ಯವೃದ್ಧಿಗೆ ಭಾರತದ ಸಂಪಾದನೆ, ಇಂಗ್ಲೆಂಡಿನ ಸಂಪತ್ತು, ಶಕ್ತಿ, ಸಮಯ, ಸಾಮರ್ಥ್ಯ ನೆರವಾಗುತ್ತಾ ಇದ್ದು, ರಾಜ್ಯದ ಸುರಕ್ಷೆಗಾಗಿ ಭಾರತೀಯ ಸೈನಿಕರ ರಕ್ತ ಹರಿಯುತ್ತ ಇರಲಿ ಎಂಬ ಉದ್ದೇಶ ಇತ್ತು. ಇಷ್ಟು ದೊಡ್ಡ ರಾಜ್ಯದಲ್ಲಿ ಒಂದಿಲ್ಲೊಂದು ಕಡೆ ದಂಗೆ ಆಗುತ್ತಲೇ ಇರುತ್ತಿತ್ತು. ಅಶಾಂತಿ ತಲೆದೋರುತ್ತಿತ್ತು. ಯುದ್ಧ ಆಗುತ್ತಿತ್ತು. ಆಗೆಲ್ಲಾ ಭಾರತೀಯ ಸೈನ್ಯ ದೇಶ–ವಿದೇಶಗಳಲ್ಲಿ ತನ್ನ ರಕ್ತವನ್ನು ಹರಿಸುತ್ತಿತ್ತು. ದೇಶದ ಕಚ್ಚಾ ಸಾಮಾನು ಪದಾರ್ಥಗಳು, ವಿಲಾಯತಿಯ ಆರ್ಥಿಕ ವಿಕಾಸಕ್ಕಾಗಿ ಖರ್ಚಾಗುತ್ತಿತ್ತು. ಈ ಲಾಭಗಳೆಲ್ಲಾ ಬರುತ್ತಿರುವಂತೆ ಇಟ್ಟುಕೊಳ್ಳಬೇಕೆಂಬ ಸ್ವಾರ್ಥದಿಂದಾಗಿ ಬ್ರಿಟಿಷ್ ಪ್ರಧಾನ ಮಂತ್ರಿಯಾಗಿದ್ದ ರ್‍ಯಾಮ್ಸೆ ಮ್ಯಾಕ್‌ಡೊನಾಲ್ಡ್‌ನು ಈ ಕೆಟ್ಟ ಅವಾರ್ಡ್‌ನ್ನು ಜಾಹೀರುಪಡಿಸಿದ್ದರು. ಜೈಲಿನಲ್ಲಿದ್ದುಕೊಂಡೇ ಗಾಂಧೀಜಿ ಒಂದೇ ಸಮನೆ ಸರಕಾರದ ಜೊತೆ ಇದನ್ನು ವಿರೋಧಿಸುತ್ತಲೇ ಇದ್ದರು. ಧೂರ್ತ ಸರಕಾರ ಅವರಿಗೆ ಮರೆಮಾಚುತ್ತಲೇ ಬಂತು. ಆದ್ದರಿಂದ ಈ ಕಮ್ಯೂನಲ್ ಅವಾರ್ಡ್ ಘೋಷಿಸಿದಾಗ ಹೆಚ್ಚು ಚರ್ಚೆ, ಪತ್ರವ್ಯವಹಾರ ಮತ್ತು ನಿವೇದನೆ ಯಾವುದಕ್ಕೂ ಅವಕಾಶವಿರಲಿಲ್ಲ. ಇಂಥ ಅವಾರ್ಡ್‌ನ ಪ್ರಪಂಚದಲ್ಲಿ ಬದುಕಿರುವುದು ಕೂಡ ತಿರಸ್ಕಾರದಿಂದ ಕೂಡಿದ ಅವಮಾನವಾಗಿತ್ತು. ಪಾಪವಾಗಿತ್ತು. ಗಾಂಧೀಜಿ ಮಾರನೆಯ ದಿನವೇ ತಾವು ಆಮರಣಾಂತ ಈ ಕಾನೂನನ್ನು ವಿರೋಧಿಸುವರೆಂದೂ ಬ್ರಿಟಿಷ್ ಪ್ರಧಾನಮಂತ್ರಿಗೆ ಸೂಚಿಸಿದ್ದರು. ಅಹಿಂಸಕ ಸತ್ಯಾಗ್ರಹಿ ಬಳಿ ಶ್ರೇಷ್ಠ ಬಲಿದಾನಕ್ಕೆ ಅವನ ಪ್ರಾಣ ಇರುತ್ತೆ, ಆದ್ದರಿಂದ ೨೦ ಡಿಸೆಂಬರ್ ೧೯೩೨ ರಿಂದ ಗಾಂಧೀಜಿ ಆಮರಣಾಂತ ಉಪವಾಸ ಮಾಡಲು ನಿರ್ಧರಿಸಿದರು. ಈ ಪತ್ರ ಮತ್ತು ನಿರ್ಧರಿಸಿರುವ ದಿನಾಂಕಗಳ ನಡುವೆ ಒಂದು ತಿಂಗಳ ಅವಕಾಶವಿತ್ತು. ಬೇಕಿದ್ದರೆ ಸರಕಾರ, ದೇಶದ ಒಳಿತಿಗಾಗಿ ಎಚ್ಚರಗೊಂಡು ಈ ಅವಾರ್ಡ್‌ನ್ನು ಹಿಂದಕ್ಕೆ ಪಡೆದುಕೊಳ್ಳಬಹುದಾಗಿತ್ತು. ಆದರೆ ಸರಕಾರ ಹಾಗೇನೂ ಯೋಚಿಸಲೇ ಇಲ್ಲ. ಯೋಚನೆ ಮಾಡಬೇಕೆಂಬ ಉದ್ದೇಶ ಕೂಡ ಅದಕ್ಕಿರಲಿಲ್ಲ.

ಈ ಕಾನೂನು ಹಿಂದೂಧರ್ಮಕ್ಕೆ ನೀಡುವ ತೀವ್ರತರವಾದ ಆಘಾತ ಎಂಬುದು ಸರಕಾರಕ್ಕೆ ಅರ್ಥವಾಗಲಿಲ್ಲವೆಂದು ತೋರುತ್ತದೆ. ಬಹುಶಃ ಹಿಂದೂಧರ್ಮದ ಅನುಯಾಯಿಗಳು ದೂರವಾಗಲಿ, ಆಗ ದೇಶದ ನಿವಾಸಿಗಳು ಈ ಅವಾರ್ಡ್‌ನ ಪೆಟ್ಟಿನಿಂದ ಕರ್ತವ್ಯ ಏನೂ ಅಂತ ಯೋಚಿಸುವಂತಾಗಲಿ ಅಂತ ಸರಕಾರ ಬಯಸಿದ್ದಿರಬಹುದು. ಈ ಒಂದು ತಿಂಗಳಲ್ಲಿ ಬಾಪೂಜಿ ಹರಿಜನರ ವಿಷಯವಾಗಿದ್ದ ತನ್ನ ವಿಚಾರಗಳನ್ನು ಸಮಾಜದ ಮುಂದಿಟ್ಟರು. ತಮ್ಮ ಜೊತೆಗಾರರಿಗೆ ಈ ಕೆಟ್ಟ ರೀತಿಯನ್ನು ಕುರಿತು ತಿಳಿಸಿದರು. ಬಾಪೂಜಿ ಇದೇ ಸಂದರ್ಭದಲ್ಲಿ ಅಸ್ಪೃಶ್ಯರಿಗಿದ್ದ

'ಭಂಗಿ' ಅನ್ನುವ ಶಬ್ದಕ್ಕೆ ಬದಲಾಗಿ 'ಹರಿಜನ' ಅನ್ನುವ ಪದವನ್ನು ಹುಟ್ಟುಹಾಕಿದರು. ಪ್ರಪಂಚದ ದೀನ–ಹೀನ ಮನುಷ್ಯ ದೇವರಿಗೆ ಪ್ರಿಯವಾಗಿರುತ್ತಾನಾದುದರಿಂದ ಎಲ್ಲಾ ಬಡವ ಭಂಗಿಗಳು ವಾಸ್ತವವಾಗಿ ಹರಿಯ ಜನರು 'ಹರಿಜನ'ರು ಅಂದರು. ಆಗೆಂದ ಈ ಸುಸಂಸ್ಕೃತವಾದ ಪದ ಭಾಷೆಯಲ್ಲಿ ಬಳಕೆಯಾಯಿತು. ಇಂದು ನಾವು ಭಂಗಿ ಎನ್ನುವ ಶಬ್ದವನ್ನು ಮರೆತೇ ಬಿಟ್ಟಿದ್ದೇವೆ. ಇದರ ಕೀರ್ತಿ ಬಾಪೂಜಿಗೆ ಸೇರಿದ್ದು. ಉಪವಾಸ ಮಾಡುವ ಒಂದು ದಿನ ಮೊದಲು ಬಾಪೂಜಿ ಹೇಳಿದರು: 'ನನ್ನ ಪ್ರಾಣವನ್ನು ಮುಡಿಪಿಟ್ಟಾದರೂ ನಾನು ಈ ಅಸ್ಪೃಶ್ಯತೆಯ ಕಳಂಕವನ್ನು ದೂರಗೊಳಿಸಬಯಸುತ್ತೇನೆ. ನಾನು ಇನ್ನೇನಾದರೂ ಮಾಡಲು ಸಾಧ್ಯವಿದ್ದಿದ್ದರೆ ಅದೂ ಮಾಡುತ್ತಿದ್ದೆ. ಆದರೆ ನನ್ನ ಬಳಿ ಪ್ರಾಣ ಬಿಟ್ಟರೆ ಮತ್ತೇನೂ ಇಲ್ಲ.'

೨೦ ಸೆಪ್ಟೆಂಬರ್ ೧೯೩೨ ರಂದು ಬಾಪೂಜಿ ಕಮ್ಯೂನಲ್ ಅವಾರ್ಡ್‌ನ್ನು ವಿರೋಧಿಸಿ ಆಮರಣಾಂತ ಉಪವಾಸ ಆರಂಭಿಸಿದರು. ಇಷ್ಟು ವರ್ಷಕಾಲ ನಿರಂತರ ಪರಿಶ್ರಮ ಮಾಡಿ ಬಾಪೂಜಿ ಮೊದಲೇ ಕೃಶಕಾಯರಾಗಿದ್ದರು. ಶರೀರದ ಮೇಲೆ ಕೊಬ್ಬು ಸಂಗ್ರಹವಾಗಿರಲೇ ಇಲ್ಲ. ಆದ್ದರಿಂದ ಬಾಪೂಜಿ ಹೆಚ್ಚು ದಿನ ತಡೆದುಳಿಯಲಾರರು ಎಂದು ಡಾಕ್ಟರರಿಗೆ ಭಯವಿತ್ತು. ಆದರೆ ಬಾಪೂಜಿ ದೃಢ ಸಂಕಲ್ಪ ಮಾಡಿದ್ದರು. ನೂರಾರು ವರ್ಷಗಳ ಈ ಪಾಪವನ್ನು ಅವರು ತಮ್ಮ ಆತ್ಮ ಬಲಿದಾನದಿಂದ ತೊಳೆಯ ಹೊರಟಿದ್ದರು. ಉಪವಾಸ ಆರಂಭಿಸಲು ಹಿಂದಿನ ದಿನ ಗುರುದೇವ ಠಾಕೂರರ ತಾರು ಬಂತು. ದೇಶದ ಏಕತೆ ಮತ್ತು ಸಾಮಾಜಿಕ ಅಖಂಡತೆಗಾಗಿ ಈ ದೇಹ ಯಜ್ಞದ ಔಚಿತ್ಯವನ್ನು ಗುರುದೇವರು ಒಪ್ಪಿ ಬಾಪೂಜಿಗೆ ಆಶೀರ್ವಾದವನ್ನು ಕಳುಹಿಸಿದ್ದರು. ಬಾಪೂಜಿಗೆ ಈ ಶ್ರೇಷ್ಠ ಕವಿ ದೇಶದ ವಿವೇಕ ಮತ್ತು ನೈತಿಕತೆಯ ತೇಜಸ್ವೀ ಪ್ರತಿಬಿಂಬವಾಗಿದ್ದಾರೆಂದು ಅವರ ಬಗ್ಗೆ ಗೌರವವಿತ್ತು. ಅವರ ಆಶೀರ್ವಾದ ಗಾಂಧೀಜಿಗೆ ಅತಿ ದೊಡ್ಡ ಪ್ರಮಾಣ ಪತ್ರವಾಗಿತ್ತು. ಬಾಪೂಜಿ ಉಪವಾಸ ಆರಂಭಿಸುವ ಮೊದಲೇ ಸನಾತನಿಗಳಾದ ಹಿಂದೂಗಳಲ್ಲಿ ಕೋಲಾಹಲ ಮೂಡಿತ್ತು. ಮಲಗಿದ್ದ ದೇಶದ ವಿವೇಕ ಈ ಸಮಾಚಾರದಿಂದ ಜಾಗೃತವಾಗಿತ್ತು. ಅಲ್ಲಲ್ಲೇ ಜನ ಹರಿಜನರ ಸ್ವಾಗತ ಸಮಾರಂಭವನ್ನು ಏರ್ಪಡಿಸಿದರು. ಎಷ್ಟೋ ದೇವಸ್ಥಾನಗಳ ಮುಖ್ಯದ್ವಾರವನ್ನು ತೆರೆದರು. ಹರಿಜನರಿಗೆ ದರ್ಶನ ಸಿಗಲಾರಂಭಿಸಿತು. ಸಾವಿರಾರು ವರ್ಷಗಳಿಂದ ದೇವರನ್ನು ಭಕ್ತರಿಂದ ದೂರಮಾಡಿ ಬಾಗಿಲ ಹಿಂದೆ ಬಂಧಿಸಿಟ್ಟಿದ್ದುದು, ಈಗ ಹರಿಜನರ ಭಕ್ತಿ ಭಾವನೆ ಮತ್ತು ಅರ್ಚನೆ–ಪೂಜೆ ಇವುಗಳಿಂದ ಸುಶೋಭಿತವಾಯಿತು. ದೇಶದಲ್ಲಿ ಔದಾರ್ಯದ ಹೊನಲೆದ್ದಿತು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ರಾಜೇಂದ್ರಬಾಬು ಅವರು ಹರಿಜನ ನಾಯಕರೊಂದಿಗೆ ಮಾತುಕತೆ ನಡೆಸಿದರು. ಸಮಾಧಾನದ ಮಾರ್ಗವನ್ನು ಯೋಚಿಸತೊಡಗಿದರು.

ಬಾಪೂಜಿ ಅವರ ಸ್ಥಿತಿ ದಿನೇ–ದಿನೇ ಕ್ಷೀಣಿಸುತ್ತಿತ್ತು. ಸರಕಾರ ನಮ್ಮಜ್ಜಿಯನ್ನು

ಬೇರೆ ಜೈಲಿನಿಂದ ತಂದು, ಯರವಾಡಾ ಜೈಲಿನಲ್ಲಿ ಬಾಪೂಜಿ ಸೇವೆಗಾಗಿ ಇರಿಸಿತು. ಆದರೆ ಕಮ್ಯೂನಲ್ ಅವಾರ್ಡ್‌ನ ಸಮಸ್ಯೆ ಫೈಸಲಾಗುವ ಯಾವ ಸೂಚನೆಯೂ ಕಂಡುಬರಲಿಲ್ಲ. ಸರ್ ತೇಜ ಬಹಾದುರ್ ಸಪ್ರೂ ಮತ್ತು ಮಾಧವರಾವ್ ಜಯಕರ್ ಬಹಳ ಚಿಂತೆಗೊಳಗಾದರು. ಅವರು ವೈಸ್‌ರಾಯ್ ಜೊತೆ, ಮತ್ತೊಂದು ಕಡೆ ಬಾಬಾ ಸಾಹೇಬ್ ಅಂಬೇಡ್ಕರ್ ಜೊತೆ ಮಾತುಕತೆ ಆರಂಭಿಸಿದರು. ಸರಕಾರ ಮತ್ತು ಹರಿಜನ ಮುಖಂಡ ಶ್ರೀ ಅಂಬೇಡ್ಕರ್‌ಗೆ ಅರ್ಥ ಮಾಡಿಸಲು ಹೀಗೆ ಈ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ಈ ಇಬ್ಬರು ಮುಖಂಡರೂ ಕೊನೆಯ ಪಕ್ಷ ಐದು ಬಾರಿಯಾದರೂ ದೆಹಲಿ ಮತ್ತು ಯರವಾಡಾ ಜೈಲಿಗೆ ಸುತ್ತಿರಬೇಕು. ಈ ಮಧ್ಯೆ ಬಾಪೂಜಿಯ ಉಪವಾಸ ಮುಂದುವರಿದಿತ್ತು. ಇಂಗ್ಲಿಷ್ ಸರಕಾರ ಅಂಬೇಡ್ಕರ್ ಅವರಿಗೇ ಈ ನಿರ್ಣಯ ತೆಗೆದುಕೊಳ್ಳಲು ಬಿಟ್ಟಿತ್ತು. ಆಗ ಸರ್ ತೇಜ್ ಬಹಾದೂರ್ ಸಪ್ರೂ ಮತ್ತು ಜಯಕರ್ ಸೇರಿ ಕಮ್ಯೂನಲ್ ಅವಾರ್ಡ್‌ಗೆ ಬದಲಾಗಿ ಹರಿಜನರಿಗಾಗಿ ಸ್ಥಾನ ಮಿಸಲಾತಿಯ ಒಂದು ನೀತಿಯನ್ನು ಹೊರಮೂಡಿಸಿದರು. ಹರಿಜನರಿಗಾಗಿ ಚುನಾವಣಾ ಕ್ಷೇತ್ರಗಳಲ್ಲಿ ಕೆಲವನ್ನು ಮೀಸಲಾಗಿಸಿ, ಆ ಕ್ಷೇತ್ರದಿಂದ ಹರಿಜನರೊಬ್ಬನನ್ನು ಬಿಟ್ಟು ಬೇರೆ ಯಾರೂ, ಹಿಂದೂ–ಮುಸಲ್ಮಾನ ಯಾರೂ, ಚುನಾವಣೆಗೆ ಸ್ಪರ್ಧಿಸಲಾರದಂತಾಯಿತು. ಈ ವ್ಯವಸ್ಥೆ ಅಂಬೇಡ್ಕರ್ ಅವರಿಗೆ ಇಷ್ಟವಾಯಿತು. ಹರಿಜನ ಮತದಾನ ಕ್ಷೇತ್ರದಲ್ಲಿ ಎಲ್ಲಾ ಮತದಾರೂ ಕೂಡಿ ಹರಿಜನನನ್ನೇ ಆರಿಸಬೇಕಾಗುತ್ತಿತ್ತು. ಅದು ಸಮಾಜ ಸುಧಾರಣೆಗೆ ಸರಿಯಾಗಿದ್ದುದರಿಂದ ಬಾಪೂಜಿಯೂ ಈ ನೀತಿಗೆ ವಿರುದ್ಧವಾಗಿರಲಿಲ್ಲ. ಆಗ ಸಪ್ರೂ ಜಯಕರ್, ಡಾಕ್ಟರ್ ಅಂಬೇಡ್ಕರನ್ನು ಸ್ವತಃ ಕರೆದುಕೊಂಡು ಯರವಾಡಾ ಜೈಲಿನಲ್ಲಿ ಬಾಪೂಜಿಯವರನ್ನು ಭೇಟಿಯಾಗಲು ಬಂದರು. ಬಹಳ ಗಂಭೀರ ಹಾಗೂ ನಾಗರಿಕ ವಾತಾವರಣದಲ್ಲಿ ಮಾತುಕತೆ ನಡೆಯಿತು. ಕೊನೆಯಲ್ಲಿ ನಿರ್ಣಯವಾಯಿತು. ೨೬ ಸೆಪ್ಟೆಂಬರ್ ೧೯೩೨ಕ್ಕೆ ಆರು ದಿನಗಳ ಉಪವಾಸದ ನಂತರ ಸರಕಾರ ಕಮ್ಯುನಲ್ ಅವಾರ್ಡ್‌ನ್ನು ರದ್ದುಗೊಳಿಸಿತು. ಅಜ್ಜಿ ಬಾಪೂಜಿಗೆ ಕಿತ್ತಳೆ ರಸವನ್ನು ಕುಡಿಯಲು ಕೊಟ್ಟರು. ಆಮರಣಾಂತ ಉಪವಾಸ ಕೊನೆಗೊಂಡಿತು. ಈ ಸಂದರ್ಭಕ್ಕನುಗುಣವಾಗಿ ಗುರುದೇವರು ತಮ್ಮ ಪ್ರಸಿದ್ಧವಾದ ಭಜನೆ 'ಎಕಲಾ ಚಲೊ' ಬರೆದರು ಮತ್ತು ಬಾಪೂಜಿಗೆ ಹಾಡಿ ತಿಳಿಸಿದ್ದರು. ೨೯–೯–೧೯೩೨ ರಿಂದ ಪುನಃ ಜೈಲಿನ ಜೀವನ ತನ್ನ ಕ್ರಮದಲ್ಲಿ ನಡೆಯಿತು. ಈ ಉಪವಾಸದ ನಂತರ ಬಾಪೂಜಿ ಹರಿಜನ ಸೇವೆಗೆ ತಮ್ಮನ್ನು ತೊಡಗಿಸಿಕೊಂಡರು.

ಜೈಲಿನಲ್ಲಿದ್ದಾಗಲೇ ಫೆಬ್ರವರಿ ೧೯೩೩ರಲ್ಲಿ ಬಾಪೂಜಿ 'ಹರಿಜನ' ಸಾಪ್ತಾಹಿಕವನ್ನಾರಂಭಿಸಿದರು. 'ನವಜೀವನ', 'ಯಂಗ್ ಇಂಡಿಯಾ'ವನ್ನು ಸರಕಾರ ಬಹಳ ಹಿಂದೆಯೇ ವಶಪಡಿಸಿಕೊಂಡು ಸೀಲ್ ಮಾಡಿತ್ತು. ಅವುಗಳ ಬದಲಾಗಿ

ಇಂಗ್ಲಿಷ್‌ನಲ್ಲಿ 'ಹರಿಜನ', ಗುಜರಾತಿಯಲ್ಲಿ 'ಹರಿಜನ ಬಂಧು', ಹಿಂದಿಯಲ್ಲಿ 'ಹರಿಜನ ಸೇವಕ' ಪ್ರಕಟವಾಗತೊಡಗಿದುವು. ಮೊದಲ ವಾರ ೧೦,೦೦೦ ಪ್ರತಿಗಳು ಪ್ರಕಟವಾದವು. ಈ ಮುಖಪತ್ರಿಕೆಯ ಮುಖಾಂತರ ಗಾಂಧೀಜಿ ಜೈಲಿನಲ್ಲಿ ಕುಳಿತೇ ಜನರಲ್ಲಿ ಅಸ್ಪೃಶ್ಯರ ಬಗ್ಗೆ ಹೃದಯ ಪರಿವರ್ತಿಸುವ ಕೆಲಸವನ್ನು ಆರಂಭಿಸಿದರು. ೨೩ ಏಪ್ರಿಲ್ ೧೯೩೩ರಂದು ರಾತ್ರಿ ಅರ್ಧನಿದ್ರೆಯ ಸಮಯದಲ್ಲಿ ಬಾಪೂಜಿಗೆ ಈ ಶತಮಾನಗಳ ಪಾಪಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆನ್ನಿಸಿತು. ಹಾಗಿಲ್ಲದೆ ಅಸ್ಪೃಶ್ಯತೆಯನ್ನು ತೊಡೆದುಹಾಕವುದು ಕಷ್ಟ. ಹರಿಜನ ಸೇವಾಕಾರ್ಯ ಕ್ರಿಯಾಶೀಲವಾಗಲಾರದು ಎಂದೆನಿಸಿತು. ಅಂತಹ ಪರಂಪರೆಯಿಂದ ಬಂದ ಪಾಪಕ್ಕೆ ಪ್ರಾಯಶ್ಚಿತ್ತ ಭಯಂಕರವಾದುದಾಗಿರುತ್ತದೆ. ಅದನ್ನ ಬಾಪೂಜಿ ಅಲ್ಲದೆ ಮತ್ತೆ ಯಾರು ತಾನೆ ಮಾಡಲಾಗುತ್ತಿತ್ತು? ಆದ್ದರಿಂದ ೮ ಮೇ ೧೯೩೩ರಂದು ಬಾಪೂಜಿ ೨೧ ದಿನಗಳ ಉಪವಾಸ ಮಾಡಬೇಕೆಂದು ನಿರ್ಧರಿಸಿದರು. ಹೀಗೆ ನಿದ್ದೆ ಸ್ವಪ್ನದಲ್ಲೂ ಯೋಚಿಸಿ, ಅದನ್ನು ಜಾರಿಗೆ ತರುವುದನ್ನು ಕುರಿತು ಎಷ್ಟೋ ಜನ ಆಕ್ಷೇಪಣೆ ಮಾಡಿದ್ದರು. ಸಮಾಜ ಸುಧಾರಕ, ಕ್ರಾಂತಿಕಾರಿಯಾದ ಬಾಪೂ ಇಂತಹ ಅಂಧಶ್ರದ್ಧೆಗಳನ್ನು ಹೇಗೆ ನಂಬುತ್ತಾರೆಂದು ಜನರಿಗನ್ನಿಸುತ್ತಿತ್ತು. ಇಂಥ ಚಿಲ್ಲರೆ, ಮಾಯಾ–ಮಂತ್ರಗಳು ಸಮಾಜದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತವೆ, ಜನರನ್ನು ಎಲ್ಲಾ ಕೆಟ್ಟ ರೀತಿಗಳಿಂದ ಉಳಿಯುವಂತೆ ಮಾಡುವ ಕೆಲಸಕ್ಕೆ ಅಡ್ಡಿ ಆಗುತ್ತದೆ ಅನ್ನಿಸುತ್ತಿತ್ತು. ಜವಾಹರಲಾಲಜೀ ಬಾಪೂಜಿಯ ಈ ಚಿಲ್ಲರೆ ರೀತಿಗಳಿಂದ ತುಂಬ ಬೇಸರಗೊಂಡಿದ್ದರು ಎಂದು ಜವಾಹರಲಾಲಜೀ ತಮ್ಮ ಆತ್ಮಕಥೆಯಲ್ಲಿ ಬರೆದಿದ್ದಾರೆ. ಮೇಲ್ನೋಟಕ್ಕೆ ಅರೆನಿದ್ದೆಯ ಈ ವಿಷಯ ಬಹಳ ವಿಚಿತ್ರವಾಗಿ ತೋರುತ್ತದೆ ಅನ್ನುವುದು ನಿಜವಾದರೂ ಸ್ವಲ್ಪ ಗಂಭೀರವಾಗಿ ಚಿಂತಿಸಿದಾಗ ವಿಷಯ ಅರ್ಥವಾಗುತ್ತದೆ. ನಾವು ಯಾವುದೇ ಗಂಭೀರವಾದ ವಿಷಯವನ್ನು ಕುರಿತು ಯೋಚಿಸುತ್ತಿರುವಾಗ ಕುಳಿತಿರುವಾಗ, ಎದ್ದಾಗ, ಮಲಗುವಾಗ, ಎಚ್ಚರದಿಂದಿರುವಾಗಲೆಲ್ಲಾ ತಲೆಯಲ್ಲಿ ಅದೇ ಆವರಿಸಿಕೊಂಡಿರುತ್ತದೆ. ಎಷ್ಟೋ ಸಾರಿ ಯಾವುದಾದರೂ ಪುಸ್ತಕವನ್ನು ಓದಿದಾಗಲೂ ಜನ ಇದೇ ರೀತಿ ಮಂತ್ರಮುಗ್ಧರಾಗಿ ಯೋಚಿಸುತ್ತಿರುತ್ತಾರೆ. ಎಷ್ಟೋ ಜನ ಸ್ವಪ್ನದಲ್ಲಿ ಅದೇ ಸಮಸ್ಯೆ ಪರಿಸ್ಥಿತಿಯನ್ನು ಕುರಿತು ಯೋಚಿಸುತ್ತಿರುತ್ತಾರೆ. ಯಾವುದಾದರೂ ತೀವ್ರವಾದ ಸಮಸ್ಯೆಯನ್ನು ಕುರಿತು ನಾವು ಎಷ್ಟು ಗಂಭೀರವಾಗಿ ಚಿಂತನ– ಮನನ ನಡೆಸುತ್ತೇವೆನ್ನುವುದು ಕೂಡ ನಮ್ಮ ಮೇಲೆಯೇ ನಿರ್ಧಾರವಾಗಿರುತ್ತದೆ. ಬಾಪೂಜಿಗೆ ಹರಿಜನ ಸಮಸ್ಯೆ ಯಾವ ಪ್ರಚಾರದ, ಅಥವಾ ಭಾಷಣ ಕೊಟ್ಟು ಓಟು ಪಡೆಯುವ ವಿಷಯವಾಗಿರಲಿಲ್ಲ. ಅಸ್ಪೃಶ್ಯತೆಯ ಮಹಾಪಾಪ ಅವರ ಅಂತರಾತ್ಮವನ್ನು ಅಲ್ಲಾಡಿಸಿತು. ಅದರಿಂದ ಹೇಗೆ ಮಾರ್ಗ ಹುಡುಕುವುದೆಂದು ಅವರು ಒಂದೇ

ಸಮನೆ ಯೋಚಿಸುತ್ತಿದ್ದರು. ಅವರು ಸ್ವಪ್ನದಲ್ಲಿ ಅದನ್ನೇ ಕುರಿತು ಯೋಚಿಸುತ್ತಿದ್ದಿರಬಹುದೆನ್ನವುದೂ ಸರಿಯಾಗಿದೆ. ಅರ್ಧನಿದ್ರೆಯಲ್ಲಿ ಬುದ್ಧಿ ಜಾಗೃತವಾಗಿರುತ್ತದೆ, ಮತ್ತು ಬಾಹ್ಯ ಜಗತ್ತು ಮಧ್ಯಪ್ರವೇಶಿಸುವುದಿಲ್ಲ. ಆ ಸ್ಥಿತಿಯಲ್ಲಿ ಗಾಂಧೀಜಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂಬ ಪವಿತ್ರ ಭಾವನೆ ಬಂದಿದ್ದಲ್ಲಿ ಅದನ್ನು ಕಂಡು ಆಶ್ಚರ್ಯಪಡಲು ಬೇಸರಗೊಳ್ಳಲು ಕಾರಣವಿಲ್ಲ. ಎಷ್ಟೋ ಜನ ಒಂದೇ ದಿಕ್ಕಿನಲ್ಲಿ ಯೋಚಿಸುತ್ತಿರುವಾಗ ಅರೆನಿದ್ದೆಯ ಗುಂಗಿನಲ್ಲಿ ಆ ಪ್ರಶ್ನೆಗಳನ್ನು ಪರಿಹರಿಸಲು ಮಾರ್ಗ ಕಂಡುಕೊಳ್ಳುತ್ತಾರೆ. ಅದರಲ್ಲಿ ಅಂಧವಿಶ್ವಾಸದ ಪ್ರಶ್ನೆಯೇ ಇಲ್ಲ. ಒಳಗೆ ಹುದುಗಿಕೊಂಡಿರುವ ಸೂಕ್ಷ್ಮ ವಿಚಾರಗಳನ್ನು ಮೇಲೆ ಜಾಗೃತ ಬುದ್ಧಿಯಲ್ಲಿ ಸ್ಪಷ್ಟಪಡಿಸುವ ಒಂದು ಸಾಮಾನ್ಯ ರೀತಿ ಅದು ಅಷ್ಟೆ. ಮನಸ್ಸಿನಲ್ಲಿ ಪ್ರಶ್ನೆ ಎಷ್ಟು ಗಂಭಿರವಾಗಿ ಆಳವಾಗಿ ಚಿಂತಿಸುತ್ತಿರುತ್ತದೆಯೋ ಅದೇ ರೀತಿಯಲ್ಲಿ ಅರ್ಧ ನಿದ್ರೆಯ ಸಂಕೇತಗಳೂ ಹೊರಮೂಡುತ್ತವೆ ಅಂತ ನನಗನ್ನಿಸುತ್ತದೆ. ಗಾಂಧೀಜಿಗೆ ಸಿಕ್ಕ ಪ್ರೇರಣೆ ಅಪೂರ್ವವಾದುದಾಗಲಿ ಸ್ವಾರ್ಥದಿಂದ ಕೂಡಿಯಾಗಲಿ ಇರುತ್ತಿರಲಿಲ್ಲ. ಅರ್ಧನಿದ್ರೆಯ ಸಂಕೇತ ಪಡೆದು ಅವರು ಆಹುತಿ ನೀಡಬೇಕೆಂದಿಚ್ಛಿಸಿದರು. ಅದರಿಂದ ನನಗಂತೂ ಬೇಸರಗೊಳ್ಳುವ ವಿಷಯವೇನಾದರೂ ಇದೆಯೆಂದನಿಸುವುದಿಲ್ಲ. ಬಾಪೂಜಿಯವರ ಈ ಉಪವಾಸ ಆತ್ಮಶುದ್ಧಿಯ ಮಾಧ್ಯಮವಾಗಿತ್ತು. ಯಾವುದೇ ಅಧಿಕಾರ, ಜಾತಿ, ವರ್ಗವನ್ನು ವಿರೋಧಿಸುವುದಾಗಿರಲಿಲ್ಲ. ಹೌದು ೬೫ ವರ್ಷಗಳ ಗಾಂಧೀಜಿ ಆರು ದಿನ ಉಪವಾಸ ಮಾಡಿ ಖಾಯಿಲೆ ಬಿದ್ದಿದ್ದರು. ಅಂತಹುದರಲ್ಲಿ ೨೧ ದಿನಗಳ ಕಾಲ ಹೇಗೆ ಕಳೆಯುತ್ತದೋ ಎಂಬುದು ತೀವ್ರವಾದ ಚಿಂತೆಯ ವಿಷಯವಾಗಿತ್ತು. ಅವರನ್ನು ಪ್ರೀತಿಸುವ ಸಾವಿರಾರು ಮಿತ್ರರು, ಜೊತೆಗಾರರಿಗೆ ಈ ವಿಪತ್ತನ್ನು ಸಹಿಸುವುದು ಕಷ್ಟವಾಗುತ್ತಿತ್ತು. ಆದರೆ ಪ್ರಾಯಶ್ಚಿತ್ತವೆನ್ನುವುದೂ ಆಟವೇನಲ್ಲವಲ್ಲ. ಅದರಲ್ಲಿ ಅಪಾಯ ಇರುತ್ತದೆ. ಆ ಅಪಾಯಕ್ಕೆ ಹೆದರದೆಯೇ ಎಲ್ಲ ಕಷ್ಟಗಳನ್ನು ಸಹಿಸುವುದಕ್ಕೆ ತಪಸ್ಸು ಎನ್ನುತ್ತಾರೆ. ತಪಸ್ಸಿಲ್ಲದೆ ಸಿದ್ಧಿ ಸಿಗುವುದಿಲ್ಲ. ಪ್ರಾಯಶ್ಚಿತ್ತ ಪ್ರತಿನಿಧಿಯ ಮಾಧ್ಯಮದಿಂದ ಮಾಡುವುದಲ್ಲ. ಸ್ವತಃ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುತ್ತದೆ. ಗಾಂಧೀಜಿಗೆ ಸಮಸ್ತ ಹಿಂದೂಸ್ತಾನ ಅವರದ್ದೇ ಆಗಿತ್ತು. ಆದ್ದರಿಂದ ಆ ಮಹಾಪಾಪಕ್ಕೆ ಪ್ರಾಯಶ್ಚಿತ್ತವನ್ನು ಅವರಲ್ಲದೆ ಬೇರೆ ಯಾರೂ ಮಾಡಲಾಗುತ್ತಿರಲಿಲ್ಲ. ತನ್ನ ದೇಶದ ಜನರ ಬಗ್ಗೆ ಅವರಿಗೆ ಆ ರೀತಿ ಶ್ರದ್ಧೆ ಇತ್ತು. ಆದ್ದರಿಂದ ಅರೆನಿದ್ದೆಯ ಈ ನಿರ್ಣಯವನ್ನು ಅಂಧಶ್ರದ್ಧೆ ಅನ್ನುವುದು ತಪ್ಪಾಗುತ್ತದೆ.

ಬಾಪೂಜಿ ೨೧ ದಿನಗಳ ಉಪವಾಸವನ್ನು ಪೂರ್ಣಗೊಳಿಸುವರೆಂದು ಸರಕಾರಕ್ಕೆ ನಂಬಿಕೆ ಇರಲಿಲ್ಲ. ಗಾಂಧೀಜಿಯ ನೋವಿಗೆ ಸಾಕ್ಷಿಯಾಗಲು, ಅವರ ಸಾವಿನ ಜವಾಬ್ದಾರಿಯನ್ನು ಹೊರಲು ಸರಕಾರ ಸಿದ್ಧವಾಗಿರಲಿಲ್ಲ. ಈ ತೊಡಕನ್ನು ಸರಕಾರ ಸುಧಾರಿಸುವುದಕ್ಕೆ ಸಾಧ್ಯವಿರಲಿಲ್ಲ. ಅದರ ಮೇಲೆ ಪ್ರಪಂಚ ಇಂಗ್ಲಿಷರನ್ನೇ

ಬೈಯಲು ಮುಂದಾಗುತ್ತಿತ್ತು. ಅದರಿಂದ ಮೇ ೯ರಂದು ಸರಕಾರ ಬಾಪೂಜಿಯನ್ನು ಉಪವಾಸದ ಎರಡನೆಯ ದಿನ ೯ ತಿಂಗಳ ಜೈಲುವಾಸದನಂತರ ಬಿಡುಗಡೆ ಮಾಡಿತು. ನಮ್ಮ ಕುಟುಂಬದ ಅತಿ ಪ್ರಿಯಮಿತ್ರಳಾದ ಲೇಡಿ ಠಾಕರಸೇಯ ಮನೆ ಪೂನಾದಲ್ಲಿತ್ತು. ಮನೆ ಏನು, ಗುಡ್ಡದ ಮೇಲಿನ ಅಮೃತಶಿಲೆಯ ಭವನ ಅದು. ಲೇಡಿ ಠಾಕರಸೇ ಯರವಾಡಾ ಜೈಲಿಗೆ ಹೋಗಿ ಬಾಪೂಜಿ ಮತ್ತು ಕಸ್ತೂರಿಬಾ ಅವರನ್ನು ತನ್ನ ಮನೆ 'ಪರ್ಣಕುಟಿಗೆ ಕರೆದುಕೊಂಡು ಹೋದರು. ಉಪವಾಸ ಮುಂದುವರಿಯಿತು. ಅಜ್ಜಿ ರಾತ್ರಿ–ಬೆಳಿಗ್ಗೆ ನಿರಂತರವಾಗಿ ಬಾಪೂಜಿಯ ಸೇವೆ ಮಾಡುತ್ತಿದ್ದರು. ಬಾಪೂಜಿ ಉಪವಾಸ ಮಾಡಿದಾಗಲೆಲ್ಲ ಅಜ್ಜಿ ಬೆಳಗಿನ ಹೊತ್ತು ಒಂದೆರಡು ಬಾರಿ ಫಲಾಹಾರ ತೆಗೆದುಕೊಳ್ಳುತ್ತಿದ್ದಳು. ಸರೋಜಿನಿ ನಾಯ್ಡು ಪೂನಾದಲ್ಲಿ ಕುಳಿತು ಬಾಪೂಜಿಯ ದ್ವಾರಪಾಲಕಳಾಗಿ ಅತಿಥಿಗಳು ಬಂದು ಈ ದುರ್ಬಲ ಶರೀರದ ಶಕ್ತಿಯನ್ನು ಮುಗಿಸದಂತೆ ನೋಡಿಕೊಳ್ಳುತ್ತಿದ್ದರು. ೨೯ ಮೇ ೧೯೩೩ರಂದು ಬಾಪೂಜಿಯ ಆತ್ಮಶುದ್ಧಿಯ ಉಪವಾಸ ಮುಗಿಯಿತು. ಪರ್ಣಕುಟಿಯಿಂದ ಹೊರಡಲು ಶಕ್ತಿ ಇರಲಿಲ್ಲ. ಅಲ್ಲೇ ಇದ್ದು ವಿಶ್ರಾಂತಿ ಪಡೆದರು. ೧೬ ಜೂನ್ ೧೯೩೩ರಂದು ಗಾಂಧೀಜಿಯ ಕೊನೆಯ ಮಗ ದೇವದಾಸ್ ಗಾಂಧಿಯ ಮದುವೆ ರಾಜಗೋಪಾಲಚಾರಿಯವರ ಮಗಳ ಜೊತೆ ನೆರವೇರಿತು. ಇದು ಮೊದಲ ಅಂತರ್ಜಾತೀಯ ವಿವಾಹವಾಗಿತ್ತು. ಮೊದಲ ಬಾರಿ ಒಬ್ಬ ಬ್ರಾಹ್ಮಣರ ಹುಡುಗಿ ಬನಿಯ ಮಗನ ಜೊತೆ ಮದುವೆ ಆಗುತ್ತಿದ್ದಳು. ಬಾಪೂಜಿ ಸಮಾಜ ಸುಧಾರಕರಾಗಿದ್ದರು. ಅದರಿಂದ ಮದುವೆಗಳಲ್ಲಿ ವೈಭವಕ್ಕಾಗಿ ಅನಾವಶ್ಯಕವಾದ ಖರ್ಚು ಆಗಬಾರದೆಂಬುದು ಅವರ ಸ್ಪಷ್ಟವಾದ ಅಭಿಪ್ರಾಯವಾಗಿತ್ತು. ಸಾಧ್ಯವಾದಷ್ಟು ಕಡಿಮೆ ಜನರನ್ನು ಕರೆದು ಆಡಂಬರದಿಂದ ತಪ್ಪಿಸಿಕೊಳ್ಳಬೇಕು ಅನ್ನುವ ಸಿದ್ಧಾಂತವನ್ನು ಅವರು ಅತಿ ಕಟುವಾಗಿ ಪಾಲಿಸಿದ್ದರಾದ್ದರಿಂದ ಅವರು ತಮ್ಮ ಸೊಸೆ ನಿರ್ಮಲಾಳನ್ನು ಈ ಮದುವೆಗೆ ಬಾರದಂತೆ ತಡೆದಿದ್ದರು. ಬಾಪೂಜಿ 'ನಿನ್ನನ್ನು ಬರದಿರುವಂತೆ ತಡೆದರೆ ಬೇರೆಯವರನ್ನೂ ತಡೆಯಬಲ್ಲೆ' ಎಂದು ನಮ್ಮಮ್ಮನಿಗೆ ಪತ್ರ ಬರೆದಿದ್ದರು. ನಮ್ಮ ತಂದೆ ಬಾಪೂಜಿಯ ಉಪವಾಸದಿಂದಾಗಿ ಪರ್ಣಕುಟಿಯಲ್ಲೇ ಇದ್ದರು. ಅವರು ತಮ್ಮ ತಮ್ಮನ ವಿವಾಹದಲ್ಲಿ ತನ್ನ ತಂದೆ–ತಾಯಿ ಜೊತೆ ಇದ್ದರು. ಮದುವೆಯಾದ ಮಾರನೆಯ ದಿನ ನಮ್ಮ ತಂದೆ ಸಾಬರಮತಿಗೆ ಹೋದರು. ಅಲ್ಲಿಂದ ನಮ್ಮ ತಾಯಿ ನಿರ್ಮಲಾ ಗಾಂಧೀ, ನನ್ನ ಎರಡು ವರ್ಷದ ತಮ್ಮ ಕನು ಗಾಂಧೀ ಮತ್ತು ನನ್ನು ಕರೆದುಕೊಂಡು ವಾಪಸ್ ಪೂನಾಗೆ ಹೋದರು. ಬಾಪೂಜಿಯ ಸೆರೆವಾಸದ ಅನಾರೋಗ್ಯದ ದಿನಗಳಲ್ಲಿ ಪರಿವಾರದ ನಾವೆಲ್ಲರೂ ಜೊತೆಗಿದ್ದೆವು. ಆಗಲೇ ಮೊದಲ ಬಾರಿ ನಮ್ಮಮ್ಮ ತನ್ನ ನಾದಿನಿ ಲಕ್ಷ್ಮಿಯನ್ನು ಪರಿಚಯ ಮಾಡಿಕೊಂಡಳು ಹಾಗೂ ಜೀವನ ಪರ್ಯಂತ ಅವರಿಬ್ಬರೂ ಮಿತ್ರರಾಗಿ ಇದ್ದರು.

**ಹರಿಜನ ಫಂಡ್**

೨೧ ದಿನಗಳ ಉಪವಾಸ ಕಳೆದ ಮೇಲೆ ಬಾಪೂಜಿ ಅಹಮದಾಬಾದ್‌ಗೆ ಹೋದರು. ಆದರೆ ಸ್ವಾತಂತ್ರ್ಯ ಸಿಗದೆ ಮನೆಗೆ ಹಿಂದಿರುಗುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದರಾದ್ದರಿಂದ ಆಶ್ರಮಕ್ಕೆ ಬರಲಿಲ್ಲ. ಯಾವುದೋ ಮಿತ್ರನ ಮನೆಯಲ್ಲಿ ಉಳಿದುಕೊಂಡರು. ಜುಲೈ ೧೯೩೩ ಆಗಿತ್ತು. ಸರಕಾರ ೧೯೩೦ರ ಉಪ್ಪಿನ ಸತ್ಯಾಗ್ರಹ ನಡೆದಾಗ ಉತ್ತರ ಪ್ರದೇಶ, ಕರ್ನಾಟಕ, ಬಿಹಾರ, ಗುಜರಾತ್‌ನ ರೈತರ ಭೂಮಿಯನ್ನ ಜಪ್ತಿ ಮಾಡಿ, ಅವರ ಮನೆ–ಪದಾರ್ಥಗಳು ಯಾವುದನ್ನೂ ಹಿಂದಿರುಗಿಸಿರಲಿಲ್ಲ. ಎಷ್ಟೋ ಜನ ಬಡವರು ತಮ್ಮ ಪ್ರಾಣ ಕಳೆದುಕೊಂಡಿದ್ದರು. ಅವರ ಮನೆಯ ಪ್ರೀತಿಯ ಜನಗಳು ರಾಷ್ಟ್ರದ ಹೆಸರಿನಲ್ಲಿ ಬಲಿಯಾಗಿದ್ದರು. ಹೀಗೆ ಸಾವಿರಾರು ಜನ ದೇಶಕ್ಕಾಗಿ ಇಷ್ಟೊಂದು ಸಹಿಸಿರುವಾಗ, ತಾನು ಕೂಡ ದೇಶಕ್ಕಾಗಿ ಸ್ವಲ್ಪ ಸಮರ್ಪಿಸಬೇಕು ಎಂದು ಗಾಂಧೀಜಿಗೆ ಅನಿಸಿತು. ಅವರು ತಮ್ಮ ಸತ್ಯಾಗ್ರಹ ಆಶ್ರಮವನ್ನು ತ್ಯಜಿಸಲು ನಿರ್ಧರಿಸಿದರು. ಸಾಬರಮತಿ ಆಶ್ರಮ ಬಾಪೂಜಿಯ ತಪಸ್ಸಿನ ಭೂಮಿ, ಅವರಿಗೆ ಆಶ್ರಮದ ಬಗ್ಗೆ ಪ್ರೀತಿ ಇತ್ತು. ಅಂತಹ ಸ್ವರಾಜ್ಯ ಆಶ್ರಮವನ್ನು ಬಾಪೂಜಿ ಸರಕಾರಕ್ಕೆ ಕೊಡುವುದೆಂದು ನಿರ್ಧರಿಸಿದರು. ಸರಕಾರ ಸತ್ಯಾಗ್ರಹಿಗಳ ಸಂಪತ್ತನ್ನು ವಶಕ್ಕೆ ತೆಗೆದುಕೊಂಡ ಹಾಗೆ ಬಾಪೂಜಿಯ ಆಶ್ರಮವನ್ನು ವಶಕ್ಕೆ ತೆಗೆದುಕೊಳ್ಳಲಿಲ್ಲವೆಂದಾಗ ಬಾಪೂಜಿ ತಾನೇ ಮುಂದುವರಿದು ಆಶ್ರಮದ ಸಂಪತ್ತನ್ನು ಸರಕಾರಕ್ಕೆ ದಾನ ಮಾಡುವೆನೆಂದು ನಿಶ್ಚಯಿಸಿದರು. ಆಶ್ರಮದಂತಹ ವಿಪತ್ತಿನ ಪೊಟ್ಟಣವನ್ನು ಸಮಾಜ ಸುಧಾರಣೆಯ ಹೆಸರಿನಲ್ಲಿ ಪಡೆದುಕೊಳ್ಳಲು ಸರಕಾರ ತಯಾರಾಗಿರಲಿಲ್ಲ. ಆ ಶ್ರಮ ಭಂಗವಾಯಿತು. ಇನ್ನು ಹಳ್ಳಿ ಹಳ್ಳಿಗೂ ಹೋಗುವೆನೆಂದು ಬಾಪೂಜಿ ಯೋಚಿಸಿದ್ದರು. ಮಿಕ್ಕ ಸತ್ಯಾಗ್ರಹಿಗಳು ತಮ್ಮ ಮನೆ–ಮಠ ಕಳೆದುಕೊಂಡಿದ್ದ ರೀತಿಯಲ್ಲೇ ಗಾಂಧೀಜಿ ಕೂಡ ಮನೆ ಇಲ್ಲದವರಾದರು. ಆಶ್ರಮದಲ್ಲಾದರೋ ೧೦೦–೧೫೦ ಜನರಿದ್ದರು. ಅವರಲ್ಲಿ ಎಷ್ಟೋ ಜನ ಜೈಲಿನಲ್ಲಿದ್ದರಾದರೂ, ಅವರ ೧೫–೧೬ ಮಕ್ಕಳ ಗತಿ ಏನು ಅನ್ನುವ ಸಮಸ್ಯೆ ಎದುರಾಗಿತ್ತು. ಅನಸೂಯಾ ಬಹನ್ ಸಾರಾಭಾಯಿ ತಂದೆ–ತಾಯಿಗಳಿಂದ ದೂರವಾದ ಅಸಹಾಯಕ ಹುಡುಗ–ಹುಡುಗಿಯರನ್ನು ತನ್ನ ಮನೆಯಲ್ಲಿಟ್ಟುಕೊಳ್ಳಲು ಸಿದ್ಧರಾದರು. ಈ ಮಕ್ಕಳಲ್ಲಿ ಗಾಂಧೀಜಿಯ ದೊಡ್ಡ ಮಗ ಹರಿಲಾಲ ಗಾಂಧಿಯ ಕೊನೆಯ ಮಗಳು ಮನು ಗಾಂಧೀ ಕೂಡ ಇದ್ದಳು. ಮಹಾದೇವ ಭಾಯಿ ಈ ಮಕ್ಕಳನ್ನು ಬಹನ್‌ನ ಬಂಗಲೆಗೆ ಕರೆದೊಯ್ದರು. ಪ್ರಾಣಕ್ಕಿಂತ ಪ್ರಿಯರಾದ ಆ ಮಕ್ಕಳನ್ನು ಹೀಗೆ ನಿರಾಶ್ರಿತರನ್ನಾಗಿ ಬಿಡುವಾಗ ಆ ಸಮರ್ಪಿತ ತಪಸ್ವಿ ಸ್ವರಾಜ್ಯ ಪ್ರೇಮಿಯಾದ ಸ್ವರಾಜ್ಯ ಸೈನಿಕ ಮಹಾದೇವ ಕಾಕಾನ ಕಣ್ಣುಗಳಿಂದ ಕಣ್ಣೀರು ಸುರಿದವು.

೧ ಆಗಸ್ಟ್ ೧೯೩೩ ರಂದು ೩೨ ಜನ ಆಶ್ರಮವಾಸಿಗಳೊಂದಿಗೆ ಬಾಪೂಜಿ ಸೇಠ್ ರಣಛೋಡದಾಸ್‌ನ ಮನೆಯಿಂದ ಹೊರಡಲು ಸಿದ್ಧವಾಗುತ್ತಿದ್ದರು. ಆದರೆ ರಾತ್ರಿಯೇ ಪೋಲೀಸ್ ಬಂದು ಕಸ್ತೂರಬಾ, ಮಹಾದೇವ ಭಾಯಿ ಮತ್ತು ಗಾಂಧೀಜಿಯನ್ನು ಬಂಧಿಸಿ ಕರೆದುಕೊಂಡು ಹೋಯಿತು. ಅವರ ಮೇಲೆ ಕೇಸ್ ನಡೆಯಿತು. ಒಂದು ವರ್ಷದ ಸಜಾ ಆಯಿತು. ಆ ಕಾಲದಲ್ಲಿ ಯಾವುದೇ ಸರಕಾರಿ ಪತ್ರದಲ್ಲಿ ಹೆಸರು ವಿಳಾಸದ ಜೊತೆ ಜಾತಿಯನ್ನು ನಮೂದಿಸಬೇಕಾಗುತ್ತಿತ್ತು. ಆ ನಿಯಮದಡಿಯಲ್ಲಿ ಬಾಪೂಜಿಯ ಜಾತಿಯನ್ನು ಕೇಳಿದಾಗ ಅವರು ತಮ್ಮನ್ನು ಹರಿಜನ ಎಂದು ಹೇಳುತ್ತಿದ್ದರು. ವೃತ್ತಿಯ –ನೇಯ್ಗೆಯವನು ಮತ್ತು ರೈತ, ಸ್ಥಿರ ವಿಳಾಸ–ಯರವಾಡಾ ಜೈಲು ಅಂತ ಬರೆಸುತ್ತಿದ್ದರು.

ಬಾಪೂಜಿಯನ್ನು ಪುನಃ ಯರವಾಡಾ ಜೈಲಿನಲ್ಲಿರಿಸಲಾಯಿತು. ಅಜ್ಜಿಯನ್ನು ಮಹಿಳಾ ವಿಭಾಗಕ್ಕೆ ಕಳುಹಿಸಿದರು. ಈ ಬಾರಿ ಸರಕಾರ ಗಾಂಧೀಜಿಯನ್ನು ಜೈಲಿನಲ್ಲಿ ಹರಿಜನ ಸೇವಾಕಾರ್ಯ ಮಾಡದಂತೆ ತಡೆಯಿತು. ಹರಿಜನ ಸೇವೆ ಶುದ್ಧ ಮಾನವಸೇವೆ. ಅದರಲ್ಲಿ ರಾಜಕೀಯ ಒಂದಿಷ್ಟೂ ಇರಲಿಲ್ಲ. ಆದರೆ ಹರಿಜನ ಸೇವೆಯ ಮೂಲಕ ಬಾಪೂಜಿ ಮೇಲೇಳುವಂತೆ ಮಾಡುವುದು ಸರಕಾರಕ್ಕೆ ಇಷ್ಟವಿರಲಿಲ್ಲ. ಗಾಂಧೀಜಿ ಲೋಕಪ್ರಿಯರಾಗುವುದು ಸರಕಾರದ ಕಣ್ಣು ಕುಕ್ಕುತ್ತಿತ್ತು. ಈ ಹರಿಜನ ಕಾರ್ಯದಿಂದಂತೂ ಇಡೀ ದೇಶ ಅವರನ್ನ ಕೂಡಿಕೊಳ್ಳುವಂತೆ ಅವರಿಗೆ ಅನಿಸುತ್ತಿತ್ತು. ಕೋಮುವಾದಿತ್ವ, ಜಾತೀಯ ಭೇದಭಾವ ನಾಶವಾದರೆ ಸರಕಾರ ಶೋಷಣೆ ಮಾಡುತ್ತ ಆಡಳಿತವನ್ನು ಹೇಗೆ ನಡೆಸುವುದೆಂಬುದು ಸರಕಾರಕ್ಕೆ ಚಿಂತೆಯಾಗಿತ್ತು. ಹರಿಜನರು ಕೂಡ ಸರಕಾರಕ್ಕೆ ವಿರುದ್ಧವಾಗಿ ನಿಂತಿದ್ದರೆ ಎಲ್ಲಾ ಮುಳುಗಿ ಹೋಗುತ್ತಿತ್ತು. ಆಂಗ್ಲರಿಗೆ ಭಾರತದಲ್ಲಿ ಇರುವುದೇ ಕಷ್ಟವಾಗುತ್ತಿದ್ದುದರಿಂದ ಸರಕಾರ ಗಾಂಧೀಜಿಯನ್ನು ಹರಿಜನರಿಗಾಗಿ ಕೆಲಸ ಮಾಡಕೂಡದೆಂದು ತಡೆ ಹಾಕಿತು. ಬಾಪೂಜಿ ಈ ಅನ್ಯಾಯದಿಂದ ಕೂಡಿದ ಬಂಧನವನ್ನು ವಿರೋಧಿಸಿದರು, ೧೬ ಆಗಸ್ಟ್ ೧೯೩೩ ರಂದು ಪುನಃ ಉಪವಾಸ ಶುರು ಮಾಡಿದರು. ಪುನಃ ಅಜ್ಜಿಯನ್ನು ಮಹಿಳಾ ವಾರ್ಡ್‌ನಿಂದ ತೆಗೆದು ಬಾಪೂಜಿಯವರ ಸೇವೆಗಾಗಿ ಇರಿಸಿದರು. ಮಹಾದೇವ ಕಾಕಾ ಅಂತೂ ಜೊತೆಯಲ್ಲೇ ಇದ್ದರು. ಈ ಬಾರಿ ಬಾಪೂಜಿಗೆ ಬದುಕುವ ಆಸೆ ತೀರ ಕಡಿಮೆಯಾಗಿ ಹೋಗಿತ್ತು. ಇನ್ನು ಬದುಕಿರುವುದರಲ್ಲಿ ಸಾರವಿಲ್ಲ ಅಂತ ಅವರಿಗನಿಸಿತು. ಸಾಯುವವನಿಗೆ ಸಾಮಾನು ಬೇಕಾಗುವುದಿಲ್ಲ, ಈ ಉದ್ದೇಶದಿಂದ ಬಾಪು ಹೇಳಿದವರಿಗೆಲ್ಲಾ ಅಜ್ಜಿ ಜೈಲಿನಲ್ಲಿದ್ದ ಕೈದಿಗಳು, ವಾರ್ಡ್‌ರುಗಳಿಗೆ ಸಾಮಾನುಗಳನ್ನು ಕೊಡುತ್ತಾ ಹೋದರು. ಎಲ್ಲಿಂದ ಧೈರ್ಯ ಬಂದಿತ್ತೋ ಆ ವೃದ್ಧ ಮಹಿಳೆ ತನ್ನ ಪತಿಯ ಸಾವಿನ ಸಿದ್ಧತೆಯಲ್ಲಿ ವಸ್ತುಗಳನ್ನು ದಾನ ಮಾಡಿದ್ದಿರಬೇಕು. ನನಗಂತೂ ಖಂಡಿತ ಆ ಪದಾರ್ಥಗಳ ವ್ಯಾಮೋಹ ಉಂಟಾಗುತ್ತಿತ್ತು.

ಗಾಂಧೀಜಿಯ ಪರಿಸ್ಥಿತಿಯನ್ನು ನೋಡಿ ಇನ್ನು ಈತ ಉಳಿಯುವುದಿಲ್ಲವೆಂದು ಸರಕಾರಕ್ಕನಿಸಿತು. ಸಾಯುವವನನ್ನು ಜೈಲಿನಲ್ಲಿಡುವುದರಿಂದ ಪ್ರಯೋಜನವಿಲ್ಲ ಎಂದುಕೊಂಡು ೨೩ ಆಗಸ್ಟ್ ೧೯೩೩ರಂದು ಬಾಪೂಜಿ ಮತ್ತು ಅಜ್ಜಿ, ಮಹಾದೇವ ಕಾಕಾ ಇವರನ್ನು ಜೈಲಿನಿಂದ ಬಿಡುಗಡೆ ಮಾಡಿದರು. ಪುನಃ ಲೇಡಿ ಠಾಕರಸೇಯ ಪರ್ಣಕುಟಿಯಲ್ಲಿರಲು ಹೋದರು. ಜೈಲಿನಿಂದ ಹೊರಕ್ಕೆ ಬಂದ ನಂತರ ಕೂಡ ಬಾಪೂಜಿಗೆ ಚೈತನ್ಯ ಬಂದಿರಲಿಲ್ಲ. ಶರೀರ ಮನಸ್ಸು ಎರಡೂ ಕ್ಷೀಣವಾಗಿದ್ದವು. ಪೂರ್ತಿ ನಿಶ್ಶಕ್ತರಾಗಿದ್ದರು. ಅವರಿಗೆ ಬದಕುವ ಇಚ್ಛೆ ಇರಲೇ ಇಲ್ಲ. ಬಾಪೂಜಿ ಬೇಡ ಅಂದರೂ ಅಜ್ಜಿ ಬರೆಸಿದ ಮೇಲೆ ಇಂಗ್ಲೆಂಡ್‌ನಿಂದ ಅವರ ಅತ್ಮೀಯ ಮಿತ್ರ ಚಾರ್ಲಿ ಆ್ಯಂಡ್ರೂಸ್ ಹಿಂದೂಸ್ತಾನಕ್ಕೆ ಬಂದು ಬಾಪೂಜಿ ಜೊತೆ ಪರ್ಣಕುಟಿಯಲ್ಲಿ ಇದ್ದರು. ಚಾರ್ಲಿಯ ಪ್ರೀತಿಪೂರ್ಣ ಚರ್ಚೆಯಿಂದ ಬಾಪೂಜಿಗೆ ಜೀವನದಲ್ಲಿ ಆಸಕ್ತಿ ತಲೆದೋರಿತು. ನೀನು ಬದುಕಬೇಕೆಂದು ನಿರ್ಧರಿಸಿದರೆ ನಿನ್ನ ಆರೋಗ್ಯ ತಾನೇ ತಾನಾಗಿ ಸರಿಹೋಗುತ್ತದೆಯೆಂದು ಚಾರ್ಲಿ ಒತ್ತಾಯಪಡಿಸಿದರು. ಶರೀರದ ರೋಗ ಹೇಗೇ ಇದ್ದರೂ ಬದುಕಲು ನಿರ್ಧರಿಸುವುದರಿಂದ ಅರ್ಧಕ್ಕರ್ಧ ವಾಸಿಯಾಗುತ್ತೆ ಅಂದರು. ಹೀಗೆ ಮಿತ್ರನ ಪ್ರಯತ್ನದ ಶುಶ್ರೂಷೆಯಿಂದ ಬಾಪೂಜಿ ಬರು ಬರುತ್ತಾ ಸರಿಹೋಗತೊಡಗಿದರು. ಬಾಪೂಜಿಯುವರ ಕಾರ್ಯಕಲಾಪಗಳಿನ್ನೂ ಮುಗಿದಿರಲಿಲ್ಲವಾದ್ದರಿಂದ ಅವರು ಸರಿಹೋದರು. ಆರೋಗ್ಯ ಸುಧಾರಿಸಿದ ನಂತರ ಅವರು ಅಹಮದಾಬಾದಿಗೆ ಹೋದರು. ಅಲ್ಲಿ ಆಶ್ರಮ ಖಾಲಿಯಾಗಿ ಶೂನ್ಯವಾಗಿತ್ತು. ಹಾಳಾಗುತ್ತಿತ್ತು. ೧೯೩೪ ರಲ್ಲಿ ಬಾಪೂಜಿ ಹರಿಜನ ಸಂಘವನ್ನು ಸ್ಥಾಪಿಸಿದರು. ಸ್ವರಾಜ್ಯ ಆಶ್ರಮವನ್ನು ಹರಿಜನ ಸೇವೆಗಾಗಿ ದಾನ ಮಾಡಿದರು. ಆಗಿನಿಂದ ಸಾಬರಮತಿ ಆಶ್ರಮ ಹರಿಜನ ಆಶ್ರಮವಾಗಿತ್ತು. ಅಲ್ಲಿ ಹರಿಜನ ಹುಡುಗಿಯರಿಗಾಗಿ ವಿದ್ಯಾರ್ಥಿನೀ ನಿಲಯವನ್ನು, ಜೊತೆಗೆ ಒಂದು ಸ್ಕೂಲನ್ನು ಆರಂಭಿಸಿದರು. ಇವತ್ತಿಗೂ ಹರಿಜನ ಬಾಲಕಿಯರಿಗಾಗಿ ಅಲ್ಲಿ ಒಂದು ಒಳ್ಳೆಯ ಬೋಧನ ಸಂಸ್ಥೆ ನಡೆಯುತ್ತಿದೆ. ಅಲ್ಲಿ ಕಾಲೇಜುವರೆಗೆ ಪಾಠ ಹೇಳಿಕೊಡಲಾಗುತ್ತದೆ.

೧೯೩೬ರಲ್ಲಿ ಬಾಪೂಜಿ ಒಂದು ವರ್ಷ ನನ್ನನ್ನು ಆ ವಿದ್ಯಾರ್ಥಿನಿಲಯಲ್ಲಿ ಇರಿಸಿದ್ದರು. ನನ್ನ ತಿಂಗಳ ಖರ್ಚು ಬಹುಶಃ ೫ ರೂ. ಆಗುತ್ತಿತ್ತು. ಜೈಲಿನಿಂದ ಹಿಂದಿರುಗಿದ ನಂತರ ಬಾಪೂಜಿ ೯ ತಿಂಗಳ ಹರಿಜನ ಫಂಡ್ ಸಂಗ್ರಹಿಸಲು ಮತ್ತು ಅಸ್ಪೃಶ್ಯತೆ ತೊಡೆದು ಹಾಕಲು ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆವರೆಗೂ ಯಾತ್ರೆ ಕೈಗೊಂಡರು. ಗಾಂಧೀಜಿ ಈಗ ನಾಲ್ಕನೆ ಬಾರಿ, ೧೯೨೦ ರಲ್ಲಿ ಸ್ವರಾಜ್ಯ ಫಂಡ್ ಸಂಗ್ರಹಿಸುವುದಕ್ಕಾಗಿ, ಎರಡನೆ ಬಾರಿ ಖಾದಿ ಪ್ರಚಾರಕ್ಕಾಗಿ, ಮೂರನೆ ಬಾರಿ ಪೂರ್ಣ ಸ್ವರಾಜ್ಯಕ್ಕಾಗಿ, ಈಗ ನಾಲ್ಕನೆ ಬಾರಿ ಹರಿಜನ ಫಂಡ್‌ಗಾಗಿ

ಹೊರಟಿದ್ದರು. ಬಾಪೂಜಿ ಹೋದಲ್ಲೆಲ್ಲ ಸಾವಿರ ಸಾವಿರ ಸಂಖ್ಯೆಯಲ್ಲಿ ಜನ (ಹಿಂದೂ ಮತ್ತು ಮಿಕ್ಕ ಅನೇಕರು) ಬಂದು ಸೇರುತ್ತಿದ್ದರು. ಆ ಕಾಲದಲ್ಲಿ ಯಾವಾಗಲೂ ಲೌಡ್‌ಸ್ಪೀಕರ್ ಇರುತ್ತಿರಲಿಲ್ಲ. ಬಾಪೂಜಿಯ ಧ್ವನಿ ಸಭೆ ಕೊನೆಯಲ್ಲಿ ಕುಳಿತಿರುವವನಿಗೆ ಬಹುಶಃ ಕೇಳಿಸುತ್ತಿರಲಿಲ್ಲವಾದರೂ ಜನ ಶಾಂತಿಯಿಂದ ಗಮನ ಕೊಟ್ಟು ಈ ದೇವದೂತನ ಮಾತು ಕೇಳಿಸಿಕೊಳ್ಳುತ್ತಿದ್ದರು. ಅವರ ಮಾತು ಕೇಳಿಸದಿದ್ದರೂ ಅವರ ದರ್ಶನದಿಂದಲೇ ತೃಪ್ತಿಪಟ್ಟುಕೊಳ್ಳುತ್ತಿದ್ದರು. ಈ ಸಭೆಗಳಲ್ಲಿ ಎಲ್ಲ ಶ್ರೇಣಿಯ ಮಹಿಳೆಯರೂ ತಮ್ಮ ಅಡುಗೆಯ ಕೆಲಸ ಬಿಟ್ಟು ಅವರ ದರ್ಶನ ಪಡೆಯುವುದಕ್ಕಾಗಿ ಬರುತ್ತಿದ್ದರು. ಬಾಪೂಜಿ ನೇರವಾಗಿ ಸರಳವಾದ ಭಾಷೆಯಲ್ಲಿ ಮಾತನಾಡುತ್ತಿದ್ದರು. ಅದನ್ನು ಕೇಳಿಸಿಕೊಂಡು ಮುಗ್ಧರಾಗಿ ಮಹಿಳೆಯರು ತಮ್ಮ ಆಭೂಷಣಗಳನ್ನು ಕಳಚಿ ಹರಿಜನ ಫಂಡ್‌ಗಾಗಿ ದಾನ ಮಾಡುತ್ತಿದ್ದರು. ಇಂಥ ಮೂರು–ನಾಲ್ಕು ಯಾತ್ರೆಗಳಿಗೆ ಗಾಂಧೀಜಿ ನನ್ನನ್ನೂ ಕರೆದುಕೊಂಡು ಹೋಗಿದ್ದರು. ನನ್ನ ಫ್ರಾಕ್‌ನ ಚೀಲದಲ್ಲಿ ಮಹಿಳೆಯರು ಚಿನ್ನದ ಕಡಗ, ಬಳೆಗಳು, ಉಂಗುರ, ಕಿವಿಯ ಲೋಲಾಕ್, ಝುಮ್ಕಿ, ಕತ್ತಿನ ಸರ ಎಲ್ಲವನ್ನು ಬಿಚ್ಚಿ ಹರಿಜನ ಸಹಾಯಕ್ಕಾಗಿ ನೀಡುತ್ತಿದ್ದರು. ಭಾರತೀಯ ಮಹಿಳೆಯರು ಚಿನ್ನವನ್ನು ಪ್ರೀತಿಸುತ್ತಾರೆ ಅಂತ ಪ್ರಪಂಚಕ್ಕೆ ಗೊತ್ತಿದೆ. ಆದರೆ ಗಾಂಧೀಜಿಯ ಮಾತು ಕೇಳಿ ಆ ಅಶಿಕ್ಷಿತ ಮಹಿಳೆಯರು, ಕೆಲ ಕಾಲದವರೆಗೆ ತಮ್ಮ ಸರ್ವಸ್ವವನ್ನು ನೀಡಿ ದೇಶದ ಪ್ರಗತಿಗಾಗಿ ಸಹಕರಿಸುವುದಕ್ಕೆ ಸಿದ್ಧವಾಗುತ್ತಿದ್ದರು. ಇಂತಹ ದಾನದ ಮಹಿಮೆ ಅಪಾರವಾಗಿರುತ್ತದೆ, ಕೊಡುಗೈವೀರ ಶ್ರೇಷ್ಠವಾಗಿರುತ್ತಾನೆ. ಅದನ್ನು ಪಡೆಯುವವನು ಕೂಡ ಅದೇ ಕ್ಷಣ ಪುಣ್ಯಭಾರದಿಂದ ಪವಿತ್ರನಾಗುತ್ತಾನೆ. ಈ ಹರಿಜನ ಫಂಡ್‌ನ್ನು ಬಾಪೂಜಿ ಜೀವನಪೂರ್ತಿ ಸಂಗ್ರಹಿಸಿದರು. ಹೋದಲ್ಲೆಲ್ಲ ದರಿದ್ರ ನಾರಾಯಣನಿಗಾಗಿ ದುಡ್ಡು–ಕಾಸು ಕೊಡಿ ಅಂತ ಬೇಡುತ್ತಿದ್ದರು. ಬಾಪೂಜಿ ಮನೆ–ಮಠ ಇಲ್ಲದೆ ಭಿಕ್ಷೆ ಬೇಡುವ, ನಡೆದಾಡುವ ಫಕೀರನಾದರು. ದೇಶದ ಜನ ಕೂಡ ಈ ಸನ್ಯಾಸಿಗೆ ತನ್ನ ಹತ್ತಿರ ಇದ್ದುದನ್ನೆಲ್ಲಾ ಹಿಂಜರಿಯದೆ ಕೊಟ್ಟರು.

೧೫ ಜನವರಿ ೧೯೩೪ರಂದು ಬಿಹಾರದಲ್ಲಿ ಭೂಕಂಪವಾಯಿತು. ೧೦ ಸಾವಿರ ಚದರ ಮೈಲು ವಿಸ್ತೀರ್ಣ ಪೂರ್ತಿ ನಾಶವಾಯಿತು. ೧೫,೦೦೦ ಮಂದಿ ಸತ್ತು ಹೋದರು. ಲಕ್ಷಾಂತರ ಮಂದಿ ಗಾಯಗೊಂಡರು. ಇಷ್ಟು ದೊಡ್ಡ ವಿಪತ್ತು ಸಂಭವಿಸಿತ್ತಾದರೂ ಆ ಆಂಗ್ಲ ಗವರ್ನರ್ ಮತ್ತು ಆಂಗ್ಲರ ಆಡಳಿತ ಜನರಿಗೆ ಸಹಾಯ ಮಾಡಲು ಏನೇನೂ ಪ್ರಯತ್ನಿಸಲಿಲ್ಲ. ಬಿಹಾರದ ಅಸಹಾಯಕ ಬಡಜನರು ನರಳುತ್ತಿದ್ದರು. ಸರಕಾರ ನಿಷ್ಕ್ರಿಯವಾಗಿ ಕುಳಿತಿತ್ತು. ರಾಜೇಂದ್ರಬಾಬು ಮತ್ತು ಬಿಹಾರದ ನಾಯಕರು ಪರಿಹಾರ ಕಾರ್ಯದಲ್ಲಿ ತತ್ಪರರಾದರು. ಬಾಪೂಜಿ ತಮ್ಮ ಹರಿಜನ ಯಾತ್ರೆ ನಿಲ್ಲಿಸಿ ನೇರವಾಗಿ ಬಿಹಾರಕ್ಕೆ ಹೋದರು. ಚಂಪಾರಣ್ಯ

ಆಂದೋಳನ ಮುಗಿದ ಮೇಲೆ ಇದೇ ಮೊದಲ ಬಾರಿ ಬಾಪೂಜಿ ಮೋತಿಹಾರಿಗೆ ಬಂದಿದ್ದರು. ಆದರೆ ಅಲ್ಲಿ ಆ ಮನೆಗಳೂ, ಜನ ಯಾರೂ ಇರಲಿಲ್ಲ. ಮಣ್ಣು ಕೊಚ್ಚೆಯ ರಾಶಿ ಬಿದ್ದಿತ್ತು. ಬಾಪೂಜಿ ಆ ದುಃಖಿತರಾಗಿದ್ದ ಜನರಿಗೆ ಧೈರ್ಯ ಹೇಳಿದರು. ನಿಮಗೆ ನೀವೇ ಸಹಾಯ ಮಾಡಿಕೊಳ್ಳಿರೆಂದು ಹೇಳಿ ಅವರಿಗೆ ಧೈರ್ಯ ತುಂಬಿದರು, ಆ ಬಿಹಾರಿಗಳನ್ನು ಪ್ರೇರೇಪಿಸಿದರು ಮತ್ತು ಸಹಾಯ ಕಾರ್ಯ ಶುರುವಾಯಿತು.

ಬೊಂಬಾಯಿ ಮತ್ತು ಅಹಮದಾಬಾದಿನ ಧನಿಕರು ತಮ್ಮ ಹಣದ ಪೆಟ್ಟಿಗೆಯನ್ನು ತೆರೆದರು. ಎಲ್ಲ ತರಹೆಯ ಸಹಾಯ ಬಿಹಾರವನ್ನು ತಲುಪತೊಡಗಿತು. ಸ್ವಾಮಿ ಆನಂದ್ ಮತ್ತು ರವಿ ಶಂಕರ ಮಹಾರಾಜ್ ತಮ್ಮ ಜೊತೆಗಾರರೊಂದಿಗೆ ಬಿಹಾರದಲ್ಲೇ ಉಳಿದರು. ಮತ್ತು ಇಬ್ಬರೂ ಬಟ್ಟೆ–ಬರೆ, ಕಂಬಳಿ, ಧಾನ್ಯ, ಭೋಜನ ಸಾಮಗ್ರಿ, ಹಾಲಿನ ಡಬ್ಬಗಳು, ಔಷಧಿಗಳು ಎಲ್ಲವನ್ನೂ ಭೂಕಂಪ ಪೀಡಿತರಿಗಾಗಿ ತಲುಪಿಸಲಾರಂಭಿಸಿದರು. ಈ ಭೂಕಂಪದ ವಿಪತ್ತಿನಲ್ಲಿ ಗುಜರಾತ್ ಮತ್ತು ಬೊಂಬಾಯಿಯ ಸೇಠರು ಬಿಹಾರ ನಿವಾಸಿಗಳನ್ನು ದತ್ತು ತೆಗೆದುಕೊಂಡ ಹಾಗೆ ಅನ್ನಿಸಿತು. ಒಂದು ವರ್ಷ ಕಾಲ ಪೂರ್ತಿಯಾಗಿ ಸ್ವಾಮಿ ಆನಂದ್ ಮತ್ತು ರವಿಶಂಕರ್ ಮಹಾರಾಜರು ರಾಜೇಂದ್ರಬಾಬೂಗೆ ಈ ಪರಿಹಾರ ಕಾರ್ಯದಲ್ಲಿ ಸಕ್ರಿಯವಾಗಿ ಸಹಯೋಗ ನೀಡಿದರು. ಈ ಎಲ್ಲ ಪರಿಹಾರ ಕಾರ್ಯವನ್ನು ಸಮಾಜಸೇವಕರು ತಮ್ಮ ಕರುಣಾಪೂರಿತ ಧೈರ್ಯ, ಶ್ರಮದ ಜೊತೆಗೆ ತಮ್ಮ ಮೇಲೆ ತಾವೇ ಆಶ್ರಿತರಾಗಿದ್ದರು. ವಿದೇಶಿ ಆಡಳಿತ ತಂತ್ರ ಯಾವುದೇ ಸಹಾಯ ನೀಡಲಿಲ್ಲ. ಅದರಿಂದ ಸಹಾಯವನ್ನು ಯಾರೂ ಆಪೇಕ್ಷಿಸಲೂ ಇಲ್ಲ. ಅದರಿಂದಲೇ ಬಹುಶಃ ಒಂದು ಪೈಸಾ ಕೂಡ ಹಾಳಾಗಲಿಲ್ಲ. ತಪ್ಪು ಜನರ ಕೈಗೆ ಅದು ತಲುಪಲಿಲ್ಲ, ನಿರಾಶ್ರಿತರಿಗೆ ಎಲ್ಲ ತರಹೆಯ ಸಹಾಯ ಪೂರ್ತಿ ಉತ್ಸಾಹದಿಂದ ನೀಡಿದರು. ಬಿಹಾರದ ರಾಹತ್ ಫಂಡ್ (ಪರಿಹಾರ ನಿಧಿ)ಗೆ ಬೇಡಿಕೊಳ್ಳದಿದ್ದರೂ ಲಕ್ಷಾಂತರ ರೂಪಾಯಿಗಳು ಬಂದವು. ಸ್ವಾತಂತ್ರ್ಯ ಬಂದ ಮೇಲೆ ನಮ್ಮ ದೇಶದ ಜನರ ಶೌರ್ಯ ಮತ್ತು ಶಕ್ತಿ ಕ್ಷೀಣವಾಗಿ ಹೋಗಿದೆ ಅಂತ ನನಗನಿಸುತ್ತದೆ. ನಮ್ಮ ಸಹಾನುಭೂತಿ ಮತ್ತು ಜವಾಬ್ದಾರಿ ನಮ್ಮ ಸರಕಾರದ ಮೇಲೆ ಹಾಕಿ ನಾವು ನಾಗರಿಕರು ನಿಶ್ಚಿಂತೆಯಿಂದ ಮಾಡಿದ್ದೇ ಮಾಡಿಕೊಂಡು ಕುಳಿತಿರುತ್ತೇವೆ. ಸರಕಾರ ಅವರ ನೌಕರರಿಂದ ತಾನೆ ನಡೆಯುತ್ತದೆ, ಅವರ ಕೈಲಿ ಹಣ ಹಾಳಾಗುತ್ತಲೇ ಇರುತ್ತದೆ, ೩–೪ ವರ್ಷಗಳ ಹಿಂದೆ ಮಹಾರಾಷ್ಟ್ರದ ಲಾತೂರಿನಲ್ಲಾದ ಭೂಕಂಪ ಒಂದು ಉದಾಹರಣೆ ಮಾತ್ರ. ಅಲ್ಲಿ ಮನೆ–ಮಠ ಕಳೆದುಕೊಂಡ ಹಳ್ಳಿಯ ಜನರಿಗೆ ಪೂರ್ತಿ ಸಹಾಯ ಸಿಗಲೇಇಲ್ಲವೆಂದು ತಿಳಿದುಬಂದಿದೆ. ಪರಿಹಾರ ಕಾರ್ಯದಲ್ಲಿ ಸಮಾಜ ಮುಂದೆ ಬರುವವರೆಗೂ ಯಾವ ಸಹಾಯದ ಕೆಲಸವೂ ನಡೆಯಲಾರದು.

ನಾವು ಈ ಮೂಲಸಿದ್ಧಾಂತವನ್ನೇ ಮರೆಯತೊಡಗಿದ್ದೇವೆ. ಸಮಾಜದ ಹತ್ತಿರದ ಜನರೇ ಸಮಾಜದ ಸಂಪತ್ತನ್ನು ಸುವ್ಯವಸ್ಥಿತಗೊಳಿಸಬಲ್ಲರು. ಹಣದ ಬಲದಿಂದ ಸಹಾಯವನ್ನು ಕೊಂಡುಕೊಳ್ಳಲಾಗುವುದಿಲ್ಲ. ಅದನ್ನು ನಾವೇ ಮಾಡಬೇಕು. ಸ್ವಾತಂತ್ರ್ಯ ಸಿಕ್ಕ ಮೇಲೆ ಈಗ ನಾವೆಲ್ಲ ಹಣಕೊಟ್ಟು ಬಿಡಿಸಿಕೊಳ್ಳಬಯಸುತ್ತೇವೆ. ಸಮಯ, ಶಕ್ತಿ, ಸಹಾನುಭೂತಿ, ಭಾವನೆಯ ಸಕ್ರಿಯ ಸಹಾಯ ನೀಡುವುದಿಲ್ಲ. ಅದರಿಂದ ಪರಿಹಾರ ಕಾರ್ಯದಂತಹ ಪುಣ್ಯ ಕಾರ್ಯದಲ್ಲೂ ಬೇಕಾದಷ್ಟು ಭ್ರಷ್ಟಾಚಾರ ನಡೆಯುತ್ತದೆ.

ಬಿಹಾರದ ಈ ಭೂಕಂಪದ ವೇಳೆಯಲ್ಲಿ ಬಾಪೂಜಿ ಆರು ತಿಂಗಳವರೆಗೂ ಒಂದೇ ಸಮನೆ ಬಿಹಾರದ ಹಳ್ಳಿಗಳಲ್ಲಿ ಅಲೆದರು. 'ಹಿಮ್ಮತೇ ಮರದ್‌ತೋ ಮದದ್‌ದೇ ಖುದಾ' ಧೈರ್ಯಸ್ಥ ಪುರುಷನಿಗೆ ದೇವರೂ ಸಹಾಯ ಮಾಡ್ತಾನೆ ಅನ್ನುವ ಮಹಾಮಂತ್ರವನ್ನು ಬಿಹಾರದ ಜನರಿಗೆ ಕಲಿಸುತ್ತಿದ್ದರು. ಪರಿಹಾರದ ವ್ಯವಸ್ಥೆ ಮಾಡುತ್ತಾ ಇದ್ದರು. ರಾತ್ರಿ–ಬೆಳಿಗ್ಗೆ ಅನ್ನದೆ ಕಾಡು, ನದಿ– ನಾಲಾ ಪಾರು ಮಾಡಿಕೊಂಡು ಎಲ್ಲೋ ಮುರಿದ ಜಿಂಕ್‌ಶೀಟ್ ಕೆಳಗೆ, ಒಮ್ಮೊಮ್ಮೆ ಮರದ ಕೆಳಗೂ ಇದ್ದುಕೊಂಡು ಬಾಪೂಜಿ ಮನೆ ಇಲ್ಲದವರಿಗೆ ಖುದ್ದಾಗಿ ಕೆಲಸ ಮಾಡಿ ಎಂದು ಪ್ರೇರೇಪಿಸುತ್ತಿದ್ದರು. ಭಿಕ್ಷೆ ಬೇಡುವುದನ್ನು ತಪ್ಪಿಸುತ್ತಿದ್ದರು. ಜೂನ್ ೧೯೩೪ರಲ್ಲಿ ಬಾಪೂಜಿ ಬಿಹಾರದಿಂದ ಪೂನಾಗೆ ಹೋದರು. ಕೆಲವರು ಕಟ್ಟಾ ಸನಾತನಿ ಹಿಂದೂಗಳಿಗೆ ಗಾಂಧೀಜಿಯ ಈ ಸುಧಾರಣಾ ಕಾರ್ಯದ ಬಗ್ಗೆ ಕೋಪ ಇತ್ತು. ಪೂನಾದಲ್ಲಿ ಯಾರೋ ಬಾಪೂಜಿಯ ಮೋಟರ್ ಗಾಡಿಯ ಮೇಲೆ ಬಾಂಬ್ ಎಸೆದರು, ಮುಂದೆ ಗಾಡಿಯಲ್ಲಿ ಕುಳಿತಿದ್ದ ಜನರಿಗೆ ಗಾಯಗಳಾದುವು. ಬಾಪೂಜಿ ಮತ್ತು ನಮ್ಮಜ್ಜಿ ಇಬ್ಬರೂ, ಏನೂ ಅಪಾಯವಾಗದೆ ಉಳಿದರು.

ಹನ್ನೆರಡು ಸಾವಿರದ ಐದು ನೂರು ಮೈಲು ದೂರದ ಈ ಹರಿಜನ ಯಾತ್ರೆಯಲ್ಲಿ ಆರು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದರು ಮತ್ತು ಏನಿಲ್ಲವೆಂದರೂ ಹತ್ತು ಕೋಟಿ ಜನರಿಗೆ ಅಸ್ಪೃಶ್ಯತೆ ನಿವಾರಣೆಯನ್ನು ಕುರಿತು ತಿಳಿಯಹೇಳಿದರು. ಕೋಟ್ಯಂತರ ಹರಿಜನರಿಗೆ ನೈತಿಕ ಧೈರ್ಯ ಮತ್ತು ಆಶ್ವಾಸನೆ ನೀಡಿದರು. ಕೋಟ್ಯಂತರ ಸವರ್ಣ ಹಿಂದೂಗಳ ಹೃದಯ ಪರಿವರ್ತನೆಯಾಯಿತು. ಜಾತಿ, ಸ್ಪೃಶ್ಯಾ ಸ್ಪೃಶ್ಯತೆಯ ನೂರಾರು ವರ್ಷಗಳ ಹಳೆಯ ಪರಂಪರೆ ಬೇರುಸಹಿತ ಅಲ್ಲಾಡಿತು. ಅದರ ಅವಶೇಷ ಇಂದಿಗೂ ಉಳಿದಿದೆ. ಅದು ಕೂಡ ಇನ್ನು ೧೦–೧೫ ವರ್ಷಗಳಲ್ಲಿ ಮಾಯವಾಗಲಿದೆ. ಅಸ್ಪೃಶ್ಯತೆಯ ಈ ಕಳಂಕವನ್ನು ಸಮಾಜದ ಹಣೆಯಿಂದ ತೊಡೆದು ಹಾಕಿದ ಮೊದಲ ವ್ಯಕ್ತಿ ಗಾಂಧೀಜಿ ಆಗಿದ್ದರು. ಅದರ ನೆರಳು ಇವತ್ತೂ ಇದೆಯಾದರೂ ಆ ಕಲೆ ನಾಶವಾಗಿದೆ. ಈ ಯಾತ್ರೆಯಲ್ಲಿ ಗಾಂಧೀಜಿಯ ಆರೋಗ್ಯ ಸರಿಹೋಯಿತು. ಹಾಲಿನ ನಿರ್ಬಂಧ ತಪ್ಪಿ ಹೋಗಿತ್ತು. ೬೫ ವರ್ಷದ ಬಾಪೂಜಿಗೆ ಆಡಿನ ಹಾಲಿನ ಆಸರೆಯಿಂದ ಒಬ್ಬ ಯುವಕನಂತಹ ಶಕ್ತಿ ಧೈರ್ಯ ಬಂತು.

# ೨೧. ಸೇವಾಗ್ರಾಮ

ಹರಿಜನ ಯಾತ್ರೆ ಮತ್ತು ಬಿಹಾರದ ಭೂಕಂಪವಾದ ನಂತರ ಎಲ್ಲಿರುವುದೆಂಬ ಪ್ರಶ್ನೆ ಬಾಪೂಜಿಯ ಎದುರಿಗಿತ್ತು. ಸಾಬರಮತಿ ಆಶ್ರಮ ಬಿಟ್ಟು ಹೋಗಿತ್ತು. ಇನ್ನೆಲ್ಲೂ ಇರಲು ಜಾಗವಿರಲಿಲ್ಲ. ಆಗ ಜಮನಾಲಾಲ್‌ಜೀಯ ಒತ್ತಾಯದ ಮೇರೆಗೆ ಆಗಿನ ಮಧ್ಯಪ್ರದೇಶದ ವರ್ಧಾಕ್ಕೆ ಹೋಗಿ ಬಾಪೂಜಿ ಇದ್ದರು. ವರ್ಧಾ ನಗರದಲ್ಲಿ ಜಮನಾಲಾಲ್ ಬಜಾಜ್ ಅವರದೊಂದು ತೋಟವಿತ್ತು. ಅದರಲ್ಲೇ ಬಾಪೂಜಿ ಮತ್ತು ಅವರ ಇಪ್ಪತ್ತು–ಮೂವತ್ತು ಮಂದಿ ಜೊತೆಗಾರರು ಹೋಗಿ ಇರಲಾರಂಭಿಸಿದರು. ಮಗನಲಾಲ ಗಾಂಧಿಯ ನೆನಪಿನಲ್ಲಿ ಈ ತೋಟಕ್ಕೆ ಮಗನವಾಡಿ ಎಂದು ಹೆಸರಿಟ್ಟರು. ಮಗನವಾಡಿಯಲ್ಲಿ ಗ್ರಾಮೋದ್ಯೋಗ ಮತ್ತು ಖಾದಿ ವಿಕಾಸದ ಅನೇಕ ಪ್ರಯೋಗಗಳನ್ನು ಆರಂಭಿಸಲಾಯಿತು.

ಮಗನವಾಡಿಯಲ್ಲಿ ನಾನು, ನಮ್ಮಮ್ಮ, ತಮ್ಮ, ಬಾಪೂಜಿಯವರೊಂದಿಗೆ ಇದ್ದೆವು. ನಮ್ಮ ತಂದೆ ಬೊಂಬಾಯಿಯಲ್ಲಿದ್ದರು. ಆಗ ಕೈಯಿಂದ ಕಾಗದ ಮಾಡುವುದು, ಚಪ್ಪಲಿ ಮಾಡುವುದು, ಕುಂಬಾರನ ಚಕ್ರದ ಮೇಲೆ ಸುಂದರವಾದ ಗಡಿಗೆಗಳನ್ನು ಮಾಡುವುದು, ನೂಲು ತೆಗೆಯುವುದು, ಸ್ವೆಟರ್ ಹಾಕುವುದು, ಚರಖಾ ಮಾಡುವುದು ಮುಂತಾದ ಅನೇಕ ಕಾರ್ಯಗಳು ನಡೆಯುತ್ತಿದ್ದವು. ಗ್ರಾಮೋದ್ಯೋಗದ ಸುಂದರ ಪ್ರದರ್ಶನ ಇವತ್ತೂ ವರ್ಧಾದ ಮಗನವಾಡಿಯಲ್ಲಿದೆ. ನಾನು  ಕಾಗದ ಮಾಡಲು ವಿಶೇಷವಾಗಿ ಇಷ್ಟಪಡುತ್ತಿದ್ದೆ. ನೀರಿನಲ್ಲಿ ಬಣ್ಣಹಾಕಿ ಯಾವ ಬಣ್ಣದ ಕಾಗದವನ್ನಾದರೂ ಮಾಡಬಹುದಾಗಿತ್ತು. ಹಾಗೆ ಕಾಗದ ಮಾಡುವ ಆಟ ನನಗೆ ವಿಶೇಷ ಪ್ರಿಯವಾಗಿತ್ತು. ನಮ್ಮಮ್ಮನ ಆರೋಗ್ಯ ಸರಿಯಾಗಿರಲಿಲ್ಲ. ಬಹುಶಃ ಅದರಿಂದ ಬಾಪೂಜಿ ಪ್ರವಾಸಕ್ಕೆ ನನ್ನನ್ನು ಜೊತೆಗೆ ಕರೆದೊಯ್ಯುತ್ತಿದ್ದಳು. ಸುತ್ತುತ್ತಾ ನಾವು ಅಹಮದಾಬಾದನ್ನು ತಲಪಿದಾಗ ನಾವು ಗುಜರಾತ್ ವಿದ್ಯಾಪೀಠದಲ್ಲಿ ತಂಗಿದೆವು. ಬಾಪೂಜಿ ತನ್ನನ್ನು ಹರಿಜನನೆಂದೇ ಭಾವಿಸುತ್ತಿದ್ದರಾದ್ದರಿಂದ ನಾವೆಲ್ಲ ಹರಿಜನರೇ ಆಗಿದ್ದೆವು. ಆ ಭಾವನೆಯಲ್ಲೇ ಬಾಪೂಜಿ ನನ್ನನ್ನು ಸಾಬರಮತಿಯ ಹರಿಜನ ಆಶ್ರಮಕ್ಕೆ ಸೇರಿಸಿದ್ದರು. ಆ ಕಾಲದಲ್ಲಿ ಮೋಟಾರುಗಾಡಿ ಇರಲಿಲ್ಲ. ಟಾಂಗಾದಲ್ಲಿ ಕುಳಿತು ಕುದುರೆ ಮೇಲೆ ಭಾರ ಹಾಕಲು ಇಷ್ಟವಿರಲಿಲ್ಲ. ನಾನು–ಬಾಪೂಜಿ, ಮಹಾದೇವ ಕಾಕಾ ಚಂದ್ರಭಾಗದ ಸೇತುವೆಯನ್ನು ದಾಟಿ ಹರಿಜನ ಆಶ್ರಮಕ್ಕೆ ಹೋಗಿದ್ದುದು ನನಗಿವತ್ತೂ ನೆನಪಿದೆ.

ನನಗಾಗ ಹೆಚ್ಚೆಂದರೆ ಐದು ವರ್ಷಗಳಾಗಿದ್ದವು. ಬಾಪೂಜಿಯಿಂದ ಬೇರೆಯಾಗುವಾಗ ಅಳು ಬಂತು. ಆದರೆ ಬಾಪೂಜಿ ಹೇಳಿದರು. 'ಧೈರ್ಯವಂತ ಮಕ್ಕಳು ಅಳಬಾರದು, ನಗಬೇಕು.' ಕಣ್ಣೀರು ತುಳುಕುತ್ತಿದ್ದ ಕಣ್ಣುಗಳಿಂದಲೇ ನಾನು ನಕ್ಕಿದ್ದೆ ಮತ್ತು ಬಾಪೂಜಿ ನನ್ನನ್ನ ಬಿಟ್ಟು ವಿದ್ಯಾಪೀಠಕ್ಕೆ ಹಿಂದಿರುಗಿದ್ದರು. ಈ ವಿಷಯವನ್ನು ತಿಳಿಸುತ್ತಾ ಬಾಪೂಜಿ ೫ ಫೆಬ್ರವರಿ ೧೯೩೭ರಂದು ನಮ್ಮ ತಂದೆಗೆ ಪತ್ರ ಬರೆದಿದ್ದರು. ಅದನ್ನು ಇಲ್ಲಿ ಉದ್ಧರಿಸುವುದಕ್ಕೆ ಸಂಕೋಚವಾಗುತ್ತಾದರೂ ಆ ಪತ್ರ ಬಹಳ ಮುದ್ದಾಗಿದೆ. ಪಾಠಕರಿಗೆ ಆ ಆನಂದ ಕೊಡದೆ ಇದ್ದರೆ ತಪ್ಪಾಗುತ್ತೆ,

ಚಿ. ರಾಮದಾಸ್,

> ನೀನು ಪ್ರತಿದಿನ ಪತ್ರ ಬರೆಯುತ್ತೀಯ ಅಂತ ಸರದಾರ್ ಹೇಳ್ತಾರೆ, ಆದರೆ ನೀನು ಹೇಗಿದ್ದೀಯ ಅಂತ ನಿನ್ನ ವಿಷಯವಾಗಿ ಬರೆಯುವುದೇ ಇಲ್ಲವಲ್ಲ.
>
> ನಾನು ಸುಮಿತ್ರಾ ವಿಷಯವಾಗಿ ಬರೆಯುತ್ತಾ ಇದ್ದೇನೆ. ಸುಮಿತ್ರಾ ನನ್ನ ಜೊತೆ ತೀರಾ ಹೊಂದಿಕೊಂಡುಬಿಟ್ಟಿದ್ದಾಳೆ. ಸುಮಿತ್ರ ಈಶ್ವರನ ಪ್ರಸಾದ ಅಂತ ಅನ್ನುವ ಹಾಗಿದ್ದಾಳೆ. ಅವಳಂತಹ ಸರಳವಾದ ಮತ್ತೊಂದು ಹುಡುಗಿಯನ್ನು ನಾನು ನೋಡಿಲ್ಲ. ಅವಳು ಯಾರಿಗೂ ಕಷ್ಟಕೊಡಲ್ಲ. ಎಲ್ಲರ ಜೊತೆಯಲ್ಲೂ ಹೊಂದಿಕೊಂಡಿರುತ್ತಾಳೆ. ಬಾ(ಅಜ್ಜಿ) ಇಲ್ಲಿಂದ ಹೋದಮೇಲೆ ಅವಳ ವಿದ್ಯಾಭ್ಯಾಸಕ್ಕೋಸ್ಕರ ನಾನು ಸುಮಿತ್ರಾಳನ್ನ ಹರಿಜನ ಆಶ್ರಮಕ್ಕೆ ಸೇರಿಸಿದ್ದೀನಿ. ನರಹರಿಭಾಯಿ ಮತ್ತು ಮಣಿ ಬಹನ್ ಅವಳನ್ನು ನೋಡಿಕೊಳ್ಳುತ್ತಾರೆ. ದಿವಸಕ್ಕೆ ೩ ಬಾರಿ, ಒಟ್ಟಿನಲ್ಲಿ ಒಂದೂವರೆ ಪೌಂಡ್ ಹಾಲು ಕುಡಿತಾಳೆ, ಎಲ್ಲವನ್ನೂ ತಿನ್ನುತಾಳೆ, ಹಣ್ಣು ತಿನ್ನುತಾಳೆ, ಆಟವಾಡ್ತಾಳೆ, ಓದುತ್ತಾಳೆ, ಆನಂದವಾಗಿರುತ್ತಾಳೆ. ಆರೋಗ್ಯ ಚೆನ್ನಾಗಿದೆ. ಪ್ರತಿ ದಿವಸವೂ ನನ್ನನ್ನು ಭೇಟಿಯಾಗಲು ಬರುತ್ತಾಳೆ. ನಾನು ಅವಳನ್ನು ಇಲ್ಲೇ ಇಟ್ಟಿರಲು ಬಯಸುತ್ತೇನೆ. ಅವಳಿಗೆ ಇದಕ್ಕಿಂತ ಒಳ್ಳೆಯ ಜಾಗವನ್ನ ನಾನು ಹುಡುಕಲಾರೆ. ನನಗಂತೂ ವಿದ್ಯಾರ್ಥಿನೀ ನಿಲಯ ಮನೆಯ ಹಾಗೆಯೇ ಅನಿಸುತ್ತದೆ. ಇಷ್ಟಾಗಿಯೂ ನಿನಗೆ–ನೀಮೂಗೆ (ನಿರ್ಮಲಾ) ಈ ವ್ಯವಸ್ಥೆ ಇಷ್ಟವಾಗದಿದ್ದಲ್ಲಿ ನಾನು ಅವಳನ್ನು ಅಲ್ಲಿಂದ ಬಿಡಿಸಿಬಿಡುತ್ತೇನೆ.
>
> ನಾನು ಈ ಪತ್ರ ಬರೆಯುತ್ತಿರುವಾಗಲೇ ಸರದಾರ್ ನಿನ್ನ ಪತ್ರ ನನಗೆ ಓದಲು ಕೊಟ್ಟರು. ಅದರಲ್ಲಿ ನಿನ್ನ ಅಭಿಪ್ರಾಯ ತಿಳಿಯುತ್ತೆ, ಆದರೆ ನರಹರಿ ಭಾಯಿ ಮತ್ತು ಮಣಿ ಬಹನ್ ಎಲ್ಲಿ ? ಶಾರದಾ ಮಂದಿರ? (ಅಹಮದಾಬಾದಿನ ಮತ್ತೊಂದು ಪ್ರಸಿದ್ಧ ಸಂಸ್ಥೆ) ಎಲ್ಲಿ? ಆದರೆ ಈ ವಿಷಯದಲ್ಲಿ ನಿಮ್ಮಿಬ್ಬರ ಇಚ್ಛೆಗೆ ವಿರುದ್ಧವಾಗಿ ಹೋಗಿ ನನ್ನ ಅಭಿಪ್ರಾಯವನ್ನು

ಜಾರಿಗೆ ತರುವುದಿಲ್ಲ. ಅದರಿಂದ ನಿರ್ಭಯವಾಗಿ ನೀನು ನಿನ್ನಭಿಪ್ರಾಯವನ್ನು ಹೇಳು, ಇದೇ ಪತ್ರವನ್ನ ನೀಮುಗೂ ಕಳುಹಿಸಿದರೆ ಒಳ್ಳೆಯದು, ನಾನು ಕಷ್ಟಪಡುವುದು ತಪ್ಪುತ್ತೆ. ಬಾ ಗೂ ಈ ಪತ್ರವನ್ನು ಓದಿಸು.

ಬಾಪೂನ ಆಶೀರ್ವಾದ.

ಇನ್ನು ಬಾಪೂ ರಾಜಕೀಯದಿಂದ ಸನ್ಯಾಸವನ್ನು ತೆಗೆದುಕೊಂಡರು. ಅವರು ಜವಾಹರಲಾಲ್‌ಜೀಗೆ 'ಇನ್ನು ಕಾಂಗ್ರೆಸ್ಸನ್ನು ಯುವಕರ ಕೈಗೆ ಕೊಡುವುದು ಒಳ್ಳೆಯದು' ಅಂತ ಹೇಳಿ ಬಾಪೂಜಿ ಕಾಂಗ್ರೆಸ್‌ನ ನಾಲ್ಕಾಣೆ ಸದಸ್ಯತ್ವವನ್ನು ಬಿಟ್ಟುಬಿಟ್ಟರು. ಆ ಕಾಲದಲ್ಲಿ ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವದ ಶುಲ್ಕ ನಾಲ್ಕಾಣೆ ಇತ್ತು. ವಾರ್ಷಿಕ ಅಧಿವೇಶನಗಳಿಗೆ ಒಂದೊಂದು ಸಾರಿ ಹೋಗುತ್ತಾ ಇದ್ದರು. ಯಾವುದಾದರೂ ಸಮಸ್ಯೆ ಕುರಿತು ಅವರ ಅಭಿಪ್ರಾಯ ಕೇಳಿದಾಗ, ಅದನ್ನು ವಿಶ್ಲೇಷಿಸಿ ಉತ್ತರ ಕೊಡುತ್ತಿದರು. ಯಾವ ಸಮಸ್ಯೆಯಾದರೂ ಅದನ್ನು ಚೆನ್ನಾಗಿ ಅರ್ಥಮಾಡಿಕೊಂಡು ಅದಕ್ಕೆ ಸರಿಯಾದ ಉತ್ತರವನ್ನು ವಿಶಿಷ್ಟ ರೀತಿಯಲ್ಲಿ ಹುಡುಕುವ ಶಕ್ತಿ ಅವರಿಗಿತ್ತು. ಹೃದಯದಲ್ಲಿ ಅಪಾರವಾದ ಸಹೃದಯತೆ, ಸಹಾನುಭೂತಿ ಇತ್ತು. ಅದರಿಂದ ಯಾರೇ ಮಹಿಳಾ–ಪುರುಷರು ಅವರ ಬಳಿ ಬಂದಾಗ, ಅದಕ್ಕೆ ಪರಿಹಾರ ನೀಡುತ್ತಿದ್ದರು. ಹರಿಜನ ಸೇವೆ, ಖಾದಿ ಪ್ರಚಾರ ಮತ್ತು ಗ್ರಾಮೋದ್ಯೋಗದ ವಿಚಾರ–ಪ್ರಚಾರ ನಿರಂತರವಾಗಿ ನಡೆಯುತ್ತಿತ್ತು. ಆ ದಿವಸಗಳಲ್ಲೇ 'ಗಾಂಧೀ ಸೇವಾ ಸಂಘ' ಎಂಬೊಂದು ಸಂಸ್ಥೆ ಹುಟ್ಟಿಕೊಂಡಿತು. ಈ ಸಂಸ್ಥೆಯಲ್ಲಿ ಪ್ರಮುಖವಾಗಿ ರಚನಾತ್ಮಕವಾದ ಕಾರ್ಯಕರ್ತರೂ, ಸದಸ್ಯರೂ ಇದ್ದರು. ರಾಜಕೀಯದಿಂದ ಹೊರಗುಳಿದು ಈ ಸಂಘ ಎಲ್ಲ ಸೈದ್ಧಾಂತಿಕವಾದ ಮೂಲಭೂತ ಪ್ರಶ್ನೆಗಳನ್ನು ಬಹಳ ಸೂಕ್ಷ್ಮವಾಗಿ ತಾತ್ವಿಕವಾಗಿ ಚರ್ಚಿಸುತ್ತಿತ್ತು. ಆ ಸಮಸ್ಯೆಗಳನ್ನು ದೂರಮಾಡುವ ಮಾರ್ಗ ಹುಡುಕುತ್ತಿತ್ತು. ಕಿಶೋರಲಾಲ ಮಧುಬಾಲ ಈ ಸಂಘದ ಪ್ರಥಮ ಅಧ್ಯಕ್ಷರಾಗಿ ನಾಮಾಂಕಿತರಾಗಿದ್ದರು. ಅವರು ಹತ್ತುವರ್ಷಕಾಲ ಪೂರ್ತಿ ಅಧ್ಯಕ್ಷರಾಗಿದ್ದು ಬಹಳ ಚೆನ್ನಾಗಿ ನಡೆಸಿದರು. ಜವಾಹರಲಾಲ್‌ಜೀ, ರಾಜೇಂದ್ರಬಾಬು, ಸರದಾರ ಪಟೇಲರಂತಹ ಶ್ರೇಷ್ಠ ಮುಖಂಡರು ಈ ಸಂಘದ ಸದಸ್ಯರಾಗಿದ್ದರು, ಮತ್ತಲ್ಲಿ ರಾಜಕೀಯದಿಂದ ಹೊರತಾಗಿ ಸಮಾಜ ಮತ್ತು ದೇಶದ ಉತ್ಥಾನವನ್ನು ಕುರಿತಂತೆ ರಚನಾತ್ಮಕವಾದ ವಿಚಾರವಿನಿಮಯ ನಡೆಯುತ್ತಿತ್ತು.

ಸತ್ಯಾಗ್ರಹದಿಂದ ಕಾಲದಿಂದಲೂ ಸರಕಾರ 'ನವಜೀವನ' ಪ್ರೆಸ್‌ನ್ನು ಜಪ್ತಿ ಮಾಡಿತ್ತು. ಆದರೆ ೧೯೩೩ರಲ್ಲಿ 'ಹರಿಜನ' ಎಂಬ ಹೆಸರಿನ ಸಾಪ್ತಾಹಿಕ ಪತ್ರಿಕೆಯನ್ನು ಆರಂಭಿಸಿದ್ದರು. ಹಿಂದಿ, ಗುಜರಾತಿ, ಇಂಗ್ಲಿಷ್ – ಈ ಮೂರು ಭಾಷೆಗಳಲ್ಲಿ ಈ ಸಾಪ್ತಾಹಿಕ ಪ್ರಕಟವಾಗುತ್ತಿತ್ತು. ಈ ಸಾಪ್ತಾಹಿಕದ ಮುಖಾಂತರ ಬಾಪೂಜಿ ದೇಶದ ಜನರಿಗೆ ಪ್ರಾಥಮಿಕವಾದ ರಚನಾತ್ಮಕ ಹಾಗೂ ಸಮಾಜ ಸುಧಾರಣೆಯ ತರಬೇತಿ ಕೊಡಲಾರಂಭಿಸಿದರು.

೧೯೩೫ರಲ್ಲಿ ಸರಕಾರ ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿತು. ಅದರಲ್ಲಿ ದೇಶದ ಜನರಿಗೆ ಪ್ರಾಂತೀಯ ಸರಕಾರ ರಚಿಸುವ ಅಧಿಕಾರ ನೀಡಲಾಯಿತು. ಆದರೆ ಸೈನ್ಯ, ಹಣಕಾಸು, ಅಂತರರಾಷ್ಟ್ರೀಯ ವಿಷಯಗಳನ್ನು ಕೇಂದ್ರ ಸರಕಾರ ಮತ್ತು ಪ್ರಾಂತ್ಯದ ಇಂಗ್ಲಿಷ್ ಗವರ್ನರ್‌ನ ಬಳಿ ಸುರಕ್ಷಿತಗೊಳಿಸಿದ್ದರು. ಚುನಾವಣೆಯಲ್ಲಿ ಗೆದ್ದು ಬಂದ ಪ್ರತಿನಿಧಿಗಳು ಅವುಗಳ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ಪ್ರಕಟಪಡಿಸಲು, ನಿರ್ಣಯ ಕೈಗೊಳ್ಳಲು ಯಾವ ಅಧಿಕಾರವೂ ಇರಲಿಲ್ಲ. ಈ ವ್ಯವಸ್ಥೆ ಇತಿಹಾಸದಲ್ಲಿ ೧೯೩೫ರ ಶಾಸನ ಎಂಬ ಹೆಸರಿನಲ್ಲಿ ಪ್ರಖ್ಯಾತವಾಗಿದೆ. ಬಾಪೂಜಿಗೆ ಅದು ಇಷ್ಟವಾಗಿರಲಿಲ್ಲ. ಆದರೆ ಕಾಂಗ್ರೆಸ್ ಮುಖಂಡರು ಈ ಸುಧಾರಣೆಗಳನ್ನು ಚೆನ್ನಾಗಿ ಅಳವಡಿಸಿ ನೋಡಲು ನಿರ್ಧರಿಸಿದರು. ಈ ಉದ್ದೇಶದಿಂದ ೧೯೩೭ರಲ್ಲಿ ದೇಶದಲ್ಲಿ ಚುನಾವಣೆ ನಡೆಸಿದರು. ಹನ್ನೆರಡು ಪ್ರಾಂತ್ಯಗಳ ಒಂಬತ್ತು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಪಾರ್ಟಿಗೆ ಬಹುಮತ ಬಂದಿತು. ಹೀಗೆ ಸೈನ್ಯ, ವಿದೇಶ ಮತ್ತು ಹಣಕಾಸು ಸಚಿವಾಲಯಗಳನ್ನು ಬಿಟ್ಟು ಸರಕಾರ ಸಮಸ್ತ ಆಡಳಿತವನ್ನು ದೇಶದ ಚುನಾಯಿತ ಪ್ರತಿನಿಧಿಗಳಿಗೆ ನೀಡಿತು. ಆಗ ಇಂದಿನ ಗುಜರಾತ್ ಮಹಾರಾಷ್ಟ್ರ ಸೇರಿಸಿ ಒಂದು ಬೃಹದ್ ಬಾಂಬೆ ಪ್ರಾಂತ್ಯವಿತ್ತು. ಬಾಲಾ ಸಾಹೇಬ್ ಖೇರ್ ಬೊಂಬಾಯಿಯ ಮೊದಲ ಮುಖ್ಯಮಂತ್ರಿಗಳಾದರು. ಅದೇ ರೀತಿ ಬೃಹದ್ ಮದ್ರಾಸ್‌ನಲ್ಲಿ ಆಂಧ್ರಪ್ರದೇಶದ ಬಹುಭಾಗ ಸೇರಿತ್ತು ಮತ್ತು ಮಹಾವಿಷ್ಣುವಿನ ತಿರುಪತಿ ದೇವಸ್ಥಾನ ಅದರಲ್ಲೇ ಸೇರಿತ್ತು. ಅಲ್ಲಿ ರಾಜಾಜಿ ಮುಖ್ಯಮಂತ್ರಿಗಳಾದರು. ಬಾಂಗ್ಲಾ ದೇಶ ಮತ್ತು ಪಶ್ಚಿಮ ಬಂಗಾಳ ಎರಡೂ ಸೇರಿ ಸಂಯುಕ್ತ ವಿಶಾಲ ಬಂಗಾಳದ ಮುಖಂಡತ್ವವನ್ನು ಪ್ರಫುಲ್ಲ ಚಂದ್ರ ಬೋಸ್ ಅವರು ಹೊತ್ತರು. ಇಂದಿನ ಒರಿಸ್ಸಾ ಮತ್ತು ಆ ಕಾಲದ ಉತ್ಕಲದಲ್ಲಿ ಹರೇಕೃಷ್ಣ ಮೆಹತಾಬ್ ಮುಖ್ಯಮಂತ್ರಿಯಾದರು. ಬಿಹಾರದಲ್ಲಿ ಶ್ರೀ ಕೃಷ್ಣಸಿಹ್ನಾ, ಉತ್ತರ ಪ್ರದೇಶದಲ್ಲಿ ಗೋವಿಂದ ವಲ್ಲಭ ಪಂತ, ಗಡಿಯ ಪ್ರಾಂತ್ಯದಲ್ಲಿ ಗಡಿನಾಡು ಗಾಂಧಿಯ ಅಣ್ಣ ಡಾ॥ ಖಾನ್ ಸಾಹಬ್ ಮುಖ್ಯಮಂತ್ರಿಗಳಾದರು.

ಸ್ವರಾಜ್ಯದ ಈ ಮೊದಲ ಸೈನಿಕರು ಉತ್ಸಾಹದಿಂದ ಪ್ರಾಮಾಣಿಕತೆಯಿಂದ ಆಡಳಿತವನ್ನು ನಡೆಸಿದರು. ವರ್ಧಾ ದೇಶದ ಮಧ್ಯದಲ್ಲಿದೆ. ಯಾವುದೇ ಕಠಿಣ ಸಮಸ್ಯೆ ತಲೆ ಎತ್ತಿದಾಗ ಪ್ರತಿಯೊಬ್ಬ ಮುಖ್ಯಮಂತ್ರಿ ಹಾಗೂ ಮಂತ್ರಿಗಳು ವರ್ಧಾ ತಲುಪಿ ಗಾಂಧೀಜಿಯ ಮಾರ್ಗದರ್ಶನವನ್ನು ಪಡೆಯುತ್ತಿದ್ದರು. ದೇಶದಲ್ಲಿ ಕಾಂಗ್ರೆಸ್ ರಾಜ್ಯ ಆರಂಭವಾದಾಗ ಸ್ವರಾಜ್ಯದ ಮಂತ್ರಿಗಳು ಈ ಹೊಸ ಸುಖ ವೈಭವ ಅಧಿಕಾರದ ನಡುವೆ ದೇಶದ ಏಳು ಲಕ್ಷ ಹಳ್ಳಿಗಳ ಉತ್ಥಾನವಾಗಬೇಕೆನ್ನುವುದನ್ನು ಮರೆಯದಿರಲಿ ಎಂದು ಬಾಪೂಜಿ ಈ ದೊಡ್ಡ ದೇಶದ ನೀರು–ವಿದ್ಯುತ್ತು ಕೂಡ ಇಲ್ಲದ ಕುಗ್ರಾಮವೊಂದರಲ್ಲಿ ವಾಸಿಸುವ ನಿರ್ಣಯ ಕೈಗೊಂಡರು. ಪ್ರತಿಯೊಂದು

ಹಳ್ಳಿಗೂ ವಿದ್ಯುತ್ತು ತಲಪುವವರೆಗೂ ಗಾಂಧೀಜಿ ವಿದ್ಯುತ್ತಿಲ್ಲದ ಹಳ್ಳಿಯಲ್ಲಿ ವಾಸಿಸಲು ನಿರ್ಧರಿಸಿದರು. ಮೀರಾ ಬಹನ್ ಬಾಪೂಜಿಗಾಗಿ ಒಳ್ಳೆಯ ಹಳ್ಳಿಯನ್ನು ಹುಡುಕತೊಡಗಿದಳು. ದೇಶ–ವಿದೇಶಗಳಿಂದ ಜನ ಬಾಪೂಜಿಯನ್ನು ಭೇಟಿಯಾಗಲು ಬರುತ್ತಿದ್ದರು. ಆದ್ದರಿಂದ ಈ ಹಳ್ಳಿ ಸ್ಟೇಷನ್‌ಗೆ ಹತ್ತಿರವಿರುವುದು ಅಗತ್ಯವಾಗಿತ್ತು. ಅಂಚೆ–ತಾರಿನ ವ್ಯವಸ್ಥೆ ಸಿಗುವಂತಾಗಲು ಇದು ಕೂಡ ಆವಶ್ಯಕವಾಗಿತ್ತು. ಉದಾರಿ ಜಮನಾಲಾಲಜೀಯ ಜಮೀನುದಾರಿಕೆಯಲ್ಲಿ ವರ್ಧಾದಿಂದ ಐದು ಮೈಲು ದೂರ ಸೇಗಾಂವ್ ಎಂಬ ಚಿಕ್ಕ ಹಳ್ಳಿ ಇತ್ತು.

ಅದನ್ನೇ ಮೀರಾ ಬಹನ್ ಸ್ಥಿರವಾದ ವಾಸಸ್ಥಾನಕ್ಕಾಗಿ ಆರಿಸಿಕೊಂಡಳು. ಸೇಗಾಂವ್ ಸೊಳ್ಳೆ, ಚೇಳು, ಹಾವುಗಳಿಂದ ತುಂಬಿದ್ದ ಬರಡು ಹಳ್ಳಿಯಾಗಿತ್ತು. ಅಲ್ಲಿಗೆ ಹೋಗಲು ರಸ್ತೆ ಕೂಡ ಇರಲಿಲ್ಲ. ಕೊಚ್ಚೆ–ಉಸುಕಿನಿಂದ ತುಂಬಿದ್ದ ಹಳ್ಳಿಯಲ್ಲಿ ಬಾಪೂಜಿ, ಅಜ್ಜಿ ಮತ್ತು ಮೀರಾಬಹನ್ ಒಂದು ಗುಡಿಸಲು ಕಟ್ಟಿಕೊಂಡು ವಾಸಿಸಲಾರಂಭಿಸಿದರು. ಇವತ್ತಿಗೆ ೬೦–೬೫ ವರ್ಷ ಹಿಂದೆ ಯಾವ ಸ್ಥಿತಿ ಇದ್ದಿರಬಹುದೆಂದು ನಾವು ಯೋಚಿಸಿನೋಡಬಹುದು. ಪ್ರತಿದಿವಸದ ಅಂಚೆ ತೆಗೆದುಕೊಂಡು ಮಹಾದೇವ ಕಾಕಾ ಮಗನವಾಡಿಯಿಂದ ಸೇಗಾಂವ್‌ಗೆ ನಡೆದುಕೊಂಡು ಹೋಗುತ್ತಿದ್ದರು ಮತ್ತು ಸಂಜೆ ಪುನಃ ವರ್ಧಾಗೆ ಹಿಂದಿರುಗುತ್ತಿದ್ದರು. ವರ್ಧಾದ ಮರುಭೂಮಿಯಂತಹ ಬಿಸಿಲಲ್ಲಿ ಬರಿಯ ತಲೆಯಲ್ಲಿ, ಕಾಲ್ನಡಿಗೆಯಲ್ಲಿ ಹೋಗುವಾಗ ಮಹಾದೇವ ಕಾಕಾನ ಆರೋಗ್ಯ ಒಳಗಿಂದೊಳಗೆ ಕೆಟ್ಟಿತು. ಹೀಗೆ ನಡೆದು–ನಡೆದು ಒಂದು ದಿನ ಮಹಾದೇವ ಕಾಕಾ ಜ್ಞಾನ ತಪ್ಪಿದರು. ಆದರೂ ಆ ನಿಷ್ಠಾವಂತ ಗಾಂಧೀ ಭಕ್ತ ನಿಯಮಿತವಾಗಿ ಸೇಗಾಂವ್‌ಗೆ ಹೋಗುತ್ತಲೇ ಇದ್ದರು. ಜ್ಞಾನ ತಪ್ಪಿದಾಗಿನಿಂದ ತಲೆಯ ಮೇಲೆ ಒದ್ದೆ ಟವಲ್ ಹಾಕಿಕೊಳ್ಳುತ್ತಿದ್ದರು. ವರ್ಧಾದ ಬಿಸಿಲಿನಲ್ಲಿ ಅದು ಕೂಡ ಐದು ನಿಮಿಷಗಳಲ್ಲೇ ಒಣಗಿ ಹೋಗುತ್ತಿತ್ತು. ಆ ಕಾಲದಲ್ಲಿ ಕಪ್ಪು ಕನ್ನಡಕ ವಾಡಿಕೆಯಲ್ಲಿರಲಿಲ್ಲ. ನನ್ನ ಮೃದುವಾದ ಕಾಲುಗಳಲ್ಲಿ ನಾನು ಕೂಡ ಒಂದು ಸಾರಿ ಮಹಾದೇವ ಕಾಕಾನ ಜೊತೆ ಸೇವಾಗ್ರಾಮಕ್ಕೆ ಹೋಗಿದ್ದೆ. ನನಗೆ ಆಯಾಸವಾದಾಗ ಕಾಕಾ ನನ್ನನ್ನು ಭುಜದ ಮೇಲೆ ಕುಳ್ಳಿರಿಸಿಕೊಂಡು ನಡೆಯುತ್ತಿದ್ದರು. ಅವರಿಗೆ ನಾನು ಮತ್ತೊಂದು ವಿಪತ್ತೇ ಆಗಿದ್ದೆನಾದರೂ ಮಹಾದೇವ ಕಾಕಾನ ಹಾಗೆ ಪ್ರೀತಿ ತೋರಿಸವುದಕ್ಕೆ ಬೇರೆ ಯಾರಿಗೂ ಸಾಧ್ಯವಿರಲಿಲ್ಲ.

ನಂತರದಲ್ಲಿ ಒಂದಾದ ಮೇಲೆ ಒಂದರಂತೆ ಆ ಗುಡಿಸಲ ಜೊತೆಗೆ ಬೇರೆ ಗುಡಿಸಲುಗಳು ಬಂದವು. ಕೈಯಿಂದಲೇ ಎಲ್ಲಾ ಕೆಲಸಗಳನ್ನೂ ಮಾಡಬೇಕೆಂದು ನಿಶ್ಚಯಿಸಲಾಗಿತ್ತು. ಆಯಾ ಸ್ಥಳದಲ್ಲಿ ಸಿಗುವ ಪದಾರ್ಥಗಳಿಂದಲೇ ಮನೆಕಟ್ಟಬೇಕೆಂಬ ಹಠ, ಹೊರಗಣ ಸಹಾಯವನ್ನು ತೆಗೆದುಕೊಳ್ಳಬಾರದಿತ್ತು. ಸೇಗಾಂವ್ ಕೆಲಸಕ್ಕೆ ಬಾರದ ಜಾಗ; ಹತ್ತಿರದಲ್ಲಿ ಸಾಕಷ್ಟು ಬಂಬು ಕೂಡ ಸಿಗುತ್ತಿರಲಿಲ್ಲ. ಮಣ್ಣು, ಬರೀ

ಮರಳು ಮರಳು. ಅದರಲ್ಲಿ ಗೋಡೆ ನಿಲ್ಲುತ್ತಿರಲಿಲ್ಲ. ಮಾಡಕ್ಕೆ ಹೆಂಚು ಮಾಡಕ್ಕಾಗುತ್ತಿರಲಿಲ್ಲ. ನಿಜವಾಗಿಯೂ ತೀರ ದರಿದ್ರದ ಹಳ್ಳಿಯನ್ನು ಆರಿಸಿಕೊಂಡು ಬಾಪೂಜಿ ಅಲ್ಲಿ ಇರಬೇಕೆಂದು ಹೋಗಿದ್ದರು. ಹೇಗೋ ಅಂತೂ ಅಕ್ಕ–ಪಕ್ಕದ ಹಳ್ಳಿಗಳಿಂದ ಬಂಬು–ಬಿದಿರು ತೆಗೆದುಕೊಂಡರು. ಒಬ್ಬ ಕುಂಬಾರನ ಹತ್ತಿರ ನಯವಾದ ಮಣ್ಣು ಇತ್ತು. ಅದನ್ನು ಕೊಂಡುಕೊಂಡು ಇವತ್ತಿನ ಆದಿ ನಿವಾಸ (ಮೊದಲ ಮನೆ) ಆಯಿತು. ನಂತರದಲ್ಲಿ ಬಾಪೂಜಿಯ ಗುಡಿಸಲು ಸಿದ್ಧವಾಯಿತು. ಅಜ್ಜಿಗೋಸ್ಕರ ಬೇರೊಂದು ಗುಡಿಸಲನ್ನು ಕಟ್ಟಿದರು. ಆ ಗುಡಿಸಲಲ್ಲಿ ನನ್ನ ತಮ್ಮ ಕಾನ್ಹಾ ಎಷ್ಟೋ ವರ್ಷಗಳವರೆವಿಗೂ ಇದ್ದ. ನಾನು–ಉಷಾ ಇಬ್ಬರೂ ಆಗಾಗ್ಗೆ ಒಂದು–ಎರಡು ತಿಂಗಳವರೆಗೆ ಅಜ್ಜಿ ಜೊತೆ ಇರುತ್ತಿದ್ದೆವು. ಸ್ಥಾಯಿಯಾಗಿ ಇರಲಿಲ್ಲ. ಸಮಯ ಕಳೆದಂತೆ ಆಶ್ರಮವಾಸಿಗಳ ಸಂಖ್ಯೆ ಹೆಚ್ಚಾಯಿತು. ಉಸುಕನ್ನು ಒಣಗಿಸಿ, ಹೊಲ ಮಾಡಲು ತಕ್ಕಂತಹ ಭೂಮಿ ಸಿದ್ಧವಾಯಿತು. ಐದು ಮೈಲುಗಳ ರಸ್ತೆ ನಿರ್ಮಿತವಾಯಿತು. ಗಿಡ–ಮರಗಳನ್ನು ಹಾಕಿದರು. ಸ್ವಲ್ಪ ಹಸಿರು ನೆಲೆಗೊಂಡಿತು. ನಮ್ಮಜ್ಜಿ ತುಳಸಿಗಿಡ ಹಾಕಿದರು. ತನ್ನ ಗುಡಿಸಲ ಹಿಂದೆ ದೇಶಿ ಗುಲಾಬಿ ಗಿಡ ಹಾಕಿದರು. ಕೆಲವು ರಜನೀಗಂಧಾ ಮತ್ತು ಸೇವಂತಿಗೆ (ಗುಲ್‌ದಾವಲಿ) ಗಿಡಗಳನ್ನು ಹಾಕಿದರು. ಧೂಳಿನಿಂದ ಕೂಡಿದ್ದ ಅ ಹಳ್ಳಿಯ ರೂಪ ಸುಂದರವಾಗಿ ಬದಲಾಯಿತು. ಅದು ಸುಂದರವಾಗಿ ಕಾಣತೊಡಗಿತು. ನಾವು ಮಕ್ಕಳಿಗೆ ಅಜ್ಜ–ಅಜ್ಜಿಯ ಆಕರ್ಷಕ ಸ್ಥಾನವಾಯಿತು. ದೇಶದ ಜನಗಳಿಗೆ ಸೇವಾಗ್ರಾಮ ಯಾತ್ರಾಸ್ಥಳವಾಯಿತು. ಪ್ರಪಂಚದ ನಕ್ಷೆಯಲ್ಲಿ ಸೇಗಾವ್ ಅಂಕಿತಗೊಂಡಿತು. ಆದರೆ ಈ ಸೇಗಾಂವ್ ಹೆಸರಿನಿಂದ ಬಹಳ ತೊಂದರೆಯಾಯಿತು. ಬೊಂಬಾಯಿ ಕಲ್ಕತ್ತಾ ಮೇಲ್ ಮಾರ್ಗದಲ್ಲಿ ಅಂಕೋಲಾ ನಗರದ ಬಳಿ ಇನ್ನೊಂದು ಸೇಗಾಂವ್ ಇತ್ತು. ಆದರೆ ಅದು ದೊಡ್ಡ ಸೇಗಾಂವ್ ಆಗಿತ್ತು. ಅಲ್ಲಿ ಮೇಲ್‌ಗಾಡಿ ನಿಲ್ಲುತ್ತಿತ್ತು. ಅದರಿಂದ ಎಷ್ಟೋ ಸಾರಿ ಬಾಪೂಜಿಯ ಅಂಚೆ–ತಾರು ದೇಶ–ವಿದೇಶಗಳ ಅತಿಥಿಗಳ ರೈಲು ಗಾಡಿಯಲ್ಲಿ ಆ ಹಳ್ಳಿಯಲ್ಲಿ ಇಳಿದುಬಿಡುತ್ತಿದ್ದರು. ಕಷ್ಟ ಆಗುತ್ತಿತ್ತು. ಅದರಿಂದ ಬಾಪೂಜಿ ಈ ಕಲಾಹೀನವಾದ ಸೇಗಾಂವ್‌ನ ಹೆಸರನ್ನು ಸೇವಾಗ್ರಾಮ ಅಂತ ಇಟ್ಟರು. ಆರಂಭದ ವರ್ಷಗಳಲ್ಲಿ ಹಾವು, ಚೇಳಿನ ತೊಂದರೆ ಯಾವಾಗಲೂ ಇರುತ್ತಿತ್ತು. ನಮ್ಮ ವರಾಂಡ ಅಂಗಳದಲ್ಲಿ ಹಾವು ಬರದೆ ಇದ್ದ ದಿನ ಇರುತ್ತಿರಲಿಲ್ಲ. ಚೇಳಿನ ಗುಂಪೇ ನಡೆಯುತ್ತಿತ್ತು. ಆ ದಿನಗಳಲ್ಲಿ ನಾನು ಕಾನ್ಹಾ ಇಬ್ಬರೂ ಬಾಪೂಜಿ ಹತ್ತಿರ ಇದ್ದೆವು. ರಾತ್ರಿ ಅಜ್ಜಿ ಮತ್ತು ಬಾಪೂಜಿ ಇಬ್ಬರ ಹಾಸಿಗೆಗಳ ನಡುವೆ ನಮ್ಮಿಬ್ಬರ ಹಾಸಿಗೆ ಹಾಸುತ್ತಿದ್ದರು. ಹಾಸಿಗೆ ಅಂದರೆ ಒಂದು ತೆಳ್ಳನೆ ಹಳೆ ಬಟ್ಟೆ, ಅದರ ಮೇಲೆ ಖಾದಿಯ ಬಿಳಿ ದುಪ್ಪಟಿ, ದಿಂಬು, ಕಂಬಳಿ (ಆವಶ್ಯಕತೆ ಇದ್ದಾಗ ಮಾತ್ರ). ಆಗ ಹಾವು ಚೇಳಿನ ಭಯ ನನ್ನೊಳಗೆ ಸೇರಿಕೊಂಡಿದ್ದು ಇವತ್ತು ಐವತ್ತು ವರ್ಷಗಳಾದ ಮೇಲೂ ನನ್ನ ಮನಸ್ಸಿನಿಂದ ಆ ಭಯ ದೂರವಾಗೇ ಇಲ್ಲ. ಆ ತರಹೆಯ ಕಡು

ಕಷ್ಟದಿಂದ ಕೂಡಿದ ಜಾಗದಲ್ಲಿ ನಮ್ಮ ದೇಶದ ಆ ಕಾಲದ ಮಂತ್ರಿಗಳು ಬಾಪೂಜಿಯನ್ನು ಭೇಟಿಯಾಗಲು ಬರುತ್ತಿದ್ದರು. ಆ ಒಣ ಹಳ್ಳಿಯನ್ನು ಬಾಪೂಜಿ ಹಸುರಿನಿಂದ ತುಂಬಿದ ಹೂದೋಟವನ್ನಾಗಿ ಮಾರ್ಪಡಿಸಿದ್ದರು.

ಸೇವಾಗ್ರಾಮದಲ್ಲಿ ಎಷ್ಟೋ ಜನ ಆಶ್ರಮವಾಸಿಗಳಿದ್ದರು. ಅವರೆಲ್ಲರೂ ನಮಗೆ ಆತ್ಮೀಯರಾಗಿದ್ದರು. ಅದರಿಂದ ನಾವು ಮಕ್ಕಳಿಗೆ ನಮ್ಮವರು ಹೆರವರು ಅನ್ನುವ ಜ್ಞಾನ ಇರಲೇ ಇಲ್ಲ. ನಮ್ಮ ಲೆಕ್ಕದಲ್ಲಿ ಕೊನೆಯ ಪಕ್ಷ ೪೦–೫೦ ಜನ ಚಿಕ್ಕಪ್ಪ–ದೊಡ್ಡಪ್ಪಗಳಿದ್ದರು. ಅತ್ತೆಯರಂತೂ ಬೇಕಾದಷ್ಟು ಜನ ಇದ್ದರು. ಅಣ್ಣ–ಅಕ್ಕಂದಿರದಂತೂ ದೊಡ್ಡ ಪ್ಲೆಟೂನ ಇತ್ತು. ಈ ಎಲ್ಲಾ ಅಕ್ಕ–ಅಣ್ಣಂದಿರು ಬಾಪೂಜಿಯ 'ಅಹಿಂಸಾ ಪರಮೋಧರ್ಮಃ'ನ ಮರೆತು ಬಹಳ ಸುಖವಾಗಿ ಸ್ವತಂತ್ರವಾಗಿ ನನಗೆ ಹೊಡೆದು–ಬಡಿದು ಮಾಡುತ್ತಿದ್ದರು. ಬೈಯುವುದು, ದಂಡಿಸುವುದನ್ನು ಬಿಡುತ್ತಿರಲಿಲ್ಲ. ನಾನು ಚಿಕ್ಕವಳಾಗಿದ್ದೆ, ಏನೂ ತಿಳಿಯುತ್ತಿರಲಿಲ್ಲ. ಬಹುಶಃ ಸುಂದರವಾಗಿ ಕೂಡ ಇರಲಿಲ್ಲ. ಅದರಿಂದಾಗಿ ಬೇಕಾದಷ್ಟು ತಪ್ಪುಗಳನ್ನು ಮಾಡುತ್ತಿದ್ದೆ. ಈ ಎಲ್ಲಾ ಅಕ್ಕ–ಅಣ್ಣಂದಿರು ನನ್ನನ್ನು ರಿಪೇರಿ ಮಾಡುವುದರಲ್ಲಿ ಏನೂ ಕೊರತೆ ಮಾಡುತ್ತಿರಲಿಲ್ಲ. ಈಗ ಅವರೆಲ್ಲಾ ಮುದುಕರಾಗಿದ್ದಾರೆ, ನಾನು ಕೂಡ ಮೂರು ಜನ ಯುವಕ ಮಕ್ಕಳ ತಾಯಿ ಆಗಿದ್ದೀನಿ. ಒಮ್ಮೊಮ್ಮೆ ನಾವು ಹಳೆಯ ಆಶ್ರಮವಾಸಿಗಳು ಎಲ್ಲಾದರೂ ಸಿಕ್ಕಾಗ ಆ ದಿನಗಳನ್ನು ನೆನಪು ಮಾಡಿಕೊಳ್ಳುತ್ತೇವೆ. ಆ ಅಕ್ಕ–ಅಣ್ಣಂದಿರಲ್ಲಿ ಎಷ್ಟರ ಮಟ್ಟಿಗೆ ನೈತಿಕವಾದ ಧೈರ್ಯ ಚಾರಿತ್ರ್ಯ ಇದೆ ಅಂದರೆ ಅವರು ನನ್ನನ್ನು ಬೈದು ಹೊಡೆದು ಮಾಡುತ್ತಿದ್ದೆವು ಅಂತ ಎಲ್ಲರ ಎದುರಿಗೆ ಒಪ್ಪಿಕೊಳ್ಳುತ್ತಾರೆ. ಆಗ ನಾವು ಹಳೆಯ ಮಾತುಗಳನ್ನೆಲ್ಲಾ ನೆನಪು ಮಾಡಿಕೊಂಡು ಮುಕ್ತವಾಗಿ ನಗುತ್ತೇವೆ. ನಾನು ಆ ಕಾಲದಲ್ಲಿ ಆ ದಂಡನೆಯನ್ನೆಲ್ಲಾ ಮರೆತು ನಗತೊಡಗುತ್ತಿದ್ದೆ. ಆದ್ದರಿಂದಲೇ ನನ್ನಜ್ಜ ನನ್ನನ್ನು 'ನನ್ನ ನಗುವ ಪಕ್ಷಿ' ಅಂತ ಅನ್ನುತ್ತಿದ್ದರು.

ಸೇವಾಗ್ರಾಮದಲ್ಲಿ ನಮ್ಮ ಮನೆಯಲ್ಲಿ ಅತಿಥಿಗಳು ನೆರೆದಿರುತ್ತಿದ್ದರು. ಅವರಲ್ಲಿ ನನಗೆ ಜವಾಹರಲಾಲಜೀ ಮತ್ತವರ ಅತಿ ಸುಂದರಳಾದ ಸೋದರಿ ವಿಜಯಲಕ್ಷ್ಮಿ ಪಂಡಿತ್, ಗಡಿನಾಡು ಬಾದಷಹ ಖಾನ್, ಅವರ ಮಗ ವಲೀಖಾನ್ ಸರದಾರ್ ದಾದಾ, ರಾಜಾಜಿ, ರಾಜೇಂದ್ರಬಾಬು, ಕೃಪಲಾನೀಜೀ, ಆಚಾರ್ಯ, ನರೇಂದ್ರ ದೇವ, ಖರೇ ಸಾಹಬ್ ಮತ್ತು ಡಾ॥ ವಿಧಾನಚಂದ್ರ ರಾಯ್, ಹರೇಕೃಷ್ಣ ಮೆಹತಾಬ್, ದಾದಾಭಾಯಿ ನವರೋಜಿಯ ಮಗಳು ಖುರ್ಷಿದ್ ಬಹನ್ ವಿಶೇಷವಾಗಿ ನೆನಪಿಗೆ ಬರುತ್ತಾರೆ. ಇನ್ನೂ ಅನೇಕ ಅತಿಥಿಗಳ ನೆನಪೂ ಇದೆ. ಆದರೆ ಹೆಸರಿನ ಪಟ್ಟಿ ತುಂಬ ಉದ್ದವಾಗುತ್ತದೆ ಅನ್ನುವ ಭಯ. ಅದರಿಂದ ಮಿಕ್ಕವರ ಹೆಸರುಗಳನ್ನು ಹೇಳುತ್ತಿಲ್ಲ. ಕಿಶೋರಿಲಾಲ ಕಾಕಾ, ಮಹಾದೇವ ಪ್ಯಾರೇಲಾಲಜೀ, ರಾಜಕುಮಾರಿ ಅಮೃತ ಕೌರ್ ಇವರೆಲ್ಲಾ ಯಾವಾಗಲೂ ಜೊತೆಯಲ್ಲಿರುತ್ತಿದ್ದದರಿಂದ ಅವರನ್ನು ಅತಿಥಿಗಳ ನಡುವೆ ಎಣಿಸುತ್ತಿರಲಿಲ್ಲ.

ಆ ದಿನಗಳಲ್ಲಿ ಜಪಾನಿ ಸಾಧು ಪೂಜ್ಯ ಗುರೂಜಿ ಮತ್ತವರ ಜೊತೆಗಾರ ಆನಂದಭಾಯಿ ನಮ್ಮ ಆಶ್ರಮದಲ್ಲಿರಲು ಬಂದಿದ್ದರು. ಇಬ್ಬರೂ 'ನರ್ಮ್ಯೋ ಹೆ ರೇಂಗೆ ಕ್ಯೋಂ'ನ ಬೌದ್ಧ ಮಂತ್ರವನ್ನು ಆಶ್ರಮಕ್ಕೆ ಕಲಿಸಿದರು. ಅಂದಿನಿಂದ ಆಶ್ರಮದ ಪ್ರತಿದಿನದ ಪ್ರಾರ್ಥನೆಯಲ್ಲಿ ಈ ಶ್ಲೋಕ ಕೂಡಿಕೊಂಡಿತು. ೧೦೧ ವರ್ಷ ವಯಸ್ಸಿನಲ್ಲಿ ೯ ಜನವರಿ ೧೯೮೫ರಂದು ಪೂಜ್ಯ ಗುರೂಜಿ ತೀರಿಕೊಂಡರು. ಸಾಯುವವರೆಗೂ ಈ ವಯಸ್ಸಾದ ಬೌದ್ಧ ಸಾಧು ಪ್ರಪಂಚದಲ್ಲಿ ಶಾಂತಿ ಪ್ರಚಾರದ ಕೆಲಸ ಮಾಡುತ್ತಿದ್ದರು ಮತ್ತು ತಮ್ಮ ಮಿತ್ರ ಮಹಾತ್ಮಾ ಗಾಂಧಿಯ ಪುಣ್ಯ ಸ್ಮರಣೆ ಮಾಡುತ್ತಿದ್ದರು. ಈ ಸಂಬಂಧದಿಂದಾಗಿ ಅವರು ನನ್ನ ಕುಟುಂಬಕ್ಕೆ ಪಿತಾಮಹರಾದರು. ದೆಹಲಿ ಮತ್ತು ಅಹಮದಾಬಾದಿನ ಮನೆಯಲ್ಲಿ ಅವರು ತಮ್ಮ ಶಿಷ್ಯ ಮಂಡಳಿಯೊಂದಿಗೆ ನಮ್ಮ ಮನೆಯಲ್ಲಿ ಇರಲು ಬರುತ್ತಿದ್ದರು.

ಸೇವಾಗ್ರಾಮದಲ್ಲಿ ಬಾಪೂಜಿ ಮೂಲಶಿಕ್ಷಣಕ್ಕಾಗಿ ನಯೀ ತಾಲೀಂನ ಒಂದು ಪದ್ಧತಿಯನ್ನು ರಚಿಸಿದರು. ಅದರ ಆರಂಭ ಟಾಲ್‌ಸ್ಟಾಯ್ ಫಾರಂ, ಫಿನಿಕ್ಸ್ ಆಶ್ರಮ, ಆಫ್ರಿಕಾದಲ್ಲೇ ಆಗಿತ್ತು. ಆದರೆ ಈ ಶಿಕ್ಷಣ ಪದ್ಧತಿಯ ಸೈದ್ಧಾಂತಿಕ ನಾಮಕರಣ ಸೇವಾಗ್ರಾಮದಲ್ಲಾಯಿತು. ಈ ಶಿಕ್ಷಣ ವ್ಯವಸ್ಥೆಯಲ್ಲಿ ಕರಕುಶಲ ಉದ್ಯೋಗ, ಮತ್ತು ಕೃಷಿ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತದೆ. ಇದರಲ್ಲಿ ಅತಿ ಕಡಿಮೆ ಖರ್ಚಾಗುತ್ತದೆ, ಕಡಿಮೆ ಸಾಧನಗಳು ಬೇಕಾಗುತ್ತವೆ. ಹಳ್ಳಿಯ ರೈತನ ಮನೆಯಲ್ಲೇ ಈ ಎಲ್ಲಾ ಸಾಧನಗಳೂ ಇರುತ್ತವೆ. ಮಗು ಹೊಲದಲ್ಲಿ, ಮನೆಯಲ್ಲಿ, ಹಳ್ಳಿಯಲ್ಲಿ ಕೆಲಸಕೂಡ ಮಾಡುತ್ತಾನೆ. ತನ್ನ ಯೋಗ್ಯತೆಗೆ ತಕ್ಕಷ್ಟು ಸಂಪಾದಿಸುತ್ತಾನೆ. ಜೊತೆಗೆ ಶಿಕ್ಷಣ ಕೂಡ ಪಡೆಯುತ್ತಾನೆ. ಶ್ರೀಲಂಕಾದ ಆರ್ಯನಾಯಕಮ್ ಮತ್ತವರ ವಿದುಷಿ ಬಂಗಾಳಿ ಪತ್ನಿ ಆಶಾದೇವಿ ಮತ್ತು ಡಾ॥ ಜ಼ಾಕಿರ್ ಹುಸೇನ್ ಈ ವಿಕಾಸ ಕಾರ್ಯದಲ್ಲಿ ಬಾಪೂಜಿಗೆ ಸಹಕಾರ ನೀಡಿದರು. ಮೂಲ ಶಿಕ್ಷಣದ ಸಫಲ ಪ್ರಯೋಗದ ಶ್ರೇಯಸ್ಸು ಈ ಮೂರು ಜನರದ್ದು. ಸ್ವಲ್ಪ ಕಾಲ ಬಾಪೂಜಿ ನನ್ನನ್ನು ನನ್ನ ಚಿಕ್ಕಪ್ಪನ ಮಗಳು ಸೀತಾಳನ್ನು ಈ ಶಿಕ್ಷಣ ಸಂಘದಲ್ಲಿ ಅಧ್ಯಯನಕ್ಕಾಗಿ ಇಟ್ಟಿದ್ದರು. ಆಗ ನೂಲುವುದು, ನೇಯ್ಗೆ ಮತ್ತು ಹೊಲದಲ್ಲಿ ಕೆಲಸ ಮಾಡುವುದು, ಮನೆಯ ಅಡುಗೆ ಕೆಲಸ, ಹಿಟ್ಟು ಬೀಸುವುದು, ಬಾವಿಯಿಂದ ನೀರು ಸೇದುವುದು, ಬಟ್ಟೆ ಒಗೆಯುವುದು ನಮ್ಮ ಕೆಲಸ ಆಗಿರುತ್ತಿತ್ತು. ನೂಲುವುದು ನೇಯುವುದರ ಮುಖಾಂತರ ನಮಗೆ ಗಣಿತ ಕಲಿಸುತ್ತಿದ್ದರು. ಹತ್ತಿಯನ್ನು ಬೆಳೆಯುವುದರ ಮುಖಾಂತರ ನಮಗೆ ಭೂಗರ್ಭಶಾಸ್ತ್ರ ಮತ್ತು ಭೂಗೋಳ ಕಲಿಸುತ್ತಿದ್ದರು. ನಾಯಕಮ್ ಹತ್ತಿಯ ಕತೆ, ಮತ್ತೆ ಆ ಸಂದರ್ಭದಲ್ಲಿ ಈಜಿಪ್ಟ್‌ನ್ನು ಹತ್ತಿ ಮತ್ತು ಅಲ್ಲಿಯ ಸಂಸ್ಕೃತಿ ವಿಕಾಸವಾದುದರ ಕತೆ, ಮಹಾರಾಣಿ ಕ್ಲಿಯೋಪಾತ್ರಾಳ ಕತೆ ಹೇಳಿದ್ದರು. ಇವತ್ತೂ ನನಗೆ ಆ ಇತಿಹಾಸದ ನೆನಪಿದೆ. ಉಪನಿಷತ್ತು, ಮತ್ತು ವೈದಿಕ ಕಾಲದ ಇತಿಹಾಸ ಮತ್ತು ನಮ್ಮ ದೇಶದ ಗೌರವದ

ಚರಿತ್ರೆಯನ್ನು ನಮಗೆ ಪ್ರಾರ್ಥನೆಯ ಶ್ಲೋಕ ಮತ್ತು ಕತೆಯ ಜೊತೆ ಜೊತೆಯಲ್ಲೆ ಕಲಿಸುತ್ತಿದ್ದರು. 'ನಮ್ಯೋ ಹೋ ರೇಂಗೆ ಕ್ಯೋಂ' ನ ಮಂತ್ರ ಮೀಮಾಂಸೆಯೊಂದಿಗೆ ಭಗವಾನ್ ಬುದ್ಧನ ಇತಿಹಾಸ ಮತ್ತು ದರ್ಶನವನ್ನು ತಿಳಿಸಿಕೊಟ್ಟಿದ್ದರು. ಈ ಎಲ್ಲಾ ವಿಷಯಗಳ ಜೊತೆಗೆ ಸಾಹಿತ್ಯ, ಕಾವ್ಯ, ದರ್ಶನ, ಮುಂತಾದ್ದರ ಚರ್ಚೆ ಸಹಜವಾಗಿ ನಡೆಯುತ್ತಿತ್ತು. ಆಗಂತೂ ಇಂತಹ ಶಿಕ್ಷಣ ಪದ್ಧತಿ ಅರ್ಥವಾಗಿರಲಿಲ್ಲ. ಕತೆಗಳ ಆನಂದದ ಪರಿಚಯವಾಗಿತ್ತು. ಆದರೆ ೧೪ ವರ್ಷ ವಯಸ್ಸಿನ ಆ ಸಂಸ್ಕಾರಗಳು ಹೃದ್ಗತವಾದಾಗ ಜೀವನದರ್ಶನ ಮತ್ತು ಮೌಲ್ಯಗಳ ಸಂಸ್ಕಾರ ಸಹಜವಾಗಿ ತೆರೆದುಕೊಂಡವು ಮತ್ತು ಆಧುನಿಕ ಸಂಘರ್ಷದಿಂದ ಕೂಡಿದ ಪ್ರಪಂಚದಲ್ಲಿ ಈ ನೆನಪೊಂದೇ ಸದಾಕಾಲಕ್ಕೆ ಒಂದು ಆಧಾರವಾಗಿದೆ.

* * * *

# ೨೨. ಎರಡನೆ ವಿಶ್ವಯುದ್ಧ

೩ ಸೆಪ್ಟೆಂಬರ್ ೧೯೩೯ ರಂದು ದ್ವಿತೀಯ ವಿಶ್ವಯುದ್ಧ ಆರಂಭವಾಯಿತು. ಬ್ರಿಟಿಷ್ ರಾಜ್ಯ ಜರ್ಮನಿಯ ನಾಝಿ ಸರಕಾರದೊಂದಿಗೆ ಹೋರಾಟ ನಡೆಸಿತು. ಎರಡು ದಿನಗಳಲ್ಲಿ ನೆವಿಲ್ ಚೇಂಬರ್‌ಲೇನ್‌ನ ನಾಯಕತ್ವದ ಲಿಬರಲ್ ಸರಕಾರಕ್ಕೆ ಬ್ರಿಟಿಷ್ ಸಂಸತ್ತಿನಲ್ಲಿ ಪರಾಜಯವಾಯಿತು. ಕನ್ಸರ್‌ವೇಟಿವ್ ದಳದ ವಿನಸ್ಟನ್ ಚರ್ಚಿಲ್ ಯುದ್ಧಕಾಲದ ಬ್ರಿಟಿಷ್ ಸರಕಾರದ ಪ್ರಧಾನ ಮಂತ್ರಿಗಳಾದರು. ಪ್ರಧಾನ ಮಂತ್ರಿ ಚರ್ಚಿಲ್ ಮೊಟ್ಟ ಮೊದಲು ಭಾರತವನ್ನು ಬ್ರಿಟನ್ನಿನೊಂದಿಗೆ ಯುದ್ಧಕ್ಕೆ ಸೇರಿಸಿಕೊಳ್ಳುವ ಘೋಷಣೆ ಮಾಡಿದ. ಈಗ ಭಾರತ ಕೂಡ ಅಲೈಡ್ ದೇಶಗಳ (ಸಂಯುಕ್ತ ರಾಷ್ಟ್ರಗಳ) ಜೊತೆ ಜರ್ಮನ್, ಇಟಲಿ ಮತ್ತು ಜಪಾನ್ ಎದುರು ಯುದ್ಧ ಕ್ಷೇತ್ರದಲ್ಲಿ ನಿಂತಿತ್ತು.

೧೯೩೫ರಲ್ಲಿ ಸಂವಿಧಾನದಡಿಯಲ್ಲಿ ಕಾಂಗ್ರೆಸ್ ಸರಕಾರ ಪ್ರಾಂತ್ಯಗಳಲ್ಲಿ ಕೆಲಸ ಮಾಡುತ್ತಿತ್ತು. ದೇಶದ ರಾಜಕೀಯ ಕ್ಷೇತ್ರದಲ್ಲಿ ಕಾಂಗ್ರೆಸ್ಸೇ ಪ್ರಚಂಡ ಬಹುಮತ ಗಳಿಸಿದ ಪ್ರಮುಖ ಸಂಸ್ಥೆಯಾಗಿತ್ತು. ಆದರೆ ಬ್ರಿಟಿಷ್ ಸರಕಾರ ಈ ಕುರಿತು ಕಾಂಗ್ರೆಸ್‌ನ ಅಭಿಪ್ರಾಯ ಕೇಳಲೇ ಇಲ್ಲ. ಚರ್ಚೆ ಮಾಡದೇ ಭಾರತ ಸರಕಾರ ಈ ಬಡ ದೇಶದ ಹಣ-ಸಂಪತ್ತು ಮತ್ತು ಉತ್ಪಾದನೆಯನ್ನು ಯುದ್ಧಕ್ಕಾಗಿ ವಿನಿಯೋಗಿಸಿತು. ಸಾವಿರಾರು ಸಂಖ್ಯೆಯಲ್ಲಿ ದೇಶದ ಯುವಕರನ್ನು ಸೈನ್ಯಕ್ಕೆ ಭರ್ತಿ ಮಾಡಿ ಸಮುದ್ರದಾಚೆ ಯೂರೋಪಿನ ಭೂಮಿಯ ಮೇಲೆ ಜರ್ಮನ್ ತೋಪುಗಳ ಎದುರು ನಿಲ್ಲಿಸಿದರು. ಗುಲಾಮ ದೇಶದ ಯುವಕ ತಮ್ಮ ತಂದೆ-ತಾಯಿಯರ ನಕ್ಷತ್ರಗಳಂತಿದ್ದ ಒಬ್ಬೊಬ್ಬರೇ ಆಗಿದ್ದ ಮಕ್ಕಳನ್ನು, ಬ್ರಿಟಿಷ್ ರಾಜ್ಯವನ್ನು ರಕ್ಷಿಸುವುದಕ್ಕಾಗಿ ಬಲಿ ಒಡ್ಡತೊಡಗಿದರು. ದೇಶದ ಕಚ್ಚಾ ಪಕ್ಕಾ ಮಾಲಿನ ಉತ್ಪಾದನೆ ಮಣ್ಣಿನ ಬೆಲೆಗೆ ದೇಶದಾಚೆ ರಫ್ತು ಮಾಡತೊಡಗಿದರು. ದೇಶದ ಪ್ರಾತಿನಿಧಿಕ ಸಂಸ್ಥೆಯನ್ನು ವಿಚಾರಿಸದೇ ಈ ರೀತಿ ಯುದ್ಧ ಸಾಮಗ್ರಿ ಮತ್ತು ಸೈನ್ಯವನ್ನು ಸಂಗ್ರಹಿಸುವುದಕ್ಕಾಗಿ ದೇಶದ ಸಂಪತ್ತನ್ನು ಉಪಯೋಗಿಸುವುದು ತಲೆಪ್ರತಿಷ್ಠೆಯ ಕೆಲಸವಾಗಿತ್ತು. ಸಂಪತ್ತನ್ನು, ಅನ್ಯಾಯವಾಗಿತ್ತು. ಸಹಮತ ಪಡೆದುಕೊಳ್ಳುವುದಿರಲಿ ಕೇವಲ ವಿಚಾರಸುವಷ್ಟು ಸೌಜನ್ಯವನ್ನು ಕೂಡ ಚರ್ಚಿಲ್ ತೋರಲಿಲ್ಲ. ಈ ವಿಷಯವಾಗಿ ಒಂಬತ್ತು ಪ್ರಾಂತ್ಯಗಳ ಕಾಂಗ್ರೆಸ್ ಮಂತ್ರಿಮಂಡಲಿಗಳು

ರಾಜೀನಾಮೆಯನ್ನು ಸಲ್ಲಿಸಿದವು. ಇಡೀ ದೇಶ ಮತ್ತೊಮ್ಮೆ ಗವರ್ನರ್‌ನ ಶಾಸನದಡಿ ಬಂತು. ದೇಶದ ಬಡ ಜನರ ಉದ್ಧಾರದ ಹತ್ತಿಪ್ಪತ್ತು ಯೋಜನೆಗಳು ಆರಂಭವಾಗಿದ್ದವು. ರೈತರಿಗೆ ಅಲ್ಪ–ಸ್ವಲ್ಪ ಸಹಾಯ ಸಿಗುತ್ತಿದ್ದುದು ಒಂದೇ ಏಟಿಗೆ ನಿಂತುಹೋಯಿತು. ಸರಕಾರದ ಅಧಿಕಾರಿಗಳು ಇಂತಹ ಅವಕಾಶಕ್ಕಾಗಿಯೇ ಕಾಯುತ್ತಿದ್ದರು. ಪುನಃ ಅಧಿಕಾರವನ್ನು ತಮ್ಮ ಕೈವಶ ಮಾಡಿಕೊಂಡು ಅಡೆ–ತಡೆ ಇಲ್ಲದೆ ಶೋಷಣೆ ಮಾಡಲು ಕಾಯುತ್ತಿದ್ದವರಿಗೆ ಶೋಷಣೆ ಮಾಡಲು ಬಹಳ ಒಳ್ಳೆಯ ಅವಕಾಶ ಸಿಕ್ಕಿತ್ತು.

೧೯೪೦–೪೧ರಲ್ಲಿ ಚೀಣಾದ ರಾಷ್ಟ್ರಪತಿ ಚ್ಯಾಂಗ್ ಕೈ ಶೇಕ್ ಮತ್ತು ಮೇಡಂ ಚುಂಗ್‌ಲಿಂಗ್‌ಶೇಕ್ ಹಿಂದೂಸ್ತಾನದ ಭೇಟಿಗಾಗಿ ಬಂದರು. ಗಾಂಧೀಜಿಯನ್ನವರು ಭೇಟಿಯಾದರು, ಈ ಚೀಣೀ ದಂಪತಿಗಳು ಸಭ್ಯ ಜಗತ್ತಿಗೆ ಸಾಮ್ರಾಜ್ಯ ಒಂದೇ ಆಶಾಕಿರಣ ಅಂತ ಹಿಂದೂಸ್ತಾನಿಗಳಿಗೆ ತಿಳಿಸಬೇಕೆಂದು ಬಂದಿದ್ದರು. ಬ್ರಿಟಿಷ್ ರಾಜ್ಯದ ಈ ಕಷ್ಟದ ದಿನಗಳಲ್ಲಿ ತಮ್ಮ ತನು–ಮನ–ಧನ ನೀಡಿ, ಶಕ್ತಿ ಸಂಪತ್ತನ್ನು ದಾನ ಮಾಡಿ ಹಿಂದೂಸ್ತಾನಿಗಳು ಸಹಕಾರ ನೀಡಬೇಕು. ಬಾದಷಾಹ್ ಸಲಾಮತ್‌ಗೆ ತಮ್ಮ ಹೂವಿನಂತಹ ಮಕ್ಕಳನ್ನು ಆಹುತಿ ನೀಡಿ ಕೃತಕೃತ್ಯರಾಗಿ ಅಂತ ಹೇಳಬಂದಿದ್ದರು. ಈ ರಾಜಕೀಯದ ಜನ ಒಮ್ಮೊಮ್ಮೆ ತಮ್ಮ ಸ್ವಾರ್ಥಕ್ಕಾಗಿ ಬೇರೆಯವರಿಗೆ ಉಪದೇಶ ಮಾಡ ಹೊರಡುತ್ತಾರೆ. ಇದು ಕೂಡ ಅಂತಹುದೇ ಒಂದು ಪರೋಪದೇಶ ಪಾಂಡಿತ್ಯದ ಒಳ್ಳೆ ಮಾದರಿ ಆಗಿತ್ತು. ಬಾಪೂಜಿ ಈ ದಂಪತಿಗಳನ್ನು ಭೇಟಿ ಮಾಡಲು ಕಲ್ಕತ್ತೆಗೆ ಹೋಗಿದ್ದರು. ಆಗ ನಾನು ಬಾಪೂಜಿ ಜೊತೆ ಇರುತ್ತಿದ್ದೆ. ಹಿಂದಿರುಗಿದ ಮೇಲೆ ಚ್ಯಾಂಗ್ ಕೈ ಶೇಕ್ ಅತಿ ಧೂರ್ತ–ಕುಟಿಲ ಅನ್ನಿಸಿತು ಅಂತ ಬಾಪೂಜಿ ಸರದಾರರಿಗೆ ಹೇಳಿದರು. ಚ್ಯಾಂಗ್‌ನ ಪತ್ನಿ ಚತುರಳು, ಸುಂದರಿ ಆಗಿದ್ದಳು. ಅವಳ ಗಂಡನಿಗೆ ಇಂಗ್ಲಿಷ್ ಬರುತ್ತಿರಲಿಲ್ಲ. ಆದರೆ ಮೇಡಂ ಚ್ಯಾಂಗ್ ತನ್ನ ಪತಿಗೆ ದುಭಾಷಿಯೂ ಆಗಿ ಕೆಲಸ ಮಾಡುತ್ತಿದ್ದಳು. ಆಕೆ ಚೀಣಾದ ಧನಿಕ ಸುಂಗ್ ಪರಿವಾರದ ಮಗಳಾಗಿದ್ದಳು. ಆಕೆಯ ಅಕ್ಕ ಚೀಣಾದ ಕಮ್ಯೂನಿಸ್ಟ್ ಮುಖಂಡನಾಗಿದ್ದ ಸನ್ಯಾತ್ ಸೇನ್‌ನ ಹೆಂಡತಿ ಆಗಿದ್ದಳು. ಆಕೆ ಆಗಲೂ ಮಾವೋತ್ಸೆ ತುಂಗ್‌ನ ರಾಜ್ಯದಲ್ಲಿ ಉಪ–ಪ್ರಧಾನಳಾಗಿದ್ದಳು.

ಚ್ಯಾಂಗ್ ಕೈ ಶೇಕ್‌ನ ಮಿಷನ್ ವಿಫಲವಾದಾಗ ಬ್ರಿಟಿಷ್ ಸರಕಾರ ಲೇಬರ್ ಪಾರ್ಟಿಯ ನಿಷ್ಠ ನೇಕಾರ ಸರ್ ಸ್ಟ್ಯಾಫರ್ಡ್ ಕ್ರಿಪ್ಸ್‌ನನ್ನು ಸಂಧಿಗಾಗಿ ಭಾರತಕ್ಕೆ ಕಳುಹಿಸಿತು. ಸ್ಟ್ಯಾಫರ್ಡ್ ಕ್ರಿಪ್ಸ್ ಬಾಪೂಜಿಯನ್ನು ಭೇಟಿ ಮಾಡಿದರು. ಬಾಪೂಜಿಗೆ ಆತ ಒಳ್ಳೆಯ ಮನುಷ್ಯ ಅಂತ ಅನ್ನಿಸಿತು. ಕ್ರಿಪ್ಸ್ ಕಾಂಗ್ರೆಸ್ ಅಧ್ಯಕ್ಷರು ಮತ್ತು ಮುಖಂಡರೊಡನೆ ಮಾತನಾಡುವಾಗ ಯುದ್ಧ ಮುಗಿದ ಮೇಲೆ ಆಡಳಿತ ಮತ್ತು ಸ್ವಾತಂತ್ರ್ಯವನ್ನು ಕುರಿತು ಆಲೋಚನೆ ಮಾಡಲಾಗುವುದೆಂದು ತಿಳಿಸಿದರು. ಆದರೆ

ಈಗ ಯುದ್ಧ ನಡೆಯುತ್ತಿರುವಾಗ ಕಾಂಗ್ರೆಸ್ಸಿಗರ ಅಸಹಕಾರ ಮತ್ತು ಅಧೈರ್ಯ ಸರಿಯಾದುದಲ್ಲವೆಂದರು, ಹಿಂದೂಸ್ತಾನಕ್ಕೆ ನೀಡುವ ಈ ತರಹೆಯ ಉಡಾಫೆ ಆಶ್ವಾಸನೆಗಳು ನಮಗೆ ಒಪ್ಪಿಗೆಯಾಗುವುದಿಲ್ಲವೆಂದು ಬಾಪೂಜಿ ಆತನಿಗೆ ಹೇಳಿದರು. ಹಿಂದೂಸ್ತಾನಿಗಳು ಇಂತಹ ಆಶ್ವಾಸನೆಗಳನ್ನು ನಂಬಿ ಕುಳಿತರೆ ಸ್ವಾತಂತ್ರ್ಯ ಸಿಗಲ್ಲ. ಈ ಭೇಟಿಯ ಸಂದರ್ಭದಲ್ಲಿ ಬಾಪೂಜಿ ಸರ್ ಕ್ರಿಪ್ಸ್‌ಗೆ ಸಂಕ್ಷಿಪ್ತವಾಗಿ ಆದರೆ ಒಂದು ಪ್ರಸಿದ್ಧವಾದ ಗಾದೆಮಾತನ್ನು ಹೇಳಿದ್ದರು. ಅದರ ಹಿಂದಿ(ಕನ್ನಡ) ಅನುವಾದ ಶಿಥಿಲವಾಗಿದೆ ಎಂದೇ ಅನಿಸುತ್ತದೆ.

"ನಿಮ್ಮ ಸಲಹೆ ದಿವಾಳಿಯಾದ ಬ್ಯಾಂಕಿನ ಮುಂದಿನ ದಿನಾಂಕದ ಚೆಕ್ ಇದ್ದಂತಿದೆ" ಎಂದು ಬಾಪೂ ಅವನಿಗೆ ಉತ್ತರಿಸಿದ್ದರು. (This is a post dated cheque on failing bank.) ಕ್ರಿಪ್ಸ್ ಮಿಷನ್ ಸಂದರ್ಭದಲ್ಲಿ ಜಪಾನಿನ ಜಲಾಂತರ್ಗಾಮಿಗಳು (ಸಬ್ ಮೇರಿನ್‌ಗಳು) ಬಂಗಾಳ ಕೊಲ್ಲಿಯಲ್ಲಿ ಸುತ್ತುತ್ತಿದ್ದವು. ಸಿಂಗಪುರ್ ಮತ್ತು ರಂಗೂನ್ ಸೋತು ಹೋಗಿದ್ದವು. ಅಲ್ಲಿಯ ಬ್ರಿಟಿಷ್ ಸೈನ್ಯ ಸೋಲನ್ನೊಪ್ಪಿಕೊಂಡು ಬರ್ಮಾ, ಸಿಂಗಪುರ ಮತ್ತು ಮಲಯಗಳನ್ನು ಜಪಾನಿಯರಿಗೆ ಒಪ್ಪಿಸಿಬಿಟ್ಟಿದ್ದಿತು. ಬಾಪೂಜಿ ತಮ್ಮ ದೇಶದ ಜನರ ಮನಃಸ್ಥಿತಿಯನ್ನು ಅರಿತಿದ್ದರು. ಭಾರತವಾಸಿಗಳ ಧೈರ್ಯ ಮತ್ತು ಸಹನೆಯ ಶಕ್ತಿ ಮುಗಿದು ಹೋಗಿದೆ ಎಂದು ಅವರಿಗೆ ಅರಿವಾಗಿತ್ತು.

ಜಪಾನಿನ ಆಕ್ರಮಣಕಾರಿ ವಿಮಾನಗಳು ಕಲ್ಕತ್ತೆಯ ಮೇಲೆ ಬಾಂಬ್ ಸುರಿದಿದ್ದವು. ಹಿಂದೂಸ್ತಾನದ ಆಕಾಶದ ಮೇಲೆ ಜಪಾನಿನ ವೈಮಾನಿಕ ಆಕ್ರಮಣದ ವಿಪತ್ತು ಭಯ ಇನ್ನೂ ಉಳಿದಿತ್ತು. ಜಪಾನೀಯರು ಹಿಂದೂಸ್ತಾನದ ಭೂಮಿಯನ್ನು ಆಕ್ರಮಿಸಿಕೊಂಡರೆ, ಸ್ವಾತಂತ್ರ್ಯದ ಆಸೆ ಹೊತ್ತು ಹಿಂದೂಸ್ತಾನಿಗಳು ಶತ್ರುವನ್ನೇ ಮಿತ್ರನೆಂದು ಭಾವಿಸಿ ಎರಡೂ ಕೈಗಳಿಂದ ಜಪಾನೀಯರನ್ನೇನಾದರೂ ಸ್ವಾಗತಿಸುವರೇನೋ ಎಂಬ ಭಯ ಬಾಪೂಜಿಗಿತ್ತು. ಇದೇನೂ ಕಾಲ್ಪನಿಕ ಭಯವಾಗಿರಲಿಲ್ಲ. ಹೀಗಾಗುವ ಸಾಧ್ಯತೆ ಇತ್ತು. ದುರ್ದೈವದಿಂದ ಹಾಗೇನಾದರೂ ಆಗಿದ್ದಿದ್ದರೆ ಭಯಂಕರ ಪರಿಣಾಮವಾಗುತ್ತಿತ್ತು. ಬ್ರಿಟಿಷರಿಗೆ ಬದಲಾಗಿ ಭಾರತ ಜಪಾನಿನ ಗುಲಾಮರಾಗುತ್ತಿದ್ದರು. ಅನಂತರ ದೀರ್ಘ ಕಾಲದವರೆಗೂ ಅವರ ಮುಷ್ಟಿಯಿಂದ ಬಿಡುಗಡೆ ಸಿಗುತ್ತಿರಲಿಲ್ಲ. ಸ್ವಾತಂತ್ರ್ಯ ಚಳುವಳಿ ಮುರಿದು ನುಚ್ಚು-ನೂರಾಗುತ್ತಿತ್ತು. ದೇವರು ಬಾಪೂಜಿಗೆ ದೂರದೃಷ್ಟಿ ಕೊಟ್ಟಿದ್ದ, ದೇಶ ಈ ವಿಪತ್ತಿನಿಂದ ಉಳಿಯಿತು. ಕ್ರಿಪ್ಸ್‌ರ ಪ್ರಸ್ತಾವ ನಿಜವಾಗಿ ಅರ್ಥವಿಲ್ಲದ್ದಾಗಿತ್ತು. ಕ್ರಿಪ್ಸ್ ಅಂತೂ ಬಹಳ ಸ್ವಾಮಿಭಕ್ತ ರಾಜಭಕ್ತ ನಾಗರಿಕನಾಗಿದ್ದ ವ್ಯಕ್ತಿ. ಅದರಿಂದ ಆತ ಸ್ವಾತಂತ್ರ್ಯ ಬೇಕು ಅನ್ನುವ ಬೇಡಿಕೆಯನ್ನು ಬದಿಗಿರಿಸಿ ಈ ದೇಶದ ಜನ ಯುದ್ಧದಲ್ಲಿ ನುಗ್ಗಿ ಭಾಗವಹಿಸಬೇಕು ಅಂತ ಸಲಹೆ ನೀಡಿದರು. ಹಿಂದೂಸ್ತಾನದ ಕೈ ಕಾಲುಗಳಿಗೆ

ಕಬ್ಬಿಣದ ಬೇಡಿ ತೊಡಿಸಿ ಈ ದೇಶ ಶತ್ರುಗಳನ್ನು ಎದುರಿಸಲಿ ಅಂತ ಇಂಗ್ಲಿಷ್ ಸರಕಾರ ಇಷ್ಟಪಡುತ್ತಿದೆ ಎಂದು ಅವರ ಮಾತಿನ ಧಾಟಿಯಿಂದ ಬಾಪೂಜಿಗೆ ಅರ್ಥವಾಯಿತು.

ಇತಿಹಾಸದಲ್ಲೆಲ್ಲಿ ನೋಡಿದರೂ ಯಾವುದೇ ಗುಲಾಮಗಿರಿಯಲ್ಲಿರುವ ದೇಶ ಎಲ್ಲೂ ಆಕ್ರಮಣಕಾರಿಗಳಿಗೆ ಸವಾಲೊಡ್ಡಿ ಗೆದ್ದಿರಲಿಲ್ಲ. ಹಿಂದೂಸ್ತಾನಕ್ಕೆ ಕೂಡ ಇದು ಸಾಧ್ಯವಾಗುವ ವಿಷಯವಾಗಿರಲಿಲ್ಲ. ವಿಷಯವನ್ನು ಕುರಿತು ಸರಿಯಾಗಿ ಆಲೋಚಿಸಿದಾಗ ಕ್ರಿಪ್ಸ್ ಮಿಷನ್ ಪ್ರಸ್ತಾವ ಅಸಫಲತೆಯ ಸಂದೇಶ ಹೊತ್ತು ಹಿಂದೂಸ್ತಾನಕ್ಕೆ ಬಂದಿತ್ತು. ಬಾಪೂಜಿ ಸರ್ ಕ್ರಿಪ್ಸ್‌ಗೆ ತಿಳುವಳಿಕೆ ನೀಡುತ್ತಾ ಹೇಳಿದರು: "ನೀವು ಇನ್ನು ಹಿಂದೂಸ್ತಾನದ ಮೇಲಿನ ಮೋಹವನ್ನು ಬಿಟ್ಟುಬಿಡಿ. ನಮ್ಮ ಪಾಡಿಗೆ ನಮ್ಮನ್ನು ಬದುಕಲು, ಸಾಯಲು ಬಿಡಿ, ಪರಕೀಯರ ಆಡಳಿತದ ಅವಮಾನ ಮತ್ತು ಗುಲಾಮಗಿರಿಗೆ ಬದಲಾಗಿ ನಮ್ಮ ದೇಶದ ಜನರಿಗೆ ಅರಾಜಕತೆಯನ್ನೇ ಅನುಭವಿಸಿಕೊಳ್ಳಲು ಬಿಡಿ, ನೀವು ಮಾತ್ರ ಹೊರಟು ಹೋಗಿ." ೨೦೦ ವರ್ಷಗಳಿಂದಲೂ ಈ ದೇಶವೆಂಬ ಚಿನ್ನದ ಕೋಳಿಯ ಚಿನ್ನದ ಮೊಟ್ಟೆಗಳ ಬಗ್ಗೆ ದುರಾಸೆಯನ್ನಿರಿಸಿಕೊಂಡಿದ್ದ ವಿದೇಶಿ ಸರಕಾರ ವಿಶ್ವಯುದ್ಧದ ಈ ವಿಷಮ ವಿಪತ್ತಿನ ಸ್ಥಿತಿಯಲ್ಲಿ ನ್ಯಾಯ, ನೀತಿ, ಆಚಾರ, ವಿಚಾರಗಳನ್ನು ತಿಳಿದು ಅರ್ಥಮಾಡಿಕೊಳ್ಳಲು ಅಸಮರ್ಥವಾಗಿತ್ತು. ಬ್ರಿಟಿಷ್ ರಾಜ್ಯ ವಿಭ್ರಮಿತಗೊಂಡು ಮೂರ್ಖನಾಗಿತ್ತು. 'ವಿನಾಶಕಾಲೇ ವಿಪರೀತ ಬುದ್ಧಿ' ಯ ಇದಿನ್ನೊಂದು ಜ್ವಲಂತ ಉದಾಹರಣೆಯಾಗಿತ್ತು. ವಾಸ್ತವವಾಗಿ ನೋಡಿದರೆ, ಡೆಮಾಕ್ರೆಸಿಯನ್ನ ಉಳಿಸುವುದಕ್ಕಾಗಿ ಭಾರತೀಯರು ಇಂಗ್ಲಿಷ್ ಜನರಿಗೆ ಕ್ರಿಯಾತ್ಮಕವಾಗಿ ಸಹಾಯ ಮಾಡಲು ಉತ್ಸುಕರಾಗಿದ್ದರು. ಸಮಾತೆ, ಸ್ವಾತಂತ್ರ್ಯ ಮತ್ತು ಅಧಿಕಾರದ ಸಮಾನತೆ ಇದ್ದ ಕಡೆ ಸಹಾಯ ನೀಡಬಹುದು, ಪಡೆದುಕೊಳ್ಳಬಹುದು. ಆದರೆ ಬ್ರಿಟಿಷ್ ಸರಕಾರಕ್ಕೆ ಇದು ಬೇಕಿರಲಿಲ್ಲ. ಅದು ಈ ದೇಶದ ಜನರ ಮಾನವನ್ನು ತುಂಡರಿಸಿ ಹಾಕಲಿಷ್ಟಪಡುತ್ತಿತ್ತು. ತಮ್ಮ ದೇಶದ ಸ್ವಾತಂತ್ರ್ಯವನ್ನು ಬಹಳ ಪ್ರೀತಿಸುತ್ತಾರೆ ಅನ್ನುವುದೊಂದೇ ಈ ದೇಶದ ಬಡಪಾಯಿ ಜನಗಳ ದೊಡ್ಡ ಅಪರಾಧ ಆಗಿತ್ತು. ಸರಕಾರ ಹಿಂದೂಸ್ತಾನಕ್ಕೆ ಸ್ವಾತಂತ್ರ್ಯ ಕೊಟ್ಟಿದ್ದರೆ ಈ ಸಾವಿರಾರು ಲಕ್ಷಾಂತರ ಮಂದಿ ಸತ್ಯಾಗ್ರಹಿಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೋಸ್ಕರ ಸಮಯ, ಶಕ್ತಿ, ಸಾಧನಗಳನ್ನು ದುರುಪಯೋಗಪಡಿಸಬೇಕಾಗುತ್ತಿರಲಿಲ್ಲ. ತದೇಕಚಿತ್ತರಾಗಿ ಅವರು ಯೂರೋಪಿನ ಈ ಕಠಿಣ ಯುದ್ಧದಲ್ಲಿ ಹೋರಾಡಬಹುದಿತ್ತು. ಆಗ ಸ್ವತಂತ್ರ ಭಾರತ ಧೈರ್ಯ ಮತ್ತು ಆತ್ಮವಿಶ್ವಾಸದಿಂದ ಜಪಾನನ್ನು ಎದುರಿಸಬಹುದಾಗಿತ್ತು. ಬರ್ಮಾ, ಮಲಯ, ಸಿಂಗಪುರದಲ್ಲಿ ಬ್ರಿಟಿಷ್ ಸೈನ್ಯ ಸಮರ್ಪಿಸಿಕೊಳ್ಳುವ ಅಗತ್ಯ ಇರುತ್ತಿರಲಿಲ್ಲ. ಮತ್ತು ಬಂಗಾಳದ ಕೊಲ್ಲಿಯಲ್ಲಿ ಬ್ರಿಟಿಷ್ ಜಹಜುಗಳಿಗೆ ನಿಶ್ಚಿಂತೆಯಿಂದ ಸುರಕ್ಷಿತವಾದ

ಜಾಗ ಕಂಡುಕೊಳ್ಳಲನುವಾಗುತ್ತಿತ್ತು. ಚರ್ಚಿಲ್ ಸರಕಾರಕ್ಕೆ ಭಾರತವನ್ನು ಜಪಾನಿನ ಕಠೋರವಾದ ಕೈಗಳಿಗೆ ಒಪ್ಪಿಸಲು ಏನೂ ಅನಿಸುತ್ತಿರಲಿಲ್ಲ. ಆದರೆ ಭಾರತೀಯರಿಗೆ ತಮ್ಮ ದೇಶವನ್ನು ಹಿಂದಿರುಗಿಸಲು ಚರ್ಚಿಲ್ ತಯಾರಿರಲಿಲ್ಲ. ಎಂಥ ವಿರೋಧಾಭಾಸ!

ವಿಶ್ವಯುದ್ಧದಲ್ಲಿ ಸಂಯುಕ್ತ ರಾಷ್ಟ್ರಗಳ ಪ್ರಜಾಸತ್ತಾತ್ಮಕ ಶಕ್ತಿಗಳು ಸರ್ವಾಧಿಕಾರಿಯ ಪಾಶವೀಶಕ್ತಿಯ ಎದುರು ನಡುಗುತ್ತಿದ್ದವು. ಇದು ಒಂದು ಧರ್ಮಯುದ್ಧವಾಗಿತ್ತು. ಇಲ್ಲಿ ಲೋಕತಂತ್ರ ಸ್ವೇಚ್ಛಾಚಾರಿಯ ನಿರಂಕುಶತೆಯನ್ನು (ಸರ್ವಾಧಿಕಾರವನ್ನು) ಎದುರಿಸುತ್ತಿತ್ತು. ವಿಜಯ ಸಿಗುವುದು ಗಟ್ಟಿಯಾಗಿದ್ದರೂ ಸರಕಾರದ ಮನಸ್ಸು ಶುದ್ಧವಾಗಿರಲಿಲ್ಲ. ಹಿಟ್ಲರ್‌ನ ಅಧರ್ಮವನ್ನು ವಿರೋಧಿಸಿ ಯುದ್ಧ ಮಾಡುತ್ತಿದ್ದ ಬ್ರಿಟಿಷ್ ಸರಕಾರ ಹಿಂದೂಸ್ತಾನದಲ್ಲಿ ತಾನೇ ಅದಕ್ಕಿಂತ ಹೆಚ್ಚಿನ ಅಧರ್ಮ ಮಾಡುತ್ತಿತ್ತು, ಇಷ್ಟು ನಷ್ಟವಾಯಿತು. ಹಿಂದೂಸ್ತಾನಕ್ಕೆ ೧೯೪೦ ರಲ್ಲಿ ಸ್ವಾತಂತ್ರ್ಯ ಕೊಟ್ಟುಬಿಟ್ಟಿದ್ದರೆ ಇಷ್ಟು ಕಷ್ಟಗಳನ್ನು (ಬ್ರಿಟಿಷ್ ಸರಕಾರ) ತಪ್ಪಿಸಿಕೊಳ್ಳಬಹುದಾಗಿತ್ತು.

ಬ್ರಿಟನ್ನಿನ ಜನರ ದೃಢತೆ ಮತ್ತು ತೀವ್ರವಾದ ಅನುಶಾಸನದಿಂದ ಎರಡನೆ ವಿಶ್ವಯುದ್ಧದಲ್ಲಿ ಬ್ರಿಟನ್ ಜಯ ಗಳಿಸಿತು. ಅಮೆರಿಕಾದ ಸಹಾಯ ದೊಡ್ಡದಾಗಿ ಸಿಕ್ಕು ಅದು ವಿಜಯಿಯಾಗಿತ್ತಾದರೂ, ಈ ವಿಶ್ವಯುದ್ಧದಲ್ಲಿ ಬ್ರಿಟನ್‌ಗೆ ಅವ್ಯಕ್ತವಾಗಿ ಪೆಟ್ಟು ತಗುಲಿತ್ತು. ಹಿಂದೂಸ್ತಾನದ ೩೫ ಕೋಟಿ ಜನರ ಅಹಿಂಸಾತ್ಮಕ ಆಂದೋಳನವನ್ನು ಹೊಸಕಿ ಹಾಕಲು ಸರಕಾರ ಏನೆಲ್ಲ ಪ್ರಯತ್ನ ಮಾಡಿತು, ಪ್ರಪಂಚದ ದೇಶಗಳ ಮನದಲ್ಲಿ ಬ್ರಿಟನ್ನಿನ ಬಗ್ಗೆ ಇಂತಿಷ್ಟೂ ಶ್ರದ್ಧೆ–ನಂಬಿಕೆ ಉಳಿಯಲಿಲ್ಲ. ಭಾರತದಂತಹ ಸತ್ಯಾಗ್ರಹಿಗಳ ನ್ಯಾಯಯುತ ಬೇಡಿಕೆಗಳನ್ನು ಸರಕಾರ ಇಷ್ಟು ದಮನ ಮಾಡಿದ್ದು, ಅದನ್ನು ನೋಡಿ ಪ್ರಪಂಚದ ಬೇರೆ ದೇಶಗಳಲ್ಲಿ ಬ್ರಿಟನ್ನಿನ ಕುರಿತು ಯಾವುದೇ ಸಹಾನುಭೂತಿ ಉಳಿದಿರಲಿಲ್ಲ. ಈ ಸದ್ಭಾವನೆಯ ಕೊರತೆಯಾಗಿ ಯುದ್ಧದ ನಂತರ ಬ್ರಿಟನ್ ಎಷ್ಟು ಅವನತಿಗೊಳಗಾಯಿತೆಂಬುದು ತಿಳಿದಿರುವ ವಿಷಯ. ಆ ದೇಶ ದಿವಾಳಿಯಾಗಿತ್ತು. ಪ್ರಪಂಚದ ಶಕ್ತಿಶಾಲಿ ರಾಷ್ಟ್ರವಾಗಿದ್ದ ಬ್ರಿಟನ್ ತನ್ನ ಮಹತ್ವದ ಶಿಖರದಿಂದ ಕೆಳಗುರುಳಿ ಮೂರನೆ ದರ್ಜೆಯ ವಿದೇಶ ರಾಷ್ಟ್ರವಾಗಿ ಉಳಿಯಿತು. ಇವತ್ತು ಕೂಡ ಆಗ ತಗುಲಿದ ಪೆಟ್ಟಿನಿಂದ ಬ್ರಿಟನ್ ಎದ್ದೇಳಲಾಗಿಲ್ಲ. ೧೯೪೦ ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟಿದ್ದಿದ್ದರೆ ಜಪಾನಿನ ಶಕ್ತಿ ಬಹುಶಃ ಹಿಡಿತದಲ್ಲಿರುತ್ತಿತ್ತು. ಪ್ರಪಂಚ ಪರಮಾಣು ಬಾಂಬಿನ ಆ ಭೀಕರತೆಯನ್ನು ನೋಡಬೇಕಾಗುತ್ತಿರಲಿಲ್ಲ. ಇಂದು ಅಣ್ವಸ್ತ್ರಗಳಿಗಾಗಿ ಈ ರೀತಿಯ ಸ್ಪರ್ಧೆ ಕೂಡ ಇರುತ್ತಿರಲಿಲ್ಲವೇನೋ, ಹಾಗೂ ಈ ಪ್ರಪಂಚದಲ್ಲಿ ಒಂದಲ್ಲ, ಸಾವಿರ ಬಾರಿ ವಿನಾಶಪಡಿಸುವ ಪಾಶವೀಶಕ್ತಿಯನ್ನು ನಿಗ್ರಹಿಸಲು ಪ್ರಪಂಚದ ಎರಡು ದೊಡ್ಡ ಶಕ್ತಿಗಳು ಮುಂದಾಗಿವೆ. ಪ್ರಪಂಚದ ಮಿಕ್ಕ ದೇಶಗಳು ಈ ಪ್ರತಿಸ್ಪರ್ಧೆಯ ಆತಂಕದಿಂದ

ನಡುಗುತ್ತಿವೆ. ಇತಿಹಾಸದ ಇಂತಹ ತಿರುವಿನಲ್ಲಿ ಏನಾಗುವುದೋ ಎಂಬುದು ಊಹೆಗೂ ಮೀರಿದ್ದು, ಆದರೆ ಎಂತಹ ಪರಿಸ್ಥಿತಿಯಲ್ಲೂ ಇಂಗ್ಲೆಂಡ್ ಮಾನಸಿಕ, ಮಾನವೀಯ ಮತ್ತು ಆಧ್ಯಾತ್ಮಿಕ ಕೊರತೆಯಿಂದ ಮೇಲಕ್ಕೆದ್ದಿದ್ದರೆ ಭಾರತ ವಿಶ್ವಸಂಸ್ಥೆಯಲ್ಲಿ ಒಂದು ಸಹಾಯಕ ಮಿತ್ರದೇಶದಂತೆ ಎದ್ದುನಿಲ್ಲಬಹುದಾಗಿತ್ತು.

* * * *

## ೨೩. 'ಮಾಡು ಇಲ್ಲ ಮಡಿ' ಘೋಷಣೆ

೧೯೪೧ರಲ್ಲಿ ಕ್ರಿಪ್ಸ್ ಮಿಷನ್ ವಿಫಲವಾದ ಮೇಲೆ ಸರಕಾರ ಎಲ್ಲಾ ರೀತಿಯಿಂದಲೂ ದೇಶವನ್ನು ಲೂಟಿ ಮಾಡಿಲಾರಂಭಿಸಿತು. ಜಪಾನೀಯರೊಂದಿಗೆ ಯುದ್ಧ ಮಾಡುವುದಕ್ಕಾಗಿ ಇಂಗ್ಲಿಷ್ ಮತ್ತು ಅಮೆರಿಕಾ ಸೈನ್ಯವನ್ನು ದೇಶದ ಪ್ರತಿಯೊಂದು ನಗರದಲ್ಲೂ ಇಟ್ಟರು. ಅದರ ಖರ್ಚನ್ನು ಪೂರ್ತಿಯಾಗಿ ಭಾರತ ಸರಕಾರ ಹೊತ್ತುಕೊಂಡಿತು. ಭಾರತ ಸರಕಾರ ಈ ಪೂರ್ತಿ ಖರ್ಚನ್ನು ದೇಶದ ಜನರ ಹತ್ತಿರ ವಸೂಲು ಮಾಡಲಾರಂಭಿಸಿದರು. ಈ ಹೆಚ್ಚಿನ ಖರ್ಚಿಗಾಗಿ ಜನರ ಮೇಲೆ ವಿಶೇಷ ತೆರಿಗೆಯನ್ನು ಹಾಕಿದರು. ಪ್ರತಿಯೊಂದು ವಸ್ತುವಿನ ಬೆಲೆಯನ್ನು ಹೆಚ್ಚಿಸಿದರು. ದೇಶದ ಒಳ್ಳೊಳ್ಳೆಯ ಧಾನ್ಯವನ್ನು ಇಡಿಯಾಗಿ ವಿದೇಶಕ್ಕೆ ಸಾಗಿಸಲಾರಂಭಿಸಿದರು. ಭಾರತದಲ್ಲಿ ಇರಿಸಿದ್ದ ಸೈನ್ಯಕ್ಕೆ ಅದನ್ನು ಕೊಟ್ಟರು; ಈ ನೀತಿಯಿಂದಾಗಿ ದೇಶದಲ್ಲಿ ಧಾನ್ಯಗಳ ಬೆಲೆ ಏರಿತು. ದೇಶದ ಮಾರ್ಕೆಟ್‌ಗಳಿಂದ ಧಾನ್ಯ ಮಾಯವಾಯಿತು. ಬೆಲೆ ತೀರ ದುಬಾರಿಯಾಯಿತು. ದೇಶದ ಬಡಜನ ಹಸಿವಿನಿಂದ ಸಾಯತೊಡಗಿದರು. ದೇಶದ ಅನುಕೂಲಗಳೆಲ್ಲವನ್ನೂ ಈ ಸೈನಿಕರಿಗಾಗಿ ಸುರಕ್ಷಿತವಾಗಿಟ್ಟರು. ಇಂತಹ ನೀತಿಯಿಂದಾಗಿ ನಮ್ಮ ದೇಶದ ಜನರು ಗುಲಾಮರ ಹಾಗೆ ತಿರಸ್ಕಾರಕ್ಕೆ ಒಳಗಾದರು.

ಸಪ್ತಸಿಂಧುವಿನ ಈ ಫಲವತ್ತಾದ ದೇಶದಲ್ಲಿ ದುರ್ಭಿಕ್ಷೆ ಹರಡಿತು. ಪತ್ರ ಬರೆಯುವ, ಮಾತನಾಡುವ, ಭಾಷಣ ನೀಡುವುದರ ಹಾಗೂ ಸಭೆ–ಸಮ್ಮೇಳನ, ಸಮಾಚಾರ ಪತ್ರಿಕೆಗಳೆಲ್ಲದರ ಮೇಲೂ ಹಿಡಿತ ಹಾಕಿದರು. ದೇಶವನ್ನು ಒಂದು ವಿಶಾಲವಾದ ಕಾನ್ಸೆಂಟ್ರೇಷನ್ ಕ್ಯಾಂಪ್ ಹಾಗೆ ಮಾಡಿದರು. ಹಿಟ್ಲರ್ ಐದು ಕಾನ್ಸೆಂಟ್ರೇಷನ್ ಕ್ಯಾಂಪ್‌ಗಳನ್ನಷ್ಟೇ ರಚಿಸಿದ್ದನೆಂದು ಕಾಣುತ್ತೆ, ಇಂಗ್ಲಿಷ್ ಸರಕಾರ ೩೫ ಕೋಟಿ ಜನರ ದೇಶವನ್ನೇ ಒಂದು ಮಿಲಿಟರಿ ಕ್ಯಾಂಪನ್ನಾಗಿ ಮಾಡಿದರು. ಬಹಳ ಉತ್ಸಾಹದಿಂದ ಶೋಷಣೆ, ಹಿಂಸೆ ನಡೆಯುತ್ತಿತ್ತು. ನನಗಾಗ ೧೧ ವರ್ಷ ವಯಸ್ಸು, ಆದರೆ ಆ ಕಷ್ಟದ ದಿನಗಳ ನೆನಪು ಮಾತ್ರ ಇನ್ನೂ ಹಸಿರಾಗಿದೆ. ಬಾಪೂಜಿ ಮತ್ತು ನಮ್ಮ ಆಶ್ರಮದ ಜನರೆಲ್ಲಾ ಚಿಂತೆಯಿಂದ ಕೂಡಿದ್ದುದು ಕಾಣಿಸುತ್ತಿತ್ತು. ವಿಶೇಷವಾಗಿ ಮಧುರವಾದ ಸ್ಮಿತ–ನಗುವನ್ನು ನನಗೆ ನೀಡುತ್ತಿದ್ದ ಮಹಾದೇವ ಕಾಕಾ ಈಗ ಬಹಳ ಉದ್ವಿಗ್ನರಾಗಿ ಕಾಣಿಸುತ್ತಿದ್ದರು. ಸೌಮ್ಯ ಮಂಗಳಮಯಿಯಾದ ಅಜ್ಜಿ

ಉದಾಸಳಾಗಿರುತ್ತಿದ್ದಳು. ೧೯೪೧ರಲ್ಲಿ ಬಾರಡೋಲಿಯಲ್ಲಿ ಕಾಂಗ್ರೆಸ್ ಅಧಿವೇಶನವಿತ್ತು. ಅಜ್ಜಿ ಮತ್ತು ಬಾಪೂಜಿ ಜೊತೆ ನಾನು ಕೂಡ ಸೂರತ್ ಜಿಲ್ಲೆಯ ಯಾತ್ರೆ ಮಾಡಿಕೊಂಡು ಬಾರಡೋಲಿಗೆ ಹೋಗಿದ್ದೆ. ಜವಾಹರಲಾಲ್ ಜೀ ಅವರ ೨೨ ವರ್ಷದ ವಯಸ್ಸಿನ ಒಬ್ಬಳೇ ಮಗಳು ಇಂದು ಕೂಡ ಬಾರಡೋಲಿಗೆ ಬಂದಿದ್ದಳು. ನಮ್ಮ ಜೊತೆಯಲ್ಲೇ ಅವರು ಬಾರಡೋಲಿ ಆಶ್ರಮದಲ್ಲಿದ್ದರು. ಬಾಪೂಜಿ, ಅಜ್ಜಿ, ನಾನು ಮೇಲಿನ ಮಹಡಿಯಲ್ಲಿ ಇದ್ದೆವು. ಅವರು ಕೆಳಗಿನ ಕೊಠಡಿಯಲ್ಲಿ ಉಳಿದುಕೊಂಡಿದ್ದರು.

ನಮ್ಮ ದೊಡ್ಡವರೆಲ್ಲರೂ ದೇಶದ ಈ ದುಃಸ್ಥಿತಿಯಿಂದ ಬಹಳ ಚಿಂತೆಗೆ ಒಳಗಾಗಿದ್ದರು. ಆದರೆ ಇಂದೂಜಿ ಮತ್ತು ನಾನು ಏನೂ ಮಾಡಬೇಕಾಗಿರಲಿಲ್ಲ. ಇಂದು ಫಿರೋಜ಼್ ಗಾಂಧಿ ಜೊತೆ ಮದುವೆಯಾಗಲು ಅನುಮತಿ ಪಡೆಯಬೇಕೆಂದು, ಬಾಪೂಜಿನ್ನು ಭೇಟಿಯಾಗಬೇಕೆಂದು ವಿದೇಶದಿಂದ ವಿಶೇಷವಾಗಿ ಹಿಂದಿರುಗಿದ್ದಳು. ಪಾರಸಿ ಯುವಕ ಫಿರೋಜ಼್ ಗಾಂಧೀ ಜೊತೆ ಅವಳು ಮದುವೆಯಾಗುವುದು ಮೊದಲು–ಮೊದಲು ಜವಾಹರಲಾಲಜೀಗೆ ಇಷ್ಟವಾಗಿರಲಿಲ್ಲ. ಅದರಿಂದ ಬಾಪೂಜಿ ನಮ್ಮ ಪಾಪೂನ (ಜವಾಹರಲಾಲಜೀ) ಒಪ್ಪಿಸಲಿ ಎಂಬುದೇ ಇಂದುವಿನ ಇಷ್ಟವಾಗಿತ್ತು. ಒಂದೆಡೆ ಘೋರವಾದ ರಾಜಕೀಯದ ಚರ್ಚೆ ನಡೆಯುತ್ತಿದ್ದರೆ, ಮತ್ತೊಂದೆಡೆ ವಿವಾಹ ಪ್ರಸ್ತಾವ ಕುರಿತೂ ತರ್ಕ–ವಿತರ್ಕಗಳು ನಡೆಯುತ್ತಿದ್ದವು. ನಾನು ಸಾಕಷ್ಟು ಬೆಳೆದವಳಾಗಿದ್ದೆ, ಆದರೆ ಈಗಿನ್ನೂ ಸ್ಕೂಲಿನ ಬಂಧನದಿಂದ ಮುಕ್ತಳಾಗಿ ಸುತ್ತುತ್ತಿದ್ದೆ. ಇಂದೂಜೀ ಆರ್ಕ್ಸ್‌ಫರ್ಡ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿ ದೇಶಕ್ಕೆ ಹಿಂದಿರುಗಿದ್ದರು. ನಾವು ಹುಡುಗಿಯರು, ಹಾಗೇನೂ ವಿಶೇಷವಾಗಿ ನಾವೇನೂ ಮಾಡುವದಿರಲಿಲ್ಲ. ತೋಟದಲ್ಲಿ ಸುತ್ತುವುದು, ವೇದಿಕೆಯ ಮೇಲೆ ಕುಳಿತುಕೊಳ್ಳುವುದು– ಇಷ್ಟೇ ನಮಗಿದ್ದ ಕೆಲಸ. ಇಂದು ಬಹನ್ ನನಗಿಂತ ಹೆಚ್ಚು ಓದಿದವಳೂ, ಸಭ್ಯಳೂ, ಸುಂದರಳೂ ಆಗಿದ್ದವರು. ನನ್ನಂತಹ ಸಾಮಾನ್ಯವಾದ ಹುಡುಗಿಯನ್ನು ತಿರಸ್ಕಾರದಿಂದ ನೋಡದೆ ಆಕೆ ನನ್ನು ಸಹಿಸಿಕೊಳ್ಳುತ್ತಿದ್ದರೆಂದರೆ ಅದು ಅವರ ಸಹೃದಯತೆಯಿಂದಾಗಿ ಅಷ್ಟೆ. ನಾನು ಕೂಡ ಮುಗ್ಧಳಾಗಿ ನೆರಳಿನ ಹಾಗೆ ಅವರ ಜೊತೆ ಜೊತೆಯಲ್ಲಿ ಸುತ್ತುತ್ತಿದ್ದೆ.

ಇಂದಿರಾಜಿ ನನಗೆ ಏಳುವ, ಕುಳಿತುಕೊಳ್ಳುವ ಎಷ್ಟೋ ಸಭ್ಯ ರೀತಿಗಳನ್ನು ಬಹಳ ಸುಲಭವಾಗಿ ಕಲಿಸಿಕೊಟ್ಟರು. ಉರ್ದೂನ 'ಶುಕ್ರಿಯಾ' ಶಬ್ದವನ್ನು ನಾನು ಮೊದಲು ಅವರ ಬಾಯಿಂದಲೇ ಕೇಳಿದ್ದು. ಅದರ ಅರ್ಥವನ್ನು ಬಾಪೂಜಿ ಮತ್ತು ಇಂದೂಜೀ ಇಬ್ಬರೂ ಕೂಡಿ ನನಗೆ ತಿಳಿಸಿಕೊಟ್ಟರು. ಅವು ನಾವಿಬ್ಬರೂ ಹುಡುಗಿಯರೂ ಬಹಳ ಪ್ರಿಯವಾಗಿ, ನಿಶ್ಚಿಂತೆಯಾಗಿದ್ದ ದಿನಗಳವು. ಆದರೆ ಕಾಂಗ್ರೆಸ್ ನೇತಾರರು ಮತ್ತು ಬಾಪೂಜಿ ಚಿಂತೆಯಿಂದ ಕೂಡಿದ್ದರು. ೧೯೪೨ರ

ಆಗಸ್ಟ್ ತಿಂಗಳಿನಲ್ಲಿ ನಮ್ಮ ತಂದೆ ನಮ್ಮನ್ನೆಲ್ಲಾ ಕರೆದುಕೊಂಡು ಸೇವಾಗ್ರಾಮಕ್ಕೆ ಹೋಗಿದ್ದರು. ನಾನು ಎಂದೂ ಕೇಳಲಿಲ್ಲವಾರೂ, ಇಂದು ಯೋಚಿಸಿದರೆ, ನಮ್ಮ ತಂದೆಗೆ ಆಗ ಖಂಡಿತವಾಗಿಯೂ ಮುಂಬರುವ ಕೆಟ್ಟ ದಿನಗಳ ಸೂಚನೆ ಸಿಕ್ಕಿತ್ತು ಅನಿಸುತ್ತದೆ. ಅದರಿಂದಲೇ ಅಮ್ಮ-ಅಪ್ಪ, ಉಷಾ, ತನು ಮತ್ತು ನಾನು ಬಾಪೂಜಿ ಮತ್ತು ಅಜ್ಜಿ ಜೊತೆ ಇರಬೇಕೆಂದು ಕೆಲವು ದಿನಗಳ ಮಟ್ಟಿಗೆ ಸೇವಾಗ್ರಾಮಕ್ಕೆ ಹೋಗಿದ್ದೆವು. ಆಗಸ್ಟ್ ೭ರ ಸಂಜೆ ನಾವೆಲ್ಲರೂ ಬಾಪೂಜಿ, ಅಜ್ಜಿ, ಮಹಾದೇವ ಕಾಕಾನನ್ನು ಕಳುಹಿಸಿಕೊಡಲು ವರ್ಧಾ ಸ್ಟೇಷನ್‌ಗೆ ಹೋಗಿದ್ದೆವು. ಸ್ಟೇಷನ್‌ನಲ್ಲಿ ಕಾಲಿಡುವುದಕ್ಕೂ ಜಾಗ ಇರಲಿಲ್ಲ. ಎಲ್ಲರೂ ವರ್ಧಾ ಸ್ಟೇಷನ್‌ಗೇ ಬಂದು ತುಂಬಿಕೊಂಡಿದ್ದರೇನೋ ಅನಿಸುತ್ತಿತ್ತು. ಬಾಂಬೆ ಮೇಲ್ ಸ್ವಲ್ಪ ತಡವಾಗಿತ್ತು ಅಂತ ಕಾಣುತ್ತೆ. ಆ ಗುಂಪಿನ ಗಲಾಟೆಯ ನಡುವೆಯೇ ಪ್ಲಾಟ್‌ಫಾರಂನ ಒಂದು ಕುರ್ಚಿ ಮೇಲೆ ಕುಳಿತೇ ಬಾಪೂಜಿ ೫-೧೦ ನಿಮಿಷ ನಿದ್ದೆಮಾಡಿಬಿಟ್ಟಿದ್ದರು. ಸಾರ್ವಜನಿಕ ಸ್ಥಳದಲ್ಲಿ ಬೆಳಗಿನ ಹೊತ್ತಿನಲ್ಲಿ ಅಷ್ಟು ಗಲಾಟೆ ಮಧ್ಯ ಬಾಪೂಜಿ ಹೇಗೆ ಮಲಗಿಬಿಟ್ಟರು ಅಂತ? ನನಗೆ ಆಗ ಅದರಲ್ಲೇನೂ ವಿಶೇಷವಿದೆ ಅನ್ನಿಸಲಿಲ್ಲ. ಆದರೆ ಇವತ್ತು ಆ ದೃಶ್ಯವನ್ನು ಮನಸ್ಸಿನಾಳದಲ್ಲಿ ನೆನಪು ಮಾಡಿಕೊಂಡು ನೋಡಿದಾಗ, ಬಾಪೂಜಿ ಅದೇನು ಅಪೂರ್ವ ಸಾಧನೆ ಮಾಡಿರಬೇಕು ಅಂತ ಅನಿಸುತ್ತೆ, ಒಂದು ನಿಮಿಷ ಕೂಡ ಹಾಳು ಮಾಡದೆ ಅವರು ವಿರಾಮ ಬೇಕು ಅನಿಸಿದ ತಕ್ಷಣ ಎಲ್ಲಿ ಯಾವ ಸ್ಥಿತಿಯಲ್ಲಿದ್ದರೋ ಅದರಲ್ಲೇ ೫-೧೦ ನಿಮಿಷ ನಿದ್ದೆಮಾಡಿ ನಂತರ ಎದ್ದು, ಹರ್ಷದಿಂದ ಆ ಗುಜು-ಗುಂಪಿನಲ್ಲೇ ಮಹಾದೇವ ಕಾಕಾಗೆ ಲೇಖನ ಬರೆಸಲಾರಂಭಿಸಿದರು. ನಮ್ಮ ಆಶ್ರಮ ಪ್ರಾರ್ಥನೆಯಲ್ಲಿ ಭಗವಾನ್ ಶ್ರೀಕೃಷ್ಣ ಅರ್ಜುನನಿಗೆ ಸ್ಥಿತಪ್ರಜ್ಞನ ಲಕ್ಷಣಗಳನ್ನು ತಿಳಿಸಿ ಗೀತೆಯಲ್ಲಿ ಕೊಟ್ಟಿದ್ದ ಉಪದೇಶದ ಶ್ಲೋಕಗಳನ್ನು ನಾವು ಪ್ರತಿದಿನ ಪಠಿಸುತ್ತೇವೆ. ಬಾಪೂಜಿ ಬಹುಶಃ ಈ ಸ್ಥಿತಪ್ರಜ್ಞತೆಯ ಕೆಲವಂಶಗಳನ್ನು ಪಡೆದಿದ್ದರು ಅಂತ ಅನಿಸುತ್ತದೆ. ಬಾಂಬೆ ಮೇಲ್ ವರ್ಧಾ ಪ್ಲಾಟಫಾರಂಗೆ ಬಂತು. ನಮ್ಮ ತಂದೆ, ನಾನು ನೋಡಿದ ಹಾಗೆ, ಭಾವುಕತೆಯನ್ನು ಪ್ರಕಟಪಡಿಸುವ ವ್ಯಕ್ತಿ ಅಲ್ಲ. ಅಂತಹುದರಲ್ಲಿ ತಮ್ಮ ತಂದೆಯಿಂದ ಬೀಳ್ಕೊಡುವಾಗ ವಿಚಲಿತರಾದರು. ಅವರ ಪಾದಧೂಲಿಯನ್ನು ತೆಗೆದುಕೊಳ್ಳುವಾಗ ನಮ್ಮ ತಂದೆ ತಮ್ಮ ತಂದೆಯ ತೋಳ್ತೆಕ್ಕೆಯನ್ನಪ್ಪಿಕೊಂಡಿದ್ದರು. ಅಜ್ಜಿಗೆ ನಮಸ್ಕಾರ ಮಾಡುವಾಗ ಅಮ್ಮ-ಮಗ ಇಬ್ಬರ ಕಣ್ಣುಗಳೂ ತುಂಬಿ ಬಂದವು. ನನಗೆ ಆಗ ಈ ಭಾವಾವೇಶ ಅರ್ಥವಾಗಲಿಲ್ಲ. ಆದರೆ ಈಗನಿಸುತ್ತೆ ಬಾಪೂಜಿ, ಅಜ್ಜಿ, ಮತ್ತು ನಮ್ಮ ತಂದೆ ಮತ್ತು ಅಮ್ಮ ಈ ನಾಲ್ಕು ಜನಕ್ಕೆ ಮುಂದೆ ಬರಲಿದ್ದ ಕಠೋರ ದಿನಗಳ ದುಃಖದ ಕಲ್ಪನೆ ಇತ್ತು. ಹಾಗಿಲ್ಲದಿದ್ದರೆ ನಮ್ಮ ತಂದೆ ಮತ್ತು ಅಜ್ಜ ಪ್ರಪಂಚದೆದುರಿಗೆ ಹೀಗೆ ನೋವಿಂದ ಕೂಡಿದ ಪ್ರೀತಿಯನ್ನು ತೋರ್ಪಡುತ್ತಿರಲಿಲ್ಲ.

೮ ಆಗಸ್ಟ್ ೧೯೪೨ರಂದು ಬಾಪೂಜಿ ಬೊಂಬಾಯಿಗೆ ಬಂದರು. ಸಂಜೆ ಧೋಬೀ ಘಾಟ್‌ನ ವಿಶಾಲ ಮೈದಾನದಲ್ಲಿ ಸಾರ್ವಜನಿಕ ಸಭೆ ಏರ್ಪಾಡಾಗಿತ್ತು. ಬೊಂಬಾಯಿನ ಲಕ್ಷಾಂತರ ಜನ ಬಾಪೂಜಿ ಅವರ ದರ್ಶನಕ್ಕಾಗಿ ನುಗ್ಗಿ ನುಗ್ಗಿ ಬಂದಿದ್ದರು. ತಮ್ಮ ಪ್ರಿಯ ಮುಖಂಡನಿಂದ ದೇಶಕ್ಕೆ ಮಾರ್ಗದರ್ಶನ ಸಿಗುವುದೆಂಬ ಆಕಾಂಕ್ಷೆ ಅವರಲ್ಲಿತ್ತು. ಜಗತ್ತಿನೆದುರು 'ಭಾರತ್ ಛೋಡೋ' (ಭಾರತವನ್ನು ಬಿಟ್ಟು ತೊಲಗಿ) ಎಂಬ ಘೋಷಣೆಯನ್ನು ಬಾಪೂಜಿ ದೇಶಕ್ಕೆ ನೀಡಿದರು. ಇದು ಬರಿ ಘೋಷಣೆ ಆಗಿರದೆ ಆಂತರಾತ್ಮನ ಕರೆಯಾಗಿತ್ತು. ದೇಶದ ಗಡಿಯಲ್ಲಿ ಜಪಾನೀಯರು ಮುನ್ನುಗ್ಗುತ್ತಿದ್ದರು. ಈ ಆಕ್ರಮಣವನ್ನು ತಡೆಯುವ ಶಕ್ತಿ ಇಂಗ್ಲಿಷ್ ಸರಕಾರಕ್ಕಿರಲಿಲ್ಲ. ಸಿಂಗಪೂರ್, ರಂಗೂನನ್ನು ಇಂಗ್ಲಿಷರು ಜಪಾನೀಯರ ವಶಕ್ಕೊಪ್ಪಿಸಿದ್ದರು. ಜಪಾನೀಯರು. ಹಿಂದೂಸ್ತಾನವನ್ನು ಆಕ್ರಮಿಸಲೆಂಬುದು ಬಾಪೂಜಿಯವರ ಇಚ್ಛೆಯಾಗಿತ್ತು ಇಂಗ್ಲಿಷರಿಗೆ ರಕ್ಷಿಸಲಾಗದಿದ್ದರೆ ಬಿಟ್ಟು ಹೋಗಲಿ. ಭಾರತೀಯರು ತಮ್ಮನ್ನು ತಾವು ರಕ್ಷಿಸಿಕೊಳ್ಳುವರು. ದೇಶದ ಗಡಿಯಲ್ಲಿ ಶತ್ರು ಅವಕಾಶಕ್ಕಾಗಿ ಕಾಯುತ್ತಾ ಕುಳಿತಿರುವಾಗ, ಭಾರತ ಛೋಡೋ ಎಂಬುದನ್ನು ಬಿಟ್ಟರೆ ಬೇರೇನೂ ಸಾಧ್ಯವಿರಲಿಲ್ಲ. ಸಂಧಿ– ಸಮಾಧಾನ, ಮಾತುಕತೆಯ ಕಾಲ ಕಳೆದು ಹೋಗಿತ್ತು. ಈಗಂತೂ 'ಡೂ ಅಂಡ್ ಡೈ' 'ಮಾಡು ಇಲ್ಲವೆ ಮಡಿ'ದ ಒಂದೇ ಉಳಿದಿದ್ದು. ಆದ್ದರಿಂದ ಮಹಾಯೋಗಿಯೊಬ್ಬ ತಮ್ಮ ದೇಶದ ಜನರಿಗೆ ಸ್ವಾತಂತ್ರ್ಯದ ದೀಕ್ಷೆ ಕೊಟ್ಟ ಹಾಗೆ ಮಾಡುವೆನು ಇಲ್ಲವೆ ಮಡಿಯುವೆನು ಎಂಬ ಮಂತ್ರ ನೀಡಿದ್ದರು. ಆ ಕ್ಷಣದಿಂದ 'ಭಾರತ ಛೋಡೋ' (ಭಾರತ ಬಿಟ್ಟು ತೊಲಗಿ) ಯ ಘೋಷಣೆಯ ಮರುಧ್ವನಿ ದೇಶದ ನಾಲ್ಕೂ ಕಡೆ ಪ್ರತಿಧ್ವನಿಸತೊಡಗಿತು. ಕ್ವಿಟ್ ಇಂಡಿಯಾ ಆಂದೋಳನ ಆರಂಭವಾಯಿತು. ಬೊಂಬಾಯಿಯ ಆ ಧೋಬೀ ಘಾಟ್‌ನಲ್ಲಿ ಪಶ್ಚಿಮದ ಸೂರ್ಯಾಸ್ತ ಸಮಯದಲ್ಲಿ ಬಾಪೂಜಿ ಸ್ವಾತಂತ್ರ್ಯದ ಕೊನೆ ಹೋರಾಟಕ್ಕೆ ಆಮಂತ್ರಣ ನೀಡಿದರು. ರಾಜಾಜಿಗೆ 'ಭಾರತ ಛೋಡೋ'ನ ಬೇಡಿಕೆ ಸರಿಯೆನಿಸಲಿಲ್ಲ. ಆದುದರಿಂದ ಅವರು ಆ ಪ್ರಸ್ತಾವವನ್ನು ಸಮರ್ಥಿಸಲಿಲ್ಲ. ೮ ಆಗಸ್ಟ್ ೧೯೪೮ ರಂದು ಅವರು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದರು. ಅದರಿಂದ ಸರಕಾರ ಅವರನ್ನು ಬಂಧಿಸಲಿಲ್ಲ.

ಬಾಪೂಜಿ ಸಂದೇಶ ಮುಂತಾದ್ದನ್ನು ಬರೆದು ರಾತ್ರಿ ೧೨ ಗಂಟೆಗೆ ನಿದ್ದೆ ಮಾಡಲು ಹೊರಟುಹೋದರು. ಅಜ್ಜಿ ಕೂಡ ಬಹಳ ದಿನಗಳಿಂದ ಅನಾರೋಗ್ಯದಿಂದಿದ್ದರು. ಆಕೆ ನಿದ್ದೆ ಮಾಡಲಾಗಲಿಲ್ಲ. ಸರಕಾರ ಬಂಧಿಸುವುದಿಲ್ಲ ಅಂತ ಬಾಪೂಜಿಗೆ ನಂಬಿಕೆ ಇತ್ತು. ಕಾಂಗ್ರೆಸ್ ಅಧಿವೇಶನ ಮುಗಿಯುವ ವರೆಗಾದರೂ ತಡೆದುಕೊಂಡಿರುತ್ತೆಂದುಕೊಂಡಿದ್ದರು. ಆದರೆ ಮಹಾದೇವ್ ಕಾಕಾಗೆ ಬಂಧನದ ಕಲ್ಪನೆ ಇತ್ತಾದುದರಿಂದ ಅವರ ಮನಸ್ಸಿನಲ್ಲಿ ವ್ಯಾಕುಲತೆ ತುಂಬಿತ್ತು. ಅವರು ತಮ್ಮ

ಆತ್ಮೀಯ ಮಿತ್ರ ಸ್ವಾಮಿ ಆನಂದ ಅವರೊಂದಿಗೆ ಏನಾಗುವುದೋ ಎಂದೆಲ್ಲ ಮಾತನಾಡಿದರು. ತಾವಿಬ್ಬರೂ ಇನ್ನು ಭೇಟಿಯಾಗುವುದೇ ಇಲ್ಲವೇನೋ ಎಂಬಂತೆ ತಮ್ಮ ಜವಾಬ್ದಾರಿಯನ್ನವರಿಗೆ ಅರುಹಿದರು. ಬ್ರಹ್ಮಚಾರಿ ಸ್ವಾಮಿ ತನ್ನ ಆತ್ಮೀಯ ಮಿತ್ರನ ಹಿತನುಡಿಗಳನ್ನು ಕೇಳುತ್ತಾ ಅರ್ಥಮಾಡಿಕೊಳ್ಳುತ್ತಿದ್ದರು. ಇನ್ನು ಸರಕಾರ ಎಂದೆಂದಿಗೂ ಹೊರಬರದಂತೆ ಜೈಲಿಗೆ ದೂಡುವುದೆಂಬ ಕಲ್ಪನೆ ಇತ್ತು. ಕ್ರಾಂತಿಕಾರಿಗಳ ರೀತಿಯಲ್ಲೇ ಬಾಪೂಜಿಯನ್ನು ಕೂಡ ಬ್ರಿಟಿಷ್ ಸರಕಾರ ಆಜೀವನ ಕಾರಾವಾಸಕ್ಕೆ ದೂಡಬಹುದು. ಅಂತಹ ಪರಿಸ್ಥಿತಿಯಲ್ಲಿ ಈ ಅತ್ಯಾಚಾರವನ್ನು ಸಹಿಸದೆ ಬಾಪೂಜಿ ಖಂಡಿತ ಉಪವಾಸ ಹಿಡಿಯುತ್ತಾರೆ. ಈ ಬಾರಿ ಅದು ಆಮರಣ ಉಪವಾಸವಾಗುತ್ತೆ. ಚರ್ಚಿಲ್‌ರ ಕಠೋರ ಹೃದಯದ ಸರಕಾರ ಬಾಪೂಜಿಯನ್ನು ಜೈಲಿನಲ್ಲೇ ಸಾಯುವಂತೆ ಮಾಡುತ್ತದೆ. ಆಗ ದೇಶದ ಗತಿಯೇನು? ಇಷ್ಟೊಂದು ಮಂದಿ ಸಮರ್ಪಿತರಾಗಿರುವ ಜೊತೆಗಾರರು ಬಾಪೂಜಿ ಇಲ್ಲದೆ ಹೇಗೆ ನಿರ್ವಹಿಸುವರು? ಮಹಾದೇವ ಕಾಕಾಗೆ ಇಂತಹ ಕೆಲವು ತರ್ಕ–ವಿತರ್ಕಗಳ ನಡುವೆ ಮಲಗಲಾಗಲಿಲ್ಲ. ರಾತ್ರಿ ಮೂರು ಗಂಟೆಯ ಹೊತ್ತು. ಆಗ ಇಬ್ಬರು ಮಿತ್ರರಿಗೂ ಏನೋ ಶಬ್ದ ಕೇಳಿಸಿತು. ಅವರು ಹೊರಗೆ ತೋಟದೊಳಕ್ಕೆ ಬಂದರು. ಅಲ್ಲಿ ಪೋಲೀಸರ ಗಾಡಿ ನಿಂತಿತ್ತು. ಮಹಾದೇವ ಕಾಕಾನ ಭಯ ಸತ್ಯವಾಯಿತು. ಕಗ್ಗತ್ತಲಿಂದ ಕೂಡಿದ ಭವಿಷ್ಯ, ಬಾಪೂಜಿ ಅವರನ್ನು ಕುರಿತಾದ ಚಿಂತೆಯಿಂದಾಗಿ ಮಹಾದೇವ ಕಾಕಾ ನಡುಗಿದರು. ಅವರು ಮೆಲ್ಲಗೆ ಹೋಗಿ ಬಾಪೂಜಿಯನ್ನು ಎಬ್ಬಿಸಿದರು. ಬಾಪೂಜಿ ಯಾವುದೇ ಚಿಂತೆ ಇಲ್ಲದೆ ಪ್ರಸ್ನನಚಿತ್ತರಾಗಿ ಎದ್ದರು. ಅಂದರು: 'ಕರೆ ಬಂತೇನು?' ಬಾಪೂಜಿ ಸಿದ್ಧವಾದರು. ಅಜ್ಜಿ ಕೂಡ ಎದ್ದು ಕುಳಿತರು, ಸಿದ್ಧವಾಗಿ ಎಲ್ಲರೂ ಹೊರಕ್ಕೆ ಬಂದರು. ಪೋಲೀಸ್ ಕಮೀಷನರನು ವಾರಂಟ್ ತೋರಿಸಿದ. ವಾರಂಟ್ ಬಾಪೂಜಿ ಮತ್ತು ಮಹಾದೇವ್ ಕಾಕಾನ ಹೆಸರಿನಲ್ಲಿತ್ತು. ಅಜ್ಜಿಯ ಬಂಧನದ ವಾರಂಟ್ ಇರಲಿಲ್ಲ. ಬಾಪೂಜಿ ತನ್ನ ರೋಗಿ ಪತ್ನಿಗೆ ಹೇಳಿದರು: 'ನೀನು ಏನು ಮಾಡಬೇಕು, ಬೇಕಾದರೆ ಈಗಲೇ ನನ್ನ ಜೊತೆ ನಡೆ. ಆದರೆ ನಿನಗೆ ವಾರಂಟ್ ಇಲ್ಲ. ಹೊರಗಿದ್ದುಕೊಂಡು ಕೆಲಸ ಮಾಡಬಹುದು. ನಿನ್ನಿಷ್ಟ.' ೭೫ ವರ್ಷದ ವೃದ್ಧೆಯ ಮನಸ್ಥಿತಿ ಹೇಗಿದ್ದಿರಬಹುದು? ಈ ಬಾರಿಯ ಹೋರಾಟ ಮೃತ್ಯುಪರ್ಯಂತದ್ದು. 'ಮಾಡು ಇಲ್ಲವೆ ಮಡಿ'ಯ ಘೋಷಣೆ. ಈ ಅಗ್ನಿಪರೀಕ್ಷೆಯಿಂದ ಯಾರು ತಾನೆ ಹಿಂದಿರುಗಬಲ್ಲರು? ಆ ಪರಮ ಪವಿತ್ರ ಪತಿವ್ರತೆ ಮಹಿಳೆಯ ಮನಸ್ಸಿನಲ್ಲಿ ಪತಿಯ ಜೊತೆಯಲ್ಲಿದ್ದು ಸಾಯುವ ಇಚ್ಛೆ ಇದ್ದಿರಬೇಕು. ಹೊರಗಂತೂ ಇಷ್ಟು ಘಾತಕ ತೊಂದರೆಗಳು; ಅದಕ್ಕಿಂತ ಹೆಚ್ಚಾಗಿ ಒಂಟಿತನ ಆಕೆಯನ್ನು ನುಂಗಿಹಾಕುತ್ತದೆ. ಪುನಃ ಪತಿಯನ್ನು ಯಾವಾಗ ನೋಡುವುದೋ ಎಂಬುದು ಗೊತ್ತಿಲ್ಲ. ಈ ಸರಕಾರವಂತೂ ಅಧರ್ಮದಿಂದ

ಕೂಡಿದೆ. ಕ್ರೂರಿ, ಚರ್ಚಿಲ್ ಸೇಡು ತೀರಿಸಿಕೊಳ್ಳುವುದಕ್ಕೋಸ್ಕರ ಪತಿಯೊಂದಿಗೆ ಭೇಟಿಯಾಗಲು ಬಿಡದಿದ್ದರೆ? ಆಕೆಯಂತೂ ಒಬ್ಬಂಟಿಗಳು, ಏನು ತಾನೇ ಮಾಡಲು ಸಾಧ್ಯ? ಮಹಾದೇವ್ ಕೂಡ ಜೈಲಿಗೆ ಹೋಗುತ್ತಿದ್ದಾನೆ. ಆದರೆ ಉಹುಂ, ತಾನು ದುರ್ಬಲಳಾಗಕೂಡದು. ತನ್ನ ಗಂಡ ಸಂತ, ಆತನಿಗೆ ತಕ್ಕಂತೆ ತಾನೂ ಆಗಬೇಕು. ಯಾವ ಕೆಲಸ ಮಾಡಿ ಪತಿ ಜೈಲಿಗೆ ಹೋಗುತ್ತಿದ್ದಾನೋ ತಾನೂ ಆ ಕೆಲಸವನ್ನೇ ಮಾಡುವಳು. ಆಗ ಸರಕಾರಕ್ಕೆ ಬೇಕೆನಿಸಿದರೆ ಅವಳನ್ನು ಬಂಧಿಸಲಿ, ಆದರೆ ಆವರೆಗೂ ನಾನು ಕರ್ತವ್ಯಚ್ಯುತಳಾಗುವುದಿಲ್ಲ. ಮುಂದೇನಾಗುತ್ತದೆಯೋ ದೇವರಿಗೇ ಗೊತ್ತು. ಆದರೆ ಈಗಂತೂ ಪತಿಯ ಸಹವಾಸದ ಮೋಹವನ್ನು ಬಿಡುವುದೇ ನಮ್ಮ ಕರ್ತವ್ಯ. ನಾಳೆ ಏಕೆ? ಇಂದು ಸಂಜೆಯೇ ಒಂದು ದೊಡ್ಡ ಸಾರ್ವಜನಿಕ ಸಭೆ ಇದೆ. ಬಾಪೂಜಿ ಅಂತೂ ಇರುವುದಿಲ್ಲ. ಜನ ನಿರಾಶೆಯಿಂದ ವ್ಯಾಕುಲರಾಗುತ್ತಾರೆ. ಅವರಿಗೂ ಸಮಾಧಾನ ಹೇಳಬೇಕಲ್ಲ.

ಬಹುಶಃ ಇಂತಹುದೇ ವಿಚಾರಗಳು ಆ ಸತಿ–ಸಾಧ್ವಿಯ ಮನಸ್ಸಿನಲ್ಲಿ ಹುಟ್ಟಿರಬೇಕು. ಅಜ್ಜಿ ಯಾರೊಂದಿಗೂ ಏನೂ ಹೇಳಲಿಲ್ಲ. ಹೇಳುವುದಕ್ಕೆ ಸಮಯ ಸಿಕ್ಕಿದ್ದರೆ ತಾನೆ? ಆದರೆ ಒಂದು ನಿಮಿಷ ಆ ಬಿಡಲಾ ಹೌಸನ ಶಾಂತಿ ನೀರವ ಅಂಗಳದಲ್ಲಿ ಎಲ್ಲರೂ ಸುಮ್ಮನೆ ನಿಂತು ಆ ವೃದ್ಧಳ ಉತ್ತರ ಕಾಯುತ್ತಿದ್ದರು. ಆಗ ಅಜ್ಜಿ ಹೇಳಿದಳು: 'ನೀವು ಹೊರಡಿ, ನನಗಿನ್ನೂ ಕರೆ ಬಂದಿಲ್ಲ. ನಾನು ಹೊರಗೇ ಇದ್ದುಕೊಳ್ಳುತ್ತೇನೆ.' ಬಾಪೂಜಿ ತನ್ನ ರುಗ್ಣಳಾದ, ಧೈರ್ಯವಂತ ಹೆಂಡತಿಯ ದೃಢತೆ, ಧೈರ್ಯವನ್ನು ನೋಡಿ ಗದ್ಗದಿತರಾದರು: "ಚಿಂತಿಸಬೇಡ, ರಾಮ ಇಟ್ಟಲ್ಲಿ ಇರೋಣ, ಇನ್ನೊಮ್ಮೆ ನಾವು ಭೇಟಿಯಾಗಲು ಸಾಧ್ಯವಾಗದಿದ್ದಲ್ಲಿ ಕೂಡ ಜನ್ಮ ಜನ್ಮಾಂತರದಲ್ಲೂ ನಾನು ನಿನ್ನವನೇ ಆಗಿರುತ್ತೇನೆ" ಎಂದರು. ಎಲ್ಲರೂ ಆ ಪ್ರೇಮಿ ದಂಪತಿಗಳ ತ್ಯಾಗಪೂರ್ಣ ಸಂಭಾಷಣೆಯನ್ನು ಸ್ತಬ್ಧರಾಗಿ ಕೇಳಿದರು. ಪೋಲೀಸರ ಗಾಡಿ ಬಾಪೂಜಿ ಮತ್ತು ಮಹಾದೇವ ದೇಸಾಯಿಯನ್ನು ಕರೆದುಕೊಂಡು ಮರೆಯಾಯಿತು.

ಸ್ವಾಮಿ ಕಾಕಾ ಆ ರಾತ್ರಿಯಲ್ಲೇ ಬಿಡಲಾ ಹೌಸ್‌ನಿಂದ ಹೊರಕ್ಕೆ ಬಂದರು. ಅಲ್ಲಿ ಯಾರೋ ಮಿತ್ರನ ಪ್ರೆಸ್‌ನಲ್ಲಿ ಹಿಂದಿನ ದಿನ ಸಂಜೆ ಬಾಪೂಜಿಯ 'ಕರೋ ಯಾ ಮರೋ ('ಮಾಡು ಇಲ್ಲವೇ ಮಡಿ')ಯ ಭಾಷಣವನ್ನು ಮುದ್ರಿಸುವುದಕ್ಕೆಂದು ಕೊಟ್ಟು ಬಂದಿದ್ದರು. ಆ ಪ್ರೆಸ್‌ಗೆ ಹೋಗಿ ಬಾಪೂಜಿಯನ್ನು ಬಂಧಿಸಲಾಯಿತೆಂಬ ಸುದ್ದಿಯನ್ನು ಛಾಪಿಸಿ, ಬೆಳಗಾಗುವ ಮೊದಲು, ಸರಕಾರ ಎಚ್ಚರಗೊಳ್ಳಲು ಮುಂಚೆ, ಆ ಭಾಷಣದ ೧೦೦೦೦ ಪ್ರತಿಗಳನ್ನು ಅಲ್ಲಿ ಓಡಾಡುತ್ತಿದ್ದ ಪ್ರತಿಯೊಬ್ಬ ವ್ಯಕ್ತಿಗೂ ಹಂಚಲಾಯಿತು. ಕೆಲವು ಪ್ರತಿಗಳನ್ನು ಟ್ರೈನ್‌ನಲ್ಲಿ ಅಪರಿಚಿತ ಪ್ರಯಾಣಿಕರ ಕೈಗಳಲ್ಲಿ, ದೆಹಲಿ, ಅಹಮದಾಬಾದಿನ ಕಲ್ಕತ್ತಾಗೆ ಕಳುಹಿಸಲಾಯಿತು. ಸರಕಾರ ಅತ್ಯಾಚಾರದ

ಎಲ್ಲೆ ಮೀರಿ ಗಾಂಧೀಜಿಯನ್ನು ಹಿಡಿದುಹಾಕಿದೆಯೆಂಬ ಸುದ್ದಿ ರಾತ್ರಿಯಲ್ಲೇ ನಗರದಲ್ಲಿ ಹರಡಿತು. ಬೆಳಗಿನಿಂದಲೇ ಜನ ತಮ್ಮ ಕೆಲಸಗಳನ್ನು ಬಿಟ್ಟು ರಸ್ತೆಗಳ ಮೂಲೆಗಳಿಂದಲೂ ಹೊರಟುಬಂದರು. ಈಗ ಅವರಿಗೆ ಬಂಧನದ್ದಾಗಲೀ, ಲಾಠಿ ಏಟು, ಸಾವಿನ ಯಾವ ಭಯವೂ ಇರಲಿಲ್ಲ. ಪರಮ ಪವಿತ್ರ ನಾಯಕನನ್ನೇ ಸರಕಾರ ಕರೆದೊಯ್ದಿತ್ತು ಅಂದ ಮೇಲೆ ಇನ್ನೂ ಹೆಚ್ಚಿನದೇನಾಗುವುದಿತ್ತು. ಸಂಜೆ ಅಜ್ಜಿ ಸಾರ್ವಜನಿಕ ಸಭೆಗೆ ಹೋದಳು. ಜೀವನವಿಡೀ ಗಂಡನ ಆಶ್ರಯದಲ್ಲೇ ಇದ್ದ ಈ ವೃದ್ಧೆ ಜೀವನದಲ್ಲೆಂದೂ ಬಾಯಿ ತೆರೆದಿರದಿದ್ದವಳು. ಈ ಸಂದರ್ಭದಲ್ಲಿ ಬೊಂಬಾಯಿಯ ಆ ವೇದಿಕೆಯಿಂದ ತನ್ನ ಪುತ್ರರಂತಿದ್ದ ಸಮಾಜವನ್ನು ಒಬ್ಬ ತಾಯಿಯಂತೆ ಹರಕು–ಮುರಕು ಭಾಷೆಯಲ್ಲಿ ಸಂಬೋಧಿಸಿ ಮಾತನಾಡಿದಳು. "ನನ್ನ ಪತಿ(ತಮ್ಮ ಬಾಪೂಜಿ)ಯನ್ನಂತೂ ಸರಕಾರ ಕರೆದೊಯ್ದಿದೆ, ಎಲ್ಲಿಗೆ? ನನಗೆ ಗೊತ್ತಿಲ್ಲ. ಆದರೆ ಮಾರ್ಗ ಸ್ಪಷ್ಟವಾಗಿ ಗೊತ್ತಿದೆ, ಸ್ವಾತಂತ್ರ್ಯಕ್ಕಾಗಿ ಏನಾದರೂ ಮಾಡಬೇಕು, ಇಲ್ಲವೇ ಮಡಿಯಬೇಕು. ಹಿಂದಿರುಗುವ ಮಾತೇ ಇಲ್ಲ. ನೀವು ಬಾಪೂಜಿಯ ಸಂದೇಶವನ್ನು ಅನುಸರಿಸುವಿರೆಂಬ ನಂಬಿಕೆ ನನಗಿದೆ. ಸಾಯುವುದೇ ಆದರೆ ವಿಪತ್ತಿಗಾಗಿ ಹೆದರುವುದೇಕೆ ? ದೇವರು ಮಾಡಿದಂತಾಗಲಿ, ಸಹಿಸೋಣ, ಆದರೆ ಸಂಧಿ ಮಾಡಿಕೊಳ್ಳುವುದಿಲ್ಲ" ಬೊಂಬಾಯಿ ಮಹಾನಗರದ ಶ್ರೋತೃಗಳು ಈ ವೃದ್ಧೆಯ ಅರ್ಧ ಗುಜರಾತ್ ಮಿಶ್ರಿತ ಹಿಂದೂಸ್ತಾನಿಯ ಭಾಷಣ ಕೇಳಿದರು. ಉತ್ಸಾಹ ಮತ್ತು ಧೈರ್ಯ ಜನರ ಹೃದಯಾಂತರಾಳದಲ್ಲಿ ಮೂಡಿತು. ಹರ್ಷಧ್ವನಿಯಿಂದ 'ಮಾಡುವೆವು, ಇಲ್ಲವೆ ಮಡಿಯುವೆವು' ಎಂಬ ಮಾತು ಜನರ ಚಪ್ಪಾಳೆಯಿಂದ ಆ ಮಹಾನಗರದ ರಾಜಮಾರ್ಗಗಳಲ್ಲಿ ಪ್ರತಿಧ್ವನಿಸಿತು. ವೇದಿಕೆಯ ಕೆಳಗೇ ಪೋಲೀಸ್ ಕಮೀಷನರ್ ಇದ್ದರು. ಬಿಡಲಾ ಹೌಸನಿಂದ ಅಜ್ಜಿ ಸಾಮಾನನ್ನು ಜೊತೆಯಲ್ಲೇ ತಂದಿದ್ದರು. ತಕ್ಷಣ ಅಜ್ಜಿಯನ್ನು ಬಂಧಿಸಿ ಆರ್ಥರ್ ರೋಡ್‌ನ ಬೊಂಬಾಯಿಯ ಸೆಂಟ್ರಲ್ ಜೈಲಿನಲ್ಲಿ ಇಟ್ಟರು. ದಿನವಿಡೀ ಚಿಂತೆ, ರೋಗ ಮತ್ತೆ ೪೮ ಗಂಟೆಗಳ ಕಾಲ ನಿದ್ದೆ ಇಲ್ಲದ ಪರಿಶ್ರಮ– ಇವೆಲ್ಲಾ ಕಾರಣದಿಂದಾಗಿ ಅಜ್ಜಿ ತೀರ ಆಯಾಸಗೊಂಡಿದ್ದಳು. ಅವರಿಗೆ ಜ್ವರ ಬಂತು. ಚಿಂತೆಯಿಂದ ಡಯೇರಿಯ ಕೂಡ ಆಯಿತು. ಡಾ॥ ಸುಶೀಲಾ ನಯ್ಯರ್ ಕೂಡ ಅಜ್ಜಿಯ ಜೊತೆ ಇದ್ದುದು ಸರಕಾರದ ಕೃಪೆ ಅನ್ನಬೇಕು. ಅವರು ಎರಡು ದಿನ ಎರಡು ರಾತ್ರಿ ಆರ್ಥರ್ ರೋಡ್‌ನಲ್ಲೇ ಅಜ್ಜಿಯ ಸೇವೆ ಮಾಡಿದರು. ಆದರೆ ಆ ವೃದ್ಧ ಮಹಿಳೆಯ ರೋಗಕ್ಕೆ ಡಾಕ್ಟರ್‌ರ ಶುಶ್ರೂಷೆಯ ಅಗತ್ಯವಿರಲಿಲ್ಲ. ಎರಡೇ ದಿನಗಳಲ್ಲಿ ನಮ್ಮ ಈ ನಾಜೂಕಾಗಿದ್ದ ಅಜ್ಜಿ ಕೊಡವಿಕೊಂಡೆದ್ದಳು. ಆಗ ಸರಕಾರ ಅವರಿಬ್ಬರನ್ನೂ ಎಲ್ಲೋ ಮೋಟಾರಿನಲ್ಲಿ ಕರೆದುಕೊಂಡು ಹೋಯಿತು. ಖಡಕಿ ಸ್ಟೇಷನ್‌ನ ನೋಡಿ ಸುಶೀಲಾ ಬಹನ್‌ಗೆ ತಾವು ಪೂನಾ ಸ್ಟೇಷನ್ ಬಳಿ ಇದ್ದೇವೆಂದು ಅರ್ಥವಾಯಿತು. ಬೆಳಗಿನ

ಹೊತ್ತಿಗೆ ಅಜ್ಜಿ ಮತ್ತು ಸುಶೀಲಾ ಬಹನ್ ಇಬ್ಬರನ್ನೂ ಭವ್ಯವಾದ ಆಗಾಖಾನ್ ಮಹಲಿಗೆ ತಂದರು. ಅಲ್ಲಿ ಬಾಪೂಜಿ ಮಹಾದೇವ ಕಾಕಾ, ಮೀರಾ ಬಹನ್, ಸರೋಜಿನಿ ನಾಯ್ಡು ಕೂಡ ಇದ್ದರು. ಅಜ್ಜಿಯ ಸ್ಥಿತಿಯನ್ನು ನೋಡಿ ಎಲ್ಲರಿಗೂ ಚಿಂತೆಯಾಯಿತು. ಬಾಪೂಜಿ ನಕ್ಕು ತಮಾಷೆ ಮಾಡಿದರು. 'ನಿನಗೆ ಹೊರಗಿರಕ್ಕಾಗಲಿಲ್ಲವೇನು? ಸರಕಾರವನ್ನು ಬೇಡಿ ನೀನಿಲ್ಲಿಗೆ ಬಂದಿಲ್ಲ ತಾನೆ?' ಅಜ್ಜಿ ಮೃದುವಾಗಿ ನಕ್ಕು ತನ್ನ ಪತಿಯ ವಿನೋದವನ್ನು ಹಾರಿಸಿಬಿಟ್ಟಳು. ಈಗ ಆಕೆಗೇನೂ ತೊಂದರೆ ಇರಲಿಲ್ಲ. ಸರಕಾರ ಏನು ಬೇಕಾದರೂ ಮಾಡಿಕೊಳ್ಳಲಿ. ಆಕೆಯಂತೂ ತನ್ನ ಪತಿಯ ಬಳಿ ಇದ್ದಳು.

ಆಗಾಖಾನರ ಬಂಗಲೆ ಬಂಗಲೆಯಾಗಿದ್ದರೂ, ಅದಕ್ಕೆ ನಾಲ್ಕೂ ಕಡೆ ೧೫ ಅಡಿ ಎತ್ತರದ ಮುಳ್ಳು ಬೇಲಿ ಹಾಕಿದ್ದರು. ನಾಲ್ಕೂ ಕಡೆ ಶಸ್ತ್ರಸಜ್ಜಿತರಾದ ಸೈನಿಕರ ಪಹರೆ ಇಟ್ಟಿದ್ದರು. ಇದು ಮಹಲ್ ಅಲ್ಲ. ಕಾರಾಗೃಹ. ಸೇವಾಗ್ರಾಮದ ಗುಡಿಸಲಲ್ಲಿ ಮುಕ್ತವಾಗಿ ಸುತ್ತಾಡುವ ಈ ಸತ್ಯ ಪ್ರೇಮಿಗಳಿಗೆ ಆ ಪ್ಯಾಲೆಸಿನ ವೈಭವ ರತ್ನಗಂಬಳಿ, ನೇತಾಡುವ ಬುಗುಡಿಗಳು, ಮಣ್ಣಿನ ಹಂಡೆಗಳು, ಜಮಖಾನೆಗಳು ಬೇಡದ ವಸ್ತುಗಳಾಗಿದ್ದವು ಬಾಪೂಜಿ ಮತ್ತು ಅಜ್ಜಿ ಜೊತೆ ಸರಕಾರ ಕಾಂಗ್ರೆಸ್ ಕಾರ್ಯಕಾರಿಣಿಯ ಸದಸ್ಯರನ್ನು– ಎಲ್ಲಾ ಚಿಕ್ಕ ದೊಡ್ಡ ಮುಖಂಡರನ್ನು– ಬಂಧಿಸಿತ್ತು. ಈ ಬಾರಿ ಅಪರಾಧ ಹೊರಿಸಿ ಕೇಸ್ ಹಾಕುವುದು ಮುಂತಾದ ಯಾವ ಶಿಷ್ಟಾಚಾರವನ್ನೂ ಅನುಸರಿಸಲಿಲ್ಲ. ತಪ್ಪೇ ಇಲ್ಲದೆ ಜನರನ್ನು ಅನಿಶ್ಚಿತ ಅವಧಿವರೆಗೆಂದು ಜೈಲಿಗೆ ಹಾಕಿದರು. ಆರಂಭದಲ್ಲಂತೂ ಯಾರು ಎಲ್ಲಿದ್ದಾರೆಂದೂ ಗೊತ್ತಿರಲಿಲ್ಲ. ಒಬ್ಬ ನೌಕರ, ವಾರ್ಡರ್, ಸಿಪಾಯಿ ಅಥವಾ ದನಕಾಯುವವನ ಬಾಯಿಂದ ಕೂಡ ಗಾಳಿ ಮಾತು ಹರಡಬೇಕೆಂದರೂ ಸ್ವಲ್ಪ ಸಮಯ ಹಿಡಿಯುತ್ತೆ, ಅದರಿಂದ ಆಗಸ್ಟಿನ ಆ ೮–೧೦ ದಿನಗಳು ಚಿಂತೆಯಲ್ಲೇ ಕಳೆದವು. ಪತ್ರಿಕೆಗಳ ಮೇಲೆ ಸೆನ್ಸಾರ್ ಹಾಕಿದ್ದುದರಿಂದ ಸುದ್ದಿ ಸಿಗುವುದೇ ಕಷ್ಟವಾಗಿತ್ತು. ಆಗ ನಾಗಪುರದಲ್ಲಿ ನಮ್ಮ ತಂದೆ ರಾತ್ರೋ ರಾತ್ರಿ ಕೊಠಡಿಯಲ್ಲೇ ಠಳಾಯಿಸುತ್ತಿದ್ದರು. ಅವರು ನಮಗೋಸ್ಕರ ಅದರಲ್ಲೂ ನನಗೋಸ್ಕರ ಈ ಸಾರಿ ಜೈಲಿಗೆ ಹೋಗಿರಲಿಲ್ಲ. ಅವರ ತಾಯಿ, ತಂದೆ ಮತ್ತು ಆತ್ಮೀಯ ಮಿತ್ರ ಮಹಾದೇವ ಭಾಯಿ ಎಲ್ಲರೂ ಜೈಲಿನಲ್ಲಿದ್ದರು. ಅವರುಗಳು ಎಲ್ಲಿದ್ದರೆಂದು ಕೂಡ ಗೊತ್ತಿರಲಿಲ್ಲ. ಅಂಡಮಾನ್? ಮಾಂಡಲೇ ? ಅಥವಾ ಇನ್ನೆಲ್ಲಾದರೂ?

ಬಂಧನಕ್ಕೊಳಗಾಗುವುದಕ್ಕೆ ಮುಂಚೆ ಆ ಸಭೆಯಲ್ಲಿ ಗಾಂಧೀಜಿಯವರು ನಾವು ಮುಖಂಡರೆಲ್ಲರೂ ಬಂಧನಕ್ಕೊಳಗಾದರೆ ನೀವು ನಿಮ್ಮ ಬುದ್ಧಿ ಹೇಳಿದ ಹಾಗೆ ಕೆಲಸ ಮಾಡಿ ಅಂತ ಜನರಿಗೆ ಹೇಳಿದರು. ೧೯೪೨ರಲ್ಲಿ ಹೋರಾಟ ಹುಟ್ಟುಹಾಕುವುದಕ್ಕೆ ತಕ್ಕಂತಹ ವಾತಾವರಣ ಇರಲಿಲ್ಲ ಅಂತ ಬಾಪೂಜಿಗೆ

ಅನಿಸಿತ್ತು. ಆದರೆ ಜಪಾನ್ ಆಕ್ರಮಣ ಮಾಡುವಂಥ ವಾಸ್ತವಿಕ ಪರಿಸ್ಥಿತಿ ಇದ್ದಾಗ, ಜನರ ಆಸೆ ಆಕಾಂಕ್ಷೆಗಳ ವಿಷಯವಾಗಿ ರಾಜ್ಯದ ನಿರಾಸಕ್ತಿ ನಿರ್ದಯತೆ ಇವುಗಳಿಂದಾಗಿ ಜನರು ಬೇಕೆನಿಸಿದಾಗ ವಿಚಾರ ವಿನಿಮಯ ಮಾಡುಕೊಳ್ಳಬಹುದಾದಂಥ ವಾತಾವರಣವನ್ನೇ ಹಾಳುಮಾಡಿಬಿಟ್ಟಿತ್ತು. ಬಾಪೂಜಿ ದೇಶದ ಭವಿಷ್ಯದ ನೀತಿ ನಿರ್ಧಾರಕರಾಗಿದ್ದರು. ದೇಶದ ಜನ ಈ ದೊಡ್ಡ ಜವಾಬ್ದಾರಿಯನ್ನು ಅವರ ಮೇಲೆ ಹೊರಿಸಿದ್ದರು. ಅಂತಹ ಸ್ಥಿತಿ ಇರುವಾಗ ಬಾಪೂಜಿ ಪಂಚಾಂಗ ತೆಗೆದಿಟ್ಟುಕೊಂಡು ಶುಭಗಳಿಗೆ ಶುಭಮುಹೂರ್ತ ಕಾಯುತ್ತಾ ಕುಳಿತುಕೊಳ್ಳುವಂತಿರಲಿಲ್ಲ. ಅಸಹಕಾರದ ಚಳವಳಿಗೆ ಸಿದ್ಧವಾಗಿರಲಿಲ್ಲವೆಂದು ಬಾಪೂಜಿಗೆ ಗೊತ್ತಿತ್ತು. ಸೈನ್ಯ ಸಿದ್ಧವಾಗಿರಬಹುದು. ಇಲ್ಲದಿರಬಹುದು. ಆದರೆ ಸಮಯ ಬಂದ ತಕ್ಷಣ ತನ್ನ ಪ್ರಾಣವನ್ನೇ ಮುಡುಪಿಟ್ಟು ಯುದ್ಧಕ್ಷೇತ್ರದಲ್ಲಿ ಹಠ ಮಾಡಿ ನಿಂತುಕೊಳ್ಳುವುದು, ಒಬ್ಬ ಸೇನಾಧಿಪತಿಯ ಕರ್ತವ್ಯವಾಗಿರುತ್ತೆ. ಸಮಯ ಬಂದಿರುವಾಗ ಸಡಿಲವಾಗಿದ್ದರೆ, ನಡೆಯುವುದಿಲ್ಲ. ಗಾಂಧೀಜಿ ಮಾಡಿದ್ದೂ ಅಷ್ಟೆ. ಅವರ ಮಿತ್ರರು ಅವರನ್ನು ವಿರೋಧಿಸಿದರು. ಆಗ ಬಾಪೂಜಿಗೆ ಅವರಿಗೆ ಹೇಳಿದರು: "ಪ್ರಪಂಚ ಇಡಿಯಾಗಿ ನನ್ನ ವಿರೋಧಿಸಿದರೂ, ಇಡೀ ದೇಶ ನನ್ನನ್ನು ಹುಚ್ಚನೆಂದು ಕರೆದರೂ ಸರಿ; ನಾನು ಒಂಟಿಯಾಗಿ ಕೂಡ ಸರಕಾರದೊಂದಿಗೆ ಹೋರಾಟ ಮಾಡುತ್ತೇನೆ. ಈ ಹೋರಾಟ ದೇಶಕ್ಕಷ್ಟೆ ಸೀಮಿತವಾಗಿಲ್ಲ, ಇಡೀ ಪ್ರಪಂಚದ್ದು." ಈ ದೃಢ ನಿಶ್ಚಯದಿಂದ ಬಾಪೂಜಿ ತನ್ನ ಪ್ರತಿಯೊಬ್ಬ ಸಹಕಾರ್ಯಕರ್ತನಿಗೂ ತಿಳಿಯ ಹೇಳಿ ಅವರ ಸಹಕಾರವನ್ನು ಪಡೆದಿದ್ದರು.

ದೇಶದ ಜನರಿಗೂ ಕಳೆದ ೨೦ ವರ್ಷಗಳಿಂದ ತಮ್ಮ ಸೇನಾಧಿಪತಿ, ಅವನ ನಿಷ್ಠೆ ಎರಡೂ ಗೊತ್ತಿತ್ತು. ಅವರು ತಮ್ಮ ನಾಯಕನ 'ಮಾಡು ಇಲ್ಲವೆ ಮಡಿ' ಸಂದೇಶವನ್ನು ತಲೆಬಾಗಿ ಸ್ವೀಕರಿಸಿದರು. ಬಾಪೂಜಿ ಕೊನೆಯಲ್ಲಿ ಈ 'ಮಾಡು ಇಲ್ಲವೇ ಮಡಿ' ಕೊನೆಯ ಹೋರಾಟವಾಗುತ್ತದೆಂದು ತಿಳಿದಿದ್ದರು. ಅನೈತಿಕ ಸರಕಾರದೆದುರು ಇದೊಂದು ನೈತಿಕ ಹೋರಾಟವಾಗಿತ್ತು. ಇಂತಹ ಸ್ಥಿತಿಯಲ್ಲಿ ದೇಶ ತನ್ನ ಪೌರುಷವನ್ನು ತೋರದಿದ್ದರೆ ದೇಶದ ಆತ್ಮದ ನಾಶವಾಗುತ್ತೆ, ಈ ರಾಕ್ಷಸ ರಾಜ್ಯಕ್ಕೆ ಯಾವ ಮರ್ಯಾದೆಯೂ ಇಲ್ಲ. ಆದ್ದರಿಂದ ಮುಖಂಡರು ಇಲ್ಲದೆ ಇದ್ದಾಗ ಪ್ರತಿಯೊಬ್ಬ ಪ್ರಜೆ ಕೂಡ ತನ್ನ ಮುಖಂಡ ತಾನೇ ಆಗಿರುತ್ತಿದ್ದ. ಪ್ರತಿಯೊಬ್ಬ ಸತ್ಯಾಗ್ರಹಿಯೂ ಅಹಿಂಸೆಯನ್ನು ಆಧಾರವಾಗಿ ಇಟ್ಟುಕೊಂಡು ಅಂತರಾತ್ಮನ ಆದೇಶದ ಮೇರೆಗೆ ಸರಕಾರವನ್ನು ವಿರೋಧಿಸಬೇಕು, ೨೧ ವರ್ಷಗಳಿಂದ ಸತ್ಯಾಗ್ರಹ ಮತ್ತು ಸವಿನಯ ಆಂದೋಳನದಲ್ಲಿ ಅನುಭವಸ್ಥರಾದ ಭಾರತೀಯ ನಾಗರಿಕರು ಬುದ್ಧಿ ಮತ್ತು ಧೈರ್ಯದಲ್ಲಿ ಬೆಳೆದಿದ್ದರು. ಈಗ ತಮ್ಮ ಕರ್ತವ್ಯ ನಿರ್ಧರಿಸುವ ಯೋಗ್ಯತೆ ಪಡೆದಿದ್ದರು. ಈ ಭಾಷಣದಲ್ಲೇ ಬಾಪೂಜಿ,

'ನಾನು ೧೨೫ ವರ್ಷ ಬದುಕಿದ್ದು ಆವರೆಗೂ ದೇಶಸೇವೆ ಮಾಡುತ್ತಾ ಇರಬಯಸುತ್ತೇನೆ' ಎಂದು ಹೇಳಿದ್ದರು.

ಸರಕಾರ ಕಾಂಗ್ರೆಸ್‌ನ 'ಭಾರತ ಬಿಟ್ಟು ತೊಲಗಿ' ಯ ಪ್ರಸ್ತಾವವನ್ನು ತಿರಸ್ಕರಿಸಿತು. ಪ್ರಧಾನ ಮಂತ್ರಿಯಾಗಿದ್ದ ಚರ್ಚಿಲ್‌ನ್ನು ಬ್ರಿಟಿಷ್ ಪಾರ್ಲಿಮೆಂಟ್ ಎದುರು, 'ಚಕ್ರವರ್ತಿಗಳು ನನ್ನನ್ನು ಈ ರಾಜ್ಯವನ್ನು ಹಾಳಮಾಡಲಾಗಲೀ, ಮುಗಿಸುವುದಕ್ಕಾಗಲಿ ಪ್ರಧಾನ ಮಂತ್ರಿಯಾಗಿ ನೇಮಿಸಿಲ್ಲ' ಎಂದು ಹೇಳಿದ್ದ. ದೇಶದ ಜನಪ್ರಿಯ ಮುಖಂಡರು ಆಗ ಎಲ್ಲಿ ಹೋಗಿದ್ದರೋ ಅವರನ್ನೆಲ್ಲಾ ಎಲ್ಲಿ ಬಂಧನದಲ್ಲಿಟ್ಟಿದ್ದರೋ ಗೊತ್ತಿಲ್ಲ. ಸಾಕ್ಷ್ಯಾಧಾರಿತ ಸಮಾಚಾರ ಇಲ್ಲದಿದ್ದುದರಿಂದ ಬೇಕಾದಷ್ಟು ವದಂತಿಗಳು ಹುಟ್ಟಿಕೊಳ್ಳುತ್ತಿದ್ದವು. ಯಾರೋ ಗಡೀಪಾರು ಮಾಡಿದ್ದಾರೆಂದು ಹೇಳಿದರೆ, ಇನ್ಯಾರೋ ಖಂಡಿತ ಗಲ್ಲಿಗೇರಿಸುತ್ತಾರೆಂದೂ, ಇನ್ನು ಕೆಲವರು ಕೈಕಾಲಿಗೆ ಬೇಡಿ ತೊಡಿಸಿ ಜೈಲಿನಲ್ಲಿ ಬಂಧಿಸಿಟ್ಟಿದ್ದಾರೆ ಎಂದೆಲ್ಲಾ ಜನ ಹೇಳುತ್ತಿದ್ದರು. ತಮ್ಮ ಪ್ರೀತಿಯ ಮುಖಂಡರನ್ನು ದಂಡಿಸಿ ಹಿಂಸಿಸುತ್ತಿದ್ದಾರೆಂಬ ಸುದ್ದಿ ಕೇಳಿ ಜನರು ಕಂಗಾಲಾದರು. ಸರಕಾರ ಯೋಚಿಸಿದ್ದುದೇ ಬೇರೆ, ದಂಗೆಕೋರ ಮುಖಂಡರನ್ನು ಬಂಧಿಸಿ, ಬಡಪಾಯಿಗಳಾದ ಜನರ ಮೇಲೆ ದಬ್ಬಾಳಿಕೆ ನಡೆಸಿದಾಗ ಮುಖಂಡನಿಲ್ಲದ ಅಶಿಕ್ಷಿತ ಜನರ ಧೈರ್ಯ ಕುಂದಿಹೋಗುತ್ತೆ. ದಲಿತ ಬಡಜನ ಸ್ವಾತಂತ್ರ್ಯದ ಸ್ವಪ್ನ ಮತ್ತು ಕ್ರಾಂತಿಯ ಶೌರ್ಯವನ್ನು ಮರೆಯುತ್ತಾರೆ ಅಂತ ಸರಕಾರ ಯೋಚಿಸಿತ್ತು. ಇಲ್ಲಿ ಚರ್ಚಿಲ್ ಸರಕಾರದ್ದು ತಪ್ಪು ಎಣಿಕೆಯಾಯ್ತು, ದೇಶದ ಜನ ದಂಗೆ ಎದ್ದರು. ಅದರಿಂದ ತಮಗೇನೂ ನಷ್ಟವಾಗುವುದಿಲ್ಲ ಅಂತ ಅವರಿಗೆ ಗೊತ್ತಿತ್ತು. ಹೇಗೂ ಅವರು ಸರಕಾರದ ಮುಷ್ಟಿಯಲ್ಲಿ ಸಿಕ್ಕಿ ಹಿಂಜಿ ಹೋಗುತ್ತಲೇ ಇದ್ದವರು. ಎಲ್ಲವೂ ಕಡಿದು ಹೋಗುವುದಾದಲ್ಲಿ ದಾಸ್ಯದ ಬೇಡಿಯೂ ಮುರಿಯಲೇಬೇಕಿತ್ತು. ಈ ಬೇಡಿಗಳಲ್ಲದೆ ಅವರ ಬಳಿ ಕಳೆದುಕೊಳ್ಳಲು, ಕಡಿದು ಹೋಗಲು, ಹಾಳಾಗಲು ಮತ್ತೇನೂ ಉಳಿದಿರಲಿಲ್ಲ .

೯ ಆಗಸ್ಟ್‌ನ ಅಹಿಂಸಾತ್ಮಕ ಕ್ರಾಂತಿಯ ನಡುವೆ ಹಿಂಸೆಯ ಘಟನೆಗಳು ಕೂಡ ನಡೆದವು. ರೈಲು ಹಳಿಗಳು ಕಿತ್ತವು. ದಂಗೆಯಾಯಿತು. ಪೋಸ್ಟಾಫೀಸು ಪೋಲೀಸ್ ಪೋಸ್ಟ್‌ಗಳು ಸುಟ್ಟವು. ಬಂಧನದಿಂದ ತಪ್ಪಿಸಿಕೊಂಡು ಅಚ್ಯುತ ಪಟವರ್ಧನ್, ಅರುಣಾ ಆಸಫ್ ಅಲಿಯಂತಹ ಯುವ ನೇತಾರರು ಬಚ್ಚಿಟ್ಟುಕೊಂಡರು. ಜಯಪ್ರಕಾಶ ನಾರಾಯಣ್ ಜೈಲಿನಿಂದ ತಪ್ಪಿಸಿಕೊಂಡು ಓಡಿದರು. ನಾಪತ್ತೆಯಾದರು. ಈ ಹಿಂಸೆಯಿಂದ ಸರಕಾರಕ್ಕೆ ಕುತ್ತಿಗೆಗೆ ಬಂತು, ಈ ಚಿಕ್ಕ ಪುಟ್ಟ ಹಿಂಸೆಗೆ ಬದಲಾಗಿ ಸರಕಾರ ಬಹಿರಂಗವಾಗಿ ದಮನ ಶುರುಮಾಡಿತು. ಶಾಂತ ಮೆರವಣಿಗೆಯ ಮೇಲೆ ಬಂದೂಕು ಹಾರಿಸಿದರು. ಸಾವಿರಾರು ಮಕ್ಕಳು ಮಣ್ಣಾದರು. ಅವರ ರಕ್ತದಿಂದ ಭೂಮಿ ರಕ್ತರಂಜಿತವಾಯಿತು. ಬ್ರಿಟಿಷ್ ರಾಜ್ಯದ ಸೆರಗು

ನಿರಪರಾಧಿಗಳ ರಕ್ತದಿಂದ ತುಂಬಿ ಹೋಯಿತು. ಆಗಿನ ಮಧ್ಯಪ್ರಾಂತದಲ್ಲಿ ಚಿಮ್ಮೂರ್ ಅಷ್ಠಿ ಬಳಿ ಬಿಳಿ ಪ್ಲೆಟೂನಿನ ಸೈನಿಕರು ಮಹಿಳೆಯರ ಮಾನಭಂಗ ಮಾಡಿದರು. ಅವರ ಮೇಲೆ ಅತ್ಯಾಚಾರವೆಸಗಿದರು. ಉರಿಯುವ ಸಿಗರೇಟ್‌ನಿಂದ ಅವರ ಶರೀರವನ್ನು ಸುಟ್ಟರು. ಇಂತಹವುಗಳ ಮೇಲೆ ದೊಡ್ಡ ಪುಸ್ತಕವನ್ನೇ ಬರೆಯಬಹುದು, ಆದರೆ ಅನಾಚಾರದ ಒಂದು ಘಟನೆಯ ವರ್ಣನೆ ಕೂಡ ಸಾಕಾಗುತ್ತದೆ.

ನಾಗಪುರದಲ್ಲಿ ನಮ್ಮ ನೆರೆಮನೆಯಲ್ಲಿ ಫಾರೆಸ್ಟ್ ಆಫೀಸರ್ ರೇವಾ ಶಂಕರ್ ಎಂಬ ಒಬ್ಬರು ವಾಸವಾಗಿದ್ದರು. ಕಡು ಬಡತನದ ನಡುವೆ ಬಹಳ ನಿಷ್ಠೆಯಿಂದ ಅವರು ತಮ್ಮ ಮಕ್ಕಳನ್ನು ಬೆಳೆಸಿದ್ದರು. ಚಿಕ್ಕವನು ಉಮಾಶಂಕರ್, ಅವನನ್ನು ಇಂಜಿನಿಯರ್ ಮಾಡಿಸಿದರು. ಸರಸ್ವತಿ ಇದ್ದ ಹಾಗಿದ್ದ ಒಬ್ಬ ಹುಡುಗಿಯನ್ನು ತಂದು ಅವನಿಗೆ ಮದುವೆ ಮಾಡಿದರು. ಉಮಾಶಂಕರ್ ಒಳ್ಳೆ ಸಂಬಳಕ್ಕೆ ಕಿರ್ಲೋಸ್ಕರ ಕಾರಖಾನೆಯಲ್ಲಿ ಪೂನಾದಲ್ಲಿ ಕೆಲಸ ಮಾಡುತ್ತಿದ್ದರು. ಇನ್ನೂ ಒಂದು ವರ್ಷ ಕೂಡ ಆಗಿರಲಿಲ್ಲ. ಆಗ ತಾನೇ ಮದುವೆಯಾಗಿದ್ದ ಹೆಂಡತಿ ಒಂದು ಗಂಡು ಮಗುವಿನ ತಾಯಿ ಆದಳು. ಉಮಾಶಂಕರನನ್ನು ಸ್ನೇಹಿತರು ಅಭಿನಂದಿಸಿದರು. ಮಿಠಾಯಿ ಹಂಚಿದರು. ಮಗುವಿಗೆ ಇನ್ನೂ ೧೨ ದಿನಗಳು ಕೂಡ ಆಗಿರಲಿಲ್ಲ. ನಾಮಕರಣ ಮಾಡಬೇಕಾಗಿತ್ತು. ಅಷ್ಟರಲ್ಲೇ ೯ನೇ ಆಗಸ್ಟ್ 'ಮಾಡುವೆವು ಇಲ್ಲವೇ ಮಡಿಯುವೆವು'ನ ಘೋಷಣೆಯನ್ನು ಕೇಳಿ ಕಿರ್ಲೋಸ್ಕರ್ ಫ್ಯಾಕ್ಟರಿಯಲ್ಲಿ ಕಾರ್ಮಿಕರು ಮತ್ತು ಕಾರ್ಯಕರ್ತರು ಹರತಾಳ ಆರಂಭಿಸಿದರು. ಗಾಂಧೀಜಿ ಮತ್ತು ನಾಯಕರುಗಳನ್ನು ಬಂಧಿಸಿದ್ದನ್ನು ವಿರೋಧಿಸಿ ಒಂದು ದೊಡ್ಡ ಮೆರವಣಿಗೆ ಹೊರಟಿತು. ಉಮಾಶಂಕರನಿಗೆ ಅವನ ಸ್ನೇಹಿತರು, ನಿನಗೆ ಈಗಿನ್ನೂ ಮದುವೆಯಾಗಿದೆ. ಇದರಲ್ಲೆಲ್ಲಾ ಸೇರಬೇಡ. ಸರಕಾರದ ಹಿಡಿತ ಮಿತಿ ಮೀರಿ ಹೋಗಿದೆ. ಸುಮ್ಮ-ಸುಮ್ಮನೆ ಏಟು ತಿನ್ನಬೇಕಾಗುತ್ತದೆ, ಕೈಕಾಲು ಮುರಿಯುತ್ತೆ, ಬೇಡ ಎಂದು ಹೇಳಿದರು. ಆದರೆ ಉಮಾಶಂಕರ್ ನನ್ನ ಕಾರ್ಮಿಕಮಿತ್ರರು ಎಲ್ಲಿದ್ದರೆ ನಾನೂ ಅಲ್ಲೇ ಇರುತ್ತೀನಿ, ಅವರಿಗೆ ನೇತೃತ್ವ ನೀಡಬೇಕಾದ್ದು ನನ್ನ ಕರ್ತವ್ಯ ಎಂದ. ಮೆರವಣಿಗೆ ಒಂದು ಫರ್ಲಾಂಗ್ ದೂರ ಕೂಡ ಇನ್ನೂ ಹೋಗಿರಲಿಲ್ಲ. ಅಷ್ಟರಲ್ಲೇ ಅಶ್ವಾರೋಹಿ ಸೈನಿಕರು ಬಂದರು. ಆರಿಸಿ ಆರಿಸಿ ಹತ್ತಿರದಿಂದ ಗುಂಡು ಹಾರಿಸಿದರು. ಉಮಾಶಂಕರ್ ಅಲ್ಲೇ ಉರುಳಿದರು. ನೀರು ಕೂಡ ಕೇಳಲಿಲ್ಲ. ರಕ್ತದಿಂದ ತೋಯ್ದ ಅವರ ಷರ್ಟಿನ ಮೇಲೆ ಗುಂಡಿನ ಕರಿಯ ಕಲೆ ಕೂಡ ಇತ್ತು. ಆಗ ತಾನೆ ಮದುವೆಯಾಗಿದ್ದ ಅವನ ಹೆಂಡತಿ ನವಜಾತ ಶಿಶುವಿನ ಗತಿ ಏನಾಗಿರಬಹುದೋ ಎಂದು ನಾವು ಊಹಿಸಬಹುದು. ನಾನು ಬಹಳ ಪ್ರಯತ್ನಪಟ್ಟು ಸವಿತಾ ಪಂಡ್ಯಾಳಿಗೆ 'ಫ್ರೀಡಂ ಫೈಟರ್ಸ್‌ನ ಪೆನ್‌ಷನ್' ಕೊಡಿಸಿದೆ. ಒಮ್ಮೊಮ್ಮೆ ಗೃಹ ಸಚಿವಾಲಯದ ಸಂಕುಚಿತ ದೃಷ್ಟಿ ನೋಡಿ

ಆಶ್ಚರ್ಯವಾಗುತ್ತೆ, ಅಂತಹ ಅದ್ಭುತ ಬಲಿದಾನಕ್ಕೆ ಗೃಹ ಸಚಿವಾಲಯದ ಸಚಿವರು ಸವಿತಾಗೆ ೧೫೦ ರೂ ಕೊಟ್ಟು ತೃಪ್ತರಾದರು. ಉಮಾಶಂಕರನ ಅಣ್ಣ ಪ್ರಭಾಶಂಕರ ಪಂಡ್ಯಾ ಸ್ವಾಭಿಮಾನಿಯಾಗಿದ್ದ. ಆತ ತನ್ನ ತಮ್ಮನ ಬಲಿದಾನಕ್ಕೆ ೧೫೦ ರೂ. ತೆಗೆದುಕೊಂಡು ಆ ತ್ಯಾಗದ ಬೆಲೆಯನ್ನು ಕುಂಠಿತಗೊಳಿಸಲು ಇಷ್ಟಪಡಲಿಲ್ಲ. ಆತ ತನ್ನ ವಿಧವೆ ನಾದಿನಿಯನ್ನು ತಮ್ಮ ಕೈಲಾದ ರೀತಿಯಲ್ಲಿ ನೋಡಿಕೊಳ್ಳಲು ಸಿದ್ಧವಾಗಿದ್ದರು. ಸ್ವತಂತ್ರವಾದ ನಮ್ಮ ದೇಶದ ಸರಕಾರದಿಂದ ಅವರು ತಮ್ಮ ಮರ್ಯಾದೆ ಕುಂಠಿತಗೊಳ್ಳುವುದನ್ನು ಅಪೇಕ್ಷಿಸಿರಲಿಲ್ಲ. ನನಗೆ ಅವರ ಮನಸ್ಸಿನ ನೋವು ಅರ್ಥವಾಗಿತ್ತು. ಪುನಃ ಬಹಳ ಪತ್ರವ್ಯವಹಾರ ನಡೆಸಿ ಅತನ ಅಪೂರ್ವವಾದ ಬಲಿದಾನವನ್ನ ತಿಳಿಸಿಲು ಪ್ರಯತ್ನಪಟ್ಟೆ. ಆಗ ಸವಿತಾಜೀಗೆ ತಿಂಗಳಿಗೆ ೩೫೦ ರೂ.ಗಳು ಬರತೊಡಗಿದವು. ನಮ್ಮ ಸರಕಾರದ ಬಳಿ ಇಂತಹ ಉದಾತ್ತ ತ್ಯಾಗಕ್ಕಾಗಿ ಭಿಕ್ಷೆ ಬೇಡುವಾಗ ನನ್ನ ನಿರ್ಲಜ್ಜ ಹೃದಯ ಕೂಡ ಸಂಕೋಚದಿಂದ ತುಂಬಿರುತ್ತಿತ್ತು. ಆಗಸ್ಟ್ ಕ್ರಾಂತಿಯಲ್ಲಿ ಉಮಾಶಂಕರ್ ಪಂಡ್ಯಾ ಹಾಗೆ ಎಷ್ಟೋ ಜನ ಯುವಕರು ಪ್ರಾಣ ಕಳೆದುಕೊಂಡರು. ಚಿಮುರ್ ಆಷ್ಟಿಯ ಅತ್ಯಾಚಾರಗಳ ವಿಷಯವನ್ನು ಕೇಳಿ ಸೇವಾಗ್ರಾಮ ಆಶ್ರಮದಲ್ಲಿದ್ದ, ಮಕ್ಕಳ ಪ್ರೀತಿಯ ನಮ್ಮ ಮಿತ್ರರಾಗಿದ್ದ ಪ್ರೊಫೆಸರ್ ಜಯಕೃಷ್ಣ ಭಂಸಾಲಿ ತೀವ್ರ ಸಂತಾಪದಿಂದ ಆಮರಣ ಉಪವಾಸ ಮಾಡಿದರು. ೬೩ ದಿನಗಳ ಕಾಲ ಉಪವಾಸ ಮಾಡಿದ ಅನಂತರ ಸರಕಾರದ ಕಠೋರ ಹೃದಯ ಕರಗಿತು. ಅಪರಾಧಿಗಳನ್ನು ಬಂಧಿಸಿ ಅವರಿಗೆ ದಂಡನೆ ನೀಡುವ ಆಶ್ವಾಸನೆ ನೀಡಿದರು.

ಭಂಸಾಲಿ ಕಾಕಾ ಪೂರ್ವಾಶ್ರಮದಲ್ಲಿ ಫ್ರಾನ್ಸ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ೧೦–೧೨ ವರ್ಷಗಳು ಪ್ಯಾರಿಸ್‌ನಲ್ಲಿದ್ದರು. ಅದೇ ವರ್ಣಮಯ ಮೋಜಿನ ವ್ಯಕ್ತಿತ್ವ ಅವರದಾಗಿತ್ತು. ಅವರಣ್ಣ ಖಾಯಿಲೆ ಬಿದ್ದಿದ್ದಾರೆಂದು ಕೇಳಿ ಅವರು ನಮ್ಮ ದೇಶಕ್ಕೆ ಹಿಂದಿರುಗಿದ್ದರು. ತಂದೆಯ ಹಾಗಿದ್ದ ಅವರಣ್ಣ ತಮ್ಮ ಬರುವವರೆಗೂ ಕಾಯದೆ ಗತಿಸಿದ್ದರು. ಸಾಯುವ ಮೊದಲು ಅವರು ತಮ್ಮನನ್ನು ನೆನೆದಿದ್ದರೆಂದು ಕೇಳಿದ್ದೆ. ಕೊನೆಯವರೆಗೂ ಜಯಕೃಷ್ಣನಿಗೆ ಮಾವಿನ ಹಣ್ಣೆಂದರೆ ಇಷ್ಟ, ಅವನಿಗಾಗಿ ಮಾವಿನಹಣ್ಣು ಇಡು ಎಂದು ಹೇಳುತ್ತಿದ್ದರಂತೆ. ಭಂಸಾಲಿ ಕಾಕಾ ಈ ದುಃಖಪೂರಿತ ವಿಯೋಗದಿಂದ ವಿಚಲಿತಗೊಂಡರು. ಅವರು ಮಾವು ತಿನ್ನುವುದನ್ನೇ ಬಿಟ್ಟರು, ಪ್ರಪಂಚದಿಂದ ವಿರಕ್ತರಾದರು. ಸತ್ತ ಅನಂತರ ಜನರು ದೇವರ ಬಳಿಗೆ ಹೇಗೆ ಹೋಗುತ್ತಾರೆಂದು ಹುಡುಕಲು ಕಾಡುಮೇಡು ಸುತ್ತತೊಡಗಿದರು. ಎಲ್ಲೂ ದೇವರು ಕಾಣಿಸಲಿಲ್ಲ. ನಿರಾಶರಾಗಿ ಹತಾಶರಾದರು. ಆಗ ಮೌನಧರಿಸಿ ಹಿಮಾಲಯ ಪರ್ವತದ ಹಳ್ಳಿಗಳಲ್ಲಿ ಸುತ್ತತೊಡಗಿದರು.

ಒಂದು ದಿನ ಎಲ್ಲೋ ಮಲಗಿದ್ದರು. ರಾತ್ರಿ ಕತ್ತಲಿನಲ್ಲಿ ಯಾರೋ ಅವರನ್ನು

ತುಳಿದರು. ಆಗ, ಅವರು ಬಾಯಿಂದ ಕಿರುಚಿದರು. ಮೌನ ಮುರಿದಿದ್ದಕ್ಕೆ ಅವರಿಗೆ ಕೋಪ ಬಂತು. ಆಗ ಅವರಿದ್ದ ಮನೆಯ ರೈತನನ್ನು ನೀನು ನನ್ನ ಬಾಯಿ ಹೊಲೆದು ಬಿಡು ಎಂದು ಪ್ರಾರ್ಥಿಸಿಕೊಂಡರು. ರೈತ ಚಿಂತೆಗೊಳಗಾದ ಆದರೆ ಭಂಸಾಲಿ ಕಾಕಾನ ಒತ್ತಾಯದ ಮೇರೆಗೆ ಆ ಮನೆಯ ಯಜಮಾನ ಒಂದು ದಬ್ಬಳವನ್ನು ತೆಗೆದುಕೊಂಡು ಅವರ ಬಾಯಿ ಹೊಲೆದುಬಿಟ್ಟ. ಹೊಲೆದ ಬಾಯಿಗೆ ಹೊಲೆದ ರಂಧ್ರಗಳ ನಡುವಿಂದ ಗೋಧಿ ಹಿಟ್ಟಿನ ರಸವನ್ನು ಹಾಕಿಕೊಂಡು ಹೊಟ್ಟೆ ತುಂಬಿಕೊಳ್ಳುತ್ತಿದ್ದರು. ಆದರೂ ದೇವರ ದರ್ಶನವಾಗಲಿಲ್ಲ. ಹಠಯೋಗದ ಪ್ರಯೋಗ ಮಾಡಿ, ಅದರಲ್ಲಿ ತಮ್ಮನ್ನು ಬೆತ್ತಲೆಯಾಗಿ ನಾಗಫಣಿಯ ಮುಳ್ಳಿನ ಪೊದರಿಗೆ ಸಿಲುಕಿಸಿಕೊಂಡರು. ಸಾವಿರಾರು ಮುಳ್ಳುಗಳು ಶರೀರದಲ್ಲೆಲ್ಲಾ ಚುಚ್ಚಿಕೊಂಡವು. ಒಂದೊಂದು ಮುಳ್ಳಿನಿಂದಲೂ ರೋಮ ರಂಧ್ರಗಳಲ್ಲಿ ಕೀವು ತುಂಬಿಕೊಂಡಿತು. ಅಂತಹ ಸ್ಥಿತಿಯಲ್ಲಿ ಭಂಸಾಲಿ ಕಾಕಾಗೆ ಗಾಂಧಿಯ ಹೆಸರು ತಿಳಿಯಿತು. ಆಬೂ ಬೆಟ್ಟ ಬಳಿ ಯಾರೋ 'ಗಾಂಧೀಜಿ ಬಳಿ ಹೋಗು, ಆತ ನಿನಗೆ ದೇವರ ದರ್ಶನ ಮಾಡಿಸುತ್ತಾನೆ' ಎಂದು ಹೇಳಿದರು. ಕೇಳಿಕೊಂಡು ಕೊನೆಗೆ ಸಾಬರಮತಿ ಆಶ್ರಮಕ್ಕೆ ಬಂದರು. ಅವರ ಶರೀರದಲ್ಲಿ ಸಾವಿರಾರು ಗಾಯಗಳು ಕೀವಿನಿಂದ ಕೊಳೆಯುತ್ತಿದ್ದವು. ಬಾಪೂಜಿ ಆತನಿಗೆ ತಿಳುವಳಿಕೆ ನೀಡಿದರು. ಆಶ್ರಮವಾಸಿಗಳು ಆತನ ಶರೀರದಿಂದ ಸಾವಿರಾರು ಮುಳ್ಳುಗಳನ್ನು ಹೊರ ತೆಗೆದರು. ಬಾಯಿಗೆ ಹಾಕಿದ್ದ ತಂತಿ ತೆಗೆದರು. ಔಷಧಿ ಉಪಚಾರ ನಡೆಯಿತು. ಅವರು ಸರಿಹೋದರು. ಆದರೆ ಅವರು ಕಡಿಮೆ ಮಾತನಾಡುತ್ತಿದ್ದರು. ಬೇವಿನ ಎಲೆಯನ್ನು ತಿನ್ನುತ್ತಿದ್ದರು. ರಾತ್ರಿ–ಬೆಳಿಗ್ಗೆ ಆಕಾಶದ ಕೆಳಗೆ ಗಾಳಿಯಲ್ಲಿ ಕುಳಿತು ಚರಖಾ ತಿರುಗಿಸುತ್ತಿದ್ದರು. ಮಟ ಮಟ ಮಧ್ಯಾನ್ಹದಲ್ಲೂ ಕಾಕಾ ಹೊರಗೇ ಇರುತ್ತಿದ್ದರು. ರಾತ್ರಿಯೂ ನೆಲದ ಮೇಲೆ ಮಲಗುತ್ತಿದ್ದರು. ಹಾಗಿದ್ದಾಗ ಎಷ್ಟೋ ಸಾರಿ ಸೇವಾಗ್ರಾಮದಲ್ಲಿ ಅವರಿಗೆ ಚೇಳು ಕಚ್ಚಿತ್ತು. ಆದರೆ ಅವರು ಉಪ್ಪು ತಿನ್ನುತ್ತಿರಲಿಲ್ಲವಾದ್ದರಿಂದ ವಿಷ ಹೆಚ್ಚು ಏರುತ್ತಿರಲಿಲ್ಲ. ಅವರು ದೊಡ್ಡವರ ಹತ್ತಿರ ಸಾಮಾನ್ಯವಾಗಿ ಮಾತನಾಡುತ್ತಿರಲಿಲ್ಲ. ಆದರೆ ನನ್ನನ್ನು ಮತ್ತು ಕಾನ್ಹಾ ಅವರನ್ನು ಬಹಳ ಪ್ರೀತಿಸುತ್ತಿದ್ದರು. ಕತೆಗಳನ್ನು ಬಹಳ ಹೇಳುತ್ತಿದ್ದರು. ನನಗೆ ಇಂಗ್ಲಿಷ್ ಕವಿತೆ ಅವರೇ ಕಲಿಸಿದ್ದು, ಟೆನಿಸನ್‌ನ ಕವಿತೆಗಳು ಅವರಿಗೆ ಬಾಯಿಪಾಠವಾಗಿ ಬಿಟ್ಟಿತ್ತು. ಅವರ ಹತ್ತಿರ ನಾವು ಪುಸ್ತಕವಿಲ್ಲದೆಯೇ ಓದುತ್ತಿದ್ದೆವು. ಬರೆಯುತ್ತಿದ್ದೆವು. ಅವರು ನನಗೆ ಫ್ರಾನ್ಸ್‌ನ ಇತಿಹಾಸ ಮತ್ತು ಫ್ರೆಂಚ್ ಕ್ರಾಂತಿ, ನೆಪೋಲಿಯನ್ ಪೂರ್ತಿ ಇತಿಹಾಸವನ್ನು ನಾನು ಹತ್ತು ವರ್ಷದವಳಾಗಿದ್ದಾಗಲೇ ಕಲಿಸಿದ್ದರು. ಆ ಕಾಲದಲ್ಲಿ ಕೇಳಿದ ಕತೆಗಳು ಹಾಗೂ ಪ್ರಸಂಗಗಳಲ್ಲಿಯೂ ಸ್ವಾರಸ್ಯ ಇರುತ್ತಿತ್ತು. ದೊಡ್ಡವಳಾದ ಮೇಲೆ ಇದೇ ಇತಿಹಾಸದ ಸಂಸ್ಕಾರದಿಂದ ನನಗೆ ಇತಿಹಾಸದಲ್ಲಿ

ಆಧುನಿಕ ಯೂರೋಪ್‌ನಲ್ಲಿ ಎಂ.ಎ. ಮಾಡಲು ಆಸಕ್ತಿ ಮೂಡಿತು ಅನಿಸುತ್ತೆ.

ಬ್ರಿಟಿಷ್ ಸರಕಾರ ಹಿಟ್ಲರ್ ಜೊತೆ ಯುದ್ಧಮಾಡಿಯೇ ಬೇಸತ್ತು ಹೋಗಿತ್ತು. ಅವರ ವಿದೇಶ ಶಕ್ತಿಯೇ ಕುಂದಿ ಹೋಗಿತ್ತು. ವಿಶ್ವಯುದ್ಧದ ಭಯಂಕರತೆಯಿಂದ ಇಂಗ್ಲಿಷರ ಮಾನವೀಯತೆ ಸತ್ತು ಹೋಗಿತ್ತು. ಬ್ರಿಟಿಷ್ ಸರಕಾರ ಎಲ್ಲರೂ ನೋಡುತ್ತಿರುವಂತೆಯೇ ಬರ್ಬರತೆಯ ರಾಜ್ಯ ನಡೆಸತೊಡಗಿತು. ಅದು ದೇಶವನ್ನು ಮೆಟ್ಟಿ ನಿಂತಿತಾದರೂ ಕ್ರಾಂತಿ ಕುಂದಲಿಲ್ಲ. ಆಗ ಬರ್ಮಾಯುದ್ಧದ ಮಹಾನಾಯಕ ಜನರಲ್ ವ್ಯಾವೆಲ್ ದೇಶದ ಹೊಸ ವೈಸ್‌ರಾಯ್ ಆಗಿ ಭಾರತಕ್ಕೆ ಬಂದರು. ಆತ ಒಬ್ಬ ಹುಟ್ಟು ಸೈನಿಕ. ಸೂಕ್ಷ್ಮ ರಾಜಕೀಯವನ್ನು, ಮಾನವೀಯತೆಯನ್ನು ಅರ್ಥ ಮಾಡಿಕೊಳ್ಳುವುದು ಅವರಿಗೆ ಕಷ್ಟವಾಗಿತ್ತು. ಅದರಿಂದ ಆತನ ಕಾಲದಲ್ಲಿ ಪಾಶವಿಕ ಕ್ರೌರ್ಯ, ಭಯಂಕರ ದಮನ ಆಡಳಿತದ ಸಿದ್ಧಾಂತವಾಗಿತ್ತು.

ಇಷ್ಟರಲ್ಲಿ ೧೫ ಆಗಸ್ಟ್ ೧೯೪೨ರಂದು ಪೂನಾ ಬಳಿ ಆಗಾಖಾನ್ ಮಹಲ್‌ನಲ್ಲಿ ಮಹಾದೇವ್ ದೇಸಾಯಿ ತೀರಿಕೊಂಡರೆಂದು ಸುದ್ದಿ ಬಂತು. ದೇಶದ ಜನರೆಲ್ಲ ಸರಕಾರ ಅವರಿಗೆ ವಿಷ ಕೊಟ್ಟು ಸಾಯಿಸಿರಬೇಕು ಅಂತಲೇ ಮೊದಲು ಭಾವಿಸಿದರು. ರಾಜ್ಯದ ಬಗ್ಗೆ ಇದ್ದ ಭಾವನೆ ಹೀಗಿತ್ತು ! ಜನ ಅವರ ಯಾವ ಮಾತನ್ನೂ ನಂಬುತ್ತಿರಲಿಲ್ಲ. ಮಹಾದೇವ ದೇಸಾಯಿ ೫೦ವರ್ಷ ವಯಸ್ಸಿನಲ್ಲಿ 'ಭಾರತ ಛೋಡೋ' ಆಂದೋಳನದಲ್ಲಿ ಹುತಾತ್ಮರಾದರು. ಜೈಲಿನ ಸರಳುಗಳ ಹಿಂದಣ ಮೊದಲ ಸಾವು ಮಹಾದೇವ ಕಾಕಾದೇ ಆದದ್ದು, ಅನಂತರ ಎಷ್ಟೋ ಜನ ಚಾಟಿ ಏಟುಗಳನ್ನು ತಿಂದು ಜೈಲಿನಲ್ಲೇ ಸಾವನ್ನಪ್ಪಿದರು. ಆದರೆ ಸ್ವಾತಂತ್ರ್ಯ ಹೋರಾಟದ ಮೊದಲ ಅಹಿಂಸಾತ್ಮಕ ಬಲಿದಾನ ಮಹಾದೇವ್ ಕಾಕಾ ಅವರದೇ. ಬಾಪೂಜಿ ಅವರ ಮಾನಸಪುತ್ರ ಅರ್ಧ ದಾರಿಯಲ್ಲೇ ಅವರನ್ನು ಬಿಟ್ಟು ಅಗಲಿದ. ಅಜ್ಜಿ ಪೂರ್ತಿ ಸ್ತಬ್ಧಳಾದಳು, ಆಕೆ ಬಾರಿ–ಬಾರಿಗೂ "ಮಗು, ನೀ ನನ್ನನ್ನು ಬಿಟ್ಟು ಎಲ್ಲಿಗೆ ಹೊರಟು ಹೋದೆ. ಮಹಾದೇವ ಹೋಗುವ ಸರದಿ ನನ್ನದಾಗಿತ್ತು. ನಾನು ದುರ್ಗಾಗೆ ಮುಖ ಹೇಗೆ ತೋರಿಸಲಿ" ಎಂದು ಒರಲುತ್ತಿದ್ದಳು. ಅಜ್ಜಿಗೆ ಯುದ್ಧದ ಈ ಭಯ ಮೊದಲಿನಿಂದಲೂ ಇತ್ತು. ಈಗ ಆಕೆ ಒಳಗಿಂದೊಳಗೇ ನಡುಗಿ ಹೋದಳು. ಈ ಮಹಲ್‌ನಿಂದ ತಾನು ಇನ್ನು ಹೊರಗೆ ಹೋಗುವುದಿಲ್ಲವೆಂದು ಆಕೆಗೆ ನಂಬಿಕೆಯಾಯಿತು. ಆ ದಿನದಿಂದ ಆಗಾಖಾನ್ ಮಹಲ್‌ನಲ್ಲಿ ಸಾವಿನ ನೆರಳು ಓಡಾಡತೊಡಗಿತು. ಮಹಲ್ ಏನು ಬಂತು, ನಾವು ಅದನ್ನು ಭೂತಬಂಗಲೆ ಎಂದೇ ತಿಳಿಯತೊಡಗಿದೆವು.

ನಮ್ಮ ತಂದೆಗಾದ ದುಃಖ ಹೇಳತೀರದ್ದು, ಅವರು ಊಟ ಮಾಡಲಾಗುತ್ತಿರಲಿಲ್ಲ. ನಿದ್ದೆ ಮಾಡಲಾಗುತ್ತಿರಲಿಲ್ಲ. ತಮ್ಮ ಹೃದಯದ ವಿಯೋಗವನ್ನು ಮುಚ್ಚಿಡ ಬಯಸುತ್ತಿದ್ದರು. ಆದರೆ ಅವರ ದುಃಖವನ್ನು ನಮ್ಮ ಕಣ್ಣುಗಳು ನೋಡುತ್ತಿದ್ದವು.

ಮಹಾದೇವ ಕಾಕಾನ ಚಿನ್ನದಂತಹ ಶರೀರ ಬಾಪೂಜಿಯ ಚಿಂತೆಯಲ್ಲಿ ಭಸ್ಮವಾಗಿ ಹೋಯಿತು. ಕವಿ ಹೃದಯದ ಕಾಕಾ ಸರ್ಕಾರದ ಕ್ರೌರ್ಯವನ್ನು ಅರ್ಥ ಮಾಡಿಕೊಂಡಿದ್ದರು. ಈ ಅವ್ಯಕ್ತ ದುಶ್ಚಿಂತೆ ಅವರನ್ನು ಸಮಯಕ್ಕೆ ಮುಂಚೆ ದೇಶದಿಂದ ಕಿತ್ತುಕೊಂಡಿತು. ಬಾಪೂಜಿ ಹೃದಯದ ಒಂದು ಖಂಡ ಮುರಿದುಹೋಯಿತು. ಮೂರ್ಛಿತ ಮಹಾದೇವ ಕಾಕಾ ಬಳಿ ನಿಂತು ಬಾಪೂಜಿ "ಮಹಾದೇವ, ಏಳು, ಒಂದು ಸಾರಿ ಕಣ್ಣು ತೆರೆ" ಎಂದು ಕರೆಯುತ್ತಲೇ ಇದ್ದರು. ಮಹಾದೇವ ಕಾಕಾ ಒಂದು ಸಾರಿ ಅವರ ದೃಷ್ಟಿಗೆ ತನ್ನ ದೃಷ್ಟಿಯನ್ನು ಕೂಡಿಸಿದ್ದರೆ, ಹೀಗೆ ಹೇಳದೆಯೇ ಹೊರಟುಹೋಗುತ್ತಿರಲಿಲ್ಲ ಅಂತ ಬಾಪೂ ನಂಬಿಕೆ. ಆದರೆ ಮಹಾದೇವ ಕಾಕಾ ತನ್ನ ಜೀವನದ ಸ್ವಚ್ಛವಾದ ಹೊದಿಕೆಯನ್ನು ಯಥಾವತ್ತಾಗಿ ತೆರೆದಿಟ್ಟಿದ್ದರು. ಅವರ ಪಾರ್ಥಿವ ಶರೀರವನ್ನು ಬಾಪೂಜಿ ಸ್ವತಃ ತಮ್ಮ ಕೈಗಳಿಂದ ಸ್ನಾನ ಮಾಡಿಸಿ ಸಿಂಗರಿಸಿದರು. ಆಕಾಶದ ತೆರೆದ ನೆರಳಲ್ಲಿ ಸ್ವತಃ ತಮ್ಮ ಕೈಗಳಿಂದ ತಮ್ಮ ಈ ಮಗನ ದಾಹ ಸಂಸ್ಕಾರ ಮಾಡಿದರು.

ಆಗಾಖಾನ್ ಪ್ಯಾಲೇಸ್‌ನಲ್ಲಿ ಸಮಾಚಾರ ಪತ್ರಗಳೂ ಇರಲಿಲ್ಲ. ಹೊರಗಿನ ಸಮಾಚಾರವೂ ಬರುತ್ತಿರಲಿಲ್ಲ. ಮಗನಂತಿದ್ದ ಮಹಾದೇವ ಕಾಕಾ ತೀರಿಕೊಂಡರು. ಆದರೆ ಸರಕಾರ ದುರ್ಗಾ ಕಾಕಿ, ಅವರ ಏಕಮಾತ್ರ ಪುತ್ರ ನಾರಾಯಣ ದೇಸಾಯಿಗೂ ಬಾಪೂಜಿಯನ್ನು ಭೇಟಿ ಮಾಡಲು ಬಿಡಲಿಲ್ಲ. ಆ ತಾಯಿ ಮಗ ತಮ್ಮ ಅತಿ ಪ್ರಿಯವಾದ ಸೇವಾಗ್ರಾಮದ ಗುಡಿಸಲಲ್ಲೇ ಮನಸ್ಸಿನಲ್ಲೇ ಬೀಳ್ಕೊಟ್ಟರು. ಜೈಲಿನಲ್ಲಿ ಸತ್ತ ಕೈದಿಗಳ ಮನೆಯವರಿಗೂ ಅಂತಿಮ ದರ್ಶನದ ಅಧಿಕಾರ ಕೂಡ ಇರಲಿಲ್ಲ. ಆಗಾಖಾನ್ ಭೂತಬಂಗಲೆಯಲ್ಲಿ ಒಂದು ಹಕ್ಕಿಗೆ ಹಾರಲು ಕೂಡ ಸ್ವಾತಂತ್ರ್ಯ ಇಲ್ಲದಿದ್ದರೂ ದೇಶದಲ್ಲಿ ಎಲ್ಲ ಕಡೆ ನಡೆಯುತ್ತಿದ್ದ ಅಮಾನುಷ ಅತ್ಯಾಚಾರಗಳ ಸುದ್ದಿ ಜೈಲಿನ ಸರಳುಗಳವರೆಗೂ ತಲಪುತ್ತಿತ್ತು. ಕಲ್ಕತ್ತಾ ಮತ್ತು ಬಂಗಾಳದಲ್ಲಿ ೨೦ ಲಕ್ಷ ಮಂದಿ ಹಸಿವಿನಿಂದ ಕಂಗಾಲಾಗಿ ಸತ್ತುಹೋದರು. ಆದರೆ ಸರಕಾರದ ಕಿವಿ ಕೂಡ ಕೊಂಕಾಗಲಿಲ್ಲ. ಅದೇ ಕಟ್ಟುಮಸ್ತಾದ ಸೈನಿಕರು, ಒಂದರ ಮೇಲೊಂದು ಔತಣ ನೀಡುತ್ತಿದ್ದರು, ಉತ್ಸವ ಆಚರಿಸತ್ತಿದ್ದರು. ಒಬ್ಬರಲ್ಲ, ಇಬ್ಬರಲ್ಲ, ಮೂರು ಮಂದಿ ಬೃಹತ್ ಶರೀರದ ಸೈನಿಕರು ಬಡಬಗ್ಗರ ರಿಕ್ಷಾವಾಲಾಗಳ ಮೇಲೆ ಹತ್ತಿ ಅವರನ್ನು ಓಡಿಸುತ್ತಿದ್ದರು. ಎಷ್ಟೋ ಸಾರಿ ಅವನಿಗೆ ಬಾಡಿಗೆಯನ್ನೂ ಕೊಡುತ್ತಿರಲಿಲ್ಲ. ಇದನ್ನು ನಾನು ಕಣ್ಣಾರೆ ನೋಡಿದ್ದೆ, ಈ ಅನ್ಯಾಯಗಳಲ್ಲದೆ ಚರ್ಚಿಲ್ ಸರಕಾರ ಬಾಪೂಜಿ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಲು ಶುರುಮಾಡಿತು. ಅವರ ವಿರುದ್ಧ ಅಪಪ್ರಚಾರ ಶುರು ಮಾಡಿಕೊಂಡಿತು. ಈ ಭೀಕರವಾದ ಸುಳ್ಳು, ಅನಾಚಾರ, ಆತಂಕವನ್ನು ವಿರೋಧಿಸಿ ತಮ್ಮ ದೇಶದ ಜನರ ತೀವ್ರತರವಾದ ಕಷ್ಟಗಳನ್ನು ಹಂಚಿಕೊಳ್ಳುವುದಕ್ಕೋಸ್ಕರ ಬಾಪೂಜಿ ೨೧ ದಿನಗಳ ಉಪವಾಸ ಮಾಡಲು

ನಿರ್ಧರಿಸಿದರು. ಬಾಪೂಜಿ ಆರೋಗ್ಯ ಸರಿಯಾಗಿರಲಿಲ್ಲ. ಶರೀರ ಇಷ್ಟೊಂದು ಕಷ್ಟ ಸಹಿಸುವಂತಿರಲಿಲ್ಲ. ಮನಸ್ಸಿನಲ್ಲಿ ಅವರು ಉದಾಸರಾಗಿದ್ದರು. ಚಿಂತೆ ಮಾಡುತ್ತಿದ್ದರು. ಅವರಿಗೆ ೭೩ ವರ್ಷ ಆಗಿತ್ತು. ಶರೀರ ದುರ್ಬಲವಾಗಿತ್ತು. ೨೧ ದಿನಗಳ ಉಪವಾಸದ ಆ ಕಡುಕಷ್ಟವನ್ನು ತಡೆಯುವ ಹಾಗಿರಲಿಲ್ಲ. ಆದರೆ ದೇಶದಲ್ಲಿ ಸಾವಿರಾರು ಮಂದಿ ಹುತಾತ್ಮರಾಗಿದ್ದರು. ಬಾಪೂಜಿ ಅವರ ಜೊತೆಗೆ ತಮ್ಮ ಬಲಿದಾನವನ್ನೂ ಸೇರಿಸಿ ಕೃತಾರ್ಥರಾಗ ಬಯಸುತ್ತಿದ್ದರು. ಅವರ ಉಪವಾಸದ ಮೊದಲ ದಿವಸದಿಂದಲೇ ಸರಕಾರ ಪ್ಯಾಲೇಸ್‌ನ ಮುಖ್ಯದ್ವಾರವನ್ನು ತೆರೆದುಬಿಟ್ಟಿತು. ನಮ್ಮ ಪರಿವಾರದ ಆಶ್ರಮವಾಸಿಗಳಿಗೆ ಬಾಪೂಜಿಯನ್ನು ಭೇಟಿಯಾಗಲು ಅನುಮತಿ ನೀಡಲಾಯಿತು. ಈ ಉಪವಾಸದ ಪರಿಣಾಮ ಏನಾಗುತ್ತೋ ಅನ್ನುವ ಕಲ್ಪನೆಯೇ ಎಲ್ಲೆಲ್ಲೂ ತುಂಬಿಕೊಂಡಿತ್ತು.

ಮೇಲ್ನೋಟಕ್ಕೆ ದಮನ, ಅತ್ಯಾಚಾರ, ಆತಂಕ ಹೂಡಿದ್ದರೂ ಸರಕಾರ ಕೂಡ ಒಳಗಿಂದೊಳಗೇ ಹೆದರಿಕೊಂಡಿತ್ತು. ಗಾಂಧಿ ಈ ವಯಸ್ಸಿನಲ್ಲಿ ೨೧ ದಿನ ಉಪವಾಸ ಮಾಡಿ ಬದುಕುಳಿಯಬಹುದೆಂಬ ನಂಬಿಕೆ ಸರಕಾರಕ್ಕೆ ಇರಲಿಲ್ಲ. ಅಶುಭ ಪರಿಣಾಮದ ಸಿದ್ಧತೆಗಾಗಿ ಸರಕಾರ ಅಂತ್ಯ ಸಂಸ್ಕಾರಕ್ಕೆಂದು ಸಾಕಷ್ಟು ಶ್ರೀಗಂಧದ ಸೌದೆಯನ್ನು ತರಿಸಿ ಆಗಾಖಾನ್ ಪ್ಯಾಲೇಸ್‌ನಲ್ಲಿರಿಸಿತ್ತು. ಬಾಪೂಜಿ ತೀರಿಕೊಂಡ ಮೇಲೆ ಯಾವ ತರಹೆಯ, ಎಂಥ ಪ್ರಚಾರ ಮಾಡಬೇಕೆನ್ನುವುದರ ವಿಷಯವಾಗಿಯೂ ವಿಸ್ತಾರವಾಗಿ ಚರ್ಚೆ ನಡೆಸಿ ಅದಕ್ಕೂ ಸಿದ್ಧತೆ ಮಾಡಿಕೊಂಡಿತ್ತು. ನಮ್ಮ ಪುಣ್ಯ, ಸರಕಾರದ ದುರ್ಭಾಗ್ಯದಿಂದ ಅಂತಹ ಹೇಳಿಕೆ ನೀಡುವ ಅವಕಾಶ ಒದಗಿ ಬರಲಿಲ್ಲ. ಇನ್ನು ಯಾರಾದರೂ ಆಗಿದ್ದಿದ್ದರೆ, ಆತನ ಧೈರ್ಯ, ಆತ್ಮವಿಶ್ವಾಸ, ದೇವರ ಬಗ್ಗೆ ನಂಬಿಕೆ ಎಲ್ಲಾ ಅಲುಗಾಡಿಹೋಗುತ್ತಿತ್ತು. ಆದರೆ ಬಾಪೂಜಿಯ ಶ್ರದ್ಧೆ ಸ್ಥಿರವಾಗಿತ್ತು. ದೀಪಸ್ತಂಭದ ಹಾಗೆ ಅವರ ನಿಶ್ಚಯ, ಭಕ್ತಿ ಅಚಲವಾಗಿತ್ತು. ಅವರ ಮನಸ್ಸಿನಲ್ಲಿ ಕಿಂಚಿತ್ತಾದರೂ ಕಟುಭಾವನೆ, ನಿರಾಶೆ, ಅನುಮಾನ, ದುಃಖ ಇರಲಿಲ್ಲ. ತನ್ನ ದೇಶದ ಜನರಿಗೆ ನ್ಯಾಯ ಸಿಗಲಿ ಅಂತ ತನ್ನ ನಿಷ್ಕಪಟ ಶುದ್ಧತೆಯನ್ನು ಸಿದ್ಧಮಾಡಿ ತೋರಿಸುವುದಕ್ಕೋಸ್ಕರ ಅವರು ದೇಹಯಜ್ಞ ಮಾಡುತ್ತಿದ್ದರು. "ನಿಮ್ಮಂಥವರ ರಾಜ್ಯದಲ್ಲಿ ನನ್ನಂಥ ಜನ ಕಾರಾವಾಸದಲ್ಲಿರುವುದೇ ಒಳ್ಳೆಯದು, ನನ್ನ ವಿಷಯವಾಗಿ ನಿಮ್ಮ ಅಭಿಪ್ರಾಯ ಬದಲಾಯಿಸುವವರೆಗೂ ನಾನು ಸಂತೋಷವಾಗಿ ನಿಮ್ಮ ಜೈಲಿನಲ್ಲಿರುತ್ತೇನೆ" ಎಂದು ಲಾರ್ಡ್ ವ್ಯಾವೆಲ್‌ಗೆ ಬರೆದರು. ದೇಶದ ಸಾಮೂಹಿಕ ಪ್ರಾರ್ಥನೆ ಹೇಗಿರುತ್ತದೆ ಹಾಗೂ ಅದರ ಅಲೌಕಿಕ ಶಕ್ತಿ ಎಂಥದು? ಸರಕಾರಕ್ಕೆ ಸ್ವಲ್ಪವೂ ಅಂದಾಜಿರಲಿಲ್ಲ. ಬಾಪೂಜಿ ಉಳಿದುಕೊಂಡರು. ಆಗಾಖಾನ್ ಜೈಲಿನ ಬಾಗಿಲು ಪುನಃ ಮುಚ್ಚಿತು.

ಈ ಉಪವಾಸ ಮಾಡುತ್ತಿರುವಾಗ ೧೦ ಫೆಬ್ರವರಿ ೧೯೪೩ರಂದು ಬಾಪೂಜಿ

ಆರೋಗ್ಯ ತೀರ ಕೆಟ್ಟುಹೋಗಿತ್ತು. ಅವರ ಮೂತ್ರದಲ್ಲಿ ಆಲ್‌ಬುಮಿನ್ ಅಂಶ ಬಹಳ ಹೆಚ್ಚಾಗಿ ಹೋಯ್ತು. ದೇಶ ಉಸಿರು ಕಟ್ಟಿ ಅವರ ದೀರ್ಘಾಯುಸ್ಸಿಗಾಗಿ ಆರಾಧನೆ ಮಾಡುತ್ತಿತ್ತು. ಪ್ರತಿಯೊಂದು ಸಾರಿ ಉಪವಾಸದಲ್ಲಿ ಮಾಡುತ್ತಿದ್ದ ಹಾಗೆ ಈ ಬಾರಿಯೂ ಅಜ್ಜಿ ಸ್ವಲ್ಪ ಹಣ್ಣು ತಿಂದು ಇರುತ್ತಿದ್ದರು. ನಿರಂತರವಾಗಿ ಬಾಪೂಜಿಯ ಸೇವೆ ಮಾಡುತ್ತ ಇದ್ದರು. ಆದರೆ ೧೯ನೆಯ ದಿನದ ಯಾತನೆ ನೋಡಿ ಆಕೆ ನಡುಗಿ ಹೋಗಿದ್ದರು. ಆ ದಿನ ಅಜ್ಜಿ ತುಳಸಿಕಟ್ಟೆ ಹತ್ತಿರ ಹೋದರಂತೆ, ಪ್ರತಿ ದಿನ ಅಜ್ಜಿ ತುಳಸೀಗೆ ದೀಪ ಹಚ್ಚುತ್ತಿದ್ದರು.  ಆ ದಿನವೂ ದೀಪ ಹಚ್ಚಿ ತುಳಸಿ ಮುಂದೆ ತಲೆ ಬಾಗಿ ಎರಡು ಕ್ಷಣ ನಿಂತಿದ್ದರು ಅಂತ ಮೀರಾಬಹನ್ ಹೇಳಿದರು. ಬಾಪೂಜಿ ಪ್ರಾಣವನ್ನು ಕಾಪಾಡಿ ಅಂತ ಅಜ್ಜಿ ದೇವರಲ್ಲಿ ಬೇಡಿಕೊಂಡರು ಅಂತ ಮೀರಾ ಬಹನ್‌ಗೆ ಅನಿಸಿತಂತೆ. ಅವರ ಮುಖದಲ್ಲಿ ಒಂದು ಸಮರ್ಪಣೆ, ಭಕ್ತಿಯ ಬೇಡಿಕೆ ಕಾಣಿಸುತ್ತಿತ್ತಾದ್ದರಿಂದ ಸ್ವಾಭಾವಿಕವಾಗಿ ಹೀಗೆ ಅನ್ನಿಸುತ್ತಿತ್ತು.

ಈ ಉಪವಾಸದ ಸಂದರ್ಭದಲ್ಲಿ ನಮ್ಮ ತಂದೆ ನಮ್ಮನ್ನೆಲ್ಲಾ ಮರೆತೇಬಿಟ್ಟಿದ್ದ ಹಾಗಿತ್ತು. ಮತ್ತು ಪ್ರತಿದಿನ ನಾವು ಬಾಪೂಜಿ – ಅಜ್ಜಿ ಇಬ್ಬರನ್ನೂ ಭೇಟಿಯಾಗಲು ಆಗಾಖಾನ್ ಪ್ಯಾಲೇಸ್‌ಗೆ ಹೋಗುತ್ತಿದ್ದೆವು. ಅಲ್ಲಿದ್ದ ದೊಡ್ಡ–ದೊಡ್ಡ ಕೊಠಡಿಗಳು, ದೊಡ್ಡ ಅಂಗಳ, ತೋಟ ಇವು ನಮಗೆ ಆನಂದ ನೀಡುವಂತಹವಾಗಿರಲಿಲ್ಲ. ಎಲ್ಲರೂ ಚಿಂತೆಮಾಡುತ್ತ ಅಲ್ಲಲ್ಲಿ ನಿಂತಿರುತ್ತಿದ್ದೆವು. ಬಾಪೂಜಿ ಬಳಿ ಮಹಾದೇವ ಕಾಕಾ ಇಲ್ಲದೆ ಇದ್ದುದ್ದನ್ನು ನೋಡಿ ನಮ್ಮ ಹೃದಯ ಒಡೆದುಹೋಗುತ್ತಿತ್ತು. ನಾವು ಅವರ ಸಮಾಧಿಗೂ ಹೋದೆವು, ಆದರೆ ಸಮಾಧಿಯಿಂದ ಶಾಂತಿ ಎಲ್ಲಿ ಸಿಗುತ್ತಿತ್ತು. ನಮ್ಮ ಅತೀವ ಪ್ರಿಯರಾದ ಕಾಕಾ ಇಲ್ಲವಲ್ಲ ಅಂತಲೇ ನನಗನ್ನಿಸುತ್ತಿತ್ತು. ಈ ಉಪವಾಸದ ಗಹನ–ಗಂಭೀರ ದಿನಗಳಲ್ಲೂ ಸರೋಜಿನಿ ನಾಯ್ಡು  ಸ್ವಲ್ಪ ನಕ್ಕು ಮಾತನಾಡುತ್ತಿದ್ದರು. ಅದರಿಂದ ವಾತಾವರಣ ಹಗುರವಾಗುತ್ತಿತ್ತು. ಅಜ್ಜಿ ಬಹಳ ಉದಾರಿ. ಅದರಿಂದಲೇ ಬಾಪೂಜಿ ಆರೋಗ್ಯ ಇಷ್ಟು ಕೆಟ್ಟಿದ್ದರೂ, ನಾನು ಉಷಾ, ಕಾನ್ಹಾನನ್ನು ಬಾಪೂಜಿ ಹತ್ತಿರ ಹೋಗಲು ಬಿಡುತ್ತಿದ್ದರು. ಈ ಉಪವಾಸ ತೀರಿದ ಮೇಲೆ ಬಾಪೂಜಿಗೆ ಸ್ವಲ್ಪ ಸ್ವಲ್ಪವಾಗಿ ಶಕ್ತಿ ಕೂಡಿಕೊಂಡಿತು. ಅವರು ಜೈಲಿನಲ್ಲಿ ಎಲ್ಲರಿಗೂ ರಾಮಾಯಣ ಹೇಳಿಕೊಡುತ್ತಿದ್ದರು. ಬರೆಯುತ್ತಿದ್ದರು, ಓದುತ್ತಿದ್ದರು. ಬಾಪೂಜಿ ಆರೋಗ್ಯ ಸುಧಾರಿಸಿತೊಡಗಿತು. ಅದೇ ಸಮಯಕ್ಕೆ ದೇವರಿಗೆ ಕೊಟ್ಟಿದ್ದ ವಚನವನ್ನು ಪಾಲಿಸುತ್ತಿರುವ ರೀತಿ ಅಜ್ಜಿ ದಿನೇ ದಿನೇ ಜರ್ಜರಿತಳಾಗತೊಡಗಿದರು. ಮಹದೇವ ಕಾಕಾನ ಸಾವು, ಬಾಪೂಜಿ ಉಪವಾಸ —ಇವೆರಡೂ ಆ ಸತೀ ಸಾಧ್ವಿಯ ಸಾಹಸವನ್ನು ಹಿಸುಕಿಹಾಕಿದ್ದವು. ಬಾಪೂಜಿ ಉಪವಾಸ ಮಾಡುತ್ತಿದ್ದಾಗ ಇಡೀ ಪ್ರಪಂಚವೇ ಚಿಂತೆಯಿಂದಿತ್ತು. ನಮ್ಮ ತಂದೆ ಮತ್ತು ದೇವದಾಸ್ ಕಾಕಾ ಇಬ್ಬರೂ ಉದ್ವಿಗ್ನರಾಗಿದ್ದರು. ಅವರ ತಳಮಳವನ್ನು

ನೋಡಿ, 'ಅಜ್ಜಿ ನೀ ಚಿಂತೆ ಮಾಡಬೇಡ, ಬಾಪೂಜಿ ಸರಿಹೋಗುತ್ತಾರೆ. ನಾನು ಅವರ ಮಡಿಲಿಗೆ ಬರಬೇಕಲ್ಲವೆ' ಎಂದಿದ್ದರು.

ನಾವು ಅವರ ಬಳಿಯಿಂದ ಹೊರಟುನಿಂತಾಗ ನಮ್ಮ ತಂದೆ ತಮ್ಮ ತಾಯಿಗೆ, "ನಿನ್ನ ಆರೋಗ್ಯವನ್ನ ನೋಡಿಕೋ, ನಿನ್ನ ಆರೋಗ್ಯ ಸರಿಯಾಗಿಲ್ಲ ಅಂತ ನನಗನಿಸುತ್ತಿದೆ" ಎಂದು ಹೇಳಿದರು. ಅದಕ್ಕೆ ಅಜ್ಜಿ "ಇನ್ನು ಸರಿ ಏನು ಸರಿಹೋಗುತ್ತೆ, ನಾನು ಈ ಜೈಲಿನಿಂದ ಹೊರಕ್ಕೆ ಬರುವುದಿಲ್ಲ. ಮಹಾದೇವ ಹೋದ, ಇನ್ನೂ ನನ್ನ ಸರದಿ" ಅಂತ ಅಂದರು. ನಮ್ಮ ತಂದೆ ಅದಕ್ಕೆ ಏನು ಹೇಳಿದರು ಅಂತ ನನಗೆ ನೆನಪಿಲ್ಲ ಆದರೆ ಅವರಿಬ್ಬರ ಕಣ್ಣುಗಳೂ ತೇವವಾಗಿದ್ದು ನನಗೆ ನೆನಪಿದೆ. ಎಂಥ ಮೂಕವೇದನೆ ! ಎಂಥ ಮೌನ ಸಾಹಸ ! ಅದೇ ರೀತಿಯ ಅವ್ಯಕ್ತ ಬಲಿದಾನ ! ಆದರೆ ಆ ಕಾಲದ ಮನುಷ್ಯರು ಹೀಗೆ ಎಲ್ಲವನ್ನೂ ಸಹಿಸಿಕೊಂಡು ಬಿಡುತ್ತಿದ್ದರೆಂದು ಕಾಣುತ್ತದೆ, ತಮ್ಮ ಸರ್ವಸ್ವವನ್ನೂ ಸಮರ್ಪಿಸಿಬಿಡುತ್ತಿದ್ದರು. ಆ ಜನರ ಪ್ರಪಂಚದಲ್ಲಿ ಶಾಸ್ತ್ರ, ಸಿದ್ಧಾಂತ, ರಾಜಕೀಯ ಕುಟಿಲತೆಗಳ ಕಡೆ ಗಮನವೇ ಇರುತ್ತಿರಲಿಲ್ಲ. ಪಿಷ್ಟಪೇಷಣ ಮಾಡಿದ್ದನ್ನೇ ಮಾಡುತ್ತಿರಲಿಲ್ಲ. ಎದುರಿಗೆ ಬಂದ ಕರ್ತವ್ಯವನ್ನ ನಿರ್ವಹಿಸುತ್ತಿದ್ದರೂ ಪರಿಣಾಮ ಏನಾಗುತ್ತದೆ ಅಂತ ಆಸೆ ಇಟ್ಟುಕೊಂಡಿರುತ್ತಿರಲಿಲ್ಲ. ತಾವು ಬದುಕಿರುವಾಗಲೇ ಸ್ವಾತಂತ್ರ್ಯ ಸಿಗುತ್ತದೆ, ಅನ್ನುವ ಆಸೆ ಕೂಡ ಅವರಿಗಿರಲಿಲ್ಲ. ಸ್ವರ್ಣಿಮ ಸ್ವಪ್ನ ಸಿಗುತ್ತದೆ ಅನ್ನುವ ಆಸೆ ಕೂಡ ಅವರಿಗಿರಲಿಲ್ಲ. ಸುಮ್ಮನೆ ತಮ್ಮ ಕರ್ತವ್ಯವನ್ನು ಪಾಲಿಸುತ್ತಾ ಪ್ರಾಣಬಿಡುತ್ತಿದ್ದರು. ಬಹುಶಃ ನಮ್ಮಜ್ಜಿ ಅಂಥ ವಿಶಿಷ್ಟ ಸ್ವರೂಪದ ಮಣ್ಣಿನಿಂದ ಆಗಿದ್ದಿರಬೇಕು– ಅಂದರೆ ಗುರಿ ಇನ್ನೂ ಎಷ್ಟು ದೂರ ಇದೆ ಅಂತ ಆಕೆ ಕೇಳಲೇ ಇಲ್ಲ. ಅವರಂತೂ ದೇವರ ಹತ್ತಿರ ತನ್ನ ಗಂಡನ ಪ್ರಾಣದ ಪಣ ಕಟ್ಟಿದ್ದರಲ್ಲ, ತನ್ನ ಗಂಡನನ್ನು ದೇವರ ಹತ್ತಿರದಿಂದ ಉಳಿಸಿಕೊಂಡು ಬಂದಿದ್ದರು. ಈಗ ಕಸ್ತೂರಿಗೆ ತನ್ನ ಕರ್ತವ್ಯ ಪಾಲಿಸುವುದಿತ್ತು. ಅವರ ಮನಸ್ಸಿನಲ್ಲಿ ಈ ವಿಷಯವಾಗಿ ಸ್ವಲ್ಪವಾದರೂ ಭಯವಿತ್ತು ಅಂತ ನನಗನಿಸಲಿಲ್ಲ. ಅಜ್ಜಿಯ ಅನಾರೋಗ್ಯದ ಸ್ಥಿತಿಯಲ್ಲೂ ನಾನು ಎರಡೂ ಬಾರಿ ಆಗಾಖಾನ್ ಪ್ಯಾಲೇಸ್‌ಗೆ ಹೋಗಿದ್ದೆ, ಅಮ್ಮ–ಅಪ್ಪ ಇಬ್ಬರೂ ಸಾಮಾನ್ಯವಾಗಿ ಪ್ರತಿ ತಿಂಗಳೂ ಪೂನಾಕ್ಕೆ ಹೋಗುತ್ತಿದ್ದರು. ೩–೪ ಸಾರಿ ಅವರನ್ನು ಭೇಟಿಯಾಗಿ ಬರುತ್ತಿದ್ದರು. ದೇವದಾಸ್ ಕಾಕಾ ಮತ್ತು ನಮ್ಮ ತಂದೆ ಇಬ್ಬರಿಗೂ ಅಜ್ಜಿಯನ್ನು ಪ್ರತಿ ತಿಂಗಳೂ ಭೇಟಿ ಮಾಡಲು ಅನುಮತಿ ಇತ್ತು. ಅಜ್ಜಿ ಬಹಳ ಅನಾಸಕ್ತಿಯಿಮದ ಬದುಕುವ ಇಚ್ಛೆಯನ್ನು ತೊರೆದಿದ್ದರು. ಪ್ರತಿ ದಿನ ತಮ್ಮ ವಚನಪಾಲನೆಗಾಗಿ ಮೃತ್ಯುವಿನ ದಾರಿ ಕಾಯುತ್ತಿದ್ದಳು. ಅವರ ಮಗು ಮಹಾದೇವ ಸಮಯಕ್ಕೆ ಮೊದಲೇ ಒಂಟಿಯಾಗಿ ವೈತರಿಣಿಯನ್ನು ದಾಟಿ ಹೊರಟು ಹೋದ ಅಂತ ಅವರಿಗೆ ಅನಿಸುತ್ತಿತ್ತು. ಆ ಕಳೆದು ಹೋದ ಮಗನನ್ನು

ಹುಡುಕಿ ಅವನಿಗೆ ಜೊತೆ ಕೊಡಬೇಕಾಗಿತ್ತು. ದೇವರು ಅಜ್ಜಿಯ ಪ್ರಾರ್ಥನೆಯನ್ನು ಕೇಳಿಸಿಕೊಂಡ.

೧೯೪೪ರ ಫೆಬ್ರವರಿ ೨೨ ರಂದು ಶಿವರಾತ್ರಿಯ ಸಂಜೆಯ ವೇಳೆ ಪೂನಾದ ಕಾರಾವಾಸದಲ್ಲಿ ಅವರ ದೇಹಾಂತವಾಯಿತು. ಬಾಪೂಜಿ ಹತ್ತಿರ ಹೋಗಿ, ಅಜ್ಜಿಯನ್ನು ತನ್ನ ತೊಡೆಯ ಮೇಲೆ ಹಾಕಿಕೊಂಡರು. ಆಗ ಪತಿವ್ರತೆ ಪ್ರಾಣ ತ್ಯಜಿಸಿದರು. ಅವರ ಆತ್ಮ ಜೈಲಿನ ಸರಳುಗಳಿಂದ ಹೊರಟು, ಪತಿಯ ತೊಡೆಯ ಮೇಲೆ ಸಾಯುವ ಇಚ್ಛೆಯನ್ನು ಪೂರೈಸಿಕೊಂಡು ದೇವರ ಮನೆಗೆ ಹೊರಟುಹೋಯಿತು. ಸಹಚರಿಯ ಭುಜದ ಮೇಲೆ ತಲೆಯಿಟ್ಟು ಬಾಪೂಜಿ ಅತ್ತರು. ದೇವದಾಸ್ ಕಾಕಾ ಅಂತೂ ಬಿಕ್ಕಿ-ಬಿಕ್ಕಿ ಅತ್ತರು. ಬಾಪೂಜಿ ಮತ್ತು ದೇವದಾಸ್ ಗಾಂಧಿ ಅಜ್ಜಿಯ ನಿಶ್ಚೇಷ್ಟ ಶರೀರಕ್ಕೆ ಸ್ನಾನ ಮಾಡಿಸಿದರು. ಹಸುವಿನ ಸಗಣಿಯಿಂದ ಸಾರಿಸಿದ ಪವಿತ್ರ ಭೂಮಿಯ ಮೇಲೆ, ತಮ್ಮ ಕೈಯಿಂದ ನೂಲು ತೆಗೆದು ನೆಯ್ದ ಬಟ್ಟೆಯನ್ನು ಬಾಪೂಜಿ ಅಜ್ಜಿಯ ಶರೀರಕ್ಕೆ ಸುತ್ತಿ ಮಲಗಿಸಿದರು. ಯಾರೋ ಕೈದಿ ಹಸಿರು ಗಾಜಿನ ಬಳೆಗಳನ್ನು ತಂದುಕೊಟ್ಟ. ಸೌಭಾಗ್ಯವತಿಯ ಅರ್ಥಿಯ ಮೇಲೆ ಕುಂಕುಮ ಬಳೆ ಯಾವಾಗಲೂ ಇಡಲಾಗುತ್ತದೆ. ದೇವದಾಸ್ ಕಾಕಾ ತನ್ನ ಪ್ರೀತಿಯ ತಾಯಿಗೆ ಅಗ್ನಿಸಂಸ್ಕಾರ ಮಾಡಿದರು. ಸುಮಾರು ಹೊತ್ತು ಚಿತೆ ಸುಡುತ್ತಿತ್ತು. ಬಾಪೂಜಿ ಪೂರ್ತಿ ಸಮಯ ಅಲ್ಲೇ ನಿಂತಿದ್ದರು. ನಮ್ಮ ತಂದೆ ಅಂತಿಮ ಸಂಸ್ಕಾರವಾದ ಮೇಲೆ ಬಂದರು. ಅವರು ತಮ್ಮ ತಾಯಿಯ ಕೋಮಲವಾದ ಶರೀರ ಸುಡುತ್ತಿರುವುದನ್ನು ನೋಡಿದರು. ಬಾಪೂಜಿ ಅವರನ್ನು ಆಲಿಂಗಿಸಿಕೊಂಡರು. ಬಾಪೂಜಿ ಹೆಚ್ಚೇನೂ ಹೇಳಲಿಲ್ಲ. ತಮ್ಮ ದುಃಖವನ್ನು ನುಂಗಿಕೊಂಡರು. ಅವರು ತೀರ ದುರ್ಬಲರಾಗತೊಡಗಿದರು. ಮೂರು ದಿನಗಳ ನಂತರ ಆಗಾಖಾನ್ ಜೈಲಿನ ಬಾಗಿಲು ಪುನಃ ಮುಚ್ಚಿತು. ನಮ್ಮ ತಂದೆ ಮತ್ತು ಕಾಕಾ ತಮ್ಮ ತಂದೆಗೆ ನಮಸ್ಕಾರ ಮಾಡಿದರು. ಕಣ್ಣುಗಳಲ್ಲೇ ಕೇಳಿದರು: 'ಮತ್ತೆ ಯಾವಾಗ ಭೇಟಿ?' ಬಾಪೂಜಿ ಹೇಳಿದರು: ಸರಕಾರ ನನ್ನನ್ನು ಬಿಡುವುದಿಲ್ಲ. ಏಳು ವರ್ಷ ಪೂರ್ತಿ ಇರಬೇಕಾಗುತ್ತೆ, ಅಂತ ಅನ್ನಿಸುತ್ತದೆ. ಈಗಿನ್ನೂ ಒಂದೂವರೆ ವರ್ಷ ಕಳೆದಿದೆ. ಇನ್ನೂ ಬಹಳ ಸಮಯವಿದೆ.'

ಜೈಲಿನಲ್ಲಿ ಬಾಪೂಜಿಯ ಹೊಟ್ಟೆಯಲ್ಲಿ ಹುಳುಗಳು (ಹುಕ್ ವರ್ಮ್) ಆದವು. ದಿನೇ ದಿನೇ ಬಹಳ ದುರ್ಬಲರಾಗತೊಡಗಿದರು. ತೀರಾ ಕಾಂತಿಹೀನರಾದರು. ಆ ಸ್ಥಿತಿಯಲ್ಲಿ ಅವರಿಗೆ ಮಲೇರಿಯಾ ಆಯಿತು. ಜೈಲಿನ ಬಳಿ ಭಯಂಕರ ರಾಕ್ಷಸ ಜಾತಿಯ ಸೊಳ್ಳೆಗಳಿದ್ದವು. ಜೈಲಿನಲ್ಲಿದ್ದವರೆಲ್ಲರಿಗೂ ಮಲೇರಿಯಾ ಆಗಿಹೋಗಿತ್ತು. ಆದರೆ ಮೊದಲೇ ಬಾಪೂಜಿ ಆರೋಗ್ಯ ಸರಿಯಾಗಿರಲಿಲ್ಲವಾದ್ದರಿಂದ ಪೂರ್ತಿ ನಿಃಶಕ್ತಿಯಾಯಿತು. ಮನೋಬಲದಿಂದ

ಏಳುತ್ತಿದ್ದರು, ಕುಳಿತುಕೊಳ್ಳುತ್ತಿದ್ದರು. ಆದರೆ ಶಕ್ತಿ ಇರಲಿಲ್ಲ. ಅಂತಹ ತಪೋಬಲವನ್ನು ನೋಡಿ ಚರ್ಚಿಲ್‌ನ ಕಠೋರ ಸರ್ಕಾರದ ಧೈರ್ಯ ಕುಗ್ಗಿ ಹೋಯಿತು. ಎರಡು ಸಾವುಗಳಾದ ನಂತರ ಮೂರನೆಯ ಸಾವು ಕೂಡ ಜೈಲಿನಲ್ಲಾಗಬಾರದೆಂಬುದು ಸರ್ಕಾರದ ಇಚ್ಛೆಯಾಯಿತು. ಅಂತಹ ಅನರ್ಥವೇನಾಧರೂ ಆಗಿದ್ದಿದ್ದರೆ ವಿಶ್ವಯುದ್ಧ ನಡೆಯುತ್ತಿರುವಾಗಲೂ ಇತರ ರಾಷ್ಟ್ರಗಳು ಖಂಡಿತ ಇಂಗ್ಲೆಂಡ್‌ನ್ನು ಕ್ಷಮಿಸುತ್ತಿರಲಿಲ್ಲ. ರಾಷ್ಟ್ರಗಳು ಕ್ರಿಯಾತ್ಮಕವಾಗಿ ನೀಡುತ್ತಿದ್ದ ಸಹಾಯ, ಸಹಾನುಭೂತಿ ಖಂಡಿತ ಕಡಿಮೆಯಾಗುತ್ತಿತ್ತು. ಅಷ್ಟಲ್ಲದೆ ಭಾರತ ದೇಶದ ನಿವಾಸಿಗಳೇನು ಮಾಡಬಹುದು ಎಂಬುದನ್ನು ಊಹಿಸಲೂ ಕಷ್ಟವಾಗುತ್ತಿತ್ತು. ಲಂಡನ್ ನಗರದ ಮೇಲೆ ಹಿಟ್ಲರ್ ಬಾಂಬ್ ಹಾಕುತ್ತಲೇ ಇದ್ದ. ಅಂತಹ ವಿಪತ್ತಿನ ಪರಿಸ್ಥಿತಿಯಲ್ಲಿ ಗಾಂಧೀ ಸಾವಿನ ಹೊಣೆಯನ್ನು ಹೊರುವ ಧೈರ್ಯ ಚರ್ಚಿಲ್‌ಗೂ ಇರಲಿಲ್ಲ. ಅಜ್ಜಿ ತೀರಿಕೊಂಡ ಆರು ವಾರಗಳ ನಂತರ ೮ ಮೇ ೧೯೪೪ರಂದು ಬೆಳಿಗ್ಗೆ ೮ ಗಂಟೆಗೆ ಸರಕಾರ ಬೇಶರತ್ತಾಗಿ ಗಾಂಧೀಜಿಯನ್ನು ಬಿಡುಗಡೆ ಮಾಡಿತು. ಶರತ್ತುಗಳನ್ನು ಹಾಕಿದ್ದರೆ ಗಾಂಧೀ ಎಂದೂ ತಮ್ಮ ಬಿಡುಗಡೆಗೆ ಸಿದ್ಧವಾಗುವುದಿಲ್ಲವೆಂದು ಸರಕಾರಕ್ಕೆ ಗೊತ್ತಿತ್ತು. ತಾವು ಹೊರಗೆ ಹೋಗಿ ಯಾವುದೇ ವಕ್ತವ್ಯ ನೀಡುವುದಿಲ್ಲವೆಂದು ಮಿಕ್ಕ ಜೊತೆಗಾರರ ಹತ್ತಿರ ಬರೆಸಿಕೊಂಡಿದ್ದರು. ಎಂತಹ ತಮಾಷೆ, ವಕ್ತವ್ಯದ ಅಗತ್ಯ ಎಲ್ಲಿತ್ತು? ಇಂತಹ ಹಾಸ್ಯಾಸ್ಪದ ಷರತ್ತುಗಳೊಂದಿಗೆ ಆಗಾಖಾನ್ ಪ್ಯಾಲೇಸ್‌ನ ೨೨ ತಿಂಗಳ ಕಾರಾವಾಸದ ಕತೆ ಮುಗಿಯಿತು. ಜೈಲಿನಿಂದ ಹೊರಕ್ಕೆ ಬರುವುದಕ್ಕೆ ಮುಂಚೆ ಬಾಪೂಜಿ ತಮ್ಮ ೬೦ ವರ್ಷಗಳ ಸಹಚರಿ ಕಸ್ತೂರಬಾ ಮತ್ತು ತನ್ನ ಕಣ್ಮಣಿ ಮಹಾದೇವ ದೇಸಾಯಿಯ ಸಮಾಧಿಗಳಿಗೆ ಹೋದರು. ಚಿರನಿದ್ರೆಯಲ್ಲಿದ್ದ ಆ ಜೊತೆಗಾರರಿಗಾಗಿ ಮೌನ ಪ್ರಾರ್ಥನೆ ಸಲ್ಲಿಸಿದರು. ಬೀಳ್ಕೊಂಡರು. ಅನಂತರದ ಇತಿಹಾಸ ಎಲ್ಲರಿಗೂ ತಿಳಿದಿರುವುದೇ, ಅದರಿಂದ ಇನ್ನು ಹೆಚ್ಚು ವಿವರ ನೀಡಲು ಹೋಗಿಲ್ಲ. ಅದಕ್ಕಾಗಿ ಪಾಠಕರು ನನ್ನನ್ನು ಕ್ಷಮಿಸಬೇಕು.

* * * *

# ೨೪. ದೇಶದ ಕರೆ

೮ ಮೇ ೧೯೪೪ ರಂದು ಆಗಾಖಾನ್ ಜೈಲಿನಿಂದ ಬಾಪೂಜಿ ಬಿಡುಗಡೆಯಾಗಿ ಬಂದಾಗ ದೇಶ ಸೋತುಸುಣ್ಣವಾಗಿತ್ತಾದರೂ ಪೂರ್ತಿಯಾಗಿ ಮೇಲೂ– ಹೋಗಿರಲಿಲ್ಲ. ಎಲ್ಲ ಸಂಸ್ಥೆಗಳ, ಕಾಂಗ್ರೆಸ್ ಇತ್ಯಾದಿ ಪ್ರತಿಯೊಂದರ ಮೇಲೂ ಪ್ರತಿಬಂಧಕಾಜ್ಞೆ ವಿಧಿಸಿದ್ದರು. ಸರಕಾರ ತೀವ್ರ ಅನ್ಯಾಯಗಳಲ್ಲಿ ತೊಡಗಿತ್ತು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರೆಲ್ಲರೂ ಅಹಮದಾಬಾದ್‌ನ ಕೋಟೆಯಲ್ಲಿ ಬಂಧನದಲ್ಲಿದ್ದರು, ಎಲ್ಲೆಡೆಯಲ್ಲೂ ಬ್ರಿಟಿಷ್ ರಾಜ್ಯದ ಕ್ರೌರ್ಯದಿಂದ ದೇಶ ನರಳುತ್ತಿತ್ತು, ದೇಶ ಒಂದು ವಿಶಾಲವಾದ ಕಾನ್ಸೆಂಟ್ರೇಷನ್ ಕ್ಯಾಂಪ್ ಆಗಿ ಹೋಗಿತ್ತು, ಆದರೆ ಬಾಪೂಜಿ ಬಿಡುಗಡೆಯಾದ್ದರಿಂದ ಒಂದು ವ್ಯತ್ಯಾಸ ಕಂಡುಬಂತು. ದೇಶದ ಎಲ್ಲೆಡೆಯಿಂದ ಮತ್ತು ವಿದೇಶಗಳಿಂದಲೂ ಅಭಿನಂದನೆಯ ತಾರುಗಳು ಬರತೊಡಗಿದವು, ಜನರ ಹೃದಯದಲ್ಲಿ ಆತ್ಮವಿಶ್ವಾಸ ಜಾಗೃತವಾಗತೊಡಗಿತು, ದೇಶದಲ್ಲಿ ಶೂನ್ಯತೆ ಆವರಿಸಿತ್ತಾದರೂ ದೇಶದ ಬಾವುಟ ಎತ್ತರದಲ್ಲಿತ್ತು, ತೀರ ಕೆಳಕ್ಕುರುಳಿರಲಿಲ್ಲ. 'ಕರೇಂಗೆ ಯಾ ಮರೇಂಗೆ' ('ಮಾಡುವೆವು ಇಲ್ಲವೇ ಮಡಿಯುವೆವು') ನ ಘೋಷಣೆ ಇನ್ನೂ ಮುಗಿದಿರಲಿಲ್ಲ, ಬಾಪೂಜಿ ಬಂದುದರಿಂದ ಈಗ ಜನರ ಗಮನ ಮತ್ತೆ ಆ ಕಡೆ ಕೇಂದ್ರಿತವಾಯಿತು.

ಗಾಂಧೀಜಿಯನ್ನು ಬಿಡುಗಡೆ ಮಾಡಿರುವುದರಿಂದ ಅವರೀಗ 'ಭಾರತ ಛೋಡೋ'ನ ಕಾಂಗ್ರೆಸ್ಸಿನ ಠರಾವನ್ನ ಹಿಂದಕ್ಕೆ ಪಡೆಯಲಿ ಎಂದು ಸರಕಾರ ಬಯಸುತ್ತಿತ್ತು. ಬಾಪೂಜಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಜೈಲಿನಲ್ಲಿರುವುದರಿಂದ, ಅವರ ಜೊತೆ ಚರ್ಚೆ ನಡೆಸದೆ ಕಾಂಗ್ರೆಸ್ ಕಮಿಟಿಯ ಪ್ರಸ್ತಾವವನ್ನು ಯಾರೊಬ್ಬ ವ್ಯಕ್ತಿ ವಜಾ ಮಾಡಲಾಗುವುದಿಲ್ಲವೆಂದೂ, ತಾವು ಎಲ್ಲರೂ ಒಪ್ಪಿರುವ ಮುಖಂಡರೆಂಬುದು ನಿಜವಾದರೂ ತಮಗೂ ಈ ಅಧಿಕಾರ ಇರಲಿಲ್ಲವೆಂದೂ, ಸರಕಾರ ವರ್ಕಿಂಗ್ ಕಮಿಟಿಯ ಸದಸ್ಯರನ್ನು ಬಿಡುಗಡೆ ಮಾಡಲಿ ಇಲ್ಲವೇ, ಅವರನ್ನು ಭೇಟಿಯಾಗಲು ಸರಕಾರ ಅನುಮತಿ ನೀಡಲಿ ಎಂದೂ ಬರೆದರು, ವೈಸ್‌ರಾಯ್ ಲಾರ್ಡ್ ವೆವೆಲ್‌ಗೆ ಈ ಒಂದು ಮಾರ್ಗ ಬಿಟ್ಟರೆ 'ಭಾರತ್ ಛೋಡೋ' ಪ್ರಸ್ತಾವವನ್ನು ಹಿಂದಕ್ಕೆ ತೆಗೆದುಕೊಳ್ಳಲು ಬೇರಾವ ಮಾರ್ಗವೂ ಇರಲಿಲ್ಲ, 'ಭಾರತ್ ಛೋಡೋ' ಬೇಡಿಕೆ ಬಾಪೂಜಿಗೆ ಪ್ರಾಣವಾಯು ಇದ್ದಂತಿತ್ತು,

ದೇಶದ ಹಿತಕ್ಕಾಗಿ ಇದಕ್ಕಿಂತ ಹೆಚ್ಚಿನ ಮಹತ್ವದ ಯಾವುದೇ ಬೇಡಿಕೆಯನ್ನೂ ಬಾಪೂಜಿ ಬಹುಶಃ ಬಿಟ್ಟು ಬಿಡುತ್ತಿದ್ದರೇನೋ ! ಆದರೆ ವರ್ಕಿಂಗ್ ಕಮಿಟಿಯೊಂದಿಗೆ ಭೇಟಿ ಮಾಡದೆ ಈ ಕೆಲಸ ಮಾಡುವುದು ಸಾಧ್ಯವಿರಲಿಲ್ಲ, ಚರ್ಚಿಲ್ ಸರಕಾರ ಪೂರ್ತಿ ಸಮರ್ಪಣೆಯನ್ನು ಬಯಸುತ್ತಿತ್ತು. ದೇಶದಲ್ಲಿ ಯಾರೊಬ್ಬರೂ ಆ ಸಮರ್ಪಣೆಗೆ ತಯಾರಿರಲಿಲ್ಲ, ಬಾಪೂಜಿ ಅಂತೂ ಅದಕ್ಕೆ ಸಿದ್ಧವಿರಲೇ ಇಲ್ಲ, ಬಾಪೂಜಿ ಮತ್ತು ಲಾರ್ಡ್ ವೆವೆಲ್ ನಡುವೆ ಸಾಕಷ್ಟು ಪತ್ರ ವ್ಯವಹಾರ ನಡೆಯಿತು, ವೆವೆಲ್ ಹಸ್ತಾಕ್ಷರ ಇದ್ದರೂ ಪತ್ರಗಳ ಭಾಷೆ ಒಕ್ಕಣೆ ಚರ್ಚಿಲಿನದೇ ಆಗಿರುತ್ತಿತ್ತು, ಚರ್ಚಿಲರಿಗಂತೂ ಗಾಂಧೀಜಿಯನ್ನು ಕಂಡರಾಗುತ್ತಿರಲಿಲ್ಲ. ಆತ ಲಂಡನ್ನಿನ ಸಂಸತ್ತಿನಲ್ಲಿ ರಾಜಾರೋಷಾಗಿ, 'ಭಾರತದ ಈ ಬೆತ್ತಲೆ ಫಕೀರನನ್ನು ನಾವು ಹೊಸಕಿ ಹಾಕುತ್ತೇವೆಂದು' ಹೇಳಿದ್ದರು. ೧೭ ಜುಲೈ ೧೯೪೪ರಂದು ಪಂಚಗನಿಯಿಂದ ಬಾಪೂಜಿ ಚರ್ಚಿಲರಿಗೊಂದು ಪತ್ರ ಬರೆದರು:

"ನಾನು ಬೆತ್ತಲೆ ಫಕೀರ, ನನ್ನನ್ನು ನೀವು ಹೊಸಕಿ ಹಾಕಬಯಸಿದ್ದೀರಿ, ನಾನು ಬಹಳ ಕಾಲದಿಂದಲೂ ಫಕೀರನಾಗಬಯಸಿದ್ದೇನೆ, ಬೆತ್ತಲೆ ಆಗುವುದಂತೂ ಕಷ್ಟ. ಬಹುಶಃ ನೀವೂ ಹಾಗಿಷ್ಟಪಟ್ಟಿರಲಾರಿರಿ, ಆದರೂ ನಿಮ್ಮ ಈ ಮಾತುಗಳು ನನಗೆ ಪ್ರಶಂಸೆಯ ಹಾಗನಿಸುತ್ತವೆ, ತಾವು ಒಬ್ಬ ಫಕೀರನ ಬಗ್ಗೆ ಗೌರವ ತೋರಿ ನಿಮ್ಮ ಮತ್ತು ನಮ್ಮ ಜನರ ಮೂಲಕ ಪ್ರಪಂಚದ ಜನರ ಒಳಿತಿಗಾಗಿ ನನ್ನನ್ನು ಉಪಯೋಗಿಸಿಕೊಳ್ಳಿ.

ತಮ್ಮ ವಿಶ್ವಾಸಿ ಮಿತ್ರ – ಮೋ. ಕ. ಗಾಂಧಿ"

ಈ ಪತ್ರಕ್ಕೆ ಉತ್ತರ ಬರಲೇ ಇಲ್ಲ.

ನಿಜವಾಗಿ ಹೇಳಬೇಕೆಂದರೆ ಬ್ರಿಟಿಷ್ ಸರಕಾರಕ್ಕೆ ಕಾಂಗ್ರೆಸ್ ಮೇಲೆ, ಭಾರತದ ಸ್ವಾತಂತ್ರ್ಯದ ಬಗ್ಗೆ, ಅದೆಲ್ಲಕ್ಕಿಂತ ಹೆಚ್ಚಾಗಿ ಬಾಪೂಜಿಯ 'ಅಹಿಂಸೆ' ಮತ್ತು 'ಭಾರತ ಬಿಟ್ಟು ತೊಲಗಿ' ಬೇಡಿಕೆಗಳ ಬಗ್ಗೆ ತಿರಸ್ಕಾರ, ಅಶ್ರದ್ಧೆ ಇದ್ದುದರಿಂದ ಅವರು ಯಾವ ತಿಳುವಳಿಕೆಯ, ಸಮಾಧಾನದ ಮಾತು ಆಡುವುದಕ್ಕೂ ತಯಾರಿರಲಿಲ್ಲ, ಅಂತಹ ನಿರಾಶಾದಾಯಕ ಪರಿಸ್ಥಿತಿಯಲ್ಲಿ ಬಾಪೂಜಿ ಎರಡು ಕೆಲಸಗಳನ್ನ ಆರಂಭಿಸಿದರು, ಆಂದೋಳನ ನಡೆಸುವುದಕ್ಕೆ ಈ ಸಂದರ್ಭ ಸರಿಯಾಗಿರಲಿಲ್ಲ, ಆದರೆ ಜನರಲ್ಲಿ ನೈತಿಕ ಧೈರ್ಯ ಬೆಳೆಸುವುದಕ್ಕೆ ಸತ್ಯಾಗ್ರಹವೇ ಬೇಕೆಂದೂ ಇರಲಿಲ್ಲ, ಇನ್ನೊಂದು ಈ ದೇಶವಾಸಿಗಳು ಕೆಟ್ಟವರೆಂಬ ಭಾವನೆಯನ್ನು ಪ್ರಪಂಚದಲ್ಲಿ ಹರಡಿಸಿದ್ದರಲ್ಲ, ಅದನ್ನು ತೊಡೆಸಿ ಹಾಕಬೇಕಾಗಿತ್ತು. ಪರಮಾಶ್ಚರ್ಯವೆಂದರೆ ಪ್ರಜಾತಂತ್ರವನ್ನು ರಕ್ಷಿಸಬೇಕೆಂದು ಪ್ರಪಂಚಯುದ್ಧ ನಡೆಯುತ್ತಿತ್ತು, ಆದರೆ ಪ್ರಜಾತಂತ್ರ ಬೇಕು ಅನ್ನುವ ಭಾರತದ ಬೇಡಿಕೆಯನ್ನ ವಿರೋಧಿಸುತ್ತಿದ್ದರು, 'ಭಾರತ್ ಛೋಡೋ' ಪ್ರಸ್ತಾವ ಕೂಡ ಯುದ್ಧದ ಪ್ರಜಾತಂತ್ರದ ಬೇಡಿಕೆಯ ಅಂಗವಾಗಿತ್ತು, ಬಾಪೂಜಿ

ಪ್ರಪಂಚದ ಇತರು ಜನರ ಮನಸ್ಸಿನಲ್ಲಿ ಮೂಡಿದ್ದ ಭ್ರಮೆಯನ್ನು ದೂರಮಾಡುವುದಕ್ಕಾಗಿ ವಿದೇಶಿ ಪತ್ರಕರ್ತರುಗಳಿಗೆ ಸಂದರ್ಶನ ನೀಡಿ ಅವರ ಪ್ರಶ್ನೆಗಳಿಗೆ ವ್ಯವಸ್ಥಿತವಾದ ಉತ್ತರ ನೀಡುವುದಕ್ಕೆ ಶುರು ಮಾಡಿದರು, ಸರಕಾರ ಅವರನ್ನ ಈ ಕೆಲಸ ಮಾಡದಿರುವಂತೆ ತಡೆಯುವುದಕ್ಕಾಗುತ್ತಿರಲಿಲ್ಲ. ಪ್ರತಿಯೊಬ್ಬ ಬಿಳಿಯ ಪತ್ರಕರ್ತನೂ ಅವರನ್ನು ಭೇಟಿ ಮಾಡಿದ ನಂತರ ಬಾಪೂ ಪ್ರಶಂಸಕವಾಗಿ ಭಾರತದ ಯೋಗ್ಯ ಬೇಡಿಕೆಯನ್ನು ಪ್ರತಿನಿಧಿಸಲು ಆರಂಭಿಸುತ್ತಿದ್ದ, ಬಾಪೂಜಿ ಲಂಡನಿನ್ನ 'ಕ್ರಾನಿಕಲ್' ಪತ್ರಿಕೆಯ ಪ್ರಶ್ನೆಗಳಿಗೆ ಉತ್ತರ ನೀಡುತ್ತಾ ಹೇಳಿದರು: 'ಆಗಸ್ಟ್ ಪ್ರಸ್ತಾವ ಒಂದು ಉದಾತ್ತವಾದ ತೇಜಸ್ವೀ ಪ್ರಾರ್ಥನೆ ಆಗಿದ್ದಲ್ಲಿ ನಾನದನ್ನು ಗೌರವಿಸುತ್ತೇನೆ, ಕಾಂಗ್ರೆಸ್ ಎಂದಿಗೂ ಅದನ್ನು ಅತಿಕ್ರಮಿಸುವುದಿಲ್ಲವೆಂದು ಆಶಿಸುತೇನೆ,' ಎಷ್ಟೋ ಜನ ವಿದೇಶೀಯರಿಗೆ ಭೇಟಿ ನೀಡಿದರು, ಎಷ್ಟೋ ಜನರಿಗೆ ಪತ್ರಗಳನ್ನು ಬರೆದರು. ಎಷ್ಟೋ ಜನರ ಸಂದೇಹಗಳನ್ನು ಪರಿಹರಿಸಿದರು, ಹೀಗೆ ವರ್ಕಿಂಗ್ ಕಮಿಟಿಯ ಸದಸ್ಯರುಗಳು ಅಹಮದ್‌ನಗರ ಜೈಲಿನಲ್ಲಿ ಬಂಧನದಲ್ಲಿದ್ದಾಗ, ಬಾಪೂಜಿ ದೂಷಿತ ವಾತಾವರಣವನ್ನು ಸರಿಪಡಿಸಿ ಸಮಾಧಾನಕರವಾದ ಸದ್‌ಭಾವನೆಯಿಂದ ಕೂಡಿದ ವಾತಾವರಣವನ್ನು ನಿರ್ಮಿಸಿದರು, ಬ್ರಿಟಿಷ್ ಸರಕಾರ ಪ್ರಪಂಚದೆದುರು ತನಗೆ ಕೆಟ್ಟ ಹೆಸರು ಬಾರದಿರಲೆಂದಿಚ್ಛಿಸುತ್ತಿದ್ದರಿಂದ ಈ ಕೆಲಸ ನಾಜೂಕಾಗಿದ್ದು ಮಹತ್ವದ್ದೂ ಆಗಿತ್ತು, ಪ್ರಪಂಚದ ಶ್ರೇಷ್ಠ ಪತ್ರಕರ್ತರೆದುರು, ಮುಖಂಡರೆದುರು ಪ್ರಜಾತಂತ್ರದ ಬೇಡಿಕೆಯನ್ನು ತರ್ಕಸಂಗತವಾಗಿ ಇಟ್ಟಿದ್ದರಿಂದ ಬೇರೆ ದೇಶಗಳ ತಪ್ಪು ತಿಳುವಳಿಕೆ ದೂರವಾಯಿತು, ಅವರು ಚರ್ಚಿಲ್ ಮತ್ತು ಬ್ರಿಟಿಷ್ ಸರಕಾರದ ಮೇಲೆ ಪ್ರಭಾವ ಬೀರಲು ಸಹಾಯಕವಾಯಿತು.

ಹೊರಗಿನ ವಾತಾವರಣವನ್ನು ಸರಿಪಡಿಸುವುದಕ್ಕಿಂತ ಹೆಚ್ಚಾಗಿ ದೇಶದ ಮನೋಬಲವನ್ನ ದೃಢಪಡಿಸುವ ಕೆಲಸ ಹೆಚ್ಚು ಮಹತ್ವದಾಗಿತ್ತು, ಕುಶಲ ಚಿಕಿತ್ಸಕನ ಹಾಗೆ ಪಳಗಿದ ಕೈಗಳಿಂದ ದೇಶದ ಜನರಿಗೆ ಪ್ರೋತ್ಸಾಹ ನೀಡಿ ಅವರ ಆತ್ಮಬಲವನ್ನು ಹೆಚ್ಚಿಸುವ ದಿಕ್ಕಿನಲ್ಲಿ ಬಾಪೂಜಿ ಕೆಲಸ ಮಾಡತೊಡಗಿದರು, ಕಾರ್ಯಕರ್ತರು, ದೇಶವಾಸಿಗಳು ಜೈಲಿನಿಂದ ಬಿಡುಗಡೆಯಾಗಿ ನೇರವಾಗಿ ಬಾಪೂಜಿಯನ್ನು ಭೇಟಿಯಾಗಲು ಬರುತ್ತಿದ್ದರು, ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತಿದ್ದರು, ಬಾಪೂಜಿ ಎಂದೂ ಯಾರನ್ನೂ ಬೈಯಲೂ ಇಲ್ಲ, ಯಾರ ತಪ್ಪನ್ನು ತೆಗೆದು ತೋರಿಸಲೂ ಹೋಗಲಿಲ್ಲ, ಆ ಕಾರ್ಯಕರ್ತರುಗಳನ್ನು ರಚನಾತ್ಮಕ ಕೆಲಸಗಳಿಗೆ ತೊಡಗಿಸಿದರು, ಸಮಾಜ ಸೇವೆಯ ಕೆಲಸ ದೇವರ ಶಕ್ತಿ ಇದ್ದಂತೆ, ಅದಕ್ಕೆ ಸರಕಾರ ಅಡ್ಡಿ ಬಂದಾಗ, ಸತ್ಯಾಗ್ರಹ ಮಾಡುವುದು ಧರ್ಮ. ಈ ರೀತಿ ಪೂರ್ತಿ ನಿರ್ದೋಷ ಸೇವೆ ಮತ್ತು ಸಕ್ರಿಯತೆಯಿಂದ ಜನಜಾಗೃತಿ ಮೂಡುತ್ತದೆ, ಮತ್ತು ಅನ್ಯಾಯಪೂರ್ಣ ಸರಕಾರವನ್ನು ಮೂಕವಾಗಿ, ದೃಢವಾಗಿ ವಿರೋಧಿಸುತ್ತಾರೆ. ೯ ಆಗಸ್ಟ್‌ನ 'ಭಾರತ ಛೋಡೋ'ನ

ಎರಡನೆಯ ಪೂಣ್ಯ ತಿಥಿ ೯–೮–೧೯೪೪ ರಂದು ಬೊಂಬಾಯಿಯ ಚೌಪಾಟಿ ಮೈದಾನದಲ್ಲಿ ಕೆಲವು ವಿಶಿಷ್ಟ ಜನರು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡುವದೆಂದು ಬಾಪೂಜಿ ನಿರ್ಧರಿಸಿದರು. ಜನರು ಗುಂಪು ಸೇರದಿರಲೆಂಬ ಉದ್ದೇಶದಿಂದ ಪ್ರಾರ್ಥನೆಯ ಸಮಯವನ್ನು ತಿಳಿಸಿರಲಿಲ್ಲ, ಆದರೆ ಸತ್ಯಾಗ್ರಹದ ಶುದ್ಧನೀತಿಯನ್ನನುಸರಿಸಿ ಪೊಲೀಸ್ ಕಮೀಷನರ್‌ಗೆ ಪೂರ್ತಿ ವಿವರ ನೀಡಲಾಗಿತ್ತು. ಬೊಂಬಾಯಲ್ಲೇ ಇದ್ದ ೨೫ ಜನರು ಮಾತ್ರ ಈ ಪ್ರಾರ್ಥನೆಯಲ್ಲಿ ಸೇರಬಹುದೆಂದು ಅನುಮತಿ ನೀಡಲಾಗಿತ್ತು, ದೇಶದ ಗಮನವೆಲ್ಲಾ ೯ ಆಗಸ್ಟ್, ಬೊಂಬಾಯಿ ಮೇಲೆ ಕೇಂದ್ರಿತವಾಗಿತ್ತು. ಸರಕಾರ ಬೆಳಿಗ್ಗೆ ೫ ಗಂಟೆಗೆ ಪ್ರಾರ್ಥನೆಗೆ ಹೋಗಲಿದ್ದ ೨೫ ಜನರನ್ನು ಬಂಧಿಸಿತು, ಇದರಿಂದ ದೇಶದಲ್ಲೆಲ್ಲಾ ಒಂದು ಅಗೋಚರವಾದ ಧೈರ್ಯ–ಉತ್ಸಾಹ ಹರಿಯಿತು, ನಿರಾಶೆ ದೂರವಾಯಿತು.

ಬಾಪೂಜಿ ಜೈಲಿನಲ್ಲಿದ್ದುದರಿಂದ ಅವರು ನಡೆಸುತ್ತಿದ್ದ ರಚನಾತ್ಮಕ ಸಂಸ್ಥೆಗಳೆಲ್ಲಾ ಸತ್ತ ಹಾಗೆಯೇ ಆಗಿದ್ದವು. ಸರಕಾರ ಅವುಗಳನ್ನು ಕಾನೂನುಬಾಹಿರವೆಂದು ಘೋಷಿಸಿತ್ತು, ಅವುಗಳ ಕಾರ್ಯಚಟುವಟಿಕೆಗಳನ್ನು ತಡೆಹಿಡಿಯಲಾಗಿತ್ತು, ಖಾದಿಯೊಂದು ಮಾತ್ರ ನಡೆಯುತ್ತಿತ್ತು, ಆದರೆ ಅದು ಕೊಳ್ಳುವ–ಮಾರುವ, ವಾಣಿಜ್ಯ ವಸ್ತುವಾಗಿ ಹೋಗಿತ್ತು, ಅದೂ ಸರಿಯಾಗಿಯೇ ಇತ್ತು, ಆದರೆ ಬಾಪೂಜಿ ದೃಷ್ಟಿಯಲ್ಲಿ ಖಾದಿ ಬರಿಯ ಉದ್ಯೋಗವಾಗಲೀ, ಶರೀರವನ್ನು ಮುಚ್ಚುವ ಸ್ಥೂಲ ಸಾಧನವಾಗಲೀ ಆಗಿರಲಿಲ್ಲ. ಬಾಪೂಜಿಗೆ ಖಾದಿ ಒಂದು ಆದರ್ಶ ಅಹಿಂಸೆಯ ಪ್ರತೀಕವಾಗಿತ್ತು, ಖಾದಿ ನೂಲುವವನು ಪರಿಶ್ರಮವನ್ನೊಪ್ಪುತ್ತಾನೆ, ಆ ಹತ್ತಿಯ ಎಳೆಯೊಂದಿಗೆ ನೂಲು ತೆಗೆಯುವವನ ಮರ್ಯಾದೆಯ ಸಂಕಲ್ಪ, ಆತ್ಮವಿಶ್ವಾಸ ದೃಢವಾಗಿರುತ್ತದೆ, ನೇಯುವವನಿಗೂ ಅಷ್ಟೆ, ಇದೇ ಅನುಭವ ಆಗುತ್ತದೆ, ಖಾದಿ ಕೊಂಡು ತೊಡುವವನು ಕೂಡ ಈ ಪುಣ್ಯವಸ್ತ್ರವನ್ನು ಗೌರವಿಸುತ್ತಾನೆ, ಖಾದಿಯ ಉಪಯೋಗ ಕೊನೆಯ ಪಕ್ಷ ಈ ಭಾವನೆ ಹೊತ್ತಿರಬೇಕು ಎಂದು ಬಾಪೂಜಿ ಚೆನ್ನಾಗಿ ನಂಬಿದ್ದರು. ಖಾದಿ ಅವರಿಗೆ ಒಂದು ಶುಭ್ರಕ್ರಾಂತಿಯ ಮಾಧ್ಯಮವಾಗಿತ್ತು, ಅದರಿಂದ ದೇಶದ ಕೋಟ್ಯಂತರ ಬಡಜನರು ತಮ್ಮ ಕಳೆದುಹೋದ ಸ್ವಾಯತ್ತತೆಯನ್ನು ಪಡೆಯಬಹುದಾಗಿತ್ತು. ಆರ್ಥಿಕ ಸ್ವಾತಂತ್ರ್ಯದ ಶ್ರೇಷ್ಠತೆಯಿಂದ ಒಂದು ಶ್ರೇಷ್ಠ ನಾಗರಿಕನ ಗೌರವ ಮತ್ತು ಜವಾಬ್ದಾರಿಯನ್ನು ನಿರ್ವಹಿಸಬಹುದಾಗಿತ್ತು. ಬಾಪೂಜಿ ಚರಖಾ ಸಂಘವನ್ನು ವ್ಯಾಪಾರಿ ವೃತ್ತಿಯಿಂದ ಉಳಿಸಿದರು ಮತ್ತು ಖಾದಿ ಉಡುವ–ತೊಡುವರೆಲ್ಲರೂ ನೂಲು ತೆಗೆಯಬೇಕೆಂದೂ ಸಲಹೆ ನೀಡಿದರು, ಹಾಗಾಗದಿದ್ದಲ್ಲಿ ಖಾದಿ ಧನಿಕರ ಫ್ಯಾಷನ್‌ನ ಸಾಧನವಾಗುಳಿಯುತ್ತದೆ. ಸಮಾಜದಲ್ಲಿ ಹರಡಿದ್ದ ಕೆಟ್ಟತನವನ್ನು ಮುಚ್ಚಿಡುವ ಒಂದು ವಾತಾವರಣ ಹುಟ್ಟಿಕೊಳ್ಳುತ್ತದೆ, ಅಂತಹ ದುಃಸ್ಥಿತಿ ಬಾರದಂತೆ ಮಾಡಲು ಬಾಪೂಜಿ ಖಾದಿ

ಕೊಂಡುಕೊಳ್ಳುವವರೆಲ್ಲರೂ ಹಣಕೊಟ್ಟು ಕೊಳ್ಳುವುದೇ ಅಲ್ಲದೆ, ನೂಲು ತೆಗೆದು ಅದನ್ನು ಕೊಳ್ಳುವ ಬೆಲೆಗೆ ಬದಲಾಗಿ ನೀಡಬೇಕೆಂದೂ ನಿಯಮ ಮಾಡಿದರು. ಹೀಗೆ ಖಾದಿ ಧರಿಸುವವರೆಲ್ಲರೂ ಸ್ವಲ್ಪಮಟ್ಟಿಗೆ ನೂಲು ತೆಗೆಯುವುದು ಕೂಡ ಅನಿವಾರ್ಯವಾಗಿ, ಖಾದಿಯನ್ನು ಉಡುವುದಕ್ಕೆ ಸೀಮಿತಗೊಳ್ಳದೆ ಅದರ ಸೂಕ್ಷ್ಮ ದಾರ್ಶನಿಕ ತತ್ವ ಕೂಡ ಖಾದಿ ಧರಿಸುವವನ ಅವಚೇತನದಲ್ಲಿ ನೆಲೆಗೊಳ್ಳುತ್ತದೆ.

ನಮ್ಮ ಬಟ್ಟೆಯ ಸ್ವಲ್ಪ ಭಾಗವನ್ನು ನಾವೇ ತಯಾರಿಸಿಕೊಳ್ಳುವಂತಾಗಲೆಂದು ನಮ್ಮ ತಂದೆ ತಮ್ಮ ಮಕ್ಕಳೆಲ್ಲಾ ನಿಯಮಿತವಾಗಿ ನೂಲುವುದನ್ನು ಕಲಿಯಲಿ ಎಂದು ೧೯೪೪ರ ಕೊನೆಯಿಂದಲೂ ಪ್ರೇರೇಪಿಸುತ್ತಿದ್ದುದು ನನಗೆ ಇನ್ನೂ ನೆನಪಿದೆ. ನಮ್ಮ ತಂದೆ ನಿಯಮದಂತೆ ನೂಲು ತೆಗೆಯುತ್ತಿದ್ದರು, ಮನೆಗೆ ದಿಂಬು, ಮೇಲು ಹೊದಿಕೆ, ಟವಲ್, ಬಟ್ಟೆ ಇಷ್ಟನ್ನೂ ಖರೀದಿಸಲು ಆಗುವಷ್ಟು ನೂಲು ನಮ್ಮ ಪರಿವಾರಕ್ಕೆ ಸಿಗುವಂತಾಗಲಿ ಅಂತ ಅವರು ಇನ್ನೂ ಹೆಚ್ಚು ಹೊತ್ತು ನೂಲುವುದನ್ನು ಆರಂಭಿಸಿದರು. ನಮ್ಮ ಮನೆಯಲ್ಲಿ ಚಿಂದಿ ಕೂಡ ಖಾದಿಯೇ ಆಗಿರುತ್ತಿತ್ತು, ಕೊಡು-ಪಡೆಯ ಪ್ರತಿಯೊಂದು ವ್ಯವಹಾರ, ಉಪಹಾರ- ಇವೆಲ್ಲ ಖಾದಿ-ಗ್ರಾಮೋದ್ಯೋಗದ ವಸ್ತುವೇ ಆಗಿರಲಿ ಎಂಬ ಒಂದು ಒತ್ತಾಯ. ಹೀಗಾಗಿ ನೂಲು ತೆಗೆಯುವುದು ಅನಿವಾರ್ಯವಾಗಿತ್ತು, ಆದರೆ ಬಾಪೂಜಿಯ ಭವಿಷ್ಯವಾಣಿ ಸುಮಾರು ಸತ್ಯವಾಗಿ ಹೊರಮೂಡಿತು, ಇವತ್ತು ದೇಶದ ಧನಿಕರು ಖಾದಿ ಹಾಕಿಕೊಳ್ಳುತ್ತಾರೆ ಮತ್ತು ಸಮಾಜದಲ್ಲಿ ಹೆಸರು ಗಳಿಸಿದ ಜನ ಕೂಡ ಸುಂದರವಾದ ಮರ್ಸಿರೈಸ್ಡ್ ಖಾದಿ ಧರಿಸಿ ಅಧಿಕಾರಿಗಳ ಹಾಗೆ ಸಂಚರಿಸುತ್ತಾರೆ. ಅವರ ಖಾದಿ ವಸ್ತ್ರದ ಬಿಳಿಬಣ್ಣ ಮತ್ತು ಗಂಜಿ ಹಾಕಿದ ಸೌಂದರ್ಯ ನನಗೆ ಕೊಕ್ಕರೆ ಭಕ್ತಿಯ ನೆನಪು ಮಾಡಿಕೊಡುತ್ತದೆ, ಸಮಾಜದಲ್ಲಿ ಕಪ್ಪು ಕೆಲಸದಲ್ಲಿ ತೊಡಗಿರುವ ಧೂರ್ತರು ಕೂಡ ಖಾದಿ ತೊಟ್ಟು ರಾಷ್ಟ್ರೀಯತೆಯ ಸೋಗು ಹಾಕುತ್ತಾರೆ. ಖಾದಿಯನ್ನ ಇನ್ನು ಬಿಟ್ಟುಬಿಡಬೇಕು ಅಂತ ಆಗ ನನಗನಿಸುತ್ತದೆ, ಸಮಾಜದಲ್ಲಿ ಖಾದಿಯ ಬಗ್ಗೆ ಗೌರವ ಭಾವನೆ ಉಳಿದಿಲ್ಲ, ಶ್ರೀ ಸಾಮಾನ್ಯರಂತೂ ಖಾದಿ ಸ್ವಾರ್ಥ ಸಾಧಿಸಿಕೊಳ್ಳುವ ಶ್ರೇಷ್ಠ ಸಾಧನ ಅಂತ ಅರ್ಥ ಮಾಡಿಕೊಳ್ಳಲಾರಂಭಿಸಿದ್ದಾರೆ. ಆದರೆ ನಾವು ಖಾದಿಯಲ್ಲೇ ಹುಟ್ಟಿರುವ ಜನ, ಖಾದಿ ಬಿಟ್ಟೆವೆಂದರೆ ನಮ್ಮ ತಾಯಿಯನ್ನು ತ್ಯಜಿಸಿದ ಹಾಗೆ ನಮಗೆ ಭಾಸವಾಗುತ್ತೆ, ಇವತ್ತು ಖಾದಿಯಲ್ಲಿ ಭ್ರಷ್ಟಾಚಾರ, ಅನೀತಿ, ಕಪ್ಪು ಧಂಧೆ ನಡೆಯುತ್ತಿರುವುದನ್ನು ನೋಡಿ ಬಹಳ ದುಃಖವಾಗುತ್ತೆ. ಶುದ್ಧವಾದ, ಪ್ರಮಾಣಿತವಾದ ಖಾದಿ ಸಿಗುವುದೂ ಕಡಿಮೆ. ಎಷ್ಟೋ ಖಾದಿ ಉತ್ಪಾದನ ಕೇಂದ್ರಗಳಲ್ಲಿ ಎಲ್ಲಾ ತರಹೆಯ ಮೋಸ ನಡೆಯುತ್ತದೆ. ನೂಲು ತೆಗೆಯುವವರಿಗೆ ಪೂರ್ತಿಲಾಭ ಸಿಗುವುದಿಲ್ಲ, ಅಂಬರ್ ಚರಖಾನ ಹೆಸರಿನಲ್ಲಿ ಎಷ್ಟೋ ಸಾರಿ ಮಿಲ್ ಎಳೆಗಳನ್ನು ಉಪಯೋಗಿಸುತ್ತಾರೆಂದು ನನಗೆ ಸಂದೇಹವಿದೆ. ಪ್ರತಿಯೊಂದು

ಖಾದಿ ಉತ್ಪಾದನೆ ಮತ್ತು ಮಾರಾಟದ ಕೇಂದ್ರಗಳಲ್ಲೂ ಭ್ರಷ್ಟಾಚಾರ, ಮತ್ತು ಅನಾಚಾರ. ಸರಕಾರದ ಹಣ ಕದಿಯುತ್ತಿದ್ದಾರೆ. ಬಾಪೂಜಿಯ ಜನ್ಮ ದಿವಸದಂದು ಖಾದಿ ಮಾರಾಟದ ಮೇಲೆ ರಿಯಾಯಿತಿ ಕೊಡುವುದು ಮಹಾಪಾಪ. (ರಿಯಾಯಿತಿ) ಅದು ಬದುಕಿರುವ ಹಾಗೆಯೇ ಖಾದಿಯನ್ನ ವಾರಾಂಗನೆ(ವೇಶ್ಯೆ)ಯಾಗಿ ಮಾಡಿದೆ. ಬಾಪೂಜಿಯ ಹೆಸರಿನಲ್ಲಿ ಸರಕಾರ ನೀಡುತ್ತಿರುವ ಕೋಟ್ಯಂತರ ರೂಪಾಯಿಗಳ ರಿಯಾಯತಿಯನ್ನು ಸ್ವಲ್ಪ ತಗ್ಗಿಸಿ, ಆಂಶಿಕ ಮೂಲ್ಯಕ್ಕನುಗುಣವಾಗಿ ರಿಯಾಯಿತಿ ನೀಡುವ ಬಾಪೂಜಿಯವರ ಪದ್ಧತಿಯನ್ನು ಪುನಃ ಜಾರಿಗೆ ತರಬೇಕು. ಆಗ ಖಾದಿಯ ಭ್ರಷ್ಟಾಚಾರ ತಂತಾನೆ ನಿಲ್ಲುತ್ತದೆ, ಖಾದಿ ಧರಿಸುವವನ ಮರ್ಯಾದೆ ಹೆಚ್ಚಾಗುತ್ತದೆ ಮತ್ತು ಖಾದಿಯ ನಿಜವಾದ ಮಹತ್ವ ಪುನಃ ಬೆಳಕಿಗೆ ಬರುತ್ತದೆ. ಖಾದಿಯ ಕೆಲವು ಕೇಂದ್ರಗಳು ಮುಚ್ಚುತ್ತವೆ, ಆದರೆ ಅದರಿಂದ ಸಮಾಜದಲ್ಲಿ ನವಚೈತನ್ಯ ಮೂಡುತ್ತೆ, ಜನಜಾಗೃತರಾಗುತ್ತಾರೆ. ಆರ್ಥಿಕ ಸ್ವಾತಂತ್ರ್ಯದ ಬುನಾದಿ ನಿರ್ಮಿತವಾಗಿ ಭ್ರಷ್ಟಾಚಾರವನ್ನು ವಿರೋಧಿಸುವ ಮನಃಶಕ್ತಿ ಬರುತ್ತದೆ, ಅಷ್ಟಲ್ಲದೆ ಸರಕಾರದ ಕೋಟ್ಯಾಂತರ ರೂಪಾಯಿಗಳು ನಷ್ಟವಾಗದೆ ಉಳಿಯುತ್ತದೆ, ಸಮಾಜದ ಅಸಾಮಾಜಿಕ ತತ್ವಗಳು ಖಾದಿಯ ಶುಭ್ರತೆಯಡಿಯಲ್ಲಿ ಕುಟಿಲತೆಯ ಮಸಿಯನ್ನು ಮುಚ್ಚಿಡುವುದು ತಪ್ಪುತ್ತದೆ.

ಖಾದಿಯ ನಂತರ ಬಾಪೂಜಿಯವರು ತಮ್ಮ ಮನಸ್ಸಿನಲ್ಲಿ 'ಬುನಿಯಾದೀ ತಾಲೀಮ್' (ಮೂಲ ಶಿಕ್ಷಣ) ಕುರಿತು ಬಹಳ ಮಹತ್ವ ನೀಡಿದ್ದರು. ಒಂದೆಡೆ ಖಾದಿ ಪ್ರಾಣಸತ್ವವನ್ನು ರಕ್ಷಿಸಲು ಸಮರ್ಥವಾಗಿದ್ದರೆ, ಮೂಲ ಶಿಕ್ಷಣ ಬುದ್ಧಿಯ ವಿಕಾಸಕ್ಕೆ ಅಗತ್ಯವಾಗಿತ್ತು, ದೇಶದ ಕೋಟ್ಯಂತರ ಮಂದಿಗೆ ಶಿಕ್ಷಣ ಹೇಗೆ ನೀಡಬೇಕು ಎಂಬ ಸಮಸ್ಯೆಯನ್ನು ಕುರಿತು ಬಾಪೂಜಿ ಚಿಂತಿಸಿ ಈ ತೆರನಾದ ಶಿಕ್ಷಣ ಪದ್ಧತಿ ಇರಬೇಕೆಂದರು:

೧) ತಮ್ಮ ಖರ್ಚು ಭರಿಸುವಂತಿರಬೇಕು.

೨) ಕೋಟ್ಯಂತರ ಬಡವರು ತಮ್ಮ ಸ್ವಂತ ಪರಿಶ್ರಮದಿಂದ ಆರೋಗ್ಯಕರವಾದ, ಸಭ್ಯ ಮತ್ತು ಸುಸಂಸ್ಕೃತ ಜೀವನ ನಡೆಸುವಂತಾಗಬೇಕು.

೩) ಬುದ್ಧಿಯ ಜೊತೆಗೆ ಶರೀರ ಮತ್ತು ಆತ್ಮಕ್ಕೂ ಬಲ ಬರಬೇಕು, ವಿಕಾಸ ಆಗಬೇಕು.

ಮಕ್ಕಳ ನಿಜವಾದ ಸಂಸ್ಕಾರಗಳು ೧೨–೧೩ ವರ್ಷ ವಯಸ್ಸಿನಲ್ಲೇ ಮುಗಿದು ಹೋಗುತ್ತವೆಂದು ಬಾಪೂಜಿ ಅಭಿಪ್ರಾಯಪಡುತ್ತಿದ್ದರು. ಮನುಷ್ಯ ತನ್ನ ಹೊಟ್ಟೆ ತುಂಬುವುದಕ್ಕಾಗಿ ಮಾಡುವ ಕೆಲಸ ಆತನ ಆಚಾರ–ವಿಚಾರಗಳ ಮೇಲೆ ಪ್ರಭಾವ ಬೀರುತ್ತದೆಂಬುದನ್ನು ಬಾಪೂಜಿಯು ಅನುಭವದಿಂದ ಅರಿತಿದ್ದರು. ಮೂಲ ಶಿಕ್ಷಣದ

ಪಠ್ಯಕ್ರಮದಲ್ಲಿ ಮಕ್ಕಳಿಗೆ ಎಲ್ಲಾ ವಿಷಯಗಳನ್ನೂ ಗ್ರಾಮೋಪಯೋಗಿ ಕಾರ್ಯಗಳ ಮುಖಾಂತರ ಕಲಿಸಬಹುದಾಗಿತ್ತು, ಅದರಲ್ಲಿ ಹುಡುಗ ಹೊಲ-ತೋಟಗಳಲ್ಲಿ ಕೆಲಸ ಮಾಡುತ್ತಾನೆ, ಜೊತೆಗೆ ಪ್ರಕೃತಿಯಿಂದ ಭೂಗೋಳ, ಇತಿಹಾಸ, ಸಂಸ್ಕೃತ, ಉಪನಿಷತ್ತು, ಭಾಷೆ, ವ್ಯಾಕರಣ, ಗಣಿತ ಮತ್ತು ವಿಧ-ವಿಧವಾದ ವಿಜ್ಞಾನ ಕಲಿಯುತ್ತಾನೆ, ಜೊತೆಯಲ್ಲಿ ಉತ್ಪಾದಿಸುತ್ತಾನೆ. ತನ್ನ ಆವಶ್ಯಕತೆಗನುಗುಣವಾಗಿ ಸಂಪಾದನೆ ಮಾಡಿ, ಕೊನೆಯ ಪಕ್ಷ ಶಿಕ್ಷಣದ ಖರ್ಚನ್ನಾದರೂ ತುಂಬಬಲ್ಲವನಾಗುತ್ತಾನೆ. ಇಂತಹ ಶಿಕ್ಷಣದಲ್ಲಿ ಸಾಧನಗಳ ಅಗತ್ಯ ಕೂಡ ಕಡಿಮೆಯಾಗುತ್ತದೆ.

ಮೂಲ ಶಿಕ್ಷಣವನ್ನು ವಿಸ್ತಾರವಾಗಿ, ಪ್ರಾಮಾಣಿಕತೆಯಿಂದ ಉಪಯೋಗಿಸಿಕೊಂಡರೆ ಶಿಕ್ಷಣದ ಆ ಎಲ್ಲ ಖರ್ಚು ಕೂಡ ಸರಿಸುಮಾರು ಮುಗಿದು ಕೆಲವೇ ಸಾಧನಗಳು ಅಗತ್ಯವಾಗುತ್ತವೆ, ಹಾಗೂ ಹಳ್ಳಿಯವರು ಸ್ವತಃ ಅದನ್ನು ಸಂಪಾದಿಸಿಕೊಳ್ಳಬಹುದು. ಇದರಿಂದಾಗಿ ಅವರ ಮಕ್ಕಳು ಪಟ್ಟಣಗಳ ಅನುಕರಣೆ ಮಾಡಿ ನಿರಾಶೆಗೊಂಡು, ವಿವಶತೆ ಅನುಭವಿಸುವುದು ತಪ್ಪುತ್ತದೆ, ಈಗ ಪಟ್ಟಣಗಳಿಗೆ ವಲಸೆ ಹೋಗುವ ಪ್ರವೃತ್ತಿಯಿಂದಾಗಿ ಹಳ್ಳಿಗಳು ಹಾಳಾಗುತ್ತಿವೆ, ಪಟ್ಟಣಗಳು ವಿಕೃತವಾದ ಕೊಂಪೆ-ಗುಡಿಸಲುಗಳಿಂದ ಅಸುಂದರ ಸಮುದಾಯಗಳಾಗುತ್ತಿರುವುದು ತಪ್ಪುತ್ತದೆ ಮತ್ತು ಹಳ್ಳಿಗಳು ಪುನಃ ತನ್ನ ಮಹತ್ವವನ್ನು ಪಡೆಯುತ್ತವೆ. ಹಳ್ಳಿಯ ಮಗ ಅಲ್ಲೇ ಹಳ್ಳಿಯಲ್ಲೇ ಸಾಹುಕಾರನಾಗಿ ಇರಬಹುದು, ದೂರದ ಧೂಳಿನಿಂದ ತುಂಬಿದ ಪಟ್ಟಣದಲ್ಲಿ ಎಂಜಲು ಎತ್ತುವ ಹಾಗೂ ಕಳಪೆ ಕೆಲಸಗಳಲ್ಲಿ ಅವನು ಸಿಲುಕುವುದು ತಪ್ಪುತ್ತದೆ.

ನನಗೆ ಎಷ್ಟೋ ಸರ್ತಿ ಅನಿಸುತ್ತದೆ, ಇದೆಂತಹ ಕಾಂತಿಹೀನವಾದ ಸ್ವಾತಂತ್ರ್ಯ, ನಾವು ಇದರಿಂದ ಎಷ್ಟು ಹೆದರುಪುಕ್ಕಲರಾಗಿದ್ದೇವೆ, ಎಲ್ಲಾ ತರಹೆಯ ಹಿಂಸೆಯನ್ನು ಸಹಿಸಿಕೊಂಡು ಉಫ್ ಅಂತ ಕೂಡ ಅನ್ನುವುದಿಲ್ಲವಲ್ಲಾ! ಇದೆಂತಹ ಸಮಯ ಬಂತು? ಯುವಕರು ಇಷ್ಟೊಂದು ಅರಾಜಕರಾಗಿ, ಅಶಿಷ್ಟರಾಗಿ, ನಿಯಂತ್ರಣಕ್ಕೆ ಬರದ ಸ್ಥಿತಿಗೆ ತಲಪಿದ್ದಾರಲ್ಲ. ಸ್ವಾತಂತ್ರ್ಯ ಸಿಕ್ಕ ನಂತರ ಹುಟ್ಟಿರುವ ಹುಡುಗ ಇವತ್ತು ಪರಿಪೂರ್ಣನಾದ ಸಿದ್ಧಹಸ್ತನಾದ ನಲವತ್ತು ವರ್ಷಗಳ ವ್ಯಕ್ತಿಯಾಗಿರಬೇಕಿತ್ತು, ಅವನ ದೃಢ ಸಂಕಲ್ಪ, ತಿಳಿವಳಿಕೆ ಎಷ್ಟು ಬಲವಾಗಿರಬೇಕಾಗಿತ್ತು, ಆದರೆ ಈದಿನ ಪ್ರತಿಯೊಬ್ಬ ಯುವಕ ೩೦-೪೦ ವರ್ಷದವನು ನಿರಂತರವಾಗಿ ಕೆಟ್ಟ ಚಿಂತೆ, ಮಾನಸಿಕ ಉದ್ವೇಗಕ್ಕೆ ಸಿಕ್ಕಿಹಾಕಿಕೊಂಡು ಸಂಕಲ್ಪಹೀನನಾಗಿರುತ್ತಾನೆ. ನಾಲ್ಕಾರು ಜನ ಜೋರು ಮಾಡುವ ಯುವಕರು ಕಾಣಿಸಿದರೂ ಅವರಲ್ಲಿ ಸಂಸ್ಕಾರವಂತಿಕೆ ಇರುವುದಿಲ್ಲ. ಜೀವನದ ಮೌಲ್ಯಗಳನ್ನು, ಸತ್‌ಚಾರಿತ್ರ್ಯವನ್ನು ಅವರು ಕಡೆಗಾಣಿಸುತ್ತಿರುತ್ತಾರೆ, ಅದನ್ನ ನೋಡಿ ಈ ಆವಾರಾಗಳಿಗಿಂತ ಅಶಿಕ್ಷಿತರಾದ ಭಾವನಾಯುತರಾದ ಸಂಸ್ಕಾರಯುತರಾದವರೇ ವಾಸಿ ಅಂತ ಅನಿಸುತ್ತದೆ.

ಇಂದಿರಾಜಿ ಬದುಕಿದ್ದಾಗ ತಮ್ಮ ಪ್ರತಿಯೊಂದು ಭಾಷಣದಲ್ಲೂ ಆಕೆ ದೇಶ ಎಲ್ಲ ದಿಕ್ಕುಗಳಲ್ಲೂ ಅಭಿವೃದ್ಧಿ ಹೊಂದಿದೆ, ಪ್ರಗತಿಯಾಗುತ್ತಿದೆ. ಆದರೆ ನಮ್ಮ ಚಾರಿತ್ರ್ಯ ನಮ್ಮ ಸಂಸ್ಕಾರವಂತಿಕೆಯಂತಹ ಮೌಲ್ಯಗಳಲ್ಲಿ ನಮ್ಮ ನಿಷ್ಠೆ ಎಲ್ಲೋ ಮುರಿಯುತ್ತಿದೆ, ವಿಲುಪ್ತವಾಗುತ್ತಿದೆ, ಅಂತ ಹೇಳುತ್ತಿದ್ದರು. ಸಮಾಜದಲ್ಲಿ ಚರಿತ್ರಹೀನತೆಯ ತೀವ್ರ ಜವಾಬ್ದಾರಿ ಸ್ವತಂತ್ರ ಭಾರತದ ಶಿಕ್ಷಣ ಪದ್ಧತಿಯ ಮೇಲೆ ಬೀಳುತ್ತದೆ, ಈ ಸರಕಾರ ನಮ್ಮದು, ಇದರಲ್ಲಿ ತಪ್ಪು ಹುಡುಕುವುದು ಸರಿಯಲ್ಲ, ಸರಕಾರ ಆಕಾಶದಿಂದ ಉದುರಿರುವ ವಸ್ತುವೇನಲ್ಲ, ಅದರಲ್ಲಿ ನಾವೇ ಆರಿಸಿರುವ ನಮ್ಮ ಸಹೋದರ, ಸಹೋದರಿ, ಜೊತೆಗಾರು, ಸಂಬಂಧಿಕರು ಸ್ನೇಹಿತ, ಕೂಡ ಅದನ್ನು ರಚಿಸಿದ್ದೇವೆ. ಆದರೆ ಸ್ವಾತಂತ್ರ್ಯದ ಮತ್ತಿನಲ್ಲಿ ನಾವು ನಮ್ಮ ಮುಗ್ಧ ಮಕ್ಕಳ ಭವಿಷ್ಯವನ್ನು ಮರೆತಿದ್ದೇವೆ. ನಾವು ಸಾಧನ– ಸಂಪತ್ತು, ಅಧಿಕಾರ, ಐಶ್ವರ್ಯ ಸಂಗ್ರಹಿಸುವುದರಲ್ಲಿ ತೊಡಗಿಕೊಂಡಿದ್ದೇವೆ. ಪರಿವಾರ, ಸಮಾಜ, ರಾಷ್ಟ್ರ ಯಾವುದರ ಸಮಸ್ಯೆಯಾದರೂ, ಐಶ್ವರ್ಯ ಸಂಪತ್ತು– ಇವು ಆ ಸಮಾಜದ ಧೈರ್ಯಶಾಲಿಗಳೂ, ಸಭ್ಯರೂ ಆದ ಯುವಕರ ಮೇಲೆ ನಿರ್ಭರವಾಗಿರುತ್ತದೆ. ಇಂದು ಯುವ ಸಮೂಹ ನಿರಾಶೆ ಅಥವಾ ಅವನತಿಯ ಹಳ್ಳದಲ್ಲಿ ಸಿಲುಕಿ ಅಲೆಯುತ್ತಿದೆ, ಅಥವಾ ಆತಂಕ, ಅರಾಜಕತೆಯ ಮಾರ್ಗದಲ್ಲಿ ಓಡುತ್ತಿದೆ. ಇಂದಿನ ಸಮಾಜ ನಾಳೆ ಬರಲಿರುವ ಸಮಾಜಕ್ಕೆ ಆಸರೆಯಾಗಿ ಸಹೃದಯತೆ ನೀಡಬಲ್ಲದೇನು ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಸ್ವಾರ್ಥ ಮತ್ತು ತೀರ ಕೊಳಕಾದ, ವಿಕೃತವಾದ, ದುರಾಸೆಗಳ ಬುತ್ತಿಯನ್ನೂ ನಮ್ಮ ಮಕ್ಕಳಿಗೆ ಆಸ್ತಿಯಾಗಿ ನೀಡುತ್ತೇವೋ? ಎಂಬುದು ಪ್ರಶ್ನೆ. ಆ ವೇಳೆಗೆ ಬಹುಶಃ ರಾಜಕೀಯ, ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ನಮ್ಮ ಕೈಯಿಂದ ಜಾರಿ ಹೋಗಬಹುದೇನೋ.

ಬಾಪೂಜಿ ಕಾಲವಾಗಿ ೫೦ ವರ್ಷಗಳೇ ಕಳೆದಿವೆ. ಆದರೆ ವಿವೇಕ, ದೂರದೃಷ್ಟಿ ಮತ್ತು ಸತ್ಯ–ಅಹಿಂಸೆಯ ಆರಾಧನೆ –ಇವು ಅವರಿಗೆ ಮುಂದೆ ಬರಲಿದ್ದ ಕತ್ತಲೆ ಕೂಪದ ದರ್ಶನ ಕೊಟ್ಟಿದ್ದವು. ಆದ್ದರಿಂದ ಅವರು ಬಹಳ ಯೋಚನೆ – ವಿಚಾರ ಮಾಡಿ ೪೦ ಕೋಟಿ ಜನರ ಈ ದೇಶಕ್ಕೆ ಮೂಲ ಶಿಕ್ಷಣದಂತಹ ಸುಲಭ ಹಾಗೂ ಕಾರ್ಯಸಾಧನೆಯ ಶಿಕ್ಷಣ ರೀತಿಯನ್ನು ಆಯೋಜಿಸಿದ್ದರು. ನನಗನಿಸುವ ಮಟ್ಟಿಗೆ ನಮ್ಮ ಪೀಳಿಗೆಯನ್ನು ಪ್ರತಿಯೊಂದು ಒಳ್ಳೆಯ ಹಿತಕರವಾದ ಆರೋಗ್ಯದ ನಡೆವಳಿಕೆಯಿಂದ ವಿಕೃತಗೊಳಿಸುವ ಒಂದು ಸುಲಭ ಸ್ವಭಾವ ಬಂದು ಬಿಟ್ಟಿದೆ. ನಾವು ಮಾಡಿದ್ದನ್ನೇ ಮಾಡುತ್ತಾ ಇರುತ್ತೇವೆ, ಕೆಲಸ ಮಾಡುವುದಕ್ಕೆ, ಕಷ್ಟಪಡುವುದಕ್ಕೆ ನಾವು ತಯಾರಾಗಿಲ್ಲ. ದೇವರ ದಯೆಯಿಂದ ಭಾರತ ಭೂಮಿಯಂತಹ ಉದಾರ ಮನಸ್ಸಿನಿಂದ ಕೂಡಿದ ಸಹನಶೀಲ ಸಂಸ್ಕೃತಿಯಲ್ಲಿ ನಾವು ಹುಟ್ಟಿದ್ದೇವೆ. ಅದರಿಂದ ಈ ಸಮಾಜ ನಮ್ಮನ್ನು ಸಹಿಸಿಕೊಳ್ಳುತ್ತಿದೆ, ನಮ್ಮ ಮಕ್ಕಳು ನಮ್ಮನ್ನು ಜುಗುಪ್ಸೆಯಿಂದ

ತಿರಸ್ಕರಿಸುವುದಿಲ್ಲ. ೧೯೩೬ರ ಆರಂಭದಲ್ಲಾದ ಈ ಹಿಂದುಸ್ತಾನಿ ತಾಲೀಮಿ ಸಂಘವನ್ನು ಬಾಪೂಜಿ ೭ ವರ್ಷಗಳ ಪ್ರಯೋಗ ಮಾಡಿ ನೋಡಿ, ಅನಂತರದಲ್ಲಿ ಅದರ ಪ್ರಚಾರ ಮಾಡಿದರು. ಅದರಲ್ಲಿ ಕಿಶೋರು ವಯಸ್ಸಿನವರಿಗೂ, ಯುವಕರಿಗೂ ಕಾಲೇಜಿನವರೆಗೆ ಶಿಕ್ಷಣ ನೀಡಬಹುದಾಗಿತ್ತು. ಅದರಲ್ಲಿ ಪ್ರೌಢಶಿಕ್ಷಣದ ವ್ಯವಸ್ಥೆ ಕೂಡ ಇತ್ತು.

ಖಾದಿ ಜೊತೆಗೆ ಗ್ರಾಮೋದ್ಯೋಗಕ್ಕೂ ಬಾಪೂಜಿ ಸಾಕಷ್ಟು ಒತ್ತುಕೊಟ್ಟರು. ಹಳ್ಳಿಗಳು ಆರ್ಥಿಕವಾಗಿ, ರಾಜಕೀಯವಾಗಿ ಪೂರ್ತಿಯಾಗಿ ಸ್ವಾವಲಂಬಿಗಳಾಗಲಿ ಎಂಬುದು ಅವರ ಉದ್ದೇಶವಾಗಿತ್ತು. ಒಂದು ಕೇಂದ್ರದಲ್ಲಿ ಒಬ್ಬರಿಗಿಂತ ಮಿಗಿಲಾಗಿ ಕಾರ್ಯಕರ್ತರಿರಕೂಡದು ಅಂತ ಬಾಪೂಜಿ ಒತ್ತಾಯ ಮಾಡುತ್ತಿದ್ದರು. ಒಬ್ಬ ವ್ಯಕ್ತಿಗೆ ೩ ವರ್ಷಗಳಿಗಾಗುವಷ್ಟು ಸಾಧನಗಳನ್ನು ನೀಡಿ ಆರ್ಥಿಕ ಸಹಾಯಕೊಡಬೇಕು; ಅದಾದ ನಂತರ ಆ ಕೇಂದ್ರ ಹಳ್ಳಿಯವರನ್ನು ಪ್ರೇರೇಪಿಸಿ, ಅವರ ವ್ಯವಸ್ಥೆಯಲ್ಲಿ ಸ್ವತಂತ್ರವಾಗಿ ನಡೆಯಬೇಕು. ಇದರಲ್ಲಿ ಎರಡು ಲಾಭಗಳಾಗುತ್ತಿದ್ದವು. ಒಂದು ಕಾರ್ಯಕರ್ತನ ಯೋಗ್ಯತೆ ಮತ್ತು ಸಫಲತೆಯ ಅಂದಾಜು ಸಿಗುತ್ತದೆ. ಮೂರು ವರ್ಷಗಳ ಅವಧಿಯಲ್ಲೂ ಕಾರ್ಯಕರ್ತನು ಹಳ್ಳಿ ಜನರ ನಂಬಿಕೆ ಗಳಿಸಲಿಲ್ಲ, ಅವರ ಸಹಯೋಗ ಅವನಿಗೆ ಸಿಗಲಿಲ್ಲವೆಂದರೆ ಅವನು ಅಯೋಗ್ಯ ಅಂತ ಅರ್ಥಮಾಡಿಕೊಳ್ಳಬೇಕು. ಅವನು ರಚನಾತ್ಮಕ ಕಾರ್ಯವನ್ನು ಬಿಡಬೇಕು. ಅಯೋಗ್ಯ ಕಾರ್ಯಕರ್ತನ ಹೊರೆಯನ್ನು ಸಮಾಜ ಹೊರಬಾರದು. ಇನ್ನೊಂದು ಲಾಭ ಕೂಡ ಇದೆ, ಈ ಕಾರ್ಯಕರ್ತನ ವ್ಯವಸ್ಥೆಯಲ್ಲಿ ಸ್ವತಃ ಸಹಜವಾಗಿ ವಿಕೇಂದ್ರೀಕರಣವಾಗುತ್ತದೆ, ಪ್ರಜಾತಂತ್ರ ನೆಲೆಗೊಳ್ಳುತ್ತದೆ. ಅದರಿಂದ ಅತಿ ಕಠಿಣ ವಿಪತ್ತಿನ ಪರಿಸ್ಥಿತಿಯಲ್ಲಿ ಕೂಡ, ಸರಕಾರದ ನಿಯಂತ್ರಣ ಇರುವಾಗ ಕೂಡ ಹಳ್ಳಿ ತನ್ನ ಅಸ್ತಿತ್ವವನ್ನು ಉಳಿಸಿಟ್ಟುಕೊಂಡಿರಲು ಸಾಧ್ಯವಾಗುತ್ತದೆ, ಧೈರ್ಯಗೆಡುವುದಿಲ್ಲ. ಬಾಪೂಜಿ ನಿರ್ದೇಶಿಸಿದ ಈ ಅಹಿಂಸಾಪರವಾದ ಗ್ರಾಮೋದ್ಧಾರ ಬಹಳ ಸಫಲ ಪ್ರಯೋಗವಾಗಿತ್ತು. ಇಂದಿನ ಸರಕಾರದ ಯಾವ ಯೋಜನೆಗಳೂ ಅಂತಹ ಪ್ರಯೋಗಗಳನ್ನು ನಡೆಸಲಾಗಿಲ್ಲ.

೧೯೩೨ರ ಕಮ್ಯೂನಲ್ ಅವಾರ್ಡ್ ಆದ ಮೇಲೆ ಬಾಪೂಜಿ ಹರಿಜನ ಸೇವಕ ಸಂಘವನ್ನು ಸ್ಥಾಪಿಸಿದ್ದರು. ಅಸ್ಪೃಶ್ಯತೆ ನಮ್ಮ ದೇಶದ ಅತಿ ಕೀಳುಮಟ್ಟದ ತುಚ್ಛ ವ್ಯವಸ್ಥೆಯಾಗಿತ್ತು, ಈ ವರ್ಣ ವ್ಯವಸ್ಥೆ ಇಲ್ಲದಿದ್ದರೆ ಬಹುಶಃ ನಮ್ಮ ಈ ದೇಶದ ಸಂಸ್ಕೃತಿ ಮುಳುಗುವ ಹಂತವನ್ನು ತಲಪುತ್ತಲೂ ಇರಲಿಲ್ಲ, ನಮ್ಮ ಧಾರ್ಮಿಕತೆ ಇಷ್ಟು ಭಯಂಕರವಾಗಿ ನಾಶವಾಗುತ್ತಲಿರಲಿಲ್ಲ, ಧರ್ಮ ಪರಿವರ್ತನೆಯ ಕಾರ್ಯ ನಡೆಯಲಾಗುತ್ತಿರಲಿಲ್ಲ, ಗುಲಾಮಗಿರಿ ಬರುತ್ತಿರಲಿಲ್ಲ. ನಮ್ಮ ಈ ದೊಡ್ಡ ಸಮಾಜದಲ್ಲಿ ಅಸ್ಪೃಶ್ಯತೆಯ ಕಳಂಕ ಬಹಳ ತೀವ್ರವಾಗಿದೆ. ದೇವರು ಎಲ್ಲರನ್ನೂ ಒಂದೇ ರೀತಿ

ಸೃಷ್ಟಿಸಿದ. ನಾವು ಎಷ್ಟು ದುಷ್ಟರು ನೀಚರು ಅಂದರೆ ಭಗವಂತನ ನ್ಯಾಯವನ್ನು ತೊಡೆದುಹಾಕಿ, ಒಂದು ದೊಡ್ಡ ಸಂಖ್ಯೆಯ ಜನಾಂಗವನ್ನು ಮಾನವನ ಗೌರವದಿಂದ ವಂಚಿತಗೊಳಿಸಿದೆವು. ಅವರನ್ನ ಪ್ರಾಣಿಗಳಿಗಿಂತ ಕೆಟ್ಟ ಸ್ಥಿತಿಯಲ್ಲಿ ಬದುಕುವಂತೆ ವಿವಶಗೊಳಿಸಿದೆವು. ಈ ಸಾಮೂಹಿಕ ಪಾಪದಿಂದ ನಮ್ಮ ಉದ್ಧಾರ ಆಗುವುದೇ ಇಲ್ಲ, ನಾವು ಸಾವಿರಾರು ವರ್ಷ ಇದಕ್ಕೆ ಸಜೆ ಅನುಭವಿಸುತ್ತ ಇರಬೇಕಾಗುತ್ತದೆ, ಎಂದು ಕೆಲವು ಸಾರಿ ನನಗನಿಸುತ್ತೆ. ಬಾಪೂಜಿಗೆ ಹರಿಜನರ ಬಗ್ಗೆ ಬಹಳ ಸಹಾನುಭೂತಿ ಇತ್ತು, ಅದಕ್ಕೇ ಅವರು 'ಹರಿಜನ' ಅನ್ನುವ ಸುಂದರವಾದ ಶಬ್ದವನ್ನು ರೂಪಿಸಿದರು. ಅವರಿಗೋಸ್ಕರ ತನ್ನ ಪ್ರಾಣವನ್ನೇ ಮುಡಿಪಿಟ್ಟು ಆಮರಣ ಉಪವಾಸ ಕೂಡ ಮಾಡಿದರು. ಜೈಲಿನಿಂದ ಹಿಂದಿರುಗಿದ ನಂತರ ಅವರು ಮತ್ತೊಮ್ಮೆ ಹರಿಜನ ಸೇವಕ ಸಂಘವನ್ನು ಸಕ್ರಿಯಗೊಳಿಸಿದರು. ಪ್ರತಿ ವರ್ಷ ೬–೭ ಲಕ್ಷರೂಪಾಯಿ ತಾವೊಬ್ಬರೇ ಸಂಗ್ರಹಿಸುತ್ತಿದ್ದರು. ಅದು ಬರಿಯ ಫಂಡ್ ಅಷ್ಟೇ ಆಗಿರದೆ, ಹರಿಜನ ಫಂಡ್‌ಗೆ ದಾನ ಕೊಡುವವನು ತನ್ನ ಹೃದಯದಿಂದ ಅಸ್ಪೃಶ್ಯತೆ ಅನ್ನುವದನ್ನು ಹೊರದೂಡಿರುತ್ತಾನೆ. ಒಂದು ಸಾರಿ ಒಂದು ಬೆಳ್ಳಿಯ ತಟ್ಟೆಯನ್ನು ೪೮೦೦ ರೂ, ಗೆ ಮೂರು ಬಾರಿ ಹರಾಜಾಗಿದ್ದು, ನಾಲ್ಕನೆಯ ಬಾರಿ ಬಾಪೂಜಿಗೆ ದಾನವಾಗಿ ಹಿಂದಿರುಗಿಸಿದ್ದರು. ಒಡವೆ ಹೇರಿಕೊಂಡಿದ್ದ ಹೆಂಗಸರು ಬಾಪೂಜಿಯ ಮಾತಿನಂತೆ ತಮ್ಮ ಚಿನ್ನದ ಆಭರಣಗಳನ್ನೆಲ್ಲಾ ಬಿಚ್ಚಿಕೊಟ್ಟುಬಿಡುತ್ತಿದ್ದರು. ತೆಗೆದುಕೊಳ್ಳುವವನು ಮಹಾತ್ಮನಾಗಿದ್ದಲ್ಲಿ ಕೊಡುವವರು ಕೂಡ ಧನ್ಯರಾಗುತ್ತಿದ್ದರು. ಮದುವೆ ಆದಾಗ ಎರಡು ಗುಂಪುಗಳಲ್ಲಿ ಒಂದು ಗುಂಪು ಹರಿಜನರದ್ದಾಗದಿದ್ದರೆ ತಾವು ಅಲ್ಲಿ ಹಾಜರಿರುವುದಿಲ್ಲವೆಂಬ, ಹಾಗೆಯೇ ಆಶೀರ್ವಾದ–ಉಪಹಾರ ನೀಡುವುದಿಲ್ಲವೆಂಬ ನಿಯಮವನ್ನಿಟ್ಟುಕೊಂಡಿದ್ದರು. ಅವರ ಮೊಮ್ಮಗಳ– ಹರಿಲಾಲ ಕಾಕಾನ ಕೊನೆಯ ಮಗಳು ಮನುಬೇನ್‌ನ –ಮದುವೆ ಮಶ್ರೂವಾಲಾ ಪರಿವಾರದೊಂದಿಗೆ ನಡೆಯಿತು, ಆದರೆ ಬಾಪೂಜಿ ಅದರಲ್ಲಿ ಹಾಜರಿರಲಿಲ್ಲ. ಹರಿಜನರಿಗಾಗಿ ಆಮರಣಾಂತ ಕಷ್ಟನೋವು ಅನುಭವಿಸಿದರು. ಅವರಿಗೆ ಸಮಾಜದಲ್ಲಿ ಸನ್ಮಾನಪೂರ್ಣಸ್ಥಾನ ನೀಡಿದರು, ಹರಿಜನರಿಂದಾಗಿ ಅವರು ಎಂದೂ ಯಾವ ದೇವಸ್ಥಾನಕ್ಕೂ ಹೋಗಲಿಲ್ಲ. ನಮಗೂ ಹೋಗಗೊಡಲಿಲ್ಲ, ಸ್ವಾತಂತ್ರ್ಯ ಸಿಕ್ಕ ನಂತರ ಮಂದಿರ ಪ್ರವೇಶವಾದಾಗ, ಹರಿಜನರಿಗೆ ದೇವರ ದರ್ಶನ ಮಾಡುವ ಅವಕಾಶ ಸಿಕ್ಕಾಗ ನಮ್ಮ ತಂದೆ ನಮಗೆ ದೇವಸ್ಥಾನಕ್ಕೆ ಹೋಗುವ ಅನುಮತಿ ಕೊಟ್ಟರು.

ಇಂದು ಹರಿಜನರ ಸ್ಥಿತಿ ಮೊದಲಿಗಿಂತ ಖಂಡಿತ ಸಾಕಷ್ಟು ಸುಧಾರಿಸಿದೆ, ಅವರಿಗೆ ಎಲ್ಲಾ ತರಹೆಯ ಅನುಕೂಲಗಳೂ ಸಿಕ್ಕಿವೆ. ಹಾಗಿದ್ದರೂ ಸಮಾಜದ ಉಚ್ಚ ವರ್ಗಗಳ ಅಂತರ್ಮನದಿಂದ ಈ ಅನುಚಿತ ಭಾವನೆ ಪೂರ್ತಿಯಾಗಿ

ದೂರವಾಗಿಲ್ಲ ಅಂತ ನನಗೂ ಗೊತ್ತು. ಇವತ್ತಿನ ಹರಿಜನ ಸಹೋದರರು ಮತ್ತು ಅವರ ಮುಖಂಡರು ಗಾಂಧೀಜಿ ತಮ್ಮ ಜೊತೆಗಾರರಿಗೆ, ಸಹಾಯ ಮಾಡಿದರೆಂದು ಒಪ್ಪುವುದಿಲ್ಲ ಅಂತ ನನಗೆ ಬಹಳ ಆಶ್ಚರ್ಯ–ದುಃಖವಾಗುತ್ತೆ. ಚಿನ್ನ–ಬೆಳ್ಳಿಯ ನಾಣ್ಯಗಳನ್ನ ಬಿಸುಟು ಅವರನ್ನು ಕೊಂಡುಕೊಳ್ಳುವ ಮುಖಂಡರೇ ಅವರಿಗೆ ಇಷ್ಟವಾಗುವುದು. ಆದರೆ ಅವರ ಮಾನ–ಮರ್ಯಾದೆ, ನಿಜವಾದ ಗೌರವ ಕುರಿತು ಅವರು ಚಿಂತಿಸುವುದೇ ಇಲ್ಲ. ಸಾಲ ಸಿಗುವಂತೆಮಾಡುವುದರಿಂದ ಯಾರ ಉದ್ಧಾರಕೂಡ ಆಗಲ್ಲ, ಈ ಲೋನ್ ಹಂಚುವುದು ಒಂದು ರೀತಿಯ ಕಳ್ಳತನವೇ. ಸರಕಾರ–ಸಮಾಜ ಎರಡೂ ಅವರೊಳಗೆ ಸೇರಿವೆ. ಅದಕ್ಕಿಂತ ಹೆಚ್ಚಾಗಿ ಲೋನ್ ತೆಗೆದುಕೊಳ್ಳುವವನು ಕುಂಟನಾಗಿ ಹೋಗ್ತಾನೆ, ಚುನಾವಣೆ ಕಾಲದಲ್ಲಿ ಉಮೇದುವಾರರು, ಪಾರ್ಟಿಗಳು ಇಬ್ಬರೂ ಅವರಿಗೆ ಮದ್ಯವನ್ನು ಹಂಚುತ್ತಾರೆ. ಹೆಂಡ ಕುಡಿಸಿ ಈ ಬಡಪಾಯಿ ಹರಿಜನರನ್ನು ಅವರ ಗೂಂಡಾ ಸರದಾರರಿಗೆ ಗುಲಾಮತನಕ್ಕಾಗಿ ಮಾರುತ್ತೇವೆ. ಅವರ ಅಮೂಲ್ಯವಾದ ಓಟನ್ನು ಕೊಂಡುಕೊಳ್ಳುತ್ತೇವೆ. ಇದು ಯಾವ ಆರ್ಥಿಕ, ರಾಜಕೀಯ ಸ್ವಾತಂತ್ರ್ಯ ಕೂಡ ಅಲ್ಲ, ಇದರಲ್ಲಿ ಅವರನ್ನು ಮತ್ತೂ ಹೆಚ್ಚಾಗಿ ಶೋಷಿಸಲಾಗುತ್ತದೆ. ಈ ರೀತಿ ಅಸ್ಪೃಶ್ಯತೆಯ ಬೇರುಗಳು ಮತ್ತೂ ಹೆಚ್ಚು ಆಳಕ್ಕಿಳಿದಿವೆ. ಹರಿಜನನಾಗಿರುವುದರಿಂದ ಸ್ವಾರ್ಥಿ ಮುಖಂಡರುಗಳಿಂದ ಆರಾಮವಾಗಿ ಹಣ, ಸಾಧನ, ಸಂಪತ್ತು ಪಡೆದುಕೊಳ್ಳಬಹುದು. ಹಾಗಾದರೆ ಪುರುಷಾರ್ಥ, ಕಷ್ಟ ಯಾಕೆ ಬೇಕು? ಹರಿಜನರ ಹೆಸರಿನಲ್ಲಿ ಕೆಟ್ಟ ರಾಜಕೀಯ ನಡೆಯುತ್ತಿರುವುದನ್ನು ನೋಡಿ ದುಃಖವಾಗುತ್ತೆ, ಸಮಾಜ ಅಸ್ಪೃಶ್ಯತೆಯನ್ನು ಮರೆತು ಇಡೀ ಸಮಾಜ ಒಂದಾಗಲಿ ಎಂದು ಬಹುಶಃ ಇವತ್ತಿನ ಹರಿಜನ ನಾಯಕರು ಇಷ್ಟಪಡುವುದೇ ಇಲ್ಲವೆನಿಸುತ್ತದೆ. ಇವತ್ತಿನ ಸರಕಾರಿ ನೀತಿ ನೋಡಿದರೆ ಅಸ್ಪೃಶ್ಯತೆ ಸದಾಕಾಲ ಇರಲಿ, ಆ ಹೆಸರಿನಲ್ಲಿ ಕೆಲಸ, ಹಣ, ಬ್ಯಾಂಕ್‌ಸಾಲ, ಉನ್ನತ ಶಿಕ್ಷಣ ಸಿಗುತ್ತಾ ಇರಲಿ ಅಂತ ಇಷ್ಟಪಡುತ್ತಾರೆ ಅನಿಸುತ್ತೆ, ಆದರೆ ಕೆಲಸ ಮಾಡದೆ ಗಳಿಸಿದ ಅಂತಹ ಹಣ, ಶಿಕ್ಷಣದ ಭವಿಷ್ಯ ಎಂದೂ ಫಲಿಸುವದಿಲ್ಲ. ಶಿಕ್ಷಣದಲ್ಲಿ ಆ ರಕ್ಷಣೆ ಇದ್ದರೆ, ಅದರ ಲಾಭ ಪಡೆದುಕೊಳ್ಳದೆ ಅದನ್ನು ಈಗ ಹೆಚ್ಚು ಬೆಲೆಗೆ ಮಾರಲಾಗುತ್ತಿದೆ, ಅದರಿಂದ ಹರಿಜನರಿಗೂ ಲಾಭ ಆಗಲ್ಲ, ಸಮಾಜಕ್ಕೂ ಪ್ರಯೋಜನವಿಲ್ಲ. ಅಧಿಕಾರದಲ್ಲಿರುವ ಜನ ತಮ್ಮ ಅನುಕೂಲಕ್ಕಾಗಿ ನೂರಾರು ವರ್ಷಗಳಿಂದ ಹಿಂದಿರುವ ನಮ್ಮ ದುಃಖಿತರು ಇದೇ ರೀತಿ ಹಿಂದುಳಿದಿರಲಿ, ಚಿನ್ನ ಬೆಳ್ಳಿಯ ಕೆಲಸ ತುಂಡುಗಳನ್ನು ನೀಡಿ ಅವರನ್ನು ಕೊಂಡುಕೊಳ್ಳುವಂತಿರಲಿ ಎಂದು ಇಷ್ಟಪಡುತ್ತಾರೆಂದು ನನಗನಿಸುತ್ತದೆ. ಹರಿಜನನಾಗಿರುವುದೇ ಹೆಚ್ಚು ಲಾಭದಾಯಕ ಅನಿಸುತ್ತದೆ. ಒಬ್ಬ ಕೇಂದ್ರ ಹರಿಜನ ಮಂತ್ರಿಯು ಗಾಂಧಿಯ ಹರಿಜನ ಭಕ್ತಿ ಸ್ವಾರ್ಥದಿಂದ ಕೂಡಿದ ರಾಜಕೀಯವಾಗಿತ್ತು,

ಹರಿಜನರ ಉದ್ಧಾರಕರು ಸ್ವಾತಂತ್ರ್ಯ ಸಿಕ್ಕ ಮೇಲೇ ಹುಟ್ಟಿದ್ದಾರೆ ಅಂತ ಕೂಡ ಹೇಳಿಬಿಟ್ಟರು. ಇವತ್ತಿನ ಹರಿಜನರು ಗಾಂಧಿಯನ್ನು ಉಪೇಕ್ಷಿಸುತ್ತಾರೆಂದರೆ ನಾವು ಅದಕ್ಕೆ ಏನೂ ಹೇಳುಕ್ಕಾಗವುದಿಲ್ಲ, ಆದರೆ ಅಂತಹ ಅಗತ್ಯದಿಂದ ಆಧುನಿಕ ಹರಿಜನ ಮಿತ್ರರು ಹರಿಜನ ಸಮಾಜಕ್ಕೆ ಬಹುದೊಡ್ಡ ನಷ್ಟವನ್ನುಂಟು ಮಾಡುತ್ತಿದ್ದಾರೆ ಅನ್ನುವುದನ್ನು ನೋಡಿದಾಗ ಮನಸ್ಸಿಗೆ ಬೇಸರವಾಗುತ್ತೆ. ಸಮಾಜದ ಯಾವ ಒಂದು ಅಂಗವಾದರೂ ರೋಗಿಷ್ಟವಾದರೆ, ಅಸ್ವಸ್ಥವಾದರೆ, ಇಡೀ ಸಮಾಜ ದುರ್ಬಲವಾಗುತ್ತೆ, ಆದರೆ ಆ ಅಂಗ ಇಂದು ಸ್ವಸ್ಥವಾಗಿ ಸ್ವಾವಲಂಬಿಯಾಗಲು ಬಯಸುವುದೇ ಇಲ್ಲ, ಇದಕ್ಕಿಂತಲೂ ಅಪಹಾಸ್ಯ, ದುಃಸ್ಥಿತಿ, ಮತ್ತೇನಾದೀತು !

ನನ್ನ ಅಲ್ಪ ಬುದ್ಧಿಗೆ ಹರಿಜನ ಸೇವಾಕಾರ್ಯವನ್ನು ಹರಿಜನರ ಕೈಗೆ ಕೊಡದೆ ಸವರ್ಣೀಯರ ಕೈಗೆ ಕೊಡಬೇಕು ಎಂದನಿಸುತ್ತದೆ. ಇದು ಸವರ್ಣರಿಗೆ ಪ್ರಾಯಶ್ಚಿತ್ತ, ಅದರಲ್ಲಿ ಹರಿಜನ ಸೇರುವ ಅಗತ್ಯವೇನಿಲ್ಲ, ಅದರಿಂದಲೇ ಬಾಪೂಜಿಯ ಕಾಲದಿಂದಲೂ ಹರಿಜನ ಸೇವಕ ಸಂಘದಲ್ಲಿ ಹರಿಜನ ಸದಸ್ಯರನ್ನಿಟ್ಟಿರಲೇ ಇಲ್ಲ. ಸವರ್ಣ ತನ್ನ ತಪ್ಪನ್ನ ಒಪ್ಪಿಕೊಂಡು ಹರಿಜನ ಸೇವೆಯಲ್ಲಿ ತೊಡಗಿಕೊಂಡಾಗ ಮಾತ್ರ ಈ ಕಲುಷಿತ ಪದ್ಧತಿ ನಾಶವಾಗುತ್ತೆ. ಹರಿಜನರ ಸಮಸ್ಯೆಯನ್ನು ಕುರಿತು ಒಬ್ಬ ದೊಡ್ಡ ಅಧಿಕಾರಿಯ ಆಯೋಗವನ್ನು ರಚಿಸಿದ್ದಾರೆ, ಈ ಕಮೀಷನ್‌ನ ಸದಸ್ಯತ್ವಗಾಗಿ ಎಲ್ಲ ಹರಿಜನ ಸಂಸದರು ನೂಕು ನುಗ್ಗಿ ಬರುತ್ತಾರೆ. ವಾಸ್ತವವಾಗಿ ಈ ಕೆಲಸವನ್ನ ಇಡಿಯಾಗಿ ಸವರ್ಣರಿಗೊಪ್ಪಿಸಬೇಕು, ಮತ್ತು ಇವರು ಹೊರಗಿದ್ದುಕೊಂಡು ಅವರಿಗೆ ಮಾರ್ಗದರ್ಶನ ನೀಡಬೇಕು. ಆಗ ಮಾತ್ರ ಬಹುಶಃ ಹರಿಜನರ ಸ್ಥಿತಿ ಸುಧಾರಿಸಬಹುದು. ಆದರೆ ನನ್ನ ಮನಸ್ಸಿನಲ್ಲಿ ಈ ಹರಿಜನ ಮುಖಂಡರು ಸ್ಥಿತಿಯನ್ನು ಉತ್ತಮಗೊಳಿಸಲೆಂದು ಇಷ್ಟಪಡುವ ಹಾಗೆ ಅನಿಸುವುದೇ ಇಲ್ಲ, ಪರಿಸ್ಥಿತಿ ಸುಧಾರಿಸಿದರೆ ಅವರ ನಾಯಕತ್ವ ಮುಳುಗಿ ಹೋಗುತ್ತದಲ್ಲ? ಅವರನ್ನು ಯಾರು ಕೇಳತ್ತಾರೆ? ದುರಾಸೆಯ ಪರಾಕಾಷ್ಠೆ ಇದು ಅನ್ನಬಹುದು. ತಮ್ಮ ಜಾತಿಯ ಸಮೂಹವನ್ನೇ ಹಳ್ಳಕ್ಕೆ ತಳ್ಳಿ, ಸ್ವಾರ್ಥಸಿದ್ಧಿಗಾಗಿ ಹಟ ಮಾಡುತ್ತಿದ್ದಾರೆ. ಈ ಅಂಥ ಲಾಲಸೆಯನ್ನು ತಡೆಯದೆ ಹೋದಲ್ಲಿ ಖಂಡಿತ ನಮ್ಮ ಆಕರ್ಷಕ ಸಮಾಜಕ್ಕೆ ಗ್ರಹಣ ಹಿಡಿಯುತ್ತದೆ. ಆಗ ನಾವು ನಿರುಪಾಯರಾಗಿ ಅವರಿಂದ ನಿರ್ದೇಶಿತ ಪ್ರೇಕ್ಷಕರಾಗಿ ಹರಡಿ ಹೋಗಿ ಅಲೆಯುತ್ತೇವೆ.

* * * *

# ೨೫. ಮಹಾದೇವ ದೇಸಾಯಿ

ಪ್ರತಿ ವರ್ಷವೂ ಆಗಸ್ಟ್ ೧೫ ಬರುತ್ತದೆ ಮತ್ತು ನಮ್ಮ ದೇಶ ಸ್ವಾತಂತ್ರ್ಯ ದಿವಸವನ್ನಾಚರಿಸುತ್ತದೆ, ಈ ಶುಭ ಸಂದರ್ಭದಲ್ಲಿ ಸಹಜವಾಗಿ ವಾತಾವರಣ ಉತ್ಸಾಹ ಮತ್ತು ಸಂತೋಷದಿಂದ ಪ್ರತಿಧ್ವನಿಸುತ್ತದೆ. ಇಂದಿನ ೫೦ ವರ್ಷದ ಯುವಕ ಭಾಗ್ಯಶಾಲಿಯಾಗಿದ್ದಾನೆ, ಅವನ ನೆನಪು ಸ್ವಾತಂತ್ರ್ಯದ ಸುಖಾನಂದದಿಂದ ತುಂಬಿದೆ. ಆದರೆ ಇವತ್ತಿಗೂ ಈ ಸುಂದರ ದೇಶದ ಸ್ವಾತಂತ್ರ್ಯ ಸಮಾರಂಭಕ್ಕಾಗಿ ಈ ಹಿಂದೆ ನೀಡಿರುವ ಬಲಿದಾನಗಳನ್ನು ಮರೆಯಲಾಗುವುದಿಲ್ಲ. ಒಂದು ತೀವ್ರವಾದ ವಿಷಾದ ಹೃದಯವನ್ನು ಭಾರಗೊಳಿಸುತ್ತದೆ, ಅಂತಹುದೇ ಒಬ್ಬ ಶ್ರೇಷ್ಠ ಬಲಿದಾನದ ಮೂರ್ತಿ ಮಹಾದೇವ ದೇಸಾಯಿ ಕೂಡ. ೨೫ ವರ್ಷಗಳ ಕಾಲ ಒಂದೇ ಸಮನೆ ಗಾಂಧೀಜೀಯವರ ಸೇವೆ ಮಾಡಿ ಆ (ಗಾಂಧಿಯ) ಪುತ್ರ, ಮಿತ್ರ, ಜೊತೆಗಾರ ಎಲ್ಲಾ ಆಗಿ ಮಹಾದೇವ ದೇಸಾಯಿ ೧೫ ಆಗಸ್ಟ್ ೧೯೪೨ ರಂದು ಆಗಾಖಾನ್ ಜೈಲಿನಲ್ಲಿ ಪಂಚಭೂತಗಳಲ್ಲಿ ವಿಲೀನರಾದರು. ಇಂದು ಸಮಾಜ ಅವರನ್ನು ಮರೆತಿದೆ, ಆದರೆ ಮಹಾದೇವ ದೇಸಾಯನ್ನು ಒಂದು ಬಾರಿಯಾದರೂ ನೋಡಿದ್ದವರು, ಬ್ರಹ್ಮನ ಈ ಅದ್ವಿತೀಯ ಕೃತಿಯನ್ನು ಮರೆಯಲಾಗುವುದಿಲ್ಲ.

೨೫ನೆಯ ವರ್ಷದ ತಮ್ಮ ತುಂಬು ಯೌವನದ ಅವಧಿಯಲ್ಲಿ ಮಹಾದೇವ ದೇಸಾಯಿ ಅವರು ತಮ್ಮ ಇಡೀ ಬಾಳುವೆಯನ್ನು ಬಾಪೂಜಿ ಅವರಿಗೆ ಸಮರ್ಪಿಸಿಬಿಟ್ಟರು. ಮೊದಲ ಪರಿಚಯದಲ್ಲಿಯೇ ಬಾಪೂಜಿಯವರು ಮಹಾದೇವ ಕಾಕಾ ಅವರ ತೇಜಿಸ್ಸ, ವಿದ್ವತ್ತು, ಉನ್ನತ ಸಂಸ್ಕಾರ ಹಾಹೂ ಉತ್ತಮ ನಡವಳಿಕೆಯನ್ನು ಗುರುತಿಸಿದ್ದರು ಹಾಗೂ ಒತ್ತಾಯ ಪೂರ್ವಕವಾಗಿ ಅವರನ್ನು ತಮ್ಮ ಬಳಿ ಇರಿಸಿಕೊಂಡಿದ್ದರು. ಅಂದಿನ ಆ ಪ್ರೀತಿಯ ಎಳೆ ಅವರಿಬ್ಬರ ನಡುವೆ ಸಾವಿನ ಗಳಿಗೆಯವರಗೂ ಅಕ್ಷುಣ್ಣವಾಗಿ ಉಳಿದುಕೊಂಡು ಬಂದಿತ್ತು. ಬಾಪೂಜಿಗೆ ಅವರು ಮಗನಿಗಿಂತಲೂ ಹೆಚ್ಚಾಗಿಯೇ ಇದ್ದರು. ಮಹಾದೇವ ದೇಸಾಯಿ ಅವರಿಗೆ ಬಾಪೂಜಿಯೇ ಸರ್ವಸ್ವವೂ ಆಗಿದ್ದರು. ಅವರ ಬಾಳುವೆ, ಸಾಧನೆ ಎಲ್ಲವೂ ಬಾಪೂಜಿಯೇ ಆಗಿದ್ದರು. ಬಾಪೂಜಿಯವರನ್ನು ಹೊರತಾಗಿಸಿ, ಮಹಾದೇವ ದೇಸಾಯಿ ಅವರನ್ನು ಕಲ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಮಕ್ಕಳಾದ ನಮಗೆ ಅವರು 'ಕಾಕಾ' (ಚಿಕ್ಕಪ್ಪ) ಮಾತ್ರವೇ ಆಗಿದ್ದರು. ಸಾಕಷ್ಟು ವಯಸ್ಸಾಗುವವರೆಗೂ,

ಮಹಾದೇವ ಕಾಕಾ ಅವರು ನಮ್ಮ ತಂದೆಯವರ ಸ್ವಂತ ಅಣ್ಣನಲ್ಲವೆಂಬ ವಿಚಾರ ನನಗೆ ತಿಳಿದೇ ಇರಲಿಲ್ಲ. ನನ್ನ ತಂದೆಯವರ (ರಾಮದಾಸ್ ಗಾಂಧೀ) ಮತ್ತು ಮಹಾದೇವ ಕಾಕಾ ಅವರ ನಡುವೆ ಅಪೂರ್ವ ಸ್ನೇಹವೇ ಇತ್ತು.

ಮಹಾದೇವ ದೇಸಾಯಿ ೧ ಜನವರಿ ೧೮೯೨ರಲ್ಲಿ ಸೂರತ್ ಬಳಿಯ ಅನಾವಿಲ ಬ್ರಾಹ್ಮಣ ಪರಿವಾರದಲ್ಲಿ ಜನ್ಮ ತಳೆದಿದ್ದರು. ಅನಾವಿಲ ಸಂಸ್ಕೃತ ಶಬ್ದಕ್ಕೆ ಅರ್ಥ ಕೊಚ್ಚೆಯಿಂದ ಮುಕ್ತವಾದ ವಸ್ತು ಅಂತ. ಮಹಾದೇವ ಭಾಯಿ ವಾಸ್ತವವಾಗಿ ಜನ್ಮದಿಂದ, ಕರ್ಮದಿಂದ ಕೊಚ್ಚೆಯಿಂದ ಮುಕ್ತರಾಗಿದ್ದವರು, ನಿರ್ಮಲ ಆತ್ಮವನ್ನು ಹೊತ್ತಿದ್ದವರು. ಚಿಕ್ಕಂದಿನಲ್ಲೇ ತಾಯಿ ತೀರಿಕೊಂಡಿದ್ದರು, ವಾತ್ಸಲ್ಯಪೂರಿತ ತಂದೆಯೇ ತಾಯಿ–ತಂದೆ ಇಬ್ಬರ ಪ್ರೀತಿಯನ್ನು ಈ ಒಂಟಿ ಮಗನಿಗೆ ನೀಡಿದರು, ಮತ್ತು ಓದಿಸಿ ಬೆಳೆಸಿದರು. ಮಹಾದೇವ ಸೌಮ್ಯ, ಶಾಂತ ಪ್ರಕೃತಿಯವರು ಮತ್ತು ಕುಶಾಗ್ರಬುದ್ಧಿ (ಸೂಕ್ಷ್ಮ ಮತಿ)ಯವರು. ಅವರ ದೇಹದ ಆಕಾರ ಸುಂದರವೂ, ಮನಮೋಹವೂ ಆಗಿತ್ತು. ಕೋಮಲ ಶರೀರರಚನೆಯಿಂದಾಗಿ ಆಜಾನುಬಾಹು ಕಾಕಾನ ಪಾರದರ್ಶಕ ಗುಲಾಬಿ ಬಣ್ಣ ಇವತ್ತೂ ನನ್ನ ಶೈಶವದ ಸ್ಮೃತಿಕೋಶದ ಅಮೂಲ್ಯ ಮಣಿಯಾಗಿದೆ.

ಅವು ಗುಜರಾತಿನ ರಾಷ್ಟ್ರೀಯ ಅಹಮಿಕೆಯ ಆರಂಭದ ದಿನಗಳಾಗಿದ್ದವು, ಆಗಲೇ ಗುಜರಾತ್‌ನ ಪ್ರಾಂತೀಯ ರಾಜಕೀಯ ಪರಿಷತ್ತು, ಸ್ಥಾಪನೆಯಾಗಿತ್ತು. ನವಂಬರ್ ೧೯೧೬ರಲ್ಲಿ ಪಂಚಮಹಲ್ ಜಿಲ್ಲೆಯ ಗೋಧ್ರಾ ನಗರದಲ್ಲಿ ಇದರ ಮೊದಲ ಅಧಿವೇಶನ ನಡೆಯುತ್ತಿತ್ತು. ಗಾಂಧೀಜಿ ಈ ಅಧಿವೇಶನದ ಅಧ್ಯಕ್ಷರಾಗಿದ್ದರು, ವಿಟ್ಠಲಭಾಯೀ ಪಟೇಲ್, ವಲ್ಲಭಭಾಯೀ ಪಟೇಲ್, ಆದಿವಾಸಿಗಳ ಪರಮ ಮಿತ್ರ ಠಕ್ಕರ್ ಬಾಪಾ, ಲೋಕಮಾನ್ಯ ತಿಲಕ ಮುಂತಾದ ಗಣ್ಯರು ವಿಶೇಷ ಅತಿಥಿಗಳಾಗಿದ್ದರು. ಅಲ್ಲೇ ಮೊದಲ ಬಾರಿ ಮಹಾದೇವ ದೇಸಾಯಿ ಗಾಂಧೀಜಿಯವರ ದರ್ಶನ ಪಡೆದರು. ಮತ್ತು ಅವರ ಭಾಷಣ ಕೇಳಿದರು. ಆ ಕ್ಷಣದಿಂದ ಮಹಾದೇವ ಗಾಂಧೀಜಿಯ ಸಾನ್ನಿಧ್ಯವನ್ನು ಪಡೆದರು, ಜೀವನದ ಕೊನೆಯ ಉಸಿರಿನವರೆಗೂ ಆತ ಬಾಪೂಜಿಯ ನೆರಳಾಗಿದ್ದರು. ೧೯೧೯ರ ವೇಳೆಗೆ ಅವರ ಗಾಂಧೀಜೀಗೆ ಅತಿ ಪ್ರಿಯರಾದರು. ಗಾಂಧೀಜಿ ಅವರನ್ನು ತನ್ನ ಮಾನಸಪುತ್ರ ಮತ್ತು ಉತ್ತರಾಧಿಕಾರಿಯೆಂದು ಘೋಷಿಸಿದರು. ಮಹಾದೇವ ದೇಸಾಯಿ ಗಾಂಧೀಜಿಯ ಅಭಿನ್ನ ಶಿಷ್ಯರಾಗಿದ್ದರು. ಅಂತೆಯೇ ಅವರು ಆ ಕಾಲದ ಅಗ್ರಪಂಕ್ತಿಯ ಎಲ್ಲಾ ಮುಖಂಡರಿಗೂ ಮಿತ್ರರಾಗಿದ್ದರು. ಚಿತ್ತರಂಜನ್ ದಾಸ್, ಮೋತೀಲಾಲ್ ನೆಹರೂ, ವಿಟ್ಠಲಭಾಯೀ ಪಟೇಲ, ವಲ್ಲಭಭಾಯೀ ಪಟೇಲ ಎಲ್ಲರೂ ಮಹಾದೇವರನ್ನು ತಮ್ಮೆಡೆಗೆ ಎಳೆದುಕೊಳ್ಳಲು ಪ್ರಯತ್ನಿಸಿದರು. ಆದರೆ ಮಹಾದೇವ ಕಾಕಾರ ಏಕನಿಷ್ಠ ಭಕ್ತಿ ಗಾಂಧೀಜಿಯನ್ನು ಅವರ ಜೀವನದ ಕೇಂದ್ರದಲ್ಲಿ ಸ್ಥಾಪಿಸಿತು. ಆದ್ದರಿಂದ ಬೇರೆಲ್ಲೂ ಹೋಗುವ ಆಕರ್ಷಣೆ ಇರಲೇ ಇಲ್ಲ. ಮಹಾದೇವರ ಕಾರ್ಯಕೌಶಲ್ಯ

ಮತ್ತು ತೀವ್ರ ಮಾಧುರ್ಯ ಮತ್ತು ಅನುಪಮ ಯೋಗ್ಯತೆಯಿಂದಾಗಿ ಅವರ ಶತ್ರು–ಮಿತ್ರ, ದೇಶ–ವಿದೇಶದ ಅನೇಕ ಧುರಂಧರ ರಾಜಕಾರಣಿಗಳು, ಪತ್ರಕರ್ತರು, ಗ್ರಂಥಕರ್ತರು ಅವರನ್ನು ಪ್ರೀತಿಸುತ್ತಿದ್ದರು. ಮಹಾದೇವರೊಡನೆ ಇರುವಾಗ ಶತ್ರುತ್ವ ಸಾಧ್ಯವಿರಲೇ ಇಲ್ಲ, ಅವರ ಸುಸಂಸ್ಕೃತ ಧ್ವನಿ, ಸಭ್ಯ ಭಾಷೆ ಮತ್ತು ಶಿಷ್ಟಾಚಾರ, ಅವರ ಸಂಯಮಿತ ನಡೆ–ನುಡಿ ಮತ್ತು ಹಾಸ್ಯ–ವಿನೋದಗಳು ಬಹಳ ಆಕರ್ಷಕವಾಗಿದ್ದವು. ಅವರ ಶತ್ರುಗಳು ಕೂಡ ಅವರನ್ನು ಮೋಹಿಸ ತೊಡಗುತ್ತಿದ್ದರು. ಈ ಅಪರೂಪದ ಮಾಧುರ್ಯದಲ್ಲಿ ಕಿಂಚಿತ್ತೂ ಮೂರ್ಖತನ ಎಂಬುದಿರಲಿಲ್ಲ, ಸಾಧಾರಣವಾದ ಕಟುತೆಯನ್ನೂ ಹುಡುಕಲಾಗುತ್ತಿರಲಿಲ್ಲ, ನಿಜವಾಗಿ ಹೇಳಬೇಕಾದರೆ ಅವರು ಅಜಾತಶತ್ರುವಾಗಿದ್ದರು.

ಬಾಪೂಜಿ ಬಗ್ಗೆ ಅವರಿಗೆ ಅಪರಿಮಿತ ಸೇವಾಭಕ್ತಿ ಇತ್ತೆಂದು ಇಂದು ಹೇಳಿದರೆ ಅದು ಅತಿಶಯೋಕ್ತಿ ಎನಿಸಬಹುದು. ಅವರು ಬಾಪೂಜಿಯ ಬಟ್ಟೆ ಒಗೆಯುತ್ತಿದ್ದರು, ಚಪ್ಪಲಿಯನ್ನು ಸ್ವಚ್ಛಗೊಳಿಸುತ್ತಿದ್ದರು, ಹಣ್ಣಿನ ರಸ ತೆಗೆಯುತ್ತಿದ್ದರು, ಧನ್ಯತೆ ಪಡೆಯುತ್ತಿದ್ದರು. ಗಾಂಧೀಜಿಯ ವ್ಯಾಪಕವಾದ ರಾಜಕೀಯ ಸಂಬಂಧಗಳ ನಿರ್ವಹಣೆ, ವಿಶಾಲ ಪತ್ರ ವ್ಯವಹಾರಗಳನ್ನು ಪೂರೈಸುವುದು, ದೇಶ–ವಿದೇಶದ ಆಗಂತುಕರೊಡನೆ ಚರ್ಚೆ, ಮಹಾತ್ಮಾಜೀಯ ಜೀವನ ದರ್ಶನದ ತಿಳಿವಳಿಕೆ ನೀಡುವುದು, 'ಯಂಗ್ ಇಂಡಿಯಾ', ಮತ್ತು 'ಹರಿಜನ' ಪತ್ರಿಕೆಯ ಸಂಪಾದನೆ, ಲೇಖನ ಬರೆಯುವುದು, ಗುಜಾರಾತಿ ಲೇಖನಗಳ ಹಿಂದಿ–ಇಂಗ್ಲಿಷ್ ಅನುವಾದ, ಸಾಪ್ತಾಹಿಕಕ್ಕಾಗಿ ಬಾಪೂಜಿಯ ಪ್ರತಿ ದಿನದ ದಿನಚರ್ಯೆಯ ವಿವರಗಳನ್ನು ಸಿದ್ಧಪಡಿಸುವುದು, ಗಾಂಧೀಜಿಯ ನಿರಂತರ ಪ್ರವಾಸದ ವರ್ಣನೆಯನ್ನು ತಮ್ಮ ಡೈರಿಯಲ್ಲಿ ಬರೆಯುವುದು, ಗಾಂಧೀಜಿ ಜೊತೆ ನಡೆದ ವಾದ–ವಿವಾದವನ್ನು ಲಿಪಿಬದ್ಧವಾಗಿಸುವುದು– ಈ ಎಲ್ಲ ಕೆಲಸಗಳನ್ನೂ ಎಷ್ಟೋ ವರ್ಷ ಮಹಾದೇವ್ ಒಬ್ಬರೇ ನಿರ್ವಹಿಸುತ್ತಿದ್ದರು, ಬಾಪೂಜಿಯ ಪ್ರಖರ ಪ್ರಯೋಗಗಳ ಕಾಲವದು, ಆ ದಿನಗಳಲ್ಲಿ ಚರಖಾ ತಿರುಗಿಸುವದು, ಪಾಯಿಖಾನೆ ಸ್ವಚ್ಛಗೊಳಿಸುವುದು, ರೊಟ್ಟಿ ಲಟ್ಟಿಸುವುದು–ಸುಡುವುದು, ನೀರು ತುಂಬುವದು, ಹಳ್ಳಿಯ ರಸ್ತೆಗಳನ್ನು ಸ್ವಚ್ಛಗೊಳಿಸುವುದು– ಈ ಎಲ್ಲ ಕೆಲಸಗಳೂ ಮಹತ್ವದವೇ. ಜೊತೆಗೆ 'ಗೀತಾ ರಹಸ್ಯ'ವನ್ನು ಉದ್ಘಾಟಿಸುವುದು, ಅಥವಾ ಭವಭೂತಿಯ 'ಉತ್ತರರಾಮಚರಿತ'ದ ಭಾಷಾ ಸೌಂದರ್ಯವನ್ನು ಸ್ವಾದಿಸುವುದು, ಅಥವಾ ರಸ್ಕಿನ್ ಮತ್ತು ಥೋರೋನ ಸತ್ಯಾಗ್ರಹ ಮೀಮಾಂಸೆಯ ವಿವೇಚನೆ– ಅನೇಕ ರೀತಿಯ ಇವೆಲ್ಲ ಕಾರ್ಯಕ್ರಮಗಳನ್ನೂ ಪರಿಪೂರ್ಣನಿಷ್ಠೆ ಮತ್ತು ಕುಶಲತೆಯಿಂದ ಮಹಾದೇವ ಭಾಯಿ ಮಾಡುತ್ತಿದ್ದರು.

ಅವರ ಚಿತ್ತಾಕರ್ಷಕವಾದ ಶರೀರದ ಹಾಗೆ ಅವರು ವಿದ್ವಾಂಸರು ಕೂಡ ಆಗಿದ್ದವರು. ಅವರು ತುಂಬ ರಸಿಕ ಸಾಹಿತಿಯೂ ಆಗಿದ್ದರು. ಪ್ರತಿದಿವಸವೂ ೧೮

ರಿಂದ ೨೦ ಗಂಟೆವರೆಗೆ ಕೆಲಸ ಮಾಡುತ್ತಿದ್ದರು ಅವರಿಗೆ ಆಧುನಿಕ ಸಾಹಿತ್ಯದ ಪರಿಚಯವೂ ಇತ್ತು, ಪ್ರತಿಯೊಂದು ವಿಷಯವನ್ನೂ ಅವರು ಆಳವಾಗಿ ತಿಳಿದುಕೊಂಡಿದ್ದರು. ಭಾರತಕ್ಕೆ ಸಂಬಂಧ ಪಟ್ಟಂತಹ ಪ್ರತಿಯೊಂದು ಪ್ರಶ್ನೆ, ವೈಚಾರಿಕ ದಿಕ್ಕುಗಳು ಎಲ್ಲ ಅವರಿಗೆ ತಿಳಿದಿರುತ್ತಿತ್ತು. ಮಹಾದೇವ್ ಒಂದು ಜೀವಂತ ವಿಶ್ವಕೋಶವೇ ಆಗಿದ್ದರು, ೨೪ ಗಂಟೆಯ ನಿಶ್ಚಿತ ಸಮಯದಲ್ಲಿ, ಇಷ್ಟೊಂದು ಪುರಸೊತ್ತಿಲ್ಲದ ಕೆಲಸಗಳ ಮಧ್ಯದಲ್ಲಿ ಅವರು ಅದು ಹೇಗೆ ಸಮಾಚಾರ ಪತ್ರಿಕೆಗಳು, ಇತರ ಪತ್ರಿಕೆಗಳು, ಹೊಸ ಪುಸ್ತಕಗಳನ್ನೆಲ್ಲಾ ಓದುತ್ತಿದ್ದರೋ? ಆವಶ್ಯಕತೆಗನುಸಾರವಾಗಿ ವಿಮರ್ಶೆಯನ್ನು ಬರೆಯುದ್ದರು. ಕ್ರಾಂತಿಯ ಈ ಕಾಲದಲ್ಲಿ ಅವರು ತಮ್ಮ ಸಾಹಿತ್ಯದ ಅಭಿರುಚಿಯನ್ನ ಎಚ್ಚರವಾಗಿಟ್ಟುಕೊಂಡು ಸ್ವಂತ ಸಾಹಿತ್ಯವನ್ನು ರಚಿಸಿದರು ಅಂದರೆ ಆಶ್ಚರ್ಯವಾಗುತ್ತೆ. ಬಾಪೂಜಿಯ 'ಸಿಂಹಳ ಯಾತ್ರೆ,' 'ತಿರುವಾಂಕೂರಿನಲ್ಲಿ ಹರಿಜನ ಕಾರ್ಯ,' 'ಗಡಿನಾಡು ಗಾಂಧಿ' ಮತ್ತು ಅವರಣ್ಣ ಡಾ॥ ಖಾನ್ ಸಾಹಬ್ ಅವರನ್ನು ಕುರಿತಂತೆ 'ಖುದಾ ಈ ಖಿದಮತ್‌ಗಾರ್' ಮತ್ತು 'ವೀರ್ ವಿಟ್ಠಲ ಭಾಯೀ' ಮುಂತಾದ ಭಾರತದ ರಾಷ್ಟ್ರೀಯ ಸಾಹಿತ್ಯ ರಚಿಸುವುದನ್ನು ಮಹಾದೇವ ಭಾಯಿಯೇ ಶುರು ಮಾಡಿದ್ದು. ಗುಜರಾತಿ, ಇಂಗ್ಲಿಷ್, ಮರಾಠಿ, ಬಂಗಾಳಿ, ಸಂಸ್ಕೃತ ಭಾಷೆಗಳಲ್ಲಿ ಅವರಿಗೆ ಅದ್ಭುತವಾಗಿ ಪಾಂಡಿತ್ಯ ಇತ್ತು, ಬಾಪೂಜಿ ಜೊತೆ ಕೆಲಸ ಮಾಡುತ್ತಾ ಅವರು ಫ್ರೆಂಚ್ ಕೂಡ ಕಲಿತಿದ್ದರು, ಗುರುದೇವ ರವೀಂದ್ರನಾಥ ಠಾಕೂರರ ಎಷ್ಟೋ ಗೀತೆಗಳನ್ನು, ಕಾವ್ಯಗಳನ್ನು ಮಹಾದೇವ ಭಾಯಿ ಗುಜರಾತಿಯಲ್ಲಿ ಮನಮುಟ್ಟುವಂತೆ ಅನುವಾದ ಮಾಡಿದ್ದಾರೆ. ಅವರ ಬಳಿ ಸಮಯ ಇರಲಿಲ್ಲ, ಇಲ್ಲದಿದ್ದರೆ ಶರತ್ ಸಾಹಿತ್ಯವನ್ನ ಪೂರ್ತಿಯಾಗಿ ಅನುವಾದ ಮಾಡುವ ಇಚ್ಛೆ ಅವರಿಗಿತ್ತು. ಎಳೆದಾಟದಲ್ಲಿ ಸಿಕ್ಕಷ್ಟು ಸಮಯದಲ್ಲಿ ಅವರು ಸಾಹಿತ್ಯ ಸೇವೆ ಮಾಡುತ್ತಿದ್ದರು, ಅವರ ಸಾಹಿತ್ಯದಲ್ಲಿ ಸಂಸ್ಕಾರವಂತಿಕೆ ಇದೆ, ಪ್ರಸಾದಗುಣವಿದೆ, ಸೌಷ್ಠವವಿದೆ. ಅತಿ ವಿಶೇಷ ಅಂದರೆ ಅವರ ಸಾಹಿತ್ಯ ಆರೋಗ್ಯವಾದ ಚಿಂತನೆಯಿಂದ ಪರಿಪೂರಿತವಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ವಿಷಯವಾಗಿಯೂ ಮಿತ್ರನಂತೆ ಸದ್ಭಾವನೆಯನ್ನಿಟ್ಟುಕೊಂಡು ಹಿತಕರವಾದ ಚಿಂತನೆ ಮಾಡುವುದು, ಪ್ರತಿಯೊಂದು ಘಟನೆಯ ಸತ್ಯ ಮತ್ತು ಶಾಸ್ತ್ರದ ಅಂಶಗಳನ್ನು ಪ್ರಕಟಪಡಿಸುವುದು ಆರೋಗ್ಯಕರವಾದ ದೃಷ್ಟಿಯ ಲಕ್ಷಣವಾಗಿರುತ್ತದೆ. ಮಹಾದೇವ ಭಾಯಿಯ ಸಾಹಿತ್ಯ ಸರ್ವಕಲ್ಯಾಣಕಾರಿಯಾದುದಾಗಿತ್ತು.

ಭಾರತ ಉತ್ಥಾನದ ಅಥವಾ ಗಾಂಧೀಜಿಯ ಇತಿಹಾಸದ ಹೆಚ್ಚಿನ ಅಂಶಗಳು ಮಹಾದೇವ ಭಾಯಿಯ ಸಾಹಿತ್ಯ, ಮತ್ತವರ ಡೈರಿಯಿಂದ ಇವತ್ತಿಗೂ ಸಿಗುತ್ತವೆ, ಇಲ್ಲಿಯವರೆಗೆ ೧೮ ಸಂಪುಟಗಳಲ್ಲಿ ಈ ಡೈರಿ ಪ್ರಕಟವಾಗಿದೆ, ಇನ್ನೂ ಹತ್ತು ವರ್ಷಗಳ ಸಾಮಗ್ರಿ ಹಾಗೆಯೇ ಇದೆ, ಅದನ್ನ ಕುರಿತು ಕಾರ್ಯ ನಡೆಯುತ್ತಿದೆ.

ಅವರು ಇನ್ನೂ ಕೆಲವು ವರ್ಷ ಬದುಕಿದ್ದಿದ್ದರೆ ಭಾರತ ಸ್ವಾತಂತ್ರ್ಯ ಸಂಗ್ರಾಮದ ಜೀವಂತ–ಜ್ವಲಂತ ಇತಿಹಾಸವನ್ನ ಪ್ರಪಂಚಕ್ಕೆ ಕೊಟ್ಟು ಹೋಗುತ್ತಿದ್ದರು. ಗಾಂಧೀಜಿಯ ಆತ್ಮಕಥೆಯನ್ನ ಮಹಾದೇವ ಭಾಯಿನೇ ಇಂಗ್ಲಿಷ್‌ಗೆ ಅನುವಾದ ಮಾಡಿದ್ದು, ಬಾಪೂಜಿ ಶುದ್ಧವಾದ ಭಾಷೆ ಕಡೆಗೆ ಹೆಚ್ಚು ಒತ್ತು ಕೊಡುತ್ತಿದ್ದವರು ಮತ್ತು ಸುಲಲಿತವಾದ ಸುಂದರ ಭಾಷೆಯನ್ನು ಬರೆಯುವ ಕೌಶಲ ಅವರಿಗಿತ್ತು. ಮಿಸ್ ಶ್ಲೇಷಿನ್ ಆದ ಮೇಲೆ ಮಹಾದೇವ ಕಾಕಾನ ಇಂಗ್ಲಿಷನ್ನು ಬಾಪೂಜಿ ಒಪ್ಪಿಕೊಂಡಿದ್ದರು. ಅವರ ಇಂಗ್ಲಿಷ್‌ನ ಸರಳ ಮತ್ತು ಪರಿಮಾರ್ಜಿತವಾದ ಭಾಷೆ ಇವತ್ತು ಕೂಡ ಓದಲು ಸಿಗುವುದೇ ಕಷ್ಟ. ಮಹಾದೇವ ಕಾಕಾಗೆ ಜವಾಹರಲಾಲಜೀ ಅಂತರಂಗ ಮಿತ್ರರಾಗಿದ್ದವರು, ಇಂಗ್ಲಿಷ್‌ನಲ್ಲಿ ಬರೆದಿದ್ದ ಜವಾಹರಲಾಲಜೀಯ ಆತ್ಮಕತೆಯನ್ನು ಮಹಾದೇವ ಕಾಕಾ ಸುಂದರವಾದ ಗುಜರಾತಿಯಲ್ಲಿ ಕಾವ್ಯಾನುವಾದ ಮಾಡಿದ್ದಾರೆ. ಅನೇಕ ವರ್ಷಗಳ ವರೆಗೂ ನಾನು ಅದು ಜವಾಹರಲಾಲಜೀದೇ ಭಾಷಾಶೈಲಿ ಅಂತ ಅದನ್ನ ತಿಳಿದಿದ್ದೆ. ಮಹಾದೇವ ಕಾಕಾನ ಸುತ್ತಮುತ್ತಲ ಪರಿಸರ ಯಾವಾಗಲೂ ಸಾಹಿತ್ಯ ಚರ್ಚೆ, ವಿಶ್ಲೇಷಣೆ, ಮಧುರವಾದ ಹಾಸ್ಯ– ಪರಿಹಾಸ್ಯದಿಂದ ಸಿಂಚಿತವಾಗಿರುತ್ತಿತ್ತು, ಅವರು ಸಂಸ್ಕೃತದ ವಿದ್ವಾಂಸರು ಕೂಡ ಆಗಿದ್ದರು. ರಘುವಂಶ ಅವರಿಗೆ ಬಾಯಲ್ಲಿ ಬರುತ್ತಿತ್ತು. ಗಾಢ ನಿದ್ದೆಯಿಂದ ಎಚ್ಚತ್ತಾಗ ಕೂಡ, ಅವರನ್ನು ಕೇಳಿದರೆ, ಅದನ್ನ ಅವರು ಉದ್ಧರಿಸಬಲ್ಲವರಾಗಿದ್ದರು. ಅದೇ ರೀತಿಯಲ್ಲಿ ಅವರು ಇಂಗ್ಲಿಷ್‌ನ ಮಹಾ ಪ್ರೇಮಿ, ಓದುಗ ಲೇಖಕ, ಸಮೀಕ್ಷಕ ಆಗಿದ್ದರು. ವಿಲಿಯಮ್ ಸ್ಕಾಟ್ ಬರೆದಿದ್ದ 'ಲೇಡಿ ಆಫ್ ದಿ ಲೇಕ್' ಕಾವ್ಯ ಸಿಗದೆ ಇದ್ದರೆ ಅಥವಾ ಅದನ್ನು ಮರೆತುಬಿಟ್ಟರೆ ನಾನು ಅದನ್ನು ಶಬ್ದಶಃ ಆದಿಯಿಂದ ಅಂತ್ಯದವರೆಗೆ ಬಾಯಲ್ಲಿ ಹೇಳಬಲ್ಲೆ ಅಂತ ಮಹಾದೇವ ಕಾಕಾ ಹೇಳುತ್ತಾ ಇದ್ದರು. ಅಂತಹ ವಿಶಿಷ್ಟವಾದ ನೆನಪು, ಅಂತಹ ಸಾಹಿತ್ಯ ಪ್ರೇಮ ಅಪರೂಪದ್ದು. ಪ್ರತಿಯೊಂದು ದಿವಸದ ರಾಜಕೀಯ ಝಂಝಾವಾತಗಳ ನಡುವೆ ಮಹಾದೇವಭಾಯಿ ತಮ್ಮ ಸಾಹಿತ್ಯಪ್ರೇಮದ ಜ್ಯೋತಿಯನ್ನು ಪ್ರಜ್ವಲಿತವಾಗಿ ಇಟ್ಟುಕೊಳ್ಳಬಲ್ಲವರಾಗಿದ್ದರು ಅನ್ನುವುದನ್ನು ಅವರ ಡೈರಿಯಿಂದ ತಿಳಿಯಬಹುದು.

ಈ ಸಾಹಿತ್ಯಾನುರಾಗದ ಜೊತೆಗೆ ಆ ಕಾಲದ ಭಾರತದಲ್ಲಿ ಅವರಷ್ಟು ಸುಂದರವಾದ ಅಕ್ಷರಗಳ ಹಾಗೆ ಬೇರೆ ಯಾರದೂ ಇರುತ್ತಿರಲಿಲ್ಲ. ಅವರ ಅಕ್ಷರಗಳು ಮುತ್ತಿನ ಹಾಗೆ ಹೊಳೆಯುತ್ತಿದ್ದವು, ಬಾಪೂಜಿಯ ಪತ್ರ ವ್ಯವಹಾರವೆಲ್ಲ ಅವರ ಕೈಲಿಪಿಯಲ್ಲೇ ಇರುತ್ತಿತ್ತು, ಆ ಕಾಲದ ವೈಸ್‌ರಾಯ್ ಕೂಡ ಗಾಂಧೀಜಿಯ ಸೆಕ್ರೆಟರಿ ಮಹಾದೇವರ ಅಕ್ಷರಗಳನ್ನು ನೋಡಿ ಮೋಹಗೊಂಡಿದ್ದರು; ಸ್ವಲ್ಪ ಹೊಟ್ಟೆಕಿಚ್ಚು ಪಡುತ್ತಿದ್ದರು ಅಂತ ಕಾಣುತ್ತದೆ. ಚಂಪಾರಣ್ಯದ ನೀಲಿ ಕೆಲಸಗಾರರ ಸತ್ಯಾಗ್ರಹವಾದ ನಂತರ ವೈಸ್‌ರಾಯ್ ಜೊತೆ ಚರ್ಚೆಗಾಗಿ ಗಾಂಧೀಜಿ ಮಹಾದೇವ

ಭಾಯಿಯನ್ನು ದೆಹಲಿಗೆ ಕಳುಹಿಸಿಕೊಟ್ಟಾಗ ಅವರ ಸುಂದರ ಅಕ್ಷರಗಳಿಂದಲೇ ಅವರನ್ನು ಗುರುತಿಸಿದ್ದರಂತೆ. ಆಗ ಟೈಪಿಸ್ಟ್ ಆಗಲಿ, ಸ್ಟೆನೋಗ್ರಫಿ ಕಲಿತವರು ಯಾರೂ ಇರುತ್ತಿರಲಿಲ್ಲ, ಆದರೆ ಮಹಾದೇವಭಾಯಿ ಭಾಷಣ ಕೇಳುತ್ತಿರುವಾಗಲೇ ಒಂದು ಶಬ್ದವನ್ನು ಕೂಡಬಿಡದಂತೆ ಉಚ್ಚಾರಣೆಯ ಗತಿಯೊಡನೆ ಬರೆದುಕೊಳ್ಳುತ್ತಿದ್ದರು. ಅದರಲ್ಲಿ ಒಂದು ಚೂರೂ ತಪ್ಪು ಇರುತ್ತಿರಲಿಲ್ಲ, ಎಲ್ಲೂ ಹೊಡೆದು ಹಾಕಿ ಬರೆದಿರುತ್ತಿರಲಿಲ್ಲ, ಅವರ ಹಸ್ತಪ್ರತಿ ನೇರವಾಗಿ ಪ್ರೆಸ್‌ಪ್ರತಿಯಾಗಿರುತ್ತಿತ್ತು. ಗಾಂಧೀಜಿ ಸಾಮಾನ್ಯವಾಗಿ ಹಿಂದಿ–ಗುಜರಾತಿಯಲ್ಲೇ ತಮ್ಮ ಭಾಷಣಗಳನ್ನು ಮಾಡುತ್ತಿದ್ದುದು. ಆದರೆ ಸುದ್ದಿಸಂಪಾದಕರಿಗೆ ಅನುಕೂಲವಾಗಲೆಂದು ಮಹಾದೇವಭಾಯಿ ಇಂಗ್ಲಿಷ್‌ನಲ್ಲಿ ಅವರ ಭಾಷಣಗಳ ಅನುವಾದವನ್ನು ಬರೆಯುತ್ತಿದ್ದರು. ಇಂಗ್ಲಿಷ್ ಪತ್ರಕರ್ತರಾಗಿದ್ದ ಜಾನ್ ಗಂಥರ್, ಲೂಯಿ ಫಿಷರ್, ವಿಸೆಂಟ್ ಶೀಲ್ ಮುಂತಾದ ಹೆಸರುವಾಸಿಯಾಗಿದ್ದ ವಿದೇಶಿ ಪತ್ರಕರ್ತರು ಕೂಡ ಮಹಾದೇವ ಭಾಯಿಯೊಂದಿಗೆ ಚರ್ಚೆ ನಡೆಸಿಯೇ ತಮ್ಮ ರಿಪೋರ್ಟನ್ನು ಗಾಂಧೀಜಿಯವರ ಮುಂದೆ ಸ್ವೀಕೃತಿಗಾಗಿ ಪ್ರಸ್ತುತಪಡಿಸಲು ಧೈರ್ಯವಹಿಸುತ್ತಿದ್ದರು. ೧೯೨೦ ರಿಂದ ೧೯೪೦ರ ನಡುವೆ ಬಾಪೂಜಿ ದೇಶದಲ್ಲಿ ಎಲ್ಲಾ ಕಡೆ ರಾತ್ರೆ – ಬೆಳಿಗ್ಗೆ ಸಂಚಾರ ಮಾಡಿದ್ದರು, ಆದರೆ ಅವರು ಎಲ್ಲೇ ಇದ್ದರೂ ಮಹಾದೇವ ಕಾಕಾ ನಿರಂತರವಾಗಿ 'ಯಂಗ್ ಇಂಡಿಯಾ', 'ಹರಿಜನ್'ಗಾಗಿ ಲೇಖನಗಳು, ಡೈರಿ, ವೃತ್ತಾಂತವನ್ನು ಕಳುಹಿಸುತ್ತಿದ್ದರು. ಎಲ್ಲಾ ತರಹೆಯ ಕಷ್ಟ–ನಷ್ಟಗಳ ನಡುವೆಯೂ ಪ್ರತಿವಾರ ನಿಯಮಿತವಾಗಿ ಬಾಪೂಜಿಯ ಎಲ್ಲ ಸಾಪ್ತಾಹಿಕ ಪತ್ರಿಕೆಗಳು ಅಹಮದಾಬಾದ್‌ನಿಂದ ಪ್ರಕಟವಾಗಿದ್ದವು, ಅದರ ಬಹುಪಾಲು ಶ್ರೇಯಸ್ಸು ಮಹಾದೇವ ಕಾಕಾಗೇ ಸಲ್ಲುತ್ತದೆ,

೧೯೨೪ರಲ್ಲಿ ಬೆಳಗಾಮ್‌ನಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು, ಬಾಪೂಜಿ ಅಧ್ಯಕ್ಷರಾಗಿದ್ದರು, ಮೀಟರ್‌ಗೇಜ್‌ನ ಟ್ರೈನ್ ಮೂರನೆ ದರ್ಜೆಯ ಬೋಗಿಯಲ್ಲಿ ಗಾಂಧೀಜಿ ಯಾತ್ರೆ ಮಾಡುತ್ತಿದ್ದರು. ಈ ಸಪ್ತಾಹದ 'ಹರಿಜನ್'ಗೆ ಲೇಖನ, ಅಧ್ಯಕ್ಷ ಭಾಷಣವನ್ನು ಸಿದ್ಧಪಡಿಸಿ, ಅದರ ಪ್ರತಿಯನ್ನು ಅಹಮದಾಬಾದ್‌ಗೆ ಕಳುಹಿಸಲು ಸುಮಾರು ಸಮಯ ಹಿಡಿಯುತ್ತಲಿತ್ತು. ರಾತ್ರಿಯ ಹೊತ್ತು ಪೂರ್ತಿ ಕತ್ತಲ ವಾತಾವರಣದಲ್ಲಿ ಮಲಗುವುದು ಗಾಂಧೀಜಿಗೆ ಇಷ್ಟವಾಗುತ್ತಿರಲಿಲ್ಲ. ರಾತ್ರಿಯಾಯಿತು, ಗಾಂಧೀಜಿ ಮಲಗುವ ಸಿದ್ಧತೆ ಮಾಡಿಕೊಂಡರು, ಮೂರನೇ ದರ್ಜೆಯ ಬೋಗಿಯಲ್ಲಿದ್ದ ಒಂದೇ ದೀಪದ ಮೇಲೆ ನೀಲಿಬಣ್ಣದ ಟೈಕಟ್ಟಿ ಮಹಾದೇವಭಾಯಿ ಅಲ್ಲಿ ಕತ್ತಲು ಮಾಡಿಬಿಟ್ಟರು. ಆದರೆ 'ಹರಿಜನ'ದ ಪ್ರೆಸ್ ಮ್ಯಾಟರ್ ಕಳುಹಿಸುವುದು ಅನಿವಾರ್ಯವಾಗಿತ್ತು. ಅವರು ಮೂರನೆ ದರ್ಜೆಯ ಪ್ರಸಾಧನವನ್ನು ಸ್ವಚ್ಛಗೊಳಿಸಿದರು, ರಾತ್ರಿ ಮೂರು ಗಂಟೆಯವರೆಗೂ ಅಲ್ಲಿ ಕುಳಿತು 'ಹರಿಜನ್'

ಗಾಗಿ ಲೇಖನ, ಮುಂತಾದ್ದನ್ನು ಸಿದ್ಧಪಡಿಸಿದರು ಮತ್ತು ಸಮಯಕ್ಕೆ ಸರಿಯಾಗಿ ಸಾಮಗ್ರಿ ಅಹಮದಾಬಾದ್ ಪ್ರೆಸ್ ತಲುಪಿತು. ಹೀಗೆಂದು ಸ್ವಾಮಿ ಆನಂದ್ ಈ ಕತೆಯನ್ನು ನನಗೆ ಹೇಳಿದ್ದರು. ಮಹಾದೇವ ಕಾಕಾ ಅವರ ಜೀವನದಲ್ಲಿ ಕತ್ತಲು–ಬೆಳಕು ಅನ್ನುವದರಲ್ಲಿ ಹೆಚ್ಚು ವ್ಯತ್ಯಾಸವೇ ಇರುತ್ತಿರಲಿಲ್ಲ, ರಾತ್ರಿ–ಬೆಳಿಗ್ಗೆ ಅನ್ನದೆ ಕೆಲಸ ಮಾಡಿಕೊಂಡೇ ಬೆಳಿಗ್ಗೆ ೪–೦೦ ಗಂಟೆಗೆ ಪ್ರಾರ್ಥನೆಗೆ ಹಾಜರಾಗುತ್ತಿದ್ದರು. ಆಗ ಮಹಾದೇವ ಕಾಕಾ ತಮ್ಮ ಮಧುರ ಕಂಠದಿಂದ ಸಂಸ್ಕೃತ ಶ್ಲೋಕಗಳನ್ನ ಹೇಳುತ್ತಿದ್ದರು; ಅನಂತರದಲ್ಲಿ ಭಜನೆ ಹಾಡಿ, ರಾಮಧುನ್ ಉಚ್ಚರಿಸುತ್ತಿದ್ದರು. ಎಷ್ಟೋ ಬಾರಿ ಬ್ರಾಹ್ಮೀ ಮುಹೂರ್ತದಲ್ಲಿ ಕತ್ತಲೆಯಲ್ಲೇ ಭಾಷಣವನ್ನು ಬರೆದುಕೊಳ್ಳುತ್ತಿದ್ದರು. ಕತ್ತಲಲ್ಲೂ ಕೊಂಕಿಲ್ಲದ ನೇರ ಸಾಲಿನಲ್ಲಿ ಅಷ್ಟೇ ಸುಂದರವಾದ ಅಕ್ಷರಗಳಲ್ಲಿ ಬರೆಯುತ್ತಿದ್ದರು. ತಪ್ಪು ಆಗುತ್ತಿರಲೇ ಇಲ್ಲ.

೧೯೧೯ರಲ್ಲಿ ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಮತ್ತು ರೌಲತ್ ಬಿಲ್‌ನ ಅಮಾನವೀಯತೆ ವಿರುದ್ಧ ಸತ್ಯಾಗ್ರಹದ ನಗಾರಿ ಬಾರಿಸುತ್ತಿತ್ತು. ೫ನೇ ಏಪ್ರಿಲ್ ರಾತ್ರಿ ಇಡೀ ಎದ್ದಿದ್ದು ಮಹಾದೇವರು ಅಮೆರಿಕನ್ ದಾರ್ಶನಿಕ ಥೋರೋನ 'ಆನ್ ಸಿವಿಲ್ ಡಿಸೊಬೀಡಿಯನ್ಸ್' ಪ್ರಬಂಧದ ಸಂಕ್ಷಿಪ್ತಾನುವಾದ ಮಾಡಿ ಪ್ರಕಟಣ ನಿಯಮೋಲ್ಲಂಘನೆ ಮಾಡಿ, ಆ ಅನುವಾದವನ್ನು ಪುಸ್ತಕ ರೂಪದಲ್ಲಿ ಬೊಂಬಾಯಿಂದ ಪ್ರಕಟಪಡಿಸಿದ್ದರು. ೬ನೇ ಏಪ್ರಿಲ್ ೧೯೧೯ರ ಸಂಜೆ ಬೊಂಬಾಯಿ ಮಹಾನಗರದ ರಸ್ತೆಗಳಲ್ಲಿ ಒಳ್ಳೆಯ ಮನೆತನದ ಹಿಂದೂ, ಮುಸ್ಲಿಂ ಹಾಗೂ ಪಾರಸಿ ಮಹಿಳೆಯರು ಆ ಪುಸ್ತಕದ ಸಾವಿರಾರು ಪ್ರತಿಗಳನ್ನು ಎಲ್ಲರೆದುರಿಗೆ ಮಾರಿ ಕಾನೂನನ್ನು ಸವಿನಯ ಉಲ್ಲಂಘಿಸಿದ್ದರು. ಬ್ರಿಟಿಷರು ತಮ್ಮ ಸಾಮ್ರಾಜ್ಯದಲ್ಲೆಂದೂ ಸೂರ್ಯಾಸ್ತ ಆಗುವುದೇ ಇಲ್ಲವೆಂದು ಜಂಬ ಕೊಚ್ಚಿಕೊಳ್ಳುತ್ತಿದ್ದರು. ಅಂತಹ ಶಕ್ತಿಯುತವಾದ ಬ್ರಿಟಿಷ್ ಸಾಮ್ರಾಜ್ಯ ಕೂಡ ಇಂತಹ ಅಹಿಂಸಾತ್ಮಕ ದೃಢ ವಿರೋಧವನ್ನು ಕಂಡು ನಡುಗಿತ್ತು. ಮಹಾತ್ಮಾಜೀ ಜೊತೆ ಮಹಾದೇವ ಭಾಯಿಯವರ ಬರೆಹ ದೇಶದ ವಾತಾವರಣವನ್ನೇ ಬದಲಾಯಿಸುತ್ತಿತ್ತು. ಹೆದರಿದ್ದ ದೇಶವಾಸಿಗಳಲ್ಲಿ ಜಾಗೃತಿಯ ಅಲೆ ಎದ್ದು ಲಕ್ಷಾಂತರ ಮಂದಿ ದೇಶದ ಸ್ವಾತಂತ್ರ್ಯಕ್ಕಾಗಿ ನಗು–ನಗುತ್ತಾ ಪ್ರಾಣಾರ್ಪಣೆ ಮಾಡಿದರು.

೧೯೨೧ರಲ್ಲಿ ಮೋತಿಲಾಲ ನೆಹರೂ ಅಲಹಾಬಾದಿನಿಂದ 'ಇಂಡಿಪೆಂಡೆಂಟ್' ಎಂಬ ಪತ್ರಿಕೆಯನ್ನು ಹೊರಡಿಸಲಾರಂಭಿಸಿದರು. ಕೆಲವು ಸಮಸ್ಯೆಗಳು ಎದುರಾದಾಗ ಮೋತೀಲಾಲರು ತನ್ನ ಪರಮಮಿತ್ರ ಮಹಾತ್ಮಾಜಿಯಲ್ಲಿ ಮಹಾದೇವ ದೇಸಾಯಿ ಅವರ ನೆರವನ್ನು ನೀಡಲು ಬೇಡಿದರು. ಮಹಾತ್ಮಾಜೀ ಕೂಡ ತನ್ನ ಪರಮಮಿತ್ರರ ಸಹಾಯಕ್ಕಾಗಿ ತನ್ನ ಶ್ರೇಷ್ಠ ಸೆಕ್ರೆಟರಿಯನ್ನು ಕಳುಹಿಸಿದರು, ಕೆಲವೇ ವಾರಗಳಲ್ಲಿ ಆ ಪತ್ರಿಕೆಯ ಪ್ರಖರ ರಾಷ್ಟ್ರವಾದದಿಂದ ಬೇಸತ್ತು ಸರಕಾರ ಮೋತೀಲಾಲಜೀ ಮತ್ತು ಜವಾಹರಲಾಲಜೀರವರನ್ನು ಜೈಲಿಗೆ ದೂಡಿತು ಮತ್ತು ಅಚ್ಚುಕೂಟಕ್ಕೆ

ಬೀಗಮುದ್ರೆ ಹಾಕಿತು. ಮಹಾದೇವ ಭಾಯಿ 'ಐ ಶಲ್ ನಾಟ್ ಡೈ – ನಾನು ಖಂಡಿತ ಸಾಯುವುದಿಲ್ಲ' ಎಂಬ ಶೀರ್ಷಿಕೆಯೊಂದಿಗೆ ಸಂಪಾದಕೀಯವನ್ನು ಬರೆದು ಕೈಯಿಂದ ಸೈಕ್ಲೋಸ್ಟೈಲಿಂಗ್ ಮೆಷೀನ್‌ನಲ್ಲಿ ಅದರ ಪ್ರತಿಗಳನ್ನು ಪ್ರಕಟಪಡಿಸಿದರು. ಫಜೀತಿಗೊಂಡು ಸರಕಾರ ೨೪ ಡಿಸೆಂಬರ್‌ನ ರಾತ್ರಿ ಮಹಾದೇವ ಕಾಕಾನ್ನೂ ಬಂಧಿಸಿ, ಕಡು ಕಷ್ಟಕೊಟ್ಟು, ಹಿಂಸೆ ನೀಡಿ ಖೂನಿಯ ಅಪರಾಧಿ ಕೈದಿಗಳ ಜೊತೆ ಆಗ್ರಾ ಜೈಲಿನಲ್ಲಿಟ್ಟಿತ್ತು.

ಗೃಹಸ್ಥನಾಗಿದ್ದುಕೊಂಡೇ ಮಹಾದೇವ ದೇಸಾಯಿ ಅತ್ಯುಚ್ಚಮಟ್ಟದ ಸಾಧಕರಾಗಿದ್ದರು, ದೈವಭಕ್ತರಾಗಿದ್ದರು. ಪ್ರೇಮಿ ಪತಿ ಮತ್ತು ಏಕಮಾತ್ರ ಪುತ್ರನ ಪ್ರೀತಿಯ ತಂದೆ ಆಗಿದ್ದರೂ ಅವರ ಜೀವನ ಆಧ್ಯಾತ್ಮಿಕತೆಯ ಬಣ್ಣದಲ್ಲಿ ಮುಳುಗಿತ್ತು. ಎಡಬಿಡದೆ ಓದು–ಬರಹ ಮತ್ತು ಸೂಕ್ಷ್ಮ ನಿರೀಕ್ಷಣ ಮತ್ತು ಜಾಗರೂಕ ಆತ್ಮ ಪರೀಕ್ಷೆಯ ಮುಖಾಂತರ ನಿರಂತರ ಬಾಹ್ಯ ಮತ್ತು ಆಂತರಿಕ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಲು ಕೊನೆಯವರೆಗೂ ಸಾಧನೆ ಮಾಡುತ್ತಲೇ ಇದ್ದರು. ಅವರ ಸಾಧನೆಯ ಗುರಿ ಒಂದೇ–ಗಾಂಧೀಜಿಯ ಸೇವೆ ಆಗಿತ್ತು, ಬಾಪೂಜಿಯವರ ಸೇವೆಯೇ ಮಹಾದೇವರ ಧರ್ಮ–ಕರ್ಮ ಎಲ್ಲವೂ. ಅವರು ಬಾಪೂಜಿಯವರ ಇಚ್ಛೆಯಲ್ಲೇ ವಿಲೀನಗೊಂಡಿದ್ದರು, ಅವರ ಪ್ರತಿಯೊಂದು ವಿಚಾರದೊಂದಿಗೆ ಮಹಾದೇವ ದೇಸಾಯಿ ತಾದಾತ್ಮ್ಯಗೊಂಡಿರುತ್ತಿದ್ದರು, ಗಾಂಧೀಜಿಯವರ ಸೂಕ್ಷ್ಮ ವಿಚಾರಗಳನ್ನು ಸರಳವಾಗಿ ಅರ್ಥಮಾಡಿಕೊಳ್ಳುತ್ತಿದ್ದರು, ಎಷ್ಟೋ ಬಾರಿ ಬಾಪೂಜಿ ಹೇಳುವುದಕ್ಕೂ ಮೊದಲೇ ಮಹಾದೇವ್ ಅವರ ವಿಚಾರಗಳ ಆ ದೃಶ್ಯವನ್ನು ಭಾಷೆಯಲ್ಲಿ ಸ್ಪಷ್ಟಪಡಿಸುತ್ತಿದ್ದರು, ಬಾಪೂಜಿಗೆ ತುಸುವಾದರೂ ಮಾನಸಿಕ–ಶಾರೀರಿಕ ಅನಾರೋಗ್ಯ ಉಂಟಾದರೆ ಮಹಾದೇವ ಭಾಯಿಗೆ ಅದು ಚಿಂತೆಯ ವಿಷಯವಾಗಿಬಿಡುತ್ತಿತ್ತು.

ಬಾಪೂಜಿಯವರು ಹೇಳದೆ ಕೂಡ ಎಷ್ಟೋ ಕೆಲಸಗಳನ್ನು ಮಹಾದೇವ ಕಾಕಾ ತಮ್ಮ ತಿಳಿವಳಿಕೆಯಿಂದ ಬಹಳ ಒಳ್ಳೆಯ ರೀತಿಯಲ್ಲಿ ನಿರ್ವಹಿಸಿರುತ್ತಿದ್ದರು. ಒಂದು ಮಾರ್ಮಿಕ ಘಟನೆಯನ್ನು ಇಲ್ಲಿ ಉಲ್ಲೇಖಿಸುತ್ತೇನೆ. ಶಾಂತಿನಿಕೇತನಕ್ಕೆ ಆರಂಭದ ಕೆಲವು ವರ್ಷ ಹಣದ ವಿಶೇಷ ಕೊರತೆ ಇತ್ತು. ಒಮ್ಮೆ ಶಾಂತಿನಿಕೇತನಕ್ಕೆ ಆರು ಸಾವಿರ ರೂಪಾಯಿಗಳ ತೀವ್ರ ಆವಶ್ಯಕತೆ ಉಂಟಾಯಿತು, ಬರಿಯ ಆರು ಸಾವಿರ ರೂಪಾಯಿಗಳನ್ನು ಜೋಡಿಸಲು ವೃದ್ಧಾವಸ್ಥೆಯಲ್ಲಿ ಗುರುದೇವರು ದೆಹಲಿನಗರದಲ್ಲಿ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು, ನೃತ್ಯದ ಕಾರ್ಯಕ್ರಮ ಏರ್ಪಡಿಸುವುದರಲ್ಲಿ ತೊಡಗಿಕೊಂಡಿದ್ದರು. ಗುರುದೇವರಂತಹ ಮಹಾನ್ ವಿಭೂತಿ ಪುರುಷ ಹೀಗೆ ಕಷ್ಟಪಡುತ್ತಿದ್ದುದನ್ನು ನೋಡಿ ಗಾಂಧೀಜಿಗೆ ಬಹಳ ತಳಮಳವಾಯಿತು, ಅವರು ಚಿಂತಿಸತೊಡಗಿದರು. ಮಹಾದೇವ ಕಾಕಾ ಬಾಪೂಜಿಯ ಈ ವ್ಯವಸ್ಥೆಯನ್ನರಿತರು ಮತ್ತು ಘನ ಶ್ಯಾಮದಾಸ ಬಿಡಲಾ ಜೊತೆ ಮಾತನಾಡಿ

ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ಆರು ಸಾವಿರ ರೂಪಾಯಗಳನ್ನು ಗುರುದೇವ ಮತ್ತು ಗಾಂಧೀಜಿ ಇಬ್ಬರೂ ನಿಶ್ಚಿಂತರಾಗುವಂತೆ ಏರ್ಪಾಡು ಮಾಡಿದರು. ಇಂತಹ ಎಷ್ಟೋ ಕೆಲಸಗಳನ್ನು ಮಹಾದೇವ ಭಾಯಿ ಸಹಜವಾಗಿ ಮಾಡಿರುತ್ತಿದ್ದರು, ಯಾರಿಗೂ ಅವಮರ್ಯಾದೆಯಾಗದಂತೆ ಬಹಳ ಚತುರತೆಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ರಾಮಭಕ್ತ ಹನುಮಂತನ ಭಕ್ತಿ ಇವತ್ತಿಗೂ ಪ್ರಸಿದ್ಧವೇ, ನಮ್ಮ ತರ್ಕಬುದ್ಧಿ ಸಾಮಾನ್ಯವಾಗಿ ಅಂತಹ ಶ್ರದ್ಧೆಯನ್ನು ಊಹಾಪೋಹವೆಂದು ಸಾರುತ್ತದೆ, ಆದರೆ ಮಹಾದೇವಭಾಯಿಯ ಬಾಪೂಭಕ್ತಿಯನ್ನು ನೋಡಿದ ನಂತರ ಎಲ್ಲಾ ಅಶ್ರದ್ಧೆ ಕೊನೆಗೊಳ್ಳುತ್ತದೆ.

ಮಹಾದೇವ ಭಾಯಿಯ ಸ್ವಭಾವ ಕೋಮಲ–ಮೃದು ಆಗಿದ್ದಂತೆಯೇ ಅವರು ಶುದ್ಧಚಾರಿತ್ರರು ಕೂಡ ಆಗಿದ್ದರು. ಒಮ್ಮೆ ಸ್ಟೇಷನ್‌ನಲ್ಲಿ ರೈಲ್ವೆ ಟಿಕೆಟ್ ಖರೀದಿಸುವಾಗ ಮಹಾದೇವ ಭಾಯಿಯ ಜೇಬು ಕಳುವಾಯಿತು, ನಾಲ್ಕು ನೂರು ರೂಪಾಯಿಗಳು ಕಳುವಾದವು. ಮಹಾದೇವ ದೇಸಾಯಿ ಅವರಿಗೆ ಆಶ್ರಮದಿಂದ ತಿಂಗಳಿಗೆ ಎಪ್ಪತ್ತೈದು ರೂಪಾಯಿಗಳು ಬರುತ್ತಿದ್ದವು, ತಮ್ಮ ಬೇಜವಾಬ್ದಾರಿಯಿಂದ ಆಶ್ರಮದ ಸಾರ್ವಜನಿಕ ಭಂಡಾರಕ್ಕೆ ಈ ತೆರನಾದ ನಷ್ಟ ತಗುಲಿತೆಂದು ಅವರಿಗೆ ಬಹಳ ದುಃಖವಾಯಿತು. ಅದನ್ನು ಭರಿಸಲು ಮಹಾದೇವ ದೇಸಾಯಿ ಮೋರ್ಲೆಯ 'ಆನ್ ಕಾಂಪ್ರೊಮೈಸ್' ಎಂಬ ಒಂದು ದೊಡ್ಡ ಲೇಖನವನ್ನು ಸುಂದರವಾಗಿ ಗುಜರಾತಿಯಲ್ಲಿ ಅನುವಾದ ಮಾಡಿದರು, ಅದರ ಪುರಸ್ಕಾರವಾಗಿ ಬಂದ ಹಣವನ್ನೆಲ್ಲಾ ಅವರು ಆಶ್ರಮದ ವ್ಯವಸ್ಥಾಪಕರ ಹೆಸರಿಗೆ ಕಳುಹಿಸುವುದರ ಜೊತೆಗೆ, ಅದರಲ್ಲಿ ನಾಲ್ಕು ನೂರು ರೂಪಾಯಿ ಆಶ್ರಮ ಖಾತೆಯಲ್ಲಿ ಜಮಾ ಮಾಡಿಕೊಳ್ಳಲು ಹೇಳಿ ಮಿಕ್ಕ ಆರು ನೂರು ರೂಪಾಯಿಗಳನ್ನು ವಿದ್ಯಾರ್ಥಿಗಳಿಗೆ ಮೂರು ತಿಂಗಳ ವಿದ್ಯಾರ್ಥಿವೇತನ ನೀಡಲು ಕೊಡುವಂತೆ ಪತ್ರ ಬರೆದು ತಿಳಿಸಿದರು. ಗಾಂಧೀಜಿಯ ಸೇವೆಯಲ್ಲಿ ತಮ್ಮ ಜೀವನವನ್ನು ಸಮರ್ಪಿಸುವ ಇಚ್ಛೆ ಮಹಾದೇವ ದೇಸಾಯಿಯವರದು. ೧೯೩೪ರಲ್ಲಿ ಗಾಂಧೀಜಿ ಶುದ್ಧ ಗ್ರಾಮ್ಯ ಜೀವನವನ್ನು ಅಳವಡಿಸಿಕೊಳ್ಳಲು ನಿಶ್ಚಯಿಸಿದರು. ನಾಗಪುರದ ಬಳಿ ವರ್ಧಾದ ಚಿಕ್ಕ ಕಸಬಾದಲ್ಲಿ ವಾಸಮಾಡುತ್ತಿದ್ದುದನ್ನು ಬಿಟ್ಟು ವರ್ಧಾದಿಂದ ಐದು ಮೈಲು ದೂರ ಸೇಗಾಂವ್ ಎಂಬ ಹತ್ತಿಪ್ಪತ್ತು ಗುಡಿಸಲುಗಳ ಹಳ್ಳಿಯ ಬಳಿಯ ಹೊಲದಲ್ಲಿ ಗುಡಿಸಲು ಕಟ್ಟಿಕೊಂಡು ಇರಲು ಹೊರಟು ಹೋದರು. ಇಂದು ಅದೇ ಹಳ್ಳಿ ಸೇವಾಗ್ರಾಮ ಎಂದು ಪ್ರಪಂಚದಲ್ಲಿ ಹೆಸರು ವಾಸಿಯಾಗಿದೆ. ಮಹಾದೇವ ಕೂಡ ಬಾಪೂಜಿ ಜೊತೆ ಸೇವಾಗ್ರಾಮಕ್ಕೆ ಹೊರಡಬೇಕಿತ್ತು ಆದರೆ ದೇಶದ ಅನೇಕ ಸಮಸ್ಯೆಗಳನ್ನು ಪರಿಹರಿಸುವುದು, ಆಂದೋಳನ ಏರ್ಪಡಿಸುವುದು ಆವಶ್ಯಕ ಕಾರ್ಯಗಳಿದ್ದವು. ಅದಕ್ಕಾಗಿ ಅಂಚೆ, ತಾರು, ರೈಲು ಇವುಗಳ ಅನುಕೂಲ ಆವಶ್ಯಕವಾಗಿದ್ದುದರಿಂದ

ಬಾಪೂಜಿಯಿಂದ ಬೇರೆಯಾಗಿ ಮಹಾದೇವ ಭಾಯಿ ವರ್ಧಾದಲ್ಲಿದ್ದರು ಮತ್ತು ಪ್ರತಿದಿನ ಅಂಚೆ–ತಂತಿ ಸಂದೇಶಗಳು, ಪತ್ರ ಮುಂತಾದವನ್ನು ಸಂಗ್ರಹಿಸಿ ೧೧–೧೨ ಗಂಟೆ ವೇಳೆಯಲ್ಲಿ ಪ್ರಖರವಾದ ಬಿಸಿಲಲ್ಲಿ ಕಾಲ್ನಡಿಗೆಯಲ್ಲಿ ಬಾಪೂಜಿ ಬಳಿ ಸೇವಾಗ್ರಾಮಕ್ಕೆ ಹೋಗುತ್ತಿದ್ದರು ಮತ್ತು ಎರಡು ಮೂರು ಗಂಟೆಗಳ ನಂತರ ಒಂದು ಹೊರೆ ಕೆಲಸವನ್ನು ಹೊತ್ತು ವರ್ಧಾಗೆ ಹಿಂದಿರುಗುತ್ತಿದ್ದರು.

ಒಂದು ಬಾರಿ ಹೀಗೆ ನಿಯಮಿತವಾಗಿ ೧೧ ಮೈಲಿ ನಡೆಯುತ್ತಿದ್ದರೂ, ಕೆಲವು ಸಾರಿ ಮಹತ್ವದ ಕೆಲಸಗಳು ಎದುರಾದಾಗ ದಿವಸಕ್ಕೆ ಎರಡು ಸಾರಿ ಸೇವಾಗ್ರಾಮಕ್ಕೆ ಹೋಗುತ್ತಿದ್ದರು, ಆಗ ೨೨ ಮೈಲು ಆಗಿ ಹೋಗುತ್ತಿತ್ತು. ಈ ಕ್ರಮ ಎರಡು ವರ್ಷಕಾಲ ಪೂರ್ತಿ ನಡೆಯಿತು, ಈ ಉರಿ ಬಿಸಿಲಿನಲ್ಲಿ ಓಡಾಡಿದ್ದರಿಂದ ಮಹಾದೇವ ಕಾಕಾ ಆರೋಗ್ಯ ಹಾಳಾಯಿತು ಅಂತ ಆನಂದ ಕಾಕಾ ನಂಬಿಕೆ.

ಒಂದು ಸಾರಿ ೧೯೨೮ರಲ್ಲಿ ಗಾಂಧಿ ಸೇವಾಸಂಘದ ವಾರ್ಷಿಕ ಅಧಿವೇಶನ ಒರಿಸ್ಸಾದ ಡೆಲಾಂಗ್‌ನಲ್ಲಿ ನಡೆಯಿತು. ನಮ್ಮ ಮಹಾಭಕ್ತೆ ಅಜ್ಜಿ ಕಸ್ತೂರಬಾ ಗಾಂಧಿ ಮತ್ತು ಮಹಾದೇವರ ಪತ್ನಿ ದುರ್ಗಾ ಕಾಕಿ ಮತ್ತೆ ಕೆಲವರು ಮಹಿಳೆಯರೊಂದಿಗೆ ಜಗನ್ನಾಥನ ದರ್ಶನ ಪಡೆಯಲು ಹೋದರು. ಆಗ ದೇವಸ್ಥಾನಗಳಲ್ಲಿ ಹರಿಜನರಿಗೆ ಪ್ರವೇಶ ಇರಲಿಲ್ಲ, ಅದರಿಂದ ಬಾಪೂಜಿ ದೇಶದ ದೇವಸ್ಥಾನಗಳಿಗೆ ಹೋಗುವುದಿಲ್ಲವೆಂದು ನಿಶ್ಚಯಿಸಿದ್ದರು. ಸ್ಪೃಶ್ಯಾಸ್ಪೃಶ್ಯತೆಯನ್ನು ಒಪ್ಪದೆ ಇರುವುದು ಆಶ್ರಮದ ಮೂಲ ಸಿದ್ಧಾಂತವಾಗಿತ್ತು, ಈ ನಿಯಮ ಇರುವಾಗ ಆಶ್ರಮವಾಸಿಗಳು ಯಾರೂ ದೇವಸ್ಥಾನಗಳಿಗೆ ಹೋಗುತ್ತಿರಲಿಲ್ಲ. ಆದರೆ ನಮ್ಮಜ್ಜಿ ಮತ್ತು ದುರ್ಗಾ ಕಾಕಿಗೆ ದೇವರ ದರ್ಶನದ ಮಹದೇಚ್ಛೆಯನ್ನು ತಡೆಯಲಾಗಲಿಲ್ಲ. ವಿಶ್ವಪ್ರಸಿದ್ಧ ಜಗನ್ನಾಥನ ದೇವಸ್ಥಾನಕ್ಕೆ ಹೋಗಿ ದರ್ಶನ ಮಾಡಿಬಂದರು. ಸಂಜೆ ಬಾಪೂಜಿಗೆ ತಿಳಿಯಿತು, ಆಶ್ರಮದ ಮಹಿಳೆಯರು ನಿಯಮವನ್ನು ಉಲ್ಲಂಘಿಸಿದ್ದರಿಂದ ಬಾಪೂಜಿಗೆ ಬಹಳ ದುಃಖವಾಯಿತು. ಅವರು ಹೇಳಿದರು, "ಸರಿ ಬಾ (ಕಸ್ತೂರಬಾ) ಅಂತೂ ದೊಡ್ಡವರು, ನೀನು ಅವರನ್ನ ತಡೆಯುವುದಾಗಲಿಲ್ಲ, ಆದರೆ ನಿನ್ನ ಹೆಂಡತಿ ದುರ್ಗಾನ ದೇವಸ್ಥಾನಕ್ಕೆ ಹೋಗಲು ಹೇಗೆ ಬಿಟ್ಟೆ?" ಇಷ್ಟು ಹೇಳಿದ್ದೇ ಸಾಕು, ಮಹಾದೇವ ಕಾಕಾ ಮೇಲೆ ಸಿಡಿಲೆರಗಿದಂತಾಯಿತು. ಬಾಪೂಜಿಯ ದುಃಖದಿಂದ ಆಘಾತಗೊಂಡು ಮಹಾದೇವ ರಾತ್ರೆ ಇಡೀ ಅಳುತ್ತಿದ್ದರು. ಬೆಳಿಗ್ಗೆ ಪ್ರಾಯಶ್ಚಿತ್ತಕ್ಕಾಗಿ ಅವರು "ನಾನು ನಿಮ್ಮ ಸೇವೆ ಮಾಡುವುದಕ್ಕೆ ಯೋಗ್ಯನಲ್ಲ, ಅದರಿಂದ ನಾನು ಹೊರಟು ಹೋಗಲು ಅನುಮತಿ ನೀಡಿ" ಎಂದು ಪತ್ರ ಬರೆದರು. ಪತ್ರವನ್ನೋದಿ ಬಾಪೂಜಿ ಕಣ್ಣುಗಳಲ್ಲಿಯೂ ನೀರು ತುಂಬಿ ಬಂತು, ಅಂದರು: "ನೀನು ನನ್ನನ್ನು ಬಿಟ್ಟು ಹೇಗೆ ಹೋಗಲು ಸಾಧ್ಯ? ನಾನೂ ನಿನ್ನನ್ನು ಬಿಟ್ಟು ಎಲ್ಲಿ ಹೋಗಲಿ? ತಪ್ಪು ಆಯಿತು, ಅದಕ್ಕೆ ಪ್ರಾಯಶ್ಚಿತ್ತ ಪಶ್ಚಾತ್ತಾಪ, ಈ ಕಣ್ಣೀರಲ್ಲಿ ಆ ಪಾಪ ತೊಳೆದು

ಹೋಗುತ್ತದೆ.” ಈ ಪೂರ್ತಿ ಪ್ರಸಂಗವನ್ನು ‘ನವಜೀವನ’ ಮತ್ತು ‘ಯಂಗ್ ಇಂಡಿಯಾ’ದ ಮುಖಾಂತರ ಇಡೀ ದೇಶದ ಎದುರು ಇಡಲಾಗಿತ್ತು, ಇಂತಹ ಮಿತಿ ಮೀರಿದ ಸ್ವಾಮಿಭಕ್ತಿ ಅದ್ವಿತೀಯವಾದ್ದು.

೧೯೩೭ರಲ್ಲಿ ರಾಜಕೀಯ ಕ್ಷೇತ್ರದಲ್ಲಿ ಪ್ರಾಂತೀಯ ಸ್ವರಾಜ್ಯ ಸಿಕ್ಕಿತ್ತು, ಪ್ರಾಂತಗಳಲ್ಲಿ ಕಾಂಗ್ರೆಸ್ ಸರಕಾರ ರಚಿತವಾಗಿತ್ತು. ಮಹಾದೇವ ಭಾಯಿಗೂ ಕೂಡ ಮಹಾರಾಷ್ಟ್ರ ಮಂತ್ರಿ ಮಂಡಳದಲ್ಲಿ ಸೇರಿಕೊಳ್ಳಲು ಒತ್ತಾಯಪಡಿಸಿದ್ದರು. ಆದರೆ ಅವರ ಅವಿಚಲವಾದ ಶ್ರದ್ಧೆ–ಭಕ್ತಿಗಳು ಗಾಂಧೀಜಿಯ ಚರಣಗಳಿಗೆ ಅರ್ಪಿತವಾಗಿದ್ದುವು. ಅವರಿಗೆ ಅಧಿಕಾರದ ಮೋಹ–ಮಾಯೆ ಇರಲಿಲ್ಲ, ದೇಶದ ಎಲ್ಲಾ ಮೂಲೆಗಳಿಂದ ಕಾರ್ಯಕರ್ತರು, ಮಂತ್ರಿಗಳು ಮತ್ತು ವಿದೇಶಿ ಪತ್ರಕರ್ತರು ಬಾಪೂಜಿಯನ್ನು ಭೇಟಿ ಮಾಡಲು, ಅವರ ಮಾರ್ಗದರ್ಶನ ಪಡೆಯುವುದಕ್ಕಾಗಿ ಸೇವಾಗ್ರಾಮಕ್ಕೆ ನುಗ್ಗಿ ಬರುತ್ತಿದ್ದರು. ಬಾಪೂಜಿಯನ್ನು ಇಷ್ಟು ಹೆಚ್ಚಿನ ಭಾರದಿಂದ ತಪ್ಪಿಸಲು ಆಗಂತುಕರು ಮಹಾದೇವ ಭಾಯಿಯನ್ನು ಭೇಟಿಮಾಡಿ ನೂರಕ್ಕೆ ಎಪ್ಪತ್ತೈದು ಭಾಗ ಕೆಲಸವನ್ನ ಮುಗಿಸಿಕೊಂಡಿರುತ್ತಿದ್ದರು. ಆಗ ಸೇವಾಗ್ರಾಮ ದೇಶದ ಕೇಂದ್ರವಾಗಿತ್ತು, ಮಹಾದೇವ ಅನೇಕ ಜಟಿಲವಾದ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ನಿಪುಣರಾಗಿದ್ದರು.

ದ್ವಿತೀಯ ವಿಶ್ವಯುದ್ಧ ನಡೆಯುತ್ತಿದ್ದಾಗ ಬ್ರಿಟಿಷ್ ಸರಕಾರದ ಏಕಮುಖೀ ನೀತಿಯಿಂದ ಬಾಪೂಜಿಯ ಮನಸ್ಸಿನಲ್ಲಿ ‘ಮಾಡುವೆವು ಇಲ್ಲವೆ ಮಡಿಯುವೆವು’ನ ರೂಪುರೇಷೆಗಳು ತಲೆಎತ್ತಿಕೊಳ್ಳುತ್ತಿದ್ದವು. ವಾತಾವರಣವೆಲ್ಲಾ ಆ ಕೊನೆಯ ಸಂಗ್ರಾಮದ ಸಿದ್ಧತೆ ಮಾಡುತ್ತಾ ಉರಿಯುತ್ತಿತ್ತು. ಗಾಂಧೀಜಿ ಚರ್ಚಿಲ್‌ನ ಕಠೋರ ನೀತಿಗಳಿಂದ ಬಹಳ ದುಃಖಗೊಂಡು ಕೊನೆಯ ಇತ್ಯರ್ಥದ ಹಂತಕ್ಕೆ ತಲಪುತ್ತಿದ್ದರು. ಭಾರತ ವಿಶ್ವಯುದ್ಧವನ್ನು ವಿರೋಧಿಸುತ್ತಿತ್ತು. ಅಸಹಕಾರ ಮತ್ತು ಅಹಿಂಸೆ ಅದರ ಮಹಾಮಂತ್ರಗಳಾಗಿದ್ದವು. ಈ ಕೊನೆಯ ಹೋರಾಟ ಬಹಳ ಭಯಂಕರವಾಗಿರುತ್ತದೆ, ಯಾವಾಗ ಏನಾಗುತ್ತದೆಯೋ ಹೇಳುವುದು ಕಷ್ಟ ಎಂದು ಎಲ್ಲರಿಗೂ ತಿಳಿದಿತ್ತು. ಈ ಸಮಯದಲ್ಲೇ ಆಮರಣ ಉಪವಾಸವನ್ನು ಮಾಡಿ ತನ್ನನ್ನೇ ಆಹುತಿಕೊಡಬೇಕೆಂದು ಗಾಂಧೀಜಿ ಯೋಚಿಸುತ್ತಿದ್ದರು. ಉಪವಾಸದ ಮಾತು ಎದ್ದಾಗಿನಿಂದಲೂ ಮಹಾದೇವ ಕಾಕಾನ ಸಹಜ ನಗೆ ಮಾಯವಾಯಿತು, ಗಾಂಧೀಜಿಗೆ ೭೩ ವರ್ಷ, ಆರೋಗ್ಯ ಸೂಕ್ಷ್ಮವಾಗಿತ್ತು. ಸರಕಾರದ ತಾಕತ್ತು, ‘ಮಾಡುವೆವು ಇಲ್ಲವೇ ಮಡಿಯುವೆವು’ನ ನಿರ್ಣಯದಿಂದಾಗಿ ಮಹಾದೇವ ಮೆತ್ತಗಾಗಿದ್ದರು. ಈ ಬಾರಿ ಸರಕಾರ ಗಾಂಧೀಜಿಯ ಪ್ರಾಣವನ್ನೇ ತೆಗೆದುಬಿಡುತ್ತದೆಂದು ಅವರಿಗನಿಸಿತು. ಮಹಾದೇವ ತಮ್ಮ ಗುರುವಿನ ಜೊತೆ ಈ ವಿಷಮ ವ್ರತವನ್ನು ಕುರಿತು ಚರ್ಚೆ ಮಾಡುತ್ತಿದ್ದರು, ದೇಶದ ಮಿಕ್ಕ ಶ್ರೇಷ್ಠ ನಾಯಕರೊಂದಿಗೆ ಚರ್ಚೆ

ನಡೆಸಲಾರಂಭಿಸಿದರು ಮತ್ತು ಹೀಗೆ ದೇಶವ್ಯಾಪೀ ಸಂವಾದ ಆರಂಭವಾಗಿತ್ತು. ಕಾಕಾ ತನ್ನ ತರ್ಕ–ವಿತರ್ಕದಿಂದ ಬಾಪೂಜಿಗೆ ಸ್ವಲ್ಪ ತಿಳಿಸಿದ್ದಿರಬಹುದಾದರೂ ಕೊನೆಯವರೆಗೂ ನಿರ್ಣಯ ಅಸ್ಪಷ್ಟವಾಗಿಯೇ ಉಳಿಯಿತು. ಈ ಚಿಂತೆಯ ಪಂಚಾಗ್ನಿಯಲ್ಲಿ ಮಹಾದೇವ ಭಾಯಿ ಒಳಗಿಂದೊಳಗೇ ಬಾಡಿಹೋದರು.

೧೯೪೨ ಮಹಾಭಿಯಾನದ ಪೂರ್ವಸಿದ್ಧತೆಗಾಗಿ ಅವರು ತಮ್ಮ ಕಾಗದ ಪತ್ರಗಳೆಲ್ಲವನ್ನೂ ಸುರಕ್ಷಿತವಾದ ಜಾಗಕ್ಕೆ ಕಳುಹಿಸಿಕೊಟ್ಟರು. ಸತ್ಯಾಗ್ರಹದ ಸೈನಿಕರಿಗೆ ಜೈಲಿನಲ್ಲಿ ಖಾಯಿಲೆ ಬೀಳುವ ಹಕ್ಕಿಲ್ಲ ಎಂದು ಯೋಚಿಸಿ ಬೊಂಬಾಯಿಯ ವಿಶೇಷತಜ್ಞರ ಕೈಲಿ ಪೂರ್ತಿ ಶರೀರ ಪರೀಕ್ಷೆ ಮಾಡಿಸಿಕೊಂಡರು. ಎಲ್ಲಾ ಸರಿಯಾಗಿತ್ತು, ಹೃದಯ ಪರೀಕ್ಷೆ ಮಾತ್ರ ಮಾಡಿಸಲಿಲ್ಲ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಗಾಗಿ ಸರದಾರ್ ಪಟೇಲರನ್ನು ಸೇವಾಗ್ರಾಮಕ್ಕೆ ಕರೆತರುವುದು ಅಗತ್ಯವಾಗಿತ್ತು, ಅದಕ್ಕೆ ಮೊದಲು ಮಹಾದೇವರೊಂದಿಗೆ ಸ್ವಲ್ಪ ಮಾತನಾಡುವದು ಆವಶ್ಯಕವಾಗಿತ್ತು. ಅದರಿಂದ ಮಹಾದೇವರ ಹೃದಯ ಪರೀಕ್ಷೆ ಮಾಡಿಸದೆಯೇ ತಮ್ಮ ಜೊತೆ ಆತನನ್ನು ಟ್ರೈನ್‌ನಲ್ಲಿ ಕರೆದುಕೊಂಡು ಹೋದರು. ಹೃದಯ ಪರೀಕ್ಷೆಯ ಅವಕಾಶ ತಪ್ಪಿ ಹೋಯಿತು; ನಿಂತು ಹೋಯಿತು. ಅನಂತರ ತೀವ್ರವಾಗಿ ಘಟನಾವಳಿ ನಡೆಯಿತು, ವ್ಯಕ್ತಿಗತ ಹೃದಯ ಪರೀಕ್ಷೆಯ ಅವಕಾಶ ಸಿಗಲೇ ಇಲ್ಲ. ಇವತ್ತೂ ನನಗೆ ನೆನಪಿದೆ ೬ ಆಗಸ್ಟ್ ೧೯೪೨ರ ಮಧ್ಯಾನ್ಹ ನಾವೆಲ್ಲರೂ ಬೊಂಬಾಯಿಗೆ ಹೋಗಲು ಮೊದಲು ಬಾಪೂಜಿ ಮತ್ತು ಅಜ್ಜಿ ಜೊತೆ ಬೀಳ್ಕೊಡಲು ವರ್ಧಾ ಸ್ಟೇಷನ್‌ನಲ್ಲಿ ಸೇರಿದ್ದೆವು. ಆಗ ಸ್ಟೇಷನ್‌ನಲ್ಲಿ ಸೇರಿದ ಜನರ ಮುಖಭಾವ ಗಂಭೀರವಾಗಿದ್ದು ಒಂದು ತೆರನಾದ ಅನಿಶ್ಚಿತ ಭಾವದ ಅನುಮಾನ ಎದ್ದು ಕಾಣುತ್ತಿತ್ತು. ನಮ್ಮಂತಹ ಅರಿಯದ ಮಕ್ಕಳಿಗೂ ಆ ದುಃಖ ಗೊತ್ತಾಗಿತ್ತು, ಬಹಶಃ ಅಜ್ಜ–ಅಜ್ಜಿ, ಕಾಕಾ ಈ ಜೀವನದಲ್ಲಿ ಭೇಟಿಯಾಗುವುದೇ ಇಲ್ಲವೇನೋ ಅಂತ ಒಳಗಿಂದೊಳಗೇ ಅನಿಸಿತ್ತು. ಸರಕಾರ ಅವರನ್ನು ಬಂಧಿಸುವುದಕ್ಕೆ ಹೋಗುತ್ತದೆ, ಅಲ್ಲಿಂದ ಗಡೀಪಾರು ಮಾಡುತ್ತದೆ, ಅಲ್ಲಿಂದ ಅವರು ಹಿಂದಿರುಗುವುದೇ ಇಲ್ಲ, ಅದರಿಂದಲೇ ಅಜ್ಜ–ಅಜ್ಜಿಗೆ ಇಷ್ಟು ಅನಾರೋಗ್ಯವಾಗಿದ್ದರೂ ಬಾಪೂಜಿ ಜೊತೆ ಮಹಾಸಮಿತಿಯ ಅಧಿವೇಶನಕ್ಕಾಗಿ ಬೊಂಬಾಯಿಗೆ ಹೋಗುತ್ತಿದ್ದಾರೆ. ಅವರೆಲ್ಲರೂ ಜೈಲಿಗೆ ಹೋದರೆ ನಮ್ಮ ದೇಶ, ನಮ್ಮ ಪಾರ್ಟಿ ಗತಿ ಏನು? ಆಗ ವ್ಯಕ್ತಿಗತವಾದ ಸುರಕ್ಷೆಯ ಚಿಂತೆ ಇರಲಿಲ್ಲ, ಆದರೆ ನಮ್ಮ ಕಾಂಗ್ರೆಸ್ ಸ್ಥಿತಿ ಏನಾಗುತ್ತೆ? ಈ ಭಯ ಹೃದಯವನ್ನು ಹಿಂಡಿ ಹಿಚುಕಿ ಹಾಕುತ್ತಿತ್ತು, ಮಿಕ್ಕ ಇತಿಹಾಸದ ಸರಪಳಿ ಗೊತ್ತಿರುವದೇ. ಆಗಸ್ಟ್ ೭–೮ ವಿಶಾಲವಾದ ಜನಸಮೂಹದ ಎದುರು ಬಾಪೂಜಿಯ ಹೃದಯ ಕರಗಿಸುವಂಥ ಕ್ರಾಂತಿಕಾರಿ ಭಾಷಣಮಾಡಿದ 'ಭಾರತ್ ಛೋಡೋ' ಮತ್ತು 'ಕರೇಂಗೆ ಯಾ ಮರೇಂಗೆ'ಯ ಕರೆ ಆಕಾಶದಲ್ಲಿ ಪ್ರತಿಧ್ವನಿಸಿತು, ಆಗಸ್ಟ್ ೯ರ ಕಗ್ಗತ್ತಲ ರಾತ್ರಿಯಲ್ಲಿ

ಸರಕಾರಿ ವಾಹನ ಬಾಪೂಜಿ, ಮೀರಾ ಬಹನ್ ಮತ್ತು ಕಾಕಾರನ್ನು ಕರೆದುಕೊಂಡು ಗುಪ್ತಸ್ಥಾನಕ್ಕೆ ಹೋಯಿತು.

ಹೋಗುವಾಗ ಮಹಾದೇವ ಕಾಕಾ ೮ನೇ ತಾರೀಕಿನ ಭಾಷಣದ ಕೈ ಬರಹ ಪ್ರತಿಯನ್ನು ಸ್ವಾಮಿ ಆನಂದ್‌ಗೆ ಕೊಟ್ಟು, ಹೇಗಾದರೂ ಆಗಲಿ, ಅದನ್ನ ಮುದ್ರಿಸಿ ಜನರಿಗೆ ಹಂಚಬೇಕೆಂದು ಹೇಳಿದರು. ಪ್ರೆಸ್‌ಗೆ ಪ್ರತಿಬಂಧಕಾಜ್ಞೆ ಇತ್ತು, ಹಾಗಿದ್ದರೂ ರಾತ್ರೋ ರಾತ್ರಿ ಹತ್ತು ಸಹಸ್ರ ಪ್ರತಿಗಳು ಮುದ್ರಣಗೊಂಡವು, ಐದು ಸಾವಿರ ಪ್ರತಿಗಳು ಬಾಂಬೆ ನಗರದಲ್ಲಿ ಮತ್ತು ರೈಲು ಗಾಡಿಯಲ್ಲಿ ಅಪರಿಚಿತ ಯಾತ್ರಿಕರ ಮೂಲಕ ದೇಶದ ಬೇರೆ ಜಾಗಗಳಿಗೆ ಕೈಯಿಂದ ಕೈಗೆ ಹೋಗಿ ತಲುಪಿದವು. ಈ ಪ್ರಯತ್ನದಿಂದ ದೇಶದ ಜನರೆಲ್ಲಾ ಎಚ್ಚೆತ್ತುಕೊಂಡರು ಮತ್ತು ಕ್ರಾಂತಿಯ ಬೆಂಕಿ ಭುಗಿಲೆದ್ದಿತು. ಮಹಾದೇವ ಭಾಯಿ ಪ್ರತಿ ದಿನ ತಮ್ಮ ಡೈರಿ ಬರೆಯುತ್ತಿದ್ದರು, ಕೊನೆಯ ದಿನದವರೆಗಿನ ಡೈರಿ ಇತಿಹಾಸಕಾರನಿಗೆ ಅನುಕೂಲವಾಗುವಂತೆ ಇಂದಿಗೂ ಸುರಕ್ಷಿತವಾಗಿದೆ. ಆಗಸ್ಟ್ ೯ರ ಬೆಳಿಗ್ಗೆ ಪುಣೆಯ ಬಳಿ ಆಗಾಖಾನ್ ಮಹಲ್‌ನಲ್ಲಿ ಬಾಪೂಜಿ, ಮೀರಾ ಬಹನ್ ಮತ್ತು ಸರೋಜಿನಿ ನಾಯುಡು ಅವರನ್ನು ಅಲ್ಲಿಗೆ ಕರೆದುಕೊಂಡು ಹೋದಾಗ ಮಹಾದೇವ್ ಕಾಕಾ ಮೊದಲು ಬಾಪೂಜಿಯ ಮಾಲೀಷ್ ಮಾಡಿದರು. ಬಾಪೂಜಿ ಕೂಡ ಬಹಳ ಪ್ರೀತಿಯಿಂದ 'ಎಷ್ಟು ವರ್ಷಗಳ ಮೇಲೆ ಮಾಲೀಷ್ ಮಾಡ್ತಿದ್ದೀಯ?' ಎಂದು ಕೇಳಿದರು, ನಂತರ ಮಲಗಿಬಿಟ್ಟರು. ಬಾಪೂಜಿಯ ಮನಸ್ಸಿನ ಶಾಂತಿ ಅದ್ಭುತವಾದುದು, ಎಂಥದ್ದೆಂದರೆ ಝಂಝಾವಾತದಲ್ಲಿ ಕೂಡ ಅವರಿಗೆ ಮಗುವಿನಂತೆ ನಿಷ್ಕಪಟ ನಿದ್ದೆ ಬರುತ್ತಿತ್ತು. ಆಗಾಖಾನ್ ಜೇಲ್‌ನ ಗುಂಪಿನಲ್ಲಿ ಇಬ್ಬರು ಮಹಿಳೆಯರಿದ್ದರು. ಆದರೆ ಅವರಿಗೆ ತಾವು ಮಾಡಿದ ಅಡುಗೆ ಇಷ್ಟವಾಗುತ್ತಿರಲೇ ಇಲ್ಲ, ಅದರಿಂದ ಮಹಾದೇವ ಕಾಕಾ ಎಲ್ಲರಿಗೂ ಅಡುಗೆ ಮಾಡಿ ಬಡಿಸಿದರು, ನಂತರ ಪಾತ್ರೆ ತೊಳೆದರು. ಮಾರನೆಯ ದಿನ ವೈಸ್‌ರಾಯ್ ಹೆಸರಿಗೆ ಬರೆದ ಪತ್ರದ ಸ್ವರೂಪವನ್ನು ಎರಡು–ಮೂರು ಸಾರಿ ರಚಿಸಿದರು, ಬದಲಾಯಿಸಿದರು. ಅದರಲ್ಲಿನ ಒಂದೊಂದು ಶಬ್ದವನ್ನೂ ಕುರಿತು ಗಾಂಧೀಜಿಯೊಂದಿಗೆ ಚರ್ಚಿಸಿದರು, ಮೂರನೆಯ ದಿನ ಕಸ್ತೂರ್‌ಬಾ ಮತ್ತು ಸುಶೀಲಾ ನಯ್ಯರ್ ಕೂಡ ಆಗಾಖಾನ್ ಜೈಲನ್ನು ತಲುಪಿದ್ದರು. ಇವರೆಲ್ಲರ ಮಧ್ಯೆ ಮಹಾದೇವ್ ಮನೆಗೆಲಸಗಳನ್ನೆಲ್ಲಾ ಮಾಡುತ್ತಾ, ಪತ್ರ ಬರೆಯುತ್ತಾ, ನಕಲು ಸಿದ್ಧಗೊಳಿಸುತ್ತಾ ಜೊತೆಗಾರರ ಅನುಕೂಲಗಳನ್ನು ನೋಡಿಕೊಳ್ಳುತ್ತಿದ್ದರು. ಅವರು ನಿರಂತರವಾಗಿ ವ್ಯಸ್ತರಾಗಿರುತ್ತಿದ್ದರು, ಆದರೆ ಬಾಪೂಜಿ ಕುರಿತ ಚಿಂತೆಯಲ್ಲಿ ಅವರಿಗೆ ನಿದ್ದೆ ಬಂದಿರಲಿಲ್ಲ.

ಅಜ್ಜಿ ಆರೋಗ್ಯ ಸರಿಯಾಗಿರಲಿಲ್ಲ, ಕಳೆದ ನಾಲ್ಕು ದಿನಗಳಿಂದಲೂ ಅವರಿಗೆ ಜ್ವರ ಬಂದಿತ್ತು, ಅವರ ಹೆಸರನ್ನು ಬರೆದು ಜೈಲಿನ ಡಾಕ್ಟರನು ಔಷಧಿ ಬರೆದು

ಕೊಟ್ಟರು, ಜೇಲರ್ ಕಟೇಲಿ ಔಷಧಿಯ ಕಾಗದವನ್ನು ಆಳಿನ ಕೈಗೆ ಕೊಟ್ಟು ಔಷಧಿ ತರಲು ಕಳುಹಿಸಲಿದ್ದಾಗ ಮಹಾದೇವ್ ಕಾಕಾ ಅವರನ್ನು ತಡೆದರು ಮತ್ತು ಕಸ್ತೂರಬಾ ಗಾಂಧಿಯ ಹೆಸರನ್ನು ಅಳಿಸಲು ಹೇಳಿದರು. ಇಲ್ಲದಿದ್ದರೆ ಅವರ ಹೆಸರನ್ನು ನೋಡಿ ಅಂಗಡಿಯವನ ಮುಖಾಂತರ ಇಡೀ ಪ್ರಪಂಚಕ್ಕೇ ತಿಳಿದುಹೋಗುತ್ತದೆ. ಸರಕಾರ ಗಾಂಧೀಜಿಯನ್ನು ಎಲ್ಲಿ ಹೇಗೆ ಇಟ್ಟಿದೆ, ಅವರು ಖಾಯಿಲೆ ಬಿದ್ದಿದ್ದಾರೆಂದು ತಿಳಿದು ಹೋಗುತ್ತದೆ, ಅದರಿಂದ ಸರಕಾರದ ಗುಟ್ಟು ರಟ್ಟಾಗುತ್ತದೆ, ಅಂತ ತಿಳಿಸಿ ಹೇಳಿದರು. ಕಟೇಲಿಗೆ ತನ್ನ ತಪ್ಪು ಅರ್ಥವಾಯಿತು ಮತ್ತು ಕಸ್ತೂರಬಾ ಗಾಂಧಿಯ ಹೆಸರನ್ನು ಅಳಿಸಿ ಬೇರೆ ಬಣ್ಣದ ಕಾಗದದ ಮೇಲೆ ಔಷಧಿ ಬರೆದರು. ತಾನೇ ಕೈದಿಯಾಗಿದ್ದುಕೊಂಡೂ ಜೇಲರ್‌ಗೆ ಮಹಾದೇವ್ ಎಚ್ಚರಿಕೆ ನೀಡಿದ್ದರು, ಈ ಘಟನೆ ದೇಸಾಯಿಯವರ ಸತ್ಯ– ಸಿದ್ಧಾಂತ ನಿಷ್ಠೆ ಮತ್ತು ಬಾಪೂಜಿ ಕುರಿತು ಅವರ ಅಪರಿಮಿತವಾದ ಭಕ್ತಿಯನ್ನು ತಿಳಿಸುತ್ತದೆ.

ಈ ಎಲ್ಲ ದಿನಚರ್ಯೆಯ ಜೊತೆ ಕಾಕಾಗೆ ಬಾಪೂಜಿಯ ಆರೋಗ್ಯ, ಬರಲಿದ್ದ ಅವರ ಉಪವಾಸದ ಭಯದಿಂದ ದುಃಖ ಆವರಿಸಿತ್ತು. ಆ ವಿಚಾರ ಮಾಡಿದ ತಕ್ಷಣ ಮಂಕಾಗುತ್ತಿದ್ದರು. ಹೀಗೆಯೇ ೧೫ನೇ ಆಗಸ್ಟ್ ಕೂಡ ಬಂತು, ಯಮರಾಜ ಆಹ್ವಾನವನ್ನು ಕಳುಹಿಸಿಬಿಟ್ಟಿದ್ದ, ಮಹಾದೇವರ ಕೊನೆಯ ಕ್ಷಣಗಳು ಮುಗಿಯುತ್ತಿದ್ದವು, ಕಾಲಚಕ್ರ ನಿರಂತರವಾಗಿ ತಿರುಗುತ್ತಿತ್ತು. ಕಾಕಾ ಸೂರ್ಯೋದಯಕ್ಕಿಂತ ಮೊದಲೇ ಎದ್ದುನಿಂತರು, ಪ್ರಾರ್ಥನೆ ಮಾಡಿದರು, ಬಾಪೂಜಿಗಾಗಿ ಮೊಸಂಬಿ ರಸ ತೆಗೆದರು, ಅದಾದ ಮೇಲೆ ಸ್ನಾನ ಮಾಡಿದರು, ಬಟ್ಟೆ ಒಗೆದರು, ಶೇವ್ ಮಾಡಿಕೊಂಡರು, ಉಗುರು ಕತ್ತರಿಸಿದರು, ಮತ್ತೆ ನಯವಾಗಿ ಮೀಸೆ ಸರಿಮಾಡಿಕೊಂಡರು, ಪ್ರಿಯನ ಮನೆಗೆ ಹೋಗುವದಿತ್ತು, ಸಿದ್ಧವಾಗಿ ಕಾಕಾ ಸರೋಜಿನಿ ನಾಯುಡು ಮುಂತಾವದರಿಗೆ ಬಿಸಿ–ಬಿಸಿ ಚಹಾಮಾಡಿಕೊಟ್ಟರು. ಟೋಸ್ಟ್‌ನ ತಿಂಡಿ ಮಾಡಿ ತಿನ್ನಲು ಕೊಟ್ಟರು, ಪ್ಲೇಟ್‌ಗಳನ್ನು ನಂತರ ತೊಳೆದರು, ಕ್ಷಣ–ಕ್ಷಣವೂ ಅವರು ಹಾರುತ್ತಿದ್ದರು. ಕಾಕಾ ಜೀವನದ ಎಲ್ಲ ಕೆಲಸಗಳನ್ನೂ ದಕ್ಷತೆಯಿಂದ ನಿರ್ವಹಿಸುತ್ತಿದ್ದರು, ಎಲ್ಲಾ ಕೆಲಸಗಳೂ ಮುಗಿದ ನಂತರ ಅವರಿಗೆ ಇದ್ದಕ್ಕಿದ್ದಂತೆ ತಲೆ ತಿರುಗಿತು. ಅಜ್ಜಿ ಹತ್ತಿರ ಇದ್ದರು, ಅವರು ಹತ್ತಿರಲ್ಲಿದ್ದ ಮಂಚದ ಮೇಲೆ ಕಾಕಾರನ್ನು ಮಲಗಿಸಿದರು. ಬಾಪೂಜಿಯನ್ನು ಕರೆದರು, ಅವರು ಮಾಲೀಸಿನಲ್ಲಿದ್ದರು, ಬಾಪೂಜಿ ಕಾಕಾ ಬಳಿ ತಲಪುವ ವೇಳೆಗಾಗಲೇ ಕಣ್ಣು ಮುಚ್ಚಿದ್ದವು, ಪ್ರಾಣ ಮಾತ್ರ ಬಾಪೂಜಿ ಬರಲೆಂದು ಕಾಯುತ್ತಿತ್ತು. ಬಾಪೂಜಿ ಬಂದರು, ಮಹಾದೇವನನ್ನು ನೇವರಿಸಿದರು, ಮಹಾದೇವ್ ತಮ್ಮ ಧ್ವನಿಯನ್ನು ಕೇಳಿಸಿಕೊಳ್ಳಲಿ ಎಂದು ಬಹಳ ಬಯಸಿದರು. ಒಂದು ಬಾರಿ ಕಣ್ಣು ತೆಗೆದು ಎದ್ದು ಕುಳಿತುಕೊಳ್ಳಲಿ ಅಂತ ಇಷ್ಟಪಟ್ಟರು, ಆದರೆ ಕಾಕಾ ಕಾಲಚಕ್ರದ ವಶವಾಗಿ ಹೋಗಿದ್ದರು. ಮಹಾದೇವ್

ಕಾಕಾರ ಆತ್ಮ ಪ್ರಪಂಚದ ಎಲ್ಲಾ ದುಃಖ, ಎಲ್ಲಾ ಬಂಧನಗಳನ್ನೂ ತೊಡೆದು ದೇವಲೋಕಕ್ಕೆ ಹೊರಟುಹೋಗಿತ್ತು.

ಮಹಾದೇವ ಕಾಕಾ ಅತ್ಯಂತ ಸುಂದರ, ಸಂಸ್ಕಾರಯುಕ್ತ ಮತ್ತು ಪರಿಪೂರ್ಣ ಹಾಗೂ ಸೌಮ್ಯ ಸ್ವಭಾವದ ಸಮರ್ಥ ಪುರುಷರಾಗಿದ್ದರು. ಅವರು ಹೋದರು ಮತ್ತು ಬಾಪೂಜಿಯ ಜೀವನದ ಪ್ರಾಣವನ್ನು ಅರ್ಧ ಮಾಡಿ ಹೊರಟುಹೋದರು. ೧೯೪೨ರಲ್ಲಿ ಬಂಧನದಲ್ಲಿದ್ದಾಗ ಮಹಾದೇವ ದೇಸಾಯಿಯವರ ಆತ್ಮಬಲಿದಾನ ದೇಶದಲ್ಲೇ ಮೊದಲನೆಯದಾಗಿತ್ತು.

* * * *

# ೨೬. ಜಿನ್ನಾ ಮತ್ತು ಸ್ವಾತಂತ್ರ್ಯ

ಕಾಂಗ್ರೆಸ್ ಪಾರ್ಟಿ 'ಭಾರತ್ ಛೋಡೋ'ನ ಪ್ರಸ್ತಾವವನ್ನು ಅಂಗೀಕರಿಸಿ ಯಾವುದೇ ವಿವಾದವಿಲ್ಲದೆ ಸ್ವೀಕರಿಸಿತ್ತು. ಜನ ಭಾರತದ ಸ್ವಾತಂತ್ರ್ಯಕ್ಕಾಗಿ ಕಾಯಲು ಸಿದ್ಧವಾಗಿದ್ದರು. ಆದರೆ ಉತ್ಸಾಹಪೂರ್ಣವಾದ ಆ ಸ್ಥಿತಿಯಲ್ಲಿ ಕೂಡ ದೇಶದಲ್ಲಿನ ಕೆಲ ತತ್ವಗಳಿಗೆ 'ಭಾರತ್ ಛೋಡೋ' ಬೇಡಿಕೆ ಇಷ್ಟವಾಗಿರಲಿಲ್ಲ. ವಿಶೇಷವಾಗಿ ಮಹಮ್ಮದ್ ಅಲೀ ಜಿನ್ನಾನ ನೇತೃತ್ವದ ಮುಸ್ಲಿಂ ಲೀಗ್ ಇದನ್ನು ಘೋರವಾಗಿ ವಿರೋಧಿಸಿತ್ತು. ಬ್ರಿಟಿಷ್ ಸರಕಾರವಂತೂ ಮೊದಲಿನಿಂದಲೂ ಕೋಮುವಾದದ ಪ್ರಶ್ನೆಯ ನೆರಳಲ್ಲಿ ದೇಶದ ಜನರ ಸ್ವರಾಜ್ಯದ ಬೇಡಿಕೆಯನ್ನು ತಳ್ಳಿಹಾಕುತ್ತಲೇ ಇತ್ತು. ಆದರೆ ಮುಸ್ಲಿಂ ಬಂಧುಗಳಿಗೆ ಸ್ವಾತಂತ್ರ್ಯವೇಕೆ ಇಷ್ಟವಾಗಿರಲಿಲ್ಲ ಎಂಬುದು ಬಹಳ ದುಃಖಪೂರಿತವಾದ ಕತೆಯೇ ಆಗಿದೆ. ಚಿಕ್ಕ ಪುಟ್ಟ ಅಹಂ, ಅವಿವೇಕದ ಹಠದಲ್ಲಿ ಮನುಷ್ಯ ಎಂತೆಂತಹ ವಿಪತ್ತುಗಳನ್ನು ಆಹ್ವಾನಿಸುತ್ತಾನೆ, ಆ ಕಾಲದ ಇತಿಹಾಸ ಹೇಗೆ ಬದಲಾಗುತ್ತದೆ ಅನ್ನುವುದರ ಜೀವಂತ ಉದಾಹರಣೆ ನಮ್ಮ ಕೋಮುವಾದದ ಕತೆಯಾಗಿದೆ.

ಕೋಮುವಾದದ ಈ ಪ್ರಶ್ನೆಗೆ ಮೂರು ಕೋನಗಳಿದ್ದವು : (೧) ಕಾಂಗ್ರೆಸ್, (೨) ಮುಸ್ಲಿಂ (೩) ಬ್ರಿಟಿಷ್ ಶಾಸನ. ಈ ತ್ರಿಕೋನದಲ್ಲಿ ರಾಷ್ಟ್ರೀಯತೆ, ಕೋಮುವಾದ ಮತ್ತು ಬ್ರಿಟಿಷರ ಸಾಮ್ರಾಜ್ಯವಾದ ಇವು ಒಂದರ ಎದುರಿಗೆ ಮತ್ತೊಂದು ಸ್ಪರ್ಧಿಸುತ್ತಿದ್ದವು. ಈ ತ್ರಿಕೋನದೊಳಗೆ ಒಂದು ಆರ್ಥಿಕ ತ್ರಿಕೋನ ಕೂಡ ಕಾರ್ಯ ನಡೆಯುತ್ತಿತ್ತು. ಅದರಲ್ಲಿ ಒಂದು ಕಡೆ ಇಂಗ್ಲಿಷ್ ರಾಜ್ಯ ಮತ್ತು ಅದನ್ನು ಸಮರ್ಥಿಸುತ್ತಿದ್ದ ಜಮೀನುದಾರರು, ತಾಲ್ಲುಕುದಾರರು ಮತ್ತು ಸಾಮಂತವಾದಿಗಳು ಇದ್ದರೆ, ಮತ್ತೊಂದು ಕಡೆ ಸರಕಾರದಿಂದ ಮುಕ್ತರಾಗ ಬಯಸುತ್ತಿದ್ದ ಆದರೆ ಬಡವರ ಶೋಷಣೆ ಮಾಡಿ ತಮ್ಮ ಹೊಟ್ಟೆ ಹೊರೆದು ಕೊಳ್ಳುತ್ತಿದ್ದ ಮಧ್ಯಮ ವರ್ಗ, ಮೂರನೆಯ ದರಿದ್ರ ನಾರಾಯಣರ ಸಮೂಹ ಇದ್ದವು. ಕೋಟಿ–ಕೋಟಿ ಸಂಖ್ಯೆಯಲ್ಲಿ ವಿದೇಶಿಗಳಿಂದಲೂ ಬೀಸಿಸಿಕೊಂಡು ನುಣ್ಣಗಾಗುತ್ತಿತ್ತು. ಅದಕ್ಕಿದ್ದ ಒಂದು ಪರಿಹಾರವೆಂದರೆ ಸಂಪೂರ್ಣ ಸ್ವಾತಂತ್ರ್ಯ.

ಕೋಮುವಾದ ನೂರಾರು ವರ್ಷಗಳ ಹಳೆಯ ಪ್ರಶ್ನೆ ಎಂದು ಯೋಚಿಸುವುದರಿಂದ ಬ್ರಿಟಿಷರ ಬಗ್ಗೆ ತಪ್ಪು ಪ್ರಚಾರ ಮಾಡಿದಂತಾಗುತ್ತದೆ. ಕೊನೆಯ

ಪಕ್ಷ ಸಾವಿರದ ಇನ್ನೂರು–ಮುನ್ನೂರು ವರ್ಷಗಳಿಂದ ಹಿಂದೂ–ಮುಸಲ್ಮಾನರಿಬ್ಬರೂ ಈ ದೇಶದಲ್ಲಿ ಜೊತೆಯಲ್ಲೇ ಬದುಕುತ್ತಾ ಬಂದಿದ್ದಾರೆ. ಆರಂಭದ ಸಂದರ್ಭದಲ್ಲಿ ಹಿಂದೂ–ಮುಸಲ್ಮಾನರ ನಡುವೆ ವೈಮನಸ್ಯವಿತ್ತು, ಹಿಂದೂ ರಾಜರಿಗೆ ಮುಸ್ಲಿಂ ಮಂತ್ರಿಗಳು, ಸೇನಾಧಿಪತಿಗಳೂ ಇರುತ್ತಿದ್ದರು. ಹಾಗೆಯೇ ಮುಸ್ಲಿಂ ಬಾದಷಹರ ವಜ಼ೀರ ಬಾದಷಹರ ವಜ಼ೀರ ಮತ್ತು ಸಿಪಹ್‌ಸಾಲಾರ್‌ಗಳು ಹಿಂದೂ ಆಗಿರುತ್ತಿದ್ದರು. ಸಿಖ್‌ರಾಜ ರಣಜೀತಸಿಂಹನ ದರಬಾರ್‌ನಲ್ಲಿ ಕೂಡ ಮುಸಲ್ಮಾನ ಕಲೆಗಾರರಿದ್ದರು. ಎರಡೂ ಪಂಗಡಗಳ ನಡುವೆ ಪರಸ್ಪರ ನಂಬಿಕೆ ಮತ್ತು ಭರವಸೆ ಇತ್ತು. ಆ ಕಾಲದಲ್ಲಿ ಸಮಾಜ ಸುಧಾರಕರ, ಉದ್ಧಾರಕರ ವಿಚಾರ ಪ್ರವಾಹ ಕೂಡ ಇತ್ತು. ಅವರು ಈ ಎರಡೂ ಕೋಮುಗಳ ಸಹೋದರತನಕ್ಕೆ ಪ್ರಯತ್ನಿಸುತ್ತಿದ್ದರು. ಅದರಲ್ಲಿ ಸೂಫಿ ಸಂತರ ಅಪಾರ ಕೊಡುಗೆ ಇತ್ತು, ಅವರ ಪ್ರಯತ್ನದಿಂದ ಹಿಂದೂ–ಮುಸಲ್ಮಾನರಿಬ್ಬರೂ ಒಟ್ಟಿಗೇ ಸಾಧು–ಸಂತರ ಭೇಟಿಯನ್ನು ಒಪ್ಪುತ್ತಿದ್ದರು. ಈ ಸಂತರುಗಳಲ್ಲಿ ಗುರು ನಾನಕದೇವ ಮತ್ತು ಸಂತ ಕಬೀರ ಎಲ್ಲರಿಗೂ ಪರಿಚಿತರಾದ ಪೂಜ್ಯಪುರುಷರಾಗಿದ್ದರು.

ನಮ್ಮ ಶತಮಾನದಲ್ಲಿ ಹಿಂದೂ–ಮುಸ್ಲಿಮರ ನಡುವೆಯ ಕಟು ಭಾವನೆಗಳು ಇರಲು ಅವು ಬ್ರಿಟಿಷ್ ಸ್ನೇಹಿತರು ನಮಗೆ ಕೊಟ್ಟಿರುವ ಉಪಹಾರಗಳದಾಗಿ ಆಗಿದೆ, ಪಂಜಾಬಿನ ಒಬ್ಬ ಗವರ್ನರಾಗಿದ್ದ ಜಾನ್ ಮೆನಾಲ್ಡ್ ತನ್ನೊಂದು ಲೇಖನದಲ್ಲಿ, ಇಂಗ್ಲಿಷರ ರಾಜಕೀಯದಿಂದಲೇ ಹಿಂದೂ–ಮುಸಲ್ಮಾನರ ನಡುವೆ ವೈರಭಾವನೆಗೆ ಆಸ್ಪದ ಕೊಟ್ಟಿತೆಂದು ಒಪ್ಪಿಕೊಂಡಿದ್ದಾರೆ. ಈ ರಾಜಕೀಯ ಒಂದು ದಿವಸದ ಚಿಕ್ಕದಾವುದೋ ಆದೇಶದಿಂದಾಗಿ ಆರಂಭವಾದದ್ದಲ್ಲ, ಅದು ಬ್ರಿಟಿಷ್ ಕೂಟನೀತಿಯ ಮೂಲ ಸಿದ್ಧಾಂತ...' ಒಡದು ಆಳು' (ಫೂಟ್ ಡಾಲೋ ರಾಜ್ ಕರೋ) ಎಂಬ ನೀತಿಯ ಅಡಿಯಲ್ಲಿ ರೋಮನರು ಮೊಟ್ಟಮೊದಲ ಡಿವೈಡ್ ಅಂಡ್ ರೂಲ್ ಎಂಬ ಸಿದ್ಧಾಂತವಾಕ್ಯ ಪ್ರತಿಪಾದಿಸಿದ್ದರು. ಭಾರತದಲ್ಲಿ ಅದರ ಅನುಕರಣ ಬ್ರಿಟಿಷ್ ಸಾಮ್ರಾಜ್ಯವಾದಿಗಳು ಮಾಡುತ್ತಿದ್ದರು. ಇಂಗ್ಲಿಷ್‌ನವರ ೧೮೫೭ರಲ್ಲಿ ಕ್ರಾಂತಿಗೆ ಮುಸಲ್ಮಾನ ಶಾಸಕರೇ ಕಾರಣ ಎಂದು ಹೇಳಿದ್ದರು. ಅದರಿಂದಲೇ ವಿಕ್ಟೋರಿಯಾ ಆಳ್ವಿಕೆಯ ಆರಂಭದ ೧೫ ವರ್ಷಗಳಲ್ಲಿ ಭಾರತದಲ್ಲಿ ಮುಸಲ್ಮಾರನ್ನು ಬಹಳ ಕಡೆಗಣಿಸಿದ್ದರು. ಮುಸಲ್ಮಾನರ ಶಿಕ್ಷಣ ಪದ್ಧತಿ ಬಹಳ ಹಳೆಯದಾಗಿತ್ತು ಅನ್ನುವದೂ ನಿಜ, ಇಂಗ್ಲಿಷರ ಆಧುನಿಕ ವ್ಯವಸ್ಥೆಯಲ್ಲಿ ಅವರು ಇರಲಾಗುತ್ತಿರಲಿಲ್ಲ. ಹೀಗಾಗಿ ಮುಸಲ್ಮಾನ ಹಿಂದುಳಿಯತೊಡಗಿ ಬೊಂಬಾಯಲ್ಲಿ ೧೮೮೫ರಲ್ಲಿ ನಡೆದ ಕಾಂಗ್ರೆಸ್ ಮೊದಲ ಅಧಿವೇಶನದಲ್ಲಿ ಒಟ್ಟಿನಲ್ಲಿ ಇಬ್ಬರು ಮುಸಲ್ಮಾನ ಪ್ರತಿನಿಧಿಗಳಿದ್ದರು. ೧೮೮೬ರಲ್ಲಿ ಕಲ್ಕತ್ತಾ ಅಧಿವೇಶನದಲ್ಲಿ ೩೬ ಮಂದಿ ಮುಸಲ್ಮಾನರು ಹಾಜರಿದ್ದರು, ೧೮೯೦ರ ವೇಳೆಗೆ ಮುಸಲ್ಮಾನರ ಸಂಖ್ಯೆ ನಿಧಾನವಾಗಿ ೧೫೬ ಆಯಿತು. ೨೦೨

ಕಾಂಗ್ರೆಸ್ ಪ್ರತಿನಿಧಿಗಳಲ್ಲಿ ೧೫೬೬ ಮುಸ್ಲಿಮರ ಶೇಕಡಾವಾರು ಸಂಖ್ಯೆ ೨೨ ರಷ್ಟಿದ್ದು ಸಾಕಷ್ಟು ತೃಪ್ತಿಕರವಾಗಿತ್ತು. ಈ ತಾಳ–ಮೇಳ ಬ್ರಿಟಿಷರ ಕಣ್ಣು ಕುಕ್ಕುತ್ತಿತ್ತು. ಆಗಿನಿಂದ ಅವರು ಮುಸಲ್ಮಾನರನ್ನು ಕಾಂಗ್ರೆಸ್‌ನಿಂದ ಬೇರ್ಪಡಿಸುವ ನೀತಿ ಕಂಡುಕೊಂಡರು.

೧೯೦೬ರಲ್ಲಿ ಲಾರ್ಡ್ ಮಿಂಟೊ ಭಾರತದ ವಾಯಿಸ್‌ರಾಯ್ ಆಗಿದ್ದರು. ಅವರು ಕಾಂಗ್ರೆಸ್ ಜನಪ್ರಿಯತೆ ಏರುತ್ತಿದ್ದುದನ್ನು ನೋಡಿ ಅದರ ಪ್ರಭಾವವನ್ನು ಕಡಿಮೆ ಮಾಡುವ ಉದ್ದೇಶದಿಂದ ಮುಸ್ಲಿಮರಿಗೆ ಪ್ರಾಶಸ್ತ್ಯ ಕೊಡಲಾರಂಭಿಸಿದರು. ಈ ನೀತಿಗನುಗುಣವಾಗಿ ಅಕ್ಟೋಬರ್ ೧೯೦೬ರಲ್ಲಿ ಮುಸಲ್ಮಾನರ ಒಂದು ನಿಯೋಗ ಮಹಾರಾಜರಾಗಿದ್ದ ಆಗಾಖಾನ್‌ರ ನೇತೃತ್ವದಲ್ಲಿ ವೈಸ್‌ರಾಯ್‌ನ್ನು ಭೇಟಿ ಮಾಡಿತು. ಅದಾದ ಒಂದು ತಿಂಗಳ ನಂತರವೇ ವಾಯಿಸ್‌ರಾಯ್‌ನ ಶುಭೇಚ್ಛೆ ಮತ್ತು ಸಕ್ರಿಯ ಸಹಯೋಗದಿಂದ ಮುಸ್ಲಿಂ ಲೀಗ್ ರಚಿತವಾಯಿತು. ಆಗ ಲಾರ್ಡ್ ಮಿಂಟೋನ ಪತ್ನಿ ಲೇಡಿ ಮಿಂಟೋಗೆ ಒಬ್ಬ ಮಿತ್ರ ಈ ಸುಖ ಸಮಾಚಾರ ನೀಡಿದರು: “ನಾವು ಅತಿ ಮಹತ್ವದ ಕೆಲಸವೊಂದನ್ನು ಸಾಧಿಸಿದ್ದೇವೆ. ಈ ದೇಶದ ಇತಿಹಾಸವನ್ನು ಪೂರ್ತಿಯಾಗಿ ಬದಲಾಯಿಸುವ ಶಕ್ತಿ ಅದರಲ್ಲಿದೆ. ನಾವು ಆರು ಕೋಟಿ ಮುಸಲ್ಮಾನರನ್ನು ರಾಜದ್ರೋಹಿ ಕಾಂಗ್ರೆಸ್ ಸೇರುವುದನ್ನು ತಪ್ಪಿಸಿದ್ದೇವೆ.’

ಇದೇ ಸಮಯದಲ್ಲಿ ವೈಸ್‌ರಾಯ್ ಅವರು ಆಗಾಖಾನ್‌ಗೆ ಮುಸ್ಲಿಮರ ಉನ್ನತ ಶಿಕ್ಷಣಕ್ಕಾಗಿ ಒಂದು ಮುಸ್ಲಿಂ ಯೂನಿವರ್ಸಿಟಿಯ ಆವಶ್ಯಕತೆ ಇದೆ ಎಂದು ಹೇಳಿದರು. ಈ ಉದ್ದೇಶದಿಂದ ವೈಸ್‌ರಾಯ್‌ನು ಎಲ್ಲ ಅನುಕೂಲಗಳನ್ನೂ ನೀಡಿ ಅಲೀಗಢ್ ಮುಸ್ಲಿಂ ವಿಶ್ವವಿದ್ಯಾನಿಲಯವನ್ನು ರಚಿಸಿದನಾದರೂ ಅದು ಆಗಲು ಬಹಳ ವರ್ಷಗಳು ಬೇಕಾದವು. ಜನರಿಗೆ ಮುಸ್ಲಿಂ ವಿಶ್ವವಿದ್ಯಾನಿಲಯದ ಯೋಜನೆಯ ಅರಿವಾದಾಗ, ಆ ಕಾಲದಲ್ಲಿ ಕಾಶಿಯ ಉದಾರ ಮನಸ್ಕನಾದ ರಾಜ ಶಿವಪ್ರಸಾದ ಗುಪ್ತನನ್ನು ಇಲಾಹಾಬಾದ್‌ನ ಸಫಲ ವಕೀಲರಾಗಿದ್ದ ಪಂಡಿತ ಮದನ ಮೋಹನ ಮಾಳವೀಯರನ್ನು ವಿನಂತಿಸಿಕೊಂಡು ಹಿಂದೂ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಶ್ರೇಷ್ಠಕಾರ್ಯಕ್ಕೆ ನೇತೃತ್ವ ನೀಡಲು ಒತ್ತಾಯ ಮಾಡಿ ಒಪ್ಪಿಸಿದರು. ಮಾಳವೀಯರ ಜೀವನದುದ್ದಕ್ಕೂ ಅವರ ಪರಿವಾರದ ರೀತಿ–ನೀತಿಗಳೊಂದಿಗೆ ಊಟ–ತಿಂಡಿ, ಮದುವೆ, ಓದು–ಬರೆಹ, ಉಪನಯನ ಮುಂತಾದ್ದರ ಎಲ್ಲಾ ಖರ್ಚನ್ನು ಶಿವಪ್ರಸಾದರೇ ಕೊಡುತ್ತಿದ್ದರು. ತಮ್ಮ ಪರಿವಾರದ ಚಿಂತೆಯಿಂದ ದೂರವಾಗಿ ವಿಶ್ವವಿದ್ಯಾಲಯಕ್ಕಾಗಿ ಮೊದಲು ಬಂಡವಾಳ ಕೂಡಿಸುವಂತಾದರೆ ನಂತರದಲ್ಲಿ ವಿಶ್ವವಿದ್ಯಾಲಯವನ್ನು ನಡೆಸಲಾಗುತ್ತದೆಂಬುದು ಶಿವಪ್ರಸಾದರ ಉದ್ದೇಶವಾಗಿತ್ತು. ಶಿವಪ್ರಸಾದ ಗುಪ್ತ ಮತ್ತು ಮಾಳವೀಯರ ಪ್ರಯತ್ನದಿಂದ ಹಿಂದೂ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಇಂಗ್ಲಿಷ್ ವಾಯಿಸ್‌ರಾಯ್‌ನಂತೂ ಬರಿ ಮುಸ್ಲಿಂ ವಿಶ್ವವಿದ್ಯಾಲಯಕ್ಕಷ್ಟೇ ಪ್ರೋತ್ಸಾಹ ನೀಡಿದ್ದ.

ಈ ನೀತಿಯ ನಂತರ ಬ್ರಿಟಿಷ್ ರಾಜ್ಯ ಮುಸ್ಲಿಂ ಲೀಗ್‌ನ್ನು ತನ್ನ ಪ್ರೀತಿಯ ಹೆಂಡತಿಯ ಹಾಗೆ ನೋಡಿಕೊಳ್ಳಲಾರಂಭಿಸಿತು. ಈ ನೀತಿಯನ್ನು ಕುರಿತು ಬಾಪೂಜಿ ಯಾವಾಗಲೂ ಎರಡು ಬೆಕ್ಕುಗಳ ಮಧ್ಯೆ ಕೋತಿಯ ನ್ಯಾಯ ಇದು ಎಂದು ಹೇಳುತ್ತಿದ್ದರು. ಆದರೆ ಬ್ರಿಟಿಷ್ ವಾಯಿಸ್‌ರಾಯ್ ಮತ್ತು ಆಫೀಸರ್‌ಗಳ ಕೃಪೆಯಿಂದ ಕೋಮುವಾದದ ರಾಕ್ಷಸ ದಿನಗಳೆದಂತೆ ಹೆಚ್ಚಾಗತೊಡಗಿತು. ಈಗ ಮುಸಲ್ಮಾನರು ದೇಶದ ನಾಗರಿಕರಷ್ಟಲ್ಲದೆ ಹಕ್‌ದಾರ್‌ರಾದರು. ಎರಡೂ ಸಮುದಾಯಗಳ ನಡುವೆ ವೈಮನಸ್ಯ ಹೆಚ್ಚಾಗಲಿ, ಮರೆತೂ ಇಬ್ಬರ ನಡುವೆ ಸೌಹಾರ್ದ ಏರ್ಪಡದಿರಲೆಂಬುದಕ್ಕೆ ಆಡಳಿತ ಪಾರಂಪರಿಕ ಹಳೆಯ ಹಿಂದುಳಿದ ವಿಚಾರಗಳ ಮುಸಲ್ಮಾನರಿಗೆ ಜಾಗೀರು, ನೌಕರಿಗಳು, ಉಪಾಧಿಗಳು ಮತ್ತು ಅನೇಕ ರೀತಿಯ ಸೌಲಭ್ಯಗಳನ್ನು ಯಥೇಚ್ಛವಾಗಿ ಹಂಚತೊಡಗಿತು. ಈ ಪ್ರಲೋಭನದ ಮಧುರ ಭಾರ ಇರುವಾಗ ಮುಸ್ಲಿಮರು ಸ್ವಾಭಾವಿಕವಾಗಿಯೇ ಗದ್ಗದರಾದರು. ಅಷ್ಟಲ್ಲದೆ ಯಾವೊಬ್ಬ ಮುಸಲ್ಮಾನ ಈ ಪ್ರವೃತ್ತಿಯಿಂದ ದೂರವಾಗಿ ರಾಷ್ಟ್ರೀಯತೆಯನ್ನು ಸಮರ್ಥಿಸುವಂತಹ ತಪ್ಪು ಮಾಡಿದರೆ ಸರಕಾರ ಅವನ ಮೇಲೆ ವಿಷೇಷವಾಗಿ ಕೋಪಗೊಂಡು ಅವನನ್ನು ಎಲ್ಲ ರೀತಿಯಿಂದಲೂ ಅವಮಾನ ಪಡಿಸುತ್ತಿತ್ತು. ಅಂದರೆ ರಾಷ್ಟ್ರವಾದಿಗಳಾದ ಮುಸ್ಲಿಮರನುಕರಣೆ ಮಾಡುವುದಕ್ಕೆ ಮುಂಚೆ ಬೇರೆ ಮುಸಲ್ಮಾನರು ಹತ್ತು ಬಾರಿ ಯೋಚಿಸಲಿ ಅಂತ ಉದ್ದೇಶ ಇತ್ತು.

ಹೀಗಿರುವಾಗ ೧೯೩೧ರ ದುಂಡು ಮೇಜಿನ ಪರಿಷತ್ತಿನ ಒಬ್ಬನಾದರೂ ರಾಷ್ಟ್ರವಾದಿ ಮುಸಲ್ಮಾನನನ್ನು ಸೇರಿಸಿಕೊಳ್ಳಲಿಲ್ಲ. ಆಗಾಖಾನರನ್ನು ನಾಮಾಂಕನಗೊಳಿಸಿದ್ದರಲ್ಲಿ ಸಮಸ್ತ ಮುಸ್ಲಿಂ ಸಮಾಜವನ್ನ ಸೇರಿಸಿದಂತಾಗಿತ್ತದೆ ಎಂಬುದು ಸರಕಾರದ ಅಭಿಪ್ರಾಯವಾಗಿತ್ತು. ಇಷ್ಟೆಲ್ಲಾ ಆದರೂ ಅನೇಕ ಮುಸಲ್ಮಾನ್ ಸೋದರರು ಕಾಂಗ್ರೆಸ್‌ನ ಸದಸ್ಯರಾಗಿದ್ದರು, ರಾಷ್ಟ್ರೀಯತೆಯ ಆರಾಧಕರಾಗಿದ್ದರು ಎಂದಾಗ ಅವರನ್ನು ಪ್ರಶಂಸಿಸಲೇ ಬೇಕು. ಅವರೆಂದರೆ ಉಮರ್ ಸುಭಾನಿ, ಸೈಯದ್ ಅಬ್ದುಲ್ಲಾ, ಡಾ॥ ಅನ್ಸಾರಿ, ಹಕೀಂ ಅಜಮಲ್ ಖಾನ್, ಆಸಫ್ ಅಲೀ, ಮೆಹರ್ ಅಲೀ, ಮೌಲಾನಾ ಅಬ್ದುಲ್ ಕಲಾಂ ಆಝಾದ್ ಮುಂತಾದವರುಗಳು ಪ್ರಮುಖರು. ಇಂಗ್ಲಿಷರು ಬಡ ಮುಸಲ್ಮಾನರನ್ನು ಧರ್ಮದ ಹೆಸರಿನಲ್ಲಿ ಉದ್ರೇಕಗೊಳಿಸುತ್ತಿರುತ್ತಿದ್ದರು. ಅವರ ಕೃಪೆ ಇವರಿಗೆ ಬೇಕಿತ್ತು, ಹಾಗಿಲ್ಲದಿದ್ದರೆ ವಾಸ್ತವವಾಗಿ ತಮ್ಮ ಹೊಟ್ಟೆಪಾಡಿಗಾಗಿ ಆ ಮುಸ್ಲಿಮರು ಬಾಲ ಬಾಯಿ ಬಿಡುವ ಸ್ಥಿತಿಯಲ್ಲಿದ್ದರು ಸಾಮಂತ ವಾದಿಗಳ ಅರಸೊತ್ತಿಗೆಯ ನುಜ್ಜು–ಗುಜ್ಜಾಗುವುದರಿಂದ ಬಿಡುಗಡೆಯನ್ನೇ ಬಯಸುತ್ತಿದ್ದ. ಅವರಿಗೆ ಕಾಂಗ್ರೆಸ್ ಪಾರ್ಟಿ ಹೆಚ್ಚು ಲಾಭದಾಯಕವಾದ, ಉಪಯೋಗಕರವಾದ ಸಂಸ್ಥೆಯಾಗಿತ್ತು.

ಹಿಂದೂ–ಮುಸಲ್ಮಾನರ ಈ ತಾಟಸ್ಥ್ಯವನ್ನು ತಡೆದು ಪಂಡಿತ ಮೋತಿಲಾಲ ನೆಹರೂ ೧೯೩೨ರಲ್ಲಿ ಎರಡೂ ಸಮುದಾಯಗಳನ್ನೂ ಸರ್ವದಳ ಪರಿಷತ್ತಿನಡಿಯಲ್ಲಿ

ಒಂದುಗೂಡಿಸಿದ್ದರು. ಸಿಂಧ್‌ಅನ್ನು ಮುಸಿಲ್ಂಪ್ರಾಂತವೆಂದು ಘೋಷಿಸಬೇಕೆಂಬ ಬೇಡಿಕೆಯೊಂದನ್ನು ಬಿಟ್ಟು ಮಿಕ್ಕೆಲ್ಲಾ ವಿಷಯಗಳಲ್ಲಿ ಎರಡೂ ಸಮುದಾಯಗಳ ನಡುವೆ ಒಡಂಬಡಿಕೆ ಕೂಡ ಏರ್ಪಟ್ಟಿತ್ತು. ಕಾಂಗ್ರೆಸ್ ಹೈಕಮಾಂಡ್ ಸಿಂಧ್ ಪ್ರಾಂತವನ್ನೂ ಒಪ್ಪಿಕೊಳ್ಳಲಿತ್ತು. ಆದರೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಪಂಡಿತ ಜವಾಹರಲಾಲ ನೆಹರೂ ಅವರು ಬಂಧನಕ್ಕೊಳಗಾದ ನಂತರ ಆ ಪ್ರಸ್ತಾವ ಮಂಜೂರಾಗಲು ತಡವಾಯಿತು. ಬ್ರಿಟಿಷ್ ಸರಕಾರಕ್ಕೆ ಹಿಂದೂ ಮುಸ್ಲಿಮರ ಆ ಏಕತೆಯನ್ನು ಸಹಿಸಲಾಗುತ್ತಿರಲಿಲ್ಲ. ಆದ್ದರಿಂದ ಸರ್ ಸ್ಯಾಮ್ಯುಯಲ್ ಹೋರ್‌ನು ಯಾವ ಚರ್ಚೆ ಕೂಡ ಮಾಡದೆ ಮುಸಲ್ಮಾನರಿಗೆ ಸಿಂಧ್ ಪ್ರಾಂತವನ್ನು ಉಪಹಾರವಾಗಿ ನೀಡಿದ. ಬೇಡದೆಯೇ ಮುಫತ್ತಾಗಿ ಸಿಂಧ್ ಪ್ರಾಂತ ಸಿಕ್ಕ ನಂತರ ಮುಸ್ಲಿಂ ಸೋದರರಿಗೆ ಪಂಡಿತ ಮೋತಿಲಾಲ ನೆಹರೂರೊಂದಿಗೆ ಯಾವ ಸಂಬಂಧ ಕೂಡ ಇಟ್ಟುಕೊಳ್ಳುವ ಅಗತ್ಯ ಬೀಳಲಿಲ್ಲ. ಈ ರೀತಿ ಸರ್ವದಳ ಪರಿಷತ್ತು ಕೊನೆಯ ಹಂತಕ್ಕೆ ಬಂದು ಅಸಫಲವಾಯಿತು.

೧೯೧೦ರಿಂದ ಮುಸಲ್ಮಾನ ಮತದಾರರ ಪಟ್ಟಿ ಹಿಂದೂಗಳ ಪಟ್ಟಿ ಬೇರೆಯಾಯಿತು. ಇದರಿಂದ ಕೂಡ ಮುಸ್ಲಿಂ ಲೀಗ್‌ನ ಬೇರುಗಳು ಭದ್ರವಾದವು, ಆದರೂ ಅದು ಹೆಚ್ಚು ಸ್ಪಷ್ಟವಾಗಿ ಕಾಣಿಸಿರಲಿಲ್ಲ. ೧೯೩೫ರಲ್ಲಿ ಪ್ರಾಂತೀಯ ಸರಕಾರದ ರಚನೆಯ ಸರದಿ ಬಂದಾಗ, ಮುಸ್ಲಿಂ ಲೀಗ್‌ಗೆ ಇಷ್ಟೊಂದು ರಾಜಾಶ್ರಯ ಕೊಟ್ಟ ನಂತರವೂ ಮುಸ್ಲಿಂ ಮುಸ್ಲೀಂಲೀಗ್ ಚುನಾವಣೆಯಲ್ಲಿ ಗೆಲ್ಲುವ ಸ್ಥಿತಿಗೆ ತಲುಪಿಲ್ಲವೆಂದು ಬ್ರಿಟಿಷ್ ಸರಕಾರಕ್ಕೆ ಅರಿವಾಯಿತು. ಅಂತಹ ವಿಶೇಷ ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲಿ ಇದ್ದುದ್ದು ಒಂದೇ ಮಾರ್ಗ. ಮೊಹಮ್ಮದ್ ಅಲಿ ಜಿನ್ನಾ ಆಗ ರಾಜಕೀಯದಿಂದ ನಿರಾಶರಾಗಿ ಲಂಡನ್‌ನ ಪ್ರೀವಿ ಕೌನ್ಸಿಲ್‌ನಲ್ಲಿ ಬ್ಯಾರಿಸ್ಟರಿ ಮಾಡುತ್ತಿದ್ದರು ಅವರನ್ನು ಒಪ್ಪಿಸಿ ದೇಶಕ್ಕೆ ವಾಪಸ್ಸು ಕರೆಸಿದರು. ಮುಸ್ಲಿಂ ಲೀಗನ್ನು ಬಲಗೊಳಿಸುವ ಉದ್ದೇಶದಿಂದ ಸಹಾಯಕ್ಕಾಗಿ ಸಾಕಷ್ಟು ಹಣವನ್ನು ನೀಡಿದರು. ಜಿನ್ನಾರ ಇತಿಹಾಸ ಕೂಡ ಸಾಕಷ್ಟು ರೋಚಕವಾಗಿದೆ, ಅವರು ಕಾಠಿಯಾವಾಡ್‌ನ ಗುಜರಾತಿ ಬೊಹರಾ ಸಮುದಾಯದವರು. ವಿದೇಶದಲ್ಲಿದ್ದು ಓದಿದರಾದ್ದರಿಂದ ಮುಸ್ಲಿಂ ಸಮುದಾಯ ಕುರಿತು ಅವರಿಗೆ ವಿಶೇಷ ಪ್ರೇಮವೇನೂ ಇರಲಿಲ್ಲ. ೧೯೧೫ರಲ್ಲಿ ಅವರು ಬೊಂಬಾಯಲ್ಲಿ ಬಾಪೂಜಿಯನ್ನು ಸ್ವಾಗತಿಸಿದರು. ಗುಜರಾತಿ ಸಮಾಜದ ಅಭಿನಂದನಾ ಸಮಾರಂಭದಲ್ಲಿ ಅವರೇ ಅಧ್ಯಕ್ಷತೆ ವಹಿಸಿದ್ದರು. ಆತ ಡಾ॥ ಆ್ಯನಿಬೆಸೆಂಟ್‌ನ ಮಿತ್ರರಾಗಿದ್ದರು. 'ಹೋಂ ರೂಲ್'ನಲ್ಲಿ ನಂಬಿಕೆ ಇತ್ತು, ಪ್ರತಿವರ್ಷ ಕಾಂಗ್ರೆಸ್ ಅಧಿವೇಶನಕ್ಕೆ ನಿಯಮಿತವಾಗಿ ಹೋಗುತ್ತಿದ್ದರು. ಅವರ ವಿವಾಹ ಪಾರಸಿ ಮಹಿಳೆಯೊಂದಿಗೆ ಆಗಿತ್ತು, ಜಿನ್ನಾ ಮತ್ತವರ ಪತ್ನಿ ರತಿ ಇಬ್ಬರದೂ ನಮ್ಮ ತಂದೆಗೆ ವೈಯಕ್ತಿಕ ಪರಿಯವಿತ್ತು, ಇಬ್ಬರೂ ಬಹಳ ಸಭ್ಯರು ಮೊದಲ

ಅಹಮದಾಬಾದ್ ಕಾಂಗ್ರೆಸ್‌ನಲ್ಲಿ ಜಿನ್ನಾ ಸಾಹಬ್ ಮತ್ತವರ ಪತ್ನಿ ರತಿಯ ಸ್ವಾಗತ ಮತ್ತು ಅನುಕೂಲದ ಏರ್ಪಾಡು ನಮ್ಮ ತಂದೆ ಮಾಡಬೇಕಾಗಿತ್ತು. ಹೆಂಡತಿ ಜೊತೆ ಸ್ವಲ್ಪ ಮನಸ್ತಾಪ ಉಂಟಾಗಿದ್ದರಿಂದ ಜಿನ್ನಾ ಸಾಹಬ್ ಜೀವನದಲ್ಲಿ ಬೇಸರಗೊಂಡರೆಂದು ಕೇಳಿದ್ದೆ. ಈ ಮನಸ್ತಾಪವಾದ ಒಂದೆರಡು ವರ್ಷಗಳಲ್ಲೇ ಆಕೆ ತೀರಿಕೊಂಡರು. ಈ ದುಃಖದಿಂದ ಜಿನ್ನಾ ತೀರ ನಿರಾಶೆಗೊಂಡರು. ಪೂರ್ತಿ ಒಂಟಿಯಾದರು, ಅವರ ಒಬ್ಬಳೇ ಮಗಳನ್ನೂ ಪಾರಸಿ ಅಜ್ಜ–ಅಜ್ಜಿ ಪಾರಸಿ ಪದ್ಧತಿಯಲ್ಲಿ ಸಾಕಿದ್ದರೆಂದು, ಅವಳು ಕೂಡಾ ಜಿನ್ನಾರಿಂದ ಬೇರೆಯಾಗೇ ಉಳಿದಳು. ಆದರೆ ಜಿನ್ನಾ ತುಂಬಚತುರ, ಬುದ್ಧಿವಂತ, ಸಚ್ಚಾರಿತ್ರದ ವ್ಯಕ್ತಿ. ಇಂದಿಗೂ ಬೊಂಬಾಯಿಯ ಆದಾಯ ತೆರಿಗೆ ವಿಭಾಗದವರು ಶ್ರೀ ಜಿನ್ನಾ ಮತ್ತವರ ಪ್ರಾಮಾಣಿಕತೆಯನ್ನು ನೆನಸಿಕೊಂಡು ಪ್ರಶಂಸೆ ಮಾಡುತ್ತಾರೆ. ಅವರು ತಮ್ಮ ವೃತ್ತಿತೆರಿಗೆಯನ್ನು ತಾವೇ ತುಂಬುತ್ತಿದ್ದರು, ಬಹಳ ವಿನಮ್ರತೆಯಿಂದ ಆ ವಿಭಾಗದ ಅಧಿಕಾರಿಯು ಸ್ಥಾನ ಮಾನಗಳಿಗೆ ಗೌರವನೀಡುತ್ತಿದ್ದರು. ಈ ಎಲ್ಲ ಗುಣಗಳಿರುವಾಗಲೂ ಅದು ಏನಾಯಿತೋ, ಜಿನ್ನಾ ತಮ್ಮ ಸಮಾಜ ಸುಧಾರಕನ, ಪುರೋಗಾಮಿ, ಉದಾರ ವಿಚಾರಗಳನ್ನು ಬಿಟ್ಟು ಕಠೋರ ಹೃದಯಿಯಾಗಿ, ಇಂಗ್ಲಿಷ್ ಸರಕಾರದ ಪರ ವಹಿಸತೊಡಗಿದರು. ಅಸಹಕಾರ ಆಂದೋಳನದವರೆಗೂ ಶ್ರೀ ಜಿನ್ನಾ ಕಾಂಗ್ರೆಸ್‌ನ ಪೂರ್ಣ ಸಮರ್ಥಕರಾಗಿದ್ದರು. ಆದರೆ ಅವರು ಇಂಗ್ಲಿಷ್ ವೈಖರಿಯ ವೈಧಾನಿಕ ವ್ಯಕ್ತಿಯಾಗಿದ್ದವರು, ಅವರಿಗೆ ಗಾಂಧೀಜಿಯ ಸರ್ವೋದಯ ಭಾವನೆ ಇಷ್ಟವಾಗುತ್ತಿರಲಿಲ್ಲ. ಗಾಂಧಿ ಕಾಂಗ್ರೆಸ್‌ನ್ನು ರೈತರು ಮತ್ತು ಕಾರ್ಮಿಕರ ಒಂದು ದೊಡ್ಡ ಸಭೆ ಮಾಡಿಬಿಟ್ಟದ್ದರು, ಆ ಅಶಿಕ್ಷಿತ, ಮೂರ್ಖ ಜನರ ಬಗ್ಗೆ ಜಿನ್ನಾಗೆ ಜುಗುಪ್ಸೆ ಇತ್ತು, ಆದ್ದರಿಂದ ಅವರು ರೇಗಿ ದೇಶವನ್ನೇ ಬಿಟ್ಟುಬಿಟ್ಟಿದ್ದರು. ದೇಶದ ರಾಷ್ಟ್ರೀಯತೆ ವಿರುದ್ಧವಾಗಿ ಅವರಿಗೆ ತೀವ್ರ ದುರಾಗ್ರಹ ಇತ್ತು, ಅದರಿಂದ ಕೊನೆಗೆ ಅವರು ದೇಶವನ್ನೇ ಇಬ್ಭಾಗವಾಗಿ ಮಾಡಿಸಿದರು. ಜಿನ್ನಾ ಅವರು ಕಠೋರತೆಯನ್ನು ಸ್ವಲ್ಪ ಸಡಿಲಿಸಿದ್ದಿದ್ದರೆ ಬಹುಶಃ ವಿಶ್ವಯುದ್ಧಕ್ಕೂ ಮೊದಲೇ ದೇಶ ಸ್ವತಂತ್ರವಾಗುತ್ತಿತ್ತು, ಆದರೆ ಭಾಗ್ಯಚಕ್ರವನ್ನು ಯಾರು ತಾನೆ ಬದಲಾಯಿಸಲಾಗುತ್ತೆ? ಜಿನ್ನಾ ಸಾಹಬ್ ಕಾನೂನನ್ನು ಬಹಳ ಚೆನ್ನಾಗಿ ತಿಳಿದುಕೊಂಡಿದ್ದವರಾದ್ದರಿಂದ ಬಾಪೂಜಿ ಅವರನ್ನು 'ಕಾಯದೇ ಆಜ಼ಮ್' ಅಂತ ಕರೆಯುತ್ತಿದ್ದರು.

೧೯೩೭ರಲ್ಲಿ ದೇಶದಲ್ಲಿ ಚುನಾವಣೆಗಳು ನಡೆದವು. ಮುಸ್ಲಿಂ ಲೀಗ್ ಸುಮಾರು ಎಲ್ಲ ಕಡೆಗಳಲ್ಲೂ ಸೋತುಹೋಯಿತು. ಅದಕ್ಕೆ ಶೇಕಡಾ ಐದರಷ್ಟು ಮತಗಳು ಕೂಡ ಬರಲಿಲ್ಲ. ಕಾಂಗ್ರೆಸ್ ಏಳು ಪ್ರಾಂತಗಳಲ್ಲಿ ವಿಜಯಿಯಾಯಿತು, ಇದನ್ನು ನೋಡಿ ಇಂಗ್ಲಿಷ್ ಸರಕಾರಕ್ಕೆ ತೀವ್ರ ನಿರಾಶೆಯಾಯಿತು. ೧೯೩೫ರ ವೈಧಾನಿಕ

ವ್ಯವಸ್ಥೆಯಲ್ಲಿ ಅಧಿಕಾರ ಬ್ರಿಟಿಷ್ ಗವರ್ನರ್ ಕೈಲಿರುತ್ತದೆ ಅಂತ ಸರಕಾರದ ಊಹೆಯಾಗಿತ್ತು. ಈ ಹೊಸದಾಗಿ ಚುನಾಯಿತರಾದ ಶಾಸಕರು ತನ್ನ ದೇಶದ ವಿಭಿನ್ನ ವರ್ಗಗಳ ಜೊತೆ ಕಾದಾಡುವ ಹಾಗೆ ಮಾಡಿ ಬ್ರಿಟಿಷ್ ರಾಜ್ಯವನ್ನು ಪೂರ್ತಿ ಇರುವ ಹಾಗೆಯೇ ಇರಿಸಿಕೊಳ್ಳಬಹುದೆಂದು ಗವರ್ನರ್ ಆಶಿಸಿದ್ದರು. ಆದರೆ ಬಾಪೂಜಿ ಮತ್ತು ಕಾಂಗ್ರೆಸ್ ನೇತೃತ್ವದ ದೂರದೃಷ್ಟಿಯಿಂದಾಗಿ ದೇಶ ಅಂತಹ ಸ್ಥಿತಿಗೆ ಸಿಲುಕದೆ ಉಳಿದುಕೊಂಡಿತು. ಬಾಪೂಜಿ ಸಲಹೆ ಮೇರೆಗೆ ಕಾಂಗ್ರೆಸ್‌ನ ಮೊದಲ ಪಂಕ್ತಿಯ ನಾಯಕರು ಸರಕಾರದಿಂದ ಹೊರಗುಳಿದರು. ಎರಡನೆಯ ಪಂಕ್ತಿಯ ನಾಯಕರುಗಳನ್ನು ಮಂತ್ರಿಮಂಡಳಗಳಿಗೆ ಸೇರಿಸಿಕೊಳ್ಳಲಾಯಿತು. ಹಿರಿಯ ನಾಯಕರು ಸಂಸದೀಯ ಬೋರ್ಡ್‌ನಲ್ಲಿದ್ದುಕೊಂಡು ಆಡಳಿತ ನೀತಿಯನ್ನು ನಿರ್ವಹಿಸತೊಡಗಿದರು, ಇದರಿಂದ ಕಾಂಗ್ರೆಸ್ ನಾಯಕರ ನಡುವೆ ಮನಸ್ತಾಪಕ್ಕಾಗಲೀ, ಸ್ಪರ್ಧೆಗಾಗಲೀ, ಒಬ್ಬರನ್ನೊಬ್ಬರು ಕತ್ತರಿಲಾಗಲೀ ಕಾರಣವೇ ಇಲ್ಲವಾಯಿತು. ಪಾರ್ಟಿವಾದ, ಗುಂಪುಗಾರಿಕೆ ಕೂಡ ಉಂಟಾಗಲಿಲ್ಲ. ಕಾಂಗ್ರೆಸ್‌ನ ಮಂತ್ರಿಗಳು ಅನೌಪಚಾರಿಕವಾಗಿ ತಮ್ಮ ನಡುವೆ ನಿರ್ಣಯಿಸಿಕೊಂಡು ಗವರ್ನರ್ ಬಳಿ ಏಕಾಭಿಪ್ರಾಯದಿಂದ ಹೋಗುತ್ತಿದ್ದರು. ಗವರ್ನರ್‌ಗೆ ವಿಟೋ– ನಿರರ್ಥಕ ಮತ– ಮಾಡುವ ಅವಕಾಶವೇ ಒದಗುತ್ತಿರಲಿಲ್ಲ, ಕಾಂಗ್ರೆಸ್‌ನ ಬಹುಮತವನ್ನ ಈ ಸ್ಥಿತಿಯಲ್ಲಿ ಗಮನಿಸಿ ಮುಸ್ಲಿಂ ಲೀಗ್ ಕೂಡ ಕಾಂಗ್ರೆಸ್ ಜೊತೆ ಸೇರಿ ಆಡಳಿತದಲ್ಲಿ ಭಾಗವಹಿಸಲು ಇಷ್ಟಪಡುತ್ತಿತ್ತು. ಮುಸ್ಲಿಂ ಲೀಗ್‌ನ ಸದಸ್ಯರು ಕಾಂಗ್ರೆಸ್ ಸಂವಿಧಾನದ ಪ್ರಮಾಣ ವಚನ ತೆಗೆದುಕೊಳ್ಳದೆಯೇ ಮಿಕ್ಕೆಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಉತ್ಸುಕರಾಗಿದ್ದರು. ಕಾಂಗ್ರೆಸ್ ನಾಯಕರಿಗೆ ಲೀಗ್‌ನ ಸದಸ್ಯರು ನಿಷ್ಕಪಟಿಗಳೆಂಬ ನಂಬಿಕೆ ಇರಲಿಲ್ಲ, ಒಂದು ಸಾರಿ ಅವರು ಒಳಗೆ ನುಗ್ಗಿ ಕಾಂಗ್ರೆಸ್ಸಿಗರೊಳಗೆ ಒಡಕು ಮೂಡಿಸಿದರೆ ಕಾಂಗ್ರೆಸ್‌ನ ತಂತ್ರವನ್ನೇ ಮುರಿದುಹಾಕುವರೆಂಬ ಅಪಾಯವಿತ್ತು. ಬಾಪೂಜಿ ಅದಕ್ಕೆ ವ್ಯತಿರಿಕ್ತವಾಗಿ ಯುವಕರ ಮೇಲೆ ನಂಬಿಕೆ ಇಟ್ಟು ಅವರ ಸ್ನೇಹ ಮತ್ತು ನಂಬಿಕೆಯನ್ನು ಒಪ್ಪಿಕೊಳ್ಳಬೇಕೆಂದು ಇಷ್ಟಪಡುತ್ತಿದ್ದರು. ಆದರೆ ಕಾಂಗ್ರೆಸ್ ಹೈಕಮಾಂಡ್ ಲೀಗ್ ಅನ್ನು ತಮ್ಮ ಜೊತೆಗಿಟ್ಟುಕೊಂಡು ಕೆಲಸ ಮಾಡಲೊಪ್ಪಲಿಲ್ಲ. ಬಾಪೂಜಿಯ ದೂರದೃಷ್ಟಿ ಹಾಗೇ ಉಳಿಯಿತು. ಕಾಂಗ್ರೆಸ್ ಲೀಗನ್ನು ತಳ್ಳಿತು. ಆಗ ವೈಸ್‌ರಾಯ್ ಲಾರ್ಡ್ ಲಿನ್‌ಲಿಥ್‌ಗೊ ಯುವಕರನ್ನು ತನ್ನೆಡೆಗೆ ಕರೆದುಕೊಂಡ. ಸರಕಾರಕ್ಕಂತೂ ಕಾಂಗ್ರೆಸ್‌ನ ಶ್ರೇಷ್ಠವಾದ ಪ್ರಜಾತಂತ್ರ ಇಷ್ಟವಿರಲೇ ಇಲ್ಲ. ಹೀಗಾಗಿ ಲೀಗ್‌ನ ಜೊತೆಗಾರಿಕೆ ಲಾಭದಾಯಕವಾಗಿತ್ತು.

ಅದೃಷ್ಟವಶಾತ್ ೧೯೩೯ರಲ್ಲಿ ಎರಡನೆಯ ವಿಶ್ವಯುದ್ಧ ಶುರುವಾಯಿತು. ಕಾಂಗ್ರೆಸ್ ಮಂತ್ರಿಮಂಡಳ ಸಿದ್ಧಾಂತಕ್ಕನುಗುಣವಾಗಿ ರಾಜೀನಾಮೆ ನೀಡಿತು. ಆಗಿದ್ದ ಲಾರ್ಡ್‌ಲಿನ್‌ಲಿಥ್‌ಗೋಗೆ ಇದರಿಂದ ಸ್ವಲ್ಪ ಸಂತೋಷ ಆಯಿತು. ಅಧಿಕಾರವನ್ನು

ಕೈವಶ ಮಾಡಿಕೊಳ್ಳುವುದಕ್ಕೆ ಒಳ್ಳೆಯ ಅವಕಾಶ ಸಿಕ್ಕಿತು. ಬಂಗಾಳ, ಸಿಂಧ್, ಆಸಾಮ್‌ನಲ್ಲಿ ಮುಸ್ಲಿಂ ಲೀಗ್ ಸರಕಾರಗಳನ್ನು ಬಲವಂತವಾಗಿ ರಚಿಸಿದರು. ಅವರ ಬಳಿಯಲ್ಲಿ ಸಾಕಷ್ಟು ಸದಸ್ಯರು ಕೂಡ ಇರಲಿಲ್ಲ, ಆದರೆ ಗವರ್ನರ್ ತನ್ನ ಕಡೆಯಿಂದ ನಾಮನಿರ್ದೇಶನ ಮಾಡುವ ಹಕ್ಕನ್ನು ಪೂರ್ತಿಯಾಗಿ ಉಪಯೋಗಿಸಿದ. ಮುಸ್ಲಿಂ ಲೀಗ್ ಇಂಗ್ಲಿಷ್ ಸರಕಾರಕ್ಕೆ ತನು–ಮನ–ಧನಗಳಿಂದ ಕಕ್ಕುಲತೆಯಿಂದ ಸಹಾಯ ನೀಡತೊಡಗಿತು. ಅದು ಮಾಡಿದ ಅತಿ ದೊಡ್ಡ ಸಹಾಯವೆಂದರೆ 'ಭಾರತ ಛೋಡೋ' ಬೇಡಿಕೆಯನ್ನದು ವಿರೋಧಿಸಿತು. ಬಿಚ್ಚುನುಡಿಯಲ್ಲಿ ಇಂಗ್ಲಿಷ್ ಸರಕಾರದಿಂದ ನಾವು ಸ್ವತಂತ್ರರಾಗಲಿಚ್ಛಿಸುವುದಿಲ್ಲವೆಂದವರು ಘೋಷಿಸಿದರು. ಈಗ ಸರಕಾರ ಕಾಂಗ್ರೆಸ್ಸನ್ನು ಒಂದು ಹಿಂದೂ ಸಂಸ್ಥೆಯೇನೋ ಅನ್ನುವ ರೀತಿ ನೋಡತೊಡಗಿತು. ಮುಸ್ಲಿಂ ಲೀಗ್ ಮುಸಲ್ಮಾನರನ್ನು ಪಾರುಗಾಣಿಸುವ ಹಾಗೆ ಆಯಿತು, ಈ ಸಮಯದಲ್ಲೇ ಬ್ರಿಟಿಷ್ ಸರಕಾರದ ಲಾರ್ಡ್ ಎಮರಿ ಎಂಬುವವನು ಹಿಂದೂ–ಮುಸಲ್ಮಾನರ ಪ್ರಶ್ನೆಯನ್ನು ಬಹುಮತ–ಅಲ್ಪಮತ ಎಂಬ ಪ್ರಜಾತಾಂತ್ರಿಕ ಚೌಕಟ್ಟಿನಲ್ಲಿ ನೋಡಿದರೆ ತಪ್ಪಾಗುತ್ತದೆಂದು ಹೇಳಿಕೆ ನೀಡಿದ. ೨೦% ಮುಸ್ಲಿಮರನ್ನು ೮೦% ಹಿಂದೂಗಳ ಎದುರಿನಲ್ಲಿ ಸಮಾನರೆಂದು ಹೇಳುವುದು ಸರಿಯೆಂದ. ಈ ಎರಡೂ ಸಮುದಾಯಗಳು ಎಂದೂ ಒಂದಾಗಲಾರವು, ಈ ರೀತಿ ಘೋರ ಅನ್ಯಾಯ ಮತ್ತು ಅಸತ್ಯವನ್ನು ಸಾಮ್ರಾಜ್ಯದ ಹಿರಿಯ ಮುಖಂಡರುಗಳು ವಿಧಿವತ್ತಾಗಿ ಮೇಲೆತ್ತಿ 'ಟೂ ನೇಷನ್ ಥಿಯರಿ' (ಎರಡು ರಾಷ್ಟ್ರಗಳ ಸಿದ್ಧಾಂತ)ಯನ್ನು ಘೋಷಿಸಿದರು. ಈ 'ಟೂನೇಷನ್ ಥಿಯರಿ' ಪೂರ್ತಿ ಸುಳ್ಳು ಮತ್ತು ಬರಿ ಉದ್ಧಟತನವಾಗಿತ್ತು. ಹೀಗೆ ಇದರಿಂದ ಕಾಂಗ್ರೆಸ್ ಹಿಂದೂಗಳ ಗುಂಪು–ಪಾರ್ಟಿ ಅಂತ ಪ್ರಚಾರ ಮಾಡಲು ಆರಂಭಿಸಿದರು. ಇಂತಹ ಉದ್ಧಟತನವನ್ನು ಹೇಗೆ ವಿರೋಧಿಸುವುದು ಅಂತ ಕೆಲವು ಸಾರಿ ಅರ್ಥವಾಗುವುದಿಲ್ಲ. ಕಾಂಗ್ರೆಸ್‌ನಲ್ಲಿ ಅಸಂಖ್ಯ ಮಂದಿ ಮುಸ್ಲಿಮರಿದ್ದರು. ಎಷ್ಟೋ ಮುಸ್ಲಿಂ ಮುಖಂಡರು ಕಾಂಗ್ರೆಸ್ ಅಧ್ಯಕ್ಷರಾಗುತ್ತಿದ್ದರು. ಆ ಕಾಲದಲ್ಲಿ ಕಾಂಗ್ರೆಸ್ ಸಂಘಟನೆಯಲ್ಲಿ ಪ್ರತಿವರ್ಷ ಚುನಾವಣೆಗಳು ನಡೆಯುತ್ತಿದ್ದವು. ಆಗ ಇವತ್ತಿನ ಹಾಗೆ ನಾಮನಿರ್ದೇಶಿತ ಸದಸ್ಯರು, ಅಧ್ಯಕ್ಷರು ಇರಲು ಸಾಧ್ಯ ಅಂತ ನಾವು ಕಲ್ಪನೆ ಕೂಡ ಮಾಡಲಾಗುತ್ತಿರಲಿಲ್ಲ. ಅದರಿಂದ ಕಾಂಗ್ರೆಸ್‌ನಲ್ಲಿದ್ದ ಮುಸ್ಲಿಮರು ಯಾರೂ ದಯೆ, ಕೃಪೆಗಳನ್ನು ಆಶ್ರಯಿಸಿದ್ದವರಲ್ಲ. ತಮ್ಮ ಕೆಲಸದಿಂದ, ತಮ್ಮ ಅಭಿಪ್ರಾಯ–ವಿಚಾರಗಳಿಂದ ಅವರು ಕಾಂಗ್ರೆಸ್‌ನಲ್ಲಿ ಸಕ್ರಿಯ ಸದಸ್ಯರಾಗುತ್ತಿದ್ದರು. ಇದಕ್ಕೆ ವಿರುದ್ಧವಾಗಿ ಮುಸ್ಲಿಂಲೀಗ್ ಸದಸ್ಯರ ಪಟ್ಟಿಯನ್ನು ಎಂದೂ ಪ್ರಕಟಪಡಿಸಲೇ ಇಲ್ಲ. ಚುನಾವಣೆ ಅನ್ನುವ ಪ್ರಜಾಸತ್ತಾತ್ಮಕ ಪದ್ಧತಿಗೂ ಲೀಗ್ ನಾಯಕರಿಗೂ ಯಾವ ಸಂಬಂಧವೂ ಇರಲಿಲ್ಲ, ಕಾಂಗ್ರೆಸ್ ಅಧ್ಯಕ್ಷರು ಪುನಃ–ಪುನಃ ಲೀಗ್ ನಾಯಕರಿಗೆ ಪತ್ರ ಬರೆದು ನಿಮ್ಮಲ್ಲಿ

ಎಷ್ಟು ಜನ ಮುಸಲ್ಮಾನ ಸದಸ್ಯರಿದ್ದಾರೆ ತಿಳಿಸಿ ಅಂತ ಕೇಳುತ್ತಲೇ ಇದ್ದರು. ಆರೂವರೆ ಕೋಟಿ ಮುಸಲ್ಮಾನರಲ್ಲಿ ಎಷ್ಟು ಜನ ಲೀಗ್ ಸದಸ್ಯರಿದ್ದಾರೆ ಅಂತ ಆದರೂ ತಿಳಿಯಲಿ ಅಂತ. ಆದರೆ ಜಿನ್ನಾ ಇಂತಹ ಅಪ್ರಿಯ ಪ್ರಶ್ನೆಗಳಿಗೆ ಎಂದೂ ಉತ್ತರ ಕೊಡುತ್ತಿರಲಿಲ್ಲ.

ಇತಿಹಾಸದ ಸಂಕ್ರಮಣ ಕೂಡ ಬಹಳ ವಿಚಿತ್ರವಾಗಿರುತ್ತದೆ. ಆದರೆ ೧೯೪೦ರ ಆರಂಭದಲ್ಲಿ ಕಾನೂನುತಜ್ಞರಾಗಿದ್ದ ಜಿನ್ನಾ ಲಾರ್ಡ್ ಲಿನ್‌ಲಿಥ್‌ಗೋರನ್ನು ಭೇಟಿಯಾಗಿದ್ದರು. ಆಗ ವೈಸ್‌ರಾಯರು ಜಿನ್ನಾಗೆ, ಮುಸ್ಲಿಂ ಲೀಗ್ ಇನ್ನು ಮುಂದೆ ತನ್ನ ನಕಾರಾತ್ಮಕವಾದ ನಡತೆಯನ್ನು ಬಿಟ್ಟು ತಮಗಾಗಿ ಕೆಲವು ಗಟ್ಟಿಯಾದ ಬೇಡಿಕೆಗಳನ್ನು ಮುಂದಿಡಬೇಕೆಂದು ಒತ್ತಾಯಮಾಡಿ ಹೇಳಿದ್ದ. ಒಂದು ತಿಂಗಳ ನಂತರ ಮಾರ್ಚಿ ೧೯೪೦ರಲ್ಲಿ ಮುಸ್ಲಿಂ ಲೀಗ್‌ನ ಲಾಹೋರ್ ಅಧಿವೇಶನದಲ್ಲಿ ಪಾಕಿಸ್ತಾನ ಬೇಕು ಅನ್ನುವ ಗಟ್ಟಿ ಬೇಡಿಕೆಯನ್ನು ಅಂಗೀಕರಿಸಿದರು. ಲಾರ್ಡ್ ಲಿನ್‌ಲಿಥ್‌ಗೊ ಮುಸ್ಲಿಂ ಲೀಗ್‌ನ್ನು ಎಲ್ಲಾ ರೀತಿಯಲ್ಲೂ ಬಲಪಡಿಸಲು ಪ್ರಯತ್ನಿಸಿದರು. ಸಂವಿಧಾನ ಮತ್ತು ಕಾನೂನು ಎರಡನ್ನೂ ಒತ್ತಟ್ಟಿಗಿರಿಸಿ ಲೀಗ್‌ಗೆ ಪಕ್ಷಪಾತ ತೋರಿಸಿದರು.

ಮೇಲ್ನೋಟಕ್ಕೆ ಲೀಗ್ ಇಂಗ್ಲಿಷ್ ಸರಕಾರವನ್ನು ವಿರೋಧಿಸುತ್ತಿತ್ತು. ಆದರೆ ಒಳಗೆ ಮಾತ್ರ ಲೀಗ್ ಮತ್ತು ಇಂಗ್ಲಿಷ್ ಸರಕಾರ ಇಬ್ಬರೂ ಒಬ್ಬರಿಗೊಬ್ಬರು ಬೆಂಬಲ ಕೊಡುತ್ತಿದ್ದರು. ಕಾಂಗ್ರೆಸ್ ಶಕ್ತಿಯನ್ನ ಕುಗ್ಗಿಸಬೇಕೆಂದರೆ ಮುಸ್ಲಿಂ ಲೀಗ್ ಬೇಕೇ ಬೇಕು ಅಂತ ಸರಕಾರಕ್ಕೆ ಗೊತ್ತಿತ್ತು. ಸರಕಾರದ ಸಹಾಯ ಸಿಗದಿದ್ದರೆ ತನ್ನ ಅಸ್ತಿತ್ವವೇ ಮುಗಿದುಹೋಗುತ್ತದೆ ಅಂತ ಲೀಗ್‌ಗೂ ಗೊತ್ತಿತ್ತು. ಅಗತ್ಯ ಬಿದ್ದಾಗ ಕತ್ತೆಯನ್ನೂ ಅಪ್ಪ ಅಂತ ಹೇಳಬೇಕಾಗುತ್ತೆ ಅಂತ ಹೇಳುವ ಹಾಗೆ ಇದೊಂದು ಕೋಮುವಾದಿ ಸ್ನೇಹವಾಗಿತ್ತು. ಕಾನೂನುತಜ್ಞರಾದ ನೀವು (ಜಿನ್ನಾನ) ಪಾಕಿಸ್ತಾನ ಅನ್ನುವುದನ್ನು ಹೇಗೆ ವಿಶ್ಲೇಷಿಸುತ್ತೀರಿ ಅಂತ ಬಾಪೂಜಿ ಎಷ್ಟೋ ಬಾರಿ ಕೇಳಿದ್ದರು. ಆದರೆ ಜಿನ್ನಾ ಸಾಹಬ್ ಗಟ್ಟಿಮಾತನ್ನು ಕುರಿತು ಚರ್ಚೆಮಾಡುವುದಕ್ಕೆ ಇಷ್ಟಪಡುತ್ತಲೇ ಇರಲಿಲ್ಲ. ವಿಭಜನೆಯ ಸಿದ್ಧಾಂತವನ್ನು ಬಿಟ್ಟು ಅವರು ಮತ್ತೇನನ್ನೂ ಆಡಲು, ಕೇಳಲು ಅವರು ಸಿದ್ಧವಾಗಿರಲೇ ಇಲ್ಲ. ಮುಸ್ಲಿಂ ಲೀಗ್‌ನ ಈ ವರ್ತನೆಯಿಂದ ಬ್ರಿಟಿಷ್ ಸರಕಾರಕ್ಕೆ ಬಹಳ ಸಂತೋಷವಾಗುತ್ತಿತ್ತು. ಲೀಗ್–ಕಾಂಗ್ರೆಸ್ ಕೂಡಿ ಏಕಾಭಿಪ್ರಾಯಕ್ಕೆ ಬರುವವರೆಗೂ ಸರಕಾರ ಸ್ವರಾಜ್ಯದ ಬೇಡಿಕೆಯನ್ನು ಒಪ್ಪಿಸಿಕೊಳ್ಳಲಾಗುವುದಿಲ್ಲವೆಂದವರು ಘೋಷಿಸಿಬಿಟ್ಟರು. ಲೀಗ್‌ನ ಅಸಂಬದ್ಧವಾದ ಬೇಡಿಕೆಗಳನ್ನು ಕಾಂಗ್ರೆಸ್ ಖಂಡಿತ ಒಪ್ಪಿಕೊಳ್ಳುವುದಿಲ್ಲವೆಂದು ಸರಕಾರಕ್ಕೆ ಗೊತ್ತಿತ್ತು. ಈ ರೀತಿ ಸಹಮತಿ ಇಲ್ಲವೆಂದಾಗ ಅದರಿಂದ ಉದ್ರೇಕ, ಹಠ ಬೆಳಕಿಗೆ ಬರುತ್ತದೆ, ಆ ತರಹೆಯ ರಾಜಕೀಯದಿಂದ ಇಂಗ್ಲಿಷ್‌ರಿಗೆ ಅನುಕೂಲವಾಗುತ್ತಿತ್ತು. ನಿಜವಾಗಿ

ಹೇಳಬೇಕೆಂದರೆ ಈ ತರಹ ತ್ರಿಶಂಕು ಸ್ಥಿತಿ ಪ್ರಪಂಚದಲ್ಲಿ ಇನ್ನೆಲ್ಲೂ ನಡೆಯಲು ಸಾಧ್ಯವಿರಲಿಲ್ಲ. ನೂರಕ್ಕೆ ಇಪ್ಪತ್ತು ಭಾಗ ಇದ್ದ ಮುಸ್ಲಿಮರ ವೈಮನಸ್ಯಕ್ಕೆ ಪ್ರೋತ್ಸಾಹಿಸುವುದು ಬ್ರಿಟಿಷ್ ರಾಜ್ಯಕ್ಕೆ ಮಾತ್ರ ಸಾಧ್ಯವಾಗಿತ್ತು. ಮುಸ್ಲಿಂ ಲೀಗ್‌ನ ತಪ್ಪು ನಡತೆಗಳು, ಇಂಗ್ಲಿಷ್‌ರ ಜೊತೆ ಸಹಕಾರ ಇವುಗಳಿಂದಾಗಿ 'ಭಾರತ ಛೋಡೋ' ಚಳವಳಿ ಅನಿವಾರ್ಯವಾಯಿತು. ಇಂಗ್ಲಿಷ್‌ನವರಿರುವಾಗಲೇ ಮುಸಲ್ಮಾನರು ತಮ್ಮ ಬೇಡಿಕೆಗಳಿಗಾಗಿ ಹಠ ಮಾಡಬಹುದಾಗಿತ್ತು, ಇಂಗ್ಲಿಷರು ಭಾರತವನ್ನು ನಿಜವಾಗಿಯೂ ಬಿಟ್ಟು ಹೋಗಿದ್ದಿದ್ದರೆ ಮುಸ್ಲಿಂ ಲೀಗ್‌ನ ಹಟಮಾಡಿತನ ಎಲ್ಲಾ ಮುಗಿದು ಹೋಗುತ್ತಿತ್ತು, ಜೊತೆಗೆ ಅವರು ಸ್ವರಾಜ್ಯವನ್ನು ವಿರೋಧಿಸುವುದಕ್ಕಾಗುತ್ತಿರಲೇ ಇಲ್ಲ. ೧೯೪೪ರಲ್ಲಿ ಇಂಗ್ಲಿಷರು ಸ್ವರಾಜ್ಯವನ್ನು ಕೊಟ್ಟು ಹೊರಟುಹೋಗಿದ್ದಿದ್ದರೆ ಆ ರಾತ್ರಿಯಲ್ಲೇ ಬಡ ಮುಸ್ಲಿಂ ಸಮುದಾಯ ಕಾಂಗ್ರೆಸ್‌ಗೆ ಸಹಕಾರ ನೀಡುತ್ತಿತ್ತು, ಮುಸ್ಲಿಂ ಲೀಗ್‌ನ ಪಾಷಂಡ ಕಪಟ ತಿಳಿಯುತ್ತಿತ್ತು.

ಮುಸ್ಲಿಂ ಲೀಗ್ ಏನಾದರೂ ಕಾಂಗ್ರೆಸ್‌ನ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಗೆ ಸಹಕಾರ ನೀಡಿದ್ದೇ ಆದರೆ ಇಂಗ್ಲಿಷಿನವರು ಹೊರಟು ಹೋದ ಮೇಲೆ ಮುಸ್ಲಿಂ ಲೀಗೇ ರಾಜ್ಯ ಆಳಲಿ, ಕಾಂಗ್ರೆಸ್ ಅದಕ್ಕೆ ಸಹಕಾರ ನೀಡುತ್ತದೆ ಎಂದು ೪ ಆಗಸ್ಟ್ ೧೯೪೨ರಂದು –ಅಂದರೆ 'ಭಾರತ್ ಛೋಡೋ' ಪ್ರಸ್ತಾವ ಇಡುವುದಕ್ಕೆ ನಾಲ್ಕು ದಿನ ಮುಂಚೆ –ಬಾಪೂಜಿ ಬಾಯಿಬಿಟ್ಟು ಎಲ್ಲರೆದುರಿಗೂ ಹೇಳಿದ್ದರು. ಇದು ಇಬ್ಬರೂ ಸೋದರರ ನಡುವೆ ಇದ್ದ ಮಾತು. ಅದಕ್ಕೆ ಹೊರಗಣ ಸರಕಾರ ಹಸ್ತಕ್ಷೇಪ ಮಾಡುವ ಅಗತ್ಯ ಇರಲಿಲ್ಲ, ಇಂಗ್ಲಿಷ್‌ನವರು ದೇಶದಿಂದ ಹೊರಕ್ಕೆ ಹೋಗುವಂತಾದರೆ ಸಾಕು, ಆಮೇಲೆ ಹಿಂದುಗಳೇ ರಾಜ್ಯ ಮಾಡಲಿ, ಮುಸ್ಲಿಮರೇ ರಾಜ್ಯ ಮಾಡಲಿ, ಏನೂ ವ್ಯತ್ಯಾಸ ಆಗುವುದಿಲ್ಲ, ಈ ಸರಳವಾದ ಪ್ರಾಮಾಣಿಕ ಸಲಹೆಯ ಮೇಲೂ ಜಿನ್ನಾಗೆ ನಂಬಿಕೆ ಇರಲಿಲ್ಲ. ಅದರಿಂದ ಅವರು ಮುಸಲ್ಮಾನರೇ ರಾಜ್ಯ ನಡೆಸಲಿ ಅನ್ನುವ ಪ್ರಸ್ತಾವವನ್ನೂ ತಳ್ಳಿಹಾಕಿದರು.

೧೯೪೪ರಲ್ಲಿ ಕಾಂಗ್ರೆಸ್ ಮುಖಂಡರೆಲ್ಲಾ ಜೈಲಿನಲ್ಲಿದ್ದಾಗ, ಬಾಪೂಜಿ ಜಿನ್ನಾ ಜೊತೆ ಮಾತುಕತೆ ನಡೆಸಿ ಒಂದು ಒಪ್ಪಂದಕ್ಕೆ ತಲುಪಲು ಪ್ರಯತ್ನಿಸಿದರು. ಜಿನ್ನ ಮತ್ತು ಬಾಪೂಜಿ ನಡುವೆ ಸೆಪ್ಟೆಂಬರ್ ೧೯೪೪ರಲ್ಲಿ ಮೂರು ವಾರಗಳವರೆಗೆ ನಿರಂತರ ಭೇಟಿ, ಚರ್ಚೆ, ಪತ್ರ ವ್ಯವಹಾರಗಳಾದವು. ಈ ಸಮಾಚಾರ ಕೇಳಿ ಹಿಂದೂ ಮಹಾಸಭೆಯ ಕೆಲವು ಉಗ್ರ ಸದಸ್ಯರು ಉತ್ತೇಜಿತರಾದರು, ಅವರು ಬಾಪೂಜಿಯ ಸೇವಾಗ್ರಾಮದ ಅಶ್ರಮದೆದುರು ಧರಣಿ ಕುಳಿತರು, ಜಿನ್ನಾರನ್ನು ಭೇಟಿಯಾಗಲು ನಾವು ಬಾಪೂಜಿಗೆ ಬಿಡುವುದಿಲ್ಲ, ಬಲಪೂರ್ವಕವಾಗಿ ನಾವವರನ್ನು ತಡೆಯುತ್ತೇವೆಂದು ಘೋಷಣೆ ಮಾಡಿದರು. ಧರಣಿ ಕುಳಿತವರುಗಳಲ್ಲಿ ಇಬ್ಬರು ಕಾರ್ಯಕರ್ತರುಗಳು ಉನ್ಮತ್ತರಾಗಿದ್ದರು, ಅವರು ಬುದ್ಧಿಭ್ರಾಂತರೂ ಆಗಿದ್ದರು,

ಪೊಲೀಸರು ಅವರುಗಳನ್ನು ಬಂಧಿಸಿದರು. ಅವರಲ್ಲಿ ಒಬ್ಬನ ಜೇಬಿನಲ್ಲಿ ಚೂರಿ ಇತ್ತು, ನೀವು ಗಾಂಧೀಜಿಯನ್ನು ವಿರೋಧಿಸಿ ಬಂಧನಕ್ಕೆ ಒಳಗಾಗಿದ್ದೀರಿ, ಅದರಿಂದ ನಿಮ್ಮನ್ನೂ ದೇಶಪ್ರೇಮಿ ಹುತಾತ್ಮರು ಎಂದು ಕರೆಯುತ್ತಾರೆಂದು, ಅವರಿಗೆ ಹೇಳಿ ಪೊಲೀಸ್ ಆಫೀಸರನೊಬ್ಬ ಗೇಲಿ ಮಾಡಿದ, ತಕ್ಷಣ ಆ ಉನ್ಮತ್ತಯುವಕ 'ಉಹ್ಞೂ, ಇನ್ನೂ ಈಗಲ್ಲ, ಗಾಂಧಿಯ ಹತ್ಯೆ ಮಾಡ್ತೀವಿ, ಆ ನಂತರ ಹುತಾತ್ಮರಾಗ್ತೀವಿ' ಎಂದು ಹೇಳಿದ.

ಪೊಲೀಸ್ ಆಫೀಸರ್ ಈ ಗೇಲಿಯನ್ನು ಮುಂದುವರಿಸಿ, 'ಇದನ್ನೆಲ್ಲ ನಿಮ್ಮ ನಾಯಕರಿಗೇ ಬಿಡಿ, ನಿಮ್ಮ ನಾಯಕ ಸಾವರಕರ್ ಇದ್ದಾರೆ, ಅವರಿಗೆ ಹೇಳು, ಆತನೇ ಈ ಕೆಲಸ ಮುಗಿಸಿಬಿಡಲಿ' ಎಂದ. ಅದಕ್ಕೆ ಆ ಯುವಕ, 'ಗಾಂಧಿ ಅಷ್ಟು ಮರ್ಯಾದೆಗೆ ಯೋಗ್ಯ ವ್ಯಕ್ತಿ ಅಲ್ಲ, ಗಾಂಧಿಯನ್ನು ಮುಗಿಸುವುದಕ್ಕೆ ಈ ಜಮಾದಾರ ಒಬ್ಬ ಸಾಕು' ಎಂದು ಉತ್ತರವಿತ್ತ. ಜಮಾದಾರ ಎಂದು ಹೇಳಿ ತೋರಿಸಲಾದ ವ್ಯಕ್ತಿ ನಾಥೂರಾಮ್ ಗೋಡ್‌ಸೆ ಆಗಿದ್ದ, ಮೂರೂವರೆ ವರ್ಷಗಳ ನಂತರ ಆ ತರುಣನ ಭವಿಷ್ಯವಾಣಿ ನಿಜವಾಗಿಯೂ ಪೂರ್ಣವಾಯಿತು. ಜಿನ್ನಾರನ್ನು ಭೇಟಿಯಾಗಲು ಬಾಪೂಜಿ ಬೊಂಬಾಯಿಗೆ ಹೋದರು, ತೀವ್ರವಾಗಿ ಚರ್ಚೆಗಳು ನಡೆದವು. ಅದರಲ್ಲೆಲ್ಲೂ ಪ್ರಗತಿ ಕಂಡುಬರಲಿಲ್ಲ, ಒಪ್ಪಂದದ ಸೂಚನೆ ಕಾಣಲಿಲ್ಲ. ಬಾಪೂಜಿ ತಮ್ಮ ಕುಶಲತೆಯಿಂದ, ಮಾನವೀಯತೆಯಿಂದ ಜಿನ್ನಾರಿಗೆ ತಿಳಿಸುವುದಕ್ಕೆ ಪಯತ್ನಪಟ್ಟರು, ಆದರೆ ಜಿನ್ನಾ ಪೂರ್ತಿ ನಕಾರಾತ್ಮಕವಾಗಿ ವೈರ ಭಾವನೆಯನ್ನು ಪ್ರಕಟಪಡಿಸಿ ಗಾಂಧೀಜಿಯನ್ನು ಬಳಲಿಸಿದರು. ಈ ಚರ್ಚೆಯ ಯಾವೊಂದು ಮಾತಿಗೂ 'ಆಗಲಿ' ಎಂದು ಹೇಳುವ ಉದ್ದೇಶವೇ ಜಿನ್ನಾಗಿರಲಿಲ್ಲ, ಮುಸ್ಲಿಂ ಲೀಗ್‌ನ ಕಾರ್ಯಕಾರಿಣಿ ಸಭೆಯಲ್ಲಿ ತೆರೆದ ಅಧಿವೇಶನದಲ್ಲಿ ತಮ್ಮ ಅಭಿಪ್ರಾಯವನ್ನು ಮುಂದಿಡುವೆನೆಂದು ಗಾಂಧೀಜಿ ಹೇಳಿದರು. ಜಿನ್ನಾ ಇದು 'ಅಸಂಭವ'ವೆಂದರು. ಬಾಪೂಜಿಯವರ ಸಮಾಧಾನಕರವಾದ ವಿಚಾರಗಳನ್ನು ಕೇಳಿಸಿಕೊಂಡು ಲೀಗ್‌ನ ಸದಸ್ಯರುಗಳು ಕಾಂಗ್ರೆಸ್ ಜೊತೆ ಸೇರಲು ಒಪ್ಪಿದರೆ ಏನು ಮಾಡುವುದು ಎಂಬ ಭಯ ಬಹುಶಃ ಜಿನ್ನಾರಿಗಿದ್ದಿರಬೇಕು. ಬಾಪೂಜಿ, 'ಪಾಕಿಸ್ತಾನ ಮಾಡಿಕೊಂಡು, ಕೆಲವು ವಿಷಯಗಳನ್ನು ಕುರಿತು ನಮ್ಮಿಬ್ಬರ (ಎರಡೂ ದೇಶಗಳ) ನಡುವೆ ಕೆಲವು ಸಂಯುಕ್ತ ವಿಷಯಗಳನ್ನು ಕುರಿತು ಸಹಕಾರದಿಂದ ಸರಕಾರ ನಡೆಸಬಹುದೆಂದು' ಹೇಳಿದರು.

ಅದಕ್ಕೆ ಜಿನ್ನಾ ಹೇಳಿದರು: 'ಸಹಕಾರದ ಪ್ರಶ್ನೆ ಏಳುವುದೇ ಇಲ್ಲ. ಎರಡೂ ಸಾರ್ವಭೌಮ ಅಧಿಕಾರದಿಂದ ಪರಿಪುಷ್ಟವಾದ ರಾಜ್ಯಗಳಾಗಬೇಕು, ನಂತರ ಸಹಕಾರದ ಅಗತ್ಯಬಿದ್ದಲ್ಲಿ ನೋಡೋಣ.'

ಸಾರ್ವಭೌಮ ರಾಜ್ಯ ಅಂದರೆ ನಮ್ಮಿಬ್ಬರ ನಡುವೆ ಯುದ್ಧ ಕೂಡ ಆಗಬಹುದು, ಮೊದಲು ವಿಭಜನೆಯಾಗಬೇಕು, ನಂತರ ಸಹಯೋಗದ ಸಂಧಿಪತ್ರ

ಬರೆಯುವದೆಂದು ಜಿನ್ನಾ ಇಚ್ಛೆಯಾಗಿತ್ತು. ಮೌಲಾನಾ ಆಜ಼ಾದ್ ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು, ಅವರು, 'ಮದುವೆಗೆ ಮೊದಲು ತಲಾಕ್ ತೆಗೆದುಕೊಂಡಂತೆ ಆಯಿತು ಈ ಮಾತು,' ಅಂದರು.

'ನಮ್ಮಿಬ್ಬರ ನಡುವೆ ಒಪ್ಪಂದ ಏರ್ಪಡಲಿಲ್ಲವೆಂದರೆ, ಒಂದು ವೇಳೆ ಸಂಧಿಯಾಗಿ ಅದೂ ಮುರಿದುಬಿದ್ದರೆ ಮುಂದೇನು?' ಎಂದು ಗಾಂಧೀಜಿ ಕೇಳಿದರು.

ಜಿನ್ನಾ ಹೇಳಿದರು: 'ಬೇರೆ ರಾಷ್ಟ್ರಗಳ ನಡುವೆ ಆದ ಹಾಗೆಯೇ ಯುದ್ಧವಾಗುತ್ತದೆ,' ಯಾವ ಗುಂಪಿನ ಜೊತೆ ಸೇರಿಕೊಂಡಾದರೂ ಭಾರತದ ಮೇಲೆ ಆಕ್ರಮಣ ಮಾಡುವ ಸ್ವಾತಂತ್ರ್ಯ ಪಾಕಿಸ್ತಾನಕ್ಕೆ ಇರಬೇಕೆಂಬುದು ಜಿನ್ನಾರ ಇಷ್ಟವಾಗಿತ್ತು. ತನ್ನ ಹತ್ಯೆಯಾಗಲಿ ಎಂದು ಯಾವ ಪ್ರಜೆ ತಾನೆ ಒಪ್ಪಿಗೆ ನೀಡುತ್ತಾನೆ? ಬಾಪೂಜಿ ಸತ್ಯಾಗ್ರಹಿ, ಧೈರ್ಯವಂತರು ಆಗಿದ್ದರು. ಹೇಳಿದರು: 'ನಾವಿಬ್ಬರೂ ಅಣ್ಣ–ತಮ್ಮಂದಿರು, ನಮ್ಮ ವಿಕಾಸಕ್ಕಾಗಿ ನಾವು ಬೇರೆ ಇರುವ ಹಕ್ಕು ಇರಬಹುದು. ಆದರೆ ಲಾಭ–ನಷ್ಟದ ಬಗ್ಗೆ ಯೋಚನೆ ಮಾಡದೆ ಆಜೀವದ ಶತ್ರುತ್ವ ನೆಲೆ ಏರ್ಪಡಿಸಿಕೊಂಡರೆ ಅದು ತಪ್ಪಾದೀತು.'

ಜಿನ್ನಾ ತಮ್ಮ ಹಠಮಾರಿತನ ಬಿಡಲೇಇಲ್ಲ, ಯಾವೊಂದು ಮಾತಿನ ತಾರ್ಕಿಕ ಔಚಿತ್ಯವನ್ನೊಪ್ಪಲು ಸಿದ್ಧರಿರಲಿಲ್ಲ.

ನಂತರ ಜಿನ್ನಾ ಹೇಳಿದರು: "ಭಾರತ ಛೋಡೊ" ಎಂಬ ಪ್ರಸ್ತಾವ ಲೀಗ್‌ಗೆ ವಿರುದ್ಧ ರಚಿತವಾಗಿದೆ, ಅದನ್ನು ತೆಗೆದು ಹಾಕಿ.

ಬಾಪೂಜಿ ಹೇಳಿದರು : ಇದು ಭಾರತ ಮತ್ತು ಬ್ರಿಟಿಷರ ನಡುವಣ ಹೋರಾಟ, ಇದಕ್ಕೆ ಮುಸಲ್ಮಾನರ ವಿರೋಧ ಇಲ್ಲವೇ ಇಲ್ಲ, ನೀವು ಇಷ್ಟು ದೊಡ್ಡ ವಿಧಿತಜ್ಞರು, ಬೇಕಾದರೆ ನೀವು ನಿಷ್ಣಾತರಾದವರು ಯಾರನ್ನಾದರೂ ಕರೆಸಿ ಕೇಳಿ, 'ಭಾರತ ಛೋಡೋ' ಪ್ರಸ್ತಾವದಲ್ಲೆಲ್ಲೂ ಮುಸಲ್ಮಾನರ ವಿರೋಧ ಇಲ್ಲ."

ಆದರೆ ಜಿನ್ನಾ ಈ ಸಲಹೆಯನ್ನೂ ತಳ್ಳಿಹಾಕಿದರು, 'ನಾನು ಯಾರ ಅಭಿಪ್ರಾಯವನ್ನೇಕೆ ಕೇಳಲು ಹೋಗಲಿ? ಇದು ಲೀಗ್ ವಿರುದ್ಧ ರಚಿಸಿರುವ ಪಿತೂರಿ ಅಂತ ನನಗೇ ಗೊತ್ತಿದೆ' ಎಂದರು.

'ಭಾರತ ಛೋಡೋ' ಎಂಬ ಪ್ರಸ್ತಾವವನ್ನು ಕೈ ಬಿಡಬೇಕೆಂಬುದು ಜಿನ್ನಾ ಹಠವಾಗಿತ್ತು, ಇಂತಹ ಮಾತುಗಳಾಡಿದ ಮೇಲೆ ಚರ್ಚೆ ಮಾಡುವುದರಿಂದೇನೂ ಪ್ರಯೋಜನವಿರಲಿಲ್ಲ. ಗಾಂಧೀಜಿ ಕಾಯದೇ ಆಜಮ್ (ಕಾನೂನು ತಜ್ಞ)ರನ್ನು ಸಂತುಷ್ಟಪಡಿಸಲು, ತಿಳಿಸಲು, ಸಮಾಧಾನಪಡಿಸಲು ಬಹಳ ಪ್ರಯತ್ನಪಟ್ಟರು, ಮುಂದೆ ದೈವೇಚ್ಛೆ ಹಾಗಿತ್ತು, ಹೀಗೆ ಗಾಂಧಿ – ಜಿನ್ನಾ ಅವರ ನಡುವಣ ಮಾತುಕತೆ ವಿಫಲವಾಯಿತು.

ಇಂದು ಈ ಮಾತಾಗಿ ೪೩ ವರ್ಷಗಳಾಗಿವೆ, ನಾವೆಲ್ಲರೂ ದೇಶ ವಿಭಜನೆಯ ಕರುಣಾಗಾಥೆಯಿಂದ ಪರಿಚಿತರಾಗಿದ್ದೇವೆ, ನಮ್ಮ ಅಣ್ಣ–ತಮ್ಮಂದಿರೇ ಮೂರು–

ಮೂರು ಬಾರಿ ನಮ್ಮ ದೇಶದ ಮೇಲೆ ಆಕ್ರಮಣ ನಡೆಸಿದ್ದಾರೆ, ಒಪ್ಪಂದ – ಸಂಧಿಗಳ ಬಗ್ಗೆ ಚರ್ಚೆ ನಡೆಸುತ್ತಲೇ ೪೩ ವರ್ಷಗಳು ಕಳೆದುಹೋಗಿವೆ. ಬಾಪೂಜಿಗೆ ಇದ್ದ ಭಯ ಸತ್ಯವಾಯಿತೆಂಬುದೇ ದುಃಖದ ವಿಷಯ. ಸ್ವಾತಂತ್ರ್ಯ ಸಿಕ್ಕ ಐದೇ ತಿಂಗಳುಗಳಲ್ಲಿ ಬಾಪೂಜಿಯ ಹತ್ಯೆಯಾಯಿತು, ಬಾಪೂಜಿ ತೀರಿಕೊಂಡ ಏಳು ತಿಂಗಳ ನಂತರ ಜಿನ್ನಾ ಕೂಡ ಖುದಾ ದರ್ಬಾರ್‌ನಲ್ಲಿ ಜವಾಬು ನೀಡಲು ಹೋದರು, ಪಾಕಿಸ್ತಾನ ದೇಶದ ನಿವಾಸಿಗಳಲ್ಲಿ ಶತ್ರುತ್ವ ಬಿಟ್ಟರೆ ಮತ್ತೇನೂ ಉಳಿದಿಲ್ಲ'.

ಈ ಎರಡೂ ದೇಶಗಳಲ್ಲಿ ಯಾರಾದರೊಬ್ಬ ಈ ಕೃತ್ರಿಮ ವಿಭಜನೆಯನ್ನು ಒಪ್ಪಿಕೊಳ್ಳದಿರುವವನು ಇರುವನೇ ಎಂದು ಯೋಚಿಸುತ್ತೇನೆ. ಆದದ್ದು ಆಯಿತು, ಆದರೆ ಇವತ್ತು ಕೂಡ ಅದೇ ಕಟುತೆ, ಅಪನಂಬಿಕೆ, ಶತ್ರುತ್ವದ ಭಾವನೆ, ಕೋಮುವಾದ ಅಸಹನೆ ಸಮಾಜದಲ್ಲಿ ಬೆಳೆಯುತ್ತಲೇ ಇದೆ. ಪ್ರಪಂಚದ ಎಷ್ಟೋ ದೇಶಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮುಸಲ್ಮಾನರಿದ್ದಾರೆ, ಆದರೆ ಅವರ ನಡುವೆ ಈ ವಿಷಪೂರಿತ ವಾತಾವರಣ ಇಲ್ಲ. ಚೈನಾದ ಮುಸಲ್ಮಾನರು ತಮ್ಮ ಧರ್ಮಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಹೃದಯಾಂತರಾಳದಿಂದ ಚೀನೀಯರಾಗಿದ್ದಾರೆ. ಚೀನೀ ಸಮಾಜವನ್ನು ದೃಢಪಡಿಸುವ, ನಿಷ್ಕಂಟಕ ಅಂಗವಾಗಿದ್ದಾರೆ. ಆಫ್‌ಘಾನಿಸ್ತಾನದ ೧೫ ಕೋಟಿ ಜನಸಂಖ್ಯೆಯಲ್ಲಿ ೫೦೦೦೦ ಮಂದಿ ಹಿಂದೂಗಳು ವಾಸವಾಗಿದ್ದಾರೆ, ಅವರೂ ನಿಶ್ಚಿಂತೆಯಿಂದಿದ್ದಾರೆ. ಕಾಬೂಲಿನಲ್ಲಿ ಯಾರು ದೇವಿ ಆಸಾಮಾಯಿ ಮಂದಿರಕ್ಕೆ ದರ್ಶನಕ್ಕಾಗಿ ಹೋಗ್ತಾರೆ, ಯಾರು ಅಜ಼ಾ ಕೇಳಿ ಸಿಜದಾ ಮಾಡ್ತಾರೆ ಅಂತ ತಿಳಿಯವುದೇ ಇಲ್ಲ. ನಮ್ಮ ಧರ್ಮ ಯಾವುದು, ನಮ್ಮ ದೇವರು ಯಾರು ಅನ್ನುವುದು ವೈಯಕ್ತಿಕ ವಿಷಯ, ಸಮಾಜ, ಸಮಾಜದ ಕರ್ತವ್ಯಗಳಿಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಇದು ಆಂತರಿಕ ಭಾವನೆಗಳ ವಿಷಯ. ಅದರಲ್ಲಿ ರಾಜಕೀಯವನ್ನು ತರುವುದು, ಕೋಮುವಾದದ ರಾಕ್ಷಸನನ್ನು ತಂದು ನಿಲ್ಲಿಸುವುದು ಬಹಳ ದೊಡ್ಡ ಕೆಟ್ಟ ಅಧರ್ಮ, ಆದರೆ ನಮ್ಮ ದೇಶಕ್ಕೆ ಇಂಗ್ಲಿಷರು ಕೊಟ್ಟು ಹೋದ ಈ ಬಳುವಳಿ ಇನ್ನೂ ಬೆಳೆಯುತ್ತಲೇ ಇದೆ.

ನಮ್ಮ ಸುಂದರವಾದ ದೇಶದಲ್ಲಿ ಎರಡೂ ಸಮುದಾಯಗಳು ಸಾಯಲು – ಕೊಲ್ಲಲು ಸಿದ್ಧವಾಗುತ್ತಾರೆ. ಈ ಕಷ್ಟದಲ್ಲಿ ನಮ್ಮ ಸ್ವತಂತ್ರ ದೇಶದ ನಾಯಕರು ಚೆನ್ನಾಗಿ ಆಟ ಆಡುತ್ತಾರೆ ಮತ್ತು ತಮ್ಮ ತಮ್ಮ ಅಧಿಕಾರದ ನಗ್ನ ಪ್ರದರ್ಶನ ಮಾಡುತ್ತಾರೆ, ಆಗ ಭಗವಾನ್ ಶಂಕರನ ತಾಂಡವ ನೃತ್ಯದ ಭಯಂಕರತೆಯ ಅರಿವಾಗುತ್ತದೆ. ಹಾಗಿದ್ದರೂ ಭಾರತ ದೇಶದ ಜನರಿಗೆ ಅರ್ಥವಾಗಿಲ್ಲ, ಎಲ್ಲಿಯವರೆಗೂ ನಾವು ಹೀಗೆ ಭಯಂಕರವಾದ ದಂಗೆಗಳಲ್ಲಿ ನಮ್ಮ ಅಮೂಲ್ಯವಾದ ಶಕ್ತಿ– ಸಂಪತ್ತನ್ನು ಹಾಳು ಮಾಡುತ್ತಿರುತ್ತೇವೋ ಗೊತ್ತಿಲ್ಲ. ಬಹುಶಃ ಇನ್ನೊಬ್ಬ ಗಾಂಧಿ ಹುಟ್ಟಿ ನಮ್ಮ ಪಾಪ ತೊಳೆದರೇನಾದರೂ ನಮ್ಮ ಕೆಲಸ ಆಗಬಹುದೇನೋ, ಆದರೆ ಇದರಲ್ಲಿ ನಮ್ಮ ತಪ್ಪೇನಿಲ್ಲ, ನಮ್ಮ ಹಣೆಬರೆಹದ ತಪ್ಪು ಅಷ್ಟೆ.

# ೨೭. ಸ್ವಾತಂತ್ರ್ಯದ ರಕ್ಷಕ

ಕಾಯದೇ ಆಜಮ್ (ಕಾನೂನುತಜ್ಞ) ಜಿನ್ನಾ, ಹಠಮಾರಿತನದಿಂದ ದೇಶದ ಜನರನ್ನು, ಸ್ವಲ್ಪ ಮಟ್ಟಿಗೆ ಸರಕಾರವನ್ನೂ, ನಿರಾಶೆಗೊಳಿಸಿದ್ದರು. ಬಾಪೂಜಿ ಈ ವಿಷಯಗಳನ್ನೆಲ್ಲಾ ದೇವರಿಗೇ ಬಿಟ್ಟಿರುತ್ತಿದ್ದರು. ದೇಶದ ರಾಜಕೀಯ ಪುನರುತ್ಥಾನದಲ್ಲಿ ತೊಡಗಿಕೊಂಡಿದ್ದರಿಂದ ಅವರಿಗೆ ಕಾಯದೇ ಆಜಮ್ ಅವರ ವ್ಯವಹಾರದಿಂದ ಆಶ್ಚರ್ಯವಾದುದು ನಿಜವಾದರೂ ಅವರು ನಿರಾಶೆಗೆಡೆಕೊಡುತ್ತಿರಲಿಲ್ಲ. ಅದಕ್ಕೆ ಅವರಿಗೆ ಸಮಯವೂ ಇರಲಿಲ್ಲ. ಕಾಂಗ್ರೆಸ್ ಕಾರ್ಯಸಮಿತಿ ಜೈಲಿನಲ್ಲಿರುವಾಗ, ನಿಶ್ಚೇಷ್ಟವಾಗಿರುವ ದೇಶಕ್ಕೆ ಪ್ರಾಣತುಂಬುವ ಕೆಲಸ ಅವರದ್ದಾಗಿತ್ತು.

ಅವರು ಕಾಂಗ್ರೆಸ್ ಕಾರ್ಯಕರ್ತರುಗಳಿಗೆ ರಚನಾತ್ಮಕ ಕಾರ್ಯಗಳನ್ನು ಮಾಡಲು ಪ್ರೋತ್ಸಾಹಿಸಿದರು. ರಚನಾತ್ಮಕ ಕಾರ್ಯಕ್ರಮಗಳಿಗೂ ರಾಜಕೀಯಕ್ಕೂ ಯಾವ ಸಂಬಂಧವೂ ಇರಲಿಲ್ಲವಾದರೂ ರಾಜಕೀಯ ಜಾಗೃತಿ ಅದರ ಉದ್ದೇಶವಾಗಿತ್ತು. ಜನಜಾಗೃತಿಯ ಪ್ರಾಥಮಿಕ ರಚನಾತ್ಮಕ ಕಾರ್ಯಗಳನ್ನು ಮಾಡಿದಾಗ ಚಳವಳಿಯ ಅಗತ್ಯ ನಿಜವಾಗಿ ಇರುವುದೇ ಇಲ್ಲವೆಂದು ಬಾಪೂಜಿ ಮತ್ತೆ–ಮತ್ತೆ ಹೇಳುತ್ತಿದ್ದರು. ಅತಿ ಕೆಟ್ಟವನಾದ ಸರ್ವಾಧಿಕಾರಿ ರಾಜ್ಯ ನಡೆಸುತ್ತಿರುವಾಗಲೂ ರಚನಾತ್ಮಕ ಕಾರ್ಯಗಳನ್ನು ಮಾಡುವವನು ನಿರ್ಭೀತನಾಗಿ ತಮ್ಮ ಕೆಲಸ ಮಾಡಿಕೊಳ್ಳಬಲ್ಲ, ಸಫಲ ರಚನಾತ್ಮಕ ಕಾರ್ಯಗಳನ್ನು ಮಾಡುವವನು ಮಾತನಾಡದೆಯೇ ಗಟ್ಟಿಕೆಲಸಗಳನ್ನು ಮಾಡುತ್ತಾನೆ; ಭಾಷಣ, ಘೋಷಣೆಗಳನ್ನು ಕೂಗುವುದು ಯಾವುದೂ ಅಲ್ಲಿರುವುದಿಲ್ಲ, ಪ್ರಚಾರದ ಉತ್ತೇಜನ ಇಲ್ಲದೆ ಸುಮ್ಮನೇ ಕೆಲಸ ಆಗುತ್ತಿರುತ್ತದೆ. ಇದು ಅದರ ಸಫಲತೆಯ ರಹಸ್ಯ, ಈ ಕೆಲಸದಲ್ಲಿ ದ್ವೇಷ ಇರುವುದಿಲ್ಲ, ಶತ್ರುವನ್ನು ಕುರಿತ ದ್ರೋಹ ಇರುವುದಿಲ್ಲ. ಇದರಿಂದ ಎಂತಹ ವಿರೋಧಿ ಕೂಡ ಅಂತಹ ರಚನಾತ್ಮಕ ಕಾರ್ಯಗಳನ್ನು ಹಾಳುಮಾಡಕ್ಕಾಗುವುದಿಲ್ಲ, ಅಂತಹ ರಚನಾತ್ಮಕ ಕಾರ್ಯ ಮಾಡುವವರು ಸಹಜವಾಗಿ ಧೈರ್ಯದಿಂದಿದ್ದು, ಯುಕ್ತಿಯಿಂದ ಕೂಡಿ, ಬುದ್ಧಿವಂತನಾಗಿರುತ್ತಾನೆ. ಸ್ವತಃ ಅಹಿಂಸಕ ಪ್ರವೃತ್ತಿಯವನಾಗಿದ್ದು, ಸತ್ಯ ನಿಷ್ಠೆಯಿಂದ ಚಮತ್ಕಾರಕರವಾದ ಪರಿಣಾಮಗಳನ್ನು ಮೂಡಿಸುತ್ತಾನೆ. ಬಾಪೂಜಿ ಈ ಮಾತನ್ನೇ ಚಿಕ್ಕ–ದೊಡ್ಡ, ಎಲ್ಲಾ ತರಹೆಯ ಸ್ವಯಂಸೇವಕರಿಗೆ, ಕಾರ್ಯಕರ್ತರಿಗೆ ತಿಳಿಸಲು ಆರಂಭಿಸಿದರು.

ಚಿಮೂರ್ ಆಷ್ಟಿಯಲ್ಲಿ ಅತ್ಯಾಚಾರಗಳು ನಡೆದ ಸಂದರ್ಭದಲ್ಲಿ ಸೈನ್ಯ ಅನೇಕ ಜನ ನಿರ್ದೋಷಿಗಳ ಮೇಲೆ ಗುಂಡು ಹಾರಿಸಿತ್ತು. ಎಷ್ಟೋ ಜನರನ್ನು ಸರಕಾರ ಬಂಧಿಸಿ ಅವರ ಮೇಲೆ ರಾಜದ್ರೋಹದ ಆರೋಪ ಹೊರಿಸಿತ್ತು, ಮತ್ತು ಅದಕ್ಕಾಗಿ ಮೃತ್ಯುದಂಡನೆಯನ್ನು ವಿಧಿಸಿತ್ತು, ಇದು ಅನ್ಯಾಯ ಅತ್ಯಾಚಾರದ ಪರಾಕಾಷ್ಠೆ ಆಗಿತ್ತು. ಬಾಪೂಜಿ ಸರಕಾರಕ್ಕೆ ಬರೆದು, ೮ ಆಗಸ್ಟ್‌ನ ಅನಂತರದ ಅಲೆಯ ಭರದಲ್ಲಿ ಈ ಅಪರಾಧಿಗಳು ಕೆಲವು ತಪ್ಪುಗಳನ್ನು ಮಾಡಿಬಿಟ್ಟಿದ್ದರು, ಆದರೆ ಅದಕ್ಕಾಗಿ ಪ್ರಾಣದಂಡನೆ ಕೊಟ್ಟರೆ ಅದು ಹತ್ಯೆಯ ಹಾಗೇ ಆಗುತ್ತದೆ, ಈ ಹತ್ಯೆಯನ್ನು ಕಾನೂನಿನ ಹೆಸರಿನಲ್ಲಿ ಮಾಡುವುದರಿಂದ ಅಸಹ್ಯಕರವಾದುದ್ದಾಗುತ್ತದೆ ಎಂದು ತಿಳಿಸಿದ್ದರು. ತಿಂಗಳುಗಟ್ಟಲೆ ಬಾಪೂಜಿ ಸರಕಾರದೊಂದಿಗೆ ಪತ್ರ ವ್ಯವಹಾರ ನಡೆಸಿದರು. ಅದರ ಫಲವಾಗಿ ವೈಸ್‌ರಾಯ್ ಆ ಅಪರಾಧಿಗಳಿಗೆ ಮೃತ್ಯುದಂಡನೆಗೆ ಬದಲಾಗಿ ಆಜೀವ ಕಾರಾವಾಸದ ಸಜೆಯನ್ನು ವಿಧಿಸಿದರು.

ಆ ಸಮಯದಲ್ಲಿ ಮಿಕ್ಕ ನೇತಾರರುಗಳು ಅಹಮದ್‌ನಗರದ ಕೋಟೆಯಲ್ಲಿ ಬಂದಿಗಳಾಗಿದ್ದರು. ಬಾಪೂಜಿ ತಾವೊಬ್ಬರೇ ದೇಶದ ಜನರಿಗೆ ಆಸರೆ ನೀಡುತ್ತಿದ್ದರು, ಸ್ವಾತಂತ್ರ್ಯದ ಸ್ವತಂತ್ರ ರಕ್ಷಕನ ಹಾಗೆ ಅವರು ರಾತ್ರಿ–ಬೆಳಿಗ್ಗೆ ದೇಶದ ರಾಜಕೀಯ, ಸಾಮಾಜಿಕ ಕ್ಷಿತಿಜದ ಕಡೆ ತಮ್ಮ ದೃಷ್ಟಿ ನೆಟ್ಟು ಯಾರಾದರೂ ದೇಶಕ್ಕೆ ಏನಾದರೂ ಹೆಚ್ಚು ಕಷ್ಟ ತಂದೊಡ್ಡುವರೇನೋ ಎಂದು ನೋಡುತ್ತಿದ್ದರು.

ಸರಕಾರ ಅಕರ್ಮಣ್ಯವಾಗಿತ್ತು, ಭ್ರಷ್ಟಾಚಾರ ನಡೆಯುತ್ತಿತ್ತು. ಇದರಿಂದ ಬಂಗಾಳದಲ್ಲಿ, ಏನಿಲ್ಲದೆಂದರೂ ಇಪ್ಪತ್ತು ಲಕ್ಷ ಜನ ಹಸಿವಿನಿಂದ ಬಳಲಿ ಸಾಯುತ್ತಿದ್ದರು. ವ್ಯಾಪಾರಿಗಳು ಈ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ಕೋಟ್ಯಂತರ ರೂಪಾಯಿ ಮಾಡಿಕೊಂಡಿದ್ದರು. ಇಂತಹ ಅನಾಚಾರಕ್ಕೆ ರಾಷ್ಟ್ರದ ಸರಕಾರವೇ ಉಪಾಯ ಹುಡುಕುತ್ತಿತ್ತು. ಬ್ರಿಟಿಷ್ ಆಡಳಿತಾಧಿಕಾರಿಗಳು ಪರೋಪಕಾರ, ಸಮಾಜ ಸೇವಾಕಾರ್ಯಗಳನ್ನು ಮಾಡುವಂಥವರಾಗಿರಲಿಲ್ಲ. ಇಲ್ಲಿ ದೇಶ ಸೋತು ಬಳಲಿ ಬೆಂಡಾಗಿತ್ತು. ಆಗ ಯೂರೋಪಿನಲ್ಲಿ ಮಿತ್ರ ರಾಷ್ಟ್ರಗಳು ಮೆಲ್ಲ–ಮೆಲ್ಲಗೆ ವಿಜಯದ ಕಡೆಗೆ ಧಾವಿಸುತ್ತಿದ್ದರು. ಎಲ್ಲ ಯುದ್ಧಕ್ಷೇತ್ರಗಳಲ್ಲೂ ಹಿಟ್ಲರ್‌ನ ಜರ್ಮನಿ ಹಿಂದಕ್ಕೆ ಸರಿಯುತ್ತಿತ್ತು, ಆದರೆ ಜಪಾನನ್ನು ಸೋಲಿಸಲು ಸಾಕಷ್ಟು ಬಲ ಮತ್ತು ಗಮನ ಇನ್ನೂ ಬೇಕಾಗಿತ್ತು. ಆಗ ಕೇಂದ್ರ ವಿಧಾನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡ ಭೂಲಾಭಾಯಿ ದೇಸಾಯಿ ಅವರನ್ನೇ ವೈಸ್‌ರಾಯ್ ಒಪ್ಪಂದದ ಮಾತುಗಳಾಡುವಂತೆ ಪ್ರೇರೇಪಿಸಿದರು. ಬಾಪೂಜಿ ಕಾಂಗ್ರೆಸ್ ವತಿಯಿಂದ ಭೂಲಾ ಭಾಯಿಗಾಗಿ ನೀತಿಯನ್ನು ನಿರ್ಧರಿಸಬಹುದಿತ್ತು, ಆದರೆ ಇಲ್ಲಿ ಕೂಡ ಕಾಯದೇ ಆಜಂನ ಅಸಹಯೋಗದಿಂದಾಗಿ ಪ್ರಯತ್ನಗಳು ವ್ಯರ್ಥವಾದವು.

೨೩ ಮೇ ೧೯೪೫ರಂದು ಯೂರೋಪಿನ ಮಹಾಯುದ್ಧ

ಮುಕ್ತಾಯಗೊಂಡಿತು. ಇಂಗ್ಲೆಂಡಿನಲ್ಲಿ ಸಾರ್ವತ್ರಿಕ ಚುನಾವಣೆಯನ್ನು ಘೋಷಿಸಿದರು. ಚರ್ಚಿಲರ ಟೋರಿ ಪಾರ್ಟಿ ಸೋತುಹೋಯಿತು, ಲೇಬರ್ ಪಾರ್ಟಿಯ ಸರಕಾರ ರಚಿತವಾಯಿತು. ಅದರಿಂದಾಗಿ ೧೪ ಜೂನ್‌ರಂದು ಕಾಂಗ್ರೆಸ್ ಕಾರ್ಯಕಾರಣಿಯ ಸದಸ್ಯರನ್ನು ಕಾರಾವಾಸದಿಂದ ಬಿಡುಗಡೆ ಮಾಡಲಾಯಿತು. ನೆನ್ನೆಯ ವರೆವಿಗೂ ರಾಜದ್ರೋಹಿಗಳೆಂದು ಕರೆಸಿಕೊಳ್ಳಲಾಗುತ್ತಿದ್ದ ಈ ಮುಖಂಡರನ್ನು ವಿಶೇಷ ರೈಲುಗಾಡಿಯಲ್ಲಿ ವೈಸ್‌ರಾಯರೊಂದಿಗೆ ಚರ್ಚೆ ನಡೆಸಲು ಶಿಮಲಾ ಸಮ್ಮೇಳನದಲ್ಲಿ ಹಾಜರಾಗಲು ಕರೆಸಿದ್ದರು. ಬಾಪೂಜಿ ಕಾಂಗ್ರೆಸ್ ಸದಸ್ಯರು ಕೂಡ ಆಗಿರಲಿಲ್ಲವಾದ್ದರಿಂದ ಅವರು ಚರ್ಚೆಗಳಲ್ಲಿ ಭಾಗವಹಿಸಲಿಲ್ಲ, ಆದರೆ ಲಾರ್ಡ್ ಬೆವೆಲ್ ಬಲವಂತಪಡಿಸಿದ್ದರಿಂದ ಅವರು ಸಮ್ಮೇಳನದ ದಿನಗಳಲ್ಲಿ ಶಿಮಲಾದಲ್ಲೇ ಇದ್ದರು. ಚರ್ಚೆಗಳು ನಡೆಯುತ್ತಿದ್ದವು, ವೈಸ್‌ರಾಯ ತಮ್ಮ ಭಾಷಣದಲ್ಲಿ ಸ್ವರಾಜ್ಯದ ಬಗ್ಗೆ ಮಾತನಾಡಲೇ ಇಲ್ಲ. ಹಿಂದೂ–ಮುಸ್ಲಿಂ ಇಬ್ಬರಿಗೂ ಒಂದೇ ರೀತಿಯ ಮಹತ್ವ ನೀಡಲಾಗುವುದೆಂದು ಘೋಷಿಸಿದರು. ಇದರಿಂದ ನ್ಯಾಯ ಮತ್ತು ಸತ್ಯ ಎರಡನ್ನು ಎಲ್ಲರೆದುರಿಗೇ ಕೊಂದಂತಾಗಿತ್ತು, ದೇಶದ ೮೦ ಭಾಗ ಜನರನ್ನು ೨೦ ಭಾಗ ಜನರೊಂದಿಗೆ ತೂಕ ಮಾಡಲಾಗುತ್ತಿತ್ತು. ಬಾಪೂಜಿ ತೀರ ಉತ್ಕಟವಾಗಿ ವಿರೋಧಿಸಿದ ನಂತರವೂ ಕಾಂಗ್ರೆಸ್ ಅಧ್ಯಕ್ಷ ಮೌಲಾನಾ ಆಝಾದ್ ಮತ್ತಿತರ ಮುಖಂಡರು ವೈಸ್‌ರಾಯ್ ಕೊಟ್ಟ ಪ್ಯಾರಿಟಿ (ಸಮಾನತೆಯ) ಸಲಹೆಯನ್ನು ಸ್ವೀಕರಿಸಿಬಿಟ್ಟರು. ಅದರಂತೆ ಕಾಂಗ್ರೆಸ್ ಸವರ್ಣ ಹಿಂದೂ ಸಂಸ್ಥೆಯೆಂದು ಒಪ್ಪಿಕೊಳ್ಳಲಾಯಿತು, ಮುಸ್ಲಿಂ ಲೀಗ್ ಪ್ರತಿನಿಧಿ ಸಂಸ್ಥೆ ಎಂದು ಸ್ವೀಕರಿಸಿದರು, ಮಧ್ಯಂತರ ಸರಕಾರ ರಚಿಸಲು ಮತ್ತು ಸಾರ್ವತ್ರಿಕ ಚುನಾವಣೆಗಳ ಘೋಷಣೆಯಾಯಿತು. ಅಲ್ಲಿ ಕೂಡ ಕಾಯದೇ ಆಝಮ್ ಪುನಃ ಒಂದೆಡೆ ಒಬ್ಬನೇ ಮುಸ್ಲಿಂ ಸದಸ್ಯ ಮತ್ತು ಇನ್ನೊಂದೆಡೆ ಮಿಕ್ಕೆಲ್ಲಾ ಬಹುಮತದ ಜನರ ಪ್ರತಿನಿಧಿತ್ವ ಇರಬೇಕೆಂದು ಹಠ ಹಿಡಿದರು. ಹರಿಜನ, ಪಾರಸೀ, ಸಿಖ್ ಮುಂತಾದವರೆಲ್ಲರೂ ಕಾಂಗ್ರೆಸ್‌ಪರ ಮತದಾನ ಮಾಡುವರೆಂದೂ, ಅದರಿಂದ ಮುಸ್ಲಿಂ ಲೀಗ್‌ಗೆ ಸ್ಪಷ್ಟವಾಗಿ ೫೦ ಭಾಗ ಪ್ರತಿನಿಧಿತ್ವ ಸಿಕ್ಕೇ ಸಿಗುತ್ತದೆ, ಮುಸಲ್ಮಾನರ ಹಿತರಕ್ಷಣೆಯಾಗುತ್ತದೆ ಎಂಬುದು ಅವರ ತರ್ಕವಾಗಿತ್ತು. ಮಧ್ಯಂತರ ಸರಕಾರಕ್ಕೆ ಮುಸ್ಲಿಂ ಮಂತ್ರಿಗಳು ಸಹಯೋಗ ನೀಡದಿರಲೆಂಬುದು ಕಾಯದೇ ಆಝಂ ಇಚ್ಛೆಯಾಗಿತ್ತು, ಮಧ್ಯಂತರ ಸರಕಾರ ಸಫಲವಾದರೆ ಪಾಕಿಸ್ತಾನ ಬೇಕೆಂಬ ಬೇಡಿಕೆ ಸಡಿಲಗೊಂಡು ಮುಸಲ್ಮಾನರು ಹಿಂದೂ ರಾಷ್ಟ್ರದಲ್ಲಿ ಸುಖ ಶಾಂತಿಯಿಂದ ಬದುಕುವರು, ಆಗ ವಿಭಜನೆ ಅನಾವಶ್ಯಕವಾಗುತ್ತದೆ ಹಾಗೂ ಅಸಂಭವವಾಗುತ್ತದೆ ಎಂಬ ಭಯ ಆತನಿಗಿತ್ತು. ಅವರು ಮಧ್ಯಂತರ ಸರಕಾರದಲ್ಲಿ ಮುಸಲ್ಮಾನ ಸದಸ್ಯರ ಪಟ್ಟಿ ಕೊಡಲು ವಿರೋಧಿಸಿದರು ಮತ್ತು ಹಿಂದೂ–ಮುಸ್ಲಿಂ ಒಪ್ಪಂದದ ಅಸಫಲ ಇತಿಹಾಸದಲ್ಲಿ

ಶಿಮ್ಲಾ ಸಮ್ಮೇಳನ ಮತ್ತೊಂದು ಮೈಲಿಗಲ್ಲಾಯಿತು. ವೈಸ್‌ರಾಯ್ ಅವರ ಕಾರ್ಯಕಾರಿಣಿ ಸಮಿತಿಗಾಗಿ ಕಾಂಗ್ರೆಸ್ ತಯಾರಿಸಿದ ಪಟ್ಟಿಯಲ್ಲಿ ವೈಸ್‌ರಾಯ್ ಮತ್ತು ಸೇನಾಧ್ಯಕ್ಷರ ಜೊತೆಗೆ ಕೆಳಗಣ ಹದಿನೈದು ಹೆಸರುಗಳನ್ನು ನೀಡಲಾಗಿತ್ತು:

೧) ಮೌಲಾನ ಅಬ್ದುಲ್ ಕಲಾಂ ಆಝಾದ್ (ಕಾಂಗ್ರೆಸ್ ಮುಸ್ಲಿಂ)
೨) ಆಸಫ್ ಅಲೀ (ಕಾಂಗ್ರೆಸ್ ಮುಸ್ಲಿಂ)
೩) ಪಂಡಿತ ಜವಾಹರಲಾಲ ನೆಹರೂ (ಕಾಂಗ್ರೆಸ್ ಹಿಂದೂ)
೪) ಸರದಾರ್ ವಲ್ಲಭಭಾಯೀ ಪಟೇಲ್ (ಕಾಂಗ್ರೆಸ್ ಹಿಂದೂ)
೫) ಡಾ॥ ರಾಜೇಂದ್ರ ಪ್ರಸಾದ್ (ಕಾಂಗ್ರೆಸ್ ಹಿಂದೂ)
೬) ಮೊಹಮದ್ ಅಲೀ ಜಿನ್ನಾ (ಮುಸ್ಲಿಂ ಲೀಗ್)
೭) ನವಾಬ್‌ಜ಼ಾದಾ ಲಿಯಾಕತ್ ಅಲೀ (ಮುಸ್ಲಿಂ ಲೀಗ್)
೮) ನವಾಬ್ ಮೊಹಮ್ಮದ್ ಇಸ್ಮಾಯಿಲ್ ಖಾನ್ (ಮುಸ್ಲಿಂ ಲೀಗ್)
೯) ಶ್ಯಾಮಾಪ್ರಸಾದ ಮುಖರ್ಜಿ (ಹಿಂದೂ ಮಹಾಸಭಾ)
೧೦) ಗಗನ ಬಿಹಾರಿ ಮೆಹ್ತಾ (ಹಿಂದೂ)
೧೧) ರಾಜಕುಮಾರಿ ಅಮೃತ್ ಕೌರ್ (ಮಹಿಳಾ ಭಾರತೀಯ ಕ್ರಿಶ್ಚಿಯನ್)
೧೨) ಮುನಿಸ್ವಾಮಿ ಪಿಳ್ಳೈ (ಅನುಸೂಚಿತ ಜಾತಿ)
೧೩) ರಾಧಾನಾಥ ದಾಸ್ (ಅನುಸೂಚಿತ ಜಾತಿ)
೧೪) ಸರ್ ಅರ್ದೇಶರ್ ದಲಾಲ್ (ಪಾರಸಿ )
೧೫) ಸರದಾರ್ ಬಲವಂತಸಿಂಹ (ಸಿಖ್)

ಈ ಪಟ್ಟಿಯನ್ನು ಜಿನ್ನಾ ಒಪ್ಪಲಿಲ್ಲ. ಈ ೧೫ ಜನರ ಮಧ್ಯಂತರ ಸರಕಾರ ನಡೆದಿದ್ದಿದ್ದರೆ, ಪಾಕಿಸ್ತಾನದ ಸೃಷ್ಟಿಯ ಅಗತ್ಯ ಇರುತ್ತಲೇ ಇರಲಿಲ್ಲ. ಆ ಪ್ರಯತ್ನ ಅಸಫಲವಾದುದಕ್ಕೆ ಜಿನ್ನಾ ಕಾರಣರಾಗಿದ್ದರು ಎಂಬುದಾದರೂ ಅದರಿಂದ ಲಾರ್ಡ್ ಬೆವಲ್ ಕೂಡ ಕಳಂಕರಹಿತರಾಗಿರಲಿಲ್ಲ. ಅವರು ಪ್ರೋತ್ಸಾಹಿಸಿದ್ದರಿಂದಲೇ ಮುಸ್ಲಿಂ ಲೀಗ್ ಇಷ್ಟು ಕಠೋರವಾದ ನಿಲುವನ್ನು ಹಿಡಿದಿತ್ತು, ಬೇರೆ ಯಾವ ದೇಶದಲ್ಲಾದರೂ ಆಗಿದ್ದರೆ ಯಾವ ತೊಂದರೆ ಕೂಡ ಇಲ್ಲದೆ ಶೇಕಡಾ ೮೦ರಷ್ಟು ಬಹುಮತ ಪ್ರಜೆಗಳಿಗೆ ಆಡಳಿತ ನೀಡಿ ವಿದೇಶಿ ಸರಕಾರ ಹೊರಹೋಗುತ್ತಿತ್ತು. ಆದರೆ ಹಿಂದೂಸ್ತಾನದಲ್ಲಿ ಬ್ರಿಟಿಷರು ಕೋಮುವಾದಿ ರಾಕ್ಷಸನಿಗೆ ಅವಕಾಶ ನೀಡಿ, ಲೀಗ್‌ಗೆ ದೇಶ ಹಾಗೂ ಪ್ರಜೆಗಳ ಬಗ್ಗೆ ಒಂದಷ್ಟು ಕರ್ತವ್ಯ ಇದೇ ಅನ್ನುವುದನ್ನೇ ಮರೆಸಿದರು. ಮುಸ್ಲಿಂ ಲೀಗ್ ತಾನು ಗೈರುಹಾಜರಿಯಾಗಿ ಬೇಜವಾಬ್ದಾರಿತನತೋರಿ ದೇಶದೊಂದಿಗೆ ಆಟವಾಡಿತು ಮತ್ತು ವೈಸ್‌ರಾಯ್ ಕಾಂಗ್ರೆಸ್‌ಗೆ ಮೋಸಮಾಡುತ್ತಿದ್ದು, ಕಾಂಗ್ರೆಸ್‌ನ ಸಜ್ಜನಿಕೆಯನ್ನು ದುರುಪಯೋಗಿಸಿಕೊಂಡು ಪ್ಯಾರಿಟಿಯ ಪ್ರಶ್ನೆ ಉಂಟುಮಾಡಿ ನಿರಂತರವಾಗಿ ಸಿಲುಕಿಹಾಕಿಸುತ್ತಿದ್ದರು.

ಶಿಮ್ಲಾ ಸಮ್ಮೇಳನ ಮುಗಿದ ಮೇಲೆ ಬಾಪೂಜಿ ಬಂಗಾಳ, ಅಸ್ಸಾಂ, ದಕ್ಷಿಣ ಭಾರತದ ಯಾತ್ರೆ ಮಾಡಿದರು. ಬಂಗಾಳದ ಮಿಡನಾಪುರ ಜಿಲ್ಲೆಯಲ್ಲಿ ಭಯಂಕರವಾಗಿ ಪ್ರವಾಹ ಬಂದು ಎಷ್ಟೋ ಜನ ಸತ್ತರು, ಪದಾರ್ಥಗಳು ಎಲ್ಲಾ ಹಾಳಾದವು. ಬಾಪೂಜಿ ಆ ಜನರಿಗೆ ಧೈರ್ಯ ಹೇಳಿ ಸಹಾಯ ಮಾಡುವುದಕ್ಕೋಸ್ಕರ ಅಲ್ಲಿಗೆ ಹೋಗಿದ್ದರು. ಸ್ವರಾಜ್ಯ ಆಕಾಶದಿಂದ ಉದುರುವ ಪದಾರ್ಥವೇನಲ್ಲ, ದೇಶದ ಜನರು ಕಷ್ಟಪಟ್ಟು ತಪಸ್ಸು ಮಾಡಿದಾಗಲೇ ಅದು ಸಿಕ್ಕುವುದು ಎಂದು ಬಾಪೂಜಿ ಜನರಿಗೆ ಹೇಳುತ್ತಿದ್ದರು. ಬಂಗಾಳದ ಯಾತ್ರೆ ಮಾಡುವಾಗ ಕೆಲವು ದಿನಗಳಿಗಾಗಿ ಬಾಪೂಜಿ ಶಾಂತಿನಿಕೇತನಕ್ಕೂ ಹೋಗಿದ್ದರು, ತೀರಿಕೊಳ್ಳುವ ಮೊದಲು ಗುರುದೇವರು ವಿಶ್ವಭಾರತಿಯ ಆರ್ಥಿಕ ವ್ಯವಸ್ಥೆ ಮತ್ತು ಆಂತರಿಕ ಆಡಳಿತ ವ್ಯವಸ್ಥೆಯ ಜವಾಬ್ದಾರಿಯನ್ನು ಬಾಪೂಜಿಗೆ ವಹಿಸಿಕೊಟ್ಟಿದ್ದರು. ಸಂಸ್ಥೆಯಲ್ಲಿ ಜನರು ಸೇವೆಗಾಗಿ ಬರಬೇಕೆಂದು ಬಾಪೂಜಿ ಯಾವಾಗಲೂ ಹೇಳುತ್ತಿದ್ದರು. ಹಣದಿಂದ ಆಕರ್ಷಿತರಾಗಿಯೇ ಶಿಕ್ಷಕರು ಬಂದರೆ, ಅಂತಹ ದುರಾಸೆಕೋರ ಶಿಕ್ಷಕರು ಯಾವಾಗಲೂ ಸಂಸ್ಥೆಯ ಅಥವಾ ವಿದ್ಯಾರ್ಥಿಗಳ ಹಿತವನ್ನು ರಕ್ಷಿಸುವುದಿಲ್ಲ. ಸಂಸ್ಥೆಯ ಉದ್ದೇಶ ಮತ್ತು ಕಾರ್ಯಕ್ಷೇತ್ರವನ್ನು ಆಧರಿಸಿಯೇ ಯೋಗ್ಯ ಶಿಕ್ಷಕರು ಅಲ್ಲಿ ಉಳಿದುಕೊಳ್ಳುತ್ತಾರೆ, ಸಂಸ್ಥೆಯ ವ್ಯವಸ್ಥೆಯೆಲ್ಲಾ ತಪ್ಪಾಗಿದ್ದಾಗ, ಅಲ್ಲಿ ಯಾವ ಒಳ್ಳೆಯ ಕೆಲಸವೂ ನಡೆಯುವುದಿಲ್ಲ ಅಂತ ಹೇಳುವುದು ಸರಿಯಲ್ಲ, ಹಾಗೆ ಹೇಳುವವರೇ ಸಾಮಾನ್ಯವಾಗಿ ತಪ್ಪಿತಸ್ಥರಾಗಿರುತ್ತಾರೆ, ಆತ್ಮನಿರೀಕ್ಷಣೆಯಿಂದಲೇ ಸುಧಾರಣೆ ಆಗಬಲ್ಲುದು.

ವಿದ್ಯಾರ್ಥಿಗಳಲ್ಲಿ ಶಿಸ್ತು ಇಲ್ಲವೆಂದು ಕಂಡುಬಂದರೆ, ಹಾಗೂ ನಿಂದಾಶೀಲರಾಗಿಯೇ ಉಳಿದುಕೊಂಡುಬಿಡುವಂತಾದರೆ, ಅದು ಶಿಕ್ಷಕನ ಅಶ್ರದ್ಧೆ ಅವನ ವೈಯಕ್ತಿಕ ಕೊರತೆಯಿಂದಲೇ. ಗುರುದೇವರು, ಬಾಪೂಜಿ ಇಬ್ಬರೂ ನಮ್ಮ ದೇಶದ ಅಂತರಾತ್ಮದ ಎರಡು ಧ್ರುವಗಳಾಗಿದ್ದವರು. ಒಬ್ಬರು ಕಲಾವಂತ ಕವಿ, ಮತ್ತೊಬ್ಬರು ಸಂಸಾರದಿಂದ ಮುಕ್ತನಾದ ವಿರಕ್ತ. ಈ ಎರಡು ಆತ್ಮಗಳೂ ಸೇರಿ ನಮ್ಮ ಭಾರತದ ಜನರ ಮನಸ್ಸನ್ನು ಅರ್ಥಮಾಡಿಕೊಳ್ಳಬಲ್ಲವರಾಗಿದ್ದರು.

ಬಾಪೂಜಿ ಹೋದ ಕಡೆಯಲ್ಲೆಲ್ಲ ಲಕ್ಷಾಂತರ ಜನರ ಗುಂಪು ಕೂಡುತ್ತಿತ್ತು. ಗಲಾಟೆ, ಅವ್ಯವಸ್ಥೆ, ನೂಕು–ನುಗ್ಗಲು ಇವೆಲ್ಲಾ ನಮ್ಮ ದೇಶದ ಸಾಮಾನ್ಯ ಸ್ವಭಾವಗಳು. ಗಲಾಟೆ ಮಾಡುವುದು ಕೂಡ ಒಂದು ರೀತಿಯ ಹಿಂಸೆಯೇ, ಸ್ವತಂತ್ರ ದೇಶದ ನಾಗರಿಕರಾದವರು ಅನುಶಾಸನ–ಸಂಯಮ ಆಚರಿಸಲೇಬೇಕು. ಸ್ವರಾಜ್ಯದಲ್ಲಿ ಇದೇ ಗುಂಪು–ಗಲಾಟೆ ಇದ್ದರೆ ದೇಶ ಅಹಿಂಸೆಯ ವಿಕಾಸ ಮಾರ್ಗವನ್ನು ಬಿಟ್ಟು ತಪ್ಪು ದಿಕ್ಕಿಗೆ ತಿರುಗಿಕೊಳ್ಳುತ್ತದೆ ಅಂತ ಬಾಪೂಜಿಗೆ ಅನಿಸುತ್ತಿತ್ತು. ಅವರು ಭಾಷಣ ಮಾಡುವುದನ್ನು ಬಿಟ್ಟು ಸಾಮೂಹಿಕ ಪ್ರಾರ್ಥನೆಯನ್ನು ಶುರುಮಾಡಿಬಿಟ್ಟರು.

ಅಲ್ಲಿರುತ್ತಿದ್ದ ಜನರೆಲ್ಲಾ ತಾಳ ಹಾಕಿ ಒಂದು ಸ್ವರದಲ್ಲಿ ರಾಮ ಭಜನೆ ಮಾಡುತ್ತಿದ್ದರು, ಸಾಮೂಹಿಕ ಪ್ರಾರ್ಥನೆಯಲ್ಲಿ ಅಲೌಕಿಕವಾದ ಶಕ್ತಿ ಇದೆ, ಅದು ಏಕತೆಯನ್ನು ಹುಟ್ಟುಹಾಕುತ್ತದೆ ಅಂತ ಬಾಪೂಜಿ ಹೇಳುತ್ತಿದ್ದರು. ಸೈನ್ಯಕ್ಕೆ 'ಡ್ರಿಲ್' ಬೇಕೇ ಬೇಕು, ಹಾಗೆಯೇ ಅಹಿಂಸಾ ಪ್ರೇಮಿ ಸಮಾಜಕ್ಕೆ ಸಾಮೂಹಿಕ ಪ್ರಾರ್ಥನೆ ಅಗತ್ಯ, ದೇವರ ಸಾಕ್ಷಿಯಲ್ಲಿ ಎಲ್ಲ ಮನುಷ್ಯರೂ ಸಮಾನರು, ನಿರಾಯಾಸವಾಗಿ ಭಯದಿಂದ ದೂರಾಗಿ ವಾಸನೆ, ಉದ್ವೇಗ, ದ್ವೇಷ ಎಲ್ಲವನ್ನೂ ಮರೆಯುತ್ತಾರೆ. ಆಗ ರಾಜಕೀಯ ಅಥವಾ ಯಾವುದೇ ರೀತಿ ದಾಸ್ಯದಿಂದ ಮನುಷ್ಯ ಮೇಲೇಳುತ್ತಾನೆ. ೪೦ ಕೋಟಿಯ ಜನತೆ ಒಂದೇ ಧ್ವನಿಯಲ್ಲಿ ಸ್ವರಾಜ್ಯವನ್ನು ಬೇಡಿದರೆ ಪ್ರಪಂಚದ ಯಾವ ಶಕ್ತಿಯೂ ಅವರನ್ನು ಗುಲಾಮರನ್ನಾಗಿಡಲಾರದು. ನಂಬಲು ಕಷ್ಟವಾದರೂ, ನಿಧಾನವಾಗಿ ಜನ ಶಾಂತಿಯಿಂದ ವ್ಯವಸ್ಥಿತ ರೀತಿಯಲ್ಲಿ ಏಳುವದು– ಕುಳಿತುಕೊಳ್ಳುವದು, ಪ್ರಾರ್ಥನೆ ಮಾಡುವುದು ಬಂದಿತು. ಬಂಗಾಳದ ಕೋಂತಾಯಿ ಗ್ರಾಮದಲ್ಲಿ ೧ ಜನವರಿ ೧೯೪೬ರಂದು ಸುಮಾರು ಒಂದು ಲಕ್ಷ ಜನ ಪೂರ್ತಿ ಶಾಂತಿಯಿಂದ ಪ್ರಾರ್ಥನೆಯಲ್ಲಿ ಭಾಗವಹಿಸಿದರು. ಪ್ರಾರ್ಥನೆಯ ನಂತರ ಪ್ರವಚನ ನೀಡುವಾಗ ಬಾಪೂಜಿ, 'ಕೋಂತಾಯಿಯ ಜನರ ಹಾಗೆ ಬಂಗಾಳದ ಆರೂವರೆ ಕೋಟಿ ಜನ ಇದೇ ರೀತಿಯಲ್ಲಿ ಶಿಸ್ತು ಪಾಲಿಸಿದಲ್ಲಿ ಸಾವಿರ ಜನ ಹಿಟ್ಲರಿಗೂ ಈ ದೇಶವನ್ನು ಪರಾಜಿತಗೊಳಿಸಲಾಗುವುದಿಲ್ಲ' ಎಂದು ಹೇಳಿದರು.

ಬಂಗಾಳ, ಒರಿಸ್ಸಾ ನಂತರ ಮದ್ರಾಸ್‌ಗೆ ಹೋದರು. ವಾಲ್ಟೇರ್ ಸ್ಟೇಷನ್‌ನಲ್ಲಿ ಸಾವಿರಾರು ಜನ ಅವರನ್ನು ನೋಡಲು ಜಡಿ ಮಳೆಯಲ್ಲೂ ಶಾಂತಿಯಿಂದ ವ್ಯವಸ್ಥಿತರಾಗಿ ನಿಂತಿದ್ದರು. ಆ ದಿನ ವಾಲ್ಟೇರ್‌ನಲ್ಲಿ ಸಿಕ್ಕ ಹರಿಜನ ಫಂಡನ್ನು ಎಣಿಸಲು ಎರಡು ದಿನಗಳೇ ಬೇಕಾದವು. ೩೮, ೬೦೫ ನೋಟುಗಳಿದ್ದವು ಮತ್ತು ೫೪೬೦೮ ನಾಣ್ಯಗಳಿದ್ದವು, ಅದು ಒಟ್ಟು ಮೌಲ್ಯ ೫೫೦೭೧ ರೂ. ಗಳು ಏಳೂ ಮುಕ್ಕಾಲಾಣೆ ಆಗಿತ್ತು.

ಮದ್ರಾಸ್‌ನಲ್ಲಿ ಬಾಪೂಜಿ ದಕ್ಷಿಣ ಭಾರತೀಯ ಹಿಂದೂಸ್ತಾನೀ ಪ್ರಚಾರ ಸಭೆಯ ರಜತ ಜಯಂತಿಯನ್ನು ಉದ್ಘಾಟಿಸಿದರು. ಸ್ವತಂತ್ರ ದೇಶಕ್ಕೆ ರಾಷ್ಟ್ರಭಾಷೆ ಬೇಕೇ ಬೇಕು, ೪೦ ಕೋಟಿ ಜನರಲ್ಲಿ ಶೇಕಡಾ ೧ ರಷ್ಟು ಜನರಿಗೂ ಇಂಗ್ಲಿಷ್ ಬರುತ್ತಿರಲಿಲ್ಲ. ಇಂಗ್ಲಿಷ್ ಭಾಷೆಯ ಬಳಕೆ ಗುಲಾಮಗಿರಿಯ ಲಕ್ಷಣವಾಗಿರುತ್ತದೆ, ಸ್ವರಾಜ್ಯವನ್ನು ದೇಶದ ಜನರ ಬಳಿಗೆ ಸರಿಯಾಗಿ ತಲುಪಿಸಬೇಕಾದರೆ ದೇಶದ ಭಾಷೆಯಲ್ಲಿ ಮಾತನಾಡುವುದು, ಚಿಂತಿಸುವುದು, ಬರೆಯುವುದು ಆವಶ್ಯಕ. ೧೯೪೬ರಲ್ಲಿ 'ರಾಷ್ಟ್ರಭಾಷೆಯನ್ನು ನಾವು ನಮ್ಮದಾಗಿಸಿಕೊಳ್ಳದಿದ್ದರೆ ಎಂದೆಂದಿಗೂ ರಾಷ್ಟ್ರಭಾಷೆ ವಿಕಾಸಗೊಳ್ಳುವುದೇ ಇಲ್ಲ,' ಎಂದು ಬಾಪೂಜಿ ತಮ್ಮ ಭಾಷಣದಲ್ಲಿ ಹೇಳಿದರು. ಎಂತಹ ಭವ್ಯ, ಸ್ಪಷ್ಟ ದರ್ಶನವದು. ಇಂದು ಐವತ್ತು ವರ್ಷಗಳ

ನಂತರವೂ ಈ ದೇಶದ ಬಳಿ ತನ್ನದೇ ಆದ ರಾಷ್ಟ್ರಭಾಷೆ ಎಂಬುದಿಲ್ಲ, ಪ್ರಪಂಚದಲ್ಲಿ ಎರಡು ದೇಶಗಳಲ್ಲಿ ಮಾತ್ರ ಇವತ್ತಿಗೂ ಜನ ತಮ್ಮ ಭಾಷೆಯಲ್ಲಿ ಮಾತನಾಡದೆ ಬೇರೆಯವರ ಭಾಷೆಯಲ್ಲಿ ಮಾತನಾಡುತ್ತಾರೆ, ಅದರಲ್ಲಿ ನಾವೊಬ್ಬರು, ಮತ್ತೊಂದು ಪಾಕಿಸ್ತಾನವಾಗಿದೆ. ಸ್ವಾತಂತ್ರ್ಯ ಸಿಕ್ಕ ಸಮಯದಲ್ಲೇ ರಾಷ್ಟ್ರಭಾಷೆ ಜಾರಿಗೆ ಬರಬೇಕು; ಹಾಗಲ್ಲದಿದ್ದರೆ ಅದೆಂದೂ ಜಾರಿಗೆ ಬರುವುದಿಲ್ಲವೆಂದು ಸ್ವಾತಂತ್ರ್ಯ ಸಿಗುವ ಮೊದಲು ಬಾಪೂಜಿ ಹೇಳುತ್ತಿದ್ದರು. ಆಗ ತಮಿಳುನಾಡಿನಲ್ಲಿ ಹಿಂದೂಸ್ತಾನೀ ಪ್ರಚಾರ ಸಭೆ ಬಹಳ ಚೆನ್ನಾಗಿ ನಡೆಯುತ್ತಿತ್ತು, ಎಲ್ಲಾ ವಯಸ್ಸಿನ ಜನರೂ ಹಿಂದೂಸ್ತಾನಿಯಲ್ಲಿ ಬರೆದು, ಓದಿ ಸಂತುಷ್ಟರಾಗಿದ್ದರು. ಎಷ್ಟೋ ಜನ ಆ ಕಾಲದಲ್ಲಿ ಹಿಂದೀ ಪರೀಕ್ಷೆಗಳನ್ನೂ ಪಾಸು ಮಾಡಿದರು. ಆ ಕಾಲದಲ್ಲಿ ಪ್ರಥಮಾ, ಪರಿಚಯ, ಕೋವಿದ ಮುಂತಾದ ಪರೀಕ್ಷೆಗಳು ಮೂರು ತಿಂಗಳಿಗೊಮ್ಮೆ ನಡೆಯುತ್ತಿದ್ದವು. ಇಂದು ಅದೇ ತಮಿಳುನಾಡು ಸರಕಾರ ಆಕಾಶವಾಣಿಯಲ್ಲಿ ಹಿಂದಿ ಸಮಾಚಾರದ ಪ್ರಸಾರಕ್ಕೆ ಅಡ್ಡಿ ಒಡ್ಡುತ್ತಿದೆ, ಪ್ರತಿ ನಾಲ್ಕೈದು ತಿಂಗಳಿಗೊಮ್ಮೆ ಪ್ರಧಾನ ಮಂತ್ರಿಗಳು ದೇಶದ ಮೇಲೆ ಹಿಂದಿಯನ್ನು ಹೊರಿಸುವುದಿಲ್ಲವೆಂದು ವಾಗ್ದಾನ ಮಾಡುತ್ತಾರೆ. ಎಂತಹ ತಮಾಷೆ ! ಪ್ರತಿಯೊಂದು ದೇಶಕ್ಕೂ ತನ್ನದಾದ ರಾಷ್ಟ್ರಧ್ವಜ, ರಾಷ್ಟ್ರಗೀತೆ, ರಾಷ್ಟ್ರಭಾಷೆ ಅನ್ನುವುದಿರುತ್ತದೆ. ಆದರೆ ನಮ್ಮ ರಾಷ್ಟ್ರದಲ್ಲಿ ಮಾತ್ರ ನಮ್ಮ ಭಾಷೆಯಲ್ಲಿ ಮಾತನಾಡಲು ನಾಚಿಕೆ–ಸಂಕೋಚವಾಗುತ್ತದೆ. ಅದ್ಯಾವ ದೀರ್ಘ ದೃಷ್ಟಿಯೋ, ಬಾಪೂಜಿ ಪ್ರಪಂಚವನ್ನು ನೋಡಿ ಅರ್ಥಮಾಡಿಕೊಳ್ಳುತ್ತಿದ್ದರೋ, ಅವರು ಏನೆಲ್ಲಾ ನಿರೀಕ್ಷಿಸಿದ್ದರೋ, ಅವೆಲ್ಲಾ ಪೂರ್ತಿ ಯಥಾರ್ಥವಾಗದೆ. ಅಂತಹ ಭವಿಷ್ಯವೇ ಇಂದು, ಇಷ್ಟು ವರ್ಷಗಳ ನಂತರ ನಡೆಯುತ್ತಲಿದೆ ! ನಮಗೆ ನಮ್ಮ ಭಾಷೆ ಕುರಿತು ಪ್ರೀತಿ, ಗೌರವ ಇಲ್ಲ, ಅದರಿಂದಲೇ ದೇಶ ಕುರಿತು ತಿರಸ್ಕಾರ, ಉದಾಸೀನ ಭಾವ ಉಳಿದುಕೊಂಡಿದೆ. ಅದರಿಂದ ರಾಷ್ಟ್ರಪ್ರೇಮದಂತಹ ಭಾವನೆಗೆ ಅವಕಾಶವೇ ಇರುವುದಿಲ್ಲ, ಜನರಿಗೆ ಹಿಂದೀ ಇಷ್ಟವಿಲ್ಲದಿದ್ದರೆ ತಮಿಳು, ಕನ್ನಡ, ತೆಲುಗು, ಬಂಗಾಳಿ, ಒರಿಯಾ, ಅಸಾಮಿ ಯಾವ ಭಾಷೆಯನ್ನಾದರೂ ರಾಷ್ಟ್ರಭಾಷೆಯಾಗಿ ಮಾಡಿಕೊಳ್ಳಬೇಕು. ಆದರೆ 'ರಾಷ್ಟ್ರಭಾಷೆ' ಇಲ್ಲದಿರುವುದು ಗುಲಾಮಗಿರಿಯ ಲಕ್ಷಣವೇ, ಜೊತೆಗೆ ಅದು ಗುಲಾಮತನವನ್ನು ಪುನಃ ತರುವ ಒಂದು ಕ್ರಮ ಕೂಡ ಆಗುತ್ತದೆ, ರಾಷ್ಟ್ರಭಾಷೆ ಇಲ್ಲದೆ ನಮ್ಮ ದೇಶದ ರಾಷ್ಟ್ರೀಯ ವ್ಯಕ್ತಿತ್ವ ಹರಡಿ ಹಂಚಿಹೋಗುತ್ತಿದೆ.

ಬಾಪೂಜಿ ಯಾವಾಗಲೂ ದೇಶದ ಜನರನ್ನು ಕುರಿತೇ ಚಿಂತಿಸುತ್ತಿದ್ದರು, ಅವರು ಜಾಗೃತರಾಗಿರುವ ರಕ್ಷಕನಂತೆ ಸ್ಥಿತಿಯನ್ನು ಅರ್ಥಮಾಡಿಕೊಂಡರು ಮತ್ತು ದೇಶವನ್ನು ಸ್ವಾಧೀನತೆಗಾಗಿ ಸಿದ್ಧಪಡಿಸತೊಡಗಿದರು. ಕಚ್ಚಾ–ಪಕ್ಕಾ ಹೇಗೋ ಅಹಿಂಸಾ ಮಾರ್ಗದಿಂದಲೇ ದೇಶಕ್ಕೆ ಸ್ವಾತಂತ್ರ್ಯ ಸಿಗುವದಿತ್ತು, ಆದ್ದರಿಂದ ಸ್ವರಾಜ್ಯದ ಸಫಲತೆಗಾಗಿ ಅಹಿಂಸೆ ಬಹಳ ಅಗತ್ಯವಾಗಿತ್ತು. ಈ ದಿನಗಳಲ್ಲೇ ಚತುರ ದೃಷ್ಟಿಯ

ಸರದಾರರು ನೇತಾಜಿ ಸುಭಾಷ್ ಬೋಸರ ಇಂಡಿಯನ್ ನ್ಯಾಷನಲ್ ಆರ್ಮಿಯ (ಆಝಾದ್ ಹಿಂದ್ ಸೈನ್ಯ) ಎಷ್ಟೋ ಅಧಿಕಾರಿಗಳನ್ನು ಗೋಪ್ಯವಾಗಿ ದೆಹಲಿಗೆ ಕರೆತಂದಿದ್ದುದನ್ನು ತಿಳಿದುಕೊಂಡರು. ಅವರ ಮೇಲೆ ಸೈನ್ಯದ್ರೋಹದ ಆಪಾದನೆಯನ್ನೂ ಹೊರಿಸಲಾಗಿತ್ತು. ಈ ಆಪಾದನೆಗೆ ಮೃತ್ಯುದಂಡನೆಯನ್ನು ಸಜೆಯಾಗಿ ವಿಧಿಸುತ್ತಿದ್ದರು. ದೇಶದ ಜನರಿಗೆ ತಮ್ಮ ನೇತಾಜಿ ಅಂದರೆ ಬಹಳ ಪ್ರೀತಿ, ಅವರ ಅಧಿಕಾರಿಗಳ ಮೇಲೆ ಅಂತಹ ಕೇಸು ಹಾಕುವುದು ಅಸಹ್ಯಕರವಾಗಿತ್ತು, ಸರದಾರರಿಂದ ತಿಳಿದ ತಕ್ಷಣ ಬಾಪೂಜಿ ಆ ಅಧಿಕಾರಿಗಳ ವಿಷಯವಾಗಿ ವೈಸ್‌ರಾಯ್‌ಗೆ ಪತ್ರ ಬರೆದರು ಮತ್ತು ಮಾತುಕತೆ ನಡೆಸಿದರು. ಭೂಲಾ ಭಾಯಿಯ ನೇತೃತ್ವದಲ್ಲಿ ಸರದಾರ್ ಪಟೇಲ್ ಮತ್ತು ಪಂಡಿತ ನೆಹರೂ ಇಬ್ಬರೂ ಐ.ಎನ್.ಎ.ಗಳ ವಕೀಲರಾಗಿ ಕೆಲಸ ಮಾಡಿದರು ಮತ್ತು ಕರಿಕೋಟು ಧರಿಸಿ ಕಛೇರಿಯಲ್ಲಿ ವಾದಮಾಡಿದರು. ಬಾಪೂಜಿ ಈ ಬಂದಿಗಳನ್ನು ಭೇಟಿ ಮಾಡಲು ಲಾಲ್‌ಕಿಲಾ ಜೈಲಿಗೆ ಹೋದರು, ಮೃತ್ಯುದಂಡನೆಯನ್ನು ಎದುರುನೋಡುತ್ತಿದ್ದ ಈ ಅಧಿಕಾರಿಗಳು ಶಾಂತರಾಗಿ ಪ್ರಸನ್ನರಾಗಿದ್ದರು. ಈ ಸೈನಿಕರು ಪೌರುಷದಿಂದ ದೇಶಕ್ಕಾಗಿ ಹೋರಾಡಿದ್ದರು, ಅದೇ ಧೈರ್ಯದಿಂದ ನಿಸ್ಪೃಹರಾಗಿ ಗಲ್ಲಿಗೇರಲು ಕೂಡ ಸಿದ್ಧರಾಗಿದ್ದರು. ಎಲ್ಲಕ್ಕಿಂತ ಹೆಚ್ಚಿನ ಇವರ ಗಳಿಕೆ ಎಂದರೆ ಇವರುಗಳು ಹಿಂದೂ–ಮುಸಲ್ಮಾನರ ಭೇದವನ್ನೇ ಮರೆತಿದ್ದವರು. ಇವರಲ್ಲಿ ಜನರಲ್ ಮೋಹನಸಿಂಹ, ಮೇಜರ್ ಜನರಲ್ ಶಾಹನವಾಝ್ ಖಾನ್, ಕರ್ನಲ್ ಹಬೀಬುರ್‌ರೆಹಮಾನ್, ಮೇಜರ್ ಜನರಲ್ ಲೋಕನಾಥನ್, ಕ್ಯಾಪ್ಟನ್ ಲಕ್ಷ್ಮಿ ಮುಂತಾದವರು ಪ್ರಮುಖರಾಗಿದ್ದವರು. ಅಹಿಂಸಾತ್ಮಕ ಆಂದೋಳನ ಹೆಚ್ಚು ಉಪಯೋಗಕರವಾಗಿ ನಮ್ಮ ದೇಶಕ್ಕೆ ಅನುಕೂಲವಾದದ್ದು ಎಂದು ಈ ಸಶಸ್ತ್ರ ಸೈನಿಕರುಗಳಿಗೂ ಅನಿಸಿತು. ನೇತಾಜಿ ಬದುಕಿದ್ದಾರೋ, ಇಲ್ಲವೋ ಎಂಬುದು ಯಾರಿಗೂ ಸರಿಯಾಗಿ ಗೊತ್ತಿರಲಿಲ್ಲ, ಆದುದರಿಂದ ಬಾಪೂಜಿ ನೇತಾಜಿಯವರ ಬಗ್ಗೆ ನಿಜವಾದ ಸಮಾಚಾರ ಏನೆಂದು ಕೇಳಿದರು. ಕರ್ನಲ್ ಹಬೀಬುರ್ ರೆಹಮಾನ್ ಕೊನೆಯವರೆಗೂ ನೇತಾಜಿ ಜೊತೆಗಿದ್ದರು, ಅವರು ಬೆಳಿಗ್ಗೆ ೯–೩೦ ಗಂಟೆಗೆ (ನೇತಾಜಿಯವರ ವಿಮಾನ ದುರ್ಘಟನೆಗೀಡಾಗಿ ಕೆಳಗೆಬಿತ್ತೆಂದು ತಿಳಿಸಿದರು). ನೇತಾಜಿ ಸಾಕಷ್ಟು ಸುಟ್ಟು ಹೋಗಿದ್ದರು, ಆದರೆ ಅವರು ಅಯ್ಯೋ ಎಂದು ಕೂಡ ಅನ್ನಲಿಲ್ಲ, ಸುಮ್ಮನೆ ಸಹಿಸುತ್ತಿದ್ದರು, ಮಧ್ಯಾಹ್ನ ೩–೩೦ ಗಂಟೆಗೆ ಅವರು ತೀರಿಕೊಂಡರು. ಸಾಯುವ ಮುಂಚೆ ಅವರು, “ನನ್ನ ದೇಶವಾಸಿಗಳಿಗೆ ಮತ್ತು ಮಿತ್ರರಿಗೆ ತಿಳಿಸು, ನಾನಂತೂ ಹೋಗುತ್ತಿದ್ದೇನೆ, ಆದರೆ ದೇಶ ಸ್ವತಂತ್ರವಾಗುವವರೆಗೂ ಸ್ವಾತಂತ್ರ್ಯ ಹೋರಾಟ ನಡೆಯುತ್ತಲೇ ಇರಲಿ” ಎಂದು ಹೇಳಿದರು, ಕೊನೆಯ ಉಸಿರಿರುವವರೆಗೂ ನೇತಾಜಿಗೆ ಪ್ರಜ್ಞೆ ಇತ್ತು. ಬಾಪೂಜಿಗೆ ಇದನ್ನು ತಿಳಿಸುವಾಗ ಕರ್ನಲ್ ಹಬೀಬುರ್

ರೆಹಮಾನ್ ಅಳತೊಡಗಿದ್ದರು.

ಬಾಪೂಜಿಗೆ ನೇತಾಜಿ ಇಷ್ಟವಿರಲಿಲ್ಲವೆಂಬ ಅವ್ಯಕ್ತ ಭಾವನೆ ನಮ್ಮ ದೇಶದಲ್ಲಿ ಮೂಡಿದೆ. ಅವರ ಬಗ್ಗೆ ಹೊಟ್ಟೆಯ ಕಿಚ್ಚಿತ್ತು, ಅದರಿಂದ ಕಾಂಗ್ರೆಸ್ ನೇತಾಜಿಗೆ ಅನ್ಯಾಯ ಮಾಡಿತು ಎಂಬ ಭಾವನೆ ಇದೆ. ನನಗಂತೂ ಆಗ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವ ಯೋಗ್ಯತೆ ಇರಲಿಲ್ಲ, ಆದ್ದರಿಂದ ಆ ದಿನಗಳ ನಿಜವಾದ ವಾಸ್ತವತೆಯ ನೆನಪು–ಸಂಸ್ಕಾರ ನನ್ನ ಮಾನಸದಲ್ಲಿಲ್ಲ. ಆದರೆ ನಮ್ರತೆಯಿಂದ ಇಷ್ಟು ಮಾತ್ರ ಹೇಳಬಲ್ಲೆ, ಬಾಪೂಜಿಯಲ್ಲಿ ಅಂತಹ ತುಚ್ಛತೆ ಸ್ವಲ್ಪ ಕೂಡ ಇರಲಿಲ್ಲ, ಬಾಪೂಜಿ ಯಾರೊಂದಿಗಾದರೂ ದೃಢವಾಗಿ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳುವ ಆತ್ಮಸ್ಥೈರ್ಯ ಹೊಂದಿದ್ದವರಾದ್ದರಿಂದ ಯಾರ ಬಗ್ಗೆಯೂ ಹೊಟ್ಟೆಕಿಚ್ಚುಪಡುವ ಇಲ್ಲವೇ ಹೆದರುವ ಅಗತ್ಯವೇ ಇರಲಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ ಬಾಪೂಜಿ ಅತಿ ಚಿಕ್ಕ ಜನರನ್ನೂ ಶ್ರೇಷ್ಠ ಸತ್ಯಾಗ್ರಹಿಯಾಗಿ ನಿಲ್ಲಿಸುವ ವಿಶೇಷತೆ ಹೊಂದಿದ್ದವರು. ಅವರಂತೂ ನೇತಾಜಿಯ ಕರ್ತವ್ಯಪರಾಯಣತೆ ಮತ್ತು ಶಕ್ತಿಯನ್ನು ತುಂಬ ಪ್ರಶಂಸಿಸುತ್ತಿದ್ದರು. ದೇಶದ ರಾಜಕೀಯದಲ್ಲಿ ಬಾಪೂಜಿ ಇದ್ದ ಸ್ಥಿತಿಯಲ್ಲಿ ಹೊಟ್ಟೆಕಿಚ್ಚು ಪಡಲು ಕಾರಣವೇ ಇರಲಿಲ್ಲ, ಎಷ್ಟೋ ವರ್ಷಗಳಿಂದ, ಸುಮಾರು ೧೯೩೨ರ ನಂತರ, ಬಾಪೂಜಿ ದೇಶದ ರಾಜಕೀಯದಲ್ಲಿ ಯಾವ ಅಧಿಕಾರವನ್ನೂ ಇಷ್ಟಪಟ್ಟಿರಲಿಲ್ಲ, ಅವರಂತೂ ಕಾಂಗ್ರೆಸ್‌ನ ನಾಲ್ಕಾಣೆ ಸದಸ್ಯರೂ ಆಗಿರಲಿಲ್ಲ. ಬಾಪೂಜಿಗೆ ನೇತಾಜಿಯವರ ದಕ್ಷತೆ, ಕುಶಲತೆ, ತಪಸ್ಸು ಮತ್ತು ಅಪ್ರತಿಮವಾದ ದೇಶಭಕ್ತಿ ಕುರಿತು ಅಪಾರ ಗೌರವ–ಪ್ರೀತಿ ಇತ್ತು. ಬಾಪೂಜಿ ದೇಶದ ಸಾವಿರಾರು ಜನರನ್ನು ಪುತ್ರರಂತೆ ಭಾವಿಸಿದ್ದರು. ಅಂಥದ್ದರಲ್ಲಿ ನೇತಾಜಿಯ ಬಗ್ಗೆ ಮಾತ್ರ ಅನ್ಯಾಯ ಮಾಡಿದರೆಂದೊಪ್ಪುವುದು ತಾರ್ಕಿಕವಾಗಿ ಸರಿಯೆನಿಸುವುದಿಲ್ಲ, ಒದುಗರು ಮೊಮ್ಮಗಳು ಪಕ್ಷಪಾತ ಮಾಡಿ ತನ್ನಜ್ಜನ ದೌರ್ಬಲ್ಯಕ್ಕೆ ರಕ್ಷಣೆ ನೀಡುತ್ತಿದ್ದಾಳೆಂದು ಭಾವಿಸಬಾರದು. ಇಂದಿಗೂ ನನಗೆ ನೇತಾಜಿಯವರ ಅಕಾಲ ಮೃತ್ಯುವನ್ನು ಕುರಿತು ದುಃಖವಿದೆ, ಅವರ ಶೌರ್ಯ, ಮೋಹಕ ವ್ಯಕ್ತಿತ್ವ ಮತ್ತು ಅದ್ಭುತ ಪರಾಕ್ರಮ ಹೃದಯದಲ್ಲಿ ನೆಲೆಗೊಂಡಿವೆ. ಇವತ್ತು ಕೂಡ ನೇತಾಜಿಯವರನ್ನು ನೆನೆಸಿಕೊಂಡು ನನ್ನ ಮನಸ್ಸು ರೋಮಾಂಚನಗೊಳ್ಳುತ್ತದೆ. ಆದರೆ ಈಗ ಅರ್ಧ ಶತಮಾನದ ಸುಖ–ದುಃಖವನ್ನು ಸಹಿಸಿದ ನಂತರ ನನಗನಿಸುವುದು ಇಷ್ಟೇ, ನಮ್ಮಜ್ಜ ತೋರಿಸಿದ್ದ ಮಾರ್ಗವಷ್ಟೇ ಈ ದೇಶಕ್ಕೆ ಸ್ವಾತಂತ್ರ್ಯಕೊಡಿಸಲು ಸರಿಯಾಗಿತ್ತು ಎಂಬುದು ಸರಿಯಲ್ಲ. ಅವರ ಅಹಿಂಸೆ ಮತ್ತು ಸತ್ಯದರ್ಶನ ಸ್ವಂತದ್ದಾಗಿದ್ದವು, ನೂರಾರು ವರ್ಷಗಳ ನಂತರವೂ ಈ ಶಾಶ್ವತ ಸಿದ್ಧಾಂತಗಳ ಉಪಯೋಗ ಮತ್ತದರ ಸತ್ಯ ಕಡಿಮೆಯಾಗುವುದಿಲ್ಲ. ನೇತಾಜಿಯ ಉತ್ಕಟ ರಾಷ್ಟ್ರಪ್ರೇಮಕ್ಕೆ ಅಹಿಂಸಾತ್ಮಕ ಚಳವಳಿಯ ಮಾರ್ಗ ಕಡಿಮೆ ಪ್ರಭಾವಶಾಲಿಯೆಂದೆನಿಸಿರಬಹುದು, ಅಹಿಂಸಾತ್ಮಕ ಹೋರಾಟದ ಬಹಳ ಎಳೆದಾಡುವ

ಉದ್ದದ ಮಾರ್ಗ, ಬಹುಶಃ ಅವರ ತೇಜಸ್ವೀ ಸ್ವಭಾವಕ್ಕೆ ಸಹಿಸಲಿಕ್ಕಾಗಲಿಲ್ಲ ಅನಿಸುತ್ತದೆ. ಏನೇ ಆಗಲಿ, ದೇಶವನ್ನು ದಾಸ್ಯದ ಬೇಡಿಗಳಿಂದ ಬಿಡಿಸಲು ಹಿಂಸೆಯ ಮಾರ್ಗವನ್ನನುಸರಿಸಬೇಕಾದರೂ ಅದು ತಪ್ಪಲ್ಲ ಎಂದು ನೇತಾಜಿ ಭಾವಿಸಿದ್ದರು. ಬಾಪೂಜಿ ಸಾಧನೆಯಿಂದ ಸಿದ್ಧಿ ಪಡೆಯುವ ಪಟ್ಟುಹಿಡಿಯುತ್ತಿದ್ದಾರೆಂಬುದು ಪ್ರಸಿದ್ಧವಾದ ವಿಷಯ. ಹಿಂಸೆ–ಅಹಿಂಸೆ ಎರಡನ್ನೂ ಸಮಯ ಬಿದ್ದಾಗ ಪ್ರಯೋಗಿಸಿದಾಗ ಸ್ವಾತಂತ್ರ್ಯದ ಶುದ್ಧ ಸಂಕಲ್ಪ ಸಿದ್ಧಿಸುತ್ತಿರಲಿಲ್ಲವೆಂದು ಬಾಪೂಜಿ ದೃಢವಾಗಿ ನಂಬಿದ್ದರು. ಆದ್ದರಿಂದ ಬಹುಶಃ ನೇತಾಜಿಗೆ ಬಾಪೂಜಿಯ ರೀತಿ ಒಪ್ಪಿಗೆಯಾಗದಿರಬಹುದು. ಒಬ್ಬ ಆದರ್ಶ ಪುತ್ರನ ಹಾಗೆ ಅವರು ಯಶಸ್ವೀ ತಂದೆಯೊಂದಿಗೆ ವಿಚಾರಭೇದದಿಂದಾಗಿ ಬೇರೆ ಕಾರ್ಯಕ್ಷೇತ್ರವನ್ನು ರಚಿಸಿರಬೇಕು, ದೇಶಪ್ರೇಮದಿಂದ ಪ್ರೇರಿತರಾಗಿ ಅವರು ಜಪಾನ್ ಮತ್ತು ಜರ್ಮನಿಯಂತಹ ದೇಶಗಳೊಂದಿಗೆ ಗುಪ್ತಸಂಧಿ ರಚಿಸಿಕೊಂಡು ಆಜ಼ಾದ್ ಹಿಂದ್ ಸೈನ್ಯ (ಇಂಡಿಯನ್ ನ್ಯಾಷನಲ್ ಆರ್ಮಿ)ವನ್ನು ಸಿದ್ಧಪಡಿಸಿದ್ದರು. ಈ ಸರ್ವಾಧಿಕಾರಿ ರಾಷ್ಟ್ರಗಳಿಂದ ಸಹಾಯ ಪಡೆದು ನೇತಾಜಿ ದೇಶವನ್ನು ದಾಸ್ಯದಿಂದ ಮುಕ್ತಗೊಳಿಸಬಯಸುತ್ತಿದ್ದರು. ಆದರೆ ದೈವೇಚ್ಛೆ ವಿಚಿತ್ರವಾಗಿರುತ್ತದೆ, ನಮ್ಮ ದುರ್ಭಾಗ್ಯದಿಂದಾಗಿ ಶರೀರಕ್ಕೆ ಬೆಂಕಿ ತಗುಲಿ ಅವರಿಗೆ ಅಕಾಲ ಮೃತ್ಯು ಸಂಭವಿಸಿತು. ಎಂತಹ ದಾರುಣ ಶಾರೀರಿಕ ವೇದನೆ, ಎಂತಹ ನಿರಾಶೆ ! ಗುರಿ ತಲುಪುವ ಮೊದಲೇ ವಿದೇಶದ ಅಪರಿಚಿತ ಭೂಮಿಯಲ್ಲಿ, ಅಪರಿಚಿತ ಜನರ ನಡುವೆ ತನ್ನ ಒಂಟಿತನವನ್ನಿಟ್ಟುಕೊಂಡು ನೇತಾಜಿ ಎಂದೆಂದಿಗೂ ಚಿರನಿದ್ರೆಯಲ್ಲಿ ಮಲಗಿದರು. ಇಂದು ಆ ವೀರ ಏನಾದರೂ ಬದುಕಿದ್ದಿದ್ದರೆ ಈ ರಾಷ್ಟ್ರದ ಪ್ರಥಮ ನಾಗರಿಕನಾಗಿರುತ್ತಿದ್ದರು. ಅವರ ಚಟುವಟಿಕೆ ಮತ್ತು ದೇಶಪ್ರೇಮ ಇಂದಿನ ನಿರುತ್ಸಾಹಿತ ಯುವಕರನ್ನು ಜಾಗೃತಗೊಳಿಸಿ, ತೇಜಸ್ವಿಗಳನ್ನಾಗಿ ಮಾಡುವಂಥದ್ದಾಗಿತ್ತು. ಆಗ ದೇಶದ ಜನ ಸ್ವಾತಂತ್ರ್ಯದ ನಿಜವಾದ ಸುಖ ಪಡೆಯಬಹುದಿತ್ತು. ಅವರ ರಾಷ್ಟ್ರಪ್ರೇಮದ ಸಮರ್ಪಣೆಯಲ್ಲಿ ಸ್ವಾತಂತ್ರ್ಯ ಹೆಚ್ಚು ಸ್ಥಿರವಾಗಿರುತ್ತಿತ್ತು. ನಮ್ಮ ವಿಕಾಸಕ್ರಮ ಶಕ್ತಿಶಾಲಿಯಾಗಿದ್ದು ಸಫಲವಾಗುತ್ತಿತ್ತು, ನೇತಾಜಿಯ ಅಕಾಲಿಕ ಮೃತ್ಯುವಿನಿಂದ ದೇಶಕ್ಕೆ ಬಹಳ ನಷ್ಟವಾಯಿತು.

* * * *

# ೨೮. ಸ್ವಾತಂತ್ರ್ಯದ ದಿಕ್ಕಿನಲ್ಲಿ

೧೯೪೫ರಲ್ಲಿ ದೇಶದಲ್ಲಿ ಎಲ್ಲ ಕಡೆ ವಿಚಿತ್ರವಾದೊಂದು ಉತ್ಸಾಹ. ಅದನ್ನು ನೋಡಿ ಜನ ತಮ್ಮ ಕಷ್ಟ ದುಃಖ, ಕ್ಷಾಮ, ಅತ್ಯಾಚಾರ ಎಲ್ಲವನ್ನೂ ಮರೆತುಬಿಟ್ಟಿದ್ದರು. ಸ್ವಾತಂತ್ರ್ಯಕ್ಕಾಗಿ ಕಾದುಕೊಂಡು ಸುಖವಾಗಿದ್ದಾರೆ ಅಂತ ಅನಿಸುತ್ತಿತ್ತು. ಹೇಳತೀರದ ಸ್ಫೂರ್ತಿಯದು, ಉತ್ಸುಕತೆ ಎಲ್ಲರ ಹೃದಯದಲ್ಲೂ ತುಂಬಿಕೊಂಡಿತ್ತು. ಪೊಲೀಸ್, ಸೈನ್ಯಕ್ಕೂ ಕೂಡ ಈ ಅಲೆ ಹರಡಿಕೊಂಡಿತ್ತು, ಅಂತಹ ವಾತಾವರಣ, ಅದರಲ್ಲಿ ೧೯೪೬ರ ಚುನಾವಣೆಗಳು ನಡೆದವು. ೧೧ ಪ್ರಾಂತಗಳಲ್ಲಿ ಕಾಂಗ್ರೆಸ್‌ಗೆ ಬಹುಮತ ಸಿಕ್ಕಿತು.

'ಭಾರತ್ ಛೋಡೋ' ಪ್ರಸ್ತಾವ ಹೊರಮೂಡಿದ ಮೇಲೆ ಕಾಂಗ್ರೆಸ್ಸಿಗರನ್ನು ಜೈಲಿಗೆ ದೂಡಿದ್ದರು. ಆ ನಾಲ್ಕು ವರ್ಷಗಳ ಅವಧಿಯಲ್ಲಿ ಮುಸ್ಲಿಂ ಲೀಗ್ ನಿರಾತಂಕವಾಗಿ ತನ್ನ ಕಾಲನ್ನು ನೀಡಿಕೊಳ್ಳುವುದಕ್ಕೆ ಅವಕಾಶ ಸಿಕ್ಕಿತು. ಲಾರ್ಡ್ ಲೀನ್‌ಲಿಥ್‌ಗೋ ಸರಕಾರ ಕೂಡ ಎಲ್ಲರೆದುರಿಗೇ ಮುಸ್ಲಿಂ ಲೀಗ್‌ಗೆ ಪ್ರೋತ್ಸಾಹ ನೀಡಿತ್ತು. ಹೀಗಾಗಿ ಮುಸ್ಲಿಂ ಲೀಗ್ ಈಗ ಬಹುಮತದಲ್ಲಿತ್ತು. ಅಲ್ಲಿ ಅದರದ್ದು ಪ್ರಾಂತ ಸರಕಾರ ಕೂಡ ರಚಿತವಾಗಿತ್ತು, ಪಂಜಾಬ್, ಗಡಿನಾಡಿನಲ್ಲಿ ಎಲ್ಲ ಕಡೆಗಿಂತ ಹೆಚ್ಚು ಆಶ್ಚರ್ಯ ಮೂಡಿಸುವಂಥ ಪರಿಣಾಮ ಬಂದಿತ್ತು. ಪಂಜಾಬಿನಲ್ಲಿ ಯೂನಿಯನ್ ಪಾರ್ಟಿ ಸಾಕಷ್ಟು ಸೀಟ್ ಗೆದ್ದುಕೊಂಡಿತ್ತು, ಮುಸ್ಲಿಂ ಲೀಗ್ ಸೋತುಹೋಗಿತ್ತು. ಯೂನಿಯನ್ ಪಾರ್ಟಿ ಮತ್ತು ಕಾಂಗ್ರೆಸ್ ಇವೆರಡೂ ಸೇರಿಕೊಂಡು ಸರಕಾರ ರಚಿಸಿದವು. ಗಡಿನಾಡಿನಲ್ಲಿ ಬಾದಶಾಹ್ ಖಾನ್‌ರ ಖುದಾಯೀ ಖಿದಮತ್‌ಗಾರರು ಪಾಕಿಸ್ತಾನವನ್ನು ತೊರೆದು ಕಾಂಗ್ರೆಸ್ ಸರಕಾರವನ್ನು ರಚಿಸಿದರು, ಇನ್ನೂ ದೇಶದ ಕೇಂದ್ರ ತಂತ್ರವನ್ನು ವ್ಯವಸ್ಥೆಗೊಳಿಸಬೇಕಾಗಿತ್ತು. ಹೀಗೆ ನಾಜೂಕಾಗಿದ್ದ ಮಂತ್ರಾಲೋಚನೆಯನ್ನು ಲಾರ್ಡ್ ಬೆವೆಲ್ ಒಂಟಿಯಾಗಿ ನಿರ್ವಹಿಸಲು ಸಮರ್ಥರಾಗಿರಲಿಲ್ಲ. ಅದರಿಂದ ಬ್ರಿಟನ್‌ನ ಹೊಸ ಲೇಬರ್ ಪಾರ್ಟಿಯ ಸರಕಾರ ಫೆಬ್ರವರಿ ೧೬, ೧೯೪೬ರಂದು ಮೂರು ಜನ ಸದಸ್ಯರಿರುವ ಕ್ಯಾಬಿನೆಟ್ ಮಿಷನ್ ರಚಿಸಿರುವದೆಂದು ಘೋಷಿಸಿತು. ಅದರ ಜೊತೆಗೆ ೧೯೪೫ರ ಶಿಮಲಾ ಪರಿಷತ್ತು ಅಸಫಲವಾದಂತೆ ಈ ಕಮೀಷನ್ ಕೂಡ ಅಸಫಲವಾಗದಿರಲಿ ಎಂಬ ಉದ್ದೇಶದಿಂದ ಮೂರು ಮೂಲ ಸಿದ್ಧಾಂತಗಳನ್ನು ಪ್ರತಿಪಾದಿಸಿತು.

- ಅಲ್ಪಸಂಖ್ಯಾತರಿಗೆ ರಾಜಕೀಯ ಪ್ರಗತಿಯಲ್ಲಿ ವಿಟೋ ಹಕ್ಕು ಇರುವುದಿಲ್ಲ.
- ದೇಶೀ ರಾಜರಿಗೂ ಸ್ವಾತಂತ್ರ್ಯದಲ್ಲಿ ಅಡ್ಡಿ ಹಾಕಲು ಅಥವಾ ತಡ ಮಾಡುವ ಹಕ್ಕು ಇರುವುದಿಲ್ಲ.
- ದೇಶಕ್ಕೆ ಪೂರ್ಣ ಸ್ವಾತಂತ್ರ್ಯ ನೀಡುವುದಕ್ಕಾಗಿ ತಕ್ಷಣ ಅಧಿಕಾರವನ್ನು ವರ್ಗಾಯಿಸಲಾಗುವುದು.

ಕಾಂಗ್ರೆಸ್ ಈ ಆಳುವವರ ಕೈಲಿ ಬೇಕಾದಷ್ಟು ಬಾರಿ ಮೋಸಹೋಗಿತ್ತು, ವಿಶ್ವಾಸದ್ರೋಹ ಮಾಡಿಸಿಕೊಂಡಿತ್ತು. ಹೀಗಾಗಿ ದೇಶದ ಜನರಿಗೆ ಕ್ಯಾಬಿನೆಟ್ ಮಿಷನ್ ಬಗ್ಗೆ ನಂಬಿಕೆ ಇರಲಿಲ್ಲ. ಸ್ವಾತಂತ್ರ್ಯ ಕೊಡದೆ ಇರುವುದಕ್ಕಾಗಿ ಇದೊಂದು ಹೊಸ ನೆವ ಹೂಡುತ್ತಿರಬೇಕೆಂದು ದೇಶದ ಜನ ಭಾವಿಸದ್ದರು. ಆದರೆ ದೇಶದ ಜನರು, ಕಾಂಗ್ರೆಸ್ ಕಾರ್ಯಕರ್ತರಲ್ಲಿ ಬಾಪೂಜಿ ಉತ್ಸಾಹ ತುಂಬುತ್ತ ಇದ್ದರು. ಇಂಗ್ಲಿಷ್‌ನವರ ಬಗ್ಗೆ ಜನರು ಅಪನಂಬಿಕೆ ಪಡುತ್ತಿದ್ದುದನ್ನು ಕಡಿಮೆ ಮಾಡಲು ಪ್ರಯತ್ನಿಸಿದರು. ಸತ್ಯಾಗ್ರಹ, ಚಳವಳಿಯ ರಾಜಕೀಯ ಮಾಡುವ ಕಾಲ ಕಳೆಯಿತು, ಶಾಂತಿಯಿಂದ ಕುಳಿತುಕೊಂಡು ಮಂತ್ರಾಲೋಚನೆ, ವಿಚಾರ–ವಿಮರ್ಶೆ ಮಾಡಬೇಕು, ದೇಶದ ಸಂವಿಧಾನಾತ್ಮಕ ವಿಷಯಗಳನ್ನು ಕುರಿತು ನಮ್ಮ ಕೌಶಲವನ್ನು ತೋರಿಸಬೇಕು ಎಂಬುದು ಬಾಪೂಜಿ ಅಭಿಪ್ರಾಯ ಆಗಿತ್ತು.

ಸ್ವಾತಂತ್ರ್ಯಕ್ಕೆ ಪೂರ್ವಸಿದ್ಧತೆ ಅಂತ ಬಿಡಲಾ ಅವರ ಸುಂದರ ಭವನದಲ್ಲಿ ಇರದೆ ಬಾಪೂಜಿ ಅವರು ದೆಹಲಿಯ ವಾಲ್ಮೀಕಿ ಮಂದಿರದ ಹತ್ತಿರ ಭಂಗೀ ಕಾಲೋನಿ ನಡುವೆ ಇರಲು ನಿಶ್ಚಯಿಸಿದರು. ಹರಿಜನರ ಉತ್ಥಾನ ಆಗುವವರೆವಿಗೂ ಸ್ವಾತಂತ್ರ್ಯ ಪೂರ್ತಿ ಆಗುವುದಿಲ್ಲವೆಂದು ಭಾವಿಸಿದ ಬಾಪೂಜಿ, ಅದರ ಮೊದಲ ಹೆಜ್ಜೆಯಾಗಿ ಈ ದಿಕ್ಕನ್ನು ಆರಿಸಿಕೊಂಡರು. ಭಂಗೀಕಾಲೋನಿಯಲ್ಲಿದ್ದ ಒಂದು ಚಿಕ್ಕ ಮನೆಯಲ್ಲಿ ಬಾಪೂಜಿ ಉಳಿದುಕೊಂಡಿದ್ದರು. ಅದೇ ಅನಂತರದಲ್ಲಿ ಅನಾಯಾಸವಾಗಿ ರಾಷ್ಟ್ರಪತಿ ಭವನದ ಗೌರವ ಪಡೆದುಕೊಂಡಿತು. ಅಲ್ಲಿಂದಲೇ ದೇಶದ ಮಹತ್ವದ ನಿರ್ಣಯಗಳು ಹೊರಮೂಡಿದವು, ಮಧ್ಯದಲ್ಲಿ ಅವಕಾಶ ಮಾಡಿಕೊಂಡು ಬಾಪೂಜಿ ಈ ಬಡವರ ಝುಗ್ಗಿ –ಝೋಪಡಿಗಳಿಗೂ ಹೋಗಿ ಅವರ ಕಷ್ಟ – ಕಾರ್ಪಣ್ಯಗಳನ್ನು ಕೊನೆಗೊಳಿಸಲು ಉಪಾಯ ಹುಡುಕುತ್ತಿದ್ದರು. ಈ ಕೊಳಚೆ ಪ್ರದೇಶಕ್ಕೆ ನೀರು–ವಿದ್ಯುತ್ತು ಸರಿಯಾಗಿ ಒದಗಿಸಲೆಂದು ಬಾಪೂಜಿ ದೆಹಲಿ ಮುನಿಸಿಪಾಲಿಟಿ ಜೊತೆ ಪತ್ರವ್ಯವಹಾರ ನಡೆಸಿದರು. ಈ ದೀನ–ದಲಿತರು ಸ್ವಾವಲಂಬಿಗಳಾಗಲಿ ಎಂಬ ಉದ್ದೇಶದಿಂದ ಅವರಿಗಾಗಿ ಹನ್ನೊಂದು ದಿವಸಗಳ ಚರಖಾ ತರಗತಿಗಳನ್ನು ಕೂಡ ನಡೆಸಿದ್ದರು, ಅದರಲ್ಲಿ ಕೆಲವರು ವಿದೇಶಿಗಳು ಕೂಡ ಭಾಗವಹಿಸಿದ್ದರು. ಸುಮಾರು ಏಳು ದಿನಗಳಲ್ಲಿ ಎಲ್ಲರೂ ಚೆನ್ನಾಗಿ ನೂಲು ತೆಗೆಯುವುದನ್ನ ಕಲಿತರು, ತಮಗೆ ಎಷ್ಟು ಬೇಕೋ ಅಷ್ಟು ಹತ್ತಿಯನ್ನು ಬಿಡಿಸಿ

ಪಿಂಜಿ ಮಾಡುವುದನ್ನು ಕಲಿತರು. ಕೊನೆಯ ದಿನ ನೂರ ಹತ್ತು ಜನ ಪರೀಕ್ಷೆಯನ್ನು ತೆಗೆದುಕೊಂಡಿದ್ದರು. ಅಷ್ಟೂ ಜನ ಉತ್ತೀರ್ಣರಾದರು. ಈ ಭಂಗಿ ಕಾಲೋನಿಯ ಜನರಿಗೆ ಚರಖಾ ತಿರುಗಿಸುವ ಚಟ ಹತ್ತಿಕೊಂಡಿತು, ಕೊನೆಗೆ ಅವರೆಲ್ಲ ಸೇರಿ ಏಳು ಲಕ್ಷ ಎಪ್ಪತ್ತೈದು ಸಾವಿರ ಕಚ್ಚಾ ನೂಲೆಳೆ ತೆಗೆದು ಬಾಪೂಜಿಯ ಎಪ್ಪತ್ತೈದನೆಯ ಹುಟ್ಟುಹಬ್ಬದ ದಿನ ಅವರಿಗೆ ಅರ್ಪಿಸಿದರು.

೨೪ ಮಾರ್ಚ ೧೯೪೬ರಂದು ಕ್ಯಾಬಿನೆಟ್ ಮಿಷನ್ ದೆಹಲಿಗೆ ಬಂದು ತಲುಪಿತು. ಲಾರ್ಡ್ ಪೆಥಿಕ್ ಲಾರೆನ್ಸ್ ಮತ್ತು ಸರ್ ಸ್ಟಾಫರ್ಡ್ ಕ್ರಿಪ್ಸ್, ಎ.ಬಿ. ಎಲೆಕ್ಸಾಂಡರ್ ಅದರ ಸದಸ್ಯರಾಗಿದ್ದರು. ಪೆಥಿಕ್ ಲಾರೆನ್ಸ್ ಮತ್ತು ಸರ್ ಸ್ಟಾಫರ್ಡ್ ಬಾಪೂಜಿಯ ಮಿತ್ರರಾಗಿದ್ದರು. ಕ್ಯಾಬಿನೆಟ್ ಮಿಷನ್ ಹಿಂದೂಸ್ತಾನಕ್ಕೆ ಈ ಬಾರಿ ಬಂದಾಗ ಹಳೆಯ ಜರ್ಬಿನ ರೀತಿಯನ್ನು ತೊರೆದು ಬಹಳ ಸರಳವಾಗಿ, ಆತ್ಮೀಯ ಶೈಲಿಯಲ್ಲಿ ಬಂದಿತ್ತು. ಅದನ್ನು ನೋಡಿ ಜನರಿಗೆ ಅವರನ್ನು ಕುರಿತು ಗೌರವ ಮೂಡಿತು. ಹದಿನೆಂಟರಿಂದ ಇಪ್ಪತ್ತು ದಿನಗಳವರೆಗೆ ಅವರು ಸುಮಾರು ಐದುನೂರು ಜನರ ಸಂದರ್ಶನ ತೆಗೆದುಕೊಂಡು ದೇಶದ ಬೇರೆ-ಬೇರೆ ಮುಖಂಡರ ಅಭಿಪ್ರಾಯಗಳನ್ನ ಸಂಗ್ರಹಿಸಿ, ಎಲ್ಲರಿಗೂ ಒಪ್ಪಿಗೆಯಾಗುವಂಥ ಒಂದು ಒಪ್ಪಂದ ಮೂಡಿಸುವುದಕ್ಕಾಗಿ ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ಅದನ್ನು ನೋಡಿ ದೇಶದ ಜನರಿಗೆ ಸಂತೋಷವಾಯಿತು, ಇನ್ನೇನು ಇವತ್ತು - ನಾಳೆ ಸ್ವಾತಂತ್ರ್ಯ ಸಿಗುತ್ತದೆ ಅನ್ನುವಂಥ ಆಶಾದಾಯಕ, ವಾತಾವರಣ ಹುಟ್ಟಿಕೊಂಡಿತು. ಮೇ ತಿಂಗಳಲ್ಲಿ ಪೆಥಿಕ್ ಲಾರೆನ್ಸನು ಇಂಗ್ಲಿಷ್ ಸರಕಾರ ೧೬ ಜೂನ್ ೧೯೪೬ಕ್ಕೆ ಈ ದೇಶಕ್ಕೆ ಸ್ವಾತಂತ್ರ್ಯ ಕೊಟ್ಟು ತನ್ನ ದೇಶಕ್ಕೆ ಹಿಂದಿರುಗುತ್ತದೆಂದು ಘೋಷಣೆ ಕೂಡ ಮಾಡಿದ. ಇಂತಹ ಸದಿಚ್ಛೆಯನ್ನಿಟ್ಟುಕೊಂಡಿದ್ದಾಗ ಕೂಡ ಕ್ಯಾಬಿನೆಟ್ ಮಿಷನ್‌ನ ದೃಷ್ಟಿಕೋನ ಹಾಗೂ ಕಾಂಗ್ರೆಸ್ ಚಿಂತಿಸುವ ಶೈಲಿಯಲ್ಲಿ ಅಜಗಜಾಂತರ ಅಂತರವಿತ್ತು. ಕೊನೆಗೆ ೧೯೪೫ರ ಮೊದಲ ಶಿಮಲಾ ಸಮ್ಮೇಳನದ ರೀತಿಯಲ್ಲೇ ಮೇ ತಿಂಗಳ ಶಿಮಲಾ ಪರಿಷತ್ತು ಕೂಡ ವಿಫಲವಾಯಿತು. ಕ್ಯಾಬಿನೆಟ್ ಮಿಷನ್‌ನಲ್ಲಿ ಯಾವ-ಯಾವ ವಿಷಯಗಳ ಚರ್ಚೆ ನಡೆಯಿತು, ಎಷ್ಟರ ಮಟ್ಟಿಗೆ ಸಫಲ-ವಿಫಲವಾಯಿತು ಅನ್ನುವುದನ್ನೆಲ್ಲಾ ಈ ಪುಸ್ತಕದ ಮಿತಿಯಲ್ಲಿ ವಿವರಿಸಲಾಗುವುದಿಲ್ಲ. ಆದರೆ ಕ್ಯಾಬಿನೆಟ್ ಮಿಷನ್‌ನಲ್ಲಿ ನಡೆದ ಚರ್ಚೆ, ನಾಟಕಗಳ ವಿಷಯ ನೆನಪು ಮಾಡಿಕೊಂಡಾಗ ಮನಸ್ಸಿಗೆ ಬಹಳ ಕಷ್ಟವಾಗುತ್ತದೆ, ಬ್ರಿಟಿಷ್ ಸರಕಾರದ ಕ್ಯಾಬಿನೆಟ್ ಮಂತ್ರಿಗಳು ಮೂರು ಹಂತಗಳ ವ್ಯವಸ್ಥೆಯನ್ನು ಸ್ವಾತಂತ್ರ್ಯ ಕೊಡುವುದಕ್ಕೆ ಮೊದಲು ಪ್ರಸ್ತಾವಿಸಿದರು. ಅದಕ್ಕನುಸಾರವಾಗಿ ದೇಶದಲ್ಲಿ ಯೂನಿಯನ್ ಸರಕಾರ ಮತ್ತು ದೇಶೀಯ ರಾಜರ ಆಳ್ವಿಕೆ ಇದ್ದೇ ಇರುತ್ತದೆ. ನಂತರ, ಕಾಂಗ್ರೆಸ್, ಮುಸ್ಲಿಂ ಲೀಗ್ ಎರಡಕ್ಕೂ ಸಮಾನವಾಗಿ ಎರಡು ವಿಧಾನ ಸಭೆಗಳು ರಚಿತವಾಗುತ್ತವೆ, ಅದರಲ್ಲಿ

ಬೇರೆ–ಬೇರೆ ಸಮಾನ ಸಂಖ್ಯೆಯಿರುವ ಎರಡು ಮಂತ್ರಿ ಮಂಡಳಗಳು ಇರುತ್ತವೆ. ಆಗ ಹಿಂದೂಗಳು, ಮುಸಲ್ಮಾನರು ಇಬ್ಬರೂ ಒಂದೇ ರೀತಿ ಸರಕಾರ ನಡೆಸಬಹುದು. ಯೂನಿಯನ್ ಸರಕಾರದ ಅಡಿಯಲ್ಲಿ ವಿದೇಶಾಂಗ ಸಚಿವಾಲಯ, ರಕಣಾ ಸಚಿವಾಲಯ ಇರುತ್ತದೆ. ರಕ್ಷಣೆಗಾಗಿ ಅಗತ್ಯವಾದ ಸಚಿವಾಲಯ ಕೂಡ ವೈಸ್‌ರಾಯ್ ನಿಯಂತ್ರಣದಲ್ಲೇ ಇರುತ್ತದೆ. ಇದೇ ರೀತಿ ಪ್ರಾಂತಗಳನ್ನೂ ಮೂರು ಭಾಗಗಳಲ್ಲಿ ಹಂಚಲಾಗುವುದು:

– ಸಿಂಧ್, ಬಲೂಚಿಸ್ತಾನ, ಗಡಿನಾಡು ಮತ್ತು ಪಂಜಾಬ್

– ಅಸ್ಸಾಂ ಮತ್ತು ಬಂಗಾಳ

– ಮಿಕ್ಕೆಲ್ಲಾ ಪ್ರಾಂತಗಳು,

ಮೇಲಣ ಎರಡು ವಿಭಾಗದ ಪ್ರಾಂತಗಳಲ್ಲಿ ಮುಸ್ಲಿಂ ಲೀಗ್‌ನ ವರ್ಚಸ್ಸು ಇರುತ್ತದೆ, ಬಾಕಿಯವುಗಳಲ್ಲಿ ಹಿಂದೂಗಳ ವರ್ಚಸ್ಸು ಇರುತ್ತದೆ.

ಈ ರೀತಿಯ ಗುಂಪು ರಚನೆಯನ್ನಿಟ್ಟುಕೊಂಡು ಸಂವಿಧಾನ ರಚಿಸಿ ಸರ್ವರ ಮಾನ್ಯತೆ ಪಡೆದಾಗ ಸರಕಾರ ದೇಶಕ್ಕೆ ಸ್ವಾತಂತ್ರ್ಯ ಕೊಡುತ್ತದೆ ಮತ್ತು ಬ್ರಿಟಿಷರ ಸೈನ್ಯ ಈ ದೇಶದಿಂದ ಹೊರಟು ಹೋಗುತ್ತದೆ ಅಂದರು. ಇಂತಹ ಕ್ಲಿಷ್ಟಕರವಾದ ವ್ಯವಸ್ಥೆಯನ್ನು ಕುರಿತು ಬ್ರಿಟಿಷ್ ಸರಕಾರ ಮಾತ್ರ ಯೋಚಿಸಬಹುದಾಗಿತ್ತು, ಅವರ ದೃಷ್ಟಿಯಿಂದ ಇದರಲ್ಲಿ ಎಲ್ಲರ ಬೇಡಿಕೆಗಳನ್ನೂ ಸೇರಿಸಿಕೊಂಡಿದ್ದರು. ದೇಶೀಯ ರಾಜರಿಗೆ ಸ್ವಾತಂತ್ರ್ಯ ಇತ್ತು, ಮುಸ್ಲಿಂ ಲೀಗ್‌ಗಾಗಿ ಬೇರೆ ಸಂವಿಧಾನ, ಬೇರೆ ಮಂತ್ರಿ ಮಂಡಳ ಮತ್ತು ಪೂರ್ವ–ಪಶ್ಚಿಮ ದಿಕ್ಕುಗಳಲ್ಲಿ ಆರು ಪ್ರಾಂತ್ಯಗಳನ್ನು ಇವರು ಸ್ವತಂತ್ರವಾಗಿ ಅಭಿವೃದ್ಧಿಪಡಿಸಿಕೊಳ್ಳಲಿ ಎಂದು ರಚಿಸಿದ್ದರು. ಅಖಂಡವಾದ, ಒಡೆಯದ ದೇಶ ಬೇಕು ಅಂತ ಕಾಂಗ್ರೆಸ್ ಕೇಳುತ್ತಿದ್ದುದರಿಂದ ಅದಕ್ಕೆ ಕೇಂದ್ರ ಸರಕಾರದಲ್ಲಿ ಆ ಏಕತೆಯ ಆಭಾಸ ಸಿಗುವಂತಿತ್ತು. ಈ ರೀತಿಯಾಗಿ ಎಲ್ಲ ಚರ್ಚೆಗಳೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಮುಸ್ಲಿಂ ಲೀಗ್ ಮುಖಂಡರಾಗಿದ್ದ ಜಿನ್ನಾ ಸಾಹೇಬರು, ಕ್ಯಾಬಿನೆಟ್ ಮಿಷನ್ ಮತ್ತು ವೈಸ್‌ರಾಯ್ ಹೀಗೆ ಇಷ್ಟು ಜನರ ಮಧ್ಯೆ ನಡೆಯುತ್ತಿದ್ದವು. ಬಾಪೂಜಿಗೆ ರಾಜಕೀಯ ಸ್ಥಾನ ಇರಲಿಲ್ಲ, ಆದರೆ ಕ್ಯಾಬಿನೆಟ್ ಮಿಷನ್‌ನ ಸದಸ್ಯರು ನಿರಂತರವಾಗಿ ಬಾಪೂಜಿಯವರನ್ನು ಭೇಟಿ ಮಾಡುತ್ತಿದ್ದರು, ಪತ್ರ ಬರೆಯುತ್ತಿದ್ದರು. ಕಾಂಗ್ರೆಸ್ ನಾಯಕರುಗಳಾಗಿದ್ದ ಜವಾಹರಲಾಲ್‌ಜೀ, ಮೌಲಾನಾ ಆಝಾದ್, ಸರದಾರ್ ಪಟೇಲ್ ಇವರೆಲ್ಲಾ ಭಂಗಿಕಾಲೋನಿಯಲ್ಲಿ ಕುಳಿತು ಚರ್ಚೆ–ಚಿಂತನೆ ನಡೆಸುತ್ತಿದ್ದರು. ೧೯೪೫ರಲ್ಲಿ ಶಿಮಲಾ ಸಮ್ಮೇಳನ ನಡೆದಾಗ ಲಾರ್ಡ್ ಬೆವಲ್ ಹಿಂದೂ ಮುಸಲ್ಮಾನರಲ್ಲಿ ಸಮಾನತೆ ಇರುತ್ತದೆಂಬ ಸಿದ್ಧಾಂತವನ್ನು ಹುಟ್ಟು ಹಾಕಿದ್ದರು. ಅಂದರೆ ಹರಿಜನ, ಹಿಂದೂಗಳು, ಸಿಖ್ಖರು, ಪಾರಸಿಕರು ಮತ್ತು ಕ್ರಿಶ್ಚಿಯನ್ನರು ಇವರಿಂದ ಹೊರಗಾಗಿ,

ಮೇಲ್ವರ್ಗಕ್ಕೆ ಸೇರಿದ ಹಿಂದೂ ಮತ್ತು ಮುಸಲ್ಮಾನರ ಸಂಖ್ಯೆ ಒಂದೇ ಆಗಿರುತ್ತದೆ ಅಂತ ಅರ್ಥ. ಬಾಪೂಜಿ ಆಗ ಈ ರೀತಿಯ ಸಮಾನತೆಯನ್ನು ತೀವ್ರವಾಗಿ ವಿರೋಧಿಸಿದ್ದರು, ಆದರೆ ಜಿನ್ನಾ ಸಾಹಬ್ ಹಠಮಾರಿಯಾಗಿದ್ದ ವ್ಯಕ್ತಿ, ಆತನಿಂದಾಗಿ ಪರಿಷತ್ತಿನ ಕೆಲಸಕ್ಕೆ ಅಡ್ಡಿ ಉಂಟಾಗಿತ್ತು, ಸುಮ್ಮನೆ ಸಮಯ ಹಾಳಾಗುತ್ತಿತ್ತು. ಸ್ವಾತಂತ್ರ್ಯ ಸಿಗುವುದು ಕೂಡ ಈ ಕಾರಣದಿಂದಲೇ ತಡವಾಗುತ್ತಾ ಇತ್ತು. ಅದರಿಂದಲೇ ಇಷ್ಟ ಇಲ್ಲದೆ ಇದ್ದರೂ, ಕೆಲವು ತಿಂಗಳುಗಳ ಮಟ್ಟಿಗೆಂದು ತಾತ್ಕಾಲಿಕವಾದ ವ್ಯವಸ್ಥೆ ಅಂತ ಹೇಳಿ ಸವರ್ಣ ಹಿಂದೂಗಳು ಹಾಗೂ ಮುಸಲ್ಮಾನರ ಸಂಖ್ಯೆ ಒಂದೇ ಅಂತ ಅನ್ನುವ ಸಮಾನ ಸಂಖ್ಯಾ ಸಿದ್ಧಾಂತವನ್ನವರು ಒಪ್ಪಿಕೊಂಡಿದ್ದರು. ಆದರೆ ಈ ತಾತ್ಕಾಲಿಕವಾದ ವ್ಯವಸ್ಥೆಯನ್ನು ಜಿನ್ನಾ ಸಾಹಬರು ಅದು ತಮ್ಮ ಹಕ್ಕು ಅಂತ ಒಪ್ಪಿಕೊಂಡು ಸಮಾನತೆಯನ್ನು ನೆಲೆಗೊಳಿಸಿ ಎಲ್ಲ ಕಡೆಗಳಲ್ಲೂ ಅದನ್ನು ಅಳವಡಿಸಲಾರಂಭಿಸಿದ್ದರು. ಅಲ್ಲಿಂದ ಮುಂದುವರಿದು ಸವರ್ಣ ಹಿಂದೂ ಜೊತೆ ಸಮಾನತೆಯನ್ನು ಬಿಟ್ಟು ಶೇಕಡಾ ಐವತ್ತು ಭಾಗ ಮುಸಲ್ಮಾನರು ಒಂದು ಕಡೆ, ಹಿಂದೂಗಳು ಮತ್ತೊಂದು ಕಡೆ ಅನ್ನುವ ಸಮಾನತೆಯ ಸಿದ್ಧಾಂತವನ್ನು ಮುಂದಿಟ್ಟರು. ಜಿನ್ನಾ ಸಾಹೇಬರು ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮೌಲಾನಾ ಆಝಾದ್ ಜೊತೆ ಒಟ್ಟಿಗೆ ಒಂದು ಟೇಬಲ್ ಎದುರು ಕುಳಿತುಕೊಳ್ಳುವುದಕ್ಕೆ ಕೂಡ ತಯಾರಿರಲಿಲ್ಲ. ಅವರು ಕಾಂಗ್ರೆಸ್‌ಅನ್ನು ಶತ್ರು ಅಂತ ಹೇಳುತ್ತಿದ್ದರು, ಆದರೆ ಕಾಂಗ್ರೆಸ್ಸಿಗರಾಗಿದ್ದ ಮುಸಲ್ಮಾನರು ಜಿನ್ನಾ ಅವರ ದೃಷ್ಟಿಯಲ್ಲಿ ದೇಶವಿರೋಧಿಗಳು, ಕೆಲಸಕ್ಕೆ ಬಾರದವರು, ಅವರ ಜೊತೆ ಮಾತನಾಡುವುದು ಕೂಡ ತಮ್ಮ ಮರ್ಯಾದೆಗೆ ಕಡಿಮೆ ಅಂತ ಅನಿಸುತ್ತಿತ್ತು. ಅದು ಹೇಗೆ ಅಂತಲೂ ಗೊತ್ತಿಲ್ಲ, ಕಾಂಗ್ರೆಸ್ ನಾಯಕರು ಆತನ ಈ ವಿತಂಡವಾದವನ್ನು ಯಾವ ಧೈರ್ಯದಿಂದ ಸಹಿಸಿಕೊಳ್ಳುತ್ತಿದ್ದರೋ ಏನೋ. ಅವರು ಕ್ಯಾಬಿನೆಟ್ ಮಿಷನ್‌ನ ಈ ವಿಚಿತ್ರ ಪ್ರಸ್ತಾವವನ್ನೂ ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಿದ್ದರು, ಆದರೆ ಕಾಂಗ್ರೆಸ್‌ಅನ್ನು ಹಿಂದೂ ಸಂಸ್ಥೆ ಅಂತ ಪರಿಗಣಿಸಬೇಕು, ಪಾರಸಿ, ಸಿಖ್, ಕ್ರಿಶ್ಚಿಯನ್ ಮತ್ತು ಹರಿಜನರನ್ನು ಪ್ರತಿನಿಧಿಸುವ ಅಧಿಕಾರ ಅದಕ್ಕೆ ಇರಕೂಡದು ಅಂತ ಜಿನ್ನಾ ಇಷ್ಟಪಟ್ಟಾಗ ಮೌಲಾನಾ ಸಾಹಬರು ಮತ್ತವರ ಕಾಂಗ್ರೆಸ್ ಮಿತ್ರರು ಸಹಿಸಿಕೊಳ್ಳದೆ ಹೋದರು, ಆಗ ಎರಡನೆಯ ಶಿಮಲಾ ಸಮ್ಮೇಳನ ಕೂಡ ವ್ಯರ್ಥವಾಯಿತು.

ಈ ಚರ್ಚೆಗಳಲ್ಲೆಲ್ಲ ಬಾಪೂಜಿ ಸ್ಥಿರವಾಗಿದ್ದು ನಿಸ್ಪೃಹ ಭಾವನೆಯಿಂದ ಇಂಗ್ಲಿಷ್‌ನವರಿಗೂ ಸಹಾಯ ಮಾಡುತ್ತಿದ್ದರು, ಕಾಂಗ್ರೆಸ್ಸಿಗಂತೂ ನಿರಂತರವಾಗಿ ಸಹಾಯ ಮಾಡುತ್ತಲೇ ಇದ್ದರು,

ಅವರು ೨ ಏಪ್ರಿಲ್ ೧೯೪೬ರಂದು ಕ್ಯಾಬಿನೆಟ್ ಮಿಷನ್‌ನ ಮುಖಂಡರಾಗಿದ್ದ ಲಾರ್ಡ್ ಪೆಥಿಕ್ ಲಾರೆನ್ಸ್ ಅವರಿಗೆ ಎರಡು ಮಾತುಗಳನ್ನು ವಿಶೇಷವಾಗಿ ಹೇಳಿದರು:

– ಈಗ ಸ್ವಾತಂತ್ರ್ಯ ಕೊಡುವ ವಿಷಯ ಕುರಿತು ಮಾತನಾಡುತ್ತಿರುವಾಗ ದೇಶದ ಸಾವಿರಾರು ಮಂದಿ ಸತ್ಯಾಗ್ರಹ ಮಾಡಿದ ಕೈದಿಗಳನ್ನು, ರಾಜಕೀಯ ಬಂದಿಗಳನ್ನು ಮುಕ್ತಗೊಳಿಸಬೇಕು. ಅವರು ಹಿಂಸಾಪ್ರವೃತ್ತಿಯನ್ನು ತಳೆದದ್ದೂ ದೇಶದ ಸ್ವಾತಂತ್ರ್ಯಕ್ಕಾಗಿಯೇ ತಾನೆ, ಅದರಿಂದ ಈಗ ಅವರನ್ನು ಜೈಲಿನಲ್ಲಿಟ್ಟಿದ್ದರೆ ಅದು ಅನ್ಯಾಯವಾಗುತ್ತದೆ. ಜಯಪ್ರಕಾಶ್ ನಾರಾಯಣ ಮತ್ತು ರಾಮ ಮನೋಹರ ಲೋಹಿಯಾರಂತಹ ತೇಜಸ್ವಿಗಳಾಗಿದ್ದ ನಾಯಕರನ್ನು ಜೈಲಿನಲ್ಲಿರಿಸುವುದು ಸರಿಯಲ್ಲ. ಬಾಪೂಜಿಯವರ ಸಲಹೆಯ ಮೇರೆಗೆ ಏಪ್ರಿಲ್ ೧೨ರಂದು ಜೆ.ಪಿ. ಮತ್ತು ಲೋಹಿಯಾ ಅವರನ್ನು ಜೈಲಿನಿಂದ ಬಿಡುಗಡೆ ಮಾಡಿದರು ಮತ್ತು ನಂತರದಲ್ಲಿ ಒಬ್ಬೊಬ್ಬರಾಗಿ ದೇಶದ ಮಿಕ್ಕ ಸತ್ಯಾಗ್ರಹಿಗಳು ಮತ್ತು ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡಿದರು.

– ಎರಡನೆಯದು ಉಪ್ಪಿನ ಪ್ರಶ್ನೆ. ದೇಶದ ಜನರಿಗೆ ಉಪ್ಪಿನ ಮೇಲಣ ತೆರಿಗೆ ಬಗ್ಗೆ ತೀವ್ರ ವಿರೋಧ ಇತ್ತು. ವಾಸ್ತವವಾಗಿ ಐವತ್ತು ವರ್ಷಗಳಿಗಿಂತ ಮೊದಲಿನಿಂದಲೂ ಕಾಂಗ್ರೆಸ್ ಉಪ್ಪಿನ ವಿಷಯವಾಗಿ ವಿರೋಧಿಸುತ್ತಲೇ ಇತ್ತು. ದಾದಾಭಾಯಿ ನೌರೋಜಿ, ಫಿರೋಜ಼್‌ಷಾ ಮೆಹ್ತಾ ಮತ್ತು ಗೋಪಾಲಕೃಷ್ಣ ಗೋಖಲೆಯವರಂತಹ ಧುರಂಧರ ಮುಖಂಡರು ಕೂಡ ಉಪ್ಪಿನ ತೆರಿಗೆ ವಿರೋಧಿಸಿ ಧರ್ಮಯುದ್ಧ ನಡೆಸಿದ್ದರು. ಸ್ವಾತಂತ್ರ್ಯದ ಮುಂಚಿನ ಸಂಜೆ ಉಪ್ಪಿನ ಮೇಲಣ ತೆರಿಗೆ ತೆಗೆದು ಹಾಕುವುದರಿಂದ ಇಂಗ್ಲಿಷರ ಮರ್ಯಾದೆ ಹೆಚ್ಚಾಗಿ ಅವರ ಬಗ್ಗೆ ನಂಬಿಕೆ ಬೆಳೆಯುತ್ತದೆ, ಕೆಲವು ದಿನಗಳಾದ ಮೇಲೆ ವೈಸ್‌ರಾಯರ ವಿತ್ತ ಸದಸ್ಯರಾಗಿದ್ದ ಸರ್ ಆರ್ಚಿಬೋಲ್ಡ್ ರೆಜಿನಾಲ್ಡ್ ಭಂಗಿ ಕಾಲೋನಿಯಲ್ಲಿ ಬಾಪೂಜಿಯನ್ನು ಭೇಟಿಯಾದರು. ಆತ ಬಹಳ ಸಮಾಧಾನಚಿತ್ತರಾದ ವ್ಯಕ್ತಿ ಆಗಿದ್ದರು, ಅರ್ಧ ಗಂಟೆಯಲ್ಲೇ ಉಪ್ಪಿನ ಮಹತ್ವವನ್ನು ಅರ್ಥ ಮಾಡಿಕೊಂಡರು ಮತ್ತು ಬ್ರಿಟಿಷ್ ರಾಜ್ಯ ಉಪ್ಪಿನಿಂದ ಬರುತ್ತಿದ್ದ ಸಂಪಾದನೆಯನ್ನು ಸುಲಭವಾಗಿ ಬಿಡಬಹುದೆಂದು ಒಪ್ಪಿಕೊಂಡರು. ಆದರೆ ಬೆವಲ್ ಸಾಹೇಬರು ಮುಸ್ಲಿಂ ಲೀಗ್‌ನ ಪಕ್ಷಪಾತಿ ಅನ್ನುವ ವಿಷಯವನ್ನು ರೆಜಿನಾಲ್ಡ್ ಮರೆತಿದ್ದರು. ಬೆವಲ್ ಸಾಹೇಬರು ರೆಜಿನಾಲ್ಡರ ಪ್ರಸ್ತಾವವನ್ನು ತಳ್ಳಿ ಹಾಕಿದರು, ಮತ್ತು ಜಿನ್ನಾಗೆ ಬಹಳ ತೊಂದರೆಯಾಗುತ್ತದೆ, ವಿನಾಕಾರಣ ಗಾಂಧಿಯ ಜನಪ್ರಿಯತೆ ಹೆಚ್ಚಾಗುತ್ತದಾದ್ದರಿಂದ ಉಪ್ಪಿನ ತೆರಿಗೆಯನ್ನು ತೆಗೆದು ಹಾಕುವುದು ಸಾಮ್ರಾಜ್ಯದ ಹಿತದೃಷ್ಟಿಯಿಂದ ಸರಿಯಾದುದಲ್ಲ ಎಂದರು.

ಪಾಪ, ರೆಜಿನಾಲ್ಡ್ ಸಾಹೇಬರ ಉತ್ಸಾಹ, ತಿಳುವಳಿಕೆ ಎರಡು ಮಂಕಾಗಿಬಿಟ್ಟವು.

ಈ ಉಪ್ಪಿನ ತೆರಿಗೆಯ ಒಂದು ಘಟನೆಯನ್ನೇ ನೋಡಿದರೂ ಇಂಗ್ಲಿಷ್ ಸರಕಾರದ ಧೋರಣೆ ಎರಡು ಬೆಕ್ಕುಗಳ ನಡುವೆ ಕೋತಿಯ ನ್ಯಾಯದ ಸ್ವಭಾವ ಇನ್ನೂ ಕೊನೆಗಂಡಿರಲಿಲ್ಲವೆಂಬುದನ್ನು ನೋಡಬಹುದು. ಕಳೆದ ಐವತ್ತು ಅರುವತ್ತು

ವರ್ಷಗಳಿಂದಲೂ ಇಂಗ್ಲಿಷರು ಮುಸಲ್ಮಾನರು ಮತ್ತು ಹಿಂದೂಗಳ ನಡುವೆ ವಿಷಮತೆ ಮತ್ತು ವೈಮನಸ್ಯವನ್ನು ಹುಟ್ಟುಹಾಕಿದ್ದುದು ದಿನ ಕಳೆದಂತೆ ಹೆಚ್ಚಾಗುತ್ತಲೇ ಇತ್ತು. ದೇಶದ ಜನರಿಗೆ ನ್ಯಾಯ ನೀಡಿ ಅವರನ್ನು ದೃಢಪಡಿಸಬೇಕೆಂಬ ಇಚ್ಛೆ ಇರಲೇ ಇಲ್ಲ. ಗಾಂಧೀಜಿಯ ಮೂವತ್ತು ವರ್ಷಗಳ ಸತ್ಯಾಗ್ರಹದಿಂದ ಇಂಗ್ಲಿಷ್ ಸರಕಾರ ಪರಾಜಿತಗೊಂಡಿತ್ತು. ಸರಕಾರ ಈ ಅಹಿಂಸಾತ್ಮಕ ಆಂದೋಳನದ ಧೈರ್ಯವನ್ನು ಅಲುಗಾಡಿಸಲು ಎಲ್ಲಾ ತರಹ ಪ್ರಯತ್ನಪಟ್ಟಿತ್ತು. ಅದಕ್ಕಾಗಿ ಮುಸ್ಲಿಂ ಲೀಗ್ ಮತ್ತು ಜಿನ್ನಾರಂತಹ ಜನರಿಗೆ ಬೇಕು – ಬೇಕಾಗಿಯೇ ಪ್ರೋತ್ಸಾಹ ನೀಡುತ್ತಿತ್ತು. ಹೀಗೆ ಕಾಂಗ್ರೆಸ್‌ನ 'ಭಾರತ್ ಛೋಡೋ' ಬೇಡಿಕೆಯನ್ನು ಸರಕಾರ ತಳ್ಳಿಹಾಕಲು ಎಲ್ಲಾ ಪ್ರಯತ್ನ ಮಾಡಿತ್ತು. ಉಪ್ಪಿನ ಮೇಲಿನ ತೆರಿಗೆಯನ್ನು ತೆಗೆದುಹಾಕುವ ವಿಷಯವಾಗಿ ಕೂಡ ಇಂಗ್ಲಿಷ್‌ನವರು ಅದೇ ಕೋತಿ–ಬೆಕ್ಕಿನ ನೀತಿಯನ್ನೇ ಅಳವಡಿಸಿಕೊಂಡಿದ್ದರು.

ಇಷ್ಟು ಕ್ಲಿಷ್ಟಕರವಾಗಿದ್ದ ನಿಯಮಗಳನ್ನ ಹುಟ್ಟುಹಾಕುವುದನ್ನು ಬಿಟ್ಟು, ಇಂಗ್ಲಿಷರು ಸ್ವಲ್ಪ ಧೈರ್ಯ ತಂದುಕೊಂಡು ನಮ್ಮಿಬ್ಬರಲ್ಲಿ ಯಾರ ಕೈಗೇ ಬೇಕಾದರೂ ಅಧಿಕಾರವನ್ನು ವಹಿಸಿಕೊಟ್ಟು ತನ್ನ ಸೈನ್ಯವನ್ನು ಹಿಂತೆಗೆದುಕೊಂಡರಾಯಿತು ಎಂದು ಬಾಪೂಜಿ ಕ್ಯಾಬಿನೆಟ್ ಮಿಷನ್‌ಗೆ ಎಷ್ಟೋ ಸಾರಿ ಸ್ಪಷ್ಟವಾಗಿ ಹೇಳಿದರು. ಮುಸ್ಲಿಂ ಲೀಗ್‌ನ ಆಡಳಿತದಲ್ಲೂ ದೇಶಕ್ಕೆ ಒಳ್ಳೆಯದೇ ಆಗುತ್ತದೆ ಎಂದು ಬಾಪೂಜಿ ನಂಬಿದ್ದರು. ಮುಸ್ಲಿಂ ಲೀಗ್‌ನವರು ಕೂಡ ಈ ಭಾರತ ಭೂಮಿಯಲ್ಲೇ ಹುಟ್ಟಿದವರು ತಾನೆ, ಅವರು ಏನೇ ಮಾಡಿದರೂ ಅದರಿಂದ ದೇಶಕ್ಕೆ ನಷ್ಟವಾಗುವದಿಲ್ಲ, ಮತ್ತೆ ಕೊನೆಗೆ ಅಲ್ಪಸಂಖ್ಯಾತರು – ಬಹುಸಂಖ್ಯಾತರು ಅನ್ನುವುದನ್ನು ಬಿಟ್ಟು ಕೊನೆಗೂ ದೇಶ ಪ್ರಗತಿಯ ಹಾದಿಯನ್ನೇ ಹಿಡಿಯುತ್ತಲಿತ್ತು, ವಿದೇಶೀಯರ ಅಧಿಕಾರ ದೇಶವನ್ನು ಹಿಡಿದುಕೊಂಡಿದ್ದುದರಿಂದ ತಿಳಿದೂ ತಿಳಿದೂ ಅದು ದೇಶವನ್ನ ವಿನಾಶದ ಕಡೆಗೆ ದೂಡುತ್ತಾ ಇತ್ತು. ಅದರಿಂದ ಈ ಹಿಂದೂ–ಮುಸಲ್ಮಾನ ಅನ್ನುವಂಥ ಆಧಾರಹೀನವಾದ ಪ್ರಶ್ನೆ ಪರಿಹಾರ ಆಗುವ ಸಾಧ್ಯತೆ ಇರಲಿಲ್ಲ, ಇತಿಹಾಸದ ತಿರುವಿನಲ್ಲಿ ಸಿಕ್ಕಿಹಾಕಿಕೊಂಡಿದ್ದಾಗ, ಅಂದರೆ ರಾಷ್ಟ್ರವಾದಿಯಾಗಿದ್ದ ಜಿನ್ನಾ ಏಕೆ–ಹೇಗೆ ಇಂಗ್ಲಿಷರ ಮುಷ್ಟಿಗೆ ಸಿಕ್ಕಿಹಾಕಿಕೊಂಡರೋ, ಮುಸ್ಲಿಂ ಲೀಗ್ ಸಾಮ್ರಾಜ್ಯವಾದಿ ಶಕ್ತಿಗಳ ಕೈಗೊಂಬೆ ಏಕೆ–ಹೇಗೆ ಆಯಿತು ಅಂತ ತಿಳಿಯುವುದೇ ಇಲ್ಲ. ಕ್ಯಾಬಿನೆಟ್ ಮಿಷನ್ ಬಹಳ ಉದಾರ ಪ್ರವೃತ್ತಿಯದಾಗಿತ್ತು ಅನ್ನುವುದು ನಿಜವಾದರೂ ಅದಕ್ಕೆ ಕೂಡ ತನ್ನ ಹಳೆಯ ನೀತಿಯಿಂದ ಹೊರಬರಲಾಗಲಿಲ್ಲ. ಅದು ಯೋಚಿಸುತ್ತಿದ್ದ ರೀತಿ ಮತ್ತು ಕಾಂಗ್ರೆಸ್‌ನ ಪ್ರಜಾತಂತ್ರದ ನೀತಿ ಇವೆರಡಲ್ಲಿ ಯಾವಾಗಲೂ ತಾರತಮ್ಯ ತೋರಿಬರಲೇ ಇಲ್ಲ. ಹೀಗಾಗಿ ದೇಶದ ಸ್ಥಿತಿ ವಿಷಮವಾಗುತ್ತಲೇ ಇತ್ತು. ಜಿನ್ನಾ ಮತ್ತು ಮುಸ್ಲಿಂ ಲೀಗ್‌ನ ವಿಧ್ವಂಸದ ವಿಚಾರಶೈಲಿಯಿಂದ ಸರಕಾರಕ್ಕೆ ಮಹತ್ವಸಿಗುತ್ತಾ

ಹೋಯಿತು, ಕಾಂಗ್ರೆಸ್ ಕ್ಯಾಬಿನೆಟ್ ಮಿಷನ್ ಜೊತೆ ಚರ್ಚೆ ಮಾಡುತ್ತಿದ್ದಾಗ ಬಾಪೂಜಿ ಕೆಲವು ವಿಶಿಷ್ಟವಾದ ವಿಷಯಗಳನ್ನು ಕುರಿತು ಲಾರ್ಡ್ ಪೆಥಿಕ್ ಲಾರೆನ್ಸ್ ಅವರ ಗಮನ ಸೆಳೆದರು.

ದೇಶದಲ್ಲಿ ಏಳುನೂರಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಕೆಲವು ಚಿಕ್ಕದು – ದೊಡ್ಡವು ದೇಶೀ ರಾಜ್ಯಗಳಿದ್ದವು. ಅವರ ಕೈಗಳಲ್ಲಿ ಅಧಿಕಾರ ಇರಲೇ ಇಲ್ಲವೆನ್ನಬಹುದು. ಆದರೆ ಇಂಗ್ಲಿಷರನ್ನು ಸಮರ್ಥಿಸಲಿ ಅಂತ ಈ ಹಳೇ ಶೈಲಿಯ ರಾಜರ ಅಸ್ತಿತ್ವವನ್ನು ಉಳಿಸಿಟ್ಟಿದ್ದರು. ೧೮೫೭ರ ನಂತರ ಇಂಗ್ಲಿಷ್ ಸರಕಾರ ಎಂದೂ ಈ ರಾಜರ ಜೊತೆ ಯಾವ ಚರ್ಚೆಯನ್ನೂ ಮಾಡಲಿಲ್ಲ. ಆದರೆ ಕೇಂದ್ರ ವಿಧಾನ ಸಭೆಯಲ್ಲಿ ಅವರಿಗೆ ವಿಶೇಷ ಮಹತ್ವ ನೀಡಿದ್ದರು, ಅದೆಲ್ಲವೂ ಸರಕಾರದ ಅನುಕೂಲಕ್ಕಾಗಿಯೇ ನೀಡಿದ್ದುದು. ಈಗ ಕ್ಯಾಬಿನೆಟ್ ಮಿಷನ್ ಈ ರಾಜರನ್ನೂ ಸರ್ವಾಧಿಕಾರದ ಹಿಡಿತದಿಂದ ಮುಕ್ತಗೊಳಿಸಲಾಗುತ್ತದೆಂದು ಘೋಷಿಸಿತ್ತು. ಆದರೆ ಈ ದೇಶೀಯ ರಾಜ್ಯಗಳು ಸ್ವತಂತ್ರ ಸರಕಾರದ ಅಡಿಯಲ್ಲಿ ಇರುವುದಿಲ್ಲ ಎಂದು ಕೂಡ ಹೇಳಿದ್ದರು. ಅಂದರೆ ಸ್ವತಂತ್ರ ದೇಶದಲ್ಲಿ ಆರು ನೂರು ಸ್ವತಂತ್ರವಾದ ರಾಜ್ಯಗಳಿರುತ್ತವೆ, ಅವರೆಲ್ಲರೂ ಇಂಗ್ಲಿಷ್ ಪರಂಪರೆಯ ಗುತ್ತಿಗೆದಾರರಾಗಿ ಉಳಿದುಕೊಂಡು ಸ್ವತಂತ್ರ ದೇಶವನ್ನು ಎಂದೂ ತಲೆಎತ್ತಲು ಬಿಡುವುದಿಲ್ಲ ಅಂತ ಅರ್ಥವಾಯಿತು.

ಬಾಪೂಜಿ ಈ ದೇಶೀಯ ರಾಜರ ಅಧಿಕಾರವನ್ನು ತಕ್ಷಣ ತೆಗೆದುಹಾಕಬೇಕೆಂದು ಸಲಹೆ ನೀಡಿದರು. ಅಂದರೆ ಆ ರಾಜ್ಯಗಳಲ್ಲಿದ್ದ ಪ್ರಜೆಗಳು ಕೂಡ ಪ್ರಜಾತಂತ್ರದ ಅಧಿಕಾರವನ್ನು ಅನುಭವಿಸುವಂತಾಗಲಿ ಅನ್ನುವದು ಉದ್ದೇಶ. ಹಾಗಿಲ್ಲದಿದ್ದರೆ ಸ್ವಾತಂತ್ರ್ಯ ಕೊಡುವಾಗ ಈ ದೇಶೀರಾಜ್ಯಗಳನ್ನು ರಾಷ್ಟ್ರೀಯ ಸರಕಾರದ ಹಿಡಿತದಲ್ಲಾದರೂ ಇಡಬೇಕು. ಮೊದಲು ಬ್ರಿಟಿಷ್ ಸರಕಾರ ಈ ರಾಜರನ್ನು ನಿಯಂತ್ರಿಸುತ್ತಿದ್ದ ಹಾಗೆಯೇ ಸ್ವಾತಂತ್ರ್ಯಾನಂತರ ರಾಷ್ಟ್ರೀಯ ಸರಕಾರಕ್ಕೆ ಈ ಅಧಿಕಾರ ಸಿಗಬೇಕು, ಹಾಗಾಗದಿದ್ದರೆ ದೇಶದ ಇಪ್ಪತ್ತೈದು ಭಾಗ ಗುಲಾಮರಾಗಿದ್ದುಕೊಂಡು ಹಿಂದುಳಿದಿರುತ್ತಾರೆ ಅಂದರು. ಆದರೆ ಸಮಾಜವಾದಿಯಾಗಿದ್ದ ಸ್ಟಾಫರ್ಡ್ ಕ್ರಿಪ್ಸ್‌ಗೆ ಈ ಸಲಹೆ ಒಪ್ಪಿಗೆಯಾಗಲಿಲ್ಲ, ಅದರಿಂದ ೧೯೪೭ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಈ ಆರು ನೂರು ರಾಜ್ಯಗಳು ಕೂಡ ಪೂರ್ತಿ ಸ್ವತಂತ್ರವಾಗಿ ತಮ್ಮ ಸ್ವತಂತ್ರವಾದ ಅಸ್ತಿತ್ವವನ್ನಿಟ್ಟುಕೊಳ್ಳಬೇಕೆಂದು ಹಠ ಮಾಡಿದ್ದರು. ಇಂಗ್ಲಿಷರು ಹೊರಟುಹೋದರು, ಭಾರತ ಸರಕಾರದ ಆಳ್ವಿಕೆಯನ್ನು ಈ ದೇಶೀ ರಾಜ್ಯಗಳು ಒಪ್ಪಿಕೊಳ್ಳಲಿಲ್ಲ. ಆದರೆ ಉಕ್ಕಿನ ಮನುಷ್ಯ (ಸ್ಟೀಲ್ ಮ್ಯಾನ್) ಸರದಾರ ಪಟೇಲರ ದೂರದೃಷ್ಟಿ ಮತ್ತು ದೃಢ ಆಡಳಿತಗಾರಿಕೆಯಿಂದಾಗಿ ಒಂದು– ಒಂದೂವರೆ ವರ್ಷದೊಳಗಾಗಿ ಎಲ್ಲಾ ದೇಶೀ ರಾಜ್ಯಗಳೂ ಭಾರತದಲ್ಲಿ

ಸೇರಿಹೋದವು ಮತ್ತು ದೇಶದ ಅಖಂಡತೆಗೆ ಒದಗಿದ್ದ ಅಪಾಯ ದೂರವಾಯಿತು. ಇಂಗ್ಲಿಷ್‌ನವರಂತೂ ದೇಶೀರಾಜ್ಯಗಳ ಜೊತೆ ಸ್ವತಂತ್ರ ಭಾರತ ಕಾನೂನಿನ ಪೇಚಿನಲ್ಲಿ ಸಿಕ್ಕಿಹಾಕಿಕೊಂಡು ಎಂದೂ ಬೆಳೆಯದಿರುವಂತೆ ಮಾಡಬೇಕೆಂದೇ ಬಯಸಿದ್ದರು.

ಇನ್ನೊಂದು ಪ್ರಶ್ನೆ ಅಂದರೆ ಅಸ್ಸಾಂ, ಬಂಗಾಳದಲ್ಲಿ ೨೧,೦೦೦ ಜನ ಯೂರೋಪಿಯನ್ನರು ವಾಸಮಾಡುತ್ತಿದ್ದರು. ಅಲ್ಲಿ ಟೀ ತೋಟಗಳಿಗೆ, ವಿದೇಶಿ ಕಂಪನಿಗಳು ಮಾಲೀಕರಾಗಿದ್ದರು. ೧೯೩೫ರ ಕಾನೂನಿನ ಪ್ರಕಾರ ಈ ಯೂರೋಪಿಯನ್ನರಿಗೆ ವಿಧಾನ ಸಭೆಯಲ್ಲಿ ಆರು ಸೀಟುಗಳನ್ನು ಕೊಟ್ಟಿದ್ದರು. ಚುನಾವಣಾ ನೀತಿಗನುಸಾರ ಹತ್ತು ಲಕ್ಷ ಜನರಿಗೆ ಒಬ್ಬ ಪ್ರತಿನಿಧಿಯನ್ನು ಆರಿಸಬಹುದಾಗಿತ್ತು, ಇವತ್ತು ಕೂಡ ಅದೇ ಕಾನೂನು ಜಾರಿಯಲ್ಲಿದೆ. ಭಾರತೀಯ ಸಂಸತ್ತಿನ ಲೋಕಸಭೆಯ ಸದಸ್ಯರು ಹತ್ತು ಲಕ್ಷ ಜನರನ್ನ ಪ್ರತಿನಿಧಿಸುತ್ತಿದ್ದಾರೆ. ಈ ರೀತಿ ಅವರ ಸಂಖ್ಯೆಯ ಅನುಪಾತದಲ್ಲಿ ಅವರಿಗೆ ಮೂರು ನೂರು ಪಟ್ಟು ಹೆಚ್ಚು ಪ್ರತಿನಿಧಿತ್ವ ನೀಡುವುದರಿಂದ ದೇಶದ ಮಿಕ್ಕ ಜನರಿಗೆ ಅನಾವಶ್ಯಕವಾಗಿ ಅನ್ಯಾಯ ಆಗುತ್ತಿತ್ತು. ಈ ಯೂರೋಪಿಯನ್ನರು ಯಾವಾಗಲೂ ಆಳುವವರಿಗೇ ಬೆಂಬಲ ನೀಡಿದ್ದರು, ಮತ್ತವರು ಹಿಂದೂ–ಮುಸಲ್ಮಾನರೆಂಬ ಭೇದವನ್ನು ಪ್ರಚೋದಿಸಿದ್ದರು. ಲಾರ್ಡ್ ಪೆಥಿಕ್ ಲಾರೆನ್ಸ್ ಯೂರೋಪಿಯನ್ನರಿಗೆ ಸ್ವತಂತ್ರವಾದ ಅಸ್ತಿತ್ವ ಇದೆ, ಅವರ ಹಕ್ಕುಗಳನ್ನು ಹೇಗೆ ಕಿತ್ತುಕೊಳ್ಳಲು ಸಾಧ್ಯ ಅಂತ ಹೇಳುತ್ತಿದ್ದುದು ಬರೀ ಪಾಖಂಡತನ ಆಗಿತ್ತು. ಇಂಗ್ಲಿಷರ ಹಿತಗಳನ್ನು ರಕ್ಷಿಸುವುದಕ್ಕಾಗಿ ತಾನೇ ಇಂಗ್ಲಿಷ್ ಸರಕಾರ ಆಡಳಿತ ನಡೆಸುತ್ತಿದ್ದುದು ! ಬಾಪೂಜಿ ಹಠ ಮಾಡಿ ಈ ಆರು ಸೀಟುಗಳನ್ನು ನೀಡಿಕೆಯನ್ನು ವಿರೋಧಿಸಿದರು, ಆಗ ಈ ಯೂರೋಪಿಯನ್ನರು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಅಂತ ನಿಶ್ಚಯಿಸಿದ್ದರು. ಹಾಗಾಗಿದ್ದಿದ್ದರೆ ಈ ಆರು ಸೀಟುಗಳಿಗಾಗಿ ಈ ಯೂರೋಪಿಯನ್ ಸದಸ್ಯರು ಬಂಗಾಳ, ಅಸ್ಸಾಂನಲ್ಲಿ ಮುಸ್ಲಿಂ ಲೀಗ್ ಜೊತೆ ಸೇರಿಕೊಂಡು ಶೇಕಡಾವಾರು ಅರುವತ್ತೆಂಟು ಭಾಗದ ಹಿಂದೂ ಬಹುಸಂಖ್ಯಾತರನ್ನು ಅಲ್ಪಸಂಖ್ಯಾತರೆಂದು ಘೋಷಿಸಿ, ಅಸ್ಸಾಂ ಅನ್ನು ಭಾರತದಿಂದ ತೆಗೆದು ಇವತ್ತಿನ ಬಂಗ್ಲಾದೇಶದ ಒಂದು ಪ್ರಾಂತ್ಯವಾಗಿ ಮಾಡಿಬಿಟ್ಟಿರುತ್ತಿದ್ದರು. ವಿಷಯ ಅಷ್ಟಕ್ಕೇ ನಿಲ್ಲುತ್ತಲೂ ಇರಲಿಲ್ಲ. ಆಗ ಅರುಣಾಚಲ, ಮೇಘಾಲಯ, ಮಣಿಪುರ, ತ್ರಿಪುರಾ ಮತ್ತು ನಾಗಾಲ್ಯಾಂಡ್ ಮುಂತಾದ ಈಶಾನ್ಯ ಸರಹದ್ದು ಮುಸಲ್ಮಾನರಿಗೆ ಸೇರಿ ಹೋಗುತ್ತಿತ್ತು. ಅಲ್ಲಿನ ಹಿಂದೂಗಳು ಬಹುಸಂಖ್ಯಾತರಾಗಿರದೆ ಮುಸಲ್ಮಾನರ ಆಳ್ವಿಕೆಯನ್ನು ಒಪ್ಪಿಕೊಳ್ಳಬೇಕಾಗುತ್ತಿತ್ತು, ಬಾಪೂಜಿಯ ಸಮಯೋಚಿತವಾದ ದೂರದೃಷ್ಟಿಯಿಂದಾಗಿ ದೇಶ ಒಡೆಯದೆ ಉಳಿದುಕೊಂಡಿತು. ಪೂರ್ವಾಂಚಲದ ಈ ಭಾಗವೆಲ್ಲ ನಮ್ಮ ಸರಹದ್ದನ್ನು ರಕ್ಷಿಸುತ್ತದೆ.

ಮೂರನೆಯ ಪ್ರಶ್ನೆ ಕ್ಯಾಬಿನೆಟ್ ಮಿಷನ್, ಹಿಂದೂ–ಮುಸ್ಲಿಂ ಎರಡು

ಸಂವಿಧಾನಗಳನ್ನು ರಚಿಸಿದರೆ ದೇಶಕ್ಕೆ ಬೇಗ ಸ್ವಾತಂತ್ರ್ಯ ಸಿಗಲು ಅನುಕೂಲವಾಗುತ್ತದೆ ಅಂತ ಯೋಜಿಸಿತ್ತು. ಅದರಿಂದ ದೇಶದಲ್ಲಿ ಕೋಮುವಾರು ಒಪ್ಪಂದ ನೆಲೆಗೊಳ್ಳುತ್ತದೆ, ಅಲ್ಲಿಯವರೆವಿಗೂ ಇಂಗ್ಲಿಷಿನವರ ನಿಯಂತ್ರಣ ಉಳಿದುಕೊಂಡಿರುತ್ತದೆ, ಇಂಗ್ಲಿಷ್ ಸೈನ್ಯ ದೇಶದಲ್ಲಿ ಶಾಂತಿ ನೆಲೆಗೊಳಿಸುವುದಕ್ಕಾಗಿ ಇರುತ್ತದೆ ಅಂತಿತ್ತು. ಬಾಪೂಜಿ ಅದನ್ನೂ ಸ್ಪಷ್ಟವಾಗಿ ವಿರೋಧಿಸಿ ಇಂಗ್ಲಿಷರ ಸೈನ್ಯ ಈ ಭೂಮಿ ಮೇಲೆ ಇರುವವರೆಗೂ ಕೋಮುವಾರು ಒಡಂಬಡಿಕೆ ಮೂಡುವುದಿಲ್ಲ, ಶಾಂತಿ–ಸೌಹಾರ್ದ ಅಪೇಕ್ಷಿಸುವುದು ಸಾಧ್ಯವಾಗಲ್ಲ ಅಂದರು. ಸೈನ್ಯವನ್ನು ತಕ್ಷಣ ತೆಗೆದುಹಾಕಬೇಕು. ವೈಸ್‌ರಾಯ್‌ಗೂ ಕೂಡ ರಾಷ್ಟ್ರೀಯ ಸರಕಾರವನ್ನು ಹಿಡಿತದಲ್ಲಿಟ್ಟುಕೊಳ್ಳುವ ಅಧಿಕಾರ ಇರಕೂಡದು, ಬ್ರಿಟನ್ನಿನ ಮೇಲೆ ರಾಣಿ ಆಧಿಪತ್ಯ ಹೊಂದ್ದಿದರೂ ಹೇಗೆ ಆಡಳಿತ ನಡೆಸುವುದಿಲ್ಲವೋ, ಅದೇ ರೀತಿಯಲ್ಲಿ ಭಾರತದ ಗವರ್ನರ್ ಜನರಲ್ ಆಧಿಪತ್ಯ ಇಟ್ಟುಕೊಂಡಿರುತ್ತಾರೆ, ಮಾರ್ಗದರ್ಶನ ನೀಡುತ್ತಾರೆ, ಆದರೆ ಆಡಳಿತ, ಅಧಿಕಾರ ರಾಷ್ಟ್ರೀಯ ಮಂತ್ರಿಮಂಡಳದ ಕೈಕೆಳಗಿರಬೇಕು ಅಂದರು. ಪೆಥಿಕ್ ಲಾರೆನ್ಸ್‌ಗೆ ಬಾಪೂಜಿಯನ್ನು ಕಂಡರೆ ಅಪಾರ ಗೌರವಇತ್ತು, ಈ ಮೂಲಭೂತ ವಿಷಯಗಳಿಗೆ ಕ್ಯಾಬಿನೆಟ್ ಮಿಷನ್ ಒಪ್ಪಿಗೆ ನೀಡಲಿಲ್ಲ. ಪ್ರತಿಯೊಂದು ವಿಷಯಕ್ಕೂ ನಕಾರಾತ್ಮಕವಾದ ಉತ್ತರ ಸಿಕ್ಕಿತು. ಬಾಪೂಜಿ ಪೆಥಿಕ್ ಲಾರೆನ್ಸ್‌ಗೆ, ನಿಮ್ಮ ಪತ್ರ ಅದೇ ಹಳೆಯ ಅಧಿಕಾರದ ಸಾಮ್ರಾಜ್ಯವಾದಿ ಪರಂಪರೆಯ ಶ್ರೇಷ್ಠ ಮಾದರಿಯದ್ದಾಗಿದೆ, ಅಂತ ಬರೆದರು. ಮಿಕ್ಕ ಸೌಹಾರ್ದದ ವ್ಯವಹಾರ ಬರೀ ಬೂಟಾಟಿಕೆಯದಾಗಿತ್ತು.

ಈ ಸಂದರ್ಭದಲ್ಲಿ ಬಾಪೂಜಿ ಮೇಲೆ ಕೆಲಸದ ಹೊರೆ ಅತಿ ಹೆಚ್ಚಾಗಿತ್ತು. ಎಷ್ಟೋ ಬಾರಿ ಅವರು ರಾತ್ರಿ ಒಂದು–ಒಂದೂವರೆ ಗಂಟೆಗೆಲ್ಲಾ ಎದ್ದು ಕಾಂಗ್ರೆಸ್ ಪರವಾಗಿ ವೈಸ್‌ರಾಯ್‌ಗೆ ಪತ್ರ ಬರೆಯುತ್ತಿದ್ದರು. ಜಿನ್ನಾರ ಹಠದಿಂದ ಇಂಗ್ಲಿಷ್ ರಾಜ್ಯ ಕಾಂಗ್ರೆಸ್ ಬರಿಯ ಹಿಂದೂಗಳ ಪ್ರತಿನಿಧಿಯಾಗಿದ್ದುಕೊಂಡು ತೆಪ್ಪಗಿರಲಿ ಅಂತ ಇಷ್ಟಪಡುತ್ತಿತ್ತು. ಆಗ ೨೬ ಜೂನ್ ೧೯೪೬ರಂದು ಬಾಪೂಜಿ ವೈಸ್‌ರಾಯ್‌ಗೆ ಸ್ಪಷ್ಟವಾಗಿ ಬರೆದು ಕಾಂಗ್ರೆಸ್ ಜಾತಿಭೇದ, ಧರ್ಮಭೇದದಿಂದ ಮೇಲೆದ್ದು ರಾಷ್ಟ್ರೀಯತೆಯನ್ನು ಬಲಗೊಳಿಸಿದೆಯೆಂದೂ, ಎಲ್ಲಾ ಜಾತಿ–ಮತಗಳನ್ನೂ ಪ್ರತಿನಿಧಿಸುವುದು ಕಾಂಗ್ರೆಸ್‌ನ ಹಕ್ಕಷ್ಟೇ ಅಲ್ಲ, ಧರ್ಮ ಎಂದೂ ತಿಳಿಸಿದರು. ಹಕ್ಕನ್ನು ಬಿಡಲು ಸಿದ್ಧವಾದರೂ ಧರ್ಮಚ್ಯುತರಾಗುವುದು ಆತ್ಮಹತ್ಯೆ ಮಾಡಿಕೊಂಡಂತೆಯೇ ಸರಿ, ಪ್ರಪಂಚದ ಯಾವ ಸಂಸ್ಥೆಯನ್ನೂ ಆತ್ಮಹತ್ಯೆ ಮಾಡಿಕೊಳ್ಳಲು ವಿವಶಗೊಳಿಸಲಾಗುವುದಿಲ್ಲ, ಕಾಂಗ್ರೆಸ್ ತನ್ನ ರಾಷ್ಟ್ರೀಯ ಮುಸಲ್ಮಾನರನ್ನು ಎಂದೂ ತಿರಸ್ಕರಿಸಲಾಗುವುದಿಲ್ಲ ಎಂದರು. ಈ ಪತ್ರದ ವಿಷಯವಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ತೀವ್ರವಾಗಿ ಘರ್ಷಣೆಯಾಗಿತ್ತು, ಬಾಪೂಜಿ ಮಾತ್ರ, ಕಾಂಗ್ರೆಸ್ ಏನಾದರೂ ಈ ಪ್ರಸ್ತಾವವನ್ನು ಅಂಗೀಕರಿಸಿದಲ್ಲಿ

ನಾನು ಈ ವಿಷಯಗಳಿಂದೆಲ್ಲಾ ಪೂರ್ತಿಯಾಗಿ ದೂರವಾಗಿ ಸೇವಾಗ್ರಾಮಕ್ಕೆ ಹೊರಟುಹೋಗುವೆನೆಂದು ತಿಳಿಸಿದರು.

ಸರ್ ಸ್ಟಾಫರ್ಡ್ ಕ್ರಿಪ್ಸ್ ಭೇಟಿಯಾಗಲು ಬಂದಾಗ ೧೬ ಜೂನ್ ೧೯೪೬ರಂದು ಸ್ವಾತಂತ್ರ್ಯ ನೀಡುತ್ತೇವೆಂದು ಆಶ್ವಾಸನೆ ನೀಡಿದ್ದುದೇನಾಯಿತು ಬಾಪೂಜಿ ಎಂದು ನೆನಪು ಮಾಡಿಕೊಟ್ಟರು. ಇದೆಂಥ ಹೇಡಿತನ ಎಂದರು, ಆದರೆ ಕ್ರಿಪ್ಸರದೇನೂ ತಪ್ಪು ಇರಲಿಲ್ಲ. ಕೋಮುವಾದದ ಅನ್ನುವ ಹಾವಿಗೆ ಹಾಲುಣಿಸಿ ಬೆಳೆಸಿದ್ದ ಕೂಟನೀತಿಯ ತಪ್ಪು ಇದಾಗಿತ್ತು. ಈಗ ಕೂಡ ಸರಕಾರ ಆ ವಿಷಧರನ ಕೈಗೆ ಸಿಕ್ಕಿಬಿದ್ದು ದೇಶವನ್ನು ವಿನಾಶದ ಕಡೆಗೆ ಎಳೆಯುತ್ತಿತ್ತು. ೨೮ ಜೂನ್ ೧೯೪೬ರಂದು ಬಾಪೂಜಿ ಪೂನಾಗೆ ಹೋದರು, ೨೯ ಜೂನ್‌ಗೆ ಕ್ಯಾಬಿನೆಟ್ ಮಿಷನ್ ಲಂಡನ್ನಿಗೆ ಹಿಂದಿರುಗಿತು, ೨೦ ಜುಲೈ ಮುಸ್ಲಿಂ ಲೀಗ್ ಸಾರ್ವಜನಿಕವಾಗಿ ವೈಧಾನಿಕ ಕ್ರಮಗಳನ್ನು ಸಂಪೂರ್ಣವಾಗಿ ತೊರೆಯಿತು. ೧೫ ಆಗಸ್ಟ್ ೧೯೪೬ರಂದು ಲೀಗ್‌ನ ಸದಸ್ಯರು 'ಡೈರೆಕ್ಟ್ ಆಕ್ಷನ್' (ನೇರ ಕ್ರಿಯೆ)ಅನ್ನು ಘೋಷಿಸಿದರು. ಪಾಕಿಸ್ತಾನ ಪಡೆಯುವುದಕ್ಕಾಗಿ ಎಲ್ಲ ರೀತಿಯಲ್ಲೂ ಹೋರಾಟ ನಡೆಸಲಾಗುವುದೆಂದು ಜಿನ್ನಾ ಸಾಹೇಬರು ಘೋಷಿಸಿದರು. ಅದಕ್ಕೂ ಮುಂದೆ ಜಿನ್ನಾ ಸಾಹೇಬರು ಸ್ಪಷ್ಟೀಕರಣ ನೀಡಲಿಲ್ಲ, ಆದರೆ ಅವರ ಜೊತೆಗಾರರು ಮಾತ್ರ ಪಾಕಿಸ್ತಾನ ಪಡೆಯುವುದಕ್ಕಾಗಿ ಹಿಂಸೆಯ ನೂರೊಂದು ಉಪಾಯಗಳಿವೆ ಎಂದು ಘೋಷಿಸಿದರು. ಮುಸಲ್ಮಾನರಿಗೆ ಅಹಿಂಸೆಯ ಬಂಧನವಿರಲಿಲ್ಲ, ಹಿಂಸೆಯನ್ನು ಸ್ಪಷ್ಟವಾಗಿ ಘೋಷಿಸಿದ ನಂತರ ದೇಶದಲ್ಲಿ ಅಲ್ಲಲ್ಲಿ ಕೋಮುವಾರು ದಂಗೆಗಳು ಶುರುವಾದವು. ಕಲ್ಕತ್ತಾದಲ್ಲಿ ಲೀಗ್‌ನ ಮುಖ್ಯ ಮಂತ್ರಿ ಶಹೀದ್ ಸುಹ್ರಾವರ್ದಿಯ ಸುಪರ್ದಿನಲ್ಲಿ ಯುದ್ಧಸಿದ್ಧತೆಯ ರೂಪದಲ್ಲಿ ಆಯುಧಗಳನ್ನು ಸಂಗ್ರಹಿಸಲಾಯಿತು, ಪೆಟ್ರೋಲ್ ಪಡಿತರವಿತ್ತು, ಅದರ ವಿಶೇಷ ಕೂಪನ್‌ಗಳನ್ನು ಮಂತ್ರಿಗಳಿಗೆ ಕೊಟ್ಟು ಪರಿಚಿತರಾಗಿದ್ದ ಗೂಂಡಾಗಳನ್ನು, ಕೆಟ್ಟ ಜನರನ್ನು ಕಲ್ಪತ್ತಾದಲ್ಲಿ ಕರೆಸಿಟ್ಟರು. ಬಂಗಾಳದ ಗವರ್ನರ್, ಪೊಲೀಸ್ ಅಧೀಕ್ಷಕ ಮತ್ತು ಹಿರಿಯ ಅಧಿಕಾರಿಗಳಿಗೆಲ್ಲ ಭಯೋತ್ಪಾದಕರನ್ನು ಸಿದ್ಧಗೊಳಿಸಿರುವುದರ ಸೂಚನೆ ನೀಡಿದರು. ಆದರೆ ಈ ಮುಸಲ್ಮಾನರ 'ಡೈರೆಕ್ಟ್ ಆಕ್ಷನ್'ಗೆ ಸುಮ್ಮನಿದ್ದುಕೊಂಡೇ ಸಹಾಯ ಮಾಡಬೇಕೆಂಬುದು ಇಂಗ್ಲಿಷ್ ಸರಕಾರದ ನೀತಿ ಆಗಿತ್ತು. ಅದರಿಂದ ಎಲ್ಲೂ ಯಾವ ರೀತಿಯ ಬಂದೋಬಸ್ತು ಅಥವಾ ಸುರಕ್ಷತೆಯ ವ್ಯವಸ್ಥೆ ಮಾಡಲಿಲ್ಲ. ಆಗಸ್ಟ್ ೧೪ರ ಮಧ್ಯರಾತ್ರಿಯಿಂದ ಮೂರು ದಿನ, ಮೂರು ರಾತ್ರಿ ಕಲ್ಕತ್ತಾದಲ್ಲಿ ಹತ್ಯೆ ನಡೆಯುತ್ತಿತ್ತು, ನಿರಂಕುಶರಾದ ಮುಸಲ್ಮಾನ ಗೂಂಡಾಗಳು ವಿಷಯ ತಿಳಿಯದ ಹಿಂದೂ ಸಮಾಜದವರನ್ನು ಹೊಡೆದು–ಬಡಿದು ಧರ್ಮಪರಿವರ್ತನೆ ಮಾಡುತ್ತಿದ್ದರು, ಐದು ಸಾವಿರಕ್ಕೂ ಹೆಚ್ಚು ಮಂದಿಯನ್ನು ಕೊಂದರು. ಹದಿನೈದು ಸಾವಿರ ಮಂದಿ

ಗಾಯಗೊಂಡರು ಮತ್ತು ನೂರಾರು ಮಂದಿ ಮಹಿಳೆಯರು ಅಪಹೃತರಾದರು, ಈ ಅತ್ಯಾಚಾರಗಳಿಗೆ ಸ್ಪಷ್ಟನೆ ನೀಡಿ ಜಿನ್ನಾ 'ಮುಸಲ್ಮಾನರ ಹೆಸರು ಕೆಡಿಸಲು ಹಿಂದೂಗಳು ಮಾಡಿರುವ ಪಿತೂರಿಯಿದು, ಇದರ ಪೂರ್ತಿ ತಪ್ಪು ಗಾಂಧಿಯದು' ಎಂದು ಹೇಳಿದರು.

ಈ 'ಡೈರೆಕ್ಟ್ ಆಕ್ಷನ್'ಗೆ ಹೆದರಿ ಲಾರ್ಡ್ ವೆವಲ್‌ನು ನೆಹರೂರವರನ್ನು ತಾತ್ಕಾಲಿಕ ಸರಕಾರ ರಚಿಸುವಂತೆ ಸಿದ್ಧಗೊಳಿಸಿದರು. ೧೦ ಆಗಸ್ಟ್ ೧೯೪೬ರಂದು ಮಧ್ಯಂತರ ಸರಕಾರ ಪ್ರಮಾಣವಚನ ತೆಗೆದುಕೊಂಡಿತು. ಮುಸ್ಲಿಂ ಲೀಗ್ ಆರಂಭದಲ್ಲಿ ಸಹಕಾರ ನೀಡಲಿಲ್ಲ. ಲಾರ್ಡ್ ಬೆವೆಲ್ ಆಗ್ರಹಪಡಿಸಿದ ಮೇಲೆ, ಎರಡು ತಿಂಗಳ ನಂತರ ಅಕ್ಟೋಬರ್‌ನಲ್ಲಿ ಲೀಗ್‌ನ ಮೂವರು ಮಂತ್ರಿಗಳು ಪ್ರಮಾಣವಚನ ತೆಗೆದುಕೊಂಡರು ಮತ್ತು ಮಧ್ಯಂತರ ಸರಕಾರಕ್ಕೆ ಸೇರಿಕೊಂಡರು. ಈ ಹೆಜ್ಜೆಯೂ 'ಡೈರೆಕ್ಟ್ ಆಕ್ಷನ್'ನ ಇನ್ನೊಂದು ಆಯಾಮವಾಗಿತ್ತು, ಆಡಳಿತವನ್ನು ತಟಸ್ಥಗೊಳಿಸಿದರೆ ದೇಶ ಮತ್ತು ಕಾಂಗ್ರೆಸ್‌ನ ಧೈರ್ಯ, ನೀತಿ ನಿಯಮ ಎಲ್ಲವೂ ಹಾಳಾಗುತ್ತದೆಂಬುದು ಉದ್ದೇಶವಾಗಿತ್ತು. ಆಗ ಸುಲಭವಾಗಿ ಪಾಕಿಸ್ತಾನ ಸಿಗುತ್ತದೆ ಎಂಬ ಭರವಸೆ ಅವರಿಗಿತ್ತು.

ಈ ದಂಗೆಗಳು ಮತ್ತು ಮಂತ್ರಿ ಮಂಡಳದಲ್ಲಿ ಸೇರಿಕೊಳ್ಳುವ ಹಿಂದೆ ಇನ್ನೊಂದು ಅವ್ಯಕ್ತವಾದ ಆಯಾಮ ಕೂಡ ಇತ್ತು. ಬಂಗಾಳದಲ್ಲಿ ಕೋಮುವಾರು ದಂಗೆಗಳಾದರೆ ಹಿಂದೂಗಳ ಬಹುಸಂಖ್ಯೆ ಕುಂಠಿತವಾಗುತ್ತದೆ ಮತ್ತು ಆಗ ಪೂರ್ವ ಬಂಗಾಳದ ಮುಸಲ್ಮಾನರು ಅಸ್ಸಾಂನೊಳಗೆ ನುಗ್ಗಿ ಅಲ್ಲೂ ಹಿಂದೂಗಳನ್ನು ಕೊಂದು ಸುಲಭವಾಗಿ ಬಹುಸಂಖ್ಯಾತರಾಗಬಹುದು, ಆಗ ಪೂರ್ವದಲ್ಲಿ ದೊಡ್ಡ ಪ್ರಾಂತ ಪಾಕಿಸ್ತಾನಕ್ಕೆ ಸಿಗುತ್ತದೆ ಎಂಬ ಯೋಜನೆಯಿತ್ತು. ಒಮ್ಮೊಮ್ಮೆ ಹಿಂಸಕ ಯೋಜನೆ ಕೂಡ ಬಹಳ ಕುರುಡಾಗಿ ಕ್ಷುದ್ರವಾಗುತ್ತದೆ. ಹೀಗೆ ಪ್ರಪಂಚದಲ್ಲಿ ಎಲ್ಲೂ ಅಲ್ಪ ಸಂಖ್ಯಾತರು ಬಹುಸಂಖ್ಯಾತರನ್ನು ಕೊಂದು ರಾಜಕೀಯ ಅಧಿಕಾರವನ್ನು ಪಡೆದುಕೊಂಡಿಲ್ಲವೆಂದು ಆ ಗೂಂಡಾಗಳಿಗೆ ಅರ್ಥವಾಗಲಿಲ್ಲ. ಇದೇ ರೀತಿ ಲಾಹೋರ್, ಭಾಗಲಪುರದಲ್ಲೂ ಮುಸ್ಲಿಂ ಲೀಗ್ ದಂಗೆ ಎಬ್ಬಿಸಿ ಸಿಖ್ಖರ ಸಂಖ್ಯೆಯನ್ನು ಕಡಿಮೆ ಮಾಡಲು ಪ್ರಯತ್ನಿಸಿತು. ಪೂರ್ತಿ ಪಂಜಾಬ್, ಅಸ್ಸಾಂ, ಬಂಗಾಳ ಪಾಕಿಸ್ತಾನಕ್ಕೆ ಸಿಗಲಿ ಎಂದುಕೊಂಡರು. ಇದೆಲ್ಲ ಸಿಗಲಿಲ್ಲವಾದರೂ ಕಲ್ಕತ್ತೆಯ ದಂಗೆಯ ಪ್ರತಿಧ್ವನಿ ದೇಶದಲ್ಲೆಲ್ಲೆಡೆ ಹರಡಿಕೊಂಡಿತು. ಲಾರ್ಡ್ ಬೆವೆಲ್‌ಗೆ ಈ ಸ್ಥಿತಿಯನ್ನು ಹಿಡಿತಕ್ಕೆ ತರಲಾಗಲಿಲ್ಲ, ತರುವ ಇಚ್ಛೆಕೂಡ ಆತನಿಗಿರಲಿಲ್ಲವೆಂದು ಕೂಡ ಹೇಳಬಹುದು. ಅವರ ದೃಷ್ಟಿಯಲ್ಲಿ ಮುಸ್ಲಿಂ ಲೀಗ್ ನ್ಯಾಯವಾಗಿ ಪ್ರತೀಕಾರ ಮಾಡುತ್ತಿತ್ತು. ಇಂಥ ಹಿಂಸೆಗೆ ಹೆದರಲು ಕಾರಣವಿರಲಿಲ್ಲ, ಮುಸಲ್ಮಾನರು ಹತ್ಯೆ ಮಾಡಲಿ ಅಂತ ಅವರಿಗೆ ಪೂರ್ತಿ ಅವಕಾಶ ನೀಡುವುದು ಸಾಮ್ರಾಜ್ಯಕ್ಕೆ ಅನುಕೂಲಕರವಾಗಿತ್ತು

ಅಂತ ಲಾರ್ಡ್ ಬೆವೆಲ್ ಅಭಿಪ್ರಾಯವಾಗಿತ್ತು. ಕ್ಯಾಬಿನೆಟ್ ಮಿಷನ್ ದೇಶದ ವಿಧಿವತ್ತಾದ ಚಕ್ರವ್ಯೂಹದಲ್ಲಿ ಸಿಲುಕಿಕೊಂಡಿತ್ತು, ವೈಸ್‌ರಾಯ್ ಈ ದೇಶವನ್ನು ಕೋಮುವಾದದ ಎಂಬ ಕೊಳಚೆಯಲ್ಲಿ ಸಿಲುಕಿಹಾಕಿಸಿ ಸುಸ್ತು ಮಾಡಿಸಿದರೆ ಸ್ವಾತಂತ್ರ್ಯ ಇಲ್ಲಿ ಸಿಕ್ಕಿಹಾಕಿಕೊಳುತ್ತದೆ, ನಿಷ್ಪ್ರಾಣವಾಗಿ ತುಂಡರಿಸಿಹೋಗುತ್ತದೆ ಎಂದು ಯೋಜಿಸಿದ್ದ. ಇಂಗ್ಲಿಷ್ ಸರಕಾರ ದೇಶ ಬಿಡಬಯಸುತ್ತಿರಲಿಲ್ಲ, ಈಗ ಕ್ಯಾಬಿನೆಟ್ ಮಿಷನ್ ಘೋಷಣೆ ಮಾಡಿದ್ದರಿಂದ ಸ್ವಾತಂತ್ರ್ಯ ಕೊಡಬೇಕಾದ್ದು ಅಗತ್ಯವಾಯಿತು. ಇದರಿಂದ ವೈಸ್‌ರಾಯ್ ದೇಶದ ಆಡಳಿತ ವ್ಯವಸ್ಥೆಯನ್ನು ಅವ್ಯವಸ್ಥಿತಗೊಳಿಸಿ ಸ್ವತಂತ್ರ ದೇಶ ಎಂದೂ ಬೆಳೆಯದ ಹಾಗೆ ಪ್ರಪಂಚದ ಮಿಕ್ಕರಾಷ್ಟ್ರಗಳ ಜೊತೆ ಸಮಾನಸ್ಪರ್ಧಿ ಆಗದಿರುವಂತೆ ಹರಿದು ಹಂಚಿಹೋಗಲೆಂದು ಆಶಿಸಿದ್ದ.

ಇದು ಇಂಗ್ಲಿಷರ ಹಳೆ ನೀತಿಯಾಗಿತ್ತು. ಇಂಗ್ಲಿಷರು ಹೋದ ಕಡೆಗಳಲ್ಲೆಲ್ಲ ಅಲ್ಲಿಯ ಪ್ರಜೆಗಳ ನಡುವೆ ಜಗಳ ಹುಟ್ಟಿಸಿ ಮತ್ತೆ ಅವರ ವರ್ಚಸ್ಸನ್ನು ಉಳಿಸಿಟ್ಟುಕೊಳ್ಳಲು ಪ್ರಯತ್ನಿಸಿದ್ದರು. ಅದೇ ರೀತಿ ಫಿಲಿಸ್ತೀನ್ (ಪ್ಯಾಲೆಸ್ಟೈನ್)ನ ಜನರ ಮೇಲೂ ನಡೆಸಿದರು. ನಾಲ್ಕು ದಶಕಗಳಾದ ಮೇಲೂ ಅರೇಬಿಯಾದ ಪ್ರಜೆಗಳು ನಿರಾಶ್ರಿತರಾಗಿ ಅಲೆಯುತ್ತಿದ್ದಾರೆ. ಆಫ್ರಿಕಾದ ಎಷ್ಟೋ ದೇಶಗಳಲ್ಲಿ ಈ ನೀತಿಯಿಂದ ಇಂಗ್ಲಿಷರು ತಮ್ಮ ಅಧಿಕಾರವನ್ನು ಉಳಿಸಿಕೊಂಡಿದ್ದರು. ಇಂಗ್ಲಿಷರೆಂದೂ ಈ ಕೂಟತಂತ್ರವನ್ನು ಬದಲಾಯಿಸಲಿಲ್ಲ, ಕೋಟ್ಯಂತರ ಕರಿ–ಹಳದಿ ಜನರನ್ನು ಶೋಷಿಸಿ ಇಂಗ್ಲಿಷರು ತಮ್ಮ ರಾಜತಂತ್ರವನ್ನು ಸಮೃದ್ಧಿಗೊಳಿಸಿಕೊಂಡರು. ಅವರಿಷ್ಟಪಟ್ಟಿದ್ದರೆ ೧೯೨೦, ೩೧, ೪೨, ೪೫ ಮತ್ತು ೧೯೪೬ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡಬಹುದಾಗಿತ್ತು. ಇಂಗ್ಲಿಷ್ ರಾಜ್ಯ ದೇಶದ ರಾಜಕೀಯ, ಸಾಮಾಜಿಕ ಏಕತೆಯನ್ನು ಎಂದೆಂದಿಗೂ ಖಂಡಗೊಳಿಸಿ ಕಟುತೆ, ಕೋಮುವಾರುತನ ಮತ್ತು ಸಂಕೀರ್ಣತೆಯ ವಿಷಪೂರಿತ ಬೀಜ ಬಿತ್ತಿತು. ಅದಕ್ಕಾಗಿ ಇಂಗ್ಲಿಷರಿಗೆ ಎಂದೂ ಕ್ಷಮೆ ದೊರಕದು. ಇಂದು ನಮ್ಮ ದೇಶದ ಅಖಂಡತೆಗೆ ವಿಧ–ವಿಧವಾದ ಆಘಾತಗಳಾಗುತ್ತಿವೆ. ಮನೆಯಂಗಳದಲ್ಲಿ ದಂಗೆ ಮತ್ತು ಆತಂಕ ಹರಡಿದೆ, ಅದರ ಪೂರ್ತಿ ಜವಾಬ್ದಾರಿ ಇಂಗ್ಲಿಷರ ವಿಭಜನಾ ನೀತಿಯದು. ಸ್ವಾತಂತ್ರ್ಯ ಸಿಕ್ಕ ನಂತರ ನಾವು ಗಾಂಧೀಜಿಯವರ ಸಿದ್ಧಾಂತವನ್ನು ಬಿಟ್ಟೆವು, ಹಿಂಸೆಯನ್ನು ನಮ್ಮದಾಗಿಸಿಕೊಂಡೆವು, ಈ ಹಿಂಸಾತ್ಮಕ ತತ್ತ್ವಗಳು ನಮ್ಮ ಎದುರಿಗೇ ನಮ್ಮ ದೇಶವನ್ನು ಮತ್ತು ಅದರ ಆಡಳಿತ ವ್ಯವಸ್ಥೆಯನ್ನು ಮುರಿಯುವುದರಲ್ಲಿ ತೊಡಗಿಕೊಂಡಿವೆ.

* * * *

# ೨೯. ಮಹಾಕರುಣೆ – ನೋವಾಖಲಿ

ಮುಸ್ಲಿಂ ಲೀಗ್‌ನ ಪಾಕಿಸ್ತಾನದ ಬೇಡಿಕೆಗೆ ಕಾಂಗ್ರೆಸ್‌ನವರು ಒಪ್ಪಿಗೆ ಸೂಚಿಸುತ್ತಿಲ್ಲ ಎಂದು ತಿಳಿದು ಜಿನ್ನಾ ಸಂವಿಧಾನಾತ್ಮಕ ಮಾತುಕತೆಯಿಂದ ಪಾಕಿಸ್ತಾನ ಸಿಗದಿದ್ದರೆ ಹಿಂಸೆಯ 'ಡೈರೆಕ್ಟ್ ಆ್ಯಕ್ಷನ್'ನಿಂದ ಪಾಕಿಸ್ತಾನವನ್ನು ಪಡೆದುಕೊಳ್ಳುತ್ತೇವೆಂದು ಪ್ರಕಟಪಡಿಸಿದರು. ಕಾಂಗ್ರೆಸ್‌ನ ಅಹಿಂಸಾತ್ಮಕ ನೀತಿಯ ಬಂಧನ ಅವರಿಗಿರಲಿಲ್ಲ. ನೇರವಾಗಿ ಹಿಂಸೆ ಮುಖಾಂತರ ತಮ್ಮ ಬೇಡಿಕೆಯನ್ನು ಪೂರೈಸಿಕೊಳ್ಳುತ್ತೇವೆಂದರು. ಈ ಉದ್ದೇಶದಿಂದ ಅವರು ೧೫ ಆಗಸ್ಟ್ ೧೯೪೬ರಂದು ಪಾಕಿಸ್ತಾನವನ್ನು ಪಡೆದುಕೊಳ್ಳುವುದಕ್ಕಾಗಿ 'ಡೈರೆಕ್ಟ್ ಆ್ಯಕ್ಷನ್' ದಿವಸವೆಂದು ಘೋಷಿಸಿದರು. ೧೯೪೨ರಲ್ಲಿ ಕಾಂಗ್ರೆಸ್ 'ಭಾರತ್ ಛೋಡೋ'ನ ಘೋಷಣೆ ನೀಡಿತ್ತು. ೧೯೪೬ರಲ್ಲಿ ಮುಸ್ಲಿಂ ಲೀಗ್ 'ಡೈರೆಕ್ಟ್ ಆ್ಯಕ್ಷನ್'ನ ಹೆಸರಿನಲ್ಲಿ ಖುಲ್ಲಂಖುಲ್ಲಾ ಹಿಂಸೆಯ ಕರೆ ನೀಡಿತು. ಅದನ್ನು ಕಲ್ಕತ್ತಾದಿಂದ ಆರಂಭಿಸುವುದೆಂದು ನಿರ್ಧರಿಸಿದರು, ಅಲ್ಲೇ ಅವರ ಮುಸ್ಲಿಂ ಲೀಗ್ ಸರಕಾರವಿತ್ತು, ಹಾಗಾಗಿ 'ಡೈರೆಕ್ಟ್ ಆ್ಯಕ್ಷನ್'ನ ಎಲ್ಲಾ ಅನುಕೂಲಗಳೂ ಅಲ್ಲಿದ್ದವು.

ಮುಸಲ್ಮಾನರು ಕಲ್ಕತ್ತಾದಲ್ಲಿ 'ಡೈರೆಕ್ಟ್ ಆ್ಯಕ್ಷನ್' ಆರಂಭಿಸಿದ ಮೂರು ದಿನಗಳ ನಂತರ ಆ್ಯಕ್ಷನ್ ಮಾಡುವವರ ತಲೆಯ ಮೇಲೇ ಹಿಂಸೆ ತಿರುಗಿ ಬಿತ್ತು. ಆಗ ಹಿಂದೂಗಳು 'ಡೈರೆಕ್ಟ್ ಆ್ಯಕ್ಷನ್'ನ ಸೇಡು ತೀರಿಸಿಕೊಂಡರು, ದೇಶದಲ್ಲೆಲ್ಲೆಡೆ ಅದರ ಪ್ರತಿಧ್ವನಿ ಆರಂಭವಾಯಿತು. ಕಲ್ಕತ್ತಾ ಸೇಡಿನ ಆಕ್ರೋಶ ದೇಶದಲ್ಲೆಲ್ಲೆಡೆ ಹರಡಿತು. ಈ ಸೇಡಿನ ಭೀಕರವಾದ ಪಾಶವೀ ರೂಪ ನೋವಾಖಲಿಯಲ್ಲಿ ಕಾಣಿಸಿಕೊಂಡಿತು.

ಪೂರ್ವಬಂಗಾಳದ ಚಿತ್ತಗಾಂಗ್ ಡಿವಿಜ಼ನ್‌ನ ನೋವಾಖಲಿ ಒಂದು ಚಿಕ್ಕ ಜಿಲ್ಲೆ, ಪ್ರಕೃತಿ ಅಲ್ಲಿ ಬಹಳ ಕೃಪೆ ತೋರಿದೆ. ಗಂಗೆಯ ಅನೇಕ ಅಲೆಗಳು, ನಾಲೆಗಳು ಜಿಲ್ಲೆಯಲ್ಲಿ ಎಲ್ಲ ಕಡೆಯಲ್ಲೂ ಹರಡಿಕೊಂಡಿವೆ. ಹಸಿರು ದಟ್ಟವಾಗಿ ಪ್ರದೇಶದಲ್ಲೆಲ್ಲೆಡೆ ತುಂಬಿದೆ. ಭತ್ತ, ಸೆಣಬಿನ ಗಿಡಗಳು, ಸಸ್ಯ ಶ್ಯಾಮಲ ಹೊಲಗದ್ದೆ, ಮಾವು, ತೆಂಗು, ಅಡಿಕೆ, ಬಾಳೆಯ ದಟ್ಟವಾದ ವನ, ಇನ್ನೂ ಬೇರೆಯ ಹೂವು, ಹಣ್ಣುಗಳಿಂದ ತುಂಬಿ ಈ ಕ್ಷೇತ್ರ ಒಂದು ಉಪವನದ ಹಾಗೆ ಸುಶೋಭಿತವಾಗಿದೆ. ಪ್ರಕೃತಿಯ ಈ ಆಶೀರ್ವಾದ ಇದೆಯೇ ಹೊರತು ಅಲ್ಲಿಯ ಜನ ಏನೂ ವಿಶೇಷ ಪುರುಷಾರ್ಥ ಮಾಡಿಲ್ಲ. ಒಳ್ಳೆಯ ರಸ್ತೆಗಳು, ರೈಲುಗಾಡಿ ಇವುಗಳ ಕೊರತೆಯಿಂದ

ಅಲ್ಲಿನ ನದಿ–ನಾಲೆಗಳಲ್ಲಿ ಚಿಕ್ಕ–ಪುಟ್ಟ ತೆಪ್ಪಗಳೇ ಹೋಗಿ–ಬರುವ ಸಾಧನಗಳಾಗಿವೆ. ಹುಲ್ಲು ಹಾಸಿದ ಗುಡಿಸಲುಗಳು ದೂರದ ಹೊಲಗಳಲ್ಲಿ ಕಾವ್ಯ ರಚಿಸುತ್ತಿದ್ದವೆಂದರೆ ಆ ಗಾಢ ಏಕಾಂತದಲ್ಲಿ ಹಿಂಸೆ ಕೂಡ ಹುಟ್ಟಿಕೊಂಡಿತ್ತು. ಆ ಗಾಢವಾದ ಪ್ರದೇಶದಲ್ಲಿ ಮನುಷ್ಯನನ್ನು ಕತ್ತರಿಸಿ ಹಾಕಿದರೂ ವಾರಗಳ ಕಾಲ ಅದರ ಸದ್ದು ಕೂಡ ಕೇಳಿಸುತ್ತಿರಲಿಲ್ಲ. ಆಳವಾದ ನೀರು ಮನುಷ್ಯನ ಕುಕರ್ಮಗಳನ್ನು ನುಂಗಿಬಿಡುತ್ತಿತ್ತು ಮತ್ತು ದಟ್ಟವಾದ ಕಾಡು ಅದರ ಮೇಲೆ ಆವರಿಸಿಕೊಳ್ಳುತ್ತಿತ್ತು. ಇಂತಹ ಅತಿ ಆಕರ್ಷಕ ಆದರೆ ಭಯ ಹುಟ್ಟಿಸುವ ಕಾಡಿನಲ್ಲಿ ನೋವಾಖಲಿ ಜಿಲ್ಲೆ ಮಾಣಿಕ್ಯವಿದ್ದ ಹಾಗಿದೆ. ೧೯೪೬ರಲ್ಲಿ ನೋವಾಖಲಿಯಲ್ಲಿದ್ದ ೨೨ ಲಕ್ಷ ಜನಸಂಖ್ಯೆಯಲ್ಲಿ ೧೮ ಲಕ್ಷ ಜನ ಮುಸಲ್ಮಾನರು ಮತ್ತು ನಾಲ್ಕು ಲಕ್ಷ ಜನ ಹಿಂದೂಗಳಿದ್ದರು. ಉದ್ಯೋಗ ಮತ್ತು ಆಧುನಿಕ ಸಂಚಾರ ವ್ಯವಸ್ಥೆ ಏನೂ ಇರಲೇ ಇಲ್ಲ ಎನ್ನಬಹುದು. ಹಿಂದೂಗಳ ಸಂಖ್ಯೆ ಒಟ್ಟಾರೆ ಜನಸಂಖ್ಯೆಯ ಶೇಕಡಾ ಇಪ್ಪತ್ತ ರಷ್ಟು ಮಾತ್ರವೇ ಇದ್ದಿತು. ಆದರೆ ಶೇಕಡಾ ೬೪ರಷ್ಟು ಭೂಮಿಯ ಮಾಲೀಕರು ಅವರಾಗಿದ್ದರು. ಹಿಂದಿನ ಕಾಲದಲ್ಲಿ ಕಷ್ಟಪಟ್ಟು ದುಡಿದು ಅವರು ಧನಿಕರಾಗಿದ್ದರು. ಆದರೆ ಕಳೆದ ನೂರು ವರ್ಷಗಳಿಂದ ಅವರ ಶ್ರಮವೆಲ್ಲ ಜಹಗೀರದಾರಿ ಮಾಡುವುದಕ್ಕಷ್ಟೇ ಸೀಮಿತವಾಗಿತ್ತು. ಮುಸ್ಲಿಂ ಕೂಲಿಕಾರರ ಗುಂಪು ಅವರು ಕೊಡುವ ಕೆಲಸಕ್ಕೆ ಸಿದ್ಧವಾಗಿರುತ್ತಿದ್ದರು. ಇಷ್ಟು ಕಡಿಮೆ ಸಂಖ್ಯೆ ಹಿಂದೂಗಳಿದ್ದಾಗ್ಯೂ ಅಸ್ಪೃಶ್ಯತೆಯ ವಿಕೃತ ಪದ್ಧತಿ ಎಷ್ಟು ಕಠೋರವಾಗಿತ್ತೆಂದರೆ ಸವರ್ಣ ಹಿಂದೂಗಳ ಸಂಖ್ಯೆ ಇನ್ನೂ ಕಡಿಮೆಯಾಗಿಹೋಗಿತ್ತು.

ನೋವಾಖಲಿಯ ಮುಸಲ್ಮಾನರು ಹೆಚ್ಚೆಂದರೆ ೫೦ ವರ್ಷಗಳ ಹಿಂದೆ ಹಿಂದೂ ಆಗಿದ್ದು, ಧರ್ಮಪರಿವರ್ತನೆ ಆಗಿದ್ದವರು. ಸಾಮಾನ್ಯವಾಗಿ ಅಲ್ಲಿ ಮುಸಲ್ಮಾನರು ಅಶಿಕ್ಷಿತರು, ಹಿಂದುಳಿದಿದ್ದವರು, ಆದರೆ ಅಬೋಧ–ಪುಕ್ಕಲರು. ಈ ಮುಸಲ್ಮಾನರನ್ನು ಬಹಳ ಬೇಗ ಉತ್ತೇಜನೆಗೆ ಒಳಗಾಗಿಸಿ ತಪ್ಪುದಾರಿಗೆ ಎಳೆಯಬಹುದಾಗಿತ್ತು, ಹೀಗೆ ಭಾವನಾಪರವಶನಾಗುತ್ತಿದ್ದ ಆ ಮುಸಲ್ಮಾನರು ಉತ್ತೇಜಿತರಾದ ಮತ್ತಿನಲ್ಲಿ ಎಷ್ಟೇ ಹತ್ಯೆಗಳನ್ನು ಬೇಕಾದರೂ ಮಾಡಬಲ್ಲವನಾಗಿದ್ದರು, ಧರ್ಮಕ್ಕೆ ಹೆದರದ ಅಂತಹ ಧರ್ಮಾಂಧರಾದವರಿಗೆ ಮುಲ್ಲಾ, ಮೌಲವಿಗಳ ಕುಮ್ಮಕ್ಕೂ ಇತ್ತು, ನೋವಾಖಲಿಯ ವಿಶೇಷತೆ ಎಂದರೆ ಸಾಮಾನ್ಯವಾಗಿ ಎಲ್ಲಾ ಇಮಾಮ್‌ಗಳೂ ನೋವಾಖಲಿಯವರೇ. ಬೊಂಬಾಯಿ, ಮದ್ರಾಸ್, ಪೂನಾದಲ್ಲೂ ನೋವಾಖಲಿಯ ರಾಷ್ಟ್ರೀಯ ಆಂದೋಳನ ಸಕ್ರಿಯವಾಗಿತ್ತು. ಬಾರಾಡೋಲಿ ಸತ್ಯಾಗ್ರಹದಲ್ಲಿ ಆ ಜಿಲ್ಲೆ ಖಿಲಾಫತ್ ಜೊತೆಗಿತ್ತು. ೧೯೩೧–೩೨ರ ಉಪ್ಪಿನ ಸತ್ಯಾಗ್ರಹ ನೋಆಖಾಲಿಯನ್ನು ಜೀವಂತಗೊಳಿಸಿತ್ತು. ನೋವಾಖಲಿ ಕೂಡ ಉಪ್ಪು ತಯಾರಿಸುವ ಕೇಂದ್ರವಾಗಿತ್ತು. ಇಡೀ ಜಿಲ್ಲೆ ೧೯೩೨ರ ಆಂದೋಳನದಲ್ಲಿ ಧುಮುಕಿತ್ತು.

ಇಂಗ್ಲಿಷ್ ಅಧಿಕಾರಶಾಹಿಗೆ ಜಿಲ್ಲೆ ಈ ತೆರನಾಗಿ ರಾಷ್ಟ್ರೀಯತೆಯಲ್ಲಿ ಭಾಗವಹಿಸುವುದು ಇಷ್ಟವಾಗಿರಲಿಲ್ಲ. ೧೯೨೦–೨೧ರ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್‌ನ ಬಲದ ಮೇಲೆ ಒಬ್ಬ ಹಿಂದೂ ಚಮ್ಮಾರ, ಒಬ್ಬ ಅಶಿಕ್ಷಿತ ಚಹಮಾಡುವ ಮುಸಲ್ಮಾನ, ಸರಕಾರಿ ರಾಯಬಹಾದುರ ವಕೀಲ, ಮತ್ತಿಬ್ಬರು ಖಾನ್ ಬಹಾದುರರ ಜಮೀನನ್ನು ಮುಟ್ಟುಗೋಲು ಹಾಕಿಸಿದ್ದರು.

ಸ್ವಾತಂತ್ರ್ಯಪ್ರೇಮದ ಇಂತಹ ಜಿಲ್ಲೆಯನ್ನು ನಿಯಂತ್ರಿಸುವ ಮಾರ್ಗವೇ ಇಲ್ಲವಾಯಿತು. ಆಗ ಜಿಲ್ಲೆಯ ಇಂಗ್ಲಿಷ್ ಅಧಿಕಾರಿಗಳು ಕೋಮುವಾದದ ಹಳೆಯ ಅನುಭವವನ್ನು ಉಪಯೋಗಿಸಲಾರಂಭಿಸಿದರು. ಎಲ್ಲಾ ತರಹೆಯ ಮುಲ್ಲಾಗಳು, ಮೌಲ್ವಿಗಳನ್ನು ಸೇರಿಸಿ ಒಂದು ಕೋಮುವಾದಿ ಸಮಿತಿಯನ್ನು ರಚಿಸಿದರು. ಆಗಿದ್ದ ಮುಸ್ಲಿಂ ಜಿಲ್ಲಾಧಿಕಾರಿ ಆ ಸಮಿತಿಗೆ ಹಣ ಮತ್ತು ಕೆಲವು ಅನುಕೂಲಗಳನ್ನು ಕೊಟ್ಟು ಎಲ್ಲರೆದುರಿಗೇ ಪ್ರೋತ್ಸಾಹಿಸುತ್ತಿದ್ದರು. ಈ ಸಮಿತಿಯ ಭಾಷಣಗಳಲ್ಲಿ ಯಾವಾಗಲೂ ಕಾಂಗ್ರೆಸ್ಸನ್ನು ನಿಂದಿಸಲಾಗುತ್ತಿತ್ತು, ಹಿಂದೂ ಮಹಿಳೆಯರನ್ನು ಕೂಡ ಅವಮಾನಪಡಿಸುತ್ತಿದ್ದರು. ದೇಶದ ಪ್ರಗತಿಯನ್ನ ತಡೆಯುವುದು, ಇಂಗ್ಲಿಷರ ಅಡಿಯಲ್ಲಿ ಗುಲಾಮಗಿರಿಯನ್ನು ಎಂದೆಂದಿಗೂ ಇರುವಂತೆ ಮಾಡುವುದು ಈ ದೇಶದ ಆಡಳಿತಾಧಿಕಾರಿಗಳು ಯಾವಾಗಲೂ ಮಾಡುತ್ತಿದ್ದ ಕೆಲಸ. ಅದಕ್ಕೆ ಒಂದು ಉದಾಹರಣೆ ಕೊಟ್ಟರೆ ಸಾಕಾದೀತು. ಕಲ್ಕತ್ತಾದ ಒಬ್ಬ ಖ್ಯಾತಿಗಳಿಸಿದ ಪತ್ರಕರ್ತನಿಗೆ ಇಂಗ್ಲಿಷ್ ಮುಖ್ಯಸೆಕ್ರೆಟರಿಯಾದವನು, 'ನೀವು ಹಿಂದೂಗಳು ಕ್ರಾಂತಿಕಾರರು, ಅಸಹಕಾರ ಮಾಡ್ತೀರಿ, ಸವಿನಯ ಆಂದೋಳನ ಮಾಡ್ತೀರಿ. ಕೊನೆಯಪಕ್ಷ ಯಾವುದಾದರೂ ಒಂದು ಪಕ್ಷವಾದರೂ ನಮ್ಮ ಕಡೆಗಿರಬೇಕು, ಅದಕ್ಕಾಗಿಯೇ ಮುಸ್ಲಿಂ ಲೀಗ್‌ನ ನಾವು ನಮ್ಮ ಕಡೆಗೆ ಇಟ್ಟುಕೊಂಡಿದ್ದೀವಿ. ಇವತ್ತು ನೀವು ಹಿಂದೂಗಳೇನಾದರೂ ನಮಗೆ ಸಹಕಾರ ನೀಡಿದರೆ ನಾವು ಮುಸ್ಲಿಂ ಲೀಗ್‌ನ ಒದ್ದು ಓಡಿಸಿಬಿಡುತ್ತೇವೆ' ಎಂದು ಹೇಳಿದ. ಇದಕ್ಕಿಂತ ಹೆಚ್ಚು ಸ್ಪಷ್ಟವಾದ ವ್ಯಾಖ್ಯಾನ ಎಲ್ಲಿದ್ದೀತು. ಇಂಗ್ಲಿಷರ ಈ ನೀತಿಯನ್ನು ಪಾಲಿಸುವುದಕ್ಕಾಗಿ ನೋವಾಖಲಿಯ ಮುಸ್ಲಿಂ ಕಲೆಕ್ಟರನು ಮುಲ್ಲಾಗಳ ಸಮಿತಿಯೊಂದನ್ನು ರಚಿಸಿ ಇಂಗ್ಲಿಷ್‌ರನ್ನು ಸಂತುಷ್ಟಗೊಳಿಸಲು ಪ್ರಯತ್ನಿಸಿದ್ದ, ಅವನ ದೃಷ್ಟಿಯಿಂದ ಅದು ಸರಿಯಾಗಿತ್ತು.

ಇವೆಲ್ಲವೂ ೧೯೩೯ರವರೆಗೂ ನಡೆಯುತ್ತಿತ್ತು. ಯುದ್ಧದ ಸಮಯದಲ್ಲಿ ಮೂರು ವರ್ಷ ಕಾಲ ಕ್ಷಾಮ ಉಂಟಾಗಿತ್ತು, ನಂತರ ಅತಿವೃಷ್ಟಿಯಿಂದ ಫಸಲೆಲ್ಲಾ ಹಾಳಾಯಿತು. ೧೯೪೨ರಲ್ಲಿ ಅಕ್ಕಿ ೬ ರೂಪಾಯಿ ಮಣ ಆಯಿತು. ಈ ಕ್ಷಾಮ – ಭ್ರಷ್ಟಾಚಾರದಲ್ಲಿ ನೋವಾಖಲಿ ಜಿಲ್ಲೆಯಲ್ಲಿ ೫೦,೦೦೦ ಜನ ಹಸಿವಿನಿಂದ ಸತ್ತರು. ೨೫,೦೦೦ ಜನ ಧಾನ್ಯ, ಆಸರೆ ಹುಡುಕುತ್ತಾ ಕಲ್ಕತ್ತೆಗೆ ಓಡಿಹೋದರು. ೧೯೧೧ರಲ್ಲಿ ನೋವಾಖಲಿಯಲ್ಲಿ ಒಂದು ಚದರಮೈಲಿಗೆ ೭೧೪ ಜನ ಇದ್ದರು, ಅದೇ ೧೯೪೬ರಲ್ಲಿ

೧೩೩ಕ್ಕೆ ಇಳಿದರು. ಅದಕ್ಕೂ ಮೇಲೆ ಕ್ಷಾಮ ಬೇರೆ, ನಿರುದ್ಯೋಗ ಹೆಚ್ಚಾಗುತ್ತಿತ್ತು, ಜೀವನ ನಡೆಸಲು ಸಾಧನವೇ ಇರಲಿಲ್ಲ, ಕಾಳಸಂತೆ ಮತ್ತು ಭ್ರಷ್ಟಾಚಾರ ತೀವ್ರವಾಗಿ ಬೆಳೆಯುತ್ತಿತ್ತು, ಕಾಳಸಂತೆಯಿಂದ ಹೆಚ್ಚು ಜನ ಹಿಂದೂಗಳೇ ಸಾಹುಕಾರರಾದರು. ಬಡ ಮುಸಲ್ಮಾನರಿಗೆ ಇವರನ್ನು ಕಂಡರೆ ಜುಗುಪ್ಸೆ. ಹೀಗೆ ೧೯೪೬ರಲ್ಲಿ ಬಡತನ, ಕ್ಲೇಶ, ಹಸಿವೆ, ಅತ್ಯಾಚಾರ ಇವುಗಳಿಂದ ನೋವಾಖಲಿ ಒಳಗೊಳಗೇ ಕುದಿಯುತ್ತಿತ್ತು. ೧೬ ಆಗಸ್ಟ್‌ನ 'ಡೈರೆಕ್ಟ್ ಆ್ಯಕ್ಷನ್' ದಿವಸದ ವಾಸ್ತವಾಂಶಗಳು ಈ ಅಬೋಧರಾಗಿದ್ದ ಜನರನ್ನು ಉದ್ರೇಕಿಸಿದುವು. ಅವರು ಕುಪಿತಗೊಂಡರು. ಇದರ ಜೊತೆಗೆ ಮತ್ತೊಂದು ವಿಕಾರವಾದ ಮಗ್ಗುಲು ಇದಕ್ಕೆ ಕೂಡಿಕೊಂಡಿತ್ತು. ಮುಸ್ಲಿಂ ಲೀಗ್ ಪೂರ್ತಿ ಬಂಗಾಳ ಪಾಕಿಸ್ತಾನಕ್ಕೆ ಸಿಗಬೇಕು, ಅಸ್ಸಾಂ ಮೇಲೂ ಅವರ ಅಧಿಕಾರವೇ ಇರಬೇಕು ಅಂತ ಇಷ್ಟಪಡುತ್ತಿತ್ತು. ಇದು ಬಹುಸಂಖ್ಯಾತರ ಪ್ರಶ್ನೆಯಾದ್ದರಿಂದ ಉನ್ಮತ್ತರಾಗಿದ್ದ ಮುಸ್ಲಿಂ ಲೀಗ್‌ನ ಸಮರ್ಥಕರು ಹಿಂದೂಗಳನ್ನ ಕೊಂದು, ಧರ್ಮಪರಿವರ್ತನೆ ಮಾಡಿದರೆ ಮುಸಲ್ಮಾನರು ಬಹುಸಂಖ್ಯಾತರಾಗುತ್ತದೆಂದು ನಿರ್ಣಯಿಸಿ ಆಗ ಪಾಕಿಸ್ತಾನಕ್ಕೆ ಬಂಗಾಳ, ಅಸ್ಸಾಂ ಎರಡೂ ಕ್ಷೇತ್ರಗಳು ಸುಲಭವಾಗಿ ದೊರಕುತ್ತದೆಂದು ನಿಶ್ಚಯಿಸಿದರು. ಇದು ಶುದ್ಧ ಹುಚ್ಚುತನವಾಗಿತ್ತು, ಆದರೆ ಆ ದಿನಗಳು ಉನ್ಮಾದ – ಉತ್ತೇಜನೆಯ ಸಾಹಸದ ದಿನಗಳಾಗಿದ್ದವು. ಹೀಗಾಗಿ ನೋವಾಖಲಿಯ ಮುಸಲ್ಮಾನರೂ ಹುಚ್ಚಾದರು.

೧೯೪೬ರ ದೀಪಾವಳಿ ಹಬ್ಬದ ದಿನ ಒಂದು ಆಗಬಾರದ ಕೋಮುವಾದಿ ಉನ್ಮಾದ ನೋವಾಖಲಿಯ ಜಿಲ್ಲೆಯಲ್ಲೆದ್ದಿತು. ಆ ಆವೇಶದಲ್ಲಿ ಮುಸಲ್ಮಾನರು ಹಿಂದೂಗಳ ಮನೆಗಳನ್ನು ಲೂಟಿ ಮಾಡಿದರು, ಮಂದಿರಗಳನ್ನು ಒಡೆದರು, ಮಹಿಳೆಯರನ್ನಪಹರಿಸಿದರು, ಅವರನ್ನ ಧರ್ಮಭ್ರಷ್ಟರನ್ನಾಗಿಸಿದರು, ಬಲವಂತವಾಗಿ ಧರ್ಮಪರಿವರ್ತನೆ ಮಾಡಿಸಿದರು, ಮುಸಲ್ಮಾನರ ಕೈಲಿ ಅವರ ನಿಕಾಹ್ ಓದಿಸಿದರು, ಹಳ್ಳಿ–ಹಳ್ಳಿಗಳನ್ನೇ ಸುಟ್ಟರು, ಅವರ ಆಸ್ತಿಪಡಗ ಎಲ್ಲ ಲೂಟಿ ಮಾಡಿದರು. ನೋವಾಖಲಿಯ ಅಪೂರ್ವ ಪ್ರಕೃತಿ ಸೌಂದರ್ಯದ ನಡುವೆ ನೃಶಂಸ ಅತ್ಯಾಚಾರಗಳಾದವು. ಆ ವಿಧ್ವಂಸದ ಭೀಕರತೆಯನ್ನ ಹೇಗೆ ವರ್ಣಿಸಲಿ? ಮಹಾಪ್ರಳಯದಲ್ಲಿ ಹುಲ್ಲು–ಎಲೆ ಎಲ್ಲವೂ ನಷ್ಟವಾಗುವ ಹಾಗೆ ಈ ಹುಚ್ಚೆದ್ದ ಮುಸಲ್ಮಾನರು ಹಿಂದೂಗಳನ್ನ ಬೇರುಸಹಿತ ಕಿತ್ತು ನೆಲಸಮಮಾಡಿದರು. ಆ ಸಂಹಾರದಲ್ಲೆಷ್ಟೋ ಪರಿವಾರಗಳು ನಾಶವಾದವು, ಅಲ್ಲಲ್ಲಿ ಯಾವುದಾದರೂ ಮಗುವೊಂದು ಬದುಕಿದ್ದೀನಿ ಅಂತ ಉಳಿದಿದ್ದರೂ ಇರಬಹುದು. ಮಿಕ್ಕ ಹಿಂದೂಗಳನ್ನೆಲ್ಲಾ ಕೊಂದುಹಾಕಿದರು, ಸಾವಿರಾರು ಮಹಿಳೆಯರನ್ನು ಕಣ್ಮರೆ ಮಾಡಿದರು. ದುರ್ಗಾಪೂಜೆಯ ದಿನಗಳವು, ಕಲ್ಕತ್ತಾ ನಿವಾಸಿಗಳು ತಮ್ಮ ಊರಾದ ನೋವಾಖಲಿಯಲ್ಲಿ ದೇವಿಯ ಆರಾಧನೆಗಾಗಿ ಬಂದಿದ್ದರು, ಅಲ್ಲೇ ಅವರನ್ನು

ಕತ್ತರಿಸಿದರು, ಜನರ ರಕ್ತದಿಂದ ನಿಜವಾಗಿ ನದೀ–ನಾಲೆಗಳು ತುಂಬಿ ಹೋದವು. ಎಷ್ಟೋ ತಿಂಗಳುಗಳವರೆಗೆ ಜನರಿಗೆ, ತಮ್ಮ ಪರಿವಾರದಲ್ಲಿ ಯಾರು ಬದುಕಿದ್ದಾರೆ, ಎಲ್ಲಿದ್ದಾರೆ ಅಂತ ಏನೊಂದೂ ತಿಳಿಯಲಿಲ್ಲ. ಈ ಉಗ್ರರು ಸೇತುವೆ – ರಸ್ತೆ ಎಲ್ಲವನ್ನೂ ಮುರಿದಿಟ್ಟರು. ಈ ಘಟನೆಗಳು ನಡೆದ ಜಾಗಕ್ಕೆ ತಲುಪಲು ಕೂಡ ಆಗುತ್ತಿರಲಿಲ್ಲ, ಮನುಷ್ಯ ಇಷ್ಟರ ಮಟ್ಟಿಗೆ ರಾಕ್ಷಸನಾಗಬಲ್ಲನೆಂದು ಊಹಿಸಲು ಕೂಡ ಆಗುತ್ತಿರಲಿಲ್ಲ. ಕೆಲವು ದಿನಗಳವರೆಗೂ ನೋವಾಖಲಿಯ ಜನರಿಗೆ ಭೂತ ಹಿಡಿದಿತ್ತು, ಆ ಮಹಿಳೆಯರ ಸ್ಥಿತಿ ಹೇಗಿದ್ದಿರಬಹುದು! ಅವರ ಜೀವನ ಹೇಗೆ ಕಳೆದಿರಬಹುದು! ಈ ಭಯಾನಕ ಕಾಂಡವನ್ನು ಹೇಗೆ ಸಹಿಸಿರಬಹುದು! ಅವರ ಮನಸ್ಸಿನ ಮೇಲೆ ಆತಂಕ ಹೇಗೆ ಹರಡಿರಬಹುದು? ಈ ರಾಕ್ಷಸೀ ಹತ್ಯಾಕಾಂಡವನ್ನು ನೋಡಿ ಆ ಮಕ್ಕಳ ಸ್ಥಿತಿ ಏನಾಗಿರಬಹುದು! ಇದು ದೊಡ್ಡವರ ಆಟವೆಂದೇ ಅವಕ್ಕನಿಸಿರಬಹುದು! ಇವೆಲ್ಲಕ್ಕಿಂತಲೂ ಹೆಚ್ಚಾಗಿ ಆ ಹತ್ಯೆಗೈದರಲ್ಲ, ಅವರುಗಳ ಮನಃಸ್ಥಿತಿ ಹೇಗಿದ್ದಿರಬೇಕು? ರಾತ್ರಿ ಕಣ್ಣು ಮುಚ್ಚಿದ ಮೇಲೆ ಅವರ ಕಣ್ಮುಂದೆ ಬರಿಯ ಹೆಣಗಳು, ರಕ್ತದಲ್ಲಿ ಮಿಂದ ಮುಂಡಗಳು ನರ್ತಿಸುತ್ತಿದ್ದಿರಬೇಕು. ಇಷ್ಟೆಲ್ಲಾ ನಿರ್ದಯತೆಯ ನಂತರ ತಮ್ಮ ಹೆಂಡತಿ–ಮಕ್ಕಳನ್ನು ಪ್ರೀತಿಸಲು ಆಗಿದ್ದೀತೆ? ಯಾವುದೋ ಒಂದು ನೀರವ ಶಾಂತಿಯಲ್ಲಿ ಈ ಪಾಪದ ಹೊರೆಯೊಂದಿಗೆ ಅವರು ಖುದಾನ ಎದುರು ಮಂಡಿಯೂದಿ ಹೇಗೆ ಪ್ರಾರ್ಥನೆ ಮಾಡಿರಬಹುದು? ಹೃದಯದೊಳಗೆ ನೋವಾಗಿರಲಾರದೆ? ಸತ್ತವರೇನೋ ಮುಕ್ತರಾದರು, ಆದರೆ ಉಳಿದವರ ಮೇಲೆ ದೈವೀ ಕೋಪ ಹೇಗೆ ಪ್ರಕಟವಾಗಿರಬಹುದು? ಈ ಪ್ರಶ್ನೆಗಳೆಲ್ಲಾ ಈಗ ನಲವತ್ತು ವರ್ಷಗಳ ನಂತರ ನನ್ನ ಹೃದಯದಲ್ಲಿ ಉಕ್ಕಿಬರುತ್ತಿವೆ. ನನಗೆ ನನ್ನ ಮನೆಯಲ್ಲೇ ನಿದ್ದೆ ಬರುವುದಿಲ್ಲ, ಊಟ ಸೇರುವುದಿಲ್ಲ, ಈ ಕರುಣ ಗಾಥೆಯನ್ನು ನೆನಪು ಮಾಡಿಕೊಂಡು ನನ್ನ ಕಣ್ಣೀರುಕ್ಕಿ ಹರಿಯುತ್ತದೆ. ಅಂಥದ್ದರಲ್ಲಿ ಬಾಪೂಜಿ ಸ್ಥಿತಿ ಏನಾಗಿದ್ದಿರಬೇಕು?

೧೫ ದಿನಗಳವರೆವಿಗೂ ಈ ನರಸಂಹಾರ ಕುರಿತು ಯಾರಿಗೂ ಸುಳಿವೇ ಸಿಕ್ಕಲಿಲ್ಲ. ಆದರೆ ದೇವರು ದಯಾಮಯಿ, ಕೆಲವರು ಬದುಕುಳಿದರು. ಅವರು ಈ ಹತ್ಯಾಕಾಂಡದ ಸುದ್ದಿ ಕಲ್ಕತ್ತೆಗೆ ಮುಟ್ಟಿಸಿದರು. ಈ ಮಹಾವಿಪ್ಲವದ ಕತೆ ನಿಧಾನವಾಗಿ ಬಾಪೂಜಿಗೆ ತಲುಪಲೇಬೇಕಿತ್ತು, ಬಂಗಾಳದ ಸುಹರಾವರ್ದಿ ಸಾಹೇಬರು ಸಹಾಯಾರ್ಥ ಸ್ವಲ್ಪ ಸ್ವಲ್ಪ ಸೈನ್ಯವನ್ನು ಕಳುಹಿಸಿಕೊಡುವ ನೆಪ ಹೂಡಿದರಾದರೂ ಪೊಲೀಸ್ ಸಹಾಯದ ನೆಪದಲ್ಲಿ ಹಿಂದೂಗಳ ಮೇಲೆ ಮತ್ತಷ್ಟು ಅತ್ಯಾಚಾರಗಳು ನಡೆದವು, ಕತ್ತಿಯ ಅಲುಗಿನ ಮೇಲೆ ಸುಳ್ಳು ಸಾಕ್ಷಿ ಹೇಳಿಸಿ ಅವರನ್ನು ಭಾಧ್ಯರನ್ನಾಗಿ ಮಾಡಿದರು. ಸಂರಕ್ಷಕ ನಿಜವಾಗಿ ರಾಕ್ಷಸನಾದ. ಈ ದುಃಖಪೂರಿತ ಸಮಾಚಾರ ದೆಹಲಿಗೆ ತಲುಪಿತು. ಆಗ ಬಾಪೂಜಿ ಸೇವಾಗ್ರಾಮಕ್ಕೆ ಹೊರಟಿದ್ದರು. ಅವರು

ಸೇವಾಗ್ರಾಮಕ್ಕೆ ಹೋಗುವುದನ್ನು ಬಿಟ್ಟರು. ಆದರೆ ಸ್ನೇಹಿತರು ಅವರನ್ನು ತಕ್ಷಣ ಕಲ್ಕತ್ತೆಗೆ ಹೋಗಬಿಡಲಿಲ್ಲ. ಬಂಗಾಳದ ಪ್ರಸಿದ್ಧ ಮುಖಂಡ ಸತೀಶ ಬಾಬು ಮತ್ತು ಹೆಸರಾಂತ ರಚನಾತ್ಮಕ ಕಾರ್ಯಕರ್ತ ಸತೀಶಚಂದ್ರ ದಾಸಗುಪ್ತಾ ಅವರು ಬಾಪೂಜಿಯೊಡನೆ ನಾವು ಮೊದಲು ನೋವಾಖಲಿಗೆ ಹೋಗಿ ಬರಲು ಬಿಡಿ, ನಂತರ ಅಗತ್ಯ ಬಿದ್ದರೆ ತಾವು ಅಲ್ಲಿಗೆ ಹೋಗುವಿರಂತೆ ಎಂದರು. ಅವರಿಬ್ಬರೂ ತಮ್ಮ ಸಂಗಡಿಗರೊಂದಿಗೆ ನೋವಾಖಲಿಗೆ ಹೋದರು, ಎಷ್ಟೋ ಕಷ್ಟಗಳನ್ನು ಸಹಿಸಿದರು. ಅವರುಗಳಲ್ಲಿ ಇಬ್ಬರನ್ನು ಅಲ್ಲೇ ಕೊಂದರು, ಆದರೆ ಆ ಸತ್ಯಾಗ್ರಹಿಗಳು ಅಲ್ಲೇ ಸ್ಥಿರವಾಗಿ ನಿಂತರು. ಅವರ ಇಬ್ಬರು ಜೊತೆಗಾರರಾದ ಭೂಪಾಲ ಮತ್ತು ವಿಶ್ವರಂಜನ ನೋವಾಖಲಿಯಲ್ಲೇ ಉಳಿದರು ಮತ್ತು ಅಲ್ಲಿನ ಜನರ ಸೇವೆಗಾಗಿ ತಮ್ಮ ಜೀವನವನ್ನರ್ಪಿಸಿದರು. ಪಾಕಿಸ್ತಾನ ರಚಿತವಾದ ನಂತರವೂ ಇವರಿಬ್ಬರೂ ಭಾರತಕ್ಕೆ ಹಿಂದಿರುಗಲಿಲ್ಲ, ಅಲ್ಲಿಯವರಾದರು.

ದುಃಖಿತರಾದ ಬಂಗಾಳದ ಮಹಿಳೆಯರಿಗೊದಗಿದ ವಿಪತ್ತನ್ನು ಬಾಪೂಜಿ ಸಹಿಸಲಾರದಾದರು. ಇನ್ನೇನಿಲ್ಲವೆಂದರೂ ಈ ದುಃಖತಪ್ತ ಮಹಿಳೆಯರಿಗೆ ಧೈರ್ಯ ಕೊಡುವುದು ಕೂಡ ದೊಡ್ಡ ಕೆಲಸವಾಗಿತ್ತು, ಕಲ್ಕತ್ತಾದಲ್ಲಿ ಒಬ್ಬ ಮುಸ್ಲಿಂ ಸ್ನೇಹಿತ ಬಾಪೂಜಿಯನ್ನು ಕೇಳಿದ – 'ನೀವು ನೋವಾಖಲಿಗೇಕೆ ಹೋಗುತ್ತಿರುವಿರಿ? ಬಿಹಾರ, ಅಹಮದಾಬಾದಿಗೇಕೆ ಹೋಗುವುದಿಲ್ಲ? ಬೇರೆ ಜಾಗಗಳಲ್ಲಿ ಮುಸಲ್ಮಾನರನ್ನು ಕೊಂದಿದ್ದಾರೆ.' ಬಾಪೂಜಿ ತಾವು ಎಲ್ಲಾ ಜಾಗಗಳಿಗೂ ಹೋಗಲು ಸಿದ್ಧವಿರುವುದಾಗಿಯೂ ಆದರೆ ನೋವಾಖಲಿಯಲ್ಲಿ ಮಹಿಳೆಯರ ಮೇಲೆಸಗಿರುವ ಅತ್ಯಾಚಾರಗಳ ಉದಾಹರಣೆ ಪ್ರಪಂಚದಲ್ಲೇ ಮತ್ತೆಲ್ಲೂ ಸಿಗುವುದಿಲ್ಲವೆಂದರು. ಹಿಂಸೆಗೊಳಗಾಗಿದ್ದ ಆ ಮಹಿಳೆಯರ ಆರ್ತನಾದ, ಅಳುವನ್ನು ಕೇಳಿಸಿಕೊಂಡು ಅವರು ನೋವಾಖಲಿಗೆ ಹೊರಟಿದ್ದರು. ಬೇರೆ ಎಷ್ಟೋ ಮಿತ್ರರೂ 'ಅಷ್ಟೊಂದು ಹತ್ಯೆಗಳು ನಡೆಯುತ್ತಿರುವಾಗ ನೀವು ಹೋಗಿ ಏನು ಪ್ರಯೋಜನವಾದೀತು?' ಎಂದು ಕೇಳಿದಾಗ ಬಾಪೂಜಿ, 'ಇದು ನನ್ನ ಅಹಿಂಸೆಯ ಅಗ್ನಿಪರೀಕ್ಷೆ, ಭಗವಂತ ನನಗೆ ದಾರಿತೋರಿಸುತ್ತಾನೆ. ಆದರೆ ಈಗ ನೋವಾಖಲಿಗೆ ಹೋಗುವುದು ನನ್ನ ಕರ್ತವ್ಯ, ಧರ್ಮ. ಅಲ್ಲಿ ಪೂರ್ತಿ ವರ್ಷ ಕೂಡ ಇರಬೇಕಾಗಿ ಬರಬಹುದು, ಅಲ್ಲೇ ತೀರಿಕೊಳ್ಳುವೆ, ಆದರೆ ಹಿಂದಿರುಗುವುದಿಲ್ಲ. ಏನೂ ಮಾಡಲಾಗಲಿಲ್ಲವೆಂದರೆ ಬದುಕಿದ್ದು ಏನಾಗಬೇಕು? ಅಲ್ಲೇ ವಿಲೀನವಾಗುತ್ತೇನೆ' ಎಂದರು ಬಾಪೂಜಿ. ದೆಹಲಿಯಿಂದ ಹೊರಡುವ ಮುಂಚಿನ ದಿನ ಸಂಜೆ ಬಾಪೂಜಿ ತಮ್ಮ ಪ್ರಾರ್ಥನಾ ಸಭೆಯಲ್ಲಿ, ನಾನೊಂದು ದೂರಯಾತ್ರೆಗೆ ಹೊರಟಿದ್ದೇನೆ, ಆರೋಗ್ಯ ಸರಿಯಿಲ್ಲ, ಆದರೆ ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಪಾಲಿಸಲೇಬೇಕು. ಯಾರ ಮೇಲೂ ದೋಷಾರೋಪಣೆ ಮಾಡುವುದಕ್ಕಾಗಿ ತಾನು ಬಂಗಾಳಕ್ಕೆ ಹೊರಟಿಲ್ಲವೆಂದೂ

ಈಶ್ವರನ ದಾಸನಾಗಿ ಅಲ್ಲಿಗೆ ಹೋಗುತ್ತಿದ್ದರೆಂದೂ ಹೇಳಿದರು. ಈಶ್ವರನ ದಾಸನು ಇಡೀ ಸೃಷ್ಟಿಯ ದಾಸನಾಗಬೇಕಾಗುತ್ತದೆಯಾದ್ದರಿಂದ ಬಂಗಾಳಕ್ಕೆ ಹೋಗಲೇ ಬೇಕಾಗಿದೆ. ಅದು ಜೀವನದ ಅಂತಿಮ ಕಾರ್ಯವಾಗಿರಬಹುದು, ಬಹುಶಃ ನೋವಾಖಲಿಯಿಂದ ತಾವು ಎಂದೂ ಹಿಂದಿರುಗುವುದೇ ಇಲ್ಲವೇನೋ, ಎಂದು ಹೇಳಿದರು.

ಮುಖ್ಯಮಂತ್ರಿ ಸುಹರಾವರ್ದಿ ಬಲವಂತ ಮಾಡಿದ್ದರಿಂದ ಬಾಪೂಜಿ ನಾಲ್ಕು ದಿನಗಳು ಕಲ್ಕತ್ತೆಯಲ್ಲೇ ಉಳಿದರು. ಆಗಸ್ಟ್‌ನ 'ಡೈರೆಕ್ಟ್ ಆ್ಯಕ್ಷನ್' ನಂತರ ಕಲ್ಕತ್ತಾ ಉರಿಯುತ್ತಲೇ ಇತ್ತು. ಆದರೆ ೩ ನವೆಂಬರ್ ಬಿಹಾರದಿಂದ ಕೋಮುವಾರು ದಂಗೆಗಳ ಸುದ್ದಿಬಂತು. ಪಂಡಿತ ಜವಾಹರಲಾಲ ನೆಹರೂ ಮತ್ತು ಸರದಾರ್ ಪಟೇಲ್ ಬಿಹಾರ ತಲುಪಿದರು ಮತ್ತು ಬಿಹಾರದ ಸ್ಥಿತಿಯನ್ನು ಹತೋಟಿಗೆ ತರತೊಡಗಿದರು. ಬಾಪೂಜಿ ಟೆಲಿಫೋನ್‌ನಲ್ಲಿ ನೆಹರೂ ಅವರೊಂದಿಗೆ ಮಾತನಾಡಿದರು, ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಅವರುಗಳು ಪ್ರಯತ್ನಿಸುತ್ತಿದ್ದರು. ಬಾಪೂಜಿ ಕಲ್ಕತ್ತೆಯ ಪ್ರಾರ್ಥನಾ ಸಭೆಯಲ್ಲಿ, 'ದ್ವೇಷಭಾವನೆ, ಸೇಡು ತೀರಿಸಿಕೊಳ್ಳುವುದು ಮನುಷ್ಯನಿಗೆ ತರವಲ್ಲ, ಇನ್ನೊಬ್ಬರಿಗೆ ಕೆಡುಕು ಮಾಡುವುದರಿಂದ ತನಗೇನೂ ಲಾಭವಾಗುವುದಿಲ್ಲ, ವ್ಯರ್ಥವಾದ ಕೆಟ್ಟ ಭಾವನೆಯಿಂದ ದೂರಾಗಬೇಕು' ಎಂದರು. ನವೆಂಬರ್ ೬ರಂದು ಬಾಪೂಜಿ ಹೇಳಿದರು: 'ಬಿಹಾರದ ಕೋಮುವಾದಿ ಹುಚ್ಚು ದೂರಾಗದಿದ್ದರೆ ನಾನು ಆಮರಣ ಉಪವಾಸ ಮಾಡುತ್ತೇನೆ, ಶಾಂತಿ ನೆಲೆಗೊಳ್ಳುವವರೆಗೂ ಆಂಶಿಕವಾಗಿ ಉಪವಾಸ ಮಾಡುತ್ತೇನೆ.' ಬಿಹಾರ ಬಾಪೂಜಿಯವರ ಪ್ರಾಂತ್ಯವಾಗಿತ್ತು, ಅಲ್ಲಿ ಈ ರೀತಿಯ ಕೋಮುವಾರು ಜಗಳ ಆಯಿತೆಂದರೆ ಬಾಪೂಜಿ ಪ್ರಾಯಶ್ಚಿತ್ತ ಮಾಡಿಕೊಳ್ಳಲೇಬೇಕಾಗಿತ್ತು. ಬಿಹಾರದ ಸ್ಥಿತಿ ಇನ್ನೂ ಹೆಚ್ಚು ಕೆಟ್ಟಿದ್ದರೆ ಅವರು ಆಮರಣ ಉಪವಾಸ ಮಾಡಲೇಬೇಕಾಗುತ್ತಿತ್ತು, ಬಿಹಾರದ ಸ್ಥಿತಿ ಸುಧಾರಿಸುವವರೆಗೂ ಆಂಶಿಕ ಉಪವಾಸ ಮಾಡುವೆನೆಂದು ನಿರ್ಧರಿಸಿದರು, ಆಹಾರವನ್ನು ಅರ್ಧಕ್ಕೆ ತಗ್ಗಿಸಿದರು.

ಹೀಗೆ ಬಿಹಾರದ ಸ್ಥಿತಿಯನ್ನು ಉತ್ತಮಪಡಿಸಿ ೬ ನವಂಬರ್ ೧೯೪೬ರಂದು ಕಲ್ಕತ್ತಾದಿಂದ ಸ್ಪೆಷಲ್ ಟ್ರೈನ್‌ನಲ್ಲಿ, ಹಾಗೂ ನಂತರ ಪದ್ಮಾನದಿಯ ಮೇಲೆ ೧೦೦ ಮೈಲು ಸ್ಟೀಮರ್ ಯಾತ್ರೆ ಮಾಡಿ ಬಾಪೂಜಿ ಚಾಂದಪುರ ತಲಪಿದರು. ಮಾರನೆಯ ದಿನ ಟ್ರೈನ್ ಮೂಲಕ ಚಾಮುಹಾನಗೆ ಹೋದರು. ಚಾಂದಪುರದಲ್ಲಿ ಒಂದು ಮುಸ್ಲಿಂ ಲೀಗ್, ಮತ್ತೊಂದು ಹಿಂದೂ ಡೆಲಿಗೇಶನ್ ಅವರನ್ನು ಭೇಟಿ ಮಾಡಿತು. ಮುಸ್ಲಿಂ ಡೆಲಿಗೇಶನ್ ತೀವ್ರವಾಗಿ ಕುಪಿತಗೊಂಡಿತ್ತು, ಅವರಲ್ಲಿ ಒಬ್ಬ ಹೇಳಿದ: 'ಇಲ್ಲಿ ಏನೂ ಆಗಿಲ್ಲ, ಹೆಚ್ಚೆಂದರೆ ೧೫ ಜನ ಹಿಂದೂಗಳನ್ನು ಕೊಂದಿರಬಹುದು.' ಮತ್ತೊಬ್ಬ ಸಭ್ಯರು ಬಹಳ ಕೋಪಗೊಂಡು, 'ವ್ಯರ್ಥವಾಗಿ ಹಿಂದೂಗಳು

ಓಡಿಹೋದರು, ಮುಸಲ್ಮಾನರಿಗೆ ಕೆಟ್ಟ ಹೆಸರು ತರಲು ಸುಳ್ಳು–ಸುಳ್ಳೇ ಆರೋಪಿಸುತ್ತಿದ್ದಾರೆ, ಸೈನ್ಯ – ಪೊಲೀಸ್ ಬಂದುದರಿಂದ ಕ್ಷೇತ್ರದಲ್ಲಿ ಅಶಾಂತಿ ಹರಡಿತು' ಎಂದರು. ಗಾಂಧೀಜಿ ಶಾಂತರಾಗಿ ಎಲ್ಲವನ್ನೂ ಕೇಳಿಸಿಕೊಂಡಿದ್ದರು. ಕೊನೆಯಲ್ಲಿ ಬಾಪೂಜಿ ಹೇಳಿದರು: 'ಮಿಲಿಟರಿ ಏಕೆ ಕರೆಸಬೇಕಾಗಿ ಬಂತು? ಒಬ್ಬ ಮಹಿಳೆಯು ಮೇಲೆ ಬಲಾತ್ಕಾರವಾಗಿದ್ದಲ್ಲಿ, ಇಷ್ಟವಿಲ್ಲದೆಯೇ ಧರ್ಮ ಪರಿವರ್ತಿಸಲಾಗಿದ್ದರೆ ಅದು ಸಭ್ಯ ಜನರಿಗೆ ನಾಚಿಕೆಗೇಡಿನ ಮಾತಾಗುತ್ತದೆ. ಪೊಲೀಸ್–ಸೈನ್ಯದಿಂದ ಶಾಂತಿ ನೆಲೆಗೊಳ್ಳಲು ಸಾಧ್ಯವೇ ಇಲ್ಲ, ಹೀಗೆ ಬಲಾತ್ಕಾರ ಮಾಡಿ ಧರ್ಮ ಪರಿವರ್ತನೆ ಮಾಡಿದರೆ ಅದರಿಂದ ಧರ್ಮನಾಶವಾಗುತ್ತದೆ', ಎಂದರು. ಅದಕ್ಕೊಬ್ಬ ಮುಸಲ್ಮಾನ, 'ನಾವಂತೂ ಹಳ್ಳಿಗಳಿಗೆ ಹೋಗಿ ಶಾಂತಿ ನೆಲೆಗೊಳಿಸಬಯಸುತ್ತೇವೆ. ಆದರೂ ಹಿಂದೂಗಳಿಗೆ ನಮ್ಮ ಮೇಲೆ ಭರವಸೆ ಇಲ್ಲ. ಅವರು ನಮ್ಮೊಂದಿಗೆ ಬರುವುದಿಲ್ಲ, ನಮಗೆ ಸಹಕಾರ ನೀಡುವುದಿಲ್ಲ'ವೆಂದ, ಬಾಪೂಜಿ ಹೇಳಿದರು: 'ಏನೂ ಚಿಂತೆಯಿಲ್ಲ, ನಾನು–ನೀವು ಕೂಡಿಕೊಂಡು ದೂರದ ಹಳ್ಳಿಗಳು, ಮನೆ–ಮನೆಗೂ ಹೋಗಿ ಜನರಲ್ಲಿ ಶ್ರದ್ಧೆಯನ್ನು ಬೆಳೆಸೋಣ, ನಮಗೆ ಪೊಲೀಸ್, ಅಥವಾ ಸೈನ್ಯ ಇದಾವುದರ ಅಗತ್ಯವೂ ಇಲ್ಲ.' ಮುಸಲ್ಮಾನರು ಬಾಪೂಜಿ ನಮ್ಮನ್ನು ಬಯ್ಯುತ್ತಾರೆ, ಛೀಮಾರಿ ಹಾಕುತ್ತಾರೆಂದು ಭಾವಿಸಿದ್ದರು. ಆದರೆ ಬಾಪೂಜಿ ಒಂದು ಬಾರಿಯಾದರೂ ಯಾರ ಮೇಲೂ ಕೋಪ ಮಾಡಿಕೊಳ್ಳಲಿಲ್ಲ, ಬಯ್ಯಲಿಲ್ಲ. ಅದಲ್ಲದೆ ಸೈನ್ಯದ ಬೆದರಿಕೆ ಕೂಡ ಹಾಕಲಿಲ್ಲ, ಇದರಿಂದ ಮುಸಲ್ಮಾನರು ಬಹಳ ಪ್ರಭಾವಿತರಾದರು.

ಇನ್ನೊಂದು ಡೆಪ್ಯೂಟೇಷನ್‌ನಲ್ಲಿ ಸುಮಾರು ಇಪ್ಪತ್ತು ಮಂದಿ ಹಿಂದೂಗಳಿದ್ದರು, ಅವರು ಬಹಳ ಹೆದರಿದ್ದರು. ಬಾಪೂಜಿ ಅವರಿಗೆ ಹೇಳಿದರು: 'ಎಷ್ಟೇ ದೊಡ್ಡ ಸೈನ್ಯವಾದರೂ ಹೇಡಿಗಳನ್ನು ಯಾರೂ ರಕ್ಷಿಸಲಾಗುವುದಿಲ್ಲ, ಬಲವಂತದಿಂದ ಧರ್ಮ ಪರಿವರ್ತಿಸುವುದು, ಹೆಂಗಸರ ಮೇಲೆ ಬಲಾತ್ಕಾರ ಮಾಡಿದ್ದನ್ನು ನೋಡಿ ಹೇಗೆ ಸಹಿಸಿಕೊಂಡಿರಿ? ಅಂತಹ ಅಪಮಾನ – ಮರ್ಯಾದೆ ಕಳೆದಿದ್ದನ್ನು ಸಹಿಸಿ ಬದುಕುವುದಕ್ಕಿಂತ ಸತ್ತುಹೋಗಿದ್ದರೆ ಚೆನ್ನಾಗಿತ್ತು. ಹೊರಗಿನಿಂದ ಸಹಾಯ ತೆಗೆದುಕೊಂಡು ಅಭ್ಯಾಸವಾಗಿರುವುದರಿಂದ ನೀವು ನಿಸ್ಸಹಾಯಕರಾಗಿದ್ದೀರಿ. ನೀವು ಇಲ್ಲಿಂದ ಬೇರೆ ಕಡೆಗೆ ಹೊರಟು ಹೋಗುವುದು ನನಗಿಷ್ಟವಿಲ್ಲ, ಇಂತಹ ದುರ್ಬಲ ನಪುಂಸಕತೆಗೆ ಯಾವ ಪರಿಹಾರವೂ ಇಲ್ಲ,' ಎಷ್ಟೋ ಜನ ಹಿಂದೂಗಳು, 'ನಾವು ಅಲ್ಪಸಂಖ್ಯೆಯವರು, ನಮ್ಮ ಬಳಿ ಆಯುಧಗಳು ಕೂಡ ಇಲ್ಲ' ಎಂದಾಗ ಬಾಪೂಜಿ ಅವರಿಗೆ ಹೇಳಿದರು: '೭೦೦೦೦ ಇಂಗ್ಲಿಷ್ ಸೈನಿಕರು ೩೫ ಕೋಟಿ ಭಾರತೀಯರನ್ನು ಗುಲಾಮರನ್ನಾಗಿ ಮಾಡಿಟ್ಟುಕೊಂಡಿದ್ದರು, ಜೊತೆಗೆ ನಮ್ಮ ದೇಶದ ಜನರ ಹತ್ತಿರ ಅಸ್ತ್ರ–ಶಸ್ತ್ರ ಯಾವುದೂ ಇರಲಿಲ್ಲ, ರಾಜ್ಯದ ಹತ್ತಿರ ಬಂದೂಕ–

ತೋಪು ಇವು ಬೇಕಾದಷ್ಟಿದ್ದವು. ಆಗ ನಾವು ಅಹಿಂಸೆ ಮತ್ತು ಸತ್ಯಾಗ್ರಹದ ಆಯುಧಗಳನ್ನು ಸಿದ್ಧಪಡಿಸಿಕೊಂಡೆವು. ಅದರಿಂದ ಆಯುಧಗಳಿಂದ ರಕ್ಷಣೆಯಾಗುತ್ತೆಂದು ತಿಳಿಯುವುದು ತಪ್ಪಾಗುತ್ತದೆ, ದೇಶದ ಸ್ವಾತಂತ್ರ್ಯದ ಪ್ರಶ್ನೆ, ಬಿಹಾರದಲ್ಲಿ ಹಿಂದೂಗಳು ಮುಸಲ್ಮಾನರ ಮೇಲೆ ಅತ್ಯಾಚಾರ ಎಸಗಿ ದೇಶಕ್ಕೆ ಕೆಟ್ಟ ಹೆಸರು ತಂದಿದ್ದರ ಜೊತೆಗೆ ಸ್ವಾತಂತ್ರ್ಯಕ್ಕೆ ಅಡ್ಡಿ ಮಾಡಿ ಬಿಟ್ಟಿದ್ದಾರೆ. ಇದು ನೋವಾಖಲಿಗಷ್ಟೇ ಸೀಮಿತವಾದ ಮಾತಲ್ಲ, ಇದು ದೇಶದ ಸ್ವಾತಂತ್ರ್ಯದ ಪ್ರಶ್ನೆ ಮತ್ತು ನೋವಾಖಲಿಯಲ್ಲೇ ಇದರ ಇತ್ಯರ್ಥ ಕೂಡ ಆಗಲಿದೆ."

ಶೋಧುಪುರ ಪ್ರತಿಷ್ಠಾನದ ಸತೀಶ ಬಾಬು ಜೊತೆಯಲ್ಲಿ ನಾಲ್ಕೂ ಕಡೆ ಚಾರೂ ಚೌಧರಿಯ ನೇತೃತ್ವದಲ್ಲಿ ಚೌಮುಹಾನಿಯಲ್ಲಿ ಸಹಾಯತಾಕಾರ್ಯ ಶುರುವಾಯಿತು. ಚಾರೂ ಚೌಧರಿ ನೋವು ತಿಂದ ಜನರಿಗೆ ಧೈರ್ಯ ಹೇಳಿ ಅವರ ಸುಟ್ಟ ಮನೆಗಳನ್ನು ಸರಿಪಡಿಸುವುದು, ಪೊರಕೆ–ಬಕೆಟ್ ತೆಗೆದುಕೊಂಡು ಸ್ವಚ್ಛಗೊಳಿಸುವುದು, ಅವಶೇಷವನ್ನು ಎತ್ತಿ ಹಾಕುವುದು, ಪಾಯಖಾನೆ ಸ್ವಚ್ಛಗೊಳಿಸುವುದು, ಹೊಸ ಪಾಯಖಾನೆ ಕಟ್ಟುವುದು ಮುಂತಾದ ಕೆಲಸಗಳನ್ನು ಆರಂಭಿಸಿಕೊಂಡರು. ಈ ರೀತಿಯಾಗಿ ಮಾತಿಲ್ಲದ ಪ್ರಾಥಮಿಕ ಕಾರ್ಯದ ಶಕ್ತಿ ಮತ್ತು ಪ್ರಭಾವ ಬೇರೆ ತರಹೆಯದಾಗಿರುತ್ತದೆ. ತಂತಾನೆ ಜನರಲ್ಲಿ ಧೈರ್ಯ, ಆಸೆ ಹುಟ್ಟಿಕೊಳ್ಳುತ್ತದೆ. ಈ ಜನ ಒಂದು ದೊಡ್ಡ ಬಯಲನ್ನೇ ಸರಿಪಡಿಸಿ ಪ್ರಾರ್ಥನಾ ಸ್ಥಳವನ್ನೂ ಸಿದ್ಧಪಡಿಸಿಕೊಂಡಿದ್ದರು. ಚೌಮುಹಾನಿಯ ಜನಸಂಖ್ಯೆ ಸುಮಾರು ೫೦೦೦ ಇತ್ತು, ಆದರೆ ಬಾಪೂಜಿ ತಲಪಿದ ಮೇಲೆ ಅಲ್ಲಿ ೧೫೦೦೦ ಜನ ಪ್ರಾರ್ಥನೆಗಳಲ್ಲಿ ಹಾಜರಾದರು. ಅದರಲ್ಲಿ ನೂರಕ್ಕೆ ೮೦ರಷ್ಟು ಜನ ಮುಸಲ್ಮಾನರಾಗಿದ್ದರು, ಬಾಪೂಜಿ ಹಿಂದೂಗಳಿಗೆ ಧೈರ್ಯ ಮತ್ತು ಶ್ರದ್ಧೆಯನ್ನಿಟ್ಟುಕೊಳ್ಳ ಹೇಳಿ, ಮುಸಲ್ಮಾನರಿಗೆ ನಿಮ್ಮ ಧೈರ್ಯದ ಮೇಲೆ ಹಿಂದೂಗಳು ಸುಖ–ಶಾಂತಿಯಿಂದ ಲೂಟಿಯಾಗಿರುವ ತಮ್ಮ ಮನೆಗಳಿಗೆ ಹಿಂದಿರುಗಲು ಸಾಧ್ಯ ಎಂದು ಹೇಳಿದರು. ಈ ಸುಂದರ ಹಸುರಿನಿಂದ ತುಂಬಿದ ಪ್ರಕೃತಿಯ ನಡುವೆ ಇದ್ದ ಜನರ ಮುಖದ ಮೇಲೆಲ್ಲೂ ಸುಖ–ಶಾಂತಿ ಇರಲಿಲ್ಲ. ಗದ್ದೆಗಳಲ್ಲಿ ಭತ್ತದ ಬೆಳೆ ಎದ್ದು ನಿಂತಿತ್ತು, ಅದನ್ನು ಕಟಾವುಮಾಡುವವರಿರಲಿಲ್ಲ. ಸತ್ತಿದ್ದರು ಅಥವಾ ನಿರಾಶ್ರಿತರಾಗಿ ಅಲೆಯುತ್ತಿದ್ದರು. ಸುಂದರ ಕಲ್ಪವೃಕ್ಷ (ತೆಂಗಿನ ಮರ)ಗಳು ಕಾಯಿಗಳಿಂದ ತುಂಬಿದ್ದವು, ಆದರೆ ನಡುವೆ ಅಸ್ಥಿಪಂಜರಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಕೊಳೆತು ನಾರುತ್ತಿದ್ದ ಹೆಣಗಳ ದುರ್ವಾಸನೆ, ಸುಟ್ಟು ಕರಕಾದ ಮನೆಗಳ ಕಪ್ಪು ಛಾವಣಿಯನ್ನು ನೋಡಿ ಎದೆ ನಡುಗಿ ಹೋಗುತ್ತಿತ್ತು. ಅಂತಹ ಭಯಂಕರ ವಿನಾಶದಲ್ಲಿ ಬಾಪೂಜಿ, ಪ್ರತಿಯೊಂದು ಹಳ್ಳಿಯಲ್ಲೂ ಒಬ್ಬ ಧೈರ್ಯಶಾಲಿಯಾದ ಹಿಂದೂ ಮತ್ತೊಬ್ಬ ಸಜ್ಜನ ಮುಸಲ್ಮಾನ ಹೀಗೆ ಇಬ್ಬರೂ ಸೇರಿ ಹಳ್ಳಿಯ ಸುರಕ್ಷತೆಯ ಜವಾಬ್ದಾರಿಯನ್ನು

ತಮ್ಮ ಮೇಲೆ ಹೊತ್ತುಕೊಳ್ಳಬೇಕೆಂದು ಸಲಹೆ ನೀಡಿದರು. ಅಂತಹ ಇಬ್ಬರು ಹಿಂದಿರುಗುವ ನಿರಾಶ್ರಿತರಿಗೆ ರಕ್ಷಣೆ ನೀಡಬೇಕು. ಈ ಸಲಹೆಯನ್ನು ಕೇಳಿ ದತ್ತಪಾರಾದ ಜನ ಸ್ತಂಭೀಭೂತರಾದರು. ಸೈನ್ಯ ಬಂದು ತಮಗೆ ರಕ್ಷಣೆ ನೀಡುವುದೆಂದು ಜನ ಭಾವಿಸಿದ್ದರು. ಆದರೆ ಈ ತೆರನಾದ ಸ್ವಾವಲಂಬನೆ ಆಧರಿಸಿದ ಸುರಕ್ಷತೆಯ ಕಲ್ಪನೆ ಕೂಡ ಅವರಿಗಿರಲಿಲ್ಲ, ಧೈರ್ಯವೂ ಇರಲಿಲ್ಲ. ಕೆಲವರು ಮುಸಲ್ಮಾನರು ಹೇಳಿದರು – 'ಎಲ್ಲಾ ಮುಸಲ್ಮಾನರೂ ಈ ಕೆಲಸ ಮಾಡಬೇಕು'. ಆದರೆ ಬಾಪೂಜಿ ಹೇಳಿದರು, 'ಪೂರ್ತಿ ಹಳ್ಳಿಯ ಕೆಲಸ ಯಾರ ಕೆಲಸವೂ ಅಲ್ಲ, ಆದ್ದರಿಂದ ಒಬ್ಬ ಹಿಂದೂ ಮತ್ತೊಬ್ಬ ಮುಸಲ್ಮಾನ ಸಾಕು, ಇವರಿಬ್ಬರೂ ಬದುಕಿರುವಾಗ ಯಾವುದೇ ತರಹೆಯ ದಂಗೆ–ಹತ್ಯೆ ಆಗಕೂಡದು,' ಇಂಗ್ಲಿಷ್ ಜಿಲ್ಲಾಧ್ಯಕ್ಷ ಹೇಳಿದ, 'ಇದನ್ನು ಕುರಿತು ಯೋಚಿಸಬೇಕು,' ಆ ಅಧಿಕಾರಿಗಳಿಗೆ ಈ ಹೊಸ ಪ್ರಯೋಗ ಇಷ್ಟವಾಗಲಿಲ್ಲ, ಬಹುಶಃ ಅರ್ಥವಾಗಲಿಲ್ಲ. ಬಾಪೂಜಿ ಮುಸ್ಲಿಂ ಲೀಗ್‌ನವರಿಗೆ ಹೇಳಿದರು, ಅವರು ಮುಸಲ್ಮಾನ ಸದಸ್ಯರನ್ನು ಕೊಟ್ಟರೆ ತಾನು ಹಿಂದೂಗಳನ್ನು ನಿಲ್ಲಿಸುವೆನೆಂದರು. ಎಲ್ಲ ಹಿಂದೂಗಳನ್ನೂ ಕೊಂದಿದ್ದಾರೆ, ಮಿಕ್ಕವರು ಓಡಿಹೋಗಿದ್ದಾರೆಂದು ಎಷ್ಟೋ ಜನ ಹಿಂದೂಗಳು ಸನ್ನೆ ಮಾಡಿ ತಿಳಿಸಿದರು. ಇನ್ನು ಉಳಿದಿರುವವರು ಶೂದ್ರರು, ಅಶಿಕ್ಷಿತರು ಎಂದರು. ಬಾಪೂಜಿ ಹೇಳಿದರು: 'ಓದಿ ಬರೆದ ಹಿರಿಯ ಹಿಂದೂಗಳು ಹಿಂದಿರುಗಿ ತಮ್ಮ ಜಾಗ ಮತ್ತು ಜಬಾಬ್ದಾರಿಗಳನ್ನು ನಿಭಾಯಿಸಲಿ, ಅದಿಲ್ಲದಿದ್ದರೆ ಈ ಹರಿಜನರೇ ಹಳ್ಳಿಯ ಕೆಲಸ ನಿರ್ವಹಿಸಬೇಕು.'

೮–೧೦ ಹಳ್ಳಿಗಳಲ್ಲಿ ಬಾಪೂಜಿ ಪುನಃ–ಪುನಃ ಶಾಂತಿ ನೆಲೆಗೊಳಿಸುವ ತಮ್ಮ ಹೊಸ ವಿಧಾನವನ್ನು ತಿಳಿಸಿ ಹೇಳಿದರು. ಮುಖ್ಯಮಂತ್ರಿಗೆ ಪತ್ರವನ್ನೂ ಬರೆದರು. ಆದರೆ ಮುಸಲ್ಮಾನರು ಆ ತೆರನಾದ ಗಂಭೀರ ಜವಾಬ್ದಾರಿಯನ್ನು ಹೊರಲು ಸಿದ್ಧವಾಗಿರಲಿಲ್ಲ. ಸುತ್ತು ಬಳಸಿನ ಮಾತು, ಸುಳ್ಳು ಆಶ್ವಾಸನೆಗಳು, ಮತ್ತು ಸುಳ್ಳು – ಮೋಸ ಎದುರಿಗೇ ನಡೆಯುತ್ತಿತ್ತು. ಪೊಲೀಸ್ ಅಧೀಕ್ಷಕ ಅಬ್ದುಲ್ಲಾ ಆವೇಶಪೂರಿತವಾಗಿ ಬಾಪೂಜಿಗೆ ಹೇಳಿದ: 'ನೀವಿರುವಾಗ ಪುನಃ ಈ ತರಹೆಯ ಹತ್ಯಾಕಾಂಡವಾಗುವುದಿಲ್ಲ, ಬಾಪೂಜಿ ಹೇಳಿದರು: 'ಸರಿಯಪ್ಪಾ, ನೀವು ನನ್ನ ಕೆಲಸವನ್ನೇ ಮುಗಿಸಿಬಿಟ್ಟಿರಿ. ಆದರೆ ಇಷ್ಟು ತಿಳಿದುಕೊಳ್ಳಿ, ಈ ಘಟನೆ ಏನಾದರೂ ಮರುಕಳಿಸಿದರೆ ಅಬ್ದುಲ್ಲಾ ಮನೆ ಬಾಗಿಲಲ್ಲಿ ಬಾಪೂಜಿ ಸತ್ತುಬೀಳುತ್ತಾರೆ.' ಇದನ್ನು ಕೇಳಿ ಅಬ್ದುಲ್ಲಾಗೆ ಕಸಿವಿಸಿಯಾಯಿತು, ಹೇಳಿದರು, 'ನಾನಿರುವಾಗ ಈ ತೆರನಾದ ದಂಗೆಗಳಾಗುವುದಕ್ಕೆ ಅವಕಾಶ ಕೊಡುವುದಿಲ್ಲ, ಹಾಗೇನಾದರೂ ಆಯಿತು ಅಂದರೆ ನಾನು ಸಾಯುತ್ತೀನಿ.' ಆಗ ಅಧಿಕಾರಿಗಳು 'ಎಲ್ಲಾ ಕಡೆಗಳಲ್ಲೂ ಶಾಂತಿ–ಸುರಕ್ಷೆ ನೆಲೆಗೊಂಡಿದೆ, ಈಗ ಅಪಾಯ ಕಳೆಯಿತು' ಎಂದು ಘೋಷಣೆ ಮಾಡಿದರು. ಆಗ ಜನರು ಬಾಪೂಜಿ ಪ್ರಾರ್ಥನೆಯಿಂದ ಹಿಂದಿರುಗುತ್ತಿದ್ದಾಗ ಇಬ್ಬರು

ಸ್ವಯಂಸೇವಕರು ಕಾಣೆಯಾದರೆಂದು ತಿಳಿಸಿದರು, ಅದಕ್ಕೆ ಉತ್ತರವಿರಲಿಲ್ಲ. ಎರಡು ದಿನಗಳನಂತರ ಅವರಲ್ಲಿ ಒಬ್ಬನ ಹೆಣ ನಾಲೆಯಲ್ಲಿ ತೇಲಾಡುತ್ತಿದ್ದುದು ಕಾಣಿಸಿತು, ಪೊಲೀಸಿನವರು ಗುಂಡಾಗಳು, ದಂಗೆ ಕೋರರನ್ನು ಹಿಡಿಯುವುದರಲ್ಲಿ ಸಡಿಲತೆ ತೋರುತ್ತಿದ್ದಾರೆ ಎಂದು ಜನ ದೂರು ಹೇಳಿದರು. ಪೊಲೀಸ್ ಇದಕ್ಕೆ ಯಾವುದೇ ತೃಪ್ತಿಕರ ಉತ್ತರ ನೀಡಲಿಲ್ಲ. ಇಂತಹ ಪ್ರಾರ್ಥನಾ ಸಭೆ ಮತ್ತು ಬಾಪೂಜಿ ಇರುವಾಗ ಅವರೆದುರಿಗೆ ಚರ್ಚೆಯಾಗುವಾಗ ಅದರಿಂದ ಎರಡು ಲಾಭಗಳಿರುತ್ತಿದ್ದವು.

ಒಂದು, ಹೆದರಿದ್ದ ಹಿಂದೂಗಳಿಗೆ ಧೈರ್ಯ ಬಂತು, ಇನ್ನೊಂದು ಸುಳ್ಳು ಎಲ್ಲರಿಗೂ ತಿಳಿದುಹೋಯಿತು. ಬಾಪೂಜಿ ಜನರಿಗೆ ಹೇಳಿದರು, ನಾನು 'ಹಿಂದೂ–ಮುಸಲ್ಮಾನ ಇಬ್ಬರ ಸೇವೆಯಲ್ಲೂ ತತ್ಪರನಾಗಿದ್ದೇನೆ. ಪಾಕಿಸ್ತಾನವನ್ನು ವಿರೋಧಿಸುವುದು ನನ್ನ ಗುರಿಯಾಗಿರಲಿಲ್ಲ, ಆದರೆ ಹಿಂಸೆಯಿಂದ ಪಾಕಿಸ್ತಾನ ಬರಲಾಗದು, ಹಾಗೆ ಬಂದರೂ ಅದರ ವಿಕಾಸವಾಗುವುದಿಲ್ಲ.' ಅರ್ಧ ಉಪವಾಸದಿಂದ ಇಷ್ಟು ಪರಿಶ್ರಮದ ನಂತರ ಬಾಪೂಜಿ ಪೂರ್ತಿಯಾಗಿ ನಿಃಶಕ್ತರಾಗಿದ್ದರು. ಪ್ರತಿದಿನ ಕಷ್ಟದಿಂದ ೬೦೦ ಕ್ಯಾಲೊರಿ ಹೊಟ್ಟೆಗೆ ಹೋಗುತ್ತಿತ್ತು. ಆದರೆ ಅವರು ಎಂದೂ ಯಾವಾಗಲೂ ಕೋಪವನ್ನು ತೋರಲಿಲ್ಲ, ಧೈರ್ಯಗೆಡಲಿಲ್ಲ. ಪ್ರೀತಿಯಿಂದ ಮನುಷ್ಯ ಸ್ವಭಾವದಲ್ಲಿನವ ಮಧುರತೆಯನ್ನ ಜಾಗೃತಗೊಳಿಸುತ್ತಲಿದ್ದರು. ಅವರ ಈ ಸಮಾಧಾನದ ಮಾತುಗಳನ್ನು ಕೇಳಿ ಜನರೊಳಗಿನ ಅಂತರಾತ್ಮ ಎಚ್ಚರಗೊಳ್ಳತೊಡಗಿತು, ಸದಾಚಾರದ ಪ್ರತಾಪ ಕಾಣತೊಡಗಿತು. ಆದರೆ ಬಾಪೂಜಿ ಹೃದಯದಲ್ಲಿ ಶಾಂತಿ ಇರಲಿಲ್ಲ, ಒಂದೆಡೆ ಬಂಗಾಳದ ಸರಕಾರ ಅವರೊಂದಿಗೆ ಅಸಹಯೋಗ, ಅಶ್ರದ್ಧೆ ತೋರುತ್ತಿತ್ತು, ಮತ್ತೊಂದೆಡೆ ಮುಸ್ಲಿಂ ಲೀಗ್ ಸ್ಪಷ್ಟವಾಗಿ ಸುಹರಾವರ್ದಿ ಗಾಂಧಿಯನ್ನು ನೋವಾಖಲಿಗೆ ಹೋಗಲು ಬಿಟ್ಟಿದ್ದೇಕೆ? ಅವರನ್ನಲ್ಲಿಂದ ತೆಗೆದು ಹೊರಹಾಕಬೇಕೆಂದು ಗಲಾಟೆ ಮಾಡುತ್ತಿತ್ತು. ಮೂರನೆಯ ಕಡೆ ಸ್ಥಾನೀಯರು ಮುಸ್ಲಿಮರ ಭಯದಿಂದ ಪ್ರಾರ್ಥನೆಗೆ ಕೂಡ ಹಾಜರಾಗುತ್ತಿರಲಿಲ್ಲ, ಕೆಲವು ಮೌಲ್ವಿಗಳು ಸ್ಪಷ್ಟವಾಗಿ ರಾಮನಾಮದ ಉಚ್ಚಾರಣೆ ಮಾಡಕೂಡದೆಂದು ಹೇಳುತ್ತಿದ್ದರು. ನೋವಾಖಲಿ ಹಳ್ಳಿಯಲ್ಲಿ ೮ ಜನ ಹಿಂದೂಗಳನ್ನು ಅವರ ಪರಿವಾರದೊಂದಿಗೆ ಕೊಂದುಹಾಕಿದ್ದರು, ಅವರಲ್ಲಿ ೧೪–೧೫ ವರ್ಷದ ಒಬ್ಬ ಬಾಲಕ ಕೂಡ ಇದ್ದ. ಆ ಮನೆಯಲ್ಲಿ ಆ ಬಾಲಕನ ಪುಸ್ತಕಗಳು ಮತ್ತು ಕಾಪಿ (ನೋಟ್‌ಬುಕ್‌ಗಳು) ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು, ಅಲ್ಲೇ ಒಂದು ಪುಟ್ಟ ಟಿಬೆಟಿಯನ್ ನಾಯಿ ಸುಮ್ಮನೆ ಬಾರಿ–ಬಾರಿಗೂ ಸುತ್ತುತ್ತಿತ್ತು. ಬಾಪೂಜಿಯನ್ನು ನೋಡಿ ಅದು ಚ್ಯೂ ಚ್ಯೂ ಎಂದು ಎಳೆಯತೊಡಗಿತು. ಬಾಪೂಜಿ ಅದರ ಹಿಂದೆಯೇ ಹೋದರು. ಅಲ್ಲಿ ಎಂಟುಗಳು ಜನಗಳ ಹೆಣ ಮತ್ತು ಮೂಳೆಗಳು ಮುಳ್ಳಿನ ಪೊದೆಗಳ ನಡುವೆನಲ್ಲಿ ಬಿದ್ದಿದ್ದವು. ತನ್ನ ಮಾಲೀಕನ ನೆನಪಿನಲ್ಲಿ ಆ ಮೂಕಪ್ರಾಣಿ ಒದ್ದಾಡುತ್ತಿತ್ತು

ಬಾಪೂಜಿ ಅರ್ಧ ಉಪವಾಸ ಮಾಡಿ ನಿಃಶಕ್ತರಾಗುತ್ತಿದ್ದರು. ನಿರಂತರವಾಗಿ ಈ ಅಧಿಕಾರಿಗಳು, ಮುಸಲ್ಮಾನರು ಮತ್ತು ದುಃಖಿತರ ಹೃದಯ ಪರಿವರ್ತಿಸುವ ಕೆಲಸ ಮಾಡುತ್ತಿದ್ದರು. ಆದರೆ ಸಮಾಜದಲ್ಲಿ ವಾಸ್ತವಿಕ ಶಾಂತಿ ಕಂಡು ಬರುತ್ತಿರಲಿಲ್ಲ, ಕೆಲವು ಮುಸ್ಲಿಮರು ಹಿಂದೂಗಳಿಗೆ 'ಮಹಾತ್ಮಾಜೀ ಏನೂ ನಿಮ್ಮ ಜೊತೆ ಯಾವಾಗಲೂ ನೋವಾಖಲಿಯಲ್ಲಿ ಇರುವ ವ್ಯಕ್ತಿಯಲ್ಲ, ಅವರು ಹೋದ ಮೇಲೆ ನೋಡಿಕೊಳ್ಳುತ್ತೇವೆ' ಎಂದು ಹೇಳಿ ಹೆದರಿಸುತ್ತಿದ್ದರು. ಹಿಂದೂಗಳು ಹೆದರುತ್ತಿದ್ದರು. ಗಾಂಧೀಜಿ ಪೊಲೀಸ್ ಸಂರಕ್ಷಣೆ ತೆಗೆದುಕೊಳ್ಳಬೇಡಿರೆಂದು ಹೇಳುತ್ತಾರಲ್ಲ ಎಂದು ಬೇಸರಗೊಂಡಿದ್ದರು. ಬಾಪೂಜಿ ಎರಡೂ ಸಮುದಾಯಗಳನ್ನು ಈ ಅನಿಷ್ಟದಿಂದ ದೂರ ಉಳಿಯಲು ಹೇಳಿ, ಇದ್ದಕ್ಕಿದ್ದಂತೆ ಇಲ್ಲಿಂದ ಮಿಲಿಟರಿ ಹೊರಟು ಹೋದರೆ ಆಗ ಯಾರ ಭರವಸೆಯಲ್ಲಿ ಬದುಕುತ್ತೀರೆನ್ನುತ್ತಿದ್ದರು. ಆಗ ಪುನಃ ಇದೇ ಉಗ್ರರ ನಡುವೆ ಆ ಹಿಂದೂಗಳು ತೆಪ್ಪಗಾಗುತ್ತಾರೆ, ಈ ವಿಚಾರ ಯೋಚಿಸುವುದಕ್ಕೂ ಹಿಂದೂ ಹೆದರುತ್ತಿದ್ದ. ಸ್ವಲ್ಪ ದಿನಗಳಲ್ಲೇ ನಾಲೆಗಳು ಒಣಗಲಿದ್ದವು. ಆಗ ತೆಪ್ಪಗಳ ನೆರವಿನಿಂದ ದಾಟಿಕೊಂಡು ಹೋಗಲೂ ಮಾರ್ಗವಿರುವುದಿಲ್ಲ. ಈ ಎಲ್ಲ ಭಯ, ಆತಂಕಗಳ ನಡುವೆಯೇ ಏನಾದರೂ ಮಾರ್ಗ ಕಂಡುಕೊಳ್ಳಬೇಕಾಗಿತ್ತು. ನೋವಾಖಲಿಯಲ್ಲಿದ್ದು ಸುತ್ತಾಡಿ ಎರಡೂ ಸಮುದಾಯಗಳ ನಡುವೆ ಜೊತೆಗೂಡಿ ಬಾಳಲು ಪ್ರೇರೇಪಿಸುತ್ತಿದ್ದುದು ಮುಸ್ಲಿಂ ಲೀಗ್‌ಗೆ ಇಷ್ಟವಿಲ್ಲ ಎಂಬುದನ್ನು ಬಾಪೂಜಿ ಅರ್ಥಮಾಡಿಕೊಳ್ಳತೊಡಗಿದರು. ಈ ಶಾಂತ ಪ್ರಚಾರ ಮುಸ್ಲಿಂ ಲೀಗ್‌ನ ವಿಭಜನ ನೀತಿಗೆ ವಿರುದ್ಧವಾದುದಾಗಿತ್ತು. ಸಾಮಾನ್ಯ ಮುಸಲ್ಮಾನ ಈ ಫಕೀರನ ಮಾತುಗಳನ್ನು ಕೇಳಿಕೊಂಡು ತನ್ನ ಕೋಮುವಾದವನ್ನು ಮರೆತುಬಿಟ್ಟರೆ ಪಾಕಿಸ್ತಾನ ಸಿಗಲು ಹೇಗೆ ಸಾಧ್ಯ ಎಂದು ಲೀಗ್‌ನ ನಾಯಕರಿಗೆ ಭಯವಾಗುತ್ತಿತ್ತು. ಮುಸಲ್ಮಾನರಿಗೆ ತಮ್ಮ ಮಾತುಗಳಲ್ಲಿ ಗೌರವ ಇಲ್ಲದಿರುವುದನ್ನು ಬಾಪೂಜಿ ನೋಡುತ್ತಿದ್ದರು. ಅಂತಹ ಪರಿಸ್ಥಿತಿಯಲ್ಲಿ ಮುಸಲ್ಮಾನರ ದುಷ್ಟ ಪ್ರವೃತ್ತಿ, ದುರಾಗ್ರಹ ಮತ್ತು ವಕ್ರತೆಯನ್ನು ದೂಷಿಸದೆ ಬಾಪೂಜಿ ತಮ್ಮ ಅಹಿಂಸೆ ಮತ್ತು ಶುದ್ಧತೆಯಲ್ಲಿ ಕೊರತೆಯನ್ನು ಕಾಣುತ್ತಿದ್ದರು. ಒಬ್ಬ ಹಿಂದೂ ಒಬ್ಬ ಮುಸಲ್ಮಾನನ ಸಲಹೆಯನ್ನು ಬಹುಮತದ ಲೀಗ್ ಒಪ್ಪಿಕೊಳ್ಳದೆ ಹೋದರೆ ಅದಕ್ಕೆ ತಮ್ಮ ಶುದ್ಧತೆಯಲ್ಲೇ ಕೊರತೆ ಇದೆ ಎಂದವರಿಗನ್ನಿಸಿತು. ಅದಕ್ಕಾಗಿ ಪ್ರಾಯಶ್ಚಿತ್ತ ಮಾಡುವುದು ಅನಿವಾರ್ಯ, ಅದರಿಂದ ಅವರು ತನ್ನ ಮಿತ್ರರನ್ನೆಲ್ಲಾ ಬಿಟ್ಟು ತಮ್ಮನ್ನೇ ದೇವರಿಗರ್ಪಿಸಿಕೊಂಡರು. ೧೨ ನವಂಬರ್‌ನಿಂದಲೇ ಅವರು, ತನಗೆ ಯಾರೂ ಸಹಕಾರ ನೀಡದೆ ಹೋದರೆ ತಾನೊಬ್ಬನೇ ಹೊರಡುವೆನೆಂದು ನಿರ್ಧರಿಸಿದರು. ಆ ಬಡಪಾಯಿ ಹಿಂದೂಗಳು ತಮ್ಮ ಹಳ್ಳಿಗಳಿಗೆ ಹಿಂದಿರುಗಲು ಹೆದರುತ್ತಿದ್ದರು. ಅವರಿಂದ ಬಾಪೂಜಿ ತಾವೊಬ್ಬರೇ ಯಾತ್ರೆ ಮಾಡಿ ಹಳ್ಳಿಗಳಲ್ಲಿ ಸಂಚರಿಸುವುದೆಂದು ನಿಶ್ಚಯಿಸಿದರು, ತಮ್ಮ ಜೊತೆಗಾರರಿಗೆ

ತಮ್ಮ ನಿರ್ಧಾರವನ್ನು ತಿಳಿಸಿ ಬಾಪೂಜಿ ಈ ಮಹಾಯಜ್ಞದಲ್ಲಿ ನಮ್ಮನ್ನು ನಾವೇ ಹೋಮ ಮಾಡಬೇಕೆಂದರು. ಹಿಂದೂ–ಮುಸಲ್ಮಾನರು ಸಹೋದರ ಭಾವದಿಂದ ಪ್ರೇಮದೊಂದಿಗೆ ಬದುಕುವುದನ್ನು ಕಲಿಯುವವರೆಗೂ ನೋವಾಖಲಿಯಲ್ಲಿ ಯಾರ ಸಹಾಯವನ್ನೂ ಪಡೆಯದೆಯೇ, ಯಾರ ಜೊತೆಯೂ ಇಲ್ಲದೆ ಒಂಟಿಯಾಗಿ ಇರುವೆ, ಹಿಂದೂಗಳ ಸುರಕ್ಷತೆಗಾಗಿ ಒಂಟಿಯಾಗಿ ಹೋರಾಡುವೆನೆಂದರು. ಕೊನೆಯ ಪಕ್ಷ ಅವರ ಬಲಿದಾನದಿಂದ ಜನರಲ್ಲಿ ಒಂಟಿಯಾಗಿ ಬದುಕಲು, ಸಾಯಲು ಧೈರ್ಯಬರುತ್ತದೆ. ಈ ಮುಸ್ಲಿಂ ಜಿಲ್ಲೆಯಲ್ಲಿ ಅವರು ಮುಸಲ್ಮಾನರ ಮನೆಯಲ್ಲೇ ಇರುವೆನೆಂದರು. ಎಲ್ಲೂ ಜಾಗ ಸಿಗದೆ ಹೋದಲ್ಲಿ ಮರದ ನೆರಳಲ್ಲಿ ರಾತ್ರಿಯನ್ನು ಕಳೆಯುವೆನು, ಪ್ರತಿದಿನವೂ ನಡೆದು ಒಂದೊಂದು ಹಳ್ಳಿಗೂ ಹೋಗುವೆನೆಂದರು. ತಮ್ಮ ಅಹಿಂಸೆಯ ಕೊನೆಯ ಪರೀಕ್ಷೆಯಿದು ಎಂಬುದು ಗಾಂಧೀಜಿಯ ಅಭಿಪ್ರಾಯವಾಗಿತ್ತು. ಅಹಿಂಸೆ ಮುಗಿಯಿತೆಂದರೆ ಹಿಂದೂಧರ್ಮ ಕೊನೆಗೊಳ್ಳುತ್ತದೆ, ಮುಸಲ್ಮಾನ ಮಂತ್ರಿ ಮುಕರಾನ್ ಗಾಂಧೀಜಿಯನ್ನು ಹೇಗೆ ಎಲ್ಲಿ ಇರಿಸುವುದೆಂಬ ಚಿಂತೆಯಲ್ಲಿದ್ದಾಗ ಬಾಪೂಜಿ 'ನನ್ನ ಆವಶ್ಯಕತೆಗಳೇ ಕಡಿಮೆ, ನಾನು ಎಲ್ಲಾದರೂ ಇರಬಲ್ಲೆ' ಎಂದರು. ಅವರ ಜೀವನದಲ್ಲಿ ಮುಚ್ಚುಮರೆ ಎಂಬುದೇನೂ ಇರಲಿಲ್ಲ. 'ನಾನು ಮುಸಲ್ಮಾನರ ಮಿತ್ರನೋ, ಶತ್ರುವೋ ಎಂಬುದನ್ನು ಎಲ್ಲರೂ ನೋಡಲಿ. ಹಳ್ಳಿಯವರು ಏನು ಕೊಟ್ಟರೆ ಅದರಲ್ಲಿ ನಾನು ನಿರ್ವಾಹ ಮಾಡಿಕೊಂಡು ನನ್ನ ಕೆಲಸವನ್ನು ನಾನು ಮಾಡುತ್ತೇನೆ' ಎಂದರು.

ಬಾಪೂಜಿ ಸೇವಾಗ್ರಾಮ ಆಶ್ರಮಕ್ಕೆ 'ಬಹುಶಃ ನಾನು ಸೇವಾಗ್ರಾಮ ಆಶ್ರಮಕ್ಕೆಂದೂ ಹಿಂದಿರುಗುವುದಿಲ್ಲವೇನೋ, ಇದು ಸತ್ಯಾಗ್ರಹದ ಪರೀಕ್ಷೆ, ನನ್ನ ಸತ್ಯಾಗ್ರಹ ದುರ್ಬಲವಾಗಿದೆಯೋ, ಶಕ್ತಿಯುತವಾಗಿದೆಯೋ ಎಂಬುದನ್ನೀಗ ನಿರ್ಣಯಿಸಬೇಕಾಗಿದೆ. ಇಲ್ಲವೇ ಸತ್ಯಾಗ್ರಹ ಮತ್ತು ಅಹಿಂಸೆ ಸಫಲವಾಗಬೇಕು, ಹಾಗಾಗದಿದ್ದಲ್ಲಿ ನಾನದನ್ನು ಸಾಧಿಸುತ್ತಾ ಪ್ರಾಣತ್ಯಾಗ ಮಾಡುತ್ತೇನೆ ಈ ಸತ್ಯಶೋಧನೆಗಾಗಿಯೇ ಹೊರಟಿದ್ದೇನೆ' ಎಂದು ಬರೆದರು.

೨೦ ನವೆಂಬರ್ ೧೯೪೬ಕ್ಕೆ ರಂದು ನೋವಾಖಲಿಗೆ ಬಂದ ೧೪ ದಿನಗಳ ನಂತರ ಬಾಪೂಜಿ ತನ್ನ ಜೊತೆಗಾರರೊಂದಿಗೆ ಅಂತಿಮ ಪ್ರಾರ್ಥನೆ ಮಾಡಿದರು. ಒಬ್ಬ ಟೈಪಿಸ್ಟ್ ಮತ್ತೊಬ್ಬ ಪ್ರೊಫೆಸರ್ ನಿರ್ಮಲ ಬೋಸ್ ಗಾಂಧೀಜಿಯ ಮಾತುಗಳನ್ನು ಭಾಷಾಂತರ ಮಾಡುತ್ತಿದ್ದ ವ್ಯಕ್ತಿ, ಈ ಇಬ್ಬರ ಜೊತೆಗೂಡಿ ತೆಪ್ಪದ ಮೇಲೆ ಬಾಪೂಜಿ ಶ್ರೀರಾಂಪುರದ ಕಡೆಗೆ ಹೊರಟರು. ಬಹಳ ಜನ ಅವರೊಂದಿಗೆ ಹೊರಡಬಯಸಿದರು. ಬಾಪೂಜಿ ಎಲ್ಲರನ್ನು ಹಿಂದಕ್ಕೆ ಕಳುಹಿಸಿದರು. ಅವರ ಮಿತ್ರರು ಒಂದೊಂದು ಹಳ್ಳಿಯನ್ನಾರಿಸಿಕೊಂಡರು ಮತ್ತು ಅಲ್ಲಿ ಒಂಟಿಯಾಗಿದ್ದು ಜನರಿಗೆ ಧೈರ್ಯ ನೀಡತೊಡಗಿದರು. ಬಾಪೂಜಿ ತಮ್ಮ ಕೈಯಿಂದಲೇ ತಮ್ಮ ಸಾಮಾನುಗಳನ್ನು

ಕಟ್ಟುತ್ತಿದ್ದರು, ಬಿಚ್ಚುತ್ತಿದ್ದರು ಮತ್ತು ಜೋಡಿಸುತ್ತಿದ್ದರು. ಈಚೆಗೆ ಎಷ್ಟೋ ವರ್ಷಗಳಿಂದಲೂ ರಕ್ತದೊತ್ತಡದಿಂದಾಗಿ ಶರೀರಕ್ಕೆ ಮಾಲೀಶಿನಿಂದ ಮತ್ತು ನೀರಿನಿಂದ ತುಂಬಿದ ಟಬ್‌ನಲ್ಲಿ ಮಲಗುವುದರಿಂದ ಹಿತವೆನಿಸುತ್ತಿತ್ತು. ಆ ಯಾತ್ರೆಯಲ್ಲಿ ಆ ಅನುಕೂಲವನ್ನು ಕೂಡ ತೊರೆದರು. ಸ್ವತಃ ಮಾಲೀಶು ಮಾಡಿಕೊಳ್ಳತೊಡಗಿದರು. ಒಂದು ಬಕೆಟ್ ನೀರಿನಲ್ಲಿ ಸ್ನಾನ ಮಾಡಿ ಮುಗಿಸುತ್ತಿದ್ದರು. ಬಿಹಾರ್‌ನಿಂದ ರಾಜೇಂದ್ರ ಬಾಬು 'ಬಿಹಾರದ ಸ್ಥಿತಿ ಉತ್ತಮಗೊಳ್ಳುತ್ತಿದೆ, ಆದ್ದರಿಂದ ನೀವು ಅರ್ಧ ಉಪವಾಸವನ್ನು ಬಿಟ್ಟು ಹಾಲು ಮತ್ತು ನಿಮ್ಮ ಪೂರ್ತಿ ಆಹಾರವನ್ನು ತೆಗೆದುಕೊಳ್ಳಿ'ರೆಂದೂ ತಾರು ಕಳುಹಿಸಿದರು. ದೈವಕೃಪೆ, ಬಾಪೂಜಿ ಆ ತಾರಿನಿಂದಾಗಿ ಮೃತ್ಯುಮುಖದಿಂದ ಹಿಂದಿರುಗಿದರು. ಈ ಸಮಯದಿಂದಾಚೆ ಬಾಪೂಜಿ ಚಪ್ಪಲಿ ಹಾಕಿಕೊಳ್ಳುವುದನ್ನೂ ಬಿಟ್ಟುಬಿಟ್ಟರು. ಈ ಭೂಮಿ ಸಾವಿರಾರು ಜನರ ರಕ್ತದಿಂದ ಒದ್ದೆಯಾಗಿದೆ, ಇಲ್ಲಿ ಆ ಸತ್ತವರ ಆತ್ಮಗಳು ಒದ್ದಾಡುತ್ತಿವೆ, ಅಂತಹ ಸ್ಥಾನದಲ್ಲಿ ಚಪ್ಪಲಿ ಹಾಕಿಕೊಂಡರೆ ಆ ಮೃತ ಆತ್ಮಗಳ ಬಗ್ಗೆ ಅನಾದರ ತೋರಿದಂತಾಗುತ್ತದೆ– ಜನ ಬೂಟ್ಸ್ ಹಾಕಿಕೊಂಡು ಸಮಾಧಿಗೆ ಹೇಗೆ ಹೋಗಲಾಗುವುದಿಲ್ಲವೋ. ಹಾಗೆಯೇ ನೋವಾಖಲಿಯಲ್ಲೂ ಹಾಗೆಯೇ ಮಾಡಲಿ – ಈ ಸಂತಪ್ತ ಆತ್ಮಗಳ ನಡುವೆ ಚಪ್ಪಲಿ ಹಾಕಿಕೊಂಡರು ನಡೆದರೆ ಅಪಚಾರ ಆಗುತ್ತದೆ ಎಂದು ಭಾವಿಸಿದ್ದರು. ಒಂದು ಪತ್ರ ಬರೆದು ಬಾಪೂಜಿ ಹೀಗೆಂದಿದ್ದರು; 'ಈ ಪ್ರಯಾಣ ದುಷ್ಕರವಾದುದು, ಹತ್ತಿರದಲ್ಲಿ ನಾಲ್ಕೂ ಕಡೆ ಅಂಧಕಾರವಿದೆ, ರಸ್ತೆ ಕಠಿಣವಾಗಿದೆ, ರಾತ್ರಿ ಉದ್ದವಾಗಿದೆ, ದೇವರೇ ಮಾರ್ಗದರ್ಶನ ಮಾಡಬಲ್ಲ, ಈಗಂತೂ ಮಾಡಬೇಕು ಅಥವಾ ಮಡಿಯಬೇಕು ಎಂಬಂತಾಗಿತ್ತು. ಮಾಡುವುದು ಎಂದರೆ ಇಲ್ಲಿ ಹಿಂದೂ–ಮುಸಲ್ಮಾನರು ಅಣ್ಣ–ತಮ್ಮಂದಿರ ಹಾಗಿರುವುದನ್ನು ಕಲಿಯಬೇಕು, ಇಲ್ಲದೇ ಹೋದರೆ ಅದಕ್ಕಾಗಿ ಕೆಲಸ ಮಾಡುತ್ತ–ಮಾಡುತ್ತ ಮಡಿಯುತ್ತೇನೆ.'

ಒಮ್ಮೆ ಬರಿ ಕಾಲಿನಲ್ಲಿ ನಡೆಯುತ್ತಿರುವಾಗ ಯಾವುದೋ ಕೀಟ ಅವರ ಕಾಲು ಕಡಿಯಿತು, ಭಯಂಕರ ವೇದನೆಯಾಯಿತು. ಆದರೆ ಬಾಪೂಜಿ ಚಪ್ಪಲಿ ಹಾಕಿಕೊಳ್ಳಲಿಲ್ಲ, ಈ ಸಂದರ್ಭದಲ್ಲಿ ಬಾಪೂಜಿ ಬರೆದಿರುವ ಡೈರಿ ಓದಬೇಕು, ಒಬ್ಬ ಮನುಷ್ಯ ನಿಷ್ಠೆಯಿಂದ ಹೇಗೆ ಅಪಾರವಾದ ಕಷ್ಟಗಳ ನಡುವೆಯೂ ನಡೆಯುತ್ತಲೇ ಇರುತ್ತಾನೆ, ಎಷ್ಟೋ ಬಾರಿ ರಾತ್ರಿ ೧೨ ಗಂಟೆಗೆ ಮಲಗಿ ಬೆಳಿಗ್ಗೆ ೨ ಗಂಟೆಗೆ ಎದ್ದು ಕೆಲಸ ಆರಂಭಿಸುತ್ತಿದ್ದರು. ಎಲ್ಲ ಕಡೆಗಳಲ್ಲೂ ಪ್ರಾರ್ಥನಾ ಸಭೆಗಳಾಗುತ್ತಿದ್ದವು, ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು, ಮಹಿಳೆಯರಿಗೆ ಧೈರ್ಯ ನೀಡುತ್ತಿದ್ದರು, ಮುಸಲ್ಮಾನರ ಮನೆಗಳಿಗೆ ಹೋಗುತ್ತಿದ್ದರು, ಪುರಸೊತ್ತು ಮಾಡಿಕೊಂಡು ವೃದ್ಧರು, ಕುರುಡರು, ಕುಂಟರು, ಹೆಳವರನ್ನು ವಿಶೇಷವಾಗಿ ಭೇಟಿಯಾಗುತ್ತಿದ್ದರು. ಈ ಯಾತ್ರೆಯಲ್ಲಿ ಎಷ್ಟೋ ಪತ್ರಕರ್ತರು ಅವರನ್ನು ಹಿಂಬಾಲಿಸುತ್ತಿದ್ದರು. ಬಾಪೂಜಿ ಅವರಿಗೆ ನೀವು

ಹಳ್ಳಿಯವರಿಗೆ ಹೊರೆಯಾಗಕೂಡದೆಂದು ಹೇಳಿದ್ದರು. ನೀವು ಇರಲು – ಮಲಗಲು ನೀವೇ ಏರ್ಪಾಡು ಮಾಡಿಕೊಳ್ಳಬೇಕು ಎಂದಿದ್ದರು. ಒಂದು ತಿಂಗಳು ಮಾಡಿದ ಈ ಯಾತ್ರೆಯ ಕೊನೆಯಲ್ಲಿ ಈ ಪತ್ರಕರ್ತರು ಮತ್ತು ವಿಶೇಷವಾಗಿ ಅಬ್ದುಲ್ಲಾ ಮನೆಯ ಸದಸ್ಯರು ಬಾಪೂಜಿಗೆ ಆತ್ಮೀಯರಾದರು.

ಒಬ್ಬ ಮೌಲ್ವಿಯ ಹಳ್ಳಿಗೆ ಬಾಪೂಜಿ ಹೋದರು. ಅಲ್ಲಿ ೧೪೦೦ರ ಜನ ಸಂಖ್ಯೆಯ ನಡುವೆ ಒಬ್ಬ ಮಾತ್ರ ಮೆಟ್ರಿಕ್ ಪಾಸು ಮಾಡಿದ್ದ. ೪೦ ಜನಗಳಿಗೆ ಮಾತ್ರ ಓದಲು–ಬರೆಯಲು ಬರುತ್ತಿತ್ತು. ಬಾಕಿ ನಿರಕ್ಷರಸ್ಥರು. ಒಂದು ಸಾವಿರ ಜನರಿಗೆ ಕುರಾನ್ ಬಾಯಿಪಾಠವಾಗಿತ್ತು, ಆದರೆ ಅರ್ಥ ಬರುತ್ತಿರಲಿಲ್ಲ. ಹಿಂದೂ–ಮುಸಲ್ಮಾನರಿಬ್ಬರೂ ಅಶಿಕ್ಷಿತರಾಗಿದ್ದರು, ಎಂತಹ ದುಃಖಕರ ಸ್ಥಿತಿ ! ಬಾಪೂಜಿ ಆ ಮುಸಲ್ಮಾನ ಹಾಜಿಗಳಿಗೆ ಕುರಾನ್‌ನ ಅರ್ಥ ಕಲಿಸತೊಡಗಿದರು. ಅನೇಕ ಮುಸಲ್ಮಾನರು ಕಡುಬಡವರಾಗಿದ್ದವರು, ಎರಡು ಹೊತ್ತು ತಿನ್ನಲು ರೊಟ್ಟಿ ಕೂಡ ಅವರಿಗೆ ಸಿಗುತ್ತಿರಲಿಲ್ಲ. ಆಗ ಬಾಪೂಜಿ ಈ ರಮಣೀಯ ಪ್ರದೇಶದ ಬಡತನವನ್ನು ನಾಶಪಡಿಸಲು ಬಂಗಾಳದ ಕಾಡುಗಳಲ್ಲಿ ತಾನು ವಾಸ ಮಾಡಿ ಆ ಜನರಿಗೆ ತಮ್ಮ ಸುತ್ತಲಿನ ಸೃಷ್ಟಿ ಮತ್ತು ಪ್ರಕೃತಿಯ ಕೊಡುಗೆಯ ಸದುಪಯೋಗವನ್ನು ಕಲಿಸುತ್ತೇನೆಂದೂ, ತಾನು ಬಂಗಾಳಿ ಆಗುವೆನೆಂದೂ ನಿರ್ಧರಿಸಿದರು. ಮಾರನೆಯ ದಿನ (೨೧ ಡಿಸೆಂಬರ್ ೧೯೪೬)ದಿಂದ ಬಾಪೂಜಿ ಬಂಗಾಳಿ ಓದುವುದು, ಬರೆಯುವುದನ್ನು ಕಲಿಯಲಾರಂಭಿಸಿದರು. ಪ್ರಾರ್ಥನೆಯನ್ನು ನಿಯಮವನ್ನಾಗಿ ಮಾಡಿಕೊಂಡಿದ್ದ ಹಾಗೆಯೇ ಅವರು ನಿಯಮದಿಂದ ಬಂಗಾಳಿ ಭಾಷೆಯನ್ನು ಕೂಡ ಕಲಿಯತೊಡಗಿದರು. ರಾತ್ರೆ ಎಷ್ಟು ಹೊತ್ತೇ ಆಗಿರಲಿ, ಎಷ್ಟೇ ಪುರುಸೊತ್ತು ಇಲ್ಲದಿದ್ದರೂ, ಚಿಂತೆ ಇದ್ದರೂ ಬಾಪೂಜಿ ಬಂಗಾಳಿ ಕಲಿಯುವುದನ್ನು ಬಿಡುತ್ತಿರಲಿಲ್ಲ. ಸಾಯಲು ೨–೩ ಗಂಟೆ ಮೊದಲು ಕೂಡ ಅವರು ಆ ದಿನದ ತನ್ನ ಬಂಗಾಳಿ ಪಾಠ ಪೂರೈಸಿದ್ದರು. ಒಂದಲ್ಲ ಒಂದು ದಿನ ತಾನು ಪೂರ್ವ ಬಂಗಾಳದಲ್ಲಿದ್ದುಕೊಂಡು ಸಮಾಜೋತ್ಥಾನದ ಕೆಲಸ ಮಾಡುತ್ತೇನೆಂದು ಅವರಿಗೆ ನಂಬಿಕೆ ಇತ್ತು. ಈ ಕಾಲ್ನಡಿಗೆಯ ಯಾತ್ರೆಯಲ್ಲಿ ಎಷ್ಟೋ ಬಾರಿ ಜನ ಈ ಮುಸ್ಲಿಂ ಅಧಿಕಾರಿಗಳಿಗೆ ಬದಲಾಗಿ ಹಿಂದೂ ಅಧಿಕಾರಿಗಳು ನಿಯುಕ್ತಿಗೊಂಡರೆ ಜನರಿಗೆ ಹೆಚ್ಚು ಲಾಭವಾಗುತ್ತದೆಂದು ಅವರಿಗೆ ಹೇಳುತ್ತಿದ್ದರು. ಆಗ ಬಾಪೂಜಿ, 'ಇದು ನಿಜವೇ ಆಗಿದ್ದಲ್ಲಿ ಇದು ಆ ಅಧಿಕಾರಿಗಳ ದೌರ್ಬಲ್ಯ ಕೂಡ, ಸರಕಾರಿ ಅಧಿಕಾರಿಗಳು ನಿಷ್ಠೆಯಿಂದ, ನಿಷ್ಪಕ್ಷವಾಗಿ, ನ್ಯಾಯದಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸದೆ ಹೋದರೆ, ಹೇಗೆ? ಎಂದು ಹೇಳಿ, ಬಾಪೂಜಿ ಕೆಲವರು ಹಿಂದೂಗಳೊಂದಿಗೆ ಚರ್ಚೆ ನಡೆಸಿ ಒಂದು ಶಾಂತಿ ಸಮಿತಿಯನ್ನು ರಚಿಸಲು ಯೋಚಿಸಿದ್ದರು. ಅದರಲ್ಲಿ ಪ್ರತಿಯೊಂದು ಠಾಣೆಯಲ್ಲೂ ಹಿಂದೂ–ಮುಸ್ಲಿಮರ ಒಂದು ಸಮ್ಮಿಳಿತವಾದ ಸಮಿತಿಯು ಎಲ್ಲಾ

ವಿಷಯಗಳನ್ನೂ ಪರಿಹರಿಸುವರು, ಹಾಗೂ ಆ ಸಮಿತಿಯ ಅಧ್ಯಕ್ಷ ಸರಕಾರಿ ಅಧಿಕಾರಿ ಆಗಿರುತ್ತಿದ್ದ. ಈ ಸಮಿತಿಯ ವಿಶೇಷತೆ ಎಂದರೆ ಹಿಂದೂ ಮುಸಲ್ಮಾನ ಸದಸ್ಯರನ್ನು ಸೂಚಿಸುತ್ತಿದ್ದ ಹಾಗೂ ಮುಸ್ಲಿಮರು ಹಿಂದೂ ಸದಸ್ಯರನ್ನಾರಿಸುತ್ತಿದ್ದರು. ಈ ಪ್ರಯೋಗದಿಂದ ವೈಮನಸ್ಯ ಸಾಕಷ್ಟು ಕಡಿಮೆಯಾಗತೊಡಗಿತ್ತು.

೫ ಡಿಸೆಂಬರ್ ೧೯೪೫ ರಂದು ಪ್ರಾಂತೀಯ ಹಿಂದೂ ಮಹಾಸಭೆಯ ಅಧ್ಯಕ್ಷ ಶ್ರೀ ಎನ್.ಸಿ. ಚಟರ್ಜಿ ಒಂದು ಹಿಂದೂ ನಿಯೋಗವನ್ನು ತೆಗೆದುಕೊಂಡು ಬಾಪೂಜಿಯನ್ನು ಭೇಟಿಯಾಗ ಬಂದರು. ಹಿಂದೂಗಳನ್ನೆಲ್ಲಾ ಒಂದು ಕಡೆ ಇರುವಂತೆ ಇಟ್ಟಲ್ಲಿ ಅವರು ಸುರಕ್ಷಿತರಾಗಿರುತ್ತಾರೆ ಎಂದು ಚಟರ್ಜಿ ಸಲಹೆ ಮಾಡಿದರು. ಬಾಪೂಜಿ ಬಹಳ ಪ್ರಯತ್ನಪಟ್ಟು ಅವರಿಗೆ ಇಂತಹ ತರ್ಕದಲ್ಲಿದ್ದ ಕೊರತೆಯನ್ನು ತಿಳಿಸಿದರು. ಹೀಗೆ ಒಂದು ಕಡೆ ಹಿಂದೂಗಳನ್ನೆಲ್ಲಾ ಇರಿಸಿದಲ್ಲಿ ಇಡೀ ಕ್ಯಾಂಪ್ ಚಿಕ್ಕ–ಚಿಕ್ಕ ಸಮೂಹಗಳಲ್ಲಿ ಹರಿಹಂಚಿಹೋಗುತ್ತದೆ, ನಿರಂತರವಾಗಿ ಒಬ್ಬರು ಮತ್ತೊಬ್ಬರ ನಡುವೆ ಅಪನಂಬಿಕೆ ಮೂಡಿ ವೈರಭಾವ ಬೆಳೆಯುತ್ತದೆ ಅಂದರೆ ಸರಕಾರ ಕೆಲವರನ್ನು ರಕ್ಷಿಸುವಲ್ಲಿ ಅಸಮರ್ಥವಾಗಿದೆ ಎಂಬ ಅರ್ಥ ಕೂಡ ಇದರಿಂದ ಬರುತ್ತದೆ. ಆಗ ಅಲ್ಪಸಂಖ್ಯಾತರು ಯಾವಾಗಲೂ ದೊಣ್ಣೆ ಹಿಡಿದುಕೊಂಡೇ ಬದುಕುತ್ತಿರಬೇಕಾಗುತ್ತದೆ. ಹೀಗೆ ಹಿಂದುಗಳು ತಮ್ಮದೇ ಬೇರೆ ಕಾಲನಿಗಳನ್ನು ಮಾಡಿಕೊಂಡು ಇರುವ ಬೇಡಿಕೆ ಪಾಕಿಸ್ತಾನದ ಬೇಡಿಕೆ ಇದ್ದ ಹಾಗೆಯೇ ಆಯಿತು, ಪಾಕಿಸ್ತಾನದ ಬೇಡಿಕೆಗೆ ಇದ್ದ ಅರ್ಥವೇನು? ಅದು ಕೂಡ ಒಂದು ದೊಡ್ಡಿಯೇ ಆಗಿಬಿಡುತ್ತದೆ ಗಾಂಧಿಯವರ ಮಾತನ್ನು ಅನುಸರಿಸಲು ಸಾಧ್ಯವೇ ಇಲ್ಲವೆಂದು ಎನ್.ಸಿ. ಚಟರ್ಜಿ ಹೇಳಿದರು. ಬಾಪೂಜಿ ಕೊನೆಯ ಪಕ್ಷ ಒಬ್ಬ ಮನುಷ್ಯನಾದರೂ ತನ್ನ ಅಹಿಂಸಾತ್ಮಕ ಪೌರುಷದಿಂದ ಸತ್ತಿದ್ದೇ ಆದರೆ ಪೂರ್ತಿ ಸಮುದಾಯ ತಾನೇ ಎದ್ದು ನಿಲ್ಲುತ್ತದೆ. ಅಲ್ಪಸಂಖ್ಯಾತರಾಗಿರಲಿ, ಇಲ್ಲದಿರಲಿ ಅದರಿಂದ ವ್ಯತ್ಯಾಸವೇನೂ ಬರುವುದಿಲ್ಲ, ಎಂದರು. ಪೂರ್ವ ಬಂಗಾಳದಲ್ಲಿ ಹಿಂದೂಧರ್ಮವನ್ನು ಉಳಿಸಬೇಕಾಗಿದ್ದರೆ ಉಳಿದಿದ್ದುದು ಇದೊಂದೇ ಮಾರ್ಗ, ನೋವಾಖಲಿ ಅದರ ಪ್ರಯೋಗ ಭೂಮಿಯಾಗಿತ್ತು. ನೋವಾಖಲಿ ಹಾಳಾದಲ್ಲಿ ಭಾರತದೇಶ ಕೂಡ ಹಾಳಾಗುತ್ತದೆ ಎಂದು ಬಾಪೂಜಿ ಹೇಳುತ್ತಿದ್ದರು.

ನೋವಾಖಲಿಯ ಯಾತನೆಯನ್ನು ನೋಡಿ ಮರುಗಿದ ದೇಶದ ಅನೇಕ ಜನ ಸಹಾಯ ಕಳುಹಿಸತೊಡಗಿದರು. ಹಣದ ಅಗತ್ಯವೂ ಇತ್ತು, ಆದರೆ ಜನ ಸಹಾಯ ತೆಗೆದುಕೊಂಡು ಅಸಹಾಯಕರಾಗಬಾರದು, ಅವರ ಪುರುಷಾರ್ಥ ಸಾಯಬಾರದೆಂಬುದು ಬಾಪೂಜಿ ಅಭಿಪ್ರಾಯವಾಗಿತ್ತು. ಬಾಪೂಜಿ ಹಣವನ್ನು ನಾವು ನಮ್ಮ ದೇವತೆಯನ್ನಾಗಿ ಮಾಡಿಕೊಂಡಾಗ ನಿಜವಾದ ಈಶ್ವರನ ಅಸ್ತಿತ್ವವನ್ನು ನಾವು ಹಾಳುಮಾಡುತ್ತೇವೆ, ಆದುದರಿಂದ ಹಣದ ಆಸೆಯಿಂದ ದೂರ ಉಳಿಯಬೇಕು,

ಹಣದ ಬಲದಿಂದ ನಡೆಯುವ ಸಂಸ್ಥೆ ಮೊದಲ ಏಟಿನಲ್ಲೇ ನೆಲಕ್ಕುರುಳುತ್ತದೆ ಎಂದರು. ಸರದಾರ್‌ಪಟೇಲ್‌ಗೆ ಬಾಪೂಜಿಯ ಸುರಕ್ಷತೆಯ ಚಿಂತೆ ಕಾಡಿಸುತ್ತಿತ್ತು. ಐ.ಎನ್.ಎ.ನ ಸರದಾರ್ ನಿರಂಜನಸಿಂಹ ಗಿಲ್ ನೋವಾಖಲಿಯಲ್ಲಿ ಕಾರ್ಯ ಮಾಡುವ ಸಿದ್ಧತೆ ಮಾಡಿದಾಗ ಸರದಾರರು ಆತನನ್ನು ಬಾಪೂಜಿ ಬಳಿಗೆ ಕಳುಹಿಸಿದರು. ಐ.ಎನ್.ಎ. ಅವರಲ್ಲಿ ಕೋಮುವಾದಿ ಭಾವನೆ ಇರಲಿಲ್ಲ. ಆದುದರಿಂದ ಬಾಪೂಜಿ ಗಿಲ್ ಸಾಹೇಬರ ಸಹಾಯವನ್ನೊಪ್ಪಿಕೊಂಡರು, ಆದರೆ ಮೊದಲು ಬಂಗಾಳದ ಮುಖ್ಯಮಂತ್ರಿಯಿಂದ ಅದಕ್ಕೆ ಅನುಮತಿ ಪಡೆಯಬೇಕು ಎಂದು ಹೇಳಿದರು. ಮುಖ್ಯಮಂತ್ರಿ ಸುಹರಾವರ್ದಿಗೆ ತೊಂದರೆ ಕೊಡುವ ಇಚ್ಛೆ ಬಾಪೂಜಿಗಿರಲಿಲ್ಲ, ಸುಹರಾವರ್ದಿ ಅನುಮತಿ ನೀಡಿದರು.

ಗಿಲ್ ಸಾಹೇಬರು ೧೦೦೦ ಸಿಖ್ ಸ್ವಯಂಸೇವಕರನ್ನು ತರಬೇಕೆಂದಿದ್ದರು. ಆದರೆ ಬಾಪೂಜಿ ೧೦೦ ಜನರನ್ನು ಮಾತ್ರ ತರಲು ಒಪ್ಪಿಗೆ ನೀಡಿದರು. ವಾಸ್ತವವಾಗಿ ೫೦ಜನಕ್ಕೂ ಹೆಚ್ಚು ಸಿಖ್ ಸ್ವಯಂಸೇವಕರು ನೋವಾಖಲಿಯಲ್ಲಿ ಕೆಲಸ ಮಾಡಿರಲಿಲ್ಲ, ಅವರು ಬಹಳ ಚಟುವಟಿಕೆ ಹೊತ್ತು ನಿಷ್ಠೆಯಿಂದ ಕೆಲಸ ಮಾಡಿದರು, ತಮ್ಮ ಕೃಪಾಣಗಳನ್ನು ಮನೆಗಳಲ್ಲಿ ಬಿಟ್ಟು ಅಹಿಂಸಾತ್ಮಕವಾಗಿ ರಚನಾತ್ಮಕ ಕೆಲಸ ಮಾಡಿಬಂದಿದ್ದರು. ಸರದಾರ್ ನಿರಂಜನ ಸಿಂಹರು ಕಳೆದ ದಿನಗಳನ್ನು ನೆನಪುಮಾಡಿಕೊಂಡು ಹೇಳಿದರು. ಭಾರತಕ್ಕೆ ಹಿಂದುರಿಗಿದ ನಂತರ ಇಂಡಿಯನ್ ನ್ಯಾಷನಲ್ ಆರ್ಮಿಯು ಜನರು ಅಹಿಂಸಾತ್ಮಕ ಆಂದೋಳನದಲ್ಲಿ ಕಾರ್ಯನಿರ್ವಹಿಸಬೇಕು; ಗಾಂಧೀಜಿಯ ಆದೇಶವನ್ನು ಪಾಲಿಸಬೇಕು ಎಂದು ಬೀಳ್ಕೊಡುಗೆಯ ಸಮಯದಲ್ಲಿ ನೇತಾಜಿ ಅವರುಗಳಿಗೆ ಹೇಳಿದ್ದರು. ಅದರಿಂದ ಈಗ ಸಿಖ್ಖರು ಅಹಿಂಸೆಯನ್ನು ಸ್ವೀಕರಿಸಿ ದೇಶಸೇವೆಯಲ್ಲಿ ತತ್ಪರರಾಗಿದ್ದರು.

ಒಬ್ಬ ಮಿತ್ರನ ಪ್ರಶ್ನೆಗೆ ಉತ್ತರ ನೀಡಿ ಬಾಪೂಜಿ, ಅಲ್ಲಿ ತಾನು ಮುಸಲ್ಮಾನರನ್ನು ಕುಪಿತಗೊಳಿಸಲು ಬಂದಿಲ್ಲವೆಂದು ತಿಳಿಸಿ, ಹಿಂಸೆಯ ಬಲದಿಂದ ಹಿಂದೂಗಳ ರಕ್ಷಣೆ ಆಗುವುದಿಲ್ಲ, ಆದರೆ ಆಯುಧಗಳ ನಡುವೆ ಸ್ಪರ್ಧೆ ಉಂಟಾಗುತ್ತದೆ, ಅದರಲ್ಲಿ ದೇಶವಿಡೀ ನಾಶವಾಗುತ್ತದೆ. ಇಪ್ಪತ್ತೈದು ವರ್ಷಗಳಿಂದಲೂ ಕಾಂಗ್ರೆಸ್ ಅಹಿಂಸೆಯನ್ನು ತನ್ನದಾಗಿಸಿಕೊಂಡಿತ್ತು, ಅದು ಕಚ್ಚಾ–ಪಕ್ಕ ಎಂತಹದೇ ಅಪೂರ್ಣವಾದ ಅಹಿಂಸೆಯಾಗಿದ್ದಿರಬಹುದಾದರೂ, ಅದರಿಂದಲೇ ಜನರಲ್ಲಿ ಉತ್ಸಾಹ ಮೂಡಿತು, ಧೈರ್ಯಬಂತು. ಎಲ್ಲರೂ ದೇವತೆಗಳಾಗಲು ಸಾಧ್ಯವಿಲ್ಲ, ಮಹಾತ್ಮರಾಗುವುದಿಲ್ಲ, ಆದರೆ ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲೂ ಪ್ರೀತಿ ಇಟ್ಟುಕೊಳ್ಳಬಹುದು, ಅಹಂಕಾರದಿಂದ ಯಾರಾದರೂ ತನ್ನ ಪ್ರಾಣಕೊಟ್ಟರೆ ಅದರಿಂದ ಸಮಾಜಕ್ಕೆ ಯಾವ ಲಾಭವೂ ಆಗುವುದಿಲ್ಲ, ಹೃದಯದಲ್ಲಿ ಔದಾರ್ಯವಿದ್ದಲ್ಲಿ ಕರುಣೆ ಹುಟ್ಟುತ್ತದೆ ಮತ್ತಾಗ ಈರ್ಷ್ಯೆ, ಅಹಂಕಾರ, ಕ್ರೋಧ ಹಾಳಾಗುತ್ತವೆ ಆಗ ಈ ಕೋಟ್ಯಂತರ

ಬಡವರಲ್ಲಿ ದೇವರ ದರ್ಶನ ಮಾಡಬಹುದು, ಅಂದರು.

೩೧ ಡಿಸೆಂಬರ್‌ದಂದು ಕೆಲವರು ಮಿತ್ರರು ತಮ್ಮ ಸಮಸ್ಯೆಯನ್ನು ಬಾಪೂಜಿ ಮುಂದಿಟ್ಟರು. ಕೆಲವರು ಉಗ್ರ ಮುಸಲ್ಮಾನರು, ಹಿಂದೂಗಳೇನಾದರೂ ಮುಸಲ್ಮಾನರ ವಿರುದ್ಧ ಕೇಸ್ ಹಾಕಿದ್ದರೆ ಅದನ್ನು ಹಿಂದಕ್ಕೆ ಪಡೆಯಲಿ. ಆಗ ನಾವು ಸಂತೋಷವಾಗಿ ನಮ್ಮ ಮನೆಗೆ ಹಿಂದಿರುಗಬಹುದೆಂದೂ ಹೇಳುತ್ತಿದ್ದರು. ಅಂತಹ ಪರಿಸ್ಥಿತಿಯಲ್ಲಿ ಏನು ಮಾಡುವುದು ಎಂಬ ಪ್ರಶ್ನೆ ಮುಂದಿತ್ತು, ಬಾಪೂಜಿ ಹೇಳಿದರು, 'ಈ ಪರಿಸ್ಥಿತಿಯಲ್ಲಿ ಎರಡು ಉಪಾಯಗಳಿವೆ. ಒಂದು ಈ ಮುಸಲ್ಮಾನರು ಒಂದು ಒಪ್ಪಂದ ಮಾಡಿಕೊಂಡು, ತಾವು ಮಾಡಿದ ಎಲ್ಲಾ ಕೆಲಸಗಳೂ ಬೇರೆಯವರ ನಿರ್ದೇಶನದಲ್ಲಿ ಪಾಕಿಸ್ತಾನವನ್ನು ಪಡೆಯಲು ಮಾಡಿದ್ದವೆಂದೂ, ಅವರ ಮನಸ್ಸಿನಲ್ಲಿ ಯಾವುದೇ ದ್ವೇಷ ಅಥವಾ ಶತ್ರುಭಾವ ಇಲ್ಲವೆಂದೂ ತಿಳಿಸಲಿ. ಇಲ್ಲವೇ ಮ್ಯಾಜಿಸ್ಟ್ರೇಟರೆದುರಿಗೆ ಸಮರ್ಪಣೆ ಮಾಡಲಿ. ನಂತರ ನೀಡಲಾದ ಸಜೆಯನ್ನು ನಮ್ರವಾಗಿ ಸ್ವೀಕರಿಸಲಿ. ಆದರೆ ಸಂಧಾನಕ್ಕೆ ಬಂದು ಕೇಸನ್ನು ವಜಾ ಮಾಡಿಸುವುದು ಸರಿಯಲ್ಲ, ಸಜೆಯಿಂದ ಉಳಿಯುವುದಕ್ಕೋಸ್ಕರ ಮಾಡುವ ಸಮರ್ಪಣೆ ಸಮರ್ಪಣೆ ಅಲ್ಲವೇ ಅಲ್ಲ, ಇದೊಂದು ವ್ಯಾಪಾರವಾಗುತ್ತದೆ. ಅಂತಹ ಕೊಡು – ಪಡೆಯ ವ್ಯಾಪಾರದಲ್ಲಿ ಯಾವ ಸಮುದಾಯಕ್ಕೂ ಒಳಿತಾಗುವುದಿಲ್ಲ. ಭಯದಿಂದ ಪ್ರೇರಿತವಾದ ಸಮರ್ಪಣೆಯಿಂದ ಯಾವ ಪ್ರಯೋಜನವೂ ಇಲ್ಲ, ಸತ್ಯಾಗ್ರಹಿಯಾದವನು ಎರಡು ಸಮುದಾಯಗಳನ್ನೂ ಪೌರುಷದಿಂದ ಕೂಡಿ ಧೈರ್ಯಶಾಲಿಗಳಂತೆ ಮಾಡಬೇಕೇ ಹೊರತು ಅವರನ್ನು ಹೇಡಿಗಳನ್ನಾಗಿ ಮಾಡಬಾರದು.'

ಸ್ಪೃಶ್ಯ – ಅಸ್ಪೃಶ್ಯರ ಸಮಸ್ಯೆಯನ್ನು ದೂರಗೊಳಿಸಲು ಕೆಲವುರು ಹಿಂದೂ–ಮುಸಲ್ಮಾನರು ಸೇರಿ ಒಂದು ಭೋಜನವನ್ನೇರ್ಪಡಿಸಿದರು. ಬಾಪೂಜಿ ಅಂತೂ ಸ್ಪೃಶ್ಯ–ಅಸ್ಪೃಶ್ಯತೆಯನ್ನು ಒಪ್ಪುತ್ತಿರಲೇ ಇಲ್ಲ. ಅವರ ಆಶ್ರಮದಲ್ಲಿ ಎಷ್ಟೋ. ವರ್ಷಗಳಿಂದ ಒಟ್ಟಿಗೆ ಊಟ ಮಾಡುತ್ತಲೇ ಇದ್ದರು. ಆದರೆ ನೋವಾಖಲಿಯಲ್ಲಿ ಇಂತಹ ಭೋಜನ ಕೂಟಕ್ಕೆ ಯಾವ ಅರ್ಥವೂ ಇರಲಿಲ್ಲ, ಮುಸಲ್ಮಾನರಿಂದ ಅದರ ಅಪೇಕ್ಷೆ ಇಡುವುದೂ ತಪ್ಪಾಗುತ್ತಿತ್ತು. ಹಿಂದೂಗಳು ಕೂಡ ಒಪ್ಪುವ ಅಗತ್ಯವಿರಲಿಲ್ಲ, ಇನ್ನೂ ಎರಡೂವರೆ ತಿಂಗಳ ಹಿಂದೆ ತಾನೆ ಬಲವಂತವಾಗಿ ಹಿಂದೂಗಳ ಧರ್ಮ ಪರಿವರ್ತನೆ ಮಾಡಿಸಲಾಗಿತ್ತು. ಹೆದರಿದ ಆ ಹಿಂದೂಗಳನ್ನು ಮುಸಲ್ಮಾನರ ಜೊತೆ ಕೂರಿಸಿ ಹಸುವಿನ ಮಾಂಸ ತಿನ್ನಿಸುತ್ತಿದ್ದರು, ಅತ್ಯಾಚಾರದಿಂದ ಪೀಡಿತರಾದ ಇಂತಹವರನ್ನು ಮೊದಲು ಧೈರ್ಯವಂತರನ್ನಾಗಿ ಮಾಡುವ ಅಗತ್ಯವಿತ್ತು. ಆಗಷ್ಟೇ ಅವರು ಔದಾರ್ಯ ತೋರಿಸುವ ಸಾಮರ್ಥ್ಯ ಉಳ್ಳವರಾಗುತ್ತಾರೆ. ಈ ಪ್ರೀತಿಭೋಜನ ಸಮಾರಂಭ ಕ್ಷಮೆಯಿಂದ ಪ್ರೇರಿತವಾಗಿದ್ದು ಸಹಿಷ್ಣುತೆಯನ್ನು ಪ್ರದರ್ಶಿಸುವುದಾಗಿರಲಿಲ್ಲ, ಇದೊಂದು ಬೂಟಾಟಿಕೆ ಆಗುತ್ತಿತ್ತು.

ನೋವಾಖಲಿಯಲ್ಲಿ ತಿರುಗಾಡುವಾಗ ಬಾಪೂಜಿ ಆಶ್ರಮದ ರಾಮಧುನಿಯಲ್ಲಿ ಹೊಸಪದ್ಧತಿ ತಂದು ಅದರಲ್ಲಿ 'ಈಶ್ವರ ಅಲ್ಲಾ ತೇರೇ ನಾಮ್, ಸಬಕೋ ಸನ್ಮತಿ ದೇ ಭಗವಾನ್' ಅನ್ನು ಸೇರಿಸಿದ್ದರು, ಅನೇಕ ಪ್ರಾರ್ಥನಾ ಸಭೆಗಳಲ್ಲಿ ಮುಸಲ್ಮಾನರೂ ಬಂದು ಭಾಗವಹಿಸುತ್ತಿದ್ದರು. ಭಟಿಯಾಲಪುರ ಹಳ್ಳಿಯಲ್ಲಿ ದೇವಸ್ಥಾನವನ್ನು ಪೂರ್ತಿಯಾಗಿ ನಾಶಪಡಿಸಿದ್ದರು, ಆದರೆ ಕೆಲವರು ಮುಸ್ಲಿಂ ಸೇವಕರು ಆ ಮಂದಿರವನ್ನು ಜೀರ್ಣೋದ್ಧಾರಮಾಡಿಸಿದರು ಮತ್ತು ಬಾಪೂಜಿ ಆ ಮೂರ್ತಿಯನ್ನು ಪುನಃ ಸ್ಥಾಪಿಸಿದರು. ಆ ಮುಸಲ್ಮಾನ ಸೋದರರು, ತಾವು ಪ್ರಾಣ ಕೊಟ್ಟಾದರೂ ಹಿಂದೂಗಳನ್ನು, ಅವರ ಮಂದಿರಗಳನ್ನು ರಕ್ಷಿಸುತ್ತೇವೆಂದು ಬಾಪೂಜಿಗೆ ಆಶ್ವಾಸನೆಕೊಟ್ಟರು. ಒಂದು ಕಡೆ ಪರದಾ ಪದ್ಧತಿಯಿಂದಾಗಿ ಕೆಲವರು ಮುಸಲ್ಮಾನ ಮಹಿಳೆಯರು ಬಾಪೂಜಿಯನ್ನು ಒತ್ತಾಯಮಾಡಿ ತಮ್ಮ ಮನೆಗಳಿಗೆ ಬರಮಾಡಿಕೊಂಡರು, ಅವರನ್ನು ಭೇಟಿ ಮಾಡಿದನಂತರ ಬಾಪೂಜಿ ಪ್ರಾರ್ಥನಾ ಸಭೆಯಲ್ಲಿ ಪರದಾ ಪದ್ಧತಿಯ ರೀತಿಯನ್ನು ಕುರಿತು ವರ್ಣಿಸಿ, ಪರದೆಯನ್ನು ಬಿಟ್ಟುಬಿಡುವಂತೆ ಸಲಹೆ ನೀಡಿದರು. ಅದಕ್ಕೆ ಬೊಂಬಾಯಿ, ಮದ್ರಾಸಿನ ಮುಲ್ಲಾ–ಮೌಲ್ವಿಗಳು ಬಾಪೂಜಿ ಮೇಲೆ ಇಸ್ಲಾಂನ್ನು ಭ್ರಷ್ಟಗೊಳಿಸುವ ಆರೋಪವನ್ನು ಹೊರಿಸಿದರು, ಈ ತರಹೆಯ ಕಹಿ–ಸಿಹಿ ಅನುಭವಗಳೊಂದಿಗೆ ಬಾಪೂಜಿಯ 'ಇಕಲಾ ಚಲೋ' ಯಾತ್ರೆ ನಡೆಯುತ್ತಿತ್ತು. ಒಂದು ತಿಂಗಳು ಶ್ರೀರಾಮಪುರದಲ್ಲಿ ಸ್ಥಿರವಾಗಿದ್ದರು, ನಂತರದಲ್ಲಿ ಪ್ರತಿದಿನ ಒಂದು ಹಳ್ಳಿಯಲ್ಲಿ ಮಲಗಿ, ಮಾರನೆಯ ದಿನ ಇನ್ನೊಂದು ಹಳ್ಳಿಗೆ ನಡೆದುಕೊಂಡು ಹೋಗುತ್ತಿದ್ದರು. ಬಾಪೂಜಿಗೆ ಇದು ತೀರ್ಥಯಾತ್ರೆಯಾಗಿತ್ತು, ಅದರಲ್ಲಿ ಅವರು ಆತ್ಮಶುದ್ಧಿಯ ಮಹಾಯಜ್ಞದಲ್ಲಿ ತೊಡಗಿದ್ದರು. ಈ ದಿನಗಳಲ್ಲಿ ಬಾಪೂಜಿಯ ಸ್ನೇಹಿತರು ೨೦ ಬೇರೆ ಹಳ್ಳಿಗಳಲ್ಲಿ ಬಹಳ ಸುಂದರವಾಗಿ ಪ್ರಭಾವಪೂರ್ಣವಾಗಿ ಕಾರ್ಯನಿರ್ವಹಿಸಿದರು. ಇದು ಕೂಡ ಅಲ್ಲಿನ ಸಮಾಜದ ಮೇಲೆ ಒಳ್ಳೆಯ ಪ್ರಭಾವ ಬೀರಿತು.

೧೮ ವರ್ಷಗಳ ಮುಂಚೆ ದೇಶದ ಜನ ೨೬ ಜನವರಿಯಂದು ಸ್ವಾತಂತ್ರ್ಯದ ಪ್ರತಿಜ್ಞೆ ತೆಗೆದುಕೊಂಡಿದ್ದರು, ಪ್ರತಿವರ್ಷ ಜನವರಿ ೨೬ರಂದು ಆಚರಿಸುತ್ತಿದ್ದರು. ಆಗಾಖಾನ್ ಜೈಲಿನಲ್ಲಿಯೂ ಬಾಪೂಜಿ ತಿರಂಗಾ ಝಂಡಾ ಹಾರಿಸಿದ್ದರು, ವಂದೇಮಾತರಂ ಹಾಡಲಾಗಿತು. ೧೯೪೭ರ ಜನವರಿ ೨೬ರಂದು ಬಾಪೂಜಿ ಬಾಂಸಾ ಹಳ್ಳಿಯಲ್ಲಿದ್ದರು. ಹಳ್ಳಿಯ ಜನ ಮತ್ತು ಮಿಕ್ಕ ಕಾರ್ಯಕರ್ತರುಗಳು ಬಾಪೂಜಿ ಧ್ವಜವಂದನೆಯಲ್ಲಿ ಭಾಗವಹಿಸಲೆಂದು ಇಷ್ಟಪಟ್ಟರು. ಆದರೆ, ಈ ವರ್ಷ ನೋಆಖಲಿಯಲ್ಲಿ ಸ್ವಾತಂತ್ರ್ಯ ದಿವಸವನ್ನು ಆಚರಿಸುವುದಕ್ಕಾಗಿ ಬಾಪೂಜಿಗೆ ಸ್ವಲ್ಪ ಕೂಡ ಉತ್ಸಾಹವಿರಲಿಲ್ಲ, ತೀವ್ರವಾದ ನೋವಿನಿಂದ ಅವರು ನುಡಿದರು – 'ಹಿಂದೂ ಮುಸಲ್ಮಾನರ ನಡುವೆ ಇಂತಹ ದ್ವೇಷ ತುಂಬಿರುವಾಗ ಸ್ವಾತಂತ್ರ್ಯದ

ಹಬ್ಬವನ್ನೇನು ಆಚರಿಸುವುದು? ನಾನು ಇಂಗ್ಲಿಷರ ಎದುರು ಹೋರಾಡುತ್ತಿದ್ದೆ, ಆದರೆ ಇಲ್ಲಿ ಯಾರೆದುರು ಹೋರಾಡಲಿ? ನಮ್ಮ ಸೋದರರ ಜೊತೆ ಕದನ? ಎಂಥ ಸ್ಪರ್ಧೆ? ಎಂಥ ವಿವಾದ? ಎಂತಹ ಮನಃಸ್ತಾಪ? ಹಿಂದೂ, ಮುಸಲ್ಮಾನ, ಸಿಖ್, ಪಾರಸಿ ಎಲ್ಲರೂ ತಮ್ಮ ರಕ್ತ ಹರಿಸಿ ಈ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮಾಡಿದರು. ಆದರೆ ಈಗ ಕೆಟ್ಟ ದಿನಗಳು ಬಂದಿವೆ, ನಾವುಗಳು ಸ್ವಾತಂತ್ರ್ಯದ ಹಿಂದಿನ ಸಂಜೆ ಈ ರೀತಿ ಬರ್ಬರರವಾಗಿ ನಮ್ಮ ನಡುವೆಯೇ ಕಾದಾಡುತ್ತಿದ್ದೇವೆ. ನಾವು ದೇಶದ ಜನ ಎಚ್ಚರಗೊಳ್ಳದಿದ್ದರೆ ಈ ಸ್ವಾತಂತ್ರ್ಯ ಪೊಳ್ಳಾಗಿ ಹೋಗುತ್ತದೆ.' ಈ ರೀತಿ ಮೊದಲ ಬಾರಿ ಬಾಪೂಜಿ ಸ್ವಾತಂತ್ರ್ಯ ದಿವಸದಂದು ಬಾವುಟ ಹಾರಿಸುವುದನ್ನು ತಡೆದರು, ಸ್ವಾತಂತ್ರ್ಯಕ್ಕಾಗಿ ಹದಿನಾರು ವರ್ಷಕಾಲ ಕಷ್ಟಗಳ ನಡುವೆ ವಿದೇಶಿ ಸರಕಾರದೆದುರು ತಮ್ಮ ರಾಷ್ಟ್ರಧ್ವಜವನ್ನೇರಿಸಿದ್ದ ಬಾಪೂಜಿಗೆ ಅದೆಂಥ ವಿಷಾದವಾಗಿರಬಹುದು? ೧೯೪೭ರ ಜನವರಿ ೨೬ರಂದು ಬಾವುಟ ಹಾರಿಸುವ ಮನಸ್ಸೇ ಅವರಿಗಾಗಲಿಲ್ಲ !

ಈ ಯಾತ್ರೆಯಲ್ಲೆಲ್ಲ ಜವಾಹರಲಾಲಜೀ ಮತ್ತು ಸರದಾರ್ ಅವರ ಪತ್ರಗಳು ದೆಹಲಿಯಿಂದ ಬರುತ್ತಿದ್ದವು, 'ದೆಹಲಿಯಲ್ಲಿ ಮಹತ್ವದ ಕೆಲಸಗಳಿವೆ,' ಎಂದೆಲ್ಲಾ ಬರೆದು ಬಾಪೂಜಿಯನ್ನು ದೆಹಲಿಗೆ ಬರುವಂತೆ ಕರೆಯುತ್ತಲೇ ಇದ್ದರು. ಆದರೆ ಬಾಪೂಜಿ ಹೋಗಲಿಲ್ಲ, 'ನನ್ನ ಸ್ಥಾನವೆಲ್ಲಿದೆ?' ಎಂದು ಹೇಳಿಬಿಟ್ಟರು. ನೋವಾಖಲಿಯಲ್ಲಿ ಬಾಪೂಜಿಯ ಬರಿಗಾಲಲ್ಲಿ ಹೊಪ್ಪಳೆಗಳು ಬಂದವು, ರಕ್ತ ಸೋರತೊಡಗಿತು, ಚಳಿಗಾಲದಲ್ಲಿ ಚಳಿಯಲ್ಲಿ ಈ ರೀತಿ ಬೆತ್ತಲೆ ಶರೀರ, ಗೋಣಿಚೀಲದ ಛಾವಣಿಗಳ ನಡುವೆ ಇರುತ್ತಿದ್ದುದರಿಂದ ಅವರಿಗೆ ಭಯಂಕರ ಚಳಿ ಆಗುತ್ತಿತ್ತು. ನೀರು ಬಿಸಿ ಮಾಡಿಕೊಳ್ಳಲು ಯಾವ ಸಾಧನ ಕೂಡ ಇರುತ್ತಿರಲಿಲ್ಲ, ಆದರೆ ಅವರು ಚಪ್ಪಲಿ ಹಾಕಿಕೊಳ್ಳಲಿಲ್ಲ, ಹೊಲೆದ ಬಟ್ಟೆ ಯಾವುದನ್ನೂ ಧರಿಸಲಿಲ್ಲ, ಮತ್ತು ಹೋದಲ್ಲೆಲ್ಲ ಹರಕು – ಮುರುಕಲು ಸುಟ್ಟಗುಡಿಸಲುಗಳಲ್ಲೇ ಇರುತ್ತಿದ್ದರು. ಅರ್ಧ ಕಿಲೊ ಆಡಿನ ಹಾಲು, ಬೇಯಿಸಿದ ತರಕಾರಿ ರಸ ಅವರ ಆಹಾರವಾಗಿರುತ್ತಿತ್ತು. ಹಣ್ಣಿಲ್ಲ, ಜೇನುತುಪ್ಪವಿಲ್ಲ, ಯಾವ ಪೋಷಣೆಯೂ ಇಲ್ಲ, ಬಾಪೂಜಿ ಬಹಳ ಸಣ್ಣಗಾದರು. ಟಿಪರಾಹ್‌ನಲ್ಲಿ ಮುಸಲ್ಮಾನರು ಬಹಳ ಕಠೋರವಾಗಿ ವರ್ತಿಸಿದರು, ಮುಸ್ಲಿಂ ಲೀಗ್‌ಗೆ ನೋವಾಖಲಿಯಲ್ಲಿ ಬಾಪೂಜಿ ಕೆಲಸ ಮಾಡುವದು ಸ್ವಲ್ಪ ಕೂಡ ಇಷ್ಟವಿರಲಿಲ್ಲ. ಆದರೆ ಬಾಪೂಜಿ ಈ ಎಲ್ಲ ವಿರೋಧಗಳನ್ನೂ ಗಮನಿಸದೆ ನೋವಾಖಲಿಯಲ್ಲಿ ಸುತ್ತಬಯಸುತ್ತಿದ್ದರು, ಕೊನೆಗಂತೂ ನೋಆಖಲಿಯ ಮಹಿಳೆಯರಿಗೆ ಬಾಪೂಜಿಯಿಂದ ಸಮಾಧಾನ, ಬಲ ಮತ್ತು ರಾಮನಾಮದ ಮಹಾಮಂತ್ರ ಸಿಕ್ಕಿತ್ತು, ನಂತರದಲ್ಲಿ ನಿಧಾನವಾಗಿ ಆ ಮಹಿಳೆಯರ ಹೆದರಿಕೆ ದೂರವಾಗಿತ್ತು.

ಬಲಾತ್ಕಾರಕ್ಕೊಳಗಾಗಿರುವ ಸೊಸೆ, ಹೆಣ್ಣುಮಕ್ಕಳು ಇವರನ್ನು ತಿರಸ್ಕರಿಸುವುದು ಮಹಾಪಾಪವಾಗುತ್ತದೆಂದು ಬಾಪೂಜಿ ಒತ್ತಾಯಮಾಡಿ ಹಿಂದೂಗಳಿಗೆ ತಿಳುವಳಿಕೆ ನೀಡಿದರು. ಅವರನ್ನು ಮತ್ತೂ ಪ್ರೀತಿ ಮತ್ತು ಗೌರವ ನೀಡಿ ಸ್ವೀಕರಿಸಬೇಕು ಎಂದರು. ಬಾಪೂಜಿಯವರ ಮಾತು ಕೇಳಿ ವಾಸ್ತವವಾಗಿ ಆ ಮನೆ–ಮಠ ಕಳೆದುಕೊಂಡಿದ್ದ ಆ ಜನರು ಆ ತೀವ್ರ ದುಃಖಕ್ಕೀಡಾಗಿದ್ದ ಮಹಿಳೆಯರನ್ನವರು ಗೌರವದಿಂದ ಮನೆಗೆ ಕರೆತಂದಿದ್ದರು, ಅವರ ಮಕ್ಕಳನ್ನೂ ಸ್ವಾಗತಿಸಿದ್ದರು. ಹೀಗೆ ಶಾಂತಿ, ಪ್ರಾಮಾಣಿಕತೆಯಿಂದ ಜನರ ನಡುವೆ ಸುತ್ತಾಡಿದ್ದರಿಂದ ಆ ಎಲ್ಲಾ ಧರ್ಮಭ್ರಷ್ಟ, ಧರ್ಮ ಪರಿವರ್ತನೆಯಾಗಿದ್ದ ಜನರೆಲ್ಲ ಪುನಃ ಹಿಂದೂಗಳಾದರು. ಬಾಪೂಜಿಯವರ ಕರುಣೆ, ಧೈರ್ಯ ಮತ್ತು ವಿವೇಕದಿಂದಾಗಿ ಆ ದುಃಖಿತರಾಗಿದ್ದ ಜನರು ಅವ್ಯಕ್ತವಾಗಿದ್ದ ಗಾಯಗಳು ವಾಸಿಯಾದವು, ಬಡ ಮುಸಲ್ಮಾನರಿಗು ಕೂಡ ಬಾಪೂಜಿ ಮತ್ತೊಬ್ಬ ದೇವದೂತರಂತಿದ್ದರು. ತನ್ನ ಅಪಾರ ಪ್ರೇಮ, ಕರುಣೆ ತೋರಿ ಅವರ ದುಃಖ, ದಾರಿದ್ರ್ಯವನ್ನು ದೂರಮಾಡಲು ಉದ್ಯುಕ್ತರಾಗಿದ್ದರು. ಬಾಪೂಜಿ ಎಷ್ಟು ಸರಳವಾಗಿದ್ದು, ಕಷ್ಟಗಳನ್ನು ಸಹಿಸಿ ನಿರಂತರ ಸೇವೆ ಮಾಡುತ್ತಿದ್ದರೆಂಬುದನ್ನು ಮುಸ್ಲಿಮರು ಸ್ವತಃ ನೋಡುತ್ತಿದ್ದರು. ಅಂತಹ ತಪಸ್ಸಿಗೆ ಒಳ್ಳೆಯ ಪರಿಣಾಮ ಸಿಗಲೇಬೇಕಿತ್ತು. ಬಾಪೂಜಿ ಇನ್ನೂ ಬಹಳ ದಿನ ನೋವಾಖಲಿಯಲ್ಲೇ ಸುತ್ತಾಡ ಬಯಸುತ್ತಿದ್ದರು, ಆದರೆ ದೇವರು ಅವರಿಗಾಗಿ ಇನ್ನೇನೋ ವ್ಯವಸ್ಥೆಯನ್ನು ಕಲ್ಪಿಸಿದ್ದರು, ಬಿಹಾರದಲ್ಲೆದ್ದಿದ್ದ ಬೆಂಕಿ ಇನ್ನೂ ಪೂರ್ತಿ ಆರುವುದರಲ್ಲಿದ್ದಾಗಲೇ ಅಲ್ಲಿಂದ ಸುದ್ದಿ ಬರುವುದೇ ನಿಂತುಹೋಯಿತು. ಬಾಪೂಜಿ ತನ್ನ ಮಿತ್ರ ಮಹಮೂದನಿಗೆ ಪತ್ರ ಬರೆದು ವಾಸ್ತವಿಕ ಪರಿಸ್ಥಿತಿ ಏನೆಂದು ತಿಳಿಸಹೇಳಿದರು. ಡಾ॥ ಮಹಮೂದ್‌ರ ಪತ್ರ ವಿಸ್ತೃತವಾಗಿತ್ತು, ಅದನ್ನೋದಿ ಬಾಪೂಜಿ ಬಿಹಾರಕ್ಕೆ ಬರಬೇಕೆಂದು ನಿರ್ಣಯಿಸಿದರು. ನೋವಾಖಲಿಯ ಹಿಂದೂ–ಮುಸಲ್ಮಾನರಿಂದ ಕಣ್ಣೀರ ಬೀಳ್ಕೊಡುಗೆ ಪಡೆದು ಐದು ತಿಂಗಳ ಅಖಂಡ ತಪಸ್ಸಿನ ನಂತರ ಬಾಪೂಜಿ ೫ ಮಾರ್ಚ್ ೧೯೪೭ ರಂದು ಪಟನಾ ತಲಪಿದರು.

* * * *

# ೩೦. ಬಿಹಾರದಲ್ಲಿ ಕೋಮುವಾದದ ಬೆಂಕಿ

ಬಿಹಾರ ಪ್ರಾಂತ ರಾಮಾಯಣದ ಪುಣ್ಯಭೂಮಿ. ಬಿಹಾರಿಗಳು ಎಷ್ಟೇ ಬಡವರಾಗಿದ್ದರೂ, ಅಶಿಕ್ಷಿತರಾಗಿದ್ದರೂ ಸಂಸ್ಕಾರರಹಿತರಲ್ಲ. ಬಿಹಾರದ ಭಗವನ್ಮಯವಾದ ಜನರ ನರ–ನಾಡಿಗಳಲ್ಲಿ ರಾಮಾಯಣದ ಮಧುರಗಾನ ನಿರಂತರ ಪ್ರತಿಧ್ವನಿಸುತ್ತಿರುತ್ತದೆ. ಅವರಿಗೆ ಪಾಪ–ಪುಣ್ಯ, ಸತ್ಯ–ಅಸತ್ಯ, ಧರ್ಮ–ಅಧರ್ಮ, ಯೋಗ್ಯ – ಅಯೋಗ್ಯರನ್ನು ಅರ್ಥಮಾಡಿಕೊಳ್ಳುವಂಥ ಅವ್ಯಕ್ತಜ್ಞಾನ ಹುಟ್ಟಿನಿಂದಲೇ ಬಂದಿರುತ್ತದೆ. ಇಡೀ ದೇಶಕ್ಕೆ ಹೋಲಿಸಿದಾಗ ಸಾಮಾನ್ಯ ಬಿಹಾರಿ ಸ್ವಲ್ಪ ಹೆಚ್ಚು ಪ್ರಜ್ಞಾವಂತ ಮತ್ತು ಧರ್ಮಪರಾಯಣನಾಗಿರುತ್ತಾನೆ, ರಾಮಾಯಣದ ಅಂತರಾತ್ಮ ಸೀತಾಜಿಯ ತೌರುಮನೆ ಬಿಹಾರದಲ್ಲಿತ್ತು. ವಿದೇಹರಾಜ ಜನಕ ಎಷ್ಟೋ ವರ್ಷಗಳವರೆಗೂ ಮಿಥಿಲಾದಲ್ಲಿ ತನ್ನ ನ್ಯಾಯಚಕ್ರವನ್ನು ನಡೆಸಿದ್ದ. ರಾಜ ಸಶರೀರಿಯಾಗಿ ಮೋಕ್ಷ ಪಡೆದಿದ್ದನೆಂದು ಆತನನ್ನು ವಿದೇಹ ಎಂದು ಕರೆಯುತ್ತಾರೆ. ಪ್ರಪಂಚದಲ್ಲಿ ಸುಖ–ದುಃಖ, ದುರಾಸೆ, ಐಶ್ವರ್ಯ, ಅಧಿಕಾರ, ಸಂಪತ್ತು ಇವುಗಳೆಲ್ಲದರ ಮೋಹ ತೊರೆದು ಅರಮನೆಯಲ್ಲಿದ್ದುಕೊಂಡೇ ನಿಸ್ಪೃಹರಾಗಿದ್ದು ಆತ ಜನಾಭಿಪ್ರಾಯ ಪಡೆದು ಆಡಳಿತ ನಡೆಸುತ್ತಿದ್ದರು. ಆದ್ದರಿಂದ ಅವರು ಶರೀರವನ್ನಿಟ್ಟುಕೊಂಡೇ ಸ್ಥಿತಪ್ರಜ್ಞರಾಗಿದ್ದರು. ಬಿಹಾರದ ಕಾವ್ಯಪ್ರೇಮಿಗಳಾಗಿದ್ದ ಜನರು ಅವರಿಗೆ ವಿದೇಹ ಎಂಬ ಶಬ್ದರಚನೆ ಮಾಡಿ ಹಿಂದೀಭಾಷೆಗೆ ಇನ್ನಿಲ್ಲದ ಒಂದು ಸಾಮಗ್ರಿ ನೀಡಿ, ಭಾರತೀಯ ದರ್ಶನದಲ್ಲಿ ಅದು ಮಿಳಿತವಾಗುವಂಥ ಒಂದು ಭಾಗವನ್ನು ನೀಡಿದ್ದರು. ಅಂತಹ ಮುಗ್ಧ ಬಿಹಾರದ ಜನರಲ್ಲಿ ಎಲ್ಲಿಂದ ಅಂತಹ ದಾರುಣ ಬುದ್ಧಿ ಹುಟ್ಟಿಕೊಂಡಿತ್ತೆಂಬುದರ ಕತೆಯನ್ನು ಸಮಾಜಶಾಸ್ತ್ರ ಮತ್ತು ರಾಜಕೀಯ ಈ ಎರಡೂ ದೃಷ್ಟಿಗಳಿಂದ ಅರ್ಥಮಾಡಿಕೊಳ್ಳುವ ಅಗತ್ಯವಿದೆ.

೧೯೩೭ರಲ್ಲಿ ಕಾಂಗ್ರೆಸ್ ಗೆದ್ದಿದ್ದರಿಂದ ಮುಸ್ಲಿಂ ಲೀಗ್ ಒದ್ದಾಡಿ ಹೋಗಿತ್ತು. ತೀವ್ರ ನಿರಾಶೆ ಉಂಟಾಗಿ ತಮ್ಮ ಸಂಯಮ ಮರ್ಯಾದೆ ಎಲ್ಲವನ್ನೂ ಬಿಟ್ಟು ಮುಸ್ಲಿಂ ಲೀಗ್ ಅತಿಕ್ರಮಣ ಮಾಡತೊಡಗಿತು. ಮುಸಲ್ಮಾನರು ಆ ಸಂದರ್ಭದಲ್ಲಿ ಒಂದು ತಲೆ–ಬುಡ ಇಲ್ಲದ ರಿಪೋರ್ಟನ್ನು ಪ್ರಕಟಿಸಿದ್ದರು, ಅದೇ ತರಹ ಇನ್ನೊಂದು ರಿಪೋರ್ಟನ್ನು ಪಟನಾದ ಬ್ಯಾರಿಸ್ಟರ್, ಶರೀಪ್ ಸಾಹೇಬ ಮುದ್ರಿಸಿದ್ದರು. ಬಿಹಾರದ ಮುಸ್ಲಿಂ ಲೀಗ್ ಪ್ರಾಂತ್ಯಾಧ್ಯಕ್ಷ ಮೊಹಮ್ಮದ್ ಇಸ್ಮಾಯಿಲ್ ರಾಜೇಂದ್ರಬಾಬು

ಅವರ ಬಳಿ ಖುದ್ದಾಗಿ ಮತ್ತು ಬಿಹಾರ ವಿಧಾನಸಭೆಯಲ್ಲಿ ಕೂಡ ಶರೀಫರ ರಿಪೋರ್ಟ್ ೧೨ ಆಣೆ ಸುಳ್ಳು ಅಂತ ಒಪ್ಪಿಕೊಂಡಿದ್ದರು, ಇನ್ನು ನಾಲ್ಕಾಣೆಯಷ್ಟು ಕೂಡ ಸುಳ್ಳೇ ಅನ್ನುವುದು ಕೂಡ ಸಾಬೀತಾಗಿತ್ತು. ಆ ದಿನಗಳಲ್ಲಿ ರಾಜೇಂದ್ರ ಬಾಬು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅವರು ಮುಸಲ್ಮಾನರ ದೂರು, ಆರೋಪಗಳನ್ನ ಯಾರಾದರೂ ನಿಷ್ಪಕ್ಷನಾಗಿದ್ದ ಮನುಷ್ಯನ ಹತ್ತಿರ ಪರೀಕ್ಷೆ ಮಾಡಿಸಿ ಅಂತ ಮುಸ್ಲಿಂ ಲೀಗ್ ಅಧ್ಯಕ್ಷರಾಗಿದ್ದ ಜಿನ್ನಾ ಸಾಹೇಬರ ಮುಂದಿಟ್ಟಿದ್ದರು. ಈ ಸಂದರ್ಭ ಕುರಿತು ದೆಹಲಿಯ ನ್ಯಾಯಾಧೀಶರಾಗಿದ್ದ ಸರ್ ಮೋರಿಸ್ ವ್ಯಾಯಾರ್ ಅವರ ಹೆಸರನ್ನು ಸೂಚಿಸಿದ್ದರು. ಆದರೆ ಜಿನ್ನಾ ಸಾಹಬರು ವೈಸ್‌ರಾಯ್ ಇದರ ಪರೀಕ್ಷೆ ಮಾಡಿಸುತ್ತಾರಾದ್ದರಿಂದ ಯಾವೊಬ್ಬ ವ್ಯಕ್ತಿಯನ್ನೂ ಈ ಮಧ್ಯೆ ತರುವ ಅಗತ್ಯವಿಲ್ಲವೆಂದರು. ವೈಸ್‌ರಾಯ್ ಆ ತರಹೆ ಪರೀಕ್ಷೆ ಮಾಡಿಸುವ ಆದೇಶವನ್ನೆಂದೂ ನೀಡಲಿಲ್ಲ. ಜಿನ್ನಾ ಸಾಹಬರು ಕೂಡ ವೈಸ್‌ರಾಯ್‌ಗೆ ಈ ಕುರಿತು ನೆನಪು ಮಾಡಬೇಕೆನ್ನುವ ಆವಶ್ಯಕತೆ ಇದೆ ಅಂತ ಅಂದುಕೊಳ್ಳಲಿಲ್ಲ. ಕಾಂಗ್ರೆಸ್ ರಾಜ್ಯಾಡಳಿತ ಇದ್ದಾಗ ವೈಸ್‌ರಾಯ್ ಅಥವಾ ಯಾವ ಗವರ್ನರನೂ ಕಾಂಗ್ರೆಸ್ ಪಕ್ಷಪಾತ ಅಥವಾ ಅತ್ಯಾಚಾರ ಮಾಡುತ್ತಿದೆ ಅಂತ ಎಲ್ಲೂ ಉಲ್ಲೇಖಿಸಲೂ ಇಲ್ಲ, ಹಾಗಿದ್ದಾಗ್ಯೂ ಇಂಗ್ಲಿಷ್ ಸರಕಾರ ಪೂರ್ತಿ ಸಹಾನುಭೂತಿ ತೋರಿಸುತ್ತಿದ್ದುದು ಮುಸಲ್ಮಾನರಿಗೆ ಮಾತ್ರ. ೧೯೩೯ರಲ್ಲಿ ವಿಶ್ವಯುದ್ಧದ ಸಮಸ್ಯೆ ಎದ್ದಾಗ ಕಾಂಗ್ರೆಸ್ ಮಂತ್ರಿಮಂಡಳ ತ್ಯಾಗಪತ್ರ ನೀಡಿದಾಗ, ಮುಸ್ಲಿಂ ಲೀಗ್ ಖುಷಿಯಾಗಿ ಬಿಡುಗಡೆಯ ದಿನವನ್ನು (ಡೆಲಿವರೆನ್ಸ್ ಡೇ) ಘೋಷಿಸಿ ಉತ್ಸವವನ್ನಾಚರಿಸಿತ್ತು. ಇಂತಹ ತುಚ್ಛ ಸ್ವಭಾವವನ್ನು ಕಂಡು ಇಡೀ ದೇಶದಲ್ಲಿ ಹಿಂದೂಗಳಿಗೆ ಕೋಪೋದ್ರೇಕವಾಗಿತ್ತು, ಮುಸ್ಲಿಂ ಲೀಗ್‌ನ ಪತ್ರಿಕೆಗಳಲ್ಲಿ ಹಿಂದೂ ಧರ್ಮ, ಅವರ ರೀತಿ–ನೀತಿ–ಪದ್ಧತಿಗಳನ್ನು ಕುರಿತಂತೆ ಯಾವಾಗಲೂ ಕಟುವಾಗಿ ಅಶ್ಲೀಲವಾದ ಮಾತುಗಳನ್ನು ಬರೆಯುತ್ತಿದ್ದರು. ಕಾಂಗ್ರೆಸ್ ಮುಸಲ್ಮಾನರ ಶತ್ರು ಎಂಬ ಉಲ್ಲೇಖವೂ ಇರುತ್ತಿತ್ತು, ಈವರೆಗಿನ ಆರೋಪಗಳಿಂದ, ಅವಮಾನದಿಂದ ಬಿಹಾರದ ಹಿಂದೂಗಳ ಮನಸ್ಸು ಕುದಿಯತೊಡಗುತ್ತಿತ್ತು.

೧೯೪೨ರಲ್ಲಿ ಆಂದೋಳನದಲ್ಲಿ ಬಿಹಾರಕ್ಕೆ ಎಲ್ಲರಿಗಿಂತ ಹೆಚ್ಚಾಗಿ ದಮನವನ್ನು ಸಹಿಸಬೇಕಾಯಿತು. ಕಾಂಗ್ರೆಸ್ 'ಭಾರತ್ ಛೋಡೋ' ಪ್ರಸ್ತಾವ ಸಾವು – ಬದುಕಿನ ಪ್ರಶ್ನೆಯಾಗಿ ನಿಂತಿತ್ತು. ಆಗ ಲೀಗ್ ಸ್ವಾತಂತ್ರ್ಯ ವಿರೋಧಿಸಿದ್ದರಿಂದ ತಿಳಿಯದ ಬಿಹಾರಿಗಳಿಗೆ ಒಳಗಿಂದೊಳಗೆ ಉರಿ ಹತ್ತಿಕೊಂಡಿತ್ತು. ಮುಗ್ಧರು ಹಾಗೂ ನಿಷ್ಕಪಟಿ ಬಿಹಾರಿಗಳಿಗೆ ಸ್ವಾತಂತ್ರ್ಯದ ತೀವ್ರ ಶತ್ರು ಲೀಗ್ ಅಂತ ಅನಿಸಿತು. ಆ ಸಮಯದಲ್ಲಿ ಎಲ್ಲರೂ ಲೀಗ್‌ನ್ನು ಇಂಗ್ಲಿಷರ ಹಿಂಬಾಲಕರು ಅಂತಲೇ ಕರೆಯುತ್ತಿದ್ದರು. ಮುಸ್ಲಿಂ ಲೀಗ್‌ನ ಪ್ರಚಾರದಿಂದ ಮುಸಲ್ಮಾನರ ಮನಸ್ಸು ವಿಕೃತವಾಗಿತ್ತು. ಇದನ್ನು ತಿಳಿಸುವುದಕ್ಕಾಗಿ ಒಂದು ಪುಟ್ಟ ಉದಾಹರಣೆ ಕೊಟ್ಟರೆ ಸಾಕಾಗುತ್ತದೆ.

ಈ ಕೋಮುವಾರು ದಂಗೆಗಳು ನಡೆಯುತ್ತಿದ್ದಾಗ ಕೆಲವರು ಅಮೆರಿಕನ್ ಪತ್ರಕರ್ತರು ಬಿಹಾರದಲ್ಲಿ ದಂಗೆಗೊಳಗಾಗಿದ್ದ ಪ್ರದೇಶಗಳಲ್ಲಿ ಯಾತ್ರೆ ಮಾಡುತ್ತಿದ್ದರು. ಆಗ ಒಂದು ಚಿಕ್ಕ ಹಳ್ಳಿಯ ಮುಸ್ಲಿಂ ಅಧ್ಯಾಪಕ ಇವರನ್ನು ಇಂಗ್ಲಿಷ್‌ನವರಿರಬಹುದೆಂದುಕೊಂಡು ಇಂಗ್ಲಿಷ್‌ನಲ್ಲಿ 'ನಮ್ಮ ಇಂಗ್ಲಿಷ್ ರಾಜ್ಯ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು, ಈ ಹಿಂದೂಗಳನ್ನ ಸ್ವಲ್ಪ ಕೂಡ ನಂಬುವುದಕ್ಕಾಗುವುದಿಲ್ಲ' ಎಂದರು.

೧೯೪೬ರಲ್ಲಿ ಕಲ್ಕತೆಯ ಡೈರೆಕ್ಟ್ ಆಕ್ಷನ್ ಎರಡು ದಿಕ್ಕುಗಳಲ್ಲಿ ವಿದ್ಯುತ್ತಿನ ಹಾಗೆ ಅಲ್ಲಾಡಿಸಿಬಿಟ್ಟಿತ್ತು. ಒಂದು ಪೂರ್ವದ ನೋವಾಖಲಿಯಲ್ಲಿ, ಇನ್ನೊಂದು ಪಶ್ಚಿಮದಲ್ಲಿ ಬಿಹಾರದಲ್ಲಿ. ಆ ಕಾಲದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಜನ ಬಿಹಾರಿಗಳು ಕಲ್ಕತ್ತಾದಲ್ಲಿ, ನೌಕಾರ, ಮಾಲಿ, ಕಾವಲುಗಾರ, ರಿಕ್ಷಾ ಎಳೆಯುವವ ಮತ್ತು ಚಿಕ್ಕ–ಪುಟ್ಟ ಅಂಗಡಿಗಳನ್ನು ನಡೆಸಿಕೊಂಡು ಇರುತ್ತಿದ್ದರು. ಕಲ್ಕತ್ತಾದಲ್ಲಿ ಕತ್ಲೆ ಆಮ್, ಎಲ್ಲರನ್ನೂ ಕತ್ತರಿಸಿದ ಸಂದರ್ಭದಲ್ಲಿ ಈ ಬಡಪಾಯಿ ಬಿಹಾರಿಗಳೇ ಹೆಚ್ಚು ಪೆಟ್ಟು ತಿಂದಿದ್ದವರು. ೧೯೧೧–೧೨ರವರೆಗೂ ಬಿಹಾರ ಬೃಹತ್ ಬಂಗಾಳ ಪ್ರಾಂತ್ಯದ ಅಂಗವಾಗಿತ್ತು, ಅದರಿಂದ ಬಿಹಾರದಲ್ಲಿ ಲಕ್ಷಾಂತರ ಮಂದಿ ಬಂಗಾಳಿಗಳು ಸಿಗುತ್ತಾರೆ. ಈ ಬಿಹಾರಿ – ಬಂಗಾಳಿಗಳ ಸಾವಿರಾರು ಮಂದಿ ಸಂಬಂಧಿಕರು ಕಲ್ಕತ್ತಾದಲ್ಲಿ ಕೊಲ್ಲಲ್ಪಟ್ಟಿದ್ದರು. ಬಂಗಾಳದ ನಿರಾಶ್ರಿತ ಹಿಂದೂಗಳು ಹೆದರಿ ಬಿಹಾರಕ್ಕೆ ಓಡಿ ಬಂದಿದ್ದರು. ಅವರ ವಿಪತ್ತಿನ ಕತೆ ಹೃದಯ ನಡುಗಿಸುವಂತಿತ್ತು, ಈ ಎಲ್ಲ ಆಘಾತಗಳ ಜೊತೆಗೆ ನೋವಾಖಲಿಯಲ್ಲಿ ನೃಶಂಸ ಅತ್ಯಾಚಾರಗಳು ನಡೆದಾಗ ಬಿಹಾರಿಗಳು ಹುಚ್ಚೆದ್ದರು, ನಿರಪರಾಧಿ ಮಹಿಳೆಯರ ಮಾನಭಂಗ ಮಾಡುವುದು, ಅವರನ್ನು ಹಾರಿಸಿಕೊಂಡು ಹೋಗುವುದು, ಧರ್ಮಪರಿವರ್ತನೆ, ಹಿಂದೂ ಮಹಿಳೆಯರನ್ನ ಅಪಹರಿಸಿ ಅವರಿಗೆ ನಿಕಾಹ್ ಮಾಡಿಸುವುದು – ಇವೆಲ್ಲಾ ಹಿಂದೂಗಳ ಮನಸ್ಸಿಗೆ ಸಹಿಸಲಸಾಧ್ಯವಾದುದಾಗಿದ್ದವು. ಈ ಬೀಭತ್ಸ ಕಾಂಡದಿಂದ ಹಿಂದೂಗಳು ವಿಚಲಿತರಾದರು. ಪಾಕಿಸ್ತಾನದ ಬೇಡಿಕೆ ನಡೆಯುವಾಗ ಹಿಂದೂ ಮಹಿಳೆಯ ಮರ್ಯಾದೆ ಯಾವಾಗಲೂ ಅಪಾಯದಿಂದ ಕೂಡಿರುತ್ತದೆಯೆಂದೂ, ಈ ನಿರೀಹ ಮಹಿಳೆಯರನ್ನುಳಿಸುವುದು ಪ್ರತಿಯೊಬ್ಬ ಬಿಹಾರಿಯ ಕರ್ತವ್ಯವೆಂದೂ ಅವರಿಗನಿಸಿತು. ಕಲ್ಕತ್ತಾ ದಂಗೆಗಳಾದ ಮೇಲೆ ಎಷ್ಟೋ ಪತ್ರಿಕೆಗಳನ್ನು ಹಂಚಿ ಹಿಂದೂಗಳನ್ನು ಕೊಲ್ಲಲು, ಲೂಟಿ ಮಾಡಲು, ಅವರೊಂದಿಗೆ ತುಚ್ಛಕರವಾದ ಅತ್ಯಾಚಾರಗಳನ್ನು ಮಾಡಲು ಮುಸಲ್ಮಾನರಿಗೆ ಆದೇಶನೀಡಲಾಗಿತ್ತು. ಈ ಪತ್ರಿಕೆಗಳನ್ನು ಯಾರು ಮುದ್ರಿಸಿದ್ದರೆನ್ನುವುದು ಮಾತ್ರ ಯಾವಾಗಲೂ ತಿಳಿಯಲಿಲ್ಲ, ಆದರೆ ಸಾಮಾನ್ಯ ಜನರಿಗೆ ಮುಸಲ್ಮಾನರು ಕೈಮೀರಿ ಹೋಗಿದ್ದಾರೆಂದು, ಏನು ಬೇಕಾದರೂ ಅವರು ಮಾಡಬಹುದೆಂದು ಸ್ಪಷ್ಟವಾಗಿ ಅನಿಸಿತು. ಹಿಂದೂಗಳು ಅದನ್ನು

ವಿರೋಧಿಸುವುದು, ತಡೆಯುವುದು ಅಗತ್ಯವಾಯಿತು. ಮುಸ್ಲಿಂಲೀಗ್ ಮುಸಲ್ಮಾನರು ಆಡಳಿತ ನಡೆಸುವುದಕ್ಕಾಗಿಯೇ ರಚಿತವಾಗಿದೆಯೆಂದು, ತಾವೇ ರಾಜ್ಯ ನಡೆಸುವ ಅಧಿಕಾರ ಹೊಂದಿರುವುದಾಗಿ ವಾದಿಸುತ್ತಿದ್ದರು. ಆಗ ಮುಸ್ಲಿಂ ಲೀಗ್ ಆಯುಧಗಳ ಸಂಗ್ರಹಣೆ ಮಾಡಿ, ಮುಸಲ್ಮಾನರಿಗೆ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವ ತರಬೇತಿ ನೀಡಲಾರಂಭಿಸಿತ್ತು. ಈ ರೀತಿ ಬಿಹಾರದ ಜನ ಹೆಚ್ಚು ಚಿಂತೆಗೊಳಗಾಗಿದ್ದರು.

ಈ ದಿನಗಳಲ್ಲೇ ಹಿಂದೂ ಮಹಾಸಭಾ ಒಂದು ಹೇಳಿಕೆಯನ್ನು ಹಂಚಿ ಹಿಂದೂಗಳ ದಾರುಣ ದುಃಖವನ್ನು ಹೃದಯವಿದ್ರಾವಕವಾಗಿ ವಿವರಿಸಿತ್ತು. ನೋವಾಖಲಿಯಲ್ಲಿ ಹಿಂದೂ ಮಹಿಳೆಯರ ಮಾನಭಂಗ ಮಾಡಿದ್ದು, ಅವರನ್ನು ಅಪಹರಿಸಿದ್ದು ಎಲ್ಲಾ ಅದರಲ್ಲಿ ವರ್ಣಿಸಿತ್ತು. ಬಿಹಾರದ ಮುಸಲ್ಮಾನರು ಹಿಂದೂಗಳ ಮೇಲೆ ಆಕ್ರಮಣ ಮಾಡಲಿದ್ದಾರೆ, ಹಿಂದೂಗಳು ಈಗ ಜಾಗೃತರಾಗದೆ ಹೋದರೆ ಕಲ್ಕತ್ತಾ ಮತ್ತು ನೋವಾಖಲಿಯ ದುಃಖಮಯ ಕಾಂಡ ಬಿಹಾರದಲ್ಲೂ ಆಗಲಿದೆಯೆಂದೂ ಅದರಲ್ಲಿ ಬರೆದಿತ್ತು. ಕೊನೆಯಲ್ಲಿ ಕಾಂಗ್ರೆಸ್ ಪಕ್ಷ ಹಿಂದೂಗಳ ರಾಷ್ಟ್ರೀಯತೆಯನ್ನರಿತುಕೊಳ್ಳದೇ ಅನಾವಶ್ಯಕವಾಗಿ ಹಿಂದೂಗಳ ಮೇಲೆ ಹಿಡಿತ ತೋರುತ್ತಿದೆಯೆಂದೂ ಹಿಂದೂ ಕಾಂಗ್ರೆಸ್‌ನ ನಿರಂಕುಶ ಸರಕಾರವನ್ನು ನಡೆಯದಿರುವಂತೆ ತಡೆಯುವುದು ಹಿಂದೂಗಳ ಕರ್ತವ್ಯವಾಗಿದೆಯೆಂದೂ ಅದರಲ್ಲಿ ಬರೆದಿತ್ತು. ಹಿಂದೂ ಬಹುಮತ ಆರಿಸಿದ್ದರಿಂದ ತಾನೆ ಕಾಂಗ್ರೆಸ್ ಆರಿಸಿ ಬಂದಿದ್ದು ಕೂಡ. ಅದರಿಂದ ಕಾಂಗ್ರೆಸ್ ಹಿಂದೂಗಳ ರಕ್ಷಕ ಕೂಡ ಆಗಲೇಬೇಕು, ವಾಸ್ತವವೆಂದರೆ, ಬಂಗಾಳ ಸರಕಾರ ಪೀಡಿತರನ್ನು ಕುರಿತು ತಿರಸ್ಕಾರ ತೋರಿ, ಎಲ್ಲರಿಗೂ ಕಾಣಿಸುವಂತೆ ಮುಸಲ್ಮಾನರಿಗೆ ಸಹಾಯ ನೀಡಿ ಅವರಿಗೆ ಕುಮ್ಮಕ್ಕು ಕೊಡುತ್ತಿದ್ದುದನ್ನು ನೋಡಿ ಪೂರ್ತಿ ಹಿಂದೂ ಸಮಾಜ ಕುಪಿತವಾಗಿತ್ತು. ಅಂತಹ ವಿಕಟ ಪರಿಸ್ಥಿತಿಯಲ್ಲೂ ಮುಸ್ಲಿಂ ಲೀಗ್ ಮತ್ತು ವೈಸ್‌ರಾಯ್ ನೀತಿಯಿಂದ ಕೇಂದ್ರ ಸರಕಾರವೂ ದೃಢವಾಗಿ ಬಂಗಾಳದ ಹತ್ಯಾಕಾಂಡವನ್ನು ಹತ್ತಿಕ್ಕಿರಲಿಲ್ಲ. ಈ ಕಾರಣದಿಂದ ಕಾಂಗ್ರೆಸ್‌ನ ಕೆಲವರು ಸದಸ್ಯರಲ್ಲಿ ಸೇಡಿನ ಭಾವನೆ ಜಾಗ್ರತವಾಗಿತ್ತು. ಮುಸ್ಲಿಂ ಲೀಗ್ ಈ ತೆರನಾಗಿ ಅನ್ಯಾಯ, ಅತ್ಯಾಚಾರವೆಸಗುತ್ತಿದ್ದಾಗ ಹಿಂದೂ ಕೂಡ ಇನ್ನೂ ಪ್ರಬಲವಾಗಿ ಪ್ರತಿಕ್ರಿಯಿಸಿದರೆ ಕಾಂಗ್ರೆಸ್ ನೀತಿಗೇನೂ ಭಂಗ ಬಂದೊದಗುವುದಿಲ್ಲವೆಂದು ಆ ಜನ ಯೋಚಿಸುತ್ತಿದ್ದರು.

ಈ ಎಲ್ಲಾ ಸಾಮಾಜಿಕ, ರಾಜಕೀಯ ತತ್ವಗಳು ಉಗ್ರವಾಗಿದ್ದಾಗ, ಇಂಗ್ಲಿಷರು ತಮ್ಮ ಬೇರೆ ಪಾತ್ರವನ್ನೇ ನಿರ್ವಹಿಸಿದರು. ೧೯೪೨ರ ಬಂಗಾಳದ ಚಳವಳಿಯ ಸಮಯದಿಂದಲೂ ಇಂಗ್ಲಿಷ್ ಅಧಿಕಾರಿಗಳು ಒಳಗೊಳಗೇ ಕೋಪಗೊಂಡಿದ್ದರು, ಬ್ರಿಟನ್ನಿನಲ್ಲೇ ಅವರನ್ನು ಕೇಳುವವರು ಯಾರೂ ಇರಲಿಲ್ಲ. ಆದರೆ ಈ ಗುಲಾಮ ದೇಶದಲ್ಲಿ ಬಿಳಿ ಸಿಪಾಯಿ ಕೂಡ ನವಾಬನ ಹಾಗೆ ರೋಫ್ ಮಾಡಿಕೊಂಡು

ಇರುತ್ತಿದ್ದ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು ಅಂದರೆ ಇಂಗ್ಲಿಷರ ವಿಲಾಸ – ಆರಾಮ, ಮರ್ಯಾದೆ ಎಲ್ಲವೂ ಮುಗಿದು ಹೋಗುತ್ತದೆ ಅನಿಸಿತ್ತು, ಅದರಿಂದಲೂ ಅವರ ಹೃದಯದಲ್ಲಿ ಭಯಂಕರ ದ್ವೇಷ ಹುಟ್ಟಿಕೊಂಡಿತ್ತು. ಕಾಂಗ್ರೆಸ್ ಮಂತ್ರಿಮಂಡಳದ ಹೆಸರು ಹಾಳುವಾಡಿ ತಮ್ಮ ಹೃದಯದ ಕೋಪವನ್ನು ಕಡಿಮೆ ಮಾಡಿಕೊಳ್ಳಬಯಸುತ್ತಿದ್ದರು. ಅದರಿಂದ ಕೋಮುವಾರು ದಂಗೆಯನ್ನ ಉದ್ರೇಕಿಸಿ ಕಾಂಗ್ರೆಸ್‌ನ ಹಿಂದೂಗಳಿಗೆ ದುರ್ಗತಿ ತರಬೇಕು ಎನ್ನುವ ಆಸಕ್ತಿ ಅವರಿಗಿತ್ತು. ದಂಗೆಯ ದಿನಗಳಲ್ಲಿ – ೨೫ ಅಕ್ಟೋಬರ್‌ನಿಂದ ೫ ನವೆಂಬರ್‌ವರೆಗೆ ೧೨ ದಿನಗಳಿಗಾಗಿ ಬಿಹಾರ ಪ್ರಾಂತದ ಇಂಗ್ಲಿಷ್ ಗವರ್ನರ್ ಪ್ರಾಂತದ ರಾಜಧಾನಿಯಿಂದ ಎಲ್ಲೋ ಮಾಯವಾಗಿ ಹೋಗಿದ್ದರು. ಬಿಹಾರದಲ್ಲಿ ದಂಗೆಯೆದ್ದ ಸಮಾಚಾರ ತಿಳಿದ ಮೇಲೂ ಗವರ್ನರ್ ಸಹಾಯಕ್ಕಾಗಿ ಹಾಜರಾಗಲಿಲ್ಲ. ಈ ವಿನಂತಿಗೆ ಯಾವ ಉತ್ತರವೂ ಇರಲಿಲ್ಲ. ತನ್ನ ಇಂಗ್ಲಿಷ್ ಆಫೀಸರಗಳನ್ನು ನೋಡಿ, ಬ್ಯುರಾಕ್ರೆಟ್‌ಗಳು ಕೂಡ ಕಾಂಗ್ರೆಸ್ ಶಾಸನವನ್ನು ಅಸಫಲಗೊಳಿಸಲು ಎಲ್ಲ ಉಪಾಯಗಳನ್ನೂ ಮಾಡಿದ್ದರು. ಆದರೆ ಕೊನೆಗೆ ಅವರು ಕೂಡ ಕೋಮುವಾದದ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದರು. ಅವರು ಕೂಡ ಕುಪಿತರಾಗಿದ್ದ ಹಿಂದೂಗಳನ್ನು ತಡೆಯುವುದಕ್ಕೆ, ಕಾನೂನಿನ ರಕ್ಷಣೆಗೆ ಯಾವ ಉಪಾಯವನ್ನೂ ಮಾಡಲಿಲ್ಲ.

ಸ್ವಾಮಿ ಸಹಜಾನಂದ ಅನ್ನುವ ಸಾಧು ೧೯೪೦ರಲ್ಲಿ ಮುಸಲ್ಮಾನ ಜಮೀಂದಾರರ ವಿರುದ್ಧ ರೈತರ ಒಂದು ಹಿಂಸಕ ಸಂಘಟನೆಯನ್ನು ಹುಟ್ಟುಹಾಕಲು ಪ್ರಯತ್ನಿಸಿದ್ದರು. ಬಹಳ ಕಷ್ಟಪಟ್ಟು ಕಾಂಗ್ರೆಸ್ ಆ ತರಹೆಯ ಉಗ್ರ ವಿರೋಧವನ್ನು ಬೆಳೆಯದಂತೆ ತಡೆದಿದ್ದಿತು. ಆದರೆ ಹಿಂದೂ–ಮುಸಲ್ಮಾನ ಎರಡೂ ಬಣಗಳ ಜಮೀಂದಾರರು ತಮ್ಮ ಪ್ರಾಣ ಉಳಿಸಿಕೊಳ್ಳಲು ಈ ಕೃಷಿಕ ಆಂದೋಳನವನ್ನು ಕೋಮುವಾದದ ಕಡೆ ತಿರುವಿದ್ದರು. ವಿಶ್ವಯುದ್ಧದ ಸಮಯದಲ್ಲಿ ದೇಶದ ಜನರಿಗೆ ಕಾಳಸಂತೆ ಅಭ್ಯಾಸವಾಗಿ ಹೋಗಿತ್ತು, ಅದರಲ್ಲಿ ವಿಶೇಷವಾಗಿ ಹಿಂದೂ ಸೇಠ್‌ಗಳು ಯುದ್ಧ ಕಾಲದಲ್ಲಿ ತಿನ್ನುವ ಪದಾರ್ಥಗಳು ಕಡಿಮೆಯಾದಾಗ ಬಡ ಜನರ ಹತ್ತಿರ ಬೇಕಾಬಿಟ್ಟಿ ಬೆಲೆ ವಸೂಲು ಮಾಡಿಕೊಂಡಿದ್ದರು. ಈ ಹೊಸ ಶ್ರೀಮಂತರುಗಳಿಗೆ ಸಮಾಜದ ಮುಖಂಡರಾಗಿ ಅಧಿಕಾರವನ್ನು ತಮ್ಮ ಕೈವಶ ಮಾಡಿಕೊಳ್ಳಬೇಕೆಂಬ ಅಭಿಲಾಷೆ ಇತ್ತು. ಹೇಗೂ ದಂಗೆ–ಹತ್ಯೆಯ ಸಂದರ್ಭದಲ್ಲಿ ಮುಸಲ್ಮಾನ ಗೂಂಡಾಗಳು ಈ ಜನರ ಸಂಪದ್ಭರಿತವಾದ ಅಂಗಡಿಗಳನ್ನ ಕೊಳ್ಳೆ ಹೊಡೆಯುತ್ತಿದ್ದರು, ಬಿಹಾರದ ಬಡಜನ ಮೊದಲಿನಿಂದಲೂ ಮುಸಲ್ಮಾನರ ಬಗ್ಗೆ ಕೋಪದಿಂದಿದ್ದರು. ಈಗ ಈ ಸಾಹುಕಾರರು ಎರಡು ಹೊತ್ತು ರೊಟ್ಟಿ ಕೊಟ್ಟಿದ್ದರಿಂದ ಮುಸಲ್ಮಾನರ ಮೇಲೆ ಆಕ್ರಮಣ ಮಾಡಿತ್ತು. ಇಷ್ಟೊಂದು ಸುಡುತ್ತಾ ಇರುವ ವಾತಾವರಣದಲ್ಲಿ ಪ್ರೆಸ್‌ನವರು ತಮ್ಮ ಪತ್ರಿಕಾ ಹೇಳಿಕೆಗಳಿಂದ ಉದ್ರೇಕಿಸಿದ್ದರು. ದುರದೃಷ್ಟದಿಂದ ಪೊಲೀಸ್ ಜೀಪ್‌ನ

ಇಂಜನ್ ಕೂಡ ಕೆಟ್ಟುಹೋಯಿತು. ಹಾಗಾಗಿ, ಸಮಯಕ್ಕೆ ಸರಿಯಾಗಿ ಸಹಾಯ ಕೂಡ ನೀಡಲಾಗಲಿಲ್ಲ. ನೋವಾಖಾಲಿ ಮತ್ತು ಬಂಗಾಳದ ಹತ್ಯಾಕಾಂಡ ದೇಶದ ಪುರುಷತ್ವಕ್ಕೆ ಕಳಂಕ ತಂದಿತ್ತು ಎಂಬುದು ಸಮಾಚಾರ ಪತ್ರಿಕೆಗಳ ಸಾರಾಂಶ ಹೇಳುತ್ತಿತ್ತು. ಇಂತಹ ವಿಸ್ಫೋಟಕ ಪರಿಸ್ಥಿತಿಯಲ್ಲಿ ಮುಜ಼ಫರ್‌ಪುರ ಜಿಲ್ಲೆಯ ಬೇನೀಬಾದ್ ಹಳ್ಳಿಯ ಒಬ್ಬ ಮುಸಲ್ಮಾನ ಕಲ್ಕತ್ತಾದಿಂದ ಯಾವುದೋ ಹಿಂದೂ ಹುಡುಗಿಯನ್ನ ಹಾರಿಸಿಕೊಂಡು ಬಂದಿದ್ದ, ಜನರಿಗೆ ಈ ವಿಷಯ ತಿಳಿದುಹೋಯಿತು. ಜನ ಆ ಹುಡುಗಿಯನ್ನು ಹಿಂದಿರುಗಿಸುಂತೆ ಕೇಳಿದಾಗ ಆ ಮುಸಲ್ಮಾನ ಎರಡು–ಮೂರು ದಿವಸ ಅವಕಾಶ ಕೇಳಿದ. ಎರಡು ದಿನಗಳಾದ ಮೇಲೆ ಜನ ಆ ಮುಸಲ್ಮಾನನ ಮನೆಗೆ ಹೋದಾಗ ಹುಡುಗಿಯನ್ನ ಕರೆದುಕೊಂಡು ಆ ಮುಸಲ್ಮಾನ ಕಾಣೆಯಾಗಿದ್ದ. ಇಂತಹ ದಂಗೆಗಳಿಂದ ಹಿಂದೂಗಳಿಗೆ ಆಘಾತವಾಗಿತ್ತು. ಈ ಘಟನೆಯಿಂದ ಮತ್ತು ಉತ್ತೇಜಿತರಾಗಿ ಗುಂಪು ಮುಸಲ್ಮಾನರ ಮನೆಗಳಿಗೆ ಬೆಂಕಿ ಹಚ್ಚಿತು. ದುರ್ದೈವದಿಂದ ಪೊಲೀಸ್ ಜೀಪ್‌ನ ಇಂಜಿನ್ ಕೂಡ ಕೆಟ್ಟು ಹೋಗಿ ಸಮಯಕ್ಕೆ ಸರಿಯಾಗಿ ನೆರವು ನೀಡಲಾಗಲಿಲ್ಲ ಮತ್ತು ಮುಸಲ್ಮಾನರಿಗೆ ನಷ್ಟವಾಯಿತು.

ಆ ವರ್ಷ ೨೪ ಅಕ್ಟೋಬರ ೧೯೪೬ರಂದು ದೀಪಾವಳಿಯಾಗಿತ್ತು. ಕಲ್ಕತ್ತಾ ಮತ್ತು ನೋವಾಖಲಿಯ ಅತ್ಯಾಚಾರಗಳಿಂದ ದುಃಖಿತರಾಗಿ ಜನ ದೀಪಾವಳಿಯನ್ನು ಆಚರಿಸುವುದಿಲ್ಲವೆಂದು ನಿಶ್ಚಯಿಸಿದ್ದರು. ಈ ವರ್ಷ ದೀಪಾವಳಿಯಂದು ಎಲ್ಲಾ ಮನೆಗಳಲ್ಲೂ ಕತ್ತಲೆ ಆವರಿಸಿತ್ತು. ದೀಪಾವಳಿಯ ಸಮಯದಲ್ಲಿ ದಂಗೆ ಮತ್ತು ಹಳ್ಳಿಗಳಲ್ಲಿ ಪೂರ್ವ ಬಂಗಾಳದಲ್ಲಿ ಮುಸ್ಲಿಂ ಅತ್ಯಾಚಾರಗಳ ವಿರುದ್ಧ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಿದ್ದರು. ಇಂತಹ ದುಃಖದ ದಿನಗಳಲ್ಲಿ ಸುಮ್ಮನೆ ಸಹಾನುಭೂತಿ, ಪಶ್ಚಾತ್ತಾಪ ಪ್ರಕಟಪಡಿಸುವುದನ್ನು ಬಿಟ್ಟು ಛಪರಾ ನಗರದಲ್ಲಿ ಮುಸ್ಲಿಂ ಲೀಗ್‌ನ ಒಬ್ಬ ಹೆಸರಾಂತ ನಾಯಕ ಮಸೀದಿಯಲ್ಲಿ ಭಾಷಣ ಮಾಡಿ, 'ಹಿಂದೂಗಳ ಮನೆಗಳಲ್ಲಿ ಮೃತ್ಯು ಶೋಕವನ್ನಾಚರಿಸುತ್ತಿದ್ದಾರೆ, ಅದರಿಂದ ನಾವು ಮುಸಲ್ಮಾನರು ಉತ್ಸವ ಆಚರಿಸಬೇಕು' ಎಂದರು. ಇದು ಗಾಯದ ಮೇಲೆ ಉಪ್ಪು ಸಿಡಿಸಿದ ಹಾಗಾಯಿತು, ಒಳಗೆ ಅದುಮಿಟ್ಟಿದ್ದ ಬೆಂಕಿ ಇಂತಹ ಮೂರ್ಖತನ, ಅವಿವೇಕದಿಂದ ಭುಗಿಲೆದ್ದಿತು. ಛಪರಾ ಸುಟ್ಟು ಹೋಯಿತು ಮತ್ತು ಸುದ್ದಿ ತಿಳಿಯದ ಸರಕಾರ ಸ್ಥಿತಿಯನ್ನು ಸಂಬಾಳಿಸಲಾಗಲಿಲ್ಲ. ಪಟನಾ, ಛಪರಾ, ಮೋಥೀರ್, ಭಾಗಲ್‌ಪುರ, ಸಂಥಾಲ್, ಪರಗಣಾ ಮತ್ತು ಗಯಾ ಜಿಲ್ಲೆ ಕೋಮುವಾರು ದಂಗೆಗಳಿಂದ ಉರಿಯಿತು. ಅನೇಕ ಕಡೆಗಳಲ್ಲಿ ಮುಸಲ್ಮಾನರು ಹೆಚ್ಚಿನ ಸಂಖ್ಯೆಯಲ್ಲಿದ್ದರು, ಮತ್ತೆ ಇಷ್ಟು ವರ್ಷಗಳಿಂದ ಹಿಂದೂಗಳ ಮೃದು ಹೃದಯ, ಸಹನೆಯ ಶಕ್ತಿಯನ್ನು ಕಂಡು, ಮುಸಲ್ಮಾನರೂ ನಿರ್ಭೀತರಾಗಿ ದಂಗೆ ಆರಂಭಿಸಿದರು. ಮುಸ್ಲಿಂಲೀಗ್ ಅವರಿಗೆ ಹೇಗೂ ಆಯುಧಗಳನ್ನು ನೀಡೇ ಇತ್ತು, ಅವರೂ ಒಂದು ಕೃತ್ರಿಮ

ಧೈರ್ಯ ಹೊತ್ತು ಎಷ್ಟೋ ಜನ ಮುಸಲ್ಮಾನರು ಆಕ್ರಮಣಕ್ಕೆ ಮುಂದಾಗುತ್ತಿದ್ದರು. ಛಪರಾ ಜಿಲ್ಲೆ ಮತ್ತು ಬಿಹಾರದ ಪ್ರಾಂತ್ಯ ಕಾಂಗ್ರೆಸ್ ಸಮಿತಿಯಲ್ಲಿ ಆಗ ಅಧ್ಯಕ್ಷರಾಗಿದ್ದ ಪ್ರೊ॥ ಅಬ್ದುಲ್‌ಬಾರಿಯ ಅಧ್ಯಕ್ಷತೆಯಲ್ಲಿ ೨೫ ಅಕ್ಟೋಬರ್ ೧೯೪೬ರಂದು ಪಟನಾದಲ್ಲಿ ಪೂರ್ವ ಬಂಗಾಳದಲ್ಲಿ ಮಾಡಿದ ಹಿಂಸಾಚಾರಗಳನ್ನು ವಿರೋಧಿಸಿ ಒಂದು ವಿಶಾಲ ಸಭೆಯನ್ನು ಆಯೋಜಿಸಿದರು. ಸಮ್ಮೇಳನದಲ್ಲಿ ಉಗ್ರವಾದ ಘೋಷಣೆಗಳನ್ನು ಕೂಗಬಾರದೆಂದು ತೀವ್ರ ನಿಷೇಧವಿತ್ತು. ಆದರೆ ಸಭಾಸ್ಥಳವನ್ನು ತಲಪಲು ಮೊದಲೇ ಮೆರವಣಿಗೆಯಲ್ಲಿದ್ದ ಕೆಲವರು ತೀವ್ರವಾಗಿ ಘೋಷಣೆಗಳನ್ನು ಕೂಗಲು ಆರಂಭಿಸಿದರು, ಅನೇಕ ಕಾಂಗ್ರೆಸ್ ಕಾರ್ಯಕರ್ತರುಗಳು ಮತ್ತು ಅಧ್ಯಕ್ಷರು ಇಂತಹ ಅಶೋಭನೀಯವಾದ ಉತ್ತೇಜಿತ ಹೇಳಿಕೆಗಳನ್ನು ತಡೆಯಲು ಪ್ರಯತ್ನಿಸಿದರು. ಸಭೆ ನಿಂತು ಹೋಯಿತು. ಪಟನಾದಲ್ಲಿ ಸರಕಾರ ಎಚ್ಚರಿಕೆಯಿಂದಿತ್ತು, ಆದರಿಂದ ಆಗ ಹೆಚ್ಚೇನೂ ಜರುಗಲಿಲ್ಲ. ಆದರೆ ಮುಸಲ್ಮಾನರಿಗೆ ಇಷ್ಟರಿಂದ ತೃಪ್ತಿ ಸಿಗಲಿಲ್ಲ. ಅವರ ಬಳಿ ಆಯುಧಗಳ ಬಿಸಿ ಇತ್ತು, ೨೭ ಅಕ್ಟೋಬರ್‌ನಂದು ಅಲ್ಲಲ್ಲೇ ಮೋಟರುಗಳ ಮುಖಾಂತರ ಮುಸಲ್ಮಾನರನ್ನು ಸೇರಿಸತೊಡಗಿದರು ಮತ್ತು ಪಟನಾ ರೈಲ್ವೆಸ್ಟೇಷನ್ ಎದುರು ಮುಸಲ್ಮಾನರ ಗುಂಪು 'ಅಲ್ಲಾ–ಹೋ–ಅಕಬರ್' ಎಂಬ ಕರೆ ನೀಡಿತು. ಈ ಗಲಾಟೆ ಕೇಳಿ ಹತ್ತಿರದ ಮೊಹಲ್ಲೆಗಳಲ್ಲಿದ್ದ ಜನರು ಕೂಡ ರೈಲ್ವೆಲೈನ್‌ನ ಮತ್ತೊಂದು ಕಡೆ ಸೇರಿದರು. ಕೆಲವರು ಅನುಭವಸ್ಥ ಕಾಂಗ್ರೆಸ್ ಕಾರ್ಯಕರ್ತರು ಜಾಗ್ರತೆಯಿಂದ, ವಿವೇಕದಿಂದ ಮಧ್ಯಸ್ಥಿಕೆ ವಹಿಸಿ ಗುಂಪು ಕದಲಿಸಿದರು. ಆದರೆ ಮುಸಲ್ಮಾನರ ಈ ಉಗ್ರತೆಯ ಸುದ್ಧಿ ಎಲ್ಲಾ ಊರುಗಳಲ್ಲಿ, ಪಟನಾ ಜಿಲ್ಲೆಯಲ್ಲಿ ತೀವ್ರ ವೇಗದಿಂದ ಹರಡಿತು. ಹತ್ತಿರದ ಕುಮಾರಹಾರ ಮತ್ತು ಒಂದರೆಡು ಬೇರೆ ಹಳ್ಳಿಗಳಲ್ಲಿ ಕೂಡ ಇದೇ ರೀತಿ ಉತ್ತೇಜಕವಾಗಿದ್ದ ಸ್ಥಿತಿಯನ್ನು ಸ್ಥಾನೀಯ ಕಾಂಗ್ರೆಸ್ ಕಾರ್ಯಕರ್ತರುಗಳು ತಪ್ಪಿಸಿದರು. ಆದರೆ ೨೮ ಅಕ್ಟೋಬರ್ ನಂತರ ಸ್ಥಿತಿ ಹತೋಟಿ ತಪ್ಪಿ ಪಟನಾ ಜಿಲ್ಲೆಯಲ್ಲಿ ಕೋಮುವಾರು ಬೆಂಕಿ ಹತ್ತಿ ಉರಿಯತೊಡಗಿತು. ನಂತರ ಪುನ್‌ಪುನ್, ಫುಲ್‌ವಾಡಿ ಶರೀಫ್, ಮಸೋರಿಹೀ, ಬಿಹಾರ್ ಷರೀಪ್, ಜಹಾನಾಬಾದ್ ಮುಂತಾದುವೆಲ್ಲ ಉರಿಯತೊಡಗಿದುವು.

೨೬ ಅಕ್ಟೋಬರ್‌ನಿಂದ ಬಿಹಾರ ಸರಕಾರ ಮತ್ತು ಮುಖ್ಯಮಂತ್ರಿ ಶ್ರೀ ಕೃಷ್ಣ ಸಿಹ್ನಾ ತೀವ್ರವಾಗಿ ಎಚ್ಚರವಹಿಸಿದರು. ಡಾ॥ ಸೈಯದ್ ಮಹಮೂದ್‌ನೊಂದಿಗೆ ಶ್ರೀ ಬಾಬು ಛಪರಾ ಸುತ್ತಿ ಬಂದಿದ್ದರು. ಅಲ್ಲಿ ಆಗಿದ್ದ ನಾಶವನ್ನು ನೋಡಿ ಶ್ರೀ ಬಾಬು ಅವರ ಕಣ್ಣುಗಳಲ್ಲಿ ನೀರು ತುಂಬಿಬಂತೆಂದು ಡಾ॥ ಮೊಹಮದ್ ಬರೆದರು.

ಪಟನಾ ಜಿಲ್ಲೆ ಕೂಡ ಬಹಳ ದುಃಸ್ಥಿತಿಯಲ್ಲಿತ್ತು, ಹಾಗಿದ್ದೂ ಒಬ್ಬ ಸರಕಾರಿ

ಅಧಿಕಾರಿಯಾದರೂ ಪಟನಾದಿಂದ ಹೊರಕ್ಕೆ ಹೋಗಿರಲಿಲ್ಲ. ನವಂಬರ್ ೩ರಂದು ಜವಾಹರಲಾಲಜೀ, ಸರದಾರ್ ಪಟೇಲ ಮತ್ತು ರಾಜೇಂದ್ರ ಬಾಬು ಲಿಯಾಕತ್ ಅಲಿಯೊಂದಿಗೆ ಪಟನಾ ತಲಪಿದರು. ಡಾ॥ ಮೊಹಮದ್ ಬಾಪೂಜಿಗೆ ಪತ್ರಬರೆದು ಈ ಅಧಿಕಾರಿಗಳಲ್ಲಿ ವಿಚಿತ್ರವಾದ ಔದಾಸೀನ್ಯವಿತ್ತು, ಪಟನಾದಲ್ಲಿ ಬೆಂಕಿ ಹೊತ್ತಿತು, ಆದರೆ ಸರಕಾರಿ ನೌಕರರು ದಂಗೆಯನ್ನು ಹತ್ತಿಕ್ಕಲು ಪ್ರಯತ್ನಿಸಲೇ ಇಲ್ಲ, ಪಟನಾ ಹತ್ತಿರ ಹತ್ತು–ಹನ್ನೆರಡು ಮೈಲು ದೂರದಲ್ಲೇ ಸ್ಥಿತಿ ಭಯಂಕರವಾಗಿತ್ತು, ಆದರೆ ಈ ಅಧಿಕಾರಿಗಳು ಕಾಲ್ನಡಿಗೆಯಲ್ಲಿ ಹೊರಟಿದ್ದರೂ ಎರಡು–ಮೂರು ಗಂಟೆಗಳಲ್ಲಿ ಘಟನೆ ನಡೆದಲ್ಲಿಗೆ ತಲುಪಿ ಗುಂಪನ್ನು ಹತೋಟಿಗೆ ತರಬಹುದಾಗಿತ್ತು, ಆದರೆ ಮಮತಾಹೀನ ಬ್ರಿಟಿಷ್ ಅಧಿಕಾರಿಗಳು ಬೇಜವಾಬ್ದಾರಿಯಿಂದ ಈ ಅಗ್ನಿಕುಂಡವನ್ನು ನೋಡುತ್ತಾ ಇದ್ದರು, ಬಡಪಾಯಿ ಮಂತ್ರಿಗಳು, ಮತ್ತು ಮುಖ್ಯಮಂತ್ರಿ ಓಡಾಡಿದರು. ಆದರೆ ಅವರ ಅಧಿಕಾರಿಗಳು ಏನೂ ಮಾಡಲಿಲ್ಲ. ಶ್ರೀ ಬಾಬು, ಪ್ರೊಫೆಸರ್ ಖಾರಿ, ಡಾ॥ ಮಹಮೂದ್ ಮತ್ತಿತರ ಕಾಂಗ್ರೆಸ್ ಕಾರ್ಯಕರ್ತರು ನಿರಂತರ ಪರಿಶ್ರಮ ವಹಿಸಿದ್ದರಿಂದ ಈ ಎಲ್ಲಾ ದಂಗೆಗಳು ೩೧ರ ಅಕ್ಟೋಬರ್ ವೇಳೆಗೆ ಶಾಂತವಾದವು. ೫ ನವೆಂಬರ್‌ಗೆ ಬಾಪೂಜಿಯ ಆಮರಣ ಉಪವಾಸ ಸುದ್ದಿ ಕೇಳಿ ದಂಗೆಕೋರರು ಬೆಚ್ಚಿಬಿದ್ದರು. ಬಿಹಾರ್‌ನ ದಂಗೆಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಗಾಂಧೀಜಿ ಅರ್ಧ ಉಪವಾಸ ಮಾಡುತ್ತಾ ದೂರದ ನೋವಾಖಲಿಯಲ್ಲಿ ಕಾಲ್ನಡಿಗೆಯಲ್ಲಿ ಸುತ್ತುತ್ತಿದ್ದರು, ಇದನ್ನು ಕೇಳಿದ ಬಿಹಾರಿಗಳು, ಇದು ತಮ್ಮ ದುರಾಚರಣೆಗೆ ಸಿಕ್ಕ ಕಠಿಣ ಸಜೆ ಎಂದುಕೊಂಡರು. ಈ ಭಯಂಕರ ಸಂಕಟದಿಂದ ಕೋಮಲ ಹೃದಯಿಗಳಾದ ಬಿಹಾರಿಗಳನ್ನು ಹೆಚ್ಚಿನ ಚಿಂತೆಯಿಂದ ಉಳಿಸಿತು, ಈ ದಂಗೆಗಳಿಂದ ಜವಾಹರಲಾಲಜೀ ಬಹಳ ಪರಾಕ್ರಮದಿಂದ ಸ್ಥಿತಿಯನ್ನು ಹತೋಟಿಗೆ ತಂದರು ಅನ್ನುವುದು ಕೂಡ ಒಂದು ರೋಮಾಂಚಕವಾದ ಕತೆಯೇ ಸರಿ. ದೇಶ ಪೂರ್ತಿ ತನ್ನ ಪ್ರಧಾನ ಮಂತ್ರಿಯ ಬಗ್ಗೆ ಮುಗ್ಧವಾಯಿತು. ನೆಹರೂಜಿ ತನ್ನ ಪ್ರಾಣವನ್ನೂ ಲೆಕ್ಕಿಸದೆ ಏಳು ದಿನ, ಏಳು ರಾತ್ರಿ ಬಿಹಾರದಲ್ಲಿ ದಂಗೆಯೆದ್ದ ಪ್ರದೇಶಗಳಲ್ಲಿ ಸುತ್ತಿದರು ಮತ್ತು ಸರಕಾರವನ್ನು ಕ್ರಿಯಾಶೀಲಗೊಳಿಸಿ ಅಲ್ಲಲ್ಲಿ ಪರಿಹಾರದ ವ್ಯವಸ್ಥೆಯನ್ನು ಆರಂಭ ಮಾಡಿಸುತ್ತಿದ್ದರು.

ಮೃದುಸ್ವಭಾವದ ಮುಖ್ಯಮಂತ್ರಿ ಶ್ರೀ ಬಾಬು ಅವರನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದ ಆ ಇಂಗ್ಲಿಷ್ ಅಧಿಕಾರಿಗಳನ್ನು ನೆಹರೂಜಿ ಚೆನ್ನಾಗಿ ತರಾಟೆಗೆ ತೆಗೆದುಕೊಂಡರು. ನೆಹರೂಜಿ ಜೊತೆ ರಾಜೇಂದ್ರಬಾಬು, ಆಚಾರ್ಯ ಕೃಪಲಾನಿಯವರು ಕೂಡ ಬೈಗು ಬೆಳಿಗ್ಗೆ ಅಲೆದಲೆದು ಸಹಾಯತಾ ಕಾರ್ಯವನ್ನು ವ್ಯವಸ್ಥೆಗೊಳಿಸಿದರು ಮತ್ತು ರಿಲೀಫ್ ಕ್ಯಾಂಪ್‌ಗಳು ರಚಿತವಾದವು. ಹತ್ತು–ಹನ್ನೆರಡು ದಿನಗಳಲ್ಲಿ ಬಿಹಾರದ ಕೋಮುವಾರು ಬೆಂಕಿಯನ್ನು ಕಾಂಗ್ರೆಸ್ ಸರಕಾರ ಹತೋಟಿಗೆ ತಂದಿತು. ಈ

ದಾರುಣ ಘಟನೆಗಳನ್ನು ಕುರಿತು ಬಿಹಾರ ಸರಕಾರ ವರದಿಯನ್ನು ಸಿದ್ಧಪಡಿಸಿತ್ತು. ಆರು ಜಿಲ್ಲೆಗಳ ೧೯೦೦೦ದಲ್ಲಿ ೭೫೦ ಹಳ್ಳಿಗಳಲ್ಲಿ ದಂಗೆಗಳಾಗಿದ್ದವು, ೧೦೦೦೦ ಮನೆಗಳನ್ನು ಮುರಿದಿದ್ದರು, ಪೊಲೀಸ್‌ನ ಫೈರಿಂಗ್‌ನಲ್ಲಿ ೪೦೦ ಮಂದಿ ಸತ್ತು ೧೦೦ ಜನ ಗಾಯಗೊಂಡಿದ್ದರು. ವರದಿಯ ಪ್ರಕಾರ ೫೪೨೦ ಮುಸ್ಲಿಮರನ್ನು ಕೊಲ್ಲಲಾಗಿತ್ತು, ಸರಿಯಾದ ಅಂಕಿ ಅಂಶಗಳ ಪ್ರಕಾರ ಬಹುಶಃ ೫ ರಿಂದ ೧೦ ಸಾವಿರ ಇದ್ದಿರಬಹುದು. ಅದೇ ಇಂಗ್ಲಿಷ್ ಅಧಿಕಾರಿಗಳು ಮತ್ತು ಗವರ್ನರ್ ಈ ವರದಿಯನ್ನು ಸಿದ್ಧಪಡಿಸಿದ್ದರು. ಈ ಅವ್ಯವಸ್ಥೆಯಿಂದಾಗಿ ಅವರು ಮನಸ್ಸಿನೊಳಗೇ ಸಂತೋಷಪಟ್ಟುಕೊಂಡಿದ್ದರು. ಅದರಿಂದ ಈ ರಿಪೋರ್ಟ ಸರಿಯಾಗಿದ್ದಿರ ಬಹುದೆನ್ನಬಹುದು.

ಅಕ್ಟೋಬರ್ ೧೪ರ ವೇಳೆಗೆ ಕೋಮುವಾದದ ಬೆಂಕಿ ಪೂರ್ತಿ ತಣ್ಣಗಾಗಿತ್ತು. ನೆಹರೂಜಿ, ರಾಜೇಂದ್ರಬಾಬು ಮತ್ತು ಬಿಹಾರ ಕಾಂಗ್ರೆಸ್ಸಿಗರ ಪ್ರಯತ್ನದಿಂದ ಇತರೆ ಜಾಗಗಳಲ್ಲಿ ಈ ದಂಗೆ ಹರಡಿರಲಿಲ್ಲ, ಇದು ಬಹಳ ಸಂತೋಷದ ವಿಷಯವಾಗಿತ್ತು. ೧೪ ಅಕ್ಟೋಬರ್ ರಾಜೇಂದ್ರಬಾಬು ಅವರು ಬಾಪೂಜಿಗೆ ನೋವಾಖಲಿಗೆ ತಾರು ಕಳುಹಿಸಿದರು. ಬಾಪೂಜಿಯ ಅರ್ಧ ಉಪವಾಸ ಕೊನೆಗೊಂಡಿತು. ಬಿಹಾರದಲ್ಲಿ ಜನ ಅನುಚಿತ ಸಾಂಪ್ರದಾಯಿಕತೆಯಿಂದ ದೂರಸರಿದು ಪ್ರಜಾತಂತ್ರ ಮತ್ತು ನ್ಯಾಯವನ್ನು ರಕ್ಷಿಸುವರೆಂದು ಬಾಪೂಜಿಗೆ ಆಶ್ವಾಸನೆ ನೀಡಿದ ಹಾಗಿತ್ತು. ಆದ್ದರಿಂದ ಅವರು ಬಿಹಾರದಿಂದ ನಿಶ್ಚಿಂತರಾಗಿ ನೋವಾಖಲಿಯಲ್ಲಿ ಪೂರ್ತಿ ನಾಲ್ಕು ತಿಂಗಳ ಕಾಲ ಇದ್ದರು, ಆದರೆ ಡಾ॥ ಮಹಮೂದ್‌ರ ವರದಿಯನ್ನು ನೋಡಿ ಬಾಪೂಜಿ ಉದ್ವಿಗ್ನಗೊಂಡು ತಕ್ಷಣ ಪಟನಾ ತಲಪಿದರು. ಆರಂಭದಲ್ಲಿ ೫ ರಿಂದ ೧೦ ದಿನಗಳ ಕಾಲ ಬಾಪೂಜಿ ಸರಿಯಾಗಿ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದಕ್ಕಾಗಿ ನಿರಂತರವಾಗಿ ಜನರನ್ನು ಭೇಟಿಯಾದರು. ಮುಸ್ಲಿಂ ಲೀಗ್ ಅಧ್ಯಕ್ಷ ನವಾಬ್ ಇಸ್ಮಾಯಿಲ್ ಮತ್ತು ಲೀಗ್‌ನ ಪ್ರಖರ ನಾಯಕ ಸೈಯದ್ ಅಬ್ದುಲ್ ಅಜೀಜ್‌ನ ಪ್ರಾಕೃತಿಕ ಚಿಕಿತ್ಸೆಯ ಜವಾಬ್ದಾರಿಯನ್ನು ಬಾಪೂಜಿ ಹೊತ್ತುಕೊಂಡರು. ಕಲ್ಕತ್ತಾದಿಂದ ಅಬ್ದುಲ್ ಅಜೀಜ್ ಜೊತೆ ಆತನ ಆರೋಗ್ಯ ಸರಿಹೋಗಲೆಂಬುದ್ದೇಶದಿಂದ ಒಬ್ಬ ಪ್ರಾಕೃತಿಕ ಚಿಕಿತ್ಸಕನನ್ನು ಕರೆಸಿ ಇರಿಸಿದರು. ಬಾಪೂಜಿಗೆ ಎಲ್ಲರೂ ಮಿತ್ರರೇ. ಅವರು ಭೇದ-ಭಾವ ಮಾಡದೆ ಎಲ್ಲರ ಸೇವೆಯಲ್ಲೂ ತೊಡಗಿಕೊಂಡಿರುತ್ತಿದ್ದರು, ಆರೋಗ್ಯ ಸರಿಹೋದ ಮೇಲೆ ಇಬ್ಬರು ಸಭ್ಯರೂ ಬಾಪೂಜೀನ ಎಲ್ಲ ರೀತಿಯಲ್ಲೂ ನಿಂದಿಸಿದರೆನ್ನುವುದು ಬೇರೆ ಮಾತು. ಅವರ ಹೆಸರನ್ನ ಕೆಡಿಸುವುದರಲ್ಲಿ ಯಾವ ಕೊರತೆಯನ್ನೂ ಮಾಡಲಿಲ್ಲ, ಆದರೆ ಇದು ಆ ಮುಸಲ್ಮಾನ ನಾಯಕರ ರೀತಿ-ನೀತಿಯಾಗಿತ್ತು.

ಬಿಹಾರ್ ನಾಯಕರೊಂದಿಗೆ ಬಾಪೂಜಿ ತನ್ನ ಹೃದಯದ ನಿರಾಶೆ, ರೋಷವನ್ನು

ಪ್ರಕಟಪಡಿಸಿದರು, 'ಬಿಹಾರದಲ್ಲಿ ಹೀಗೆ ಆಗಬಹುದೆಂದು ನಾನು ಆಶಿಸಿರಲಿಲ್ಲ, ಕಾಂಗ್ರೆಸ್ ಮಂತ್ರಿಮಂಡಳ ಇಂಥ ಅಜಾಗರೂಕವಾಗಿದ್ದು ಕೂಡ ದೊಡ್ಡ ತಪ್ಪೇ. ಗವರ್ನರ್ ಇರಲಿಲ್ಲ ಅನ್ನುವ ಕಾರಣ ಕೊಟ್ಟು ಕಾಂಗ್ರೆಸ್ ಸರಕಾರ ಪರಿಸ್ಥಿತಿಯನ್ನ ಹತೋಟಿಗೆ ತರುವುದಕ್ಕೆ ತಡವಾಯಿತು ಅನ್ನುವುದೇನೂ ಕಾರಣವಲ್ಲ. ಬಿಹಾರ್ ಕಾಂಗ್ರೆಸ್ಸಿಗರು ಸರಕಾರ ಪಡೆದುಕೊಂಡು ಸೋಮಾರಿಗಳಾಗಿ ಹೋಗಿದ್ದಾರೆ ಮತ್ತು ಅಹಿಂಸೆ ಐಶಾರಾಮದಲ್ಲಿ ಮುಳುಗಿಹೋಗ್ತಿದ್ದಾರೆ' ಎಂದರು. ಚಿಕ್ಕವರು – ದೊಡ್ಡವರು ಎಲ್ಲರೂ ತಮ್ಮ ಗೌರವಾನ್ವಿತ ನಾಯಕನ ಕಠೋರವಾದ, ಗಂಭೀರವಾದ ಮಾತುಗಳನ್ನು ತಲೆಬಾಗಿಸಿ ಕೇಳಿಸಿಕೊಂಡರು. ಅಲೀಗಢದಲ್ಲಿ ಮುಸ್ಲಿಂ ಲೀಗ್ ಆಯುಧಗಳ ಜೊತೆಗೆ ಗೂಂಡಾಗಳನ್ನೂ ಕರೆಸಿದ್ದರು ಎಂದು ರಾಜೇಂದ್ರಬಾಬು ಎಷ್ಟೋ ಸಾರಿ ಹೇಳಿದರು. ದಂಗೆಗಳು ಮುಗಿದ ಮೇಲೆ ಆ ತರಹೆಯ ಅಸಾಮಾಜಿಕ ಕಟ್ಟರ್ ಮುಸಲ್ಮಾನರು ಬಿಹಾರ್‌ಗೆ ಬರುತ್ತಲೇ ಇದ್ದರು, ಸ್ಥಿತಿಯನ್ನು ಸುಧಾರಿಸಲು ಬಿಡುತ್ತಲೇ ಇರಲಿಲ್ಲ ಎಂದರು. ಈ ಹಾರಿಕೆಯ ತಥ್ಯಗಳನ್ನ ಕೇಳಿ ಬಾಪೂಜಿಗೆ ಬಹಳ ಕೋಪ ಬಂತು, ಅವರು, 'ನಿಜವಾದ ಪಶ್ಚಾತ್ತಾಪದಲ್ಲಿ ಹಾರಿಕೆಯ ಮಾತುಗಳನ್ನಾಡುವುದು ತೀರ ಅಸಂಬದ್ಧವಾದ ಮಾತಾಗುತ್ತದೆ. ಹೀಗೆ ಯೋಚಿಸಿದರೆ ಅದು ಪಶ್ಚಾತ್ತಾಪವಾಗುವುದಿಲ್ಲ, ತಪ್ಪುಗಳಿಗೆ ಪರೋಕ್ಷವಾಗಿ ನೆಲೆ ಸಿಗುತ್ತದೆ' ಎಂದು ತಮ್ಮ ಜೊತೆಗಾರರಿಗೆ ಹೇಳಿದರು.

ಬಾಪೂಜಿಯಿಂದ ಆಗಲಿ, ನಮ್ಮ ಪರಿವಾರದ ದೊಡ್ಡವರು ಯಾರಿಂದಲೂ ಈ ಸೂಕ್ಷ್ಮ ಸಿದ್ಧಾಂತದ ವಿಷಯವಾಗಿ ಹೆಚ್ಚಾಗೇನೂ ಕೇಳಿದ್ದೆ ಅಂತ ನನಗೆ ನೆನಪಿಲ್ಲ, ಅಥವಾ ಕೇಳಿಸಿಕೊಳ್ಳುವುದಕ್ಕೆ ಅರ್ಥ ಮಾಡಿಕೊಳ್ಳುವುದಕ್ಕೆ ನನಗೆ ಅವಕಾಶ ಸಿಗಲೇ ಇಲ್ಲವೇನೋ. ಆದರೆ ಈಚೆಗೆ ಎಷ್ಟೋ ಪೆಟ್ಟುಗಳು ತಿಂದ ಮೇಲೆ ನನಗನಿಸಿರುವುದು ಅಂದರೆ ನಾವು ನಮ್ಮನ್ನ ಬಚಾವ್ ಮಾಡಿಕೊಳ್ಳುತ್ತಾ ಇರುವವರೆಗೂ ದೇವರ ಕ್ಷಮೆಯೂ ನಮಗೆ ಸಿಗಲ್ಲ, ದುಃಖಾನೂ ಪಟ್ಟುಕೊಳ್ಳುತ್ತಾ ಇರ್ತೇವೆ, ನಾವು ಯಾವ ಕ್ಷಣದಲ್ಲಿ ನಮ್ಮ ತಪ್ಪುಗಳನ್ನು ತಿಳಿದುಕೊಂಡು ಸಂಕಲ್ಪ ಮಾಡಿದೆವು ಅಂದರೆ ಆಕ್ಷಣವೇ ಮನಸ್ಸಿನಲ್ಲಿ ಶಾಂತಿ–ಸ್ವಸ್ಥತೆಯ ಅನುಭವ ಆಗುತ್ತದೆ, ದೇವರ ಸೃಷ್ಟಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕರ್ಮದ ಫಲ ಅನುಭವಿಸಲೇ ಬೇಕು, ಪ್ರತಿಯೊಂದು ತಪ್ಪಿಗೂ ಶಿಕ್ಷೆ ಅನುಭವಿಸಲೇ ಬೇಕು. ನಾವು ಬೇರೆಯವರ ಮೇಲೆ ಅಪರಾಧ ಹೊರಿಸುವುದನ್ನು ಬಿಟ್ಟು ನಮ್ಮ ಅಪರಾಧವನ್ನು ಒಪ್ಪಿಕೊಂಡರೆ ನಮ್ಮ ಶಿಕ್ಷೆ ಕೂಡ ಶಿಕ್ಷೆ ಅನಿಸದೆ ಅದೂ ಒಂದು ಅನುಭವ ಅಂತ ಅನಿಸುತ್ತದೆ. ಹೀಗೆ ನಮ್ಮ ಅಪರಾಧವನ್ನು ಒಪ್ಪಿಕೊಳ್ಳುವುದರ ಜೊತೆಗೆ, ದುಷ್ಪರಿಣಾಮದ ಕಷ್ಟವೂ ಇದ್ದಕ್ಕಿದ್ದ ಹಾಗೆ ಮಾಯವಾಗುತ್ತೆ ಮತ್ತು ನೈತಿಕ ಧೈರ್ಯ, ನೆಮ್ಮದಿಯಿಂದ ನಾವು ಪರಿಸ್ಥಿತಿಯನ್ನ ಎದುರಿಸುತ್ತೇವೆ. ನೆಪಹೇಳುವುದು, ನಮ್ಮನ್ನು ರಕ್ಷಿಸಿಕೊಳ್ಳುವುದಕ್ಕಾಗಿ

ತರ್ಕ ಒಡ್ಡುವುದು ಇವೆರಡರಿಂದಲೂ ಅಪರಾಧ ಕಡಿಮೆ ಆಗುವುದರ ಬದಲಾಗಿ ನಾವು ಮಾಡಿರುವ ತಪ್ಪು ಸರಿಯಾದ್ದು ಅಂತ ನಮ್ಮ ಒಳಮನಸ್ಸು ಹೇಳುವುದಕ್ಕೆ ಶುರುಮಾಡುತ್ತದೆ, ಆಗ ಸುಧಾರಿಸುವುದಕ್ಕೆ, ಪಶ್ಚಾತ್ತಾಪ ಪಡುವುದಕ್ಕೆ ಅವಕಾಶವೇ ಸಿಗಲ್ಲ ಅಂತ ಎಷ್ಟೋ ಸಾರಿ ನನಗಿದು ಅನುಭವಕ್ಕೆ ಬಂದಿದೆ. ಬಾಪೂಜಿಯ ಈ ದರ್ಶನ ಬಹುಶಃ ಪರೋಕ್ಷವಾಗಿ ನನ್ನ ಮನಸ್ಸಿನಲ್ಲಿ ಕೆಲಸ ಮಾಡುತ್ತಿದ್ದು ಈಗ ಎಷ್ಟೋ ವರ್ಷಗಳಾದ ಮೇಲೆ ಪ್ರಕಟವಾಗುತ್ತಿದೆ ಅನ್ನಿಸುತ್ತದೆ.

ಬಾಪೂಜಿ ಬಿಹಾರ್ ಕಾಂಗ್ರೆಸ್‌ಗೆ ಸಾರ್ವಜನಿಕವಾಗಿ ನಿಮ್ಮ ತಪ್ಪನ್ನ ಒಪ್ಪಿಕೊಳ್ಳಿರೆಂದು ಹೇಳಿದರು, ಮತ್ತೆ ತಕ್ಷಣ ಪರಿಶೀಲನ ಆಯೋಗವನ್ನು ರಚಿಸಿರೆಂದು ಹೇಳಿದರು. ಮುಸ್ಲಿಂ ಲೀಗ್ ನಿಸ್ಸಂದೇಹವಾಗಿ ಇದನ್ನ ದುರುಪಯೋಗ ಪಡಿಸಿಕೊಳ್ಳುತ್ತದಾದರೂ ನ್ಯಾಯ–ನೀತಿ ಇಂತಹ ಪರಿಣಾಮಗಳಿಗೆ ಬೆಲೆ ಕೊಡಲ್ಲ, ಈ ಶುದ್ಧ ಸ್ವೀಕೃತಿಯಿಂದ ಅಹಿಂಸೆಗೆ ಒಳ್ಳೆಯ ಪರಿಣಾಮ ಬರುತ್ತೆ, ಎದುರಾಳಿ ಕೂಡ ತನ್ನ ತಪ್ಪನ್ನ ಒಪ್ಪಿಕೊಳ್ಳುತ್ತಾನೆ, ತಪ್ಪನ್ನೆಲ್ಲಾ ಗೂಂಡಾಗಳ ಮೇಲೆ ಹಾಕುವುದು ಕೂಡ ಸರಿಯಲ್ಲ. ಕಾಂಗ್ರೆಸ್ ತಾನು ಇಡೀ ದೇಶವನ್ನ ಪ್ರತಿನಿಧಿಸುತ್ತೇನೆಂದು ಹೇಳಿಕೊಳ್ಳುತ್ತಿತ್ತು, ಅಂದರೆ ಅದು ಬರಿಯ ಕಾಂಗ್ರೆಸ್ಸಿಗರ ಸಂಸ್ಥೆಯಷ್ಟೇ ಅಲ್ಲ, ಎದುರಾಳಿಗಳು ಮತ್ತೆ ಬೇರೆ ವರ್ಗಗಳ ಜನರ ಸಂಸ್ಥೆ ಕೂಡ ಅಂತ ಆಯಿತು. ಸಮಾಜದಲ್ಲಿ ಗೂಂಡಾ ತತ್ವಗಳು ಬೆಳೆಯುತ್ತಲಿವೆ ಅಂದಾಗ ತಿಳುವಳಿಕೆ ಇರುವವರ ಜವಾಬ್ದಾರಿ ಆಗ ಇನ್ನೂ ಹೆಚ್ಚಾಗುತ್ತೆ, ಗೂಂಡಾಗಳ ದುಂಡಾವರ್ತಿತನವನ್ನ ತಡೆಯುವುದು ಸಮಾಜದ ಕರ್ತವ್ಯ. ಎಷ್ಟೋ ಕಾಂಗ್ರೆಸ್ಸಿಗರು ಮುಸಲ್ಮಾನರ ಪ್ರಾಣ ಉಳಿಸಿದ್ದರು, ಇದರಿಂದ ಎಲ್ಲ ಕಾಂಗ್ರೆಸ್ಸಿಗರು ಈ ಅಪರಾಧದಿಂದ ಮುಕ್ತರಾಗುವದಿಲ್ಲ, ದಂಗೆಗಳಲ್ಲಿ ಭಾಗವಹಿಸಿದ ಕಾಂಗ್ರೆಸ್ಸಿಗರು ಅವರು ತಾವೇ ಹೋಗಿ ಆರಕ್ಷಕ ಠಾಣೆಯಲ್ಲಿ ತಮ್ಮನ್ನು ಒಪ್ಪಿಸಿಕೊಳ್ಳಬೇಕು. ಯಾರ ಹತ್ತಿರ ಮುಸಲ್ಮಾನ ಹುಡುಗಿಯರು ಇರುವರೋ ಅವರನ್ನವರು ಹಿಂದಿರುಗಿಸಬೇಕು, ಇಲ್ಲವೆಂದರೆ ಆ ಹೆಣ್ಣುಮಕ್ಕಳನ್ನ ರಾಜೇಂದ್ರಬಾಬು ಬಳಿ ಅಥವಾ ನನಗೆ ಒಪ್ಪಿಸಿಬಿಡಬೇಕು. ಅಂತಹ ಘೋರ ದುಷ್ಕರ್ಮಕ್ಕೆ ಸಂಸ್ಕೃತಿಯ, ಧರ್ಮದ ರಕ್ಷಣೆ ಯಾವುದೂ ಸಿಗುವುದಿಲ್ಲ. ನೋವಾಖಲಿಗೆ ಹೋಲಿಸಿದರೆ ಬಿಹಾರದಲ್ಲಿ ಕಡಿಮೆ ಹಿಂಸೆ ಆಗಿದೆ ಅಂದರೆ ಇದೂ ಮರ್ಯಾದೆ ಮಾತಲ್ಲ, ಪಾಶವಿಕತೆಯಲ್ಲಿ ಹೋಲಿಕೆಗೆ ಅವಕಾಶ ಇರುವುದಿಲ್ಲ. ಕೆಟ್ಟವರಲ್ಲಿ ಯಾರು ಹೆಚ್ಚು–ಯಾರು ಕಡಿಮೆ ಅನ್ನುವ ಪ್ರಶ್ನೆಯೇ ಇಲ್ಲ, ಅಪರಾಧ ಮಾಡಿದ್ದಾರೆ ಅನ್ನುವುದಷ್ಟೆ ಸತ್ಯ. ಈ ಎಲ್ಲಾ ಹಿಂಸೆಯ ಹಿಂದೆ ಪುಕ್ಕಲುತನ ಮರೆಯಾಗಿ ಕುಳಿತಿರುತ್ತೆ, ಈ ಪುಕ್ಕಲುತನದಿಂದ ಮನುಷ್ಯ ದೇಶ ಯಾರೂ ಉದ್ಧಾರವಾಗಲ್ಲ. ಮುಸಲ್ಮಾನರು ದಂಗೆ ಶುರುಮಾಡಿದರು ಅಂದರೆ ಹಿಂದೂಗಳು ತಮ್ಮ ದೃಢ ಮಾನವೀಯತೆಯಿಂದ ಅದನ್ನ ಎದುರಿಸಬೇಕಾಗಿತ್ತು, ಹಿಂದೂಗಳ

ಶುದ್ಧ ಅಹಿಂಸೆಯ ಧೈರ್ಯದಿಂದ ದಂಗೆಗಳು ಬಹುಶಃ ತಾವೇ ನಿಂತು ಹೋಗುತ್ತಿದ್ದುವೇನೋ. ಬಾಪೂಜಿ ತಮ್ಮ ಪ್ರೀತಿಯ ಬಿಹಾರಿಗಳಿಗೆ ನಿಜವಾಗಿಯೂ ದೊಡ್ಡ–ದೊಡ್ಡ ಶಬ್ದಗಳನ್ನು ಬಳಸಿ ಛೀಮಾರಿ ಹಾಕಿದ್ದಿರಬೇಕು ಎಂದು ನನಗನಿಸುತ್ತದೆ. ಆ ಬಿಹಾರಿಗಳು ಸಜ್ಜನರು, ಸಹನಶೀಲರು ಆಗಿದ್ದಿದ್ದರಿಂದ ನಿಃಶಬ್ದವಾಗಿ ಕೋಪವನ್ನೆಲ್ಲಾ ಸಹಿಸಿಕೊಂಡು ಕ್ಷಮಾಪ್ರಾರ್ಥನೆ ಮಾಡಿದ್ದರು ಮತ್ತೆ ಪ್ರಾಯಶ್ಚಿತ್ತಕ್ಕಾಗಿ ಎಷ್ಟೋ ಜನ ತಮ್ಮ ಅಪರಾಧವನ್ನೊಪ್ಪಿಕೊಂಡರು ಮತ್ತು ಸ್ವ–ಇಚ್ಛೆಯಿಂದ ತಮ್ಮನ್ನ ಕಾನೂನಿಗೆ ಅರ್ಪಿಸಿಕೊಂಡರು.

ಡಾ॥ ಮಹಮೂದ್ ಬಾಪೂಜಿಗೆ ವಿಸ್ತಾರವಾಗಿ ಈ ದಂಗೆಗಳ ವರ್ಣನೆ ನೀಡಿದ್ದಾರೆ, ಅದರ ಜೊತೆಗೆ ಎಷ್ಟೋ ಒಳ್ಳೆಯ ಘಟನೆಗಳನ್ನೂ ವರ್ಣಿಸಿರಬೇಕು. ಹಿಂದೂಗಳು ತನು–ಮನ–ಧನದಿಂದ ತಮ್ಮ ಮುಸಲ್ಮಾನ ನೆರೆಹೊರೆಯವರನ್ನು ರಕ್ಷಿಸಿದ ವಿಷಯವನ್ನು ಕೂಡ ತಿಳಿಸಿರಬೇಕು. ಮನೆ–ಮಠ ಕಳೆದುಕೊಂಡ ಮುಸಲ್ಮಾನರನ್ನ ಕರೆತರುವುದಕ್ಕಾಗಿ ಡಾ॥ ಮಹಮೂದ್ ವಿಶೇಷ ರೈಲುಗಾಡಿಯಲ್ಲಿ ಫತವಾ ಸ್ಟೇಷನ್ನಿಗೆ ಹೋದರು. ಅಲ್ಲಿ ಎಷ್ಟೋಜನ ಹಿಂದೂಗಳು ತಮ್ಮ ಮುಸಲ್ಮಾನ ಜೊತೆಗಾರರ ಸಾಮಾನುಗಳನ್ನು ತಲೆಯ ಮೇಲೆ ಹೊತ್ತುಕೊಂಡು ಗಾಡಿಯಲ್ಲಿಡಲು ಸಹಾಯ ಮಾಡುತ್ತಿದ್ದರು, ಡಾ॥ ಸೈಯದ್ ಮಹಮೂದ್ ಈ ವಿಚಿತ್ರ ವ್ಯವಹಾರವನ್ನು ನೋಡಿ ಚಕಿತರಾದರು. ಏಕೆ ಅಳುತ್ತಿರುವಿರೆಂದು ಆ ಹಿಂದೂಗಳನ್ನ ಕೇಳಿದಾಗ ಅವರಿಗಿನ್ನೂ ಆಶ್ಚರ್ಯಪಡುವಂತಹ ಉತ್ತರ ದೊರಕಿತು: 'ಪಾಪ, ನಮ್ಮ ಈ ಮುಸ್ಲಿಂ ಸ್ನೇಹಿತರು ಗಾಡಿಯಿಂದ ಇಳಿದಾಗ ಅವರ ಸಾಮಾನನ್ನು ಇಳಿಸಲು ಯಾರು ಸಹಾಯ ಮಾಡುತ್ತಾರೆ?' ಇಂತಹ ಅಪೂರ್ವ ಸ್ನೇಹವನ್ನು ಹಿಂದೂ ಮಾತ್ರವೇ ತೋರಬಹುದಿತ್ತು, ಇಂತಹ ತೀಕ್ಷ್ಣವಾದ ಸದ್‌ಭಾವನೆಯೆದುರು ಮನುಷ್ಯನ ಮಾತು ಮೂಕಾಗುತ್ತದೆ. ಡಾ॥ ಮಹಮೂದ್ ಸ್ತಬ್ಧರಾದರು, ಮುಖ್ಯಮಂತ್ರಿ, ಶ್ರೀ ಬಾಬು ಹತ್ತಿರ ನಿಂತಿದ್ದರು. ಒಂದೆಡೆ ರಾಕ್ಷಸೀ ವ್ಯವಹಾರ ಇದ್ದರೂ ಇನ್ನೊಂದೆಡೆ ಮಾನವೀಯತೆ ಇನ್ನೂ ಸತ್ತಿರಲಿಲ್ಲ' ಎಂದರು.

ಪಟನಾದ ಪ್ರತಿ ದಿವಸದ ಪ್ರಾರ್ಥನಾ ಸಭೆಯಲ್ಲಿ ಬಾಪೂಜಿ ತಮ್ಮ ಹೃದಯದ ಅಪಾರ ಪರಿತಾಪವನ್ನು ಜನರೆದುರು ಪ್ರಕಟಪಡಿಸುತ್ತಿದ್ದರು, ಮುಸಲ್ಮಾನರ ಪರಿಹಾರಕ್ಕಾಗಿ ಚಂದಾ ಕೂಡಿಸುತ್ತಿದ್ದರು, ದಯೆಯಿಂದ ಗದ್ಗದಿತರಾಗಿ ಜನ ತಾವು ಕಷ್ಟಪಟ್ಟು ಸಂಪಾದನೆ ಮಾಡಿದ ಒಂದೊಂದು ಕಾಸನ್ನೂ ಗಾಂಧೀಜಿಗೆ ನೀಡಲು ನುಗ್ಗಿ ಬರುತ್ತಿದ್ದರು. ಮಹಿಳೆಯರು ತಮ್ಮ ಒಡವೆಗಳನ್ನು ದಾನ ಮಾಡಿ ತಮ್ಮ ಪುರುಷವರ್ಗದೊಂದಿಗೆ ಅಪರಾಧ ಪ್ರಾಯಶ್ಚಿತ್ತಕ್ಕಾಗಿ ಮುನ್ನುಗ್ಗುತ್ತಿದ್ದರು. ಒಮ್ಮೊಮ್ಮೆ ಎರಡು, ಮೂರು ಮತ್ತು ನಾಲ್ಕು–ನಾಲ್ಕು ಸಾವಿರ ರೂಪಾಯಿಗಳು ಕಾಸು ಚಿಕ್ಕಾಸು ಎಂದು ಬಾಪೂಜಿಯ ಸಹಚರರು ಎಣಿಸುವಾಗ ರಾತ್ರಿ ೨–೩

ಗಂಟೆ ಕೂಡ ಆಗುತ್ತಿತ್ತು. ಆ ಒಡವೆಗಳನ್ನು ಹರಾಜು ಹಾಕಿದ ಮೊತ್ತ ಬೇರೆ ಇರುತ್ತಿತ್ತು. ಒಮ್ಮೆ ಈ ಮಿತ್ರರೆಲ್ಲರೂ ಎಣಿಸುವಾಗ ಮತ್ತು ಮಾರನೆಯ ದಿನ ಬ್ಯಾಂಕ್‌ನಲ್ಲಿ ಜಮಾ ಮಾಡುವ ಮೊತ್ತದಲ್ಲಿ ಒಂದು ಪೈಸೆಯ ವ್ಯತ್ಯಾಸ ಕಂಡು ಬಂದಿತು, ಬಾಪೂಜಿಗೆ ಅದು ಸಹಿಸಲಿಲ್ಲ, ಒಂದು ಪೈಸೆಯ ತಪ್ಪು ಮಾಡಿದರೂ ಸತ್ಯಾಗ್ರಹಿಗೆ ಕ್ಷಮೆ ಇಲ್ಲ. ಬಡಸಮಾಜದ ಒಂದು ಪೈಸೆ ಕೂಡ ಬಹಳ ಕಷ್ಟಪಟ್ಟು ಸಂಪಾದನೆ ಮಾಡಿದ್ದುದರ ಪವಿತ್ರ ದಾನ, ಅದರ ಬಗ್ಗೆ ಬೇಕಾಬಿಟ್ಟಿ ವರ್ತನೆ ತೋರುವುದು ಅಯೋಗ್ಯತೆಯ ಜೊತೆಗೆ ಅಕ್ಷಮ್ಯ ಅಪರಾಧವೂ ಆಗಿರುತ್ತದೆ.

ಮೊದಲ ದಿನ ಬಾಪೂಜಿ ಪಟನಾ ತಲಪಿದರು. ಆ ದಿನ ಸಂಜೆ ಒಬ್ಬ ತೀರ ಜೀರ್ಣ ಶೀರ್ಣನಾಗಿದ್ದ ಭಿಕಾರಿಯೊಬ್ಬ ತಾನು ಬೇಡಿ ಸಂಗ್ರಹಿಸಿದ್ದ ನಾಲ್ಕಾಣೆಯ ಕಾಸು–ಚಿಕ್ಕಾಸುಗಳನ್ನು ಬಾಪೂಜಿಯ ಪಾದಗಳ ಬಳಿ ಇಟ್ಟ. ಹೀಗೆ ಮುಸ್ಲಿಂ ಪೀಡಿತರಿಗೆ ಸಹಾಯ ಮಾಡುವುದಕ್ಕಾಗಿ ತನ್ನ ಇಡೀ ದಿವಸದ ಸಂಪಾದನೆಯನ್ನೇ ಕೊಟ್ಟುಬಿಟ್ಟ. ಈ ತ್ಯಾಗ–ದಾನದಿಂದ ಬಾಪೂಜಿಯ ಕಣ್ಣು ತೇವಗೊಂಡವು, ಅವರು 'ಈ ನಾಲ್ಕಾಣೆಯ ದಾನ ನನಗೆ ನಾಲ್ಕು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನದು, ಅದು ಈ ಮನುಷ್ಯನ ಸರ್ವಸ್ವ ನಿಧಿ' ಎಂದರು. ಬಾಪೂಜಿ ತಮ್ಮ ಸ್ವಭಾವದನುಗುಣ ಆತನಿಗೆ ಭಿಕ್ಷೆ ಬೇಡುವುದನ್ನ ಬಿಟ್ಟುಬಿಡುವಂತೆ ಒತ್ತಾಯ ಮಾಡಿ ಹೇಳಿದರು ಮತ್ತು ಅವನಿಗೊಂದು ತಕಲಿ ನೀಡಿದರು. ಅದರಲ್ಲಿ ಅವನು ನೂಲು ತೆಗೆಯುವುದನ್ನು ಕಲಿತ, ಬಿಹಾರ್ ಕಾಂಗ್ರೆಸ್ ಕಮಿಟಿಯ ಕಛೇರಿಯಲ್ಲಿ ಸದಾಖತ್ ಆಶ್ರಮಕ್ಕೆ ಕಳುಹಿಸಿ ಅವನಿಗೆ ಅಲ್ಲಿ ಬಾಪೂಜಿ ಸ್ವಲ್ಪ ಕೆಲಸ ಕೊಡಿಸಿದ್ದರು. ಬಾಪೂಜಿ ಹೋದಲ್ಲೆಲ್ಲಾ ಮುಸಲ್ಮಾನರು ತಮ್ಮ ವಿಪತ್ತಿನ ಕರುಣ ಕತೆಯನ್ನು ವಿವರಿಸುತ್ತಿದ್ದರು. ಬಾಪೂಜಿ ಅವರಿಗೂ ನೋವಾಖಲಿಯ ಹಿಂದೂಗಳ ಹಾಗೆ ಧೈರ್ಯ ಇಟ್ಟುಕೊಂಡು ಹೆದರದೆ ತಮ್ಮ ಜಾಗಗಳಿಗೆ ಹಿಂದಿರುಗಲು ಹೇಳಿದರು. ಅವರ ನೋವನ್ನು ಕಡಿಮೆ ಮಾಡಲು, 'ನೀವು ನೋವಾಖಲಿಗೆ ಹೋಗಿ ಅಲ್ಲಿಯ ಹಿಂದೂಗಳನ್ನು ರಕ್ಷಿಸಿ, ಬಿಹಾರದಲ್ಲಿ ಮತ್ತೆ ಈ ತರಹೆಯ ಘಟನೆಗಳಾಗುವುದಿಲ್ಲವೆಂದು ನಾನು ನಿಮಗೆ ಮಾತು ಕೊಡುತ್ತೇನೆ, ಹಾಗೇನಾದರೂ ಆಯಿತೆಂದರೆ ಮೊದಲು ನನ್ನ ಪ್ರಾಣಹೋಗುತ್ತೆ' ಎಂದರು.

೧೯೪೬ರ ಬಿಹಾರದ ದಂಗೆ ದೇಶದ ಅಖಂಡತೆ ಮುರಿದು ನುಚ್ಚು ನೂರಾಗಿಸಿತು. ಕಾಯದೇ ಆಜ಼ಂ ಜಿನ್ನಾಗೆ ಬಹಳ ಒಳ್ಳೆಯ ಅವಕಾಶ ಸಿಕ್ಕಿ ಎರಡು ಪಟ್ಟು ಉತ್ಸಾಹದಿಂದ ಪಾಕಿಸ್ತಾನಕ್ಕಾಗಿ ಬೇಡಿಕೆಮಾಡತೊಡಗಿದರು. ಅಂತಹ ಕಷ್ಟದ ಪರಿಸ್ಥಿತಿಯಲ್ಲಿ ಜನ ಸಂವಿಧಾನ ಸಭೆಯನ್ನು ಭಂಗಗೊಳಿಸಲು ಆಗ್ರಹಪಡಿಸತೊಡಗಿದರು. ಅವರಿಚ್ಛೆಯಂತೆ ದೇಶಕ್ಕೆ ಸ್ವಾತಂತ್ರ್ಯ ಕೊಡುವ ಸ್ಥಿತಿ ಇರಲಿಲ್ಲ, ಇಂಗ್ಲಿಷರು ಹೊರಟುಹೋದರೆ ಹಿಂದೂ ಕಾಂಗ್ರೆಸ್ಸಿಗರ ಕೈಯಿಂದ

ಮುಸಲ್ಮಾನರನ್ನು ಯಾರು ಉಳಿಸಲು ಸಾಧ್ಯ ಎಂದು ಮುಂತಾಗಿ, ಮುಸ್ಲಿಂ ಲೀಗ್ ಕೂಡ ಸುಳ್ಳು ಪ್ರಚಾರ ಮಾಡಿ ಸುಳ್ಳು ಸುದ್ದಿ ಹರಡುತ್ತಿತ್ತು. ಆಸ್ತಿ–ವಸ್ತುಗಳನ್ನು ಕಳೆದುಕೊಂಡು ಸಮಾಜ ವಿಚಲಿತವಾಗಿತ್ತು, ಮುಸ್ಲಿಂ ಲೀಗ್ ಬೇಜವಾಬ್ದಾರಿ, ಅತಿಶಯೋಕ್ತಿಯಿಂದ ಬಿಹಾರದಲ್ಲೂ ಮುಸಲ್ಮಾನರು ಹಿಂದೂ ಪೊಲೀಸ್ ಅಧಿಕಾರಿಗಳಿಗೆ ಬದಲಾಗಿ ಮುಸ್ಲಿಂ ಆಫೀಸರನ್ನು ನೀಡಿ ಎಂದು ಬೇಡುತ್ತಿದ್ದರು ಮತ್ತು ತಮ್ಮ ರಕ್ಷಣೆಗಾಗಿ ಆಯುಧಗಳನ್ನು ಬೇಡತೊಡಗಿದರು. ಒಂದು ಜಾಗದಲ್ಲಿರಲು ಮುಸಲ್ಮಾನನಿಗೆ ವಿಶೇಷ ಭೂಮಿ ಮತ್ತು ಮನೆ ಖರೀದಿಸಲು ಸರಕಾರ ವ್ಯವಸ್ಥೆ ಮಾಡಲಿ ಎಂಬುದು ಅವರ ಬೇಡಿಕೆಯಾಗಿತ್ತು. ಮುಸ್ಲಿಂ ಲೀಗ್ ಕೂಡ ಶರಣಾರ್ಥಿಗಳನ್ನು ಉದ್ರೇಕಿಸಲು ಹವಣಿಸುತ್ತಿತ್ತು, ಅವರು ಆ ಕ್ಯಾಂಪ್‌ಗಳನ್ನು ಉಗ್ರ ಮುಸ್ಲಿಂ ಕೋಮುವಾದದ ಕೇಂದ್ರವನ್ನಾಗಿ ಮಾಡಿದರು. ನಿಜವಾಗಿ ನೋಡಿದರೆ ಜನ ಇದನ್ನು ಇಷ್ಟಪಡುತ್ತಿರಲಿಲ್ಲ. ನಿರಾಶ್ರಿತ ಮುಸಲ್ಮಾನರು ತಮ್ಮ ಮನೆಗಳಿಗೆ ಹಿಂದಿರುಗಿ ಸಾಮಾನ್ಯ ಜೀವನ ನಡೆಸಲಿಚ್ಛಿಸುತ್ತಿದ್ದರು. ಲೀಗ್‌ಗೆ ಬಡ ಮುಸಲ್ಮಾನರ ಶಾಂತಿ–ನೆಮ್ಮದಿಯ ಚಿಂತೆ ಇರಲೇ ಇಲ್ಲ, ಬಡ ಮುಸಲ್ಮಾನರು ಎಂದೂ ಸಾಹುಕಾರನಾಗಬಾರದೆಂದೂ, ಅವರು ಬಡವರಾಗಿಯೇ ಉಳಿದರೆ ಸಮಾಜವನ್ನು ಅಶಾಂತಿಯಿಂದಿಟ್ಟಿರುತ್ತಾರೆಂದೂ, ಆಗ ಪ್ರಪಂಚ ಮತ್ತು ವೈಸ್‌ರಾಯ್ ಎದುರು ಹಿಂದೂಗಳ ಕಾಂಗ್ರೆಸ್ ಪಕ್ಷದ ಹೆಸರು ಹಾಳಾಗಿ ಮುಸಲ್ಮಾನರಿಗೆ ಪಾಕಿಸ್ತಾನ ಸುಲಭವಾಗಿ ಸಿಗುತ್ತದೆಂದು ಅವರು ಭಾವಿಸಿದ್ದರು. ಲೀಗ್ ನೀತಿ ಹೀಗಿದ್ದಾಗ ಶರಣಾರ್ಥಿಗಳಾಗಿದ್ದ ಮುಸಲ್ಮಾನರು ಬಹಳ ಉಗ್ರವಾಗಿ ಹಿಂದೂ ಸ್ವಯಂ ಸೇವಕರೊಡನೆ ನಡೆದುಕೊಳ್ಳುತ್ತಿದ್ದರು, ಅವಮಾನ ಮಾಡುತ್ತಿದ್ದರು, ಸಣ್ಣ ಮಾತನ್ನೇ ದೊಡ್ಡದಾಗಿ ರಂಪ ಮಾಡಿ ಮಾತುಮಾತಿಗೂ ತಪ್ಪು ಕಂಡು ಹಿಡಿಯುತ್ತಿದ್ದರು. ಇದು ಒಂದು ರೀತಿ ಅವರ ಸ್ವಭಾವವೇ ಆಗಿಬಿಟ್ಟಿತ್ತು. ಇನ್ನೇನು ಮಳೆಗಾಲ ಬರುವುದರಲ್ಲಿತ್ತು, ಆದರೆ ಇನ್ನೂ ಧ್ವಂಸದಲ್ಲಿ ಹರಡಿಕೊಂಡಿದ್ದ ಇಟ್ಟಿಗೆ–ಮಣ್ಣು ಮುಂತಾದ ಕಚರಾ ರಾಶಿಯನ್ನ ತೆಗೆದು ಸ್ವಚ್ಛಗೊಳಿಸಿರಲಿಲ್ಲ, ಮುರಿದ ಮನೆಗಳ ರಿಪೇರಿ ಆಗಿರಲಿಲ್ಲ; ಶರಣಾರ್ಥಿಗಳಲ್ಲಿ ಯಾವನೂ ಎದ್ದು ತನ್ನ ಮನೆಯನ್ನು ಸರಿಪಡಿಸಿಕೊಳ್ಳಲೂ ತಯಾರಿರಲಿಲ್ಲ. ಹಿಂದೂಗಳ ಸರಕಾರವೆ ಎಲ್ಲವನ್ನೂ ಮಾಡುತ್ತದೆ ಅನ್ನುವ ಭಾವನೆ ಇದ್ದಿತು. ಕಾಂಗ್ರೆಸ್ಸಿಗರು, ಹಳ್ಳಿಯವರು ಇಬ್ಬರೂ ಈ ಮುರಿದಿರುವ ಮನೆಗಳನ್ನ ಚೆನ್ನಾಗಿ ರಿಪೇರಿ ಮಾಡಿ ಆ ಪಾಪದ ಮುಸಲ್ಮಾನರು ತಮ್ಮ – ತಮ್ಮ ಹಳ್ಳಿಗಳಿಗೆ ಹಿಂದಿರುಗುವಂತೆ ಮಾಡಬೇಕೆಂದು ಬಾಪೂಜಿ ಒತ್ತಾಯಪಡಿಸಿದರು, ಕೆಲವು ಕಡೆ ಕೆಲಸವೂ ಆಯಿತು. ನಂತರದಲ್ಲಿ ಬಿಹಾರ ಸರ್ಕಾರ ಎಲ್ಲಾ ಮನೆಗಳನ್ನು ಕಟ್ಟಿಕೊಡಲು ಹಣ ಕೂಡ ಕೊಟ್ಟಿತು, ಆದರೆ ಮಳೆಗಾಲದಲ್ಲಿ ಮಣ್ಣಿನ ಗೋಡೆಗಳೆಲ್ಲಾ ಬಿದ್ದು ನೆಲಸಮವಾಗಿದ್ದವು, ಅದರಿಂದ

ಸರಕಾರ ಎರಡರಷ್ಟು ಖರ್ಚು ಹೊರಬೇಕಾಯಿತು.

ಬಿಹಾರದಲ್ಲಿ ನಡೆದ ಈ ಸಂಹಾರದಿಂದ ನಾಲ್ಕು ಸಂಗತಿಗಳು ಸ್ಪಷ್ಟವಾಗಿದ್ದುವು:

೧) ಶಿಕ್ಷಣ ಮತ್ತು ರಾಜಕೀಯ ತರಬೇತಿ ಇಲ್ಲದಿದ್ದರೆ ಪ್ರಜಾಪ್ರಭುತ್ವ ಕೆಲಸ ಮಾಡಲಾಗುವುದಿಲ್ಲ.

೨) ಬಹುಮತ ತನ್ನ ಸಮತೋಲನವನ್ನು ಕಳೆದುಕೊಂಡು ಅಲ್ಪ ಸಂಖ್ಯಾತರನ್ನು ಬುಡಸಹಿತ ಕಿತ್ತೊಗೆಯಬೇಕೆಂದು ಹಠ ಹಿಡಿದರೆ ಪ್ರಪಂಚದ ಯಾವ ಸರಕಾರ ಕೂಡ ಅದರೊಳಗೂ ಪ್ರಜಾಸತ್ತೆಯ ಸರಕಾರ ಆ ವಿಧ್ವಂಸವನ್ನು ತಡೆಯುವುದಕ್ಕಾಗುವುದಿಲ್ಲ.

೩) ಬಹುಸಂಖ್ಯಾತರ ಪ್ರೀತಿ ಸಂಪಾದಿಸಿಕೊಂಡಾಗಲೇ ಅಲ್ಪ ಸಂಖ್ಯಾತರು, ಸಮಾಜದಲ್ಲಿ ಸುಖವಾಗಿರಲು ಸಾಧ್ಯವಾಗುತ್ತೆ, ಇದೇನು ಹೊಸ ಅನುಭವವಾಗಿರಲಿಲ್ಲ. ಮುಸಲ್ಮಾನರ ಬಗ್ಗೆ ವಿಶೇಷ ದ್ವೇಷ ಇಟ್ಟುಕೊಂಡಿದ್ದರು ಅಂತ ಅನ್ನುವ ಸಿದ್ಧಾಂತ ಕೂಡ ಆಗಿರಲಿಲ್ಲ. ಈರಾನಿನ ಬಾದಷಹನ ಅತ್ಯಾಚಾರಗಳಿಂದ ಬೇಸತ್ತು ಸಾವಿರಾರು ಜನ ಪಾರಸಿಗಳು ನಮ್ಮ ದೇಶ ಭಾರತಕ್ಕೆ ಬಂದು ನೆಲಸಿದ್ದರು. ಅವರು ಭಾರತೀಯ ಸಂಸ್ಕೃತಿಯಿಂದ ಅಥವಾ ಮುಸಲ್ಮಾನರ ಹಾಗೆ ಯಾವ ತೊಂದರೆಯನ್ನೂ ಎದುರಿಸಲಿಲ್ಲ. ತಮ್ಮ ಧರ್ಮವನ್ನ ಪೂರ್ತಿಯಾಗಿ ರಕ್ಷಿಸಿಕೊಳ್ಳುತ್ತಾ ಆ ಪಾರಸೀ ಸಮುದಾಯ ಹಿಂದೂಗಳ ಸಾಂಸ್ಕೃತಿಕ ಪ್ರವಾಹದಲ್ಲಿ ಹಾಲಿನಲ್ಲಿ ಸಕ್ಕರೆಯ ಹಾಗೆ ಬೆರೆತು ಹೋಯಿತು, ಮತ್ತು ಅದೃಶ್ಯ ರೂಪದಿಂದ ಸಮಾಜವನ್ನು ಮೇಲಕ್ಕೆತ್ತಿ ಸಮೃದ್ಧಗೊಳಿಸಿದರು. ಹಿಂದೂ–ಮುಸಲ್ಮಾನರ ನಡುವೆ ಇದೇ ವ್ಯವಸ್ಥೆ ಆಗಬಹುದಾಗಿತ್ತು. ಆದರೆ ಕಾಯದೇ ಆಜ಼ಮ್ ಜಿನ್ನಾಗೆ ಮಹತ್ವಾಕಾಂಕ್ಷೆ ಇತ್ತಾದ್ದರಿಂದ ವಿಕಾರವಾದ ದುರಾಗ್ರಹ ಹುಟ್ಟಿ ಬೇಕು–ಬೇಕೆಂದೇ ಆತ ಈ ಎರಡು ಧರ್ಮಗಳ ನಡುವೆ ಒಂದು ಗೋಡೆ ನಿಲ್ಲಿಸಿಬಿಟ್ಟರು. ಅದು ಇವತ್ತಿಗೂ ದೂರವಾಗಿಲ್ಲ, ಮುಸ್ಲಿಂ ಲೀಗ್ ಹಿಂದೂಗಳ ವಿರುದ್ಧ ಅಪಪ್ರಚಾರ ಮಾಡಿದ್ದರಿಂದ ಬಡಪಾಯಿಗಳಾಗಿದ್ದ ಲಕ್ಷಾಂತರ ಮುಸ್ಲಿಮರನ್ನು ರಕ್ಷಿಸುವುದಕ್ಕಾಗಲಿಲ್ಲ, ಅವರು ಇವತ್ತು ಕೂಡ ಹಾಗೆಯೇ ಬಡವರಾಗಿ, ಅವಿದ್ಯಾವಂತರಾಗಿ ಕೆಟ್ಟ ರೀತಿಗಳಿಗೆ ಬಲಿಯಾಗುತ್ತಿದ್ದಾರೆ. ಲೀಗ್‌ನ ಕಠಿಣ ನೀತಿ ಮುಸಲ್ಮಾನರನ್ನು ನಾಶ ಮಾಡಿತು. ಅದರ ಜೀವಂತ ಉದಾಹರಣೆಯಾಗಿ ಇವತ್ತಿನ ಪಾಕಿಸ್ತಾನ ಇದೆ.

೪) ಇಂಗ್ಲಿಷ್‌ನವರು ತಯಾರು ಮಾಡಿ ನಿಲ್ಲಿಸಿದ್ದ ಬ್ಯುರಾಕ್ರೆಟ್‌ಗಳು ಏನೂ ಪ್ರಯೋಜನಕ್ಕೆ ಬಾರದವರಾಗಿದ್ದರು ಎಂದು ಈ ದಂಗೆಗಳಿಂದ ತಿಳಿದುಹೋಯಿತು. ಯೋಚಿಸಲು, ಕೆಲಸ ಮಾಡಲು ಬೇಕಾದ ಸ್ಫೂರ್ತಿ ಅಥವಾ ವಿವೇಕ ಅವರಲ್ಲಿ ಉಳಿದಿರಲಿಲ್ಲ, ಅದರಿಂದ ಕೋಮುವಾರು ದಂಗೆಗಳು ಆಕಸ್ಮಿಕವಾಗಿ ಹುಟ್ಟಿಕೊಂಡಾಗ ಅಪಾಯದ ಸ್ಥಿತಿಯಲ್ಲಿ ಸರಕಾರಿ ನೌಕರ ಬುದ್ಧಿ ಕಳೆದುಕೊಂಡಿದ್ದ. ಬಾಪೂಜಿ

ಪಟನಾ ತಲುಪಿದಾಗ ಬಿಹಾರ ತಣ್ಣಗಾಗಿತ್ತು, ಆದರೆ ತಮ್ಮ ಮನೆ ಮಠ ಕಳೆದುಕೊಂಡಿದ್ದವರನ್ನು ಪುನಃ ಅವರ ಜಾಗಗಳಲ್ಲೇ ಇರುವಂತೆ ಮಾಡುವ ಪುನರ್ ಸ್ಥಾಪನಾ ಕಾರ್ಯ ತೀವ್ರಗತಿಯಿಂದ ನಡೆಯುತ್ತಿರಲಿಲ್ಲ. ಮುಸ್ಲಿಂ ಲೀಗ್‌ನವರು ತೀವ್ರವಾಗಿ ವಿರೋಧಿಸುತ್ತಲೇ ಇದ್ದರು. ಈ ಕಷ್ಟದ ದಿನಗಳಲ್ಲಿ ವ್ಯಾಪಾರಿಗಳು ಹಣ ಮಾಡುವುದಕ್ಕೋಸ್ಕರ ಜನರನ್ನು ಲೂಟಿ ಹೊಡೆಯುತ್ತಿದ್ದರು, ಸಮಾಜದ ಸ್ಥಿತಿ ಬಹಳ ಸೂಕ್ಷ್ಮವಾಗಿತ್ತು. ಏನಾದರೂ, ಸುಳ್ಳುಸುಳ್ಳೇ ಸುದ್ದಿ ಹಬ್ಬಿಸಿದರೂ ಜನರು ಉತ್ತೇಜಿತರಾಗುತ್ತಿದ್ದರು, ಕೋಲಾಹಲ ಉಂಟಾಗುತ್ತಿತ್ತು, ಜಮೀನುದಾರರು ಸರಕಾರದ ಮೇಲೆ ಕೋಪಮಾಡಿಕೊಂಡಿದ್ದರು. ಜಮೀನುದಾರಿ ಪದ್ಧತಿಯನ್ನ ತೆಗೆದುಹಾಕಿದ್ದರಿಂದ ಅವರ ಕಾರುಬಾರಿನ ದರ್ಪ ಅಪಾಯಕ್ಕೆ ಸಿಕ್ಕಿಹಾಕಿಕೊಂಡಿತ್ತು. ಇಷ್ಟೆಲ್ಲಾ ಕಠಿಣ ಪರಿಸ್ಥಿತಿಗಳು, ಅದರ ಮಧ್ಯೆ ಜನಾಬ್ ಸುಹರಾವರ್ದಿ ಸಾಹೇಬರ ಬಂಗಾಳದ ಸರಕಾರ ಬಿಹಾರದ ದುಷ್ಕರವಾದ ಪರಿಸ್ಥಿತಿಯ ವಿಷಯವಾಗಿ ಸುಳ್ಳು ಸುದ್ದಿ ಹುಟ್ಟಿಸಿ ಅದನ್ನು ಹರಡುವ ಕೇಂದ್ರವಾಗಿತ್ತು. ಬಿಹಾರದ ಮುಸಲ್ಮಾನರಿಗೆ ಸಹಾಯ ನೀಡುವ ನೆಪದಲ್ಲಿ ಬಂಗಾಳದ ಸರಕಾರ ಮನೆಬಿಟ್ಟ ಮುಸಲ್ಮಾನರನ್ನು ಬಿಹಾರಕ್ಕೆ ಕಳುಹಿಸುತ್ತಿತ್ತು. ಅವರು ನಿರಾಶ್ರಿತರಲ್ಲಿ ದ್ವೇಷ–ತಿರಸ್ಕಾರವನ್ನು ಹೆಚ್ಚಿಸಿದರು, ಅದರಿಂದ ಆ ಕಾಂಗ್ರೆಸ್ ಕಾರ್ಯಕರ್ತರ ಮರ್ಯಾದೆ, ಸೇವೆ ಮಾಡುವುದರಲ್ಲಿದ್ದ ನಿಷ್ಠೆ ಎಲ್ಲ ಪಾಪ, ಕುಂಠಿತವಾಗುತ್ತಿತ್ತು. ಈ ಮುಸಲ್ಮಾನ ಗೂಂಡಾಗಳು ಒಂದಿಲ್ಲೊಂದು ಕಡೆ ಚೂರಿಯಲ್ಲಿ ಇರಿಯುತ್ತಿದ್ದರು, ಹೊಡೆದಾಟ ನಡೆಸುತ್ತಿದ್ದರು. ಇದರಿಂದ ದಂಗೆ ಸಮಯದಲ್ಲಿದ್ದ ವಿಷಮ ವಾತಾವರಣ ಕಳೆದು ಪೂರ್ತಿಯಾಗಿ ಶಾಂತಿ ನೆಲಸಿರಲಿಲ್ಲ, ಸುಳ್ಳುಪ್ರಚಾರ ಮಾಡುತ್ತಿದ್ದುದರಿಂದ ಮುಸಲ್ಮಾನ ಜನರು ಯಾವಾಗಲೂ ಹೆದರಿಕೊಂಡಿರುತ್ತಿದ್ದರು. ವಾತಾವರಣ ಎಲ್ಲ ಕಡೆ ಅಶ್ರದ್ಧೆ, ಅಪನಂಬಿಕೆ, ಭಯ, ಆತಂಕ ಮತ್ತು ತಿರಸ್ಕಾರದಿಂದ ದೂಷಿತವಾಗಿತ್ತು, ಬಾಪೂಜಿಯವರ ಅಹಿಂಸೆಯ ತೀವ್ರವಾದ ಒರೆಗಲ್ಲು ಇದಾಗಿತ್ತು.

೧೨ ಮಾರ್ಚಿ ೧೯೪೭ರಿಂದ ಬಾಪೂಜಿ ಬಿಹಾರದ ಹಳ್ಳಿಗಳಲ್ಲಿ ಸುತ್ತತೊಡಗಿದರು. ಅಲ್ಲಲ್ಲಿ ಹಿಂದೂ–ಮುಸಲ್ಮಾನರ ಎರಡೂ ಬಣಗಳಿಗೆ, ಅವರವರ ಕರ್ತವ್ಯಗಳನ್ನು ತಿಳಿಸತೊಡಗಿದರು. ೧೯೪೨ರಲ್ಲಿ ಸೋಷಲಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ರೈಲು ಹಳಿಗಳನ್ನು ಕಿತ್ತುಹಾಕಿದ್ದರು. ವಿದ್ಯುತ್ತಿನ ತಂತಿಗಳನ್ನು ಕಿತ್ತು ಹಾಕಿದ್ದರು, ಆ ಹಿಂಸೆಯ ಪ್ರತಿಫಲವಾಗಿ ಈಗ ಬಿಹಾರ ಹುಚ್ಚೆದ್ದುಹೋಗಿದೆ ಅಂತ ಬಾಪೂಜಿಗೆ ಸ್ಪಷ್ಟವಾಗಿ ಅನಿಸಿತ್ತು. ಬಿಹಾರದಲ್ಲಿ ಹರಡಿದ್ದ ಚಿಕ್ಕ–ಪುಟ್ಟ ಅರಾಜಕ ವಾತಾವರಣಕ್ಕೂ ಆ ಹಿಂಸೆಯೇ ಮೂಲ ಅಂತ ಅವರಿಗನಿಸಿತ್ತು. ಟ್ರೈನ್‌ನ ಚೈನು ಎಳೆಯುವುದು, ಟಿಕೆಟ್‌ಕೊಳ್ಳದೆ ಯಾತ್ರೆ ಮಾಡುವುದು, ಜಮೀನುದಾರನ ಫಸಲನ್ನು ಸುಟ್ಟು ಹಾಕುವುದು ಈ ತರಹೆಯವೆಲ್ಲ ಆ ಹಿಂಸೆಯ ಪರಿಣಾಮವಾಗೇ ಬಂದಿತ್ತು.

ಸದ್ಯ ೧೯೭೭ರ ಬಿಹಾರವನ್ನು ನೋಡಲು ಬಾಪೂಜಿ ಬದುಕಿಲ್ಲ. ಇವತ್ತಂತೂ ಬಿಹಾರದಲ್ಲಿ ಹೊರಡುವ ಟ್ರೈನ್‌ಗಳಲ್ಲಿ ಅರ್ಧಕ್ಕಿಂತ ಹೆಚ್ಚು ಪ್ರಯಾಣಿಕರು ಟಿಕೆಟ್‌ಕೊಂಡಿರುವದಿಲ್ಲ, ಪ್ರತಿಯೊಂದು ಸ್ಟೇಷನ್‌ನಲ್ಲೂ ಚೈನ್ ಎಳೆಯುವುದು, ಸರಕಾರಿ ಸಂಪತ್ತನ್ನು ಒಡೆದು ಹಾಳು ಮಾಡುವದು, ಸುಟ್ಟು ಹಾಕುವದು, ಬಿಹಾರದ ಕಲ್ಲಿದ್ದಲು ಗಣಿಗಳಲ್ಲಿ ಬೆಳಗಿನ ಹೊತ್ತಿನಲ್ಲೇ ಖೂನಿ, ಲೂಟಿ ಎಲ್ಲವೂ ಆಗುತ್ತೆ. ಸಂಜೆ ಆಗುತ್ತಿರುವ ಹಾಗೆ ಬಿಹಾರದ ಹಳ್ಳಿಜನ ಹೆದರಿಕೆಯಿಂದ ಮನೆ ಒಳಗೆ ಹೋಗಿ ಸೇರಿಕೊಂಡುಬಿಡುತ್ತಾರೆ, ಆದರೆ ಅವರು ಮಲಗಲಾಗುವುದಿಲ್ಲ, ಯಾವಾಗ ಯಾವ ಲೂಟಿಕೋರ ಬಂದು ಅವರನ್ನ ಲೂಟಿ ಮಾಡಿ ಎಲ್ಲಿ ಕತ್ತರಿಸಿಹಾಕುತ್ತಾನೋ ಅಂತ ಯಾರಿಗೂ ಗೊತ್ತಿರುವುದಿಲ್ಲ. ಪಟನಾ ನಗರದ ಹೊರಗೆ ಸರಕಾರಿ ಸುರಕ್ಷತೆಯ ವ್ಯವಸ್ಥೆ ಇಲ್ಲವೇ ಇಲ್ಲ; ಭ್ರಷ್ಟಾಚಾರ, ಹತ್ಯೆ, ಬಲಾತ್ಕಾರ, ಅಪಹರಣ, ಸುಟ್ಟು ಹಾಕುವುದು ಇವೆಲ್ಲಾ ಸಮಾಜದ ಸಾಮಾನ್ಯ ವ್ಯವಹಾರಗಳಾಗಿಬಿಟ್ಟಿವೆ. ಆ ಸಮಯದ ಹಿಂಸೆಯ ಬೀಜದಿಂದ ದೊಡ್ಡ ವಿಷವೃಕ್ಷ ಇಡೀ ಬಿಹಾರದಲ್ಲಿ, ಇಡೀ ದೇಶದಲ್ಲಿ ಎದ್ದು ನಿಂತಿದೆ ಅಂತ ಅನ್ನುವುದನ್ನ ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಈ ಅಮಾನುಷ ಅರಾಜಕತೆಯೆದುರು ನಾವೆಲ್ಲರು ವಿವಶರಾಗಿ, ಅಸಹಾಯಕರಾಗಿ ಬಿಟ್ಟಿದ್ದೇವೆ. ಇದಕ್ಕೆ ನಾವು ಮುಸಲ್ಮಾನರು ಹೊಣೆಗಾರರು ಅಂತ ಅನ್ನುವುದಕ್ಕಾಗುವುದಿಲ್ಲ, ಇದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಈ ದುಃಖಿತ ಸಮಾಜವನ್ನು ನೋಡದೆ ಇರುವ ಹಾಗೆ ಬಾಪೂಜಿಯನ್ನು ಗೋಡಸೆ ಕೊಂದು ಬಾಪೂಜಿಗೂ ನಮಗೂ ದೊಡ್ಡ ಉಪಕಾರ ಮಾಡಿದ ಅಂತ ನನಗೆ ಕೆಲವು ಸಾರಿ ಅನಿಸುತ್ತದೆ.

ಈ ಬಿಹಾರದ ಯಾತ್ರೆಯ ಸಮಯದಲ್ಲಿ ಗಡಿನಾಡು ಗಾಂಧಿ (ಬಾದ್‌ಷಾಹ್ ಖಾನ್) ಅಪೂರ್ವ ಸೇವಾಕಾರ್ಯ ಮಾಡಿದರು. ಬಾಪೂಜಿ ನೋವಾಖಾಲಿಗೆ ಹಿಂದಿರುಗುವುದಕ್ಕೆ ಮೊದಲು ಬಾದಷಾಹ್ ಖಾನ್ ಅವರು ತಮ್ಮ ಖುದಾಯೀ ಖಿದಮತ್‌ಗಾರರ ಜೊತೆ ಬಿಹಾರದ ಮುಸಲ್ಮಾನರು, ಹಿಂದೂಗಳು ಇಬ್ಬರನ್ನೂ ಶಾಂತಗೊಳಿಸಲು ಪ್ರಯತ್ನಿಸಿದರು. ಬಾಪೂಜಿ ಬಂದ ನಂತರ ಇಬ್ಬರೂ ಜೊತೆಯಲ್ಲಿ ಯಾತ್ರೆ ಮಾಡಲಾರಂಭಿಸದರು, ಬಾದಷಾಹ್ ಖಾನ್ ಆರು ಅಡಿಗಿಂತ ಎತ್ತರದ ಮನುಷ್ಯ, ಅವರ ಎದುರಿಗೆ ಐದು ಅಡಿ ಐದು ಇಂಚು ಎತ್ತರ ಮತ್ತು ೧೦೨ ಪೌಂಡ್ ತೂಕದ ಬಾಪೂಜಿ ತೀರ ಪುಟ್ಟದಾಗಿ ಕಾಣಿಸುತ್ತಿದ್ದರು. ಆದರೆ ಇಬ್ಬರಿಗೂ ಒಬ್ಬರನ್ನ ಕಂಡರಿನ್ನೊಬ್ಬರಿಗೆ ಅತಿಯಾಗಿ ಪ್ರೀತಿ, ಸೌಹಾರ್ದ, ಇಬ್ಬರೂ ಜೊತೆ ಜೊತೆಯಾಗಿ ಸುತ್ತುತ್ತಿದ್ದರು, ಬಾದಷಾಹ್ ಖಾನ್ ಮುಸಲ್ಮಾನರಿಗೂ ಬಯ್ಯಬಲ್ಲವರಾಗಿದ್ದರು, ಹಿಂದೂಗಳಿಗಂತೂ ಅವರನ್ನ ಕಂಡರೆ ಗೌರವ ಇದ್ದೇ ಇತ್ತು. ೧೯೩೪ರವರೆವಿಗಂತೂ ಮುಸಲ್ಮಾನರ ಮೇಲೂ ಬಾಪೂಜಿ ಅಷ್ಟೇ ಪ್ರಭಾವ

ಬೀರಿದ್ದರು, ಆದರೆ ಲೀಗ್‌ನವರು ವಿಷ ತುಂಬಿ ಪ್ರಚಾರ ಮಾಡುತ್ತಿದ್ದರು. ಹೀಗಾಗಿ ಬಾಪೂಜಿ ಭಾಷೆ ಸ್ವಲ್ಪ ಸಂಯಮಿತವಾಗಿತ್ತು, ಅದರಿಂದ ಅವರು ನೋವಾಖಲಿಯಲ್ಲಿ ಕೋಪ ಮಾಡಿಕೊಳ್ಳಲೇ ಇಲ್ಲ, ನೋವಿನಿಂದ ಕೂಡಿದ ಮಾತುಗಳನ್ನಾಡಿ ದಾರಿತಪ್ಪಿದ ಮುಸಲ್ಮಾನರಿಗೆ ಸರಿಯಾದ ಮಾರ್ಗದರ್ಶನ ಮಾಡಲು ಪ್ರಯತ್ನಿಸುತ್ತಿದ್ದರು. ಅದಕ್ಕೆ ವ್ಯತಿರಿಕ್ತವಾಗಿ ಅದೇ ಬಾಪೂಜಿ ಬಿಹಾರದಲ್ಲಿ ತನ್ನ ಹಳೆಯ ಮಿತ್ರರು ಅಜಾಗರೂಕತೆ ತೋರಿದರೆಂದು ಅವರ ಮೇಲೆಷ್ಟೋ ಬಾರಿ ಬಹಳ ಕೋಪ ಮಾಡಿಕೊಳ್ಳುತ್ತಿದ್ದರು, ಮುಸಲ್ಮಾನ ಅಥವಾ ಯಾರಿಗಾದರಾಗಲಿ, ಸಂರಕ್ಷಣೆಗಾಗಿ ಆಯುಧಗಳನ್ನು ಕೊಡುವುದನ್ನು ಬಾಪೂಜಿ ತೀವ್ರವಾಗಿ ವಿರೋಧಿಸುತ್ತಿದ್ದರು. ಬಂದೂಕದ ಗುಂಡು ಇನ್ನೂ ಅನುಭವವಿಲ್ಲದ್ದು; ಅದರಿಂದ ಅದು ಅನ್ಯಾಯ ಮಾಡುತ್ತದೆ ಅಂತ ಬಾಪೂಜಿ ದೃಢವಾಗಿ ನಂಬಿದ್ದರು. ಅದು ಅವರ ಅನುಭವ ಕೂಡ ಆಗಿತ್ತು, ಅಂತಹ ಸ್ಥಿತಿಯಲ್ಲಿ ಬಂದೂಕ ಹಿಡಿದವನ ದೌರ್ಬಲ್ಯ ಪ್ರಕಟವಾಗುತ್ತೆ. ಎಷ್ಟೋ ಜನ ಮುಸಲ್ಮಾನರು ತಮಗೆ ಭೂಮಿ, ಮನೆ ಕೊಟ್ಟು ಬೇರೆ ಸಮೂಹದಲ್ಲಿ ಇರುವಂಥ ವ್ಯವಸ್ಥೆ ಇರಬೇಕು ಅಂತ ಇಷ್ಟ ಪಡುತ್ತಿದ್ದರು, ಬಾಪೂಜಿಗೆ ಈ ಬೇಡಿಕೆ ಸರಿಯಲ್ಲ ಅಂತ ಅನಿಸುತ್ತಿತ್ತು, ಹಾಗೆ ಮಾಡಿದ್ದರೆ ಅದರಿಂದ ಎಷ್ಟೋ ಪಾಕಿಸ್ತಾನಗಳು ಆಗುತ್ತಿದ್ದವು. ಕಣ್ಣೆದುರಿಗೆ ಕೋಮುವಾದದ ಸಮರ್ಥನೆ ನಡೆದು, ಇಡೀ ಸಮಾಜ ಹೊತ್ತಿ ಉರಿಯುತ್ತಿರುತ್ತಿತ್ತು.

ಈ ಮಧ್ಯದಲ್ಲೇ ಜಿನ್ನಾ ಸಾಹೇಬರ ಮುಸ್ಲಿಂ ಲೀಗ್ ಒಂದು ವಿಚಿತ್ರ ಸಿದ್ಧಾಂತವನ್ನು ಮಂಡಿಸಿತು. ಅವರ ಅಭಿಪ್ರಾಯದಂತೆ ಬಿಹಾರದ ಆದಿವಾಸಿಗಳು ಮೂಲತಃ ಹಿಂದೂಗಳಾಗಿರಲಿಲ್ಲ. ಅದರಿಂದ ಆದಿವಾಸಿಗಳ ಕ್ಷೇತ್ರವನ್ನು ಪಾಕಿಸ್ತಾನದ ಜೊತೆಗೆ ಸೇರಿಸಿಬಿಡಬೇಕು, ಝಾರಖಂಡವನ್ನ ಮುಸ್ಲಿಂ ಸರಕಾರದೊಳಕ್ಕೆ ಸೇರಿಸಬೇಕು, ಆಗ ಜಿನ್ನಾ ಸಾಹಬರು, ಮುಸ್ಲಿಂ ಜಮಾತಗೆ ಬೇರೆ ಭೂಮಿ ಕೊಟ್ಟು ಅದನ್ನ ಬೇರೆ ವ್ಯವಸ್ಥೆಯ ಸುಪರ್ದಿಗೆ ಕೊಡಬೇಕು ಅಂತ ಹೇಳುತ್ತಿದ್ದರು. ಈ ಸಿದ್ಧಾಂತದಲ್ಲಿ ಕೊನೆಯ ಪಕ್ಷವೆಂದರೆ ಬಿಹಾರದ ನಾಲ್ಕೈದು ಜಿಲ್ಲೆಗಳು ಎಂದೆಂದಿಗೂ ಮುಸಲ್ಮಾನರಿಗೆ ಕೊಟ್ಟು ಜೊತೆಗೆ ಝಾರಖಂಡವೂ ಸೇರಿ ಈ ಮುಸ್ಲಿಂ ಜಿಲ್ಲೆಗೆ ಛೋಟಾನಾಗಪುರದಿಂದ ಜಮ್‌ಷೆಡ್‌ಪುರದ ಉಕ್ಕಿನ ಕಾರ್ಖಾನೆ ಅವರ ವಶದಲ್ಲಿ ಇರುತ್ತಿತ್ತು. ಅಲ್ಲಿಂದ ಸ್ವಲ್ಪ ದೂರದಲ್ಲೇ ನಿಝಾಮನ ಹೈದರಾಬಾದ್ ರಾಜ್ಯವಿತ್ತು, ಗೋವಾ ಬಂದರು ವಿಷಯವಾಗಿ ಪೋರ್ಚುಗೀಸರ ಜೊತೆ ನಿಝಾಮ್ ಮಾತನಾಡುತ್ತಿದ್ದರಂತೆ. ಹಾಗಾಗಿದ್ದರೆ ಗೋವಾದ ಸಮುದ್ರದವರೆಗೆ ಪಾಕಿಸ್ತಾನ ಹರಡಿರುತ್ತಿತ್ತು ಮತ್ತು ಹಿಂದೂ ಬಹುಸಂಖ್ಯೆ ತುಂಡರಿಸಿ ಅಲ್ಲಿ–ಇಲ್ಲಿ ಹಂಚಿ ಹೋಗಿರುತ್ತಿತ್ತು. ಆಗ ಪಾಕಿಸ್ತಾನಕ್ಕೆ ದಕ್ಷಿಣದ ತಮಿಳರ ಮೇಲೆ ಅಧಿಕಾರ ಚಲಾಯಿಸುವುದೇನೂ ಕಷ್ಟವಾಗುತ್ತಿರಲಿಲ್ಲ. ಜಿನ್ನಾ ಸಾಹಬ್ ಈ ದ್ರಾವಿಡರನ್ನು

ಉತ್ತರ ಭಾರತದಿಂದ ಬೇರೆ ಮಾಡಿ ಪಾಕಿಸ್ತಾನಕ್ಕೆ ಸೇರಿಸಿಕೊಳ್ಳಬೇಕು ಎಂದು ಕನಸು ಕಾಣುತ್ತಿದ್ದರು. ಹೀಗೆ ಇಡೀ ಹಿಂದೂಸ್ತಾನದಲ್ಲೇ ಪಾಕಿಸ್ತಾನ ಆಗುತ್ತಿತ್ತು; ಹಿಂದೂ ಪರಾಜಿತರಾಗುತ್ತಿದ್ದರು; ಮಿಕ್ಕ ಕೆಲಸ ಬೇರೆ ದೇಶಿರಾಜರುಗಳು ಮಾಡೇಮಾಡುತ್ತಿದ್ದರು, ಇಡೀ ದೇಶ ಮುಸಲ್ಮಾನರ ಅಧಿಕಾರಕ್ಕೆ ಒಳಪಟ್ಟಿರುತ್ತಿತ್ತು.

ಇದು ನಾನು ಹುಟ್ಟಿಸಿರುವ ಕಥೆ ಎಂದು ಓದುಗರು ಅಂದುಕೊಳ್ಳಬಾರದು. ಆ ದಿನಗಳಲ್ಲಿ ಈ ಉದ್ದೇಶದ ಒಂದು ನಕ್ಷೆ ಕೂಡ ಮುದ್ರಿಸಿದ್ದರು, ಜೊತೆಗೆ ಮುಸ್ಲಿಂ ಲೀಗ್‌ನವರು 'ಹ್ಸಸ್‌ಕೆ ಲಿಯಾ ಪಾಕಿಸ್ತಾನ್, ಲಡಕೆ ಲೇಂಗೇ ಹಿಂದೂಸ್ತಾನ್' ಎಂಬ ಘೋಷಣೆ ಕೂಡ ಹುಟ್ಟಿಸಿದ್ದರು. ನಿಜವಾಗಿಯೂ ತಮಾಷೆಯಾಗೇ ಪಾಕಿಸ್ತಾನದ ಕಲ್ಪನೆ ಕೂಡ ಹುಟ್ಟಿದ್ದು, ಕಷ್ಟಪಡದೇ ಪಾಕಿಸ್ತಾನ ಸಿಗುವ ಕ್ಷಣ ಕೂಡ ಬಂದಿತ್ತು, ಮುಸಲ್ಮಾನರು ಸ್ವಲ್ಪ ಬಲಿದಾನ ಮಾಡಿದರೆ ಪೂರ್ತಿ ಹಿಂದೂಸ್ತಾನನೇ ನಮ್ಮದಾಗುತ್ತೆ ಎಂದು ಜಿನ್ನಾ ಯೋಚಿಸಿದ್ದರು. ಆ ದಿವಸಗಳಲ್ಲಿ ಲೀಗ್ 'ಬಿಹಾರ ವಿಭಜನೆ' ಅನ್ನುವ ಪತ್ರಿಕೆಯನ್ನೂ ಹಂಚಿದ್ದಿತು. ಬಂಗಾಳದ ಮುಸಲ್ಮಾನರಿಗೆ ತಾವು ಜಾಗ ಬದಲಾಯಿಸಿ ಬಹುಮತ ತೆಗೆದುಕೊಂಡು ಹೋಗ್ತೀವಿ ಅಂತ ಆಸೆ ಕೂಡ ಇತ್ತು. ಬಿಹಾರ ವಿಭಜನೆಯ ಕಲ್ಪನೆಯಲ್ಲಿ ೫೦ ಲಕ್ಷ ಮುಸಲ್ಮಾನರಿಗೆ ಪೂರ್ಣಿಯಾ, ದಕ್ಷಿಣ ಭಾಗಲಪುರ, ದಕ್ಷಿಣ ಮೋಂಘೀರ, ಪಟನಾದ ಪೂರ್ತಿ ಜಿಲ್ಲೆ, ಜಹಾನಾಬಾದ್ ಸಬ್ ಡಿವಿಜ಼ನ್, ನವಾದಾ, ಗಯಾದ ಸದರ್ ಸಬ್‌ಡಿವಿಜ಼ನ್– ಇವನ್ನೆಲ್ಲಾ ಮುಸಲ್ಮಾನರಿಗೆ ಕೊಡಬೇಕಾಗಿತ್ತು. ಇದರ ಜೊತೆಗೆ ಛೋಟಾ ನಾಗಪುರ, ಸಂಥಾಲ ಪರಗಣವನ್ನೂ ಬಿಹಾರದಿಂದ ಬೇರ್ಪಡಿಸಿ ಮುಸ್ಲಿಂ ಜಿಲ್ಲೆಗಳಿಗೆ ಸೇರಿಸಿ ನಂತರ ಒಂದು ಬಲಶಾಲಿ ಪಾಕಿಸ್ತಾನ ಆಗಬಹುದಾಗಿತ್ತು. ಮುಸಲ್ಮಾನರ ಈ ಕಲ್ಪನೆಯನ್ನು ಬಾಪೂಜಿ ತಿಳಿದುಕೊಂಡಿದ್ದರು, ಅದರಿಂದ ಮುಸಲ್ಮಾನರು ಬೇರೆ ವಿಭಾಗವೇ ಬೇಕು ಎಂದು ಕೇಳಿದ್ದನ್ನು ಬಾಪೂಜಿ ಪ್ರೋತ್ಸಾಹಿಸಿರಲಿಲ್ಲ. ದೇವರ ದಯೆಯಿಂದ, ಬಾಪೂಜಿಗೆ ಸತ್ಯಶೋಧನೆಯ ಪ್ರಾಮಾಣಿಕ ರಾಜಕೀಯದೊಂದಿಗೆ ದೂರದರ್ಶಿತ್ವ ಕೂಡ ಸಿಕ್ಕಿತ್ತು. ಸ್ವಲ್ಪ ಹೆಚ್ಚುಕಡಿಮೆ ಆಗಿದ್ದರೂ ಜಿನ್ನಾ ಸ್ವಪ್ನ ಬಹುಶಃ ಪರಿಪೂರ್ಣವಾಗಿರುತ್ತಿತ್ತೇನೋ. ಪ್ರಾರ್ಥನಾ ಸಭೆಯ ಪ್ರವಚನಗಳ ನೆಪದಲ್ಲಿ ರಾಜಕೀಯದ ಬಗ್ಗೆ ಮಾತನಾಡುತ್ತಾರೆಂದು ಎಷ್ಟೋ ಜನ ಪತ್ರಕರ್ತರು, ಮುಸಲ್ಮಾನರು ಬಾಪೂಜಿಗೇ ಹೇಳಿದರು, ಅದಕ್ಕೆ ಬಾಪೂಜಿ ನನಗೆ ರಾಜಕೀಯವೆಂದರೆ ಏನೂ ವಿರೋಧವಿಲ್ಲ ಎಂದು ಬಿಚ್ಚಿ ನುಡಿದರು: ಮನುಷ್ಯನ ಜೀವನವನ್ನು ಬೇರೆ ಬೇರೆ ಭಾಗಗಳಾಗಿ ಹಂಚಲಾಗುವುದಿಲ್ಲ ಹಾಗೆಯೇ ರಾಜಕೀಯದಿಂದ ನೈತಿಕತೆಯನ್ನೂ ಬೇರ್ಪಡಿಸಲಾಗುವುದಿಲ್ಲ. ರಾಜಕೀಯ ನೈತಿಕ ನೀತಿ ಇವು ಪರಸ್ಪರವಾಗಿ ಒಂದನ್ನೊಂದು ಪ್ರಭಾವಿತಗೊಳಿಸುತ್ತವೆ. ಆಗ ಇನ್ನೊಬ್ಬ ಮಿತ್ರ ಇದು ಧರ್ಮ ಮತ್ತು ನೀತಿಯ ಪ್ರಶ್ನೆಯಲ್ಲ, ಹಿಂದೂ–ಮುಸಲ್ಮಾನರ ನಡುವೆ ವೈಮನಸ್ಯ

ರಾಜಕೀಯದ ವಿಷಯವೇ. ಧರ್ಮದ ಢೋಂಗಿ ನಡೆಯುತ್ತದೆ, ಬಾಕಿ ರಾಜಕೀಯದ ಮೋಸದಲ್ಲಿ ಧರ್ಮವನ್ನ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆಂದರು. ಅದಕ್ಕೆ ಬಾಪೂಜಿ, "ಇದು ರಾಜಕೀಯಕ್ಕೆ ಸಂಬಂಧಪಟ್ಟ ವಿಷಯವೆಂದೊಪ್ಪಿಕೊಳ್ಳುತ್ತೇನೆ, ಆದರೆ ಇದರರ್ಥ ಸಭ್ಯತೆ, ಸದಾಚಾರ, ಆಚಾರ–ವಿಚಾರಗಳ ಶಿಷ್ಟಾಚಾರಕ್ಕೆ ತಿಲಾಂಜಲಿ ಕೊಟ್ಟುಬಿಡಬೇಕು ಎಂದಲ್ಲ, ದೇಶದ ಜನ ತಮ್ಮ ರಾಜಕೀಯದ ಪ್ರಶ್ನೆಗಳನ್ನು ಅಣ್ಣ–ತಮ್ಮಂದಿರ ಹಾಗೆ ಪರಿಹರಿಸಿಕೊಳ್ಳದಿದ್ದರೆ ಅವರ ಭಾಗ್ಯದಲ್ಲಿ ಘೋರ ದಾಸ್ಯ ಅಷ್ಟೇ ಬರೆದಿರುತ್ತದೆ ಎನ್ನಬೇಕು" ಎಂದರು.

ನೋವಾಖಲಿಯ ಮುಸಲ್ಮಾನರು ಬಾಪೂಜಿಯ ಬಗ್ಗೆ ಅನುಮಾನ ಪಡುತ್ತಿದ್ದರು, ಬಿಹಾರದ ಮುಸಲ್ಮಾನ ಈ ಶಾಂತಿದೂತನನ್ನು ಕಂಡು ಮುಗ್ಧನಾಗಿದ್ದ. ಮುಸ್ಲಿಮ್ ಲೀಗ್ ವಾಸ್ತವವಾಗಿ ಮುಸಲ್ಮಾನರ ಸಂಸ್ಥೆಯಾಗಿತ್ತು, ಆದರೆ ಅದರ ಪ್ರಚಾರ ಮತ್ತು ಕಾರ್ಯದ ನಡುವೆ ದೊಡ್ಡ ವ್ಯತ್ಯಾಸವಿತ್ತು, ಬಡ ಮುಸಲ್ಮಾನನ ಸ್ಥಿತಿ ಕುರಿತು ಲೀಗ್ ಏನೂ ಹೆಚ್ಚು ಆಸಕ್ತಿ ತೋರಿಸಲಿಲ್ಲ. ಜಿನ್ನಾ ಸಾಹಬ್ ಭೋಪಾಲದ ನವಾಬನ ಹಾಗೆ, ಹೈದರಾಬಾದ್‌ನ ನಿಜಾಮನ ಹಾಗೆ ಆಗಬೇಕೆಂದು ಬಯಸಿದ್ದರು, ರೈತರ ಕಷ್ಟಗಳನ್ನು ನಿವಾರಿಸುವ ಯಾವ ಉದ್ದೇಶವೂ ಅವರಿಗಿರಲಿಲ್ಲ. ಬಾಪೂಜಿ ನೋವಾಖಲಿಯಲ್ಲಿ ಅಲ್ಪಸಂಖ್ಯಾತರಾಗಿದ್ದ ಹಿಂದೂಗಳ ಸೇವೆ ಮಾಡುತ್ತಿದ್ದ ಹಾಗೆಯೇ ಬಿಹಾರದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಸೇವೆಯನ್ನು ಮಾಡುತ್ತಾ ಇದ್ದರು. ಭಿನ್ನಾಭಿಪ್ರಾಯವನ್ನುಳ್ಳ ಅಲ್ಪಸಂಖ್ಯಾತರನ್ನು ಸರಿಯಾಗಿ ನೋಡಿಕೊಂಡರೆ ಬಹುಜನಾಭಿಪ್ರಾಯ ಸಹಜವಾಗಿಯೇ ಮೂಡುತ್ತದೆ ಎಂದು ಗಾಂಧೀಜಿ ನಂಬಿದ್ದರು. ಬಾಪೂಜಿ ಸಾರ್ವಜನಿಕರ ಪರವಾಗಿ ಮಾತನಾಡುವುದು ಓದಿ–ಬರೆದ ಮುಸಲ್ಮಾನರಿಗೆ ಇಷ್ಟವಾಗುತ್ತಿರಲಿಲ್ಲ. ಅವರುಗಳಂತೂ ಪಾಕಿಸ್ತಾನದ ಕನಸು ಕಾಣುತ್ತಿದ್ದವರು, ಬಾಪೂಜಿ ಹಳ್ಳಿಗಳಲ್ಲೆಲ್ಲಾ ಶಾಂತಿ ಸಮಿತಿಗಳನ್ನು ರಚಿಸಿದ್ದರು, ಇವತ್ತು ಇದನ್ನೆಲ್ಲಾ ನಂಬಲೂ ಕಷ್ಟವಾಗುತ್ತದೆ. ಆದರೆ ಆ ಪಂಚಾಯಿತಿಗಳ ಅಧ್ಯಕ್ಷರು ಶರಣಾರ್ಥಿ ಶಿಬಿರಗಳಿಗೆ ಹೋಗಿ ತಮ್ಮೂರಿಗೆ ಮುಸಲ್ಮಾನರನ್ನು ಗೌರವದಿಂದ ಹಿಂದಕ್ಕೆ ಕರೆತಂದಿದ್ದರು. ಸರಕಾರ ಅವರ ಊಟ–ತಿಂಡಿ, ಆಹಾರ ಪದಾರ್ಥಗಳು, ರೇಷನ್‌ಗೆ ಏರ್ಪಾಡು ಮಾಡಿರಲಿಲ್ಲ, 'ನಮ್ಮ ಹಳ್ಳಿ ಅವರ ಊಟದ ವ್ಯವಸ್ಥೆ ಮಾಡುತ್ತದೆ' ಅಂತ ಸ್ವಾಭಿಮಾನದೊಂದಿಗೆ ಈ ಮುಸ್ಲಿಂ ಪರಿವಾರಗಳನ್ನು ಆ ಹಿಂದೂಗಳು ವಾಪಸ್ಸು ಹಳ್ಳಿಗೆ ಕರೆದೊಯ್ದಿದ್ದರು. ಇಷ್ಟು ವಿಧ್ವಂಸಗಳಾದ ಮಧ್ಯದಲ್ಲೂ ಹಿಂದೂಗಳು ತಮ್ಮ ನೆರೆ–ಹೊರೆಯವರ ಪ್ರಾಣವನ್ನ ಉಳಿಸಿದ್ದರು ಅನ್ನುವ ಅನೇಕ ಸಂಗತಿಗಳು ಆಗ ಕಾಣಿಸಿದ್ದವು, ಕ್ರೌರ್ಯದ ಘಟನೆಗಳ ಹಾಗೆಯೇ ಕರುಣೆ ಮತ್ತು ಸೌಜನ್ಯದ ಕತೆಗಳೂ ಇದ್ದವು. ಇಲ್ಲಿ ಡಿ.ಐ.ಜಿ. (ಸಿ.ಐ.ಡಿ) ಹಮೀದ್ ಸಾಹಬ್‌ರ ೧೮ ಸೆಪ್ಟೆಂಬರ್ ೧೯೪೭ರ ವರದಿಯ ಒಂದೆರಡು ಘಟನೆಗಳನ್ನು ಉಲ್ಲೇಖಿಸುವುದು

ಸಾಕಾಗುತ್ತದೆ. ಬರ್ರ್ ಠಾಣೆಯ ಗಂಜ್ ಹಳ್ಳಿಯ ಗೊಲ್ಲರು ಅಹಿಂಜನ ಗ್ರಾಮದ ಜನ ೬೦೦ ಮುಸಲ್ಮಾನರನ್ನು ರಕ್ಷಿಸಿದ್ದರು, ಇನ್ನೊಂದು ಹಳ್ಳಿಯಲ್ಲಿ ಹಿಂದೂಗಳು ೪೦೦ ಜನ ಮುಸಲ್ಮಾನರಿಗೆ ಆಶ್ರಯ ಕೊಟ್ಟರು. ಗುಂಪು ಹಲ್ಲೆ ಮಾಡಿದಾಗ ಹಿಂದೂಗಳು ಅವರ ಜೊತೆ ಕಾದಾಡಿದ್ದರು, ಆದರೆ ಒಬ್ಬ ಮುಸಲ್ಮಾನನ್ನು ಕೂಡ ಈ ಭಯಂಕರವಾದ ಗುಂಪಿಗೆ ಒಪ್ಪಿಸಲಿಲ್ಲ, ಮತ್ತೆ–ಮತ್ತೆ ಆಕ್ರಮಣಗಳಾದವು, ಆದರೆ ಹಿಂದೂ ಗ್ರಾಮಗಳ ಜನ ತಮಗಾದ ನಷ್ಟವನ್ನು ಸಹಿಸಿಕೊಂಡು ಮುಸಲ್ಮಾನರನ್ನುಳಿಸಿದ್ದರು. ಕೊನೆಗೆ ನಿರಾಶೆಗೊಂಡು ಗುಂಪು ಚಲ್ಲಿಹೋಯಿತು. ಹೀಗೆ ಒಂದು ಹಳ್ಳಿಯ ರಾಜಪೂತರು ತಮ್ಮ ಮುಸಲ್ಮಾನ ಸಹಚರರನ್ನು ರಕ್ಷಿಸಿದರು, ಕಂಸಾರಿ ಗ್ರಾಮದ ಒಬ್ಬ ಹಿಂದೂ ರೈತನು ೪೮ ಜನ ಮುಸಲ್ಮಾನರನ್ನು ಹದಿನಾಲ್ಕು ದಿನಗಳವರೆಗೆ ಬಚ್ಚಿಟ್ಟಿದ್ದ, ಕುಪಿತರಾಗಿದ್ದ ಜನರು ಎರಡುಬಾರಿ ಹಲ್ಲೆ ಮಾಡಿದರಾದರೂ ಆ ರೈತ ಒಪ್ಪಲಿಲ್ಲ. ಇದೇ ರೀತಿ ಹಿಲಸಾ ಹಳ್ಳಿಯ ಹಿಂದೂ–ಮುಸಲ್ಮಾನರು ಸೇರಿಕೊಂಡು ಆಕ್ರಮಣ ಮಾಡುತ್ತಿದ್ದ ಗುಂಪನ್ನು ಎದುರಿಸಿದರು, ಅದರಲ್ಲಿ ೧೦ ಜನ ಹಿಂದೂಗಳು ಸತ್ತರು, ಇನ್ನೂ ಎಷ್ಟೋ ಜನಕ್ಕೆ ಗಾಯಗಳಾದವು, ಆದರೆ ಮುಸಲ್ಮಾನರು ಉಳಿದುಕೊಂಡರು. ಪರಸಾ ಹಳ್ಳಿಯ ಮಾರ್ಕೆಟ್‌ನಲ್ಲಿ ಉದ್ರಿಕ್ತವಾಗಿದ್ದ ಗುಂಪು ಅನೇಕ ಮಂದಿ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿದ್ದರು. ಕಾಂಗ್ರೆಸ್ ಕಾರ್ಯಕರ್ತರು ಆಗ ಒಬ್ಬ ಮುಸಲ್ಮಾನ ಡಾಕ್ಟರನನ್ನು ಉಳಿಸುತ್ತಿದ್ದರು. ಕೊನೆಗೂ ಕಾಂಗ್ರೆಸ್ಸಿಗರು ಆ ಮುಸಲ್ಮಾನ ಡಾಕ್ಟರನ್ನು ಉಳಿಸಿದರು, ಮಹಾರಾಜಗಂಜ್‌ನಲ್ಲಿ ಒಬ್ಬ ಮುಸಲ್ಮಾನ ಹಿಂದೂ ಮಹಿಳೆಯೊಬ್ಬಳ ಮೇಲೆ ಹಲ್ಲೆ ಮಾಡಿದ್ದ, ಅದರಿಂದ ಕೋಪಾವೇಶದಲ್ಲಿ ಹಿಂದೂ ಗುಂಪು ಪೂರ್ತಿ ಮೊಹಲ್ಲೆಗೆ ಬೆಂಕಿ ಹಚ್ಚಿ ಎಲ್ಲಾ ಮುಸಲ್ಮಾನರನ್ನೂ ಕೊಂದು ಮುಗಿಸಬೇಕೆಂದಿತ್ತು. ಒಂದು ಮನೆಗೆ ಬೆಂಕಿ ಹಚ್ಚಿದ್ದರು, ಅಷ್ಟರಲ್ಲಿ ಒಬ್ಬ ರಾಜಪೂತ ಹೆಣ್ಣು ಹುಡುಗಿ ಗುಂಪನ್ನು ಸಮಾಧಾನಪಡಿಸಲು ಪ್ರಯತ್ನಿಸತೊಡಗಿದಳು. ಮುಸಲ್ಮಾನರನ್ನು ಉಳಿಸುವ ಕೆಲಸಕ್ಕೆ ತೊಡಗಿದಳು, ಆದರೆ ಗುಂಪು ಆ ಕಿಶೋರಿಯ ಮಾತು ಕೇಳಲಿಲ್ಲ, ಆಗ ಹುಡುಗಿ ಆ ಬೆಂಕಿಯಲ್ಲಿ ಬಿದ್ದು ತಾನು ಪ್ರಾಣಬಿಡುವೆನೆಂದು ಅವರಿಗೆ ಹೆದರಿಸಿದಳು, ಆಗ ಗುಂಪು ಅಲ್ಲಿಂದ ಹೊರಟುಹೋಯಿತು, ಹಾಗೂ ಮುಸಲ್ಮಾನರು ಉಳಿದುಕೊಂಡರು. ಎಂತಹ ಪರಾಕ್ರಮ ! ಎಂತಹ ನಿಷ್ಠೆ ! ಆ ರಿಪೋರ್ಟನ್ನು ಮುಸಲ್ಮಾನ ಡಿ.ಐ.ಜಿ. ಬರೆಯದೆ ಇದ್ದಿದ್ದರೆ ಬಹುಶಃ ನಾನು ಕೂಡ ಇದೊಂದು ಕಾಲ್ಪನಿಕ ಕತೆ ಎಂದು ಹೇಳಿ ಉದಾಸೀನಳಾಗುತ್ತಿದ್ದೆ. ಹಮೀದ್ ಸಾಹಬರು ಆ ರಾಜಪೂತ ಬಾಲಕಿಯ ಹೆಸರನ್ನು ಕೊಟ್ಟಿಲ್ಲ, ಇಲ್ಲದಿದ್ದರೆ ನಾನು ಅವಳನ್ನು ಹುಡುಕಿ ಪೂರ್ತಿ ಸಮಾಜದ ವತಿಯಿಂದ ಆ ಹೆಸರು ತಿಳಿಯದ ಷೋಡಶಿಗೆ ನನ್ನ ಕೃತಜ್ಞತೆ ಸಲ್ಲಿಸಬಹುದಿತ್ತು.

ಬಾಪೂಜಿ ಮಸೌರೀಹ ಗ್ರಾಮವನ್ನು ತಲಪಿದಾಗ ಅಲ್ಲಾಗಿದ್ದ ಹಾಳು

ನೋಡಲಾಗದಿತ್ತು. ರಸ್ತೆಗಳಲ್ಲಿ ವಿನಾಶದ ರಾಶಿ ಬಿದ್ದಿತ್ತು, ಕೊಳೆತ ಹೆಣಗಳ ದುರ್ಗಂಧ ಅಸಹ್ಯವಾಗಿತ್ತು, ಬಾಪೂಜಿ ತಮ್ಮ ಮನಸ್ಸಿನ ದುಃಖವನ್ನು ಪ್ರಾರ್ಥನಾ ಸಭೆಯಲ್ಲಿ ಪ್ರಕಟಪಡಿಸಿದರು. ಇದರಿಂದ ಪ್ರಭಾವಿತರಾದ ೫೦ ಮಂದಿ ಹಿಂದೂಗಳು ಸಾರ್ವಜನಿಕವಾಗಿ ಪೊಲೀಸರಿಗೆ ತಮ್ಮನ್ನು ಒಪ್ಪಿಸಿಕೊಂಡರು. ಆದರೆ ಬೇಡಿ ತೊಡಿಸಬಾರದು ಅನ್ನುವಷ್ಟರ ಮಟ್ಟಿಗೆ ಸಭ್ಯತೆ ಆ ಪೊಲೀಸಿನವರಲ್ಲಿ ಉಳಿದಿರಲಿಲ್ಲ. ಇದು ಸ್ವ–ಇಚ್ಛೆಯಿಂದ ಆದ ಸಮರ್ಪಣೆಯಾಗಿತ್ತು, ಇದರಲ್ಲಿ ಕಳಂಕವೆಲ್ಲಾ ತೊಡೆದುಹೋಗಿತ್ತು, ಮಸೌರೀಹಾದಲ್ಲಿ ಬಾಪೂಜಿ ಪ್ರಾರ್ಥನಾ ವೇದಿಕೆಯ ಮೇಲಕ್ಕೆ ಹೋಗುತ್ತಿದ್ದಾಗ ಅವರ ಕೈಗೆ ಎರಡು ಪತ್ರಗಳನ್ನು ಕೊಡಲಾಯಿತು. ಒಂದು ಪತ್ರ ಸೈನ್ ಹಳ್ಳಿಯ ನಿವಾಸಿಗಳದ್ದು. ಸೈನ್ ಗ್ರಾಮದಲ್ಲಿ ಹಿಂದೂ–ಮುಸಲ್ಮಾನರಿಬ್ಬರೂ ಒಗ್ಗಟ್ಟಿನಿಂದ ಬದುಕಿದ್ದರು, ಆದರೆ ಸುತ್ತ–ಮುತ್ತಣ ದಂಗೆಗಳಿಂದ ಸೈನ್ ನಿವಾಸಿಗಳು ಕ್ರೋಧಿತರಾಗಿದ್ದರು. ಮುಸಲ್ಮಾನರ ಪರಿಹಾರ ನಿಧಿಗಾಗಿ ಅವರು ಸ್ವಲ್ಪ ಹಣವನ್ನು ಕೊಟ್ಟರು. ಬಾರನಿ ಗ್ರಾಮದ ಜನರದ್ದೂ ಇದೇ ಉದ್ದೇಶವಿದ್ದ ಇನ್ನೊಂದು ಪತ್ರ, ಈ ಎರಡು ಹಳ್ಳಿಗಳ ಜನ ತಾವು ಈ ಕೋಮುವಾದಿ ಹುಚ್ಚಾಟದಿಂದ ದೂರವಿರುವುದಾಗಿ ಆಶ್ವಾಸನೆ ನೀಡಿದ್ದರು.

ಮಾರ್ಚ್ ೧೯ಕ್ಕೆ ಬಾಪೂಜಿ ವೀರಗಾಂವ್‌ಗೆ ಹೋಗಿದ್ದರು, ಅಲ್ಲಿ ಅವರು ಹಳೆಯ ನೆನಪನ್ನು ಹೊಸತು ಮಾಡಿಕೊಂಡು ಹೇಳಿದರು: "೧೯೧೭ರಲ್ಲಿ ಅಪರಿಚಿತನಾಗಿದ್ದ ಗಾಂಧಿಯನ್ನು ತನ್ನವನನ್ನಾಗಿ ಸ್ವೀಕರಿಸಿದ ಪ್ರಾಂತ ಬಿಹಾರ. ಈಗ ಬಿಹಾರದ ಮರ್ಯಾದೆಗಾಗಿ ನಾನು ಸಾಯಲೂ ಸಿದ್ಧವಾಗಿದ್ದೇನೆ, ಬಿಹಾರದ ಋಣವನ್ನು ನಾನು ಮರೆತಿಲ್ಲ, ಚಂಪಾರಣ್ಯದಲ್ಲಿ ಸಫಲವಾಗಿದ್ದು ಬಿಹಾರಿಗಳ ಶುದ್ಧ ತಪಸ್ಸಿನಿಂದಾಗಿ. ಈಗ ೩೦ ವರ್ಷಗಳ ನಂತರ ಇದೇ ಚಂಪಾರಣ್ಯದ ಮಹಿಮೆಯನ್ನು ಜಾಗೃತಗೊಳಿಸಬೇಕು ಮತ್ತದೇ ಪ್ರಖರ ಬಲಿದಾನ ಅಗತ್ಯವಾಗಿದೆ, ಹಾಗಿಲ್ಲದಲ್ಲಿ ಈ ದುಃಖಿತ ದೇಶ ಎಂದೆಂದಿಗೂ ಹೀಗೆಯೇ ಅಲೆಯುತ್ತಿರುತ್ತದೆ."

ಅಂಡಾರಿ ಗ್ರಾಮದಲ್ಲಿ ಕೋಪತಾಪ ತೀವ್ರವಾಗಿತ್ತು. ಆದರೆ, ಅಲ್ಲಿಯ ಮಸೀದಿ ಪೂರ್ಣವಾಗಿ ಸುರಕ್ಷಿತವಾಗಿತ್ತು. ಈ ವಿನಾಶದ ಮುಖಂಡನಾಗಿದ್ದ ವ್ಯಕ್ತಿ ಸ್ವ–ಇಚ್ಛೆಯಿಂದ ತನ್ನ ಅಪರಾಧವನ್ನೊಪ್ಪಿಕೊಂಡು ಶರಣಾಗಿದ್ದ. ಅಂಡಾರಿ ಗ್ರಾಮದ ಜನ ಬಾಪೂಜಿಗೆ ಪಶ್ಚಾತ್ತಾಪದ ಪತ್ರ ಬರೆದರು, ತಮ್ಮ ದುಷ್ಕರ್ಮದಿಂದ ಬಾಪೂಜಿಗೆ ನೋವು ಕೊಟ್ಟೆವೆಂದು ಅವರಿಗೆ ನಾಚಿಕೆಯಾಗಿತ್ತು. ಅಂಡಾರಿ ಗ್ರಾಮದ ನಿವಾಸಿಗಳು ಇನ್ನು ಮುಂದೆ ಮುಸಲ್ಮಾನರನ್ನು ತಮ್ಮ ಸ್ವಂತ ಸಹೋದರರೆಂದು ತಿಳಿದು ಅವರ ಆಸ್ತಿ– 'ಪ್ರಾಣ ರಕ್ಷಿಸುತ್ತೇವೆಂದು ಆಶ್ವಾಸನೆ ನೀಡಿ, ದೇವರು ನಮ್ಮ ತಪ್ಪುಗಳನ್ನು ಕ್ಷಮಿಸಲಿ ಎಂದರು. ಅಂಡಾರಿ ಗ್ರಾಮದ ೬೦ ಮಂದಿ ಈ ಕ್ಷಮಾಪಣಾ ಪತ್ರಕ್ಕೆ ಸಹಿ ಹಾಕಿದ್ದರು. ಇನ್ನೊಂದು ಪ್ರಾರ್ಥನಾ ಸಭೆಯಲ್ಲಿ ವ್ಯಥೆಯಿಂದ ವಿಚಲಿತರಾಗಿ

ಬಾಪೂಜಿ ಪ್ರವಚನ ಮಾಡಲಿಲ್ಲ, ಶಾಂತವಾಗಿ, ಮೌನವಾಗಿ ಕುಳಿತು ಪಶ್ಚಾತ್ತಾಪ ಮಾಡಿಕೊಳ್ಳಲು ಹೇಳಿದರು. ಬಾಪೂಜಿ ಬಾಯಿ ತೆಗೆದಿದ್ದರೆ ಅವರು ಅತ್ತು ಬಿಡುತ್ತಿದ್ದರೆಂದು ಕಾಣುತ್ತದೆ. ಇಂತಹ ಭಯಂಕರ ಹಾನಿಯಲ್ಲಿ ಬಾಪೂಜಿಗೆ ಅಳುವ ಸುಖ ಸಿಕ್ಕಿರಲಿಲ್ಲ. ಒಂದೆಡೆ ಇಷ್ಟೊಂದು ಜನ ಸತ್ತಿದ್ದರು ಮತ್ತೊಂದೆಡೆ ಎಷ್ಟೋ ಜನ ಹೆಸರಾಂತ ಕಾಂಗ್ರೆಸ್ ಕಾರ್ಯಕರ್ತರು ತೀವ್ರ ನಿಷ್ಠೆಯಿಂದ ಕರ್ಮಠರಾಗಿ ಮತ್ತು ಮೌನವಾಗಿ ಶೌರ್ಯವನ್ನು ತೋರಿದ್ದರು. ಅಸಂಖ್ಯ ಮುಸಲ್ಮಾನರ ಪ್ರಾಣ ಉಳಿಸಲು ಅನೇಕ ಕಾಂಗ್ರೆಸ್ ಕಾರ್ಯಕರ್ತರು ತಾವೇ ಹಾಳಾಗಿಹೋದರು ಕೂಡ. ಜಹಾನಾಬಾದ್‌ನಲ್ಲಿ ಸಕಾಲ ಬಾಬೂ ಎಂಬುವವರು ಅಲ್ಲಿಯ ಸ್ಕೂಲಿನ ಹೆಡ್ ಮಾಸ್ಟರಾಗಿದ್ದರು, ಅವರು ತಮ್ಮ ವಿದ್ಯಾರ್ಥಿಗಳು ಮತ್ತೆ ಕೆಲವು ಜನರ ಸಹಾಯ ಪಡೆದು ರಾತ್ರಿಯೆಲ್ಲಾ ಗಸ್ತು ಹೊಡೆಯುತ್ತಿದ್ದರು, ದೌಲತಾಬಾದ್, ನಗಮಾ, ರಸಾಲಪುರ ಮುಂತಾದ ಹಳ್ಳಿಗಳಲ್ಲಿ ಮುಸಲ್ಮಾನರನ್ನು ರಕ್ಷಿಸಿದರು. ಆ ಜನರನ್ನು ಜಹಾನಾಬಾದ್‌ನ ಶರಣಾರ್ಥಿಗಳ ಶಿಬಿರಕ್ಕೆ ಸುರಕ್ಷಿತವಾಗಿ ಕಳುಹಿಸಿಕೊಟ್ಟರು, ಸಕಾಲ ಬಾಬು ಬಾಪೂಜಿಗೆ ಈ ರೀತಿ ಹೇಳಿದರು: "ನಾವು ಮನೆಯಿಂದ ಹೊರಟ ದಿನ ಅಟ್ಟಣೆಯಲ್ಲಿ ಮೂಲಂಗಿ ಇತ್ತು, ಅದು ಒಣಗಿ ಸೌದೆ ಹಾಗೆ ಆಗಿಹೋಗಿತ್ತು, ಆದರೆ ೯ ತಿಂಗಳಾದ ಮೇಲೂ ಅದು ಅಲ್ಲೇ ಬಿದ್ದಿತ್ತು, ಯಾರೂ ಒಂದು ಹುಲ್ಲು ಕಡ್ಡಿಯನ್ನೂ ಅಲ್ಲಿ ಮುಟ್ಟಿರಲಿಲ್ಲ." ಹಿಂದೂಗಳಲ್ಲಿ ಅಂತಹ ನಿಷ್ಠೆ ಇದೆ ಎಂದು ಮುಸ್ಲಿಂ ಮುಖಂಡರು ಎಂದೂ ಒಪ್ಪಲಿಲ್ಲ, ಒಳ್ಳೆಯ ಕೆಲಸಗಳನ್ನ ಹೊಗಳಲು ಮುಸ್ಲಿಂ ಲೀಗ್‌ಗೆ ಗೊತ್ತೇ ಇರಲಿಲ್ಲ.

ಮಾರ್ಚ್ ತಿಂಗಳ ಕೊನೆಯ ದಿನಗಳು, ಆಗ ಬಿಹಾರಿನ ಪೊಲೀಸ್ ಇಲಾಖೆಯವರು ಇದ್ದಕ್ಕಿದ್ದ ಹಾಗೆ ಹರತಾಳ ಮಾಡಿದರು, ಇದರಿಂದ ಬಿಹಾರ ಮತ್ತು ಕೇಂದ್ರ ಸರಕಾರ ಎರಡಕ್ಕೂ ಚಿಂತೆಯಾಯಿತು. ಚಳವಳಿ ನಡೆಯುತ್ತಿದ್ದಾಗ ಕೂಡ ಬಾಪೂಜಿಗೆ, "ಇದು ಗುಲಾಮಗಿರಿಯ ಕೆಟ್ಟ ಪರಿಣಾಮ. ದೇಶದ ಪೊಲೀಸರು ಜನರಿಗೆ ಸಹಾಯ ಮಾಡುವುದು ಬಿಟ್ಟು, ಅವರ ಮೇಲೆ ಅತ್ಯಾಚಾರ ಮಾಡುತ್ತಾರೆ. ದಮನಕ್ಕೆ ಇದೊಂದು ಮಾಧ್ಯಮವಾಗಿದೆ" ಅಂತ ಅನಿಸುತ್ತಿತ್ತು. ೧೯೪೭ರಲ್ಲಿ ಬಾಪೂಜಿ ಬಿಹಾರ್‌ಗೆ ಹೋದಾಗ, ಪೊಲೀಸ್ ವ್ಯವಸ್ಥೆಯನ್ನು ಸುಧಾರಿಸಿದರೆ ಈ ದಂಗೆಗಳು ಸಹಜವಾಗಿ ನಿಂತು ಹೋಗುತ್ತವೆ ಅಂತ ಅನಿಸಿತು, ಕಾನೂನಿನ ರಕ್ಷಕ ರಸ್ತೆಯ ಕಾನ್ಸ್‌ಟೇಬಲ್‌ನೇ ತಾನೆ. ಅವನಿಗೆ ತನ್ನ ಕರ್ತವ್ಯದ ಚೌಕಟ್ಟು ಏನು ಅನ್ನುವುದು ಸರಿಯಾಗಿ ತಿಳಿದಿರಬೇಕು, ಸಮಾಜ ಸೇವೆಯ ಉದ್ದೇಶ ಅರ್ಥ ಆಗಬೇಕು ಆಗ ಶಾಂತಿ ಭಂಗ ಆಗಲು ಇರುವ ಕಾರಣಗಳು ಕಡಿಮೆಯಾಗುತ್ತವೆ, ವಾಸ್ತವವಾಗಿ ಈ ಬಾರಿಯ ಕೋಮು ದಂಗೆಗಳಲ್ಲಿ ಪೊಲೀಸಿನವರ ಕೈವಾಡವೇ ಹೆಚ್ಚಾಗಿತ್ತು.

ಛಪರಾ ನಗರದಲ್ಲಿ ದಂಗೆಗಳಾದಾಗ ಪೊಲೀಸರು ದಂಗೆಗಳನ್ನು ನಿಯಂತ್ರಿಸುವುದನ್ನ ಬಿಟ್ಟು ಆ ಸ್ಥಳದಿಂದಲೇ ಓಡಿ ಹೋಗಿದ್ದರು. ರಾತ್ರಿ ಮುಖ್ಯಮಂತ್ರಿ ಶ್ರೀ ಬಾಬೂ, ಡಾಕ್ಟರ್ ಮಹಮೂದ್ ಛಪರಾಕ್ಕೆ ಬಂದರು. ಅವರು ಮೂವರು ಕಾಂಗ್ರೆಸ್ ಕಾರ್ಯಕರ್ತರನ್ನು ಪೈಗಂಬರಪುರಕ್ಕೆ ಕಳುಹಿದರು, ಆಗ ರಾತ್ರಿ ೩ ಗಂಟೆಯಾಗಿತ್ತು, ಇವರು ಮೂರು ಜನಗಳನ್ನು ಸುಡುತ್ತಲಿದ್ದ ಮನೆಗಳಿಂದ ಎಳೆದು ಹೊರಕ್ಕೆ ಹಾಕಿದರು. ಅವರ ಪ್ರಾಣ ಉಳಿಸಿದರು, ಆದರೆ ಪೊಲೀಸರು ಅಲ್ಲಿಂದ ಓಡಿ ಹೋಗಿದ್ದರು. ಅಲ್ಲೇ ಶ್ರೀ ಬಾಬೂ ಬೆಳಗಿನ ಹೊತ್ತಿನಲ್ಲಿ ತಲಪಿದಾಗ ಒಬ್ಬ ಮಹಿಳೆ ಬಿಕ್ಕಿ–ಬಿಕ್ಕಿ ಅಳುತ್ತಾ ಮುಖ್ಯಮಂತ್ರಿಗಳ ಕಾಲು ಹಿಡಿದುಕೊಂಡಳು. ಪೊಲೀಸ್ ಪಟೇಲ ತನ್ನ ಕಂಕುಳಲ್ಲಿದ್ದ ಮಗುವನ್ನ ಎರಡು ತುಂಡು ಮಾಡಿ ಬಿಸುಟಿದ್ದ ಎಂದು ದೂರು ಕೊಟ್ಟಳು. ಛಪರಾದ ಹಿಂದೂ ಕಲೆಕ್ಟರ್ ಕೂಡ ದಂಗೆ ಮಾಡುವವರನ್ನು ತಡೆಯುದೆ ಅವರಿಗೆ ಉತ್ತೇಜನ ನೀಡಿದ್ದ. ೨೫ ಅಕ್ಟೋಬರ್‌ನಿಂದಲೇ ಗೃಹಮಂತ್ರಿ, ಪೊಲೀಸ್ ಐ.ಜಿ. ಮಿಸ್ಟರ್ ಕ್ರೀಡ್‌ರಿಗೆ ಸುರಕ್ಷತೆಯ ಬಗ್ಗೆ ಕ್ರಮ ಕೈಗೊಳ್ಳುವಂತೆ ಹೇಳುತ್ತಿದ್ದರು, ಆದರೆ ಮಿಸ್ಟರ್‌ಕ್ರೀಡ್ ಕೇಳಿಸಿಕೊಳ್ಳದೆ, 'ಈಗ ಸ್ಥಿತಿ ಹಿಡಿತದಲ್ಲಿದೆ, ಹೆಚ್ಚು ವ್ಯವಸ್ಥೆಯ ಅಗತ್ಯವಿಲ್ಲ' ಎಂದು ಹೇಳಿದ. ಅಕ್ಟೋಬರ್ ೩೧ರಂದು ಇಂಗ್ಲಿಷ್ ಸೈನ್ಯದ ಸಹಾಯ ಕೇಳಿದಾಗ ಇಂಗ್ಲಿಷ್ ಬ್ರಿಗೇಡಿಯರನು, '೧೯೪೨ರ ಕೆಟ್ಟ ಸ್ಥಿತಿ ಇನ್ನೂ ಬಂದಿಲ್ಲ, ಆಮೇಲೆ ನೋಡೋಣ' ಅಂದ.

ಜವಾಹರಲಾಲ್‌ಜೀ ಮತ್ತು ರಾಜೇಂದ್ರ ಬಾಬೂ ಅವರ ಭಾಷಣಗಳು, ಅಪೀಲು ಇವೆಲ್ಲದರಿಂದ ದಂಗೆಗಳು ತಣ್ಣಗಾದವು. ನವಂಬರ್ ೬ ಕ್ಕೆ ಬಿಹಾರ್ ಸರಕಾರ ಸಾವಿರಾರು ಮನವಿ ಪತ್ರಿಕೆಗಳನ್ನು ಮುದ್ರಿಸಿ ವಿಮಾನದಿಂದ ದಂಗೆ ಎದ್ದಿದ್ದ ಜಾಗಗಳಲ್ಲಿ ಬೀಳಿಸಿದರು. ಈ ಹುಚ್ಚೆದ್ದ ಹೊಡೆ–ತಡೆ ನಿಲ್ಲದಿದ್ದರೆ ಬಾಪೂಜಿ ಆಮರಣ ಉಪವಾಸ ಮಾಡುತ್ತಾರೆ ಅಂತ ಅದರಲ್ಲಿ ಬರೆದಿತ್ತು. ಈ ಪತ್ರಿಕೆ ನೋಡಿ ಉಗ್ರವಾದಿಗಳು ಸುಮ್ಮನಾದರು ಎಂದು ನೆಹರೂಜಿ ಹೇಳುತ್ತಿದ್ದರು, ಹಾಗಿಲ್ಲದಿದ್ದರೆ ಈ ಕೋಮು ಬೆಂಕಿ ಇಡೀ ಪ್ರಾಂತವನ್ನೇ ಭಸ್ಮವಾಗಿಸುತ್ತಿತ್ತು. ನೆಹರೂಜಿ, ಪ್ರೊ॥ ಬಾರಿ ಮತ್ತು ಆಚಾರ್ಯ ಕೃಪಲಾನಿಗಳ ಆದೇಶ ಪಡೆದು ಎಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಪ್ರಾಂತದ ಎಲ್ಲ ಹಳ್ಳಿಗಳಿಗೂ ಹೋದರು. ಅವರು ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಜನರ ಆಕ್ರೋಶವನ್ನು ತಣ್ಣಗಾಗಿಸಿದರು, ಶಾಂತಿ ಹಾಗೂ ವ್ಯವಸ್ಥೆಯನ್ನ ಉಳಿಸಿದರು. ಪೊಲೀಸ್ ಅಂತೂ ಪೂರ್ತಿ ನಿಷ್ಕ್ರಿಯವಾಗಿ ಹೋಗಿತ್ತು, ಪುನ್‌ಪುನ್ ಮತ್ತು ಹಿಲಸಾ ಹಳ್ಳಿಗಳ ಪೊಲೀಸ್ ಠಾಣೆಯ ಹೊರಗೆ ಹೊಡೆದಾಟ ಮತ್ತು ಭಯಂಕರ ಕದನ ನಡೆಯುತ್ತಿತ್ತು, ಆದರೆ ಯಾರೊಬ್ಬ ಕಾನ್ಸ್‌ಟೇಬಲನೂ ಠಾಣೆಯ ಹೊರಕ್ಕೆ ಇಣುಕಿ ಕೂಡ ನೋಡಿರಲಿಲ್ಲ. ಎಷ್ಟೋ

ಜಾಗಗಳಲ್ಲಿ ಪೊಲೀಸರು ವೈಯಕ್ತಿಕವಾಗಿ ಸೇಡು ತೀರಿಸಿಕೊಳ್ಳುವುದಕ್ಕಾಗಿ ಗುಂಪನ್ನು ಉದ್ರೇಕಿಸಿ, ಅದರ ನೇತೃತ್ವ ಕೂಡ ಮಾಡಿದ್ದರು.

೧೯೪೨ರ 'ಭಾರತ ಛೋಡೋ' ಆಂದೋಳನದಿಂದ ಪ್ರಭಾವಿತರಾಗಿ ಎಷ್ಟೋ ಪೊಲೀಸ್ ಆಫಿಸರ್‌ಗಳು, ಕಾನ್ಸ್‌ಟೇಬಲ್‌ಗಳು ತಮ್ಮ ಕೆಲಸವನ್ನು ಬಿಟ್ಟು ಜೈಲಿಗೆ ಹೋಗಿದ್ದರು. ಕಾಂಗ್ರೆಸ್‌ನ ಸಮಾಜವಾದಿ ಯುವಕರು ಈ ಪೊಲೀಸ್‌ನವರನ್ನು ಹೊಗಳಿದ್ದರು. ಜೈಲಿನಿಂದ ಬಿಡುಗಡೆಯಾದ ಮೇಲೆ ಸೋಷಲಿಸ್ಟರಿಗೆ ಸ್ವಾತಂತ್ರ್ಯಸಿಗಲಿದೆಯೆಂಬ ವಿಷಯದ ಬಗ್ಗೆ ಸ್ವಲ್ಪವೂ ಶ್ರದ್ಧೆ ಇರಲಿಲ್ಲ. ಆದುದರಿಂದ ಅವರು ಇನ್ನೂ ತೀವ್ರವಾಗಿ ಭಯಂಕರ ಆಂದೋಳನಕ್ಕಾಗಿ ಸಿದ್ಧತೆ ನಡೆಸಿದ್ದರು, ಅದರಲ್ಲಿ ಭಾರತೀಯ ಪೊಲೀಸ್ ಮತ್ತು ಸೈನ್ಯ ಎರಡರ ಸಹಾಯ ಅಗತ್ಯವಾಗುವಂತೆ ಅವರು ಈ ಆಂದೋಳನದ ಯೋಜನೆ ಹಾಕಿದ್ದರು. ಹೀಗೆ ಬಿಹಾರದ ಪೊಲೀಸ್ ಕೋಮುವಾದದಲ್ಲಿ ಮತ್ತು ಹಿಂಸಾತ್ಮಕ ರಾಷ್ಟ್ರವಾದದಲ್ಲಿ ಸಿಕ್ಕಿಕೊಂಡಿತ್ತು, ಪೊಲೀಸ್ ಭ್ರಷ್ಟಾಚಾರ ಒಂದು ಹಳೆಯ ರೋಗವಾಗಿತ್ತು. ಅಂತಹ ಪರಿಸ್ಥಿತಿಯಲ್ಲಿ ೧೯೪೭ರ ಮಾರ್ಚ ೨೦ ರಂದು ಒಬ್ಬ ಹವಾಲ್ದಾರನನ್ನು ಗಯಾ ಜಿಲ್ಲೆಯ ಮ್ಯಾಜಿಸ್ಟ್ರೇಟನು ಕೋರ್ಟಿಗೆ ಅವಮರ್ಯಾದೆ ಮಾಡಿದನೆಂದು ಕೆಲಸದಿಂದ ಸಸ್ಪೆಂಡ್ ಮಾಡಿ ಜೈಲಿನ ಸಜೆ ನೀಡಿದರು, ಗಯಾದ ಪೊಲೀಸ್ ಹರತಾಳ ಮಾಡಿತು, ಜಿಲ್ಲಾಧಿಕಾರಿ ತಕ್ಷಣವೇ ಪರಿಶೀಲನೆ ನಡೆಸಲು ಆದೇಶ ನೀಡಿದರು. ಆದರೆ ಪೊಲೀಸರು ಹಠ ಹಿಡಿದರು, ಮಾರ್ಚ ೨೪ರವರೆಗೆಗೂ ಹರತಾಳ ನಿಲ್ಲಲಿಲ್ಲ ಮತ್ತು ಪಟನಾ, ಮೌಧೀರ್ ಮುಂತಾದ ಸ್ಥಳಗಳ ಪೊಲೀಸರು ಕೂಡ ಹರತಾಳ ಮಾಡಿದರು. ಆಗ ಇಂಗ್ಲಿಷ್ ಅಧಿಕಾರಿ ಸೈನ್ಯವನ್ನು ಕರೆಸಿದ. ಬಿಳಿಯರ ಪ್ಲೆಟೂನ್ ಈ ಹರತಾಳ ಮಾಡುತ್ತಿದ್ದವರ ಮೇಲೆ ಗುಂಡು ಹಾರಿಸಿತು, ಎರಡೂ ಕಡೆ ಬಂದೂಕಗಳು ಹಾರಾಡಿದವು, ಅದರಲ್ಲಿ ಕೆಲವರು ಗತಿಸಿದರು ಮತ್ತು ಸಾಕಷ್ಟು ಮಂದಿ ಗಾಯಗೊಂಡರು.

ಮಾರ್ಚ ೨೮ರಂದು ಪೊಲೀಸ್ ನೌಕರರು ಬಾಪೂಜಿಯನ್ನು ಜಹಾನಾಬಾದ್‌ನಲ್ಲಿ ಭೇಟಿಯಾದರು, ಅವರಿಗೆ ನಿಮ್ಮ ಬೇಡಿಕೆ ಸರಿಯಾದುದಲ್ಲವೆಂದು ಬಾಪೂಜಿ ತಿಳಿಯಹೇಳಿದರು. ಪೊಲೀಸ್ ಸರಕಾರದ ಮಹತ್ವಪೂರ್ಣವಾದ ಅಂಗ, ಅದು ಬೇಜವಾಬ್ದಾರಿ ತೋರಿಸಿದರೆ ದೊಡ್ಡ ಅಪರಾಧವಾಗುತ್ತದೆ ಎಂದು ಹೇಳಿ ಬಾಪೂಜಿ ಅವರಿಗೆ ಹರತಾಳವನ್ನು ನಿಲ್ಲಿಸಿ ಕೆಲಸ ಮಾಡಲು ಸಲಹೆ ನೀಡಿದರು. ಜೊತೆಗೆ ಅವರ ನಾಯಕರುಗಳ ಜೊತೆ ಚರ್ಚೆ–ಸಲಹೆ ತೆಗೆದುಕೊಳ್ಳಿರೆಂದು ಕೂಡ ತಿಳಿಸಿದರು. ಮುಸ್ಲಿಂ ಪೊಲೀಸ್ ತನ್ನ ಬೇರೆಯದೇ ಸಂಘಟನೆಯನ್ನು ರಚಿಸುತ್ತಿತ್ತು. ಹೀಗಾಗಿ ಪೊಲೀಸ್ ತಂತ್ರ ಹರಿದು ಹಂಚಿಹೋಗಿತ್ತು. ಬಾಪೂಜಿ ಈ ವಿಷಯವಾಗಿ ಶ್ರೀ ಬಾಬು ಜೊತೆ ಮಾತನಾಡಬೇಕೆಂದುಕೊಂಡರು, ಪೊಲೀಸಿನ

ತಂತ್ರಕ್ಕೆ ಸಮಾಜ ಸೇವಕರ ಆದರ್ಶವನ್ನು ಕಲಿಸಲು ಪ್ರಯತ್ನಿಸಬೇಕೆಂದು ಕೊಂಡರು, ಆದರೆ ಇದಕ್ಕೂ ಮುಂಚೆ ಅವರು ಸಮಾಜವಾದಿ ಮಿತ್ರರಿಗೆ ಪೊಲೀಸ್ ಮತ್ತು ಸೈನ್ಯದೊಂದಿಗೆ ಹೀಗೆ ಚಲ್ಲಾಟವಾಡುವುದು ಸರಿಯಲ್ಲವೆಂದು ಹೇಳಿದರು. ಇದರ ಪರಿಣಾಮ ಬಹಳ ಕೆಟ್ಟದಾಗುತ್ತದೆಂದರು. ಸರಕಾರ ತನ್ನ ಬಿಳಿಯ ಪ್ಲೆಟೂನ್‌ನ್ನು ಕರೆಸಿ ಬಹಳ ತಪ್ಪು ಮಾಡಿದೆ ಎಂದರು. ನಮ್ಮ ಜನಗಳ ಮೇಲೆ ಗುಂಡು ಹಾರಿಸುವುದು ಬಹಳ ಅಪಾಯಕಾರಿ ಮತ್ತು ದಯೆಯಿಲ್ಲದ ಪದ್ಧತಿಯಾಗುತ್ತಿತ್ತು. ಮಾರನೆಯ ದಿನ ಜಯಪ್ರಕಾಶ ನಾರಾಯಣ ಪೊಲೀಸ್ ಅಸೋಸಿಯೇಷನ್ ಅಧ್ಯಕ್ಷ ರಾಮಾನಂದ ತಿವಾರಿಯನ್ನು ಕರೆದುಕೊಂಡು ಬಾಪೂಜಿಯನ್ನು ಭೇಟಿ ಮಾಡಿದರು. ಬಾಪೂಜಿ ಹೇಳಿದ ನಂತರ ರಾಮಾನಂದರು ಸಮರ್ಪಣೆ ಮಾಡಿದರು, ಮತ್ತವರ ಪೊಲೀಸ್ ಜೊತೆಗಾರರು ಅವರಿಗೆ ಬೇಡಿ ಹಾಕಿ ಜೈಲಿಗೆ ಕರೆದೊಯ್ದರು. ರಾಮಾನಂದರು ತಮ್ಮ ಹೇಳಿಕೆಯಲ್ಲಿ ತನ್ನ ಜೊತೆಗಾರರಿಗೆ ಗಾಂಧೀಜಿಯ ನಾಯಕತ್ವದಲ್ಲಿ ದೇಶಸೇವೆ ಮಾಡಲು ಸಂದೇಶ ನೀಡಿದರು, ರಾಮಾನಂದ ತಿವಾರಿಗೆ ಐದು ವರ್ಷಗಳ ಕಠಿಣ ಸಜೆಯಾಯಿತು, ೧೯೫೧–೫೨ರಲ್ಲಿ ಚುನಾವಣೆಯ ಸಂದರ್ಭದಲ್ಲಿ ಅವರು ಜೈಲಿನಿಂದ ಬಿಡುಗಡೆಯಾಗಿ ಬಂದರು ಮತ್ತು ಸೋಷಲಿಸ್ಟ್‌ಪಾರ್ಟಿಯ ಪ್ರತಿನಿಧಿಯಾಗಿ ಕಾಂಗ್ರೆಸ್‌ನ ಎದುರಾಳಿಯನ್ನು ಸೋಲಿಸಿದರು. ಲೋಕಸಭೆಯ ಸದಸ್ಯರಾದರು, ರಾಮಾನಂದ ತಿವಾರಿ ತೀವ್ರ ನಿಷ್ಠಾವಂತ ರಾಷ್ಟ್ರಪ್ರೇಮಿಯಾಗಿದ್ದರು, ೧೯೮೫ರಲ್ಲಿ ಅವರ ದೇಹಾಂತವಾಯಿತು.

ಮಾರ್ಚ ೨೬ರಂದು ಜಹಾನಾಬಾದ್‌ನ ಪೊಲೀಸ್ ಬಲವನ್ನು ಭೇಟಿ ಮಾಡಿ ಬಾಪೂಜಿ ವಿಶೇಷ ಜೈಲಿನಲ್ಲಿ ಪಟನಾ ತಲಪಿದರು. ಅಲ್ಲಿ ಅವರಿಗೆ ತೀವ್ರ ದುಃಖಕರವಾದ ಸಮಾಚಾರ ಕಾದಿತ್ತು. ಬಿಹಾರ್ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಬ್ಯಾರಿ ಜೀಪ್‌ನಲ್ಲಿ ಹೊರಟಿದ್ದರು, ಕಡಲುಗಳ್ಳತನ ನಿರ್ಮೂಲನ ವಿಭಾಗದ ಗೂರ್ಖಾ ಸೈನಿಕರ ಪ್ರೊಫೆಸರ್ ಬ್ಯಾರಿಯ ಜೀಪನ್ನು ತಡೆದರು, ಅವರು ಜೀಪ್‌ನಿಂದಿಳಿದು ಗೂರ್ಖಾ ಸೈನಿಕರ ಕೈಯಿಂದ ಬಂದೂಕವನ್ನು ಕಿತ್ತುಕೊಳ್ಳಲೆಳಸಿದರು. ಆಗ ಅವನ ಜೊತೆಗಿದ್ದ ಮತ್ತೊಬ್ಬ ಗೂರ್ಖಾ ಬಂದೂಕಧಾರಿ ಅವರ ಮೇಲೆ ಗುಂಡು ಹಾರಿಸಿಬಿಟ್ಟ. ಬಿಹಾರದ ಅತ್ಯಂತ ಪ್ರಾಮಾಣಿಕ ವ್ಯಕ್ತಿ ಮತ್ತು ಬಡವ ಮಿತ್ರ ಈ ಚಿಕ್ಕ ಜಗಳದಲ್ಲಿ ತೀರಿಕೊಂಡರು. ಬಾಪೂಜಿ ಈ ಘಟನೆಯನ್ನು ಕೇಳಿ ಸ್ತಬ್ಧರಾದರು. ಅವರಿಗೆ ಬ್ಯಾರಿ ಸಾಹೇಬರ ಬಗ್ಗೆ ಬಹಳ ಪ್ರೇಮವಿತ್ತು, ಆದರವಿತ್ತು. ಬಾಪೂಜಿ ಬ್ಯಾರಿ ಸಾಹೇಬರಿಗೆ ಇಷ್ಟೊಂದು ದುಡುಕು ಒಳ್ಳೆಯದಲ್ಲವೆಂದು ಹೇಳಬೇಕೆಂದಿದ್ದರು, ಬ್ಯಾರಿ ಸಾಹೇಬರಲ್ಲಿದ್ದ ಒಂದೇ ಒಂದು ಕುಂದೆಂದರೆ ಅವರಿಗೆ ಬಹಳ ಬೇಗ ಕೋಪ ಬರುತ್ತಿತ್ತೆಂಬುದು. ಬ್ಯಾರಿ ಸಾಹೇಬರಿಗೆ ಬಾಪೂಜಿ ಹೇಳಿದ್ದರೆಂದರೆ ಅವರು ಕೋಪವನ್ನು ತಗ್ಗಿಸುವರೆಂಬ ನಂಬಿಕೆ ಇತ್ತು. ಆದರೆ ಅದಕ್ಕೂ ಮೊದಲೇ ಬ್ಯಾರಿ

ಸಾಹೇಬರು ತೀರಿಕೊಂಡರು. ಅವರ ಮನೆಯಲ್ಲಿ ಆತನ ಬೇಗಂ ಅವರನ್ನು ಬಾಪೂಜಿ ಭೇಟಿ ಮಾಡಿದರು, ಒಬ್ಬ ಆದರ್ಶ ಕಾರ್ಯಕರ್ತನ ಹಾಗೆ ಸಂದಿಗೊಂದಿಯಲ್ಲಿ ಚಿಕ್ಕ ಮನೆಯೊಂದರಲ್ಲಿ ಬ್ಯಾರಿ ಸಾಹೇಬ್ ವಾಸವಾಗಿದ್ದರು. ಮನೆಯಲ್ಲಿ ಯಾವುದೇ ಐಶ್ವರ್ಯ–ಆಡಂಬರ ಇರಲಿಲ್ಲ, ಅವರು ಇಂತಹ ಸರಳತೆಯಿಂದ ಅವರ ಮನೆ ಪವಿತ್ರವಾಗಿ ಶೋಭಿಸುತ್ತಿತ್ತು, ಬಿಹಾರದ ಸ್ವಾತಂತ್ರ್ಯದ ಪರಾಕ್ರಮಿ ಸೈನಿಕ ಮತ್ತು ಸಮರ್ಪಿತ ಫಕೀರ ಪ್ರಪಂಚದ ಎಲ್ಲಾ ಆಗು–ಹೋಗುಗಳಿಂದ ದೂರವಾಗಿ ಖುದಾನ ದರಬಾರಿನಲ್ಲಿ ಹಾಜರಿ ನೀಡಲು ಹೊರಟಿದ್ದರು.

೩೦ನೇ ಮಾರ್ಚ್ ೧೯೪೭ರಂದು ಬಾಪೂಜಿ ಹೊಸ ವೈಸ್‌ರಾಯ್ ಮೌಂಟ್‌ಬ್ಯಾಟನ್‌ನ್ನು ಭೇಟಿಯಾಗಲು ದೆಹಲಿಗೆ ಹೋದರು. ೧೫ ದಿನಗಳ ನಂತರ ವಾಪಸ್ ಪಟನಾಗೆ ಹೊರಟುಹೋಗಿದ್ದರು. ದೆಹಲಿಯಿಂದ ಹಿಂದಿರುಗಿ ಬಾಪೂಜಿ ಬಿಹಾರದ ಮಿಕ್ಕ ದಂಗೆಗೊಳಗಾಗಿದ್ದ ಹಳ್ಳಿಗಳ ಯಾತ್ರೆ ಮಾಡಿದರು. ಅವರು ಶರಣಾರ್ಥಿಗಳಿಗೆ ಕೆಲಸ ಮಾಡಿ ತಮ್ಮ ಕಾಲ್ಗಳ ಮೇಲೆ ತಾವೇ ನಿಲ್ಲುವಂತೆ ತಿಳಿಯ ಹೇಳಿದರು. ಬಾಪೂಜಿ ನಿರಾಶ್ರಿತರ ಶಿಬಿರದಲ್ಲಿ ಒಂದು ನಿಯಮಾವಳಿಯನ್ನು ಬರೆದು ಸಿದ್ಧಪಡಿಸಿದರು. ಖಾಸಗಿ ಸಂಸ್ಥೆಗಳ ರೀತಿ–ನೀತಿಗಳು ಹೇಗಿರಬೇಕು, ಆ ಜನತಂತ್ರದ ಮಂತ್ರಿಯ ಕರ್ತವ್ಯವೇನು ಎಂಬೆಲ್ಲ ವಿಷಯಗಳನ್ನೂ ಕುರಿತು ಬಾಪೂಜಿ ಕಾಂಗ್ರೆಸ್ ಮಂತ್ರಿಮಂಡಲಕ್ಕೆ ತರಬೇತಿ ನೀಡಲಾರಂಭಿಸಿದರು. ಆದರೆ ೧೯೪೭ರ ಮೇ ತಿಂಗಳಲ್ಲಿ ಪಂಜಾಬ್ ಮತ್ತು ನೋವಾಖಲಿಯಿಂದ ಚಿಂತಾಜನಕ ಸಮಾಚಾರಗಳು ಬರತೊಡಗಿದವು, ಪಂಜಾಬಿನಲ್ಲಿ ಅಧಿಕಾರವನ್ನು ಪಡೆದುಕೊಳ್ಳುವ ಇಚ್ಛೆಯಿಂದ ಮುಸ್ಲಿಂ ಲೀಗ್ ಪುನಃ 'ಡೈರೆಕ್ಟ್ ಆ್ಯಕ್ಷನ್' ಮತ್ತು ಪಾಕಿಸ್ತಾನ ದಿವಸವನ್ನು ಘೋಷಿಸಿತ್ತು. ನೋವಾಖಲಿಯೂ ಪಾಕಿಸ್ತಾನ ದಿವಸ ಆಚರಿಸಲು ಮುಂದಾಗಿತ್ತು, ಬಾಪೂಜಿ ಸುಹರಾವರ್ದಿಗೆ ಪತ್ರ ಬರೆದು 'ಪಾಕಿಸ್ತಾನ ದಿವಸ ಆಚರಿಸುವುದರಿಂದ ಅಲ್ಪಮತದಲ್ಲಿರುವ ಹಿಂದೂಗಳು ಹೆದರಿಕೊಳ್ಳುತ್ತಾರೆ, ಮುಸ್ಲಿಮರು ಖಂಡಿತ ಪಾಕಿಸ್ತಾನ ಕೇಳಲಿ, ಆದರೆ ಹಬ್ಬ ಆಚರಿಸುವ ಅಗತ್ಯವಿಲ್ಲ' ಎಂದು ತಿಳಿಸಿದರು. ಸುಹರಾವರ್ದಿ ಪತ್ರಕ್ಕೆ ಉತ್ತರ ನೀಡಲೇ ಇಲ್ಲ, ಬಾಪೂಜಿಯವರ ಸಲಹೆಯನ್ನೂ ಒಪ್ಪಲಿಲ್ಲ. ಬಾಪೂಜಿ ೨೧ ಮಾರ್ಚ ಹಸಾದೀಹ್ ಎಂಬ ಹಳ್ಳಿಯಲ್ಲಿ ಪ್ರಜೆಗಳನ್ನು ಕೇಳಿದರು. 'ಮುಸಲ್ಮಾನರು ನೀಚರಾಗಿ ವರ್ತಿಸಿದರೆ, ಹಿಂದೂಗಳು ತಮ್ಮ ಸಂಸ್ಕಾರವನ್ನು ಬಿಟ್ಟು ಗೂಂಡಾಗಿರಿ ಮಾಡಬೇಕೇನು? ಧರ್ಮದ ಹೆಸರಿನಲ್ಲಿ ಮಹಿಳೆಯರು ಮತ್ತು ಮಕ್ಕಳನ್ನು ಕೊಂದು ಹಾಕುವದೇ ಜೀವನದ ಒಂದೇ ಒಂದು ಆದರ್ಶವೇನು? ಸಂಹಾರ ನಡೆಸುವದೆಂಥ ಧರ್ಮ?' ಆ ದಿನ ಸಂಜೆ ಮಿಕ್ಕ ಎಷ್ಟೋ ಜನ ಹಿಂದೂಗಳು ಬಾಪೂಜಿಯವರ ಮಾತು ಕೇಳಿ ತಮ್ಮ ತಪ್ಪನ್ನೊಪ್ಪಿಕೊಂಡು ಸಮರ್ಪಣೆ ಮಾಡಿದ್ದರು.

ಪಂಜಾಬ್‌ನಲ್ಲಿ ಸೈನ್ಯದ ಸಹಾಯದಿಂದ ಸ್ವಲ್ಪ ಶಾಂತಿ ನೆಲೆಗೊಂಡಿತ್ತು, ಆದರೆ ಅದು ಸ್ಮಶಾನ ಶಾಂತಿಯಾಗಿತ್ತು, ಅಲ್ಲಿ ಶಾಂತಿ–ಮರ್ಯಾದೆ ಏನೂ ಉಳಿದಿರಲಿಲ್ಲ. ಬಾಪೂಜಿ ಪಂಜಾಬಿನಲ್ಲಿ ಸೈನ್ಯದ ಸಹಾಯದಿಂದ ಶಾಂತಿ ನೆಲೆಗೊಳ್ಳುವುದಾದರೆ ಹಿಂದೂ–ಮುಸ್ಲಿಂ ವೈಮನಸ್ಯದ ವಿಷ ಇಡೀ ಪ್ರಾಂತ್ಯದಲ್ಲೇ ಹರಡುತ್ತದೆ, ಹಾಗೂ ಆಗ ಸಮಾಧಾನ ಸಾಧ್ಯವಾಗುವುದೇ ಇಲ್ಲವೆಂದು ಸರದಾರ್‌ಗೆ ಬರೆದಿದ್ದರು. ಪಂಜಾಬಿನ ಜನರು ಯುದ್ದಕ್ಕಾಗಿ ಸಿದ್ಧತೆ ನಡೆಸುತ್ತಿದ್ದರೆಂದು ಬಾಪೂಜಿಗೆ ಸುದ್ದಿ ತಿಳಿಯಿತು, ಶಸ್ತ್ರಗಳನ್ನು ಸಂಗ್ರಹಿಸುತ್ತಿದ್ದರು. ಈ ರೀತಿ ಮುಂದುವರಿದರೆ ಸೈನ್ಯ ಕೂಡ ಪಂಜಾಬಿನಲ್ಲಿ ಶಾಂತಿ ನೆಲೆಗೊಳಿಸಲಾರದು ಎಂದು ಬಾಪೂಜಿ ಸರದಾರ್‌ಗೆ ಬರೆದರು. ಅಹಿಂಸೆ ಕೂಡ ಒಂದು ರಾಮಬಾಣದ ಉಪಾಯವಾಗಿತ್ತು. ಅದರಿಂದ ನಿರಂತರವಾಗಿ ಶಾಂತಿ ನೆಲೆಗೊಳ್ಳುತ್ತದೆ. ೨೪ ಮೇ ವೇಳೆಗೆ ಪಂಜಾಬ್, ದೆಹಲಿಯ ಸ್ಥಿತಿ ಹದಗೆಟ್ಟಿತ್ತು, ಸರದಾರರ ಒತ್ತಾಯದ ಮೇರೆಗೆ ಬಾಪೂಜಿ ಪಟನಾದಿಂದ ದೆಹಲಿಗೆ ಹೋದರು. ಕೋಮುವಾದದ ಈ ನಾಟಕ ಭೀಕರವಾಗಿತ್ತು, ಬಿಹಾರದ ಬದಲು ಪಂಜಾಬಿನಲ್ಲೂ ಹೊಡೆದಾಟ ಹತ್ಯೆ ಶುರುವಾಗಿತ್ತು. ದೆಹಲಿಯ ಸ್ಥಿತಿ ಸುಧಾರಿಸಿ ವಾಪಸ್ ಬಿಹಾರ್‌ಗೆ ಹೋಗಿ ಸಮಾಜೋದ್ಧಾರದ ಪ್ರಾಥಮಿಕ ಕಾರ್ಯಗಳನ್ನು ಮಾಡಬೇಕೆಂದು ಬಾಪೂಜಿ ಯೋಚಿಸಿದ್ದರು, ಆದರೆ ಕಾಲ ಚಕ್ರಗತಿಯಲ್ಲಿ ಮುನ್ನಡೆದಿತ್ತು ಮತ್ತು ಬಾಪೂಜಿಯ ಸಮಯ ಹಾರುತ್ತಲಿತ್ತು, ೩೦ ಜನವರಿ ಬರಲು ಇನ್ನೂ ಒಂಬತ್ತು ತಿಂಗಳು ಕೂಡ ಉಳಿದಿರಲಿಲ್ಲ.

* * * *

# ೩೧. ಅಗ್ನಿಪರೀಕ್ಷೆ

ಈಚೆಗೆ ಎಷ್ಟೋ ವರ್ಷಗಳಿಂದಲೂ ಕಾಂಗ್ರೆಸ್ ಗಾಂಧೀಜಿಯ ಆದರ್ಶಗಳಿಂದ ನಿರಂತರ ದೂರವಾಗತೊಡಗಿತ್ತು. ನಾಯಕರಿಗೆ ಗಾಂಧೀಜಿ ಬಗ್ಗೆ ಗೌರವಾದರಗಳು, ಪ್ರೀತಿ ಇತ್ತು. ಆದರೆ ಬಾಪೂಜಿಯ ಸಿದ್ಧಾಂತಗಳ ಬಗ್ಗೆ ಅವರ ಹೃದಯದಲ್ಲಿ ಶ್ರದ್ಧೆ ಇರಲಿಲ್ಲ. ೧೯೨೦ರಲ್ಲಿ ಗಾಂಧೀಜಿ ಕಾಂಗ್ರೆಸ್‌ನ್ನು ನಡೆಸುವ ಜವಾಬ್ದಾರಿ ತೆಗೆದುಕೊಂಡಾಗ ಕಾಂಗ್ರೆಸ್ ಸತ್ಯ–ಅಹಿಂಸೆಯ ನೀತಿಯನ್ನು ಸ್ವೀಕರಿಸಿತ್ತು.

ಬಾಪೂಜಿಗೆ ಸತ್ಯ, ಅಹಿಂಸೆ ಜೀವನದ ಮೂಲ ಸಿದ್ಧಾಂತಗಳಾಗಿದ್ದವು, ಸಿದ್ಧಾಂತ ಮತ್ತು ನೀತಿಯಲ್ಲಿ, ಸಿದ್ಧಾಂತ ಶ್ರದ್ಧೆಯ ಮೇಲೆ ನಿಂತಿದ್ದು ಅದನ್ನು ಬದಲಾಯಿಸಲಾಗುವುದಿಲ್ಲ. ಆದರೆ ನೀತಿ ವ್ಯಾವಹಾರಿಕ ಉಪಯೋಗ ಮತ್ತು ಔಚಿತ್ಯವನ್ನಾಧರಿಸಿರುತ್ತದೆ. ಅಸಫಲತೆ, ಅಥವ ಲಕ್ಷ್ಯ ಪೂರೈಸಿದ ಮೇಲೆ ನೀತಿಯನ್ನು ಬಿಡುವುದು ಸಹಜ. ಕಾಂಗ್ರೆಸ್ ಮುಖಂಡರಿಗೆ ಸತ್ಯ ಅಹಿಂಸೆಯಲ್ಲಿ ಅಚಲ ಸಿದ್ಧಾಂತದ ಶ್ರದ್ಧೆ ಇರಲಿಲ್ಲ, ಮತ್ತು ಶ್ರದ್ಧೆಗೆ ಆದೇಶ ನೀಡಿ ನೆಲೆಗೊಳಿಸಲಾಗುವುದಿಲ್ಲ. ಆದರೆ ನೀತಿ ಪಾಲಿಸುವವರೆಗೂ ಶ್ರದ್ಧೆ ತನ್ನ ಬಲದಿಂದಲೇ ಕೆಲಸ ಮಾಡುತ್ತದೆ, ಕಾಂಗ್ರೆಸ್ ಅಹಿಂಸೆಯ ನೀತಿಯನ್ನೊಪ್ಪಿಕೊಂಡಿತ್ತು. ಹಾಗೆಂದುಕೊಂಡೇ ಬಾಪೂಜಿ ಕೆಲಸಮಾಡಬೇಕಾಗಿತ್ತು. ಅಹಿಂಸೆಯಲ್ಲಿ ಸಂಪೂರ್ಣ ಶ್ರದ್ಧೆ ಹೊತ್ತಿದ್ದವರು ಅವರೊಬ್ಬರೇ. ದೇಶಕ್ಕೆ ಸ್ವಾತಂತ್ರ್ಯ ಸಿಗಬೇಕಾದರೆ ಒಳ್ಳೆಯ, ಕೆಟ್ಟ, ಅಪೂರ್ಣರಾದವರು ಹೀಗೆ ಎಲ್ಲರನ್ನೂ ಜೊತೆಯಲ್ಲಿಟ್ಟುಕೊಂಡೇ ಸ್ವಾತಂತ್ರ್ಯದ ಸಂಗ್ರಾಮ ಸಾಗರದಲ್ಲಿ ದುಮುಕಬೇಕಾಗುತ್ತದೆ. ಯೋಗ್ಯ ಸಾಧನವಿದ್ದಲ್ಲಿ ಅದರ ಪರಿಣಾಮ ಕೂಡ ಒಳ್ಳೆಯದೇ ಆಗಿರುತ್ತದೆಂದು ಬಾಪೂಜಿ ನಂಬಿದ್ದರು. ಅನುಭವ ಶ್ರದ್ಧೆಯ ಜನನಿ, ಅಹಿಂಸೆಗೆ ಅವಕಾಶ ಸಿಕ್ಕರೆ ಸ್ವತಃ ಶ್ರದ್ಧೆ ದೃಢ ನಿಷ್ಠೆ ಜಾಗೃತವಾಗುತ್ತದೆ ಎಂದು ಬಾಪೂಜಿ ನಂಬಿದ್ದರು.

ಬಾಪೂಜಿಗೆ ಸತ್ಯ, ಅಹಿಂಸೆ ಬರಿಯ ಉಪದೇಶದ ವಿಷಯಗಳಾಗಿರಲಿಲ್ಲ, ಇದು ಅವರಿಗೆ ಜೀವನದ ಆದಿಸಿದ್ಧಾಂತಗಳು, ಸತ್ಯವೇ ಈಶ್ವರನೆಂದು ಬಾಪೂಜಿ ದೃಢವಾಗಿ ನಂಬಿದ್ದರು. ಈ ಸತ್ಯಶೋಧನೆಯಲ್ಲೇ ಬಾಪೂಜಿ ಆಫ್ರಿಕಾದ ವರ್ಣಭೇದವನ್ನು ವಿರೋಧಿಸಿದ್ದು. ಸತ್ಯದ ಸಾಧನೆ ಗುಲಾಮಗಿರಿಯಲ್ಲಿ ಸಾಧ್ಯವಾಗುವುದಿಲ್ಲ, ಆದ್ದರಿಂದ ಅವರು ವಿದೇಶಿ ಸರಕಾರವನ್ನು ವಿರೋಧಿಸಿದ್ದು.

ಈ ಸತ್ಯದ ಸಾಕ್ಷಾತ್ಕಾರದಲ್ಲಿ ಅಹಿಂಸೆ ಏಕಮಾತ್ರ ಸಾಧನವಾಗಿತ್ತು. ಮನ–ವಚನ–ಕರ್ಮದಲ್ಲೆಲ್ಲೂ ಹಿಂಸೆಯನ್ನು ಪ್ರಯೋಗಿಸುವುದರಿಂದ ಸತ್ಯದರ್ಶನ ಸಾಧ್ಯವಾಗುವುದಿಲ್ಲ, ಇದು ಈಶ್ವರ ರೂಪದ ಸತ್ಯ, ನಮ್ಮ ದೇಶದ ಕೋಟ್ಯಂತರ ಜನರ ಹೃದಯಲದಲ್ಲಿ ನೆಲಸಿದೆ. ಎಲ್ಲಿಯವರೆಗೆ ಈ ಬಡ ಅಂತ್ಯಜ ಗೌರವದಿಂದ ತನ್ನ ತಲೆ ಎತ್ತಿ ಶೋಷಣೆಮುಕ್ತನಾಗಿ ಸಮಾಜದಲ್ಲಿ ಬದುಕಲಾಗುವುದಿಲ್ಲವೋ ಅಲ್ಲಿಯವರೆವಿಗೆ ಸತ್ಯಸಾಧನೆ ವ್ಯರ್ಥ. ಈ ಧ್ಯೇಯ ತಲುಪಲು ಅಹಿಂಸೆಯಿಂದಲೇ ಸಾಧ್ಯವಾಗುತ್ತಿತ್ತು. ಸ್ವತಃ ಕಷ್ಟಪಡದೆ ಸಿಗುವ ಸಂಪತ್ತಿನಲ್ಲಿ ಹಿಂಸೆ ಇದ್ದೇ ಇರುತ್ತಾದ್ದರಿಂದ ಈ ಧ್ಯೇಯ ಪೂರೈಸಲು ಅಹಿಂಸೆಯಿಂದ ಮಾತ್ರ ಸಾಧ್ಯ. ಹಿಂಸೆ ಇರುವಲ್ಲಿ ಈಶ್ವರ ವಾಸಿಸುವುದಿಲ್ಲ ಆದ್ದರಿಂದ ಈ ನಿರ್ಧನು ನಿರೀಹ ದರಿದ್ರರಲ್ಲಿ ಈಶ್ವರ ವಾಸಮಾಡುತ್ತಾನೆ. ಅವರ ಸೇವೆಗೆ ಅರ್ಪಿಸುವುದು ಬಾಪೂಜಿಯ ಜೀವನದ ಉದ್ದೇಶವಾಗಿತ್ತು. ಕಾಂಗ್ರೆಸ್ ರಾಷ್ಟ್ರೀಯ ಸಂಸ್ಥೆಯಾಗಿತ್ತು ಆದರೆ ಅದರ ಮಾಧ್ಯಮದಿಂದ ಈ ಕೋಟ್ಯಂತರ ದೀನ–ಹೀನರ ಸೇವೆ ಮಾಡಲು ಸಾಧ್ಯವಾಗುತ್ತಿತ್ತು. ಆದ್ದರಿಂದ ಬಾಪೂಜಿ ಕಾಂಗ್ರೆಸ್‌ನ ಸಕ್ರಿಯ ಸದಸ್ಯರಾಗಿದ್ದರು, ಹೃದಯದಲ್ಲಿ ಅಹಿಂಸೆ ಇದ್ದಾಗ ಬಡವರ ಸೇವೆ ಮಾಡಲಾಗುತ್ತದೆ. ಆದುದರಿಂದ 'ಅಹಿಂಸಾ ಪರಮೋಧರ್ಮ' ಆಗುತ್ತದೆ. ಇದೇ ಅಹಿಂಸೆಯ ವಾಸ್ತವಿಕವಾದ ಆಧ್ಯಾತ್ಮಿಕ ಮಿಮಾಂಸೆ.

ಅಹಿಂಸೆಯ ವ್ಯಾವಹಾರಿಕ ಮಹತ್ವಕೂಡ ಕಡಿಮೆಯದಲ್ಲ. ನಮ್ಮ ದೇಶದಲ್ಲಿ ಅನೇಕ ತರಹೆಯ ವಿಚಾರಪ್ರವಾಹಗಳಿವೆ : ಧಾರ್ಮಿಕ, ರಾಜಕೀಯ, ದಾರ್ಶನಿಕ ವೈವಿಧ್ಯಗಳೊಂದಿಗೆ ಜಾತಿ ಭೇದ ಕೂಡ ಕೂಡಿಕೊಂಡಿದೆ. ಈ ತರಹೆಯ ಪ್ರಾಣ ಹರಣದ ಭೇದಭಾವಗಳ ನಡುವೆಯೂ ದೇಶವನ್ನು ಅಖಂಡವಾಗಿಡಲು ಅಹಿಂಸೆಯೊಂದೇ ಉಪಾಯ ಇರುವುದು. ಬೇರೆ ದೇಶಗಳಲ್ಲಿ ಕೂಡ ಹೀಗೇ ಅನೇಕ ತರಹೆಯ ಸಮಾಜ ವ್ಯವಸ್ಥೆಗಳಿವೆ. ಆದರೆ ಅಲ್ಲಿಯ ಜನರಲ್ಲಿ ಎರಡು ಗುಣಗಳು ವಿಶೇಷವಾಗಿ ಕಂಡುಬರುತ್ತದೆ, ಒಂದು ಸಂಯಮ ಮತ್ತೊಂದು ರಾಷ್ಟ್ರಪ್ರೇಮ. ನಮ್ಮಲ್ಲದು ನೋಡಲು ಸಿಗುವುದೇ ಕಡಿಮೆ, ಅವರು ಎಂತಹ ಪರಿಸ್ಥಿತಿ ಇದ್ದರೂ ಒಂದು ಮಾತಿಗೆ ಇನ್ನೊಂದು ಅರ್ಥಕಲ್ಪಿಸಿ ರಾಷ್ಟ್ರದ್ರೋಹ ಮಾಡುವ ಮಟ್ಟಿಗೆ ಹೋಗುವುದಿಲ್ಲ. ನಮ್ಮ ದೇಶದ ವಿಶೇಷತೆ ಮತ್ತು ಸಾಮಾಜಿಕ ವೈವಿಧ್ಯದಲ್ಲೂ ಭಾರತೀಯ ವಿವೇಕವನ್ನ ಉಳಿಸಿಕೊಂಡು ಅದನ್ನ ಬೆಳಸಬೇಕು ಅಂದರೆ ಅಹಿಂಸೆಯೊಂದೇ ಉಪಾಯ ಇದ್ದದ್ದು. ಬಾಪೂಜಿ ಈ ವಿಷಯವನ್ನು ಬಹಳ ಚೆನ್ನಾಗಿ ಅರಿತಿದ್ದರಾದ್ದರಿಂದ ನಮ್ಮ ದೇಶ ಯಾವತ್ತೋ ಹರಿದು ಹಂಚಿಹೋಗಿರುತ್ತಿತ್ತು, ನಿಜವಾಗಿ ನೋಡಿದರೂ ಅಹಿಂಸೆ ಅಂಥ ಅಪ್ರಯೋಜಕವಾದ ಅಸಫಲವಾದ ಮಾರ್ಗಕೂಡ ಅಲ್ಲ. ಪ್ರಪಂಚದ ಯಾವುದೇ ದೇಶ ಅದು ಸಭ್ಯತೆಯನ್ನು

ತೀವ್ರವಾಗಿ ನೋಡಿದಾಗ, ಪ್ರತಿಯೊಂದು ರೀತಿಯ ಸಮಾಜ ವ್ಯವಸ್ಥೆ ಕೂಡ ಅಹಿಂಸೆ ಮೇಲೆಯೇ ನಿಂತಿದೆ. ಮನೆಯಲ್ಲಿ ಒಟ್ಟಿಗೆ ಇರುವುದು, ಸಮಾಜದಲ್ಲಿ ಕುಳಿತುಕೊಳ್ಳುವುದು, ಏಳುವುದು, ಶಿಕ್ಷಣ ಪಡೆಯುವುದು, ವ್ಯಾಪಾರ, ಉದ್ಯೋಗ, ಆಡಳಿತ ಎಲ್ಲವೂ ಚೆನ್ನಾಗಿ ನಡೆಯುವುದಕ್ಕೆ ಕಾರಣ ಅಹಿಂಸೆಯೇ. ಅಂದರೆ ಸಹಕಾರ ಶಕ್ತಿ, ಒಪ್ಪಂದವನ್ನು ಅನುಸರಿಸುತ್ತೇವೆ ಮತ್ತೆ ಸಹಯೋಗ ಪಡೆದು ಕೆಲಸ ಮಾಡುತ್ತೇವೆ. ಅಹಿಂಸೆ ಒಡೆಯಿತು ಅಂದರೆ ಅಲ್ಲಿ ಕೋಪ ಹುಟ್ಟಿಕೊಳ್ಳುತ್ತದೆ. ಇನ್ನು ಹೊಡೆತ–ಬಡಿತ, ಅತ್ಯಾಚಾರ, ಹತ್ಯೆ ಎಲ್ಲ ನಡೆಯುತ್ತೆ. ಸದ್ಯ, ಆ ತರಹ ಹಿಂಸೆ ಬಹಳ ಕಡಿಮೆ ಇರುತ್ತೆ, ಇಲ್ಲದಿದ್ದರೆ ಸಮಾಜ ವ್ಯವಸ್ಥೆ ಸ್ಥಿರವಾಗಿ ನಿಲ್ಲುವುದೇ ಇಲ್ಲ. ತೀವ್ರವಾಗಿ ರಕ್ತಪಿಪಾಸೆ ಇಟ್ಟುಕೊಂಡಿರುವ ಕೊಲೆಗಾರ ಸಹಿತ ತನ್ನ ಜೀವನದಲ್ಲಿ ಸುಖ–ಶಾಂತಿ, ಸಂತೋಷ, ನಂಬಿಕೆಯಾದವನು ಯಾವ ಕ್ಷಣ ಬೇಕಾದರೂ ಬಲಿದಾನಕ್ಕೆ ಸಿದ್ಧವಾಗಿರುತ್ತಾನೆ. ಅವನ ಹೃದಯದಲ್ಲಿ ದ್ವಂದ್ವ ಇರುವುದಿಲ್ಲ. ಅದರಿಂದ ಅವನು ಹೆಚ್ಚು ಸಂಯಮದಿಂದ, ದ್ವಂದ್ವ ಇಲ್ಲದ ಸತ್ಯಕ್ಕೆ ಹಠ ಮಾಡಿ ನಿಲ್ಲುತ್ತಾನೆ, ಆಗ ಅವನ ಸಹನಶಕ್ತಿ ಅಲೌಕಿಕವಾದುದ್ದಾಗುತ್ತದೆ. ಅವನು ಸೋತಾಗ ಪರಾಜಿತನಾದೆ ಅನ್ನುವ ದುಃಖ ಇರಲ್ಲ. ವಿಜಯಿಯಾದವನು ತನ್ನೆಲ್ಲ ಪಾಶವಿಕ ಶಕ್ತಿ ಇಟ್ಟುಕೊಂಡಿದ್ದರೂ ಅವನು ಚಿಕ್ಕವನಾಗಿ ಹೋಗ್ತಾನೆ. ಸತ್ಯಾಗ್ರಹದ ವಿಜಯದಲ್ಲಿ ಅಹಂಕಾರ ಇರುವುದಿಲ್ಲ, ಅದರಿಂದ ಯುದ್ಧ ಕಳೆದ ಮೇಲೆ ಕಟುಭಾವದಿಂದ ದೂರಾಗಿ ಮುಕ್ತ ವಾತಾವರಣದಲ್ಲಿ ಸಹಯೋಗ–ಸದ್ಭಾವನೆ ಹುಟ್ಟಿಕೊಳ್ಳುತ್ತದೆ.

ಇಂತಹ ಸ್ವಚ್ಛವಾದ ಆದರೆ ಸರಳ ಸಿದ್ಧಾಂತದಿಂದಾಗಿ ಬಾಪೂಜಿ ಕಾಂಗ್ರೆಸ್ಸನ್ನು ಪ್ರತಿ ವರ್ಷವೂ ಉತ್ಸವ ಆಚರಿಸುವುದನ್ನು ಬಿಟ್ಟು ಒಂದು ಶಕ್ತಿಶಾಲಿ, ಪ್ರತಾಪದಿಂದ ಕೂಡಿದ ಸಂಸ್ಥೆಯಾಗಿ ಮಾಡಿದ್ದರು, ಮತ್ತು ಸತ್ಯ–ಅಹಿಂಸೆ ಮೇಲೆ ಆಧರಿಸಿದ ರಾಜಕೀಯ ವಿಚಾರಗಳನ್ನು ವಿಕಸಿತಗೊಳಿಸಿದ್ದರು. ಈ ಮೂಲ ತತ್ವಗಳನ್ನಿಟ್ಟುಕೊಂಡು ಬಾಪೂಜಿ ಬಡಜನರ ಸಹಾಯ ಪಡೆದು ಕಾಂಗ್ರೆಸ್ ಮೂಲಕ ಆಂದೋಳನ ನಡೆಸಿದ್ದರು. ದೇಶದ ನಲವತ್ತು ಕೋಟಿ ಜನರಿಗೆ ಈ ಸಿದ್ಧಾಂತಗಳನ್ನು ತಿಳಿಸಿಕೊಡುವುದಕ್ಕೋಸ್ಕರ ಬಾಪೂಜಿ ರಚನಾತ್ಮಕ ಕಾರ್ಯಗಳನ್ನು ಆರಂಭಿಸಿದರು. ಖಾದಿ ಉತ್ಪಾದನೆ, ಗ್ರಾಮೋದ್ಯೋಗ, ಅಸ್ಪೃಶ್ಯತೆಯನ್ನು ತೊಡೆದುಹಾಕುವುದು ಇವುಗಳಲ್ಲಿ ಮುಖ್ಯವಾಗಿದ್ದವು. ಇವನ್ನೆಲ್ಲಾ ಕಲಿಸುವ ಮಾರ್ಗ ಬುನಿಯಾದಿ ತಾಲೀಮ್ (ಮೂಲ ಶಿಕ್ಷಣ) ಆಗಿತ್ತು, ಕಾಂಗ್ರೆಸ್ ಈ ರಚನಾತ್ಮಕ ಕಾರ್ಯಕ್ರಮಗಳನ್ನೆಲ್ಲಾ ಸ್ವೀಕರಿಸಿತ್ತು. ಈ ಕಾರ್ಯಕ್ರಮಗಳಿಂದ ದೇಶದಲ್ಲಿ ತುಳಿತಕ್ಕೊಳಗಾಗಿದ್ದ ಜನರಲ್ಲಿ ಧೈರ್ಯ ಮೂಡಿತು, ದುರ್ಬಲರಾದ ಜನರಲ್ಲಿ ಸತ್ಯಾಗ್ರಹದ ಶಕ್ತಿಯನ್ನು ಜಾಗೃತ ಗೊಳಿಸಲು ಅವರ ಮಟ್ಟಕ್ಕೆ ಹೋಗಲೇಬೇಕು. ಅದಕ್ಕೆ ತ್ಯಾಗ, ಬಲಿದಾನ, ತೀವ್ರ ಬಡತನವನ್ನೂ ತಮ್ಮದಾಗಿಸಬೇಕಾದ್ದು ಕೂಡ ಅನಿವಾರ್ಯವಾಗಿತ್ತು. ಕಾಂಗ್ರೆಸ್

ಇದನ್ನು ಮಾಡಿ ತೋರಿಸಿತ್ತು. ದೇಶದ ಸಾವಿರಾರು ಮಂದಿ ಶ್ರೀಮಂತರು ತಮ್ಮ ಸರ್ವಸ್ವವನ್ನೂ ದಾನ ಮಾಡಿ, ನೆಲದ ಮೇಲೆ ಮಲಗಿ, ದಪ್ಪ ಬಟ್ಟೆ ಉಟ್ಟು, ಕೈಯಿಂದ ಕೆಲಸ ಮಾಡಿ, ಬಡವರಲ್ಲಿ ಒಬ್ಬರಾಗುವುದನ್ನೆಲ್ಲಾ ಶುರು ಮಾಡಿಕೊಂಡಿದ್ದರು. ಹದಿನಾಲ್ಕು ವರ್ಷಕಾಲ ಈ ಕ್ರಮ ನಡೆಯಿತು, ಈ ಸಿದ್ಧಾಂತಗಳಲ್ಲಿ ದೋಷ ಕೂಡಿಕೊಂಡಾಗಲೆಲ್ಲ ಬಾಪೂಜಿ ಅಹಿಂಸಕ ಆಂದೋಳನಗಳನ್ನೂ ನಿಲ್ಲಿಸಿಬಿಟ್ಟಿದ್ದರು. ಆದರೆ ಈ ಸಿದ್ಧಾಂತಗಳ ಪರಿಣಾಮವಾಗಿ ೧೯೩೦–೩೨ರ ಆಂದೋಳನಗಳು ಅತಿ ಸಫಲವಾದವು. ಅದರಿಂದ ಬ್ರಿಟಿಷ್ ರಾಜ್ಯ ಕೂಡ ನಡುಗಿಹೋಗಿತ್ತು. ನೂರಾರು ವರ್ಷಗಳ ಗುಲಾಮಗಿರಿಯ ನಂತರವೂ ದೇಶದ ಜನರಲ್ಲಿ ಅಷ್ಟರ ಮಟ್ಟಿಗೆ ಆಧ್ಯಾತ್ಮಿಕ ತೇಜಸ್ಸು ಉಳಿದುಕೊಂಡಿತ್ತು. ಗಾಂಧಿ, ಬಾಪೂಜಿಯ ಮಾರ್ಗದಲ್ಲಿ ತಮ್ಮ ಉದ್ಧಾರವಾಗುತ್ತದೆಯೆಂದು ಅವರು ತಿಳಿದುಕೊಂಡಿದ್ದರು, ಸಾಧುಗಳ ಸಂಸ್ಕೃತಿಯ ಈ ದೇಶದಲ್ಲಿ ಗಾಂಧೀಜಿಯಲ್ಲಿ ಗೌರವ, ವ್ಯವಸ್ಥೆಯನ್ನ ಬಯಸುತ್ತಾನೆ, ಉಗ್ರನಾದರೆ ನಮಗೇ ಕಷ್ಟ, ಬೇರೆಯವರಿಗೂ ತೊಂದರೆ, ಅದು ಹತ್ಯೆಯಲ್ಲಿ ಕೊನೆಗೊಳ್ಳುತ್ತದೆ. ಆದರೆ ಅವನ ಜೀವನದಲ್ಲೂ ಯಾವುದರಿಂದ ಸುಖ ಆರಾಮ ಕೊಡುತ್ತದೆಯೋ ಅದು ಅಹಿಂಸೆಯಿಂದಲೇ ಹುಟ್ಟುತ್ತೆ. ಹಾಗಾಗಿ ಜೀವಿಗಳೆಲ್ಲಕ್ಕೂ ಅಹಿಂಸೆ ಸ್ವಾಭಾವಿಕ ಧರ್ಮವಾಗಿರುತ್ತದೆ, ಅದಕ್ಕೆ ವಿರುದ್ಧವಾಗಿ ಮನ–ವಚನ–ಕರ್ಮದಲ್ಲಿ ಹಿಂಸೆ ಬಂದರೆ ಅದರಿಂದ ಆತಂಕ, ದುಃಖ ಹುಟ್ಟಿಕೊಳ್ಳುತ್ತದೆ. ದುಃಖವನ್ನ ಬಹುಶಃ ಯಾವ ಮನುಷ್ಯನೂ ಇಷ್ಟಪಡುವುದಿಲ್ಲ. ಆದ್ದರಿಂದ ಅಹಿಂಸೆಯೇ ಮನುಷ್ಯನ ಮೂಲಸ್ವಭಾವ ಮತ್ತು ಅದನ್ನ ಅನುಸರಿಸುವುದರಿಂದ ಮಾತ್ರ ಸಮಾಜ ಹಾಗೂ ಆಡಳಿತ ವ್ಯವಸ್ಥೆ ಉಳಿಯುತ್ತೆ. ಇಲ್ಲಿ ಎಲ್ಲರೂ ತಮ್ಮ ಪುರುಷಾರ್ಥ, ಇಷ್ಟಕ್ಕೆ ಅನುಗುಣವಾಗಿ ಪ್ರಗತಿ ಸಾಧಿಸುತ್ತಾರೆ. ಆದರೆ ಹಾಗೆ ಪ್ರಗತಿ ಸಾಧಿಸುವಾಗ ಇನ್ನೊಬ್ಬರ ಇಷ್ಟ–ಅನಿಷ್ಟಗಳನ್ನು ಗಮನದಲ್ಲಿ ಇಟ್ಟುಕೊಂಡು ಮುಂದುವರಿಯುವುದಕ್ಕಾಗುತ್ತೆ. ವಿಕಾಸದ ಅಂತಹ ವ್ಯವಸ್ಥೆಯನ್ನ ಡೆಮಾಕ್ರೆಸಿ ಅನ್ನುತ್ತಾರೆ. ಪರಸ್ಪರ ಗೌರವ ಭಾವನೆ, ಸಮಭಾವನೆ ಇಲ್ಲದೆ ಇದ್ದಾಗ ಅಲ್ಲಿ ಹಿಂಸೆ, ಅದಕ್ಕೆ ಪರಿಣಾಮ ಸರ್ವಾಧಿಕಾರ ನಡೆಯುತ್ತೆ. ಈ ದೃಷ್ಟಿಯಿಂದ ಯೋಚಿಸಿದಾಗ ಬಾಪೂಜಿಯ ಅಹಿಂಸೆ ಒಂದೇ ಸಫಲ ಮಾರ್ಗ ಎಂದು ಅನಿಸುತ್ತದೆ.

ದೇಶದ ಸ್ವಾತಂತ್ರ್ಯಕ್ಕೆ ಅಹಿಂಸೆಯ ಮೂರನೆಯ ಆಯಾಮ ಕೂಡ ಮಹತ್ವದ್ದಾಗಿತ್ತು. ರಾಜಕೀಯ ಸಿದ್ಧಾಂತದ ಪ್ರಕಾರ ಎದುರಾಳಿಗಳ ಹತ್ತಿರ ಇರುವ ಶಸ್ತ್ರಗಳನ್ನು ಬಿಟ್ಟು ಬೇರೆಯ ಅಸ್ತ್ರಗಳನ್ನು ಉಪಯೋಗಿಸುವುದರಿಂದಲೇ ವಿಪಕ್ಷವನ್ನು ಸೋಲಿಸುವುದೂ ಸಾಧ್ಯವಾಗುತ್ತೆ, ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ನಲವತ್ತು ಕೋಟಿ ಜನರಿಗೆ ಆಯುಧಗಳನ್ನ ಕೊಡುವುದಕ್ಕೆ ಸಾಧ್ಯವಿರಲಿಲ್ಲ. ಸರಕಾರದ ಹತ್ತಿರ ಅಪಾರವಾಗಿ ಅಧಿಕಾರ–ಸಾಧನ ಸಾಮಗ್ರಿಗಳು, ಸಂಪತ್ತು ಇತ್ತು, ನಮ್ಮ

ಬಡದೇಶ ಇವುಗಳಲ್ಲಿ ಯಾವ ಹಂತದಲ್ಲೂ ವಿದೇಶಿ ರಾಜ್ಯವನ್ನ ಎದುರಿಸಲು ಸರಿಯಿರಲಿಲ್ಲ, ಅಥವಾ ಸೋಷಲಿಸ್ಟ್, ಕಮ್ಯುನಿಸ್ಟ್ ವಿಚಾರಗಳನ್ನಿಟ್ಟುಕೊಂಡು, ಮುಚ್ಚಿ, ಭೂಗತನಾಗಿ ಎದುರಿಸುವದಕ್ಕಾಗುತ್ತಿರಲಿಲ್ಲ. ನೂರು–ಇನ್ನೂರು ಜನರಾದರೆ ವೇಷ ಬದಲಾಯಿಸಿಕೊಂಡು ಮರೆಯಾಗಿ ಇರಬಹುದು, ಪೂರ್ತಿ ದೇಶ ಮರೆಯಾಗಿರುವುದಕ್ಕಾಗಲ್ಲ. ಆದ್ದರಿಂದ ಅಂತಹ ದೇಶಕ್ಕೆ ಅಹಿಂಸೆಯೇ ಅಮೋಘವಾದ ಅಸ್ತ್ರವಾಗಿತ್ತು, ಅದರ ನೈತಿಕ ಶಕ್ತಿ ಎಷ್ಟು ಪ್ರಖರವಾಗಿತ್ತೆಂದರೆ ಚಕ್ರಾಧಿಪತ್ಯದ ತೋಪುಗಳು ಕೂಡ ಅದರೆದುರಿಗೆ ಪ್ರಯೋಜನಕ್ಕೆ ಬಾರದವಾಗುತ್ತಿದ್ದವು. ಈ ಅಹಿಂಸಕ ಆಂದೋಳದಲ್ಲಿ ಅವಿಚಲವಾಗಿ ಇರಬೇಕಾದ ಪರಾಕ್ರಮ ಆಗತ್ಯವಾಗುತ್ತೆ. ಅದು ಬಂದೂಕ ಹಿಡಿದಿರುವವನ ಬಾಡಿಗೆಗೆ ಪಡೆದ ಧೈರ್ಯದಲ್ಲಿರುವುದಿಲ್ಲ, ಅಹಿಂಸಕ ಕ್ರಾಂತಿಕಾರಿಗೆ ಕುಳಿತಲ್ಲೇ ಅವನಿಗೊಂದು ಯುದ್ಧಭೂಮಿ ನಿರ್ಮಿತವಾಗುತ್ತೆ, ಅವನು ಅನ್ಯಾಯವನ್ನ ವಿರೋಧಿಸಬೇಕಾಗುತ್ತದೆ, ಅಷ್ಟೇ. ಆ ತರಹೆಯ ಸತ್ಯಾಗ್ರಹಿ ಅವರು ತಮ್ಮ ಮಹಾತ್ಮರನ್ನು ಕಂಡುಕೊಂಡಿದ್ದರು. ಇದರಿಂದ ಜನರು ಬಾಪೂಜಿಯ ಮುಖಂಡತ್ವವನ್ನು ತಲೆಬಾಗಿ ಸ್ವೀಕರಿಸಿದ್ದರು. ದೊಡ್ಡ ಜನ, ಕಾಂಗ್ರೆಸ್ ನಾಯಕರು ತರ್ಕಬುದ್ಧಿಯ ವಿವಾದಗಳಲ್ಲಿ ಈ ಸರಳ ಸಿದ್ಧಾಂತಗಳ ಶಕ್ತಿಯನ್ನು ಕುರಿತಂತೆ ಅನುಮಾನಿಸುತ್ತಿದ್ದರು. ಆದ್ದರಿಂದ ಕಾಂಗ್ರೆಸ್ ಅಹಿಂಸೆ ಮತ್ತು ಸತ್ಯ ನೀತಿಯನ್ನು ಸ್ವೀಕರಿಸಿತ್ತು, ಆದರೆ ತಮ್ಮ ಪ್ರಸ್ತಾವಗಳಲ್ಲಿ ಯಾವಾಗಲೂ ಸ್ವಾತಂತ್ರ್ಯಕ್ಕಾಗಿ, 'ಶಾಂತಿಯಿಂದ ಕೂಡಿದ, ನ್ಯಾಯೋಚಿತ ಸಾಧನಗಳ ಮೂಲಕ' ಎಂಬ ಶಬ್ದಗಳನ್ನು ಪ್ರಯೋಗಿಸುತ್ತಿದ್ದರು, ಅದಕ್ಕೆ ಮಿಕ್ಕು ಅದರಲ್ಲಿ ಶ್ರದ್ಧೆ ಉಳಿಸಿಕೊಂಡಿರಲಿಲ್ಲ.

ಹದಿನಾಲ್ಕು ವರ್ಷಗಳ ಕಾಲ (೧೯೩೪ರವರೆಗೂ) ಬಾಪೂಜಿ ಕಾಂಗ್ರೆಸ್‌ನ ಸದಸ್ಯರಾಗಿದ್ದರು. ಕಾಂಗ್ರೆಸ್ ನೇತಾರರ ದೃಢತೆ ಸಡಿಲವಾಗುತ್ತಿದೆಯೆನಿಸಿದಾಗ, ಆಜ್ಞಾಪಾಲನೆ ಒಂದೇ ಉಳಿದಿದೆ ಎನಿಸಿದಾಗ ಅವರು ಕಾಂಗ್ರೆಸ್‌ನಿಂದ ತನ್ನನ್ನು ಬಿಡಿಸಿಕೊಂಡುಬಿಟ್ಟರು. ಅದರಲ್ಲಿ ಕಟುತೆ – ಅಹಂಕಾರ ಇರಲಿಲ್ಲ, ಅದರಿಂದ ಕಾಂಗ್ರೆಸ್ ಮುಖಂಡರು ಬಾಪೂಜಿಯ ಪರಮಭಕ್ತರಾಗಿದ್ದೂ, ಬಾಪೂಜಿ ಅವರಿಗೆ ಸಹಾಯ ಕೂಡ ಮಾಡುತ್ತಲಿದ್ದರು, ನಿರ್ಣಯ ಮಾತ್ರ ಕಾಂಗ್ರೆಸ್ಸಿಗರದೇ ಆಗಿರುತ್ತಿತ್ತು. ಕಾಂಗ್ರೆಸ್ ನೇತಾರರು ಅದನ್ನು ನಡೆಸುತ್ತಿದ್ದರು. ೧೯೪೬ರಲ್ಲಿ ಮಧ್ಯಂತರ ಸರಕಾರ ರಚಿತವಾದ ಮೇಲೆ ಕಾಂಗ್ರೆಸ್ ನೇತಾರರು ಪುನಃ ಚಳವಳಿ ನಡೆಸಲು, ಜೈಲಿಗೆ ಹೋಗಲು ಸಿದ್ಧವಾಗಿರಲಿಲ್ಲ, ಎಲ್ಲರೂ ಆಯಾಸಗೊಂಡಿದ್ದರು, ಮುದುಕರಾಗಿದ್ದರು, ಮತ್ತು ಆರಾಮವಾಗಿ ತಪಸ್ಸಿನ ಫಲವನ್ನು ಅನುಭವಿಸಬಯಸುತ್ತಿದ್ದರು. ಅದರಿಂದ ಕಾಂಗ್ರೆಸ್ ಸರಕಾರಕ್ಕೆ ಅಂಟಿಕೊಂಡು ಕುಳಿತಿತ್ತು, ಮುಸ್ಲಿಂ ಲೀಗ್‌ನ ವಕ್ರ ವ್ಯವಹಾರಗಳನ್ನೆಲ್ಲಾ ಸಹಿಸುತ್ತಿದ್ದರು, ಲಾರ್ಡ್ ವೆವೆಲ್‌ನ ೧೯೪೫ರ ಶಿಮಲಾ ಸಮ್ಮೇಳನದಲ್ಲಿ ಗಾಂಧೀಜಿ ಅದನ್ನು ಸ್ಪಷ್ಟವಾಗಿ ವಿರೋಧಿಸಿದ ಮೇಲೂ ಸವರ್ಣ

ಹಿಂದೂ ಮತ್ತು ಮುಸಲ್ಮಾನರ ನಡುವೆ 'ಪ್ಯಾಂಟಿ – ಸಮಾನತೆ'ಯ ಸಿದ್ಧಾಂತವನ್ನು ಒಪ್ಪಿಕೊಂಡರು, ಆದರೆ ಸಮಯ ಕಳೆದ ಹಾಗೆ ಲೀಗ್ ಅದನ್ನು ತನ್ನ ಹಕ್ಕೆಂದೇ ಭಾವಿಸಿತು. ಕ್ಯಾಬಿನೆಟ್ ಮಿಷನ್‌ನಲ್ಲಿ ವಿಭಜನೆಯುನ್ನು ತೀವ್ರವಾಗಿ ವಿರೋಧಿಸಲಾಯಿತು. ಆದರೆ ಲಾರ್ಡ್ ಬೆವೆಲ್ ಹೇಳಿದನೆಂದು ಕಾಂಗ್ರೆಸ್ ನೇತಾರರು ಆದರ್ಶಗಳು ಹಾಗೂ ಲಿಖಿತ ನೀತಿಯನ್ನು ಕುರಿತಂತೆ ಯಾವ ಲಿಖಿತ ಷರತ್ತು – ಸ್ಪಷ್ಟೀಕರಣವನ್ನು ತೆಗೆದುಕೊಳ್ಳದೇ ಮುಸ್ಲಿಂ ಲೀಗ್‌ಗೆ ಮಂತ್ರಿಮಂಡಳದಲ್ಲಿ ಜಾಗ ಕೊಟ್ಟಿದ್ದರು. ಗೃಹ ಮತ್ತು ರಕ್ಷಣಾ ಸಚಿವಾಲಯಗಳನ್ನು ತೆಗೆದುಕೊಂಡಾದ ಮೇಲೆ ಕಾಂಗ್ರೆಸ್‌ಗೆ ವಿದೇಶ ವಿಭಾಗದ ಮೋಹ ಬಿಡಲಾಗದಾಯಿತು. ೧೯೪೬ರ ಅಕ್ಟೋಬರ್‌ನಲ್ಲಿ ವಿದೇಶ ನೀತಿ, ಅಥವಾ ವಿದೇಶೀ ಸಂಬಂಧಗಳಲ್ಲಿ ಹೆಚ್ಚೇನೂ ಆಗುವದು ಉಳಿದಿರಲಿಲ್ಲ. ನೆಹರೂಜಿ ವಿದೇಶಾಂಗ ಸಚಿವಾಲಯುದ ಆಕರ್ಷಣೆಯಿಂದಾಗಿ ಹಣಕಾಸು ಮತ್ತು ವಾರ್ತಾ ಇಲಾಖೆಯ ಸಚಿವಾಲಯವನ್ನು ಲೀಗ್‌ಗೆ ಬಿಟ್ಟುಕೊಡಬೇಕಾಯಿತು. ಹೀಗಾಗಿ ಹಣಕಾಸಿನ ವಿಷಯ ಮತ್ತು ಸಮಾಚಾರ ವ್ಯವಸ್ಥೆ ಇವೆರಡೂ ಲೀಗ್ ಕೈಲಿದ್ದವು. ೧೯೪೭ರಲ್ಲಿ ಸ್ವಾತಂತ್ರ್ಯಕ್ಕೆ ಮೊದಲು ಎಲ್ಲ ಟೆಲಿಫೋನ್ ಕೇಂದ್ರಗಳಲ್ಲಿ ಮುಸಲ್ಮಾನ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರು, ಅದರಿಂದ ಎಲ್ಲೂ ಯಾವ ಸುದ್ದಿಯೂ ತಲಪುತ್ತಿರಲಿಲ್ಲ, ಮುಸಲ್ಮಾನ ಆಫೀಸರರಿಂದ ನೌಕರರವರೆವಿಗೆ ಎಲ್ಲಾ ಸ್ಟಾಫ್ ಲೀಗ್ ಸಮರ್ಥಕರಾಗಿ ತಂತ್ರವನ್ನು ಪೂರ್ತಿಯಾಗಿ ಹಾಳುಮಾಡಹೊರಟಿದ್ದರು. ಮಧ್ಯಂತರ ಸರಕಾರ ಎಷ್ಟು ಅನೀತಿಕರವಾಗಿ ರಚಿತವಾಗಿತ್ತೆಂದರೆ ಕ್ಯಾಬಿನೆಟ್‌ನ ಸಾಮೂಹಿಕ ಜವಾಬ್ದಾರಿಯ ಸಿದ್ಧಾಂತವನ್ನು ಕುರಿತು ಚರ್ಚೆ ಕೂಡ ನಡೆದಿರಲಿಲ್ಲ, ಆದ್ದರಿಂದ ಕಾಂಗ್ರೆಸ್ ಮಂತ್ರಿಮಂಡಳ ತೀರ ಅಸಹಾಯಕವಾಗಿತ್ತು. ಲಾರ್ಡ್ ಬೆವೆಲ್ ಮುಸ್ಲಿಂಲೀಗ್ ಬಗ್ಗೆ ಪಕ್ಷಪಾತ ಮಾಡುತ್ತಿದ್ದುದು ಸ್ಪಷ್ಟವಾಗಿತ್ತು. ಆ ಮುಸ್ಲಿಂ ಲೀಗ್ ತನ್ನ ಪ್ರಿಯಸಂಸ್ಥೆ ಎಂದು ಆತ ಬಾಪೂಜಿಯೊಡನೆ ಸ್ಪಷ್ಟವಾಗಿ ಒಪ್ಪಿಕೊಂಡಿದ್ದ. ಆದುದರಿಂದ ಲೀಗ್ ಮಂತ್ರಿಗಳ ಹಠಮಾರಿ ನೀತಿ ಅಥವಾ ಅನ್ಯಾಯವನ್ನವರು ಯಾವಾಗಲೂ ತಡೆಯುತ್ತಿರಲಿಲ್ಲ. ಲೀಗ್‌ನವರು ಹಿಂದೂ ಸರಕಾರವನ್ನು ನಾವು ನಡೆಯಗೊಡುವುದಿಲ್ಲವೆಂದು ಹೇಳಲು ಅದನ್ನು ಮುರಿಯುವುದಕ್ಕಾಗಿಯೇ ತಾವು ಮಂತ್ರಿಮಂಡಳಕ್ಕೆ ಸೇರಿರುವುದಾಗಿ ಹೇಳಲೂ ಹಿಂಜರಿಯುತ್ತಿರಲಿಲ್ಲ. ಮುಸ್ಲಿಂ ಲೀಗ್ ಮಂತ್ರಿಮಂಡಳ ಕಾಂಗ್ರೆಸ್ ಮಂತ್ರಿಮಂಡಳವನ್ನು ಚೆನ್ನಾಗಿ ಸಿಕ್ಕಿಹಾಕಿಸಿದ್ದರೆಂದರೆ ಕೆಡುತ್ತಿದ್ದ ಕಾನೂನು ವ್ಯವಸ್ಥೆಯನ್ನು ಸುಧಾರಿಸುವುದಕ್ಕೆ ಕಾಂಗ್ರೆಸ್ ಮುಖಂಡರಿಗೆ ಆಗುತ್ತಿರಲಿಲ್ಲ. ಮುಸ್ಲಿಂ ಲೀಗ್ ಸರಕಾರ ನಡೆಸುವುದಕ್ಕೆ ಇಷ್ಟಪಡುತ್ತಿರಲಿಲ್ಲ, ನಡೆಸಲೂ ಬಿಡುತ್ತಿರಲಿಲ್ಲ. ಅವರ ಈ ಉದ್ದೇಶಕ್ಕೆ ಬ್ಯುರಾಕ್ರೆಸಿ ಪೂರ್ತಿಯಾಗಿ ಸಮರ್ಥನೆ ನೀಡುತ್ತಿತ್ತು. ವೈಸ್‌ರಾಯ್‌ನ ಈ ಅರಾಜಕತೆಗೆ ಹೆಚ್ಚು ವಿರೋಧವಿರಲಿಲ್ಲ, ಹಾಗಾಗಿ ಸೈನ್ಯಕ್ಕೂ

ಶಾಂತಿ ನೆಲೆಗೊಳಿಸುವ ಬಗ್ಗೆ ಚಿಂತೆ ಇರಲಿಲ್ಲ.

ದೇಶದ ರಾಜರಿಗೆ ಇಂಗ್ಲಿಷ್‌ರ ಅಧಿಕಾರ ಇಷ್ಟವಾಗಿತ್ತು. ಅವರಿಗೆ ತಮ್ಮ ಅಧಿಕಾರ – ಐಶ್ವರ್ಯಕ್ಕೆ ಅಡ್ಡಿ ಒದಗದಿದ್ದರೆ ಸಾಕು. ಅವರ ಕೈಕೆಳಗಿನ ಹತ್ತು ಕೋಟಿ ಜನರು ಸ್ವಾತಂತ್ರ್ಯದ ಬೇಡಿಕೆಯ ಬಗ್ಗೆ ಯಾವುದೇ ಆಸಕ್ತಿ ತೋರಿಸದೆ ಇದ್ದರೆ ಇಷ್ಟು ಅವರಿಗೆ ಸಾಕಾಗಿತ್ತು. ಕಾಂಗ್ರೆಸ್ ಮಂತ್ರಿಮಂಡಲ ಧೈರ್ಯ ವಹಿಸಿ ರಾಜೀನಾಮೆ ನೀಡಿದ್ದರೆ ಒಂದು ದಿವಸದಲ್ಲೇ ಮುಸ್ಲಿಂ ಲೀಗ್‌ನ ವಿಧ್ವಂಸಕರವಾದ ನೀತಿ ಸ್ಪಷ್ಟವಾಗಿ ತಿಳಿದುಹೋಗುತ್ತಿತ್ತು. ಇಂಗ್ಲಿಷ್ ಸರಕಾರಕ್ಕೆ ಆಗ ನ್ಯಾಯ ಮಾಡಿ, ನಿರಂಕುಶವಾಗಿದ್ದ ಮುಸ್ಲಿಂ ಲೀಗ್‌ನ ದುಂಡಾವರ್ತಿತನವನ್ನ ಹಿಡಿತದಲ್ಲಿಡುವುದು ಅನಿವಾರ್ಯವಾಗುತ್ತಿತ್ತು, ಆದರೆ ನಮ್ಮ ಕಾಂಗ್ರೆಸ್ ನೇತಾರರು ಸರಿಯಾದ ಸಂದರ್ಭದಲ್ಲಿ ಇಂತಹ ತ್ಯಾಗದ ದೃಢತೆಯನ್ನು ತೋರಲಿಲ್ಲ. ಅವರು ಒಳ್ಳೆಯ ಜನ, ದೇಶವನ್ನ ಹತೋಟಿಗೆ ತಂದು ಬೆಂಕಿಯಿಂದ ಉಳಿಸೋಣ ಅಂತ ಅವರು ಇಷ್ಟಪಟ್ಟಿದ್ದರು. ಆದರೆ ಈಗ ಕಷ್ಟಪಡುವುದಕ್ಕೆ, ಬಲಿದಾನಕ್ಕೆ ಅವರಲ್ಲಿ ಧೈರ್ಯ ಉಳಿದಿರಲಿಲ್ಲ, ಹೀಗಾಗಿ ಅವರು ಮುಸ್ಲಿಂ ಲೀಗ್‌ನ ದುಂಡಾವರ್ತಿತನವನ್ನು ಸಹಿಸಿಕೊಂಡರು, ತಂತ್ರವನ್ನ ವಶಕ್ಕೆ ತೆಗೆದುಕೊಳ್ಳುವುದಕ್ಕಾಗಿ ಕಾಂಗ್ರೆಸ್ ವಿಶೇಷವಾಗಿ ಪರಿಶ್ರಮಪಟ್ಟಿತ್ತು. ಮುಸ್ಲಿಂ ಲೀಗ್‌ಗೆ ತನ್ನ ಕಾಲು ಚಾಚಿಕೊಳ್ಳುವುದಕ್ಕೆ ಅಷ್ಟೇ ಅವಕಾಶ ಸಿಕ್ಕಿತು. ನಮ್ಮ ನೇತಾರರು ಎದೆ ಗಟ್ಟಿಮಾಡಿಕೊಂಡು ಸರಕಾರದಿಂದ ಹೊರಕ್ಕೆ ನಡೆದಿದ್ದರೆ ಮುಸ್ಲಿಂ ಲೀಗ್‌ನ ನರಾಧಮ, ದುಷ್ಟತೆ ಪ್ರಕಟವಾಗಬಹುದಿತ್ತು. ಜೊತೆಗೆ ವಾಯಿಸ್‌ರಾಯ್ ಮತ್ತವರ ಬ್ಯುರಾಕ್ರೆಟ್‌ಗಳು ಮೋಸದ ಕೂಟತಂತ್ರ ಆಡುತ್ತಿದ್ದರು. ದೇಶದ ಜನ, ಪ್ರಪಂಚದ ಜನಕ್ಕದು ತಿಳಿಯಲು ಅವಕಾಶವಾಗಬಹುದಿತ್ತು, ಆಗ ಇಂಗ್ಲಿಷ್‌ನವರು ಶಾಂತಿ ಸ್ಥಾಪಿಸಬೇಕಾಗುತ್ತಿತ್ತು, ಅದಿಲ್ಲವೆಂದರೆ ಮುಸ್ಲಿಂ ಆತಂಕವಾದಿಗಳನ್ನು ದಂಡಿಸಬೇಕಾಗಿ ಬರುತ್ತಿತ್ತು, ದೇಶ ಬಿಟ್ಟು ಹೊರಟು ಹೋಗಬೇಕಾಗುತ್ತಿತ್ತು. ಇಂಗ್ಲಿಷ್‌ನವರ ಉತ್ತೇಜನೆಯಿಂದಲೇ ಮುಸ್ಲಿಂ ಲೀಗ್ ಉದ್ದಂಡತೆ ತೋರಿಸುತ್ತಿತ್ತು, ಸಾಮಾನ್ಯ ಮುಸಲ್ಮಾನನಿಗೆ ಅರಾಜಕತೆಯಲ್ಲಿ ಯಾವುದೇ ಆಸಕ್ತಿ ಇರಲಿಲ್ಲ, ಆದರೆ ಅವರ ನಾಯಕರು ಬಡವರನ್ನು ಉದ್ರೇಕಿಸುತ್ತಿದ್ದರು ಮತ್ತು ದಂಗೆ ಮಾಡಲು ಬಾಧ್ಯರನ್ನಾಗಿ ಮಾಡುತ್ತಿದ್ದರು. ಇಂಗ್ಲಿಷ್‌ನವರ ಬಳಿ ಸೈನ್ಯ ಅವರ ಆಫೀಸರುಗಳ ಆಧಾರ ಇಲ್ಲದಿದ್ದಿದ್ದರೆ ಹತ್ತಿಪ್ಪತ್ತು ದಿನ ಇಲ್ಲವೇ ಎರಡು ತಿಂಗಳ ಈ ರಕ್ತಪಾತ ಆದ ಮೇಲೆ ದೇಶ ಹಿಡಿತಕ್ಕೆ ಬಂದುಬಿಡುತ್ತಿತ್ತು, ಆಗ ಕೊನೆಯ ಪಕ್ಷ ಬೆನ್ನಿಗೆ ಚೂರಿ ಹಾಕಿ ಓಡಿಹೋಗುವಂತಹ ನೀಚ ಕೃತ್ಯ ನಡೆಯುತ್ತಿರಲಿಲ್ಲ, ಎಲ್ಲರಿಗೂ ಕಾಣಿಸುವ ಹಾಗೆ ಕದನ ನಡೆಯುತ್ತಿತ್ತು, ಕಣ್ಣೆದುರಿಗಾಗುವ ಯುದ್ಧದಲ್ಲಿ ಶುದ್ಧತೆ ಇರುತ್ತೆ, ಜನರ ಪರಾಕ್ರಮ ತಿಳಿಯುತ್ತೆ, ವೀರತೆಯಲ್ಲಿ ದಗಾ – ತುಚ್ಛತೆ ಉಳಿದಿರುವುದಿಲ್ಲ. ಆಗ ದೇಶದ ಜನರ ಸಹಜ

ಸಾಮೂಹಿಕ ವಿವೇಕ ಸ್ಥಿತಿಯನ್ನ ಸುಧಾರಿಸುತ್ತಿತ್ತು. ನಂತರ ಅವರು ಮುಸ್ಲಿಂ – ಹಿಂದೂ ಯಾರೇ ಆಗಿದ್ದರೂ, ಬರಿಯ ದಮ್ಮಿಲ್ಲದ ನಾಟಕದ ನಾಯಕರೂ ಸಹಜವಾಗಿ ಕಾಂತಿಹೀನವಾಗುತ್ತಿದ್ದರು. ಸಾವಿರಾರು ವರ್ಷಗಳ ಸಭ್ಯತೆ ಸಂಸ್ಕಾರವಂತಿಕೆಗೆ ಅವಕಾಶ ಸಿಗುತ್ತಿತ್ತು, ದೇಶ ಸುಧಾರಿಸುತ್ತಿತ್ತು, ಪ್ರಾಮಾಣಿಕತೆ, ತ್ಯಾಗ, ಬಲಿದಾನ, ಸೇವಾ ನಿಷ್ಠೆ ಉಳಿಯುತ್ತಿತ್ತು. ದುರ್ಬುದ್ಧಿ ಪಾಪಾಚರಣೆ ಮಾಡುವವನು ಸಹಜವಾಗಿ ಮುಗಿದುಹೋಗುತ್ತಿದ್ದ, ಪುಣ್ಯಶಾಲಿ ಸಜ್ಜನರ ಸಹಯೋಗ ಸಿಕ್ಕಾಗಲೇ ಪಾಪ ಬೆಳೆಯುವುದು, ಒಂಟಿ ಇದ್ದಾಗ ನಿರ್ಜೀವಪಾಪ ಒಣಗಿ ಹೋಗುತ್ತೆ. ಸಮಾಜದ ಈ ಮೂಲ ಕ್ರಮವನ್ನ ನಾಯಕರು ಅರ್ಥ ಮಾಡಿಕೊಳ್ಳಲಿಲ್ಲ, ಸ್ವಾತಂತ್ರ್ಯಕ್ಕೆ ನುಚ್ಚುನುರಿಯಾಗುತ್ತ ಹೋದರು ಮತ್ತು ನಮ್ಮ ಗುರಿ ಮುಗಿದುಹೋಯಿತು. ಅಹಿಂಸೆಯನ್ನು ಸಾಧಿಸಲು ಶ್ರದ್ಧೆ ಇರಲಿಲ್ಲವಾದ್ದರಿಂದ ಎಲ್ಲಾ ತರಹೆಯ ವಿಕೃತಿಗಳೂ ಹುಟ್ಟಿಕೊಂಡವು, ದಿನೇ–ದಿನೇ ಅವು ಬೆಳೆಯುತ್ತಲೇ ಇವೆ.

ಇಂತಹ ವಾತಾವರಣ ಇದ್ದಾಗ ೨೦ ಫೆಬ್ರವರಿ ೧೯೪೭ರಂದು ಬ್ರಿಟಿಷ್ ಸರಕಾರ, ಅಗತ್ಯ ಬಿದ್ದಲ್ಲಿ ದೇಶ ವಿಭಜನೆ ಮಾಡಲಾಗುತ್ತದೆಂದು ಮತ್ತು ೧೯೪೮ರ ಜೂನ್ ವೇಳೆಗೆ ಇಂಗ್ಲಿಷರು ಭಾರತವನ್ನು ಬಿಟ್ಟು ಹೊರಟುಹೋಗುವರೆಂದೂ ಘೋಷಿಸಿತು. ಈ ಘೋಷಣೆ ಸಾಕಷ್ಟು ಅಸ್ಪಷ್ಟವಾಗಿತ್ತು, ಆದರೆ ೧೯೪೮ರ ವೇಳೆಗೆ ಸ್ವಾತಂತ್ರ್ಯ ಸಿಗುತ್ತದೆ ಎಂಬ ಆಶ್ವಾಸನೆ ಬಗ್ಗೆ ದೇಶದ ಗಮನವಿತ್ತು. ಲೀಗ್‌ಗೆ ಪಾಕಿಸ್ತಾನದ ಆಸೆ ನೆಟ್ಟತ್ತಾದ್ದರಿಂದ ಅದು ಕೂಡ ಸಂತೋಷವಾಗಿತ್ತು. ಈ ಘೋಷಣೆಯ ಜೊತೆಗೆ ಸರಕಾರ ಮಾರ್ಚ್ ತಿಂಗಳಲ್ಲಿ ಲಾರ್ಡ್ ಬೆವಲ್‌ನನ್ನು ತೆಗೆದುಹಾಕಿತ್ತು, ಆತನ ಜಡಬುದ್ಧಿ ಅನಾವಶ್ಯಕವಾಗಿ ಸಾಕಷ್ಟು ತೊಂದರೆಗಳನು ತಂದುಒಡ್ಡಿತ್ತು. ಆತನ ಜಾಗಕ್ಕೆ ಬ್ರಿಟನ್ ರಾಜ ಪರಿವಾರದ ಚಿಕ್ಕಪ್ಪ ಲಾರ್ಡ್ ಮೌಂಟ್‌ಬ್ಯಾಟನ್ ವೈಸ್‌ರಾಯ್ ಆಗಿ ೨೨ರ ಮಾರ್ಚ್ ದೆಹಲಿಗೆ ಬಂದರು, ಅವರ ಸುಂದರವಾದ ದೇಹದಾರ್ಢ್ಯ ಮತ್ತು ಸಹಜ ವರ್ಚಸ್ಸು ಇವು ಎಲ್ಲರ ಹೃದಯವನ್ನು ಗೆದ್ದವು. ಆತನ ಸುಂದರ ಪತ್ನಿ ಮತ್ತು ಯುವಕನ್ಯೆಯನ್ನು ನೋಡಿ ಜನ ಮುಗ್ಧರಾದರು, ಮೌಂಟ್‌ಬ್ಯಾಟನ್ ಆಫ್ ಬರ್ಮಾ ಬಂದು ತಾವು ಈ ದೇಶದ ಕೊನೆಯ ವಾಯಿಸ್‌ರಾಯ್ ಆಗಿರುವರೆಂದು ರಾಜ್ಯವನ್ನು ಹಿಂದಿರುಗಿಸುವ ವಿಶೇಷ ಉದ್ದೇಶದಿಂದಲೇ ಅವರು ಭಾರತದಲ್ಲಿ ನಿಯುಕ್ತಿಗೊಂಡಿರುವರೆಂದೂ ತಿಳಿಸಿದರು, ಮೌಂಟ್ ಬ್ಯಾಟನರು ಬಂದೊಡನೆಯೇ ಗಾಂಧೀಜಿಯವರನ್ನು ಭೇಟಿಯಾಗಲು ದೆಹಲಿಗೆ ಆಮಂತ್ರಿಸಿದರು. ಬಾಪೂಜಿ ಪಟನಾದಲ್ಲಿ ದಂಗೆಯಾಗಿದ್ದ ಹಳ್ಳಿಗಳಲ್ಲಿ ಸುತ್ತುತ್ತಿದ್ದರು. ಅದನ್ನು ಮುಗಿಸಿ ಬಾಪೂಜಿ ೩೦ ಮಾರ್ಚ್ ರೈಲುಗಾಡಿಯ ಮೂರನೆ ದರ್ಜೆಯಲ್ಲಿ ಕುಳಿತು ದೆಹಲಿಗೆ ಹೋದರು. ಮೌಂಟ್‌ಬ್ಯಾಟನ್ ತನ್ನ

ಯಾಕ್ ವಿಮಾನವನ್ನು ಕಳುಹಿಸಬೇಕೆಂದಿದ್ದರು, ಆದರೆ ಬಾಪೂಜಿ ಬೇಡವೆಂದರು. ವಿಶೇಷ ರೈಲು ಗಾಡಿ ಕಳುಹಿಸುವ ಪ್ರಸ್ತಾವವನ್ನೂ ಬಾಪೂಜಿ ತಳ್ಳಿ ಹಾಕಿದರು, ಈ ದಿವಸಗಳಲ್ಲಿ ಬಾಪೂಜಿ ಬಳಿ ಸೆಕ್ರೆಟರಿ ಯಾರೂ ಇರಲಿಲ್ಲ, ಮಹಾದೇವ ಕಾಕಾ ತೀರಿಕೊಂಡಿದ್ದರು. ಪ್ಯಾರೇಲಾಲಜೀ ನೋವಾಖಲಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು, ಬಾಪೂಜಿ ಸ್ವತಃ ತನ್ನ ಸೆಕ್ರೆಟರಿಯಲ್ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದರು.

೩೧ ಮಾರ್ಚ್ ೧೯೪೭ರಂದು ಮಧ್ಯಾಹ್ನ ೩ ಗಂಟೆಗೆ ಬಾಪೂಜಿ ವೈಸರಾಯರನ್ನು ಭೇಟಿಯಾದರು. ಬಹಳ ಆತ್ಮೀಯವಾಗಿ ಮಾತು–ಕತೆ ನಡೆಯಿತು. ಪರಿಚಯ, ಪರಿವಾರದ ಮಾತು ಆಯಿತು. ಇದು ಕೊನೆಯ ಅವಕಾಶ, ಇದರಲ್ಲಿ ಸಂಧಿ – ಶಾಂತಿಯ ನಡುವೆ ಇಂಗ್ಲಿಷರ ಜೊತೆ ಒಪ್ಪಂದ ಮಾಡಿಕೊಳ್ಳಬಹುದೆಂದು ಇಬ್ಬರಿಗೂ ಗೊತ್ತಿತ್ತು. ಬಾಪೂಜೀಗೆ ವೈಸ್‌ರಾಯ್‌ನ ಶುದ್ಧ, ಕುಲೀನತೆ ಮತ್ತು ಶಾಲೀನತೆ ಇಷ್ಟವಾಯಿತು. ಬಾಪೂಜಿ ಮೌಂಟ್ ಬ್ಯಾಟನ್‌ಗೆ ಹೀಗೆ ಹೇಳಿದರು, 'ಇಂಗ್ಲಿಷರು ಇಷ್ಟಪಟ್ಟಿದ್ದರೆ ಲೀಗ್‌ಗೆ ಅಧಿಕಾರ ಕೊಡಬಹುದಾಗಿತ್ತು, ಆದರೆ ಈ ರೀತಿ ದಂಗೆ – ಹತ್ಯೆ, ಹೆದರಿಸಿ – ಬೆದರಿಸಿ ಅಧಿಕಾರವನ್ನ ಕೊಡುವುದಕ್ಕಾಗುವುದಿಲ್ಲ, ಸರಕಾರದ ಉತ್ತರದಾಯಿತ್ವ ತೆಗೆದುಕೊಳ್ಳುವುದಕ್ಕೆ ಲೀಗ್ ಇನ್ನೂ ಸಿದ್ಧವಾಗಿರಲಿಲ್ಲ ಅಂತ ಅನ್ನುವುದಾದರೆ ಕಾಂಗ್ರೆಸ್‌ಗಾದರೂ ಅಧಿಕಾರ ಕೊಡಬಹುದಾಗಿತ್ತಲ್ಲ; ಆದರೆ ಎರಡು ಪಕ್ಷಗಳನ್ನೂ ಸಂತೋಷಪಡಿಸುವುದಕ್ಕೆ ಪ್ರಯತ್ನಿಸುವುದು ತಪ್ಪು ಎಂದರು. ವೈಸ್‌ರಾಯ್ ಆ ತರಹೆಯ ಸರಳ ಉಪಾಯಗಳನ್ನಿಟ್ಟುಕೊಳ್ಳುವುದು ಕಷ್ಟವಾಗಿತ್ತು, ಜಿನ್ನಾ ಅಂತೂ ಅಖಂಡ ಹಿಂದೂಸ್ತಾನವನ್ನು ಸಹಿಸುವುದಕ್ಕೆ ಸಿದ್ಧವಾಗಿರಲಿಲ್ಲ ಮತ್ತು ಬ್ರಿಟಿಷ್ ಸರಕಾರಕ್ಕೆ ಸಾಮ್ರಾಜ್ಯವಾದವನ್ನು ಉಳಿಸಿಕೊಳ್ಳುವುದಕ್ಕೆ ಇದು ಕೊನೆಯ ಜಾಗ, ಅವಕಾಶ ಪಾಕಿಸ್ತಾನವಾಗಿತ್ತು. ಕಾಂಗ್ರೆಸ್ ಅಂತೂ ಇಂಗ್ಲಿಷ್ ಶಾಸನವನ್ನು ವಿರೋಧಿಸುತ್ತಿತ್ತು, ಅದರಿಂದ ಬಾಪೂಜಿಯ ಇಂತಹ ನ್ಯಾಯೋಚಿತವಾದ ತರ್ಕವನ್ನ ಮೌಂಟ್‌ಬ್ಯಾಟನ್ ಸರಕಾರ ಒಪ್ಪಿಕೊಳ್ಳಲಾಗುತ್ತಿರಲಿಲ್ಲ, 'ಭಾರತ್ ಛೋಡೋ'ನ ಬೇಡಿಕೆಯನ್ನು ಒಪ್ಪಿಕೊಂಡು ಇಂಗ್ಲಿಷ್‌ನವರು ಹಿಂದಿರುಗಿದ್ದಿದ್ದರೆ ಚೆನ್ನಾಗಿತ್ತು, ಆದರೆ ಕೋಮುವಾದದ ಈ ತ್ರಿಕೋನವನ್ನು ನಿರ್ಮಿಸಿದ ಇಂಗ್ಲಿಷರು ಈ ತರಹೆಯ ತಿಳುವಳಿಕೆಯ ನೀತಿಯನ್ನ ಒಪ್ಪಿಕೊಳ್ಳಲು ಸಾಧ್ಯವಿರಲಿಲ್ಲ. ಮೌಂಟ್‌ಬ್ಯಾಟನ್ ಕೂಡ ಈ ಪರಂಪರೆಯನ್ನು ಮುರಿಯುವ ಸ್ಥಿತಿ ಇರಲಿಲ್ಲ, ಅವರ ವ್ಯಕ್ತಿತ್ವ ಪ್ರಚಾರವನ್ನು ಪ್ರೀತಿಸುತ್ತಿತ್ತು, ಅವರಿಗೆ ಈ ತೆರನಾದ ನೇರ, ಸರಳ ರೀತಿ ಇಷ್ಟವಾಗಲು ಕಷ್ಟವಾಗುತ್ತಿತ್ತು, ಇಷ್ಟು ಬೇಗ ಸಮಸ್ಯೆ ನಿವಾರಣೆಯಾಗಿದ್ದಿದ್ದರೆ ಲಾರ್ಡ್ ಮೌಂಟ್ ಬ್ಯಾಟನ್ ಆಫ್ ಬರ್ಮಾ ಹೆಸರು ಇತಿಹಾಸದಲ್ಲೆಲ್ಲೂ ಇರುತ್ತಲೇ ಇರಲಿಲ್ಲ. ಆಗ ಅವರ ಪ್ರಶಂಸೆ ಹೆಚ್ಚಾಗುವುದಕ್ಕೆ

ಅವಕಾಶ ಇರುತ್ತಿರಲಿಲ್ಲ. 'ವಾಹ್!' ಅನ್ನುವ ಸಂದರ್ಭ ಇರುತ್ತಿರಲಿಲ್ಲ.

ಜೋರು – ಜಬರ್ದಸ್ತಿಗೆ, ಹಿಂಸೆಗೆ ಇಂಗ್ಲಿಷ್ ಸರಕಾರ ಬಗ್ಗುವುದಿಲ್ಲ, ಆದರೆ ಮಹಾತ್ಮಾ ಅವರ ಅಹಿಂಸೆ ಲೋಕಪ್ರಿಯವಾಗಿದೆ, ಅಹಿಂಸಕ ಆಂದೋಳನದಿಂದಾಗಿ ಇಂಗ್ಲಿಷರು ದೇಶದ ಜನರಿಗೆ ಸ್ವಾತಂತ್ರ್ಯ ಕೊಡಬೇಕು ಅಂತ ನಿರ್ಣಯಿಸಿದರು. ಎಂದು ವಾಯಿಸ್‌ರಾಯ್ ಬಾಪೂಜಿಗೆ ಹೇಳಿದರು: ವೈಸರಾಯ್ ಮಾತಿನ ಮೇರೆಗೆ ಬಾಪೂಜಿ ಅಲ್ಲೇ ತನ್ನ ಕೈಯಿಂದ ಮೂಲ ವಿಷಯಗಳನ್ನು ಸ್ಪಷ್ಟಪಡಿಸಿ ಸ್ವಾತಂತ್ರ್ಯ ಯೋಜನೆಯನ್ನು ಸರಕಾರಕ್ಕೆ ಬರೆದು ಕಳುಹಿಸಿದ್ದರು, ಅದರಲ್ಲಿ ಬಾಪೂಜಿ ಕೆಳಗಣ ಒಂಬತ್ತು ವಿಷಯಗಳನ್ನು ಸೂಚಿಸಿದ್ದರು:

– ಜಿನ್ನಾಗೆ ಮಂತ್ರಿಮಂಡಳದಲ್ಲಿರಲು ಅವಕಾಶ ಕೊಡಬೇಕು.
– ಮಂತ್ರಿಮಂಡಳ ರಚಿಸುವ ಕೆಲಸ ಜಿನ್ನಾಗೆ ಕೊಡಬೇಕು, ಅದು ಶುದ್ಧ ಮುಸ್ಲಿಂ ಮಂತ್ರಿಮಂಡಳವಾಗಿದ್ದರೂ ಚಿಂತಿಲ್ಲ.
– ಜಿನ್ನಾ ಈ ಪ್ರಸ್ತಾವವನ್ನು ಒಪ್ಪಿಕೊಂಡಲ್ಲಿ ಸ್ವತಃ ಅವರು ದೇಶವಾಸಿಗಳ ಹಿತರಕ್ಷಣೆ ಮಾಡುವರು, ಆಗ ಕಾಂಗ್ರೆಸ್ ಅವರಿಗೆ ಪೂರ್ಣ ಸಹಕಾರದ ಭರವಸೆ ಕೊಡುವುದು.
– ದೇಶದ ಜನರ ಹಿತವನ್ನು ವಾಯಿಸ್‌ರಾಯ್ ಮಾತ್ರ ನಿರ್ಣಯಿಸಬೇಕು.
– ದೇಶದಲ್ಲಿ ಶಾಂತಿ – ಸುವ್ಯವಸ್ಥೆಯನ್ನು ಕಾಪಾಡುವೆನೆಂದು ಜಿನ್ನಾ ಸ್ಪಷ್ಟವಾಗಿ ಆಶ್ವಾಸನೆ ನೀಡಬೇಕು.
– ಮುಸ್ಲಿಂ ಲೀಗ್‌ನ ಸ್ವಂತ ಸೈನ್ಯ – ನ್ಯಾಷನಲ್ ಗಾರ್ಡ್‌ನ್ನು ಒತ್ತಟ್ಟಿಗಿಡಬೇಕು.
– ಈ ವ್ಯವಸ್ಥೆಗನುಸಾರವಾಗಿ ಜಿನ್ನಾ ಪಾಕಿಸ್ತಾನದ ಬೇಡಿಕೆಯನ್ನು ಮುಂದಿಡಲು ಸ್ವತಂತ್ರರು, ದೇಶವಾಸಿಗಳಿಗೆ ಅದರ ತರ್ಕ ಮತ್ತು ಔಚಿತ್ಯವನ್ನು ತಿಳಿಸುವ ಜವಾಬ್ದಾರಿ ಜಿನ್ನ ಅವರದ್ದು.
– ಪ್ರಾಂತಗಳ ವಿಧಾನಸಭೆಗಳಲ್ಲಿ ಲೀಗ್ ತಂತ್ರದಿಂದ ದೇಶದ ಹಿತರಕ್ಷಣೆ ಆಗುವುದಾದಲ್ಲಿ ಬಹುಮತದ ಕಾಂಗ್ರೆಸ್ ಮಂತ್ರಿಮಂಡಳಕ್ಕೆ ಪೂರ್ತಿ ಸಹಯೋಗ ನೀಡಿ ಸಮರ್ಥನೆ ನೀಡುವುದು, ಮೌಂಟ್‌ಬ್ಯಾಟನ್ ತನ್ನ ವೈಯಕ್ತಿಕ ಯೋಗ್ಯತೆಯಿಂದ ದೇಶದ ಹಿತ–ಅಹಿತವನ್ನು ನಿರ್ಣಯಿಸುವರು.
– ಜಿನ್ನಾಗೆ ಈ ಪ್ರಸ್ತಾವ ಒಪ್ಪಿಗೆಯಾಗದಿದ್ದರೆ ತನ್ನ ಗೌರವದೊಡನೆ ಕಾಂಗ್ರೆಸ್ ಸರಕಾರ ನಡೆಸಬಿಡಬೇಕು.

ವೈಸ್‌ರಾಯ್ ಜೊತೆ ಮಾತುಕತೆ ನಡೆಸಿದಾಗ ಈ ಪ್ರಸ್ತಾವ ಮಂಜೂರಾಗಿತ್ತು, ಆದರೆ ವಾಯಿಸ್‌ರಾಯ್‌ನ ಸಲಹೆಗಾರ ಲಾರ್ಡ್ ಇಸ್ಮೆ ಮತ್ತು ಇನ್ನೂ ಹಿರಿಯ ಅಧಿಕಾರಿಗಳಿಗಿದು ಒಪ್ಪಿಗೆಯಾಗಿಲಿಲ್ಲ. ಅರ್ಧ ಶತಮಾನದ ಇಂಗ್ಲಿಷ್ ನೀತಿ ಇಲ್ಲಿ ಒಡೆದಿತ್ತು. ಗಾಂಧಿ – ಇರ್ವಿನ್ ಪ್ಯಾಕ್ಟ್ ಕಾಲದಿಂದಲೂ ಇಂಗ್ಲಿಷ್ ಆಫೀಸರ್‌ಗಳಲ್ಲಿ

ಗಾಂಧಿಯ ಮಾತುಗಳಿಗೆ ಸಿಲುಕಬಾರದು ಎಂಬ ನಿಷ್ಕರ್ಷ ಇದ್ದು ಅದನ್ನು ಖಂಡಿಸಿದಾಗ ಮಾತ್ರ 'ರಾಜಕೀಯ ಸುರಕ್ಷತೆ' ಇರುತ್ತದೆ ಎಂಬ ಭಾವನೆ ಇತ್ತು. ಮೌಂಟ್‌ಬ್ಯಾಟನ್ ತಮ್ಮ ಕೆಳಗಣ ಅಧಿಕಾರಿಗಳ ಕುಚಕ್ರದಲ್ಲಿ ಸಿಲುಕಿದರು. ಲೀಗ್‌ಗೆ ಸರಕಾರ ಕೊಡಲು ಸರದಾರ ಪಟೇಲ್ ಒಪ್ಪುವುದಿಲ್ಲವೆಂದು ಆಫೀಸರುಗಳೆಲ್ಲರಿಗೂ ಗೊತ್ತಿತ್ತು. ಆದರೆ ಪಂಡಿತ ನೆಹರೂ ಬಹುಶಃ ಮಹಾತ್ಮಾಜೀಯ ಮಾತುಗಳನ್ನು ಒಪ್ಪಿಕೊಳ್ಳುತ್ತಿದ್ದರೆನೋ, ಗಾಂಧೀಜಿಯವರ ಯೋಜನೆಗೆ ವೈಸ್‌ರಾಯ್ ಒಪ್ಪಿದ್ದಾರೆಂದು ನೆಹರೂಜೀಗೆ ತಿಳಿದಿದ್ದರೆ ಬಹುಶಃ ಅವರು ಲೀಗ್‌ಗೆ ಸರಕಾರ ನಡೆಸಗೊಡುತ್ತಿದ್ದರೇನೋ, ಅದರಿಂದ ಬಹಳ ಚತುರತೆಯಿಂದ ವಾಯಿಸ್‌ರಾಯ್‌ನ ಸಲಹಾಗಾರ ನೆಹರೂಜೀಗೆ ವಾಯಿಸ್‌ರಾಯ್‌ಗೆ 'ಗಾಂಧೀಜೀಯ ಈ ಘೋಷಣೆ ಒಪ್ಪಿಗೆಯಾಗಿಲ್ಲ, ಅದರಿಂದ ಚರ್ಚೆ ನಡೆಸಿದ ನಂತರ ನಿಮ್ಮ ಅಭಿಪ್ರಾಯ ನೀಡುವುದು ಒಳ್ಳೆಯದು' ಎಂದು ತಿಳಿಸಿದ. ಆ ಪರಿಸ್ಥಿತಿಯಲ್ಲಿ ಪಂಡಿತ ನೆಹರೂಗೆ ಗಾಂಧಿ ಯೋಜನೆಯಲ್ಲಿ ತಪ್ಪು ಕಾಣತೊಡಗಿತು. ಆದರೆ ೭ ಏಪ್ರಿಲ್‌ನಂದು ವಾಯಿಸ್‌ರಾಯ್ ಅವರು ದೃಢವಾಗಿ ನಿರ್ಣಯಿಸುವುದಕ್ಕೆ ಮೊದಲು ಭಾರತದ ಕೋನ ಮತ್ತು ತ್ರಿಕೋನವನ್ನು ಅರ್ಥ ಮಾಡಿಕೊಳ್ಳಲು ಸಮಯ ತಗುಲುವದೆಂದು ತಿಳಿಸಿದರು. ಬಾಪೂಜಿ ಮತ್ತು ವಾಯಿಸ್‌ರಾಯ್ ಅವರ ಸ್ನೇಹದಲ್ಲಿ ಅನುಮಾನ ಎದ್ದು ನಿಂತಿತು. ೧೨ ಏಪ್ರಿಲ್‌ಗೆ ದೆಹಲಿಯಿಂದ ಪಟನಾಗೆ ಹೋಗುವಾಗ ಬಾಪೂಜಿ ಸರದಾರ್‌ಗೆ ಪತ್ರ ಬರೆದು, "..... ಸಮಯದ ಕೊರತೆ ಇದ್ದುದರಿಂದ ಒಂದು ಮಾತು ತಪ್ಪಿ ಹೋಯಿತು. ಕಾಂಗ್ರೆಸ್ ಮತ್ತು ನನ್ನ ದೃಷ್ಟಿಕೋನದಲ್ಲಿ ನನಗೆ ಬಹುದೊಡ್ಡ ಅಂತರ ಕಾಣಿಸುತ್ತಿದೆ. ಈ ಸ್ಥಿತಿಯಲ್ಲಿ ನಾನು ವಾಯಿಸ್‌ರಾಯ್ ಜೊತೆ ಮಾತನಾಡುವುದು ಎಷ್ಟು ಸರಿಯೋ ಎಂದು ನಿಸ್ಪೃಹ ಭಾವನೆಯಿಂದ ಯೋಚಿಸಿ ಬರೆ," ಎಂದು ತಿಳಿಸಿದರು.

ಈ ರೀತಿ ಲಾರ್ಡ್ ಮೌಂಟ್‌ಬ್ಯಾಟನ್, ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್‌ನ ನಾಯಕರು ಬಾಪೂಜಿಯ ಮಾತುಗಳನ್ನು ಉಪೇಕ್ಷಿಸಿದರು. ಸರೋಜಿನೀ ನಾಯುಡು ಒಬ್ಬಾಕೆಯ ಕವಿ ಹೃದಯಕ್ಕೆ ಬಾಪೂಜಿ ಮತ್ತು ಅವರ ಪ್ರಿಯಮಿತ್ರರು ಮತ್ತು ವಿರೋಧಿಗಳ ನಡುವೆ ಎಷ್ಟು ಹೆಚ್ಚು ಅಂತರ ಬಂದಿದೆ ಎಂದರ್ಥ ಮಾಡಿಕೊಂಡರು. ೨೫ ವರುಷಗಳ ಹಿಂದೆ ಕ್ರಾಂತಿಯನ್ನಾರಂಭಿಸಿದ್ದ ಒಂದು ಪೀಳಿಗೆಯ ಚಿಕ್ಕ ಅವಧಿಯಲ್ಲಿ ದೇಶದ ಚಹರೆ ಮತ್ತು ರಾಜಕೀಯದ ನಕ್ಷೆಯನ್ನೇ ಬದಲಾಯಿಸಿದ್ದವನು ಈಗ ೭೮ ವರುಷದವನಾಗಿದ್ದ. ಈ ವೃದ್ಧ ಶೂನ್ಯನಾಗಿ, ಮಿತ್ರರಿಂದ ತಿರಸ್ಕೃತನಾಗಿ ಒಬ್ಬಂಟಿಯಾಗಿ, ಬಿಹಾರಕ್ಕೆ ಹಿಂದಿರುಗುತ್ತಲಿದ್ದ, ದೆಹಲಿ ನಗರದ ಕಾಂಗ್ರೆಸ್ಸಿನ ಮುಂದಾಳುಗಳಿಗೆ ಬಾಪೂಜಿಯ ಈ ಒಂಟಿತನ, ನೋವು ತಿಳಿಯಲಿಲ್ಲ.

ದೆಹಲಿಯಲ್ಲಿದ್ದಾಗ ಜವಾಹರಲಾಲಜೀಯವರ ಬಲವಂತದ ಮೇರೆಗೆ

ಬಾಪೂಜಿ ಏಷ್ಯನ್ ಕಾನ್‌ಫರೆನ್ಸ್‌ನ ಸದಸ್ಯರನ್ನು ಕೊನೆಯ ಎರಡು ದಿನಗಳು ಸಂಬೋಧಿಸಿ ಮಾತನಾಡಿದ್ದರು. ಆ ಎರಡು ದಿನಗಳಲ್ಲಿ ೧೦,೦೦೦ ಪ್ರತಿನಿಧಿಗಳು ಮತ್ತು ದರ್ಶಕರ ಸಂಖ್ಯೆ ೨೦,೦೦೦ಕ್ಕೆ ಏರಿತ್ತು, ಏಷ್ಯಾದ ಗಣ್ಯ ನೇತಾರರು ಬಾಪೂಜಿಯ ಓಜಸ್ವೀ ಭಾಷಣ ಮತ್ತು ಸ್ಪಷ್ಟವಾದ ವಿಚಾರಗಳನ್ನು ಕೇಳಿ ಬಹಳ ಪ್ರಭಾವಿತರಾದರು. ಬಾಪೂಜಿ ಹೇಳಿದರು, 'ನಾವು ಹಿಂಸೆ ಮತ್ತು ದ್ವೇಷವನ್ನು ಮರೆತು ಒಂದು ಪ್ರಪಂಚವನ್ನು ನಿರ್ಮಿಸಲು ರಚಿಸಲಾಗದಿದ್ದಲ್ಲಿ ನಾವು ಹಾಳಾಗಿ ಹೋಗುತ್ತೇವೆ. ನಾನು ಅಂತಹ ವಿನಾಶಕ್ಕೆ ಸಾಕ್ಷಿ ಆಗಬಯಸುವುದಿಲ್ಲ. ನಾವು ಎಲ್ಲರೂ ಒಂದಾಗಬೇಕೆಂದು ದೃಢವಾಗಿ ನಿಶ್ಚಯಿಸಿದರೆ ಅದು ಅಸಂಭವವಲ್ಲ, ವಾಸ್ತವಿಕ ಭಾರತ ದೆಹಲಿ, ಮತ್ತಿತರ ಪಟ್ಟಣಗಳಿಗಿಂತ ದೂರ ಕಾಡು ಮತ್ತು ಬೆಟ್ಟಗಳ ನಡುವೆ ವಾಸಮಾಡುವ ಹಳ್ಳಿಗಳಲ್ಲಿದೆ. ಅದನ್ನು ನೋಡದೆಯೇ ಭಾರತ ದರ್ಶನ ನಿರರ್ಥಕ, ಪ್ರಯೋಜನ ಇಲ್ಲದ್ದಾಗುತ್ತದೆ. ಆ್ಯಟಮ್ ಬಾಂಬಿನಿಂದ ಭ್ರಮೆಯಲ್ಲಿರುವ ಪಶ್ಚಿಮದ ರಾಜ್ಯಗಳಿಗೆ ಏನಾದರೂ ಸಂದೇಶ ನೀಡಬೇಕಾದರೆ ಅದು ಪ್ರೇಮ ಮತ್ತು ಸತ್ಯ–ಅಹಿಂಸೆಯ ಸಂದೇಶವೇ ಹೊರತು ಮಿಕ್ಕದೆಲ್ಲಾ ನಿರರ್ಥಕವಾದವು' ಎಂದರು. ಬಾಪೂಜಿಯ ಭಂಗಿ ಕಾಲೋನಿ ಮನೆಗೆ ದೇಶ–ದೇಶಾಂತರದ ದರ್ಶಕರು ಮತ್ತು ಪ್ರತಿನಿಧಿಗಳು ಸಾಲುಗಟ್ಟಿ ಬರುತ್ತಿದ್ದರು. ಭಾರತೀಯರು ತಮ್ಮ ರಾಷ್ಟ್ರಪಿತನನ್ನು ಮರೆಯುತ್ತಿದ್ದಾಗ ವಿದೇಶೀಯರ ಅಪೂರ್ವ ನಮ್ರತೆ, ಸರಳತೆ ಮತ್ತು ಅಪಾರ ಭಕ್ತಿಭಾವನೆ ಪ್ರಭಾವಶಾಲಿಯಾದುದಾಗಿತ್ತು, ಪ್ರತಿಯೊಂದು ದೇಶಕ್ಕೂ ಬಾಪೂಜಿಯ ಬಳಿ ಕೆಲವು ಜೀವಂತವಾದ ಹೊಸ ಸಂದೇಶಗಳು ಇರುತ್ತಿದ್ದವು. ಅವರು ಟಿಬೆಟ್‌ನ ಲಾಮಾಗಳಿಗೆ ಭಗವಾನ್ ಬುದ್ಧನ ಉಪದೇಶಗಳನ್ನು ಜಾಗೃತಗೊಳಿಸಲು ಹೇಳಿದರು, ಅರಬ್ಬೀ ಜನರ ಬಗ್ಗೆ ಅವರಿಗೆ ಸಹಾನುಭೂತಿ ಇತ್ತು. ಆದರೆ ಯಹೂದಿಗಳೊಂದಿಗೆ ಸಹೃದಯರಾಗಿರಬೇಕೆಂದು ತಿಳಿಸಿ ಹೇಳಿದರು. ಯಹೂದಿಗಳಿಗೆ ತಮ್ಮದೆಂದು ಹೇಳಲು ಒಂದು ಜಾಗಬೇಕು, ಅದು ನ್ಯಾಯೋಚಿತವಾಗಿದೆ, ಆಧ್ಯಾತ್ಮಿಕ ತೃಪ್ತಿ ಅನ್ನುವುದು ಸದ್‌ಭಾವನೆಯಿಂದಲೇ ಸಿಗಬಲ್ಲುದು, ಧರ್ಮದ ಪವಿತ್ರ ಆಚರಣೆಯಲ್ಲಿ ಸಾಮ್ರಾಜ್ಯವಾದಿ ಶಕ್ತಿಗಳಿಂದ ಸ್ವಾರ್ಥಕ್ಕಾಗಿ ಸಹಾಯ ತೆಗೆದುಕೊಳ್ಳುವುದು, ಹಿಂಸೆ ಮಾಡುವುದು ಧರ್ಮದ್ರೋಹ, ವಿನಾಶ ಎಂದರು. ವಿಯತ್‌ನಾಮ್ ಮತ್ತು ಇಂಡೋನೇಸಿಯಾಗೆ ಅವರು ಕತ್ತಿಯ ಅಲುಗಿನ ಮೇಲೆ ಸಿಕ್ಕ ಅಧಿಕಾರ ಕತ್ತಿಯ ಆಕ್ರಮಣದಲ್ಲೇ ಕಳೆದುಹೋಗುತ್ತದೆ, ಹಿಂಸೆಯ ತಳಹದಿಯ ಮೇಲೆ ಜನರ ಕಲ್ಯಾಣದ ಯೋಜನೆ ಸಾಧ್ಯವೇ ಇಲ್ಲ ಎಂದರು.

ಪ್ರತಿಯೊಬ್ಬ ವಿದೇಶಿ ಪ್ರತಿನಿಧಿಯೂ ಈ ಆಧಾರಭೂತ ಸತ್ಯವನ್ನು ಕೇಳಿ ತಲೆಬಾಗಿಸಿದ. 'ಇವತ್ತಿನವರೆಗೂ ನಾವು ಇಂತಹ ಮನುಷ್ಯನನ್ನು ನೋಡಿಯೇ ಇರಲಿಲ್ಲ, ನಾವು ಗಾಂಧೀಜಿಯನ್ನು ಭೇಟಿಯಾಗದೆ ಹೋಗಿದ್ದರೆ ನಮ್ಮ ಭಾರತದ

ಯಾತ್ರೆ ನಿಷ್ಫಲವಾಗುತ್ತಿತ್ತು, ನೀವು ಭಾರತೀಯರು ಬಹಳ ಭಾಗ್ಯವಂತರು, ಇಂತಹ ಅಲೌಕಿಕ ವ್ಯಕ್ತಿ ನಿಮ್ಮ ನೇತೃತ್ವ ಮಾಡುತ್ತಿದ್ದಾರೆ. ನಮ್ಮ ಬಳಿ ಇಂತಹ ನೇತಾರ ಇದ್ದಿದ್ದರೆ ನಾವು ಇಷ್ಟೊಂದು ನೋವುಪಡಬೇಕಾಗುತ್ತಿರಲಿಲ್ಲ, ಇಷ್ಟು ರಕ್ತ ಹರಿಸಬೇಕಾಗುತ್ತಿರಲಿಲ್ಲ' ಎಂದರು.

ಬಾಪೂಜಿ ಈ ಹದಿನೈದು ದಿನಗಳು ದೆಹಲಿಯಲ್ಲಿದ್ದಾಗ, ನಾಲ್ಕು ಬಾರಿ ಹಿಂದೂ ಮಹಾಸಭೆಯ ಯುವಕರು ಸಂಜೆಯ ಪ್ರಾರ್ಥನೆಯಲ್ಲಿ ಕುರಾನ್ ಶರೀಫ್‌ನ ವಾಚನವನ್ನು ವಿರೋಧಿಸಿದ್ದರು. ಮಿಕ್ಕವರು ಬೈದು ಈ ವಿರೋಧವನ್ನು ತಣ್ಣಗಾಗಿಸಲು ಪ್ರಯತ್ನಿಸಿದ್ದರು, ಆದರೆ ಬಾಪೂಜಿ ಅವರುಗಳನ್ನು ತಡೆದು ಹೀಗೆಂದು ಹೇಳಿದ್ದರು: "ಈ ಯುವಕರು ಈಗ ಕೋಪದಲ್ಲಿದ್ದಾರೆ, ಕೋಪಕ್ಕೆ ಕೋಪದಿಂದಲೇ ವಿರೋಧ ತೋರಿದರೆ ಅದರಲ್ಲಿ ಯಾವ ದೊಡ್ಡಸ್ತಿಕೆಯೂ ಇಲ್ಲ, ಶಾಂತಿ ಮತ್ತು ಸಮಾಧಾನದಿಂದ ಕ್ರೋಧವನ್ನು ಎದುರಿಸಬೇಕಾದದ್ದು ನಮ್ಮ ಕರ್ತವ್ಯ. ಮಾರನೆಯ ದಿನ ಕೂಡ ಒಬ್ಬ ಯುವಕ ಎದ್ದುನಿಂತ, ಮೊದಲ ದಿನದ ಹಾಗೆಯೇ ಈ ಯುವಕ ಕೂಡ ಹೇಳಿದ, ' ಇದು ಹಿಂದೂ ಮಂದಿರ, ಇಲ್ಲಿ ಮುಸಲ್ಮಾನನ ಪ್ರಾರ್ಥನೆ ಕೂಡದು." ಬಾಪೂಜಿ ಪ್ರಾರ್ಥನೆ ನಿಲ್ಲಿಸಿದರು, ಅವರು ಹೇಳಿದರು "ಇಲ್ಲಿ ಆ ಹುಡುಗ ಒಂಟಿಯಾಗಿದ್ದಾನೆ, ನಾನು ಸಮಾಜದ ನಡುವೆ ಅವನನ್ನು ವಿರೋಧಿಸುವುದಿಲ್ಲ." ಈ ಯುವಕರು ಕೇಳಿದರು: "ಗಾಂಧೀಜಿ ಬೇರೆ ಎಲ್ಲಾದರೂ ಹೋಗಿ ಕುರಾನ್ ಓದಲಿ, ಅಷ್ಟೊಂದು ಉತ್ಸಾಹವಿದ್ದರೆ ಮಸೀದಿಯಲ್ಲಿ ಹೋಗಿ ಗೀತಾಪಠಣ ಮಾಡಲಿ. ಪಂಜಾಬಿಗೇಕೆ ಹೋಗಬಾರದು?" ಬಾಪೂಜಿ ಅದಕ್ಕೆ ಹೇಳಿದರು: "ಇದು ಭಂಗಿಗಳ ಕಾಲನಿ, ನಾನು ಎಷ್ಟೋ ವರ್ಷಗಳಿಂದ ಭಂಗಿಯ ಕೆಲಸ ಮಾಡುತ್ತಿದ್ದೇನೆ, ನನ್ನನ್ನು ತಡೆಯುವ ಹಕ್ಕು ನಿನಗಿಲ್ಲ, ಪ್ರಾರ್ಥನೆಯಾಗದಿದ್ದರೆ ಇಲ್ಲಿ ಸಾವಿರಾರು ಮಂದಿಗೆ ನಿರಾಶೆಯಾಗುತ್ತದೆ, ಆದರೆ ಒಂದು ಚಿಕ್ಕ ಮಗು ವಿರೋಧಿಸಿದರೂ ನಾನು ಅವನ ಮಾತನ್ನು ಉಪೇಕ್ಷಿಸುವುದಿಲ್ಲ. ಯಾರಾದರೂ ಬಹು ಸಂಖ್ಯಾತರು ನನ್ನನ್ನು ವಿರೋಧಿಸಿದ್ದಿದ್ದರೆ ನಾನೂ ಸತ್ಯಾಗ್ರಹ ಮಾಡಿ ಪ್ರಾರ್ಥನೆ ಮಾಡುತ್ತಿದ್ದೆ, ಆದರೆ ಇಲ್ಲಿ ಇಬ್ಬರು – ಮೂವರು ಮಾತ್ರ ವಿರೋಧಿಗಳಿದ್ದಾರೆ, ನಾನು ಅವರ ವಿಚಾರ ಸ್ವಾತಂತ್ರ್ಯವನ್ನು ಬಹುಸಂಖ್ಯಾತರ ನಡುವೆ ತುಳಿಯಲು ಇಷ್ಟಪಡುವುದಿಲ್ಲ, ಆದರೆ ತಮಾಷೆ ಅಂದರೆ ಇಲ್ಲಿ ಒಬ್ಬ ಮುದುಕ ಪ್ರಾರ್ಥನೆ ಕೂಡ ಮಾಡುವಂತಿಲ್ಲ, ಯಾವ ಪ್ರಾರ್ಥನೆ ಮಾಡಬೇಕು, ಯಾವುದನ್ನು ಮಾಡಬಾರದು ಅಂತ ಫರಮಾನ್ ಹೊರಡಿಸುತ್ತಾರೆ, ನನ್ನ ಪ್ರಾರ್ಥನೆ ಅವಿಭಾಜ್ಯವಾದ್ದು, ನಾನು ಅದನ್ನು ಬದಲಿಸುವಲ್ಲಿ ಅಸಮರ್ಥ (ನಾ ಬದಲಿಸಲಾರೆ)" ಹೀಗೆ ಹೇಳಿ ಬಾಪೂಜಿ ಆ ಕೋಣೆಯಲ್ಲೇ ಜೊತೆಗಾರರೊಂದಿಗೆ ಪ್ರಾರ್ಥನೆ ಮಾಡತೊಡಗಿದರು. ಹೀಗೆ ನಾಲ್ಕು ಬಾರಿ ಆಯಿತು. ಪ್ರತಿಬಾರಿಯೂ ಪ್ರಾರ್ಥನಾ ಸಭೆಗೆ ಹೋಗುತ್ತಿದ್ದರು,

ಪ್ರಾರ್ಥನೆ ಮಾಡುವುದಕ್ಕೆ ಮುಂಚೆ, 'ನಿಮಗೇನೂ ಅಡ್ಡಿ ಇಲ್ಲವಷ್ಟೆ' ಎಂದು ಕೇಳುತ್ತಿದ್ದರು. ಕೊನೆಯ ದಿನ ಒಬ್ಬ ಹತ್ತು ವರುಷದ ಹುಡುಗನೇ ವಿರೋಧಿಸಿದ್ದ, ಪ್ರಾರ್ಥನೆ ನಿಲ್ಲಿಸಿದ್ದರು. ಹೀಗೆ ಪ್ರತಿದಿನವೂ ಅಹಿಂಸೆಯ ಪರೀಕ್ಷೆ ನಡೆಯುತ್ತಿತ್ತು. ಇಂತಹ ಘಟನೆಗಳಿಂದ ಕುಪಿತರಾಗಿ ಬಾಪೂಜಿ ಮೌಲಾನಾ ಅಬ್ದುಲ್ ಕಲಾಂರವರಿಗೆ, 'ನಾನು ಇನ್ನು ಹೆಚ್ಚು ದಿನ ಬದುಕಬಹುದೆಂದನಿಸುವುದಿಲ್ಲ' ಎಂದು ಹೇಳಿದ್ದರು.

ಮೂರು ದಿನಗಳ ನಂತರ ಅಹಿಂಸೆಯ ಒಳ್ಳೆಯ ಪರಿಣಾಮ ದೊರಕಿತು, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಒಬ್ಬ ಮುಖಂಡ ಭಂಗೀ ಕಾಲೋನಿಗೆ ಹೋಗಿ, ಇನ್ನು ಮುಂದೆ ಸಂಜೆ ಹೊತ್ತು ತೊಂದರೆಯಾಗದೆ ಪ್ರಾರ್ಥನೆ ಆಗಲು ಬಿಡುತ್ತೇವೆ ಎಂದು ಹೇಳಿದರು. ನಾಲ್ಕನೆಯ ದಿನ ಪ್ರಾರ್ಥನಾ ಸಭೆಯಲ್ಲಿ ಹಿಂದೂ ಮಹಾಸಭೆಯ ಒಬ್ಬ ಯುವಕ ತನ್ನ ಸ್ನೇಹಿತರಿಗೆ ಸಾರ್ವಜನಿಕವಾಗಿ ಹೇಳಿದ: "ನಮ್ಮ ದುರ್ವ್ಯವಹಾರದಿಂದ ಗಾಂಧೀಜಿ ಮತ್ತು ಈ ಸಮಾಜ ಪ್ರಾರ್ಥನೆ ಮಾಡಲು ಆಗುತ್ತಿಲ್ಲ ಅನ್ನುವುದು ನಿಜವಾಗಿ ನಾಚಿಕೆಗೇಡಿನ ವಿಷಯ, ವೈಚಾರಿಕ ಭೇದವನ್ನ ತೋರಿಸಲು ಬೇಕಾದಷ್ಟು ಸಭ್ಯ ರೀತಿಗಳಿವೆ" ಎಂದ.

ಅದಾದ ನಂತರ ಬಾಪೂಜಿ ಪುನಃ ಜನರನ್ನು ಕೇಳಿದರು: 'ಯಾರದಾದರೂ ಅಡ್ಡಿ ಇದೆಯೇನು?'

ಪೂರ್ತಿ ಶಾಂತಿ ನೆಲೆಸಿತ್ತು. ಆಗ ಇನ್ನೊಬ್ಬ ಹುಡುಗ ವಿರೋಧಿಸುವುದಕ್ಕಾಗಿ ಎದ್ದು ನಿಂತ, ಬಾಪೂಜಿ ಹೇಳಿದರು: "ಸರಿ, ನಾನು ಸೋತೆ, ಆದರೆ ಇದರಲ್ಲಿ ಸಭೆಯೇನೂ ಸೋತಿಲ್ಲ. ಈ ಜನ ಅವನ ರೋಷದಿಂದ ಬೈದು ಹೊಡೆದು ಮಾಡಿದರೆ ಆಗ ಸಭೆ ವಿಫಲವಾಗುತ್ತದೆ." ಆದರೆ ಮೊದಲಿನ ಯುವಕ ತನ್ನ ಸೇಹಿತನಿಗೆ ತಿಳಿಸಿ ಹೇಳಿದ. ಆಗ ಆತ ತನ್ನ ವಿರೋಧವನ್ನು ಹಿಂತೆಗೆದುಕೊಂಡ. ಆಗ ನಾಲ್ಕು ದಿನಗಳ ನಂತರ ಮೊದಲ ಬಾರಿ ಸಾರ್ವಜನಿಕವಾಗಿ ಪ್ರಾರ್ಥನೆ ಆಯಿತು, ಆ ಪ್ರಾರ್ಥನೆಯ ಪ್ರವಚನದಲ್ಲಿ ಬಾಪೂಜಿ–

"ಕಳೆದ ಮೂರು ದಿನಗಳಿಂದ ಪ್ರಾರ್ಥನೆ ಆಗಿರಲಿಲ್ಲವೆಂದು ಯಾರೂ ಭಾವಿಸಬೇಡಿ. ನಮ್ಮ ಹೃದಯದಲ್ಲಿ ನಿರಂತರವಾಗಿ ಪ್ರಾರ್ಥನೆ ನಡೆಯುತ್ತಲೇ ಇತ್ತು, ಅದು ಇದಕ್ಕಿಂತ ಹೆಚ್ಚು ಶಕ್ತಿಶಾಲಿಯಾಗಿತ್ತು. ವಿರೋಧ ಮಾಡಿದವರು ಕೂಡ ಪ್ರಾರ್ಥನೆಯಲ್ಲಿ ಸಹಾಯವನ್ನೇ ಮಾಡಿದ್ದಾರೆ. ವಾಯಿಸ್‌ರಾಯ್ ಜೊತೆ ದೇಶದ ಭವಿಷ್ಯದ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ನಾನು ಎಲ್ಲಿ ಇಂತಹ ಕೆಲಸಕ್ಕೆ ಬಾರದ ವಿಷಯಗಳನ್ನ ಮಾತನಾಡಿ ಸಮಯ ಹಾಳುಮಾಡುತ್ತಿದ್ದೇನೆಂದು ಭಾವಿಸಬೇಡಿ, ನನಗೆ ಯಾವುದೂ ಚಿಕ್ಕದು–ದೊಡ್ಡದು ಅನ್ನುವುದು ಇಲ್ಲ, ನನಗೆ ಎಲ್ಲವೂ ಒಂದೇ ಮಹತ್ವದವು. ಪಂಜಾಬ್, ಬಿಹಾರ, ನೋವಾಖಾಲಿ, ದೆಹಲಿ, ಇಲ್ಲಿ ಈ ಪ್ರಾರ್ಥನಾಭೂಮಿಯಲ್ಲಿ ದೇಶದ ವಿಭಜನೆಯ ಹೋರಾಟ ಪ್ರತಿದಿನವೂ

ಸೋತು – ಬದುಕಿ ಹೋಗ್ತಾ ಇದೆ, ಈ ಅನುಭವ ನನ್ನನ್ನ ಇನ್ನೂ ಮೇಲಕ್ಕೆತ್ತಿ ಸಮರ್ಥನನ್ನಾಗಿ ಮಾಡಿದೆ.

ಅದಾದ ನಂತರ ಪ್ರಾರ್ಥನಾ ಸಭೆಯಲ್ಲಿ ವಿರೋಧವಾಗಲಿಲ್ಲ, ಪ್ರತಿದಿನ ಹತ್ತು ಲಕ್ಷಕ್ಕಿಂತ ಹೆಚ್ಚು ಜನ ಈ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದರು.

ಈ ನಡುವೆ, ಮುಸ್ಲಿಂ ಲೀಗ್‌ನ ಡೈರೆಕ್ಟ್ ಆ್ಯಕ್ಷನ್‌ನಿಂದ ರಾವಲಪಿಂಡಿ, ಲಾಹೋರ್‌ನಲ್ಲಿ ಲೂಟಿ ಪಾಟಿ, ಬೆಂಕಿ ಹಾಕುವುದು, ಬಲಾತ್ಕಾರ ಇವೆಲ್ಲಾ ಕಣ್ಮುಂದೆ ತಾಂಡವ ನೃತ್ಯ ಶುರುಮಾಡಿವೆ ಅಂತ ಸುದ್ದಿ ಬಂತು. ಆದರೆ ಬಿಹಾರದಲ್ಲಿ ಅಪೂರ್ಣವಾಗಿದ್ದ ಕೆಲಸವನ್ನು ಪೂರ್ಣಗೊಳಿಸಬೇಕಾಗಿತ್ತು. ಏಪ್ರಿಲ್ ಕೊನೆಯವರೆವಿಗೂ ಬಾಪೂಜಿ ಬಿಹಾರದಲ್ಲಿದ್ದರು. ಅಲ್ಲಿನ ಜನರ ನೋವನ್ನ ದೂರಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದರು. ಬಿಹಾರದ ಜನರಿಗೆ ಹೇಳಿದರು, 'ನನಗೆ ಈ ಜಯ ಜಯಕಾರ ಇಷ್ಟವಾಗಲ್ಲ. ನನಗೆ ಈ ವಯಸ್ಸಿನಲ್ಲಿ ಈ ಶಬ್ಧ ಸಹಿಸಕ್ಕಾಗುವುದೂ ಇಲ್ಲ, ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಈ ಜಯಘೋಷ ಅಪ್ರಿಯವಾಗೂ ಕಾಣುತ್ತೆ, ಏಕೆಂದರೆ ಇಂತಹ ಜಯನಾದದೊಂದಿಗೆ ಹಿಂದೂ–ಮುಸಲ್ಮಾನರಿಬ್ಬರೂ ಪಂಗಡಗಳು ನಿರಪರಾಧಿಗಳಾದ ಜನರನ್ನ ಕಾರಣವಿಲ್ಲದೆ ಕೊಂದಿದ್ದಾರೆ, "ಅಲ್ಲಾ ಹೋ ಅಕಬರ್", "ಜಯ್ ಬಜರಂಗ ಬಲಿ"ಯ ಘೋಷದೊಂದಿಗೆ ನಿರ್ದೋಷಿಗಳ ಮೇಲೆ ಸಂಕಟ ತಂದು ಒಡ್ಡುವುದು– ಎಲ್ಲಕ್ಕಿಂತ ದೊಡ್ಡ ಪಾಪ ಅಂದರು. ಬಾಪೂಜಿ ಬಿಹಾರದಲ್ಲಿದ್ದಾಗ ಮೌಂಟ್‌ಬ್ಯಾಟನ್‌ನು ವಿಭಜನೆಯ ಯೋಜನೆಯನ್ನು ಸಿದ್ಧಪಡಿಸಿದ್ದ, ಆತ ಅದರ ರೂಪು–ರೇಷೆಯನ್ನ ಈ ಮುಂದಿನ ಐದು ವಿಷಯಗಳೊಂದಿಗೆ ಪ್ರಸ್ತುತ ಪಡಿಸಿದ್ದರು :

೧) ದೇಶದ ರಾಜಕೀಯ ಪಾರ್ಟಿಗಳು ಒಪ್ಪುವುದಾದರೆ ದೇಶ ವಿಭಜನೆಯಾಗಲಿ.

೨) ಸಾಮಾನ್ಯವಾಗಿ ಪ್ರಾಂತಗಳಿಗೆ ತಮ್ಮ ಭವಿಷ್ಯ ನಿರ್ಣಯಿಸಲು ಅಧಿಕಾರವಿರುತ್ತೆ.

೩) ಬಂಗಾಳ ಮತ್ತು ಪಂಜಾಬ್ ವಿಭಜನೆ ಮತದಾನವನ್ನು ಆಧರಿಸಿರುತ್ತದೆ,

೪) ಆಸಾಮ್‌ನ ಸಿಲಹಟ್ ಜಿಲ್ಲೆಯಲ್ಲಿ ಮುಸ್ಲಿಂ ಬಹುಮತ ಇರುವುದರಿಂದ ಅದನ್ನು ಪೂರ್ವ ಬಂಗಾಳದ ಜೊತೆ ಸೇರಿಸಲಾಗುತ್ತದೆ.

೫) ಗಡಿನಾಡು ಪ್ರದೇಶದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯುವುದು. ಅದಕ್ಕನುಗುಣವಾಗಿ ಅದು ದೇಶದ ಯಾವ ವಿಭಾಗಕ್ಕೆ ಸೇರುವುದೆಂದು ನಿರ್ಣಯಿಸಲಾಗುವದು.

ಈ ರೂಪುರೇಷೆಯಲ್ಲಿ ಎರಡು ಮಹತ್ವದ ಸೂಚ್ಯ ಲಕ್ಷಣಗಳಿದ್ದವು, ಪಂಜಾಬಿನ ಸಿಖ್ಖರು ಪಾಕಿಸ್ತಾನದೊಂದಿಗೆ ಸೇರಲು ಸಿದ್ಧರಾಗಿರಲಿಲ್ಲ, ಪಾಕಿಸ್ತಾನದ ಬೇಡಿಕೆಗೆ ಆಧಾರವಾಗಿಟ್ಟುಕೊಂಡ ಸಿದ್ಧಾಂತಕ್ಕನುಗುಣವಾಗಿಯೇ ಪಂಜಾಬಿನ ಹಿಂದೂ ಸಿಖ್ಖರು ಮುಸಲ್ಮಾನರಿಂದ ಬೇರೆಯಾಗಬಯಸುತ್ತಿದ್ದರು. ಬಂಗಾಳದ ಹಿಂದೂಗಳೂ ಇದೇ ಬೇಡಿಕೆಯನ್ನಿತ್ತಿದ್ದರು. ಮುಸಲ್ಮಾನರು ಆಸಾಮನ್ನೂ ಹೊಡೆದುಕೊಳ್ಳಬಯಸುತ್ತಿದ್ದರು. ಆದರೆ ಗೋಪೀನಾಥ ಬಾರದೊಲಾಯಿಯ ಸರಕಾರ ಕಠೋರವಾಗಿ ಸ್ಥಿತಿಯನ್ನು ನಿಯಂತ್ರಿಸಿತು, ಅದರಿಂದ ಪೂರ್ತಿ ಆಸಾಮ್ ಉಳಿದುಕೊಂಡಿತು. ಆದರೆ ಸಿಲಹಟ್ ಜಿಲ್ಲೆಯನ್ನು ಪೂರ್ವಬಂಗಾಳದ ಮುಸ್ಲಿಂ ಬಹುಸಂಖ್ಯಾತರೊಂದಿಗೆ ಜೋಡಿಸಿದರು. ಪಂಜಾಬ್, ಬಂಗಾಳದ ವಿಭಜನೆಯ ಜೊತೆಗೆ ಗಡಿನಾಡಿನ ಪ್ರಶ್ನೆ ಚಿಂತೆಯಿಂದ ಕೂಡಿದ್ದಾಗಿತ್ತು, ಕೊನೆಯ ೩೦ ವರ್ಷಗಳಲ್ಲಿ ಗಡಿನಾಡಿನ ಪಠಾಣರು ಕಾಂಗ್ರೆಸ್ ಮತ್ತು ದೇಶವಾಸಿಗಳಿಗೆ ತನು, ಮನ, ಧನ ನೀಡಿ ಸಹಾಯಮಾಡಿದ್ದರು. ಈ ಹೋರಾಟದ ತಂಡ ಬಾಪೂಜಿಯ ಅಹಿಂಸೆಯನ್ನು ತನ್ನದಾಗಿಸಿಕೊಂಡು ಜೀವನ ಕ್ರಮವನ್ನೇ ಬದಲಾಯಿಸಿ ಬಿಟ್ಟಿತ್ತು. ಅಲ್ಲಿಯ ಶೇಕಡಾ ೮೦ ಮಂದಿ ಮುಸಲ್ಮಾನರಿಗೆ ಪಾಕಿಸ್ತಾನ ಬೇಕು ಅನ್ನುವ ಕೋಮುವಾದಿ ಬೇಡಿಕೆ ಇಷ್ಟವಾಗಿರಲಿಲ್ಲ. ಅವರು ಮುಸ್ಲಿಂ ಲೀಗನ್ನು ಒಪ್ಪದೆ ಅಧಿಕ ಮತಗಳಿಂದ ಕಾಂಗ್ರೆಸ್ಸನ್ನು ವಿಜಯಗೊಳಿಸಿದ್ದರು, ಮತ್ತು ಡಾ॥ ಖಾನ್‌ಸಾಹಬ್ ಮುಖ್ಯಮಂತ್ರಿಯಾಗಿದ್ದಾಗ ಗಡಿನಾಡಿನಲ್ಲಿ ಶಾಂತಿ ನೆಲಸಿ, ಪ್ರಗತಿಯ ಸಂಕೇತಗಳು ಕಾಣಿಸಿದ್ದವು. ವಿಭಜನೆಯ ಸಮಯದಲ್ಲಿ ಯಾವ ಪ್ರಾಂತದಲ್ಲಿ ಯಾವ ಸರಕಾರ ಇರುತ್ತದೆಯೋ ಅದು ಅದನ್ನ ನಿರ್ಣಯಿಸುವುದೆಂದು ಲೀಗ್‌ಗೆ ಗೊತ್ತಿತ್ತು, ಅದರಿಂದ ಎಲ್ಲ ತರಹೆಯ ಮೋಸಗಾರಿಕೆ ಮಾಡಿ ಪಂಜಾಬ್ ಮುಖ್ಯಮಂತ್ರಿಯಾಗಿದ್ದ ಮಲಿಕ್ ಖಿಸ್ರ್ ಹೈಯಾತ್ ಖಾನ್‌ನ ಸರಕಾರವನ್ನುರುಳಿಸಿದ್ದರು, ಆದರೂ ಮುಸ್ಲಿಂ ಲೀಗ್ ಅಲ್ಲಿ ತನ್ನ ಸರಕಾರವನ್ನು ರಚಿಸಲಾಗಿರಲಿಲ್ಲ. ಲೀಗ್ ನ್ಯಾಷನಲ್ ಗಾರ್ಡ್ ಎಂಬ ಸಂಸ್ಥೆಯನ್ನು ನಡೆಸಿ ಅದರ ಮೂಲಕ ಪ್ರಾಂತದ ಮುಸಲ್ಮಾನರಿಗೆ ಶಸ್ತ್ರಾಸ್ತ್ರಗಳನ್ನು ಹಂಚಿದರು ಮತ್ತು ದಂಗೆ ಮಾಡಿಸಿದರು. ಗವರ್ನರ್ ಮತ್ತು ಲಾರ್ಡ್ ಬೆವೆಲ್ ಇಬ್ಬರೂ ಈ ಘಟನೆಗಳನ್ನು ಅಲಕ್ಷಿಸಿದರು, ಪಂಜಾಬಿನ ಹಿಂದೂಗಳೂ ಬೇಸತ್ತು ಹೋದರು, ಆಗ ಸಿಖ್ಖರ ಅಕಾಲಿದಳ ಎಲ್ಲಾ ವಿವೇಕ ವಿಚಾರ ಮತ್ತು ಅನುಶಾಸನವನ್ನು ಒತ್ತಟ್ಟಿಗಿಟ್ಟು ಎಲ್ಲಾ ರೀತಿಯಲ್ಲೂ ಮುಸಲ್ಮಾನರ ವಿರುದ್ಧ ಸೇಡು ತೀರಿಸಿಕೊಳ್ಳಬೇಕೆಂದು ನಿರ್ಣಯಿಸಿತು. ಮಾರ್ಚ್ ೪ರಂದು ಹಿಂದೂ–ಸಿಖ್ಖರು ಕೂಡಿ ಲಾಹೋರ್‌ನಲ್ಲಿ ಪಾಕಿಸ್ತಾನ– ವಿರೋಧಿ ದಿವಸವನ್ನು ಆಚರಿಸಿದರು, ಮೆರವಣಿಗೆ ನಡೆಸಿದರು, ಘೋಷಣೆಗಳನ್ನು ಕೂಗಿದರು. ಪಂಜಾಬ್ ಗವರ್ನರನು ಅವರ ಮೇಲೆ ಗುಂಡು ಹಾರಿಸಿದ, ಅನೇಕರು ಸತ್ತರು.

ಮಾರ್ಚ್ ೫ರಂದು ಗವರ್ನರ್ ಸರ್ ಈವಾನ್ಸ್ ಜೆಕಿನ್ಸ್‌ನು ಪಂಜಾಬ್ ವಿಧಾನ ಸಭೆಯನ್ನು ತಡೆ ಹಿಡಿದು ಪ್ರಾಂತದ ಆಡಳಿತವನ್ನು ತನ್ನ ಕೈಗೆತ್ತಿಕೊಂಡ. ಈಗ ಪಂಜಾಬ್‌ನಲ್ಲಿ ಮುಸಲ್ಮಾನರಿಗೆ ಅನುಕೂಲವಾಯಿತು, ಆದರೆ ಗಡಿ ಪ್ರಾಂತದಲ್ಲಿ ಎಷ್ಟೇ ಪ್ರಚೋದಿಸಿದರೂ ಖುದಾಯೀ ಖಿದಮತ್‌ಗಾರ್ ಮುಸ್ಲಿಂ ಲೀಗ್‌ಗೆ ಸಹಕಾರ ನೀಡುತ್ತಿರಲಿಲ್ಲ. ಡಾ॥ ಖಾನ್ ಸಾಹೇಬರ ಸುಂದರ ವ್ಯವಸ್ಥೆಯನ್ನು ಮುರಿಯುವುದಕ್ಕೋಸ್ಕರ ಗವರ್ನರ್ ಸರ್ ಓಲೆಫ್ ಕಾರೊ ಎಲ್ಲಾ ರೀತಿಯಲ್ಲೂ ತನ್ನ ಶಕ್ತಿಯನ್ನು ದುರುಪಯೋಗಪಡಿಸಿಕೊಂಡ. ಗವರ್ನರ್ ಕಾರೊ ಮುಖ್ಯಮಂತ್ರಿ ಖಾನ್ ಸಾಹೇಬರ ಆಜ್ಞೆಯನ್ನು ಅನಾದರಿಸಿ ಅದಕ್ಕೆ ವಿರುದ್ಧವಾಗಿ ಆದೇಶ ಹೊರಡಿಸುತ್ತಿದ್ದ, ಹಾಗೂ ಸುಳ್ಳು ರಿಪೋರ್ಟ್ ಕಳುಹಿಸುತ್ತಿದ್ದ. ಮುಖ್ಯಮಂತ್ರಿಯ ರಿಪೋರ್ಟನ್ನು ವಾಯಿಸ್‌ರಾಯ್‌ಗೆ ಕಳುಹಿಸುತ್ತಿರಲಿಲ್ಲ ಮತ್ತು ಪೇಷಾವರ್ – ಲಾಹೋರ್‌ನಿಂದ ಮುಸ್ಲಿಂ ಗೂಂಡಾಗಳನ್ನು ಕರೆತಂದು ಸುಳ್ಳು ಪ್ರದರ್ಶನ ಮಾಡಿಸಿ ಗಡಿನಾಡಿನಲ್ಲಿ ಅಶಾಂತಿ – ಚಿಂತೆ ಇರುವ ಹಾಗೆ ಅಭಿಪ್ರಾಯ ಕೊಡುತ್ತಿದ್ದ. ನಗರದಲ್ಲಿ ಮುಸ್ಲಿಂ ಗೂಂಡಾಗಳ ಕೈಲಿ ಆತಂಕ ಹಬ್ಬಿಸಿ, ಅತ್ಯಾಚಾರ ಮಾಡಿಸಿದ. ಇದರಿಂದ ಹಿಂದೂಗಳು ಅಲ್ಲಿಂದ ಓಡಿಹೋಗಿ ಮುಸಲ್ಮಾನರು ಈ ಆತಂಕವಾದಿಗಳಿಂದ ಪ್ರಚೋದಿತರಾಗಲಿ ಎಂಬ ಉದ್ದೇಶ ಅವನಿಗಿತ್ತು. ಈ ಘಟನೆಗಳೆಲ್ಲ ನಡೆದ ಬಳಿಕವೂ ಖಾನ್ ಬಂಧುಗಳು ಹತ್ತು ಸಾವಿರ 'ಖುದಾಯೀ ಖಿದಮತ್‌ಗಾರ'ರನ್ನು ಗಡಿನಾಡಿನಲ್ಲಿ ಹರಡಿಸಿ ದಂಗೆಯನ್ನು ಶಮನಗೊಳಿಸಿದರು ಮತ್ತು ಪೇಷಾವರ್, ಡೇರಾ ಇಸ್ಮಾಯಿಲ್ ಖಾನ್, ಬನ್ನೂ ಮುಂತಾದ ಕಡೆಗಳಲ್ಲಿ ಶಾಂತಿ ನೆಲೆಗೊಳಿಸಿ ಜನರಿಗೆ ಧೈರ್ಯ ತುಂಬಿದರು. ಆದರೆ ಗವರ್ನರನ ಅಧಿಕಾರ ಮತ್ತು ಸೇನೆಯೇ ಮುಖ್ಯಮಂತ್ರಿಗೆ ದಗಾ ಬಗೆದಾಗ ಇನ್ನು ಯಾವ ಉಪಾಯವೂ ಉಳಿದಿರುವುದಿಲ್ಲ, ನಿರಪರಾಧಿಗಳಾದ ಪ್ರಜೆಗಳು ಇಂತಹ ಗವರ್ನರನ ಕುಟಿಲತೆಯಲ್ಲಿ ಸಿಲುಕಿದರು.

ಆ ಕಾಲದಲ್ಲಿ ಗಡಿನಾಡನ್ನು ಗಡಿ ಅಂತ ಕರೆಯದೆ ಇಂಗ್ಲಿಷ್ ಆಫೀಸರ್‌ಗಳು ಅದನ್ನ 'ಬಾಸ್ಟರ್ಡ್ ಪ್ರಾಂತ್ಯ' ಅಂತ ಕರೆಯುತ್ತಿದ್ದರು. ಕಾಂಗ್ರೆಸ್ ಹಿಂದೂಗಳ ಸಂಸ್ಥೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಮುಸಲ್ಮಾನ ಪ್ರಜೆಗಳು ಕಾಂಗ್ರೆಸ್ ಆಡಳಿತದಲ್ಲಿ ಸುಖವಾಗಿರುವುದಕ್ಕೆ ಸಾಧ್ಯವಿಲ್ಲ, ಅದರಿಂದ ಮುಸ್ಲಿಂ ಲೀಗ್ ಪಾಕಿಸ್ತಾನವನ್ನು ಬೇಡುತ್ತಾ ಇರುವುದು ಸರಿಯಾಗಿದೆ ಅಂತ ಅವರ ಭಾವನೆ ಇತ್ತು, ಗಡಿನಾಡಿನ ಈ ರಾಜಕೀಯ ಪರಿಸ್ಥಿತಿ ಆಫೀಸರ್‌ಗಳ ಈ ತರಹೆ ಅಭಿಪ್ರಾಯವನ್ನ ಬುಡಮೇಲು ಮಾಡಿತ್ತು. ಇದು ಇಂಗ್ಲಿಷ್ ಆಫೀಸರುಗಳಿಗೆ ಇಷ್ಟವಾಗಿರಲಿಲ್ಲ, ಗಡಿನಾಡಿನ ಮುಸಲ್ಮಾನ ಪ್ರಜೆಗಳ ಧೈರ್ಯ ಅವರ ವಿವೇಕವನ್ನ ಹೊಗಳಬೇಕಾಗಿತ್ತು. ಅದಕ್ಕೆ ಬದಲಾಗಿ ಇಂಗ್ಲಿಷರು ಅವರು ಆ ಜನರನ್ನ ಕುಲಗೆಟ್ಟವರು

ಅಂತ ಅವರ ಹೆಸರನ್ನ ಕೆಡಿಸುತ್ತಿದ್ದರು. ಆ ಪಠಾಣರು ಇದಕ್ಕೆ ಮಾಡಿದ್ದ ತಪ್ಪಾದರೂ ಏನು ಅಂದರೆ ಅವರು ಧರ್ಮದ ಹೆಸರಿನಲ್ಲಿ ಭೇದ–ಭಾವ ಮಾಡದೆ ಕಾಂಗ್ರೆಸ್ ಸಹಯೋಗ ಪಡೆದುಕೊಂಡು ತಮ್ಮ ವಿಕಾಸ ಮಾಡಕ್ಕೆ ಇಷ್ಟಪಟ್ಟಿದ್ದರು. ಆದರೆ ನಾವು ಶ್ರೇಷ್ಠ ಅಂತ ಅನ್ನಿಸಿಕೊಳ್ಳುತ್ತಿದ್ದ ಈ ಬ್ರಿಟಿಷರಿಗೆ ಈ ಕಬಾಯಿಲಿಗಳು ೨೦ನೇ ಶತಮಾನದ ಪ್ರಜಾತಂತ್ರ ಮತ್ತು ಗಾಂಧೀಜಿಯ ಅಹಿಂಸೆಯನ್ನು ಸ್ವೀಕರಿಸುವುದು ಇಷ್ಟ ಇರಲಿಲ್ಲ. ತಮ್ಮ ಸಹೋದರರು ದೂರ ಗಡಿನಾಡಿನಲ್ಲಿ ಹೀಗೆ ಹಿಂಸೆಗೆ ಒಳಗಾಗಿದ್ದಾರೆ ಅಂತ ಕಾಂಗ್ರೆಸ್‌ಗೆ ದುಃಖವಾಗುತ್ತಿತ್ತು, ಆದರೆ ಏನೂ ಮಾಡುವ ಹಾಗಿರಲಿಲ್ಲ. ಅದರಿಂದ ಇಷ್ಟವಿಲ್ಲದಿದ್ದರೂ ವಿಭಜನೆ ವಿಫಲವಾಗಲಿ ಎಂದು ಗಡಿನಾಡನ್ನು ಬಲಿದಾನ ಮಾಡಬೇಕಾಗಿ ಬಂತು. ತಮ್ಮ ಮುಗ್ಧ ಜನರಿಗೆ ಹೆಚ್ಚು ಕಷ್ಟ ಕೊಡದೆ ಆ ಖುದಾಯಿ ಖಿದಮತ್‌ಗಾರರು ಚುನಾವಣೆಯಲ್ಲಿ ಭಾಗವಹಿಸಲೇ ಇಲ್ಲ, ತಮ್ಮ ಕೈಗಳಲ್ಲೇ ತಮ್ಮ ರಾಜಕೀಯದ ಆತ್ಮಹತ್ಯೆ ಮಾಡಿಕೊಂಡು ತಮ್ಮ ಪ್ರಜೆಗಳನ್ನು ದಂಗೆ ಲೂಟಿ ಆಗದಂತೆ ಉಳಿಸಿದ್ದರು, ಗಡಿನಾಡಿನಲ್ಲಿ ಚುನಾವಣೆಗಳಾದವು, ಮತ್ತು ಪ್ರತಿಯೊಂದು ಮತದಾನ ಕೇಂದ್ರದಲ್ಲೂ ಶೇಕಡಾವಾರು ಎಂಬತ್ತರಿಂದ ತೊಂಬತ್ತರವರೆಗೆ ಮತದಾನವಾಯಿತು, ಬಾದಷಾಹ ಖಾನರ ಅನುಯಾಯಿಗಳೆಲ್ಲರೂ ಚುನಾವಣೆಯನ್ನು ಬಹಿಷ್ಕರಿಸಿದ್ದುದರಿಂದ ಕಾಡು – ಬೆಟ್ಟಗಳನ್ನು ಹಾದು ಯಾವ ಹಳ್ಳಿಯವರು ಮತದಾನ ಕೇಂದ್ರಗಳಿಗೆ ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ತಲುಪಿದ್ದು ಹೇಗೆ ಅಂತ ಅವರಿಗೆ ಆಶ್ಚರ್ಯವಾಯಿತು. ಬ್ರಿಟಿಷ್ ಸರಕಾರದ ದೊಡ್ಡ ಇಂಗ್ಲಿಷ್ ಅಧಿಕಾರಿಗಳು ಇಂತಹ ಕಾನೂನುಬಾಹಿರವಾದ ರೀತಿಗಳಿಗೆ ಪ್ರೋತ್ಸಾಹ ನೀಡಿದ್ದು, ಬೋಗಸ್ ಹೆಸರಿನಲ್ಲಿ ಹಸ್ತಾಕ್ಷರ, ಹೆಬ್ಬೆಟ್ಟು ಒತ್ತಿಸಿ ಮತಪೆಟ್ಟಿಗೆ ತುಂಬಿಸುತ್ತಾರೆಂಬುದನ್ನು ನೋಡಿ ಅವರಿಗೆ ಭಾರಿ ದುಃಖವಾಯಿತು. ಇದು ಮುಸಲ್ಮಾನರ ಸ್ಥಿತಿಯಾಗಿತ್ತು ಅಂದರೆ ನೂರಕ್ಕೆ ಇಪ್ಪತ್ತು ಭಾಗದಷ್ಟಿದ್ದ ಮುಸ್ಲಿಮರಲ್ಲದವರ ಮನೆಗಳಿಗೆ ಬೆದರಿಕೆ ಹಾಕಿದ ಚೀಟಿಗಳನ್ನ ಕೊಟ್ಟು ಚುನಾವಣೆಯ ದಿನ ಮನೆಯಿಂದ ಹೊರಕ್ಕೆ ಬರಕೂಡದು, ಸುಮ್ಮನೆ ಮನೆ ಒಳಗೇ ಇದ್ದುಕೊಂಡು ಮುಸ್ಲಿಂಲೀಗ್ ಜೊತೆ ಸೇರಿಕೊಂಡು ಪಾಕಿಸ್ತಾನದ ಬಗ್ಗೆ ಬೇಡಿಕೆ ಸಲ್ಲಿಸಬೇಕು ಎಂದು ತಿಳಿಸಿದ್ದರು. ಆ ಅಭಿಪ್ರಾಯದ ಪತ್ರವನ್ನೂ ಬರೆದು ಕೊಡಬೇಕು ಎಂದು ತಿಳಿಸಲಾಗಿತ್ತು. ಹೀಗೆ ಕಾನೂನುಬಾಹಿರವಾದ ಕ್ರಮಗಳನ್ನು ಅನುಸರಿಸಿ ವಿದೇಶೀ ಪ್ರಜಾಪ್ರಭುತ್ವದ ರಾಜಪುರುಷ ವೈಸ್‌ರಾಯ್ ಧೈರ್ಯವಾಗಿ ಸರಹದ್ದನ್ನು ಕೊಂದುಬಿಟ್ಟರು, ಹೀಗೆ ಬಾರ್ಡ್‌ಸ್ಟ್ ಪ್ರಾಂತ್ಯವನ್ನು ಪಾಕಿಸ್ತಾನಕ್ಕೆ ಸೇರಿಸಿಬಿಟ್ಟರು. ಬಾದಷಾಹ್ ಖಾನ್‌ರನ್ನ ಪಾಕಿಸ್ತಾನದಿಂದ ಹೊರಕ್ಕೆ ಹಾಕಿದರು. ಭಾರತದಲ್ಲಿ ಪರದೇಶಿ ಅನ್ನಿಸಿಕೊಂಡರು. ಹಳೆಯ ವೈಮನಸ್ಯ ಅನ್ನುವ ಹೆಸರಲ್ಲಿ ಮುಖ್ಯಮಂತ್ರಿ ಡಾ॥ ಖಾನ್ ಸಾಹೇಬರನ್ನ ಯಾರೋ ಒಬ್ಬ ಮುಸಲ್ಮಾನ

ಖೂನಿ ಮಾಡಿಬಿಟ್ಟ. ಜಿನ್ನ ಸಾಹೇಬರ ಪಾಕಿಸ್ತಾನ ರಚನೆ ಮಾರ್ಗ ಸುಗಮವಾಯಿತು, ಡಾ॥ ಖಾನ್ ಅವರನ್ನ ಹೃದಯಹೀನವಾಗಿ ಕೊಂದಿದ್ದಕ್ಕೆ ಬಾಪೂಜಿಯ ಹೃದಯ ಮೂಕವಾಗಿ ರಕ್ತದ ಕಣ್ಣೀರನ್ನು ಸುರಿಸಿತು.

ಪೂರ್ವ ಬಂಗಾಳದ ಮುಸಲ್ಮಾನ ಗೂಂಡಾಗಳಿಂದ ಬೇಸತ್ತು ಹಿಂದೂ ಪ್ರಜೆಗಳು ವಿಭಜನೆಯ ಬೇಡಿಕೆ ಮುಂದಿಟ್ಟರು, ಇದರಿಂದ ಸುಹರಾವರ್ದಿಗೆ ಭಾರಿ ಪಶ್ಚಾತ್ತಾಪವಾಯಿತು. ಆ ಗೂಂಡಾಗಳ ಸಹಾಯ ಪಡೆದು ಅತಿ ದೊಡ್ಡ ತಪ್ಪು ಮಾಡಿದ್ದರಿಂದ ಅವರ ಅಧಿಕಾರ ಕೊನೆಗೊಳ್ಳುವಂತಹ ಸ್ಥಿತಿಗೆ ತಲುಪಿತ್ತು, ಆಗ ಆತ ಕೆಲವರು ಗೂಂಡಾಗಳನ್ನು ಜೈಲಿಗೆ ಹಾಕಿದರು. ಸಾಂಪ್ರದಾಯಿಕತೆಯ ಈ ರಾಕ್ಷಸರ ಮೇಲೆ ಬಂಗಾಳ ಸರಕಾರ ಸ್ವಲ್ಪ ದಿನಗಳ ಮಟ್ಟಿಗೆ ಪ್ರತಿಬಂಧ ಹಾಕ ಬಯಸಿತು. ಆದರೆ ಹತ್ಯೆಯನ್ನ ತನ್ನ ದೈನಂದಿನ ಉದ್ಯೋಗವನ್ನಾಗಿ ಮಾಡಿಕೊಂಡಿದ್ದವರು ತಕ್ಷಣ ಅನುಶಾಸನವನ್ನು ಅನುಸರಿಸುವುದಾಗಲಿಲ್ಲ. ಲೂಟಿ, ಹತ್ಯೆ ನಡೆಯುತ್ತಲೇ ಇತ್ತು, ಹಿಂದೂಗಳ ಹೃದಯ ದಾರುಣವಾಗಿ ಬಡಿದುಕೊಳ್ಳುತ್ತಿತ್ತು, ಪುನಃ ಸುಹರಾವರ್ದಿಯನ್ನ ನಂಬುವುದಕ್ಕೆ ಅವರು ಸಿದ್ಧವಾಗಿರಲಿಲ್ಲ, ನೂರಾರು ವರ್ಷಗಳ ಅವರ ಮನೆ–ಮಠ, ಆಸ್ತಿ ಎಲ್ಲವನ್ನೂ ಬಿಟ್ಟು ಪೂರ್ವಬಂಗಾಳದ ಹಿಂದೂಗಳು ಅಲ್ಲಿಂದ ಓಡಿದರು. ಕಲ್ಕತ್ತಾದ ರಸ್ತೆಗಳಲ್ಲಿ ರಟ್ಟಿನ ಗೂಡುಗಳನ್ನ ಮಾಡಿಕೊಂಡು ವಾಸಮಾಡಲಾರಂಭಿಸಿದರು. ಸುಹರಾವರ್ದಿಯ ಬೃಹತ್ ಬಂಗಾಳವನ್ನ ತನ್ನದಾಗಿಸಿಕೊಳ್ಳಲಿಲ್ಲ. ಜೀವನದಲ್ಲಿ ಮೊಟ್ಟ ಮೊದಲು ಸುಹರಾವರ್ದಿ ಸಾಹಬರ ಮದ ಇಳಿಯತೊಡಗಿದ್ದು, ಅವರ ಕಾಲ ಕೆಳಗಿನ ಭೂಮಿ ಅಲುಗಾಡಿ ಹೋಯಿತು, ಕರಾಚಿಯಿಂದ ಕಲ್ಕತ್ತಾವರೆಗೆ ಉತ್ತರ ಭಾರತದಲ್ಲಿ ಪಾಕಿಸ್ತಾನದ ಅಖಂಡವಾದ ಉದ್ದಗಲದ ಸಾಮ್ರಾಜ್ಯ ರಚಿತವಾಗುತ್ತದೆ ಅಂತ ಜಿನ್ನಾ ಸಾಹೇಬರು, ಮುಸ್ಲಿಂ ಲೀಗ್ ಉತ್ಸಾಹದಿಂದಿದ್ದರು. ಆದರೆ ಲೀಗ್‌ನ ದಂಗೆಕೋರತನದಿಂದ ಪುಕ್ಕಲನಾಗಿದ್ದ ಹಿಂದೂ ಕುಪಿತನಾದ. ಅವನು ಸಾಯುವುದಕ್ಕೆ ಸಿದ್ಧನಾದ, ತನ್ನ ಸಸ್ಯ ಶ್ಯಾಮಲ ದೇಶವನ್ನು ಬಿಟ್ಟ. ಆದರೆ ಮುಸ್ಲಿಂ ಆಧಿಪತ್ಯದಿಂದ ಬೇರೆ ಆಗುವ ಕಠಿಣ ನಿರ್ಣಯ ತೆಗೆದುಕೊಂಡ. ಲೀಗ್ ಸುಹರಾವರ್ದಿಗೆ ಬದಲಾಗಿ ಖ್ವಾಜಾ ನಜೀಮ್ ಉದ್ದೀನನನ್ನ ಪೂರ್ವ ಪಾಕಿಸ್ತಾನ (ಇಂದಿನ ಬಾಂಗ್ಲಾದೇಶ)ದ ಮುಖ್ಯ ಮಂತ್ರಿಯಾಗಿ ನೇಮಿಸಿತು. ಕಾಂಗ್ರೆಸ್ ಡಾ॥ ಪ್ರಫುಲ್ಲ ಚಂದ್ರಸೇನರನ್ನು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಎಂದು ಘೋಷಿಸಿತು, ಆದರೆ ಈ ವ್ಯವಸ್ಥೆ ಜುಲೈ ಅನಂತರ ಆಗುವದಿತ್ತು.

ಜವಾಹರಲಾಲಜೀಯ ಒತ್ತಾಯದಿಂದಾಗಿ ಮೇ ೧ನೇ ದಿನಾಂಕದಿಂದ ಬಾಪೂಜಿ ಪುನಃ ದೆಹಲಿಯ ಭಂಗಿ ಕಾಲೋನಿಗೆ ಬಂದರು. ೧೯೪೭ರ ಬೇಸಿಗೆಯ ದಿನಗಳು, ಭಯಂಕರವಾದ ಬಿಸಿಲಿನ ಝಳಗಳು, ಅದರಿಂದ ಬಾಪೂಜಿಗೆ ಬಹಳ

ಕಷ್ಟ ಆಗುತ್ತಿತ್ತು. ಅದರ ಮೇಲೆ ರಾಜಕೀಯದ ಬಿಸಿ ತೀವ್ರವಾಗಿತ್ತು ದೇಶದಲ್ಲಿ ಅಲ್ಲಲ್ಲಿ ದಂಗೆ ಹರಡಿತ್ತು, ಪಂಜಾಬ್ ಪೂರ್ತಿ ಉರಿಯುತ್ತಿತ್ತು, ಆದರೆ ಆದರ್ಶವಾದಿ ಲಾರ್ಡ್ ಮೌಂಟ್‌ಬ್ಯಾಟನ್ ಮುಸ್ಲಿಂ ಲೀಗ್, ಜಿನ್ನಾ ಯಾರ ಮೇಲೂ ಕೇಸ್ ಹಾಕಿ ಕೋರ್ಟಿಗೆ ತಂದು ನಿಲ್ಲಿಸುವ ಧೈರ್ಯ ತೋರಲಿಲ್ಲ. ದೇಶದಲ್ಲಿ ಹರಡಿದ್ದ ಅರಾಜಕತೆಗಾಗಿ ಮುಸಲ್ಮಾನರ ಮೇಲೆ ತಪ್ಪು ಹೊರಿಸಲಿಲ್ಲ, ಗಾಂಧೀಜಿಯವರ ಸಲಹೆಯನ್ನು ಕೂಡ ಸ್ವೀಕರಿಸಲು ಮೌಂಟ್ ಬ್ಯಾಟನ್ ಹಿಂಜರಿಯುತ್ತಿದ್ದರು. ಮುಸ್ಲಿಂ ಲೀಗ್ ಬಾಪೂಜಿಯ ಎಲ್ಲ ಪ್ರಸ್ತಾವಗಳನ್ನೂ ಸಂದೇಹದಿಂದಲೇ ನೋಡುತ್ತಿತ್ತು. ಕಾಂಗ್ರೆಸ್ ಮಂತ್ರಿಮಂಡಳ ಹಾವು – ಸುಂಡಿಲಿಯ ನಡುವಣ ಸ್ಥಿತಿಯಲ್ಲಿ ಅಸಮಂಜಸದಲ್ಲಿತ್ತು. ಅಂತಹ ವಿಸ್ಫೋಟಕ ಪರಿಸ್ಥಿತಿಯಲ್ಲಿ ಬಹಳ ಎಚ್ಚರಿಕೆಯಿಂದ ಚದುರಂಗದಾಟದ ಕೂಟನೀತಿಯಿಂದ ಮೌಂಟ್‌ಬ್ಯಾಟನ್ ಸಾಹೇಬರು ೧೫ ಆಗಸ್ಟ್ ೧೯೪೭ರಂದು ಭಾರತದ ಸ್ವಾತಂತ್ರ್ಯದ ಶುಭಗಳಿಗೆಯನ್ನು ಘೋಷಿಸಿದರು. ಲೀಗ್ ದಿನೇ ದಿನೇ ಕೊಡುತ್ತಿದ್ದ ಹಿಂಸೆ ಮತ್ತು ಸರಕಾರಿ ಅಧಿಕಾರಿಗಳ ದಗಲಬಾಜಿತನ, ಚಾಲಾಕುತನದಿಂದೆಲ್ಲಾ ಬೇಸತ್ತು ಕಾಂಗ್ರೆಸ್ ನೇತಾರರು ವಿಭಜನೆಯ ಪ್ರಸ್ತಾವಕ್ಕೆ ಸಹಮತಿ ತೋರಿದರು. ಜಿನ್ನಾರ ಇಚ್ಛೆ ಪೂರೈಸಿತು, ಆದರೂ ಆತ ತನ್ನ ಸ್ವೀಕೃತಿಯನ್ನ ನೀಡಲಿಲ್ಲ.

೧೯೪೭ರ ಮೇ ೧ರಂದು ದೆಹಲಿಯಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ಅಧಿವೇಶನ ಜರುಗಿತು. ದೇಶದ ಎಲ್ಲೆಡೆಯಿಂದ ಪ್ರತಿನಿಧಿಗಳು ಬಹಳ ಆತುರವಾಗಿ ನಾಯಕರುಗಳ ನಿರ್ಣಯವನ್ನು ಕೇಳುವುದಕ್ಕಾಗಿ ಅಲ್ಲಿ ಬಂದು ಸೇರಿದ್ದರು. ತೀವ್ರ ವೇದನೆಯಿಂದ ಜವಾಹರಲಾಲ್‌ಜೀ ವಿಭಜನೆಯ ಕನಿಷ್ಠ ಘಾತಕವಾದ ಅಂತಿಮ ಉಪಾಯವೊಂದೇ ಉಳಿದಿರುವುದೆಂದು ಘೋಷಿಸಿದರು. ಅದರಿಂದ ಇಷ್ಟವಿಲ್ಲದಿದ್ದರೂ ವಿಭಜನೆಯನ್ನು ಒಪ್ಪಿಕೊಳ್ಳಲೇ ಬೇಕಾಗಿತ್ತು. ಬಾಪೂಜಿಗೆ ಈ ಕನಿಷ್ಠ – ವರಿಷ್ಠದ ಘಾತಕವಾದ ತೌಲನಿಕ ಕ್ರಮವೇ ಇಷ್ಟವಿರಲಿಲ್ಲ, ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯೆಯಲ್ಲಿದ್ದ ಹಿಂದೂಗಳನ್ನು ಸುರಕ್ಷಿತವಾಗಿ, ಸಮ್ಮಾನದೊಂದಿಗೆ ಇರಿಸಲಾಗುವುದು ಎಂದು ಜಿನ್ನಾ ನೀಡಿದ್ದ ಆಶ್ವಾಸನೆ ಗಾಳಿಯ ಗುಳ್ಳೆಗಳ ಹಾಗೆ ಅಂತ ಅನ್ನುವುದು ಬಾಪೂಜಿ ಅಭಿಪ್ರಾಯವಾಗಿತ್ತು. ದೇಶದಲ್ಲಿ ಅರಾಜಕತೆ ಹರಡಿದುದ್ದಕ್ಕೆ ಜಿನ್ನಾ ತಪ್ಪಿತಸ್ಥನೆಂದು ಘೋಷಿಸಬೇಕಾಗಿದ್ದುದು ಸರಕಾರದ ಕರ್ತವ್ಯವಾಗಿತ್ತು, ಆದರೆ ವಾಯಿಸ್‌ರಾಯ್ ಇದಕ್ಕೆ ಸಿದ್ಧರಾಗಲಿಲ್ಲ. ಅಂತಹ ಸ್ಥಿತಿಯಲ್ಲಿ ಕಾಂಗ್ರೆಸ್ ವಿಭಜನೆಯನ್ನು ಒಪ್ಪಿಕೊಂಡರೆ, ಈ ಅಂತರ್ಜಾತೀಯ ಕಲಹಗಳು, ವಿನಾಶವನ್ನು ಹೊರಿಸಿ ಮುಂಬರುವ ಅನೇಕ ಪೀಳಿಗೆಗಳು ಈ ಅಪರಾಧವನ್ನ ಅನುಭವಿಸಬೇಕಾಗುತ್ತದೆ. ದೇಶದ ಅಖಂಡತೆ ಹರಿದು ಹಾಳಾಗುತ್ತದೆ. ಆದರೆ ಇವತ್ತಿನವರೆಗೂ ಅಂದಿನಿಂದ ಐವತ್ತು ವರ್ಷಗಳಾದ ನಂತರವೂ ವಿಭಜನೆಯ

ಆ ಕೆಟ್ಟ ದುಃಸ್ವಪ್ನದಿಂದ ನಾವು ಮುಕ್ತರಾಗಿಲ್ಲ. ಪ್ರತಿಯೊಂದು ಗಲ್ಲಿಯಲ್ಲೂ ಎಲ್ಲಾ ತರಹೆಯ ಹಿಂದೂ, ಮುಸಲ್ಮಾನ, ಸವರ್ಣ, ಹರಿಜನ, ಮೇಲು–ಕೀಳು, ಸಾಹುಕಾರ–ಬಡವ, ಉತ್ತರ–ದಕ್ಷಿಣ, ಹಿಂದೂ–ಸಿಖ್ಖ್, ಗೋರಖ–ನಾಗಾ, ಹಿಂದೀ, ಪಂಜಾಬಿ, ಇಂಗ್ಲಿಷ್, ತಮಿಳ್ ಮುಂತಾದ ಅನೇಕ ಬಣ್ಣಗಳ ಪಾಕಿಸ್ತಾನದ ಅಪವಿತ್ರ ಛಾಯೆ ನಮ್ಮ ಮೇಲೆ ಯಾವಾಗಲೂ ಸುತ್ತುತ್ತಿರುತ್ತದೆ, ಒಂದು ಕ್ಷಣಕ್ಕಾದರೂ ನಾವು ಆ ವಿಭಜನೆಯ ಶಾಪದಿಂದ ಮುಕ್ತರಾಗಿಲ್ಲ.

ಇಂತಹ ಮೂಲಾಧಾರಿತ ಮತಭೇದಗಳೊಂದಿಗೆ ನಮ್ಮ ಮಿತ್ರರು, ಜೊತೆಗಾರರೊಂದಿಗೆ ಬಾಪೂಜಿ ಅದ್ಭುತವಾಗಿ ಪ್ರಾಮಾಣಿಕರಾಗಿದ್ದರು. ಕಾಂಗ್ರೆಸ್ ನೇತಾರರು ವಿಭಜನೆಯನ್ನು ಒಪ್ಪಿಕೊಂಡಾಗ, ಗಾಂಧೀಜಿ ಅಖಿಲ ಭಾರತೀಯ ಕಾಂಗ್ರೆಸ್‌ನ ಪ್ರತಿನಿಧಿಗಳಿಗೆ ವಿಭಜನೆಯನ್ನು ಒಪ್ಪಿಕೊಳ್ಳಲು ಹೇಳಿ ಕಾಂಗ್ರೆಸ್ ಈ ಪ್ರಸ್ತಾವವನ್ನು ತಿರಸ್ಕರಿಸಿದಲ್ಲಿ ಹಳೆಯ ಪರಿಚಿತ ಕರ್ಮವೀರ ನಾಯಕರು, ಕಾಂಗ್ರೆಸ್ ಅಧ್ಯಕ್ಷರು, ಮುಂತಾದವರು ರಾಜೀನಾಮೆ ನೀಡುವರು. ಆಗ ಕಾಂಗ್ರೆಸ್ ಪಾರ್ಟಿ ಬೇರೆ ಯಾವ ನಾಯಕರನ್ನು ಆರಿಸುವುದು; ಅನುಭವಸ್ಥ ನಾಯಕರೆಲ್ಲಿ ಬರುತ್ತಾರೆ; ಈ ಜನರಿಗಿಂತ ಹೆಚ್ಚು ಉತ್ಕೃಷ್ಟರಾದ ಜನರು ಎಲ್ಲಿ ಸಿಗಲು ಸಾಧ್ಯ ಎಂದರು. ಅವರೆಲ್ಲ ಕಾಂಗ್ರೆಸ್‌ನ ಪ್ರಸಿದ್ಧ ನಾಯುಕರುಗಳಾಗಿದ್ದವರು, ಅವರ ನಿರ್ಣಯವನ್ನೊಪ್ಪಿಕೊಳ್ಳುವುದು ಸಭ್ಯತೆ ಮತ್ತು ನ್ಯಾಯ ನೀತಿಯುತವಾದ ಮಾತಾಗಿತ್ತು. ನಂಬಿಕಸ್ಥ ನೌಕರರ ತಪ್ಪುಗಳನ್ನು ಕೂಡ ಮಾಲೀಕ ಸಹಿಸಿಕೊಳ್ಳುತ್ತಾನೆ, ಕಾಂಗ್ರೆಸ್ ಮಂತ್ರಿಮಂಡಳ ಜನರ ಸೇವಕನಾಗಿತ್ತು, ಅವರು ಜನರ ಪರವಾಗಿ ಈ ನಿರ್ಣಯ ಕೈಗೊಂಡಿದ್ದರು. ಆದ್ದರಿಂದ ಅದನ್ನು ಯೋಗ್ಯವಾದ ರೀತಿಯಲ್ಲಿ ಒಪ್ಪಿಕೊಂಡು ಅದನ್ನನುಸರಿಸುವುದು ಜನರೆಲ್ಲರ ಕರ್ತವ್ಯವಾಗಿತ್ತು, ವಿಭಜನೆಗೆ ಒಪ್ಪಿಕೊಂಡು ನಾವು ವಿಪತ್ತಿನ ಸಾಗರದಲ್ಲಿ ಮುಳುಗುತ್ತೇವೆಂದು ಬಾಪೂಜಿಗೆ ಗೊತ್ತಿತ್ತು. ಆದರೆ ಆಗ ಯಾರು – ಯಾರನ್ನು ವಿರೋಧಿಸುವ ಹಾಗಿತ್ತು? ಎಲ್ಲರೂ ನಮ್ಮವರೇ ಆಗಿದ್ದರು. ವಿದೇಶಿ ತಂತ್ರದ ಇಂಗ್ಲಿಷರ ಎದುರು ಸತ್ಯಾಗ್ರಹ ಮಾಡುವುದು ಸರಳವಾಗಿತ್ತು, ನಮ್ಮ ನಂಬಿಕೆಯ ಮಿತ್ರರೊಡನೆ ಎಂತಹ ಅಸಹಕಾರ ಅಥವಾ ವಿವಾದ ಮಾಡುವುದು? ಈಗಂತೂ ವಿಷಕುಡಿದಾದರೂ ಈ ದೇಶವನ್ನು ಉಳಿಸಿಕೊಳ್ಳುವುದೊಂದೇ ಬುದ್ಧಿವಂತಿಕೆಯಾಗುತ್ತಿತ್ತು. ಬಾಪೂಜಿ ೧ ಜೂನ್ ೧೯೪೭ರ 'ಹರಿಜನ'ದಲ್ಲಿ "ನೂರುವರ್ಷಗಳ ಗುಲಾಮಗಿರಿ ಹೋಗುತ್ತಿದೆ, ಸ್ವಾತಂತ್ರ್ಯದೊಂದಿಗೆ ನಮ್ಮ ಸಮಾಜದ ದೌರ್ಬಲ್ಯಗಳು ಎದ್ದೇಳುತ್ತವೆ. ಇಂತಹ ವಿಷಮ ಸ್ಥಿತಿಯಲ್ಲಿ ಸಮತೋಲನವಿಟ್ಟುಕೊಂಡರೆ ಎಲ್ಲ ವಿಪತ್ತುಗಳನ್ನೂ ಎದುರಿಸಬಲ್ಲೆವು. ಕ್ಷಮೆ, ಧೈರ್ಯ ವಿವೇಕ ಇವೇ ನಮ್ಮ ಆಧಾರವಾಗಿರುತ್ತವೆ" ಎಂದು ಬರೆದರು. ಯಾರೋ, "ಈ ಹಿಂದೂ– ಮುಸಲ್ಮಾನರ ವೈಮನಸ್ಯ, ಈ

ದೂರ ಎಂದೆಂದಿಗೂ ಹೀಗೇ ಇರುತ್ತದೆಯೇನು" ಎಂದು ಕೇಳಿದರು. ಅದಕ್ಕೆ ಬಾಪೂಜಿ ನಿತ್ಯ ಶಾಶ್ವತವಾದ ಆಶಾವಾದದಿಂದ ಉತ್ತರಿಸಿದ್ದು ಹೀಗೆ: 'ಖಂಡಿತ ಇಲ್ಲ, ಅಂದರೆ ಈ ಎರಡು ಧರ್ಮಗಳಲ್ಲಿ ಸತ್ಯ ಇರಲೇ ಇಲ್ಲ ಎಂದರ್ಥ ಬರುತ್ತದೆ." ಬಾಪೂಜಿಗೆ ಇಂಗ್ಲಿಷ್ ರಾಜ್ಯ ಈಗಲೂ ಸರಿಹೋಗಬಹುದು, ಅದು ದೇಶವನ್ನು ನಾಶದಿಂದ ಉಳಿಸುತ್ತದೆ ಎಂಬ ಆಸೆ ಇತ್ತು. ಮುಸ್ಲಿಂ ಲೀಗ್‌ನ ಪ್ರಮಾಣವನ್ನು ಹಿಡಿತದಲ್ಲಿರಿಸಿಕೊಂಡು ಕಾನೂನು – ನೀತಿಯನ್ನು ಉಳಿಸುತ್ತದೆ, ಹಾಗಿಲ್ಲದಿದ್ದಲ್ಲಿ ಅದರ ಕೀರ್ತಿಗೆ ಎಂದೆಂದಿಗೂ ಕಳಂಕ ಒದಗಿಬರುತ್ತದೆ ಎಂದುಕೊಂಡಿದ್ದರು, ಆದರೆ ಯುದ್ಧ ವಿಶಾರದ ಮೌಂಟ್‌ಬ್ಯಾಟನ್ ಏನು ಮಾಡಲೂ ಅಸಮರ್ಥರಾಗಿದ್ದರು, ವಾಸ್ತವವಾಗಿ, ಅವರು ಮುಸ್ಲಿಂ ಲೀಗ್ ಮತ್ತು ಬ್ಯುರಾಕ್ರೆಟ್‌ಗಳ ಹಿಡಿತದಲ್ಲಿ ಸಿಲುಕಿಹಾಕಿಕೊಂಡಿದ್ದರು, ಅರಾಜಕತೆ ಅಸಹ್ಯಕರವಾಗಿತ್ತು. ಹೀಗಾಗಿ ವಿಭಜನೆ ಅನಿವಾರ್ಯವಾಗಿತ್ತು.

ಕಾಂಗ್ರೆಸ್ ಹೈಕಮಾಂಡ್ ಈ ಸ್ಥಿತಿಯಲ್ಲೂ ದೃಢವಾಗಿ ನೈತಿಕತೆಯಿಂದ ಸರಕಾರವನ್ನು ಶಾಂತಿ ನೆಲೆಗೊಳಿಸುವಂತೆ ಕೇಳಿದ್ದಿದ್ದರೆ, ಹಾಗೂ ಆ ನಂತರವೇ ವಿಭಜನೆಯನ್ನು ಒಪ್ಪಿಕೊಂಡಿದ್ದರೆ ಮೌಂಟ್‌ಬ್ಯಾಟನ್ ಹೆಚ್ಚು ಸಮಯ ಜಿನ್ನ ಅಥವಾ ಮುಸ್ಲಿಂ ಲೀಗ್‌ನ ದಬ್ಬಾಳಿಕೆಯನ್ನು ಸಹಿಸುತ್ತಿರಲಿಲ್ಲ. ಕೊನೆಗೂ ಶಾಂತಿಯ ಸಿದ್ಧಾಂತವನ್ನಾಧರಿಸಿಯೇ ಪಾಕಿಸ್ತಾನದ ಪ್ರಸ್ತಾವಕ್ಕೆ ಒಪ್ಪಿಗೆ ನೀಡಬೇಕಾಗಿತ್ತು. ಹೀಗೆ ಹಿಂಸೆ ಮತ್ತು ಭಯದ ಬೆದರಿಕೆ ಹಾಕಿ ಪಾಕಿಸ್ತಾನ ಬೇಕೆನ್ನುವದು, ಬಲವಂತವಾಗಿ ಒಪ್ಪಿಸುವುದು ಪೂರ್ತಿತಪ್ಪು ಆಗಿತ್ತು. ಆದರೆ ಕಾಂಗ್ರೆಸ್ ಮಂತ್ರಿಮಂಡಳವೇ ಶಾಂತಿ ಬೇಕೆಂದು ಒತ್ತಾಯಪಡಿಸದಿದ್ದಾಗ, ವಿದೇಶಿ ರಾಜ್ಯದ ನೌಕಾದಳದ ಒಬ್ಬ ಶ್ರೇಷ್ಠ ಸೇನಾಪತಿಯಿಂದ ಕಾನೂನು ನಿಯಮಗಳ ಶಾಂತಿ ಸ್ಥಾಪನೆಯನ್ನು ಆಶಿಸುವುದೂ ತಪ್ಪೇ ಆಗಿತ್ತು. ೮ ಮೇ ೧೯೪೭ರಂದು ಬಾಪೂಜಿ ದೆಹಲಿಯಿಂದ ಕಲ್ಕತ್ತಾಗೆ ಹೋದರು. ಮಾರ್ಗದಲ್ಲಿ ಬಾಪೂಜಿ ವಾಯಿಸ್‌ರಾಯ್‌ಗೆ ಪತ್ರ ಬರೆದು ವಸ್ತುಸ್ಥಿತಿಯನ್ನು ಪರಿಹರಿಸುವ ಸುಲಭ ಮಾರ್ಗವನ್ನು ಸೂಚಿಸಿದರು. ಕೆಲವು ದಿನಗಳ ನಂತರ ಮೌಂಟ್‌ಬ್ಯಾಟನ್ ಬಾಪೂಜಿಯ ಒಬ್ಬ ಮಿತ್ರರಿಗೆ, 'ನಿಮ್ಮ ಬಾಪೂಜಿ ಬರೆದ ಪತ್ರ ನೋಡಿ ನಾನು ಪ್ರಭಾವಿತನಾಗಿದ್ದೇನೆ. ವಾಸ್ತವವಾಗಿ ಎಲ್ಲರಿಗಿಂತ ಹೆಚ್ಚಾಗಿ ನಿಮಗೆ ತೊಂದರೆ ಕೊಡುವ ವ್ಯಕ್ತಿ ಅವರೆ, ಹಾಗಿದ್ದರೂ ಅವರು ಸ್ವಭಾವ ಸಹಜವಾಗಿ ಸಮಾಧಾನ ಪಡಿಸುವ ಸ್ಪಷ್ಟತೆಯನ್ನು ನೋಡಿ ನಾನು ಮುಗ್ಧನಾಗುತ್ತೇನೆ. ಅವರ ಸಲಹೆಗಳನ್ನು ನಾನು ಪಾಲಿಸಲಾಗಿದ್ದಿದ್ದರೆ ನನಗೆ ಸಂತೋಷವಾಗುತ್ತಿತ್ತು. ಆದರೆ ಅದು ಸಾಧ್ಯವಾಗುವುದಿಲ್ಲ ಮತ್ತು..... ಮಂತ್ರಿಮಂಡಳದ ಕಾಂಗ್ರೆಸ್ ಸದಸ್ಯರು ಕೂಡ ತಮ್ಮ ಬಾಪು ಜೊತೆ ಸಹಮತರಾಗಿಲ್ಲ' ಎಂದರು. ಇಷ್ಟಾದ ಮೇಲೆ ಚರ್ಚೆಗೆ ಅವಕಾಶವೇ ಇರಲಿಲ್ಲ, ಕಾಂಗ್ರೆಸ್ ನಾಯಕರು

ಬಾಪೂಜಿಯ ಸಲಹೆಗಳನ್ನು ತೆಗೆದುಕೊಳ್ಳದಿದ್ದ ಮೇಲೆ ಮೌಂಟ್‌ಬ್ಯಾಟನ್‌ನ ತಪ್ಪೇನಿತ್ತು?

ಬಿಹಾರದ ಮುಖ್ಯಮಂತ್ರಿಗಳು ಬಾಪೂಜಿಯವರನ್ನು ಭೇಟಿ ಮಾಡಲು ಪಟನಾ ರೈಲ್ವೇ ಸ್ಟೇಷನ್ನಿಗೆ ಬಂದಿದ್ದರು. ಟ್ರೈನ್ ಹೊರಡುವ ವೇಳೆಯಾಗಿತ್ತು, ಆದರೆ ಮುಖ್ಯಮಂತ್ರಿಯ ಮಾತುಗಳು ಮುಗಿದಿರಲಿಲ್ಲ. ಪಾಪ, ಏನು ಮಾಡುವದೆಂದು ಸ್ಟೇಷನ್ ಮಾಸ್ಟರನಿಗೆ ತಿಳಿಯಲಿಲ್ಲ. ಚಿಂತೆಯಿಂದ ಆತ ಹೆದರುತ್ತಾ ಕೇಳಿದ, 'ಲೈನ್ ಕ್ಲಿಯರ್ ಮಾಡಲೇನು?' ಬಾಪೂಜಿ ಹೇಳಿದರು: ನೀವು ಬೇರೆ ಯಾತ್ರಿಕರನ್ನ ಒಪ್ಪಿಗೆ ಕೇಳುವುದಿಲ್ಲವಲ್ಲ, ನಾನೊಬ್ಬ ಆ ನಿಯಮಕ್ಕೆ ಹೊರತಾಗಬೇಕೇಕೆ? ಮಂತ್ರಿಗಳಿಗೆ ಹೆದರದೆ ನೀವು ನಿಮ್ಮ ಕರ್ತವ್ಯ ಮಾಡಿ. ಅದರಿಂದ ನಿಮಗೂ, ಯಾತ್ರಿಕರಿಗೂ ಅನುಕೂಲವಾಗುತ್ತೆ. ಯಾತ್ರಿಕರು ನಿಯಮೋಲ್ಲಂಘನೆ ಮಾಡಕೂಡದು, ಅದಿಲ್ಲದಿದ್ದರೆ ಪ್ರಜಾತಂತ್ರ ಹಾಳಾಗುತ್ತದೆ' ಎಂದರು. ಆಶ್ಚರ್ಯಚಕಿತನಾಗಿ ಸ್ಟೇಷನ್ ಮಾಸ್ತರ ಸುಮ್ಮನಿರಲಾರದೆ ಹೇಳಿದ: 'ಪ್ರತಿಯೊಂದು ಬೋಗಿಯಲ್ಲೂ ನಿಮ್ಮಂತಹ ಒಬ್ಬ ಪ್ರಯಾಣಿಕನಿದ್ದರೆ, ಅನುಶಾಸನ ಪಾಲಿಸಿದರೆ, ನಮ್ಮ ಸರಕಾರದ ಮುಖವೇ ಬದಲಾದೀತು. ಉನ್ನತ ಅಧಿಕಾರಿಗಳ ಸೇವೆ ಮಾಡುವಾಗ ಚಿಕ್ಕ ನೌಕರನಿಗೆ ಎಂತಹ ಕಷ್ಟವಾಗುತ್ತದೆಂದು ನಿಮಗಿನ್ನೂ ಬಹುಶಃ ಕಲ್ಪನೆ ಇಲ್ಲ. ನಲವತ್ತು ನಾಲ್ಕು ವರ್ಷಗಳ ನನ್ನೀ ನೌಕರಿಯಲ್ಲಿ ಕರ್ತವ್ಯಪಾಲನೆಯ ಈ ಭಯರಹಿತ ಆದರ್ಶವನ್ನು ಕಲಿಸಿರುವ ಮೊದಲ ವ್ಯಕ್ತಿ ನೀವು, ಅದರಿಂದಲೇ ನಾವು ನಿಮ್ಮನ್ನ ರಾಷ್ಟ್ರಪಿತ ಎನ್ನುತ್ತೇವೆ' ಎಂದ.

ಬಾಪೂಜಿ ಕಲ್ಕತ್ತಾದಲ್ಲಿ ಬರೀ ಹತ್ತು ದಿನಗಳಿದ್ದರು, ನೋವಾಖಲಿಗೆ ಹೋಗುವುದಕ್ಕಾಗಲಿಲ್ಲ. ಕಲ್ಕತ್ತಾದ ಬೃಹತ್ ಬಂಗಾಳದ ಬೇಡಿಕೆಯಲ್ಲಿ ಸಿಲುಕಿಕೊಂಡರು, ನೇತಾಜಿ ಸುಭಾಷ್‌ಚಂದ್ರ ಬೋಸರ ಅಣ್ಣ ಶರತ್ ಚಂದ್ರ ಬೋಸ ಬಂಗಾಳ ವಿಭಜನೆಯ ವಿಷಯ ಕುರಿತು ಕೇಂದ್ರ ಸರಕಾರಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಬಂಗಾಳ ವಿಭಜಿತವಾಗದಂತೆ ತಡೆಯಬೇಕೆಂಬುದು ಅವರ ತೀವ್ರ ಇಚ್ಛೆಯಾಗಿತ್ತು. ಬಿಹಾರದ ಬಂಗಾಳಿ ಭಾಷೆಯಾಡುವ ಜಿಲ್ಲೆಗಳನ್ನು ಸೇರಿಸಿ ಬೃಹದ್ ಬಂಗಾಳ ರಚಿತವಾಗಬೇಕು ಎಂಬುದು ಅವರಿಷ್ಟವಾಗಿತ್ತು, ಅದಕ್ಕೆ ಸುಹರಾವರ್ದಿ ಅವರ ಬೆಂಬಲ ಅವರಿಗಿತ್ತು. ಇಲ್ಲಿಯವರೆವಿಗೂ ಹಿಂದೂಗಳ ಮೇಲೆ ಅಮಾನುಷ ಅತ್ಯಾಚಾರವನ್ನು ಹೊರಿಸಿದ್ದ ಆ ಜನರ ಸಹಕಾರದಿಂದಲೇ ಬೃಹತ್ ಬಂಗಾಳ ರಚಿತವಾಗಲು ಸಾಧ್ಯವಿತ್ತು. ಬಾಪೂಜಿಗೆ ಬೃಹತ್ ಬಂಗಾಳದ ಪ್ರಸ್ತಾವ ಇಷ್ಟವಾಗಿತ್ತು, ದೇಶದ ಯಾವ ಮೂಲೆಯಲ್ಲಾದರೂ ಹಿಂದೂ-ಮುಸಲ್ಮಾನರ ಏಕತೆ ಸಾಧ್ಯವಾಗುವುದಾದರೆ ಇಡೀ ದೇಶ ವಿಭಜಿತವಾಗದೆ ಉಳಿಯಬಹುದಾಗಿತ್ತು. ಗಾಂಧೀಜಿ ಮುಸಲ್ಮಾನರಿಗೆ, 'ನೀವು ಹಿಂದೂ ಬಹುಮತೀಯರನ್ನು ಮಾತುಗಳಲ್ಲಿ

ಮಾತ್ರವಲ್ಲದೆ ಆಚರಣೆಯಿಂದ ಸಂತುಷ್ಟಪಡಿಸಿದ್ದೇ ಆದರೆ ಇಡೀ ದೇಶಕ್ಕೆ ಹಿತವಾಗುತ್ತದೆ' ಎಂದು ಹೇಳಿದರು, ಮುಖ್ಯಮಂತ್ರಿ ಸುಹರಾವರ್ದಿಗೂ ಹೇಳಿದರು, 'ನಾನು ಮುಸಲ್ಮಾನರಲ್ಲಿ ಆಸೆ ತುಂಬುವ ರೀತಿಯಲ್ಲಿ ನೀವು ನೋವಾಖಲಿಯಲ್ಲಿ ಹಿಂದೂಗಳನ್ನು ನಿಶ್ಚಿಂತರನ್ನಾಗಿ ಮಾಡಿ, ನಂತರ ನಾನು ನಿಮ್ಮ ಜೊತೆ ಸುತ್ತಿ ಕಲ್ಕತ್ತಾದ ಹಿಂದೂಗಳಿಗೆ ಬೃಹತ್ ಬಂಗಾಳದ ವಿಷಯವನ್ನ ಅರ್ಥ ಮಾಡಿಸುತ್ತೇನೆ,' ಎಂದರು. ಆದರೆ ಮುಖ್ಯಮಂತ್ರಿ ಕೋಪಾವೇಶಗೊಂಡರು. ಅವರು, 'ಕಲ್ಕತ್ತಾದಲ್ಲಿ ಶಾಂತಿ ಇದೆ, ಈ ಎಲ್ಲಾ ದಂಗೆ – ಹಾನಿಗೆ ಗಾಂಧೀಜಿ ಒಬ್ಬರೇ ಕಾರಣಕರ್ತರು' ಎಂದರು. ಮುಖ್ಯಮಂತ್ರಿ ಶಹೀದ್ ಸುಹರಾವರ್ದಿ 'ಜನರು ತಮ್ಮ ಈ ತರಹದ ಮಾತುಗಳನ್ನ ನಂಬಲಿ. ಬೃಹದ್ ಬಂಗಾಳದಲ್ಲಿ ಹಿಂದೂಗಳಿಗೆ ಸಮಾನ ಅಧಿಕಾರಗಳು ಸಿಗುತ್ತವೆ' ಎಂದು ಭಾವಿಸಿದ್ದರು. ಆದರೆ ಭವಿಷ್ಯ ವರ್ತಮಾನದ ಮಗು ಆಗಿರುತ್ತೆ, ಬರಲಿರುವ ನಾಳೆಯ ರೂಪುರೇಷೆ ಇವತ್ತಿನ ಮೇಲೇ ನಿರ್ಭರವಾಗಿರುತ್ತದೆ. ಆದ್ದರಿಂದ ಜನ ಮುಖ್ಯಮಂತ್ರಿಗಳ ಆಶ್ವಾಸನೆಯನ್ನು ನಂಬುತ್ತಿರಲಿಲ್ಲ. ಕಲ್ಕತ್ತಾದಲ್ಲಂತೂ 'ಡೈರೆಕ್ಟ್ ಆ್ಯಕ್ಷನ್' ಇನ್ನೂ ಮುಗಿದೇ ಇರಲಿಲ್ಲ, ಹಿಂದೂ ತಮ್ಮ ಮಾತನ್ನ ನಂಬುವುದಿಲ್ಲ ಅಂತ ಸುಹರಾವರ್ದಿ ದೂರುತ್ತಿದ್ದರು. ಆಗ ಬಾಪೂಜಿ ಜನರ ಸಂದೇಹಗಳನ್ನು ನಿಜವಾಗಿಯೂ ದೂರವಾಗಿಸುವ ಇಚ್ಛೆ ನಿಮಗಿದ್ದರೆ ಈ ಎಲ್ಲ ಹಿಂದೂಗಳೂ ಬೃಹದ್ ಬಂಗಾಳದಲ್ಲಿ ಆತಂಕವಿಲ್ಲದೆ ಬದುಕಲಿ, ಅಹಿಂಸಾ ಮಾರ್ಗದಿಂದ ಬಂಗಾಳದ ಎರಡೂ ಪಂಗಡಗಳ ರಕ್ಷಿಸಿ, ಹಿಂದೂ ಮುಸಲ್ಮಾನರಿಬ್ಬರೂ ಒಗ್ಗಟ್ಟಿನಿಂದ ಇರಲು ಆಗುವವರೆಗೂ ಗಾಂಧೀಜಿ ಮುಖ್ಯಮಂತ್ರಿಯ ವೈಯಕ್ತಿಕ ಸಹಾಯಕರಾಗಿದ್ದು ಅವರ ಜೊತೆ ಇರಲು ಸಿದ್ಧವಾಗಿದ್ದೇನೆಂದರು.

ಗಾಂಧೀಜಿ ಈ ಸಲಹೆ ನೀಡಿದ ಮೇಲೆ ಸುಹರಾವರ್ದಿ ಕೊಠಡಿಯಿಂದ ಹೊರಕ್ಕೆ ಬಂದರು, ಕೋಪದಿಂದ ಹೇಳಿದರು, 'ಎಂಥ ಹುಚ್ಚು ಪ್ರಸ್ತಾವವಿದು, ಹತ್ತು ಸಾರಿ ಯೋಚಿಸಿದರೂ ನನಗೆ ಈ ಮುದುಕನ ಉದ್ದೇಶ ಅರ್ಥವಾಗಲ್ಲ.' ಹಿಂದೂ ಮಹಾಸಭೆಯ ನಾಯಕ ಡಾ॥ ಶ್ಯಾಮಾಪ್ರಸಾದ್ ಮುಖರ್ಜಿ ಬೃಹದ್ ಬಂಗಾಳದ ಪ್ರಸ್ತಾವವನ್ನ ತೀವ್ರವಾಗಿ ವಿರೋಧಿಸಿದರು. ಬೃಹದ್ ಬಂಗಾಳ ಅನ್ನುವುದು ಸಣಬಿನ ಗಿರಣಿಗಳ ಇಂಗ್ಲಿಷ್ ಧನಿಕರ ತಲೆಯಲ್ಲಿ ಹುಟ್ಟಿರುವ ವಿಷಯ. ವಿಭಜನೆಯಿಂದ ವ್ಯಾಪಾರ ಉದ್ಯೋಗದ ಸಂಪಾದನೆಯಲ್ಲಿ ಕೊರತೆಯಾಗುತ್ತೆ, ಅದರಿಂದ ಈ ಬೃಹದ್ ಬಂಗಾಳದ ಘೋಷಣೆ ಆರಂಭಿಸಿದ್ದಾರೆ ಅಂತ ಅವರು ಹೇಳುತ್ತಿದ್ದರು. ಬೃಹತ್ ಬಂಗಾಳದ ಪ್ರಯೋಗದಿಂದ ಇಡೀ ದೇಶಕ್ಕೆ ಒಳ್ಳೆಯದಾಗುತ್ತೆ. ವಿಭಜನೆಯಿಂದ ತಪ್ಪಿಸಿಕೊಳ್ಳುವ ಉಪಾಯ ಅದಾಗುತ್ತೆ ಅಂತ ಶ್ಯಾಮಾ ಪ್ರಸಾದ ಮುಖರ್ಜಿಗೆ ಬಾಪೂಜಿ ತಿಳಿಸಬಯಸಿದರು. ಆದರೆ ಆಗ ಅದು ಸಾಧ್ಯವಾಗಲಿಲ್ಲ.

ಜೂನ್ ೩ರಂದು ಲಾರ್ಡ್ ಮೌಂಟ್‌ಬ್ಯಾಟನ್‌ನ ವಿಭಜನೆಯ ಪ್ರಸ್ತಾವ ಎಲ್ಲರಿಗೂ ಒಪ್ಪಿಗೆಯಾಗಿ ಅಂಗೀಕೃತವಾಯಿತು. ಬೃಹದ್ ಬಂಗಾಳ ಹುಟ್ಟುವುದಕ್ಕೂ ಮುಂಚೆ ಹೀಗೆ ಮುಗಿದುಹೋಯಿತು. ಇದಾದ ನಂತರ ಕೂಡ ಶರತ್ ಚಂದ್ರ ಬೋಸ್ ಬಂಗಾಳಕ್ಕಾಗಿ ಹೋರಾಡುತ್ತಲೇ ಇದ್ದರು. ಜಿನ್ನಾ ಜೊತೆ ಪತ್ರ ವ್ಯವಹಾರ ನಡೆಸಿದರು, ಆದರೆ ಅಲ್ಲಿಂದ ನಿರಾಶೆ, ಶರತ್ ಚಂದ್ರರು ಕೊನೆಗೆ ಆಸೆ ತೊರೆದರು, ಬಾಪೂಜಿ ಮೇಲೆ ಕೋಪ ಮಾಡಿಕೊಂಡರು.

ಈ ನಡುವೆ ಲಾರ್ಡ್ ಮೌಂಟ್‌ಬ್ಯಾಟನ್ ಚರ್ಚೆಗಾಗಿ ಲಂಡನ್‌ಗೆ ಹೋಗಬೇಕಾಯಿತು. ವಾಯಿಸ್‌ರಾಯ್ ದೇಶದಿಂದ ಹೊರಟ ನಾಲ್ಕನೆಯ ದಿನ ಕಾಯದೇ ಆಜ಼ಂ ಜಿನ್ನಾ ಅವರಿಗೆ ಒಂದು ಸಾವಿರ ಮೈಲು ಉದ್ದದ ಕಾರಿಡಾರ್ ನೀಡಿದಲ್ಲಿ ಅವರು ಪೂರ್ವ ಬಂಗಾಳವನ್ನು ಪಶ್ಚಿಮ ಬಂಗಾಳದ ಜೊತೆ ಕೂಡಿಸಲು ಅನುಕೂಲವಾಗುತ್ತದೆ ಎಂಬ ಚಿಕ್ಕದೊಂದು ಬೇಡಿಕೆ ಮುಂದಿಟ್ಟರು. ಸರದಾರ್ ಪಟೇಲ್ ಹೇಳಿದರು, ‘ಇದಂತೂ ವಿಚಿತ್ರ ಹಾಗೂ ಅಸಂಬದ್ಧವಾದ ಮಾತು ಆಯಿತು. ಇದನ್ನ ಗಂಭೀರವಾಗಿ ತೆಗೆದುಕೊಳ್ಳಲಾಗುವುದಿಲ್ಲ’ ಅಂದರು. ಜಿನ್ನ ಈ ತರಹ ಅಸಂಗತವಾದ, ಮರ್ಯಾದೆ ಇಲ್ಲದ ಬೇಡಿಕೆಗಳನ್ನೊಡ್ಡುತ್ತಿದ್ದ ಸ್ವಭಾವವನ್ನು ನೋಡಿ ಬಾಪೂಜಿಗೆ ವಿಭಜನೆಯನ್ನ ತಡೆದು ಕ್ಯಾಬಿನೆಟ್ ಮಿಷನ್ ಯೋಜನೆಯನ್ನು ಅಂಗೀಕರಿಸಲು ಮತ್ತೊಂದು ಅವಕಾಶ ಸಿಕ್ಕಿತು. ಪಾಕಿಸ್ತಾನ ರಚಿಸುವುದಕ್ಕೆ ಮೊದಲು ಶಾಂತಿ ಸ್ಥಾಪಿಸುವ ಬೇಡಿಕೆಯನ್ನು ಸ್ನೇಹಿತರು ಹಾಗೂ ಸರಕಾರಕ್ಕೆ ತಿಳಿಸುವುದಕ್ಕೆ ಪುನಃ ಪ್ರಯತ್ನಿಸತೊಡಗಿದರು. ವಾಯಿಸ್‌ರಾಯ್ ಲಂಡನ್‌ನಿಂದ ಏನು ತರುತ್ತಾರೋ ಎಂದು ಆಗ ಜನ ಕಾಯುತ್ತಿದ್ದರು. ಬಾಪೂಜಿಗೆ ಹೀಗೆ ಆತುರಪಡುವುದು ಇಷ್ಟವಾಗಲಿಲ್ಲ. ೨೬ರ ಮೇ ದೆಹಲಿಯ ಪ್ರಾರ್ಥನಾ ಸಭೆಯಲ್ಲಿ ಅವರು ‘ಸ್ವಾತಂತ್ರ್ಯ ನಮ್ಮೆದುರಿಗಿದೆ, ನಮ್ಮ ತಪ್ಪಿನಿಂದ ಸ್ವಾತಂತ್ರ್ಯ ಸಿಗದ ಹಾಗೆ ಆಗಬಹುದು, ಮತ್ತೆ ನಮಗೆ ಸ್ವಾತಂತ್ರ್ಯ ಕೊಡುವ ಹಕ್ಕು ಬ್ರಿಟಿಷ್ ರಾಜ್ಯಕ್ಕಿಲ್ಲ, ಅವರು ದೇಶದ ಜನರ ಹೆಗಲಿನಿಂದ ಇಳಿಯುವುದಷ್ಟೇ ಇರುವುದು. ಆದರೆ ನಮ್ಮ ಸ್ವಾತಂತ್ರ್ಯವನ್ನ ಹೇಗೆ ಉಳಿಸಿಕೊಳ್ಳುವುದು ಅನ್ನುವುದನ್ನು ದೇಶವಾಸಿಗಳು ಅರ್ಥಮಾಡಿಕೊಂಡು ಯೋಚಿಸಬೇಕು, ನಾವು ಈಗ ಜಾಗೃತರಾಗಿರದಿದ್ದರೆ ಸ್ವಾತಂತ್ರ್ಯದ ಮೂಲತತ್ವವೇ ಬದಲಾಗಿ ಹೋಗುತ್ತೆ, ಒಬ್ಬ ಟೈಫಾಯಿಡ್ ಬಂದ ರೋಗಿಗೆ ಜ್ವರ ನಿಂತು ಹೋಗಿದ್ದರೂ, ಅವನು ಪಥ್ಯದಲ್ಲಿ ಸಂಯಮ ಇಟ್ಟುಕೊಳ್ಳದೆ ಸತ್ತು ಹೋದ ಅನ್ನುವ ಹಾಗೆ ಈಗ ನಮ್ಮ ಸ್ಥಿತಿ ಇರುವುದು, ನಾವು ವಿವೇಕ ಬಿಟ್ಟರೆ ಕೈಗೆ ಬಂದಿರುವ ಸ್ವಾತಂತ್ರ್ಯ ಕೂಡ ಜಾರಿ ಹೋಗುತ್ತದೆ” ಎಂದರು. ಎಂತಹ ಭಯಂಕರವಾದ ಭವಿಷ್ಯದರ್ಶನವಿದಾಗಿತ್ತು?

ಬಾಪೂಜಿ ಒಂದು ಸಾರಿ ಕಾಯದೇ ಆಜ಼ಂನ್ನ ನಮ್ರವಾಗಿ ವಿನಂತಿಸಿಕೊಂಡು

ಹೇಳಿದರು. ಮೊದಲು ಶಾಂತಿ ಸ್ಥಾಪನೆ ಆಗಲಿ, ನಂತರ ಪಾಕಿಸ್ತಾನ ಆಗಲಿ ಅಂದರು. ವೈಸ್‌ರಾಯ್‌ಗೆ. ದೇಶವನ್ನ ಹೀಗೆ ಅರಾಜಕವಾಗಿ ಮಾಡಿರುವುದು ಬ್ರಿಟಿಷ್ ತಂತ್ರಕ್ಕೆ ಅವಮಾನ, ಸೈನ್ಯದಿಂದ ರಚಿಸಿದ ಶಾಂತಿ ಶ್ಮಶಾನ ಶಾಂತಿ, ಅದು ನಿರರ್ಥಕವಾದ್ದು, ಈಗಲೂ ಅಂಥ ಏನೂ ಕೆಟ್ಟಿಲ್ಲ, ಈಗಲೂ ವಿವೇಕಕ್ಕೆ ಅವಕಾಶವಿದೆ, ಈ ಹುಚ್ಚೆದ್ದ ದಿನಗಳಲ್ಲಿ ದೇಶದ ಮೇಲೆ ಪಾಕಿಸ್ತಾನವನ್ನ ಹೊರಿಸಿದರೆ ಅದು ಮಿತಿಮೀರಿದ ಅಪರಾಧವಾಗುತ್ತೆ. 'ಜಿನ್ನಾ ತಿಳುವಳಿಕೆಯ ಈ ಸ್ವರವನ್ನ ಕೇಳುವುದಕ್ಕೆ ಸಿದ್ಧವಿರಲಿಲ್ಲ. ವೈಸ್‌ರಾಯ್ ತನ್ನ ಅಸಹಾಯಕತೆಯನ್ನು ಪ್ರಕಟಪಡಿಸಿದರು. ಮೊದಲು ವೈಸ್‌ರಾಯ್ ಮುಸಲ್ಮಾನರನ್ನ ತಲೆಯ ಮೇಲೆ ಕೂರಿಸಿಕೊಂಡಿದ್ದರು. ಮಾಡಿದ್ದನ್ನ ಈಗ ಮೌಂಟ್‌ಬ್ಯಾಟನ್ ಅನುಭವಿಸಲೇಬೇಕಾಗಿ ಬಂದಿತ್ತು. ಇಬ್ಬರು ಎದುರಾಳಿಗಳೂ ವಿಭಜನೆಯ ಬಗ್ಗೆ ಏಕಾಭಿಪ್ರಾಯ ಹೊಂದಿದ್ದರು. ಕಾಂಗ್ರೆಸ್ ಹೈಕಮಾಂಡ್ ಪುನಃ ಚಳವಳಿಯ ಅನಿಶ್ಚಯದ ಅಪಾಯವನ್ನ ಹೊರುವುದಕ್ಕೆ ತಯಾರಾಗಿರಲಿಲ್ಲ, ಯಾರೋ ಕಾರ್ಯಕರ್ತರು ಬಾಪೂಜಿಯನ್ನು ನೀವಂತೂ ನಿಮ್ಮ ವಿರೋಧವನ್ನ ಸ್ಪಷ್ಟವಾಗಿ ತಿಳಿಸಿದಿರಿ. ಆದರೆ ಅದರ ನಿರ್ಣಯದಲ್ಲಿ ನಿಮ್ಮ ಸಿದ್ಧಾಂತಗಳೇನಾದವು?' ಎಂದು ಕೇಳಿದರು.

'ಇವತ್ತು ನನ್ನ ಮಾತನ್ನ ಯಾರು ಕೇಳುತ್ತಾರೆ' ಅಂತ ಬಾಪೂಜಿ ಅಂದರು.

ಜೊತೆಯ ಕಾರ್ಯಕರ್ತ ಅಂದರು, '...ನಾಯಕರು ನಿಮ್ಮ ಜೊತೆ ಇಲ್ಲದಿದ್ದರೇನಂತೆ, ಜನ ನಿಮ್ಮೊಂದಿಗಿದ್ದಾರಲ್ಲ!'

ಬಾಪೂಜಿ ಉತ್ತರ ನೀಡಿದರು : 'ಜನ ಕೂಡ ನನ್ನ ಜೊತೆಗಿಲ್ಲ, ಪಂಜಾಬಿನ ಜನ ನನ್ನನ್ನ ಹಿಮಾಲಯಕ್ಕೆ ಹೋಗಿ ಸನ್ಯಾಸ ತೆಗೆದುಕೊಳ್ಳಿ ಅನ್ನುತ್ತಾರೆ, ಆಗ ನನ್ನ ಫೋಟೋಗೆ ಅವರು ಮಾಲಾರ್ಪಣೆ ಮಾಡಬೇಕೆಂದಿದ್ದಾರೆ, ಆದರೆ ನನ್ನ ಮಾತು ಕೇಳುವುದಕ್ಕೆ ಯಾವ ನಾಯಕನಾಗಲಿ, ಜನರೂ ಸಿದ್ಧವಾಗಿಲ್ಲ.'

ವಿಭಜನೆ ಖಚಿತವಾದ ಮೇಲೆ ದುಃಖಿತರಾಗಿ ಬಾಪೂಜಿ ಬಾದಷಾಹ ಖಾನರಿಗೆ ಹೇಳಿದರು. 'ಬಹುಶಃ ನನ್ನ ಜೀವನದ ಕಾರ್ಯ ಮುಗಿದಿದೆ, ದೇವರು ಈಗ ಅವನತಿ ಮತ್ತು ಮಾನ ಹೋಗುವುದು ತಪ್ಪಿಸಿದನೆಂದರೆ ಆತನ ಕೃಪೆ.' ಬಾಪೂಜಿ ದೂರದರ್ಶಿಗಳಾಗಿ ಸ್ಪಷ್ಟವಾಗಿ ನೋಡುತ್ತಿದ್ದರು, ಹೇಳಿದರು, 'ಲಕ್ಷಾಂತರ ಜನರು ಸ್ಥಳಾಂತರಿಸುವುದರಿಂದ ಅರಾಜಕತೆ ಹರಡುತ್ತದೆ ಮತ್ತು ಶಾಂತಿ ನೆಲೆಗೊಳ್ಳುವುದಕ್ಕೆ ಮೊದಲ ವಿಭಜನೆಯನ್ನು ಮುಗಿಸಿ ಬಿಡಬೇಕು, ಹೀಗೆ ಪಡೆದಿರುವ ಸ್ವಾತಂತ್ರ್ಯದ ಭವಿಷ್ಯ ಅಂಧಕಾರದಿಂದ ಕೂಡಿರುತ್ತದೆ, ಈ ವಿಪತ್ತುಗಳನ್ನೆಲ್ಲ ನೋಡಲು ಬಹುಶಃ ನಾನು ಬದುಕಿರುವುದಿಲ್ಲ, ನಾನು ವಿಭಜನೆಯನ್ನು ಪ್ರೋತ್ಸಾಹಿಸಿದ್ದೆನೆಂದು ಹೇಳಿ ನನ್ನ ಮೇಲೆ ಯಾರೂ ದೋಷಾರೋಪಣೆ ಮಾಡದಿದ್ದರೆ ಸಾಕು. ಇಂದು ಎಲ್ಲರೂ ಸ್ವಾತಂತ್ರ್ಯಕ್ಕಾಗಿ ಒದ್ದಾಡುತ್ತಿದ್ದಾರೆ ಅದರಿಂದ ಬೇರೆ ಉಪಾಯವೇ ಇಲ್ಲ.

ಬಾಪೂಜಿಯಲ್ಲಿ ಯಾವಾಗಲೂ ಸರಳವಾದ ಉಲ್ಲಾಸವಿರುತ್ತಿತ್ತು, ಹೆಚ್ಚು ಹೊತ್ತು ಅದನ್ನು ಅದುಮಿಡಲಾಗುತ್ತಿರಲಿಲ್ಲ, ಅವರು ಜನರಿಗೆ ಭವಿಷ್ಯದಲ್ಲಿ ಏನು ಮಾಡಬೇಕು, ನಾಗರಿಕರ ಕರ್ತವ್ಯ ಏನು ಅಂತ ತರಬೇತಿ ಕೊಡಲು ಆರಂಭಿಸಿದರು. 'ದೇಶದಲ್ಲಿ ಪ್ರಜಾಪ್ರಭುತ್ವ ಬರಲಿದೆ, ಆ ಪಂಚಾಯತಿ ರಾಜ್ಯದಲ್ಲಿ ನಾಗರಿಕರೇ ದೇಶದ ವಾಸ್ತವ ಯಜಮಾನರು, ಮಂತ್ರಿಗಳು ಬರಿ ಆಜ್ಞಾಪಾಲಕರು. ಅದರಿಂದ ಯಜಮಾನನ ಕರ್ತವ್ಯ ಮತ್ತು ಆ ಮರ್ಯಾದೆ ಇಟ್ಟುಕೊಂಡು ಜನ ವ್ಯವಹರಿಸಬೇಕು. ಈಗ ಈ ದೇಶದ ಸಂಪತ್ತು, ಅಧಿಕಾರ, ಸಾಧನಗಳು, ಸಾಮರ್ಥ್ಯ ಎಲ್ಲವೂ ಈ ದೇಶದ ಜನಗಳಿಗೆ ಸೇರಿದ್ದು, ಅದನ್ನ ಸರಿಯಾಗಿ ಆಳುವುದಕ್ಕೆ ದೇಶದ ಜನರು ಜಾಗೃತರಾಗಿರಬೇಕಾದದ್ದು ಅಗತ್ಯ. ತನ್ನ ಒಳ್ಳೆಯದನ್ನ ಕುರಿತು ಜನರೇ ಯೋಚಿಸಬೇಕು, ಅದನ್ನ ದೇಶದ ಮಂತ್ರಿಗಳ ಮೇಲೆ ಬಿಡುವುದರಿಂದ ಗುಲಾಮಗಿರಿಯನ್ನ ಆಹ್ವಾನಿಸಿದಂತೆ ಆಗುತ್ತೆ, ಅಂತರಾತ್ಮನಿಗೂ ನ್ಯಾಯಪೂರ್ಣ ವಾದದ್ದು ಅಂತ ಅನಿಸದಿದ್ದಾಗ ಅದನ್ನ ಪ್ರಕಟಪಡಿಸಬೇಕಾದ್ದು ಜನರ ಧರ್ಮ. ಈಗ ದೊಡ್ಡ ಸಾಹೇಬರ ಆಜ್ಞೆ ನೀಡುವ ದಿನಗಳು ಕಳೆದವು, ಪ್ರಜಾಪ್ರಭುತ್ವದ ಸರಕಾರ ದೇಶದ ಜನರ ಲಾಭಕ್ಕಾಗಿ ಕೆಲಸ ಮಾಡುತ್ತೆ, ಅದನ್ನ ಪಂಚಾಯತ್ ರಾಜ್ ಅಂತ ಹೇಳ್ತಾರೆ, ಈಗ ವಿಭಜನೆ ಬಂದಿದೆ, ವಿವೇಕ, ತಿಳುವಳಿಕೆಯಿಂದ ಅದನ್ನು ಸುಖಕರ – ಮಂಗಳಕರವಾಗಿ ಮಾಡಬಹುದು."

ಕಾಂಗ್ರೆಸ್‌ನ ಪ್ರತಿಷ್ಠೆ ಕಡಿಮೆಯಾಗುತ್ತಿತ್ತು – ಅಂತ ಯಾರೋ ಹೇಳಿದರು. ಬಾಪೂಜಿ ಹೇಳಿದರು, 'ನೂರ ಐವತ್ತು ವರುಷದ ಗುಲಾಮಗಿರಿಯ ದೂಷಣೆಯನ್ನ ತೆಗೆದುಹಾಕುವುದಕ್ಕೆ ಕೊನೆಯ ಪಕ್ಷ ಎಪ್ಪತ್ತು – ಎಂಬತ್ತು ವರುಷಗಳೇ ಬೇಕು. ಸ್ವರಾಜ್ಯ ಪಡೆದುಕೊಳ್ಳುವುದಕ್ಕಾಗಿ ಎಷ್ಟು ತ್ಯಾಗ – ಬಲಿದಾನ ಬೇಕಾಗಿತ್ತೋ, ಅದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ತಪಸ್ಸು ಸ್ವರಾಜ್ಯವನ್ನು ಉಳಿಸಿಟ್ಟುಕೊಳ್ಳುವುದಕ್ಕೆ ಬೇಕು.' ಇದೇ ಅಭಿಪ್ರಾಯವನ್ನಿಟ್ಟುಕೊಂಡು ಬಾಪೂಜಿ ರಾಜೇಂದ್ರ ಬಾಬುಗೆ ಬರೆದರು, 'ಜನರ ಮೇಲೆ ಅನೇಕ ತರಹೆ ಸುಂಕದ ಹೊರೆ ಇದೆ, ಅದನ್ನು ಕಡಿಮೆ ಮಾಡಬೇಕು, ರಚನಾತ್ಮಕ ಕಾರ್ಯಗಳಿಗೆ ಪ್ರಾಧಾನ್ಯ ನೀಡಬೇಕು, ಔದ್ಯೋಗೀಕರಣದ ಹುಚ್ಚುಸ್ಪರ್ಧೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗವನ್ನು ಮರೆತರೆ ಬಡತನ ಎಂದಿಗೂ ದೂರವಾಗುವುದಿಲ್ಲ, ಜೊತೆಗೆ ಜೈಲಿಗೆ ಹೋಗಿದ್ದ ಜನರನ್ನಷ್ಟೇ ಮಂತ್ರಿಗಳನ್ನಾಗಿ ಮಾಡದೆ ಹೊರಗಿದ್ದ ಸಂಯೋಗ್ಯರಾದ ಕುಶಲ ವ್ಯಕ್ತಿಗಳಿಗೂ ವ್ಯವಸ್ಥೆ ಮತ್ತು ಸರಕಾರದ ಜವಾಬ್ದಾರಿ ಕೊಡಬೇಕು. ಕಾಂಗ್ರೆಸ್ಸಿಗರಿಗೆ ಜೈಲಿಗೆ ಹೋಗುವುದು ಬರುತ್ತಿತ್ತು. ಆದರೆ ಅವರಿಗೆ ಆಡಳಿತದ ಅನುಭವ ಜ್ಞಾನ ಎರಡೂ ಇಲ್ಲ. ಈ ದಿಕ್ಕಿನಲ್ಲಿ ದೇಶೀರಾಜ್ಯಗಳಿಗೆ ಎಷ್ಟೋ ಜನ ದೊಡ್ಡ ಕಾರ್ಯಕುಶಲವ್ಯಕ್ತಿಗಳಿದ್ದಾರೆ. ಅಂತಹ ವಿಷಯಗಳಲ್ಲಿ ಕಾಂಗ್ರೆಸ್ ಹೊರಗಣ ಯೋಗ್ಯ

ವ್ಯಕ್ತಿಗಳ ಅನುಭವ – ಕೌಶಲವನ್ನ ಸದುಪಯೋಗಪಡಿಸಿಕೊಳ್ಳಬೇಕು.' ಇದರ ಜೊತೆಗೆ, 'ಕಾಂಗ್ರೆಸ್‌ನ ಹಿರಿಯ ನಾಯಕರು ಸರಕಾರದಿಂದ ಹೊರಗುಳಿದು ಸರಕಾರಕ್ಕೆ ಮಾರ್ಗದರ್ಶನ ನೀಡಬೇಕು. ಕಾಂಗ್ರೆಸ್ ಜನರನ್ನು ಸಂಪರ್ಕದಲ್ಲಿಟ್ಟು ಕೊಂಡಿರಬೇಕು, ಪ್ರಜೆಗಳಿಂದ ಮುಖ ತಿರುಗಿಸಿಕೊಳ್ಳಬಾರದು' ಎಂದು ಬಾಪೂಜಿ ಹೇಳಿದರು. ೧೯೩೭ರಲ್ಲಿ ಕಾಂಗ್ರೆಸ್ ಸಫಲವಾಗಿ ಸರಕಾರವನ್ನು ನಡೆಸಿತ್ತು, ಕಾರಣವೇನೆಂದರೆ ಆಗ ಕಾಂಗ್ರೆಸ್ ನಾಯಕರೆಲ್ಲರೂ ಅಧಿಕಾರದ ಲೋಭವನ್ನು ತೊರೆದು ಚಿಕ್ಕ ಎರಡನೆಯ ಶ್ರೇಣಿಯ ಕಾರ್ಯಕರ್ತರಿಗೆ ಸರಕಾರದ ಕೆಲಸ ಕೊಟ್ಟಿದ್ದರು. ಅದರಿಂದ ಅಧಿಕಾರದಲ್ಲಿದ್ದ ಕಾಂಗ್ರೆಸ್ಸಿಗರು ಸಂಸ್ಥೆಯ ಸಿದ್ಧಾಂತಗಳನ್ನ ಪಾಲಿಸಲು ಕ್ರಿಯಾಶೀಲರಾಗಿದ್ದರು, ತಮ್ಮ ತಮ್ಮಗಳ ಮಧ್ಯೆ ವೈಮನಸ್ಯ ಕೂಡ ಕಡಿಮೆ ಇತ್ತು. ೧೯೪೬ರಲ್ಲಿ ಮಧ್ಯಂತರ ಸರಕಾರದಲ್ಲಿ ಎಲ್ಲ ಉನ್ನತ ನಾಯಕರು ಅಧಿಕಾರದ ಕುರ್ಚಿಗಳಲ್ಲಿ ಕುಳಿತಿದ್ದರು, ಕಾಂಗ್ರೆಸ್‌ನ ಸಂಸ್ಥಾ ಕಾರ್ಯವನ್ನ ಬೇರೆಯವರ ಮೇಲೆ ಬಿಟ್ಟಿದ್ದರು. ಅದರಿಂದ ರಾಜ್ಯ ಮತ್ತು ಸರಕಾರದ ನಡುವೆ ನಿರಂತರವಾಗಿ ಜಗಳ ಇರುತ್ತಿತ್ತು, ಸರಕಾರದ ಮಂತ್ರಿಗಳು ಸಂಸ್ಥೆಯ ಹಸ್ತಕ್ಷೇಪವಿದೆ ಅಂತ ದೂರುತ್ತಿದ್ದರು. ಬಾಪೂಜಿ ಕೆಲವರು ಉನ್ನತ ಮಟ್ಟದ ನಾಯಕರು ಅಧಿಕಾರ ಲಾಲಸೆಯನ್ನು ತಡೆದು ಸಂಸ್ಥೆಯನ್ನು ನಡೆಸಿ ದೇಶದ ಜನರ ಅಗತ್ಯಗಳು, ಮತ್ತವನ್ನ ಕಾರ್ಯರೂಪಕ್ಕೆ ತರಬೇಕು, ಆಗ ಮಾತ್ರ ವಾಸ್ತವಿಕ ತಂತ್ರ ಹುಟ್ಟುತ್ತದೆ ಎಂದು ಬಾಪೂಜಿ ಹೇಳುತ್ತಿದ್ದರು.

ಸಾಮಾನ್ಯ ದೃಷ್ಟಿಯಿಂದ ನೋಡಿದಾಗ ತಮ್ಮ ಜೊತೆಗಾರರಿಂದ ಬೇರೆಯಾಗಿ ಒಂಟಿಯಾದ ಈ ಕಾಲ ಬಾಪೂಜಿಯ ಪರಾಭವ ಅಂತಲೇ ಪರಿಗಣಿಸುತ್ತಾರೆ. ಆದರೆ ಸತ್ಯಾಗ್ರಹಿಯ ಪರಾಜಯ ಕೂಡ ಕೆಟ್ಟ ಹೆಸರು ಅಥವಾ ಪಶ್ಚಾತ್ತಾಪಕ್ಕೆ ಎಡೆ ಕೊಡುವುದಿಲ್ಲ, ಅವನ ಸತ್ಯ ಯಾವಾಗಲೂ ಉಜ್ವಲವಾಗಿದ್ದು ಶ್ರೇಷ್ಠವಾಗಿರುತ್ತೆ, ಅದರಿಂದಲೇ ಸತ್ಯಾಗ್ರಹಿ ಸೋತಾಗಲೂ ಅವನ ತೇಜಸ್ಸು ಕಡಿಮೆಯಾಗುವುದಿಲ್ಲ. ಪರಾಜಯದಿಂದ ಒಂದೇ ಒಂದು ಉಪಯೋಗ ಇದೆ, ಅವನು ಆತ್ಮನಿರೀಕ್ಷಣೆ ಮಾಡಿಕೊಂಡು ತನ್ನ ಕೊರತೆಗಳನ್ನ ಸರಿಪಡಿಸಿಕೊಳ್ಳಬಹುದು. ಆದ್ದರಿಂದ ಆ ನಿರಾಶೆಯ ದಿನಗಳಲ್ಲೂ ಬಾಪೂಜಿ ತನ್ನ ನಿಸ್ಪೃಹವಾದ ಸ್ಥಿತಪ್ರಜ್ಞತ್ವವನ್ನು ಆಸೆ, ಉತ್ಸಾಹ, ನಂಬಿಕೆ ಮತ್ತು ಓಜಸ್ಸಿನ ಕೇಂದ್ರವಾಗಿ ಮಾಡಿಕೊಂಡಿದ್ದರು.

ಉದಾಸರಾಗಿ, ದುಃಖಿತರಾಗಿ, ಹತೋತ್ಸಾಹಿತರಾಗಿ ಜನರು ಬಾಪೂಜಿ ಬಳಿ ಬರುತ್ತಿದ್ದರು. ಅವರಿಂದ ಧೈರ್ಯ ಪಡೆದು ಹಿಂದಿರುಗುತ್ತಿದ್ದರು, ಎಷ್ಟೋ ಜನ ಕಮ್ಯುನಿಷ್ಟರು ಅವರನ್ನು ಭೇಟಿಯಾಗಬಂದರು. ಗಾಂಧೀಜಿ ಅವರಿಗೆ ಹೀಗೆ ಹೇಳಿದರು, 'ನೀವು ಪ್ರತಿಯೊಂದರಲ್ಲೂ ತಪ್ಪನ್ನೇ ಹುಡುಕುತ್ತಿರುತ್ತೀರಿ ಅಂದಾಗ ಬಹಳ ಬೇಸರವಾಗುತ್ತೆ, ಕೂದಲೆಳೆಯ ಚರ್ಮವನ್ನ ತೆಗೆಯುತ್ತಿರುತ್ತೀರಿ, ರಷ್ಯಾವನ್ನ

ನಿಮ್ಮ ಆಧ್ಯಾತ್ಮಿಕ ಆದರ್ಶವೆಂದು ಒಪ್ಪಿಕೊಳ್ಳುತ್ತೀರಿ, ಬೇರೆಯವರು ಪೌಷ್ಟಿಕ ಭೋಜನ ಮಾಡಿದರೆ ನನ್ನ ಹೊಟ್ಟೆ ಹೇಗೆ ತುಂಬುವುದಿಲ್ಲವೋ, ಅದೇ ರೀತಿ ಬೇರೆ ದೇಶಗಳು ಏನು ಮಾಡಬಲ್ಲವು? ಅದರಿಂದ ನನ್ನ ಉದ್ಧಾರ ಆಗುವುದಿಲ್ಲ. ನನಗೆ ನನ್ನ ದೇಶದ ಮಣ್ಣಿಂದ ಚಿನ್ನ ತೆಗೆಯಬೇಕು (ಬೆಳಸಬೇಕು), ನೀವುಗಳು ಸತ್ಯ–ಅಸತ್ಯವನ್ನ ನಿಮ್ಮನುಕೂಲಕ್ಕೆ ತಕ್ಕ ಹಾಗೆ ಉಪಯೋಗಿಸಿಕೊಳ್ಳುತ್ತೀರಿ. ಸತ್ಯಾಗ್ರಹಿ ಎರಡು ಕುದುರೆಗಳ ಮೇಲೆ ಸವಾರಿ ಮಾಡುವುದಕ್ಕಾಗುವುದಿಲ್ಲ. ಬಡವರ ಸೇವೆ ಮಾಡುವುದಕ್ಕೆ ಸತ್ಯದ ಸಾಧನೆ ಅಗತ್ಯ. ದೇಶೋತ್ಥಾನ ಪಾರ್ಟಿ ರಾಜಕೀಯದ ಸಂಕುಚಿತ ಆವರಣದಿಂದ ಹೊರಕ್ಕೆ ಬರುವುದು ಆವಶ್ಯಕ. ನೀವು ಬಡವರ ಉದ್ಧಾರದ ಮಾತನ್ನಾಡುತ್ತೀರಿ. ಬಡವ ಅಂದರೇನು ಅಂತ ನಿಮಗೆ ಗೊತ್ತೇ ಇಲ್ಲ. ನಿಮ್ಮ ಮಾರ್ಗ ಮತ್ತು ಸಾಧನೆಯಿಂದ ಬಡತನ ದೂರವಾಗುವುದಿಲ್ಲ. ಜನ ಘೋಷಣೆ, ಪ್ರವಚನಗಳಿಂದ ಪ್ರಭಾವಿತರಾಗುವುದಿಲ್ಲ. ಪರಿಶ್ರಮ, ಕರ್ತವ್ಯ, ಪ್ರಾಮಾಣಿಕತೆ, ತ್ಯಾಗ ಮತ್ತು ಶುದ್ಧ ಚಾರಿತ್ರ್ಯದಿಂದ ಜನರಿಗೆ ತಿಳಿಸಬಹುದು.'

ಒಂದು ದಿನ ಹಿಂದೂ ಮಹಾಸಭೆಯ ಕೆಲವರು ಭೇಟಿ ಮಾಡಲು ಬಂದರು. ಪಾನ್ ಜಗಿಯುತ್ತಾ ಎಂಜಲು ತುಂಬಿಕೊಂಡ ಬಾಯಿಂದ ಆ ಜನ ಬಾಪೂಜಿ ಹತ್ತಿರ ಮಾತನಾಡುತ್ತಿದ್ದರು. ಅದೇ ಪ್ರಾರ್ಥನಾ ಸಭೆಯ ಕುರಾನ್ ವಾಚನದ ಬಗೆಗಿನ ವಿರೋಧವನ್ನು ಮತ್ತೆ ಹೇಳಿದರು. ನಂತರ ಬಾಪೂಜಿಗೆ ಹೇಳಿದರು: "ಇನ್ನು ನೀವು ರಾಜಕೀಯವನ್ನ ತೊರೆದುಬಿಡಿ, ನಿಮಗೂ ದೇಶಕ್ಕೂ ಎರಡಕ್ಕೂ ಒಳ್ಳೆಯದಾಗುತ್ತೆ". ಈ ತೆರನಾದ ಅಧಿಕಾರಿಗಳ ಉಪದೇಶ ಕೇಳಿಸಿಕೊಂಡೂ ಆವೇಶಗೊಳ್ಳದ ಬಾಪೂಜಿ ಹೇಳಿದ್ದು ಹೀಗೆ: "ನಾನು ಈಶ್ವರನ ಸೇವೆಗೆ ಜೀವನವನ್ನ ಅರ್ಪಿಸಿದ್ದೇನೆ, ರಾಜಕೀಯ ಕೂಡ ಈಶ್ವರನ ಒಂದು ವಿಧಾನ, ಸತ್ಯ – ಅಹಿಂಸೆಯೊಂದಿಗೆ ಸಮಾಜ ಸೇವೆ ಮಾಡುವುದು – ಇದೇ ನನ್ನ ರಾಜಕೀಯದ ಧ್ಯೇಯ, ಆದ್ದರಿಂದ ನನ್ನ ಜೀವನ ಸಾಧನೆ ಮತ್ತು ಸಿದ್ಧಾಂತವನ್ನೆಲ್ಲಾ ತ್ಯಜಿಸಲಾರೆ." ಎಂತಹ ಮೂರ್ತಿ ಚಿಕ್ಕದು ಕೀರ್ತಿ ದೊಡ್ಡದು.

ಕೆಲವರು ಕ್ರಿಶ್ಚಿಯನ್ ಮಿಷನರಿಯ ಜನ ಅವರನ್ನು ಭೇಟಿಯಾಗಲು ಬಂದರು, ಬಾಪೂಜಿ ಅವರಿಗೆ ಹೇಳಿದರು : 'ಸಾಮ್ರಾಜ್ಯವಾದ ಮತ್ತು ದೇಶದ ಗುಲಾಮಗಿರಿ ಬಹುಶಃ ಈ ಮಿಷನರಿಗಳನ್ನು ಭ್ರಮಿತರನ್ನಾಗಿ ಮಾಡಿದೆ. ಗುಲಾಮದೇಶದಲ್ಲಿ ಬಡವರಿಗೆ ಹಣ ಮತ್ತು ಭೌತಿಕ ಸುಖ–ಅನುಕೂಲಗಳ ಲೋಭ ತೋರಿಸಿ ಧರ್ಮ ಪರಿವರ್ತಿಸುವುದರಲ್ಲಿ ಕ್ರಿಶ್ಚಿಯನ್ ಧರ್ಮದ ಶ್ರೇಷ್ಠತೆ ಏನೂ ಇಲ್ಲ, ಇದಂತೂ ಜನರನ್ನು ಕೊಂಡುಕೊಂಡಂತೆ ಆಯಿತು. ಅದರಲ್ಲಿ ಧರ್ಮದ ಉತ್ಥಾನ ಅಥವಾ ಶಾಶ್ವತತೆಯನ್ನು ಕೂಡಿಸಿದ್ದಾಗಲಿಲ್ಲ. ವಾಸ್ತವವಾಗಿ ಧರ್ಮವನ್ನು ವ್ಯವಸಾಯ ಮಾಡಿಕೊಂಡು ಮಿಷನರಿ ಕ್ರಿಶ್ಚಿಯನ್ ಧರ್ಮವನ್ನು ಕ್ಷೀಣಿಸುತ್ತಿದೆ.' ಮೊದಲ

ಬಾರಿ ಯಾರಾದರೂ ಸ್ಪಷ್ಟವಾಗಿ ಮಿಷನರಿಗಳಿಗೆ ಧರ್ಮ ಪರಿವರ್ತನೆ ಮತ್ತು ಸಾಮ್ರಾಜ್ಯವಾದದ ಶೋಷಣ ವಿಧಾನದ ಪಾರಸ್ಪರಿಕ ಸಂಬಂಧವನ್ನು ಸ್ಪಷ್ಟಗೊಳಿಸಿದ್ದು ಇಲ್ಲೇ ಅನಿಸುತ್ತೆ.

ಆ ದಿವಸಗಳಲ್ಲಿ ಬಾಪೂಜಿಗೆ ನಮ್ಮಜ್ಜಿಯನ್ನ ಕಳೆದುಕೊಂಡದ್ದರ ನೋವು ಇನ್ನೂ ಜಾಸ್ತಿಯಾಗಿತ್ತು ಅನಿಸುತ್ತದೆ. ಆಕೆ ಇದ್ದಾಗ ಎಂತಹ ಪರಿಸ್ಥಿತಿಯಲ್ಲೂ ಬಾಪೂಜಿಗೆ ತಿಳಿಯಹೇಳಿ ಜೊತೆಗೊಡುತ್ತಿದ್ದರು, ಬಾಪೂಜಿಯನ್ನ ಎಂತಹ ವಿಪತ್ತು – ಕಷ್ಟದಲ್ಲೂ ಉಳಿಸುತ್ತಿದ್ದರು. ಈಗ ಬಾಪೂಜಿ ಒಂಟಿಯಾಗಿದ್ದರು. ಅವರು ತಮ್ಮ ಸೊಸೆ, ನಮ್ಮ ಸುಶೀಲಾ ಕಾಕಿಗೆ ಬರೆದರು: 'ಬ್ರಿಟಿಷ್ ಸಾಮ್ರಾಜ್ಯದ ವಿಷಯದಲ್ಲಿ ದೇಶದಲ್ಲಿ ಏನೇನು ನಡೆಯುತ್ತಿದೆಯೋ ಅದರಿಂದ ನನ್ನ ಮೇಲೆ ಬಹಳ ಭಾರ ಬೀಳುತ್ತಿದೆ, ಅದರಿಂದ ಹೆಚ್ಚುಕಾಲ ಬದುಕುವ ನನ್ನ ಆತ್ಮವಿಶ್ವಾಸ ಕುಂಠಿತವಾದ ಹಾಗಾಗಿದೆ. ಆಗಸ್ಟ್ ೧೫ ಹತ್ತಿರ ಬರುತ್ತಿದ್ದ ಹಾಗೆ ಬಾಪೂಜಿ ಹೃದಯ ದಿಲ್ಲಿಯಿಂದ ಗಾಬರಿಗೊಳ್ಳುತ್ತಿತ್ತು, ಅವರು ನೋವಾಖಾಲಿ ಅಥವಾ ಬಿಹಾರದಲ್ಲಿ ಜನರ ನಡುವೆ ಕೆಲಸ ಮಾಡಬಯಸುತ್ತಿದ್ದರು. ದೆಹಲಿಯಲ್ಲಿ ಅಧಿಕಾರ ವಹಿಸಿಕೊಂಡಿದ್ದ ಸಹಯೋಗಿಗಳಿಗೀಗ ಬಾಪೂಜಿಯಿಂದ ಯಾವ ಸಲಹೆಯನ್ನೂ ತೆಗೆದುಕೊಳ್ಳುವ ಅಗತ್ಯವಿರಲಿಲ್ಲ, ಈಗ ರಾಜಕೀಯದ ಸಾಮಾನ್ಯ ಕ್ಷೇತ್ರದಲ್ಲಿ ಬಾಪೂಜಿಯ ಸಿದ್ಧಾಂತಗಳಿಗೆ ಅವಕಾಶವಿರಲಿಲ್ಲ. ಆದರೆ ಅವರು ಬಾಪೂಜಿಯನ್ನು ದಿಲ್ಲಿಯಿಂದ ಹೊರಡಲೂ ಬಿಡುತ್ತಿರಲಿಲ್ಲ, ೧೯೪೭ರ ಜೂನ್ ೨೧ರಂದು ನೆಹರೂಜಿ ಮತ್ತು ಬಾಪೂಜಿ ಮೋಟರ್ ಕಾರಿನಲ್ಲಿ ನೂರಾ ಇಪ್ಪತ್ತು ಮೈಲಿ ಹರಿದ್ವಾರಕ್ಕೆ ಶರಣಾರ್ಥಿ ಕ್ಯಾಂಪನ್ನು ನೋಡಲು ಹೋದರು. ಅಲ್ಲಿ ೩೨೦೦೦ ಶರಣಾರ್ಥಿಗಳು ರಾವಲಪಿಂಡಿ ಮತ್ತು ಪಶ್ಚಿಮ ಪಂಜಾಬಿನಿಂದ ಬಂದಿದ್ದರು. ಕ್ಯಾಂಪ್ ಅಧೀಕ್ಷಕರು ಬಾಪೂಜಿಗೆ ಹೂವಿನ ಮಾಲೆ ಹಾಕಲಿಚ್ಛಿಸಿದರು. ಬಾಪೂಜಿ ಈ ದುಃಖ ಮತ್ತು ವ್ಯಥೆಯ ಸಾಗರದಲ್ಲಿ ಹೂವಿನ ಹಾರದಿಂದ ಸ್ವಾಗತ ನೀಡುವುದು ತೀರ ಅನುಚಿತವಾಗಿತ್ತು, ಬಾಪೂಜಿ ರೇಗಿದರು. ಇಡೀ ದಿವಸ ಕಠಿಣಯಾತ್ರೆ, ಶಿಬಿರಗಳ ಯಾತ್ರೆಯನ್ನು ಮುಗಿಸಿ ಅದೇ ದಿನ ಮಧ್ಯಾಹ್ನ ಅವರಿಬ್ಬರು ಮಿತ್ರರೂ ದೆಹಲಿಗೆ ಹಿಂದಿರುಗಿ ಬಂದರು. ನೆಹರೂ ಅವರ ತೊಡೆಯ ಮೇಲೆ ತಲೆ ಇಟ್ಟು ಬಾಪೂಜಿ ಸ್ವಲ್ಪ ಹೊತ್ತು ನಿದ್ದೆ ಹೋದರು, ಪಂಡಿತಜೀ ಬಾಪೂಜಿಯವರ ಕಾಲು ನೇವರಿಸುತ್ತಿದ್ದರು, ಮೋಟರಿನಲ್ಲೇ ಕುಳಿತು ಇಬ್ಬರೂ ತದೇಕಚಿತ್ತರಾಗಿ ಪ್ರಾರ್ಥನೆ ಮಾಡಿದರು.

ಬಾಪೂಜಿಯ ಭವಿಷ್ಯವಾಣಿ ಸತ್ಯವಾಗುತ್ತಿತ್ತು, ಅಲ್ಲಲ್ಲಿ ದಂಗೆ ಏಳುತ್ತಿತ್ತು, ಆ ದಂಗೆಗಳು ತೀವ್ರವಾಗಿ ವಿಕೃತವಾಗಿದ್ದವು, ಇಂಗ್ಲಿಷ್ ಅಧಿಕಾರಿಗಳು ಬೇಜವಾಬ್ದಾರಿಯಿಂದಿದ್ದರು, ಯಾರಾದರೂ ಸಹಾಯ ಕೇಳಿದಾಗ ಅವರು ಬಹಳ ಕಟುವಾಗಿ ಉತ್ತರಿಸಿ, 'ಹೋಗು, ನಿನ್ನ ಪಂಡಿತ ನೆಹರೂ ಬಳಿ ಹೋಗು, ಪಟೇಲ್

ಹತ್ತಿರ ಸಹಾಯ ಕೇಳು' ಎನ್ನುತ್ತಿದ್ದರು. ಹಿಂದೂ ಕಾಂಗ್ರೆಸ್ ದುರ್ಗತಿಗೆ ತಲಪುತ್ತಿದೆ ಎಂದವರು ಮನದೊಳಗೇ ಮುದಿತರಾಗಿದ್ದರು, ಅವರ ಸಹಾಯ ಇಲ್ಲದೆ ಈ ದೇಶದ ಆಡಳಿತ ಸಾಧ್ಯವಾಗುವುದಿಲ್ಲ ಅಂತ ಅವರು ಶಂಕಿಸಿದ್ದರು. ನಾವು ಈ ಕಾಂಗ್ರೆಸ್ಸಿಗರು ಅಯೋಗ್ಯತೆಯನ್ನ ಪ್ರಪಂಚಕ್ಕೆ ಬಿಚ್ಚಿ ತೋರಿಸುತ್ತೇವೆ ಅಂತ ಅನ್ನುತ್ತಿದ್ದರು. ಅಂತಃಕಲಹವನ್ನು ತಡೆಯುವುದಕ್ಕಾಗಿ ಕಾಂಗ್ರೆಸ್ ವಿಭಜನೆಯನ್ನ ಒಪ್ಪಿಕೊಂಡಿತ್ತು. ನಾಯಕರು ಅದನ್ನ ತಡೆಯಲು ಅಸಮರ್ಥರಾಗಿದ್ದರು. ನಾಶವನ್ನೇ ಮಾಡುವ ಲೀಗ್‌ನ ಸ್ವಭಾವದಿಂದ ಬೇಸತ್ತು ಕಾಂಗ್ರೆಸ್ ಮನಸ್ಸಿಲ್ಲದೆಯೇ ವಿಭಜನೆಗೆ ಒಪ್ಪಿಗೆ ನೀಡತ್ತು. ನೆಹರೂಜಿಯ ದಾರುಣವಾದ ಮಾತುಗಳಲ್ಲಿ ಕಾಂಗ್ರೆಸ್ ತಲೆನೋವನ್ನು ದೂರಮಾಡಲು ತಲೆಯನ್ನೇ ತುಂಡರಿಸಿಕೊಂಡಿತ್ತು. ಇಂತಹ ತಪ್ಪು ಹೆಜ್ಜೆಯಿಂದ ಜನರ ಕಷ್ಟ-ನೋವು ಹೆಚ್ಚಾಗಿತ್ತು, ಸ್ಥಿತಿ ವಶದಲ್ಲಿರಲಿಲ್ಲ.

೨೬ ಜೂನ್‌ಗೆ ಬಾಪೂಜಿ ವಾಯಿಸ್‌ರಾಯ್‌ನ್ನು ಭೇಟಿಯಾಗಿ ಹೇಳಿದರು-

- ಆದಷ್ಟು ಬೇಗ ಮಂತ್ರಿಮಂಡಲದಲ್ಲಿ ಏಕತೆ ಮತ್ತು ಸಮಾನತೆ ಸ್ಥಾಪಿಸಬೇಕು.
- ಲೀಗ್ ಮಂತ್ರಿ ಕ್ಯಾಬಿನೆಟ್ ವಿರುದ್ಧ ಕೆಲಸ ಮಾಡಕೂಡದು, ಅವರ ವಕ್ರತೆ ಮತ್ತು ದುಷ್ಟತೆಯಿಂದ ತಂತ್ರ ಮುರಿಯುತ್ತಿದೆ.
- ಸರಕಾರಿ ಅಧಿಕಾರಿಗಳು ಮತ್ತು ಸೈನ್ಯ ಎರಡನ್ನೂ ದೃಢವಾಗಿ ಅಂಕೆಯಲ್ಲಿ ಇರಿಸಲೇಬೇಕು, ಗುಡಗ್ಗಾಂವದ ಭೀಷಣ ಕಾಂಡದ ಪೂರ್ತಿ ಜವಾಬ್ದಾರಿ ಒಬ್ಬ ಅಧಿಕಾರಿಯ ತಲೆಯ ಮೇಲಿತ್ತು.
- ಕೊನೆಯಲ್ಲಿ ಎಲ್ಲ ಪಕ್ಷಗಳನ್ನು ಸಂತುಷ್ಟಪಡಿಸುವುದನ್ನು ಬಿಡಬೇಕು. ಎರಡು ಪಕ್ಷಗಳನ್ನು ಹೊಗಳಿ ವೈಸ್‌ರಾಯ್ ದೇಶವನ್ನಪಹಾಸ್ಯ ಮಾಡುತ್ತಿದ್ದರು.

ಈ ಮಾತುಕತೆ ನಡುವೆ ಬಾಪೂಜಿ ಮೌಂಟ್‌ಬ್ಯಾಟನ್‌ನ ಭಾಷೆ ಕೇಳಿ ಬೆಚ್ಚಿಬಿದ್ದರು. ಅವರು ಮೌಂಟ್ ಬ್ಯಾಟನ್‌ಗೆ ೨೭-೨೮ ಜೂನ್‌ನ ರಾತ್ರಿ ಪತ್ರ ಬರೆದರು.

'ಕಾಂಗ್ರೆಸ್ ಮತ್ತು ಲೀಗ್ ಎರಡೂ ಪಕ್ಷಗಳು ನ್ಯಾಯವಾಗಿವೆಯೆಂದು ಜಿನ್ನಾರ ಬೇಡಿಕೆ ಹೆಚ್ಚು ಮಹತ್ವದ್ದೆಂದು ನೀವು ಚಿಂತಿಸುವುದನ್ನು ನೋಡಿ ನಾನು ಚಕಿತನಾಗಿದ್ದೇನೆ. ಇದು ಸಾಧ್ಯವಿಲ್ಲ ಎಂದು ನಾನು ಸ್ಪಷ್ಟವಾಗಿ ಅಭಿಪ್ರಾಯಪಡುತ್ತೇನೆ. ತುಲನೆಯೇ ಮಾಡಬೇಕೆಂದರೆ ಪೂರ್ತಿ ನಿರಂತರವಾಗಿ ನಡೆಯುತ್ತಿರುವುದನ್ನು ಗಮನಿಸಿ, ನಿಮ್ಮ ದೃಷ್ಟಿಯಲ್ಲಿ ಕಾಯದೇ ಆಜ಼ಮ್ ಜಿನ್ನ ಕಾಂಗ್ರೆಸ್‌ಗಿಂತ ಹೆಚ್ಚು ತಿಳುವಳಿಕಸ್ಥ ಹಾಗೂ ನ್ಯಾಯಪ್ರಿಯ ಅನಿಸಿದರೆ ನೀವು ಮುಸ್ಲಿಂ ಲೀಗ್‌ನ ಮುಖಂಡರ ಜೊತೆಯೇ ಚರ್ಚೆ ನಡೆಸಬೇಕು ಹಾಗೂ ಎಲ್ಲರೆದುರಿಗೂ ಅವರ ನೀತಿಗಳನ್ನು ಒಪ್ಪಿಕೊಳ್ಳಬೇಕು.

'ಕಾಯದೆ ಆಜ್ಞಮ್' ಬಹುಶಃ ೧೫ ಆಗಸ್ಟ್ ವೇಳೆಗೆ ಹಸ್ತಾಂತರ ಮಾಡಲು ಒಪ್ಪದೆ ಇರಬಹುದು ಎಂದು ಇಂಗಿತಪಡಿಸಿದ್ದೀರಿ. ಅದಕ್ಕೆ ಕಾರಣ ಕಾಂಗ್ರೆಸ್ ಮಂತ್ರಿಮಂಡಳ ಸಾಕಷ್ಟು ಸಹಕಾರ ನೀಡುತ್ತಿಲ್ಲವೆಂದು ಹೇಳಿದ್ದೀರಿ. ನನಗೆ ಇದು ಆಶ್ಚರ್ಯ ಹಾಗೂ ದುಶ್ಚಿಂತೆಯಿಂದ ಕೂಡಿದ ಸಮಾಚಾರವಾಗಿದೆ. ನಾನಂತೂ ಆರಂಭದಿಂದಲೂ ವಿಭಜನೆಯನ್ನು ವಿರೋಧಿಸಿದ್ದೇನೆ, ವಿಭಜನೆಯ ಸಲಹೆ ನೀಡುವಾಗ ಬ್ರಿಟಿಷ್ ಸರಕಾರ ಆರಂಭದಿಂದಲೇ ತಪ್ಪು ಮಾಡಿದೆ. ಈಗಲೂ ನೀವು ಆ ತಪ್ಪನ್ನು ಸರಿಪಡಿಸಬಹುದು. ಆದರೆ ದುರಾಚಾರ ಮತ್ತು ವಕ್ರತೆಯನ್ನು ಪ್ರೋತ್ಸಾಹಿಸುವುದು ನ್ಯಾಯವಲ್ಲ.

"ಮೂರನೆಯ ಬಾರಿ ನೀವು ನನಗೆ ಇಂಗ್ಲಿಷರು ಇರುವಾಗ ವಿಭಜನೆ ಆಗಲಿಲ್ಲವೆಂದರೆ ಬಹುಸಂಖ್ಯಾತ ಹಿಂದೂಗಳು ಮುಸಲ್ಮಾನರನ್ನು ಗುಲಾಮರನ್ನಾಗಿ ಮಾಡಿ ರಾಜ್ಯವಾಳುತ್ತಾರೆ, ಅವರಿಗೆ ಎಂದೆಂದಿಗೂ ನ್ಯಾಯ ಸಿಗುವುದಿಲ್ಲ ಎಂದು ಹೇಳಿ ನನ್ನನ್ನು ಗಾಬರಿಗೊಳಿಸಿದ್ದೀರಿ, ನಾನು ನಿಮಗೆ ಮೊದಲೇ ತಿಳಿಸಿದ್ದ ಹಾಗೆ ಈ ಭಾವನೆ ಪೂರ್ತಿ ಕಾಲ್ಪನಿಕವಾದುದು, ಇಲ್ಲಿ ಸಂಖ್ಯೆಗೆ ಮಹತ್ವ ಇಲ್ಲ, ಒಂದು ಲಕ್ಷಕ್ಕಿಂತ ಕಡಿಮೆ ಸಂಖ್ಯೆಯ ಇಂಗ್ಲಿಷರು ನಲವತ್ತು ಕೋಟಿ ಭಾರತೀಯರ ದಮನ ನಡೆಸಿ ರಾಜ್ಯವಾಳಿದರು, ನೀವು ವಿಚಾರ ಮಾಡಲೆಂದು ಕೆಳಗಣ ಐದು ಸಲಹೆಗಳನ್ನು ನೀಡುತ್ತಿದ್ದೇನೆ –

- ಕಾಂಗ್ರೆಸ್ ಎಷ್ಟೋ ಬಾರಿ ಘೋಷಣೆ ಮಾಡಿ ತಾನು ಯಾವ ಪ್ರಾಂತವನ್ನೂ ಬಲವಂತವಾಗಿ ಭಾರತೀಯ ಯೂನಿಯನ್‌ಗೆ ಸೇರಿಸಿಕೊಳ್ಳುವುದಿಲ್ಲವೆಂದು ತಿಳಿಸಿದೆ.
- ಜಾತಿ–ವಿಜಾತಿಯ ಜಗಳದಲ್ಲಿ ಸಿಲುಕಿರುವ ಕೋಟ್ಯಂತರ ಹಿಂದೂಗಳು ಹತ್ತು ಕೋಟಿ ಮುಸಲ್ಮಾನರ ದಮನ ಮಾಡುವ ಶಕ್ತಿ ಹೊಂದಿಲ್ಲ.
- ಮೊಘಲರು ಕೂಡ ಇಂಗ್ಲಿಷರ ಹಾಗೆ ಹಿಂದೂಸ್ತಾನದ ಮೇಲೆ ಬಹಳಕಾಲದವರೆಗೂ ಕಠೋರ ಶಾಸನ ನಡೆಸಿದ್ದರು.
- ಮುಸಲ್ಮಾನರು ಹರಿಜನ ಮತ್ತು ಗಿರಿಜನರಿಗೆ ತಮ್ಮ ಜೊತೆ ಸೇರಿಸಿಕೊಳ್ಳುವ ಪ್ರಯತ್ನ ಆಗಲೇ ಮಾಡಿದ್ದಾರೆ.
- ಈ ವಿಪತ್ತಿನ ವಿಷಯವಾಗಿ ಚರ್ಚೆ ಹರಡಿರುವ ಸವರ್ಣ ಹಿಂದೂಗಳು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಇವರಲ್ಲಿ ರಾಜಪೂತರು, ಅವರಲ್ಲಿನ್ನೂ ರಾಷ್ಟ್ರೀಯತೆ ಹುಟ್ಟಿಲ್ಲವೆಂದು ಹೇಳಬಹುದು. ಬ್ರಾಹ್ಮಣ ಮತ್ತು ವೈಶ್ಯರು ಆಯುಧಗಳನ್ನು ಹಿಡಿಯಲು ಕೂಡ ಅವರಿಗೆ ಬರುವುದಿಲ್ಲ. ಅವರ ಅಧಿಕಾರ ಕ್ಷೇತ್ರ ಅಂದರೆ ಅದು ಅವರ ನೈತಿಕ ಕ್ಷೇತ್ರ ಅಷ್ಟೆ, ಶೂದ್ರರನ್ನು, ಹರಿಜನರ ಜೊತೆಗೆ ಎಣಿಸುತ್ತಾರೆ. ಇಂತಹ ಹಿಂದೂ ಸಮಾಜ ತನ್ನ

ಬಹುಮತದಿಂದ ಮುಸಲ್ಮಾನರನ್ನು ಅವರ ಜಾಗದಿಂದ ತಳ್ಳಿ ಅವರನ್ನ ಹೊರಕ್ಕೆ ಹಾಕಬಹುದೆನ್ನುವುದು ತೀರ ಕಪೋಲಕಲ್ಪಿತ ಕತೆ.

ಇದರಿಂದ ಸತ್ಯ–ಅಹಿಂಸೆಯ ಹೆಸರಲ್ಲಿ ನಾನು ಒಂಟಿಯಾಗಿ ಇರಬೇಕಾದ ಪರಿಸ್ಥಿತಿ ಒಂದು ವೇಳೆ ಒದಗಿ ಬಂದರೂ ಕೂಡ ಅಹಿಂಸೆಯಿಂದ ಜನಿಸಿದ ಪೌರುಷದ ಪ್ರತಾಪದೆದುರು ಅಣುಶಕ್ತಿ ಕೂಡ ಕ್ಷುದ್ರವಾಗುತ್ತದೆ. ಅಂತಹ ಸ್ಥಿತಿಯಲ್ಲಿ ನೌಕಾದಳದ್ದಂತೂ ಹೇಳಲಿಕ್ಕಾಗದ ಶಕ್ತಿ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬಹುದು. ನಾನು ಈ ಪತ್ರದ ವಿಚಾರವನ್ನು ನನ್ನ ಸ್ನೇಹಿತರುಗಳಿಗೆ ತಿಳಿಸಿಲ್ಲ.

**– ಮೋಹನದಾಸ ಕರಮಚಂದಗಾಂಧಿ**

ಅದೇ ದಿನ ಲಾರ್ಡ್ ಮೌಂಟ್‌ಬ್ಯಾಟನ್ ಪತ್ರ ಕಳುಹಿಸಿ ನೀವು ತಮ್ಮ ಅಭಿಪ್ರಾಯ ಪ್ರಕಟಪಡಿಸಿ ಒಳ್ಳೆಯದು ಮಾಡಿದಿರಿ, ನನ್ನದು ಅಂತಹ ಯಾವ ಉದ್ದೇಶ ಕೂಡ ಇರಲಿಲ್ಲ. ನೀವು ಮಿತ್ರರಿಗೆ ಈ ಪತ್ರ ತೋರಿಸದೆ ಒಳ್ಳೆಯದು ಮಾಡಿದಿರಿ, ಆಗ ವಿನಾಕಾರಣ ನನಗೆ ಕೆಟ್ಟ ಹೆಸರು ಬರುತ್ತಿತ್ತು, ಈ ವಿಷಯ ಕುರಿತು ಮುಂದೆ ಮಾತನಾಡೋಣ ಎಂದು ತಿಳಿಸಿದರು.

ಬಾಪೂಜಿಯ ಜೊತೆ ಈ ವಿಷಯ ಕುರಿತು ಸ್ಪಷ್ಟ ಮಾತುಕತೆ ನಡೆದಿರಲೂಬಹುದು. ಆದರೆ ಈ ವಿಷಯ ಕುರಿತು ಮುಂದೆ ಎಲ್ಲೂ ಯಾವ ಉಲ್ಲೇಖ ಕೂಡ ಸಿಗುವುದಿಲ್ಲ, ಜೂನ್ ಮಧ್ಯದಲ್ಲಿ ಕಾಯದೇ ಆಜ಼ಮ್‌ನು ತನಗೆ ತಾನೇ ಪಾಕಿಸ್ತಾನದ ಗವರ್ನರ್ ಜನರಲ್‌ನೆಂದು ಘೋಷಿಸಿಕೊಂಡರು. ಆದರೆ ಮಾನಹಾನಿಯಾಗುತ್ತದೆಂಬ ಕಾರಣದಿಂದ ಮುಸ್ಲಿಂ ಲೀಗ್‌ನ ಮಂತ್ರಿಗಳನ್ನು ಕೇಂದ್ರ ಮಂತ್ರಿಮಂಡಳದಿಂದ ತೆಗೆದುಹಾಕಲಿಲ್ಲ, ಅದೇ ವಕ್ರತೆ ನಡೆಯುತ್ತಿತ್ತು, ಪಂಜಾಬ್ ಸುಡುತ್ತಿತ್ತು, ಬಿಹಾರ, ಬಂಗಾಳ ಆತಂಕಿತರಾಗಿ ನಡುಗುತ್ತಿದ್ದರು. ಬಾಪೂಜಿ ಮತ್ತೆ – ಮತ್ತೆ ಪಂಜಾಬ್‌ಗೆ ಹೋಗಬೇಕೆಂದುಕೊಂಡರು. ಆದರೆ ನೆಹರೂಜಿ – 'ಈಗಲೇ ಬೇಡ. ಸ್ಥಿತಿ ಇನ್ನೂ ಹದಗೆಟ್ಟಿಲ್ಲ' ಎಂದು ಬರೆದರು. ಪಂಜಾಬನ್ನು ಉಳಿಸುವ ಸ್ಥಿತಿಯಲ್ಲಿದ್ದ ಆ ಒಬ್ಬ ವ್ಯಕ್ತಿಯನ್ನು ಆತನ ಆತ್ಮೀಯ ಮಿತ್ರರೇ ತಡೆದಿದ್ದರೆಂಬುದು ನಿಜವಾಗಿಯೂ ವಿಡಂಬನೆಯೇ.

ಕಾಶ್ಮೀರದ ಮಹಾರಾಜ ಹರಿಸಿಂಹನ ಮುಖ್ಯಮಂತ್ರಿ ಪಂಡಿತ ಕಾಕ್ ಜುಲೈ ಕೊನೆಯಲ್ಲಿ ಬಹಳ ಕೋಪಗೊಂಡು, ಚರ್ಚೆ ನಡೆಸಿದ ನಂತರ ಬಾಪೂಜಿಗೆ ಜಮ್ಮು–ಕಾಶ್ಮೀರಕ್ಕೆ ಹೋಗಲು ಅನುಮತಿ ನೀಡಿದರು. ಪಂಡಿತ ನೆಹರೂ ಕಾಶ್ಮೀರದ ವಿಷಯಕ್ಕೆ ತಲೆ ಹಾಕುವುದು ಮಹಾರಾಜನಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಶೇಕಡಾ ೮೦ರಷ್ಟು ಮುಸ್ಲಿಂ ಜನಸಂಖ್ಯೆ ಇರುವಾಗ ಹಿಂದೂ ಮಹಾರಾಜ ತನಗಿಷ್ಟ ಬಂದ

ಹಾಗೆ ವ್ಯವಹರಿಸುತ್ತಿದ್ದ ಮತ್ತು ಕಾಶ್ಮೀರದ ರಮಣೀಯವಾದ ಕಣಿವೆಗಳನ್ನು ರಾಷ್ಟ್ರೀಯತೆಯ ಗಾಳಿ ತಗುಲದಂತೆ ಉಳಿಸಲು ಪ್ರಯತ್ನಿಸುತ್ತಿದ್ದ. ಈ ಸ್ವಾತಂತ್ರ್ಯದ ಧ್ವನಿ ಕಾಶ್ಮೀರದ ನಿವಾಸಿಗಳಿಗೂ ಹರಡದಿರಲಿ ಎಂದು ಎಚ್ಚರ ವಹಿಸುತ್ತಿದ್ದ. ಬಾಪೂಜಿ ಶ್ರೀನಗರದಲ್ಲಿ ಎರಡು ದಿನಗಳಿದ್ದರು. ಆಗಸ್ಟ್ ೧ರಂದು ಶ್ರೀನಗರದಲ್ಲಿ ಬೆಳಕು ಪ್ರಜ್ವಲವಾಗಿತ್ತು, ಹಬ್ಬ ಆಚರಿಸುತ್ತಿದ್ದರು. ಬಾಪೂ ಇದಕ್ಕೆ ಕಾರಣವೇನೆಂದು ಕೇಳಿದರು, ಆಗ ತಿಳಿದಿದ್ದೇನೆಂದರೆ ಗಿಲ್‌ಗಿಟ್‌ನಲ್ಲಿ ರಾಜ್ಯವನ್ನು ಇಲ್ಲಿಯವರೆಗೂ ಗವರ್ನರ್ ಜನರಲ್ ನಡೆಸುತ್ತಿದ್ದರು, ಇವತ್ತಿನಿಂದ ಗಿಲಗಿಟ್‌ನ್ನು ಕಾಶ್ಮೀರದ ಆಡಳಿತಕ್ಕೆ ಒಳಪಡಿಸಲಾಗಿದೆ. ಅದಕ್ಕೆ ಬಾಪೂಜಿ ಹೇಳಿದರು, 'ಇದು ತಪ್ಪಾಗುತ್ತಿದೆ, ಈ ಸಂದರ್ಭದಲ್ಲಿ ಗಿಲ್‌ಗಿಟ್‌ಗೆ ಸ್ವಶಾಸಿತನಾಗುವ ಅಧಿಕಾರದ ಘೋಷಣೆಯಾಗಬೇಕು. ನೂರಕ್ಕೆ ನೂರ ಮುಸ್ಲಿಂರಿರುವ ಗಿಲಗಿಟ್‌ನಲ್ಲಿ ಇಂಗ್ಲಿಷ್‌ರ ಆಡಳಿತ ವ್ಯವಸ್ಥೆಯಲ್ಲಿ ಒಡೆಯುವ ಪ್ರವೃತ್ತಿಯನ್ನು ಉತ್ತೇಜಿಸಿದ್ದರು. ಅದೇ ಸಮಯಕ್ಕೆ ಜುಲೈ ೧೯೪೭ರಲ್ಲೇ ಬಾಪೂಜಿ ಹೀಗೆ ಜನರನ್ನು ಕೇಳದೆ ಏಕಪಕ್ಷೀಯವಾಗಿ ಗಿಲಗಿಟ್‌ನ್ನು ಕಾಶ್ಮೀರ ರಾಜ್ಯದಲ್ಲಿ ಸೇರಿಸುವುದು ಭವಿಷ್ಯದ ದುರ್ದಶೆಗೆ ನಾಂದಿ ಹಾಡಿದಂತೆ ಎಂದು ಅರ್ಥಮಾಡಿಕೊಂಡಿದ್ದರು. ಇಂಗ್ಲಿಷ್ ಶಾಸನ, ಅದಾದ ನಂತರ ಹಿಂದೂ ರಾಜನ ಆಧಿಪತ್ಯವನ್ನ ಗಿಲಗಿಟ್ ಹೇಗೆ ಒಪ್ಪಿಕೊಳ್ಳಲು ಸಾಧ್ಯವಿತ್ತು? ಶ್ರೀನಗರದಲ್ಲಿ ಮಹಾರಾಜ ಹರಿಸಿಂಹ ಮತ್ತು ಮಹಾರಾಣಿ ಇಬ್ಬರೂ ಬಾಪೂಜಿಗೆ ಆದರ–ಸತ್ಕಾರ ನೀಡಿದರು. ಪ್ಲಾಸ್ಟರ್ ಹಾಕಿಕೊಂಡ ಕಾಲಿನಲ್ಲೇ ಯುವರಾಜ ಕರ್ಣಸಿಂಹ ಕೂಡ ಅಲ್ಲಿ ಇದ್ದರು. ಶ್ರೀ ನಗರದಿಂದ ಬಾಪೂ ಜಮ್ಮೂಗೆ ಹೋದರು, ಅಲ್ಲಿಂದ ಅವರು ರಾವಲಪಿಂಡಿಗೆ ಹೋದರು, ಮಧ್ಯದಲ್ಲಿ ಅವರು ನಿರಾಶ್ರಿತರ ಕ್ಯಾಂಪಿಗೂ ಹೋದರು. ಅಲ್ಲೂ ೬೦೦೦ ನಿರಾಶ್ರಿತರು ಇದ್ದರು, ಎಲ್ಲರೂ ಹೆದರಿಕೆಯಿಂದ ನಡುಗುತ್ತಿದ್ದರು. ಕಸ್ತೂರಬಾ ಟ್ರಸ್ಟ್‌ನ ಸೇವಿಕೆಯರು ನಿರಾಶ್ರಿತರಿಗಾಗಿ ಒಳ್ಳೆಯ ಕೆಲಸ ಮಾಡುತ್ತಿದ್ದರು. ಅಲ್ಲಿಂದ ಬಾಪೂಜಿ ಪಂಜಾಸಾಹಬ್ ಗುರುದ್ವಾರಾಗೆ ದರ್ಶನ ಪಡೆಯಲು ಹೋದರು, ಅವರು ಸಿಖ್ಖರಿಗೆ ಹೇಳಿದರು, 'ನೀವಂತೂ ಪರಾಕ್ರಮಿಗಳಾದ ವೀರ ಜಾತಿಯವರು. ಅಸಹಾಯಕರಾದ ಜನರು, ಮಹಿಳೆಯರು ಹಾಗೂ ಮಕ್ಕಳ ಮೇಲೆ ಆಕ್ರಮಣ ಮಾಡುವುದು ನಿಮಗೆ ಶೋಭಿಸುವುದಿಲ್ಲ. ಮುಸಲ್ಮಾನರ ಕೃತ್ಯವನ್ನು 'ಕಯಾಮತ್' ನಿರ್ಣಯಿಸುತ್ತದೆ, ನಾವು ನಮ್ಮ ಕರ್ತವ್ಯ ಮಾಡೋಣ, ಧರ್ಮವನ್ನು ರಕ್ಷಿಸೋಣ. ಆದರೆ ಹಿಂಸೆಯಿಂದ ಧರ್ಮ ಹಾಳಾಗುತ್ತದೆ.' ಅಲ್ಲಿ ಶಿಬಿರದ ನಿರಾಶ್ರಿತರು ಬಹಳ ಹೆದರಿದ್ದರು, ನಿರಾಶ್ರಿತರು ಧೈರ್ಯವಾಗಿರಲಿ ಎಂದು ಬಾಪೂಜಿ ಆ ಶಿಬಿರದಲ್ಲಿ ಡಾ॥ ಸುಶೀಲಾ ನಯ್ಯರ್‌ನ್ನು ಇರಿಸಿ ಹೇಳಿದರು: 'ಈಕೆ ನನ್ನ ಮಗಳು, ನಿಮಗೇನಾದರೂ ಕೆಡುಕು ಆಗುವುದಕ್ಕೆ ಮೊದಲು ಈಕೆ ಸಾಯುತ್ತಾಳೆ' ಎಂದರು. ನಿರಾಶ್ರಿತರುಗಳಿಗೆ ಸಂತೋಷವಾಯಿತು. ಆದರೆ ಬಾಪೂಜಿ ಅವರಿಗೆ ಹೇಳಿದರು,

'ಸಾವು ಬರುವುದಕ್ಕೆ ಮುಂಚೆ ಸಾಯಬಾರದು.ಒಂದಲ್ಲ ಒಂದು ದಿನ ಸಾಯಲೇಬೇಕು, ಮುಸಲ್ಮಾನರು ಕೂಡ ನಮ್ಮ ಸೋದರರೇ.' ರಾವಲಪಿಂಡಿಯಿಂದ ಬಾಪೂಜಿ ಲಾಹೋರಿನಲ್ಲಿ ರಾಮೇಶ್ವರಿ ನೆಹರೂ ಮನೆಯಲ್ಲಿದ್ದರು. ಅವರು ಕಾಶ್ಮೀರಕ್ಕೆ ಹೋಗುತ್ತಿದ್ದಾಗ ಪಂಜಾಬಿನಲ್ಲಿ ಎಷ್ಟೋ ಸ್ಟೇಷನ್‌ಗಳಲ್ಲಿ ಕಪ್ಪು ಬಾವುಟ ಹಿಡಿದು 'ಗೋ ಬ್ಯಾಕ್ ಗಾಂಧಿ' ಎಂದು ಘೋಷಣೆಗಳನ್ನು ಕೂಗಿದರು. ಅವರು ಹಿಂದಿರುಗಿದಾಗ ಪ್ರತಿಯೊಂದು ಸ್ಟೇಷನ್‌ನಲ್ಲೂ ಹರ್ಷನಾದ ಇರುತ್ತಿತ್ತು. ಪ್ರತಿಯೊಂದು ಸ್ಟೇಷನ್‌ನಲ್ಲೂ ಜನರ ದೊಡ್ಡ ಗುಂಪು ಸೇರಿರುತ್ತಿತ್ತು. ಇದು ಅಹಿಂಸಾತ್ಮಕ ಪರಾಕ್ರಮದ ಚಮತ್ಕಾರವಾಗಿತ್ತು. ಶ್ರೀನಗರ ಮತ್ತು ಜಮ್ಮೂನಿಂದ ಬಾಪೂಜಿಯ ಸಂದೇಶ ವಿದ್ಯುತ್ ವೇಗದಲ್ಲಿ ಪಂಜಾಬಿನಲ್ಲಿ ಎಲ್ಲಕಡೆಯೂ ಹರಡಿತು. ಇದರಿಂದ ಜನರಲ್ಲಿ ಧೈರ್ಯ ಮತ್ತು ಉತ್ಸಾಹ ಉಂಟಾಗಿತ್ತು, ಕೆಲವು ಯುವಕರು ಬಾಪೂಜಿಯವರಲ್ಲಿ ಕ್ಷಮೆ ಕೂಡ ಯಾಚಿಸಿದರು, 'ನಮ್ಮ ಅಸಭ್ಯತೆಗಾಗಿ ನಮ್ಮನ್ನು ಕ್ಷಮಿಸಿ, ನಾವು ದೊಡ್ಡ ತಪ್ಪು ಮಾಡಿದ್ದೇವೆ, ನಾವು ಅಜ್ಞಾನಿಗಳು, ನಮ್ಮ ಜಿಲ್ಲೆಯಲ್ಲಿ ನೀವು ನಾಲ್ಕು ದಿನ ಭೇಟಿ ಮಾಡಿದ್ದರಿಂದ ನಮ್ಮ ಪ್ರಾಂತದ ದೂಷಿತ ವಾತಾವರಣ ಬದಲಾಯಿಸಿದೆ, ನಮ್ಮನ್ನು ಕ್ಷಮಿಸಿ' ಎಂದರು.

ಜಮ್ಮುವಿನಿಂದ ಬಾಪೂಜಿ ಟ್ರೈನ್‌ನಲ್ಲಿ ಕುಳಿತರು. ರಾತ್ರಿ ಧಾರಾಕಾರ ಮಳೆಯಾಯಿತು, ಬಾಪೂಜಿಯವರ ಬೋಗಿ ಮುರಿದಿತ್ತು, ಅಲ್ಲಿ ಸೋರತೊಡಗಿತು, ಕಂಪಾರ್ಟ್‌ಮೆಂಟ್‌ನಲ್ಲಿ ನೀರು ತುಂಬಿಕೊಂಡಿತು. ಬಾಪೂಜಿ ಬೇರೆಯ ಒಳ್ಳೆಯ ಬೋಗಿಯಲ್ಲಿ ಹೋಗಿ ಕುಳಿತುಕೊಳ್ಳಲಿ ಎಂದು ಟ್ರೈನ್‌ನ ಗಾರ್ಡ್ ಬಯಸಿದ, ಆದರೆ ಬಾಪೂಜಿ, 'ಆಮೇಲೆ ಈ ಬೋಗಿ ಏನಾಗುತ್ತದೆ?' ಎಂದು ಕೇಳಿದರು. ಅದಕ್ಕೆ ಗಾರ್ಡನು 'ಬೇರೆಯ ಯಾತ್ರಿಕರಿಗೆ ಕೊಡುತ್ತೇನೆ' ಎಂದ. ಅದಕ್ಕೆ ಬಾಪೂಜಿ ಆತನಿಗೆ ಹೇಳಿದರು, 'ಅವರು ಈ ಸೋರುವ ಬೋಗಿಯಲ್ಲಿ ಕುಳಿತುಕೊಳ್ಳುವದಾದರೆ ನಾನು ಕೂಡ ಇಲ್ಲಿ ಕುಳಿತುಕೊಳ್ಳುತ್ತೇನೆ, ಅವರಿಗೆ ಕಷ್ಟಕೊಟ್ಟು ನಾನು ಹೇಗೆ ಆರಾಮವನ್ನು ಅನುಭವಿಸಲು ಸಾಧ್ಯ?' ಎಂದರು. ಗಾರ್ಡ್ ಭಾವಾವೇಶದಿಂದ ಹೇಳಿದ: 'ನಾನು ಮಾಡಬಹುದಾದ ಮತ್ತೇನಾದರೂ ಸೇವೆ ಇದ್ದಲ್ಲಿ ತಿಳಿಸಿ.' ಬಾಪೂಜಿ ಅವನಿಗೆ ಹೇಳಿದರು: 'ಯಾತ್ರಿಕರಿಗೆ ತೊಂದರೆ ಕೊಡಬೇಡ ಮತ್ತು ಲಂಚ ತೆಗೆದುಕೊಳ್ಳಲಿಲ್ಲವೆಂದರೆ ಅದೇ ಅತಿ ದೊಡ್ಡ ಸೇವೆ.'

ಆಗಸ್ಟ್ ೮ರಂದು ಬಾಪೂಜಿ ಲಾಹೋರಿನಿಂದ ನೇರವಾಗಿ ಪಟನಾ ತಲಪಿದರು, ದಿನವಿಡೀ ಅಲ್ಲೇ ಇದ್ದು ಆಗಸ್ಟ್ ೯ರಂದು ಕಲ್ಕತ್ತಾಗೆ ಹೋದರು. ಅವರಿಗೆ ನೋವಾಖಲಿಯ ಜನರ ಚಿಂತೆ ಕಾಡುತ್ತಿತ್ತು, ಆಗಸ್ಟ್ ೧೫ಕ್ಕೆ ಮೊದಲು ಅವರು ನೋವಾಖಲಿಯ ಜನರ ಬಳಿ ತಲುಪಬೇಕು ಎಂದು ಅವರಿಗೆ ಅನಿಸಿತ್ತು. ಪಟನಾದಲ್ಲಿ ಬಿಹಾರಿನ ನಿವಾಸಿಗಳಿಗೆ ಬಾಪೂಜಿ 'ಚರಖಾ ಮರೆಯಬೇಡಿ, ಚರಖಾದಿಂದಲೇ

ಬಿಹಾರ ರಚಿತವಾಗಿದೆ, ಆ ಸಿದ್ಧಿಯನ್ನ ಜೋಪಾನ ಮಾಡಿಸಿಕೊಳ್ಳಿ, ಹಾಗಿಲ್ಲದಿದ್ದರೆ ಬಿಹಾರ ಕೊಚ್ಚಿಕೊಂಡು ಹೋಗುತ್ತದೆ' ಎಂದು ಹೇಳಿದರು.

ಪಟನಾ ಪ್ರಾರ್ಥನಾ ಸಭೆಯಿಂದ ಬಾಪೂಜಿ ನೇರವಾಗಿ ಸ್ಟೇಷನ್ನಿಗೆ ಹೋದರು. ಕಲ್ಕತ್ತೆಗೆ ಹೋಗುತ್ತಿದ್ದಾಗ ಮಾರ್ಗದ ಸ್ಟೇಷನ್‌ಗಳಲ್ಲಿ ಬಿಹಾರಿನ ಮುಂದಾಳುಗಳು ಅವರ ಬೋಗಿಯ ಗಾಜನ್ನೇ ಒಡೆದು ಹಾಕಿದರು, ಬಾಪೂಜಿ ಅವರ ಬೆರಳುಗಳನ್ನು ತನ್ನ ಕೈಯಿಂದ ಮುಟ್ಟಿದರು, ಆಗ ಜನ ಇನ್ನೂ ಉನ್ಮತ್ತರಾಗಿ ಮಹಾತ್ಮರ ಪವಿತ್ರ ಸ್ಪರ್ಶಕ್ಕಾಗಿ ನುಗ್ಗಿದರು. ಗುಂಪು ಹಿಡಿತದಲ್ಲಿರಲಿಲ್ಲ, ಆಗ ಬಾಪೂಜಿ ಜೊತೆ ಮನು ಬಹನ್ ಮತ್ತು ಆಭಾ ಬಹನ್ ಇಬ್ಬರೂ ಇದ್ದರು. ಅವರು ರಾಮಧುನ್ ಆರಂಭಿಸಿದರು. ರಾಮನಾಮದ ಅಲೌಕಿಕ ಚಮತ್ಕಾರ ಉನ್ಮಾದವನ್ನು ಶಾಂತಿಗೊಳಿಸಿ ವಿವೇಕ ಮತ್ತು ತಾಳ್ಮೆಯನ್ನು ಜಾಗೃತಗೊಳಿಸಿತು. ಸಾವಿರಾರು ಮಂದಿ ಉತ್ಸಾಹದಿಂದ ತುಂಬಿದ್ದ ಗುಂಪಿನಲ್ಲಿ ಜನ ತಮ್ಮ ಜಾಗದಲ್ಲಿ ಸ್ಥಿರವಾಗಿ ನಿಂತು ತಾಳಬದ್ಧವಾಗಿ ರಾಮಧುನ್ ಹಾಡತೊಡಗಿದರು. ಗಲಾಟೆ, ಅವ್ಯವಸ್ಥೆ, ಅರಾಜಕತೆಯ ಅಲೆಗಳು ತಣ್ಣಗಾದವು, ಈ ಶಾಂತರಸದ ಪವಿತ್ರತೆ ವಾತಾವರಣವನ್ನು ಸುವಾಸಿತಗೊಳಿಸಿತು.

* * * *

# ೩೨. ಕಲ್ಕತ್ತೆಯ ಚಮತ್ಕಾರ

ಜೂನ್ ತಿಂಗಳಲ್ಲೇ ಬಾಪೂಜಿ ಹೃದಯ ಒದ್ದಾಡುತ್ತಿತ್ತು, ಅವರನ್ನು ಬಿಹಾರ ಕರೆಯುತ್ತಿತ್ತು. ಪಂಜಾಬ್ ಕೂಡ ಕರೆಯುತ್ತಿತ್ತು, ಆದರೆ ದೆಹಲಿ ಅವರನ್ನ ಬಿಡುತ್ತಿರಲಿಲ್ಲ. ದೆಹಲಿಯಿಂದ ದೂರ ವಿಪತ್ತಿನಲ್ಲಿ ಸಿಲುಕಿರುವ ಅಸಹಾಯಕರಾದ ಜನರ ಬಳಿ ತಲುಪುವುದು ಆವಶ್ಯಕವಾಗಿದೆಯೆಂದು ಅವರ ಹೃದಯ ಹೇಳುತ್ತಿತ್ತು, ಆದರೆ ದೆಹಲಿಯ ಜಗಳಗಳಲ್ಲಿ ಅವರೇ ಮುಂದಾಳುಗಳಾಗಿದ್ದರು; ಮತ್ತೆ ಮಧ್ಯೆ-ಮಧ್ಯೆ ಸ್ಥಿತಿಯನ್ನೂ ಹತೋಟಿಗೆ ತರುವುದಕ್ಕೂ ಪ್ರಯತ್ನಿಸುತ್ತಿದ್ದರು, ಅವುಗಳನ್ನು ಸರಿಪಡಿಸುತ್ತಲೂ ಇದ್ದರು. ದೆಹಲಿಯ ಶ್ರೀಮಂತರಿಗೆ ಈಗ ನನ್ನ ಆವಶ್ಯಕತೆ ಇಲ್ಲವೆಂದು ಕೂಡ ಬಾಪೂಜಿಗೆ ಕೆಲವು ಸಾರಿ ಅನಿಸುತ್ತಿತ್ತು. ಇದೇ ಸಂದರ್ಭದಲ್ಲಿ ಅವರು ಸರದಾರರಿಗೆ, 'ಇನ್ನು "ಹರಿಜನ"ದಲ್ಲಿ ಬರೆಯುವುದರ ಪ್ರಯೋಜನವೇನು? ಬರೆದರೆ ಅದನ್ನ ಟೀಕಿಸುತ್ತಾರೆ, ನಿಮಗಳಿಗೆ ಕಷ್ಟವಾದರೆ ನಾನು ಹರಿಜನವನ್ನ ಮುಚ್ಚಿ ಬಿಡಲೇನು?' ಎಂದು ಕೇಳಿದರು. ಆದರೆ ಅವರುಗಳು 'ಹರಿಜನ' ನಿಲ್ಲಿಸಬೇಡಿರೆಂದು ತೀವ್ರವಾಗಿ ವಿರೋಧಿಸಿದರು. ಈ ಮನಃಸ್ಥಿತಿಯಲ್ಲೇ ಬಾಪೂಜಿ ೯ ಆಗಸ್ಟ್ ೧೯೪೭ರಂದು ಕಲ್ಕತ್ತಾ ತಲಪಿದರು, ಶೋಧಪುರ ಪ್ರತಿಷ್ಠಾನದಲ್ಲಿದ್ದರು. ೩ ಜುಲೈ ೧೯೪೭ಕ್ಕೆ ಬಂಗಾಳ ವಿಭಜನೆ ಆಗಿತ್ತು. ಕಾಂಗ್ರೆಸ್ ಮುಖ್ಯಮಂತ್ರಿ ಡಾ॥ ಪ್ರಫುಲ್ಲಚಂದ್ರ ಸೇನ್ ಬಾಪೂಜಿಯವರನ್ನು ಭೇಟಿಯಾಗಲು ಬಂದರು, ಕಲ್ಕತ್ತಾ ಬಹಳ ದುಃಸ್ಥಿತಿಯಲ್ಲಿತ್ತು, ವಾಸ್ತವವಾಗಿ ೧೫ ಆಗಸ್ಟ್ ೧೯೪೬ಕ್ಕೆ 'ಡೈರೆಕ್ಟ್ ಆ್ಯಕ್ಷನ್' ಆದ ನಂತರ ಕಲ್ಕತ್ತಾ ಎಂದೂ ಶಾಂತವಾಗಿರಲಿಲ್ಲ, ಸಾಂಪ್ರದಾಯಿಕ ಉದ್ವೇಗ ಇದ್ದೇ ಇತ್ತು. ಬೆಳಗಿನ ಹೊತ್ತಿನಲ್ಲೇ ಲೂಟಿ-ಕೊಲೆ, ಚೂರಿ ಹಾಕುವುದು ನಡೆಯುತ್ತಿತ್ತು. ಎಷ್ಟೋ ಮೊಹಲ್ಲಾಗಳಲ್ಲಿ ಬೆಳಗಿನ ಹೊತ್ತಿನಲ್ಲೂ ಹಿಂದೂಗಳು ಹೋಗುವುದಕ್ಕೆ ಆಗುತ್ತಿರಲಿಲ್ಲ, ಹೋದರೆ ಲೂಟಿ-ಏಟು, ಕತ್ತರಿಸಿ ಕೂಡ ಹಾಕುತ್ತಿದ್ದರು. ೧೦ ಆಗಸ್ಟ್ ಮುಸಲ್ಮಾನರ ಒಂದು ಪ್ರತಿನಿಧಿ ಮಂಡಳ ಬಾಪೂಜಿಯನ್ನು ಭೇಟಿಯಾಗಲು ಬಂದರು. ಲೀಗ್ ಅಧ್ಯಕ್ಷ ಮೊಹಮ್ಮದ್ ಉಸ್ಮಾನ್ ಈ ಮಂಡಳದ ಮುಖಂಡರಾಗಿದ್ದವರು. ಆತ, 'ಕಲ್ಕತ್ತಾ ಇನ್ನೂ ಅಶಾಂತವಾಗಿದೆ, ನೀವು ಎರಡು ದಿನ ಇಲ್ಲಿರಿ, ನೋವಾಖಲಿಯ ಹಿಂದೂಗಳಿಗೆ ನಿಮ್ಮ ಅಗತ್ಯವಿದೆಯಾದರೂ ಕಲ್ಕತ್ತಾದ ಮುಸಲ್ಮಾನರಿಗೂ ನಿಮ್ಮ ಅಗತ್ಯವಿದೆ, ಎರಡೇ ದಿನಗಳಾದರೂ ಸರಿ,

ಇದ್ದುಬಿಡಿ.' ಸಾಮಾನ್ಯ ಮುಸಲ್ಮಾನರ ಸ್ಥಿತಿಯೂ ಕೆಟ್ಟದಾಗಿತ್ತು, ಅವರ ಗೂಂಡಾಗಿರಿಗೆ ಮರುತ್ತರ ಕೊಡಲು ಹಿಂದೂ ಮಹಾಸಭೆ ಸಿದ್ಧತೆ ಮಾಡಿಕೊಳ್ಳುತ್ತಿತ್ತು, ಮುಸಲ್ಮಾನ ದಂಗೆಕೋರರು ಈಗ ಅವರನ್ನು ಕಂಡು ಹೆದರತೊಡಗಿದ್ದರು. ಬಾಪೂಜಿ ತನ್ನ ಪ್ರಾರ್ಥನಾ ಸಭೆಯಲ್ಲಿ, 'ಹಿಂದೂ–ಮುಸಲ್ಮಾನರು ಒಟ್ಟಿಗೆ ಇರದೆ ಹೋದಲ್ಲಿ ವಿನಾಶವಾಗುತ್ತದೆ' ಎಂದು ತಿಳಿಸಿ ಹೇಳಿದರು.

ಬಾಪೂಜಿ ಲೀಗ್ ಮುಖಂಡ ಮೊಹಮ್ಮದ್ ಉಸ್ಮಾನ್‌ಗೆ ಹೇಳಿದರು, 'ನಾನು ಕಲ್ಕತ್ತೆಯಲ್ಲಿ ಇರುವುದಕ್ಕೆ ಸಿದ್ಧ, ಆದರೆ ನೀವು ನೋವಾಖಲಿಯಲ್ಲಿ ಹಿಂದೂಗಳು ಸುರಕ್ಷಿತವಾಗಿರುತ್ತಾರೆಂದು ಆಶ್ವಾಸನೆ ನೀಡಬೇಕು' ಎಂದರು. 'ಆಗಸ್ಟ್ ೧೫ರಂದು ನಾನು ನೋವಾಖಲಿಯಲ್ಲಿ ಇರದೆ ಹೋದರೆ, ಅನಾಹುತ ಆಯಿತು ಅಂದರೆ ನಾನು ಪ್ರಾಣ ಬಿಟ್ಟುಬಿಡುತ್ತೇನೆ, ನಿಮ್ಮ ಬಾಗಿಲಲ್ಲಿ ಉಪವಾಸ ಮಾಡಿ ಸತ್ತುಹೋಗುತ್ತೇನೆ' ಅಂದರು.

ಮೊಹಮ್ಮದ್ ಉಸ್ಮಾನ್, ಅವರ ಜೊತೆಗಾರರು ಸ್ತಬ್ಧರಾದರು, ಜವಾಬ್ದಾರಿ ಬಹಳ ತೀವ್ರವಾದುದಾಗಿತ್ತು, ಅಪಾಯ ಹೆಚ್ಚಾಗಿತ್ತು, ಸ್ವಲ್ಪ ಹಿಂಜರಿದರು. ಆದರೆ ಕೊನೆಗೆ ನೋವಾಖಲಿಯ ಸುರಕ್ಷತೆಯ ಗ್ಯಾರಂಟಿ ನೀಡಿದರು, ಅವರು ತಮ್ಮ ಜೊತೆಗಾರರಿಗೆ (ಗೂಂಡಾಗಳಿಗೆ) ತಕ್ಷಣ ತಾರು ಕಳುಹಿಸಿದರು. ತಪ್ಪು ಆಗಿಬಿಟ್ಟಿತು ಎಂಬ ಗಾಬರಿಯಿಂದ ವಿಶೇಷ ಸಂದೇಶವಾಹಕರ ಜೊತೆ ಮಿಯ್ಞಾ ಗುಲಾಮ್ ಸಾರವಾರ್ ಮತ್ತು ಕಾಸಿಮ್ ಅಲಿಗೆ ಸಂದೇಶ ಕಳುಹಿಸಿಕೊಟ್ಟರು, ಇವರಿಬ್ಬರೇ ದಂಗೆಗಳ ಚಕ್ರವರ್ತಿಗಳಾಗಿದ್ದವರು, ಮುಸಲ್ಮಾನರು ಒತ್ತಾಯಪಡಿಸಿದರೆಂದು ಬಾಪೂಜಿ ೧೧ನೆಯ ತಾರೀಕಿಗೆ ಬದಲಾಗಿ ೧೩ನೇ ತಾರೀಕು ನೋವಾಖಲಿಗೆ ಹೋಗುವ ಕಾರ್ಯಕ್ರಮವನ್ನು ಹಾಕಿಕೊಂಡರು. ಆದರೆ ಮನುಷ್ಯ ಸೃಷ್ಟಿಕರ್ತನ ಆಟದ ಕೈ ಗೊಂಬೆಯಾಗಿರುತ್ತಾನೆ. ಚಕ್ರ ಒಂದು ಬಾರಿ ತಿರುಗಿದರೆ ಮಣ್ಣಿನ ರೂಪವೇ ಬದಲಾಯಿಸಿ ಹೋಗುತ್ತೆ, ಅಂತಹ ಪರಿಸ್ಥಿತಿಯಲ್ಲಿ ಶಹೀದ್ ಸುಹರಾವರ್ದಿ ದೆಹಲಿಯಿಂದ ಓಡುತ್ತಾ ಬಂದರು ಮತ್ತು ಶೋಧಪುರ ಆಶ್ರಮದಲ್ಲಿ, 'ಈಗಲೇ ಕಲ್ಕತ್ತೆಯಿಂದ ಹೊರಡುವುದು ತಪ್ಪಾಗುತ್ತದೆ, ಕಲ್ಕತ್ತಾ ಉರಿಯುತ್ತಿದೆ, ನೀವು ನೋವಾಖಲಿಗೆ ಹೋಗುವುದನ್ನು ತಡೆಯಿರಿ, ನಾನು ನಿಮ್ಮ ಜೊತೆ ಕೆಲಸ ಮಾಡುತ್ತೇನೆ' ಎಂದು ಬಾಪೂಜಿಗೆ ಹೇಳಿದರು. 'ನೂರಕ್ಕೆ ನೂರರಷ್ಟು ನಿಜವಾಗಿ ಶಾಂತಿ ರಚಿಸಲು ಇಷ್ಟಪಡುವಿರಾದರೆ ನಡೆಯಿರಿ, ನಾವಿಬ್ಬರೂ ಪೊಲೀಸ್ ಸಂರಕ್ಷಣೆಯನ್ನ ಬಿಟ್ಟು ದಂಗೆ ಹರಡಿರುವ ದೂರದ ವಿಭಾಗಗಳಿಗೆ ಜೊತೆಗೂಡಿ ಹೋಗೋಣ, ಜನರಿಗೆ ತಿಳಿಸಿ ಹೇಳೋಣ, ಶಹೀದ್ ಇದಕ್ಕೆ ಒಪ್ಪಿಕೊಂಡರೆ ನಾನು ನೋವಾಖಲಿಗೆ ಹೋಗುವುದಿಲ್ಲ,' ಬಹಳ ಗಂಭೀರವಾದ ಪ್ರಸ್ತಾವ ಇದಾಗಿತ್ತು. ಬಾಪೂಜಿ ಶಹೀದ್‌ಗೆ ಪುನಃ ಹೇಳಿದರು.' ಯೋಚಿಸಿ, ವಿಚಾರ ಮಾಡಿ, ನಿಮ್ಮ ವೃದ್ಧರಾದ ತಂದೆ ಮತ್ತು

ಮಗಳು ಇಬ್ಬರ ಸಲಹೆಯನ್ನೂ ತೆಗೆದುಕೊಂಡು ನನಗೆ ನಿಮ್ಮ ನಿರ್ಣಯವನ್ನು ತಿಳಿಸಿ.'

ಒಂದು ರಾತ್ರಿ ಮತ್ತು ಒಂದೂವರೆ ದಿವಸಗಳಾದ ನಂತರ ಸುಹರಾವರ್ದಿ ಬಾಪೂಜಿಯ ಪ್ರಸ್ತಾವವನ್ನು ಒಪ್ಪಿಕೊಂಡರು. ಮೂರು ತಿಂಗಳು ಹಿಂದಿನ ಸುಹರಾವರ್ದಿ ಮತ್ತು ಇಂದಿನ ಸುಹರಾವರ್ದಿ ನಡುವೆ ವ್ಯತ್ಯಾಸ ಬಂದಿತ್ತು, ಜಿನ್ನಾ ಜೊತೆ ಆತನಿಗೆ ಸರಿ ಬೀಳಲಿಲ್ಲ. ಅವರು ಬಂಗಾಳದ ರಾಜಕೀಯದಿಂದ ಸಪ್ಪಗಾಗಿದ್ದರು, ಉಗ್ರತೆ ಸ್ವಲ್ಪ ಕಡಿಮೆಯಾಗಿತ್ತು. ಈಗ 'ಮಿಸ್ಟರ್ ಗಾಂಧಿ'ಗೆ ಬದಲಾಗಿ 'ಬಾಪೂಜಿ' ಎಂದು ಕರೆಯಲಾರಂಭಿಸಿದ್ದರು. ಆಗಸ್ಟ್ ೧೩ರಂದು ಶೋಧಪುರ ಆಶ್ರಮದಿಂದ ಹೋರಾಡುವುದೆಂದು ನಿರ್ಣಯಿಸಿದ್ದರು. ೨ ಗಂಟೆ ೨೮ ನಿಮಿಷಗಳವರೆಗೂ ಶಹೀದ್ ಬರಲಿಲ್ಲ, ಬಾಪೂಜಿ ಆಗ ಸ್ವತಃ ಹೊರಟುಹೋದರು. ಬೇಲಿಯಾಘಾಟ್‌ನ ಒಂದು ಗಲೀಜಾದ ಮೊಹಲ್ಲೆಯಲ್ಲಿ ಜರ್ಜರಿತವಾದ ಒಂದು ಹಳೆಯ ಹೈದರೀ ಮಹಲ್ ಇತ್ತು. ನಾಲ್ಕು ಕಡೆಯಿಂದ ತೆರೆದ, ಮುರುಕಲು ಆ ಕೊಳಕು ಮನೆಯಲ್ಲಿ, ಹೆಸರಿಗೆ ಒಂದು ಪಾಯಖಾನೆ ಇತ್ತು, ಹೋಗಿ ಬರುವ ಜನರೆಲ್ಲಾ ಸಾರ್ವಜನಿಕವಾಗಿ ಅದನ್ನು ಉಪಯೋಗಿಸುತ್ತಿದ್ದರು. ಗಸ್ತ್ ಹೊಡೆಯುವ ಪೊಲೀಸಿನವರು ಕೂಡ ಇದನ್ನೇ ಉಪಯೋಗಿಸುತ್ತಿದ್ದರು. ಅಂತಹ ತೀವ್ರ ಕೊಳಕಿನ ಮಧ್ಯೆ ಮಳೆಯಿಂದಾಗಿ ಮಲ-ಮೂತ್ರ, ಕಚಡಾ ಎಲ್ಲವೂ ಬಚ್ಚಲಲ್ಲಿ ಬಿದ್ದಿದ್ದವು. ಆ ಕೊಳಕಿನಿಂದ ಉಳಿಯಲು ಬ್ಲೀಚಿಂಗ್ ಪೌಡರ್ ಹಾಕಲಾಗಿತ್ತು, ಅದು ಬೇರೆ ವಾಸನೆ ಹೊಡೆಯುತ್ತಿತ್ತು. ಈ ಮನೆಯಲ್ಲಿ ಬಾಪೂಜಿ ಇರುವುದಕ್ಕೆ ಒಂದು ಕೊಠಡಿ ಇತ್ತು, ಎರಡನೆಯದು ಸಾಮಾನು ಇಡುವುದಕ್ಕೆ ಜೊತೆಗಾರರಿಗಾಗಿ ಇತ್ತು, ಅತಿಥಿಗಳು ಕೂಡ ಅದರಲ್ಲೇ ಇರುತ್ತಿದ್ದರು, ಮೂರನೆಯ ಕೊಠಡಿಯಲ್ಲಿ ಕಛೇರಿಯನ್ನು ಮಾಡಲಾಗಿತ್ತು, ಇಂತಹ ಮಹತ್ವದ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಬಾಪೂಜಿ ತನ್ನ ಮಿತ್ರರು- ಜೊತೆಗಾರರಿಗೆ ರಾತ್ರಿಯೆಲ್ಲಾ ಕುಳಿತು ಪತ್ರ ಬರೆದಿದ್ದರು. ನಮ್ಮ ತಂದೆಯವರಿಗೂ ಅಂತಹದೊಂದು ಪತ್ರ ಬಂದಿತ್ತು, ಬಾಪೂಜಿ ಸರದಾರ್‌ಗೆ ಪತ್ರ ಬರೆದು, 'ನಾನು ಇಲ್ಲಿ ಕಲ್ಕತ್ತಾದಲ್ಲಿ ಸಿಲುಕಿಹಾಕಿಕೊಂಡಿದ್ದೇನೆ, ನಾನು ದೊಡ್ಡ ಅಪಾಯವನ್ನ ಕೈಗೊಂಡು ಈಗ ಮುಸ್ಲಿಂ ಮೊಹಲ್ಲಾದಲ್ಲಿ ಇರುವುದಕ್ಕೆಂದು ಹೋಗುತ್ತಿದ್ದೇನೆ, ಪರಿಣಾಮ ಏನಾಗಬಹುದೆಂದು ಭವಿಷ್ಯದಿಂದಲೇ ತಿಳಿಯಬಲ್ಲದು, ನೋಡುತ್ತಿರು ನಾನು ಬರೆಯುತ್ತಿರುತ್ತೇನೆ' ಎಂದು ತಿಳಿಸಿದರು.

ಹೈದರ್ ಮ್ಯಾನ್‌ಷನ್ ತಲಪಿದ ಮೇಲೆ ಕೆಲವರು ಉತ್ತೇಜಿತರಾದ ಯುವಕರು ಅಲ್ಲಿ ಕಿರುಚಾಡುತ್ತಿದ್ದರು, 'ನೀವು ಇಲ್ಲಿಗೇಕೆ ಬಂದಿದ್ದೀರಿ? ಹಿಂದೂಗಳು ಸಾಯುತ್ತಿದ್ದಾಗ ಬರಲಿಲ್ಲ ? ಮುಸಲ್ಮಾನರು ಅಳುತ್ತಿದ್ದಾರೆ ಅಂದಾಗ ಇಷ್ಟೊಂದು ಹಂಗಾಮ ಆಗುತ್ತಿದೆ,' ಅಂದರು. ಸ್ವಲ್ಪ ಹೊತ್ತಿನ ನಂತರ ಸುಹರಾವರ್ದಿಯ

ಕಾರು ಅಲ್ಲಿಗೆ ಬಂದಿತು, ಯುವಕರು ಆತನನ್ನು ಸುತ್ತಿಕೊಂಡರು. ಬಾಪೂಜಿ ಅವರಿಗೆ ತಿಳಿವಳಿಕೆ ಹೇಳಿ ಇಬ್ಬರನ್ನ ಒಳಕ್ಕೆ ಮಾತನಾಡಲು ಕರೆಸಿದರು, ಸ್ವಲ್ಪ ಶಾಂತಿ ನೆಲಸಿತು. ಸುಹರಾವರ್ದಿಗೆ ಒಳಗೆ ಬರಲು ಬಿಟ್ಟರು, ಬಾಪೂಜಿಯ ಲಂಡನ್ನಿನ ಮಿತ್ರ ಹೊರೇಸ್ ಅಲೆಕ್ಸಾಂಡರ್ ಬಂದರು, ಅವರನ್ನೂ ತಡೆಹಿಡಿದರು, ಆದರೆ ನಂತರ ಬರಲು ಬಿಟ್ಟರು. ಪ್ರದರ್ಶನ ಮಾಡುತ್ತಿದ್ದವರಲ್ಲಿ ಒಬ್ಬಾತ ಹೇಳಿದ, 'ಕಳೆದ ವರ್ಷ 'ಡೈರೆಕ್ಟ್ ಆ್ಯಕ್ಷನ್'ನ ಸಂದರ್ಭದಲ್ಲಿ ನೀವು ನಮ್ಮನ್ನ ಉಳಿಸುವುದಕ್ಕೆಂದು ಬಂದಿರಲಿಲ್ಲ, ಈಗ ಮುಸಲ್ಮಾನರಿಗೋಸ್ಕರ ಓಡಿ ಬಂದಿದ್ದೀರಿ. ನೀವು ಇಲ್ಲಿಂದ ಹೋಗಿ, ಇಲ್ಲಿ ನಿಮಗೇನೂ ಕೆಲಸ ಇಲ್ಲ' ಎಂದಾಗ ಬಾಪೂಜಿ ಆತನಿಗೆ ಹೇಳಿದರು, 'ಕಳೆದ ವರ್ಷ ಮುಸಲ್ಮಾನರು ಬಹಳ ತಪ್ಪು ಮಾಡಿದ್ದರು, ಆದರೆ ೧೯೪೬ಕ್ಕೆ ೧೯೪೭ರಲ್ಲಿ ಸೇಡು ತೀರಿಸಿಕೊಳ್ಳುವುದು ಸರಿಯಲ್ಲ, ನಾನು ನೋವಾಖಾಲಿಗೆ ಹೊರಟಿದ್ದೆ, ನಿಮ್ಮ ಸಂಬಂಧೀಕರೇ ಅಲ್ಲಿ ನನ್ನನ್ನ ಕರೆಯುತ್ತಿದ್ದಾರೆ, ಆದರೆ ಈಗ ನಾನು ಕಲ್ಕತ್ತೆಯಲ್ಲಿದ್ದುಕೊಂಡೇ ಅವರನ್ನ ರಕ್ಷಿಸಬೇಕಾಗುತ್ತದೆ, ಹೀಗೆ ನಾನು ಹಿಂದೂ–ಮುಸ್ಲಿಮರು ಇಬ್ಬರ ಸೇವೆಯನ್ನು ಮಾಡಬಲ್ಲೆ, ನೀವು ನನ್ನನ್ನು ವಿರೋಧಿಸಬೇಕು ಅನಿಸಿದರೆ ವಿರೋಧಿಸಿ, ಆದರೆ ಈಗ ನಾನು ಮುದುಕನಾಗಿಬಿಟ್ಟಿದ್ದೀನಿ, ಹೆಚ್ಚು ದಿನಗಳು ಉಳಿದಿಲ್ಲ, ನೀವುಗಳು ಹುಚ್ಚಾಟ ಶುರುಮಾಡಿದರೆ ನಾನು ಅದನ್ನ ನೋಡುವುದಕ್ಕೆ ಬದುಕಿರುವುದಿಲ್ಲ, ನಾನು ಇದೇ ಮಾತು ಮುಸಲ್ಮಾನರಿಗೆ ಕೂಡ ಹೇಳಿದ್ದೀನಿ, ನೋವಾಖಲಿಯಲ್ಲಿ ಪುನಃ ದಂಗೆಗಳಾದರೆ ನನ್ನ ಹೆಣ ನಿಮಗೆ ಸಿಗುತ್ತದೆ ಅಂತ ಹೇಳುವ ಹಕ್ಕು ನನಗಿದೆ. ನಾನು ಈ ಹೆಜ್ಜೆಯನ್ನ ತೆಗೆದುಕೊಂಡಿರುವುದರಿಂದ ಸುಹರಾವರ್ದಿ ಮತ್ತೆ ಮಿಯ್ಹಾ ಗುಲಾಮ್ ಸರ್‌ವರ್ ಮೇಲೆ ನೋವಾಖಲಿಯ ಜವಾಬ್ದಾರಿಯನ್ನ ಹಾಕಿದ್ದೀನಿ ಅಂತ ನೀವು ಏಕೆ ಅರ್ಥಮಾಡಿಕೊಳ್ಳುತ್ತಿಲ್ಲ ? ಇದೇನೂ ಸಾಮಾನ್ಯ ಸಿದ್ಧಿಯಲ್ಲ.'

ಆದರೆ ಆ ಯುವಕರು ಉತ್ತೇಜಿತರಾಗಿದ್ದರು. ವಿವೇಕ, ಧೈರ್ಯ, ಅಹಿಂಸೆ ಇವುಗಳ ವಿಷಯವಾಗಿ ಯೋಚಿಸುವುದಕ್ಕೆ, ಕೇಳುವುದಕ್ಕೆ ಅವರಿಗೆ ಇಷ್ಟವಿರಲಿಲ್ಲ. ಈ ಚರ್ಚೆ ರಾತ್ರಿ ಎಂಟು ಗಂಟೆವರೆಗೆ, ಐದು ಗಂಟೆಗಳ ಕಾಲ ಒಂದೇ ಸಮ ನಡೆಯುತ್ತಿತ್ತು. ಕೊನೆಯಲ್ಲಿ ಬಾಪು ಹೇಳಿದರು, 'ನಾನು ಜನ್ಮದಿಂದ ಹಿಂದೂ, ಹಿಂದೂಗಳ ಹಾಗೆ ಇರ್ತೀನೆ ಅಂತ ಹೇಳುತ್ತಿದ್ದೀನಿ, ಅದರಿಂದ ವೈಮನಸ್ಯಕ್ಕೆ ಕಾರಣವೇ ಇಲ್ಲ.' ಗುಂಪಿನ ಮೇಲೆ ಬಾಪೂಜಿಯ ಮಾತುಗಳು ಪ್ರಭಾವ ಬೀರಲಾರಂಭಿಸಿತು, ರಾತ್ರಿ ಒಂಬತ್ತು ಗಂಟೆಗೆ ಪ್ರಾರ್ಥನೆ ಮಾಡಿ ನಂತರ ಆ ದಿನ ಬಾಪೂಜಿ ಹಸಿದುಕೊಂಡೇ ಮಲಗಿಬಿಟ್ಟರು. ಆ ಹುಡುಗರ ಜೊತೆ ಚರ್ಚೆ ಮಾಡುತ್ತಿದ್ದುದರಿಂದ ಅವರ ಅಡಿಗೆಯನ್ನ ಸಿದ್ಧಪಡಿಸಲಾಗಲಿಲ್ಲ, ಜೊತೆಗೆ ಐದು ಗಂಟೆಯಾದ ಮೇಲೆ ಬಾಪೂಜಿ ಊಟ ಮಾಡುತ್ತಿರಲಿಲ್ಲ. ಮಾರನೆಯ ದಿನ

ಆಗಸ್ಟ್ ೧೪ರಂದು ಇದೇ ಕ್ರಮ ಜರುಗಿತು, ಆದರೆ ಆ ಉಗ್ರ ಯುವಕರಲ್ಲಿ ಈಗ ಹೃದಯ ಪರಿವರ್ತನೆಯ ಪ್ರಭಾವ ಸ್ಪಷ್ಟವಾಗಿ ಕಂಡುಬರುತ್ತಿತ್ತು, ಆ ಹುಡುಗರ ನಮ್ರತೆ, ತತ್ಪರತೆ ಬೇರೆ ತೆರನಾದುದಾಗಿತ್ತು. ಆ ಸಂಜೆ ಹೈದರ್ ಮ್ಯಾನ್‌ಷನ್‌ನ ಕಾಂಪೌಂಡ್‌ನಲ್ಲಿ ಪ್ರಾರ್ಥನೆಯಾಯಿತು, ೧೦,೦೦೦ ಜನ ಅದರಲ್ಲಿ ಸೇರಿದ್ದರು. ಬಾಪೂಜಿ ಹೇಳಿದರು, 'ನಾಳೆಯಿಂದ ನಾವು ಸ್ವತಂತ್ರರಾಗುತ್ತೇವೆ, ಇಂಗ್ಲಿಷರ ರಾಜ್ಯ ಕೊನೆಗೊಳ್ಳತ್ತದೆ, ನಾಳೆ ಆನಂದದ ದಿವಸವಾದರೆ ಅದು ದುಃಖದ ದಿವಸ ಕೂಡ ಆಗುತ್ತದೆ. ಇಷ್ಟು ಜನ ಮನೆ–ಮಠ ತೊರೆದು ಶರಣಾರ್ಥಿಗಳಾಗಿ ಅಲೆಯುತ್ತಿದ್ದಾರೆ, ಕಲ್ಕತ್ತೆಯ ೨೦ ಲಕ್ಷ ಹಿಂದೂಗಳು ಮುಸಲ್ಮಾನರನ್ನು ಕೊಲ್ಲಲು ಮುಂದಾಗಿದ್ದಾರೆಂದಾಗ ನಾನು ನೋವಾಖಲಿಗೆ ಮುಖ ಹೇಗೆ ತೋರಿಸಲಿ ? ಸಾಮ್ರಾಜ್ಯವಾದದ ಬೆಂಕಿ ದೇಶವನ್ನು ಸುತ್ತುವರಿಯಿತೆಂದರೆ ನಮಗೆ ಹೊಸದಾಗಿ ಹುಟ್ಟಿರುವ ಸ್ವಾತಂತ್ರ್ಯ ಉಳಿಯುವುದು ಹೇಗೆ?

ಗುಂಪು ಕೇಳಿತು, 'ಸುಹರಾವರ್ದಿ ಎಲ್ಲಿ?' ಬಾಪೂಜಿ ಆತನನ್ನ ನೋಡಿ 'ನಿಮ್ಮ ಮನಸ್ಸುಗಳಿಗೆ ಆಘಾತವಾಗದಿರಲೆಂದು ನಾನೇ ಆತನಿಗೆ ಮನೆಯಲ್ಲಿರಲು ಹೇಳಿದ್ದೇನೆ' ಎಂದರು. ಸುಹರಾವರ್ದಿ ಪ್ರಾರ್ಥನೆಯಲ್ಲಿರದಿದ್ದುದನ್ನು ನೋಡಿ ಕೆಲವು ಯುವಕರು ಹೈದರೀಮ್ಯಾನಷನ್ ಮೇಲೆ ಹಲ್ಲೆ ಮಾಡಿದರು, ಕಲ್ಲು ಮತ್ತು ಇಟ್ಟಿಗೆಗಳ ಸುರಿಮಳೆಯಾಯಿತು, ಅದರಿಂದ ತನ್ನನ್ನು ಉಳಿಸಿಕೊಳ್ಳಲು ಸುಹರಾವರ್ದಿ ಕೊಠಡಿಯ ನೆಲದ ಮೇಲೆ ಮಲಗಿಕೊಂಡರು, ಅದೇ ಸುರಕ್ಷಿತವಾಗಿದ್ದ ಜಾಗ. ಪ್ರಾರ್ಥನೆ ಮುಗಿಸಿ ಬಾಪೂಜಿ ಮನೆಗೆ ಬಂದು ಕೆಲಸವನ್ನಾರಂಭಿಸಿದರು, ಆದರೆ ಕಲ್ಲುಗಳ ಸುರಿಮಳೆ ನಡೆದೇ ಇತ್ತು, ಕಿಟಕಿಗಳ ಗಾಜು ಒಡೆದು ಹರಡಿಕೊಳ್ಳುತ್ತಿತ್ತು, ಅದು ಮತ್ತೊಂದು ಅಪಾಯವಾಗಿತ್ತು, ಸ್ವಲ್ಪ ಹೊತ್ತಿನ ನಂತರ ಬಾಪೂಜಿ ಮರದ ಬಾಗಿಲುಗಳನ್ನು ತೆರೆದರು, ಅಲ್ಲಿಂದಲೇ ಜನರನ್ನು ಸಂಬೋಧಿಸಲಾರಂಭಿಸಿದರು, ಸ್ವಲ್ಪ ಹೊತ್ತಿನಲ್ಲೇ ಎಲ್ಲಾ ಘಟನೆ ಮುಗಿಯಿತು, ಶಾಂತವಾಯಿತು. ಒಂದು ಸೂಜಿ ಬಿದ್ದಿದ್ದರೂ ಬಹುಶಃ ಕೇಳಿಸುತ್ತಿತ್ತೇನೋ. ಬಾಪೂಜಿ ಜನರಿಗೆ ಹೇಳಿದರು, 'ಸುಹರಾವರ್ದಿ ಮೇಲೆ ಹಲ್ಲೆ ಮಾಡುವುದು ಸರಿಯಲ್ಲ, ನೀವು ಬಾಪೂಜಿ ಜೊತೆ ಕೆಲಸ ಮಾಡಲು ಒಪ್ಪಿದ್ದರೆ ಸುಹರಾವರ್ದಿ ಜೊತೆಗೂ ಕೆಲಸ ಮಾಡಬೇಕಾಗುತ್ತದೆ, ಏಕೆಂದರೆ ಈಗ ಅವೆರಡೂ (ಅವರಿಬ್ಬರೂ) ಒಂದೇ, ಗುಂಪು ಕೇಳಿತು, 'ಸುಹರಾವರ್ದಿ ಎಲ್ಲಿ?' ಬಾಪೂಜಿ ಹೇಳಿದರು, 'ಆತ ರೋಜ಼ಾ ಮುರಿಯುತ್ತಿದ್ದಾನೆ.' ಯಾರೋ ಒಬ್ಬ ಕಿರುಚಿ ಹೇಳಿದ: 'ಅವನು ಅಪ್ರಾಮಾಣಿಕ.' ಬಾಪೂಜಿ ಹೇಳಿದರು, 'ಆತ ಅಪ್ರಾಮಾಣಿಕನಾಗಿದ್ದರೆ ನನ್ನ ಜೊತೆ ಸ್ಥಿರವಾಗಿ ಇರಲಾರ.' ಗುಂಪನ್ನು ಶಾಂತಗೊಳಿಸಿದ ಮೇಲೆ ಬಾಪೂಜಿ ಸುಹರಾವರ್ದಿಯನ್ನು ಕರೆದರು ಮತ್ತು ಇಬ್ಬರೂ ಒಟ್ಟಿಗೆ ಕಿಟಕಿಯ ಬಳಿ ನಿಂತುಕೊಂಡರು ಮತ್ತು ಬಾಪೂಜಿ ಆತನ

ಹೆಗಲ ಮೇಲೆ ಕೈಇಟ್ಟರು, ಸುಹರಾವರ್ದಿ ಭಾಷಣ ಮಾಡಿದರು: 'ಮಹಾತ್ಮಾಜಿ ನಮ್ಮ ಪುಣ್ಯದಿಂದ ಇಂದು ನಮ್ಮೊಟ್ಟಿಗಿದ್ದಾರೆ, ನಾವು ಕಲ್ಕತ್ತೆಯ ಜನ ಈ ಪುಣ್ಯವನ್ನು ಗೌರವಿಸಿ ಈ ರಕ್ತಪಾತವನ್ನು ನಿಲ್ಲಿಸುತ್ತೇವೆ.'

ಗುಂಪಿನಲ್ಲಿ ಮತ್ತೊಬ್ಬ ಯಾರೋ ಕೇಳಿದ, 'ಕಲ್ಕತ್ತೆಯಲ್ಲಿ' ಕತ್ಲೇ ಆಮ್ (ಎಲ್ಲರ ಕೊಲೆ)ಗೆ ನೀವು ಜವಾಬ್ದಾರನಲ್ಲವೇನು ?' ಸುಹರಾವರ್ದಿ ಉತ್ತರ ನೀಡಿದರು: 'ಹೌದು ನಾವೆಲ್ಲರೂ' ಗುಂಪಿನಿಂದ ಮತ್ತೆ ಧ್ವನಿ ಕೇಳಿಸಿತು: 'ನೀವು ನನ್ನ ಪ್ರಶ್ನೆಗೆ ಉತ್ತರ ನೀಡುವಿರಾ.'

ಸುಹರಾವರ್ದಿ ಉತ್ತರ ನೀಡಿದರು: 'ಹೌದು, ಅದಕ್ಕೆ ಜವಾಬುದಾರ ನಾನೇ,'

ಪ್ರಾಮಾಣಿಕವಾಗಿ ಹೀಗೆ ಒಪ್ಪಿಕೊಂಡದ್ದನ್ನು ಕೇಳಿ ಗುಂಪು ಪ್ರಭಾವಿತವಾಯಿತು, ಈ ಇದೇ ಸುಹರಾವರ್ದಿ ಒಮ್ಮೆ ಅಹಂಕಾರ ಮತ್ತು ಅಧಿಕಾರದಿಂದ ಬೀಗುತ್ತಿದ್ದ. ನಮ್ರತೆ, ಸಭ್ಯತೆ, ವಿನಯ ಸ್ವಲ್ಪವೂ ಇರಲಿಲ್ಲ, ಆದುದರಿಂದ ಈ ತಪ್ಪೊಪ್ಪಿಗೆ ಪ್ರಭಾವ ಬೀರಿತು. ಆ ಕ್ಷಣದಿಂದ ಜನರ ಹೃದಯದ ವೈಮನಸ್ಯ ದೂರವಾಗತೊಡಗಿತು. ಅಷ್ಟರಲ್ಲಿ ೫೦೦೦ ಹಿಂದೂ–ಮುಸ್ಲಿಮರಿಬ್ಬರೂ ಬಾಪೂಜಿಯವರನ್ನು ಭೇಟಿಯಾಗಲು ಬರುತ್ತಿದ್ದಾರೆಂದು ಸುದ್ದಿ ಬಂತು. ಕೆಲವರು ಹಿಂದೂಗಳು ತಿರಂಗಾ ಝಂಡಾ ಹಾರಿಸಲು ಪ್ರಯತ್ನಿಸುತ್ತಿದ್ದರು. ಆಗ ಕೆಲವರು ಮುಸಲ್ಮಾನರು 'ನಾವು ಸಹಾಯ ಮಾಡೋಣವೇ ?' ಎಂದು ಕೇಳಿದರು. ಸಹೋದರತ್ವದ ಈ ಒಂದು ವಾಕ್ಯದಿಂದ ಮನಸ್ಸಿನ ಕೊಳೆ ಹರಿದುಹೋಯಿತು. ಸುಹರಾವರ್ದಿ ಹೇಳಿದರು, 'ಮಹಾತ್ಮಾಜಿಯ ಚಮತ್ಕಾರ ನೋಡಿದಿರಾ, ಒಂದೇ ದಿವಸದಲ್ಲಿ ಜಾದೂ (ಇಂದ್ರಜಾಲ) ಆಯಿತು.' ರಾತ್ರಿ ಒಂಬತ್ತು ಗಂಟೆಗೆ ಸುಹರಾವರ್ದಿ ಬಾಪೂಜಿಯನ್ನು ಕೆರೆಯ ಬಳಿ ಸುತ್ತಾಡಲು ಕರೆದೊಯ್ದರು, ಹತ್ತು ಗಂಟೆಯ ನಂತರ ಇಬ್ಬರೂ ಹಿಂದಿರುಗಿದರು. ಮಾತನಾಡುತ್ತಿರುವಾಗ ಬಾಪೂಜಿ ಹೇಳಿದರು, 'ಎಷ್ಟು ಹೊತ್ತಾಗಿ ಹೋಯಿತು, ಸುತ್ತಾಟ ಬಹಳ ದುಬಾರಿಯಾಯಿತು, ಶಹೀದ್‌ಗೆ ರಾತ್ರಿಪ್ರೇಮ ಹೇಳಿದರು, 'ಸರ್, ಈಗಿನ್ನೂ ಹತ್ತುಗಂಟೆಯಾಗಿರಬಹುದು. ಬಾಪೂಜಿ ಹೇಳಿದರು: 'ನಿನಗೆ ದಿವಸಾರಂಭವಾಗುತ್ತಿದೆ. ಆದರೆ ನನಗೆ ಅರ್ಧರಾತ್ರಿ ಕಳೆದಿದೆ. ಮೂರೂವರೆ ಗಂಟೆಗೆ ಏಳುತ್ತೇನೆ. ಆ ದಿನ ರಾತ್ರಿ ಕೂಡ ಮಲಗುವ ವೇಳೆಗೆ ಹನ್ನೊಂದು ಗಂಟೆ ಆಗಿ ಹೋಗಿತ್ತು. ರಾತ್ರೆ ಇಡೀ ಜಯ–ಜಯಕಾರ ಕೇಳಿಸುತ್ತಿತ್ತು. ನಗರವೆಲ್ಲಾ ಸಂತೋಷದಿಂದ ಹುಚ್ಚೆದ್ದಿತ್ತು. ನೂರೈವತ್ತು ವರ್ಷಗಳ ಗುಲಾಮಗಿರಿ ಕೊನೆಗಂಡಿತ್ತು. ಸ್ವಾತಂತ್ರ್ಯ ಸುವರ್ಣ ಬೆಳಗು ಕಲ್ಕತ್ತೆಯ ಕ್ಷಿತಿಜವನ್ನು ಅರುಣ ಪೀತಾಭ (ಕೆಂಪು ಹಳದಿಯ ಮಿಶ್ರಿತ ಶಾಂತಿ) ವಾಗಿಸುತ್ತಿತ್ತು. ನಗರದಲ್ಲೆಲ್ಲಾ ಬಾವುಟಗಳು, ಪತಾಕೆಗಳು ಮತ್ತು ಹಸಿರು ತೋರಣದಿಂದ ಅಲಂಕೃತಗೊಂಡಿತ್ತು ಮತ್ತು ಹಾಡುತ್ತಾ ಜನ ಪ್ರಭಾತಫೇರಿ (ಬೆಳಗಿನ ಹಾಡು) ಹಾಕುತ್ತಾ ಸುತ್ತುತ್ತಿದ್ದರು. ರಾತ್ರಿ ಹೆಚ್ಚು

ಹೊತ್ತಿನವರೆಗೂ ಹಿಂದೂ–ಮುಸಲ್ಮಾನರು ಶಾಂತಿಯಿಂದ ಜೊತೆಯಾಗಿ ಸುತ್ತುತ್ತಿದ್ದರು. ನೆನ್ನೆಯವರೆಗೆ ಈ ಜನ ಬೆಳಗಿನ ಬೆಳಕಲ್ಲೂ ಒಬ್ಬರ ಮೊಹಲ್ಲೆಯಲ್ಲಿ ಇನ್ನೊಬರು ಸುತ್ತುವಂತಿರಲಿಲ್ಲ. ಬಾಪೂಜಿ ಹೇಳಿದ ಮೇಲೆ ಹೈದರ ಮ್ಯಾನ್‌ಷನ್‌ನಿಂದ ಪೊಲೀಸ್ ಪಹರೆಯನ್ನು ತೆಗೆದುಹಾಕಲಾಯಿತು ಮತ್ತು ಹಿಂದೂ–ಮುಸ್ಲಿಂ ಸ್ವಯಂಸೇವಕರು ಬಾಪೂಜಿಯವರ ಸೇವೆ ಮಾಡಲು ನಿರಂತರವಾಗಿ ಉಪಸ್ಥಿತರಾಗ ತೊಡಗಿದರು. ೧೫ರ ಆಗಸ್ಟಿನ ಸಂತೋಷದಲ್ಲಿ ಹೈದರ್ ಮ್ಯಾನ್‌ಷನ್ ಮುಸಲ್ಮಾನ ಮಾಲೀಕ ತನ್ನ ಮನೆಯ ಮೇಲ್ಗಡೆ ತಿರಂಗಾ ಝಂಡಾ ಹಾರಿಸಿದ್ದ.

ಸ್ವಾತಂತ್ರ್ಯ ದಿವಸದಂದು ಬಾಪೂಜಿ ಎರಡು ಗಂಟೆಗೇ ಎದ್ದರು. ಅಂದರೆ ನಿತ್ಯ ನಿಯಮಕ್ಕಿಂತ ಒಂದೂವರೆ ಗಂಟೆ ಮೊದಲು. ಇಂದಿಗೆ ಐದು ವರ್ಷ ಮೊದಲು ಮಹಾದೇವ ಕಾಕಾ ೧೫ ಆಗಸ್ಟ್ ೧೯೪೨ರಂದು ಆಗಾಖಾನ್ ಜೈಲಿನಲ್ಲಿ ತೀರಿಕೊಂಡಿದ್ದರು. ಅಂತಹ ದಿನಗಳಲ್ಲಿ ಬಾಪೂಜಿ ಉಪವಾಸ ಮಾಡುತ್ತಿದ್ದರು, ಮತ್ತು ಪೂರ್ತಿ ಗೀತಾಪಾಠ ಮಾಡುತ್ತಿದ್ದರು. ಇನ್ನೂ ಗೀತಪಾಠ ನಡೆಯುತ್ತಿರುವಾಗಲೇ ಹುಡುಗಿಯರು ಪ್ರಭಾತಫೇರಿಯ ರವೀಂದ್ರ ಸಂಗೀತ ಹಾಡುತ್ತಾ ಅಲ್ಲಿಗೆ ಬಂದರು, ಹಾಡು ನಿಲ್ಲಿಸಿ ಹುಡುಗಿಯರೂ ಪ್ರಾರ್ಥನೆಯಲ್ಲಿ ಸೇರಿಕೊಂಡರು, ದರ್ಶನ ಪಡೆದು ಹಿಂದಿರುಗಿದರು. ಹೀಗೆ ಬೆಳಗಾಗುವ ವೇಳೆಗೆ ಎಷ್ಟೋ ಗುಂಪುಗಳು ಮೆರವಣಿಗೆಯಲ್ಲಿ ಬಂದವು, ಸಂತೋಷದಿಂದ ಅಭಿನಂದನೆಗಳನ್ನು ಸಲ್ಲಿಸಿ ಹಿಂದಿರುಗಿದರು. ಸಾವಿರಾರು ಮಹಿಳೆಯರು–ಪುರುಷರು ಬಾಪೂಜಿಯವರ ದರ್ಶನ ಪಡೆಯಲು ಹೊರಗಡೆ ಬಂದು ಸೇರುತ್ತಿದ್ದರು, ಬಾಪೂಜಿ ಸುತ್ತಾಟಕ್ಕಾಗಿ ಹೋದಾಗ ರಸ್ತೆಯ ಎರಡು ಕಡೆಗಳಲ್ಲೂ ಜನರ ಗುಂಪು ನಿಂತಿರುತ್ತಿದ್ದರು. ಬೆಳ್ಳಂಬೆಳಗ್ಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯೂ ತಮ್ಮ ಸಂಗಡಿಗರೊಂದಿಗೆ ಬಂದರು, ಬಾಪೂಜಿ ಅವರಿಗೆ ಹೇಳಿದರು 'ಇಂದಿನಿಂದ ನೀವು ಮುಳ್ಳಿನ ಕಿರೀಟ ಧರಿಸುವಿರಿ, ನಮ್ರತೆಯಿಂದಿರಿ, ಸತ್ಯ–ಅಹಿಂಸೆಯನ್ನು ಪಾಲಿಸಿ, ಅಧಿಕಾರ ಮದದಿಂದ ದೂರವಾಗಿರಿ, ವಾಸ್ತವವಾಗಿ ಈಗ ಇದು ನಿಮಗೆ ಒರೆಗಲ್ಲು 'ಬಡವರ ಸೇವೆ ಮಾಡುವುದಕ್ಕಾಗಿ ನಿಮಗೆ ಅಧಿಕಾರ ಸಿಕ್ಕಿದೆ ಎಂಬುದನ್ನು ಮರೆಯದಿರಿ' ದೇವರು ನಿಮಗೆ ಸಹಾಯ ಮಾಡಲಿ.

ಪೂರ್ತಿ ನಗರದಲ್ಲಿ ಉತ್ಸವದೊಂದಿಗೆ ಹಿಂದೂ–ಮುಸ್ಲಿಂ ಏಕತೆಯ ಅಭೂತಪೂರ್ವ ದೃಶ್ಯ ಎಲ್ಲೆಲ್ಲೂ ಕಾಣಿಸುತ್ತಿತ್ತು. ನೆನ್ನೆಯವರೆಗೂ ಈ ಜನ ಒಬ್ಬರನ್ನೊಬ್ಬರು ಕಡಿದು ಹಾಕಲು ಸಿದ್ಧರಾಗಿದ್ದವರೆಂದು ನಂಬಿಕೆಯೇ ಬರುತ್ತಿರಲಿಲ್ಲ. ಜಯ್‌ಹಿಂದ್ ಮತ್ತು ಹಿಂದೂ–ಮುಸ್ಲಿಂ ಘೋಷಣೆಗಳಿಂದ ಕಲ್ಕತ್ತೆಯ ಆಕಾಶ ಪ್ರತಿಧ್ವನಿತವಾಗಿತ್ತು, ಹುಚ್ಚುತನ ಹೋಗಿ ಅಲ್ಲಿ ಸೌಹಾರ್ದ ನೆಲಸಿತ್ತು, ೧೫ ಆಗಸ್ಟ್‌ನಿಂದ ರಾಜಾಜಿ ಬಂಗಾಳದ ಗವರ್ನರ್ ಆಗಿ ನಿಯುಕ್ತಿಗೊಂಡಿದ್ದರು. ಆ ದಿನದ ಪ್ರಾರ್ಥನೆಗೆ

೩೦,೦೦೦ ಜನ ಬಂದಿದ್ದರು. ಬಾಪೂಜಿ ನಗರವಾಸಿಗಳ ಏಕತೆಗೆ ಅಭಿನಂದಿಸಿದರು ಮತ್ತು ಇದು ಕ್ಷಣಿಕ ಸಹೋದರ ಸಂಬಂಧವಾಗಿರುವುದಿಲ್ಲವೆಂದು ಆಶಿಸಿದರು. ಇಂತಹ ಸಂತೋಷದ ವಾತಾವರಣದಲ್ಲಿ ಲಾಹೋರ್‌ನ ಹುಚ್ಚುತನ ಮತ್ತೂ ದುಃಖಪೂರಿತವಾದುದಾಗಿತ್ತು, ಕಲ್ಕತ್ತೆಯ ಆರೋಗ್ಯಕರವಾಗಿದ್ದ ವಾತಾವರಣ ಸದಾಚಾರ ದೇಶವನ್ನು ಪ್ರಭಾವಿತಗೊಳಿಸುತ್ತದೆ. ಸ್ವಾತಂತ್ರ್ಯ ಸಿಕ್ಕಿತ್ತೆಂದ ಮೇಲೆ ಸಂಯಮದಿಂದ ವ್ಯವಹರಿಸುವುದು ಅನಿವಾರ್ಯವಾಗಿದೆ, "ಈಗ ನಾವು ದೇಶವಾಸಿಗಳು. ನಮಗೆ ನಾವೇ ಮಾಲೀಕರು. ಆದ್ದರಿಂದ ಒಬ್ಬ ಇಂಗ್ಲಿಷಿನವ, ಕ್ರಿಶ್ಚಿಯನ್, ಹಿಂದೂ, ಮುಸಲ್ಮಾನ ಯಾರ ಮೇಲೂ ದುರಾಗ್ರಹದಿಂದ ಅಧಿಕಾರ ನಡೆಸುವ ಹಾಗಿಲ್ಲ" ಎಂದರು.

ನಂತರ ಸುಹರಾವರ್ದಿ ಭಾಷಣ ಮಾಡಿದರು. 'ನಿಮ್ಮ ಜಾಗದಿಂದ ದೂರವಾಗಿ ವಿಸ್ಥಾಪಿತರಾದ ಹಿಂದೂ–ಮುಸಲ್ಮಾನರಿಬ್ಬರೂ ನಿಮ್ಮ ಮನೆಗಳಿಗೆ ಹಿಂದಿರುಗಿದಾಗ ನಿಜವಾಗಿ ಏಕತೆ ಅನಿಸಿಕೊಳ್ಳುತ್ತದೆ, ಮಹಾತ್ಮಾಜೀಯವರ ಪರಿಶ್ರಮ ಮತ್ತು ದೈವ ಕೃಪೆಯಿಂದ ಎರಡು ದಿನಗಳಲ್ಲೇ ಚಮತ್ಕಾರ ಏರ್ಪಟ್ಟಿದೆ. ಮುಸಲ್ಮಾನರು ಗಲಾಟೆ, ಬೆದರಿಕೆಯಿಂದೇನೂ ಮಾಡದೆ ನೀವು ಸಂತೋಷದಿಂದ ಜಯ್‌ಹಿಂದ್‌ನ ಘೋಷಣೆ ಕೂಗಿ' ಎಂದರು.

ರಾತ್ರಿ ಸುಹರಾವರ್ದಿ ಸ್ವತಃ ಮೋಟರುಗಾಡಿಯನ್ನ ನಡೆಸಿದರು, ಬಾಪೂಜಿಗೆ ನಗರದ ಬೆಳಕು ತೋರಿಸುವುದಕ್ಕಾಗಿ ಮೋಟಾರಿನಲ್ಲಿ ಸುತ್ತಿಸಿದರು. ಒಂದೊಂದು ಕಡೆ ಜನ ಅವರನ್ನು ಗುರುತಿಸಿದರು, ಕೈಮುಗಿದು ಅಭಿವಂದನೆ ಸಲ್ಲಿಸಿದರು. ಸ್ವಾತಂತ್ರ್ಯದ ಸಂತೋಷದಲ್ಲಿ ಪ್ರತಿದಿನಕ್ಕಿಂತ ಸ್ವಲ್ಪ ಹೆಚ್ಚು ಹೊತ್ತು ಬಾಪೂಜಿ ಚರಖಾ ತಿರುಗಿಸಿದರು. ಸುಹರಾವರ್ದಿ ಕೂಡ ಬಾಪೂಜಿ ಜೊತೆ ಉಪವಾಸ ಮಾಡಿದ್ದರು. ಶೋಧಪುರ ಆಶ್ರಮದಿಂದ ಯಾರನ್ನೂ ಅವರು ಜೊತೆಯಲ್ಲಿ ಕರೆತಂದಿರಲಿಲ್ಲ, ಅದರಿಂದ ಅವರ ಕೆಲಸವನ್ನೆಲ್ಲಾ ಮುಸಲ್ಮಾನ ಸ್ವಯಂಸೇವಕರೇ ಮಾಡುತ್ತಿದ್ದರು. ಕಲ್ಕತ್ತಾ ನಿವಾಸದ ಆ ದಿನಗಳಲ್ಲಿ ಖಿಲಾಫತ್‌ನ ಧಾರ್ಮಿಕ ಏಕತೆಯ ಸುಖಕರ ದಿನಗಳ ನೆನಪು ಬರುತ್ತಿತ್ತು, ಹಿಂದೂ–ಮುಸ್ಲಿಂ ಏಕತೆ ಒಂದೇ ದಿನದಲ್ಲಿ ನೆಲೆಗೊಂಡಿತ್ತು, ಶಹೀದ್ ಪೂರ್ತಿ ಬದಲಾಯಿಸಿದ್ದರು.

ಸ್ವಾತಂತ್ರ್ಯದ ಎರಡನೆಯ ದಿನ ಬಂತು, ಸ್ವಾತಂತ್ರ್ಯದ ಆನಂದ–ಶುಭದಲ್ಲೂ ಸಂಯಮ ಬಹಳ ಅಗತ್ಯವಾದದ್ದು. ಬಾಪೂಜಿಗೆ ಇಷ್ಟೊಂದು ಜಯ–ಜಯಕಾರ ಸಹನೆಯಾಗುತ್ತಿರಲಿಲ್ಲ, ಇದು ತಿಳಿದ ತಕ್ಷಣ ಜನ ಶಾಂತರಾದರು. ಗಾಂಧೀಜಿ ಮನೆಯ ಬಳಿ ಸಾವಿರಾರು ಜನರ ಗುಂಪು ಉಗಿದು ಬಹಳ ಕೊಳಕು ಮಾಡಿದ್ದರು. ಅದನ್ನ ದೂರ ಮಾಡುವುದಕ್ಕಾಗಿ ಬಾಪೂಜಿ ಬರಿಗಾಲಿನಲ್ಲಿ ನಡೆಯತೊಡಗಿದರು. ತಕ್ಷಣ ಅಲ್ಲಿ ಪೂರ್ತಿ ಸ್ವಚ್ಛವಾಯಿತು ಮತ್ತು ಜನ ಗಲೀಜು ಮಾಡುವುದನ್ನು

ನಿಲ್ಲಿಸಿದರು. ಆ ದಿನ ಸಂಜೆ ಪ್ರಾರ್ಥನಾ ಸಭೆಯಲ್ಲಿ ಒಂದು ಲಕ್ಷ ಮಂದಿ ಬಂದರು, ೧೮ ಆಗಸ್ಟ್ ಈದ್ ಹಬ್ಬ ಇತ್ತು, ಹಿಂದೂ ಮುಸಲ್ಮಾನರ ಜೊತೆ ಕುಳಿತುಕೊಂಡು ಮಸೀದಿಯಲ್ಲಿ ಊಟ ಮಾಡಿದರು. ಹಿಂದೂ ಪರಿವಾರಗಳಿಂದ ಊಟ ಬಂದಿತ್ತು. ಸುಹರಾವರ್ದಿಯ ಸಹೋದರಭಾವ, ನಮ್ರತೆ ನೋಡಿ ಜನ ಬಹಳ ಚಕಿತರಾಗಿದ್ದರು. ಈ ಸಹೋದರಭಾವ ನೋಡಿ ಬಾಪೂಜಿ ಮನಸ್ಸಿನಲ್ಲಿ ಒಂದು ಸಂದೇಹ ಉಂಟಾಯಿತು, ಇಷ್ಟೊಂದು ಸಹೋದರಭಾವ, ಇಷ್ಟು ಬೇಗ ಬಂದದ್ದು ಕಂಡು ವಿಷಯ ಸಂದೇಹಕ್ಕಾಸ್ಪದ ಕೊಡುತ್ತಿದೆ ಅಂತ ಅನಿಸುತ್ತಿತ್ತು. ಸಂಜೆಯ ಪ್ರಾರ್ಥನೆಯಲ್ಲಿ ಒಂದು ಲಕ್ಷ ಜನ ಬಂದಿದ್ದರು. ಖಿಲಾಫತ್ ಸಮಯದ ಮೈತ್ರಿ ಹಿಂದಿರುಗಿ ಬಂದಿದೆಯೆನಿಸುತ್ತಿತ್ತು. ದೂರದಲ್ಲಿ ಅಲ್ಲಲ್ಲಿ ಚಿಕ್ಕ–ಪುಟ್ಟ ಘಟನೆಗಳು ನಡೆದಿದ್ದವು, ಬಾಪೂಜಿ ಪ್ರಾರ್ಥನೆಯಲ್ಲಿ ಅದನ್ನು ಉಲ್ಲೇಖಿಸಿದರು, ಆಗಸ್ಟ್ ೨೦ರಂದು ನಾಲ್ಕು ಲಕ್ಷ ಜನ ಪ್ರಾರ್ಥನೆಗೆ ಹಾಜರಾದರು, ಅಲ್ಲಿ ಅವರುಗಳಿಗೆ ನಿಂತುಕೊಳ್ಳುವಷ್ಟು ಜಾಗ ಕೂಡ ಸಿಕ್ಕಿರಲಿಲ್ಲ. ಅವರುಗಳು ಮನೆಯ ಛಾವಣಿ, ಮರಗಳ ಮೇಲೆ ನಿಂತು ದರ್ಶನ ಪಡೆಯುತ್ತಿದ್ದರು. ಕಲ್ಕತ್ತಾದ ಚಮತ್ಕಾರದಿಂದ ಬಿಹಾರ ಕೂಡ ಉಳಿದುಕೊಂಡಿತು ಎಂದು ಬಿಹಾರದಿಂದ ಫೋನ್ ಬಂತು. ಈಚೆಗೆ ಬಾಪೂಜಿ ಕಲ್ಕತ್ತೆಯ ಬೇರೆ ಬೇರೆ ಮೊಹಲ್ಲೆಗಳಲ್ಲಿ ಪ್ರಾರ್ಥನೆ ಮಾಡುತ್ತಿದ್ದರು.೨೧ ಆಗಸ್ಟ್ ಪಾರ್ಕ್ ಸರ್ಕಲ್‌ನ ಪ್ರಾರ್ಥನೆಯಲ್ಲಿ ಸುಮಾರು ಏಳು ಲಕ್ಷ ಜನ ಬಂದಿದ್ದರು. ಬಾಪೂಜಿ ಹೇಳಿದರು, 'ಕಲ್ಕತ್ತಾ ಸ್ವಸ್ಥ, ಶಾಂತವಾಗಿದೆ, ಅದರಿಂದ ನಾನು ನೋವಾಖಾಲಿಗೆ ಹೋಗಬಯಸುತ್ತೇನೆ.' ಆದರೆ ಇನ್ನೂ ಕೆಲಸ ಪೂರೈಸಿರಲಿಲ್ಲ. ಶಾಂತಿ ಸಮಿತಿ ರಚಿಸಿದ ಮೇಲೆ ಜನರಿಗೆ ಪರಿಹಾರ–ಸಹಾಯ ತಲುಪಿಸಬೇಕಾದುದು ಅಗತ್ಯವಾಗಿತ್ತು, ಈ ತರಹೆಯ ಬೇರೆ ಕಾಲೋನಿಗಳಲ್ಲಿ ಪ್ರಾರ್ಥನಾ ಸಭೆಗಳು ನಡೆಯುತ್ತಿದ್ದವು, ನಡು–ನಡುವೆ ಶಹೀದ್ ರಾತ್ರಿ ಹೈದರೀ ಮ್ಯಾನ್‌ಷನ್‌ನಲ್ಲಿ ಮಲಗುತ್ತಿರಲಿಲ್ಲ. ಎಷ್ಟೋ ಜನ ಅವನ ಅವಿಶ್ವಸನೀಯತೆ ಕುರಿತು ಬಾಪೂಜಿಗೆ ಎಚ್ಚರಿಸಿದರು. ಬಾಪೂಜಿ ತಮಗೂ ಪೂರ್ತಿ ನಂಬಿಕೆ ಬಂದಿಲ್ಲವೆಂದೂ, ಆದರೆ ಮೋಸಮಾಡುವವನು ಸ್ವತಃ ಮೋಸಹೋಗುತ್ತಾನೆ. ಆದುದರಿಂದ ಯಾರ ಕುರಿತೂ ಅಶ್ರದ್ಧೆ ತೋರುವುದಿಲ್ಲ ಎಂದರು. ಶಹೀದ್ ಪುನಃ ನಿಯಮದಂತೆ ಹೈದರೀ ಮ್ಯಾನ್‌ಷನ್‌ನಲ್ಲಿ ಮಲಗತೊಡಗಿದರು. ೨೬ ಆಗಸ್ಟ್ ರಾತ್ರಿ ಹನ್ನೆರಡು ಗಂಟೆಗೆ ಎದ್ದು ಬಾಪೂಜಿ ತನ್ನ ಅಂಚೆಪತ್ರಗಳನ್ನು ಬರೆಯತೊಡಗಿದರು. ಒಂದೂವರೆ ಗಂಟೆಯವರೆಗೂ ಕೆಲಸ ಮಾಡಿದರು. ಅರ್ಧಗಂಟೆ ವಿರಾಮ ಪಡೆದು ಎರಡು ಗಂಟೆಯಿಂದ ನಾಲ್ಕು ಗಂಟೆಯವರೆವಿಗೂ ಪ್ರಾರ್ಥನೆಯ ವೇಳೆವರೆಗೂ ಬರೆಯುತ್ತಿದ್ದರು. ಯಾರಿಗೋ ಬರದೆರು, 'ನನ್ನ ಮನಸ್ಸಿಗೆ ಅಶಾಂತಿಯಾಗಿದೆ,' ಆದರೆ ಕಾರಣವೇನೆಂದು ತಿಳಿಯುತ್ತಿರಲಿಲ್ಲ. ಮಾರನೆಯ ದಿನ ಯೂನಿವರ್ಸಿಟಿಯ

ಸಾಯಿನ್ಸ್ ಕಾಲೇಜಿನಲ್ಲಿ ಪ್ರಾರ್ಥನೆ ಆಗಲಿತ್ತು, ಯಾರೋ ಬ್ಲಾಕ್‌ಬೋರ್ಡ್ ಮೇಲೆ ಸುಹರಾವರ್ದಿಯನ್ನು ಅವಮಾನಗೊಳಿಸುವಂಥ ಕೆಲವು ಮಾತುಗಳನ್ನು ಬರೆದಿದ್ದರು. ಬಾಪೂಜಿ ಆ ವಿದ್ಯಾರ್ಥಿಗಳಿಗೆ, ಅತಿಥಿಗಳಿಗೆ ಅವಮಾನ ಮಾಡುವುದು ಭಾರತೀಯ ಸಂಸ್ಕೃತಿಯಲ್ಲಿಲ್ಲ, ಸುಹರಾವರ್ದಿಗೆ ಅವಮಾನ ಮಾಡಿದರೆ ಅದು ಗಾಂಧಿಗೆ ಅವಮಾನವಾದಂತೆ, ಎರಡೂ ಒಂದೇ, ವಿದ್ಯಾರ್ಥಿ ಜೀವನದಲ್ಲಿ ಸಂಯಮ, ಅನುಶಾಸನ ಅಗತ್ಯವಾದದ್ದು' ಎಂದರು. ಇದು ಅಪಮಾನವಾದುದರಿಂದ ಬಾಪೂಜಿ ಸುಹರಾವರ್ದಿಯನ್ನು ಭಾಷಣ ಮಾಡದಂತೆ ತಡೆದರು. ಒಬ್ಬ ಕ್ರಿಶ್ಚಿಯನ್ನನು ಕೇಳಿದ, 'ಹಿಂದೂಗಳಿಗೆ ಭಾರತ, ಮುಸಲ್ಮಾನರಿಗೆ ಪಾಕಿಸ್ತಾನವಿದೆ, ಹಾಗಾದರೆ ಕ್ರಿಶ್ಚಿಯನ್ನರು ಎಲ್ಲಿಗೆ ಹೋಗಬೇಕು?' ಬಾಪೂಜಿ ಹೇಳಿದರು: 'ಈ ದೇಶ ಪೂರ್ತಿಯಾಗಿ ನಿಮ್ಮದು, ದೇಶದ ಜನರ ಜೊತೆ ಒಂದಾಗಿ, ಆಗ ಯಾವ ಕಷ್ಟವೂ ಆಗುವುದಿಲ್ಲ, ಆದರೆ ಅವರುಗಳು ಕೂಡ ದೇಶ, ಸಮಾಜ ಮತ್ತು ಸಮಯದ ಬೇಡಿಕೆಗೆ ಅನುರೂಪವಾಗಿ ಹೊಂದಿಕೊಳ್ಳಬೇಕಾದುದು ಅವಶ್ಯಕ' ಎಂದು ಹೇಳಿದರು. ಆಗಸ್ಟ್ ೧೭ರಂದು ಲಾಹೋರ್‌ನ ಭಯಾನಕ ಸ್ಥಿತಿಯನ್ನು ಕುರಿತು, 'ಲಾಹೋರ್‌ನಲ್ಲಿ ಹಿಂದೂ ಮೊಹಲ್ಲಾಗಳಲ್ಲಿ ನೀರು ನಿಲ್ಲಿಸಿ' ಗುಂಡು ಹಾರಿಸಿ ಜನರನ್ನು ಸಾಯಿಸಿದರು, ಹಿಂದೂಗಳ ಮನೆಗಳಿಗೆ ಪೊಲೀಸ್ ಮತ್ತು ಸೈನ್ಯ ಇಬ್ಬರೂ ಸೇರಿ ಬೆಂಕಿ ಹಚ್ಚಿದರು, ತನ್ನನ್ನು ಉಳಿಸಿಕೊಳ್ಳಬೇಕೆಂದು ಓಡಬಯಸಿದವರಿಗೆ ಬಂದೂಕು ಹಾರಿಸಿ ಸಾಯಿಸಲಾಯಿತು. ಲಾಹೋರಿನಲ್ಲಿ ತಾವು ಇರಬೇಕಾದುದು ಆವಶ್ಯಕವಾಗಿದೆ' ಎಂದು ಕಲ್ಕತ್ತೆಗೆ ತಾರು ಬಂದಿತು. ಆದರೆ ಜವಾಹರಲಾಲಜಿ ಪುನಃ ಬಾಪೂಜಿ ಪಂಜಾಬಿಗೆ ಹೋಗದಂತೆ ತಡೆದು ಬರೆದರು, 'ಲಾಹೋರ್‌ನ್ನು ನಾವು ಹಿಡಿತಕ್ಕೆ ತರುತ್ತೇವೆ, ನೀವು ಕಲ್ಕತ್ತಾನ ನೋಡಿ.' ೩೦ರ ಆಗಸ್ಟ್ ರಾತ್ರಿ ಪ್ಯಾರೇಲಾಲಜೀ ಮತ್ತು ಚಾರು ಮಜೂಮದಾರ್ ಬಾಪೂಜಿಯನ್ನು ಭೇಟಿಯಾಗಲು ಕಲ್ಕತ್ತಾಗೆ ಬಂದರು. ನೋವಾಖಲಿಯಲ್ಲಿ ಬೇರೆ ಸರಕಾರವಿತ್ತು, ಬೇರೆ ದೇಶ, ಅಲ್ಲಿ ಹೇಗೆ ಕೆಲಸ ಮಾಡುವುದು ಎಂಬುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಇಬ್ಬರೂ ನೋವಾಖಲಿಯಿಂದ ಕಲ್ಕತ್ತಾಗೆ ಬಂದಿದ್ದರು. ಆರು ತಿಂಗಳ ವಿಯೋಗದ ನಂತರ ಬಾಪೂಜಿಯನ್ನು ಭೇಟಿ ಮಾಡಿ ಇಬ್ಬರೂ ಭಾವನಾಪರವಶರಾಗಿದ್ದರು. ಅರವತ್ತು ವರ್ಷಗಳ ಸಾರ್ವಜನಿಕ ಜೀವನ ಬಾಪೂಜಿಯ ಅಂತಶ್ಚೈತನ್ಯವನ್ನು ತೇಜಸ್ವಿಯನ್ನಾಗಿಸಿತ್ತು, ಈ ಎಲ್ಲಾ ಸಂತೋಷ ಮತ್ತು ಬಂಧುತ್ವದ ಉಲ್ಲಾಸದ ಜೊತೆಗೆ ಬಾಪೂಜಿಯ ಹೃದಯದಲ್ಲಿ ವಿಪತ್ತಿನ ಸಂಶಯ ಏಳುತ್ತಿತ್ತು. ಅವರು ಸತರ್ಕರಾಗಿದ್ದರು. ಅವರು ಜನರನ್ನು ನಿರಂತರವಾಗಿ ಜಾಗೃತಗೊಳಿಸುತ್ತಿದ್ದರಾದರೂ ಅಜ್ಞಾತ ಭಯ ಸತ್ಯವಾಯಿತು. ಕೊನೆಗೂ ಸ್ಥಿತಿ ವಿಕರಾಳ ರೂಪ ಪಡೆದು ಹೊರಟಿತು. ಒಬ್ಬ ಗಾಯಗೊಂಡ ಯುವಕನನ್ನು ತೆಗೆದುಕೊಂಡು ಹಿಂದೂ

ಯುವಕರಿಗೆ ಚಿತ್ತಭ್ರಮೆಯಾಯಿತು, ವಾಸ್ತವವಾಗಿ ಏನೂ ಘಟಿಸಿರಲಿಲ್ಲ, ಬಿಂದುವನ್ನು ಬ್ರಹ್ಮಾಂಡವಾಗಿ ಮಾಡಿದ್ದರು ಅಷ್ಟೆ. ಆಗ ಕೂಡ ಯಾರಿಗೂ ಈ ಪ್ರಸಂಗವನ್ನು ಅರಿತವರು ಬದುಕಿಲ್ಲ ಎಂಬುದು ಯಾರಿಗೂ ತಿಳಿಯಲೇ ಇಲ್ಲ. ತಥ್ಯ ಇಷ್ಟು. ಉತ್ತೇಜಿತರಾದ ಯುವಕರು ಕಾನೂನು, ದಂಡವಿಧಿಯನ್ನು ತಮ್ಮ ಕೈಗೆತ್ತಿಕೊಂಡರು. ಹುಚ್ಚುತನಕ್ಕೆ ಯಾವುದೇ ನಿರ್ದಿಷ್ಟ ಕಾರಣಕೂಡ ಬೇಕಾಗುವುದಿಲ್ಲ, ದಿವಸದ ಬಿರುಕುಗಳಲ್ಲಿ ಮರೆಯಾಗಿದ್ದ ಹಿಂಸೆ ಕುದ್ದು ಹೊರಕ್ಕೆ ಬಂದಿತ್ತು, ಬಾಪೂಜಿಗೆ ಇದರ ಕಲ್ಪನೆ ಇತ್ತು. ರಾತ್ರಿ ಹತ್ತು ಗಂಟೆಗೆ ಬಾಪೂಜಿ ಮಲಗಿದ್ದರು, ಉದ್ರಿಕ್ತವಾಗಿದ್ದ ಗುಂಪಿನ ಗಲಾಟೆ ಕೇಳಿ ಎದ್ದು ಕುಳಿತರು. ಉಳಿದಿದ್ದ ಒಂದೆರಡು ಕಿಟಕಿಯ ಗಾಜುಗಳು ಕಲ್ಲೆಸೆತದಲ್ಲಿ ಒಡೆದು ಹರಡತೊಡಗಿದವು. ಮನೆಯ ಜನರು ಬಾಪೂಜಿಯವರ ಕೊಠಡಿಯೊಳಕ್ಕೆ ನುಗ್ಗಿಬಂದರು. ಆ ದಿನ ಬಾಪೂಜಿಯವರ ಮೌನವಿತ್ತು, ಅವರು ತನ್ನ ಮೌನವ್ರತ ಮುರಿದು ಆ ಉದ್ರಿಕ್ತವಾಗಿದ್ದ ಗುಂಪಿಗೆ, 'ಇದೆಂಥ ಹುಚ್ಚುತನ! ನನ್ನನ್ನೇಕೆ ನೀವು ಹೊಡೆಯಬಾರದು, ನಾನಿಲ್ಲಿ ನತಮಸ್ತಕನಾಗಿದ್ದೇನೆ, ನನ್ನನ್ನು ಹೊಡೆಯಿರಿ' ಎಂದರು. ಆ ಪ್ರಮಾಣದಲ್ಲಿ ಜನರು ಪ್ರಜ್ಞಾಶೂನ್ಯರಾಗಿದ್ದರು. ಗುಂಪು ಕಿರುಚಿತು, 'ಎಲ್ಲಿ, ಆ ಶಠ ಸುಹರಾವರ್ದಿ?' ಸದ್ಯ, ಆತ ತನ್ನ ಸಾಮಾನುಗಳನ್ನು ತರಲು ತನ್ನ ಮನೆಗೆ ಹೋಗಿದ್ದ. ಮಾರನೆಯ ದಿನ ಬಾಪೂಜಿ ಮತ್ತು ಶಹೀದ್ ಇಬ್ಬರೂ ನೋವಾಖಾಲಿಗೆ ಹೋಗಬೇಕೆಂದಿದ್ದರು, ಇಲ್ಲದಿದ್ದರೆ ಆ ದಿನದ ಗುಂಪು ಸುಹರಾವರ್ದಿಯನ್ನ ತುಳಿದು ಹಾಕುತ್ತಿತ್ತು. ಅಷ್ಟರಲ್ಲಿ ಹೈದರಿ ಮ್ಯಾನ್‌ಷನ್‌ನ ಮುಸಲ್ಮಾನರು ರಕ್ತಸಿಕ್ತರಾಗಿ ಬಾಪೂಜಿ ಬಳಿಗೆ ಬಂದು ನಿಂತರು. ಅವರಿಗೆ ಬಾಪೂಜಿಯ ಆಸರೆಯೊಂದೇ ಉಳಿದಿದ್ದುದು. ಇದನ್ನು ನೋಡಿದ ನಂತರವೂ ಗುಂಪಿನಿಂದ ಯಾರೋ ಒಬ್ಬನು ಇಟ್ಟಿಗೆಯನ್ನು ಬಿಸುಟ, ಬಾಪೂಜಿ ಬಳಿ ನಿಂತಿದ್ದ ಒಬ್ಬ ಸಜ್ಜನರಿಗೆ ಏಟು ತಾಗಿತು. ಅಷ್ಟರಲ್ಲಿ ಯಾರೋ ಒಬ್ಬ ದೊಡ್ಡ ದೊಣ್ಣೆಯೊಂದನ್ನು ತೆಗೆದುಕೊಂಡು ಬಾಪೂಜಿಗೆ ಹೊಡೆದ, ದೇವರ ಕೃಪೆಯಿಂದ ಗುರಿ ತಪ್ಪಿಹೋಯಿತು, ದೊಣ್ಣೆ ಏಟು ಗೋಡೆಗೆ ತಾಕಿ ಸುಳ್ಳಾಯಿತು, ಇಲ್ಲದಿದ್ದರೆ ಬಾಪೂಜಿ ಆ ದಿನ ಅಲ್ಲೇ ಮುಗಿದುಹೋಗಿರುತ್ತಿದ್ದರು. ಬಾಪೂಜಿ ಹೇಳಿದರು: 'ಇದೇನು? ಹೀಗಾಯಿತು, ೧೫ ಆಗಸ್ಟ್‌ನ ಸಂಜೆ ವ್ಯರ್ಥವಾಯಿತು,' ಆ ವೇಳೆಗೆ ಪೊಲೀಸ್ ಬಂತು, ಪ್ಯಾರೇಲಾಲ್‌ಜೀ ಎಚ್ಚರಿಕೆ ವಹಿಸಿದ್ದರಿಂದ ಗೂಂಡಾಗಳಿಗೆ ಏಟು ಬೀಳಲಿಲ್ಲ, ಬಹಳ ಪ್ರಯಾಸವಾಯಿತು. ಹೇಗೋ ಆ ಉಪದ್ರವಿಗಳು ಮನೆಯಿಂದ ಹೊರಕ್ಕೆ ಹೋದರು.

ಬಾಪೂಜಿ ನೋವಾಖಲಿಗೆ ಹೋಗಬೇಕೆಂದಿದ್ದುದನ್ನು ಬಿಟ್ಟರು. ಅಷ್ಟರಲ್ಲಿ ಮುಖ್ಯಮಂತ್ರಿಗಳು ಬಂದರು, 'ಇದು ಹಿಂದೂ ಮಹಾಸಭೆಯ ಕೆಲಸ, ಅವರನ್ನ ಬಂಧಿಸಲೇನು?' ಅಂದರು. ಅದಕ್ಕೆ ಬಾಪೂಜಿ 'ಬೇಡ, ಶಾಂತಿ ಸ್ಥಾಪಿಸುವ ಜವಾಬ್ದಾರಿ

ಅವರಿಗೇ ವಹಿಸು, ಅವರಿಗೆ ಶಾಂತಿ ಬೇಕೋ, ಕದನ ಬೇಕೋ ಅಂತ ಕೇಳಿನೋಡು, ಸಹಯೋಗ ಅಂತ ವಿಚಾರಿಸು, ಉತ್ತರಕ್ಕಾಗಿ ಕಾದು ನೋಡು' ಅಂದರು. ಬಾಪೂಜಿ ನಂತರ ನಿದ್ದೆ ಮಾಡಲು ಹೋದರು. ಆದರೂ ಹೊರಗೆ ಗುಂಪು ಠಳಾಯಿಸುತ್ತಲೇ ಇತ್ತು. ಪ್ಯಾರೇಲಾಲಜೀ ಮತ್ತು ಚಾರು ಮಜೂಮದಾರ್ ಮಲಗುವ ವೇಳೆಗೆ ರಾತ್ರಿ ೨ ಗಂಟೆಯಾಗಿತ್ತು.

ರಾತ್ರಿಯ ಕತೆ ನಗರದಲ್ಲಿ ಯಾವ – ಯಾವುದೋ ರೀತಿಯಲ್ಲೆಲ್ಲಾ ಹರಡಿಕೊಂಡಿತ್ತು. ಮಾರನೆಯ ದಿನ ಬೆಳಿಗ್ಗೆ ನಗರದಲ್ಲಿ ಚಿಂತಿತರಾಗಿ ಜನ ಭೇಟಿಯಾಗಲು ಬರತೊಡಗಿದರು, ನೋಡ ನೋಡುತ್ತಲೇ ಜನಗಳು ಸಾಲುಗಟ್ಟಿ ಬರತೊಡಗಿದರು. ಕಲ್ಕತ್ತೆಯ ಘಟನೆ ಕೇಳಿ ನೋವಾಖಲಿ ಉನ್ಮತ್ತವಾಗದಿರಲಿ ಎಂದು ಪ್ಯಾರೇಲಾಲಜೀ ಮತ್ತು ಚಾರು ಮಜೂಮದಾರ್ ಸ್ವತಃ ಹಿಂದೂ ಮಹಾಸಭೆಯ ಅಧ್ಯಕ್ಷರಾಗಿದ್ದ ಡಾ॥ ಶ್ಯಾಮಾಪ್ರಸಾದ ಮುಖರ್ಜಿ ಮನೆಗೆ ಹೋದರು. ಆತ ಪಾಪ ಖಾಯಿಲೆ ಬಿದ್ದಿದ್ದರು, ಪರಿಸ್ಥಿತಿಯನ್ನ ಅರ್ಥ ಮಾಡಿಕೊಂಡು ಶ್ಯಾಮಾ ಪ್ರಸಾದ ಮುಖರ್ಜಿ ಜನರು ಶಾಂತಿಯಿಂದ ಇರುವಂತೆ ಅಪೀಲು ಮಾಡುವುದಾಗಿ ಧೈರ್ಯವಿತ್ತರು. ಅವರು ಹಿಂದೂ ಮಹಾಸಭೆಯ ಮಿಕ್ಕ ಮುಖಂಡರುಗಳನ್ನ ಸಂಪರ್ಕಿಸಿದರು, ಅವರು ಸಹಯೋಗದ ನೀಡುವ ವಚನವಿತ್ತರು. ಪ್ಯಾರೇಲಾಲಜೀ ಹೆದರೀ ಮ್ಯಾನ್‌ಷನ್‌ಗೆ ಹಿಂದಿರುಗಿದಾಗ ಬಾಪೂಜಿ ಡಾ॥ ಶ್ಯಾಮಾ ಪ್ರಸಾದರಿಗೆ ಪತ್ರ ಬರೆಯುತ್ತಿದ್ದರು. ಪ್ಯಾರೇಲಾಲರಿಂದ ವಿವರಣೆಯನ್ನು ಕೇಳಿ ಬಾಪೂಜಿಯವರ ಚಿಂತೆ ಸ್ವಲ್ಪ ಕಡಿಮೆಯಾಯಿತು. ಮಾರನೆಯ ದಿನದ ಸಮಾಚಾರಪತ್ರಿಕೆಗಳಲ್ಲಿ ಡಾ॥ ಶ್ಯಾಮಾ ಪ್ರಸಾದ ಮುಖರ್ಜಿಯವರ ಅಪೀಲು ಪ್ರಕಟವಾಗಿತ್ತು. ಆದರೆ ಅದಕ್ಕೂ ಮುಂಚೆ ಆ ದಿನ ಮಧ್ಯಾಹ್ನ ಎರಡು ಗಂಟೆಗೆ ಇಡೀ ಕಲ್ಕತ್ತೆಯಲ್ಲಿ ಬೆಂಕಿ ಹಚ್ಚುವರೆಂದು ಆತಂಕದ ಸುದ್ದಿಗಳು ಬರತೊಡಗಿದ್ದವು. ಈ ಸಮಾಚಾರಗಳು ಮತ್ತು ವಾಸ್ತವ ಪರಿಸ್ಥಿತಿಯಿಂದ ಮುಸ್ಲಿಂ ಸಮುದಾಯ ಹೆದರಿಕೊಂಡಿತು. ಹೈದರೀ ಮ್ಯಾನ್‌ಷನ್ ಬಳಿಯಲ್ಲೇ ಯಾರೋ ಹ್ಯಾಂಡ್ ಗ್ರೆನೇಡ್ ಬಿಸುಟ, ಮತ್ತು ಇಬ್ಬರು ಮುಸ್ಲಿಂ ಕಾರ್ಮಿಕರು ಸ್ಥಳದಲ್ಲೇ ತೀರಿಕೊಂಡರು. ಸಮಾಚಾರವನ್ನು ಕೇಳಿದ ತಕ್ಷಣ ಬಾಪೂಜಿ ಘಟನೆ ನಡೆದ ಸ್ಥಳಕ್ಕೆ ಬಂದರು. ಸತ್ತವರು ಕಡುಬಡವರು, ದೀನ–ಹೀನ ಸ್ಥಿತಿಯಲ್ಲಿದ್ದವರಾಗಿದ್ದರು. ಒಬ್ಬನ ಜೇಬಿನಿಂದ ಒಂದು ನಾಲ್ಕಾಣೆ ಜಾರಿ ಕೆಳಗೆ ಬಿದ್ದಿತ್ತು, ಈ ನಿರರ್ಥಕವಾದ ನರಹತ್ಯೆಯನ್ನು ನೋಡಿ ಬಾಪೂಜಿ ಹೃದಯ ಕರಗಿ ಹೋಯಿತು. ಅಂದು ಸೆಪ್ಟೆಂಬರ್ ಮೊದಲ ದಿನಾಂಕವಾಗಿತ್ತು, ಸಂಜೆಯ ಪ್ರಾರ್ಥನೆ ಮನೆಯೊಳಗೇ ನಡೆಯಿತು, ಆ ದಿನದ ಭಜನೆ – 'ಹರಿನೇ ಭಜಂತಾ ಹಜೀ ಕೋಯಿನೀ ಜತಿ ನಥೀ ಜಾಣೀರೇ' ಆಗಿತ್ತು.

'ಹರಿಭಜನೆ ಮಾಡಿ ಇಲ್ಲಿಯವರೆವಿಗೂ ಯಾರದಾದರೂ ಮಾನಭಂಗ ವಾಗಿದ್ದನ್ನು ಎಂದೂ ಕೇಳೇ ಇಲ್ಲ.'

ಒಬ್ಬ ಮಾರವಾಡೀ ಮಿತ್ರ 'ನಾವು ಸಹಾಯ ಹೇಗೆ ಮಾಡಬಹುದೆಂದು' ಕೇಳಿದರು. ಅದಕ್ಕೆ ಬಾಪೂಜಿ, 'ನಿಮ್ಮ ಮೊಹಲ್ಲೆಗೆ ಹೋಗಿ ಜನರಿಗೆ ತಿಳಿಯ ಹೇಳು, ಅವರನ್ನು ತಡೆ, ಸಾಯಬೇಕಾಗಿ ಬಂದರೂ ಚಿಂತಿಲ್ಲ, ನೀನು ಅಸಫಲನಾದೆ ಎಂಬ ಕಥೆಯನ್ನು ಹೇಳುವುದಕ್ಕಾಗಿ ಅಂತೂ ಪ್ರಾಣ ಇಟ್ಟುಕೊಂಡು ಹಿಂದಿರುಗಿ ಬರಬೇಡ. ಯಾರೋ ಸಿಖ್ಖರು ಮಾಡಿರುವ ಕೆಲಸ, ಅವರು ಪಂಜಾಬಿನ ಸೇಡು ತೀರಿಸಿಕೊಳ್ಳುತ್ತಿದ್ದಾರೆ ಎಂದರು. ಈ ಪರಿಸ್ಥಿತಿಯಲ್ಲಿ ತನ್ನ ಕರ್ತವ್ಯವೇನು ಎಂದು ಬಾಪೂಜಿ ಯೋಚಿಸುತ್ತಿದ್ದರು, ಉದ್ವೇಗ – ದುಃಖ ಎರಡೂ ಸೇರಿ ಅವರಿಗೆ ಭೇದಿ ಶುರುವಾಗಿತ್ತು. ರಾತ್ರಿ ಅವರು ಏನೂ ತಿನ್ನಲಿಲ್ಲ, ಇಷ್ಟು ಚಿಂತೆ ಇರುವಾಗ ಬೆಳಿಗ್ಗೆ ಊಟ ಮಾಡಿದ್ದೇ ತಪ್ಪು. ರಾತ್ರೆ ೧೦ ಗಂಟೆಯಾಗಿತ್ತು, ಬಾಪೂಜಿ ತನ್ನ ಭಾಷಣವನ್ನ ಸಿದ್ಧಪಡಿಸಿಕೊಳ್ಳುತ್ತಿದ್ದರು, ಗವರ್ನರ್ ರಾಜಾಜಿ ಬಾಪೂಜಿಯನ್ನು ಭೇಟಿ ಮಾಡಲು ಬಂದರು. ಆ ವೇಳೆಗಾಗಲೇ ಬಾಪೂಜಿ ಉಪವಾಸ ಮಾಡಬೇಕೆಂದು ನಿಶ್ಚಯಿಸಿಬಿಟ್ಟಿದ್ದರು. ರಾಜಾಜಿ ಹೇಳಿದರು, 'ಇನ್ನೂ ಸ್ವಲ್ಪ ದಿನಗಳಾದ ಮೇಲೆ ಮಾಡಬಹುದು. ಸ್ವಲ್ಪ ದಿನಗಳಾದ ಮೇಲೆ ಉಪವಾಸ ಮಾಡಿ' ಎಂದರು. ಅದಕ್ಕೆ ಅವರು, 'ಈಗಲೇ ಉಪವಾಸ ಮಾಡಬೇಕು, ಇಲ್ಲವಾದರೆ ಮಾಡಲೇಬಾರದು, ಈ ಗೂಂಡಾಗಳಿಗೂ ಒಬ್ಬ ನಾಯಕ ಇದ್ದೇ ಇರ್ತಾರೆ. ನಾನು ಉಪವಾಸ ಮಾಡುವುದರಿಂದ ಕಲ್ಕತ್ತೆಯಲ್ಲಿ ಶಾಂತಿ ನೆಲೆಗೊಳ್ಳುವುದಾದರೆ ಪಂಜಾಬ್ ಕೂಡ ಸರಿ ಹೋಗುತ್ತೆ, ಈ ಸಂದರ್ಭದಲ್ಲಿ ನಾನು ಸ್ವಲ್ಪ ಬೇಜವಾಬ್ದಾರಿ ತೋರಿಸಿದರೂ ಇಡೀ ದೇಶದಲ್ಲಿ ಬೆಂಕಿ ಹತ್ತಿಕೊಂಡು ಉರಿಯುತ್ತೆ, ಎರಡೇ ದಿವಸಗಳಲ್ಲಿ ಸ್ವಾತಂತ್ರ್ಯಕ್ಕೆ ಬದಲಾಗಿ ಗುಲಾಮಗಿರಿ ವಾಪಸ್ ಬಂದುಬಿಡುತ್ತೆ' ಎಂದರು. ಇದನ್ನು ಕೇಳಿ ರಾಜಾಜಿ ಬಾಪೂಜಿಯನ್ನು ಕೇಳಿದರು, 'ನಿಮ್ಮ ಪ್ರಾಣ ಹೋಯಿತು ಅಂದರೆ ಜನ ಹುಚ್ಚರಾಗಿ ಬಿಡುತ್ತಾರೆ'. ಬಾಪೂಜಿ ಹೇಳಿದರು, 'ಕೊನೆಯ ಪಕ್ಷ (ಅದನ್ನ) ನೋಡುವುದಕ್ಕೆ ನಾನು ಬದುಕಿರುವುದಿಲ್ಲವಲ್ಲ' ಎಂದರು. ಆಗ ರಾಜಾಜಿ ಉಪವಾಸ ನಿರ್ಣಯಕ್ಕೆ ತಮ್ಮ ಅನುಮತಿ ನೀಡಿದರು ರಾಜಾಜಿ ಪುನಃ ಕೇಳಿದರು, 'ಆದರೆ ದೇವರಲ್ಲಿ ನಂಬಿಕೆ ಇದ್ದರೆ ನೀರಲ್ಲಿ ನಿಂಬೆ(ರಸ) ಯಾಕೆ ತೆಗೆದುಕೊಳ್ಳುತ್ತಿರಿ?' ಎಂದರು. ಅದಕ್ಕೆ ಬಾಪೂಜಿ ಹೇಳಿದರು, 'ನೀವು ಹೇಳುವುದೂ ಸರಿಯೆ, ಅದೂ ಮನೋದೌರ್ಬಲ್ಯವೇ.' ಹೀಗೆ ಉಪವಾಸದ ಸಮಯದಲ್ಲಿ ನಿಂಬೆ ರಸ ಕುಡಿಯುವುದನ್ನು ಕೂಡ ಬಿಟ್ಟರು. ಹೀಗೆ ಸೆಪ್ಟೆಂಬರ್ ೧ನೆಯ ತಾರೀಖು ಸಂಜೆ ಬಾಪೂಜಿಯ ಉಪವಾಸ ಶುರುವಾಯಿತು, ಅವರು ತಮ್ಮ ಹೇಳಿಕೆಯಲ್ಲಿ ಬರೆದಿದ್ದರು– '....ಈಗ ಕಲ್ಕತ್ತದ ಬೆಲೂನು ಒಡೆದುಹೋಗಿದೆ, ನನ್ನ ಹತ್ತಿರ ಈಗ ಉಪವಾಸ ಒಂದು ಬಿಟ್ಟರೆ ಬೇರೆ ಮಾರ್ಗ ಉಳಿದಿಲ್ಲ, ನನ್ನ ಮಾತುಗಳು ಪ್ರಭಾವ ಬೀರಲಿಲ್ಲ, ಬಹುಶಃ ನನ್ನ ಉಪವಾಸದಿಂದ ಸದ್ಬುದ್ಧಿ ಹಿಂದಿರುಗಬಹುದೇನೋ, ಕಲ್ಕತ್ತಾ

ಹಿಡಿತಕ್ಕೆ ಬಂದರೆ ಪಂಜಾಬಿನ ಜನರು ಕೂಡ ಯೋಚಿಸುತ್ತಾರೆ, ಕಲ್ಕತ್ತಾದಲ್ಲಿ ಶಾಂತಿ ನೆಲಸಿ ಜನ ಹೃದಯದಿಂದ ಅರ್ಥ ಮಾಡಿಕೊಳ್ಳುವವರೆಗೂ ನನ್ನ ಉಪವಾಸ ಇದ್ದೇ ಇರುತ್ತೆ, ಉಪ್ಪು–ಸೋಡಾ ಹಾಕಿಕೊಂಡು ನೀರು ಕುಡಿಯುತ್ತೇನೆ, ಕುಡಿಯಕ್ಕಾದರೆ ಸರಿ, ನಾನು ಪಂಜಾಬಿಗೆ ಹೋಗಿ ಜನರ ಸಹಾಯ ಮಾಡಲಿ ಅಂತ ಕಲ್ಕತ್ತಾ ಜನ ಬಯಸುವುದಾದರೆ ನಾನು ಬೇಗ ಉಪವಾಸ ಮುಗಿಸುವಂತಹ ಯಾವುದಾದರೂ ಮಾರ್ಗವನ್ನ ಹುಡುಕಿ' ಎಂದರು. ಆಗಸ್ಟ್ ೩೧ರಂದು ಪ್ರಧಾನಮಂತ್ರಿ ಜವಾಹರಲಾಲ ನೆಹರೂ ತಾರು ಕಳುಹಿಸಿ, 'ಪಂಜಾಬ್ ಸುಡುತ್ತಿದೆ, ನೀವು ಬನ್ನಿ' ಎಂದು ತಿಳಿಸಿದರು. ಸೆಪ್ಟೆಂಬರ್ ೨ನೆಯ ತಾರೀಕೂ ಮತ್ತೊಂದು ಉದ್ವಿಗ್ನತೆಯಿಂದ ಕೂಡಿ ತಾರು ಕೂಡ ನೆಹರೂಜೀ ಕಳುಹಿಸಿದರು. ಬಾಪೂಜಿಯ ಉಪವಾಸದ ಎರಡನೆಯ ದಿನವದು. ಅವರು ಬರೆದರು. 'ಈಗ ನಾನು ನಿರ್ದ್ವಂದ್ವದಿಂದ ನನ್ನ ಕರ್ತವ್ಯವನ್ನ ಮಾಡುತ್ತಿದ್ದೇನ. ಇಲ್ಲಿ ಶಾಂತಿ ನೆಲೆಗೊಳ್ಳದಿದ್ದರೆ ನಾನು ಲಾಹೋರ್‌ಗೆ ಹೋಗುವುದೂ ವ್ಯರ್ಥವೇ. ನನ್ನ ಆತ್ಮವಿಶ್ವಾಸ ಮುರಿದು ಬಿತ್ತೆಂದರೆ, ಅಲ್ಲಿಗೆ ನನ್ನ ಉಪಯೋಗ ಕೂಡ ಮುಗಿದುಹೋಗುತ್ತೆ, ಕಲ್ಕತ್ತಾದ ಸೌಹಾರ್ದ ತೋರಿಕೆಯದಾಗಿದ್ದರೆ ನಾನು ಪಂಜಾಬಿಗೆ ಏನು ಸಂದೇಶ ನೀಡಲಿ? ಅದರಿಂದ ಕಲ್ಕತ್ತೆಯ ಉಪವಾಸ ಮುಗಿಸಿದ ಮೇಲೇ ಪಂಜಾಬಿಗೆ ಬರುತ್ತೇನೆ, ನನ್ನ ಉಪವಾಸಕ್ಕಾಗಿ ದುಃಖಪಡಬೇಡ, ಕೋಪಮಾಡಿಕೊಳ್ಳಬೇಡ– ಬಾಪು.

ಸೆಪ್ಟೆಂಬರ್ ೨ರಂದೂ ಕಲ್ಕತ್ತಾದಲ್ಲಿ ಝುಂಝಾವಾತ ಭಯಂಕರವಾಗಿ ಬೀಸುತ್ತಿತ್ತು. ಜೋರು ಮಳೆ, ಅದರಿಂದ ಯಾತ್ರೆಯ ಸಾಧನಗಳೂ ನಿಂತಿದ್ದವು, ಆದರೆ ಧಾರ್ಮಿಕ ಬಿರುಗಾಳಿ ಬೀಸುತ್ತಲೇ ಇತ್ತು, ಉಪವಾಸದಿಂದ ಬಾಪೂಜಿ ಧ್ವನಿ ಕುಗ್ಗಿಹೋಗಿತ್ತು. ನಿಃಶಕ್ತಿ ಹೆಚ್ಚಾಗುತ್ತಿತ್ತು. ಸಿಖ್ಖರು – ಬಿಹಾರಿಗಳು ಉದ್ರೇಕಿತರಾಗಿರುವುದರ ಪರಿಣಾಮ ಹೀಗಾಗಿದೆ ಎಂದು ಸುದ್ದಿ ಸಿಕ್ಕಿತು. ಕುಪಿತರಾಗಿದ್ದ ಶರತ್‌ಬೋಸ್ ಬಹಳ ದಿನಗಳ ನಂತರ ಬಾಪೂಜಿಯನ್ನ ಭೇಟಿಯಾಗಲು ಬಂದರು. ಅವರು ಈ ಕಾಂಡದ ಹಿಂದೆ ಸುನಿಯೋಜಿತ ವಿಸ್ತೃತ ಯೋಜನೆ ಇದೆ ಎಂದು ತಿಳಿಸಿದರು, ಅವರು ಮುಖಂಡರ ಹೆಸರುಗಳನ್ನು ಕೂಡ ತಿಳಿಸಿದರು. ಇನ್ನೊಂದು ಕಡೆ ಹಿಂದೂ ಮಹಾಸಭೆಯವರು ಫಾರ್‌ವರ್ಡ್ ಬ್ಲಾಕ್‌ನವರು ವಿಧಿವತ್ತಾಗಿ ಈ ದಂಗೆಗಳನ್ನ ವಿನಿಯೋಜಿಸಿದ್ದರು ಅಂತ ಆರೋಪಿಸುತ್ತಿದ್ದರು. ಶರತ್ ಬೋಸ್ ಹಿಂದೂ ಮಹಾಸಭೆಯದೇ ತಪ್ಪು ಅಂತ ಹೇಳಿದರು. 'ನಮ್ಮ ನಮ್ಮಲ್ಲೇ ಆರೋಪ ಹೊರಿಸುವುದರಿಂದ ಏನೂ ಪ್ರಯೋಜನವಿಲ್ಲ, ನಾನು ಇಲ್ಲಿ ದಂಡಿಸುವುದಕ್ಕಾಗಿ ಕುಳಿತಿಲ್ಲ, ನಾವು ಅಂತರ್ಮುಖಿಗಳಾಗಿ ಯೋಚಿಸಿದಾಗ ಶಾಂತಿ ಸ್ಥಾಪನೆಯಾಗುತ್ತೆ, ಪ್ರಾಮಾಣಿಕರಾದವರು ಪಶ್ಚಾತ್ತಾಪ ಪಡುತ್ತಾರೆ, ಒಳ್ಳೆಯ ಪರಿಣಾಮ ಬರುವುದೂ ಆಗಲೇ. ಆಗ ಹುಚ್ಚೆಲ್ಲಾ ತಣ್ಣಗಾಗುತ್ತೆ,

ಹೃದಯದಲ್ಲಿ ಪ್ರಾಮಾಣಿಕತೆ ಇಲ್ಲದಿದ್ದರೆ ಅದು ಬರಿಯ ತೋರಿಕೆಯಾಗಿ ಉಳಿಯುತ್ತೆ, ಪೊಲೀಸ್‌ನವರನ್ನೆಲ್ಲಾ ತೆಗೆದು ಶಾಂತಿ ಸೈನಿಕರನ್ನು ಅಹಿಂಸೆಯ ಮೇಲೆ ಪಟ್ಟಣದಲ್ಲಿ ಬಿಟ್ಟಾಗ, ನಂತರ ಇಡೀ ಕಲ್ಕತ್ತಾ ರಕ್ತದಿಂದ ತೊಯ್ದರೂ ಪರವಾಗಿಲ್ಲ, ಹೇಗೂ ಸತ್ಯಾಗ್ರಹದ ಬಲಿದಾನದಿಂದ ಹೃದಯದ ಕೊಳಕು ದೂರವಾಗುತ್ತದೆ, ಅಂತಹ ಸ್ಥಿತಿಯಲ್ಲಿ ನಾನು–ನೀವು ಜನರ ನಡುವೆ ಇರುತ್ತೇವೆ. ಶಾಂತಿ ಸ್ಥಾಪನೆಗೊಳ್ಳುತ್ತೆ, ಇಲ್ಲವೇ ನಾವು ಅಲ್ಲೇ ಕೊನೆಗೊಳ್ಳುತ್ತೇವೆ, ನನ್ನ ಶಾಂತಿ ಮಿಷನ್ ಅಪಕ್ವ ಹೃದಯದ ದುರ್ಬಲವಾದ ನಾಟಕವಲ್ಲ. ಇದು ನನ್ನೊಬ್ಬನದೇ ನಂಬಿಕೆಯಾಗಿದ್ದರೂ ಚಿಂತೆ ಇಲ್ಲ, ನನ್ನ ಶ್ರದ್ಧೆ ಅಚಲವಾಗಿದೆ, ನಿಮ್ಮೆಲ್ಲರ ನಿರ್ಮಲವಾದ ಸಹಯೋಗ ಇದ್ದರೆ ಈಗಲೂ ನಾವು ಪಂಜಾಬನ್ನು ಸರಿಪಡಿಸಬಹುದು, ನನ್ನ ಬಾಗಿಲಿನಿಂದ ನಾನು ಪೊಲೀಸ್ ಪಹರೆಯನ್ನು ತೆಗೆಸಿಹಾಕಿದ್ದೆ. ಈಗ ಪೊಲೀಸ್ ಹಿಂದಿರುಗಿದೆ, ಈ ವ್ಯವಸ್ಥೆ ನನಗಾಗಿ ಅಲ್ಲ, ಶಹೀದ್‌ನ ಸುರಕ್ಷತೆಗಾಗಿ. ದೇವರ ಕೃಪೆ ಚೆನ್ನಾಗಿತ್ತು ಆಗಸ್ಟ್ ೩೧ರಂದು ಶಹೀದ್ ಅಲ್ಲಿರಲಿಲ್ಲ, ಆ ದಿನ ಅವನ ಸ್ಥಿತಿ ಏನಾಗುತ್ತಿತ್ತೋ, ಜೊತೆಗೆ ನನ್ನ ಸ್ಥಿತಿ ಕೂಡ ನನಗೇನೊಂದು ಗೊತ್ತಿಲ್ಲ.'

ಬಾಪೂಜಿ ಮೂರು ಗಂಟೆಗಳಿಂದಲೂ ಶರತ್ ಬೋಸ್ ಜೊತೆ ಮಾತನಾಡುತ್ತಿದ್ದರು. ಧ್ವನಿ ಕುಗ್ಗುತ್ತಿತ್ತಾದರೂ, ಮಾತನಾಡುವುದು ಅನಿವಾರ್ಯವಾಗಿತ್ತು. ಮುಖ್ಯಮಂತ್ರಿಗಳು ಬಂದರು, 'ನಿಮ್ಮ ಉಪವಾಸದಿಂದ ನಮಗೆಲ್ಲಾ ಬಹಳ ಚಿಂತೆಯಾಗಿದೆ, ನಮ್ಮ ಮೇಲೆ ಅದರ ದೊಡ್ಡ ಹೊರೆ ಇದೆ' ಎಂದರು.

'ನಿಮಗೆ ತೊಂದರೆ ಕೊಡುವುದಕ್ಕಾಗಲಿ, ಹೊರೆ ಹೊರೆಸುವುದಕ್ಕಾಗಲೀ ನಾನು ಉಪವಾಸ ಮಾಡುತ್ತಿಲ್ಲ, ಬೆಂಕಿ ಆರಿಸುವುದಕ್ಕೆ ಇದೊಂದೇ ಉಪಾಯ ಇರುವುದು,' ಬಾಪೂಜಿ ಹೇಳಿದರು.

ಬಾಪೂಜಿಗೆ ಆಯಾಸವಾಗುತ್ತಿತ್ತು. ಮುಖ್ಯಮಂತ್ರಿ ಸೇನ್ ಹೇಳಿದರು, 'ನಿಮ್ಮನ್ನ ಹೆಚ್ಚು ಆಯಾಸ ಪಡಿಸುವುದಕ್ಕೆ ನನಗೆ ಇಷ್ಟವಿಲ್ಲ, ಆದರೆ ಕೆಲವರು ಹಿಂದೂಗಳು ನಿಮ್ಮನ್ನ ತಮ್ಮ ಶತ್ರು ಅಂತ ತಿಳಿದುಕೊಳ್ಳುತ್ತಿದ್ದಾರೆ, ನೀವು ಅವರಿಗೆ ಅನ್ಯಾಯ ಮಾಡುತ್ತಿದ್ದೀರೆಂದು ಅವರು ಯೋಚಿಸುತ್ತಿದ್ದಾರೆ. ಕಠೋರವಾಗ್ತಾರೆ, ನಮ್ಮ ಮಂತ್ರಿಮಂಡಳದ ಕೊರತೆಯಿಂದ ನೀವು ಉಪವಾಸ ಮಾಡಿದ್ದಿದ್ದರೆ ನಾನದನ್ನು ಸಹಿಸಿಕೊಳ್ಳುತ್ತಿದ್ದೆ, ಆದರೆ ಬೇರೆಯವರಿಗೆ ಹೇಗೆ ತಿಳಿಸಲಿ?'

'ಇದೆಲ್ಲ ತಪ್ಪು, ನನಗೆ ಈಗ ಮುಸಲ್ಮಾನರ ಎದುರಿಗೂ ಉಪವಾಸ ಮಾಡುವ ಹಕ್ಕು ಸಿಕ್ಕಿದೆ ಅಂತ ನೀವೇ ನೋಡ್ತಾ ಇದ್ದೀರಿ. ನನ್ನ ಉಪವಾಸ ಎರಡೂ ಬಣಗಳನ್ನ ಉಳಿಸುವ ಕೆಲಸ ಮಾಡಿದೆ, ಸಂಯಮ – ಸೌಹಾರ್ದದಿಂದ ನಾನು ಬದುಕಿ ಉಳಿಯಲು ಸಾಧ್ಯ ಅನ್ನುವ ವಿಷಯ ಹಿಂದೂಗಳು ಅರ್ಥ ಮಾಡಿಕೊಂಡರೆ ತಕ್ಷಣ ಕಲ್ಕತ್ತಾ ಶಾಂತವಾಗುತ್ತೆ' ಎಂದರು ಬಾಪೂಜಿ.

ಇಷ್ಟೊಂದು ಚರ್ಚೆಯ ನಡುವೆ ಸುಹರಾವರ್ದಿ ಬಾಪೂಜಿಯ ಬಳಿಯಲ್ಲೇ ಕುಳಿತಿದ್ದರು, ಆದರೆ ಇನ್ನೂ ಧೈರ್ಯ ಮತ್ತು ಸಹನಶಕ್ತಿಯ ಪರೀಕ್ಷೆ ಮುಗಿದಿರಲಿಲ್ಲ, ಡಾ॥ ಶ್ಯಾಮಾಪ್ರಸಾದ ಮುಖರ್ಜಿ ಭೇಟಿಯಾಗಲು ಬಂದರು, ಮೊದಲು ಬಾಪೂಜಿ ಅವರ ಆರೋಗ್ಯವನ್ನು ಕುರಿತು ವಿಚಾರಿಸಿದರು. ಸ್ವತಃ ಇಷ್ಟೊಂದು ದುರ್ಬಲರಾಗಿದ್ದರೂ ಇನ್ನೊಬ್ಬರ ಆರೋಗ್ಯ ಕುರಿತು ಚಿಂತೆ ಮಾಡುವುದು ಬಾಪೂಜಿಯ ವಿಶೇಷತೆಯಾಗಿತ್ತು. ಇಷ್ಟೊಂದು ಸಹಾನುಭೂತಿಯನ್ನು ನೋಡಿ ಡಾ॥ ಮುಖರ್ಜಿ ದ್ರವಿತರಾದರು, 'ಶಾಂತಿ ನೆಲೆಗೊಳ್ಳುತ್ತಿದೆ, ಆದರೆ ಪೂರ್ವ ಬಂಗಾಳದ ಸ್ಥಿತಿ ಸರಿಯಾಗಿಲ್ಲ, ಬಹುಶಃ ಢಾಕಾದಲ್ಲಿ ಅಶಾಂತಿ ಹುಟ್ಟಿಕೊಳ್ಳಬಹುದು,' ಎಂದರು. ಬಾಪೂಜಿ ಮತ್ತು ಮುಖರ್ಜಿ ನಡುವೆ ಪ್ರಶ್ನೋತ್ತರಗಳು ನಡೆದವು.

ಬಾಪೂಜಿ – ಸರಿ ಅಲ್ಲಿ ಪರಿಸ್ಥಿತಿ ಸುಧಾರಿಸಿಲ್ಲ ಎಂದರೆ ಕೆಟ್ಟಿದೆ ಎಂದರ್ಥ.

ಮುಖರ್ಜಿ – ನಾಳೆಯಿಂದ ಹಿಂದೂ ಮಹಾಸಭಾ, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಮುಸ್ಲಿಂ ಲೀಗ್‌ನ ನ್ಯಾಷನಲ್ ಗಾರ್ಡ್ ನಗರದ ರಸ್ತೆಗಳಲ್ಲಿ ಗಸ್ತ್ ಹಾಕುವರು.

ಸುಹರಾವರ್ದಿ – ಮಹಾತ್ಮಾಜಿಯ ಆರೋಗ್ಯದ ಸ್ಥಿತಿ ಕುರಿತು ಸರಿಯಾಗಿ ಪ್ರಚಾರ ಮಾಡಬೇಕು, ಎರಡು ದಿನಗಳಲ್ಲಿ ಅವರ ಉಪವಾಸ ಮುಗಿಯಬೇಕು.

ಬಾಪೂಜಿ – ಎಲ್ಲೆಡೆ ಶಾಂತಿ ನೆಲಸಿದೆ ಎಂದು ಡಾ॥ ಮುಖರ್ಜಿ ವರದಿ ನೀಡಿದ ಮೇಲೆ ನಾನು ಉಪವಾಸ ಬಿಡುತ್ತೇನೆ, ಅದಕ್ಕೆ ಮೊದಲು ಬಿಡಲ್ಲ.

ಯಾರೋ ಕೇಳಿದರು – ಉಪವಾಸ ಮಾಡುವಾಗ ನೀವೇ ತೀರಿಕೊಂಡರೆ ದೇಶದಲ್ಲೆಲ್ಲಾ ಬೆಂಕಿ ಹತ್ತಿಕೊಂಡು ಉರಿಯುತ್ತೆ.

ಬಾಪೂಜಿ – ಹಾಗೆ ಆಗುವುದಕ್ಕೂ ಮೊದಲು ನಾನು ಖುದಾ ದರ್ಬಾರಿನಲ್ಲಿ ಉಪಸ್ಥಿತನಾಗ್ತೀನಿ.

ಯಾರೋ ಪುನಃ ಕೇಳಿದರು– ಈಗ ಶಾಂತಿ ನೆಲಸಿ, ಸ್ವಲ್ಪ ದಿನಗಳಾದ ಮೇಲೆ ದಂಗೆಗಳಾದರೆ?

ಬಾಪೂಜಿ – ಆಗ ನಾನು ಆಮರಣ ಉಪವಾಸ ಕೈಗೊಳ್ಳುತ್ತೇನೆ, ಶಾಂತಿ ಸ್ಥಾಪನೆಯಾದ ಮೇಲೂ ನಾನು ಉಪವಾಸವನ್ನು ಬಿಡಲ್ಲ, ಆಗ ನೀರನ್ನೂ ತ್ಯಜಿಸುತ್ತೇನೆ, ಸತ್ಯ – ಅಹಿಂಸೆಯ ಉಪಹಾಸ್ಯವಾದರೆ ನಾನು ಬದುಕಿರುವುದಕ್ಕೆ ಇಷ್ಟಪಡುವುದಿಲ್ಲ.

ಇಷ್ಟೆಲ್ಲಾ ಚರ್ಚೆಗಳು ನಡೆಯುತ್ತಿದ್ದ ದಿನಗಳಲ್ಲೆಲ್ಲಾ ಸುಹರಾವರ್ದಿಯ ಕುಲೀನತೆ, ಮಹಿಮೆ, ಆಭಿಜಾತ್ಯ, ಮಾಧುರ್ಯ ಆದರ್ಶ ಸ್ವರೂಪದ್ದಾಗಿತ್ತು. ಅಧಿಕಾರವಿಲ್ಲದೆ, ಅವಹೇಳನೆಗೆ ಗುರಿಯಾಗಿದ್ದ ಶಹೀದ್ ಎಷ್ಟೋ ಹೆಚ್ಚು ಉನ್ನತರಾಗಿದ್ದ, ಗೌರವದಿಂದ ಕೂಡಿದ ವ್ಯಕ್ತಿಯಾಗಿದ್ದರು. ಉಪವಾಸದ ಮೂರನೆ

ದಿನ ಬಾಪೂಜಿ ಮನಸ್ಸು – ಶರೀರ ಎರಡೂ ರೀತಿಯಲ್ಲಿ ಆರೋಗ್ಯವಂತರಾಗಿದ್ದರು. ಅವರು ತಮ್ಮ ಬಂಗಾಳಿ ಪಾಠ ಮಾಡಿಕೊಂಡರು, 'ಅರ್ಧ ರಾತ್ರಿಯವರೆಗೂ ಲೂಟಿ ನಡೆಯುತ್ತಿತ್ತು, ಅದಾದ ಮೇಲೆ ಶಾಂತವಾಗಿತ್ತು' ಎಂದು ಯಾರೋ ಸೂಚನೆ ನೀಡಿದರು. 'ಸರಿಯಾಗಿಯೇ ಇದೆ, ದಿನವಿಡೀ ಪರಿಶ್ರಮ ಮಾಡಿದ ಮೇಲೆ ಲೂಟಿ ಕೋರರಿಗೂ ವಿರಾಮ ಬೇಕಾಗಿತ್ತು' ಎಂದರು ಬಾಪೂಜಿ. ಬಂಗಾಳದ ಪ್ರಚಾರ ವಿಭಾಗದ ಡೈರೆಕ್ಟರರು ಬಾಪುರವರ ಉಪವಾಸ ಮಾಡುತ್ತಿರುವಾಗಿನ ಫೋಟೋ ತೆಗೆದು ಮುದ್ರಿಸಿದರೆ ಪ್ರಚಾರಕ್ಕೆ ಸಹಾಯವಾಗುತ್ತೆ ಎಂದುಕೊಂಡರು. ಬಾಪೂಜಿ. 'ಅದು ಕೂಡದು' ಎಂದರು, 'ಜನರ ತುಸು ಮಾಯೆಮೋಹಕ್ಕಾಗಿ ನಾನು ಈ ದುರ್ಬಲ ಮುಖದಿಂದ ಅಪೀಲ್ ಮಾಡಲು ಇಷ್ಟಪಡುವುದಿಲ್ಲ, ವಿಚಾರ ಪರಿವರ್ತನೆ ಆದಾಗ ನಿಜವಾದ ಪಶ್ಚಾತ್ತಾಪವಾಗಿ ಸ್ವತಃ ಏಕತೆ ಮೂಡುತ್ತದೆ, ಆಗ ಉಪವಾಸವೂ ಮುಗಿಯುತ್ತದೆ' ಎಂದು ಬಾಪೂಜಿ ಹೇಳಿದರು.

ಈ ಕೋಮುವಾದದ ಉನ್ಮಾದ ಇಬ್ಬರು ಯುವ ಕಾರ್ಯಕರ್ತರನ್ನು ಬಲಿತೆಗೆದುಕೊಂಡಿತ್ತು, ಸಚಿನ್ ಮಿತ್ರ ಮುಸಲ್ಮಾನ ಸ್ನೇಹಿತರನ್ನು ಉಳಿಸಲು ಹೋಗಿ ಮುಸ್ಲಿಂ ಹಂತಕರ ನಡುವೆ ಸಿಕ್ಕಿ ಅಲ್ಲೇ ತೀರಿಕೊಂಡ. ಇನ್ನೊಬ್ಬ ಕಾರ್ಯಕರ್ತ ಸ್ಮಿತೇಶ ಬ್ಯಾನರ್ಜಿ ಕೆಲವು ಸ್ಕೂಲಿನ ಮಕ್ಕಳು ಶಾಂತಿ ಮೆರವಣಿಗೆ ನಡುವೆ ಅಪಾಯಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆಂಬ ಸುದ್ದಿ ಕೇಳಿ ಅಲ್ಲಿಗೆ ಓಡಿದರು. ಮಕ್ಕಳನ್ನಂತೂ ಆತ ಉಳಿಸಿದರು, ಆದರೆ ಚೂರಿಯಿಂದ ಐದು ಗಾಯಗಳಾದ ಮೇಲೆ ಆತ ತನ್ನನ್ನು ತಾನು ಉಳಿಸಿಕೊಳ್ಳಲಾಗಲಿಲ್ಲ. ಇದಕ್ಕೆ ಬಾಪೂಜಿ, 'ಇದಕ್ಕಾಗಿ ದುಃಖಿಸಬೇಡಿ, ಅವರಿಬ್ಬರೂ ಅಮರರಾದರು' ಎಂದರು. ಮಧ್ಯಾಹ್ನ ರಾಜಾಜಿ ಅವರಿಂದ ಕಾಲೇಜಿನ ವಿದ್ಯಾರ್ಥಿಗಳು ಕೂಡಿಕೊಂಡು ಶಾಂತಿಸ್ಥಾಪಿಸಲು ಹೆಣಗುತ್ತಿದ್ದರೆಂದು ತಿಳಿಯಿತು. ಅವರುಗಳ ಘೋಷಣೆ ಹೀಗಿತ್ತು: 'ನಡೆಯುವುದಿಲ್ಲ ಗುಂಡಾಗಿರಿ. ಶರತ್ ಬೋಸ್ ಚಿಂತಿತರಾದರು, ಅವರ ಫೋನ್ ಬಂತು, ಗಾಂಧೀಜಿ ಹೇಗಿದ್ದಾರೆ? ಶಾಂತಿ ನೆಲೆಗೊಳಿಸುವುದಕ್ಕಾಗಿ ನಾನು ಹೆಣಗಾಡುತ್ತಿದ್ದೇನೆ' ಎಂದರು. ಒಬ್ಬ ಮುಸಲ್ಮಾನ ಮಿತ್ರರು ಹೆದರಿ, 'ಖುದಾ ನಿಮಗೆ ಏನೂ ಆಗದೆ ಇರುವ ಹಾಗೆ ಮಾಡಲಿ, ಇಲ್ಲದಿದ್ದರೆ ಮುಸ್ಲಿಮರು ಮುಗಿದುಹೋಗ್ತಾರೆ' ಅಂದರು. ಅದಕ್ಕೆ ಬಾಪೂಜಿ 'ಹೀಗೆ ಹೇಳಿ ನನ್ನ ಉಪವಾಸ ಮುರಿಸಬೇಡಿ' ಎಂದರು.

ಸಂಜೆ ಆರು ಗಂಟೆಗೆ ಹಿಂದೂ–ಮುಸಲ್ಮಾನರ ಸಮ್ಮಿಳಿತ ಮೆರವಣಿಗೆಯೊಂದು ಬೇಲಿಯಾ ಘಾಟ್‌ಗೆ ಬಂತು. ಇಬ್ಬರು ಹಿಂದೂ, ಇಬ್ಬರು ಮುಸಲ್ಮಾನ ಯುವಕ ಮುಖಂಡರು ಬಾಪೂಜಿಯನ್ನು ಭೇಟಿಯಾದರು, 'ನೀವಿರುವಾಗ ಇಲ್ಲಿ ಇನ್ನು ಅಂತಹುದೇನೂ ನಡೆಯುವುದಿಲ್ಲವೆಂದು ನಾವು ನಿಮಗೆ ವಚನ ಕೊಡುತ್ತೇವೆ, ನಾನು ನಿಮ್ಮ ಜೊತೆ ಖಿಲಾಫತ್‌ನಲ್ಲಿ ಕೆಲಸ ಮಾಡಿದ್ದೆ' ಎಂದು

ಮುಸ್ಲಿಂ ಸಭ್ಯ ಹೇಳಿದ. ಅದಕ್ಕೆ ಬಾಪೂಜಿ, 'ನಾನಿಲ್ಲೇ ಇದ್ದೆ, ಆದರೆ ದಂಗೆ ಮಾಡುವವರು ನಿಲ್ಲಿಸಲಿಲ್ಲ, ನನ್ನ ಮಾತು ಯಾರು ಕೇಳುತ್ತಾರೆ ? ಹದಿನೈದು ದಿನಗಳ ಹಿಂದೆ ಎದ್ದು ಕಾಣಿಸುತ್ತಿದ್ದ ಏಕತೆ ಪುನಃ ಕಾಣಿಸಿದಾಗ ನಾನು ಉಪವಾಸ ನಿಲ್ಲಿಸುತ್ತೇನೆ, ಮುಸಲ್ಮಾನರು ನಿಜವಾಗಿಯೂ ನನ್ನನ್ನ ಪ್ರೀತಿಸುವುದಾದರೆ ಈ ಸೇಡಿನ ಭಾವನೆ ಬಿಟ್ಟು ಬಿಡಲಿ, ಅದಾದ ಮೇಲೆ ಬೇಕಾದರೆ ಇಡೀ ಕಲ್ಕತ್ತಾ ಹುಚ್ಚಾದರೂ ನನಗೆ ಚಿಂತೆ ಇಲ್ಲ' ಎಂದರು.

ಹಿಂದುಗಳು ಕೂಡ ಆಶ್ವಾಸನೆ ನೀಡಿದರು. ಆಗ ಬಾಪೂಜಿ, 'ಪರಿವರ್ತನೆ ಆಗುತ್ತ ಇದೆ, ಆದರೆ ಈಗಲೇ ಬೇಡ, ಬದುಕಲು ಇಷ್ಟಪಡುವುದು ಈಶ್ವರನಿಗೆ ದ್ರೋಹ ಬಗೆದಂತಾಗುತ್ತದೆ, ಇನ್ನೂ ಹೆಚ್ಚು ದೃಢವಾಗಿ ಶಾಂತಿಯ ಕೆಲಸ ಮಾಡು, ನನ್ನ ಪ್ರಾಣ ಉಳಿಸುವುದಕ್ಕಾಗಿ ಕೊಲೆ– ಸುಲಿಗೆ ಬಿಡಬೇಕಾಗಿಲ್ಲ. ವಾಸ್ತವವಾಗಿ ಹೃದಯ ಪರಿವರ್ತನೆ ಮಾಡಿಕೋ, ನನಗೆ ಮನಃತೃಪ್ತಿಗಾಗಿ ಸ್ನೇಹ ಬೇಕಿಲ್ಲ, ಆಗ ಸ್ವಲ್ಪ ಶಾಂತಿ ಸಿಕ್ಕ ನಂತರ ನರಸಂಹಾರ ಆರಂಭವಾಗುತ್ತೆ, ಹಾಗಾದರೆ ನಾನು ಸಾಯಲೇಬೇಕಾಗುತ್ತದೆ.' ನಗರ ಶಾಂತವಾಗಿತ್ತು, ಆದರೆ ಮುಖ್ಯಮಂತ್ರಿಗಳಿಗೆ ಬಾಪೂಜಿ ಹೇಳಿದರು, 'ನನ್ನ ಪ್ರಾಣ ಉಳಿಸುವುದಕ್ಕಾಗಿ ಒತ್ತಾಯ ಹಾಕಬೇಡಿ. ಸ್ವೇಚ್ಛೆಯಿಂದ, ವಾಸ್ತವಿಕವಾಗಿ ಏಕತೆ ನೆಲೆಗೊಂಡಾಗ ನಾನು ಬದುಕುವುದಕ್ಕೆ ಇಷ್ಟ ಪಡುತ್ತೇನೆ, ಹಾಗಿಲ್ಲದಿದ್ದಾಗ ಸಾಯುವುದೇ ಒಳ್ಳೆಯದು, ಕೊನೆಗೆ ಮೃತ್ಯುವೊಂದೇ ನಿಜವಾದ ಮಿತ್ರನಾಗುವುದು, ಅದಕ್ಕೆ ಯಾಕೆ ಹೆದರಿಕೊಳ್ಳಬೇಕು?'

ಸೆಪ್ಟೆಂಬರ್ ೪, ಗುರುವಾರ ಬಾಪೂಜಿ ತೀರ ಅಶಕ್ತರಾಗಿದ್ದರು. ತಲೆ ಸುತ್ತು ಬರುತ್ತಿತ್ತು. ಬ್ಲಡ್ ಪ್ರೆಷರ್‌ನಿಂದಾಗಿ ಕಿವಿಯಲ್ಲಿ ಡಬ–ಡಬ ಶಬ್ದ ಕೇಳಿಸುತ್ತಿತ್ತು, ನಾಡೀ ಬಹಳ ಮೆಲ್ಲಗೆ, ತೀವ್ರವಾಗಿ ಚಲಿಸುತ್ತಿತ್ತು. ಆಗ ನೋವಾಖಲಿಯ ಪೊಲೀಸ್ ಅಧೀಕ್ಷಕರಾಗಿದ್ದ ಅಬ್ದುಲ್ಲಾ ಭೇಟಿಗಾಗಿ ಬಂದರು. ಬಾಪೂಜಿ 'ಇದೇನಾಶ್ಚರ್ಯ? ಬೆಳಗಿನಿಂದ ನಿಮ್ಮನ್ನೇ ನೆನಪು ಮಾಡಿಕೊಳ್ಳುತ್ತಿದ್ದೆ, ಯಾವಾಗ ಭೇಟಿಯಾಗುತ್ತೋ ಅನ್ನಿಸುತ್ತಿತ್ತು' ಎಂದರು.

ನೋವಾಖಲಿಯಿಂದ ಅಬ್ದುಲ್ಲಾಗೆ ವರ್ಗವಾಗಿತ್ತು. ಮುಸ್ಲಿಂ ಲೀಗ್ ಮತ್ತು ಪೂರ್ವ ಬಂಗಾಳದ ಆಡಳಿತ ತಂತ್ರ ಇವೆರಡೂ ಅಬ್ದುಲ್ಲಾ ಮೇಲೆ ಸಿಟ್ಟು ಮಾಡಿಕೊಂಡಿದ್ದವು, 'ಗಾಂಧೀಯಂತಹ ಕಾಫಿರನಿಗೆ ಅಬ್ದುಲ್ಲಾ ಇಷ್ಟೊಂದು ಮಹತ್ವ ಏಕೆ ಕೊಟ್ಟ?' ಎಂದು ಲೀಗ್‌ನವರು 'ಕಾಂಗ್ರೆಸ್ ಅಬ್ದುಲ್ಲಾ' ಅಂತ ಕರೆಯಲಾರಂಭಿಸಿದ್ದರು. ಅಬ್ದುಲ್ಲಾ ಜೊತೆ ಮಾತನಾಡಿ ಬಾಪೂಜಿ 'ಹರಿಜನ್'ನ ಮುಂದಿನ ಪತ್ರಿಕೆಯನ್ನು ಬದಲಾಯಿಸತೊಡಗಿದರು. ಇಷ್ಟೆಲ್ಲಾ ಉಪವಾಸದ ನಡುವೆಯೂ ಎಲ್ಲಾ ಕೆಲಸಗಳೂ ನಡೆಯುತ್ತಲೇ ಇದ್ದವು. ಮಧ್ಯಾಹ್ನ ಸೆಂಟ್ರಲ್ ಕಲ್ಕತ್ತಾದಿಂದ ೨೭ ಜನರ ಸಂಘವೊಂದು ಬಾಪೂಜಿಯನ್ನು ಭೇಟಿ ಮಾಡಲು

ಬಂತು. ೧೫ ಆಗಸ್ಟ್ ೧೯೪೬ರ 'ಡೈರೆಕ್ಟ್ ಆ್ಯಕ್ಷನ್' ಆದ ನಂತರ ಮುಸಲ್ಮಾನರ ಅತ್ಯಾಚಾರವನ್ನ ವಿರೋಧಿಸಲು ಒಂದು 'ನಿಗ್ರಹ ಮೋರ್ಚಾ' ರಚಿತವಾಗಿತ್ತು. ಇವರೇ ಹಿಂದೂ ದಂಗೆಕೋರರ ನಾಯಕರಾಗಿದ್ದವರೆಂದು ಹೇಳುತ್ತಿದ್ದರು, ಈ ಜನರು ನಾವೇ ಹತ್ಯೆಗಳನ್ನ ಮಾಡಿಸಿದ್ದವರು ಅಂತ ಬಾಪೂಜಿ ಬಳಿ ನೇರವಾಗಿ ಒಪ್ಪಿಕೊಂಡರು. ಬಾಪೂಜಿ ಬಳಿ ಅವರು ಕ್ಷಮೆ ಕೇಳಿ ಉಪವಾಸ ಬಿಡಿ ಎಂದು ವಿನಂತಿಸತೊಡಗಿದರು. ಅವರು ನಿಜವಾಗಿಯೂ ಪಶ್ಚಾತ್ತಾಪಪಡುತ್ತಿದ್ದರು, ನಾಚಿಕೆ ಪಟ್ಟು ದುಃಖಿಸುತ್ತಿದ್ದರು. ಅವರು ತಕ್ಷಣ ಈ ದಂಗೆ – ಹತ್ಯೆ ಎಲ್ಲವೂ ನಿಂತು ಹೋಗುತ್ತದೆಂದು ಆಶ್ವಾಸನೆ ನೀಡಿದರು. ಹೈದರೀ ಮ್ಯಾನಷನ್‌ನ ಆ ಗಲಾಟೆಯನ್ನೂ ತಾವೇ ಮಾಡಿಸಿದ್ದು ಅಂತ ಕೂಡ ಒಪ್ಪಿಕೊಂಡರು. ಜೊತೆಗೆ ಬಾಪೂಜಿ ಹೇಳಿದ್ದನ್ನ ಶಿರಸಾವಹಿಸಿ ಪಾಲಿಸುವುದಾಗಿ ಆಶ್ವಾಸನೆ ನೀಡಿದರು. ಬಾಪೂಜಿ ಉಪವಾಸ ಬಿಟ್ಟರೆ ತಾವು ಚಿಂತೆಯಿಂದ ದೂರವಾಗಿ ಕೆಲಸ ಮಾಡುತ್ತೇವೆ, ಇದು ಒಪ್ಪಿಗೆಯಾಗದಿದ್ದರೆ ಉಪವಾಸ, ಮತ್ತೇನು ಷರತ್ತು ಹಾಕುವಿರಿ ಎಂದು ಕೇಳುತ್ತಿದ್ದರು.

'ನನ್ನ ಅಂತರಾತ್ಮಕ್ಕೆ ಇನ್ನು ಈ ತರಹೆಯ ಘಟನೆಗಳೂ ಮರುಕಳಿಸುವುದಿಲ್ಲವೆಂದು ನಂಬಿಕೆ ಬಂದಲ್ಲಿ ಮಾತ್ರ ನಾನು ಉಪವಾಸ ಬಿಡ ಬಲ್ಲೆ. ದೇಶ ಸುಡುತ್ತಿದ್ದು, ಕಲ್ಕತ್ತಾ ಮಾತ್ರ ಶಾಂತವಾಗಿದ್ದರೆ ಮತ್ತು ಮುಸಲ್ಮಾನರು ನಾವೀಗ ಭಯದಿಂದ ಮುಕ್ತರು ಎಂದು ಹೇಳಬೇಕು. ಆಗ ನಾನು ಉಪವಾಸ ಬಿಡಬಲ್ಲೆ. ನನ್ನ ಉಪವಾಸದ ಬೇಗೆಯಿಂದ ಶಾಂತಿ ತರುವುದರಲ್ಲಿ ಏನೂ ಅರ್ಥವಿಲ್ಲ, ಮನಸ್ಸು ಬುದ್ಧಿ ಎರಡನ್ನೂ ಪಾಪದಿಂದ ದೂರಗೊಳಿಸುವುದಕ್ಕಾಗಿ ಈ ಉಪವಾಸ ಮಾಡಿದ್ದೆ, ಆಗ ಮಾತ್ರ ನಾವು ಶುದ್ಧ ಪ್ರೇಮ, ಸತ್ಯ ಇಟ್ಟುಕೊಂಡು ನಿಜವಾದ ಶಾಂತಿಯನ್ನ ತರಲು ಸಾಧ್ಯವಾಗುತ್ತೆ. ಅದರಿಂದ ನನ್ನ ಉಪವಾಸದ ಯೋಚನೆ ಬಿಟ್ಟು ನೀವು ತೀವ್ರವಾಗಿ ಕೆಲಸದಲ್ಲಿ ತೊಡಗಿಕೊಳ್ಳಿ' ಎಂದರು ಬಾಪೂಜಿ.

ಜನ ಚಿಂತೆಯಿಂದ ಹಿಂದಿರುಗಿದರು, ನಿಜವಾಗಿ ಸಮಾಧಾನದ ಸ್ಥಿತಿ ಉಂಟಾಗುವವರೆಗೂ ಉಪವಾಸ ಬಿಡಿ ಅಂತ ಕೇಳುವುದು ಸರಿಯಲ್ಲವೆಂದು ಅವರಿಗೂ ಅರ್ಥವಾಯಿತು. ಮಧ್ಯಾಹ್ನ ೨–೦೦ ಗಂಟೆಗೆ ಒಬ್ಬ ಹೆಸರಾಂತ ನಾಯಕರು ಬಂದರು, ಅವರು ಎಲ್ಲಾ ಅಪರಾಧಗಳನ್ನೂ ಒಪ್ಪಿಕೊಂಡರು. 'ಸಂಜೆ ವೇಳೆಗೆ ಅವರ ಸ್ನೇಹಿತರೆಲ್ಲಾ ಗುಪ್ತವಾಗಿ ಆಯುಧಗಳನ್ನು ಸಮರ್ಪಿಸಿಬಿಡುವರೆಂದು' ವಚನ ನೀಡಿದರು. ಆಗ ಆಕ್ರಮಣಕಾರಿಗಳ ಈ ನಾಯಕ ತನ್ನ ಇಬ್ಬರು ಸಹಾಯಕರನ್ನು ಮೊಹಲ್ಲೆಯ ಎರಡು ಮುಸಲ್ಮಾನರ ಎರಡು ಅಂಗಡಿಗಳ ಕಾವಲು ಕಾಯುವುದಕ್ಕೆ ಅಂತ ನೇಮಿಸಿದ, ಸ್ವಲ್ಪ ಹೊತ್ತಿನ ನಂತರ ದುಷ್ಟರ ಮೂರನೆಯ ತಂಡ, ಭಾನುವಾರ ರಾತ್ರಿ ಮಹಾಕಾಂಡ ಆರಂಭ ಮಾಡಿದ್ದ ಗುಂಪು ಬಾಪೂಜಿಯನ್ನ ಭೇಟಿಯಾಗಲು ಬಂತು. ಅವರುಗಳು ವಾಸ್ತವವಾಗಿ ಬಿಚ್ಚು ಮನಸ್ಸಿನಿಂದ ತಮ್ಮ ಕೃತ್ಯಗಳನ್ನೆಲ್ಲಾ

ಒಪ್ಪಿಕೊಂಡರು. ನೀವು ಏನೇ ಶಿಕ್ಷೆ ಕೊಟ್ಟರೂ ನಮ್ಮ ಜೊತೆಗಾರರು ಅದನ್ನ ಅನುಭವಿಸುತ್ತಾರೆ, ಆದರೆ ನೀವು ಮಾತ್ರ ಉಪವಾಸ ಬಿಡಬೇಕು' ಎಂದು ಹೇಳುತ್ತಾ ಅವರು ಪರಿತಪಿಸುತ್ತಿದ್ದರು. ಅದಕ್ಕೆ, 'ನಿಮಗಿರುವ ಶಿಕ್ಷೆ ಅಂದರೆ ನೀವು ಮುಸಲ್ಮಾನರ ಹತ್ತಿರಕ್ಕೆ ಹೋಗಿ, ಇನ್ನು ಮುಂದೆ ಹೀಗೆ ಆಗುವುದಿಲ್ಲವೆಂದು ಅವರಿಗೆ ನಂಬಿಕೆ ಹುಟ್ಟಿಸಬೇಕು, ಅವರು ಈಗ ಧೈರ್ಯವಾಗಿ ಇರಬಹುದು, ಹೃದಯ ಪರಿವರ್ತನೆ ಆಗಿದೆ ಅಂತ ನನಗೆ ನಂಬಿಕೆ ಬರುವವರೆಗೂ ನಾನು ಉಪವಾಸ ಬಿಡುವುದಕ್ಕಾಗುವುದಿಲ್ಲ. ಆದರೆ ಇನ್ನು ತಡ ಮಾಡಬೇಡಿ, ನಾನು ಮುದುಕನಾದೆ, ಇನ್ನು ಹೆಚ್ಚು ಸಮಯ ಇರಲಾರೆ,' ಎಂದರು.

ಬಾಪೂಜಿಯನ್ನು ಭೇಟಿಯಾಗಲು ಜನ ಒಂದೇ ಸಮನೆ ಬರುತ್ತಲೇ ಇದ್ದರು. ನಗರ ಪುನಃ ಶಾಂತವಾಗಿ, ಆರೋಗ್ಯಕರವಾಗಿದೆ ಎಂದು ಸಂಜೆ ರಾಜಾಜಿಯವರ ಪತ್ರ ಬಂತು. ಸಂಜೆ ಸ್ವಲ್ಪ ಕಣ್ಣು ಮುಚ್ಚಿತ್ತು, ಅಷ್ಟರಲ್ಲೇ ಎಲ್ಲ ಧರ್ಮ–ಪಂಗಡಗಳ ಜನರ ನಿಯೋಗ ಬಾಪೂಜಿಯವರನ್ನು ಭೇಟಿಯಾಗಲೆಂದು ಬಂತು. ಅದರಲ್ಲಿ ಹಿಂದೂಗಳು, ಮುಸಲ್ಮಾನರು ಎಲ್ಲರೂ ಇದ್ದರು. ಸುಹರಾವರ್ದಿ, ಹಿಂದೂ ಮಹಾಸಭಾದ ಪ್ರಾಂತಾಧ್ಯಕ್ಷರಾಗಿದ್ದ ಎ.ಸಿ. ಮುಖರ್ಜಿ ಮತ್ತು ಸರದಾರ ನಿರಂಜನ ಸಿಂಹ ತಾಲೀಬ್ ಇದ್ದರು. ಇವರೆಲ್ಲರೂ, ನಾವು ನಗರವೆಲ್ಲಾ ಸುತ್ತಿ ಬಂದಿದ್ದೇವೆ, ನಗರದಲ್ಲಿ ಶಾಂತಿ ನೆಲಸಿದೆ ಅಂತ ನಮಗೆ ನಂಬಿಕೆಯಾಗಿದೆ, ಇನ್ನು ದಂಗೆ ಆಗಲ್ಲ, ಅಶಾಂತ ಏನಾದರೂ ಉಂಟಾದರೆ ಮೂರೂ ಜನ ಮುಖಂಡರು ಜವಾಬ್ದಾರಿ ತೆಗೆದುಕೊಳ್ಳುತ್ತೇವೆಂದರು. ಇದು ಕೋಮುಗಲಭೆ ಜಗಳವಲ್ಲ, ಗೂಂಡಾಗಳ ತುಚ್ಛ ಕರಾಳ ಕಾರ್ಯ ಅಂದರು. ಬಾಪೂಜಿ ಅವರಿಗೆ ಹೇಳಿದರು, ಗೂಂಡಾಗಳನ್ನ ನಾವೇ ತಯಾರು ಮಾಡುತ್ತೇವೆ, ಅದರಿಂದ ಅವರನ್ನ ಮುಗಿಸುವುದು ಕೂಡ ನಮ್ಮ ಕೆಲಸವೇ ಆಗಿರುತ್ತದೆ. ದುಷ್ಟರು ಒಂಟಿಯಾಗಿ ಬೆಳೆಯುವುದಿಲ್ಲ, ನೀವು ಪ್ರೀತಿಯಿಂದ ಉಪವಾಸವನ್ನ ಬಿಡಿಸೋಣ ಎಂದು ಬಂದಿದ್ದೀರಿ. ದುಷ್ಟರ ನಾಯಕರು ಇಲ್ಲಿಗೆ ಬಂದಿದ್ದು ಕ್ಷಮೆಬೇಡುತ್ತಾರೆ. ಆದರೆ ನಾನು ಎರಡು ಪ್ರಶ್ನೆಗಳನ್ನ ಕೇಳಬಯಸುತ್ತೇನೆ :

೧) ಕಲ್ಕತ್ತೆಯಲ್ಲಿ ಮುಂದೆಂದೂ ಹೀಗೆ ಆಗುವುದಿಲ್ಲ ಎಂದು ಆಶ್ವಾಸನೆ ನೀಡಬಲ್ಲಿರಾ? ನಿಜವಾಗಿಯೂ ಜನರ ಹೃದಯ ಪರಿವರ್ತನೆ ಆಗಿದೆಯೇ? ಅವರು ಇಂತಹ ಘಟನೆಗಳನ್ನು ಸಹಿಸುವುದಿಲ್ಲವೇ? ನೀವುಗಳ ಅದರ ಗ್ಯಾರಂಟಿ ಕೊಡುವುದಕ್ಕೆ ಆಗುವುದಿಲ್ಲ ಎಂದರೆ ನಾನು ಉಪವಾಸ ಮಾಡ್ತೀನಿ, ಸುಮ್ಮನಿರಿ, ಇಂತಹ ಪವಿತ್ರ ಉಪವಾಸದಲ್ಲಿ ದೇವರೇ ರಕ್ಷಿಸುತ್ತಾನೆ.

೨) ನಾವು ಸರ್ವಶಕ್ತರಲ್ಲ, ಅದರಿಂದ ಪುನಃ ಏನಾದರೂ ಹೀಗೆಯೇ ಆಯಿತು ಅಂದರೆ ಘಟನೆಯ ವರದಿ ನೀಡುವುದಕ್ಕಾಗಿ ನೀವು ಬದುಕಿರುವುದಿಲ್ಲವೆಂದು

ನನಗೆ ವಚನ ನೀಡ್ತೀರಾ, ವಚನ ಭಂಗವಾಯಿತೆಂದರೆ ನಾನು ಬದುಕಿರುವುದಿಲ್ಲ ಎಂದು ನಿಮಗೆ ತಿಳಿದಿರಬೇಕು, ನೀವು ಹೇಳುವುದೊಂದು, ಮಾಡುವುದೊಂದಾದರೆ ಸಾವು ನಿಮ್ಮ ಹಣೆಮೇಲಿರುತ್ತದೆ, ಸ್ಪಷ್ಟ ಹಾಗೂ ನೇರವಾದ ಉತ್ತರ, ಜೊತೆ ಲಿಖಿತವಾಗಿ ನೀವು ನನಗೆ ಆಶ್ವಾಸನೆ ನೀಡಿ.

ಎಲ್ಲರೂ ಸುಮ್ಮನೆ ನಿಂತು ಕೇಳುತ್ತಿದ್ದರು. ಶಹೀದರು ಮಾತನಾಡಿದರು: 'ಕಲ್ಕತ್ತಾ ತನಗೆ ತಾನೆ ಶಾಂತವಾಗುತ್ತದೆಂದು ಆಗ ನೀವು ಉಪವಾಸ ಬಿಡುತ್ತೇನೆಂದು ಹೇಳಿದ್ದಿರಿ, ಈ ಲಿಖಿತ ಆಶ್ವಾಸನೆ ಒಂದು ಹೊಸ ಷರತ್ತು ಆಯಿತು?'

'ಇವೆಲ್ಲವೂ ಕಾನೂನಿನ ಪಿಷ್ಟಪೇಷಣವೇ. ಇದು ಶರತ್ತೂ ಅಲ್ಲ, ಉಪವಾಸದ ಶರತ್ತುಗಳಲ್ಲಿ ಇದೂ ಕೂಡ ಸೇರಿತ್ತು. ನಾನು ಹೇಳಿದ್ದು ಪೂರ್ತಿ ಸತ್ಯ, ನಿಮಗಂತೂ ಎಲ್ಲಾ ಅರ್ಥವಾಗುತ್ತೆ, ಪ್ರಾಮಾಣಿಕವಾಗಿ ಪಶ್ಚಾತ್ತಾಪವಾಗುತ್ತಿದ್ದರೆ ಹಸ್ತಾಕ್ಷರ ನೀಡುವುದೇನೂ ಕಷ್ಟವಾಗುವುದಿಲ್ಲ, ನಾನು ಬದುಕಿರಲಿ ಅನ್ನುವುದಕ್ಕಾಗಿ ನೀವು ಏನೋ ಬರೆದು ಬಿಟ್ಟಿರಿ ಅಂದರೆ ನಾನು ಸಾಯುವುದಕ್ಕೆ ಖಚಿತವಾದ ವ್ಯವಸ್ಥೆ ಆಗಿ ಹೋಗುತ್ತೆ.'

ಬಾಪೂಜಿ ಮತ್ತೆ ಅವರಿಗೆ ತಿಳಿಸಿ ಹೇಳಿದರು. 'ನಿಮಗೆ ಅರ್ಥವಾಗಲಿಲ್ಲ, ಅಪರಾಧ ಆಗುವುದಿಲ್ಲ ಅಂತ ಅಲ್ಲ, ಆದರೆ ಈ ಹುಚ್ಚು ಪುನಃ ಉಂಟಾಗ ಬಾರದು, ದೇಶವೆಲ್ಲಾ ಹುಚ್ಚೆದ್ದು ಕುಣಿದರೂ ಕಲ್ಕತ್ತೆಯ ವಿವೇಕ ತನ್ನ ಎಲ್ಲೆಯನ್ನು ಮೀರಬಾರದು.'

ಅಲ್ಲಿ ನೆರೆದಿದ್ದ ಜನರು ಪರಿಸ್ಥಿತಿ ಎಷ್ಟು ಗಂಭೀರವಾಗಿದೆ. ಇಲ್ಲಿ ತಮ್ಮ ಗಹನವಾದ ಜವಾಬ್ದಾರಿ ಏನು ಅಂತ ಅರ್ಥಮಾಡಿಕೊಳ್ಳುತ್ತಿದ್ದರು. ರಾಜಾಜಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಕೃಪಲಾನಿ ಕೂಡ ಈ ಸಂದರ್ಭದಲ್ಲಿ ಅಲ್ಲೇ ಇದ್ದರು. ಅವರು ಬಾಪೂಜಿ ವಿಶ್ರಾಂತಿಪಡೆಯಲಿ ಬಿಡಿ, ಅಲ್ಲಿಯವರೆಗೂ ನಾವುಗಳು ಕುಳಿತು ಮಾತನಾಡಿಕೊಳ್ಳೋಣವೆಂದು ಹೇಳಿದರು. ಅದೇ ಹೊತ್ತಿಗೆ ನಲವತ್ತು ಮಂದಿ ಹಿಂದೂ–ಮುಸಲ್ಮಾನರು ಕೂಡಿ ಒಂದು ಅಪೀಲ್ 'ಮುಂದೆಂದೂ ಹೀಗಾಗುವುದಿಲ್ಲವೆಂದು ನಾವು ನಿಮಗೆ ಆಶ್ವಾಸನೆ ನೀಡುತ್ತೇವೆ' ಎಂದು ಬರೆದುಕೊಂಡು ಬಂದರು. ಅವರು ಹಿಂದೂ–ಮುಸಲ್ಮಾನರು ಇರುವ ಒಂದು ಮಿಶ್ರಿತ ಮೊಹಲ್ಲೆಯಲ್ಲಿ ವಾಸ ಮಾಡುತ್ತಿದ್ದ ಜನ, ಅಲ್ಲಿ ಯಾವಾಗಲೂ ದಂಗೆಗಳು ನಡೆಯುತ್ತಿರುತ್ತಿದ್ದವು, ಇಷ್ಟು ಹೆಚ್ಚು ಮಾತನಾಡಿದ್ದರಿಂದ ಬಾಪೂಜಿ ತೀರ ದುರ್ಬಲರಾಗಿ ತುಂಬಾ ಆಯಾಸಗೊಂಡಿದ್ದರು, ತಲೆ ಸುತ್ತು ಬರುತ್ತಿತ್ತು, ಶಾಂತಿಯಿಂದ ಬಾಪೂಜಿ ರಾಮನಾಮ ಸ್ಮರಣೆ ಮಾಡುತ್ತಿದ್ದರು.

ರಾಜಾಜಿ ಒಂದು ಷರತ್ತಿನ ಪತ್ರ ಸಿದ್ಧಪಡಿಸಿದರು, ಅದಕ್ಕೆ ಎಲ್ಲಾ ವರ್ಗದ ಜನರೂ ಹಸ್ತಾಕ್ಷರ ನೀಡಿದರು. ನಂತರ ಹೆಚ್ಚು ಸಮಯ ಹಾಳು ಮಾಡದೆ

ಎಲ್ಲರೂ ಬಾಪೂಜಿ ಬಳಿಗೆ ಬಂದರು, ನಂತರ, 'ಸರ್, ನನ್ನ ಹಸ್ತಾಕ್ಷರದಿಂದ ಏನು ಪ್ರಯೋಜನ? ಪಾಕಿಸ್ತಾನದಿಂದ ಕರೆ ಬಂತೆಂದರೆ ನಾನು ಅಲ್ಲಿಗೆ ಹೋಗಬೇಕಾಗುಬಹುದು' ಎಂದರು.

ಬಾಪೂಜಿ: 'ನೀನು ಇಲ್ಲದೆ ಇದ್ದಾಗ, ನಿನ್ನ ಅನುಯಾಯಿಗಳು ನೀನು ಕೊಟ್ಟಿರುವ ವಚನವನ್ನ ಅನುಸರಿಸುವಂತೆ ಎಚ್ಚರವನ್ನ ನೀನು ವಹಿಸಬೇಕಾಗುತ್ತದೆ, ಜೊತೆಗೆ ನೀನು ಪಾಕಿಸ್ತಾನದಿಂದ ಹಿಂದಿರುಗಲೂ ಬಹುದಲ್ಲ' ಅಂದರು.

ಉಪವಾಸ ಮುರಿಯುವುದಕ್ಕೆ ಮುಂಚೆ ಬಾಪೂಜಿ ಅಲ್ಲಿದ್ದವರಿಗೆ ಹೇಳಿದರು, 'ನಾನು ಪಂಜಾಬಿಗೆ ಹೋಗುವ ಹಾಗೆ ಆಗಬೇಕು ಅಂತ ಉಪವಾಸವನ್ನು ಮುರಿಯುತ್ತಿದ್ದೇನೆ. ನನಗೆ ನೀವು ಕೊಟ್ಟಿರುವ ನಂಬಿಕೆಯ ಮೇಲೆ ಶ್ರದ್ಧೆ ಇದೆ, ನಾನು ನಿರಾಶನಾಗುವ ಪರಿಸ್ಥಿತಿ ಬರಲಾರದು ಅಂತ ಆಶಿಸುತ್ತೇನೆ, ನನಗೆ ದೇಶ ಸೇವೆ ಮಾಡುವ ಆಸೆ ಇದೆ, ಆದರೆ ಬದುಕಿರಬೇಕು ಅನ್ನುವುದಕ್ಕಾಗಿ ಮೋಸ ಹೋಗಲು ಇಷ್ಟಪಡುವುದಿಲ್ಲ. ಅದರಿಂದ ಎಚ್ಚರಿಕೆಯಿಂದ ಅದನ್ನ ದಯವಿಟ್ಟು ನೀವು ಹಗುರಗೊಳಿಸಬೇಡಿ. ಇಂದು ದೇಶದ ಸುರಕ್ಷತೆಯ ಕೀಲಿಕೈ ಕಲ್ಕತ್ತಾ ನಗರದ ಜನರ ಸಂಸ್ಕಾರದಲ್ಲಿ ಅಡಗಿದೆ, ಇಲ್ಲಿ ಏನಾದರೂ ಆಯಿತು ಅಂದರೆ ಇಡೀ ದೇಶದ ಮೇಲೆ ಅದರ ಪ್ರಭಾವ ಕಂಡುಬರುತ್ತದೆ, ಇಡೀ ಪ್ರಪಂಚ ಹಿಡಿತಕ್ಕೆ ಸಿಗದೆ ಇರುವಂತಹ ಸ್ಥಿತಿಯನ್ನು ತಲಪಿದರೂ ಕಲ್ಕತ್ತಾ ತನ್ನ ಧೈರ್ಯ, ವಿವೇಕ, ಮರ್ಯಾದೆಯನ್ನ ಕೈಬಿಡಲ್ಲ ಎಂದು ಪ್ರತಿಜ್ಞೆ ಮಾಡಿ. ಈಗ ತಾನೆ ನೀವು ಈಶ್ವರ ಅಲ್ಲಾಹ್ ತೇರಾ ನಾಮ್ ಅಂತ ಕೇಳಿಸಿಕೊಂಡಿರಿ, ಅದೇ ನಮಗೆ ಸಾಕ್ಷಿಯಾಗಿದೆ' ಎಂದರು. ೭೩ ಗಂಟೆಗಳ ನಂತರ ಶಹೀದ್ ಕೈಯಲ್ಲಿ ಕಿತ್ತಳೆ ರಸವನ್ನು ಕುಡಿದು ಬಾಪೂಜಿ ಉಪವಾಸ ಮುರಿದರು, ಬಾಪೂಜಿಯವರ ಕಾಲು ಹಿಡಿದು ಶಹೀದ್ ಅಳತೊಡಗಿದರು, ಎಲ್ಲರೂ ಒಟ್ಟುಗೂಡಿ ಪ್ರಾರ್ಥನೆ ಮಾಡಿದರು ಮತ್ತು ಗುರುದೇವರ ಭಜನೆ ಹಾಡಿದರು:

**ಜೀವನ ಜೋಖನ್ ಸುಖಾಯ ಜಾಯ್**
**ಕರುಣಾ ಧಾರಾಯೆ ಐಶೊ**
**ಸತನ ಮಾಧುರೀ ಲುಕಾಯ ಜಾಯ್**
**ಗೀತ್ ಸುಧಾರಸ ಐಶೋ ॥**
**ಕರ್ಮ ಜಖನ್ ಪ್ರಬಲ್ ಆಕಾರ್, ಗರಜಿ ಉಠಿಯಾ ಢಾಕೇ ಚಾರಿ ಧಾರ್।**
**ಹೃದಯ ಪ್ರಾಣೇ ಹೇ ಜೀವನ ನಾಥ್, ಶಾಂತ ಚರಣೇ ಐಶೊ ।**
**ಅಪನಾರ್ ಜಬೇ ಕರಿಯಾ ತೃಪಣ, ಕೋಣೇ ಪಡೇ ಥಾಕೇ ದೀನ ಹೀನಮನ್।**
**ದುವಾರ್ ಖುಲಿಯಾ ಹೇ ಉದಾರನಾಥ್, ರಾಜ ಸಮಾರೋಹೇ ಐಶೋ।**
**ವಾಸನಾ ಜೊಖನ್ ವಿಪುಲ ಧುಲಾಯಾ, ಅಂಧ ಕರಯಾ ಅಬೋಧೇ ಭಲಾಯ।**
**ಓಹೇ ಪವಿತ್ರ ಓಹೋ ಅನಿದ್ರ – ರುದ್ರ ಆಲೋಕೇ ಐಶೋ ॥**

ಪ್ರಾರ್ಥನೆಯಾದ ನಂತರ ಬಾಪೂಜಿ ರಾಜಾಜಿಗೆ ಹೇಳಿದರು, 'ನಾಳೆ ಪಂಜಾಬಿಗೆ ಹೋಗಬೇಕೆಂದಿದ್ದೇನೆ.' ಈ ದುರ್ಬಲ ಸ್ಥಿತಿಯಲ್ಲಿರುವ ಬಾಪೂಜಿಯನ್ನು ತಡೆಯುವ ರೀತಿ ಹೇಗೆ? ಎಂದು ರಾಜಾಜಿಗೆ ಚಿಂತೆಯಾಯಿತು. ಬಹಳ ಕುಶಲತೆಯಿಂದ ಶಹೀದರು ಸಮಸ್ಯೆಯನ್ನು ಬಗೆಹರಿಸಿದರು, ಹೇಳಿದರು, 'ಕಲ್ಕತ್ತೆಯ ಎಲ್ಲ ನಿವಾಸಿಗಳ ಪ್ರಾರ್ಥನೆಯಂತೆ ಅವರಿಗೆ ನೀವು ಸಂಬೋಧಿಸಿದ ಸುಖ ನೀಡದೆ ಇಲ್ಲಿಂದ ಹೋಗಲಾಗುವುದಿಲ್ಲ, ಅದರಿಂದ ಅಲ್ಲಿಯವರೆವಿಗೂ ನೀವು ಕಲ್ಕತ್ತಾವನ್ನು ಬಿಟ್ಟು ಹೋಗಲು ಸಾಧ್ಯವಿಲ್ಲ, ನಾಳೆ ಪ್ರಾರ್ಥನಾ ಸಭೆ ಆಯಿತೆಂದರೆ ಉಲ್ಲಾಸದಿಂದ ಕೂಡಿದ ಜನರನ್ನ ಹಿಡಿತದಲ್ಲಿಡಲು ಕಷ್ಟವಾಗುತ್ತೆ, ನಾಡಿದ್ದಿಗೆ ಮೊದಲು ಪ್ರಾರ್ಥನಾ ಸಭೆ ಆಗಲು ಸಾಧ್ಯವಿಲ್ಲ, ಅದರಿಂದ ಅಲ್ಲಿಯವರೆವಿಗೆ ನೀವು ಕಲ್ಕತ್ತಾ ಬಿಟ್ಟು ಹೋಗುವುದು ಸರಿಯಲ್ಲ' ಎಂದರು. ಎಲ್ಲರೂ ಶಹೀದರ ಮಾತನ್ನು ಸಮರ್ಥಿಸಿದರು. ಉಪವಾಸ ಬಿಟ್ಟು ಮಾರನೆಯ ದಿನ ೧೦೦೦ ಮೈಲು ದೂರ ರೈಲಿನಲ್ಲಿ ಯಾತ್ರೆ ಮಾಡುವುದರಿಂದ ಬಾಪೂಜಿಗೆ ಕಷ್ಟವಾಗುತ್ತದೆಂದು ಈ ಎರಡು ದಿನಗಳ ಕಾಲ ಅವರ ಯಾತ್ರೆಯನ್ನು ಮುಂದೂಡಲಾಗಿದೆಯೆಂದು ಯಾರೂ ತಿಳಿಯಗೊಡಲಿಲ್ಲ. ಮಾರನೆಯ ದಿನ ಬಾಪೂಜಿ ಯಾತ್ರೆ ಕೈಗೊಂಡಿದ್ದಿದ್ದರೆ ಆನಂದ ತುಂದಿಲರಾಗಿ ಭಾರತದ ಜನ ಅವರಿಗೆ ತೊಂದರೆ ಕೊಡುತ್ತಿದ್ದರು. ರಾತ್ರಿ ೧೦-೩೦ ಗಂಟೆಗೆ ಮತ್ತೊಂದು ಪಂಗಡ ಬಂದು ತಮ್ಮ ಆಯುಧಗಳನ್ನು ಸಮರ್ಪಣೆ ಮಾಡಿ ಹೋದರು. ಮಧ್ಯದಲ್ಲಿ ಲಾಠಿ ಚಲಾಯಿಸುವ ಸಭ್ಯರು ಕೂಡ ಕ್ಷಮಾಯಾಚನೆ ಮಾಡಿ ಹೋದರು. ಬಾಪೂಜಿ ಆಯುಧಗಳನ್ನು ತೆಗೆದುಕೊಂಡು 'ನಿಮ್ಮ ಮನಸ್ಸಿಗೆ ಸ್ವಲ್ಪವೂ ನೋವಾಗಿಲ್ಲ ತಾನೆ?' ಎಂದು ಕೇಳಿದರು. ಎಲ್ಲರೂ ಒಂದೇ ಧ್ವನಿಯಲ್ಲಿ ಉತ್ತರ ಕೊಟ್ಟು, 'ಆಯುಧಗಳನ್ನು ಬಿಟ್ಟೆವೆಂದು ಸ್ವಲ್ಪವೂ ಬೇಸರವಿಲ್ಲ,' ಎಂದು ಉತ್ತರ ಕೊಟ್ಟರು, ಸೆಪ್ಟೆಂಬರ್ ೫ ರಂದು ದಿನವಿಡೀ ಆಯುಧಗಳು ರಾಸಿ-ರಾಸಿ ತುಂಬಿದವು - ಬಂದೂಕುಗಳು, ಮದ್ದು, ಚೂರಿ, ಕತ್ತಿ, ಗುಂಡು, ಮೊದಲಾದವುಗಳ ತಂಡ ಬಂದಿಳಿಯಿತು. ಸಂಕೋಚ, ಹಿಂಜರಿಕೆಯೊಂದಿಗೆ ಜನ ಕ್ಷಮೆ ಯಾಚಿಸಿದರು. ಮಧ್ಯಾನ್ಹ ಶಹೀದ್ ಹೇಳಿದರು, 'ನಮ್ಮಿಬ್ಬರ ಮಿಷನ್ ಕೂಡ ಸಫಲವಾಯಿತು, ಈಗ ಮುಂದೆ ಏನು ಆದೇಶ ನೀಡುವಿರಿ?' ಬಾಪೂಜಿ ಅವರಿಗೆ, 'ನಿನ್ನ ಹೃದಯ ಪರಿವರ್ತನೆಯಾಗಿದ್ದಲ್ಲಿ ಇನ್ನು ಭವಿಷ್ಯದಲ್ಲಿ ಅಧಿಕಾರ ಮೋಹಕ್ಕೆ ಸಿಲುಕಿಕೊಳ್ಳಬೇಡ,' ಎಂದರು.

ಸೆಪ್ಟೆಂಬರ್ ೬ರ ವಿಶಾಲವಾದ ಪ್ರಾರ್ಥನಾ ಸಭೆಯಲ್ಲಿ ಬಾಪೂಜಿ ತನ್ನ ಮಾತನ್ನು ಪುನರಾವರ್ತನೆ ಮಾಡಿ ಹೇಳಿದರು, ಶಹೀದ್ ತಾನು ಬಾಪೂಜಿಯವರ ಜೊತೆ ಪಂಜಾಬಿನಲ್ಲಿ ಶಾಂತಿಯ ಕಾರ್ಯ ಮಾಡುವೆನೆಂದು ಘೋಷಿಸಿದರು. ಮಹಾತ್ಮಾಜೀಯವರ ಆದೇಶ ಪಡೆದು ಕೆಲಸ ಮಾಡುವೆನೆಂದು ಹೇಳಿದರು.

ಸೆಪ್ಟೆಂಬರ್ ೭, ೧೯೪೭ ರಂದು ರಾತ್ರಿ ೮–೩೦ ಗಂಟೆಗೆ ಬಾಪೂಜಿ ಕಲ್ಕತ್ತಾದಿಂದ ಹೊರಟರು, ಜನರು ಬಾಪೂಜಿಯವರಿಗೆ ಆರತಿ ಬೆಳಗಲಿಚ್ಛಿಸಿದರು. ಅದಕ್ಕೆ ಬಾಪೂಜಿ, 'ಈ ದೀಪವನ್ನು ಆರಿಸಿ, ಅದರ ಮೇಲೆ ತುಪ್ಪ ಸುರಿದು, ಬಡವರಿಗೆ ಹಂಚಿ' ಎಂದರು.

ರಾತ್ರಿ ಒಂಬತ್ತು ಗಂಟೆಗೆ ಬೆಲ್ಲೂರ್‌ನಲ್ಲಿ ಬಾಪೂಜಿ ಟ್ರೈನ್ ಹತ್ತಿದರು. ಜನರ ಗುಂಪಿನಿಂದ ದೂರ ಉಳಿಯಬೇಕೆಂಬುದು ಅವರ ಉದ್ದೇಶವಾಗಿತ್ತು, ಸ್ಟೇಷನ್‌ನಲ್ಲಿ ಮುಖ್ಯಮಂತ್ರಿ ಪ್ರಫುಲ್ಲ ಚಂದ್ರಸೇನ್ ಮತ್ತು ಸುಹರಾವರ್ದಿ ಬಂದಿದ್ದರು. ಶಹೀದ್ ಬಾಗಿ ಬಾಪೂಜಿಗೆ ನಮಸ್ಕಾರ ಮಾಡಿದರು, ಬೀಳ್ಕೊಡುಗೆಯ ವೇಳೆಯಲ್ಲಿ ಶಹೀದ್ ಕಣ್ಣಗಳಲ್ಲಿ ನೀರು ಉಕ್ಕುತ್ತಿತ್ತು. ಬಹುಶಃ ಜೀವನದಲ್ಲಿ ಮೊದಲ ಬಾರಿ ಎಲ್ಲ ಜನರೆದುರು ಶಹೀದ್ ಸುಹರಾವರ್ದಿ ಹೀಗೆ ಅತ್ತಿದ್ದು ಅನಿಸುತ್ತದೆ.

ನವೆಂಬರ್ ೧೯೪೬ ನೋವಾಖಾಲಿಯಲ್ಲಿದ್ದುಕೊಂಡು ಬಾಪೂಜಿ ಬಿಹಾರದ ಮುಸ್ಲಿಮರನ್ನು ಉಳಿಸಿದ್ದರು. ಈ ಬಾರಿ ಅವರು ಕಲ್ಕತ್ತಾದಿಂದ ರಕ್ತ ಸೋರುತ್ತಿದ್ದ ಪಂಜಾಬಿಗೆ ಹೋಗಬಯಸಿದ್ದರು, ಆದರೆ ಅವರು ಹೋಗಲು ಆಗಲಿಲ್ಲ. ಮಧ್ಯದಲ್ಲೇ ದೆಹಲಿಗೆ ಬೆಂಕಿ ಹೊತ್ತಿತ್ತು, ದೆಹಲಿಯಲ್ಲಿ ಹುಚ್ಚೆದ್ದ ಕಡೆಗಳಲ್ಲೆಲ್ಲ, ಕೋಮುವಾರು, ಬೆಂಕಿ ಉಲ್ಬಣಿಸಿದಾಗೆಲ್ಲ ಅವರು ಜನರಿಗೆ ನೆರವು ನೀಡಲು ತಲುಪಿದರು. ಅವರ ಪ್ರಾರ್ಥನಾ ಸಭೆಯಲ್ಲಿ ಯಾರೇ ಬರಲಿ, ಬಾರದಿರಲಿ, ಅವರ ಶಾಂತ, ಮೌನ ದೇಶದ ಆಜ್ಞಾಪತ್ರ ಜಾರಿಯಾಗಿತ್ತು. ಕೋಮುವಾದಿತನದ ಬಿರುಗಾಳಿಯಲ್ಲಿ ಬಾಪೂಜಿ ದೀಪಸ್ತಂಭವಾಗಿ ಸ್ವಾತಂತ್ರ್ಯದ ನಾವೆಯನ್ನೂ ಕೋಮುವಾರು ಬಂಡೆಗಳು ಮತ್ತು ಉದ್ರೇಕದ ಹುಚ್ಚು ಅಲೆಗಳಲ್ಲಿ ಮುಳುಗದಿರುವಂತೆ ಉಳಿಸಿದರು. ದೇಶ ವಿಭಜಿತವಾಯಿತು, ಲಕ್ಷಾಂತರ ಜನ ಸತ್ತುಹೋದರು, ಆದರೆ ಬಾಪೂಜಿ ಎಚ್ಚರ ವಹಿಸಿದ್ದರಿಂದ, ನಿರಂತರವಾಗಿ ಶ್ರಮಪಟ್ಟುದರಿಂದ ದೇಶ ಒಡೆಯಲಿಲ್ಲ. ಆಗಸ್ಟ್ ೨೬ರಂದು ಲಾರ್ಡ್ ಮೌಂಟ್‌ಬ್ಯಾಟನ್ ಬಾಪೂಜಿಗೆ ಹೀಗೊಂದು ಪತ್ರ ಬರೆದಿದ್ದರು.... 'ಪಂಜಾಬ್‌ನಲ್ಲಿ ಐವತ್ತೈದು ಸಾವಿರ ಸೈನಿಕರು ಸಿದ್ಧವಾಗಿದ್ದಾರೆ. ಆದರೆ ಅದು ಸುಡುತ್ತಿದೆ. ಕಲ್ಕತ್ತಾದಲ್ಲಿ ನಮ್ಮ ಬಳಿ ಒಬ್ಬ ಶಾಂತಿ ಸೈನಿಕನಿದ್ದಾನೆ. ಮತ್ತಲ್ಲಿ ದಂಗೆ ಶಾಂತವಾಗಿದೆ. ಒಬ್ಬ ಮನುಷ್ಯನ ಈ ಶಾಂತಿ ಗಡಿ ಸುರಕ್ಷಾದಳಕ್ಕೆ ಜಯವಾಗಲಿ.'

* * * *

# ೩೩. ರಕ್ತದ ಕಣ್ಣೀರು

ಕಲ್ಕತ್ತಾದ ಉಪವಾಸದಿಂದಾಗಿದ್ದ ದುರ್ಬಲತೆ ಇನ್ನೂ ಕಳೆದಿರಲಿಲ್ಲ. ಅಷ್ಟರಲ್ಲೇ ೭ ಸೆಪ್ಟೆಂಬರ್ ೧೯೪೭ರಂದು ಬಾಪೂಜಿ ಟ್ರೈನ್‌ನಲ್ಲಿ ಹೊರಟುಬಿಟ್ಟರು. ಪಂಜಾಬಿಗೆ ಹೋಗಿ ಅಲ್ಲಿಯ ಕೋಮುವಾರು ಪರಿಸ್ಥಿತಿಯನ್ನು ಹತೋಟಿಗೆ ತರಬೇಕು ಅನ್ನುವುದು ಅವರ ಉದ್ದೇಶವಾಗಿತ್ತು. ೧೯೪೭ರ ದೈವೇಚ್ಛೆ ಕೂಡ ಎಷ್ಟು ವಿಚಿತ್ರವಾಗಿತ್ತು ಅಂದರೆ ನೋವಾಖಾಲಿ ಬಿಟ್ಟು ಅವರು ಬಿಹಾರಕ್ಕೆ ಹೋಗಬೇಕಾಯಿತು. ಇನ್ನೂ ಆ ಕೆಲಸ ಮುಗಿದಿರಲಿಲ್ಲ, ಅಷ್ಟರಲ್ಲೇ ದೆಹಲಿಗೆ ಓಡಬೇಕಾಗಿ ಬಂತು. ಸ್ವಾತಂತ್ರ್ಯ ಸಿಗುವುದಕ್ಕೆ ಕೆಲವು ವಾರಗಳು ಮುಂಚೆ ರಾಜಕೀಯದ ಸಮಸ್ಯೆಗಳು ಎಷ್ಟು ಜಟಿಲವಾಗಿದ್ದವು ಅಂದರೆ ದೆಹಲಿಯಲ್ಲಿ ಇದ್ದುಕೊಂಡು ದೇಶದಲ್ಲಿ ಪ್ರತಿದಿನ ಕೆಡುತ್ತಿದ್ದ ನಾಡಿ ಮಿಡಿತದ ಮೇಲೆ ೨೪ ಗಂಟೆ ಕಾಲ ಗಮನ ಇಟ್ಟುಕೊಳ್ಳಬೇಕಾದದ್ದು ಅತಿ ಆವಶ್ಯಕವಾಗಿರುತ್ತಿತ್ತು, ಇಲ್ಲದಿದ್ದರೆ ದೇಶದ ನಾಜೂಕಾದ ಭವಿಷ್ಯ ಅನಿಶ್ಚಿತವಾಗಿಬಿಡುತ್ತಿತ್ತು. ಬಾಪೂಜಿ ದೆಹಲಿಯಿಂದ ಹೊರಟು ನೋವಾಖಾಲಿಯ ಗಾಯಗಳನ್ನ ಮಾಯಿಸಬೇಕು ಅಂತ ಅಂದುಕೊಂಡಿದ್ದರು, ಅಷ್ಟರಲ್ಲಿ ಕಲ್ಕತ್ತಾದ ಬೆಂಕಿ ನಡುವೆ ಕುಳಿತು ಅದನ್ನ ಆರಿಸುವುದು ಅಗತ್ಯವಾಯಿತು, ಕಲ್ಕತ್ತಾದಲ್ಲಿದ್ದುಕೊಂಡು ಬಾಪೂಜಿ ನೋವಾಖಾಲಿಯ ಹಿಂದೂಗಳನ್ನು ಉಳಿಸಿದರು ಅಂದರೆ ಇನ್ನೊಂದು ಕಡೆ ಬಿಹಾರದ ಮುಸ್ಲಿಂ ಪ್ರಜೆಗಳನ್ನು ಉಳಿಸಿದರು.

ಕಲ್ಕತ್ತಾ ತಾನು ಮಾಡಿದ್ದರ ಫಲ ಅನುಭವಿಸಿ, ಅದರಿಂದ ಇನ್ನೂ ಚೇತರಿಸಿಕೊಳ್ಳುತ್ತಾ ಇರುವಷ್ಟರಲ್ಲೇ ರಕ್ತ ಹರಿಯುತ್ತಿದ್ದ ಪಂಜಾಬನ್ನು ತಲುಪುವುದು ಅಗತ್ಯವಾಯಿತು. ಆದರೆ ದೇವರ ಮಾಯೆ ಹೇಗೆ ಅಂತ ಹೇಳುವುದಕ್ಕೇ ಆಗಲ್ಲ. ೯ನೇ ಮೇ ಕಲ್ಕತ್ತಾ ಮೇಲ್ ದೆಹಲಿ ತಲಪಿತು. ಅಲ್ಲಿ ಸರದಾರ್ ಪಟೇಲರು ಬಾಪೂಜಿಯನ್ನ ಬರಮಾಡಿಕೊಳ್ಳುವುದಕ್ಕೆಂದು ಸ್ಟೇಷನ್ನಿಗೆ ಬಂದಿದ್ದರು. ಯಾವಾಗಲೂ ನಗುತ್ತಾ ಇರುತ್ತಿದ್ದ ಹಾಸ್ಯಪ್ರಿಯ ಸರದಾರರ ಗಂಭೀರವಾಗಿದ್ದ ಮುಖವನ್ನ ನೋಡಿ ಬಾಪೂಜಿ ಬೆಚ್ಚಿದರು. ಸರದಾರರನ್ನು ಬಿಟ್ಟು ಇನ್ನು ಯಾರೂ ಪರಿಚಿತ, ಮಿತ್ರ ಕೂಡ ಸ್ಟೇಷನ್ನಿಗೆ ಬಂದಿರಲಿಲ್ಲ. ಮೋಟರ್ ಗಾಡಿಯಲ್ಲಿ ಸರದಾರರು ಡಿಸೆಂಬರ್ ೪ ರಿಂದ ದೆಹಲಿ ಉರಿಯುತ್ತಿದೆ ಅಂತ ಸುದ್ದಿ ನೀಡಿದರು, ಸೈನ್ಯ ಬಲದಿಂದ ನಗರದಲ್ಲಿ ಶ್ಮಶಾನದ ನಿರ್ಜೀವ ಶಾಂತಿ ನೆಲಸಿದೆ ಅಂತ ತಿಳಿಸಿದರು. ಬಾಪೂಜಿಯನ್ನ

ಭಂಗಿ ಕಾಲೋನಿಗೆ ಕರೆದೊಯ್ಯಲಿಲ್ಲ, ಬಿಡಲಾ ಹೌಸ್‌ಗೆ ಕರೆದೊಯ್ದರು. ಭಂಗೀ ಕಾಲೋನಿಯಲ್ಲಿದ್ದ ಅವರ ಮನೆಯನ್ನ ನಿರಾಶ್ರಿತರುಗಳಿಗೆ ಕೊಟ್ಟಿದ್ದರು. ಮನೆ ಕಳೆದುಕೊಂಡಿದ್ದ ಆ ಜನರನ್ನ ಅಲ್ಲಿಂದ ಕಳುಹಿಸುವುದು ಅಂದರೆ ಕಷ್ಟವಾಗುತ್ತಿತ್ತು. ಬಿಡಲಾ ಹೌಸ್‌ಗೆ ಬಂದು ತಲಪುವಷ್ಟರಲ್ಲಿ ನೆಹರೂ ಬಹಳ ನಿರಾಶೆಯಿಂದ ಕೂಡಿ, ದುಃಖದ ಮುಖ ಹೊತ್ತು ಅಲ್ಲಿಗೆ ಬಂದರು. ನೆಹರೂ ವ್ಯಥೆ–ದುಃಖದಿಂದ ಕೂಡಿ ಒದ್ದಾಡುತ್ತಿದ್ದರು, 'ಈ ನತದೃಷ್ಟರು ದೆಹಲಿಯನ್ನ ಹಾಳು ಮಾಡಿಬಿಟ್ಟರು, ರಸ್ತೆಗಳ ಮೇಲೆ ಹೆಣಗಳು ಕೊಳೆಯುತ್ತಾ ಬಿದ್ದಿವೆ, ನಲವತ್ತೆಂಟು ಗಂಟೆ ಕಾಲ ಈ ನಗರದಲ್ಲಿ ಲೂಟಿ – ಹತ್ಯೆ ನಡೆಯುತ್ತಲೇ ಇತ್ತು, ಇನ್ನು ಪಾಕಿಸ್ತಾನದ ಮೇಲೆ ತಪ್ಪು ಹೊರಿಸುವುದು ಹೇಗೆ?' ಅಂತ ನೆಹರೂ ಹೇಳಿದರು. 'ಕೋಪ ಮಾಡಿಕೊಂಡರೆ ಪ್ರಯೋಜನ ಏನು?' ಅಂತ ಬಾಪೂಜಿ ನೆಹರೂಗೆ ಸಮಾಧಾನ ಹೇಳಿದರು. ಅದಕ್ಕೆ ಉತ್ತರವಾಗಿ ನೆಹರೂ, 'ನಾನು ಬಾಡಿಗಾರ್ಡನ್ನಿಟ್ಟುಕೊಂಡು ತಿರುಗುತ್ತಾ ಇದ್ದೀನಿ ಅಂತ ನನಗೆ ನನ್ನ ಮೇಲೇ ಕೋಪ ಬರುತ್ತಿದೆ, ಇಂಥದ್ದರಲ್ಲಿ ಸಾಮಾನ್ಯ ಜನರ ಸ್ಥಿತಿ ಏನಾಗಿರಬೇಡ? ಡಾ॥ ಜೋಶಿ ಅನ್ನುವ ದೆಹಲಿಯ ಪ್ರಸಿದ್ಧ ಸರ್ಜನ್, ಅವರು ಹಿಂದೂ–ಮುಸ್ಲಿಮರಿಬ್ಬರಿಗೂ ರಾತ್ರಿ–ಬೆಳಗ್ಗೆ ಅನ್ನದೆ ಸೇವೆ ಮಾಡುತ್ತಿದ್ದ ವ್ಯಕ್ತಿ, ಅವರ ಮೇಲೆ ಕೈಕೆಳಗಿನ ಮುಸ್ಲಿಂ ಡಾಕ್ಟರನೇ ಗುಂಡು ಹಾರಿಸಿಬಿಟ್ಟ. ಡಾಕ್ಟರ್ ಜೋಶಿ ಯಾವುದೋ ರೋಗಿಯನ್ನು ನೋಡುವುದಕ್ಕೆಂದು ಹೊರಟಿದ್ದರು, ಅಷ್ಟರಲ್ಲೇ ತನ್ನ ಮನೆಯ ಬಾಗಿಲಲ್ಲೇ ಮುಗಿದು ಹೋದರು,' ಎಂದರು.

ದುಷ್ಕರ್ಮಿಗಳು, ಗೂಂಡಾಗಳು ನಗರವನ್ನು ತಮ್ಮ ಕೈಗೆ ತೆಗೆದುಕೊಂಡಿದ್ದರು. ಪಶ್ಚಿಮ ಪಂಜಾಬ್ ಮತ್ತೆ ಅಲ್ಲಿಯ ಹೃದಯ ವಿದ್ರಾವಕವಾದ ಕತೆಗಳು ದೆಹಲಿಯ ಜನರನ್ನು ಭ್ರಮಿಸಿಬಿಟ್ಟಿದ್ದವು. ಕೊಲೆಗಡುಕತನದಿಂದಲೇ ದೆಹಲಿಯಲ್ಲಿ ಅರಾಜಕತೆ ಹರಡಿದ್ದುದು, ಸ್ವಾತಂತ್ರ್ಯದ ಸಮಸ್ಯೆಯಿಂದ ಬಹಳ ಆಯಾಸಗೊಂಡ ಮೌಂಟ್ ಬ್ಯಾಟನ್ ಆ ದಿನ ವಿಶ್ರಾಂತಿ ಪಡೆಯುವುದಕ್ಕಾಗಿ ಶಿಮಲಾಗೆ ಹೋಗಿದ್ದರು, ಆದರೆ ಐದು ದಿನಗಳಲ್ಲೇ ಅವರು ಹಿಂದಿರುಗಿ ಬರಬೇಕಾಯಿತು. ಅವರ ಅಧ್ಯಕ್ಷತೆಯಲ್ಲಿ ತುರ್ತು ಪರಿಸ್ಥಿತಿಯ ಸಮಿತಿಯನ್ನು ರಚಿಸಿದರು, ಆದರೆ ನಗರ ಮಾತ್ರ ಉರಿಯುತ್ತಲೇ ಇತ್ತು. ಎರಡು ದೇಶಗಳಿಗೂ ಸೇರಿದ ಒಂದು ಕೋಟಿಗಿಂತ ಹೆಚ್ಚು ಜನರು ಆಶ್ರಯವನ್ನು ಹುಡುಕಿಕೊಂಡು ಅಲೆಯುತ್ತಿದ್ದರು. ಈ ಲಕ್ಷಾಂತರ ಜನರನ್ನು ಇರಿಸುವುದು, ಊಟ–ನಿದ್ದೆ ಇದನ್ನೆಲ್ಲಾ ವ್ಯವಸ್ಥೆಗೊಳಿಸುವುದು ಬಹಳ ಕಷ್ಟದ ಸಮಸ್ಯೆಯಾಗಿತ್ತು. ದೆಹಲಿ ಮುಳುಗಿತೆಂದರೆ ದೇಶ ಹಾಳಾದಂತೆ, ಅಂತಹ ಪರಿಸ್ಥಿತಿ ಇರುವಾಗ ಬಾಪೂಜಿ ದೆಹಲಿಗೆ ತಲಪಿದರು, ಕಲ್ಕತ್ತಾದ ಚಮತ್ಕಾರದ ನಂತರ ಅವರು ದೆಹಲಿಯುನ್ನೂ ಸುಧಾರಿಸುತ್ತಾರೆದು ಜನ ಆಸೆಯನ್ನಿಟ್ಟುಕೊಂಡಿದ್ದರು. ನಾಯಕರುಗಳು ಅವರ ಮೇಲೆ ಆಸೆ ಇಟ್ಟುಕೊಂಡಿದ್ದರು.

ದೆಹಲಿಯ ಕೆಲಸ ಕಷ್ಟದ್ದಾಗಿತ್ತು, ನಗರದಲ್ಲಿ ಮುಸಲ್ಮಾನರ ಮೇಲೆ ಪ್ರಭಾವ ಬೀರುವಂಥ, ಅವರನ್ನ ಹಿಡಿತಕ್ಕೆ ತರುವಂಥ ಒಬ್ಬ ನಾಯಕನೂ ಅಲ್ಲಿರಲಿಲ್ಲ. ಸಿಖ್ಖರು, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಇದು ಯಾವುದರಲ್ಲೂ ಬಾಪೂಜಿ ಜೊತೆ ನಗರದಲ್ಲಿ ಸುತ್ತುವಂಥ ಯಾರೊಬ್ಬ ನಾಯಕನೂ ಇರಲಿಲ್ಲ. ಆದರೆ ಅಂತಹ ಪರಿಸ್ಥಿತಿಯಲ್ಲಿ ದೆಹಲಿಯನ್ನು ಬಿಟ್ಟು ಬೇರೆಲ್ಲೂ ಹೋಗುವಂಥ ಸ್ಥಿತಿ ಕೂಡ ಇರಲಿಲ್ಲ, ತಮ್ಮ ಮನೆಯಲ್ಲೇ ಬೆಂಕಿ ಹೊತ್ತಿ ಉರಿಯುತ್ತಿರುವಾಗ ಯಾರಿಗೆ, ಏನು ಹೇಳುವುದು? ಮಾರನೆಯ ದಿನದಿಂದ ಬಾಪೂಜಿ ನಿರಾಶ್ರಿತರ ಶಿಬಿರಗಳಿಗೆ ಹೋಗ ತೊಡಗಿದರು. ಅರೇಬಿಯಾ ಸರಾಯ್‌ನ ಮುಸಲ್ಮಾನರು ಪಾಕಿಸ್ತಾನಕ್ಕೆ ಹೋಗಲಿಚ್ಛಿಸುತ್ತಿರಲಿಲ್ಲ. ಹೆದರಿ ಓಡಿ ಬಂದ ಮುಸಲ್ಮಾನರು ಜಾಮೀಯಾ ಮಿಲಿಯಾದ ವಿಶಾಲವಾದ ಅಂಗಳದಲ್ಲಿ ತುಂಬಿಕೊಂಡಿದ್ದರು. ಡಾ॥ ಝಾಕಿರ್ ಹುಸೇನ್ ತನ್ನ ಸೌಮ್ಯ ಸ್ವಭಾವದೊಂದಿಗೆ ಪರಿಹಾರ ಕಾರ್ಯದಲ್ಲಿ ತೊಡಗಿದ್ದರು, ಲಾಹೋರ್‌ನಿಂದ ಹಿಂದಿರುಗುವಾಗ ಝಾಕಿರ್ ಹುಸೇನರು ಕೂಡ ಜಾಲಂಧರದಲ್ಲಿ ಸಿಲುಕಿಕೊಂಡಿದ್ದರು, ಆದರೆ ಕೆಲವರು ಹಿಂದೂಗಳು ಅವರನ್ನ ಗುರುತಿಸಿದರು, ತಮ್ಮ ಪ್ರಾಣಾಪಾಯವನ್ನೂ ಲೆಕ್ಕಿಸದೆ ಅವರುಗಳು ಝಾಕಿರ್ ಸಾಹಬರನ್ನು ಉಳಿಸಿದರು. ಲೇಡಿ ಹಾರ್ಡಿಂಗ್ ಆಸ್ಪತ್ರೆಯ ಬಳಿ ಮಸೀದಿ ಇತ್ತು, ಅದರ ಎದುರಿಗೆ ಮುಸ್ಲಿಂ ಲೀಗ್‌ನ ಮುಖಪತ್ರಿಕೆ 'ಡಾನ್'ನ ಕಾರ್ಯಾಲಯವಿತ್ತು. ಈ ಎರಡೂ ಜಾಗಗಳಿಂದ ಮುಸಲ್ಮಾನ ಉಗ್ರರು ಆಸ್ಪತ್ರೆಯ ಮೇಲೆ ಮೆಷಿನಗನ್‌ಗಳಿಂದ ಬಾಂಬ್ ಸುರಿಮಳೆ ಮಾಡುತ್ತಿದ್ದರು. ಆಗ ಸೈನ್ಯ ಆಸ್ಪತ್ರೆಯ ಮಾಳಿಗೆಯ ಮೇಲಿಂದ ಆ ಮುಸಲ್ಮಾನರೆದುರು ಮುತ್ತಿಗೆ ಹಾಕಿದರು. ಮುಸಲ್ಮಾನರ ಮನೆಗಳಲ್ಲಿ ಹುಡುಕಿದಾಗ ಅಲ್ಲಿ ಅನೇಕಾನೇಕ ಆಧುನಿಕ ಶಸ್ತ್ರಾಸ್ತ್ರಗಳ ಗುಡಾಣವೇ ಸಿಕ್ಕಿತು, ಸ್ಟೆನ್‌ಗನ್, ಬ್ರೆನ್‌ಗನ್, ಮಾರ್ಟರ್, ಗ್ರೆನೇಡ್, ತುಪಾಕಿ ಮದ್ದು, ಸಿಡಿಮದ್ದಿನ ತೋಟೆ (ಕಾರತೂಸ್)ಯ ಸೆಟ್‌ಗಳು, ಆಯುಧ ತಯಾರಿಕೆಯ ಚಿಕ್ಕ ಫ್ಯಾಕ್ಟರಿಗಳು ಕೂಡ ಇದ್ದವು. ಅವುಗಳನ್ನು ವಶಕ್ಕೆ ತೆಗೆದುಕೊಂಡರು, ಅವರನ್ನ ಕೇಳಿದರೆ, 'ನಮಗೇನೂ ಗೊತ್ತಿಲ್ಲ, ನಮ್ಮ ಶತ್ರುಗಳು ಇದನ್ನೆಲ್ಲಾ ತಂದು ಇಲ್ಲಿ ತುಂಬಿದ್ದಾರೆ' ಎಂದು ಉತ್ತರಿಸುತ್ತಿದ್ದರು. ಮುಸಲ್ಮಾನರು ಈ ರೀತಿ ಏನೇ ಜವಾಬು ಕೊಟ್ಟರೂ ಶಸ್ತ್ರಾಸ್ತ್ರಗಳನ್ನು ತೀವ್ರವಾಗಿ ಉಪಯೋಗಿಸಿದ್ದುದು ನಿಜವಾಗಿತ್ತು. ಮುಸಲ್ಮಾನರು ಸೇರಿಕೊಂಡಿದ್ದ ಜಾಗಗಳಿಂದ ಗುಂಡು ಹಾರಿಸುತ್ತಿದ್ದರು, ಈ ಮುಸಲ್ಮಾನರು ದೆಹಲಿಯ ಆಳ್ವಿಕೆಯನ್ನೇ ತಮ್ಮ ಕೈಗೆ ತೆಗೆದುಕೊಳ್ಳಬೇಕೆಂದು ಯೋಜನೆ ಹಾಕಿದ್ದರು. ಎಲ್ಲೂ ಯಾರೂ ಸುರಕ್ಷಿತವಾಗಿರಲಿಲ್ಲ ಅನ್ನುವುದು ದೊಡ್ಡ ಸಮಸ್ಯೆಯಾಗಿತ್ತು. ದೆಹಲಿಯ ಪೊಲೀಸ್ ಪಡೆ ಮುಸ್ಲಿಮರಿಂದ ತುಂಬಿಕೊಂಡಿತ್ತು, ಅವರನ್ನ ನಂಬುವುದೂ ಕಷ್ಟವಾಗಿತ್ತು, ಆಗ ಮಧ್ಯಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ರವಿಶಂಕರ ಮಿಶ್ರಾ ಅವರಿಂದ

೨೫೦ ಜನ ಕಾನ್‌ಸ್ಟೇಬಲ್‌ಗಳು ಮತ್ತು ಸಬ್ ಇನ್‌ಸ್ಪೆಕ್ಟರ್‌ಗಳನ್ನು ದೆಹಲಿಯ ಸುರಕ್ಷತೆಗಾಗಿ ಕರೆಸಿಕೊಂಡರು.

ಸೆಪ್ಟೆಂಬರ್ ೧೨ರಂದು ಬಾಪೂಜಿ ಜಾಮಾ ಮಸೀದಿಗೆ ಹೋದರು. ಅಲ್ಲಿ ಹತ್ತು ಸಾವಿರ ಮಂದಿ ಮುಸಲ್ಮಾನರು ಸೇರಿಕೊಂಡಿದ್ದರು. ನಗರದಲ್ಲಿ ಗೂಂಡಾಗಿರಿಗೆ ಹೆಸರು ಪಡೆದವರ ಮಳಿಗೆ ಅದಾಗಿತ್ತು. ಭಯಂಕರ ಕೊಳಕು, ಭಾದ್ರಪದ ಮಾಸದ ಭಯಂಕರವಾದ ಬಿಸಿಲಲ್ಲೂ ಬಾಪೂಜಿ ಬರಿಗಾಲಲ್ಲಿ ಶ್ರದ್ಧೆಯಿಂದ ಜಾಮಾ ಮಸೀದಿಯ ಮೆಟ್ಟಿಲುಗಳನ್ನು ಹತ್ತಿದರು. ನಿಜ಼ಾಮನ ಹೈದರಾಬಾದ್ ಹೌಸ್‌ನಲ್ಲಿ ಧನಿಕ ಮುಸಲ್ಮಾನ ಪರಿವಾರಗಳಿಗೆ ಆಶ್ರಯ ನೀಡಲಾಗಿತ್ತು. ಆದರೆ ಕೊಳಕು – ಅವ್ಯವಸ್ಥೆಯಲ್ಲಿ ಜಾಮಾ ಮಸೀದಿಯ ಸ್ಥಿತಿಯೇ ಅಲ್ಲೂ ಇತ್ತು. ಬಾಪೂಜಿ ಈ ಎಲ್ಲಾ ಮುಸಲ್ಮಾನರಿಗೂ ಧೈರ್ಯ ಹೇಳಿ, ಖುದಾನನ್ನು ನಂಬಿ ಧೈರ್ಯದಿಂದ ಇರುವಂತೆ ಹೇಳಿದರು, ಮುಸಲ್ಮಾನರ ಬಳಿ ಕಾನೂನುಬಾಹಿರವಾಗಿ ಇದ್ದ ಶಸ್ತ್ರಾಸ್ತ್ರಗಳನ್ನು ಹಿಂದಿರುಗಿಸುವಂತೆ ತಿಳಿಸಿ ಹೇಳಿದರು. ಬಾಪೂಜಿ ಬಳಿ ಪ್ರತಿದಿನ ನಾಲ್ಕಾರು ತುಕ್ಕು ಹಿಡಿದ ಆಯುಧಗಳನ್ನು ತಲಪಿಸಲಾಗುತ್ತಿತ್ತು, ಆದರೆ ಇವೆಲ್ಲಾ ತೋರಿಕೆ ಎಂದು ಬಾಪೂಜಿಗೆ ಅರ್ಥವಾಗುತ್ತಿತ್ತು. ನಿಜವಾದ ಆಯುಧಗಳು ಹೊರಕ್ಕೆ ಬರುತ್ತಲೇ ಇರಲಿಲ್ಲ, ಸ್ವಾತಂತ್ರ್ಯದಲ್ಲಿ ಯಾವ ತರಹೆಯ ಅನ್ಯಾಯವೂ ಆಗಬಾರದೆಂದು ಬಾಪೂಜಿ ಇಷ್ಟಪಡುತ್ತಿದ್ದರು. ಮುಸಲ್ಮಾನರ ನಾಲ್ಕಾರು ಮುಲ್ಲಾ–ಮೌಲ್ವಿಗಳು ಮೂರು–ನಾಲ್ಕು ದಿವಸಗಳಿಗೊಮ್ಮೆ ಬಂದುಬಿಡುತ್ತಿದ್ದರು, ಆಯುಧಗಳು ವಾಪಸ್ಸಾಗುವವರೆಗೂ ಮುಸ್ಲಿಮರಲ್ಲದ ಜನರು ಮುಸಲ್ಮಾನರನ್ನು ಹೇಗೆ ತಾನೆ ನಂಬಲು ಸಾಧ್ಯವಾದೀತು ಎಂದು ಬಾಪೂಜಿ ಅವರುಗಳಿಗೆ ಹೇಳಿದರು. ಈ ಮುಸಲ್ಮಾನ ಮೌಲ್ವಿಗಳು ಬಾಪೂಜಿಯವರಿಗೆ, 'ನೀವು ಮುಸಲ್ಮಾನರ ಮೊಹಲ್ಲೆಯಲ್ಲಿ ಹೋಗಿ ವಾಸಮಾಡಿದಲ್ಲಿ ಮುಸಲ್ಮಾನರ ಭಯ ದೂರವಾಗುತ್ತದೆ' ಎಂದರು. ಬಾಪೂಜಿ ಅದಕ್ಕೆ ಸಿದ್ಧವಾಗಿದ್ದರು. ಆಸಫ್ ಅಲಿ ಸಾಹೇಬರ ಮನೆಯನ್ನು ಸ್ವಚ್ಛಗೊಳಿಸಿದರು. ಆದರೆ ಸರದಾರರು ಅವರಿಗೆ, ಹತ್ತಿರದ ಮನೆಗಳಲ್ಲಿ ನಿರಂತರವಾಗಿ ಗುಂಡು ಹಾರಿಸುತ್ತಿರುತ್ತಾರೆ, ತಪ್ಪಿ ಯಾವುದಾದರೂ ಗುಂಡೊಂದು ಬಾಪೂಜಿಗೆ ತಗುಲಿದರೆ ದೇಶದಲ್ಲಿರುವ ಎಲ್ಲಾ ಮುಸಲ್ಮಾನರ ಗತಿ ಏನಾದೀತೆಂದು ಯೋಚನೆ ಮಾಡಿ ಎಂದು ಹೇಳಿದರು. ನಿಜವಾಗಿಯೂ ಈ ಬಗ್ಗೆ ಯೋಚಿಸಲೇಬೇಕಾಗಿತ್ತು, ಬಾಪೂಜಿ ಇದ್ದಕಡೆ ಸೈನ್ಯದ ಪಹರೆ ಇರುತ್ತೆ, ಆಗ ಮುಸಲ್ಮಾನರೂ ಸುರಕ್ಷಿತವಾಗಿರುತ್ತಾರೆಂದು ಮೌಲಾನಾಗಳು ಯೋಚಿಸುತ್ತಿದ್ದರು. ಬಾಪೂಜಿ ಪೊಲೀಸ್ ಸೈನ್ಯ ಇದು ಯಾವುದರ ರಕ್ಷಣೆಯಲ್ಲಿ ಇರುವುದೂ, ಕೆಲಸ ಮಾಡುವುದೂ ಇಲ್ಲ ಅಂತ ಅವರುಗಳಿಗೆ ಕಲ್ಪನೆ ಇರಲಿಲ್ಲ. ಈ ಸ್ಥಿತಿಯಲ್ಲಿ ಈ ಮೌಲಾನಾಗಳು ಬಾಪೂಜಿಯ ಜವಾಬ್ದಾರಿಯನ್ನ ಹೊರಲು ಸಿದ್ಧವಾಗಿರಲಿಲ್ಲ, ಹೀಗಾಗಿ ಬಾಪೂಜಿ ಬಿಡಲಾ ಹೌಸ್‌ನಲ್ಲೇ ಇರಬೇಕಾಗಿ ಬಂತು,

ಮುಸ್ಲಿಂ ಲೀಗ್‌ನ ನಾಲ್ಕಾರು ಪ್ರಸಿದ್ಧ ನೇತಾರರು ಬಾಪೂಜಿಯನ್ನು ಭೇಟಿಯಾಗಬಂದರು. ಅವರು ಬಹಳ ದುಃಖಪಟ್ಟು ಹೇಳಿದರು, 'ಇಂತಹ ಪಾಕಿಸ್ತಾನದ ಕಲ್ಪನೆ ನಮಗಿರಲಿಲ್ಲ, ಈಗ ನೀವೇ ನಮ್ಮನ್ನು ಬದುಕಿಸಲು ಸಾಧ್ಯ' ಎಂದರು. ಆ ದಿನದ ಪ್ರಾರ್ಥನಾ ಸಭೆಯಲ್ಲಿ ಬಾಪೂಜಿ, 'ಆದದ್ದಾಯಿತು, ಅದನ್ನು ಮರೆತುಬಿಡಿ, ಈಗ ಸ್ನೇಹಹಸ್ತವನ್ನು ಚಾಚಿ ಭಾರತದಲ್ಲಿರುವ ಮುಸಲ್ಮಾನರು ಕೂಡ ದೇಶದಲ್ಲಿ ಒಂದೇ ರೀತಿಯ ನಾಗರಿಕರೇ, ಅವರು ತಮ್ಮ ಆಯುಧಗಳನ್ನು ಹಿಂದಿರುಗಿಸಬೇಕು, ತಿರಂಗಾ ಝುಂಡಾಗೇ ಗೌರವ ತೋರಿ ಶಾಂತಿಯಿಂದ ಬದುಕಬೇಕು' ಎಂದು ಹೇಳಿದರು.

ಇದೇ ರೀತಿ ಬಾಪೂಜಿ ಹಿಂದೂ ಶರಣಾರ್ಥಿಗಳ ಶಿಬಿರಗಳಲ್ಲೂ ಸುತ್ತಿದರು. ಕಿಂಗ್ಸ್‌ವೇ ಕ್ಯಾಂಪಿನ ಪ್ರಾರ್ಥನಾ ಸಭೆಯಲ್ಲಿ ಕುರಾನ್ ಶರೀಫ್‌ನ ಆಯುತ್‌ಗಳನ್ನೋದಿದಾಗ ಗುಂಪು ಉಗ್ರವಾಗಿ ಹೇಳಿತು, 'ಈ ಆಯತ್‌ಗಳನ್ನಿಟ್ಟುಕೊಂಡೇ ಹಿಂದೂ ಮಹಿಳೆಯರ ಶೀಲಭಂಗ ಮಾಡಿದರು, ನಾವು ನಿಮಗೆ ಕುರಾನ್ ಓದಲು ಬಿಡುವುದಿಲ್ಲ' ಎಂದರು. ಆ ಗುಂಪಿನಲ್ಲಿ ಕೆಲವರು ಸೋಡಾ ಬಾಟಲಿಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದರು, ಅವರು 'ಬಾಪೂಜಿ ಮುರ್ದಾಬಾದ್'ನ ಘೋಷಣೆ ಕೂಗುತ್ತಿದ್ದರು. ದುಃಖ ಹಾಗೂ ನೋವಿನಿಂದ ಆ ಜನರ ಬುದ್ಧಿ ಭ್ರಮಿತವಾಗಿತ್ತು, ಜನ ಹುಚ್ಚರಂತಾಗಿದ್ದರು., ಅವರಿಗೆ ಬಾಪೂಜಿ, 'ಧರ್ಮ ಯಾವುದೂ ಕೆಟ್ಟದ್ದಲ್ಲ, ಅದರ ಅನುಯಾಯಿಗಳ ದುರ್ಗತಿಯಿಂದ ಧರ್ಮದ್ರೋಹ ಮಾಡುವುದು ಸಲ್ಲದು, ಈ ಕೋಪ ಕೂಡ ಒಂದು ರೀತಿ ಹುಚ್ಚೇ. ಪ್ರತೀಕಾರದಿಂದ ನಮ್ಮ ಪ್ರೀತಿಯ ಎರಡು ಪಟ್ಟು ಹೆಚ್ಚಾಗುತ್ತದೆ, ಹೀಗೆ ಪ್ರಾರ್ಥನಾ ಭಂಗ ಯೋಗ್ಯವಲ್ಲ' ಎಂದು ಹೇಳಿದರು. 'ವಿರೋಧಿಸುವವರು ಎಷ್ಟೇ ಕೋಪ ಮಾಡಿದರೂ ಸರಿ, ಪ್ರಾರ್ಥನಾ ಸಭೆಯಲ್ಲಿ ಜನ ಕೋಪತೊರೆದು ಶಾಂತರಾಗಿ ಕುಳಿತುಕೊಳ್ಳುವವರೆಗೂ ನಾನು ಪ್ರಾರ್ಥನೆ ಮಾಡುವುದಿಲ್ಲ' ಎಂದು ಬಾಪೂಜಿ ಹೇಳಿದರು. ಇಷ್ಟೆಲ್ಲ ವಿಪತ್ತುಗಳಿದ್ದರೂ ಜನರ ವಿವೇಕ ಸತ್ತಿರಲಿಲ್ಲ. ಅವರಿಗೆ ಬಾಪೂಜಿ ಬಗ್ಗೆ ಶ್ರದ್ಧೆ ಇತ್ತು, ಅಂತಹ ಸಾರ್ವಜನಿಕ ಸಂಯಮದಲ್ಲಿ ಕುರಾನ್ ಶರೀಫ್‌ನ ವಿರೋಧ ತೊಡೆದು ಹೋಯಿತು, ಆದರೆ ಇನ್ನೂ ವಿಷಯದ ಅನೇಕ ಗುಟುಕುಗಳನ್ನು ಕುಡಿಯಬೇಕಾಗಿತ್ತು, ಕೋಮುಗಲಭೆಯ ವಿಷ ತೀವ್ರವಾಗಿ ಹರಡಿತ್ತು, ಅದನ್ನ ತೊಡೆದು ಹಾಕುವದು ಅಷ್ಟೇನೂ ಸುಲಭವಾಗಿರಲಿಲ್ಲ.

ಸಾಮ್ಯವಾದಿಗಳಾದ ಕಮ್ಯುನಿಷ್ಟರು ಗಾಂಧೀಜಿ ತಮ್ಮನ್ನು ಸೇರಿಸಿಕೊಂಡರೆ ನಾವು ಕೋಮುಗಲಭೆಯನ್ನು ಎದುರಿಸುವೆವು ಎಂದು ಬಯಸುತ್ತಿದ್ದರು. ಆದರೆ ಕಮ್ಯುನಿಷ್ಟರು ಯಾವಾಗಲೂ ಗಾಂಧೀಜಿಯನ್ನ ವಿರೋಧಿಸಿಯೇ ಇದ್ದವರು, ೧೯೪೨ 'ಭಾರತ ಛೋಡೋ' ಆಂದೋಳನದಲ್ಲೂ ಕಮ್ಯುನಿಷ್ಟರು ಕಾಂಗ್ರೆಸ್‌ನ

ಕರೆಯನ್ನು ತಿರಸ್ಕರಿಸಿ ಬ್ರಿಟಿಷ್ ಸರಕಾರಕ್ಕೆ ಸಹಾಯ ಮಾಡಿದ್ದರು. ಅಹಿಂಸೆ, ಸತ್ಯ, ದೇವರು ಇವು ಯಾವುದರಲ್ಲೂ ಅವರಿಗೆ ನಂಬಿಕೆ ಇರಲಿಲ್ಲ, ಇಲ್ಲ ಕೂಡ. ಕಮ್ಯುನಿಸ್ಟರು ಹೇಡಿಗಳಾಗಿದ್ದರು, 'ಮಾಡುವೆವು ಇಲ್ಲವೇ ಮಡಿಯುವೆವು' ಎಂಬ ನಿರ್ಣಯ ತೆಗೆದುಕೊಳ್ಳುವಾಗಲೂ ಅವರು ದೇಶದ ಆಕಾಂಕ್ಷೆಗಳನ್ನು ತಿರಸ್ಕರಿಸಿದ್ದರು. ಅದರಿಂದ ಜನರಿಗೆ ಕಮ್ಯುನಿಷ್ಟರನ್ನು ಕುರಿತು ಸ್ವಲ್ಪವೂ ಗೌರವ ಇರಲಿಲ್ಲ, ದೇಶದ ಜನರು ತಮ್ಮನ್ನ ಎತ್ತಿ ಒಗೆದಿದ್ದಾರೆಂದು ಕಮ್ಯುನಿಷ್ಟರಿಗೆ ಗೊತ್ತಿತ್ತು. ಅದರಿಂದ ಅವರು ಗಾಂಧೀಜಿ ಜೊತೆ ಇದ್ದುಕೊಂಡು ಪುನಃ ಮೇಲಕ್ಕೆ ಏಳಬಯಸುತ್ತಿದ್ದರು. ಬಾಪೂಜಿ ಅಂತಹ ಶ್ರದ್ಧಾಹೀನರಾದವರನ್ನೂ ತನ್ನ ಜೊತೆ ಕರೆದುಕೊಂಡು ಹೋಗುತ್ತಿದ್ದರು. ಆದರೆ ಕಮ್ಯುನಿಷ್ಟರಿಗೆ ಪ್ರಾಮಾಣಿಕತೆ, ಸತ್ಯನಿಷ್ಠೆ ಅಥವಾ ಸತ್ಯಾಗ್ರಹದ ಬಗ್ಗೆ ಯಾವುದೇ ಗೌರವ ಕೂಡ ಇರಲಿಲ್ಲ. ಅದರಿಂದ ಅವರು ಬಾಪೂಜಿಯ ಅಹಿಂಸಾತ್ಮಕ ಪ್ರತೀಕಾರವನ್ನ ತಮ್ಮದಾಗಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ, ಅದರಿಂದ ಆ ಜನ ಗಾಂಧೀಜಿ ಜೊತೆ ಇರಲಾಗಲಿಲ್ಲ.

ಆ ದಿನಗಳಲ್ಲಿ ಮುಸಲ್ಮಾನರು ಬಹಳ ಕೆಟ್ಟಸ್ಥಿತಿಯಲ್ಲಿದ್ದರು. ೧೫ ವರ್ಷಗಳಿಂದಲೂ ಮುಸ್ಲಿಂ ಲೀಗ್ ಮುಸಲ್ಮಾನರಿಗೆ ಕಾಂಗ್ರೆಸ್ ಸಂಸ್ಥೆ ಮತ್ತು ಹಿಂದೂಗಳೇ ಮುಸಲ್ಮಾನರ ಶತ್ರುಗಳು ಅಂತ ಕಲಿಸಿಕೊಟ್ಟಿತ್ತು. ಪಾಕಿಸ್ತಾನವನ್ನು ಪಡೆದುಕೊಳ್ಳುವುದಕ್ಕೋಸ್ಕರ ಯಾವುದೇ ರೀತಿಯ ಹೋರಾಟ, ಲೂಟಿ, ಕೊಲೆ–ಸುಲಿಗೆ ಎಲ್ಲವೂ ನ್ಯಾಯವಾದುದ್ದು ಅಂತ ಬಾಯಿಪಾಠ ಮಾಡಿಸಿತ್ತು. ಈ ತರಹೆಯ ಜಿಹಾದ್‌ನಿಂದಲೇ ಪಾಕಿಸ್ತಾನ ಸಿಗುತ್ತೆ, ಅಲ್ಲಿ ಹಾಲಿನ ನದಿಗಳು ಹರಿಯುತ್ತವೆ, ಬರ್ಫಿಗಳ ಬೆಟ್ಟ ಇರುತ್ತೆ, ತರಕಾರಿಗಳ ದೊಡ್ಡ ಸ್ವರ್ಗ ಸುಖ ಸಿಗುತ್ತೆ ಅಂತ ಭ್ರಮೆಗೆ ಒಳಗಾಗಿದ್ದರು. ಪಾಪ, ಅರಿಯದ ಈ ಮುಸಲ್ಮಾನ ಅದು ನಿಜವೇ ಅಂತ, ಈ ಸುಖಗಳ ಕನಸು ಕಾಣುತ್ತಾ ತನ್ನ ನೆರೆ–ಹೊರೆಯವರನ್ನೆಲ್ಲಾ ಮುಗಿಸಿಬಿಡಬೇಕೆಂದು ಹೊರಟಿದ್ದ. ಈ ಕೋಮುವಾದದ ಅಮಲಿನಲ್ಲಿ ಅವರು ಅರಿಯದ ಜನರ ಸಂರಕ್ಷಣೆಗಾಗಿ ಕಾನೂನು ನೀತಿ–ನಿಯಮಗಳ ಒಂದು ಆಶ್ರಯ ಇರುತ್ತದೆ ಎಂಬುದನ್ನೂ ಮರೆತಿದ್ದರು. ಪಾಕಿಸ್ತಾನ ರಚಿಸಿದ ಮೇಲೆ ಲೀಗ್ ನಾಯಕರು ತಮ್ಮ ಅಧಿಕಾರ ಪಡೆದುಕೊಳ್ಳಲು ಮುಂದಕ್ಕೆ ಹೋದರು, ಸಾಮಾನ್ಯ ಮುಸಲ್ಮಾನ ಹಿಂದುಳಿದು ಬಿಟ್ಟಿದ್ದ. ಎರಡು ದಶಕಗಳಿಂದ ಮುಸ್ಲಿಂ ಲೀಗ್ ಗೂಂಡಾಗಳು – ಪಾತಕಿಗಳನ್ನ ಬೆಳೆಸಿ ಸಾಕಿತ್ತು. ಮೊದಲು ಆ ಗೂಂಡಾಗಳು ಶಾಂತ ಸ್ವಭಾವದ ಹಿಂದೂಗಳಿಗೆ ಆತಂಕ ಒಡ್ಡಿದರು, ಪಾಕಿಸ್ತಾನ ಸಿಕ್ಕಿದ ಮೇಲೆ ಹಿಂದೂಸ್ತಾನವನ್ನ ಒಡೆಯಲಾಗಲಿಲ್ಲ. ಆಗ ಈ ಗೂಂಡಾಗಳು ತನ್ನ ಬಡ ಮುಸಲ್ಮಾನ ಸಹೋದರ– ಬಂಧುಗಳನ್ನ ಲೂಟಿ ಮಾಡಲಾರಂಭಿಸಿದರು. ಈ ಮುಸಲ್ಮಾನ ಶರಣಾರ್ಥಿಗಳಿಗಾಗಿ ನೀಡಲಾಗುತ್ತಿದ್ದ ರೇಷನ್ ಕದಿಯುವುದು, ಕ್ಯಾಂಪ್‌ನ ಜನರನ್ನು

ಹೊಡೆಯುವುದು, ಲೂಟಿ ಮಾಡುವುದು, ಬಡಿಯುವುದು, ಮಹಿಳೆಯರನ್ನ ಹಿಂಸಿಸುವುದು ಮುಂತಾದ್ದು ಅಭ್ಯಾಸವಶರಾಗಿ ಮಾಡುತ್ತಿದ್ದರು. ಇದರಿಂದ ಮುಸ್ಲಿಂ ಶರಣಾರ್ಥಿ ಬಹಳ ಬೇಸತ್ತಿದ್ದ. ಬಾಪೂಜಿ ಅವರನ್ನ ಭೇಟಿಯಾಗಲು ಹೋದಾಗ ಅಲ್ಲಿ ಗುಂಪು ಕ್ರೋಧಿತವಾಗಿತ್ತು, ಅವರು ಬಾಪೂಜಿಯನ್ನ ಏನು ಮಾಡಬಹುದೆಂದು ಹೇಳುವುದೂ ಕಷ್ಟವಾಗಿತ್ತು. ಬಾಪೂಜಿಯ ಮೆಲ್ಲ ಧ್ವನಿ ಜನರ ಬಳಿಗೆ ತಲುಪುತ್ತಿರಲಿಲ್ಲ, ಅಲ್ಲಿ ಮೈಕ್ರೋಫೋನ್ ಕೂಡ ಇರಲಿಲ್ಲ. ಆದರೆ ನಿರ್ಭಯರಾದ, ಕರುಣೆಯ ಮೂರ್ತಿಯಾಗಿದ್ದ ಬಾಪೂಜಿ ಆ ರಕ್ತಪಿಪಾಸುಗಳಾಗಿದ್ದ ಜನರನ್ನು ಶಾಂತಗೊಳಿಸಿ, ಖುದಾ ಎಲ್ಲವನ್ನೂ ಸರಿಪಡಿಸುತ್ತಾನೆಂದು ತಿಳಿಸಿದರು. ಅದೊಂದೇ ಆಶ್ರಯ ಇದ್ದುದು. ಬಾಪೂಜಿ ಆ ಮುಸಲ್ಮಾನರನ್ನು ಉಳಿಸುವುದಕ್ಕಾಗಿ, ಇಲ್ಲವಾದರೆ ಅಲ್ಲೇ ಸಾಯುವುದಕ್ಕಾಗಿ ದೆಹಲಿಗೆ ಬಂದಿದ್ದರು.

ಈ ಶಾಂತವಾದ ಶಬ್ದಗಳು ಐಂದ್ರಜಾಲಿಕ ಪ್ರಭಾವವನ್ನು ಬೀರಿದವು. ಜನ ಸಮೂಹದ ಮೇಲೆ ಅವರ ರೋಷ ಕರಗಿ ಹೋಯಿತು, ಅವರು ತಮಗಾದ ವಿಪತ್ತುಗಳನ್ನು ವರ್ಣಿಸಿ ಅಳತೊಡಗಿದರು. ಆ ಬಡವರು ಬಾಪೂಜಿಯನ್ನು ಬಹಳ ಗೌರವದಿಂದ ಬೀಳ್ಕೊಟ್ಟರು. ಆ ದಿನವೇ ಅತೀವ ದೇಶಪ್ರೇಮಿಯಾದ ಡಾ॥ ಅನ್ಸಾರಿಯವರ ಮಗಳು ಮತ್ತು ಅಳಿಯ ಹೆದರಿ ತಮ್ಮ ಪಿತ್ರಾರ್ಜಿತವಾದ ಮನೆಯನ್ನು ತ್ಯಜಿಸಿ ಹೋಟೆಲ್ ಒಂದರಲ್ಲಿ ಆಶ್ರಯ ಪಡೆದಿದ್ದಾರೆಂದು ಸುದ್ದಿ ಬಂತು. ಎಂತಹ ದುಃಸ್ಥಿತಿ ಬಂದೊದಗಿತ್ತೆಂದರೆ ದೇಶದ ಅತಿ ಪ್ರಿಯ ರಾಷ್ಟ್ರೀಯ ಮುಖಂಡರ ಮಗಳು ಕೂಡ ಸುರಕ್ಷಿತಳಾಗಿರಲಿಲ್ಲ, ವಿಷಾದದಿಂದ ಬಾಪೂಜಿ ತಲೆ ತಗ್ಗಿಸಿದರು. ಆ ದಿನದ ಪ್ರಾರ್ಥನಾ ಸಭೆಯಲ್ಲಿ ಬಾಪೂಜಿ, 'ಈ ಎರಡು ದೇಶಗಳೂ ತಾವು ನೀಡಿದ್ದ ವಚನವನ್ನು ನೆನಪು ಮಾಡಿಕೊಂಡು ಅಲ್ಪಸಂಖ್ಯಾತರನ್ನು ರಕ್ಷಿಸಬೇಕಾದ್ದು ಅವರ ಧರ್ಮ, ಇದೇ ರೀತಿ ಹಿಂಸೆ ಅತ್ಯಾಚಾರ ನಡೆಯುತ್ತಿದ್ದರೆ ಎರಡೂ ದೇಶಗಳು ಅಣ್ಣ-ತಮ್ಮಂದಿರು ನಡೆಸುವ ಈ ರಕ್ತಪಾತದಲ್ಲಿ ನಾಶವಾಗಿ ಹೋಗುತ್ತವೆ. ಪಶ್ಚಿಮ ಬಂಗಾಳದಿಂದ ಲಕ್ಷಾಂತರ ಮಂದಿ ಶರಣಾರ್ಥಿಗಳು ಬಂದಿದ್ದರು. ಜಿನ್ನಾ ಪಾಕಿಸ್ತಾನದಲ್ಲಿ ಮೊದಲು ಹಿಂದೂ ಮಗುವಿನ ಪೋಷಣೆ ಆಗುತ್ತದೆಂದು ವಚನವಿತ್ತಿದ್ದರು, ಆದರೆ ಭಾರತ ಬಿಟ್ಟನಂತರ ಅವರು ನೀಡಿದ್ದ ವಚನಗಳನ್ನೆಲ್ಲಾ ಮರೆತುಹೋಗಿದ್ದರು. ಅವರು ಮುಸ್ಲಿಂ ನಿರಾಶ್ರಿತರುಗಳನ್ನೂ ಹೆದರಿಸಿ ಲೂಟಿ ಮಾಡುತ್ತಿದ್ದರು, ಬಡ ಮುಸಲ್ಮಾನರು ಮೊದಲೇ ಹೆದರಿದ್ದವರು – ಇಂತಹ ಶತ್ರುತ್ವ ದೇಶವನ್ನೇ ಹಾಳು ಮಾಡುತ್ತಿತ್ತು, ಈ ಸ್ಥಿತಿಯಲ್ಲಿ ದೇಶದ ಸರಕಾರ ಹೇಗೆ ನಡೆದಿದ್ದೀತು?' ಎಂದರು ಬಾಪೂಜಿ.

ಕೆಲವರು ಕಾಂಗ್ರೆಸ್ ಕಾರ್ಯಕರ್ತರು ಭೇಟಿಯಾಗಬಂದರು, ಎಲ್ಲಾ ನಿರಾಶ್ರಿತರ ಶಿಬಿರಗಳು ತೀರ ಕೊಳಕಿನಿಂದ ಕೂಡಿರುತ್ತಿದ್ದವು, ಮಲ-ಮೂತ್ರಗಳನ್ನು

ಸ್ವಚ್ಛಗೊಳಿಸುವ ವ್ಯವಸ್ಥೆ ಇರಲಿಲ್ಲ, ಸಣ್ಣ–ಪುಟ್ಟ ಗಲ್ಲಿಗಳಲ್ಲೂ ಹೆಣಗಳು ಕೊಳೆಯುತ್ತಾ ಬಿದ್ದಿದ್ದವು, ಹೆಣಗಳನ್ನು ಎತ್ತುವವರು ಯಾರೂ ಇರಲಿಲ್ಲ. ಮೇರಠದಿಂದ ಕೆಲವರು ಸ್ವಚ್ಛತಾ ಕರ್ಮಿಗಳನ್ನು ಸರಕಾರ ಕರೆಸಿತ್ತು, ಆದರೆ ಅವರು ಕೆಲಸ ನೋಡಿ ಹೆದರಿ ಓಡಿಹೋದರು. ಬಾಪೂಜಿ ಈ ಕಾಂಗ್ರೆಸ್ ಕಾರ್ಯಕರ್ತರುಗಳಿಗೆ ಸ್ವಚ್ಛಗೊಳಿಸುವ ಕೆಲಸ ಒಪ್ಪಿಸಿದರು. ಸದ್ಯ, ಆ ಯುವಕರು ಈ ಆದೇಶವನ್ನು ಪಾಲಿಸಿದರು. ಅದರಿಂದ ದೆಹಲಿ ಮಹಾನಗರ ಕಾಲರಾ ಇತ್ಯಾದಿ ಭಯಂಕರ ರೋಗಗಳು ಬಾರದಂತೆ ಉಳಿದುಕೊಂಡಿತ್ತು.

೧೪ರ ಸೆಪ್ಟೆಂಬರ್ ರಾತ್ರಿ ದೆಹಲಿಯಲ್ಲಿ ಧಾರಾಕಾರ ಮಳೆ ಸುರಿಯಿತು. ರಾತ್ರಿಯೆಲ್ಲ ಬಾಪೂಜಿಗೆ ಚಿಂತೆ, ಆ ಬಡಪಾಯಿ ಶರಣಾರ್ಥಿಗಳ ಗತಿ ಏನಾಗಿರಬಹುದೋ ಎಂದು. ಹೀಗಾಗಿ ಅವರು ನಿದ್ದೆ ಮಾಡಲಾಗಲಿಲ್ಲ. ಮೊಣಕಾಲುದ್ದ ನೀರು ನಿಂತು ಅವರ ಗತಿ ಏನಾಗಿರಬಹುದು ಅನ್ನುವುದೇ ಚಿಂತೆ. ಪಾಕಿಸ್ತಾನದ ಅಪರಾಧಗಳಿಂದ ಹೆದರಿ ಹಿಂದೂ–ಸಿಖ್ಖರು ತಮ್ಮ ಮನೆ ಮಾರು ಬಿಟ್ಟು ಹೇಗಾದರೆ ಹಾಗೆ ಓಡುತ್ತಿದ್ದರು, ಎಷ್ಟೋ ಸಾರಿ ಲಕ್ಷಾಂತರ ಜನ ಗುಂಪು ಕಟ್ಟಿಕೊಂಡು ನೂರಿಪ್ಪತ್ತು ಮೈಲುಗಳ ಯಾತ್ರೆ ಮಾಡುತ್ತಿತ್ತು, ಅಕ್ಕ ಪಕ್ಕದ ಹಳ್ಳಿಗಳ ಮುಸಲ್ಮಾನರು ಈ ಯಾತ್ರಿಕರನ್ನ ಲೂಟಿ ಮಾಡುತ್ತಿದ್ದರು, ಹೊಡೆಯುತ್ತಿದ್ದರು, ಎಲ್ಲೂ ಆಶ್ರಯವಿರಲಿಲ್ಲ. ಆದರೆ ಈ ಹೊಡೆದಾಟದ ಮಧ್ಯದಲ್ಲೇ ಎಷ್ಟೋ ಜನ ಮುಸಲ್ಮಾನರು ಹಿಂದೂ–ಸಿಖ್ಖರನ್ನು ಉಳಿಸಿದ್ದರು. ಅದೇ ರೀತಿ ಎಷ್ಟೋ ಜನ ಹಿಂದೂಗಳು ಮುಸ್ಲಿಂ ನೆರೆ–ಹೊರೆಯವರನ್ನ ಉಳಿಸಿದ್ದರು. ಎಷ್ಟೋ ಬಾರಿ ಈ ತೆರನಾದ ಹಿಂದೂ–ಮುಸಲ್ಮಾನ ಯಾತ್ರಿಕರು ಎದುರು–ಬದರು ಸಿಕ್ಕಾಗ ಪರಸ್ಪರ ಒಬ್ಬರೊಬ್ಬರ ಕಷ್ಟ–ದುಃಖದ ಮಾತನ್ನಾಡಿಕೊಂಡು ನಂತರ ಅನಾವಶ್ಯಕವಾಗಿದ್ದ ಈ ದೇಶ ವಿಭಜನೆಯನ್ನು ಹಳಿಯುತ್ತಿದ್ದರು. ಸಿಖ್ ಶರಣಾರ್ಥಿಗಳ ದುಃಖ ಕೊನೆಯಿಲ್ಲದ್ದು, ಅವರು ಹೇಳಲಾರದಷ್ಟು ಕಷ್ಟವನ್ನನುಭವಿಸಿಬಿಟ್ಟಿದ್ದರು. ಪಶ್ಚಿಮ ಪಂಜಾಬಿನಿಂದ ಬಂದಿದ್ದ ನಿರಾಶ್ರಿತರು ಸ್ವಲ್ಪ ಧೈರ್ಯದಿಂದಿದ್ದರೆ ಅವರು ಕಳೆದುಕೊಂಡಿದ್ದ ಆಸ್ತಿಗೆ ಪರಿಹಾರ ಕೊಡಿಸುವುದಾಗಿ ಬಾಪೂಜಿ ಅವರಿಗೆ ಧೈರ್ಯ ಹೇಳಿದ್ದರು. ಆದರೆ ಮುಸಲ್ಮಾನ ನಿರಾಶ್ರಿತರು ತಮ್ಮ ತಮ್ಮ ಮನೆಗಳಿಗೆ ನಿಶ್ಚಿಂತೆಯಾಗಿ ಹಿಂದುರಿಗಿದಾಗ ಮಾತ್ರ ಇದು ಸಾಧ್ಯವಾಗುತ್ತಿತ್ತು. ಆಗ ಬಾಪೂಜಿ ಖುದ್ದಾಗಿ ಪಾಕಿಸ್ತಾನಕ್ಕೆ ಹೋಗಿ ಸಿಖ್ಖರಿಗೆ ನ್ಯಾಯ ಒದಗಿಸಿಕೊಡಲು ಸಾಧ್ಯವಾಗುತ್ತಿತ್ತು, ಆಗ ಪ್ರಪಂಚದ ಜನರೂ ಈ ತೆರನಾಗಿ ಧೈರ್ಯ ಮತ್ತು ಸಂಯಮವನ್ನು ಹೊಗಳುತ್ತಿದ್ದರೇನೋ?' ಹಾಗಾಗದಿದ್ದಲ್ಲಿ ಹಿಂದೂಸ್ಥಾನ ಸ್ವಾತಂತ್ರ್ಯ ಪಡೆಯುವುದಕ್ಕೆ ಲಾಯಕ್ಕೇ ಆಗಿಲ್ಲ ಎಂದು ಪ್ರಪಂಚ ಹೇಳುತ್ತೆ, ಮುಸ್ಲಿಂ ಶರಣಾರ್ಥಿಗಳಿಗೆ ಬಾಪೂಜಿ ಅನೇಕ ಬಾರಿ ಹೇಳುತ್ತಿದ್ದರು, 'ಆ ಜನ ಪ್ರಾಮಾಣಿಕರಾಗಿ, ನಿಷ್ಠೆಯಿಂದಿದ್ದರೆ

ಸರಕಾರ ಅವರನ್ನ ಪೂರ್ತಿಯಾಗಿ ರಕ್ಷಿಸಬಹುದು, ಕಾನೂನುಬಾಹಿರವಾಗಿರುವ ಎಲ್ಲಾ ಆಯುಧಗಳನ್ನೂ ಸರಕಾರಕ್ಕೆ ಒಪ್ಪಿಸಿಬಿಡಬೇಕು, ಮುಸಲ್ಮಾನರಿಗೆ ನಿಜವಾಗಿಯೂ ಪಶ್ಚಾತ್ತಾಪವಾಗಿದ್ದರೆ ಅವರು ಪಾಕಿಸ್ತಾನಕ್ಕೆ ಹೋಗಿ ಹಿಂದೂ–ಸಿಖ್ ಮಹಿಳೆಯರನ್ನು ಬಿಡಿಸಿಕೊಂಡು ಕರೆದುಕೊಂಡು ಬರಬೇಕು ಮತ್ತು ಪಾಕಿಸ್ತಾನದ ಅತ್ಯಾಚಾರಗಳನ್ನು ವಿರೋಧಿಸಬೇಕು.”

ಇಷ್ಟು ಅವ್ಯವಸ್ಥೆಗಳ ಮಧ್ಯದಲ್ಲಿ ಪೊಲೀಸಿನವರ ಕ್ರೌರ್ಯ, ಶಿಸ್ತಿಲ್ಲದ ವರ್ತನೆ ಇನ್ನೂ ಹೆಚ್ಚು ಭಯಂಕರವಾಗಿತ್ತು. ಹೆಚ್ಚು ಜನ ಪೊಲೀಸಿನವರು ಪಶ್ಚಿಮ ಬಂಗಾಳಕ್ಕೆ ಸೇರಿದವರಾಗಿದ್ದರು. ಅವರ ಮನೆ ಬಾಗಿಲು, ಭೂಮಿ–ಕಾಣಿ ಎಲ್ಲಾ ಲೂಟಿಯಾಗಿ ಹೋಗಿದ್ದವು. ಅವರ ಮಹಿಳೆಯರನ್ನ ಅಪಹರಿಸಿಕೊಂಡು ಹೋಗಿದ್ದರು. ಅವರ ದೆಹಲಿಯ ಮನೆಗಳಲ್ಲಿ ಅನೇಕ ಸಂಬಂಧಿಕರು ಶರಣಾರ್ಥಿಗಳಾಗಿ ಬಂದು ಸೇರಿಕೊಂಡು ಅವರ ಮನೆಗಳು ಧರ್ಮಶಾಲೆಗಳಾಗಿದ್ದವು. ಇಂತಹ ಉತ್ತೇಜಕವಾದ ದುಃಖದ ವಾತಾವರಣದಲ್ಲಿ ಬಾಪೂಜಿ ಯಾವಾಗಲೂ ತನ್ನನ್ನು ತೊಡಗಿಸಿಕೊಂಡಿರುತ್ತಿದ್ದರು. ಎಷ್ಟೋ ಜನ ಸಿಖ್ಖರು ಹೃದಯ ಒಡೆಯುವಂತಹ ನೋವಿನ ಘಟನೆಗಳನ್ನು ತೋಡಿಕೊಂಡರು. ಅವರ ಹೆಂಗಸರನ್ನ ಏನೇನು ಮಾಡಿದರು ಎಂಬುದನ್ನು ಹೇಳಿ ಅಳತೊಡಗಿದರು, ‘ನಿಮ್ಮ ಕಣ್ಣುಗಳಿಂದ ಇದನ್ನೆಲ್ಲಾ ನೋಡಿದಿರಾ?’ ಎಂದು ಬಾಪೂಜಿ ಅವರನ್ನು ಕೇಳಿದರು. ಶರಣಾರ್ಥಿಗಳು, ‘ಹೌದು, ನಮ್ಮ ಕಣ್ಣಿಂದಲೇ ಇವನ್ನೆಲ್ಲಾ ನೋಡಿದೆವೆಂದು ಹೇಳಿದರು, ‘ಇಷ್ಟನ್ನೆಲ್ಲಾ ನೋಡಿಕೊಂಡು ನೀವು ಹೇಗೆ ಬದುಕಿದಿರಿ? ನಿಮ್ಮ ತಾಯಿ–ತಂದೆಯರ ಮಾನ ಉಳಿಸುವ ಯೋಗ್ಯತೆ ಇರಲಿಲ್ಲವೆಂದರೆ, ನಿಮ್ಮ ಪರಾಕ್ರಮ ಎಲ್ಲಿ ಹೋಯಿತು?’ ಎಂದು ಬಾಪೂಜಿ ಅವರನ್ನು ಕೇಳಿದರು. ಮುಸಲ್ಮಾನರ ಮೊಹಲ್ಲೆಯ ಮಧ್ಯದಲ್ಲಿ ಕೂಚಾ ತಾರಾಚಂದ್‌ನಲ್ಲಿ ಹಿಂದೂಗಳು ವಾಸವಾಗಿದ್ದರು. ಬಾಪೂಜಿ ಅಲ್ಲಿಗೆ ಹೋದಾಗ ಆ ಜನ ಹೇಳಿದರು. ‘ಈ ಮುಸಲ್ಮಾನರನ್ನೆಲ್ಲಾ ಪಾಕಿಸ್ತಾನಕ್ಕೆ ಕಳುಹಿಸಿಬಿಡಿ, ಇಲ್ಲದಿದ್ದರೆ ನಾವು ಇಲ್ಲಿ ಸುರಕ್ಷಿತರಾಗಿರುವುದಿಲ್ಲ. ಅವರ ಮನೆಗಳನ್ನ ಶರಣಾರ್ಥಿಗಳಿಗೆ ಕೊಟ್ಟುಬಿಡಿ’ ಎಂದರು. ಮುಸಲ್ಮಾನರ ಮನೆಗಳನ್ನು ಹಿಂದೂ ಶರಣಾರ್ಥಿಗಳಿಗೆ ಕೊಟ್ಟುಬಿಡುವಂತೆ ಆ ದಿನಗಳಲ್ಲಿ ಅನೇಕ ಬೇಡಿಕೆಗಳು ಬರುತ್ತಿದ್ದವು. ಆದರೆ ಬಾಪೂಜಿ ಅಂತಹ ಪ್ರಸ್ತಾವನೆಗಳನ್ನು ಒಪ್ಪಿಕೊಳ್ಳಲಾಗುತ್ತಿರಲಿಲ್ಲ, ಪಾಕಿಸ್ತಾನ ಅನ್ಯಾಯ ಮಾಡಿತು ಎಂದು ಭಾರತ ಸೇರಿಗೆ ಸವಾಸೇರು ಎಂಬಂತೆ ಇಟ್ಟಿಗೆಗೆ ಬದಲಾಗಿ ಕಲ್ಲನ್ನು ಎಸೆದು ಉತ್ತರ ನೀಡಿದ ಹಾಗೆ, ಆಗ ಎಂದೆಂದಿಗೂ ಸಮಸ್ಯೆ ಪರಿಹಾರವಾಗದೆ ಎರಡೂ ದೇಶಗಳ ನಡುವೆ ಯುದ್ಧ ಆಗುವಂತಹ ಪರಿಸ್ಥಿತಿ ಒದಗುತ್ತಿತ್ತು. ಕೆಲವರು ಸಿಖ್ಖರು ಜೋರುಮಾಡಿ ಮುಸಲ್ಮಾನರ ಮನೆಗಳನ್ನು ಖಾಲಿ ಮಾಡಿಸಿಬಿಟ್ಟಿದ್ದರು, ಇದರಿಂದ ಆತಂಕ ಹಬ್ಬಿತ್ತು. ಬಾಪೂಜಿ ಆ ಸಿಖ್ಖರಿಗೆ, ‘ನಿಮಗೆ ಜಾಗ ಬೇಕಾಗಿದ್ದಾಗ

ನನ್ನನ್ನ ಬಿಡಲಾ ಹೌಸ್‌ನಿಂದ ಹೊರಕ್ಕೆ ಹಾಕಿಸಬಹುದಾಗಿತ್ತಲ್ಲ, ಅಥವಾ ಮಿನಿಸ್ಟರ್‌ಗಳ ಮನೆ ಮುಂದೆ ಧರಣಿ ಹೂಡಿದ್ದರೆ ಆಗುತ್ತಿತ್ತು, ಆದರೆ ಆ ಮುಸಲ್ಮಾನರ ಮನೆಗಳನ್ನ ವಶಪಡಿಸಿಕೊಂಡಿದ್ದು ಸರಿಯಲ್ಲ' ಎಂದು ಹೇಳಿ ಬಾಪೂಜಿ, 'ಸಿಖ್ಖರು' ಸ್ವಾಭಿಮಾನಿಗಳು, ಪರಾಕ್ರಮಿಗಳ ಜಾತಿ. ಇವತ್ತಿನವರೆಗೆ ಇದ್ದ ಔದಾರ್ಯ, ಸಹಿಷ್ಣುತೆ ಅಷ್ಟೊಂದು ಸಡಿಲವಾಗಿಬಿಟ್ಟಿತ್ತೇನು? ಮುಸ್ಲಿಂ ಲೀಗ್ ಮಾಡಿದ ದಂಗೆಗಳೆದುರಿಗೆ ಅವು ಹೀಗೆ ಹೆದರಿಕೊಂಡರೆ, ಅದಕ್ಕೆ ಈ ತರಹ ಬರ್ಬರರಾಗುವುದೇ? ಇಡೀ ಪ್ರಪಂಚದ ದೃಷ್ಟಿ ಭಾರತದ ಮೇಲೆ ನೆಟ್ಟಿದೆ, ಈ ಪರಿಸ್ಥಿತಿಯಲ್ಲಿ ಭಾರತ ಏನಾದರೂ ಒಡೆಯಿತು ಅಂದರೆ ಏಷ್ಯಾ ಮತ್ತು ಆಫ್ರಿಕಾ ಈ ಎರಡೂ ಮಹಾಖಂಡಗಳು ಕೂಡ ನಾಶವಾಗುತ್ತವೆ, ಭಾರತ ವರ್ಷದಲ್ಲಂತೂ ನೂರಾರು ವರ್ಷಗಳಿಂದಲೂ ಭಾರತದಲ್ಲಿ ಅನೇಕ ಧರ್ಮಗಳು, ಅನೇಕ ಬಣಗಳ ಜನ ಒಟ್ಟಿಗೆ ಬದುಕುತ್ತಾರೆ, ಈಗ ಸಹಿಷ್ಣುತೆಯ ಹಳೆಯ ಪರಂಪರೆ ಹಾಳಾದರೆ ನಾವು ಮುಖ ತೋರಿಸುವ ಯೋಗ್ಯತೆಯನ್ನೇ ಕಳೆದುಕೊಂಡುಬಿಡುತ್ತೇವೆ. ಪಾಕಿಸ್ತಾನ ಅನ್ಯಾಯವನ್ನೇ ಮಾಡಿದರೂ ಸಹಿತ ಈ ವಿಷವೃಕ್ಷವನ್ನು ಎಲ್ಲಾದರೂ ಮುರಿಯಲೇಬೇಕಿತ್ತು, ಇಲ್ಲದಿದ್ದರೆ ದ್ವೇಷ ಪ್ರತಿದ್ವೇಷ ಎಂದೂ ಕೊನೆಗಾಣುತ್ತಿರಲಿಲ್ಲ' ಎಂದರು.

೧೫–೨೦ ದಿನಗಳು ಒಂದೇ ಸಮನೆ ಪ್ರಯತ್ನ ಪಟ್ಟ ನಂತರ ಮೇಲ್ನೋಟಕ್ಕೆ ದೆಹಲಿಯಲ್ಲಿ ಶಾಂತಿ ನೆಲೆಗೊಂಡಿತು. ಆದರೆ ಈ ಪರಿಶ್ರಮದಿಂದ ಬಾಪೂಜಿಯ ಶರೀರ ಜರ್ಜರಿತವಾಗಿತ್ತು. ಮೊದಲು ಅವರಿಗೆ ಫ್ಲೂ ಆಯಿತು, ಅದರ ಜೊತೆಗೆ ಅವರಿಗೆ ಕೆಮ್ಮಲು ಹಿಡಿಯಿತು. ಕೆಮ್ಮಲು ಬಂದು ಇಡೀ ರಾತ್ರಿ ಅವರಿಗೆ ನಿದ್ದೆ ಮಾಡಲಾಗುತ್ತಿರಲಿಲ್ಲ, ಕೊನೆಯಿಲ್ಲದಂತೆ ಜನರು ಅವರನ್ನ ಭೇಟಿಯಾಗಲು ಬರುತ್ತಲೇ ಇದ್ದರು. ಮಿತ್ರರು ಅವರು ಪೆನ್ಸಿಲಿನ್ ತೆಗೆದುಕೊಳ್ಳಲಿ, ಅಥವಾ ಆ ತರಹೆಯ ಔಷಧಿ ಏನನ್ನಾದರೂ ತೆಗೆದುಕೊಂಡಿರಲಿ ಎಂದು ಬಯಸಿದರು. ಆದರೆ ಬಾಪೂಜಿ ತನ್ನ ರಾಮಬಾಣವನ್ನೇ ಔಷಧಿ ಎಂದುಕೊಂಡಿದ್ದುದರಿಂದ ಹೊರಗಣ ಔಷಧಿ ಬೇಡ ಎಂದರು. ಡಾ॥ ಜೀವರಾಜ ಮೆಹ್ತಾ ಲಂಡನ್ನಿನಲ್ಲಿ ೧೯೧೪ರಿಂದಲೂ ಮಿತ್ರರಾಗಿದ್ದವರು. ಅವರು 'ವಿಶ್ರಾಂತಿ ಪಡೆಯಿರಿ' ಎಂದು ಹೇಳಿದರು, ಅದಕ್ಕೆ ಬಾಪೂಜಿ, 'ವಿಶ್ರಾಂತಿ ಪಡೆದು ಏನಾಗಬೇಕಾಗಿದೆ? ಜನ ಇಷ್ಟು ಕಷ್ಟದಲ್ಲಿರುವಾಗ ನಾನು ಕೆಲಸವನ್ನ ಹೇಗೆ ನಿಲ್ಲಿಸಲಿ' ಎಂದರು. ಈ ದಿನಗಳಲ್ಲಿ ಬಾಪೂಜಿ ನಿರಂತರವಾಗಿ ಮೋಟಿಬಾನ ನೆನಪು ಮಾಡಿಕೊಳ್ಳುತ್ತಿದ್ದರು. ಒಂದೊಂದುಸಾರಿ ಸ್ವಪ್ನದಲ್ಲೂ ಕಸ್ತೂರಬಾನ ನೋಡುತ್ತಿದ್ದರು, ಪ್ರಾಮಾಣಿಕವಾದ ಹೃದಯದಿಂದ ರಾಮನಾಮವನ್ನು ಉಚ್ಚರಿಸಿದರೆ ಎಲ್ಲಾ ಕಷ್ಟಗಳೂ ದೂರವಾಗುತ್ತವೆಂದು ಅವರು ದೃಢವಾಗಿ ನಂಬಿದ್ದರು. ಕೆಮ್ಮಲು ಕಡಿಮೆಯಾಗುತ್ತಿರಲಿಲ್ಲ, ಕೆಲಸವೂ ಕಡಿಮೆಯಾಗುತ್ತಿರಲಿಲ್ಲ, ನಿಃಶಕ್ತಿ ಹೆಚ್ಚುತ್ತಲೇ ಇತ್ತು, ಬಾಪೂಜಿ ಮಾತ್ರ ರಾಮನಾಮ ಒಂದೇ ದೇಶವನ್ನ ಈ ಭಯಂಕರ

ವಿಪತ್ತಿನಿಂದ ಪಾರುಗೊಳಿಸಬಲ್ಲುದೆಂಬ ದೃಢ ನಂಬಿಕೆಯನ್ನಿಟ್ಟುಕೊಂಡ್ಡದರು. ಈ ತರಹೆಯ ಶ್ರೇಷ್ಠ ಶುದ್ಧತೆಯನ್ನು ಪ್ರಯೋಗ ಮಾಡುವುದು ಅವರ ಧರ್ಮವಾಗಿತ್ತು.

ಅಕ್ಟೋಬರ್ ೨ರಂದು ಬಾಪೂಜಿಯ ಹುಟ್ಟಿದ ದಿನ. ಅವರು ಆ ದಿನ ಉಪವಾಸವಿದ್ದು ಹೆಚ್ಚು ಹೊತ್ತು ಚರಖಾ ತಿರುಗಿಸಿದರು. ಆ ದಿನ ಪ್ರಾರ್ಥನೆಯಲ್ಲಿ ಅವರಿಗೆ ಪ್ರಿಯವಾಗಿದ್ದ ಭಜನೆ, 'ಹೇ ಗೋವಿಂದ ಹೇ ಗೋಪಾಲ ರಾಖೊ ಶರಣ ತಿಹಾರಿ' ಹಾಡಿದರು. ಪ್ರಪಂಚದ ಎಲ್ಲಾ ಭಾಗಗಳಿಂದಲೂ ಒಂದಕ್ಕಿಂತ ಒಂದು ಮಿಗಿಲಾದ ಪ್ರೀತಿ–ಆದರ–ಸನ್ಮಾನದಿಂದ ಕೂಡಿದ ಸಂದೇಶಗಳೂ, ತಾರೂ ಬಂದವು. ದೆಹಲಿ ನಗರದ ಎಲ್ಲಾ ಚಿಕ್ಕ–ದೊಡ್ಡ ಮಿತ್ರರು ಭೇಟಿ ಮಾಡಲು ಬಂದರು. ಲಾರ್ಡ್ ಮತ್ತು ಲೇಡಿ ಮೌಂಟ್‌ಬ್ಯಾಟನ್ ಶುಭಾಶಯ ಸಂದೇಶ ಪತ್ರಗಳನ್ನೂ ತೆಗೆದುಕೊಂಡು ಬಂದರು. ಆದರೆ ಬಾಪೂಜಿಯವರ ಹೃದಯದಲ್ಲಿ ಯಾವುದೇ ತೆರನಾದ ಉತ್ಸಾಹ, ಆನಂದ ಏನೂ ಇರಲಿಲ್ಲ. ಎಲ್ಲರಿಗೂ ಹೇಳಿದರು, 'ವಿಭಜನೆಯ ಈ ಕೋಮುವಾರು ಬೆಂಕಿ ಪೂರ್ತಿ ನಾಶಮಾಡುವಂತೆ ದೇವರಲ್ಲಿ ಪ್ರಾರ್ಥಿಸಿ, ಅದಿಲ್ಲದಿದ್ದರೆ ಇನ್ನೊಂದು ಹುಟ್ಟುಹಬ್ಬವನ್ನು ನೋಡಬೇಕೆಂಬ ಇಚ್ಛೆ ನನಗಿಲ್ಲ. ಇಂತಹ ದಿನ ನೋಡುವ ಹಣೆಬರಹ ಬರುವಂಥ ಯಾವ ಪಾಪವನ್ನ ನಾ ಮಾಡಿದ್ದೆನೋ ಗೊತ್ತಿಲ್ಲ,' ಅಣ್ಣ–ತಮ್ಮಂದಿರ ನಡುವೆ ನಡೆದ ಈ ಹತ್ಯಾಕಾಂಡ ನೋಡಿ ನೂರ ಇಪ್ಪತ್ತೈದು ವರ್ಷ ಬದುಕಬೇಕೆಂದು ಬಯಸಿದ್ದ ಬಾಪೂಜಿ ಬದುಕುವ ಇಚ್ಛೆಯನ್ನೇ ತೊರೆದುಬಿಟ್ಟರು. ಅವರು ಇಂತಹ ಪರಿಸ್ಥಿತಿಯ ಮೂಕಪ್ರೇಕ್ಷಕರಾಗಲು ಇಷ್ಟಪಡುತ್ತಿರಲಿಲ್ಲ, ಬಾಪೂಜಿಯ ದುಃಖಕ್ಕೆ ಕೊನೆಯಿರಲಿಲ್ಲ, 'ಅಭಿನಂದಿಸಲು ಯೋಗ್ಯವಾದದ್ದೇನೂ ಉಳಿದಿಲ್ಲ, ಸಹಾನುಭೂತಿ ತೋರಿಸುವ ಸಮಯವಿದು' ಎಂದು ಹೇಳಿದರು.

ದೆಹಲಿಯ ಗುಜರಾತಿ ಸಮಾಜದ ಸಮ್ಮೇಳನದಲ್ಲಿ ಬಾಪೂಜಿಯ ಹುಟ್ಟುಹಬ್ಬದ ದಿನ ಅವರನ್ನು ಅಭಿನಂದಿಸಲಾಯಿತು. ಸರದಾರ್ ಪಟೇಲರು ಬಾಪೂಜಿಯನ್ನು ಸಮಾಜದ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋದರು. ಆಯೋಜಕರು ಸರದಾರರಿಗೂ ಭಾಷಣ ಮಾಡಲು ಹೇಳಿದರು, ಸರದಾರರು ನಗುತ್ತಲೇ, 'ನನ್ನ ಹುಟ್ಟಿದ ಹಬ್ಬವಾಗಿದ್ದರೆ ಮಾತನಾಡಬಹುದಿತ್ತು, ಹಣದ ಚೀಲ ಬಾಪೂಜಿಗೆ ಸಿಗುತ್ತೆ, ನಾನು ಮಾತನಾಡುವುದು ಎಲ್ಲಿಯ ನ್ಯಾಯ?' ಅಂತ ಪ್ರೀತಿಯಿಂದ ದೂರುವ ಧ್ವನಿಯಲ್ಲಿ ಸರದಾರರು ಹೇಳಿದರು: 'ನೋಡಿ, ನಿಮ್ಮ ಹಣವನ್ನು ಕಿತ್ತುಕೊಳ್ಳುವುದಕ್ಕೆ ಮುದುಕನಿಗೆ ಎಷ್ಟು ಶಕ್ತಿ ಬಂದುಬಿಟ್ಟಿದೆ, ಈಗ ದಯಮಾಡಿ ಇವರಿಗೆ ವಿರಾಮ ತೆಗೆದುಕೊಳ್ಳಲು ಬಿಡಿ, ಎಂದರು. ಬಾಪೂಜಿ ನಕ್ಕು,' ಗಲ್ಲಿನ ನೆಲೆಗಟ್ಟಿನ ಮೇಲೆ ನಿಂತಿದ್ದಾಗಲೂ ಸರದಾರರು ತಮಾಷೆ ಮಾಡುವುದನ್ನ ಬಿಡುವುದಿಲ್ಲ' ಎಂದರು. ಅವರಿಬ್ಬರ ಸ್ನೇಹದಲ್ಲಿ ಅಪೂರ್ವವಾದ ಪ್ರೀತಿ ಇತ್ತು, ಸರದಾರ ವರ್ಷಾನುಗಟ್ಟಲೆ

ಯರವಾಡಾದಲ್ಲಿ, ಗುಜರಾತಿನ ಎಲ್ಲ ಸತ್ಯಾಗ್ರಹಗಳಲ್ಲಿ ಬಾಪೂಜಿಯವರಿಗೆ ಅಪೂರ್ವವಾದ ಸೇವೆ ಮಾಡಿದ್ದರು, ಭಕ್ತಿ ಇಟ್ಟಿದ್ದರು. ಈ ಎಲ್ಲಾ ಶ್ರದ್ಧೆಯೊಂದಿಗೆ ಸರದಾರರ ವಿಲಕ್ಷಣವಾದ ಬುದ್ಧಿ, ಹಾಸ್ಯ, ವಿನೋದದ ಸ್ವಭಾವ ಮತ್ತು ಸ್ವತಂತ್ರವಾಗಿ ಯೋಚಿಸುವ ಶಕ್ತಿ ಇವುಗಳ ಕೊರತೆ ಎಲ್ಲೂ ಇರಲಿಲ್ಲ. ದೆಹಲಿಯ ದಂಗೆಗಳನ್ನು ನಿಯಂತ್ರಿಸಲು, ದೇಶದ ಅಖಂಡತೆಯನ್ನು ಉಳಿಸಿಟ್ಟುಕೊಳ್ಳುವ ದೊಡ್ಡ ಜವಾಬ್ದಾರಿ ಸರದಾರರದ್ದಾಗಿತ್ತು. ಮುವತ್ತು ವರ್ಷಗಳು ಒಂದೇ ಸಮ ಪರಿಶ್ರಮಪಟ್ಟಿದ್ದುದರಿಂದ ಅವರ ಆರೋಗ್ಯ ಕೆಡುತ್ತಾ ಇತು. ಸ್ವಾತಂತ್ರ್ಯ ಸಿಕ್ಕನಂತರ ಭಯಂಕರವಾದ ಹೊರೆ ಅವರ ಮೇಲಿತ್ತು. ಅಂತಹ ಪರಿಸ್ಥಿತಿಗಳಲ್ಲಿ ವಿಘ್ನ ಒಡ್ಡಿ ಸಂತೋಷ ಪಟ್ಟುಕೊಳ್ಳುವ ಜನ ನೆಹರೂ ಮತ್ತು ಸರದಾರರ ನಡುವೆ ವೈಮನಸ್ಯ ತಂದುಹಾಕಲು ಪ್ರಯತ್ನ ಮಾಡುತ್ತಲೇ ಇದ್ದರು. ಈ ಇಬ್ಬರು ಮುಖಂಡರು ಬೇರೆ–ಬೇರೆಯ ಸ್ವಭಾವದವರಾಗಿದ್ದರು, ಒಬ್ಬರಿನ್ನೊಬ್ಬರಿಗೆ ಪೂರಕವಾಗಿದ್ದರು. ಸರದಾರರು ಯಾವಾಗಲೂ ಸ್ಥಿರ ಬುದ್ಧಿಯಿಂದ ಶ್ರೇಷ್ಠವಾಗಿ ಆಯೋಜಿಸುತ್ತಿದ್ದರು. ಜವಾಹರಲಾಲಜೀ ಆದರ್ಶವಾದಿಯಾಗಿ ಕವಿಹೃದಯವನ್ನಿಟ್ಟುಕೊಂಡ್ಡಿದವರು, ತನ್ನ ಭಾವುಕತೆಯ ಪ್ರವಾಹದಲ್ಲಿ ಒಂದೊಂದು ಸಾರಿ ಅವರು ವಾಸ್ತವದ ಗಟ್ಟಿ ಭೂಮಿಯನ್ನ ಬಿಟ್ಟುಬಿಡುತ್ತಿದ್ದರು. ಸರದಾರರದು ಕಾಕದೃಷ್ಟಿ, ಅದರಿಂದ ಪ್ರತಿಯೊಬ್ಬರ ಪಾಖಂಡತನವನ್ನೂ ಗ್ರಹಿಸಿಬಿಡುತ್ತಿದ್ದರು, ನೇರವಾಗಿ ಸ್ಪಷ್ಟವಾಗಿ ಮಾತನಾಡಿ ಆ ಜನರ ಮೋಸವನ್ನ ಬಯಲಿಗೆಳೆಯುತ್ತಿದ್ದರು. ಈ ತರಹೆಯ ವಿರುದ್ಧ ಸ್ವಭಾವದ ಈ ನಾಯಕರ ನಡುವೆ ಪ್ರೀತಿಗೌರವಗಳು ಇದ್ದುವು. ಇಬ್ಬರೂ ಪ್ರತಿದಿನ ಸರದಾರರ ಮನೆಯ, ಔರಂಗಜೇಬ್ ರೋಡ್‌ನ ಮನೆಯಲ್ಲಿ ಮಧ್ಯಾಹ್ನ ಜೊತೆಯಲ್ಲಿ ಊಟ ಮಾಡುತ್ತಿದ್ದರು, ಮುಸಲ್ಮಾನ ನಿರಾಶ್ರಿತರು ನೆಹರೂಜಿಯನ್ನ ಇಷ್ಟಪಡುತ್ತಿದ್ದರು, ಆದರೆ ಸರದಾರರನ್ನ ಕಂಡರೆ ಹೆದರುತ್ತಿದ್ದರು. ಏಕೆಂದರೆ ಸರದಾರರು ಅವರ ಅಪ್ರಾಮಾಣಿಕತೆಯನ್ನ ಕಿತ್ತೊಗೆಯುತ್ತಿದ್ದರು. ಈ ಸ್ಪಷ್ಟ ಸ್ವಭಾವದ ಪ್ರಯೋಜನ ಪಡೆದು ಎಷ್ಟೋ ಜನ ಸರದಾರ್ ಪಟೇಲರನ್ನ ಮುಸಲ್ಮಾನರ ವಿರೋಧಿ ಅಂತ ಹೇಳಿ ಅಪಪ್ರಚಾರ ಮಾಡುತ್ತಿದ್ದರು. ೧೯೯೬ರವರೆಗೂ ಈ ತರಹೆಯ ಅಪಪ್ರಚಾರ ನಡೆಯುತ್ತಲೇ ಇದೆ. ಇತ್ತೀಚೆಗೆ ರಫೀಕ್ ಭುಕಾರಿಯಾ ಅವರು ತಮ್ಮ ಪುಸ್ತಕದಲ್ಲಿ ಈ ತಪ್ಪು ತಿಳುವಳಿಕೆ ಮತ್ತು ಅಪಪ್ರಚಾರವನ್ನು ಖಂಡಿಸಿ ದೇಶದ ಜನರಿಗೆ ಬಹಳ ಕೃಪೆ ತೋರಿದ್ದಾರೆ.

ಸಮಾಜದಲ್ಲಿ ಈ ರೀತಿ ನಿರಾಧಾರವಾದ ಅಪವಾದಗಳನ್ನು ಕೇಳಿ ಮಿತಭಾಷಿಯಾಗಿದ್ದ ಸರದಾರರು ಒಳಗಿಂದೊಳಗೇ ಕುಗ್ಗುತ್ತಿದ್ದರು. ಬಾಪೂಜಿ ಅವರನ್ನ ವಹಿಸಿಕೊಂಡು ಸರದಾರರ ಪರವಾಗಿ ಸ್ಪಷ್ಟಪಡಿಸುತ್ತಿದ್ದರು, ಸರದಾರರಿಗೆ ಈ ಸ್ಪಷ್ಟಪಡಿಸುವಿಕೆ ಸಹಿಸಲಾಗುತ್ತಿರಲಿಲ್ಲ, ಇಂತಹ ತುಚ್ಛವಾದ ಮಾತುಗಳಿಗೆ

ಸ್ಪಷ್ಟತೆ ನೀಡುವುದನ್ನ ಅವರು ಅಪಮಾನಜನಕವೆಂದು ಭಾವಿಸುತ್ತಿದ್ದರು. ಇದರಿಂದ ಬೇಸರಗೊಂಡು ಸರದಾರರು ಬಾಪೂಜಿಗೆ ತನ್ನ ರಾಜೀನಾಮೆ ಪತ್ರವನ್ನೂ ಕಳುಹಿಸಿದ್ದರು. ಆದರೆ ಈ ಎಲ್ಲ ಅಪ್ರಿಯವಾದ ವೈಮನಸ್ಯ ದೂರವಾಗುವ ಮುಂಚೆಯೇ ಬಾಪೂಜಿ ತೀರಿಕೊಂಡರು. ನಂತರ ಸರದಾರರು ತಮ್ಮ ಗುರುವಿನ ಇಚ್ಛೆಯನ್ನು ಶಿರಸಾ ಧರಿಸಿ ಸರಕಾರ ಸುಗಮ ಹಾಗೂ ಸ್ಥಿರವಾಗಿ ಇರಲು, ಕಾಂಗ್ರೆಸ್ ಮತ್ತು ದೇಶದ ಏಕತೆಗಾಗಿ ತನ್ನನ್ನೇ ಸಮರ್ಪಿಸಿಬಿಟ್ಟಿದ್ದರು. ಮನಸ್ಸಿನೊಳಗೇ ದುಃಖವನ್ನು ನುಂಗಿಕೊಡು ಸರದಾರರು ತಮ್ಮ ಕರ್ತವ್ಯವನ್ನ ನಿರ್ವಹಿಸುತ್ತಲೇ ಇದ್ದರಾದರೂ ಯಾವಾಗಲೂ ದೂರಲಿಲ್ಲ.

ಮೇಲ್ನೋಟಕ್ಕೆ ದೆಹಲಿಯಲ್ಲಿ ಶಾಂತಿ ನೆಲಸಿತ್ತಾದರೂ ಅಪ್ರಿಯ ಘಟನೆಗಳು ನಡೆಯುತ್ತಿದ್ದವು. ಮುಸಲ್ಮಾನರು ತಮ್ಮ ಮನೆಗಳಿಗೆ ಹೋಗಲು ಹೆದರುತ್ತಿದ್ದರು, ತಮ್ಮ ಮನೆಗಳಲ್ಲಿ ವಾಸ ಮಾಡುತ್ತಿದ್ದವರುಗಳಿಗೆ ಹಿಂದೂ-ಸಿಖ್ ಶರಣಾರ್ಥಿಗಳು ಅವ್ಯಕ್ತವಾಗಿ ಅತ್ಯಾಚಾರ ಮಾಡುತ್ತಿದ್ದರು. ಚಾಂದನಿ ಚೌಕದ ಒಬ್ಬ ಮುಸಲ್ಮಾನ ಅಂಗಡಿಯವನು ಧೈರ್ಯ ಮಾಡಿ ತನ್ನ ಅಂಗಡಿಯನ್ನ ತೆರೆಯಲು ಹೋದ, ಅವನ ಅಂಗಡಿಯ ಬಾಗಿಲಲ್ಲೇ ಜನರು ಅವನನ್ನ ಸಾಯಿಸಿಬಿಟ್ಟರು. ಇಂತಹ ಘಟನೆಗಳಿಂದಾಗಿ ಬಾಪೂಜಿ ಒಳಗಿಂದೊಳಗೇ ಕುದಿಯುತ್ತಿದ್ದರು, ನೆಮ್ಮದಿ ಎಲ್ಲೂ ಇರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಮುಸಲ್ಮಾನ ಮೌಲಾನಾಗಳು ನಿರಂತರವಾಗಿ ದೂರು ಹೇಳುತ್ತಲೇ ಇರುತ್ತಿದ್ದರಾದರೂ ಮುಸಲ್ಮಾನರ ದೌರ್ಬಲ್ಯಗಳನ್ನು, ಅಪರಾಧ ಪ್ರವೃತ್ತಿಗಳನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಬಾಪೂಜಿಗೆ ಪೊಲೀಸ್ ಪಹರೆಯ ಈ ಶ್ಮಶಾನ ಶಾಂತಿ ಮನಸ್ಸಿಗೆ ಚುಚ್ಚುತ್ತಿತ್ತು, ಜನರ ಅರಾಜಕತೆಯಿಂದಾಗಿ ಅವರಿಗೆ ಬಹಳ ನೋವಾಗಿತ್ತು. ಈ ನಡುವೆ ಕಲ್ಕತ್ತಾದಿಂದ ಬಾಪೂಜಿಯ ನೆರವಿಗಾಗಿ ಶಹೀದ್ ಸುಹರಾವರ್ದಿ ದೆಹಲಿಗೆ ಬಂದರು. ಆದರೆ ಇದು ಕಲ್ಕತ್ತಾ ಆಗಿರಲಿಲ್ಲ. ದೆಹಲಿಯಲ್ಲಿ ಶಹೀದರದು ಅಷ್ಟೇನೂ ಪ್ರಭಾವ ಇರಲಿಲ್ಲ, ಆತ ಬಹಳ ಮಾತನಾಡಿದರೂ ಹೆಚ್ಚೇನೂ ಮಾಡುವುದಕ್ಕಾಗುತ್ತಿರಲಿಲ್ಲ. ಬಾಪೂಜಿ ಸುಹರಾವರ್ದಿಗೆ, 'ನೀನು ಭಾರತೀಯ ನಾಗರಿಕನಾಗಿದ್ದರೆ ಪಾಕಿಸ್ತಾನಕ್ಕೆ ಹೋಗಿ ಕಾಯದೆ ಆಜ಼ಮ್ ಬಳಿ ಹಿಂದೂಗಳ ದುಃಖವನ್ನು ವಿರೋಧಿಸು, ಈ ತರಹೆಯ ಅತ್ಯಾಚಾರಗಳನ್ನು ಸಾರ್ವಜನಿಕವಾಗಿ ವಿರೋಧಿಸಬೇಕು' ಎಂದು ಹೇಳಿದರು. ಆದರೆ ಶಹೀದರಿಗೆ ಆ ತರಹ ಏನೂ ಮಾಡಲು ಸಾಧ್ಯವಾಗಲಿಲ್ಲ. ಆದರಿಂದ ಆತನ ಸಹಾನುಭೂತಿಯಿಂದ ಪ್ರಯೋಜನವೇನೂ ಾಗಲಿಲ್ಲ.

ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಮುಸ್ಲಿಮರು ಹೆಚ್ಚಾಗಿದ್ದರೂ- ಹಿಂದೂ ಸಿಂಧಿಗಳ ಸೌಜನ್ಯ, ಪರಿಶ್ರಮ, ಸಾಹಸಪ್ರವೃತ್ತಿ- ಇವುಗಳಿಂದಾಗಿ ಎರಡೂ ಪಂಗಡಗಳು ತಮ್ಮ ನಡುವೆ ಸಹೋದರ ಸಂಬಂಧ ಇಟ್ಟುಕೊಂಡು ಬದುಕುತ್ತಿದ್ದರು,

ಆದರೆ ಪಾಕಿಸ್ತಾನ ಸರಕಾರ ರಚಿತವಾದ ನಂತರ ಆತಂಕ ಮೂಡಿತು. ಹಿಂದೂ ಸಿಂಧಿಗಳು ತಮ್ಮನ್ನ ಸುರಕ್ಷಿತಗೊಳಿಸಿಕೊಳ್ಳುವುದಕ್ಕಾಗಿ ಅವರು ಹೊರನೋಟಕ್ಕೆ ಮುಸಲ್ಮಾನರ ವೇಷ ಧರಿಸಬೇಕಾಗಿ ಬಂತು. ಮುಸಲ್ಮಾನರು ಅವರ ಮನೆ, ಭೂಮಿ–ಕಾಣಿ ಎಲ್ಲವನ್ನೂ ಕಿತ್ತುಕೊಳ್ಳುತ್ತಿದ್ದರು. ಭಾರತ ಸರಕಾರ ಬರೆದು ಇದನ್ನು ವಿರೋಧಿಸಿತ್ತಾದರೂ ಕಾಯದೇ ಆಜ಼ಮ್ ಅದನ್ನು 'ಪತ್ರಿಕೆಗಳ ಅತಿಶಯೋಕ್ತಿ' ಎಂದು ಹೇಳಿ ಆ ಅತ್ಯಾಚಾರಗಳ ವಿರೋಧವನ್ನು ತಳ್ಳಿಹಾಕಿದರು. ಸಿಂಧಿಗಳು ಪಾಕಿಸ್ತಾನದ ನಾಗರಿಕರಾಗಿದ್ದುಕೊಂಡು ಅದನ್ನಭಿವೃದ್ಧಿಪಡಿಸಬಯಸುತ್ತಿದ್ದರಾದರೂ ಪೂರ್ವ ಪಂಜಾಬ್‌ನ ಶರಣಾರ್ಥಿಗಳು ಅಲ್ಲಿ ತಲಪಿದಾಗ ಸಿಂಧ್‌ನ ಸೂಫಿಯಾನಾ ಸ್ವಭಾವ ಶಾಶ್ವತವಾಗಿ ಸತ್ತುಹೋಯಿತು. ಹಿಂದೂಗಳು ಅಲ್ಲಿಂದ ಕಾಲುಕೀಳುವುದು ಅನಿವಾರ್ಯವಾಯಿತು. ಹರಿಜನರದ್ದಂತೂ ಬಹಳ ದುಃಸ್ಥಿತಿ, 'ಅನಿವಾರ್ಯಸೇವೆ' ಅಂತ ಹೇಳಿ ಹರಿಜನರಿಗೆ ಭಾರತಕ್ಕೆ ಹೋಗುವ ಹಕ್ಕು ಕೂಡ ಇರಲಿಲ್ಲ. ಅವರ ಧರ್ಮ ಪರಿವರ್ತನೆ ಮಾಡಿಸುತ್ತಿದ್ದರು. ಇಂತಹ ಆತಂಕದಿಂದ ವ್ಯಥಿತರಾಗಿ ಬಾಪೂಜಿ ಕಾಯದೆ ಆಜ಼ಂಗೆ ೨–೩ ಪತ್ರಗಳನ್ನು ಬರೆದರಾದರೂ ಯಾವುದಕ್ಕೂ ಉತ್ತರ ಬರುತ್ತಿರಲಿಲ್ಲ. ಸ್ವಾತಂತ್ರ್ಯ ಬಂದ ನಂತರ ಪಾಕಿಸ್ತಾನಕ್ಕೆ ದುರ್ದೈವ, ಜಿನ್ನಾ ಸಾಹಬ್ ಖಾಯಿಲೆ ಹೆಚ್ಚಾಯಿತು, ಅವರು ತಮ್ಮ ದೇಶದ ಆಳ್ವಿಕೆ ವಿಷಯವಾಗಿ ಸ್ವಲ್ಪವೂ ಗಮನ ಹರಿಸಕ್ಕಾಗುತ್ತಿರಲಿಲ್ಲ. ಶರೀರ ದೌರ್ಬಲ್ಯದಿಂದಾಗಿ ಅವರಿಗೆ ಥಟಕ್ಕನೆ ಕೋಪ ಬಂದುಬಿಡುತ್ತಿತ್ತು, ಒಳ್ಳೊಳ್ಳೆಯ ಜನರಿಗೆ ಅವಮಾನ ಮಾಡಿಬಿಡುತ್ತಿದ್ದರು ಮತ್ತು ಜಟಿಲ ಸಮಸ್ಯೆಗಳನ್ನು ಕುರಿತು ಗಮನ ಹರಿಸುತ್ತಿರಲಿಲ್ಲ. ಇಷ್ಟು ಆಧುನಿಕ ವಿಚಾರಗಳನ್ನಿಟ್ಟುಕೊಂಡಿದ್ದ ಜಿನ್ನಾ ಸಾಹಬರು ಆಕ್ರಮಣಕಾರಿ ಸ್ವಭಾವದ, ಸಂಪ್ರದಾಯವಾದಿ ಮೌಲ್ವಿಗಳ ಕೈಗಳಲ್ಲಿ ಸಿಲುಕಿಕೊಂಡಿದ್ದರು. ಜಿನ್ನಾ ಪಾಕಿಸ್ತಾನವನ್ನ ಮುಸಲ್ಮಾನರದೇ ವಿಶಿಷ್ಟ ದೇಶವೆಂದು ಘೋಷಣೆಯನ್ನು ಮಾಡಿಯೇಬಿಟ್ಟಿದ್ದರು. ಆದರೆ ಕೆಲವು ದಿನಗಳ ನಂತರ ಪ್ರಧಾನ ಮಂತ್ರಿ ಲಿಯಾಕತ್ ಅಲಿ ಮುಸಲ್ಮಾನ ನಿರಾಶ್ರಿತರು ಪಾಕಿಸ್ತಾನಕ್ಕೆ ಬರದಂತೆ ತಡೆದುಬಿಟ್ಟಿದ್ದರು. ಪಂಜಾಬನ್ನು ಬಿಟ್ಟು ಇನ್ನೆಲ್ಲಿಯ ಮುಸಲ್ಮಾನರಿಗೂ ಪಾಕಿಸ್ತಾನದಲ್ಲಿ ಜಾಗವಿರಲಿಲ್ಲ, ೧೯೪೭ರ ಚಳಿಗಾಲದಲ್ಲಿ ಕಾಯದೆ ಆಜ಼ಂ ಸ್ವತಃ ಎಬ್ಬಿಸಿದ್ದ ಸಾಂಪ್ರದಾಯಿಕತೆಯ ಧರ್ಮಾಂಧ ರಾಕ್ಷಸನಿಗೆ ಗುರಿಯಾದರು, ತನು–ಮನದಿಂದ ಅವರು ವಿಕ್ಷಿಪ್ತರಾಗುತ್ತಿದ್ದರು, ಪಾಕಿಸ್ತಾನ ಪಡೆದಾದ ಮೇಲೂ ಅಸಂತುಷ್ಟ ಹೆದರಿದ ಜಿನ್ನಾರಿಗೆ ನಾಲ್ಕು ಕಡೆಗಳಿಂದಲೂ ಶತ್ರುಗಳೇ ಕಾಣಿಸುತ್ತಿದ್ದರು.

ಪಾಕಿಸ್ತಾನದಲ್ಲಿ ನಿರಂತರವಾಗಿ ನಡೆದುಬರುತ್ತಿದ್ದ ಕಾನೂನುಬಾಹಿರವಾದ ಅರಾಜಕತೆಯಿಂದಾಗಿ ಕೊನೆಗೆ ಬಾಪೂಜಿ ೨೬ ಸೆಪ್ಟೆಂಬರ್ ೧೯೪೭ರಂದು ಪ್ರಾರ್ಥನಾ ಸಭೆಯಲ್ಲಿ ಸಾರ್ವಜನಿಕವಾಗಿ, 'ಇದೇ ರೀತಿ ನಡೆದಲ್ಲಿ ಎರಡೂ ದೇಶಗಳ ನಡುವೆ

ಯುದ್ಧವಾಗುತ್ತ'ದೆಂದು ಘೋಷಿಸಿ ಹೇಳಿದರು. ಈ ಯುದ್ಧ ಎಂಬ ಶಬ್ದೋಚ್ಚಾರಣೆಯಿಂದ ಅನೇಕ ವಿದೇಶೀಯರು ಚಿಂತೆಗೊಳಗಾದರು. ಮೌಂಟ್–ಬ್ಯಾಟನ್‌ಗೆ ಕೂಡ ಬಹಳ ಬೇಸರವಾಯಿತು. ಒಬ್ಬ ವಿದೇಶಿ ಪತ್ರಕರ್ತರು ಬಾಪೂಜಿಯನ್ನು ಕುರಿತು, 'ತಮಾಷೆಗಾಗಿ ಕೂಡ ಯುದ್ಧ ಎಂಬ ಪದವನ್ನು ಬಳಸಬಾರದಿತ್ತು' ಎಂದು ಹೇಳಿದರು. ಬಾಪೂಜಿ ಹೇಳಿದರು – 'ಯುದ್ಧ ಗಂಭೀರವಾದ ವಿಷಯ, ಮತ್ತು ನಾನು ತಮಾಷೆ ಮಾಡಿರಲೇ ಇಲ್ಲ, ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಯುದ್ಧ ಆಗಬಹುದೆಂಬ ವಿಷಯವನ್ನ ತಿರಸ್ಕರಿಸಿದರೆ ಅತಿ ದೊಡ್ಡ ಅಪರಾಧವಾಗುತ್ತದೆ, ನಾನು ಅಹಿಂಸೆಯ ಪೂಜಾರಿ, ಆದರೆ ಹಿಂಸೆಯಲ್ಲೂ ಸತ್ಯ–ಅಸತ್ಯ, ನ್ಯಾಯ–ಅನ್ಯಾಯ, ಔಚಿತ್ಯ–ಅನೌಚಿತ್ಯದ ಪಕ್ಷಗಳು ಇದ್ದೇ ಇರುತ್ತವೆ, ಅನ್ಯಾಯವನ್ನು ವಿರೋಧಿಸುವುದು ನನ್ನ ಕರ್ತವ್ಯ, ಅಹಿಂಸೆಯಿಂದ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವಾದರೆ ಒಳ್ಳೆಯದು. ಆದರೆ ಅಹಿಂಸೆಯ ಹೆಸರಿನಲ್ಲಿ ಅನ್ಯಾಯ ಮತ್ತು ಹೇಡಿತನವನ್ನು ಮರೆಮಾಚುವ ಪ್ರಯತ್ನ ಮಾಡಬಾರದು. ಇಂತಹ ಯುದ್ಧದ ಸ್ಥಿತಿಯಲ್ಲಿ ಪ್ರಾಮಾಣಿಕರಾದ ಮುಸಲ್ಮಾನ ನಾಗರಿಕನು ಭಾರತದ ಕಡೆಯಿಂದ ಪಾಕಿಸ್ತಾನವನ್ನು ವಿರೋಧಿಸಬೇಕು, ಅದು ಅವನ ಕರ್ತವ್ಯ. ಭಾರತದ ಬಾವುಟದ ಗೌರವವನ್ನು ಅವನು ರಕ್ಷಿಸಬೇಕು, ಭಾರತೀಯ ಮುಸಲ್ಮಾನನು ಪಾಕಿಸ್ತಾನದ ಮುಸಲ್ಮಾನನನ್ನು ಯುದ್ಧದಲ್ಲಿ ಎದುರಿಸಲಾಗುವುದಿಲ್ಲವೆಂದು ಹೇಳುವುದು ತಪ್ಪಾಗುತ್ತದೆ.' ಹಳೆಯ ಇತಿಹಾಸ ಮತ್ತು ಆಧುನಿಕವಾದ ಘಟನೆಗಳ ನೂರಾರು ಪ್ರಸಂಗಗಳಲ್ಲಿ ಮುಸ್ಲಿಂ ರಾಷ್ಟ್ರಗಳು ಇತರೆ ಮುಸಲ್ಮಾನರೊಂದಿಗೆ ಯುದ್ಧ ಮಾಡಲೇಬೇಕಾಗಿ ಬಂದಿದೆ. ಬಾಪೂಜಿ ಸ್ವತಃ ಅಹಿಂಸೆಯ ಪೂಜಾರಿಯಾಗಿದ್ದವರು, ಆದರೆ ಅವರು ಜನರನ್ನು ಹೆದರಿಸಿ – ಬೆದರಿಸಿ, ಆಜ್ಞೆ ಮಾಡಿ ಅಹಿಂಸೆಯನ್ನು ಕಲಿಸಲು ಸಾಧ್ಯವಾಗುವುದಿಲ್ಲ. ಅಹಿಂಸೆಯಲ್ಲಿ ಇನ್ನೂ ಹೆಚ್ಚು ತೇಜಸ್ಸಿನಿಂದ ಕೂಡಿದ ಶೌರ್ಯ ಬೇಕಾಗುತ್ತದೆ, ಹೆದರದಿರುವ ಪರಾಕ್ರಮ ಹೃದಯದಲ್ಲಿ ನೆಲಸಿದ್ದರೆ ಅಹಿಂಸಾತ್ಮಕ ಪ್ರತೀಕಾರ ಸಾಧ್ಯವಾಗುತ್ತದೆ, ಪ್ರತಿಯೊಂದು ಸ್ಥಿತಿಯಲ್ಲೂ ಅನ್ಯಾಯವನ್ನು ಸಹಿಸಿಕೊಂಡಿದ್ದರೆ ಅದು ತಪ್ಪಾಗುತ್ತದೆ; ಆದುದರಿಂದ ಕನಿಷ್ಠ ಪಕ್ಷ ಹಿಂಸಾತ್ಮಕ ಪರಾಕ್ರಮ ಬೇಕೇ ಬೇಕು. ಹಿಂಸೆಯಲ್ಲೂ ವ್ಯಕ್ತಿ ಅಹಿಂಸಕನಾಗಿರಲು ಸಾಧ್ಯ. ಅಹಿಂಸೆ ಹೃದಯದ ಗೂಢ ಭಾವನೆಯ ಮೇಲೆ ಆಶ್ರಿತವಾಗಿರುತ್ತದೆ, ಅದರಿಂದ ಹೊರಗಣ ಕ್ರೌರ್ಯ ಯಾವ ರೂಪದಲ್ಲಾದರೂ ಇರಬಹುದು. ಬಾದಷಾಹ ಖಾನ್ ಪಠಾಣ, ಆದರೆ ಹೃದಯದಲ್ಲಿ ಅಹಿಂಸಕರಾಗಿದ್ದಾರೆ, ಇಡೀ ದೇಶದಲ್ಲಿ ಅವರ ಅಹಿಂಸೆ ಉತ್ಕೃಷ್ಟವಾದದ್ದು, ಅದೇ ರೀತಿ ಮಹಾತ್ಮಾ ಟಾಲ್‌ಸ್ಟಾಯ್ ಪೂರ್ವಾಶ್ರಮದಲ್ಲಿ ಸೈನಿಕರಾಗಿದ್ದರು, ನಂತರ ಅವರು ಅಹಿಂಸೆಯನ್ನು ಪ್ರತಿಪಾದಿಸಿದರು,' ಎಂದು ಹೇಳಿದರು.

ಅಕ್ಟೋಬರ್ ೨೬ರಂದು ಈದ್ ದಿನವಾಗಿತ್ತು. ಎಲ್ಲಿ ಏನಾದೀತೋ ಎಂದು ಬಾಪೂಜಿ ಚಿಂತಿತರಾಗಿದ್ದರು, ಆದರೆ ಹಾಗೇನೂ ಆಗುವುದಿಲ್ಲವೆಂದು ಸರದಾರರಿಗೆ ನಂಬಿಕೆ ಇತ್ತು. ಅವರು ಪಕ್ಕಾ ಬಂದೋಬಸ್ತ್ ಮಾಡಿದ್ದರು. ದಿನಪೂರ್ತಿ ಮುಸಲ್ಮಾನ ಮಿತ್ರರು ಈದ್ ಮುಬಾರಕ್ ಹೇಳಲು ಬಂದು ಹೋದರು. ಬಾಪೂಜಿ ಅವರಿಗೆ 'ಹಿಂದಿನಿಂದಲೂ ಹಿಂಸೆಯ ನಡುವೆ ಅಹಿಂಸೆಯ ಪರೀಕ್ಷೆ ನಡೆದಿದ. ಸುಳ್ಳಿನ ಮಧ್ಯದಲ್ಲೇ ಸತ್ಯ ಬದುಕಬೇಕಾಗುತ್ತದೆ. ಕ್ರೌರ್ಯದ ನಡುವೆ ಕರುಣೆ ಮತ್ತು ತಿರಸ್ಕಾರದ ನಡುವೆ ಪ್ರೇಮದ ಪರೀಕ್ಷೆ ನಡೆಯುತ್ತದೆ, ಈದ್‌ನ ಶುಭ ದಿವಸ ನೀವು ರಕ್ತಕ್ಕೆ ರಕ್ತದಿಂದ ಸೇಡು ತೀರಿಸಿಕೊಳ್ಳುತ್ತೇವೆ ಎನ್ನುವುದನ್ನು ಬಿಟ್ಟು ನಮ್ಮ ರಕ್ತದ ಬಲಿದಾನ ನೀಡುತ್ತೇವೆಂದು ಸಂಕಲ್ಪ ಮಾಡಿದರೆ ನಾವು ಇತಿಹಾಸದಲ್ಲಿ ಅಮರರಾಗುತ್ತೇವೆ. ಏಸುಕ್ರಿಸ್ತನು ಶಿಲುಬೆಯಿಂದ ಆತನನ್ನು ಕೊಲ್ಲುವವರಿಗಾಗಿ ದಯೆ ಮತ್ತು ಕ್ಷಮೆ ಯಾಚಿಸಿದ್ದ. ನಾನು ಕೂಡ ನನ್ನ ಹಂತಕನಿಗಾಗಿ ದೇವರಲ್ಲಿ ಕ್ಷಮೆ ಯಾಚಿಸುವಂತೆ ಮಾಡು ಎಂದು ಪ್ರಾರ್ಥಿಸುತ್ತೇನೆ. ನೀವು ಕೂಡ ನಿಮ್ಮ ಹಂತಕರಿಗಾಗಿ ದೇವರಲ್ಲಿ ಕ್ಷಮೆ ಬೇಡುವ ಶಕ್ತಿ ನೀಡಲಿ ಎಂದು ನನಗಾಗಿ ಪ್ರಾರ್ಥನೆ ಮಾಡಿ' ಎಂದರು ಬಾಪೂಜಿ.

ದೆಹಲಿಯಲ್ಲಿ ಕೆಲವರು ಹಿಂದೂಗಳು, 'ಈ ಮುಸಲ್ಮಾನರು ಮೀನು–ಮಾಂಸ ಬೇಯಿಸುವುದರ ವಾಸನೆಯನ್ನು ಸಹಿಸಲಾಗುವುದಿಲ್ಲವಾದ್ದರಿಂದ ಇಲ್ಲಿಯ ನೆರೆ–ಹೊರೆಯವರು ಶಾಕಾಹಾರಿಗಳಾಗಬೇಕೆಂದು ದೂರು ನೀಡಿದ್ದರು, ಎಷ್ಟು ವಿಚಿತ್ರವಾದ ಅಹಂಕಾರ ಮತ್ತು ಸ್ವಾರ್ಥ ಪ್ರದರ್ಶನ! ಹಿಂದೂಗಳಲ್ಲೇ ಶಾಕಾಹಾರಿಗಳಿರುವುದು ಕಡಿಮೆ, ಅದರಿಂದ ಶಾಕಾಹಾರಿಗಳು ಅಲ್ಪ ಸಂಖ್ಯೆಯಲ್ಲಿರುವವರು ತಮ್ಮ ಅಭ್ಯಾಸಗಳನ್ನು ಮತ್ತೊಬ್ಬರ ಮೇಲೆ ಹೊರಿಸುವ ಅಧಿಕಾರ ಅವರಿಗಿಲ್ಲ. ಬಾಪೂಜಿ ಖುದ್ದಾಗಿ ಶುದ್ಧ ಶಾಕಾಹಾರಿಗಳಾಗಿದ್ದರು. ನಮ್ಮಜ್ಜಿಯಂತೂ ಹೆಚ್ಚಿನ ನಿಷ್ಠಾವಂತ ವೈಷ್ಣವಿಯಾಗಿದ್ದರು, ಅವರು ಈರುಳ್ಳಿ–ಬೆಳ್ಳುಳ್ಳಿ ಕೂಡ ತಿನ್ನುತ್ತಿರಲಿಲ್ಲ. ೧೮೯೬ರಲ್ಲಿ ಅಜ್ಜಿ ಮೊದಲ ಬಾರಿ ಆಫ್ರಿಕಾಗೆ ಹೋದಾಗ ದಾದಾಅಬ್ದುಲ್ಲಾನ ಸ್ಟೀಮರ್ ಕ್ಯಾಪ್ಟನ್ ಶಾಕಾಹಾರಿ ಕಸ್ತೂರಬಾಳ ಅನುಕೂಲಕ್ಕಾಗಿ ಅಡುಗೆ ಮಾಡಲು ಬೇರೆ ಒಲೆಯನ್ನ ವ್ಯವಸ್ಥೆ ಮಾಡಬೇಕೆಂದಿದ್ದ, ಅವರಿಗೆ ಮೀನು–ಮಾಂಸದ ಚಿಂತೆ ಇರದಿರಲಿ ಎಂದು ಬಯಸಿದ್ದ, ಆ ಪರಿಸ್ಥಿತಿಯಲ್ಲಿ ಕೂಡ ಬಾಪೂಜಿ ವಿಶೇಷ ವ್ಯವಸ್ಥೆಯನ್ನು ಬೇಡವೆಂದು ಹೇಳಿಬಿಟ್ಟಿದ್ದರು. ಮಾಂಸ ಕೂಡ ತಿನ್ನುವ ಪದಾರ್ಥವಾಗಿತ್ತು, ಆ ತರಹ ತಿರಸ್ಕಾರ ತೋರಿಸಿದಲ್ಲಿ ಜಹಜಿನ ಮಿಕ್ಕ ಯಾತ್ರಿಕರ ಬಗೆಗೆ ಅನಾದರ ತೋರಿದಂತಾಗುತ್ತಿತ್ತು. ಕಸ್ತೂರಬಾ ತನ್ನ ಪರಿವಾರಕ್ಕಾಗಿ ಸ್ಟೀಮರ್‌ನ ಆ ಎಲ್ಲರ ಅಡುಗೆಯ ಕೋಣೆಯಲ್ಲೇ ಅಡುಗೆ ಮಾಡುತ್ತಿದ್ದರು. ಅದೇ ರೀತಿ ಕೆಲವರು ಹಿಂದೂಗಳು ಗೋಹತ್ಯೆ ನಿಲ್ಲಿಸಲು

ಸರ್ಕಾರಿ ಕಾನೂನು ಮಾಡಬೇಕೆಂದು ಬಯಸಿದರು. ಬಾಪೂಜಿ ಅವರಿಗೂ, 'ಭಾರತ ಧರ್ಮಾಂಧ ದೇಶವಲ್ಲ, ಹಿಂದೂ ಧರ್ಮದ ನಿಯಮಗಳನ್ನು ಬೇರೆಯ ಧರ್ಮದವರ ಮೇಲೆ ಹೊರಿಸಲಾಗದು, ಭಾರತದ ದೊಡ್ಡತನ ಮತ್ತು ಉದಾರ ವ್ಯವಹಾರಕ್ಕಾಗಿ ಪ್ರಪಂಚ ಎದುರು ನೋಡುತ್ತಿದೆಯೇ ಹೊರತು, ಸಂಕೀರ್ಣವಾದ ಸಣ್ಣತನವನ್ನಲ್ಲ' ಎಂದು ಬಾಪೂಜಿ ಹೇಳಿದರು.

ನವೆಂಬರ್ ೫ರಂದು ಬಾಪೂಜಿ ರಾಜಾಜಿಗೆ ಕಲ್ಕತ್ತಾಗೆ ಒಂದು ಪತ್ರ ಬರೆದು, 'ಮೇಲ್ನೋಟಕ್ಕೆ ಎಲ್ಲವೂ ಸರಿಯಾಗಿದೆಯಾದರೂ ಒಳಗೆ ಇರುವ ಹಿಂಸೆಯ ಉರಿ ಯಾವಾಗ ಒಡೆದು ಹೊರಮೂಡುವುದೆಂದು ಹೇಳಲಾರೆ, ಬಂಗಾಳ ಉಳಿದುಕೊಂಡರೆ ಸಾಕು, ರಾಮನೊಬ್ಬನೇ ನನ್ನ ಆಸರೆ' ಎಂದು ತಿಳಿಸಿದರು.

ಐದು ದಿನಗಳ ನಂತರ ಪಾಣೀಪತ್‌ನ ಹಿಂದೂ-ಮುಸಲ್ಮಾನ ಶರಣಾರ್ಥಿಗಳ ಕ್ಯಾಂಪ್ ನೋಡಲು ಹೋದರು. ಅಲ್ಲಿಯ ಸ್ಥಿತಿಯನ್ನು ನೋಡುವುದು ಕಷ್ಟವಾಗಿತ್ತು, 'ಪೂರ್ವ ಪಂಜಾಬಿನ ಮುಖ್ಯಮಂತ್ರಿಗಳು ಕರ್ಮನಿಷ್ಠರಾದ ಕಾಂಗ್ರೆಸ್ಸಿಗರಾಗಿದ್ದರು, ಅವರ ಶಾಸನದಲ್ಲಿ ಇದೆಂತಹ ಅವ್ಯವಸ್ಥೆ, ಅಧಿಕಾರಿಗಳು ಸರಿಯಾಗಿ ವ್ಯವಸ್ಥೆಯನ್ನೇಕೆ ಮಾಡಲಿಲ್ಲ? ಅಧಿಕಾರಿಗಳಿಗೆ ಎಲ್ಲ ಪರಿಸ್ಥಿತಿಗಳ ಕಲ್ಪನೆ ಇರಬೇಕಾಗಿತ್ತು, ಅಧಿಕಾರಿಗಳ ಬೇಜವಾಬ್ದಾರಿತನದಿಂದ ಸರಕಾರಕ್ಕೆ ಕೆಟ್ಟ ಹೆಸರು ಒದಗಿ ಬಂದಿದೆ,' ಎಂದು ಬಾಪೂಜಿ ಅಂದರು. ಅದೇ ರೀತಿ, ಗುಡಗ್ಗಾವ ಜಿಲ್ಲೆಯ ಒಂದೂವರೆ ಲಕ್ಷ ಮುಸಲ್ಮಾನರು ಹೆದರಿಕೊಂಡು ತಮ್ಮ ಮನೆ-ಮಠಗಳನ್ನು ತೊರೆದಿದ್ದಾರೆಂದೂ, ಅವರು ತಮ್ಮ ಎತ್ತು-ಗಾಡಿ, ದನ, ಕರುಗಳನ್ನು ತೆಗದುಕೊಂಡು ಚಳಿಯಲ್ಲಿ ತೆರೆದ ಆಕಾಶದ ಕೆಳಗೆ ರಸ್ತೆಯ ಅಂಚಿನಲ್ಲಿ ಬಿದ್ದಿದ್ದಾರೆ, ಮುನ್ನೂರು ಮೈಲಿ ಯಾತ್ರೆ ಮಾಡಿಕೊಂಡು ಪಾಕಿಸ್ತಾನದ ಕಡೆಗೆ ಹೋಗಬಯಸುತ್ತಿದ್ದಾರೆಂದು ಸುದ್ದಿ ಬಂತು. ಬಾಪೂಜಿ ತನ್ನ ಜೀವನದ ಆದ್ಯಂತ ಹಿಂದೂ-ಮುಸಲ್ಮಾನ ಏಕತೆಯ ಬಗ್ಗೆ ನಂಬಿಕೆ ಇಟ್ಟಿದ್ದವರು. ಈಗ ಈ ಹೋರಾಟ, ಈ ನಿರ್ದಯತೆಯನ್ನು ಅವರಿಗೆ ನೋಡಲಾಗುತ್ತಿರಲಿಲ್ಲ. ಆದರೆ ಅವರು ಶರಣಾರ್ಥಿಗಳನ್ನು ಸಮಾಧಾನಪಡಿಸಿ ದುರ್ಬಲರನ್ನಾಗಿ ಮಾಡಲು ಇಷ್ಟಪಡುತ್ತಿರಲಿಲ್ಲ. ಅವರು ಶರಣಾರ್ಥಿಗಳಿಗೆ, ಈ ತರಹ ನೀವು ಸರಕಾರದ ಸಹಾಯ ಸಿಗುತ್ತದೆಂದು ಆಸೆ ಇಟ್ಟುಕೊಂಡು ಕೈಕಟ್ಟಿಕೊಂಡು ಕುಳಿತುಕೊಳ್ಳುವುದು ಸರಿಯಲ್ಲ, ಎಲ್ಲರೂ ತಮ್ಮ ಪುರುಷಾರ್ಥದಿಂದ ಕೆಲಸ ಮಾಡಬೇಕು, ಎಲ್ಲರೂ ಒಟ್ಟು ಕೂಡಿಕೊಂಡರೆ ಸಹಜವಾಗಿ ಇರುವುದಕ್ಕೆ ಊಟಕ್ಕೆ ಎಲ್ಲಾ ವ್ಯವಸ್ಥೆಯಾಗುತ್ತೆ, ಅಂತ ಹೇಳಿದರು. ಶರಣಾರ್ಥಿಗಳಲ್ಲಿ ಅನೇಕರು ಓದಿ-ಬರೆದವರು, ಕೌಶಲವಿಟ್ಟುಕೊಂಡಿದ್ದವರು ಇದ್ದರು, ಡಾಕ್ಟರರು, ವಕೀಲರು ಇದ್ದರು, ಅವರೆಲ್ಲರೂ ಸುಲಭವಾಗಿ ಜನರಿಗೆ ಸುಖ-ಸಾಧನಗಳ ವ್ಯವಸ್ಥೆ

ಮಾಡಬಲ್ಲವರಾಗಿದ್ದರು, ಸಹಕಾರ ಮಾಡುವ ಧೈರ್ಯ ಬೇಕಿತ್ತು, ಅಷ್ಟೆ. ಹಿಂದಿನ ಕಾಲದಲ್ಲಿ ಜನ ಹೀಗೆ ರಾಜ–ಸರಕಾರ ಇವುಗಳಿಂದೇನೂ ಸಹಾಯದ ಆಸೆ ಇಟ್ಟುಕೊಳ್ಳುತ್ತಿರಲಿಲ್ಲ, ಖುದ್ದಾಗಿ ಕೈ–ಕಾಲು ಆಡಿಸಿ ಜೀವನ ನಡೆಸುತ್ತಿದ್ದರು. ಈ ದುಃಖದ ದಿನಗಳು ಕೂಡ ಸ್ವಾವಲಂಬನೆಯಿಂದ ಒಳ್ಳೆಯ ದಿನಗಳಾಗುವ ಸಾಧ್ಯತೆ ಇತ್ತು. ಬರಿಯ ಪರಿಶ್ರಮ, ಧೈರ್ಯ ಹಿಮ್ಮತ್ತು ಬೇಕಾಗಿತ್ತು, ಅಳುವುದರಿಂದ, ಉದ್ವೇಗಪಡುವುದರಿಂದ ಶಕ್ತಿ ಕುಂಠಿತವಾಗುತ್ತೆ.

ಚಳಿಗಾಲ ಬರುತ್ತಿತ್ತು, ತೆರೆದ ಆಕಾಶದ ಕೆಳಗೆ, ಶಿಬಿರಗಳಲ್ಲಿ ಈ ಶರಣಾರ್ಥಿಗಳ ಸ್ಥಿತಿ ಏನಾಗುತ್ತೋ ಎಂದು ಹೇಳುವ ಹಾಗಿರಲಿಲ್ಲ ಎಂದು ಯೋಚಿಸಿ ಬಾಪೂಜಿಗೆ ಬಹಳ ಚಿಂತೆಯಾಗಿತ್ತು. ಶರೀರದಲ್ಲಿ ತಾಪವನ್ನ ಸಂಗ್ರಹಿಸುವುದು ಹೇಗೆ? ಕಂಬಳಿಯ ಮೇಲೆ ಕಾಗದವನ್ನಿಟ್ಟರೆ ಹೆಚ್ಚು ಬಿಸಿ ಬರಬಹುದು, ಹಿಮದಲ್ಲಿ ಕಂಬಳಿ ಒದ್ದೆಯಾಗಲ್ಲ ಎಂದು ಮುಂತಾಗಿ ಎಷ್ಟೋ ವಿಷಯಗಳನ್ನು ಬಾಪೂಜಿ ಆ ಜನರಿಗೆ ಕಲಿಸಲಾರಂಭಿಸಿದರು. ಬಾಪೂಜಿ ಕಂಬಳಿ, ಬಟ್ಟೆ ಕೊಡುವಂತೆ ಜನರಿಗೆ ಅಪೀಲ್ ಮಾಡಿದರು, ಜೊತೆಗೆ ಎಲ್ಲಾ ಬಟ್ಟೆಗಳನ್ನೂ ಒಗೆದು, ಹೊಲೆದು, ರಿಪೇರಿ ಮಾಡಿದ ನಂತರವೇ ಕೊಡುವಂತೆ ತಿಳಿಸಿದರು. ಬಾಪೂಜಿಯವರ ಅಪೀಲನ್ನು ಕೇಳಿ ದೆಹಲಿಯ ಜನರು ತಮ್ಮ ಮನೆಗಳ ಅಲಮಾರು ಮತ್ತು ಪೆಟ್ಟಿಗೆಗಳನ್ನು ಖಾಲಿ ಮಾಡಿಬಿಟ್ಟರು. ಕೆಲವರು ಮಖಮಲ್ ಮತ್ತು ಶನೀಲ್ ಪರದೆಗಳನ್ನೇ ತೆಗೆದು ಶರಣಾರ್ಥಿಗಳಿಗೆ ಕೊಟ್ಟುಬಿಟ್ಟರು. ಆ ಕಾಲದಲ್ಲಿ ಬಾಪೂಜಿಯ ವ್ಯವಸ್ಥೆಯಲ್ಲಿ ದಾನದ ಒಂದು ಬಟ್ಟೆ ಕೂಡ ಕಳೆದುಹೋಗಲಿಲ್ಲ, ಶರಣಾರ್ಥಿಗಳ ಕೈಗೇ ದಾನ ತಲಪಿತು. ಇಬ್ಬರು ಮುಸಲ್ಮಾನ ಮಿತ್ರರು ಶರಣಾರ್ಥಿಗಳಿಗೆ ಕೊಡಲೆಂದು ಕಂಬಳಿಗಳನ್ನೆ ಕಳುಹಿಸಿದರು. ಅದೇನೂ ದೊಡ್ಡ ಮಾತಾಗಿರಲಿಲ್ಲ. ಆದರೆ ಅಂತಹ ಭಾವನೆಯಿಂದ ಉದ್ವಿಗ್ನಗೊಂಡಿದ್ದ ಸಮಾಜ ಶಾಂತ, ಸಭ್ಯವಾಗಬಹುದಿತ್ತು, ಪ್ರತಿದಿನದ ಪ್ರಾರ್ಥನಾ ಸಭೆಯಲ್ಲಿ ಬಾಪೂಜಿ ಜನರಿಗೆ ಅಹಿಂಸೆ, ಸತ್ಯ, ಪ್ರೇಮ, ಧೈರ್ಯದ ಸಂದೇಶ ನೀಡಿ ತರಬೇತಿ ಕೊಡುತ್ತಿದ್ದರು. ಅವರು ಈ ರೀತಿ ನಿರಂತರವಾಗಿ ಪ್ರಯತ್ನಪಟ್ಟಿದರ ಪರಿಣಾಮವಾಗಿ ಸಿಖ್ಖರು, ಹಿಂದೂ ಶರಣಾರ್ಥಿಗಳಿಗೆ ಬಾಪೂಜಿ ತಮ್ಮ ಮಿತ್ರರು, ಅವರು ಯಾರಿಗೂ ಶತ್ರುವಲ್ಲ ಎಂಬ ಭಾವನೆ ಬೆಳೆದು ಬಂದಿತ್ತು.

ಲಾರ್ಡ್ ಮತ್ತು ಲೇಡಿ ಮೌಂಟ್‌ಬ್ಯಾಟನ್‌ರು ರಾಜಕುಮಾರಿ ಎಲಿಜ಼ಬೆತ್‌ನ ಮದುವೆಗೆಂದು ೯ ನವಂಬರ್ ೧೯೪೭ರಂದು ಲಂಡನ್‌ಗೆ ಹೊರಟರು. ಅದಕ್ಕೆ ಮೊದಲು ಅವರು ಬಾಪೂಜಿಯನ್ನು ಭೇಟಿಮಾಡಲೆಂದು ಹೋಗಿದ್ದರು, ಆಗ ನವದಂಪತಿಗಳಿಗಾಗಿ ಉಪಹಾರವನ್ನು ಕಳುಹಿಸಬೇಕೆಂದು ಬಾಪೂಜಿಗೆ ಅನಿಸಿತು. ಆದರೆ ಬಾಪೂಜಿ ಬಳಿ ಏನೂ ಇರಲಿಲ್ಲ. ಕೊನೆಗೆ ಅವರು ತನ್ನ ಕೈನೂಲನ್ನು ತರಿಸಿದರು. ಜೊತೆಗೆ ಒಬ್ಬ ಪಂಜಾಬಿ ಶರಣಾರ್ಥಿ ಮಹಿಳೆ ಆ ನೂಲನ್ನು

ಎರಡರಷ್ಟಾಗಿ ಮಾಡಿ ಕ್ರೋಶಾದಿಂದ ಟೇಬಲ್ ಕ್ಲಾತ್ ಒಂದನ್ನು ಹೆಣೆದಳು, ಅದನ್ನು ರಾಜಕುಮಾರಿಗೆ ಉಡುಗೊರೆಯಾಗಿ ಕಳುಹಿಸಿಕೊಟ್ಟರು. ಮಹಾರಾಣಿ ಎಲಿಜ಼ಬೆತ್ ಈಗ ಕೂಡ ಆ ಟೇಬಲ್‌ಕ್ಲಾತ್‌ನ್ನು ಸುರಕ್ಷಿತವಾಗಿ ಇಟ್ಟಿದ್ದಾರೆಂದು ಕೇಳಿದ್ದೇನೆ. ಅರುವತ್ತು ವರ್ಷಗಳ ಕಾಲ ಬಾಪೂಜಿ ಬ್ರಿಟಿಷ್ ಸಾಮ್ರಾಜ್ಯವನ್ನು ಕಟುವಾಗಿ ವಿರೋಧಿಸಿದ್ದರು ಹಾಗೂ ಅವರು ಏಕೈಕ ನಿಷ್ಠೆಯಿಂದ ಪ್ರಯತ್ನ ಪಟ್ಟುದರಿಂದ ಬ್ರಿಟಿಷ್ ರಾಜ್ಯ ಭಾರತವನ್ನು ಬಿಟ್ಟು ಹೊರಡಲೇಬೇಕಾಯಿತು. ಮೂರು ತಿಂಗಳ ಮೊದಲು ಇಂತಹ ಗುಲಾಮ ದೇಶದಲ್ಲಿ ನಾಯಕನೆಂದು ಎಲ್ಲರೂ ಒಪ್ಪಿಕೊಂಡ ತನ್ನ ಸೌಹಾರ್ದ ಹಾಗೂ ಶುಭೇಚ್ಛೆಗಳ ಪ್ರತೀಕವಾಗಿ ನೀಡಿದ ಆ ಉಪಹಾರ, ಲಾರ್ಡ್ ಮೌಂಟ್‌ಬ್ಯಾಟನ್ ಕೈಗಳಲ್ಲಿ ರಾಜಕುಮಾರಿಗೆ ತಲುಪಿದಾಗ ನೂರಾರು ವರ್ಷಗಳ ಕಟು ಭಾವನೆಗಳು ಒಂದೇ ನಿಮಿಷಕ್ಕೆ ಶಾಶ್ವತವಾಗಿ ದೂರವಾದವು.

೧೯೪೭ರ ದೀಪಾವಳಿ ಬಂತು. ಆದರೆ ಇದು ದೀಪ ಹೊತ್ತಿಸಿ ಸಂತೋಷ ಪಡುವ ಸಮಯ ಆಗಿರಲಿಲ್ಲ. ಜನರ ಹೃದಯದಲ್ಲಿ ಭಗವಂತನ ಪ್ರೇಮ ದೀಪವನ್ನು ಬೆಳಗಿರೆಂಬುದೊಂದೇ ನಮ್ಮ ವಿನಂತಿಯಾಗಿತ್ತು. ಅಲಿಗಢ್ ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘದ ಕೆಲವರು ಯುವಕರು ಬಾಪೂಜಿಯವರನ್ನು ಭೇಟಿಯಾಗ ಬಂದರು. ಅವರು ಹಿಂದೂ ಸಿಖ್ಖರ ಸೇವೆ ಮಾಡಿ ಪಾಕಿಸ್ತಾನದ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಶರಣಾರ್ಥಿಗಳ ಕ್ಯಾಂಪ್‌ನಲ್ಲಿ ಕಂಬಳಿ ಮುಂತಾದ್ದನ್ನು ಹಂಚ ಬಯಸುತ್ತಿದ್ದರು. 'ಇದರಿಂದಲೇ ಪ್ರಭಾವ ಬೀಳುವುದಿಲ್ಲ, ನಿಜವಾಗಿಯೂ ಪಶ್ಚಾತ್ತಾಪವಾಗುತ್ತಿದ್ದರೆ ಪಾಕಿಸ್ತಾನಕ್ಕೆ ಹೋಗಿ ಅಲ್ಲಿಯ ಸರಕಾರ ಮತ್ತು ಜನರಿಗೆ ಎಲ್ಲರೆದುರಿಗೇ ಓಡಿ ಹೋಗಿರುವ ಹಿಂದೂ–ಮುಸಲ್ಮಾನರನ್ನು ಹಿಂದಕ್ಕೆ ಕರೆಸಬೇಕೆಂದು ಹೇಳಿ' ಎಂದರು ಬಾಪೂಜಿ. ಆ ಹುಡುಗರು ನಿಜವಾಗಿಯೂ ಲಾಹೋರ್, ರಾವಲಪಿಂಡಿ, ಕರಾಚಿಗೆ ಹೋದರು. ಪಾಕಿಸ್ತಾನಿ ಜನರಿಗೆ ತಿಳಿಸಿ ಹೇಳಲು ಪೂರ್ತಿ ಪ್ರಯತ್ನಪಟ್ಟರು. ಪಾಕಿಸ್ತಾನಿ ಸರಕಾರ ಆ ಹಿಂದೂಗಳನ್ನು ಹಿಂದಕ್ಕೆ ಕರೆಸಿಕೊಳ್ಳಲು ಸಿದ್ಧವಾಗಿತ್ತಾದರೂ ಮುಸಲ್ಮಾನರಿಗೆ ಸಿಖ್ಖರನ್ನ ಕಂಡರೆ ಬಹಳ ದ್ವೇಷವಿತ್ತು, ಅದರಿಂದ ಆ ಪ್ರಸ್ತಾಪ ವಿಫಲವಾಯಿತು. ಆದರೆ ಆ ಹುಡುಗರ ಪ್ರಯತ್ನವನ್ನು ಮಾತ್ರ ಶ್ಲಾಘಿಸಬೇಕು, ಇವತ್ತಿಗೂ ಪಾಕಿಸ್ತಾನದಲ್ಲಿ ಸಿಖ್ಖರನ್ನ ಕಂಡರೆ ಅದೇ ರೀತಿ ದ್ವೇಷಭಾವನೆ ಅಡಗಿಕೊಂಡಿದೆ. ಭಾರತವನ್ನ ದುರ್ಬಲ ಗೊಳಿಸುವುದಕ್ಕೋಸ್ಕರ ಪಾಕಿಸ್ತಾನ ಸರಕಾರ ಇವತ್ತಿಗೆ ಖಾಲಿಸ್ತಾನಿಗಳು ಅಂತ ಹೇಳಿಕೊಳ್ಳುವ ಸಿಖ್ಖರಿಗೆ ಸಹಕಾರ ನೀಡುವ ಢೋಂಗಿ ತೋರಿಸುತ್ತಿದೆ. ಶೂರರೂ, ವೀರರೂ ಆದ ಈ ಸಿಖ್ಖರು ಈ ಮಾತಿನ ಆಂತರ್ಯವನ್ನು ಅರ್ಥ ಮಾಡಿಕೊಳ್ಳದೆ ಇರುವುದನ್ನ ನೋಡಿ ಆಶ್ಚರ್ಯವಾಗುತ್ತೆ, ದುರ್ಭಾಗ್ಯಕರ ಅಷ್ಟೆ.

ನವಂಬರ್ ೧೯೪೭ರಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ಅಧಿವೇಶನ ದೆಹಲಿಯಲ್ಲಿ ಜರುಗಿತು. ಕೊನೆಯ ಬಾರಿ ಬಾಪೂಜಿ ಕಾಂಗ್ರೆಸ್ ವೇದಿಕೆಯಿಂದ ಭಾಷಣ ನೀಡಿದರು. ಪ್ರತಿಯೊಂದು ವಾಕ್ಯವೂ ಗಂಭೀರ ಹಾಗೂ ಸಾಂದರ್ಭಿಕವಾಗಿತ್ತು. ಆ ಕೊನೆಯ ಭಾಷಣದ ಪ್ರತಿಯೊಂದು ವಾಕ್ಯ ಕೂಡ ಇವತ್ತಿಗೂ ಅಷ್ಟೇ ಮಹತ್ವವನ್ನೊಳಗೊಂಡಿದೆ ಎಂದು ನನಗನಿಸುತ್ತದೆ. ಭಗವಂತ ಬಾಪೂಜಿಗೆ ಒಳ್ಳೆಯ ದೂರದೃಷ್ಟಿಯನ್ನು ದಯಪಾಲಿಸಿದ್ದ, ಇಂದು ಐವತ್ತು ವರುಷಗಳು ಕಳೆದ ಮೇಲೆ ನಾವು ಎದುರಿಸುತ್ತಿರುವ ಸಮಸ್ಯೆಗಳನ್ನ ಬಾಪೂಜಿ ಅಂದೇ ಕಂಡು, ಅದಕ್ಕೆ ಕಾರಣ ಮತ್ತು ಅದನ್ನ ಪರಿಹರಿಸುವ ಉಪಾಯಗಳನ್ನೂ ಅವರು ಅರಿತಿದ್ದರು. ಅವರು ಆ ಕಾಲದ ಕಾಂಗ್ರೆಸ್ಸಿಗರನ್ನು ಎಚ್ಚರಿಸಿದರು, ಆದರೆ ಅಧಿಕಾರದ ಐಷಾರಾಮಗಳ ನಡುವೆ ಇದ್ದ ಆ ಕಾಂಗ್ರೆಸ್ಸಿಗರು ಬಾಪೂಜಿಯುವರ ಹಿತವಚನಗಳನ್ನು ಕೇಳಲಾರದಾದರು, ಗುರುತಿಸಲಿಲ್ಲ. ಬಾಪೂಜಿ ಬಹಳ ದುಃಖದಿಂದ ಕಾಂಗ್ರೆಸ್ಸಿಗರಿಗೆ, 'ಕೆಲವರನ್ನ ಬಿಟ್ಟರೆ, ಕಾಂಗ್ರೆಸ್‌ನ ಮಿಕ್ಕೆಲ್ಲ ಕಾಂಗ್ರೆಸ್ಸಿಗರು, ಕೋಮುವಾದದ ಉನ್ಮಾದದಲ್ಲಿ, ಸಂಕುಚಿತತೆಯಲ್ಲಿ ಸಿಲುಕಿ ಹಾಕಿಕೊಂಡಿದ್ದಾರೆ. ಹೃದಯದಿಂದ ಈ ಹುಚ್ಚು ದೂರವಾಗದಿದ್ದರೆ, ಹಿಂದೂ–ಮುಸಲ್ಮಾನ ಅನ್ನುವುದನ್ನ ಬಿಟ್ಟು ನೂರು ಬೇರೆ ಮುಖವಾಡಗಳ ಸಾಂಪ್ರದಾಯಿಕವಾದ ಪ್ರಶ್ನೆಗಳು ಎದ್ದು ನಿಲ್ಲುತ್ತವೆ. ದೇಶ ಅದನ್ನ ತಡೆಯುವುದಕ್ಕಾಗುವುದಿಲ್ಲ. ಅದನ್ನು ನೋಡಿ – ಸಹಿಸುವುದಕ್ಕೆ ನಾನು ಬದುಕಿರುವುದಿಲ್ಲ. ಆದರೆ ಸತ್ಯ–ಅಹಿಂಸೆಯ ತಾಕತ್ತಿನಿಂದಲೇ ದೇಶವನ್ನ ನಡೆಸಬೇಕಾಗುತ್ತದೆ, ಹಾಗಾಗದಿದ್ದರೆ ವರ್ಗ ಕಲಹಗಳಿಂದ ಸಮಾಜ ಆತಂಕಿತವಾಗುತ್ತೆ, ಆಗ ಸ್ವಾತಂತ್ರ್ಯ ನಿರರ್ಥವಾಗುತ್ತೆ. ಅಪನಂಬಿಕೆ, ದ್ವೇಷ, ಹೃದಯವನ್ನು ಸುಟ್ಟು ಹಾಕುತ್ತವೆ, ಅಂತಹ ವಿಷಪೂರಿತವಾದ ವಾತಾವರಣದಲ್ಲಿ ವಿಕಾಸ ಹೊಸಕಿ ಹೋಗುತ್ತದೆ. ಸ್ವಾತಂತ್ರ್ಯ ಹೋರಾಟಕ್ಕೆ ಸಂಯಮ, ತ್ಯಾಗ ಅಗತ್ಯವಾಗಿದ್ದಕ್ಕಿಂತಲೂ ನೂರು ಪಟ್ಟು ಹೆಚ್ಚು ಸಂಯಮ, ತ್ಯಾಗ, ಬಲಿದಾನ ಮತ್ತು ಪರಿಶ್ರಮ ಸ್ವಾತಂತ್ರ್ಯ ಸಿಕ್ಕಿದ ನಂತರ ಅಗತ್ಯವಾಗಿತ್ತು. ಇಂತಹ ಸಂಯಮ ಮತ್ತು ಪರಿಶ್ರಮದಿಂದ ರಾಷ್ಟ್ರ ರಚಿತವಾಗುತ್ತದೆ. ಆಗ ಅದರಲ್ಲಿರುವ ಪ್ರತಿಯೊಬ್ಬ ನಾಗರಿಕನೂ ತನ್ನ ಕರ್ತವ್ಯವನ್ನರಿತುಕೊಂಡು ಪ್ರಗತಿ ಮಾಡಲು ಸಾಧ್ಯವಾಗುತ್ತೆ,' ಎಂದು ಬಾಪೂಜಿ ಬಹಳ ದುಃಖದಿಂದ ಹೇಳಿದರು. ಇವತ್ತಿನ ದಲಿತ ಸಮಸ್ಯೆ ಅದೇ ಕೋಮುವಾದದ ಭೀಕರ ಸ್ವರೂಪವೇ ಆಗಿದೆ. ಶೇಕಡಾ ಐವತ್ತೊಂದರಷ್ಟು ಮಾತ್ರವಿದ್ದ ಅಧಿಕ ಸಂಖ್ಯಾತರ ವ್ಯವಸ್ಥೆಯನ್ನು ಬಾಪೂಜಿ ಒಪ್ಪುತ್ತಿರಲಿಲ್ಲ. ಆ ತರಹೆಯ ಬಹುಸಂಖ್ಯಾತರ ರಾಜ್ಯದಲ್ಲಿ ಶೇಕಡಾ ನಲವತ್ತೊಂಬತ್ತರಷ್ಟು ಜನಸಂಖ್ಯೆ ದಮನಕ್ಕೊಳಗಾಗುತ್ತೆ ಅಥವಾ ಅವರ ಬಗ್ಗೆ ಉಪೇಕ್ಷೆ ತೋರಿಸುತ್ತಾರೆ, ಹೀಗೆ ಅನ್ಯಾಯವಾಗುತ್ತದೆ. ಆ ತರಹೆಯ ಸ್ಥಿತಿಯಲ್ಲಿ ಪ್ರಜಾತಂತ್ರ ಬೆಳೆಯುವುದಕ್ಕಾಗುವುದಿಲ್ಲ, ಆದ್ದರಿಂದ ದೇಶದ ಅಂತಿಮ

ಮನುಷ್ಯನಿಗೂ ಅವಕಾಶ ಸಿಗಬೇಕು, ಅವರ ಆವಶ್ಯಕತೆಗಳೂ ಪೂರ್ತಿಯಾಗಬೇಕು, ಆಗಲೇ ಪ್ರಜಾತಂತ್ರ ಬರುವುದು ಕೂಡ ಎಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಅದು ಸರಿ ಕೂಡ. ಆ ಕೊನೆಯ ಮನುಷ್ಯನ ವಿಷಯವಾಗಿ ಗಮನ ಕೊಡುವವರೆವಿಗೂ ಸ್ವಾತಂತ್ರ್ಯದ ಒಳ್ಳೆಯ ಫಲ ಎಲ್ಲರಿಗೂ ಸಿಗುವುದಿಲ್ಲ. ಆ ತರಹೆಯ ಅಸಮಾನತೆಯಲ್ಲೇ ಉದ್ವೇಗ–ಕ್ಲೇಶ ಇವು ಹುಟ್ಟಿಕೊಳ್ಳುತ್ತವೆ.

ಇಷ್ಟೆಲ್ಲಾ ಉದ್ವಿಗ್ನ ಪರಿಸ್ಥಿತಿ ಇರುವಾಗಲೇ ಬಿಹಾರ, ನೋವಾಖಾಲಿಯಲ್ಲಿ ಸಹಜ ಸ್ಥಿತಿ ಏರ್ಪಟ್ಟಿದ್ದು ನೋಡಿ ಬಾಪೂಜಿಗೆ ಸ್ವಲ್ಪ ನೆಮ್ಮದಿ ಸಿಕ್ಕಿತ್ತು. ನೋವಾಖಾಲಿಯಲ್ಲಿ ಇತ್ತೀಚೆಗೆ ದೇವಸ್ಥಾನ ಒಂದನ್ನ ಧ್ವಂಸಮಾಡಿ ಅದರಿಂದ ಮಸೀದಿ ಕಟ್ಟಿದ್ದುದನ್ನ ಒಡೆದು ಪುನಃ ದೇವಸ್ಥಾನವನ್ನ ಮುಸಲ್ಮಾನರೇ ಕಟ್ಟಿದ್ದರು. ಬಿಹಾರದ ಗಯಾ ಜಿಲ್ಲೆಯಲ್ಲಿ ಸುರೈಯ, ಸಿಸವಾರ, ಜಹಾನಾಬಾದ್ ಮುಂತಾದ ಸ್ಥಳಗಳಲ್ಲಿ ಭಯಂಕರವಾಗಿ ದಂಗೆಗಳಾಗಿದ್ದವು, ಆದರೆ ಈಗ ಅಲ್ಲಿಯ ಜನ ಸಹಕಾರ ಮತ್ತ ಗೆಳೆತನ ಆದರ್ಶ ಸ್ವರೂಪದ್ದಾಗಿ ಪರಿಣಮಿಸಿತ್ತು. ತಿಲಹಾರ ಹಳ್ಳಿಯ ಹಿಂದೂಗಳು ಹಾಳು ಮಾಡಿದ್ದ ಮುಸಲ್ಮಾನರ ಮನೆಗಳ ಜೀರ್ಣೋದ್ಧಾರಕ್ಕೆ ಪೂರ್ತಿ ಸಹಕಾರ ನೀಡಿದರು ಮತ್ತು ಅವರ ಮನೆಗಳು ಸಿದ್ಧವಾಗುವವರೆಗೂ ಆ ಮುಸಲ್ಮಾನ ಪರಿವಾರಗಳನ್ನು ತಮ್ಮ ಮನೆಗಳಲ್ಲಿಟ್ಟುಕೊಂಡಿದ್ದರು. ಅಲ್ಲಿ ಸ್ಪಶ್ಯಾ–ಸ್ಪೃಶ್ಯ ಭಾವನೆ ಇರಲಿಲ್ಲ, ಪರದೆ ಇರಲಿಲ್ಲ. ಪರಸ್ಪರರಲ್ಲಿದ್ದ ಅಪನಂಬಿಕೆ ದೂರವಾಗಿತ್ತು. ಅಲ್ಲಿ ಪರಸ್ಪರ ಪ್ರೇಮ, ಮಮತೆ ನೆಲಸಿತ್ತು. ಹೀಗೆ ಬಿಹಾರದ ಜನ ಕೋಮು–ವಿಷವನ್ನ ಅಮೃತವಾಗಿ ಪರಿವರ್ತಿಸಿದ್ದರು. ಶಾಶ್ವತ ಮಾನವತೆಯ ಬಗ್ಗೆ ಬಾಪೂಜಿಗಿದ್ದ ಶ್ರದ್ಧೆ ಬಿಹಾರ ಮತ್ತು ನೋವಾಖಲಿಯ ಜನ ತಮ್ಮ ಕರ್ತವ್ಯವೆಂದು ಸಿದ್ಧಪಡಿಸಿ ತೋರಿದ್ದರು. ಈ ಜಾಗಗಳಲ್ಲೆಲ್ಲಾ ಜನರು ಬಾಪೂಜಿಯವರ ವಚನವನ್ನು ತಮ್ಮದಾಗಿಸಿಕೊಂಡಿದ್ದರು, ಅದನ್ನ ಪಾಲಿಸಿದ್ದರು. ಅದರಿಂದಲೇ ಅವರು ಹಿಂಸೆ–ದ್ವೇಷದಿಂದ ದೂರವಾದ ಸಮಾಜವನ್ನು ಪುನರ್ರಚಿಸುವುದಕ್ಕೆ ಸಾಧ್ಯವಾಗಿತ್ತು. ಈ ಪುಣ್ಯ ಪ್ರತಾಪವೆಲ್ಲ ಬಾಪೂಜಿಯವರು ತೀರಿಕೊಂಡ ನಂತರ ಕರಗಿ ಈಗ ಬಿಹಾರ ಮೊದಲ ಶ್ರೇಣಿಯ ಉಗ್ರರು, ಅರಾಜಕತೆ ಮತ್ತು ಭ್ರಷ್ಟಾಚಾರದಿಂದ ಸೋತ ರಾಜ್ಯವಾಗಿ ಪರಿಣಮಿಸಿದೆ.

* * * *

# ೩೪. ಪ್ರಜಾಪ್ರಭುತ್ವ

ನಮ್ಮ ದೇಶದಲ್ಲಿ ಸಾಮಾಜಿಕ ಕ್ರಾಂತಿಯನ್ನು ಉಂಟುಮಾಡಬೇಕೆಂದು ನಾವು ಸ್ವಾತಂತ್ರ್ಯ ಚಳವಳಿಯನ್ನು ಹೂಡಿದ್ದೆವು, ಪರಾಡಳಿತದಲ್ಲಿ ಇದು ಸಾಧ್ಯವಾಗುತ್ತಿರಲಿಲ್ಲ. ಬ್ರಿಟಿಷ್ ಆಳ್ವಿಕೆ ನಮ್ಮ ದೇಶದ ವಿಕಾಸವನ್ನಿಷ್ಟಪಡುತ್ತಿರಲೇ ಇಲ್ಲ, ಶೋಷಣೆ ನಡೆಯುತ್ತಿದ್ದುದು ಕೂಡ ಉತ್ಥಾನ ಇಲ್ಲದಿದ್ದರಿಂದಲೇ. ಸಾಮಾಜಿಕ ಕ್ರಾಂತಿ ರೂಪುಗೊಂಡ ನಂತರ ಅತಿ ಕೆಳಗಣ ನಾಗರಿಕ ಕೂಡ ಮರ್ಯಾದೆಯಿಂದಿದ್ದುಕೊಂಡು ತನ್ನ ಅಧಿಕಾರಗಳನ್ನು ರಕ್ಷಿಸಿಕೊಳ್ಳುತ್ತಾನೆ. ಆದರೆ ಗುಲಾಮಗಿರಿ ಇಂತಹ ವಿಕಾಸಕ್ಕೆ ಬಾಧಕವಾಗಿತ್ತು, ಆದ್ದರಿಂದ ವಿದೇಶಿ ಆಳ್ವಿಕೆಯ ಈ ದೇಶದಿಂದ ಹೊರಟು ಹೋಗಲೇಬೇಕಾಗಿತ್ತು. ಇಂಗ್ಲಿಷ್‌ನವರು ಹೊರಟುಹೋಗುವುದೇ ಎಲ್ಲವೂ ಆಗಿರಲಿಲ್ಲ, ಅದು ಈ ಕ್ರಾಂತಿಯ ಮೊದಲ ಮೆಟ್ಟಿಲಾಗಿತ್ತು ಅಷ್ಟೆ. ಈ ಸ್ವಾತಂತ್ರ್ಯ ಬರಿಯ ರಾಜಕೀಯ ಸ್ವಾತಂತ್ರ್ಯವಾಗಿತ್ತು. ಇನ್ನೂ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಬರುವುದಿತ್ತು. ಸ್ವಾತಂತ್ರ್ಯ ದಾನದಿಂದ ಸಿಗುವುದಲ್ಲ, ಅದಕ್ಕೆ ಪ್ರಜೆಗಳೇ ಸ್ವತಃ ತೊಡಗಿಕೊಳ್ಳಬೇಕಾಗುತ್ತದೆ. ತನ್ನ ಎರಡೂ ಕೈಗಳ ಪರಿಶ್ರಮದಿಂದಲೇ ಆರ್ಥಿಕ–ಸಾಮಾಜಿಕ ಸ್ವಾತಂತ್ರ್ಯವನ್ನು ಸೃಜಿಸಲು ಸಾಧ್ಯವಾಗುತ್ತದೆ, ಆಗಮಾತ್ರ ನಿಜವಾದ ಪ್ರಜಾಸತ್ತೆ ಉದಯಿಸುತ್ತದೆ. ಬಾಪೂಜಿ ಇದನ್ನು ಸ್ಪಷ್ಟವಾಗಿ ಕಂಡಿದ್ದರು. ವಿಭಜನೆ ಮತ್ತು ಕೋಮುದಂಗೆಗಳನ್ನು ಶಾಂತಗೊಳಿಸುವುದಕ್ಕಾಗಿ ಬಾಪೂಜಿ ತಲ್ಲೀನರಾಗಿದ್ದರು. ಆದರೆ ಪ್ರಜಾತಂತ್ರದ ಮೂಲಭೂತ ಸಿದ್ಧಾಂತಗಳು ಅವರಿಗೆ ಅಪರಿಚಿತವಾಗಿರಲಿಲ್ಲ. ಕೋಮುವಾದದ ಹಾಲಾಹಲ 'ವಿಷ'ವನ್ನು ಎಲ್ಲರೂ ನೋಡಬಲ್ಲವರಾಗಿದ್ದರೂ, ಅದರಿಂದ ಬಹಳ ಕಷ್ಟಪಡುತ್ತಿದ್ದರೂ ಅದಕ್ಕಿರುವ ಪರಿಹಾರ ಕೂಡ ಎದುರಿಗಿತ್ತು. ಆದರೆ ಈ ಧರ್ಮಾಂಧತೆಯ ವಿಷವಷ್ಟೇ ಅಲ್ಲದೆ, ದೇಶದಲ್ಲಿ ಅಷ್ಟೇ ಘಾತಕವಾದ ಮತ್ತೊಂದು ವಿಷ ಸಮಾಜದಲ್ಲಿ ಹರಡುತ್ತಿತ್ತು. ಪ್ರಜಾತಂತ್ರವನ್ನು ಮೆಲ್ಲ–ಮೆಲ್ಲನೆ ಕೊಲ್ಲುವುದು ಶುರುವಾಗಿತ್ತು. ಆಗ ನಾಯಕರು ಈ ಕಡೆ ಗಮನ ಹರಿಸಲಿಲ್ಲ. ಆದರೆ ಬಾಪೂಜಿ ದೂರದೃಷ್ಟಿ ಇಟ್ಟುಕೊಂಡವರಾಗಿದ್ದುದರಿಂದ ಪ್ರಜಾತಂತ್ರ ಅಳಿದು ಹೋಗುತ್ತಿರುವುದನ್ನವರು ಗುರುತಿಸಿದ್ದರು. ಪ್ರಜಾತಂತ್ರವನ್ನು ಉಳಿಸಬೇಕೆಂದು ಅವರು ಹೆಣಗಿದರು ಕೂಡ. ಆದರೆ ಸಮಯವಲ್ಲದ ಸಮಯದಲ್ಲಿ ಅವರನ್ನ

ದೇಶ ಕಳೆದುಕೊಂಡಿತು. ಅದಾದನಂತರ ನಿಜವಾದ ಪ್ರಜಾತಂತ್ರವನ್ನು ಜನ ಖಂಡಿಸುತ್ತಾ ಹೋದರು. ಅದರಿಂದ ಇಂದು ಅದು ಒಂದು ಪ್ರಾಣ ಕಳೆದುಕೊಂಡ ಆಕಾರವಾಗಿ ಮಾತ್ರ ಉಳಿದುಕೊಂಡಿದೆ. ೯ ಡಿಸೆಂಬರ್ ೧೯೪೭ ರಿಂದ ೩೦ ಜನವರಿ ೧೯೪೮ರವರೆಗೂ ಸಾಂಪ್ರದಾಯಿಕವಾದ ದಂಗೆಗಳನ್ನು ಶಾಂತಗೊಳಿಸುವುದರ ಜೊತೆಗೇ ಪ್ರಜಾತಂತ್ರದ ಬುನಾದಿಯನ್ನು ಗಟ್ಟಿಗೊಳಿಸುವ ಕೆಲಸವನ್ನು ಕೂಡ ಬಾಪೂಜಿ ಮಾಡಿದರು. ಆರಂಭದ ಐದು ವರುಷಗಳಲ್ಲಿ ಯಾವುದೇ ಪದ್ಧತಿಯನ್ನ ಜಾರಿಗೊಳಿಸುವುದರ ಮೇಲೆಯೇ ನಮ್ಮ ಗಣತಂತ್ರದ ಭವನ ಎದ್ದು ನಿಲ್ಲುತ್ತದೆಂದು ಅವರು ಅರಿತಿದ್ದರು. ಸಾಂಪ್ರದಾಯಿಕ ಕಠೋರತೆಯ ಹುಚ್ಚಿನ ಓಟದಲ್ಲಿ ಗುಲಾಮತಂತ್ರದ, ಮಿಕ್ಕ ಎಲ್ಲಾ ದೌಷ್ಟ್ಯಗಳನ್ನೂ ನಾವು ಪಿತ್ರಾರ್ಜಿತವಾಗಿಯೇ ಪಡೆದಿದ್ದೆವು. ಅವುಗಳೊಂದಿಗೆ ಹೋರಾಡುವುದು ಕಷ್ಟಕರವಾಗಿತ್ತಾದರೂ ಆವಶ್ಯಕವಾಗಿತ್ತು.

ಸ್ವಾತಂತ್ರ್ಯ ಚಳವಳಿಯ ನಡುವೆ ಕಾಂಗ್ರೆಸ್ಸಿಗರಿಗೆ ಬ್ರಿಟಿಷರ ಆಳ್ವಿಕೆಯಲ್ಲಿನ ಅಧಿಕಾರಿಗಳ ಹಳೆಯ ವಿಚಾರಗಳು, ಅವರ ಸ್ವಾರ್ಥಮಿಶ್ರಿತ ಜಡತೆ ಮತ್ತು ದೇಶಪ್ರೇಮದ ಕೊರತೆ ಇವುಗಳಿಂದ ತುಂಬಾ ತೊಂದರೆಯಾಗುತ್ತಿತ್ತು. ಅದರ ಬಗ್ಗೆ ಅವರು ದೂರುತ್ತಲೂ ಇದ್ದರು. ಒಂದು ಸಾರಿ ಸ್ವಾತಂತ್ರ್ಯ ಅಂತ ಸಿಕ್ಕಿಬಿಟ್ಟರೆ ಸಾಕು, ನಂತರದಲ್ಲಿ ಈ ಅಧಿಕಾರಿಗಳು ಅನ್ನಿಸಿಕೊಳ್ಳುವ ಉಡಗಳ ಹಿಡಿತದಿಂದ ದೇಶದ ಜನರಿಗೆ ಬಿಡುಗಡೆ ಕೊಡಿಸುತ್ತೇವೆ ಎಂದು ಸತ್ಯಾಗ್ರಹಿಗಳು ಯೋಚನೆಮಾಡಿದ್ದರು. ಈ ಅಮ್ಮ-ಅಪ್ಪನ ತಂತ್ರ ದೇಶದ ಜನರ ಪುರುಷಾರ್ಥ ಮತ್ತು ಕರ್ತವ್ಯಜ್ಞಾನವನ್ನು ಹಾಳುಮಾಡಿಬಿಟ್ಟಿತ್ತು, ಜನರನ್ನು ನಪುಂಸಕರನ್ನಾಗಿ ಮಾಡಿ ಗುಲಾಮರನ್ನಾಗಿ ಮಾಡಿ ಇಟ್ಟಿತ್ತು. ಹಾಗಾಗಿ ಹ್ಲೂಗುಟ್ಟುವುದೊಂದನ್ನ ಬಿಟ್ಟರೆ ಅವರು ಬೇರೇನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಇಂತಹ ಮೂಕ ಪರಿಸ್ಥಿತಿಯಲ್ಲಿ ಅಹಿಂಸಾತ್ಮಕ ಆಂದೋಳನ ಮತ್ತು ಸತ್ಯಾಗ್ರಹ ಇವುಗಳು ಬಡವರಿಗೆ ಜೀವಕೊಟ್ಟಂತೆ ಮಾಡಿದ್ದವು. ಆಗ ನಮ್ಮ ಸರಕಾರ ಬಂದರೆ ಜನರನ್ನ ಈ ಆಡಳಿತಶಾಹಿಯಿಂದ ಉಳಿಸುತ್ತದೆ ಎಂಬ ಆಸೆ ಹುಟ್ಟಿತ್ತು, ಆದರೆ ಆಳುವ ಕುರ್ಚಿಯ ಮೇಲೆ ಕುಳಿತೊಡನೆ ಕಾಂಗ್ರೆಸ್ ಮುಖಂಡರು ಅದೇ ಅಧಿಕಾರಿಗಳ ಕೈಗೊಂಬೆಗಳಾದರು. ಸತ್ಯಾಗ್ರಹದಲ್ಲಿ ಕಾದಾಡುವ ರೀತಿ ಈ ಕಾಂಗ್ರೆಸ್ ನಾಯಕರಿಗೆ ಗೊತ್ತಿತ್ತು, ರಾಜ್ಯ ಆಳುವ ಅನುಭವ ಅವರಿಗಿರಲಿಲ್ಲ. ಕೆಲವರು ಕಾಂಗ್ರೆಸ್ಸಿಗರನ್ನ ಬಿಟ್ಟರೆ, ಉತ್ಕೃಷ್ಟವಾಗಿ ಸರಕಾರ ನಡೆಸುವ ದಕ್ಷತೆ ಪಡೆದಿದ್ದವರಿಗೆ ಕಾಂಗ್ರೆಸ್ ಆಡಳಿತದ ಕಗ್ಗಂಟುಗಳ ಪರಿಚಯವಿರಲಿಲ್ಲ. ಅವರಿಗೆ ಅಷ್ಟು ನೈತಿಕ ಧೈರ್ಯ ಕೂಡ ಇರಲಿಲ್ಲ, ತ್ಯಾಗಭಾವನೆ ಇರಲಿಲ್ಲ. ಹೀಗಾಗಿ ಅವರು ತಮ್ಮ ಧರ್ಮ-ಅಂತರಾತ್ಮದ ಕರೆಕೇಳಿ ಪ್ರಜೆಗಳ ಹಿತಕ್ಕಾಗಿ ನೇರವಾಗಿ ಪ್ರಯತ್ನಿಸುವವ ರಾಗಿರಲಿಲ್ಲ. ಅವರು ಕೆಂಪು ಪಟ್ಟಿಯ, ಫೈಲುಗಳ ಚಕ್ರವ್ಯೂಹದಲ್ಲಿ ಸಿಲುಕಿ ತಮ್ಮ

ಕರ್ತವ್ಯವನ್ನು ಮರೆತು ಇಂಗ್ಲಿಷ್ ಶಾಸಕರ ರೀತಿಯಲ್ಲಿ ಅವರ ಅನುಕರಣೆ ಮಾಡತೊಡಗಿದರು. ನೆನ್ನೆಯ ಸತ್ಯಾಗ್ರಹಿಗಳು ಇಂದಿನ ಆಳ್ವಿಕೆ ನಡೆಸುವವರಾದರು, ಅವರು ಜನರಿಂದ ದೂರ ಸರಿದರು. ಈ ಅಂತರ ಹೆಚ್ಚಾಗುತ್ತಲೇ ಹೋಗುತ್ತಿದೆ.

ನಮ್ಮ ದೇಶದ ಅಧಿಕಾರಿಗಳು ಕುಶಲರು, ಪರಿಶ್ರಮಿಗಳು ಮತ್ತು ತಮ್ಮದೇ ರೀತಿಯಲ್ಲಿ ದೇಶಪ್ರೇಮಿಗಳೂ ಆಗಿದ್ದಾರೆ. ಆದರೆ ಎರಡು ನೂರು ವರ್ಷಗಳ ನಿರಂತರ ಸಂಸ್ಕಾರ ಅವರನ್ನ ದೇಶದ ಜನರಿಂದ ದೂರ ತಳ್ಳಿದೆ. ಈ ಅಧಿಕಾರಿಗಳು ಇಂಗ್ಲಿಷ್ ಸರಕಾರದ ಕೈ–ಕಾಲುಗಳು ಮತ್ತು ಕಣ್ಣು–ಕಿವಿ ಆಗಿದ್ದವರು. ಹೀಗೆ ಮಾಡ್ತಾ ಇದ್ದಿದ್ದು, ಅದೇ ರೀತಿಯ ಯೋಚನೆ ಇವುಗಳಿಂದಾಗಿ ಅವರ ಹೃದಯ ಕೂಡ ಇಂಗ್ಲಿಷ್‌ಪ್ರೇಮಿ ಆಗಿಬಿಟ್ಟಿತ್ತು. ಅದರಿಂದ ಅವರು ಮತ್ತು ಬಡಜನರ ನಡುವೆ ಯಾವುದೇ ಸಾಮಂಜಸ್ಯ ಅವರು ಇಟ್ಟುಕೊಂಡಿರಲಿಲ್ಲ, ವರ್ಷಾನುಗಟ್ಟಲೆ ಜಗಳ–ಕಷ್ಟ ಪಟ್ಟಮೇಲೆ ಕಾಂಗ್ರೆಸ್ ಮುಖಂಡರಿಗೆ ಅಧಿಕಾರ ಸಿಕ್ಕಿತ್ತು. ಪ್ರಧಾನ ಮಂತ್ರಿ ನೆಹರೂ ರಾಷ್ಟ್ರೀಯ ಯೋಜನೆಯ ಸುಳಿಯಲ್ಲಿ ಸಿಲುಕಿಕೊಂಡರು. ಅವರು ಬಹುಶಃ ರಷ್ಯಾ ವ್ಯವಸ್ಥೆಯನ್ನ ನೋಡಿ ಮೋಹಿತರಾಗಿ ದೆಹಲಿಯ ಉನ್ನತ ಸಚಿವಾಲಯದಲ್ಲಿ ಕುಳಿತು ದೇಶದ ಏಳು ಲಕ್ಷ ಹಳ್ಳಿಗಳು, ನಲವತ್ತು ಕೋಟಿ ಜನರನ್ನ ನಿಯೋಜಿಸಲಾರಂಭಿಸಿದ್ದರೆಂದು ಕಾಣುತ್ತೆ. ಸರಕಾರಿ ಅಧಿಕಾರಿಗಳಿಗೆ ಇದು ಬಹಳ ಕಷ್ಟವಾಯಿತು. ಈ ಹೊಸ ಆಳುವವರು ಮತ್ತು ಸರಕಾರಿ ಯಂತ್ರ ಸೇರಿ ಒಂದೊಂದರಂತೆ ಅನೇಕ ಯೋಜನೆಗಳನ್ನ ಸಿದ್ಧಪಡಿಸಿದರು. ಈ ಯೋಜನೆಗಳು ಮತ್ತು ವಾಸ್ತವದ ನಡುವೆ ಬಹಳ ಅಂತವಿತ್ತು, ಪಟ್ಟಣದಲ್ಲಿ ವಾಸ ಮಾಡುವವರಿಗೆ ಹಳ್ಳಿಯ ವ್ಯವಸ್ಥೆ ಅರ್ಥವಾಗುತ್ತಿರಲಿಲ್ಲ, ಕಲ್ಯಾಣಕಾರಿ ರಾಜ್ಯದ ಹೆಸರಿನಲ್ಲಿ, ಪ್ರಜೆಗಳಲ್ಲಿದ್ದ ಅಲ್ಪ–ಸ್ವಲ್ಪ ಇದ್ದ ಸ್ವಾವಲಂಬನೆ, ಪೌರುಷ ಕೂಡ ಕೊನೆಗೊಳ್ಳತೊಡಗಿತು. ಇಂದು ಜನ ಕುರಿ–ಮೇಕೆಗಳ ಹಾಗೆ ಗೋಪಾಲಕನನ್ನ ಕಾಯುವುದನ್ನ ಅಭ್ಯಾಸ ಮಾಡಿಕೊಂಡು ಬಿಟ್ಟಿದೆ. ಈ ಗೋಪಾಲಕರು ರಕ್ಷಕರಾಗದೆ ಭಕ್ಷಕರಾಗಿ ಬಿಟ್ಟಿದ್ದಾರೆ. ವಾಸ್ತವದ ಸ್ವರಾಜ್ಯ ಮುಗಿದು ಹೋಯಿತು, ಪ್ರಜಾತಂತ್ರದ ಸೋಗು ಒಂದು ಉಳಿದುಕೊಂಡಿದೆ.

ಸ್ವರಾಜ್ಯ ಅಂದರೆ ತನ್ನ ಮೇಲೆ ಸಂಯಮ ಇಟ್ಟುಕೊಂಡು ಬೇರೆಯವರ ನಿಯಂತ್ರಣದಿಂದ ಮುಕ್ತರಾಗಿರುವುದು ಅಂತ ಅರ್ಥ. ನಿಯಂತ್ರಣ ಹಾಕುವವರು ನಮ್ಮವರೇ ಆಗಿರಬಹುದು, ಬೇರೆಯವರಾಗಿರಬಹುದು, ಆದರೆ ದೋಷ ಇಬ್ಬರಲ್ಲೂ ಒಂದೇ ರೀತಿಯದಾಗಿರುತ್ತದೆ. ಕೇಂದ್ರದ ನಿಯಂತ್ರಣದಲ್ಲಿ ಎಲ್ಲ ಸುಧಾರಣೆಗಳೂ ಮೇಲಿನಿಂದ ಬರುತ್ತವೆ, ಆಗ ಜನರ ದೈವತ್ವ ಲುಪ್ತವಾಗಿ ಅವರಲ್ಲಿ ಭಿಕಾರಿತನ ಬರುತ್ತೆ, ಇದೇ ಯೋಜನೆ ಮೇಲಿನ ಅಂಚಿನಿಂದ ಬರುವುದಕ್ಕೆ ಬದಲಾಗಿ ಹಳ್ಳಿಗಳಿಂದ ಆರಂಭವಾಗಿದ್ದಿದ್ದರೆ ಅದು ದೇಶದಲ್ಲಿ ಎಲ್ಲೆಡೆ ಹರಡಿ ಗಟ್ಟಿಯಾಗಿರುತ್ತಿತ್ತು. ಅತಿ

ಚಿಕ್ಕ ಮನುಷ್ಯನಿಗೂ ತನ್ನ ಆವಶ್ಯಕತೆಗಳು ಏನು ಅಂತ ತಿಳಿದಿರುತ್ತೆ. ಅದನ್ನ ಪಡೆದುಕೊಳ್ಳುವ ಸರಳ ಉಪಾಯವೂ ಅವನಿಗೆ ಗೊತ್ತಿರುತ್ತೆ. ಹೀಗೆ ಹಳ್ಳಿಯಲ್ಲಿ ಹಾಕಿದ ಯೋಜನೆಯಲ್ಲಿ ನಾಶವಾಗುವುದಕ್ಕೆ ಅವಕಾಶ ಇರುವುದಿಲ್ಲ, ಜೊತೆಗೆ ಕೇಂದ್ರ ಸರಕಾರ ಮತ್ತೆ ಜನರ ನಡುವೆ ಒಂದು ಆರೋಗ್ಯಕರವಾದ ಒಮ್ಮತ–ಸಮಾನತೆ ಇರುತ್ತೆ. ಇವತ್ತು ಅದು ಪೂರ್ತಿ ಲುಪ್ತವಾಗಿದೆ. ಬಾಪೂಜಿ ಲಕ್ಷಾಂತರ ಜನರ ಅನುಕೂಲವೇ ಶ್ರೇಷ್ಠವಾದ ಮಾರ್ಗವೆಂದು ಹೇಳುತ್ತಿದ್ದರು. ನಾಳೆಯ ಸುಂದರಸ್ವಪ್ನದಲ್ಲಿ ಸರಕಾರ ಜನರ ಸಾಮಾನ್ಯ ಆವಶ್ಯಕತೆಗಳನ್ನು ಕೂಡ ಪೂರೈಸಲಾಗುವುದಿಲ್ಲ, ಆದರೆ ಜನರಿಗೆ ತೀವ್ರ ಅಗತ್ಯದ ವಸ್ತುಗಳು ಕೂಡ ಸಿಗುತ್ತಿಲ್ಲ. ಇವತ್ತು ನಲವತ್ತು ವರ್ಷಗಳ ನಂತರವೂ ನಮ್ಮ ಹಳ್ಳಿಗಳಲ್ಲಿ ಕುಡಿಯಲು ನೀರು, ವ್ಯವಸ್ಥಿತವಾದ ಶಿಕ್ಷಣ, ಆರೋಗ್ಯದ ಅನುಕೂಲತೆಗಳು, ರಸ್ತೆಗಳು, ವಿದ್ಯುತ್ತು ಮತ್ತು ಮಲ–ಮೂತ್ರ ವಿಲೇವಾರಿಯ ವ್ಯವಸ್ಥೆ ಇಲ್ಲ. ಪ್ರಾಥಮಿಕ ಆವಶ್ಯಕತೆಗಳ ಪೂರೈಕೆ ಆಗುವವರೆವಿಗೂ ಮಿಕ್ಕೆಲ್ಲ ವಿಕಾಸ ಬರಿಯ ನೋಟವಾಗುತ್ತೆ, ಜನರಿಗೆ ಅದರ ಲಾಭ ಸಿಗುವುದಿಲ್ಲ ಎಂದು ಬಾಪೂಜಿ ಸ್ಪಷ್ಟವಾಗಿ ನಂಬಿದ್ದರು.

ಹಳ್ಳಿಯವರು ಯೋಜನೆಯ ಜೊತೆ ಇದ್ದಾಗ ಅವರ ನಿರುತ್ಸಾಹ, ಆಲಸ್ಯ, ಔದಾಸೀನ್ಯ ಮಾಯವಾಗುತ್ತೆ, ಅವರ ಉಮೇದು ಜಾಗೃತವಾಗುತ್ತದೆ. ಸ್ವಾವಲಂಬನೆಯಿಂದ ಜನಿಸಿದ ಉಮೇದು ಯಾವಾಗಲೂ ತೇಜಸ್ವಿಯಾಗಿರುತ್ತದೆ, ಚತುರವಾಗಿರುತ್ತದೆ. ಹಳ್ಳಿಯ ಮುಕ್ಕ ಕೂಡ ತನಗೆ ಯಾವುದರಿಂದ ಒಳ್ಳೆಯದು – ಕೆಟ್ಟದ್ದು ಆಗುತ್ತೆ ಎಂದು ತಿಳಿದುಕೊಂಡಿರುತ್ತಾನೆ. ಅವನು ಇಂತಹ ಸ್ವಂತದ ಆಶ್ರಿತನಾಗಿ ಅದರಿಂದ ಬಂದ ನಂಬಿಕೆಯಿಂದ ಸಮಾಜದಲ್ಲಿ ತನಗೊಂದು ಜಾಗವನ್ನು ಪಡೆದುಕೊಳ್ಳುತ್ತಾನೆ ಮತ್ತು ಬೇರೆ ಯಾರ ಮೇಲೂ ಆಶ್ರಿತನಾಗಿರದೆ ದೃಢತೆಯಿಂದ ತನ್ನ ಪಾಲಿನ ಕೆಲಸವನ್ನ ಪೂರೈಸುತ್ತಾನೆ. ಅಂತಹ ಸ್ವಾವಲಂಬನೆ ರಾಷ್ಟ್ರನಿರ್ಮಾಣಕ್ಕೆ ತೀರ ಅಗತ್ಯವಾದ ಅಂಗವಾಗಿರುತ್ತೆ, ಭೂಮಿಯ ಮೇಲೆ ಸ್ವರ್ಗದ ಆಕಾಂಕ್ಷೆಗಳನ್ನ ಹುಟ್ಟಿಸಿ ಇವತ್ತಿನ ಸರಕಾರ ಸಾಮಾನ್ಯವಾದ ಬಡಜನರಿಂದ ತ್ಯಾಗ–ಬಲಿದಾನವನ್ನ ನಿರೀಕ್ಷಿಸುತ್ತೆ. ಅದೇ ಅಧಿಕಾರದಲ್ಲಿರುವವರು ತಮ್ಮ ಸುಖ ಅನುಕೂಲಕ್ಕೆ ಯಾವುದೇ ರೀತಿಯಲ್ಲಿ ಕೊರತೆ ಮಾಡಿಕೊಳ್ಳುವುದಿಲ್ಲ, ಇಂಥ ಸ್ಥಿತಿಯಲ್ಲಿ ಈ ಭೂಮಿಯ ಮೇಲೆ ಎಂದೂ ಸ್ವರ್ಗ ಬರುವುದಕ್ಕೆ ಸಾಧ್ಯವಿಲ್ಲ, ಭೂಮಿಯ ಮೇಲೆ ಕೆಲಸ ಮಾಡುವ ರೈತ ತನ್ನ ಸೊಂಟ ಮುರಿಯ ಕೆಲಸ ಮಾಡ್ತಿರ್‍ತಾನೆ, ಆದರೆ ಅದಕ್ಕೆ ಉತ್ತರವಾಗಿ ಅವನಿಗೆ ಏನೂ ಸಿಗುವುದಿಲ್ಲ, ಅವನು ಕಷ್ಟಪಟ್ಟು ಸಂಪಾದಿಸಿದ್ದೆಲ್ಲಾ ಪಟ್ಟಣದ ಪ್ರಯೋಜನವಿಲ್ಲದ ಉಚ್ಚ ವ್ಯವಸ್ಥೆಯಲ್ಲಿ ಕಳೆದುಹೋಗುತ್ತಿದೆ. ಅದರಿಂದ ಇಡೀ ಸರಕಾರಕ್ಕೆ ಒಂದೇ ಶ್ರೇಷ್ಠಮಂತ್ರ ಅಂದರೆ ಲಕ್ಷಾಂತರ ಮಂದಿಗೆ ಉಪಯೋಗವಾಗುವಂಥದ್ದು ಮಾತ್ರ ನಮ್ಮ ಗುರಿಯಾಗಿಸಿಕೊಂಡಿರಬೇಕು.

ಈ ಮಂತ್ರವನ್ನ ನಾವು ಕಂಡುಕೊಂಡಾಗ ಹಳ್ಳಿಗಳ ಹಸಿವು ದೂರವಾಗುತ್ತದೆ, ಆಗ ಸ್ವತಃ ದೇಶದಲ್ಲಿ ಪ್ರಗತಿಯಾಗುತ್ತೆ, ಅಂತಹ ಪ್ರಗತಿಗೆ ಹಣ ಬೇಕಾಗುವದಿಲ್ಲ. ಎಲ್ಲ ತರಹೆಯ ಅಡಚಣೆಗಳಿದ್ದಾಗ್ಯೂ ಮಾರ್ಗವನ್ನ ಬಹಳ ಮಿತವ್ಯಯ ಮಾಡಿ ಕಂಡು ಹಿಡಿದುಕೊಳ್ಳುತ್ತೆ. ಸ್ವಾತಂತ್ರ್ಯ ಸಿಗುವುದಕ್ಕೆ ಮೊದಲು ಕಾಂಗ್ರೆಸ್ಸಿಗರು ಎಂದೂ ಸರಕಾರದ ಮುಖ ನೋಡಿಕೊಂಡು ಕುಳಿತಿರುತ್ತಿರಲಿಲ್ಲ. ನಿಜ ಹೇಳಬೇಕೆಂದರೆ, ಸರಕಾರ ಸಹಾಯ ಮಾಡುವುದಕ್ಕೆ ಬದಲಾಗಿ ಯಾವಾಗಲೂ ಅಡಚಣೆ ಒಡ್ಡುತ್ತಿರುತ್ತಿತ್ತು. ಆದರೆ ಅಷ್ಟೊಂದು ವಿಘ್ನಗಳ ನಡುವೆ ಕೂಡ ಕಾಂಗ್ರೆಸ್ಸಿಗರು ಬಿಹಾರದ ಭೂಕಂಪ, ಕ್ವೆಟ್ಟಾ ಭೂಕಂಪ, ಗುಜರಾತ್‌ನ ಕ್ಷಾಮ, ಪ್ರವಾಹ, ಒರಿಸ್ಸಾ – ಆಂಧ್ರದ ಪ್ರಾಕೃತಿಕ ವಿಪತ್ತುಗಳನ್ನು ಬಹಳ ಕುಶಲತೆಯಿಂದ ಎದುರಿಸಿದ್ದರು. ಅಲ್ಲಿಲ್ಲಿ ಸಿಗುತ್ತಿದ್ದ ಪದಾರ್ಥಗಳನ್ನೇ ಜೋಡಿಸಿಕೊಂಡು ಸಾಧನಗಳು ಎದ್ದು ನಿಲ್ಲುತ್ತಿದ್ದವು. ಜನರಿಗೆ ಸ್ವಾವಲಂಬನೆಯ ಆನಂದ ಹೇಳತೀರದಷ್ಟು ಸಿಗುತ್ತಿತ್ತು, ಉತ್ಸಾಹ ಇರುತ್ತಿತ್ತು. ಡಾ॥ ರಾಜೇಂದ್ರ ಪ್ರಸಾದ ಪರಿಹಾರ ನೀಡುವ ಕುಶಲತೆಗಾಗಿ ಇಡೀ ದೇಶದಲ್ಲೇ ಹೆಸರುವಾಸಿಯಾಗಿದ್ದರು, ಎಲ್ಲಾದರೂ ಭೂಕಂಪ ಆಯಿತೆಂದರೆ ರಾಜೇಂದ್ರ ಬಾಬುವನ್ನೇ ಕರೆಕಳುಹಿಸುತ್ತಿದ್ದರು. ಆದರೆ ನಮ್ಮ ಸ್ವತಂತ್ರ ಸರಕಾರದಲ್ಲಿ ಅದು ಈಗ ಸಾಧ್ಯವಾಗುವುದಿಲ್ಲ. ಸ್ವಾತಂತ್ರ್ಯ ಸಿಕ್ಕ ತಕ್ಷಣವೇ ಜನ ತಮ್ಮ ಅಸಮಾಧಾನವನ್ನು ತೋರಿಸಲಾರಂಭಿಸಿದ್ದರು. ಕೆಲವು ಕಡೆ ಜನ, 'ಈ ಸ್ವಾತಂತ್ರ್ಯಕ್ಕಿಂತ ಇಂಗ್ಲಿಷ್ ಅಧಿಕಾರವೇ ಚೆನ್ನಾಗಿತ್ತು' ಎಂದು ಕೂಡ ಹೇಳತೊಡಗಿದ್ದರು. ಜನ ನಿರಾಶೆಗೊಂಡಿದ್ದರು, ಸ್ವಾತಂತ್ರ್ಯದ ಮೋಹಭಂಗ ಆಗ ತೊಡಗಿತ್ತು, ಇಂತಹ ಸ್ಥಿತಿಯಲ್ಲಿ ಬಾಪೂಜಿ ಮೂರು ಹಂತಗಳಲ್ಲಿ ಉಪಾಯವನ್ನು ಆರಂಭಿಸಿಕೊಂಡಿದ್ದರು.

೧) ಜನಾಭಿಪ್ರಾಯ: ಕಚ್ಚಾ – ಪಕ್ಕಾ ಅಹಿಂಸೆಯ ಆಧಾರವನ್ನಿಟ್ಟುಕೊಂಡು ಪರಕೀಯ ಆಡಳಿತದಿಂದ ಸ್ವರಾಜ್ಯವಂತೂ ದೊರಕಿಸಿಕೊಂಡಾಗಿತ್ತು, ಆದರೆ ಅದರಲ್ಲಿ ಗಟ್ಟಿ ಸ್ವಾತಂತ್ರ್ಯಕ್ಕೆ ತೇಜಸ್ಸಿನಿಂದ ಕೂಡಿದ ಅಹಿಂಸೆ ಬೇಕಾಗಿತ್ತು, ಸತ್ಯಾಗ್ರಹ ಅಗತ್ಯವಾಗಿತ್ತು. ಅಲ್ಲಿ ಸಾಮಾನ್ಯ ಜನ ಯಾವುದೇ ತಪ್ಪು ಮಾಡುವುದೂ ಇಲ್ಲ, ಯಾರಿಗೂ ತಪ್ಪು ಮಾಡಬಿಡುವುದೂ ಇಲ್ಲ. ಜನ ಚಟುವಟಿಕೆಯಿಂದ ಕಾನೂನು ಬಾಹಿರವಾದ ಕೆಲಸಗಳನ್ನು ತಡೆದಾಗ ಶಾಸಕರೂ ಅಂತಹ ಸಮರ್ಥ ಜನರನ್ನು ಕಂಡು ಹೆದರುತ್ತಾರೆ, ಅನ್ಯಾಯವನ್ನ ತಡೆಯುತ್ತಾರೆ. ಆಗ ಸಾಮಾಜಿಕ ತತ್ವಗಳು ತಾವಾಗಿಯೇ ದೂರಾಗುತ್ತವೆ, ಜನ ಅವರಿಗೆ ಅವಕಾಶ ಕೊಡುವುದಿಲ್ಲ. ಆಡಳಿತಕ್ಕೆ ಜನರಿಂದಲೇ ತಾನೆ ಹೇಗೂ ಶಕ್ತಿ ಬರುವುದು ಕೂಡ, ಅದೇ ಜನ ಸಮುದಾಯ ಸತ್ಯಾಗ್ರಹ ಮಾಡಿದಾಗ ಸರಕಾರ ಅನ್ಯಾಯ – ಭ್ರಷ್ಟಾಚಾರವನ್ನು ಕೊನೆಗೊಳಿಸಲೇ ಬೇಕಾಗುತ್ತದೆ. ಅಂತಹ ಸಾಮಾಜಿಕ ಜಾಗೃತಿ ರಚನಾತ್ಮಕ ಕಾರ್ಯಕ್ರಮದಿಂದಲೇ ಬರುತ್ತೆ, ಆಗ ಸಚೇತನವಾದ ಪ್ರಜಾಮತ ತಂತಾನೆ ಸಿದ್ಧವಾಗುತ್ತೆ, ಅವರನ್ನು ಯಾರೂ ತಪ್ಪುದಾರಿಗೆಳೆಯಲಾಗುವುದಿಲ್ಲ.

೨) ರಾಜಕೀಯ: ರಾಜಕೀಯ ಹಂತದಲ್ಲಿ ಕಾಂಗ್ರೆಸ್ ಒಂದು ಹೊಸ ಸ್ವರೂಪವನ್ನು ಪಡೆದುಕೊಳ್ಳಬೇಕು, ಎಂತಹ ಪರಿಸ್ಥಿತಿಯಲ್ಲೂ ಕಾಂಗ್ರೆಸ್ ಸಫಲವಾಗಬೇಕು, ಜನರನ್ನ ನಿಜವಾಗಿ ಪ್ರತಿನಿಧಿಸುವ ಸಂಸ್ಥೆಯಾಗಬೇಕು ಎಂದು ಬಾಪೂಜಿ ಬಯಸಿದ್ದರು. ಈ ಉದ್ದೇಶದಿಂದ ಬಾಪೂಜಿ ತಮ್ಮ ಜೀವನದ ಕೊನೆಯ ದಿನಗಳಲ್ಲಿ ಕಾಂಗ್ರೆಸ್‌ಗೆ ಒಂದು ಹೊಸ ಸಂವಿಧಾನವನ್ನು ರಚಿಸಿದ್ದರು. ಅದು ಅವರು ತೀರಿಕೊಂಡ ನಂತರ ಮುದ್ರಿತವಾಗಿತ್ತು, ನಂತರದಲ್ಲಿ ಅದು ಬಾಪೂಜಿಯ ಮರಣಶಾಸನವೆಂದು ಹೆಸರು ಗಳಿಸಿತು.

೩) ಪ್ರಜಾತಂತ್ರವನ್ನು ಬಲಗೊಳಿಸುವುದು: ಅದಕ್ಕೆ ಬಾಪೂಜಿ 'ಡಿ ಕಂಟ್ರೋಲ್'ನ ಸಲಹೆ ನೀಡಿದ್ದರು. ಪಡಿತರ ಪದ್ಧತಿಯನ್ನ ರದ್ದುಪಡಿಸಿದರೆ ಜನ ಸ್ವತಃ ಮಿತವ್ಯಯ ನಡೆಸುತ್ತೆ, ನಿಯಂತ್ರಣ ಮಾಡಿಕೊಳ್ಳುತ್ತೆ, ಸಕ್ರಿಯವಾದ ಸಶಕ್ತ ಪ್ರಜಾತಂತ್ರಕ್ಕೆ ಇದು ಮೊದಲ ಹೆಜ್ಜೆಯಾಗಿರುತ್ತಿತ್ತು. ನಿಯಂತ್ರಣ ವಿಶ್ವಯುದ್ಧದ ವೇಳೆಯಲ್ಲಿ ಸರಕಾರಿ ತಂತ್ರ ನೀಡಿದ್ದ ಕೊಡುಗೆ. ನಿಯಂತ್ರಣದ ಮುಖಾಂತರ ಸರಕಾರ ದೇಶದ ಎಲ್ಲಾ ಕಡೆಗಳಿಂದಲೂ ಧಾನ್ಯವನ್ನ ಸಂಗ್ರಹಿಸಿ, ಸೈನ್ಯಕ್ಕಾಗಿ ವಿದೇಶಕ್ಕೆ ಕಳುಹಿಸುತ್ತಿತ್ತು, ಶೋಷಣೆ ನಡೆಸಿ, ಜನರನ್ನ ಲೂಟಿ ಹೊಡೆದು, ಅವರನ್ನ ಸರಕಾರಕ್ಕೆ ಆಶ್ರಿತರನ್ನಾಗಿ ಮಾಡುವುದಕ್ಕೆ ಇದು ಬಹಳ ಸುಲಭವಾದ ಮಾರ್ಗ ಆಗಿತ್ತು. ಇವತ್ತಿಗೂ ಇದೆ. ತಿನ್ನುವ ಪದಾರ್ಥಗಳು, ಬಟ್ಟೆ, ಸಿಮೆಂಟ್, ಸ್ಟೀಲ್, ಕಾಗದ ಇವುಗಳನ್ನೆಲ್ಲಾ ರೇಷನಿಂಗ್ ಮಾಡಿದಾಗ ಸರಕಾರಕ್ಕೆ ಹೆಚ್ಚು ಸಾಮಾನಂತೂ ಸಿಕ್ಕೇ ಸಿಗುತ್ತೆ, ಜೊತೆಗೆ ಕಾಳಸಂತೆ ಮತ್ತು ಭ್ರಷ್ಟಾಚಾರದಿಂದ ಸಿಗುತ್ತಿದ್ದ ಸಂಪಾದನೆ ಆಕರ್ಷಕವಾಗಿತ್ತು. ತಿನ್ನುವ ಪದಾರ್ಥಗಳ ವಿಭಾಗ ದೇಶಕ್ಕೆ ಧಾನ್ಯಗಳ ಪೂರೈಕೆ ಮಾಡುವುದು ಬಿಟ್ಟು ತೀವ್ರವಾಗಿ ಭ್ರಷ್ಟಾಚಾರದ ಜಾಗವಾಗಿತ್ತು. ಇದರಿಂದ ಸಾಮಾಜಿಕ ನೈತಿಕತೆಯ ಪತನವಾಯಿತು ಜೊತೆಗೆ ಕಳ್ಳತನ, ಸುಳ್ಳು, ಅನ್ಯಾಯ, ಅನೀತಿ, ಅತ್ಯಾಚಾರ ನಮ್ಮ ರಾಷ್ಟ್ರೀಯ ವ್ಯಕ್ತಿತ್ವದ ಅಂಗಗಳಾದವು. ಪಡಿತರದ ಈ ಭಯಾನಕ ಪಿಡುಗಿನಿಂದ ಹೆದರಿ ದೇಶದ ಸಾಮಾನ್ಯ ಗೃಹಿಣಿ ಧಾನ್ಯ ಮತ್ತಿತರ ಪದಾರ್ಥಗಳನ್ನು ಸಂಗ್ರಹಿಸಿಟ್ಟುಕೊಂಡು ದೇಶದ್ರೋಹಿಯಾದಳು. ನಮ್ಮ ಮನೆಗೆ ರೇಷನ್ ತರುವುದು ನನ್ನ ಜವಾಬ್ದಾರಿಯಾಗಿತ್ತು. ಪುನಃ ಸಿಗುವುದಿಲ್ಲ ಎಂಬ ಆತಂಕದಿಂದ ನಾನು – ನನ್ನ ತಂಗಿ ಉಷಾ ಪೇಟೆಯಲ್ಲಿ ಸಿಕ್ಕಿದ್ದನ್ನ ತೆಗೆದುಕೊಂಡುಬರುತ್ತಿದ್ದೆವು. ಅದರ ಆವಶ್ಯಕತೆ ಆ ಕ್ಷಣ ಇರಬೇಕು ಎಂಬುದೂ ಇರುತ್ತಿರಲಿಲ್ಲ. ಒಂದು ಸಾರಿ ರೇಷನ್ ಡಿಪೋನಲ್ಲಿ ಬೆಲ್ಲ ಬಂದಿತ್ತು ನಾವು ಬೇಕಾಗಿರದಿದ್ದರೂ ೧೦ ಕಿಲೊ ಬೆಲ್ಲವನ್ನ ಕೊಂಡುಕೊಂಡು ಬಿಟ್ಟಿದ್ದಿದ್ದು ನನಗಿನ್ನೂ ನೆನಪಿದೆ. ಇನ್ನೊಂದು ಸಾರಿ, ನಾನು ಅಂಗಡಿಯಲ್ಲಿ ಸುಂದರವಾಗಿದ್ದ ಸೂಜಿಗಳನ್ನ ನೋಡಿದೆ, ನಾನು ಸೂಜಿಗಳ ೧೦ ಎಲೆಗಳನ್ನ ಯಾವಾಗಲಾದರೂ ಕೆಲಸಕ್ಕೆ ಬರುತ್ತೆಂದು ಕೊಂಡುಕೊಂಡು ಬಿಟ್ಟೆ. ಇವತ್ತಿಗೂ

ನಮ್ಮಮ್ಮ ನಮ್ಮ ಈ ಮೂರ್ಖತನಕ್ಕೆ ನಗುತ್ತಾಳೆ, ಆದರೆ ಕಂಟ್ರೋಲ್‌ನ ಹೆದರಿಕೆಯಿಂದ ನಾನು ಸ್ವಲ್ಪ ಹೆಚ್ಚು ಪದಾರ್ಥಗಳನ್ನೇ ಖರೀದಿಸುತ್ತಿದ್ದೆ. ಅಂದರೆ ನಮ್ಮ ಮನೆಯಲ್ಲಿ ಕೂಡ ಅನಾವಶ್ಯಕವಾಗಿ ಸಾಮಾನು ಬಂದು ಸೇರುತ್ತಿತ್ತು, ಅದಕ್ಕೆ ಪರಿಹಾರ ಏನೂ ಇರಲಿಲ್ಲ. ಕಂಟ್ರೋಲ್ ತೆಗೆದರೆ ಪೇಟೆ ಧಾರಣೆ ಸಹಜವಾಗಿ ಇಳಿದು ಹೋಗುತ್ತೆ, ಪದಾರ್ಥಗಳೂ ಕಡಿಮೆ ಬೀಳುವುದಿಲ್ಲವೆಂದು ಬಾಪೂಜಿಗೆ ಗೊತ್ತಿತ್ತು.

ರಾಜೇಂದ್ರ ಬಾಬು ಆಹಾರ ಮಂತ್ರಿಗಳಾಗಿದ್ದರು. ಆಗ ರಾಜೇಂದ್ರಬಾಬು ಬಾಪೂಜಿಗೆ ಎಲ್ಲರಿಗಿಂತ ಹೆಚ್ಚು ಸಮರ್ಪಿತರಾಗಿದ್ದ ಸಹಯೋಗಿಯಾಗಿದ್ದರು ಅಂತ ಎಲ್ಲರಿಗೂ ತಿಳಿದಿತ್ತು. ಬಾಪೂಜಿಯ ಪ್ರತಿಯೊಂದು ಶಬ್ದ ಅವರಿಗೆ ಆಜ್ಞೆಯಾಗಿರುತ್ತಿತ್ತು. ಆದರೆ ಅವರು ಕೂಡ ರೇಷನ್ನನ್ನ ತೆಗೆದು ಹಾಕಲು ಹೆದರುತ್ತಿದ್ದರು. ಅವರ ಮಂತ್ರಾಲಯ ದೇಶದಲ್ಲಿ ಆಹಾರ ಧಾನ್ಯಗಳ ಕೊರತೆ ಇದೆಯಾದ್ದರಿಂದ ರೇಷನ್ ತೆಗೆದು ಹಾಕಿದರೆ ವಿಪತ್ತು ಬರುತ್ತೆ ಎಂದು ಹೇಳುತ್ತಿತ್ತು. ದೇಶದಲ್ಲಿ ಆಹಾರ ಧಾನ್ಯಗಳು ಅಷ್ಟೇನೂ ಕಡಿಮೆ ಇಲ್ಲ ಎನ್ನುವುದು ಬಾಪೂಜಿ ಅಭಿಪ್ರಾಯವಾಗಿತ್ತು. ಕಡಿಮೆಯಾದ ಕಡೆ ಜನ ತಮ್ಮ ಪ್ರಯತ್ನದಿಂದ ಅದನ್ನು ಪೂರೈಸಿಕೊಳ್ಳುತ್ತಾರೆ, ಬೇಕೆನ್ನಿಸಿದರೆ ಸರಕಾರ ಮಾರ್ಕೆಟ್‌ನಿಂದ ಆಹಾರ ಧಾನ್ಯಗಳನ್ನ ಕೊಂಡುಕೊಂಡು ಸ್ವತಃ ಆಹಾರ ಧಾನ್ಯಗಳ ಅಂಗಡಿ ನಡೆಸಲಿ, ಆದರೆ ಪಡಿತರ ಪದ್ಧತಿಯಿಂದಾಗಿ ದೇಶದಲ್ಲಿ ಧಾನ್ಯಗಳ ಕೃತಿಮ ಕೊರತೆಯ ಭೇತಾಳ ವಿನಾ ಕಾರಣ ನರ್ತಿಸುತ್ತಿತ್ತು. ಈ ಕಾಲ್ಪನಿಕವಾದ ಅಭಾವವನ್ನ ದೂರಗೊಳಿಸಲು ಸರಕಾರ ವಿದೇಶಗಳಿಂದ ಆಹಾರ ಪದಾರ್ಥಗಳನ್ನ ತರಿಸಬೇಕೆಂದಿತ್ತು. ಬಾಪೂಜಿ ದೇಶದ ಈ ಭಿಕಾರಿತನವನ್ನ ತೀವ್ರವಾಗಿ ದ್ವೇಷಿಸುತ್ತಿದ್ದರು. ದೇಶದಲ್ಲಿ ಎಲ್ಲ ತರಹೆಯ ಗೆಡ್ಡೆ–ಗೆಡಸು, ಹೂವು–ಹಣ್ಣು ಸಿಗುತ್ತಿತ್ತು. ಪಡಿತರ ಪದ್ಧತಿಯನ್ನು ತೆಗೆದುಹಾಕಿದಾಗ ರೈತರು ಖುದ್ದಾಗಿ ಹೆಚ್ಚು ಅನ್ನವನ್ನ ಬೆಳೆದು ಕೊರತೆಯನ್ನ ತಾವೇ ದೂರಗೊಳಿಸುತ್ತಾರೆ. ಜನರನ್ನ ಅವರ ಪಾಡಿಗೆ ಬಿಟ್ಟಾಗ ಎಲ್ಲಾ ಸಮಸ್ಯೆಗಳನ್ನೂ ಸಹಕಾರದಿಂದ ತಾವೇ ಪರಿಹರಿಸಿಕೊಳ್ಳುತ್ತಾರೆ. ಆದರೆ ರೇಷನಿಂಗ್‌ನಿಂದ ಜನರ ಸ್ವಾವಲಂಬನೆ, ಪುರುಷಾರ್ಥ ಎರಡೂ ಸತ್ತುಹೋಗಿದ್ದವು. ಜನರ ತಲೆಯಲ್ಲಿ ಒಂದು ಭಿಕಾರಿ ಮನೋಭಾವ ಹರಡಿಕೊಂಡಿತ್ತು. ಇವತ್ತಿನವರೆಗೂ ಅದು ಹೇಗೋ ಉಳಿದುಕೊಂಡಿದೆ. ಬಾಪೂಜಿ ಈ ಭಿಕಾರಿತನವನ್ನ ವಿರೋಧಿಸುತ್ತಿದ್ದರು.

ದೇಶದಲ್ಲಿ ಬಟ್ಟೆಗಳ ಕೊರತೆ ಇದೆ ಎಂದು ಹೇಳುತ್ತಿದ್ದರು, ಅದರಿಂದ ಬಟ್ಟೆಗಳ ಮೇಲೂ ಕಂಟ್ರೋಲ್ ಇತ್ತು. ವಿಚಿತ್ರವಾದ ಪರಿಸ್ಥಿತಿ. ಈ ಕಾಂಗ್ರೆಸ್ಸಿಗರು ಖಾದಿಯ ಬಲದಿಂದ ವಿದೇಶೀ ಆಳ್ವಿಕೆಯನ್ನ ಸೋಲಿಸಿ ಅಧಿಕಾರಕ್ಕೆ ಬಂದಿದ್ದರು, ಅವರೇ ಇವತ್ತು ಖಾದಿಯನ್ನ ಮರೆತು ಹೋಗಿದ್ದರು. ದೇಶದ ಜನರಿಗಾಗಿ ಮಿಲ್ ಬಟ್ಟೆಗಳನ್ನ ಉತ್ಪಾದಿಸುವುದನ್ನ ಚಿಂತಿಸುತ್ತಿದ್ದರು, ಪಾಕಿಸ್ತಾನವಾದ ಮೇಲೂ ದೇಶದಲ್ಲಿ

ಸಾಕಷ್ಟು ಹತ್ತಿ ಬೆಳೆ ಬೆಳೆಯುತ್ತಿದ್ದರು. ಮುವತ್ತು ಕೋಟಿ ಜನಕ್ಕೆ ಅರುವತ್ತು ಕೋಟಿ ಕೈಗಳು ಚರಖಾ ನಡೆಸಿ ಆವಶ್ಯಕತೆಗನುಗುಣವಾಗಿ ಬಟ್ಟೆಯನ್ನು ಸಿದ್ಧಪಡಿಸಿಕೊಳ್ಳ ಬಹುದಾಗಿತ್ತು. ಐದು ಜನಗಳಿರುವ ಒಂದು ಸಂಸಾರದಲ್ಲಿ ಹದಿನೈದು ದಿನಗಳಲ್ಲಿ ಹನ್ನೆರಡು ಗಜ ಬಟ್ಟೆಯಾಗುವಷ್ಟು ನೂಲನ್ನ ಸ್ವತಃ ತೆಗೆಯಬಹುದಾಗಿತ್ತು. ಅದೇ ರೀತಿ ಏಳು ದಿನದಲ್ಲಿ ಹಳ್ಳಿಯ ನೇಯ್ಗೆಯವನು ಹನ್ನೆರಡು ಗಜ ಬಟ್ಟೆಯನ್ನು ನೇಯಬಲ್ಲ, ಹೀಗೆ ಒಂದು ತಿಂಗಳಲ್ಲಿ ಇಪ್ಪತ್ತ ನಾಲ್ಕು ಗಜ ಬಟ್ಟೆ ಸಿದ್ಧವಾಗಿ ಆ ಪರಿವಾರಕ್ಕೆ ಸುಲಭವಾಗಿ ಅಷ್ಟು ಬಟ್ಟೆ ಸಿಗಬಹುದಾಗಿತ್ತು, ಮತ್ತೆ ಬಟ್ಟೆಯ ಕೊರತೆ ಆಗುತ್ತಿರಲೇ ಇಲ್ಲ. ಆದರೆ ಅಧಿಕಾರಕ್ಕೆ ಬಂದ ಮೇಲೆ ನಾಯಕರು ಖಾದಿಯನ್ನ ಒಂದು ವ್ಯರ್ಥವಾದ ಆಭೂಷಣ ವಸ್ತ್ರ ಅಂತ ತಿಳಿದುಕೊಂಡುಬಿಟ್ಟರು. ಅದರ ಔದ್ಯೋಗಿಕ ಶಕ್ತಿ ಮತ್ತು ಉಪಯೋಗವನ್ನ ಜನರು ಮರೆತರು. ಅದರಿಂದ ಖಾದಿ ಬರಿಯ ನೋಟದ ವಸ್ತುವಾಗಿ ಉಳಿಯಿತು. ಅದಿಲ್ಲದಿದ್ದರೆ ಖಾದಿ ದೇಶದ ಅಹಿಂಸಾತ್ಮಕ ಕ್ರಾಂತಿಯ ತೇಜಸ್ಸಿನಿಂದ ಕೂಡಿದ ಕೇಂದ್ರವಾಗಿತ್ತು. ಎಂತಹ ದುರ್ದೈವವೆಂದರೆ ವ್ಯಾಪಾರ ಮತ್ತು ಉದ್ಯೋಗ ಮಂತ್ರಿಗಳಾಗಿದ್ದ ಸಕ್ರಿಯವಾದ ಖಾದಿಧಾರಿ ರಾಜಗೋಪಾಲಚಾರಿ ಕೂಡ ಬಟ್ಟೆ ಮಿಲ್‌ಗಳು ಮತ್ತು ಮಿಲ್ ಮಗ್ಗದ ಕುಣಿಗಳನ್ನು ಹಂಚತೊಡಗಿದ್ದರು. ಆಗ ಮದ್ರಾಸ್ ಪ್ರಾಂತದ ಒಬ್ಬ ಮಂತ್ರಿ ಮದ್ರಾಸ್ ಪ್ರಾಂತಕ್ಕೆ ಮಗ್ಗದ ಕುಣಿ ಮತ್ತು ಮಿಲ್ ಹತ್ತಿ ಎಳೆಗಳ ಅಗತ್ಯವಿಲ್ಲವೆಂದು ಬಾಪೂಜಿ ಬಳಿಗೆ ದೂರುತಂದರು. ಆದರೆ ಕೇಂದ್ರ ಮಂತ್ರಿ ರಾಜಾಜಿಯವರು ರಾಜ್ಯಗಳಿಗೆ ಕೊಡಬೇಕಾದ ಕೋಟಾವನ್ನ (ಪಡಿತರವನ್ನ) ರಾಜ್ಯಗಳಿಗೆ ಕೊಡಲೇಬೇಕು, ಅದರಿಂದ ಅವರಿಗೆ ಹಾನಿಯಾದರೂ ಸರಿ, ಅದರಿಂದ ಅವರಿಗೆ ಉಪಯೋಗ ಇರಲಿ, ಇಲ್ಲದಿರಲಿ, ತೆಗೆದುಕೊಳ್ಳಬೇಕು ಎಂದು ಹಠ ಹಿಡಿದರು.

ನವಂಬರ್ ೧೯೪೭ರಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ಎದುರು ಮಾತನಾಡುವಾಗ ಬಾಪೂಜಿ ಹೀಗೆ ಹೇಳಿದರು: 'ಕಂಟ್ರೋಲ್ ಮತ್ತು ಲೈಸೆನ್ಸ್ ನೀತಿಯೇ ಈ ಭ್ರಷ್ಟಾಚಾರಕ್ಕೆ ಮೂಲ. ಅದೇ ನಮ್ಮ ಪ್ರಜಾತಂತ್ರವನ್ನ ನುಂಗಿ ಹಾಕುತ್ತೆ. ಜನ ಹಸಿವಿನಿಂದ ಸತ್ತರೆ ಅಥವಾ ಬಟ್ಟೆಗಳಿಲ್ಲದೆ ಚಳಿಯಲ್ಲಿ ನಡುಗಿ ಸತ್ತರೆ, ಆಗ ಬದುಕಿರುವ ಜನ ಕೊನೆಯ ಪಕ್ಷ ಅದರಿಂದ ಶಿಕ್ಷಣ ಪಡೆದು ಆಲಸ್ಯ, ಸ್ವಾರ್ಥವನ್ನ ತೊರೆದು ಸ್ವಾವಲಂಬನೆ ಮತ್ತು ಸಹಕಾರವನ್ನ ಕಲಿತುಕೊಳ್ಳುತ್ತಾರೆ. ಭ್ರಷ್ಟಾಚಾರದ ಕಠೋರ ಹಿಡಿತದಿಂದ ದೂರವಾಗ್ತಾರೆ. ಆದರೆ ನಮ್ಮದೇ ಆದ ಸರಕಾರ ಜನರನ್ನ ನಪುಂಸಕರನ್ನಾಗಿ ಮಾಡ್ತಾ ಇತ್ತು, ಸರಕಾರಿ ಅಧಿಕಾರಿಗಳು ಹಳೆಯ ತಂತ್ರವನ್ನೇ ನಡೆಸಬೇಕೆಂಬ ಹಠ ತೋರಿಸುತ್ತಿದ್ದರು. ಅವರು ಬಡ ಹಳ್ಳಿಗನನ್ನು ಅರಿತೂ ಇರಲಿಲ್ಲ, ತಿಳಿದುಕೊಳ್ಳಬಯಸುತ್ತಲೂ ಇರಲಿಲ್ಲ. ಈ ದೇಶದ

ಕೋಟ್ಯಂತರ ಮಂದಿ ಬಡವರಿಗೆ ಉತ್ಸಾಹ ನೀಡಲು ಈ ಅಧಿಕಾರಿಗಳಿಗೆ ಬರುತ್ತಿರಲಿಲ್ಲ. ಕಾಂಗ್ರೆಸ್ ಮಂತ್ರಿಗಳು ಈ ಅಧಿಕಾರಿಗಳ ಕೈಗೊಂಬೆಗಳಾಗುತ್ತಿದ್ದರು. ಕಂಟ್ರೋಲ್‌ನಿಂದ ಮೋಸ–ಕಪಟ, ಸುಳ್ಳು–ದಗ, ಲಾಭಕೋರತನ, ಕಾಳಸಂತೆ ಮತ್ತು ಕೃತ್ರಿಮವಾದ ಅಭಾವ ಎದ್ದೇಳುತ್ತಿತ್ತು. ಈ ಕಂಟ್ರೋಲ್ ದೆಸೆಯಿಂದ ದೇಶದ ಜನ ಕೆಲಸಕ್ಕೆ ಬಾರದವರಾಗಿ ಪೌರುಷಹೀನರಾಗಿದ್ದರು. ಮುವತ್ತು ವರ್ಷಗಳ ಸತ್ಯಾಗ್ರಹದಿಂದ ಸ್ವಾವಲಂಬನೆ, ಸಾಹಸ, ಶೌರ್ಯ ಇತ್ಯಾದಿಗಳನ್ನು ಕಲಿತಿದ್ದುದು ಈಗ ಕಂಟ್ರೋಲ್ ಮತ್ತು ನೌಕರಶಾಹಿಯ ಭ್ರಷ್ಟಾಚಾರ ಮತ್ತು ಅನ್ಯಾಯಗಳ ನಡುವೆ ಮರೆತುಹೋಗುತ್ತಿತ್ತು. ಈ ಸ್ಥಿತಿ ಸಾಂಪ್ರದಾಯಿಕ ದಂಗೆಗಳಿಗಿಂತಲೂ ಭಯಂಕರವಾಗಿತ್ತು. ಕಂಟ್ರೋಲ್‌ನ ತೆಗೆದು ಹಾಕುವುದರಿಂದ ಇದ್ದಕ್ಕಿದ್ದ ಹಾಗೆ ಅವ್ಯವಸ್ಥೆ ಹರಡುತ್ತದೆಂದು ನಂಬಿದರೂ ಕೂಡ ಆ ಸ್ಥಿತಿಯಲ್ಲಿ ಪುನಃ ಕಂಟ್ರೋಲ್ ಹಾಕಲು ಯಾವ ಅಡ್ಡಿ ಕೂಡ ಇರುತ್ತಿರಲಿಲ್ಲ. ಆದರೆ ಕಾಂಗ್ರೆಸ್ ಮಂತ್ರಿಗಳು ತಮ್ಮ ಉಸ್ತಾದರಾಗಿದ್ದ ಅಧಿಕಾರಿಗಳ ನಡುವೆ ಜನರ ಕೂಗನ್ನ ಕೇಳಲಾರದವರಾಗಿದ್ದರು. ಈ ಅಂಕಿ ಸಂಖ್ಯೆಗಳು, ಈ ಶೇಕಡಾವಾರು, ಸಂಖ್ಯೆ ಇವೆಲ್ಲಾ ವೇದವಾಕ್ಯಗಳೇನೂ ಆಗಿರಲಿಲ್ಲ. ಸಂಖ್ಯೆಗಳು ತಪ್ಪು ಹೇಳುವ ಸಾಧ್ಯತೆ ಇತ್ತು. ಬ್ರಿಟಿಷರ ಕಾಲದಲ್ಲಿ ಈ ಪಂಡಿತರ ಆಡಳಿತ ಇತ್ತು, ಆದರೆ ಈಗ ಸ್ವರಾಜ್ಯದಲ್ಲಿ ಅವರನ್ನು ಸಹಿಸುವುದಾಗಲಿ, ಅವರ ಕೈಲಿ ಆಡಳಿತ ನಡೆಸಿಕೊಳ್ಳುವ ಅಗತ್ಯವಿರಲಿಲ್ಲ.

ಬಾಪೂಜಿಯವರ ಈ ಭಾಷಣವನ್ನ ಕೇಳಿ ವಿಚಾರವಂತರು ಸ್ತಬ್ಧರಾಗಿರಬೇಕು ಎಂದು ನನಗನಿಸುತ್ತದೆ. ಆಕಾಶವಾಣಿ (ಆಲ್ ಇಂಡಿಯಾ ರೇಡಿಯೋ) ಇದರ ಪ್ರಸಾರ ಮಾಡಿದರೆ, ವಿಚಾರವಂತರನ್ನು ಬಿಡಿ, ಸಾಮಾನ್ಯ ಓದದ ಹಳ್ಳಿಗ ಕೂಡ ಇದರ ತಥ್ಯವನ್ನು ಅರ್ಥ ಮಾಡಿ ಹೊಗಳಿ, ಇದನ್ನು ಅನುಸರಿಸಿದರೆ ಒಳಿತಾಗುತ್ತದೆಂದು ಹೇಳಬಲ್ಲ. ಕೊನೆಗೂ ಬಾಪೂಜೀ ಭಾಷಣ ಪ್ರಭಾವ ಬೀರಿತು. ರಾಜೇಂದ್ರ ಬಾಬು ೯ ಸೆಪ್ಟೆಂಬರ್ ೧೯೪೭ರಂದು ಧಾನ್ಯಗಳ ಮೇಲಿನ ಕಂಟ್ರೋಲನ್ನು ತೆಗೆದುಹಾಕಿದರು, ಚಮತ್ಕಾರೀ ಪರಿಣಾಮ ತಲೆದೋರಿತು. ಸಕ್ಕರೆ ಬೆಲೆ ಅರ್ಧಕ್ಕೆ ಇಳಿಯಿತು, ಕಂಟ್ರೋಲ್ ತೆಗೆದುಹಾಕಿದ್ದರಿಂದ ದೇಶದ ಜನ ಧಾನ್ಯ ಪೂರೈಕೆಯ ಕೆಲಸವನ್ನ ತಾವೇ ಮಾಡಿದರು, ಜನರಿಗೆ ಉತ್ಸಾಹ ಬಂತು, ಸ್ವೇಚ್ಛೆಯಿಂದ ಯಾರು ತಾನೆ ಭ್ರಷ್ಟಾಚಾರ ಮಾಡುವುದಕ್ಕೆ ಇಷ್ಟ ಪಡುತ್ತಾರೆ. ಸುಳ್ಳು, ತಟ–ಪಟೆ ಮಾಡಲು ಯಾರೂ ಬಯಸಲ್ಲ, ಸರಕಾರದ ನೀತಿಯಿಂದ ವಿವಶನಾಗಿ ನಾಗರಿಕ ಈ ತರಹೆ ಅನೀತಿ, ಅಗತ್ಯದಲ್ಲಿ ತೊಡಗುತ್ತಾನೆ. ಆ ಉದ್ವೇಗದಲ್ಲಿ ಹಿಂಸೆ, ವ್ಯಭಿಚಾರ, ಬೆಂಕಿ ಹಾಕುವದು, ಅರಾಜಕತೆ, ಕನ್ನ ಹಾಕುವುದು ಇವೆಲ್ಲ ಹುಟ್ಟಿಕೊಳ್ಳುತ್ತವೆ, ಬೆಳೆಯುತ್ತವೆ. ಭ್ರಷ್ಟಾಚಾರದಿಂದ ಕೆಲವರು ಬಹಳ ಸಾಹುಕಾರರಾಗಿದ್ದರು, ಮಿಕ್ಕವರು ಬಡತನದಲ್ಲಿ ನರಳುತ್ತಿದ್ದರು. ಈ ಅಂತರ ಒಳ್ಳೆಯ ಸಮಾಜದಲ್ಲಿ ವಿಸಂಗತಿಯನ್ನು ಹುಟ್ಟುಹಾಕುತ್ತದೆ, ಅದರಿಂದ ಗೂಂಡಾಗಿರಿ

ಮತ್ತು ಅಸಾಮಾಜಿಕ ತತ್ವಗಳು ಹುಟ್ಟಿಕೊಳ್ಳುತ್ತವೆ. ಅದರಿಂದ ಸಮಾಜವನ್ನು ದೂಷಿಸುವುದು ಸರಿಯಲ್ಲ, ನೌಕರಶಾಹಿಯ ಜೊತೆಗೆ ನಿಂತು ಹೂಂಗುಟ್ಟುವ ಸರಕಾರವೇ ಈ ಅರಾಜಕತೆ ಹುಟ್ಟಲು ಮುಖ್ಯ ಕಾರಣವಾಗುತ್ತದೆ. ಇಲ್ಲಿಯವರೆಗೂ ಪರದೇಶಿ ಆಡಳಿತದಲ್ಲಿ ಈ ದೇಶದ ರೈತನ ಲೂಟಿಯಾಗುತ್ತದೆ ಎಂದು ಕೂಡ ಬಾಪೂಜಿ ಹೇಳಿದರು. ಈಗ ಸ್ವತಂತ್ರ ಸಿಕ್ಕಿರುವಾಗ ಅವನು ತನ್ನ ಪರಿಶ್ರಮಕ್ಕೆ ಪೂರ್ತಿ ಬೆಲೆ ಬೇಡಿದರೆ, ಅದನ್ನು ಕೊಡಲು ಪಟ್ಟಣವಾಸಿಗಳು ಹಿಂಜರಿಯಬಾರದು, ಬಟ್ಟೆ ಮತ್ತು ಧಾನ್ಯಗಳ ವರ್ತಕರು ರೈತನ ಪರಿಶ್ರಮದ ಫಲವನ್ನ ತಾವೇ ತಿನ್ನುವಂತಾಗಬಾರದು, ಅದರ ಪೂರ್ತಿ ಲಾಭ ರೈತನಿಗೆ ಸಿಗಬೇಕು ಎಂದರು. ಧಾನ್ಯದ ಹಾಗೆ ಬಾಪೂಜಿ ಬಟ್ಟೆಯ ಮೇಲಿನ ನಿಯಂತ್ರಣವನ್ನೂ ತೆಗೆಸಿಹಾಕಿದ್ದರು.

ದೇಶದಲ್ಲಿ ಸಾಮಗ್ರಿಗಳನ್ನು ತಲಪಿಸುವ ಪ್ರಮುಖ ಸಾಧನ ರೈಲುಗಾಡಿಗಳು ಎಂಬುದು ಬಾಪೂಜಿಗೆ ನೆನಪಾಯಿತು, ಅಲ್ಲೇ ಎಲ್ಲವೂ ಸಂಗ್ರಹವಾಗುತ್ತಿತ್ತು. ಕಲ್ಲಿದ್ದಲು ಮತ್ತು ವ್ಯಾಗನ್‌ಗಳ ಕೊರತೆಯಿಂದ ಪದಾರ್ಥಗಳನ್ನು ಸಾಗಿಸುವುದು ಬಹಳ ಕಷ್ಟವಾಗುತ್ತಿತ್ತು, ಅದರಿಂದ ಪದಾರ್ಥಗಳ ಬೆಲೆ ಹೆಚ್ಚಾಗುತ್ತಿತ್ತು. ಈ ಪರಿಸ್ಥಿತಿಯಲ್ಲಿ ಟ್ರಕ್‌ಗಳಲ್ಲಿ ಪದಾರ್ಥಗಳನ್ನು ಸಾಗಿಸುವುದು ಹೆಚ್ಚು ಲಾಭದಾಯಕವಾಗುತ್ತಿತ್ತು. ಆದರೆ ಪೆಟ್ರೋಲ್ ಪಡಿತರ ಇದ್ದುದರಿಂದ ಟ್ರಕ್ ಟ್ರಾನ್ಸ್‌ಪೋರ್ಟ್‌ನಲ್ಲಿ ಬೇಕಾಬಿಟ್ಟಿ ಭ್ರಷ್ಟಾಚಾರ ಹರಡಿಕೊಂಡಿತ್ತು, ದೇಶದಲ್ಲಿ ಪೆಟ್ರೋಲ್ ಕೊರತೆ ಇದೆ, ಅದರಿಂದ ನಿಯಂತ್ರಣ ಅಗತ್ಯವಾಗಿದೆ ಎಂದು ಸರಕಾರಿ ಅಧಿಕಾರಿಗಳು ಹೇಳುತ್ತಿದ್ದರು. ಆದರೆ ಪೆಟ್ರೋಲ್‌ನಿಂದಾಗಿ ಪರ್ಮಿಟ್‌ನವನು ೩೦೦ ರೂ.ಗೆ ಬದಲಾಗಿ ೧೦,೦೦೦ ರೂಪಾಯಿ ಲಾಭಗಳಿಸುತ್ತಿದ್ದ, ಪೆಟ್ರೋಲ್ ಮೇಲಿನ ಕಂಟ್ರೋಲನ್ನ ತೆಗೆದು ಹಾಕಿದರೆ ಪರ್ಮಿಟ್‌ನ ಭ್ರಷ್ಟಾಚಾರ ಕೊನೆಗೊಳ್ಳುತ್ತದೆಂದು ಬಾಪೂಜಿ ಹೇಳುತ್ತಿದ್ದರು, ಆಗ ಟ್ರಕ್‌ಗಳಲ್ಲಿ ಸಾಮಾನು ಹೋಗಿ ಬರುವುದರಿಂದ ಸಮಯ ಶಕ್ತಿ ಮತ್ತು ಹಣ ಎಲ್ಲವೂ ಉಳಿಯುತ್ತದೆ, ಜನರಿಗೆ ಅನುಕೂಲ ಆಗುತ್ತದೆ ಅಂತ ಬಾಪೂಜಿ ಸಲಹೆ ನೀಡಿದರು. ಇವತ್ತು ಇಷ್ಟು ವಿಸ್ತಾರವಾಗಿ, ಸಮರ್ಥವಾಗಿ ಟ್ರಕ್ ಕಾರ್ಯನಿರ್ವಹಿಸುತ್ತಿರುವುದಕ್ಕೆ ಮೂಲ ಕಾರಣಕರ್ತರು ಬಾಪೂಜಿಯೇ ಅಂತ ಈಗ ನನಗನಿಸುತ್ತಿದೆ. ಅವರ ನಿರ್ದೇಶದ ಮೇರೆಗೆ ಸರಕಾರ ಪೆಟ್ರೋಲ್ ಮೇಲಿನ ನಿಯಂತ್ರಣವನ್ನು ತೆಗೆದು ಹಾಕಿತು, ಪರ್ಮಿಟ್‌ನ ಕಾಳಸಂತೆ ಸಹಜವಾಗಿ ಮುಗಿದು ಹೋಯಿತು.

ಜನವರಿ ಮೊದಲ ವಾರದಲ್ಲಿ ಬಟ್ಟೆ, ಪೆಟ್ರೋಲ್, ಧಾನ್ಯ ಮುಂತಾದ್ದರ ಮೇಲಿನ ನಿಯಂತ್ರಣವನ್ನು ತೆಗೆದುಹಾಕಿದ್ದರಿಂದ ಎಲ್ಲಾ ಆವಶ್ಯಕ ವಸ್ತುಗಳ ಬೆಲೆ ಶೇ. ಐವತ್ತರಷ್ಟು ಕಡಿಮೆಯಾಯಿತು. ಅಂದರೆ ಆ ಕ್ಷಣ ಜನರ ಸಂಪಾದನೆ ದ್ವಿಗುಣಿತವಾಯಿತು ಎಂದು ಅರ್ಥವಾಗುವುದಿಲ್ಲ. ಅವರು ಈಗ ಎರಡರಷ್ಟು

ಪದಾರ್ಥಗಳನ್ನು ಕೊಳ್ಳುವಷ್ಟು ಸಮರ್ಥರಾದರು, ಅವರ ಬಡತನ ಅರ್ಧದಷ್ಟು ಕಡಿಮೆಯಾಯಿತು. ಸರಿಯಾಗಿ ಹೇಳಬೇಕೆಂದರೆ, ನೂರು ರೂಪಾಯಿಗೆ ಇನ್ನೂರು ರೂಪಾಯಿಗಳ ಪದಾರ್ಥಕೊಳ್ಳಲು ಅನುಕೂಲವಾಯಿತು, ಹಣದ ಬಿಕ್ಕಟ್ಟು ಅರ್ಧದಷ್ಟು ಕಡಿಮೆಯಾಯಿತು. ದೇಶದಲ್ಲಿ ಎಲ್ಲ ಕಡೆಗಳಿಂದಲೂ ಅಭಿನಂದನೆಯ ತಾರುಗಳು, ಆಶೀರ್ವಾದ, ಶುಭಸಂದೇಶಗಳ ಸುರಿಮಳೆಯಾಯಿತು. ಮೊದಲ ಬಾರಿಗೆ ಜನರಿಗೆ ಸ್ವಾತಂತ್ರ್ಯದ ಸುಖ ಸ್ವಲ್ಪ ಮಟ್ಟಿಗೆ ಸಿಕ್ಕಿತು, ಬಾಪೂಜಿ ಅಭಿನಂದಿಸುವವರಿಗೆ ಹೇಳಿದರು, 'ಇದರಲ್ಲಿ ನಾನು ಏನೂ ಚಮತ್ಕಾರ ಮಾಡಿಲ್ಲ, ಜನರ ಬೇಡಿಕೆಯನ್ನು ನಾನು ಸರಕಾರಕ್ಕೆ ತಲಪಿಸಿದ್ದೆ, ವ್ಯಾಪಾರಿಗಳು ಜನರ ಬೇಡಿಕೆಯನ್ನು ಅರ್ಥಮಾಡಿಕೊಂಡರು, ಸರಕಾರ ಅದನ್ನು ಪೂರ್ತಿಗೊಳಿಸಿತು. ಆದರೆ ಈ ಪ್ರಸಂಗದಿಂದ ಒಂದು ವಿಷಯ ಅರ್ಥವಾದ ಹಾಗೆ ಆಯಿತು: ಪ್ರಜಾತಂತ್ರ ಹೇಡಿತನದ ನಡೆಯಲ್ಲ; ಹೆದರಿಕೆಯಿಂದ ಆಗುವ ಸರಕಾರದ ನಡೆಯಲ್ಲ; ನಿರ್ಭೀತವಾದ ಮನುಷ್ಯನೇ ಸ್ವತಂತ್ರನಾಗಿರಬಲ್ಲ ಎಂದು. ಆರ್ಥಿಕ ಮತ್ತು ಆಡಳಿತದ ಹಂತದಲ್ಲಿ ಬಾಪೂಜಿಯ ತಿಳುವಳಿಕೆ ಮತ್ತು ದೂರದರ್ಶಿತ್ವವನ್ನು ಜನ ಹೊಗಳತೊಡಗಿದ್ದರು, ಬಾಪೂಜಿಯವರು ಆಗ 'ನನ್ನ ಮಾತು ನೀವು ಕೇಳಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದರೆ ಕೋಮುವಾದ ಪೂರ್ತಿಯಾಗಿ ನಾಶವಾಗಬಲ್ಲದು' ಎಂದು ಹೇಳುತ್ತಿದ್ದರು. ಆದರೆ ಆ ವಿಷಯವಾಗಿ ದೇಶದ ಮುಖಂಡರು ಅಹಿಂಸೆ, ಪ್ರೇಮ, ತ್ಯಾಗ, ಬಲಿದಾನದ ಬಾಪೂಜಿಯ ಮಾತುಗಳು ಕಾಲ್ಪನಿಕ ಪ್ರಪಂಚದ ಸಾರಹೀನವಾದ ಮಾತುಗಳೆಂದು ಭಾವಿಸಿ ಕೇಳಿಸಿಕೊಳ್ಳುತ್ತಿರಲಿಲ್ಲ. ಒಂದು ಕಡೆ ಈ ಮನುಷ್ಯನ ತಿಳಿವಳಿಕೆಯನ್ನ ಸ್ವೀಕರಿಸುತ್ತಿದ್ದರೆ, ಬೇರೆ ಕಡೆ ಆತನ ವಿವೇಕ, ಅನುಭವವನ್ನು ಹೀಗೆ ಅವಹೇಳನ ಮಾಡುತ್ತಿದ್ದರು ಅಂದರೆ ಎಷ್ಟು ವಿಚಿತ್ರ ಎನಿಸುತ್ತದೆ. ಆಹಾರ, ಧಾನ್ಯ, ಬಟ್ಟೆ, ಪೆಟ್ರೋಲ್ ವಿಷಯವಾಗಿ ಅವರ ಲೌಕಿಕವಾದ, ವ್ಯಾವಹಾರಿಕವಾದ ಕಾರ್ಯದಕ್ಷತೆಯನ್ನು ಪ್ರಕಟಪಡಿಸಬಲ್ಲವರಾಗಿದ್ದರೆ, ದೇಶದ ಉಳಿವು–ಅಳಿವಿನ ಮಾರ್ಮಿಕ ಸಮಸ್ಯೆಗಳನ್ನು ಕುರಿತು ಅವರು ಹೇಗೆ ಉಪೇಕ್ಷೆ ತೋರಲು ಸಾಧ್ಯ? ಇದ್ದಕ್ಕಿದ್ದಂತೆ ಅಕುಶಲ, ಅಯೋಗ್ಯ ಹೇಗೆ ಆಗಲು ಸಾಧ್ಯ ಎಂದು ಬಾಪೂಜಿ ಒಮ್ಮೊಮ್ಮೆ ಕೇಳುತ್ತಿದ್ದುದೂ ಉಂಟು. ಒಬ್ಬ ವ್ಯಕ್ತಿ ಒಂದೇ ಬಾರಿಗೆ ಇಂತಹ ವಿರೋಧಿ ಪ್ರವೃತ್ತಿಗಳನ್ನಿಟ್ಟುಕೊಳ್ಳಲೂ ಸಾಧ್ಯವಿರಲಿಲ್ಲ. ಆದರೆ ನಾಯಕರುಗಳು ಬಾಪೂಜಿಯ ಮಾತನ್ನ ಕೇಳಿ, ಅರ್ಥ ಮಾಡಿಕೊಳ್ಳಬಯಸುತ್ತಿರಲಿಲ್ಲ, ಅವರಿಗೆ ಗಾಂಧೀಜಿ ತೊಂದರೆ ಕೊಡುವವರಾಗಿದ್ದರು.

ಇವತ್ತು ಓದುಗರಿಗೆ ಆಶ್ಚರ್ಯವೆನಿಸಬಹುದು, ಸ್ವಾತಂತ್ರ್ಯ ಸಿಕ್ಕ ಆ ಆರಂಭ ಕಾಲದಲ್ಲಿ ಸರಕಾರದ ಅಧಿಕಾರಿಗಳು ಮಂತ್ರಿಗಳ ಮೇಲೆ ಹೇಗೆ ಸಮ್ಮೋಹನ ಹಾಕಿದ್ದರು ಅಂದರೆ ಬಾಪೂಜಿ ತೀರಿಕೊಂಡ ನಂತರ ವಿನಿಯಂತ್ರಣದ ಆ ಸುಖ

ನೀಡಿದ ಪ್ರಯೋಗವನ್ನ ಹಿಂತೆಗೆದುಕೊಂಡು ಅಕ್ಟೋಬರ್ ೧೯೪೮ರಲ್ಲಿ ಖಾರೀಫ್‌ನ ಫಸಲು ಬರುವುದಕ್ಕೆ ಮೊದಲೇ ರಾಜೇಂದ್ರಬಾಬು ಅವರ ಗುಂಪು ಪುನಃ ಪಡಿತರ ಪದ್ಧತಿಯನ್ನು ಜಾರಿಗೆ ತಂದುಬಿಟ್ಟಿತು. ಸಾಮಾನ್ಯವಾಗಿ ಫಸಲು ಹೊಸದಾಗಿ ಬಂದಾಗ ಯಾವಾಗಲೂ ಮಾರ್ಕೆಟ್ ಬೆಲೆಗಳು ಕಡಿಮೆಯಾಗುತ್ತವೆ, ಅದರಿಂದ ಅಕ್ಟೋಬರ್ ೧೯೪೮ರಲ್ಲಿ ಹಾಕಿದ ನಿಯಂತ್ರಣ ತೀರ ತರ್ಕರಹಿತವಾಗಿತ್ತು, ಅಪಾಯಕಾರಿ ಹೆಜ್ಜೆಯಾಗಿತ್ತು. ನಿಯಂತ್ರಣ, ಪಡಿತರ ಇಲ್ಲದಿದ್ದಾಗ ಬಹುಶಃ ಭ್ರಷ್ಟಾಚಾರದ ಸಂಪಾದನೆ ಕಡಿಮೆಯಾಗಿರಬೇಕು. ಅಧಿಕಾರಿಗಳ ದರ್ಬಾರು, ಆಡಂಬರ ಮತ್ತು ಅಧಿಕಾರಕ್ಕೆ ಕೊರತೆ ಉಂಟಾಗಿರಬೇಕು. ಆದ್ದರಿಂದ ರಾಷ್ಟ್ರಪಿತ ತೀರಿಕೊಂಡು ಎಂಟೇ ತಿಂಗಳ ಅಂತರದಲ್ಲಿ ಆ ಜನ ಪುನಃ ನಿಯಂತ್ರಣದ ದುರಾಚಾರದ ಕಾನೂನನ್ನು ಜಾರಿಗೆ ತಂದರು. ಪಾಪ, ಮಂತ್ರಿಗಳು ! ಪಾಪದ ಜನ ! ಸ್ವಾತಂತ್ರ್ಯದ ಹೊಸ ಸರಕಾರದಲ್ಲೂ ಅಧಿಕಾರಿಗಳು ರಾರಾಜಿಸುತ್ತಲೇ ಇದ್ದರು. ಆ ಚತುರ ನೌಕರಶಾಹಿಗಳು ಮಂತ್ರಿಗಳ ಮೇಲ್ನೋಟದ ಆದರ್ಶ, ಪ್ರಜಾಹಿತದ ಪ್ರಾಮಾಣಿಕತೆಯ ಲಘುತನವನ್ನು ಅವರ ಲೋಭಿ ಸ್ವಾರ್ಥಸಾಧನೆ ಕಂಡುಕೊಂಡಿತ್ತು. ಮಂತ್ರಿ ಮಹಾಶಯರು, ಅವರ ಪರಿವಾರ ಇವೆರಡನ್ನೂ ತೃಪ್ತಿಪಡಿಸಿದ ನಂತರ ನೌಕರಶಾಹಿ ಸ್ವೇಚ್ಛಾಚಾರ ಮುಕ್ತವಾಗಿ ಮಾಡಬಹುದಾಗಿತ್ತು. ಹಾಗೆ ಮಾಡುವುದರಿಂದ ಅವರಿಗೂ ಒಂದು ವಿಕೃತ ಸಂತೋಷ ಸಿಗುತ್ತಿತ್ತಲ್ಲ. ಇಂಗ್ಲಿಷ್ ಸರಕಾರದ ಹಳೆಯ ಐ.ಸಿ.ಎಸ್. ಅಧಿಕಾರಿಗಳು ಸತ್ಯಾಗ್ರಹಿಗಳು ದುರಾಸೆಯನ್ನ ಪ್ರೋತ್ಸಾಹಿಸಿ, ಅವರ ಪುಣ್ಯವನ್ನು ಕ್ಷೀಣಗೊಳಿಸಿ, ಅವರನ್ನು ಕರ್ತವ್ಯಬಾಹಿರರನ್ನಾಗಿ ಮಾಡಿ ಆನಂದಪಡುತ್ತಿದ್ದರು. ಈ ದೇಶದ ಜನ ಮತ್ತು ಮಂತ್ರಿಗಳನ್ನ ಮೂರ್ಖರನ್ನಾಗಿಸಿ ಈ ಅಧಿಕಾರಿಗಳು ಬಹಳ ಆನಂದಪಡುತ್ತಿದ್ದರು.

ದೇಶದ ಜನರ ಶಾರೀರಿಕ, ಆರ್ಥಿಕ ಹಾಗೂ ನೈತಿಕ ಶಕ್ತಿಯನ್ನ ದೇಶದ ಸಮಸ್ತ ಒಳಿತಿಗಾಗಿ ಉಪಯೋಗಿಸುವುದನ್ನ ಪ್ರಜಾತಂತ್ರವೆನ್ನುತ್ತಾರೆ. ಸರಕಾರವೇ ಎಲ್ಲಾ ಕೆಲಸಗಳನ್ನೂ ಮಾಡತೊಡಗಿದರೆ ಜನ ಸ್ವತಃ ಏನೂ ಕೆಲಸ ಮಾಡುವುದಿಲ್ಲ, ಅಥವಾ ಸರಕಾರ ಅವರನ್ನ ಕೆಲಸ ಮಾಡಲು ಬಿಡುವುದಿಲ್ಲ ಅಂದಾಗ ಪ್ರಜಾಪ್ರಭುತ್ವ ಪ್ರಾಣಹೀನವಾಗುತ್ತೆ. ಮಗುವಿನ ಸಂಪೂರ್ಣ ವಿಕಾಸವಾಗಬೇಕೆಂದರೆ, ಅದು ತನ್ನ ಕೆಲಸ ಸ್ವತಃ ಮಾಡುವಂತಾಗಬೇಕು. ಅಪ್ಪ–ಅಮ್ಮ ಆ ಮಗು ಸ್ವಾವಲಂಬಿ ಆಗಲು ಸಹಾಯ ಮಾಡಬೇಕು. ಅದೇ ರೀತಿ ಪ್ರಜಾಪ್ರಭುತ್ವದಲ್ಲಿ ಜನ ಸ್ವತಃ ಲೋಕಸಂಗ್ರಹದ ಕಾರ್ಯಗಳನ್ನು ಕೈಗೊಳ್ಳುವವರೆಗೂ ಜನರು ಪ್ರಜ್ಞಾವಂತ ನಾಗರಿಕರಾಗುವದಿಲ್ಲ, ಅಲ್ಲದೆ ಸರಕಾರದ ಕೃಪೆ ಯಾಚಿಸುವ ಗುಲಾಮರಾಗಿರುತ್ತಾರೆ. ತಪ್ಪುಗಳಾಗುತ್ತವೆ, ಅದರಿಂದಲೂ ನಮಗೆ ಶಿಕ್ಷಣ ಸಿಗುತ್ತದೆ, ತಪ್ಪುಗಳನ್ನು ಸರಿಪಡಿಸಿಕೊಂಡು ಮುಂದುವರಿಯಲು ಅನುವಾಗುತ್ತದೆ. ಸರಕಾರವೇ ಸಮಾಜಸೇವೆಯ ಕೆಲಸಗಳನ್ನೆಲ್ಲಾ

ಮಾಡುತ್ತಾ ಇದ್ದರೆ ಸಮಾಜದ ಸತ್ವ ಒಣಗಿ ಹೋಗುತ್ತೆ, ಆಗ ಆ ಸಮಾಜ ಪ್ರಯೋಜನ ಇಲ್ಲದ್ದಾಗುತ್ತೆ. ಪ್ರಜಾತಂತ್ರವನ್ನ ಪುಸ್ತಕಗಳಿಂದ ಕಲಿಯುವುದಕ್ಕಾಗುವುದಿಲ್ಲ. ಕಾನೂನುನಿಂದಲೂ ಅದನ್ನ ರಚಿಸಲಿಕ್ಕಾಗುವುದಿಲ್ಲ. ಪ್ರಜಾತಂತ್ರ ಒಂದು ಜೀವಂತವಾದ ಸಿದ್ಧಾಂತ, ಅದನ್ನ ಎಲ್ಲಾ ತೊಂದರೆಗಳ ನಡುವೆ ಧೈರ್ಯದಿಂದ ಆಚರಿಸಿದಾಗ ಮಾತ್ರ ಅದು ಪರಿಪುಷ್ಟವಾಗುತ್ತೆ.

ಭ್ರಷ್ಟಾಚಾರವನ್ನು ವಿರೋಧಿಸಲು ಸರ್ಕಾರ ಮತ್ತು ಜನರಲ್ಲಿ ಜಾಗೃತಿ ಮೂಡಿಸಿ ಬಾಪೂಜಿ ವ್ಯಾಪಾರಿಗಳು ಹಾಗೂ ಉದ್ಯೋಗಪತಿಗಳಿಗೂ ಅವರ ಕರ್ತವ್ಯವನ್ನು ತಿಳಿಸಿ ಹೇಳಲು ಪ್ರಯತ್ನಿಸಿದರು. ಡಿಸೆಂಬರ್ ೨೮ರಂದು ದೆಹಲಿಯ ತಿಲಕ್ ಲೈಬ್ರರಿಯ ಸಭಾಂಗಣದಲ್ಲಿ ವ್ಯಾಪಾರಿಗಳ ಸಭೆಯಲ್ಲಿ ಬಾಪೂಜಿ ಅವರಿಗೂ ಸಮಾಜೋತ್ಥಾನಕ್ಕೆ ಸಹಾಯ ಮಾಡಿ, ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಭ್ರಷ್ಟಾಚಾರ ಅಡ್ಡಿಬರದಂತೆ ಅದನ್ನು ತಡೆಯಲು ತಿಳಿಸಿಹೇಳಿದರು. ಬಾಪೂಜಿ ಬಹುಶಃ ಹುಟ್ಟಿನಿಂದಲೇ ಪ್ರಜಾಸತ್ತೆಯ ಸಮರ್ಥಕರಾಗಿದ್ದಿರಬೇಕು, ದೇವರು ಮತ್ತವನ ಅಪಾರ ಕರುಣೆ ಮತ್ತು ಹೃದಯದಲ್ಲಿದ್ದ ಪರಬ್ರಹ್ಮನ ಬಗ್ಗೆ ಅವರಿಗೆ ಅಪಾರ ಗೌರವವಿತ್ತು. ಆದ್ದರಿಂದ ಪ್ರಜಾಸತ್ತೆ ಒಂದೇ ಬಾಪೂಜಿಗಿದ್ದ ಪುಷ್ಟಿಮಾರ್ಗ. ಅಬ್ರಾಹಂ ಲಿಂಕನ್ ವಿವರಿಸಿದ್ದ ಪ್ರಜಾತಂತ್ರದ ಉಕ್ತಿ–ವ್ಯಾಖ್ಯಾನ ಪ್ರಸಿದ್ಧವಾಗಿದೆ, ಅದರಂತೆ ಜನರ ಸರಕಾರ, ಜನರಿಗಾಗಿ, ಜನರಿಂದ ಸಂಚಾಲಿತವಾಗುತ್ತದೆ. ಈ ಸಿದ್ಧಾಂತ ಶುದ್ಧ ಅಹಿಂಸೆಯನ್ನಾಧರಿಸಿದೆ, ಹಾಗಿಲ್ಲದಿದ್ದರೆ ಅದನ್ನ ಪಾಲಿಸಲಾಗುವುದೇ ಇಲ್ಲ. ಇವತ್ತಿನ ಪ್ರಜಾಸತ್ತೆ ಒಂದು ತೆರನಾದ ಸರ್ವಾಧಿಕಾರತ್ವವಾಗಿದೆ, ಭಾರತದ ಸತ್ಯಾಗ್ರಹ ವಾಸ್ತವವಾಗಿ ಪ್ರಜಾತಂತ್ರದ ಬೀಜವಾಗಿತ್ತು. ಪ್ರತಿಯೊಬ್ಬ ಮನುಷ್ಯನೂ ಜಾಗೃತನಾಗಿದ್ದುಕೊಂಡು ತನ್ನ ಜವಾಬ್ದಾರಿಯನ್ನ ಪೂರ್ತಿ ಪರಿಪಾಲಿಸಿದಾಗ ಮಾತ್ರ ಅಂತಹ ಪ್ರಜಾತಂತ್ರ ಸಿಗಲು ಸಾಧ್ಯ. ಇದು ಬಹುಸಂಖ್ಯಾತರಿಗಷ್ಟೆ ಸೀಮಿತವಾದ ಪ್ರಜಾತಂತ್ರವಲ್ಲ, ಇದರಲ್ಲಿ ಅಂತ್ಯೋದಯದ ಆದರ್ಶವಿದೆ. ಇದರಲ್ಲಿ ತೀರ ಕನಿಷ್ಠನಾದವನು, ಅತಿ ದೊಡ್ಡವನಾದವನೊಂದಿಗೆ ಸಮವಾಗಿ ಸ್ವಾತಂತ್ರ್ಯವನ್ನು ಭೋಗಿಸಬಲ್ಲ. ಇಂತಹ ಪ್ರಜಾಸತ್ತೆ ಪ್ರತಿಯೊಬ್ಬ ನಾಗರಿಕನ ಸರಳ ತಿಳುವಳಿಕೆಯ ಮೇಲೆ ಅವಲಂಬಿಸಿರುತ್ತದೆ. ಅಲ್ಲಿ ಯಾರನ್ನೂ ಶೋಷಿಸುವುದಕ್ಕಾಗಲಿ, ಅನೀತಿಗಾಗಲೀ ಅವಕಾಶವಿರುವುದಿಲ್ಲ. ಪ್ರತಿಯೊಬ್ಬ ನಾಗರಿಕನೂ ಅಲ್ಲಿ ತನ್ನ ಕರ್ತವ್ಯವನ್ನು ಪಾಲಿಸುತ್ತಿರುತ್ತಾನೆ.

ಈ ತೆರನಾದ ಪ್ರಜಾತಂತ್ರ ಯಾವುದೇ ಶಾಲೆ, ಕಾಲೇಜು, ಗ್ರಂಥಗಳಲ್ಲಿ ಸಿಗುವುದಿಲ್ಲ. ಇದಕ್ಕೆ ರಾಜಕೀಯದಿಂದ ದೂರಸರಿದು ರಚನಾತ್ಮಕ ಕಾರ್ಯಕ್ರಮದಲ್ಲಿ ತೊಡಗಬೇಕಾಗುತ್ತದೆ. ಅಲ್ಲಿ ಪ್ರತಿಯೊಬ್ಬನಿಗೂ ಬೆಳೆಯಲು ಸಾಕಷ್ಟು ಅವಕಾಶವಿರುತ್ತದೆ. ಇಂತಹ ರಚನಾತ್ಮಕ ಕಾರ್ಯಕ್ರಮಗಳು ರಾಜಕೀಯಕ್ಕಾಗಿ ನಡೆಯುತ್ತವಾದರೂ,

ರಾಜಕೀಯದಲ್ಲಿರುವುದಿಲ್ಲ. ಅಂತಹ ಸಂಸ್ಥೆಯ ಸ್ವರೂಪ ಮತ್ತು ಉದ್ದೇಶ ಪ್ರಜೆಗಳು ತಮ್ಮ ಅಗತ್ಯವನ್ನಾಧರಿಸಿ ಹೆಚ್ಚು-ಕಡಿಮೆ ಮಾಡಿಕೊಳ್ಳುತ್ತಾರೆ, ಆಗ ಅಂತಹ ಸಂಸ್ಥೆಗಳು ಸ್ವತಃ ಲೋಕೋಪಯೋಗಿಯಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಲೋಕಾಭಿಪ್ರಾಯವನ್ನು ಸಿದ್ಧಪಡಿಸುತ್ತವೆ, ಆಗ ಯಾವ ಸರಕಾರ ರಚಿತವಾದರೂ ಅದು ಸ್ವತಃ ನ್ಯಾಯ-ನೀತಿಯನ್ನನುಸರಿಸಿ ನಡೆಯುತ್ತದೆ. ಈ ದೃಷ್ಟಿಯಿಂದಲೇ ಬಾಪೂಜಿ ಕಾಂಗ್ರೆಸ್‌ಗೆ ಹೊಸದೊಂದು ಸಂವಿಧಾನವನ್ನು ರಚಿಸಿದ್ದರು, ಅದಕ್ಕವರು 'ಲೋಕಸೇವಾ ಸಂಘ'ವೆಂದು ಹೆಸರಿಸಿದ್ದರು. ಅಂತಹ ಸಂಸ್ಥೆ ಎಲ್ಲಕ್ಕೂ ಕೆಳಹಂತದ ಪಂಚಾಯತ್ ಪ್ರತಿನಿಧಿಯಿಂದ ಆರಂಭಿಸಿ ಮೇಲೆ ರಾಷ್ಟ್ರೀಯ ಹಂತದ ಅಧ್ಯಕ್ಷರವರೆಗೂ ಸಂಘಟಿತವಾಗಿ ಸಮಾಜ ಸೇವೆಯ ಕೆಲಸ ಮಾಡುತ್ತದೆ. ಚುನಾವಣೆಯ ರಾಜಕೀಯಕ್ಕೆ ಬರಲಿಚ್ಛಿಸುವವರು ಸಂಸ್ಥೆಗೆ ರಾಜೀನಾಮೆ ಸಲ್ಲಿಸಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ ಮತ್ತು ಲೋಕಸೇವಾ ಸಂಘ ಅವರಿಗೆ ಸಮರ್ಥನೆ ನೀಡುತ್ತದೆ. ಅಂತಹ ಸಾಂಸದರು ಸಂಸ್ಥೆಯ ನೀತಿ-ಉದ್ದೇಶ ಹಾಳು ಮಾಡಿದರೆ, ಅವರಿಂದ ದೂರವಾದರೆ ಲೋಕಸೇವಾ ಸಂಘದ ಸಹಯೋಗ ಸಮರ್ಥನೆ ಸ್ವತಃ ಕೊನೆಗೊಳ್ಳುತ್ತದೆ. ಆಗ ಅಂತಹ ಮುಖಂಡರಿಗೆ ತಂತ್ರವನ್ನು ದೂಷಿಸಲು ಹೆಚ್ಚು ಅವಕಾಶ ಸಿಗುವುದಿಲ್ಲ. ಲೋಕಸೇವಾ ಸಂಘ ಮುಖಂಡರನ್ನು ಸಮರ್ಥಿಸಬಹುದು ಆದರೆ ಸ್ವತಃ ಚುನಾವಣೆಗೆ ಹೋಗುವುದಿಲ್ಲ. ಹೀಗಾಗಿ ಅದರ ಅಧಿಕಾರ ವೈಯಕ್ತಿಕ ಇಚ್ಛೆಗಳಿಂದ ಹೊರತಾಗಿರುತ್ತದೆ. ತಂತ್ರ ವ್ಯಕ್ತಿಯನ್ನು ನುಂಗಿ ಬಿಡುತ್ತದೆ, ಅದರಿಂದ ಸರಕಾರಿ ತಂತ್ರವನ್ನು ಸುಧಾರಿಸುವುದಕ್ಕೆ ಬದಲು ಸಂಸ್ಥೆಯ ಸದಸ್ಯರು ತಮ್ಮದೇ ಆದ ಸ್ವತಂತ್ರ ರಚನಾತ್ಮಕ ಕಾರ್ಯಗಳನ್ನು ಮಾಡುತ್ತಿದ್ದರೆ ಅದರಲ್ಲಿ ಪೂರ್ತಿ ಸಂತೋಷ, ಸಫಲತೆ ಮತ್ತು ಗೌರವ ಸಿಗುತ್ತದೆ ಎಂದು ಬಾಪೂಜಿ ಹೇಳುತ್ತಿದ್ದರು. ಸಮಾಜ ಅಂತಹ ಕಾರ್ಯಕರ್ತರನ್ನ ಕಣ್ಣಲ್ಲಿಟ್ಟುಕೊಂಡಿರುತ್ತೆ, ಯಾರಿಗೆ ಮನಸ್ಸು ಬಂದಾಗ, ವ್ಯಕ್ತಿ ತ್ಯಾಗಪತ್ರ ನೀಡಿ ರಾಜಕೀಯಕ್ಕೆ ಹೊರಟುಹೋಗಬಹುದು, ಹೀಗೆ ಲೋಕಸೇವೆಯ ಆದರ್ಶದಿಂದ ಉರುಳದಂತೆ ಸಂಸ್ಥೆ ಉಳಿದುಕೊಳ್ಳುತ್ತದೆ, ಜೊತೆಗೆ ರಾಜಕೀಯದ ಮೇಲೂ ಒಂದು ನೈತಿಕವಾದ ಪ್ರಭಾವ ಬೀರಬಲ್ಲುದು. ರಚನಾತ್ಮಕ ಕಾರ್ಯ ಮತ್ತು ರಾಜಕೀಯದ ನಡುವೆ ಈ ರೀತಿಯ ಅಂತರವನ್ನಿಡದೆ ಹೋದರೆ ಇವತ್ತಿನ ಹಾಗೆ ಪೂರ್ತಿ ಸಂಸ್ಥೆಯೇ ಅಧಿಕಾರಲೋಲುಪವಾಗಿ ತಂತ್ರದ ಮೇಲೆ ಆವರಿಸಿಕೊಂಡು ಬಿಡುತ್ತೆ, ಆಗ ಪ್ರಜಾತಂತ್ರವೂ ಉಳಿಯಲ್ಲ, ಆರ್ಥಿಕ, ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯವೂ ಉಳಿಯಲ್ಲ. ಶೋಷಣೆ, ಭ್ರಷ್ಟಾಚಾರ, ಅರಾಜಕತೆ, ಕಾಳಸಂತೆ, ಸುಳ್ಳು, ಮೋಸ, ವ್ಯಭಿಚಾರ ಉಳಿದುಕೊಳ್ಳುತ್ತೆ. ಇವತ್ತಿನ ವಿಷವೃಕ್ಷವನ್ನು ಕಡಿಯಬೇಕಾದರೆ ದೇವರು ಪುನಃ ಅವತಾರ ಪಡೆಯಬೇಕು ಅಂತ ಅನಿಸುತ್ತದೆ. ಆದ್ದರಿಂದಲೇ ಭಗವಾನ್

ಶ್ರೀಕೃಷ್ಣ ಗೀತೆಯ ನಾಲ್ಕನೆ ಅಧ್ಯಾಯದ ಏಳು ಮತ್ತು ಎಂಟನೇ ಶ್ಲೋಕದಲ್ಲಿ ಅರ್ಜುನನಿಂದ ಹೇಳಿಸುತ್ತಾನೆ–

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।**

**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥೭॥**

**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।**

**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥೮॥**

ಆದರೆ ದೇವರು ಪುನಃ ಪುನಃ ಹೀಗೆ ಅವತಾರ ಪಡೆದು ಉದ್ಧಾರ ಮಾಡ್ತಾ ಇರಲ್ಲವೆಂದು ನನಗನಿಸುತ್ತದೆ. ಆದ್ದರಿಂದ ಭಾರತವರ್ಷದ ನಾಗರಿಕರಾದ ನಾವು ನಮಗೆ ನಾವೇ ಸಹಾಯ ಮಾಡಿಕೊಳ್ಳಬೇಕು, ಅದರಿಂದಲೇ ಯಾರೋ ಹೇಳಿರುವುದು –

**'ಖುದ್ ಕೋಹೀ ಕರ್ ಬುಲಂದ್ ಇತನಾ**

**ಕಿ ಹರ್ ತದಬೀರ್ ಸೇ ಪಹಲೇ**

**ಖುದಾ ಬಂದೇ ಸೇ ಯಹ್ ಪೂಛೇ**

**ಬತಾ ತೇರಿ ರಜಾ ಕ್ಯಾ ಹೈ ?'**

* * * *

# ೩೫. ಜೂನಾಗಢ

೧೮೫೭ರ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತವರ್ಷದ ರಾಜರು ಪರದೇಶಿ ಕಂಪನಿ ಸರಕಾರದ ಅತ್ಯಾಚಾರಗಳನ್ನ ವಿರೋಧಿಸಿ ತಲೆ ಎತ್ತಿ ನಿಂತಿದ್ದು, ತಮ್ಮ ಮಾತೃಭೂಮಿಗಾಗಿ ಸಾಯುವುದಕ್ಕೂ ಸಿದ್ಧವಾಗಿದ್ದುದು ವಿಶೇಷ ಸಂಗತಿಯಾಗಿತ್ತು. ಹಿಂದೂಸ್ತಾನದ ರಾಜರು ಹೀಗೆ ಕೊನೆಯ ಬಾರಿ ತಮ್ಮ ಶೌರ್ಯವನ್ನ ಪ್ರದರ್ಶಿಸಿದ್ದರು, ಅದಾದನಂತರ ಕೂಡ ಈ ರಾಜವಂಶದ ಜನ ಇಂಗ್ಲಿಷ್ ಚಕ್ರಾಧಿಪತ್ಯದ ಕೈಗೊಂಬೆಗಳಾದರು. ಈ ರಾಜರ ಕೈಲಿ ಅಧಿಕಾರ ಉಳಿದಿರಲಿಲ್ಲ, ಶಕ್ತಿ ಇರಲಿಲ್ಲ, ಒಳ್ಳೆಯ ಜರತಾರಿ ಬಟ್ಟೆ, ಸುಂದರವಾದ ಆಭೂಷಣಗಳನ್ನ ಧರಿಸಿಕೊಂಡು ಸಜ್ಜಾಗಿ ವಾಯಿಸ್‌ರಾಯ್ ಬಳಿ ಹೋಗಿ ಸಲಾಂ ಮಾಡುವುದೊಂದನ್ನು ಬಿಟ್ಟರೆ ಅವರಿಗೆ ಬೇರೆ ಯಾವ ಕೆಲಸವೂ ಇರಲಿಲ್ಲ. ಒಂದು ಕಡೆ ಆ ಜನ ಬ್ರಿಟಿಷ್ ಸರಕಾರಕ್ಕೆ ಸಲಾಂ ಮಾಡುತ್ತಿದ್ದರು, ಆಕಡೆ ತಮ್ಮ ಜನರನ್ನ ಶೋಷಿಸುತ್ತಿದ್ದರು, ಅತ್ಯಾಚಾರ ಎಸಗುತ್ತಿದ್ದರು. ಈ ರಾಜರಿಗೆ ದೇಶದ ಜನರ ರಾಷ್ಟ್ರೀಯತೆ ಕುರಿತು ಸಹಾನುಭೂತಿ ಇರಲಿಲ್ಲ, ಇಂಗ್ಲಿಷ್‌ನವರಿಗೆ ಈ ದೇಶೀ ರಾಜರ ಹಳೆಯ ಕಾಲದ ಜಾಗೀರದಾರಿ ಬಹಳ ಇಷ್ಟವಾಗುತ್ತಿತ್ತು. ಸ್ವಾತಂತ್ರ್ಯದ ಅಲೆಗಳ ಮುಂದೆ ಸಾಮ್ರಾಜ್ಯವಾದ – ಸಾಮಂತವಾದ ಸ್ಥಿರವಾಗಿರಲಿ, ತಾವು ಪ್ರಜೆಗಳನ್ನ ಶೋಷಿಸುವಂತಾಗಲಿ ಅನ್ನುವ ಕಾರಣಕ್ಕಾಗಿ ಈ ರಾಜರು ಅಂದಿನ ಸರಕಾರಕ್ಕೆ ಸಹಾಯಕರಾಗಿದ್ದರು.

೧೫ ಆಗಸ್ಟ್ ೧೯೪೭ರ ಸ್ವಾತಂತ್ರ್ಯ ಸಿಗಲು ಮೊದಲು ದೇಶದ ಶೇಕಡಾ ೨೫ರಷ್ಟು ಅಂದರೆ ಹತ್ತು ಕೋಟಿ ಜನರು ಇಂತಹ ದೇಶೀ ರಾಜ್ಯಗಳ ಅಧೀನದಲ್ಲಿದ್ದರು, ಅಲ್ಲಿ ಹಿಂದುಳಿದಿರುವುದು, ಬಡತನ, ಗುಲಾಮಗಿರಿ ಇದೆಲ್ಲಾ ಬಹಳ ಹೆಚ್ಚಾಗಿತ್ತು. ಕಾನೂನಿನ ಅಡಿಯಲ್ಲಿ ಇಂಗ್ಲಿಷರು ಈ ರಾಜ್ಯಗಳಿಗೆ ಪೂರ್ತಿ ಸ್ವಾತಂತ್ರ್ಯ ಕೊಡಲು ಯೋಜನೆ ಹಾಕುತ್ತಾ ಇದ್ದರು, ಅಂತಹ ನೀತಿ ಜಾರಿಗೆ ಬಂದಿದ್ದಿದ್ದರೆ ೧೯೪೭ರಲ್ಲಿ ದೇಶ ಎರಡು ತುಂಡಾಗುವುದಷ್ಟೇ ಅಲ್ಲದೆ ಹತ್ತಿಪ್ಪತ್ತು ತುಂಡುಗಳಾಗುತ್ತಿತ್ತು. ರಾಜರಿಗೂ ಇಂಗ್ಲಿಷ್‌ನವರು ಆಧಿಪತ್ಯ ನಡೆಸುವುದಕ್ಕೆ ಏನೂ ವಿರೋಧ ಇರಲಿಲ್ಲ, ಆದರೆ ಪ್ರಜಾರಾಜ್ಯವನ್ನ ಒಪ್ಪಿಕೊಳ್ಳುವುದಕ್ಕವರು ತಯಾರಾಗಿರಲಿಲ್ಲ. ಭಾಷಣ ಮಾಡಕೂಡದು, ಮೆರವಣಿಗೆ ಹೊರಡಿಸಕೂಡದು ಎಂದು ಆಜ್ಞೆ ಹೊರಡಿಸಿದ್ದ. ಇದೇ ರೀತಿ

ಕಾಶ್ಮೀರದ ಮಹಾರಾಜ ಕೂಡ ನ್ಯಾಷನಲ್ ಕಾನ್‌ಫರೆನ್ಸ್‌ನ ಮುಖಂಡರನ್ನ ಜೈಲಿಗೆ ಕಳುಹಿಸಿ ಸಾರ್ವಜನಿಕ ಸಭೆ – ಸಮಿತಿಗಳನ್ನ ನಡೆಸಕೂಡದೆಂದು ಆಜ್ಞೆ ವಿಧಿಸಿದ್ದ. ಇಂಗ್ಲಿಷಿನವರು ಹೊರಟುಹೋದ ಮೇಲೆ ಅವರು ಸ್ವತಂತ್ರವಾಗಿ ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿ ನೇರವಾಗಿ ಸದಸ್ಯರಾಗಬೇಕೆಂದು ಅವರು ಯೋಜನೆ ಹಾಕಿಕೊಂಡಿದ್ದರು. ಬ್ರಿಟಿಷ್ ಸರಕಾರ ಕೂಡ ಹೆಚ್ಚು–ಕಡಿಮೆ ಹೀಗೆಯೇ ಯೋಚಿಸಿತ್ತು.

ಪ್ರಪಂಚದ ಇತಿಹಾಸದಲ್ಲಿ ಇಂತಹ ಪರಿಸ್ಥಿತಿಗಳ ಅನೇಕ ಉದಾಹರಣೆಗಳಿವೆ. ಆದರೆ ಅಲ್ಲಿ ಸ್ವಾತಂತ್ರ್ಯ ಮತ್ತು ಏಕತೆಯ ಅಲೆ ಇಂತಹ ಕೆಲಸಕ್ಕೆ ಬಾರದ ಅವಶೇಷಗಳನ್ನ ತನ್ನ ಪ್ರವಾಹದಲ್ಲಿ ಹರಿಸಿಕೊಂಡುಹೋಗಿತ್ತು.

ಫ್ರಾನ್ಸ್ ಕ್ರಾಂತಿಯಾದಾಗ ಜಾಗೀರದಾರರನ್ನೆಲ್ಲಾ ಕೊಂದುಬಿಟ್ಟಿದ್ದರು. ಕೆಲವರು ವಿದೇಶಗಳಿಗೆ ಓಡಿ ಹೋಗಿದ್ದರು. ಅದೇ ರೀತಿ ಬಿಸ್ಮಾರ್ಕ್‌ಗೆ ಮುಂಚೆ ಜರ್ಮನಿಯಲ್ಲಿ ಇಂಥದೇ ಪರಿಸ್ಥಿತಿ ಇತ್ತು. ಮೆಜ಼ಿನೀನ್‌ನ ಕಾಲದಲ್ಲಿ ಇಟಲಿಯಲ್ಲಿ ಈ ಸ್ಥಿತಿ ಇತ್ತು. ನಮ್ಮ ದೇಶದಲ್ಲಿ ಅಹಿಂಸಾತ್ಮಕ ಸತ್ಯಾಗ್ರಹ ನಡೆಸಿ ಸ್ವಾತಂತ್ರ್ಯ ಬರುತ್ತಿತ್ತು, ಆದ್ದರಿಂದ ಇಲ್ಲಿಯವರೆವಿಗೂ ಈ ರಾಜರುಗಳು ತನ್ನ ಜಬ್ರು ಮತ್ತೆ ಇಂಗ್ಲಿಷ್ ಸರಕಾರದ ಅಪಾರವಾದ ತಾಕತ್ತಿನ ಬಿಸಿಯಲ್ಲಿ ನಿಶ್ಚಿಂತೆಯಿಂದ ಓಲಾಡುತ್ತಿದ್ದರು. ಈ ರಾಜರಿಗೆ ಅಹಿಂಸಾತ್ಮಕ ಸತ್ಯಾಗ್ರಹದ ಬಗ್ಗೆ ಒಂದು ತರಹ ವಿಚಿತ್ರವಾದ ಉದಾಸೀನ ಭಾವ ಇತ್ತು, ಬ್ರಿಟಿಷ್ ಚಕ್ರಾಧಿಪತ್ಯದ ನೆರಳಲ್ಲಿ ತಾವು ನಿಶ್ಚಿಂತೆಯಿಂದ ಇರಬಹುದೆಂಬ ನಂಬಿಕೆ ಅವರಿಗಿತ್ತು.

೧೯೪೬ರಲ್ಲಿ 'ಹರಿಜನ್'ನಲ್ಲಿ ಬಾಪೂಜಿ ಹೀಗೆ ಬರೆದಿದ್ದರು: 'ಸ್ವತಂತ್ರ ಭಾರತದಲ್ಲಿ ಜಾಗೀರದಾರಿ ಪದ್ಧತಿಗೆ ಯಾವುದೇ ಜಾಗವಿಲ್ಲ. ಆ ರಾಜರು ಬೇಕಾದರೆ ಲಂಡನ್, ಪ್ಯಾರಿಸ್‌ನಲ್ಲಿ ಭೋಗಿಸುತ್ತಾ ಇರಲಿ. ಆದರೆ ಅವರ ಆಶ್ರಯದಲ್ಲಿ ವಾಸಿಸುವ ಪ್ರಜೆಗಳನ್ನು ಗುಲಾಮರನ್ನಾಗಿ ಮಾಡಿಟ್ಟುಕೊಳ್ಳುವ ಹಕ್ಕು ಅವರಿಗಿರುವುದಿಲ್ಲ, ಪ್ರಜೆಗಳ ಸಾರ್ವಭೌಮತ್ವವನ್ನ ಅವರು ಒಪ್ಪಿಕೊಳ್ಳಲೇಬೇಕಾಗುತ್ತದೆ'. ಆಗ ಭೋಪಾಲದ ನವಾಬರು 'ರಾಜರುಗಳ ರಾಜಕೀಯ ಪರಿಷತ್ತಿ'ನ ಅಧ್ಯಕ್ಷರಾಗಿದ್ದರು. ದೇಶ ವಿಭಜಿತವಾದಾಗ ಅವ್ಯವಸ್ಥೆಯಾಗುತ್ತೆ, ಅದರಲ್ಲಿ ೪೫೦ ದೇಶಿ ರಾಜ್ಯಗಳು ತಮ್ಮ ಶಕ್ತಿಯನ್ನ ಬಲಪಡಿಸಿಕೊಳ್ಳಬಹುದೆಂದು ಭೋಪಾಲದ ನವಾಬ ಯೋಜನೆ ಹಾಕಿಕೊಂಡಿದ್ದ. ಸರದಾರ ಪಟೇಲರ ಜಾಗೃತ ರಾಜಕೀಯದಿಂದಾಗಿ ಆ ತರಹೆಯ ಕಷ್ಟಕರವಾದ ಪರಿಸ್ಥಿತಿ ಎದುರಾಗಲಿಲ್ಲ, ಬಾಪೂಜಿ ಜೊತೆ ಮಾತನಾಡಿ ಲಾರ್ಡ್ ಮೌಂಟ್‌ಬ್ಯಾಟನ್ನನು ಕೂಡ ಹೀಗೆ ದೇಶವನ್ನು ಒಡೆಯುವುದು ಸರಿಯಲ್ಲವೆಂಬ ಮಾತನ್ನು ಒಪ್ಪಿಕೊಂಡಿದ್ದರು. ಅದರಿಂದ ಜೂನ್ ೧೯೪೭ರಲ್ಲಿ ವಿಭಜನೆಯನ್ನು ಘೋಷಿಸಿದಾಗ ಲಾರ್ಡ್ ಮೌಂಟ್‌ಬ್ಯಾಟನ್ನರು ಯಾವ ರಾಜನನ್ನೂ ಬ್ರಿಟಿಷ್ ಕಾಮನ್‌ವೆಲ್ತ್‌ನ ಸದಸ್ಯನನ್ನಾಗಿ ಮಾಡಲಾಗುವುದಿಲ್ಲವೆಂದೂ ಸ್ಪಷ್ಟಪಡಿಸಿದ್ದರು.

ರಾಜರಿಗೆ ಜುಲೈವರೆವಿಗೂ ಅವಕಾಶ ಕೊಟ್ಟು ಅಷ್ಟರಲ್ಲಿ ಅವರು ಭಾರತಕ್ಕೆ ಸೇರಿಕೊಳ್ಳುವರೋ, ಪಾಕಿಸ್ತಾನವನ್ನ ಸೇರಿಕೊಳ್ಳುವರೋ ಎಂದು ನಿಶ್ಚಯಿಸುವುದಕ್ಕೆ ಹೇಳಿದ್ದರು. ಈ ಘೋಷಣೆ ಮತ್ತು ಸರದಾರ್ ಪಟೇಲರ ದೂರದರ್ಶಿತ್ವ ಇವುಗಳಿಂದಾಗಿ ಸುಮಾರು ಎಲ್ಲಾ ರಾಜರೂ ಭೌಗೋಳಿಕ ಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ತಮ್ಮ ತಮ್ಮ ನಿರ್ಣಯ ತೆಗೆದುಕೊಂಡರು. ಭಾರತಕ್ಕೆ ಸೇರಿಕೊಂಡ ರಾಜರು ಸಂವಿಧಾನ ಸಮಿತಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಟ್ಟಿದ್ದರು.

೧೪ ಜುಲೈ ೧೯೪೭ರಂದು ಭಾರತದ ಸಂವಿಧಾನ ಸಮಿತಿಯ ಮೊದಲ ಸಭೆ ಸೇರಿತು. ೨೫ ಜುಲೈನ ರಾಜಕೀಯ ಪರಿಷತ್ತಿನ ಸಭೆಯಲ್ಲಿ ಮೌಂಟ್ ಬ್ಯಾಟನ್ನರು ೧೫ ಆಗಸ್ಟಿನ ನಂತರ ರಾಜರುಗಳಿಗೆ ಭಾರತ ಸರಕಾರದ ಕಡೆಯಿಂದ ಅವರ ರಕ್ಷಣೆಯ ಅನುಕೂಲಗಳನ್ನು ನೀಡಲಾಗುವುದಿಲ್ಲವೆಂದೂ ಸ್ಪಷ್ಟಪಡಿಸಿದ್ದರು. ಇದೆಲ್ಲವೂ ಸರಿಹೋಯಿತು. ಆದರೆ ೨೭ ಜುಲೈನ ಪ್ರಾರ್ಥನಾ ಸಭೆಯಲ್ಲಿ ಬಾಪೂಜಿ ಒಂದು ಆಕ್ಷೇಪಣೆ ಮಾಡಿ, 'ಸರಕಾರಕ್ಕೆ ರಾಜರ ಹಿತಚಿಂತನೆ ಇದೆ, ಆದರೆ ಜನರ ಇಷ್ಟ –ಅಭಿಲಾಷೆಗಳನ್ನು ಕುರಿತು ವಾಯಿಸ್‌ರಾಯ್‌ಗೆ ಏನೂ ಗೊತ್ತಿಲ್ಲ, ಇದು ರಾಜರ ಪ್ರಶ್ನೆಯಲ್ಲ, ಆದರೆ ಹತ್ತು ಕೋಟಿ ಪ್ರಜೆಗಳ ಪ್ರಶ್ನೆ' ಎಂದರು. ಎಳೆದಾಡಿ ಕೊನೆಗೂ ೧೪ ಆಗಸ್ಟ್ ೧೯೪೭ರ ವೇಳೆಗೆ ರಾಜರುಗಳು ತಾವು ಯಾವ ದೇಶಕ್ಕೆ ಸೇರುತ್ತೇವೆಂದು ನಿರ್ಣಯಿಸಿದ್ದರು. ಆದರೆ ಅವರಲ್ಲಿ ಮೂರು ಜನ ರಾಜರು ಇದಕ್ಕೆ ಹೊರತಾಗಿದ್ದರು. ಜೂನಾಗಢದ ನವಾಬ, ಕಾಶ್ಮೀರದ ಮಹಾರಾಜ ಹರಿಸಿಂಹ ಮತ್ತು ಹೈದರಾಬಾದ್ ನಿಝಾಮ– ಇವರು ತಮ್ಮ ಯಾವ ನಿರ್ಣಯವನ್ನೂ ಘೋಷಿಸಿರಲಿಲ್ಲ. ಈ ಮೂರೂ ಜನ ರಾಜರು ತಮ್ಮ ನಿಲುವಿಗೆ ಅನುಗುಣವಾದ ನಿರ್ಣಯವನ್ನು ತೆಗೆದುಕೊಳ್ಳಲು ಒಂದು ವರ್ಷದ ಸಮಯವನ್ನು ಕೇಳುತ್ತಿದ್ದರು. ಪ್ರಪಂಚದ ಇತಿಹಾಸದಲ್ಲಿ ಈ ಮೂರು ಜನ ರಾಜರ ವಂಚಕತನ, ಪ್ರತಿದಿನ ಒಂದೊಂದು ರೀತಿಯಲ್ಲಿ ಸುಳ್ಳು ಬೇಡಿಕೆ, ಹೇಳಿಕೆಗಳು, ವಿಚಿತ್ರವಾಗಿ ತೊಂದರೆ ಕೊಟ್ಟಿದ್ದು ಇವೆಲ್ಲಾ ಅವರ ಸಂಚುಗಾರಿಕೆಯ ನಮೂನೆಗಳಾಗಿ ಉಳಿದಿವೆ.

ಜೂನಾಗಢ ರಾಜ್ಯ ಕಾಠಿಯಾವಾಡ್‌ದ ಮಧ್ಯದಲ್ಲಿ ೩೩೦೦ ಚದರ ಮೈಲುಗಳಲ್ಲಿ ಹರಡಿದ್ದ ಒಂದು ಸಾಮಾನ್ಯ ರಾಜ್ಯವಾಗಿತ್ತು. ನವಾಬ ಮುಸಲ್ಮಾನರಾಗಿದ್ದರು, ನೂರಕ್ಕೆ ಎಂಬತ್ತೈದು ಮಂದಿ ಹಿಂದೂಗಳು ಅಲ್ಲಿದ್ದರು. ನವಾಬನಿಗೆ ತನ್ನ ಜೀವನದಲ್ಲಿ ಮೂರೇ ಮೂರು ವಿಷಯಗಳಲ್ಲಿ ಆಸಕ್ತಿ ಇತ್ತು. ಒಂದು ಮೋಟರ್‌ಗಳ ಸವಾರಿ, ಪೋಲೋ ಆಡುವುದಕ್ಕೆ ಚಿಕ್ಕ ವಯಸ್ಸಿನ ಕುದುರೆ, ನಾಯಿಗಳು, ಸರಕಾರಿ ಖಜಾನೆಯ ಹೆಚ್ಚು ಹಣ ಈ ಮೂರು ಕೆಲಸಗಳಿಗಾಗಿಯೇ ಖರ್ಚಾಗುತ್ತಿತ್ತು. ಜೂನಾಗಢದ ನವಾಬ ತನ್ನ ನಾಯಿಯ ಮದುವೆಗಾಗಿ ಲಕ್ಷಾಂತರ

ರೂಪಾಯಿ ಖರ್ಚುಮಾಡಿದ್ದ. ಅಕ್ಕ–ಪಕ್ಕದ ರಾಜರು ಭಾರತಕ್ಕೆ ಸೇರಿಕೊಂಡಿದ್ದರು, ಆದರೆ ಜೂನಾಗಢದ ನವಾಬ ನಿರ್ಣಯ ತೆಗೆದುಕೊಂಡಿರಲಿಲ್ಲ. ಮೇ ೧೯೪೭ರಲ್ಲಿ ಜಿನ್ನಾ ಹೇಳಿದ ಮೇಲೆ ಕರಾಚಿಯ ಷಾಹ್‌ನವಾಜ಼ ಭುಟ್ಟೋವನ್ನ ನವಾಬ ತನ್ನ ದಿವಾನನನ್ನಾಗಿ ನಿಯುಕ್ತಿಗೊಳಿಸಿದ್ದ. ಇದೇ ಷಾಹ್‌ನವಾಜ಼್ ಪಾಕಿಸ್ತಾನದ ಪ್ರಸಿದ್ಧ ಪ್ರಧಾನಮಂತ್ರಿ ಜುಲ್‌ಫಿಕಾರ್ ಅಲಿ ಭುಟ್ಟೋನ ತಂದೆ ಆಗಿದ್ದರು. ಷಾಹ್‌ನವಾಜ಼ ಭುಟ್ಟೊ ಬಹಳ ಚತುರ ವ್ಯಕ್ತಿ, ಆತ ರಾಜ್ಯದ ಅಧಿಕಾರವನ್ನು ತನ್ನ ಕೈವಶಕ್ಕೆ ತೆಗೆದುಕೊಂಡರು. ಕಾಯದೇ ಆಜ಼ಂ ಜಿನ್ನಾರೊಂದಿಗೆ ಪಾಕಿಸ್ತಾನಕ್ಕೆ ಸೇರಿಕೊಳ್ಳಲು ಗುಪ್ತ ಆಲೋಚನೆಗಳನ್ನಾರಂಭಿಸಿದರು. ಸ್ವಾತಂತ್ರ್ಯ ಸಿಕ್ಕ ಎರಡು ದಿನಗಳ ನಂತರ ೧೭ ಆಗಸ್ಟ್ ೧೯೪೭ರಂದು ಇದ್ದಕ್ಕಿದ್ದಂತೆ, ಜೂನಾಗಢದ ನವಾಬ ಪಾಕಿಸ್ತಾನಕ್ಕೆ ಸೇರಿಕೊಂಡರೆಂದು ಸುದ್ದಿ ಬಂತು. ನವಾಬರು ಮತ್ತವರ ದಿವಾನರಾಗಿದ್ದ ಷಾಹ್‌ನವಾಜ಼್ ಭುಟ್ಟೋ ಪ್ರಜೆಗಳನ್ನು ವಿಚಾರಿಸಲೇ ಇಲ್ಲ. ಅವರ ಇಷ್ಟವೇನೆಂದು ಆಗ ಬಾಬರಿಯಾವಾಡ ಭಾರತ ಸರಕಾರದಿಂದ ರಕ್ಷಣೆ ಬೇಡಿದ, ಬಾಬರಿಯಾವಾಡವನ್ನು ರಕ್ಷಿಸಲು ಮೊದಲು ಸರದಾರ್ ಪಟೇಲರು ಪಾಕಿಸ್ತಾನಕ್ಕೆ ಬರೆದು ಜೂನಾಗಢ ಭಾರತದ ಭೂಮಿಯ ಮೇಲೆ ಆಕ್ರಮಣಮಾಡಿದೆಯೆಂದೂ, ಅದು ಕಾನೂನುಬಾಹಿರವಾದದ್ದೆಂದೂ ಆದ್ದರಿಂದ ಮಾಂಗರೋಲ್ ಮತ್ತು ಬಾಬರಿಯಾವಾಡದಿಂದ ಸೈನ್ಯವನ್ನು ಹಿಂದಕ್ಕೆ ಸರಿಸಿ ಎಂದು ತಿಳಿಸಿದರು. ಮೂರು ವಾರಗಳವರೆಗೂ ಪತ್ರ ವ್ಯವಹಾರ ನಡೆದ ನಂತರ ಪಾಕಿಸ್ತಾನ ಭಾರತದ ಬೇಡಿಕೆಯನ್ನು ಒಪ್ಪಿಕೊಂಡಿತು. ಆದರೂ ಜೂನಾಗಢದ ಸೈನ್ಯವನ್ನು ಭಾರತದ ಭೂಮಿಯಿಂದ ಸರಿಸಲಿಲ್ಲ.

ಕಾಠಿಯಾವಾಡದ ಕಾಂಗ್ರೆಸ್ ಕಾರ್ಯಕರ್ತರು ದೆಹಲಿಗೆ ಬಂದು ಬಾಪೂಜಿಯವರನ್ನು ಭೇಟಿಯಾದರು. ಅವರಿಗೆ ಬಾಪೂಜಿ ಹೇಳಿದರು, ಜೂನಾಗಢದ ಜನರೇನಾದರೂ ಅಹಿಂಸಾತ್ಮಕ ಸತ್ಯಾಗ್ರಹ ಮಾಡಿದರೆ ನವಾಬ ಬಾಗಲೇಬೇಕಾಗುತ್ತದೆ, ಜೂನಾಗಢದ ಉದಾಹರಣೆಯಿಂದ ಮಿಕ್ಕ ರಾಜ್ಯಗಳು ಕೂಡ, ಅದರಲ್ಲೂ ವಿಶೇಷವಾಗಿ ಕಾಶ್ಮೀರದ ನ್ಯಾಷನಲ್ ಕಾನ್‌ಫರೆನ್ಸ್‌ನ ಕಾರ್ಯಕರ್ತರುಗಳಿಗೆ ಮಾರ್ಗದರ್ಶನ ಸಿಕ್ಕುತ್ತದೆ, ಕಾಶ್ಮೀರದ ಸಮಸ್ಯೆ ಪರಿಹಾರವಾಗುತ್ತದೆ. ಆದರೆ ಆ ಕಾರ್ಯಕರ್ತರುಗಳಿಗೆ ಅಹಿಂಸೆಯ ಬಗ್ಗೆ ಗೌರವವಿರಲಿಲ್ಲ, ಪ್ರಜಾಸತ್ತೆಯಲ್ಲಿ ಪ್ರತಿಯೊಬ್ಬನಿಗೂ ತನ್ನ ಸ್ವತಂತ್ರ ಅಭಿಪ್ರಾಯನ್ನಿಟ್ಟುಕೊಳ್ಳುವ ಹಕ್ಕು ಇರುತ್ತದೆ. ಹೀಗಾಗಿ ಜೂನಾಗಢದ ಕಾಂಗ್ರೆಸ್ ಕಾರ್ಯಕರ್ತರಿಗೂ ತಮ್ಮ ಇಚ್ಛೆಯಂತೆ ಮಾಡುವ ಅಧಿಕಾರವಿತ್ತು ಎಂದು ತಿಳಿದುಕೊಳ್ಳಲು ಪ್ರಯತ್ನಿಸಲೇ ಇಲ್ಲ. ಹೀಗೆ ತಮ್ಮದೇ ನಿರ್ಣಯ ತೆಗೆದುಕೊಂಡು ನವಾಬನು ತನ್ನ ಮಿತ್ರರಾಗಿದ್ದ ಮಿಕ್ಕ ರಾಜರಿಗೆ ಮೋಸ ಮಾಡಿದ, ಭೌಗೋಳಿಕ ನಿಕಟತೆಯ ತಥ್ಯವನ್ನ ತಳ್ಳಿಹಾಕಿದ. ಸರದಾರ್

ಪಟೇಲರು ತಕ್ಷಣವೇ ಪಾಕಿಸ್ತಾನ ಸರಕಾರಕ್ಕೆ ಬರೆದರು, ಆದರೆ ಒಂದು ತಿಂಗಳಾದ ನಂತರ ಸೆಪ್ಟೆಂಬರ್ ನಂತರವೇ ಪಾಕಿಸ್ತಾನದ ಪ್ರಧಾನ ಮಂತ್ರಿ ಲಿಯಾಕತ್ ಅಲಿ ಖಾನರು ಜೂನಾಗಢ ಪಾಕಿಸ್ತಾನಕ್ಕೆ ಸೇರಿಕೊಂಡಿದೆ ಎಂದು ಘೋಷಿಸಿದ್ದರು.

ಸೋಮನಾಥದ ಪ್ರಸಿದ್ಧ ಮಂದಿರ ಮಾಂಗರೋಲ್‌ನ ಶೇಖ್ ರಾಜ್ಯದಲ್ಲಿತ್ತು, ಹತ್ತಿರದಲ್ಲಿ ಒಂದು ಬಾಬರಿಯಾವಾಡ್ ಎಂಬ ಚಿಕ್ಕ ರಾಜ್ಯ ಇತ್ತು. ಅಲ್ಲಿಯ ರಾಜ ಕೂಡ ಮುಸಲ್ಮಾನನೇ ಆಗಿದ್ದನು. ಇಂಗ್ಲಿಷರ ಕಾಲದಿಂದಲೂ ಇವರಿಬ್ಬರು ರಾಜರು ಜೂನಾಗಢದ ಅಧೀನಸ್ಥರಾಗಿದ್ದರು. ಈಗ ೧೫ ಆಗಸ್ಟ್ ೧೯೪೭ರ ನಂತರ ಈ ಇಬ್ಬರು ಅಧೀನಸ್ಥರೂ ಸ್ವತಂತ್ರರಾದರು. ಸೆಪ್ಟೆಂಬರ್ ೧೯ರಂದು ಮಾಂಗರೋಲ್‌ನ ಶೇಖ್ ಮತ್ತು ಬಾಬರಿಯಾವಾಡದ ರಾಜಾ ಇಬ್ಬರೂ ಭಾರತಕ್ಕೆ ಸೇರಿಕೊಂಡರು. ಮಾರನೆಯ ದಿನ ೨೦ ಸೆಪ್ಟೆಂಬರ್‌ನಂದು ಜೂನಾಗಢದ ನವಾಬನು ಹೆದರಿಸಿ ಬೆದರಿಕೆ ಹಾಕಿದ ಮೇಲೆ ಮಾಂಗರೋಲ್‌ನ ಶೇಖನು ತಾನು ಭಾರತದ ಆಧಿಪತ್ಯವನ್ನು ಒಪ್ಪಿಕೊಳ್ಳುವುದಿಲ್ಲವೆಂದು ಮರುಘೋಷಣೆ ಮಾಡಿದ. ಆಗ ಬಾಬರಿಯಾವಾಡ ಭಾರತ ಸರ್ಕಾರದ ರಕ್ಷಣೆಯನ್ನು ಕೋರಿತು. ಬಾಬರಿಯಾವಾಡದ ರಕ್ಷಣೆಗಾಗಿ ಭಾರತೀಯ ಸೈನ್ಯದ ನೆರವನ್ನು ಒದಗಿಸುವುದಕ್ಕೆ ಮೊದಲು, ಸರ್ದಾರ್ ಪಟೇಲರು ಜೂನಾಗಢ ಭಾರತದ ನೆಲದ ಮೇಲೆ ಆಕ್ರಮಣವನ್ನು ನಡೆಸಿರುವುದು ಕಾನೂನುಬಾಹಿತ ಕ್ರಮವೆಂದೂ, ಮಾಂಗರೋಲ್ ಮತ್ತು ಬಾಬರಿಯಾವಾಡಗಳಿಂದ ಜೂನಾಗಢದ ಸೈನ್ಯವನ್ನು ಹಿಂದೆಗೆದುಕೊಳ್ಳಬೇಕೆಂದೂ ಪಾಕಿಸ್ತಾನಕ್ಕೆ ಪತ್ರ ಬರೆದರು. ಮೂರು ವಾರಗಳ ಪತ್ರ ವ್ಯವಹಾರದ ಬಳಿಕ ಪಾಕೀಸ್ತಾನ ಭಾರತದ ಬೇಡಿಕೆಯನ್ನು ಅಂಗೀಕರಿಸಿತು. ಆರೂ ಜೂನಾಗಡದ ಸೈನ್ಯ ಭಾರತದ ನೆಲದಿಂದ ಹಿಂದೆ ಸರಿಯಲಿಲ್ಲ. ಅದರ ಮಾರನೆಯ ದಿನ ಜೂನಾಗಢದ ಬಾಬರಿಯಾವಾಡದ ಮೇಲೆ ಆಕ್ರಮಣ ಮಾಡಿದ. ಒಂದೂಕಾಲು ತಿಂಗಳಾದ ನಂತರ ೨೧ ನವೆಂಬರ್ ೧೯೪೭ರಂದು ಭಾರತ ಸರಕಾರದ ಸೈನಿಕರು ಮಾಂಗರೋಲ್ ಮತ್ತು ಬಾಬರಿಯಾವಾಡ್‌ಗೆ ಹೋಗಿ ಜೂನಾಗಢದ ಸೈನ್ಯವನ್ನು ಅಲ್ಲಿಂದ ಹೊರಹಾಕಿದರು. ಈ ಎಲ್ಲ ಸಮಯದ ನಡುವೆ ಜೂನಾಗಢದ ತಂತ್ರ ಸ್ಥಗಿತಗೊಂಡಿತ್ತು. ಅಂಗಡಿಯವರು ಹರತಾಳ ಮಾಡಿದ್ದರು. ಸಾಮಾನು, ಆಹಾರ ಪದಾರ್ಥಗಳು, ಆವಶ್ಯಕ ವಸ್ತುಗಳ ಕೊರತೆಯಾಗತೊಡಗಿತ್ತು. ಜನರು ನವಾಬರೊಡನೆ ಸಹಕರಿಸಲಿಲ್ಲ. ಜನರ ಪ್ರತಿನಿಧಿಗಳು ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳುತ್ತಿದ್ದರು. ಜೂನಾಗಢದ ಈ ಕಾರ್ಯಕರ್ತರೇನಾದರೂ ಸರಕಾರವನ್ನು ಹತೋಟಿಯಲ್ಲಿಟ್ಟುಕೊಳ್ಳದೆ ಹೋಗಿದ್ದಿದ್ದರೆ ಜೂನಾಗಢದಲ್ಲಿ ಪೂರ್ತಿಯಾಗಿ ಅರಾಜಕತೆ ಹರಡುತ್ತಿತ್ತು. ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ ಜೂನಾಗಢದ ಕಾಂಗ್ರೆಸ್ ಕಾರ್ಯಕರ್ತರು ಅಲ್ಲಿ ತಾತ್ಕಾಲಿಕ

ಸರಕಾರವನ್ನು ಘೋಷಿಸಿದರು.

ಈ ನಡುವೆ ಜೂನಾಗಢದ ನವಾಬ ತನ್ನ ಬೇಗಂ ಮತ್ತು ರಾಜ್ಯದ ಒಡವೆ – ವಸ್ತುಗಳನ್ನು ತೆಗೆದುಕೊಂಡು ಕರಾಚಿಗೆ ಓಡಿಹೋದ. ಜೂನಾಗಢದ ದಿವಾನ ಷಾಹ್‌ನವಾಜ಼ ಭುಟ್ಟೋ ತನ್ನ ಕೈಯಿಂದ ಅಧಿಕಾರ ಕಳಚಿ ಹೋಗುತ್ತಿರುವುದನ್ನು ಕಂಡು ಜೂನಾಗಢವನ್ನು ಹತೋಟಿಗೆ ತೆಗೆದುಕೊಳ್ಳುವಂತೆ ೮ ನವಂಬರ್ ೧೯೪೭ರಂದು ಭಾರತ ಸರಕಾರವನ್ನು ಪ್ರಾರ್ಥಿಸಿದ ಮತ್ತು ಜೂನಾಗಢ ಭಾರತ ಸರಕಾರಕ್ಕೆ ಸೇರಿಕೊಳ್ಳುತ್ತಿದೆಯೆಂದೂ ಘೋಷಿಸಿದ. ಷಾಹನ್‌ವಾಜ಼ ಭುಟ್ಟೋ ಅವರು ಪಾಕಿಸ್ತಾನದ ಪ್ರಧಾನ ಮಂತ್ರಿಗಳಿಗೂ ಸೂಚನೆ ನೀಡಿ, ಪ್ರಜೆಗಳ ಹಿತವನ್ನು ಗಮನದಲ್ಲಿರಿಸಿಕೊಂಡು ಅವರು ಭಾರತದ ಆಧಿಪತ್ಯವನ್ನು ಒಪ್ಪಿಕೊಂಡಿರುವರೆಂದೂ, ಹಾಗೂ ಜೂನಾಗಢದಿಂದ ಹೊರಡಲು ಮುಂಚೆ ನವಾಬ ಸಾಹಬರು ತಮ್ಮ 'ಪ್ರಿಯ ಪ್ರಜೆ'ಗಳಿಗೆ ಕಷ್ಟವಾಗದಿರುವಂತೆ ಇದಕ್ಕೆ ಸೇರಲು ಆದೇಶ ನೀಡಿರುವರೆಂದೂ ಸೂಚನೆ ನೀಡಿದರು. ದಿವಾನರ ಪ್ರತಿನಿಧಿ ದೆಹಲಿಯಲ್ಲಿ ಬಾಪೂಜಿಯನ್ನು ಭೇಟಿಮಾಡಿದರು ಮತ್ತು ಬಾಪೂಜಿಗೆ ಧನ್ಯವಾದದ ಪತ್ರವನ್ನೂ ಬರೆದರು. ಷಾಹನ್‌ವಾಜ಼ ಭುಟ್ಟೋ ತಮ್ಮ ವಂಚಕತನದಿಂದಾಗಿ ತನ್ನ ಪ್ರಾಣ ಈಗ ವಿಪತ್ತಿಗೆ ಸಿಲುಕಿದೆಯಂಬುದನ್ನರಿತಿದ್ದರು. ಆದುದರಿಂದ ಸಮಯ ಕಡಿಮೆ ಇದೆಯೆಂದು ಹೇಳಿ ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ರಾಜಕೋಟ್‌ನಲ್ಲಿದ್ದ ಸರಕಾರಿ ಅಧಿಕಾರಿಗೆ ಪತ್ರಬರೆದು ಆಡಳಿತವನ್ನು ಆತನಿಗೆ ನೀಡುವ ವ್ಯವಸ್ಥೆ ಮಾಡಿದರು ಮತ್ತು ಸ್ವತಃ ಪಾಕಿಸ್ತಾನಕ್ಕೆ ಓಡಿಹೋದರು. ಹೋಗುವಾಗ ಮತ್ತೊಮ್ಮೆ ಆತ ಜೂನಾಗಢದ ನವಾಬರು ಜೂನಾಗಢ ರಾಜ್ಯದ ಜನರ ಪ್ರಾಣ – ವಸ್ತು – ಕಾಣಿ ಉಳಿಯಲಿ. ತಮ್ಮ ಪ್ರಜೆಗಳು ಸುಖವಾಗಿರಲಿ ಎಂದು ಇಷ್ಟಪಟ್ಟಿದ್ದರಿಂದ ಷಾಹ್‌ನವಾಜ಼ ಭುಟ್ಟೋ ಜೂನಾಗಢವನ್ನು ಭಾರತಕ್ಕೆ ಸೇರಿಕೊಳ್ಳಲು ಬಿಟ್ಟರೆಂದು ಹೇಳಿಕೆ ನೀಡಿದರು.

ಭಾರತ ಸರಕಾರ ಜೂನಾಗಢದ ದಿವಾನನ ಬೇಡಿಕೆಯನ್ನು ಮನ್ನಣೆ ಮಾಡಿತು. ರಾಜಕೋಟ್‌ನ ಕ್ಷೇತ್ರೀಯ ಆಯುಕ್ತರು ಜೂನಾಗಢದ ಆಳ್ವಿಕೆಯನ್ನು ತಮ್ಮ ಹತೋಟಿಗೆ ತೆಗೆದುಕೊಂಡರು. ಒಮ್ಮೆ ಪಾಕಿಸ್ತಾನದ ಸಂರಕ್ಷಣೆ ಸಿಕ್ಕಮೇಲೆ ಷಾಹ್‌ನವಾಜ಼ ಭುಟ್ಟೋ ಅವರು ಪುನಃ ತಮ್ಮ ಧ್ವನಿಯನ್ನು ಬದಲಿಸಿ ಕರಾಚಿಯಲ್ಲಿ ಕುಳಿತು ಭಾರತ ಸರಕಾರವನ್ನು ಕೆಟ್ಟದಾಗಿ ದೂಷಿಸತೊಡಗಿದರು. ಜೂನಾಗಢದ ನವಾಬನು ಪಾಕಿಸ್ತಾನಕ್ಕೆ ಸೇರುವೆನೆಂದು ಘೋಷಿಸಿದ ನಂತರ ಪಾಕಿಸ್ತಾನಕ್ಕೆ ಬಹಳ ಸಂತೋಷವಾಗಿತ್ತು. ಆದರೆ ಈಗ ನವಾಬರು ಭಾರತಕ್ಕೆ ಸೇರಿಕೊಳ್ಳಲು ಇಚ್ಛಿಸುತ್ತಿರುವಾಗ ಪಾಕಿಸ್ತಾನ ಅವರ ಘೋಷಣೆಯನ್ನು ವಿರೋಧಿಸಿ, ಜೂನಾಗಢ ರಾಜ್ಯ ಹೀಗೆ ಭಾರತಕ್ಕೆ ಸೇರುವುದು ಪಾಕಿಸ್ತಾನದ ಸ್ವಾಯತ್ತ ಅಧಿಕಾರಕ್ಕೆ ವಿರುದ್ಧವಾಗಿದೆ ಎಂದು ಹೇಳಿದರು. ಆಗ ೧೧ ನವಂಬರ್ ೧೯೪೭ರ ಪ್ರಾರ್ಥನಾ ಸಭೆಯಲ್ಲಿ

ಬಾಪೂಜಿ ಹೀಗೆ ಹೇಳಿದರು, 'ಸಮಸ್ತ ಪಡೆಯ ಅಧಿಕಾರ ಹೊಂದಿಲ್ಲ, ಆದುದರಿಂದ ಜೂನಾಗಢದ ಪ್ರಜೆಗಳ ಇಚ್ಛೆಯಂತೆ ನಿರ್ಣಯ ತೆಗೆದುಕೊಳ್ಳುವಲ್ಲಿ ಅಪರಾಧವೇನೂ ಇರಲಿಲ್ಲ, ಯಾವುದೇ ಕಾನೂನು ಭಂಗ ನಡೆದಿಲ್ಲ, ಜೂನಾಗಢ ಎಲ್ಲಿಗೆ ಸೇರುತ್ತದೆ' ಎಂಬುದನ್ನು ಅಲ್ಲಿನ ಪ್ರಜೆ ನಿರ್ಣಯಿಸುತ್ತದೆ. 'ಫೆಬ್ರವರಿ ೧೯೪೮ರಲ್ಲಿ ಜೂನಾಗಢದ ಪ್ರಜೆಗಳ ಮತ ತೆಗೆದುಕೊಳ್ಳಲಾಯಿತು ಮತ್ತು ೧,೯೦,೭೭೯ ಮತಗಳಲ್ಲಿ ಒಟ್ಟು ೯೧ ಮತಗಳು ಪಾಕಿಸ್ತಾನಕ್ಕೆ ಸೇರಲು, ಮಿಕ್ಕ ಎಲ್ಲಾ ಮತಗಳು ಭಾರತದಲ್ಲಿ ಸೇರಲು ನೀಡಿದ್ದವು. ಜೂನಾಗಢದ ಜನ ಭಾರತಕ್ಕೆ ಸೇರಿಕೊಳ್ಳಲು ಇಷ್ಟಪಡುತ್ತಿತ್ತು ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿತ್ತು, ಆದ್ದರಿಂದ ಭಾರತ ಸರಕಾರ ಜೂನಾಗಢದ ದಂಗೆಕೋರರನ್ನು ತಕ್ಷಣ ಹಿಡಿತಕ್ಕೆ ತೆಗೆದುಕೊಂಡಿತು, ಆದರೆ ಆ ವೇಳೆಗಾಗಲೇ ನಷ್ಟ ಆಗಿ ಹೋಗಿತ್ತು. ಚಿಕ್ಕ – ಪುಟ್ಟ ಘಟನೆಗಳು ನಡೆದದ್ದರಿಂದ ಭಾರತದಲ್ಲಿ ಮುಸಲ್ಮಾನರು ಸುರಕ್ಷಿತರಾಗಿಲ್ಲವೆಂದು ಪಾಕಿಸ್ತಾನ ಸುಳ್ಳು ಪ್ರಚಾರ ಮಾಡಲು ಅವಕಾಶ ದೊರಕಿತು. ವಿಭಜನೆ ಇದರಿಂದ ಸರಿಯಾಗಿತ್ತೆಂದರು. ಆದರೆ ಅದಕ್ಕಿಂತ ಹೆಚ್ಚಾಗಿ ಸಿಂಧ್‌ನ ಸಿಖ್ಖರು, ಮತು ಹಿಂದುಗಳು ಇದರ ಕೆಟ್ಟ ಪರಿಣಾಮಗಳನ್ನು ಎದುರಿಸಬೇಕಾಗಿ ಬಂತು. ಆಗ ಸಿಂಧ್‌ನ ವ್ಯಾಪಾರ – ಉದ್ಯೋಗ ಎಲ್ಲವೂ ಹಿಂದೂಗಳ ಕೈಲಿತ್ತು. ಆದ್ದರಿಂದ ಪಾಕಿಸ್ತಾನ ಸರಕಾರ ತನ್ನ ಆರ್ಥಿಕ ಲಾಭವನ್ನ ಗಮನದಲ್ಲಿಟ್ಟುಕೊಂಡು ಸಿಂಧ್‌ನ ಮುಸಲ್ಮಾನರಲ್ಲದ ಇತರೆ ಜನರನ್ನು ಸಿಂಧ್‌ನಲ್ಲೇ ಇರಲು ಅನುಕೂಲಗಳನ್ನು ಕಲ್ಪಿಸಿಕೊಡುವಂತೆ ನಿರ್ಣಯ ತೆಗೆದುಕೊಳ್ಳಲಿತ್ತು. ಕಠಿಯಾವಾಡದ ಮುಸಲ್ಮಾನರು ಸಿಂಧ್ ತಲುಪಿದಾಗ ಪಾಕಿಸ್ತಾನಕ್ಕೆ ಸಿಂಧಿಗಳ ಆವಶ್ಯಕತೆ ಬೇಡವಾಗಿ ಆ ಮುಸಲ್ಮಾನರು ಹಿಂದೂ–ಸಿಖ್ಖ್‌ರನ್ನೆಲ್ಲಾ ಎಲ್ಲರೆದುರಿಗೇ ಕೊಲೆಮಾಡಿದರು, ಹಿಂದೂಗಳ ಸಂಪತ್ತನ್ನು ಲೂಟಿ ಮಾಡಿದರು, ಶರಣಾರ್ಥಿಗಳ ಟ್ರೈನ್ ಮೇಲೆ ದಾಳಿ ಮಾಡಿದರು. ನಿರ್ದೋಷಿಗಳಾದ ಹಿಂದೂ ಸಿಖ್ಖರು ಕೊಲೆಗೀಡಾದರು. ಈ ಹತ್ಯೆಗಳು, ಆತಂಕಗಳಿಗಾಗಿ ಬಾಪೂಜಿ ಜೂನಾಗಢದ ಕಾರ್ಯಕರ್ತರನ್ನು ಬೈದರು. ಎಷ್ಟೋ ಜನ ಸ್ನೇಹಿತರು ಬಾಪೂಜಿ ಮುಸಲ್ಮಾನರನ್ನು ಉಳಿಸುತ್ತಾರೆಂದೂ ಹಿಂದೂಗಳನ್ನೂ ದಮಿಸುತ್ತಾರೆಂದೂ ಆರೋಪಿಸಿದರು. ಈ ಅವಿವೇಕಿ ಸಹಯೋಗಿಗಳಿಗೆ ಬಾಪೂಜಿ ಹೇಳಿದರು, 'ಸ್ವಂತ ತಪ್ಪನ್ನ ಒಪ್ಪಿಕೊಂಡಾಗ ಸಮಾಜ ನಮ್ಮ ಮಾತುಗಳನ್ನು ಗೌರವಿಸುತ್ತದೆ, ಭಾರತದ ಜನ ತಮ್ಮ ಕೆಟ್ಟ ಕೃತ್ಯಗಳನ್ನು ಒಪ್ಪಿಕೊಂಡಾಗ ಪಾಕಿಸ್ತಾನ ತಾನು ಮಾಡುವ ಅತ್ಯಾಚಾರಗಳನ್ನು ಕಡಿಮೆ ಮಾಡುತ್ತದೆ, ನಿಲ್ಲಿಸುತ್ತದೆ. ಅದಿಲ್ಲದಿದ್ದರೆ ಭಾರತವಾಸಿಗಳು ಸ್ವಲ್ಪ ಬೇಜವಾಬ್ದಾರಿ ಮಾಡಿದರೂ, ಅದರಿಂದ ನಮ್ಮ ಸಾವಿರಾರು ಮಂದಿ ಸೋದರರು ಪಾಕಿಸ್ತಾನದಲ್ಲಿ ಕೊಲೆಗೀಡಾಗುತ್ತಾರೆ.' ಈ ಮಾತು ಸತ್ಯವಾಗಿತ್ತು ಮತ್ತು ಜನ ತಮ್ಮ ಅವಿವೇಕವನ್ನು ಅರ್ಥಮಾಡಿಕೊಂಡರು. ಕಠಿಯಾವಾಡದ ಸಾಂಪ್ರದಾಯಿಕ ದಂಗೆಗಳು ಪೂರ್ತಿಯಾಗಿ

ನಿಂತವು, ನಂತರ ಕಠಿಯಾವಾಡ ಮುಸಲ್ಮಾನರು ಬಾಪೂಜಿಗೆ ಬರೆದು, 'ಆ ಜನಗಳಿಗೆ ಹೆದರಿ, ಹಿಂದೂಗಳ ವಿರುದ್ಧ ಉತ್ಪ್ರೇಕ್ಷೆ ಮಾಡಿ ದೂರು ಸಲ್ಲಿಸಿದ್ದರೆಂದೂ, ಅವರಿಂದ ಅವರಿಗೆ ಯಾವ ಅಪಾಯವೂ ಇರಲಿಲ್ಲವೆಂದೂ' ತಿಳಿಸಿದರು.

ಜೂನಾಗಢವನ್ನ ಪಡೆದುಕೊಳ್ಳಬೇಕೆಂದು ಜಿನ್ನಾಗೇನೂ ಆಸಕ್ತಿ ಇರಲಿಲ್ಲ. ಪಾಕಿಸ್ತಾನಕ್ಕೆ ಜೂನಾಗಢದಿಂದ ಯಾವ ಆರ್ಥಿಕ, ರಾಜಕೀಯ ಲಾಭ ಕೂಡ ಇರಲಿಲ್ಲ. ಕಾಂಗ್ರೆಸ್ಸನ್ನು ವಿರೋಧಿಸುವುದು ಕಾಯದೇ ಆಜ಼ಂಗೆ ಅಭ್ಯಾಸವಾಗಿ ಹೋಗಿತ್ತು. ಜೂನಾಗಢವನ್ನ ಪಾಕಿಸ್ತಾನಕ್ಕೆ ಸೇರಿಸಿಕೊಂಡು ಅವರು ಭಾರತ ಸರಕಾರಕ್ಕೆ ನಿರಂತರವಾಗಿ ತೊಂದರೆ ಕೊಡುತ್ತಾ ಇರಬಹುದು ಅನ್ನುವುದು ಆತನ ಉದ್ದೇಶವಾಗಿತ್ತು. ಅಷ್ಟೇ ಅಲ್ಲದೆ, ಈ ನೆಪದಲ್ಲಿ ಪಾಕಿಸ್ತಾನದ ತಪ್ಪು ಬೇಡಿಕೆಗಳನ್ನು ಪ್ರಸ್ತುತ ಪಡಿಸುವುದಕ್ಕೆ ಒಂದು ಒಳ್ಳೆಯ ಸಾಧನ ಸಿಕ್ಕ ಹಾಗೆ ಆಗುತ್ತದೆ ಎಂದುಕೊಂಡಿದ್ದರು. ಇಷ್ಟೆಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿದ್ದ ಮೇಲೂ ಜೂನಾಗಢದಲ್ಲಿ ಜಿನ್ನಾ ಸಾಹೇಬರ ಕೂಟನೀತಿ, ಮೋಸ ಅಸಫಲವಾಯಿತು ಮತ್ತು ಅವರ ವಿಶೇಷ ಪ್ರತಿನಿಧಿಯಾಗಿದ್ದ ಷಾಹ್‌ನವಾಜ಼್ ಭುಟ್ಟೋ ಸ್ವತಃ ಜೂನಾಗಢದ ಆಳ್ವಿಕೆಯನ್ನ ಭಾರತ ಸರಕಾರಕ್ಕೆ ಕೊಟ್ಟು ಹೋಗಿದ್ದ : ಆದರೆ ಜೂನಾಗಢದ ವಂಚನೆ ಜಿನ್ನಾಗೆ ಬಹಳ ಕುತ್ತಿಗೆಗೆ ಬಂದಿತ್ತು, ಜೂನಾಗಢದಲ್ಲಿ ನವಾಬನಿಗೆ ಸ್ವಾಯತ್ತ ಅಧಿಕಾರ ಇರಲಿ ಎಂದು ಸಮರ್ಥಿಸಿದ್ದರಿಂದ ಕಾಶ್ಮೀರದಲ್ಲಿ ರಾಜ ಹರಿಸಿಂಹನಿಗೆ ಪಾಕಿಸ್ತಾನದಿಂದ ಬೇರ್ಪಡಿಸಿ ಸ್ವತಂತ್ರವಾಗಿ ನಿರ್ಣಯ ತೆಗೆದುಕೊಳ್ಳಲು ಪೂರ್ತಿ ಹಕ್ಕು ಸಹಜವಾಗಿ ಸಿಕ್ಕಿಬಿಟ್ಟಿತ್ತು, ಈ ಕಾರಣ ಜಿನ್ನಾ ಸಾಹೇಬರು ನಿರಾಶರಾಗಬೇಕಾಯಿತು.

* * * *

# ೩೬. ಕಾಶ್ಮೀರ

೧೯೪೭ರ ದೇಶಿ ರಾಜ್ಯಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಅತಿ ದೊಡ್ಡ ರಾಜ್ಯವಾಗಿತ್ತು. ಅದರ ಕ್ಷೇತ್ರಫಲ ೪೮, ೪೭೧ ಚದರ ಮೈಲಿಗಳಾಗಿದ್ದವು, ಅದರಲ್ಲಿ ನೂರಕ್ಕೆ ಎಪ್ಪತ್ತೆಂಟರಷ್ಟು ಭಾಗ ಜನರು ಮುಸಲ್ಮಾನರಾಗಿದ್ದರು. ಕಾಶ್ಮೀರ ಕಣಿವೆ ತನ್ನ ಪ್ರಾಕೃತಿಕ ಸೌಂದರ್ಯ ಮತ್ತು ಅಲ್ಲಿಯ ಜನರ ಅಪ್ರತಿಮವಾದ ಬಣ್ಣ – ರೂಪ ಮತ್ತು ಸೌಂದರ್ಯಕ್ಕಾಗಿ ಹೆಸರುವಾಸಿಯಾಗಿದೆ. ಜೊತೆಗೆ, ಭೌಗೋಳಿಕ ದೃಷ್ಟಿಯಿಂದ ಕೂಡ ಕಾಶ್ಮೀರಕ್ಕೆ ಬಹಳ ಮಹತ್ವ ಇದೆ. ಕಾಶ್ಮೀರದ ವಾಯುವ್ಯ ಗಡಿಯಲ್ಲಿ ವಿಶಾಲವಾದ ರಷ್ಯಾದ ಗಡಿ ಕೂಡಿಕೊಳ್ಳುತ್ತದೆ, ಈಶಾನ್ಯದಲ್ಲಿ ಚೀಣಾದ ಗಡಿ ಸೇರುತ್ತದೆ. ಅದರಿಂದ ಅಂತರರಾಷ್ಟ್ರೀಯ ದೃಷ್ಟಿಯಿಂದ ಇದಕ್ಕೆ ಮಹತ್ವದ ಸ್ಥಾನವಿದೆ. ೧೮೪೬ರಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಅಮೃತಸರ ಒಪ್ಪಂದದಡಿಯಲ್ಲಿ ಮಹಾರಾಜ ಹರಿಸಿಂಹನ ಪೂರ್ವಜರು ಜಮ್ಮು – ಕಾಶ್ಮೀರದ ಕಣಿವೆಯನ್ನು ಎಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಮಾರಿದ್ದರು.

ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ಹಿತಚಿಂತಕರಾಗಿದ್ದ ಕಾಶ್ಮೀರ ನ್ಯಾಷನಲ್ ಕಾನಫರೆನ್ಸ್ ಮುಖಂಡರಾಗಿದ್ದ ಶೇಖ್ ಅಬ್ದುಲ್ಲಾ ಅವರನ್ನು ಮಹಾರಾಜರು ಜೂನ್ ೧೯೪೬ರಲ್ಲಿ ಬಂಧಿಸಿ ಜೈಲಿಗೆ ಹಾಕಿದರು ಮತ್ತು ಸಭೆ, ಭಾಷಣ, ಮೆರವಣಿಗೆ ಮುಂತಾದ್ದರ ವಿರುದ್ಧ ಪ್ರತಿಬಂಧಕಾಜ್ಞೆ ವಿಧಿಸಿದರು. ಭಾರತವರ್ಷದ ಸ್ವಾತಂತ್ರ್ಯದ ಬಿರುಗಾಳಿಯನ್ನು ತಾನು ತಡೆಯಬಲ್ಲೆ ಎಂದು ಮಹಾರಾಜ ಹರಿಸಿಂಹ ತಿಳಿದುಕೊಂಡಿದ್ದರು. ಅವರು ಇಪ್ಪತ್ತನೇ ಶತಮಾನದ ಮಧ್ಯದಲ್ಲಿ ಕಾಶ್ಮೀರ ಹತ್ತೊಂಬತ್ತನೆಯ ಶತಮಾನದ ಸಾಮಂತವಾದದಲ್ಲಿ ಮಲಗಿರುತ್ತದೆ ಎಂದುಕೊಂಡಿದ್ದರು. ಶೇಖ್ ಅಬ್ದುಲ್ಲಾನನ್ನು ಜೈಲಿನಿಂದ ಬಿಡಿಸಲು ಜವಾಹರಲಾಲಜೀ ಕಾಶ್ಮೀರಕ್ಕೆ ತೆರಳಿ ಅವರ ಕೇಸನ್ನು ತಾನೇ ತೆಗೆದುಕೊಂಡು ಹೋರಾಡಬೇಕು ಎಂದಿದ್ದರು. ಆದರೆ ನೆಹರೂ ಅವರನ್ನು ಮಹಾರಾಜ ಸರಹದ್ದಿನಲ್ಲೇ ಬಂಧಿಸಿದ್ದರು; ಕಾಶ್ಮೀರದೊಳಕ್ಕೆ ಪ್ರವೇಶಿಸದ ಹಾಗೆ ತಡೆದಿದ್ದರು, ಮಹಾರಾಜ ಹರಿಸಿಂಹ ಕಾಶ್ಮೀರದಲ್ಲಿದ್ದ ಬ್ರಿಟಿಷ್ ಪೊಲಿಟಿಕಲ್ ಏಜಂಟ್ ವಿಕ್ಟರ್ ರೋಘನ್‌ಥೋನ್‌ನಿಗೆ ೧ ಜೂನ್ ೧೯೪೬ರಂದು ಜವಾಹರಲಾಲ್ ಬಗೆಗೆ ತೀರ ಅಸಂಬದ್ಧವಾದ, ತುಚ್ಛ ಹಾಗೂ ಅಪಮಾನಕರವಾದ ಪತ್ರ ಬರೆದಿದ್ದ.

ತಿಳುವಳಿಕಸ್ಥನಾದ ಯಾರೊಬ್ಬನೂ ಅಂತಹ ಭಾಷೆಯನ್ನು ಉಪಯೋಗಿಸಲು ಸಾಧ್ಯವೇ ಇರಲಿಲ್ಲ. ಒಂದು ದೊಡ್ಡ ರಾಜ್ಯದ ರಾಜ ಈ ರೀತಿ ಭಾರತದಂತಹ ದೊಡ್ಡ ರಾಜ್ಯದ ಪ್ರಧಾನ ಮಂತ್ರಿಯನ್ನು ಕುರಿತು ಇಂತಹ ತುಚ್ಛವಾದ ಮಾತುಗಳನ್ನಾಡ ಬಾರದಾಗಿತ್ತು, ಬಹುಶಃ ಮಹಾರಾಜ ಹರಿಸಿಂಹ ತನ್ನ ಅಹಂಕಾರದಲ್ಲಿ ಸಮತೋಲನವನ್ನ ಕಳೆದುಕೊಂಡು ದಿಕ್ಕು ತೋಚದಂತಾಗಿದ್ದರೆನಿಸುತ್ತದೆ.

ಆಗ ದೇಶದಲ್ಲಿ ಕ್ಯಾಬಿನೆಟ್ ಮಿಷನ್ ಜೊತೆ ಮಂತ್ರಾಲೋಚನೆ ನಡೆಯುತ್ತಿತ್ತು. ಅಂತಹ ಸಂದರ್ಭದಲ್ಲಿ ಜವಾಹರಲಾಲ ನೆಹರೂ ಇಲ್ಲದಿದ್ದರೆ ಚರ್ಚೆಯಲ್ಲಿ ಅನೇಕ ವಿಘ್ನಗಳು ತೊಂದರೆಗಳು ಬರಬಹುದಾಗಿತ್ತು. ಹೀಗೆ ಯೋಚಿಸಿ ಬಾಪೂಜಿ ಜವಾಹರಲಾಲರಿಗೆ ನಿಮ್ಮ ಮಾನ–ಅಪಮಾನಗಳು ಕಾಂಗ್ರೆಸ್‌ನ ಮಾನ–ಅಪಮಾನವಾಗುತ್ತವೆ, ಆದರೆ ಇಂತಹ ಪರಿಸ್ಥಿತಿಯಲ್ಲಿ ದೆಹಲಿಯಲ್ಲಿ ನೀವು ಇರಬೇಕಾದದ್ದು ಅತಿ ಆವಶ್ಯಕ ಎಂದು ಬರೆದರು. ಮನಸ್ಸನ್ನ ಹಿಂಡಿಕೊಂಡು ಜವಾಹರಲಾಲ್‌ಜೀ ಕಾಶ್ಮೀರದ ಗಡಿಯಿಂದ ಹಿಂದಿರುಗಿ ಬಂದರು. ಬಾಪೂಜಿ ಕಾಶ್ಮೀರಕ್ಕೆ ಹೋಗಿ ಶೇಖ್ ಅಬ್ದುಲ್ಲಾನನ್ನು ಭೇಟಿ ಮಾಡಬೇಕೆಂದು ಇಚ್ಛಿಸಿದರು. ಆದರೆ ಮಹಾರಾಜ ತನ್ನ ಅಹಂಕಾರದಲ್ಲಿ ಮುಳುಗಿದ್ದು ಬಾಪೂಜಿಗೆ ಬೇಡವೆಂದು ಹೇಳಿ ಅಡ್ಡಿ ಹಾಕುತ್ತಲಿದ್ದರು. ಜವಾಹರಲಾಲ ನೆಹರೂ ಮತ್ತು ಸರದಾರ್ ಪಟೇಲ್, ಗಾಂಧೀಜಿ ಮೂವರನ್ನು ಕಂಡರೂ ಆತನಿಗೆ ದ್ವೇಷ. ಬಾಪೂಜಿಯಂತೂ ಈ ರೀತಿಯ ನಕಾರಾತ್ಮಕ ಆದೇಶದೆದುರು ಸತ್ಯಾಗ್ರಹ ಮಾಡುವ ವ್ಯಕ್ತಿ, ಆದರೆ ಅವರು ದೇಶದ ಈ ಸೂಕ್ಷ್ಮವಾದ ಸ್ಥಿತಿಯನ್ನ ಸತ್ಯಾಗ್ರಹ ಹೂಡಿ ಇನ್ನೂ ಪೇಚಿನ ಸ್ಥಿತಿಗೆ ತರುವುದಿಲ್ಲವೆಂದು ಅವರು ಮೌಂಟ್‌ಬ್ಯಾಟನ್‌ಗೆ ವಚನ ಕೊಟ್ಟಿದ್ದರು. ಆದರೆ ಬಾಪೂಜಿ ಕಾಶ್ಮೀರ ಕುರಿತು ಬಹಳ ಚಿಂತಿತರಾಗಿದ್ದರು, ಎಷ್ಟೋ ಜನರ ಮುಖಾಂತರ ಮಹಾರಾಜರಿಗೆ ತಿಳಿಸಿ ಹೇಳಿ ವೈಯಕ್ತಿಕ ದುರ್ಗತಿ ಮತ್ತು ರಾಜಕೀಯ ವಿಪತ್ತಿನಿಂದ ಕಾಶ್ಮೀರವನ್ನು ಉಳಿಸಿಕೊಳ್ಳುವುದಕ್ಕಾಗಿ ಬಾಪೂಜಿ ಬಹಳ ಪ್ರಯತ್ನಪಟ್ಟರು. ಯಾರಾದರೂ ಮಲಗಿದ್ದರೆ ಅವರನ್ನ ಎಬ್ಬಿಸಲು ಸಾಧ್ಯವಾಗುತ್ತದೆ; ಆದರೆ ನಿದ್ದೆಯನ್ನು ನಟಿಸುತ್ತಿರುವ ಮನುಷ್ಯನನ್ನು ಎಬ್ಬಿಸುವುದು ಸಾಧ್ಯವಾಗುವುದಿಲ್ಲ. ಕಾಂಗ್ರೆಸ್ ಹೊರಗಿನವರ ಪಕ್ಷವಲ್ಲ ಎಂದು ಬಾಪೂಜಿ ಹೇಳುತ್ತಿದ್ದರು. ಕಾಂಗ್ರಸ್ ರಾಜ–ಪ್ರಜೆ ಎಲ್ಲರಿಗೂ ಸೇರಿದ ಸಂಸ್ಥೆ. ಕಾಂಗ್ರೆಸ್ ನಾಯಕರೊಂದಿಗೆ ಮಹಾರಾಜ ವಿಚಾರ ವಿನಿಮಯ ಮಾಡಿದರೆ ಆತನ ರಾಜ್ಯ ಅಧಿಕಾರ ಇವೆರಡೂ ಸುರಕ್ಷಿತವಾಗಿರುತ್ತದೆ, ಇಲ್ಲದಿದ್ದರೆ ವಿಘ್ನಗಳ ಬಿರುಗಾಳಿಯಲ್ಲಿ ರಾಜ ಮತ್ತು ರಾಜ್ಯ ಎರಡೂ ಹಾಳಾಗಿಹೋಗುತ್ತವೆ ಎಂದು ಬಾಪೂಜಿ ಹೇಳುತ್ತಿದ್ದರು. ೪ ಜುಲೈ ೧೯೪೭ರಂದು ಭಾರತದ ಪ್ರಧಾನಮಂತ್ರಿ ಜವಾಹರಲಾಲ ನೆಹರೂ ಕೂಡ ಮಹಾರಾಜ ಹರಿಸಿಂಹರಿಗೆ ತಿಳುವಳಿಕೆ ಹೇಳಿ ಪತ್ರ ಬರೆದು ಕಾಂಗ್ರೆಸ್‌ನ ಪ್ರತಿನಿಧಿಯಾದ

ಸರದಾರ್ ಪಟೇಲರೊಂದಿಗೆ ಮಾತನಾಡಿರೆಂದು ತಿಳಿಸಿದರು. ಆದರೆ 'ವಿನಾಶ ಕಾಲೇ ವಿಪರೀತ ಬುದ್ಧಿ' ಮಹಾರಾಜ ಹರಿಸಿಂಹ ಇಂತಹ ಎಲ್ಲಾ ಎಚ್ಚರಿಕೆಗಳನ್ನೂ ತಿರಸ್ಕರಿಸುತ್ತಾ ವಿಪತ್ತುಗಳನ್ನು ಬರಮಾಡಿಕೊಂಡರು.

೧೪ ಜುಲೈ ೧೯೪೭ರಂದು ಸಂವಿಧಾನ ಸಭೆಯ ಶುಭಾರಂಭವಾಯಿತು. ಆದರೆ ಆಗ ಕೂಡ ಕಾಶ್ಮೀರದ ಮಹಾರಾಜರು ತಾವು ಯಾವ ದೇಶದ ಜೊತೆ ಸೇರಿಕೊಳ್ಳುತ್ತೇನೆಂದು ನಿರ್ಣಯಿಸಿರಲಿಲ್ಲ. ಬಾಪೂಜಿಗೆ ಕಾಶ್ಮೀರವನ್ನು ಕುರಿತು ಭಯಂಕರವಾದ ವಿಪತ್ತು ಅಡರಲಿದೆ ಎಂದೆನಿಸುತ್ತಿತ್ತು. ಅವರು ಈ ವಿಷಯವಾಗಿ ಸರದಾರರಿಗೂ ಎಚ್ಚರಿಕೆ ನೀಡಿದ್ದರು. ೧೫ ಆಗಸ್ಟ್‌ಗೆ ಒಂದು ವಾರ ಮೊದಲು ಬಾಪೂಜಿ ಎರಡು ದಿನಗಳಿಗಾಗಿ ಮಾತ್ರ ಕಾಶ್ಮೀರಕ್ಕೆ ಹೋಗಿದ್ದರು, ಬಾಪೂಜಿ ಶ್ರೀನಗರದಲ್ಲಿ ಜನರ ಸಭೆಯಲ್ಲೂ ಮಾತನಾಡಿರಲಿಲ್ಲ, ಮಹಾರಾಜರಿಗೆ ಇಷ್ಟವಿರಲಿಲ್ಲವೆಂಬ ಕಾರಣಕ್ಕಾಗಿ ಬಾಪೂಜಿ ವಚನವನ್ನ ಪಾಲಿಸಿದರು. ಕಾಶ್ಮೀರದಲ್ಲಿ ಯಾವುದೇ ರಾಜಕೀಯ ಪ್ರಶ್ನೆಯನ್ನೂ ಕುರಿತು ಚರ್ಚಿಸಲಿಲ್ಲ, ಆದರೆ ಅವರಿಗೆ ಅಲ್ಲಿಯ ವಾತಾವರಣ ಇಷ್ಟವಾಗಿರಲಿಲ್ಲ. ಶ್ರೀನಗರದ ವಾತಾವರಣವನ್ನ ನೋಡಿದಾಗ, ಅಲ್ಲಿ ಒಬ್ಬ ಅವಿವೇಕಿ ರಾಜ ಸಿಡಿಮದ್ದಿನಿಂದ ತುಂಬಿದ ತೋಪುಖಾನೆಯ ಬಳಿ ಬೆಂಕಿಯ ಕಿಡಿಯನ್ನ ಹಿಡಿದು ಬೇಕಾಬಿಟ್ಟಿಯಾಗಿ ಆಟವಾಡುತ್ತಿದ್ದಾನೆ ಎಂದು ಅನಿಸುತ್ತಿತ್ತು. ಪ್ರಜೆ ರಾಜಕೀಯ ಉತ್ಥಾನವಾಗಲಿದೆಯೆಂದು ಆಸೆ ಇಟ್ಟುಕೊಂಡಿತ್ತು, ರಾಜ ಸಾಮಂತವಾದದಲ್ಲಿ ಪೂರ್ತಿ ಮುಳುಗಿದ್ದ. ಎಲ್ಲಿಂದ ಎಲ್ಲಿಯವರೆಗೂ ಹೋಲಿಕೆ ಇರಲಿಲ್ಲ. ಜೊತೆಗೆ ಭಾರತದಲ್ಲಿ ಹಿಂದೂ ಮುಸಲ್ಮಾನರ ನಡುವೆ ವೈಮನಸ್ಯ ಹೆಚ್ಚಾಗುತ್ತಿತ್ತು. ಹಿಂದೂಸ್ತಾನ–ಪಾಕಿಸ್ತಾನದ ನಡುವೆ ಕಾಶ್ಮೀರದ ಸಮಸ್ಯೆ ಎದ್ದು ನಿಲ್ಲಲಿದೆ ಎಂದು ಬಾಪೂಜಿಗೆ ಸ್ಪಷ್ಟವಾಗಿ ಅನಿಸಿತ್ತು. ಲಾರ್ಡ್ ಮೌಂಟ್‌ಬ್ಯಾಟನ್ ಕೂಡ ಮಹಾರಾಜನಿಗೆ ಬೇಗ ನಿಶ್ಚಯಿಸಿ ನಿರ್ಣಯ ತೆಗೆದುಕೊಂಡು ಮುಗಿಸಿಬಿಡಿ ಎಂದು ತಿಳಿಸಿದರು. ಕ್ರಾಂತಿ ಬಹಳ ತೀವ್ರವಾಗಿರುತ್ತೆ, ಕಾಲಚಕ್ರ ಯಾರಿಗೂ ಕಾದು ಕುಳಿತಿರುವುದಿಲ್ಲ, ಸರದಾರ್ ಪಟೇಲರು ಮಹಾರಾಜರಿಗೆ ಕಾಶ್ಮೀರ ಪಾಕಿಸ್ತಾನದ ಜೊತೆಗೆ ಸೇರಬಯಸಿದರೆ, ತಮಗೇನೂ ಅಭ್ಯಂತರವಿಲ್ಲವೆಂದೂ ಕೂಡ ಹೇಳಿದರು. ಆದರೆ ಮಹಾರಾಜ ಏನೂ ನಿಶ್ಚಯಿಸಲಾಗಿರಲಿಲ್ಲ. ಅವರು ಈ ಎರಡೂ ರಾಜ್ಯಗಳಿಂದ ಬೇರೆಯಾಗಿದ್ದುಕೊಂಡೇ ತಮ್ಮ ಬಲವನ್ನು ವೃದ್ಧಿಪಡಿಸಿಕೊಳ್ಳುತ್ತೇನೆಂದು ಮತ್ತು ಪಾಕಿಸ್ತಾನ – ಹಿಂದೂಸ್ತಾನ ಎರಡನ್ನೂ ಮಧ್ಯದಲ್ಲಿ ನೇತು ಹಾಕಿ ತಾನು ಲಾಭ ಪಡೆದುಕೊಳ್ಳುತ್ತಿರುತ್ತೇನೆಂದವರು ಯೋಚಿಸಿದ್ದರು. ನಿರ್ಣಯಿಸುವುದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆಂದು ೧೨ ಆಗಸ್ಟ್ ೧೯೪೭ರಂದು ಮಹಾರಾಜರು ಪಾಕಿಸ್ತಾನದ ಜೊತೆ ಒಂದು ವರ್ಷದವರೆಗೆ ತಾತ್ಕಾಲಿಕವಾಗಿ ಮೈತ್ರಿಯ ಸಂಧಿಯನ್ನೂ ಮಾಡಿಕೊಂಡಿದ್ದರು. ಈ ವಿಷಯವಾಗಿ

ಮಹಾರಾಜ ಬಹಳ ದೊಡ್ಡತಪ್ಪು ಮಾಡಿದರು. ಅವರು ಪಾಕಿಸ್ತಾನದ ಹಾಗೆ, ಭಾರತದ ಜೊತೆಯೂ ಒಪ್ಪಂದ ಮಾಡಿಕೊಳ್ಳಬೇಕೆಂದವರ ಇಚ್ಛೆ ಇತ್ತು, ಆದರೆ ಅದಕ್ಕೂ ಮೊದಲು ಪಾಕಿಸ್ತಾನ ಕಾಶ್ಮೀರಕ್ಕೆ ತನ್ನ ರೋಷವನ್ನ ತೋರಿಸುವುದಕ್ಕಾರಂಭಿಸಿತು.

ಆಗ ಕಾಶ್ಮೀರದ ಕಣಿವೆಯ ಕೆಳಗಿನ ಎಲ್ಲಾ ಸಾರಿಗೆಯೂ ಪಾಕಿಸ್ತಾನಕ್ಕೆ ಸೇರಿದ ಪಂಜಾಬ್‌ನ ಮಾರ್ಗವಾಗಿ ಹೋಗಿ ಬರುತ್ತಿತ್ತು. ಧಾನ್ಯ, ನೀರು, ಆವಶ್ಯಕ ಪದಾರ್ಥಗಳು, ಪೆಟ್ರೋಲ್, ಆಹಾರ ಪದಾರ್ಥಗಳು, ಅಂಚೆ – ತಾರು, ಟೆಲಿಫೋನ್, ರೈಲ್ವೆ, ಬ್ಯಾಂಕ್ ಇವೆಲ್ಲವೂ ಪಾಕಿಸ್ತಾನದ ಜೊತೆ ಕೂಡಿಕೊಂಡಿತ್ತು. ಭವನನಿರ್ಮಾಣ– ಯೋಗ್ಯ ಮರದ  ಕಾಶ್ಮೀರದ ರಫ್ತು ವ್ಯಾಪಾರ ಕೂಡ ಪಶ್ಚಿಮ ಪಂಜಾಬಿನ ನದಿಗಳ ಮೂಲಕ ನೆರವೇರುತ್ತಿತ್ತು, ಆ ದಿನಗಳ ಕಾಶ್ಮೀರ ತನ್ನ ಆರ್ಥಿಕ ವ್ಯವಸ್ಥೆ ಮತ್ತು ಪರಿವಹನಕ್ಕಾಗಿ ಪಾಕಿಸ್ತಾನದ ಪಂಜಾಬ್ ಮೇಲೆ ಪೂರ್ತಿ ನಿರ್ಭರವಾಗಿತ್ತು. ಮಹಾರಾಜ ಹರಿಸಿಂಹನ ಒಂದು ವರ್ಷದ ಮೈತ್ರಿ ಒಪ್ಪಂದದಿಂದ ಪಾಕಿಸ್ತಾನದ ಲಾಲಸೆ ಉದ್ರೇಕಗೊಂಡಿತು. ಈಗ ಪಾಕಿಸ್ತಾನ ನೋಡುವ ಹಾಗೆಯೇ ಕಾಶ್ಮೀರವನ್ನ ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸತೊಡಗಿತು. ಪಾಕಿಸ್ತಾನ ಸರಕಾರ ಕಾಶ್ಮೀರದ ಅರ್ಥವ್ಯವಸ್ಥೆಯ ಕುತ್ತಿಗೆಯನ್ನು ಹಿಚುಕಲಾರಂಭಿಸಿತು. ಉಪ್ಪು, ಚಹಾ, ಸಕ್ಕರೆ, ಎಣ್ಣೆ, ಪೆಟ್ರೋಲನ್ನು ಕಾಶ್ಮೀರಕ್ಕೆ ಹೋಗದಂತೆ ತಡೆಹಿಡಿಯಿತು. ೨೪ ಆಗಸ್ಟ್ ೧೯೪೭ರಲ್ಲಿ ಪಾಕಿಸ್ತಾನದ ಮುಖಪತ್ರ 'ಡಾನ್' ಕಾಶ್ಮೀರದ ಮಹಾರಾಜನಿಗೆ ಈ ಕ್ಷಣ ನಿರ್ಣಯ ತೆಗೆದುಕೊಳ್ಳಬೇಕೆಂದೂ ಕಾಶ್ಮೀರ ಪಾಕಿಸ್ತಾನಕ್ಕೆ ಸೇರಿಕೊಳ್ಳಬೇಕೆಂದು ಬೆದರಿಕೆ ಹಾಕಿತು. ಹಾಗೆ ಮಾಡದಿದ್ದಲ್ಲಿ ಭಯಾನಕ ವಿಪತ್ತು ಮೂಡಿ ಬರುವುದೆಂದೂ ನಂತರ ಆತ ಪಶ್ಚಾತ್ತಾಪ ಪಡಬೇಕಾಗುತ್ತದೆಂದು ತಿಳಿಸಿತು.

ಸೆಪ್ಟೆಂಬರ್ ೧೯೪೭ ರಲ್ಲಿ ಪಾಕಿಸ್ತಾನ ಕಾಶ್ಮೀರದ ಗಡಿಯಲ್ಲಿ ಕಬಾಯಿಲಿಗಳನ್ನು ಸಜ್ಜುಗೊಳಿಸುತ್ತಿದೆಯೆಂದು ಸುದ್ದಿ ಬಂತು. ಅಕ್ಟೋಬರ್ ೧೯೪೭ರಲ್ಲಿ ಪಾಕಿಸ್ತಾನದ ಸಶಸ್ತ್ರ ಪಡೆಗಳು ಜಮ್ಮೂ ಮೇಲೆ ದಾಳಿ ಮಾಡಿದುವು. ಅನೇಕ ಹಳ್ಳಿಗಳನ್ನು ಸುಟ್ಟರು, ಲೂಟಿ ಮಾಡಿದರು, ಜಮ್ಮೂವಿನ ಹಿಂದೂಗಳು ನಾಶವಾಗತೊಡಗಿದರು. ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ಆಕ್ರಮಣಕಾರಿ ಪಾಕಿಸ್ತಾನಿಗಳು ಎಲ್ಲಾ ರೀತಿಯ ಬಲಾತ್ಕಾರ ಮತ್ತು ಅನಾಚಾರ ನಡೆಸಿ ಹಳ್ಳಿಯವರನ್ನು ಕೊಂದು ಹಾಕುತ್ತಿದ್ದರು. ಈ ರೀತಿಯ ಆಕ್ರಮಣದೆದುರು ಕಾಶ್ಮೀರದ ಸೈನ್ಯ ನಿಷ್ಪ್ರಯೋಜಕವಾಗಿತ್ತು, ಕಾಶ್ಮೀರದಲ್ಲಿ ಏನೊಂದೂ ಹತೋಟಿಯಲ್ಲಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಮಹಾರಾಜನಿಗೆ ಪ್ರಜೆ ಸಮರ್ಥನೆ ನೀಡಿದರೆ ಸರಿಹೋಗುತ್ತದೆನ್ನಿಸಿತು. ಈ ಉದ್ದೇಶದಿಂದ ೨೯ ಸೆಪ್ಟೆಂಬರ್ ೧೯೪೭ರಂದು ಆತ ಶೇಖ್ ಅಬ್ದುಲ್ಲಾ ಮತ್ತವರ ಸಹಯೋಗಿಗಳನ್ನ ಬಿಡುಗಡೆ ಮಾಡಿದ. ಶೇಖ್ ಅಬ್ದುಲ್ಲಾ ಕಾಂಗ್ರೆಸ್

ಮುಖಂಡರ ಮಿತ್ರರಾಗಿದ್ದರು, ಬಾಪೂಜಿಯ ಪ್ರಶಂಸಕರಾಗಿದ್ದರು, ಪಾಕಿಸ್ತಾನದ 'ಮುಸ್ಲಿಂ ರಾಷ್ಟ್ರ'ದ ಸಿದ್ಧಾಂತವನ್ನೊಪ್ಪುತ್ತಿರಲಿಲ್ಲ, ಜೈಲಿನಿಂದ ಬಿಡುಗಡೆಯಾದ ನಂತರ ಯೋಗ್ಯವಾದುದನ್ನು ಮಾತ್ರ ತಾನು ಮಾಡುವೆನೆಂದು ಶೇಖ್ ಸಾಹಬರು ಹೇಳಿದರು. ನಲವತ್ತು ಲಕ್ಷ ಪ್ರಜೆಗಳ ಹಿತರಕ್ಷಣೆ ಮಾಡಿ, ಅವರಿಚ್ಛೆಯಂತೆ ಕಾಶ್ಮೀರದ ತೀರ್ಮಾನ ನಡೆಯುವುದೆಂದರು. ಆದರೆ ಪಾಕಿಸ್ತಾನಕ್ಕಿದ್ದ ಅಧೈರ್ಯ, ಲೋಲುಪತೆ, ಮಿತಿಮೀರಿದ್ದಾಗಿತ್ತು. ೧೫ ಅಕ್ಟೋಬರ್ ೧೯೪೭ರಂದು ಕಾಶ್ಮೀರದ ದಿವಾನ ಮೆಹರ್‌ಚಂದ್ ಮಹಾಜನ್ ಪಾಕಿಸ್ತಾನದ ಪ್ರಧಾನ ಮಂತ್ರಿಗೆ ಬಹಳ ಸಭ್ಯವಾದ ಭಾಷೆಯಲ್ಲಿ ಪತ್ರ ಬರೆದು, ಆಹಾರ ಸಾಮಗ್ರಿಗಳ ಕೊರತೆಯಿಂದಾಗಿ ಕಾಶ್ಮೀರ ಪಡುತ್ತಿರುವ ಕಷ್ಟಗಳನ್ನು ವಿವರಿಸಿದ್ದರು. 'ಪಾಕಿಸ್ತಾನ ಬ್ಯಾಂಕ್' ಕಾಶ್ಮೀರಿಗಳ ಚೆಕ್ ಮತ್ತು ಪೆನ್‌ಷನ್ ಕೂಡ ಪಾವತಿಸುತ್ತಿರಲಿಲ್ಲ ಮತ್ತು ಕಾಶ್ಮೀರದ ಆಮದು – ರಫ್ತು ಪೂರ್ತಿಯಾಗಿ ನಿಂತು ಹೋಗಿತ್ತು. ಕಾಶ್ಮೀರದಲ್ಲಿ ನಂಬರ್ ಪಡೆದಿದ್ದ ಮೋಟರುಗಳು ಹೋಗುವುದು ಬರುವುದಕ್ಕೂ ಪಾಕಿಸ್ತಾನ ತಡೆ ಒಡ್ಡಿತ್ತು, ಅದಕ್ಕೂ ಮೀರಿ ಪಾಕಿಸ್ತಾನದ ರೇಡಿಯೋ ನಿರಂತರವಾಗಿ ಕಾಶ್ಮೀರವನ್ನು ನಿಂದಿಸುತ್ತಿತ್ತು, ಸುಳ್ಳು ಆರೋಪಗಳನ್ನು ಹೊರಿಸುತ್ತಿತ್ತು. ಇಷ್ಟೆಲ್ಲಾ ಪಾಕಿಸ್ತಾನ ಸರಕಾರದ ಸಹಾಯ – ಅನುಮತಿ ಪಡೆದೇ ಆಗುತ್ತಿತ್ತು. ಆದ್ದರಿಂದ ಗವರ್ನರ್ ಜನರಲ್‌ನ ಅಧಿಕಾರದಿಂದ, ಕಾಯದೇ. ಆಝಮ್‌ರವರು ಇಂತಹ ಅನ್ಯಾಯ ಮತ್ತು ಅತ್ಯಾಚಾರವನ್ನು ತಡೆಯುವ ಕೃಪೆ ತೋರಬೇಕು, ಹಾಗಿಲ್ಲದಿದ್ದಲ್ಲಿ ಕಾಶ್ಮೀರ ಬೇರೆಯವರಿಂದ ಸಹಾಯ ಪಡೆದುಕೊಳ್ಳಬೇಕಾಗುತ್ತದೆ ಎಂಬ ಈ ಪತ್ರದಿಂದ ಜಿನ್ನಾ ಸಾಹೇಬ ಮತ್ತು ಪಾಕಿಸ್ತಾನ ಸರಕಾರ ಎರಡೂ ಕೋಪದಿಂದ ಕೆಂಡಕಾರಿದವು. ಇಂತಹ ಆರೋಪ ಮತ್ತು ಬೆದರಿಕೆಗೆ ಪ್ರತೀಕಾರ ಕೈಗೊಳ್ಳುವೆವು, ಕಾಶ್ಮೀರವೇನಾದರೂ ಪಾಕಿಸ್ತಾನಕ್ಕೆ ಸೇರದೆ ಇದ್ದಲ್ಲಿ ಭಯಂಕರ ಪರಿಣಾಮ ಎದುರಾಗುತ್ತದೆ, ಅದರ ಜವಾಬ್ದಾರಿ ಕಾಶ್ಮೀರ ಸರಕಾರ ಹೊರಬೇಕಾಗುತ್ತದೆ ಎಂದರು. ಈ ಬೆದರಿಕೆಯಿಂದ ಮಹಾರಾಜ ಹರಿಸಿಂಹ ಪೂರ್ತಿ ಹೆದರಿಕೊಂಡ. ಅಕ್ಟೋಬರ್ ೨೨ಕ್ಕೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಪಾಕಿಸ್ತಾನಿ ಅಧಿಕಾರಿಗಳ ಕುಶಲ ನೇತೃತ್ವದಲ್ಲಿ ಸಾವಿರಾರು ಮಂದಿ ಅಫ್ರೀದೀ ಮತ್ತು ಗಡಿನಾಡ ಕಬಾಯಿಲಿಗಳು ಎಬೊಟಾಬಾದ್, ಮಾನಸೇರಾ ಮಾರ್ಗವಾಗಿ ಮುಝಫರಾಬಾದ್ ಮೇಲೆ ಆಕ್ರಮಣ ನಡೆಸಿ ಕಾಶ್ಮೀರದ ಮೇಲೆ ದಾಳಿ ಮಾಡಿದರು. ಈ ಆಕ್ರಮಣಕಾರರಲ್ಲಿ ಪಾಕಿಸ್ತಾನಿ ಸೈನಿಕರು ಮತ್ತು ಅಧಿಕಾರಿಗಳು ಕೂಡ ಬಿಡುವಿನ ರಜೆ ತೆಗೆದುಕೊಂಡು ಕೆಲಸ ಮಾಡುತ್ತಿದ್ದರು. ಈ ಕಬಾಯಿಲಿಗಳ ಆಕ್ರಮಣ ಭಯಾನಕ ಸ್ವರೂಪದ್ದಾಗಿತ್ತು. ಲೂಟಿ ಮಾಡಿ, ಕೊಂದು, ಮಾರ್ಗದಲ್ಲೆಲ್ಲಾ ಬಲಾತ್ಕಾರ ಮಾಡುತ್ತಿದ್ದರು. ಈ ಜನರಿಗೆ ಹಿಂದೂಗಳು, ಮುಸಲ್ಮಾನರು, ಕ್ರಿಶ್ಚಿಯನ್, ಸಿಖ್ ಇತ್ಯಾದಿ ಯಾವ ಭೇದವೂ ಇರಲಿಲ್ಲ. ಬಾರಾಮುಲ್ಲಾದಲ್ಲಿದ್ದ ಕ್ರಿಶ್ಚಿಯನ್ ಸಂಸ್ಥೆಯ

ನನ್‌ಗಳ ಮೇಲೂ ಈ ಆಕ್ರಮಣಕಾರರು ಅತ್ಯಾಚಾರ ನಡೆಸಿದರು ಮತ್ತು ನಂತರದಲ್ಲಿ ಆ ಮಹಿಳೆಯರನ್ನು ಕೊಂದೂಬಿಟ್ಟರು. ೨೪ ಅಕ್ಟೋಬರ್‌ನಂದು ಬಂದ ಸುದ್ದಿಯ ಪ್ರಕಾರ ರಾವಲಪಿಂಡಿಯ ರಸ್ತೆಯಲ್ಲಿ ಪಾಕಿಸ್ತಾನಿ ಸೈನ್ಯ ವಾಹನಗಳು ಕಬಾಯಲಿಗಳನ್ನು ಕಾಶ್ಮೀರದ ಗಡಿಗೆ ತಂದುಬಿಡುತ್ತಿದ್ದರು. ೨೫ ಅಕ್ಟೋಬರ್‌ನಂದು ಮುಜ಼ಫರಾಬಾದ್ ಮತ್ತು ಡೊಮೊಲನ್ನು ವಶಕ್ಕೆ ತೆಗೆದುಕೊಂಡರು. ಬಾರಾಮುಲಾವನ್ನು ಲೂಟಿ ಮಾಡಿ ರಾತ್ರಿ ಅವರು ಅಲ್ಲೇ ಉಳಿದುಕೊಂಡರು. ಶ್ರೀನಗರ ಅಲ್ಲಿಂದ ೩೫ ಮೈಲಿ ದೂರದಲ್ಲಿತ್ತು. ಇಂತಹ ಆಕ್ರಮಣವನ್ನು ಎದುರಿಸಲು ಕಾಶ್ಮೀರ ರಾಜ್ಯದ ಸೈನ್ಯ ತೀರ ಕಡಿಮೆಯಾಗುತ್ತಿತ್ತು. ಇಂಗ್ಲಿಷ್ ಅಧಿಕಾರಿಗಳು ಬೇಕೆಂದೇ ಅವರಿಗೆ ಸರಿಯಾದ ತರಬೇತಿ ಕೂಡ ನೀಡಿರಲಿಲ್ಲ.

ಈಗ ಮಹಾರಾಜ ಹರಿಸಿಂಹ ಹೆದರಿಕೊಂಡರು. ಅವರು ಭಾರತ ಸರಕಾರದಿಂದ ಸಹಾಯ ಬೇಡಿದರು, ಆದರೆ ಲಾರ್ಡ್ ಮೌಂಟ್‌ಬ್ಯಾಟನ್ ಸರಕಾರಕ್ಕೆ ಸಲಹೆ ನೀಡಿ ಕಾಶ್ಮೀರ ಭಾರತಕ್ಕೆ ಸೇರುವವರೆಗೂ ಸಹಾಯ ನೀಡುವುದು ಯೋಗ್ಯವಲ್ಲ, ಅದು ನೀತಿಸಮ್ಮತವಾದುದಲ್ಲ, ಕಾನೂನುಬಾಹಿರವಾಗುತ್ತದೆಂದರು. ಅಕ್ಟೋಬರ್ ೨೫ರಂದು ಸರದಾರ ಪಟೇಲರ ಮುಖ್ಯ ಕಾರ್ಯದರ್ಶಿಯಾಗಿದ್ದ ವಿ.ಪಿ. ಮೆನನ್ ಕಾಶ್ಮೀರಕ್ಕೆ ಹೋದರು. ಅಲ್ಲಿ ಮಹಾರಾಜನೊಂದಿಗೆ ಚರ್ಚೆ ನಡೆಸಿ, ನಂತರ ಒಪ್ಪಂದಕ್ಕೆ ಸಹಿ ಹಾಕಿದರು ಮತ್ತು ಕಾಶ್ಮೀರ ರಾಜ್ಯ ಭಾರತದಲ್ಲಿ ವಿಧ್ಯುಕ್ತವಾಗಿ ಸೇರಿಕೊಂಡಿತು. ಆಗ ಮಹಾರಾಜನು ಕಾಶ್ಮೀರದಲ್ಲಿ ಪ್ರಜಾಸತ್ತೆಯನ್ನು ನೆಲೆಗೊಳಿಸುವುದಾಗಿ ಆಶ್ವಾಸನೆ ನೀಡಿದನು. ಆದ್ದರಿಂದಲೇ ಶೇಖ್ ಅಬ್ದುಲ್ಲಾರವರು ಖುದ್ದಾಗಿ ಕೂಡ ಭಾರತಸರಕಾರದಲ್ಲಿ ಸೇರಿಕೊಳ್ಳುವೆವೆಂದು ಬರೆಹದಲ್ಲಿ ಸಮರ್ಥನೆ ನೀಡಿದರು ಮತ್ತು ತಕ್ಷಣವೇ ಸಹಾಯನೀಡಿ ಕಾಶ್ಮೀರದ ಕಣಿವೆಯನ್ನು ಉಳಿಸುವಂತೆ ಯಾಚಿಸಿದರು. ಆಗ ಪ್ರತಿಯೊಂದು ಗಂಟೆ ಕೂಡ ಮಹತ್ವದ್ದಾಗಿತ್ತು, ಭಾರತ ಸರಕಾರ ಕಾಶ್ಮೀರ ರಾಜ್ಯವನ್ನು ಭಾರತಕ್ಕೆ ಸೇರಿಸಿಕೊಂಡಿತು, ಮತ್ತು ಆಕ್ರಮಣಕಾರರು ಹಿಂದಿರುಗಿದೊಡನೆ, ರಾಜ್ಯದಲ್ಲಿ ಶಾಂತಿ ನೆಲೆಗೊಂಡ ತಕ್ಷಣವೇ ಚುನಾವಣೆ ನಡೆಸಿ ಪ್ರಜೆಗಳಿಚ್ಛೆಯಂತೆ ಮುಂದಿನ ವ್ಯವಸ್ಥೆ ಮಾಡಲಾಗುವುದೆಂದು ನಿಶ್ಚಯಿಸಿತು.

ಅಕ್ಟೋಬರ್ ೨೭ರ ಬೆಳಗಿನ ಜಾವದಲ್ಲಿ ಮೇಜರ್ ಸೋಮನಾಥ ಶರ್ಮಾ ಅವರ ಮುಖಂಡತ್ವದಲ್ಲಿ ೩೩೦ ಜನ ಸಿಖ್ ಸೈನಿಕರ ಮೊದಲ ತಂಡ ವಿಮಾನದಲ್ಲಿ ಶ್ರೀನಗರಕ್ಕೆ ಬಂದಿಳಿಯಿತು. ಮೇಜರ್ ಸೋಮನಾಥ ಶರ್ಮಾರವರ ಪರಾಕ್ರಮದಿಂದಲೇ ಶತ್ರುಗಳು ಶ್ರೀನಗರದ ವಿಮಾನನಿಲ್ದಾಣವನ್ನು ವಶಕ್ಕೆ ತೆಗೆದುಕೊಳ್ಳಲಾಗಲಿಲ್ಲ, ಸೋಮನಾಥ ಶರ್ಮಾ ಯುದ್ಧದಲ್ಲಿ ಮಡಿದರು ಮತ್ತು ನಮ್ಮ ದೇಶದ ಮೊದಲ ಪರಮವೀರ ಚಕ್ರವನ್ನು ಅವರು ಕಾಲವಾದ ನಂತರ ಅವರಿಗೆ ನೀಡಲಾಗಿತ್ತು. ರಕ್ಷಣಾ ಸಚಿವಾಲಯದ ಜೊತೆಗೆ ದೇಶದಲ್ಲಿ ಎಷ್ಟು

ಸಣ್ಣ–ಪುಟ್ಟ ವಿಮಾನಗಳಿದ್ದುವೋ ಅವುಗಳ ಸಹಾಯ ಪಡೆದು ಸರಕಾರ ಸೈನ್ಯವನ್ನು ಕಾಶ್ಮೀರಕ್ಕೆ ಕಳುಹಿಸಿಕೊಟ್ಟಿತು, ಇಷ್ಟು ತೀವ್ರವಾಗಿ ನಡೆದ ಈ ವ್ಯವಸ್ಥೆಯನ್ನು ನೋಡಿ ಲಾರ್ಡ್ ಮೌಂಟ್‌ಬ್ಯಾಟನ್‌ಗೆ ಆಶ್ಚರ್ಯವಾಯಿತು. ೨೪ ಗಂಟೆಗಳು ತಡವಾಗಿದ್ದರೂ ಕಾಶ್ಮೀರ ನಾಶವಾಗಿ ಹೋಗುತ್ತಿತ್ತು.

ಆಕ್ರಮಣ ಮಾಡಿದ್ದ ಆಫ್ರೀದಿಗಳು ದುರಾಸೆಕೋರರು, ಬರ್ಬರರೂ ಆಗಿದ್ದರು. ಬಾರಾಮೂಲಾದಲ್ಲಿ ಲೂಟಿ–ಹತ್ಯೆ, ಶೀಲಭಂಗ ಮಾಡುವ ಲೋಭದಿಂದ ಮೂರುದಿನ ಕಾಲ ಅಲ್ಲೇ ಉಳಿದುಕೊಂಡರು. ಅವರ ಈ ಲೋಭದಿಂದಾಗಿ ಶ್ರೀನಗರ ಉಳಿಯಿತು. ಅವರುಗಳು ಬಾರಾಮೂಲಾದಿಂದ ಮುಂದುವರಿಯುವುದಕ್ಕೂ ಮೊದಲೇ ಭಾರತೀಯ ಸೈನಿಕರು ಆಕ್ರಮಣಕಾರರನ್ನು ಹಿಂದಟ್ಟಲು ಶುರು ಮಾಡಿದರು. ಆಗ ಕಾಶ್ಮೀರದಲ್ಲಿ ಆಡಳಿತ – ವ್ಯವಸ್ಥೆ ಯಾವುದೂ ಇರಲಿಲ್ಲ. ವಿದ್ಯುತ್ತು, ನೀರು, ಧಾನ್ಯ, ಆಹಾರ ಸಾಮಗ್ರಿಗಳ ಕೊರತೆ ತೀವ್ರವಾಗಿತ್ತು. ಮಹಾರಾಜ ಓಡಿ ಜಮ್ಮುಗೆ ಹೊರಟುಹೋಗಿದ್ದ, ಆದರೆ ಕಾಶ್ಮೀರದ ನ್ಯಾಷನಲ್ ಕಾನ್‌ಫರೆನ್ಸ್ ಸ್ವಯಂ ಸೇವಕರು ಮತ್ತು ಮುಖಂಡರು, ಮತ್ತು ಅವರಿಗಿಂತ ಹೆಚ್ಚಾಗಿ ಶ್ರೀನಗರದ ನಾಗರಿಕರು ಒಗ್ಗಟ್ಟಿನಿಂದ ಸ್ಥಿತಿಯನ್ನು ಹತೋಟಿಗೆ ತಂದರು. ರಾಜ ಮತ್ತು ಆತನ ಅಧಿಕಾರಿಗಳು ಇಲ್ಲದೇ ಇದ್ದರೂ ಶ್ರೀನಗರ ಮತ್ತು ಪೂರ್ತಿ ಕಾಶ್ಮೀರದ ಸುಮಾರು ಸಂಪೂರ್ಣ ವ್ಯವಸ್ಥೆ ಸುಂದರವಾಗಿ ನಡೆಯುತ್ತಿತ್ತು. ಆ ಜನರ ಸಂಘಟನೆ, ಸಹಕಾರ ಮತ್ತು ದೃಢ ಸಂಕಲ್ಪ ಆದರ್ಶವಾಗಿತ್ತು. ಆಗಿನ ಕಾಶ್ಮೀರದ ಸಾಂಪ್ರದಾಯಿಕ ಒಗ್ಗಟ್ಟನ್ನು ನೋಡಿ ಹಿಂದೂಸ್ತಾನದ ವಿಭಜನೆಯ ನೃಶಂಸ ವ್ಯವಹಾರ ಒಂದು ದುಃಸ್ವಪ್ನ ಎಂದನಿಸುತ್ತಿತ್ತು. ಭಾರತೀಯ ಸೈನಿಕರುಗಳು ಪುನಃ ಪೂಂಚ್ ಅನ್ನು ಗೆದ್ದರು ಮತ್ತು ಕದನ ವಿರಾಮವಾಗುವವರೆಗೂ ಆಕ್ರಮಣಕಾರರನ್ನು ಶ್ರೀನಗರದ ಕಣಿವೆಯಿಂದ ಹೊರಗಟ್ಟಿ ರಾಜ್ಯವನ್ನು ಸಾಕಷ್ಟುಮಟ್ಟಿಗೆ ನಿಶ್ಚಿಂತಗೊಳಿಸಿದ್ದರು. ಸ್ವಲ್ಪ ಹೆಚ್ಚು ಸಮಯ ಸಿಕ್ಕಿದ್ದರೆ ಭಾರತೀಯ ಸೈನಿಕರು ಪೂರ್ತಿ ಕಾಶ್ಮೀರವನ್ನೇ ಪಾಕಿಸ್ತಾನ ಆಕ್ರಮಣದಿಂದ ಬಿಡಿಸಿರುತ್ತಿದ್ದರು. ಆದರೆ ಹೀಗೆ ಏಟು ತಿಂದ ಮೇಲೆ ಪಾಕಿಸ್ತಾನ ಯುದ್ಧವಿರಾಮಕ್ಕಾಗಿ ಅಪೀಲು ಮಾಡಿತು, ಹೀಗೆ ಆಝಾದ್ ಕಾಶ್ಮೀರ ಪಾಕಿಸ್ತಾನದ ಕೈವಶವಾಗಿಯೇ ಉಳಿಯಿತು.

'ಕಾಯದೇ ಆಝಮ್' ಜಿನ್ನಾ ಪಾಕಿಸ್ತಾನೀ ವಿಜಯ ಘೋಷವಾದ ತಕ್ಷಣ ಶ್ರೀನಗರಕ್ಕೆ ಹೋಗುತ್ತೇನೆಂದು ಆಶಿಸಿದ್ದರು. ಅದೇ ಉದ್ದೇಶದಿಂದ ಪಾಪ, ಎಬೊಟಾಬಾದ್‌ನಲ್ಲಿ ಪಾಕಿಸ್ತಾನಿ ವಿಜಯದ ಸಮಾಚಾರಕ್ಕಾಗಿ ಕಾದುಕುಳಿತಿದ್ದರು. ಭಾರತ ಸರಕಾರದ ಸೈನಿಕರ ವಿಜಯ ಕೇಳಿ ಒದ್ದಾಡಿಹೋದ ಜಿನ್ನಾ ಸಾಹೇಬರು ಕಾಶ್ಮೀರದ ಮೇಲೆ ಆಕ್ರಮಣ ಮಾಡಲು ಪಾಕಿಸ್ತಾನೀ ಸೈನ್ಯ ಆದೇಶ ನೀಡಿದ್ದರು. ಆದರೆ ಸೇನಾಧಿಪತಿ ಫೀಲ್ಡ್ ಮಾರ್ಷಲ್ ಸರ್ ಆಕಿನಲೇಕನು ಜಿನ್ನಾನ ತಡೆದು

ಹೇಳಿದ : 'ಈಗ ಕಾಶ್ಮೀರ ಭಾರತದ ಭೂಮಿ, ಪಾಕಿಸ್ತಾನ ಭಾರತದ ಮೇಲೆ ಆಕ್ರಮಣ ಮಾಡಿದರೆ ಎಲ್ಲಾ ಇಂಗ್ಲಿಷ್ ಅಧಿಕಾರಿಗಳು ಪಾಕಿಸ್ತಾನವನ್ನು ಬಿಟ್ಟು ದೇಶಕ್ಕೆ ಹಿಂದಿರುಗುತ್ತಾರೆ.' ಬ್ರಿಟಿಷರ ಸಹಾಯವಿಲ್ಲದೆ ಜಿನ್ನಾ ಒಂದು ದಿನ ಕೂಡ ಇರಬಯಸುತ್ತಿರಲಿಲ್ಲ. ಆದ್ದರಿಂದ ಹೆದರಿ ಆಕ್ರಮಣ ಮಾಡಲು ನೀಡಿದ್ದ ಆದೇಶವನ್ನವರು ಹಿಂದಕ್ಕೆ ತೆಗೆದುಕೊಂಡರು. ಲಾರ್ಡ್ ಮೌಂಟ್‌ಬ್ಯಾಟನ್‌ನ ಪ್ರೆಸ್ ಸೆಕ್ರೆಟರಿ ಐಲನ್ ಕ್ಯಾಂಪ್‌ಬೆಲ್ ಬರೆದಿರುವ ಪ್ರಕಾರ, 'ಆ ದಿನಗಳಲ್ಲಿ ಜಿನ್ನಾ ಸಾಹೇಬರು ಲಾರ್ಡ್ ಮೌಂಟ್‌ಬ್ಯಾಟನ್ ಜೊತೆ ಸಂವಾದ ನಡೆಸಿ 'ಇದು ಭಾರತದ ಮೋಸ' ಎನ್ನುತ್ತಿದ್ದರು.' 'ಕಾಶ್ಮೀರ ಭಾರತಕ್ಕೆ ಸೇರಿದ ಮೇಲೆ ಅದನ್ನ ರಕ್ಷಿಸುವುದು ಭಾರತದ ಕರ್ತವ್ಯ' ಎಂದು ಮೌಂಟ್ ಬ್ಯಾಟನ್ ಹೇಳುತ್ತಲೇ ಇದ್ದರು. ಮೊದಲು ಜಿನ್ನಾ ಸಾಹೇಬರು ಪಾಕಿಸ್ತಾನದ ಸಹಾಯ, ನೇತೃತ್ವ ಪಡೆದುಕೊಂಡೇ ಕಾಶ್ಮೀರದ ಮೇಲೆ ಆಕ್ರಮಣ ನಡೆದಿತ್ತೆಂದು ಒಪ್ಪಿಕೊಳ್ಳುತ್ತಿರಲಿಲ್ಲ. ಆದರೆ ಮೌಂಟ್ ಬ್ಯಾಟನ್ನರು ಜಿನ್ನಾಗೆ ಭಾರತೀಯ ವಾಯುಸೇನೆ ಮತ್ತು ಸೈನ್ಯಶಕ್ತಿಯ ಕಲ್ಪನೆ ನೀಡಿದ ನಂತರ ಜಿನ್ನಾ ಸಾಹೇಬರು ಎಲ್ಲಾ ವಿಷಯಗಳನ್ನೂ ಪರಿಹರಿಸುವಂತೆ ಕೋರಿದರು. ಆಗ ಕಾಯದೇ ಆಜ಼ಂ ಬಹಳ ದುರ್ಬಲರಾಗುತ್ತಿದ್ದರು, ಗಾಬರಿಗೊಂಡು ಸರಿ–ತಪ್ಪಿನ ಭೇದದಲ್ಲಿ ಜಾರಿಹೋಗುತ್ತಿದ್ದರೆಂದು ಕಾಣುತ್ತದೆ.'

ಈ ಯದ್ಧದಲ್ಲಿ ಪಾಕಿಸ್ತಾನಿ ಆಕ್ರಮಣಕಾರಿಗಳ ಸಂಖ್ಯೆ ಸುಮಾರು ಒಂದು ಲಕ್ಷದವರೆಗೆ ಇತ್ತೆಂದು ಕಾಣುತ್ತದೆ. ಆ ಕಬಾಯಿಲಿಗಳ ಎದುರು ಭಾರತ ಸರಕಾರ ಒಟ್ಟು ೧೬,೦೦೦ ಸೈನಿಕರನ್ನು ಕಾಶ್ಮೀರಕ್ಕೆ ಕಳುಹಿಸಲು ಸಾಧ್ಯವಾಗಿತ್ತು. ಪಾಕಿಸ್ತಾನ ಸರಕಾರ ಎಷ್ಟೇ ಖಂಡಿಸಿ ಹೇಳಿದರೂ, ಪಾಕಿಸ್ತಾನದ ಸಹಾಯ ಪಡೆದೇ ಕಾಶ್ಮೀರದ ಮೇಲೆ ಆಕ್ರಮಣ ನಡೆದಿತ್ತು ಅನ್ನಲು ಭಾರತ ಸರಕಾರದ ಬಳಿ ಪ್ರಮಾಣೀಕೃತ ಪುರಾವೆಗಳು ಇವೆ. ಜಿನ್ನಾ ಸಾಹೇಬರು ಯಾವಾಗಲೂ ಅಷ್ಟೆ, ಪ್ರತಿಯೊಂದು ಕಡೆಯೂ ಕೆಟ್ಟ ಹಠ ಮಾಡಿ ತಮ್ಮ ಬೇಡಿಕೆಗಳಿಗೆ ಬಹುಸಂಖ್ಯಾತರ ತಲೆ ಮೇಲೆ ಗೂಬೆ ಕೂರಿಸಿ, ಕಾಂಗ್ರೆಸ್‌ನ ಅನುಚಿತ ಲಾಭ ಪಡೆದುಕೊಳ್ಳುವುದು ಅವರಿಗೆ ವಾಡಿಕೆಯಾಗಿ ಹೋಗಿತ್ತು. ಜೂನಾಗಢದ ವಿಷಯವಾಗಿ ಕೂಡ ಜಿನ್ನಾ ಸಾಹೇಬರೇ ಹೇಳಿ ಪ್ರಜೆಗಳ ಮತ ಕೇಳುವ ಅಗತ್ಯವೇ ಇಲ್ಲ ಅಂತ ಪ್ರತಿಪಾದಿಸಿಬಿಟ್ಟಿದ್ದರು. ಈ ಸಿದ್ಧಾಂತ ಇಟ್ಟುಕೊಂಡು ಕಾಶ್ಮೀರದ ಮಹಾರಾಜ ಭಾರತದೊಳಕ್ಕೆ ಸೇರುತ್ತೇನೆಂದು ನಿರ್ಣಯ ತೆಗೆದುಕೊಂಡಾಗ ಪಾಕಿಸ್ತಾನಕ್ಕೆ ಸಹಿಸಲಿಲ್ಲ. ಭಾರತದ ಹಸ್ತಕ್ಷೇಪವನ್ನ ಅದು ವಿರೋಧಿಸಿತು. ಆದರೆ ಜಿನ್ನಾ ಸಾಹೇಬರು ಪರೋಕ್ಷವಾಗಿ ಕಾಶ್ಮೀರದ ಮೇಲೆ ನಡೆದ ಆಕ್ರಮಣ ಪಾಕಿಸ್ತಾನಿ ಯೋಜನೆಯಾಗಿತ್ತು ಅಂತ ಒಪ್ಪಿಕೊಂಡಿದ್ದರು. ಭಾರತ ಸರಕಾರದ ಸ್ಫೂರ್ತಿಯಿಂದ ಅದು ನಂತರ ಪರಾಜಿತವಾಗಿತ್ತು, ಕಾಶ್ಮೀರದ ಮೇಲೆ ಆಕ್ರಮಣ ನಡೆಸಿದ್ದರ ಜವಾಬ್ದಾರಿಯನ್ನ ಪಾಕಿಸ್ತಾನಿ ಸರಕಾರ ಮೊದಲು

ಸ್ಪಷ್ಟವಾಗಿ ತಿರಸ್ಕರಿಸಿತ್ತು ಅನ್ನುವುದನ್ನ ಬಹುಶಃ ಕಾಯದೇ ಆಜ಼ಮ್ ಮರೆತುಹೋಗಿದ್ದರೆಂದು ಕಾಣುತ್ತೆ. ಆಗಿನ ರಾಜಾ ಹರಿಸಿಂಹನಷ್ಟೇ ಅಲ್ಲದೆ, ಕಾಶ್ಮೀರದ ಪ್ರಜೆಗಳು, ಅವರ ಲೋಕಪ್ರಿಯ ಸಂಸ್ಥೆ ಹಾಗೂ ಗಣ್ಯಮಾನ್ಯ ನೇತಾರರಾಗಿದ್ದ ಶೇಖ್ ಅಬ್ದುಲ್ಲಾ ಇವರೆಲ್ಲರ ಪೂರ್ಣ ಸಹಮತಿಯಿಂದಲೇ ಕಾಶ್ಮೀರವನ್ನು ಭಾರತದಲ್ಲಿ ಸೇರಿಸಿಕೊಳ್ಳಲಾಗಿತ್ತು. ಕಾಶ್ಮೀರದ ಮುಖಂಡರ ಸ್ಪಷ್ಟ ಬೇಡಿಕೆ ಬಂದ ನಂತರವೇ ಕಣಿವೆಯನ್ನು ರಕ್ಷಿಸುವುದಕ್ಕಾಗಿ ಇಷ್ಟೊಂದು ಪರಿಶ್ರಮ, ಭಯಂಕರವಾಗಿ ಖರ್ಚಿನ ಹೊಣೆ ಹೊತ್ತು ಭಾರತ ಸೈನ್ಯ ಸಾಧನ ಮತ್ತು ಪ್ರಾಣ – ಪದಾರ್ಥಗಳ ನಷ್ಟವನ್ನು ಅನುಭವಿಸಿತ್ತು. ಬಹುಶಃ ಪಾಕಿಸ್ತಾನದ ಸರಕಾರ ಮತ್ತು ಪ್ರಪಂಚದ ಜನ ಈ ತಥ್ಯಗಳನ್ನು ಮರೆತು ಹೋಗುತ್ತಾರೆಂದು ಕಾಣುತ್ತದೆ ಅಥವಾ ಬೇಕೆಂದೇ ಮರೆಯಲಿಚ್ಛಿಸುತ್ತಾರೋ ಏನೋ!

ಕಾಶ್ಮೀರದ ಈ ಯುದ್ಧದಿಂದ ನಷ್ಟ ಅನುಭವಿಸಿಯೇ ಇದ್ದೆವು. ಭಾರತೀಯ ಸೈನ್ಯದ ಬ್ರಿಗೇಡಿಯರ್ ಉಸ್ಮಾನ್ ರಾಜೌರಿ ಮತ್ತು ಪೂಂಛ್ ಅನ್ನು ರಕ್ಷಿಸುವಾಗ ಮಡಿದರು. ಆ ಮುಸಲ್ಮಾನ ವೀರನಿಗೆ ಪ್ರಾಮಾಣಿಕತೆ ಮತ್ತು ಕರ್ತವ್ಯ ಪರಾಯಣತೆಗಳು ಮಾತ್ರ ತಿಳಿದಿದ್ದವು. ಕೋಮುಭಾವನೆಯ ಸ್ಪರ್ಶ ಕೂಡ ಆತನಿಗಿರಲಿಲ್ಲ. ಬ್ರಿಗೇಡಿಯರ್ ಉಸ್ಮಾನ್‌ನಂತಹ ವೀರರು ಈ ರಾಷ್ಟ್ರವನ್ನು ಕಟ್ಟಿದ್ದಾರೆ, ಅದೇ ರೀತಿ ನ್ಯಾಷನಲ್ ಕಾನ್‌ಫರೆನ್ಸ್‌ನ ಯುವ ನಾಯಕ ಬಾರಾಮೂಲಾವನ್ನು ರಕ್ಷಿಸುವಾಗ ನಗರದ ಜನರನ್ನು ಸಂಘಟಿಸಿ, ಆಕ್ರಮಣಕಾರರನ್ನು ಎದುರಿಸಿದ್ದ. ದುರ್ಭಾಗ್ಯವಶಾತ್ ಮೀರ್ ಮಕಬೂಲ್ ಶೇರ್‌ವಾನಿ ಶತ್ರುಗಳ ಕೈಗೆ ಸಿಕ್ಕಿಬಿದ್ದ. ಅವರು ಅವನಿಂದ ಪಾಕಿಸ್ತಾನದ ಆಜ಼ಾದ್ ಕಾಶ್ಮೀರ ಸರಕಾರಕ್ಕೆ ಪ್ರಾಮಾಣಿಕನಾಗಿರುವಂತೆ ಪ್ರತಿಜ್ಞೆ ಮಾಡಲು ಹೇಳಿದರು. ಆದರೆ ಶೇರವಾನಿ ಬೇರೆ ಯಾರ ಆಳ್ವಿಕೆಯನ್ನೂ ಒಪ್ಪಿಕೊಳ್ಳಲು ಸಿದ್ಧವಾಗಲಿಲ್ಲ ಹಾಗೂ ಈ ಆಕ್ರಮಣಕಾರರ ವಿಜಯ ನಾಲ್ಕು ದಿನಗಳ ಬೆಳದಿಂಗಳ ರಾತ್ರಿಯ ಹಾಗಿರುತ್ತೆ, ಇನ್ನೆರಡೇ ದಿನಗಳಲ್ಲಿ ಭಾರತೀಯ ಸೈನ್ಯ ಬಂದು ನಿಮ್ಮನ್ನು ಹಿಂದಕ್ಕಟ್ಟುತ್ತದೆ ಎಂದು ಹೇಳಿದ. ಪಾಕಿಸ್ತಾನಿ ಆಕ್ರಮಣಕಾರರು ಅವನನ್ನು ಗುಂಡು ಹಾರಿಸಿ ಕೊಂದರು. ಮಾರನೆಯ ದಿನವೇ ಭಾರತೀಯ ಸೈನ್ಯ ಬಾರಾಮೂಲಾ ತಲಪಿತು ಮತ್ತು ಮೀರ್ ಮಕಬೂಲ್ ಶೇರವಾನಿಯ ಮಾತನ್ನು ಪೂರ್ಣ ಗೊಳಿಸಿತು. ಆದರೆ ಮೀರ್ ಮಕಬೂಲ್ ಕಾಶ್ಮೀರಕ್ಕಿಂತಲೂ ಶ್ರೇಷ್ಠವಾದ ಸ್ವರ್ಗದ ಮಾರ್ಗದಲ್ಲಿ ಆಗಲೇ ಹೋಗಿ ಆಗಿತ್ತು. ತಮ್ಮ ಪ್ರಾರ್ಥನಾ ಸಭೆಯಲ್ಲಿ ಬಾಪೂಜಿ ಮೀರ್‌ಗೆ ಶ್ರದ್ಧಾಂಜಲಿ ನೀಡಿದರು ಮತ್ತು ಇಂತಹ ಬಲಿದಾನದಿಂದಲೇ ರಾಷ್ಟ್ರ ನಿರ್ಮಾಣವಾಗುತ್ತದೆಂದು ಹೇಳಿದರು. ಮೀರ್‌ನ ಮರಣವನ್ನ ಹಿಂದೂ, ಸಿಖ್, ಮುಸಲ್ಮಾನರೆಲ್ಲರೂ ಹೊಗಳುತ್ತಾರೆ.

ಲಾರ್ಡ್ ಮೌಂಟ್‌ಬ್ಯಾಟನ್ ಸಲಹೆ ಮೇರೆಗೆ ಪ್ರಧಾನ ಮಂತ್ರಿ ಜವಾಹರಲಾಲ್

ನೆಹರೂ ವಿಶ್ವ ಸಂಸ್ಥೆಯ ಎದುರು ಪಾಕಿಸ್ತಾನದ ವಿರುದ್ಧ ದೂರು ದಾಖಲಿಸಿದರು. ಯುನೈಟೆಡ್ ನೇಷನ್ಸ್ ಎದುರು ನ್ಯಾಯ ಬೇಡುವುದರಿಂದ ಆ ವಿಶ್ವಸಂಸ್ಥೆಯ ಮಹತ್ವ ಹಿರಿದಾಗುತ್ತದೆಂದೂ, ಭಾರತ ಅಂತರರಾಷ್ಟ್ರೀಯ ಸಂಸ್ಥೆಯಲ್ಲಿ ತನ್ನ ನಂಬಿಕೆಯ ಒಳ್ಳೆಯ ಪರಿಚಯ ನೀಡಬಲ್ಲುದೆಂದೂ ಪಂಡಿತಜೀಗೆ ಅನಿಸಿರಬಹುದು. ಕೊನೆಯವರೆಗೂ ಬಾಪೂಜಿ ಮತ್ತು ಸರದಾರ್ ಪಟೇಲರು ಈ ಹೆಜ್ಜೆಯನ್ನು ವಿರೋಧಿಸುತ್ತಲೇ ಇದ್ದರು. ಬಾಪೂಜಿಗೆ, 'ಕಾಶ್ಮೀರ ಇಬ್ಬರು ಸಹೋದರರ ನಡುವಣ ವಿಷಯವಾಗಿತ್ತು, ಅದನ್ನು ಪರಸ್ಪರ ಒಪ್ಪಿಗೆಯಿಂದ ಪರಿಹರಿಸಿಕೊಳ್ಳಬೇಕು, ಪ್ರಪಂಚದ ಎದುರು ನಮ್ಮ ವೈಮನಸ್ಯವನ್ನ ತೋರಿಸುವ ಅಗತ್ಯವಿಲ್ಲ, ಪ್ರಪಂಚದ ಜನ ಕೋತಿ – ಬೆಕ್ಕಿನ ನ್ಯಾಯದ ತೀರ್ಪು ನೀಡುತ್ತಾರೆ, ಅದರ ನಷ್ಟ ಹಿಂದೂಸ್ತಾನ – ಪಾಕಿಸ್ತಾನಕ್ಕಾಗುತ್ತದೆ' ಅಂತ ಅನಿಸುತ್ತಿತ್ತು. ಆದರೆ ಆಗ ನೆಹರೂ ಅವರ ಭಾವುಕತೆಯಿಂದಾಗಿ ನಮ್ಮ ದೇಶದ ಅಂತರಿಕ ಸಮಸ್ಯೆಗೆ ವಿನಾಕಾರಣ ಅಂತರಾಷ್ಟ್ರೀಯ ಸ್ವರೂಪ ಕೊಟ್ಟುಬಿಟ್ಟರು. ೩೦ ಡಿಸೆಂಬರ್ ೧೯೪೭ ರಂದು ಯು.ಎನ್. ಸೆಕ್ಯುರಿಟಿ ಕೌನ್ಸಿಲ್ ಎದುರು ಪಾಕಿಸ್ತಾನದ ವಿರುದ್ಧ ಭಾರತ ದೂರು ದಾಖಲಿಸಿತು. ಒಳ್ಳೆಯ ಮನುಷ್ಯ ಯಾವಾಗಲೂ ಕೋರ್ಟಿನ ಮೆಟ್ಟಿಲನ್ನು ತುಳಿಯಬಾರದು ಅಂತ. ಒಂದು ಗುಜರಾತಿ ಗಾದೆ ಇದೆ, ಅದರಿಂದ ಗೌರವ ಕುಂಠಿತವಾಗುತ್ತೆ ಅಂತ ನಮ್ಮ ದೇಶದ ಸ್ಥಿತಿ ಹಾಗೇ ಆಯಿತು. ಕಾಶ್ಮೀರದ ಕೇಸ್‌ನಲ್ಲಿ ಬೇರೆಯವರು ನಮ್ಮ ಮೇಲೆ ಆಕ್ರಮಣ ಮಾಡಿದರು. ಆದರೆ ಈಗ ನಾವು ಮತ್ತು ನಮ್ಮ ದೇಶ ಪ್ರಪಂಚದ ಕೋರ್ಟಿನ ಕಟಕಟೆಯಲ್ಲಿ ಅಪರಾಧಿಗಳಾಗಿ ನಿಂತಿದ್ದೇವೆ. ಎಷ್ಟೋ ವರ್ಷಗಳ ಮೊದಲು ನಾನು ಅಮೆರಿಕಾದ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದೆ, ನಮ್ಮ ಮೇಷ್ಟರಿಗೆ ಬೇರೆ ಬೇರೆ ದೇಶದ ವಿದ್ಯಾರ್ಥಿಗಳ ಜೊತೆ ಚರ್ಚೆ – ವಿವಾದ ವ್ಯವಸ್ಥೆಗೊಳಿಸುವುದರಿಂದ ಆನಂದ ಸಿಗುತ್ತಿತ್ತು. ಅವರು ನನ್ನನ್ನು ಮತ್ತು ಪಾಕಿಸ್ತಾನದ ವಿದ್ಯಾರ್ಥಿ ಇಸ್ಲಾಂನನ್ನು ಕಾಶ್ಮೀರದ ವಿಷಯವಾಗಿ ಚರ್ಚೆ ಮಾಡಲು ನಿಲ್ಲಿಸಿದರು. ಸುಮಾರು ನಲವತ್ತು ವಿದ್ಯಾರ್ಥಿಗಳಿದ್ದ ಆ ತರಗತಿಯಲ್ಲಿ ಮಿಕ್ಕವರು ನಿರ್ಣಾಯಕರ ಹಾಗೆ ನಮ್ಮ ತರ್ಕಗಳನ್ನು ಕೇಳುತ್ತಿದ್ದರು. ನಾನು ಕಾಪಿ ಪುಸ್ತಕ ಯಾವುದನ್ನೂ ಇಟ್ಟುಕೊಳ್ಳದೆ ಕಾಶ್ಮೀರದ ಕತೆಯನ್ನು ಅಂಕಿ–ಸಂಖ್ಯೆ ನೀಡಿ ಸರಳವಾಗಿ ಪ್ರಸ್ತುತಪಡಿಸಿದೆ. ಇಸ್ಲಾಂ ಪಾಕಿಸ್ತಾನ ದೂತಾವಾಸದಿಂದ ಸಾಹಿತ್ಯವನ್ನು ತರಿಸಿಕೊಂಡಿದ್ದ, ಅದನ್ನು ಓದಿದ. ವಿಶ್ವಪ್ರಸಿದ್ಧಿ ಪಡೆದ, ನನ್ನ ಪ್ರೊಫೆಸರ್ ಡಾ॥ ವ್ಯಾನ್‌ವೋಕನ್ ವರ್ಗ್‌ರು ಮತ್ತೆಲ್ಲ ಬಿಳಿಯ ವಿದ್ಯಾರ್ಥಿಗಳೂ ಮಿಸ್ ಗಾಂಧಿ ಚೆನ್ನಾಗಿ ಮಾತನಾಡುತ್ತಾಳೆ; ಅವಳ ಭಾಷಣ ಪ್ರಭಾವಯುತವಾಗಿದೆ, ಆದರೆ ಪಾಕಿಸ್ತಾನದ ವಾದ ಸರಿಯಾಗಿದೆ ಎಂದು ಘೋಷಿಸಿದರು. ನನ್ನ ತಾರ್ಕಿಕವಾದ ಚರ್ಚೆಯನ್ನು ವಾಕ್‌ಪಟುತ್ವ ಎಂದು ಹೇಳಿ ತಳ್ಳಿಹಾಕಿದರು. ಇಸ್ಲಾಂನ ಉದ್ದದ ಭಾಷಣವನ್ನು ಕೇಳಿ ಆ ವಿದ್ಯಾರ್ಥಿಗಳು

ಪಾಕಿಸ್ತಾನವನ್ನು ಸಮರ್ಥಿಸಿದರು, ಇದೊಂದು ಸಾಮಾನ್ಯವಾದ ವೈಯಕ್ತಿಕ ಅನುಭವ. ಆದರೆ ಆರಂಭದ ೧೫–೧೬ ವರ್ಷಗಳ ಕಾಲ ಭಾರತ ಸರಕಾರ ಹಣ, ಸಮಯ, ಶಕ್ತಿ ಮತ್ತು ಬುದ್ಧಿ ಖರ್ಚು ಮಾಡಿತ್ತಲ್ಲಾ, ಅದು ಭಯಂಕರವಾದ ಹಾಳು, ಅಷ್ಟೇ. ಕಾಶ್ಮೀರದ ವಿಷಯವಾಗಿ ನಾವು ಕಾರಣವಿಲ್ಲದೆ ಅಪರಾಧಿಗಳಾಗಿಬಿಟ್ಟಿದ್ದೇವೆ. ಸತ್ಯ ಮಾತ್ರ ಬೇರೆಯದೇ ಆಗಿದೆ. ನೆಹರೂಜೀಯ ಉತ್ಸಾಹದಿಂದ ಪ್ರೇರಿತವಾದ ಮುಗ್ಧತೆ ಅಥವಾ ಮೂರ್ಖತನ ನಮಗೆ ಬಹಳ ದುಬಾರಿಯಾಯಿತು. ನಾವು ಇವತ್ತಿನವರೆಗೂ ಆ ತಪ್ಪಿನ ಸಜೆಯನ್ನು ಅನುಭವಿಸುತ್ತಾ ಇದ್ದೇವೆ. ಬಾಪೂಜಿಗೆ ಈ ಎಲ್ಲಾ ವಿವಾದದಿಂದ ಕೆಟ್ಟ ಹೆಸರು ಬರುತ್ತದೆ ಅಂತ ಕಲ್ಪನೆ ಇತ್ತು, ಆದರೆ ನೆಹರೂಜಿ ಅದನ್ನು ಕೇಳಿಸಿಕೊಳ್ಳಲಿಲ್ಲ. ವಿದೇಶ ನೀತಿ ಬಾಪೂಜಿಗೇನು ಅರ್ಥವಾಗುತ್ತೆ ಎಂದು ಅವರಿಗೆ ಅನಿಸುತ್ತಿತ್ತು. ಆದ್ದರಿಂದ ಬಾಪೂಜಿ ಕುರಿತು ಅಷ್ಟು ಮರ್ಯಾದೆ ಇದ್ದರೂ ನೆಹರೂಜಿ ಲಾರ್ಡ್ ಮೌಂಟ್ ಬ್ಯಾಟನ್‌ನ ಸಲಹೆಗೆ ಬೆಲೆಕೊಟ್ಟರು, ಬಾಪೂಜಿ ಮಾತು ಕೇಳಲಿಲ್ಲ.

ಈ ಕಾಶ್ಮೀರದ ಯುದ್ಧವನ್ನು ಕುರಿತು ಎಷ್ಟೋ ಜನ ಬಾಪೂಜಿ ಅಹಿಂಸೆಯಲ್ಲಿಟ್ಟಿದ್ದ ನಂಬಿಕೆಗೆ ಪ್ರಚೋದಿಸಿ ಸವಾಲೊಡ್ಡಿ, ಬೇರೆಯವರಿಗೆ ಉಪದೇಶ ಕೊಡುವುದಕ್ಕೆ ಅಹಿಂಸೆ ಇರುತ್ತದೆ, ತಮ್ಮ ದೇಶದ ಹಿತಕ್ಕಾಗಿ ಬಾಪೂಜಿ ಅಹಿಂಸೆಯನ್ನು ಬಿಟ್ಟು ಯುದ್ಧ ಹಿಂಸೆಯನ್ನ ಸಮರ್ಥಿಸಿದರು ಎಂದರು. ಅದಕ್ಕೆ ಬಾಪೂಜಿ ಉತ್ತರ ನೀಡಿ ಹೇಳಿದರು, 'ಅಹಿಂಸೆಯಲ್ಲಿ ನನಗೆ ಅಪಾರ ನಂಬಿಕೆ ಇದೆ, ಆದರೆ ಅಹಿಂಸೆಯನ್ನ ಆದೇಶ ನೀಡಿ, ಜೋರು ಮಾಡಿ ಕಲಿಸಲಾಗುವುದಿಲ್ಲ, ತನ್ನ ಸಿದ್ಧಾಂತದ ಮೇಲೆ ಧೈರ್ಯವಾಗಿ ನಿಂತಿರುವ ತಾಕತ್ತಿನ ಮೇಲೆ ಮನುಷ್ಯನ ಅಹಿಂಸೆ ನಿಂತಿರುತ್ತದೆ. ಪೂರ್ತಿ ಶ್ರೀನಗರ, ನ್ಯಾಷನಲ್ ಕಾನ್‌ಫರೆನ್ಸ್‌ನ ಮುಖಂಡರು, ಕಾರ್ಯಕರ್ತರು ಎಲ್ಲರೂ ಕಾಶ್ಮೀರವನ್ನು ರಕ್ಷಿಸಲು ಅಹಿಂಸಾತ್ಮಕ ಸತ್ಯಾಗ್ರಹದಲ್ಲಿ ಮೀರ್ ಮಕಬೂಲ್ ಶೇರವಾನಿ ಹಾಗೆ ಮಡಿಯಲು ತಯಾರಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದರು, ಆದರೆ ಹಾಗೆ ಆಗಲು ಸಾಧ್ಯವಿರಲಿಲ್ಲ, ಆದ್ದರಿಂದ ಬಾಪೂಜಿ ನ್ಯಾಯದ ಪಕ್ಷವನ್ನು ತೊರೆದಿದ್ದರೆ ತಪ್ಪಾಗುತ್ತಿತ್ತು, ಬಾಪೂಜಿ 'ತಮ್ಮ ಅಹಿಂಸೆ ಹೇಡಿಗಳ, ದುರ್ಬಲರ ಅಹಿಂಸೆಯಾಗಿರಲಿಲ್ಲ, ಪರ್ವತಗಳ ಗುಹೆಗಳಲ್ಲಿ ಮರೆಯಾಗಿ ಕುಳಿತಿರುವಂಥದಲ್ಲ' ಎಂದು ಹೇಳುತ್ತಿದ್ದರು. ಬಾಪೂಜಿಯ ಅಹಿಂಸೆ ಪ್ರತಿ ದಿನ ಗಲ್ಲಿ, ಮೂಲೆಗಳಲ್ಲಿ ಕಳೆಯುವಂತಹುದು, ಅವರ ಅಹಿಂಸೆ ಸಾಮಾಜಿಕ ಕ್ರಾಂತಿಯ ಅಮೋಘ ಅಸ್ತ್ರವಾಗಿತ್ತು, ಅದರ ಪ್ರತಿಯೊಂದು ಕ್ಷಣವೂ ಎಂತಹ ಸ್ಥಿತಿಯಲ್ಲೂ ಉಪಯೋಗಿಸುವಂಥದು.

ಜೀವನದಲ್ಲಿ ಯಾವಾಗಲೂ ಅಹಿಂಸಕ ಮಿತ್ರರು ಸಿಗುವುದಿಲ್ಲ. ಆದರೆ ಪ್ರತಿಯೊಂದು ಸಮಸ್ಯೆಗೂ ಎರಡು ಮುಖಗಳಿರುತ್ತವೆ. ಅದರಲ್ಲಿ ಒಂದು ಮುಖ

ನ್ಯಾಯದಿಂದ ಕೂಡಿರುತ್ತದೆ, ಈ ನ್ಯಾಯ–ನೀತಿಯನ್ನು ಸಮರ್ಥಿಸುವುದು ಸಮಾಜಸೇವಕನಾದ ಅಹಿಂಸಕ ಸತ್ಯಾಗ್ರಹಿಯ ಕರ್ತವ್ಯವಾಗಿರುತ್ತದೆ, ಬಾಪೂಜಿಯ ಅಹಿಂಸೆ ಕರ್ತವ್ಯ ನಿರ್ವಹಿಸುವ ಪುರುಷಾರ್ಥದ ಅಹಿಂಸೆಯಾಗಿತ್ತು. ಅದು ನಿಷ್ಕ್ರಿಯವಾಗಿ ಬದುಕಲಾಗುವುದಿಲ್ಲ, ಆಕ್ರಮಣಕಾರಿಯನ್ನು ಎದುರಿಸುವುದು ಕರ್ತವ್ಯ, ಆತ್ಮರಕ್ಷಣೆಗಾಗಿ ಶತ್ರುವನ್ನ ಮುಗಿಸುವುದು ಪರಮಧರ್ಮ, ಅಹಿಂಸೆಯೆಂದು ಹೇಳಿ ಕರ್ತವ್ಯಭ್ರಷ್ಟರಾಗಲಾಗದು, ಸತ್ಯ ಸಾಧಿಸುವವನು ಆಲಸ್ಯ ಅಥವಾ ಪಿಷ್ಟಪೇಷಣದಲ್ಲಿ ಕರ್ತವ್ಯಚ್ಯುತನಾಗಬಾರದು. ಪ್ರಪಂಚದ ಮಾರುಕಟ್ಟೆಯಲ್ಲಿ ಅಹಿಂಸೆ ತಡೆದು ನಿಲ್ಲಲಾಗದಿದ್ದರೆ ಅದು ಪ್ರಯೋಜನವಿಲ್ಲದ್ದಾಗುತ್ತದೆ, ವಾಸ್ತವಿಕವಾದ ಅಹಿಂಸೆ ಬಹಳ ತೀಕ್ಷ್ಣವಾಗಿರುತ್ತೆ. ಎಂತಹ ಸ್ಥಿತಿಯಲ್ಲೂ ಅದನ್ನು ಬಹಳ ಸಫಲವಾಗಿ ಪ್ರಯೋಗಿಸಬಹುದು, ಅಹಿಂಸೆಯ ಈ ಸಫಲತೆ ಸಾಧಕನ ಶ್ರದ್ಧೆ ಮತ್ತು ನಿರ್ಭೀಕತೆಯ ಮೇಲೆ ನಿಂತಿರುತ್ತದೆ. ಅಹಿಂಸೆ ಪುಕ್ಕಲನ ಮಾರ್ಗವಲ್ಲ. ಕಾಶ್ಮೀರದ ಜನರು ಸಹಾಯ ಬೇಡಿದರು, ಆ ಪರಿಸ್ಥಿತಿಯಲ್ಲಿ ಬಾಪೂಜಿ ಭಾರತ ಸರಕಾರದ ಸೈನ್ಯ ಸಹಾಯವನ್ನು ಸಮರ್ಥಿಸಿದರು. ಅವರಿಗೆ ಈ ಆಕ್ರಮಣದಲ್ಲಿ ಪಾಕಿಸ್ತಾನ ಸಕ್ರಿಯವಾಗಿ ಭಾಗವಹಿಸಿದ್ದು ನೇತೃತ್ವ ನೀಡಿದೆ ಎಂದು ಸ್ಪಷ್ಟವಾಗಿ ಅನಿಸುತ್ತಿತ್ತು, ಅಂತಹ ಸ್ಥಿತಿಯಲ್ಲಿ ಭಾರತ ಸರಕಾರ ತನ್ನ ಕರ್ತವ್ಯದಿಂದ ಮುಖ ತಿರುಗಿಸಿಕೊಳ್ಳಲು ಸಾಧ್ಯವಿರಲಿಲ್ಲ. ಕಾಶ್ಮೀರದ ಮಹಾರಾಜ ಮತ್ತು ಶೇಖ್ ಅಬ್ದುಲ್ಲಾ ಇಬ್ಬರೂ ಕೂಡಿ ಒತ್ತಾಯಪಡಿಸಿದನಂತರ ಭಾರತ ಕಾಶ್ಮೀರ ರಾಜ್ಯವನ್ನು ತನ್ನ ದೇಶದೊಳಗೆ ಸೇರಿಸಿಕೊಂಡಿತ್ತು, ಅದರಿಂದ ಕಾಶ್ಮೀರವನ್ನ ರಕ್ಷಿಸಬೇಕಾದ್ದು ಭಾರತ ಸರಕಾರದ ಕರ್ತವ್ಯವಾಗಿತ್ತು.

೨೮ ನವೆಂಬರ್ ೧೯೪೭ರಂದು ಗುರುನಾನಕರ ಜಯಂತಿ ಇತ್ತು. ಸಿಖ್ಖರು ಬಹಳ ಬಲವಂತ ಮಾಡಿ ಬಾಪೂಜಿಯನ್ನ ಕರೆದಿದ್ದರು. ಸಿಖ್ ಬಂಧುಗಳು ಅಹಿಂಸಾತ್ಮಕ ಮಾರ್ಗವನ್ನ ಒಪ್ಪುವುದಿಲ್ಲವೆಂದು ಬಾಪೂಜಿಗೆ ಅನುಮಾನವಿತ್ತು, ಬಾಪೂಜಿಯ ಸತ್ಯಾಗ್ರಹದ ಆದರ್ಶ ಸಿಖ್ ಸಹೋದರರಿಗೆ ಇಷ್ಟವಾಗದಿರಬಹುದು ಎಂದು ಬಾಪೂಜಿ ಈ ಕಾರ್ಯಕ್ರಮಕ್ಕೆ ಹೋಗಲಿಚ್ಛಿಸಿರಲಿಲ್ಲ. ಆದರೆ ಅವರು ಬಹಳ ಒತ್ತಾಯಪಡಿಸುತ್ತಿದ್ದರು. ಜೊತೆಗೆ ಶೇಖ್ ಅಬ್ದುಲ್ಲಾ ಕೂಡ ಅಲ್ಲಿ ಭಾಷಣ ನೀಡುತ್ತಾರೆಂದು ಕೂಡ ಅವರೇ ತಿಳಿಸಿದರು. ಪಂಜಾಬಲ್ಲಿ ಇಷ್ಟೊಂದು ಕೋಮುವಾದದ ಅಶಾಂತಿ ಇರುವಾಗ ಶೇಖ್ ಅಬ್ದುಲ್ಲಾನನ್ನು ಸಿಖ್ ಜನರು ಒಪ್ಪಿಕೊಳ್ಳಲು ಹೇಗೆ ಸಾಧ್ಯ ಎಂದು ಬಾಪೂಜಿಗೆ ಆಶ್ಚರ್ಯವಾಯಿತು. ಆದರೆ ಭಾಷಣ ಇದ್ದ ದಿನ ಸಿಖ್ಖರ ವಿಶಾಲ ಜಗತ್ತು ಪೂರ್ಣ ಶಾಂತರಾಗಿ ತಲ್ಲೀನತೆಯಿಂದ ಬಾಪೂಜಿ ಮತ್ತು ಶೇಖ್ ಸಾಹಬರ ಭಾಷಣ ಕೇಳಿದ್ದರು.

ಕಾಶ್ಮೀರವನ್ನು ಬಾಪೂಜಿ ಭಾರತದ ಕೋಮುಸೌಹಾರ್ದದ, ಸಮಾಧಾನದ ಅಳತೆಗೋಲು ಎಂದು ಹೇಳುತ್ತಿದ್ದರು, ಕಾಶ್ಮೀರದಲ್ಲಿ ವಾಸಮಾಡುವ ಮುಸಲ್ಮಾನರು

ಪೂರ್ವ ಪಂಜಾಬ್‌ನಲ್ಲಿ ನಿರಾತಂಕವಾಗಿ ಹೋಗಿ – ಬರಲು ಆಗದಿದ್ದರೆ ಭಾರತ ಕಾಶ್ಮೀರವನ್ನ ಹೇಗೆ ಇಟ್ಟುಕೊಳ್ಳಬಲ್ಲದು, ಆಗ ಯಾರೋ ಜಮ್ಮುನಲ್ಲಿ ಹಿಂದೂಗಳೇ ಹೆಚ್ಚಾಗಿರುವುದರಿಂದ ಅದನ್ನ ಭಾರತಕ್ಕೆ ಕೊಡಬೇಕು ಎಂದು ಸಲಹೆ ನೀಡಿದರು, ಕಾಶ್ಮೀರವನ್ನ ಪಾಕಿಸ್ತಾನಕ್ಕೆ ಕೊಡಲಿ ಅಂದರು. ಬಾಪೂಜಿ ಹೇಳಿದರು, 'ಒಂದು ವಿಭಜನೆ ಸಾಕಾಗಲಿಲ್ಲವೇ? ಅದಕ್ಕೆ ಈಗ ಕಾಶ್ಮೀರವನ್ನೂ ಒಡೆಯಬೇಕೇನು? ಹಾಗಾದರೆ ದೇಶದ ಒಂದೊಂದು ಹಳ್ಳಿ ಗಲ್ಲಿಗಳನ್ನೂ ಹಂಚಬೇಕಾಗುತ್ತೆ, ಕಾಶ್ಮೀರದಲ್ಲಿರುವ ನಲವತ್ತು ಲಕ್ಷ ಮುಸಲ್ಮಾನರು ಭಾರತದಲ್ಲಿ ಇರಲಾಗದಿದ್ದರೆ ಭಾರತದಲ್ಲಿ ವಾಸ ಮಾಡುವ ನಾಲ್ಕು ಕೋಟಿ ಮುಸಲ್ಮಾನರು ಎಲ್ಲಿಗೆ ಹೋಗಬೇಕು? ಅವರಿಗೆ ಯಾವ ಪಾಕಿಸ್ತಾನ ಸಿಗುತ್ತೆ? ಈ ತರಹೆಯ ಸಮಸ್ಯೆಗೆ ಕೊನೆಯಿಲ್ಲ, ಅದರಿಂದ ಇಬ್ಬರೂ ಜೊತೆಯಲ್ಲಿ ಇರಲೇಬೇಕಾಗಿತ್ತು, ಇವತ್ತಿಗೂ ಇದ್ದಾರೆ.'

ಪ್ರತಿಯೊಂದು ದೇಶವೂ ತನ್ನ ಸುರಕ್ಷತೆಗಾಗಿ ಸೈನ್ಯವನ್ನು ಇಟ್ಟುಕೊಳ್ಳಲೇ ಬೇಕಾಗುತ್ತದೆ, ಆಗ ಅಹಿಂಸೆಯ ಪಾಲನೆ ಹೇಗೆ ಸಾಧ್ಯವಾಗುತ್ತೇ? ಈ ವಿಷಯವಾಗಿ ಬಾಪೂಜಿ ಸಾಕಷ್ಟು ಗಹನವಾಗಿ ಯೋಚಿಸುತ್ತಿದ್ದರು. ೧೮ ಜನವರಿ ೧೯೪೮ರಂದು ಸೇನಾಧ್ಯಕ್ಷರಾಗಿದ್ದ ಜನರಲ್ ಕಾರಿಯಪ್ಪನವರ ಜೊತೆ ಈ ವಿಷಯವಾಗಿ ಸಮಾಲೋಚನೆ ನಡೆಸಿದರು. ಬಾಪೂಜಿ ಮತ್ತು ಜನರಲ್ ಕಾರಿಯಪ್ಪನವರ ನಡುವೆ ಒಳ್ಳೆಯ ಚರ್ಚೆ ನಡೆಯಿತು. ಬಾಪೂಜಿ ಅದರಿಂದ ಅವರನ್ನು ಮತ್ತೊಮ್ಮೆ ಬರಲು ಹೇಳಿದರು, ಆದರೆ ಕಾರಿಯಪ್ಪ ಅವರು ೩೦ ಜನವರಿವರೆಗೂ ಕಾಶ್ಮೀರ ಕಮಾಂಡನ್ನು ಪರಿವೀಕ್ಷಿಸುವುದಕ್ಕಾಗಿ ಹೋಗಿದ್ದರು. ಜನರಲ್ ಅವರು ದೆಹಲಿಗೆ ಹಿಂದಿರುಗಿದಾಗ ಮಹಾತ್ಮಾಜೀಯ ಮೃತದೇಹಕ್ಕೆ ಪೂರ್ಣ ಸಮವಸ್ತ್ರದೊಂದಿಗೆ ಗೌರವ ಪೂರ್ಣವಿದಾಯ ನೀಡುವುದೊಂದು ಬಿಟ್ಟು ಬಾಪೂಜಿಯೊಂದಿಗೆ ಚರ್ಚೆ ನಡೆಸಲು ಸಮಯ ಮೀರಿ ಹೋಗಿತ್ತು.

ಜನರಲ್ ಕಾರಿಯಪ್ಪ ಅವರೊಂದಿಗೆ ಸೈನ್ಯ ಮತ್ತು ಅಹಿಂಸೆ ಕುರಿತಂತೆ ತೀವ್ರವಾಗಿ ವಿಚಾರ ವಿನಿಮಯ ಮಾಡಿಕೊಳ್ಳಬೇಕೆಂದು ಬಾಪೂಜಿಗೆ ಬಹಳ ಇಷ್ಟವಿತ್ತು, ಆದರೆ ಗಾಂಧೀಜಿ ಹೀಗೆ ದೇಶದ ಮೂಲಭೂತ ವಿಷಯಗಳನ್ನು ಕುರಿತು ಮಾತನಾಡುವುದು ಕೆಲವರು ಅವಿವೇಕಿಗಳಿಗೆ ಇಷ್ಟವಾಗುತ್ತಿರಲಿಲ್ಲ. ಭಾರತೀಯ ಸೈನ್ಯದ ಒಬ್ಬ ಜನರಲ್ ಹಾಗೂ ಅಹಿಂಸೆಯ ಪೂಜಾರಿ ಮತ್ತು ಸತ್ಯಾಗ್ರಹಿ ನಡುವೆ ಸೈನ್ಯದ ನವರಚನೆಯನ್ನು ಕುರಿತು ನಡೆಸಬೇಕಾಗಿದ್ದ ಚರ್ಚೆಯ ಆ ಅಪೂರ್ವಗಳಿಗೆ ಕಳೆದುಹೋಯಿತು. ಬಾಪೂಜಿ ಮೃತರಾದ ಮೇಲೆ ಬಡಪಾಯಿ ಸೈನ್ಯ ಮತ್ತು ಈ ಭಾಗ್ಯಹೀನ ದೇಶಕ್ಕೆ ಹಳೆಯ ಶೈಲಿಯಲ್ಲಿ ನಡೆಯುವುದೊಂದೇ ಉಳಿದಿತ್ತು. ಸ್ವಂತವಾಗಿ ಯೋಚಿಸುವ ಒಬ್ಬ ವ್ಯಕ್ತಿ ದೇವರ ಮನೆಗೆ ಹಿಂದಿರುಗಿದ್ದ. ಎಷ್ಟೋ ವರ್ಷಗಳಾದ ಮೇಲೆ ಭಾರತ ಸರಕಾರ ಜನರಲ್ ಕಾರಿಯಪ್ಪ ಅವರಿಗೆ 'ಫೀಲ್ಡ್ ಮಾರ್ಷಲ್'

ಎಂಬ ಪದವಿ ನೀಡಿ ಗೌರವಿಸಿತು. ನಮ್ಮ ಸರಕಾರಕ್ಕೆ ಸಮಯಕ್ಕೆ ಸರಿಯಾಗಿ ಕೆಲಸ ಮಾಡಲು ಕಷ್ಟವಾಗುತ್ತದೆಂದು ಕಾಣುತ್ತದೆ, ಆದರೆ ತಡವಾದರೂ ಚಿಂತೆಯಿಲ್ಲ, ಕಾರಿಯಪ್ಪ ಅವರನ್ನ ಸನ್ಮಾನಿಸಿದರು, ಅದು ಸರಿಯಾಗಿತ್ತು.

* * * *

# ೩೭. ಹೈದರಾಬಾದ್

೧೯೪೭ರ ಕೊನೆಯಲ್ಲಿ ಕಾಶ್ಮೀರದ ಸಮಸ್ಯೆ ಇನ್ನೂ ಪರಿಹಾರವಾಗಿರಲಿಲ್ಲ, ಅಷ್ಟರಲ್ಲೇ ದಕ್ಷಿಣದಲ್ಲಿ ಹೈದರಾಬಾದ್ ರಾಜ್ಯದಲ್ಲಿ ಬಹಳ ಕಷ್ಟದ ಸ್ಥಿತಿ ಎದುರಾಯಿತು. ದೇಶದ ಮೂರು ದೊಡ್ಡ ರಾಜ್ಯಗಳಲ್ಲಿ ಹೈದರಾಬಾದನ್ನು ಪರಿಗಣಿಸುತ್ತಿದ್ದರು, ಅದರ ವಿಸ್ತಾರ ಕೂಡ ಬಹಳ ಹೆಚ್ಚಾಗಿತ್ತು, ಸಂಪತ್ತು ಅಂತೂ ಹೇಳತೀರದಷ್ಟಿತ್ತು. ೧೭೧೩ರಲ್ಲಿ ಔರಂಗಜ಼ೇಬ ತನ್ನ ಸೇನಾಧಿಪತಿಯಾಗಿದ್ದ ನಿಜ಼ಾಮ್ ಉಲ್‌ಮೀರ್ ಕಮರುದ್ದೀನ್‌ನನ್ನು ಹೈದರಾಬಾದ್ ದಖ್ಖನ್‌ನ ಗವರ್ನರನನ್ನಾಗಿ ನೇಮಿಸಿದ್ದ. ಈ ಸೈನ್ಯಾಧಿಪತಿಯ ಹೆಸರಿನಲ್ಲಿ ನಿಜ಼ಾಮ್ ವಂಶ ಹುಟ್ಟಿಕೊಂಡಿತ್ತು. ಆದರೆ ಹೈದರಾಬಾದ್ ನಿಜ಼ಾಮರು ಯಾವಾಗಲೂ ಮೊಗಲರ ಕೈಕೆಳಗಿದ್ದರು, ದೆಹಲಿ ದರಬಾರ್ ಕೈಕೆಳಗೆ ನಿಯಂತ್ರಿತರಾಗಿರುತ್ತಿದ್ದರು, ಪ್ರತಿವರ್ಷ ರಾಜಸ್ವದ ಹಿಸ್ಸೆಯನ್ನು ನೀಡುತ್ತಿದ್ದರು. ೧೭೪೮ರಲ್ಲಿ ಮೀರ್ ಕಮರುದ್ದೀನ್ ತೀರಿಕೊಂಡ ಮೇಲೆ ರಾಜ್ಯಾಧಿಕಾರದ ಜಗಳ ಹುಟ್ಟಿಕೊಂಡಾಗ ಈಸ್ಟ್‌ಇಂಡಿಯಾ ಕಂಪನಿ ಆತನ ತಮ್ಮ ನಿಜ಼ಾಮ್ ಅಲಿಂಗೆ ಸಹಾಯ ಮಾಡಿ, ಎಷ್ಟೋ ವರ್ಷಗಳು ಯುದ್ಧ ನಡೆದು ಕೊನೆಯಲ್ಲಿ ೧೭೬೧ರಲ್ಲಿ ನಿಜ಼ಾಮ್ ಅಲಿಯನ್ನ ರಾಜನನ್ನಾಗಿ ಮಾಡಿದ್ದರು. ಅದನ್ನೇ ನೆಪಮಾಡಿಕೊಂಡು ಕಂಪನಿ ಸರಕಾರ ನಿಜ಼ಾಮನ ಹೈದರಾಬಾದ್ ರಾಜ್ಯದ ಸರಕಾರ್ ಜಿಲ್ಲೆಯ ಹೊಣೆಯನ್ನು ಹೊತ್ತುಕೊಂಡಿದ್ದರು. ಮೈಸೂರಿನ ಹೈದರ್ ಅಲಿ ತೀರಿಕೊಂಡ ನಂತರ ೧೭೬೫ರಿಂದ ಹೈದರಾಬಾದ್ ರಾಜ್ಯದ ನಿಜ಼ಾಮ್ ಅಲಿ ಇಂಗ್ಲಿಷ್ ರೆಜಿಮೆಂಟ್ ಮತ್ತು ಸೈನ್ಯವನ್ನು ಹೈದರಾಬಾದಿನಲ್ಲಿ ಇರಿಸಿದ್ದರು, ರಾಜ್ಯವನ್ನ ಪೂರ್ತಿಯಾಗಿ ಇಂಗ್ಲಿಷರ ಅಧೀನಕ್ಕೆ ಕೊಟ್ಟುಬಿಟ್ಟರು. ಮರಾಠಾ ಯುದ್ಧದಲ್ಲಿ ಇಂಗ್ಲಿಷರಿಗೆ ಸಹಾಯ ಮಾಡಿದ್ದರಿಂದ ಮರಾಠಾ ರಾಜ್ಯದ ಬರಾರ್ ಜಿಲ್ಲೆಯನ್ನು ನಿಜ಼ಾಮನಿಗೆ ಉಪಹಾರವಾಗಿ ನೀಡಿದರು. ಈಸ್ಟ್ ಇಂಡಿಯಾ ಕಂಪನಿಯ ಸೈನ್ಯದ ಖರ್ಚು ಕೊಡಬೇಕಾದ್ದು ಇನ್ನೂ ಬಾಕಿ ಇತ್ತು. ಅದರಿಂದ ನಿಜ಼ಾಮ ೧೮೫೩ರಲ್ಲಿ ಬರಾರ್‌ನ ಫಲವತ್ತಾದ ಭಾಗವನ್ನ ಕಂಪನಿ ಸರಕಾರಕ್ಕೆ ಕೊಟ್ಟುಬಿಟ್ಟ. ಆದರೆ ಆಗಿನಿಂದ ನಿಜ಼ಾಮನ ಉತ್ತರಾಧಿಕಾರಿಗಳಿಗೆ ಪ್ರಿನ್ಸ್ ಆಫ್ ಬರಾರ್ ಎಂಬ ಹೆಸರು ಬಂದಿತು. ೧೯೧೮ರಲ್ಲಿ ಇಂಗ್ಲಿಷ್ ಸರಕಾರ ನಿಜ಼ಾಮ್ ಮೀರ್ ಉಸ್ಮಾನ್ ಅಲಿಗೆ ಮಹಾಮಹೇಶ್ವರ ಎಂಬ ಉಪಾಧಿಯನ್ನು ನೀಡಿತು. ಆದರೆ ಈ ಸ್ವತಂತ್ರವಾದ

ಅಸ್ತಿತ್ವ ಸಿಕ್ಕ ನಂತರವೂ ಹೈದರಾಬಾದ್ ರಾಜ್ಯದ ಮೇಲೆ ಇಂಗ್ಲಿಷರ ವರ್ಚಸ್ಸು ಪೂರ್ತಿ ಇತ್ತು ಮತ್ತು ಇಂಗ್ಲಿಷ್ ರೆಜಿಮೆಂಟ್ ರಾಜ್ಯದ ಪ್ರತಿಯೊಂದು ಆಜ್ಞೆಯಲ್ಲೂ ಹಸ್ತಕ್ಷೇಪ ಮಾಡುವಂಥ ಅಧಿಕಾರ ಪಡೆದಿತ್ತು.

ಹೈದರಾಬಾದಿನ ಶೇಕಡಾ ಎಂಬತ್ತರಷ್ಟು ಪ್ರಜೆಗಳು ಹಿಂದೂಗಳಾಗಿದ್ದರು, ಆದರೆ ಸರಕಾರದಲ್ಲಿ ಎಲ್ಲೂ ಅವರಿಗೆ ಏನೂ ಮಹತ್ವ ಇರಲಿಲ್ಲ. ೧೯೪೭ರ ಈ ಕೊನೆಯ ನಿಝಾಮ ಅತಿ ಧಾರ್ಮಿಕ ಪ್ರವೃತ್ತಿಯವನಾಗಿದ್ದ, ಪ್ರತಿದಿನವೂ ತನ್ನ ತಾಯಿಯ ಗೋರಿಗೆ ಹೋಗಿ ನಮಾಝ್ ಓದುತ್ತಿದ್ದ, ಆದರೆ ಬಹಳ ಹಳೆಯ ವಿಚಾರಗಳನ್ನಿಟ್ಟುಕೊಂಡಿದ್ದ, ಸಿಡುಕ, ಜಿಪುಣ ಆಗಿದ್ದ, ಪ್ರಪಂಚದ ಅತಿ ದೊಡ್ಡ ಶ್ರೀಮಂತರಲ್ಲಿ ಆತನನ್ನೂ ಒಬ್ಬನೆಂದು ಪರಿಗಣಿಸಲಾಗುತ್ತಿತ್ತು, ಆದರೆ ಆತ ಮಾತ್ರ ಬಹಳ ಸಾಧಾರಣವಾದ ಹರಿದು ಚಿಂದಿಯಾದ ಹಳೆಬಟ್ಟೆಗಳನ್ನು ಧರಿಸುತ್ತಿದ್ದ. ನಿಜಾಮ ತಾನು ಒಂದು ಸ್ವತಂತ್ರ ದೇಶದ ಸಾರ್ವಭೌಮನಾದ ರಾಜ ಅಂತ ಹೇಳಿಕೊಳ್ಳುತ್ತಿದ್ದ. ೧೫ ಆಗಸ್ಟ್ ೧೯೪೭ರಂದು ಇಂಗ್ಲಿಷರ ಆಳ್ವಿಕೆ ಮುಗಿದಾಗ ಹೈದರಾಬಾದ್ ಪುನಃ ಸ್ವತಂತ್ರ ದೇಶವಾಗುತ್ತೆ. ಅದರಿಂದ ಇಂಗ್ಲಿಷರು ಹೈದರಾಬಾದ್ ರಾಜ್ಯವನ್ನು ಬ್ರಿಟಿಷ್ ಕಾಮನ್‌ವೆಲ್ತ್ ಸದಸ್ಯನನ್ನಾಗಿ ಸ್ವೀಕರಿಸಬೇಕು ಎನ್ನುತ್ತಿದ್ದ. ನಿಝಾಮನ ಬಳಿ ಅವನದ್ದೇ ನಾಣ್ಯ–ನೋಟು ಮುದ್ರಿತವಾಗುತ್ತಿತ್ತು ಮತ್ತೆ ೩೫,೦೦೦ ಸೈನಿಕರ ಸೈನ್ಯವಿತ್ತು. ನಿಝಾಮನಿಗೆ ಸಾಕಷ್ಟು ಆದಾಯವಿತ್ತು. ಇಡೀ ಆಡಳಿತ ಹಳೆಯ ಸಾಮಂತವಾದೀ ಪದ್ಧತಿಯಲ್ಲಿ ನಡೆಯುತ್ತಿತ್ತು, ಈ ವ್ಯವಸ್ಥೆಯಲ್ಲಿ ಇದ್ದ ಕೆಲವೇ ಜನ ಜಹಗೀರುದಾರರು ಬಹಳ ಪ್ರಬಲರಾಗಿದ್ದರು, ಸಂಪತ್ತಿಟ್ಟುಕೊಂಡ ಧನಿಕರೂ ಆಗಿದ್ದರು. ಆದರೆ ನಿಝಾಮನ ಅಪಾರ ಸಂಪತ್ತಿನಂತೆಯೇ ಅವರ ಪ್ರಜೆಗಳ ಬಡತನ – ದಾರಿದ್ರ್ಯ ಹೇಳತೀರದ್ದಾಗಿತ್ತು. ಯಾವುದೇ ರಾಜನನ್ನು ಸ್ವತಂತ್ರವಾಗಿ ಬ್ರಿಟಿಷ್ ಕಾಮನ್‌ವೆಲ್ತ್ ಸದಸ್ಯನನ್ನಾಗಿ ಮಾಡಿಕೊಳ್ಳಲಾಗುವುದಿಲ್ಲ ಮತ್ತು ಈ ಪ್ರತಿಯೊಂದು ರಾಜ್ಯವೂ ತಾನಿರುವ ಭೌಗೋಳಿಕ ಸ್ಥಿತಿಗನುಗುಣವಾಗಿ ಪಾಕಿಸ್ತಾನ, ಇಲ್ಲವೇ ಭಾರತದಲ್ಲಿ ಸೇರಿಕೊಳ್ಳಬೇಕೆಂದು ಲಾರ್ಡ್ ಮೌಂಟ್‌ಬ್ಯಾಟನ್‌ರು ಘೋಷಿಸಿದಾಗ ನಿಝಾಮನ ಪ್ರಭುತ್ವ ಕಂದಿಹೋಯಿತು. ಮೊದಲು ನಿಝಾಮರು ಮೊಗಲರಿಗೆ ಕಂದಾಯ ಕಟ್ಟುತ್ತಿದ್ದರು, ನಂತರ ಇಂಗ್ಲಿಷರ ಸಾರ್ವಭೌಮತ್ವ ಒಪ್ಪಿಕೊಂಡರು, ಅದರಿಂದ ನಾವು ಒಬ್ಬ ಸ್ವತಂತ್ರ ರಾಜ ಎಂದು ಹೇಳಿಕೊಂಡಿದ್ದು ಸರಿಯಾದ್ದಲ್ಲ, ಆದರೆ ಆಸೆಗಳಿಗೆ ಕಡಿವಾಣ ಕಟ್ಟುವವರಾರು ? ಶೇಕಡಾ ಎಂಬತ್ತರಷ್ಟು ಜನ ಹಿಂದೂಗಳಿದ್ದರು ಎಂಬುದು ತಿಳಿದಿತ್ತು; ಜೊತೆಗೆ ಹೈದರಾಬಾದ್ ಭಾರತದ ಅವಿಭಾಜ್ಯ ಅಂಗವಾಗಿತ್ತು; ಅಷ್ಟಲ್ಲದೆ ವೈಧಾನಿಕವಾಗಿಯೂ ಭಾರತ ಸರಕಾರದ ಪ್ರಭುತ್ವವನ್ನೊಪ್ಪಿಕೊಳ್ಳಬೇಕಾಗಿದ್ದುದು ನ್ಯಾಯವಾಗಿತ್ತು. ಆದರೂ ನಿಝಾಮ ಯುಕ್ತಿಗಳಲ್ಲಿ ಮುಳುಗಿ ಒಳಸಂಚುಗಳನ್ನ ಮಾಡುವುದರಲ್ಲಿ ತೊಡಗಿದ್ದ. ೧೯೪೫–೪೬ರಲ್ಲಿ

ನಿಜಾಮ ಇಂಗ್ಲಿಷ್ ಸರಕಾರದಿಂದ ಮಧ್ಯಪ್ರದೇಶದ ಆದಿವಾಸಿ ರಾಜ್ಯ ಬಸ್ತರ್ ಅನ್ನು ನೂರು ವರ್ಷಗಳ ಲೀಸ್ ಮೇಲೆ ಕೊಳ್ಳಬಯಸಿದ್ದ. ಆಗ ಬಸ್ತರ್‌ನ ರಾಜ ಇನ್ನೂ ವಯಸ್ಕನಾಗಿರಲಿಲ್ಲ. ಲಾರ್ಡ್ ಬೆವಲ್‌ನ ಆಜ್ಞೆಗನುಗುಣವಾಗಿ ಬಸ್ತರ್‌ನ ವಿಸ್ತೃತ ಭೂಭಾಗದ ಖನಿಜ ಪ್ರದೇಶವನ್ನು ಹೈದರಾಬಾದ್ ನಿಜಾಮನಿಗೆ ಕೊಟ್ಟು ಪಾಕಿಸ್ತಾನದ ಮುಸ್ಲಿಂ ಭಾಗಗಳನ್ನು ವಿಸ್ತರಿಸಬೇಕೆಂದು ಇಂಗ್ಲಿಷರು ಕೆಟ್ಟ ಯೋಜನೆಯನ್ನು ಹಾಕಿಕೊಂಡಿದ್ದ. ಅದೇ ರೀತಿ ನಿಜಾಮ ಪೋರ್ಚುಗೀಸ್ ಸರಕಾರದಿಂದ ಗೋವಾವನ್ನ ಖರೀದಿಸಲು ಪ್ರಯತ್ನಿಸುತ್ತಿದ್ದರು. ಈ ವ್ಯಾಪಾರ ಕುದುರಿದ್ದರೆ ನಿಜಾಮನಿಗೆ ಗೋವಾದ ಸಮುದ್ರತೀರ ಸಿಗುತ್ತಿತ್ತು, ಪಾಕಿಸ್ತಾನ ಹರಡಲು ಅನುಕೂಲವಾಗುತ್ತಿತ್ತು.

ಈ ಕುತಂತ್ರ ಸಫಲವಾಗಿದ್ದಿದ್ದರೆ ಇಂದು ಭಾರತದ ಭೂಗೋಳ ಮತ್ತು ಇತಿಹಾಸ ಬೇರೆಯದೇ ಆಗಿರುತ್ತಿತ್ತು. ಮಧ್ಯಂತರ ಸರಕಾರದ ಗೃಹಮಂತ್ರಿಗಳಾಗಿದ್ದ ಸರದಾರ ಪಟೇಲರಿಗೆ ಈ ಸಂಚಿನ ಸೂಚನೆ ಸಿಕ್ಕಿತು. ಅವರು ಸ್ಫೂರ್ತಿ ಮತ್ತು ದೃಢತೆಯಿಂದ ಭಾರತ ಸರಕಾರದ ರಾಜಕೀಯ ವಿಭಾಗದ ಆಂಗ್ಲ ಸಚಿವರ ಕಪಿಮುಷ್ಟಿಯಿಂದ ಆ ಕಡತವನ್ನು ಹೊರತೆಗೆಸಿದರು. ಈ ಫೈಲಿನಲ್ಲಿದ್ದ ಸಂಚಿನ ಸಿದ್ಧತೆಗಳನ್ನು ನೋಡಿ, ಮುಸ್ಲಿಂ ಲೀಗ್ ಜೊತೆ ಎಂದಿಗೂ ನಮ್ಮ ಸಂಬಂಧ ಸರಿಹೋಗುವುದಿಲ್ಲವೆಂಬುದು ಸರದಾರ್ ಪಟೇಲರಿಗೆ ಅರ್ಥವಾಯಿತು. ಸರದಾರ್ ಪಟೇಲರು ಬಸ್ತರ್‌ನ ಈ ವ್ಯವಹಾರವನ್ನು ನಿಲ್ಲಿಸಿದರು. ಆದರೆ ನಿಜಾಮ್‌ನ ಮನಸ್ಸಿನೊಳಗಿದ್ದ ಸಂಚು ದೂರವಾಗಿರಲಿಲ್ಲ. ಹೈದರಾಬಾದ್ ರಾಜ್ಯದಲ್ಲಿ ಹೆಚ್ಚು ಮಂದಿ ಹಿಂದೂಗಳಿದ್ದರು. ಭೌಗೋಳಿಕ ದೃಷ್ಟಿಯಿಂದ ಹೈದರಾಬಾದ್ ಭಾರತದಿಂದಲೇ ಆವೃತವಾಗಿತ್ತು, ಆದರೆ ಭಾರತಕ್ಕೆ ಸೇರಿಕೊಳ್ಳಬಾರದು ಎಂಬುದು ನಿಜಾಮನ ಯೋಜನೆಯಾಗಿತ್ತು. ಆದ್ದರಿಂದ ನೆಪಗಳನ್ನು ಹೂಡಿ ನಿರ್ಣಯವನ್ನು ಮುಂದೂಡುತ್ತಿದ್ದ.

ಈ ರೀತಿ ೧೨ ಆಗಸ್ಟ್ ೧೯೪೭ರವರೆಗೂ ನಿಜಾಮ ಭಾರತಕ್ಕೆ ಸೇರಿಕೊಳ್ಳಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿರಲಿಲ್ಲ. ಆಗ ಮೌಂಟ್ ಬ್ಯಾಟನ್‌ರು ಆತನಿಗೆ ಎರಡು ತಿಂಗಳ ಅವಕಾಶವನ್ನು ಹೆಚ್ಚಿಗೆ ನೀಡಿದರು. ಆ ಅವಧಿಯಲ್ಲಿ ಆತ ತನ್ನ ರಾಜ್ಯತಂತ್ರಕ್ಕೆ ಪ್ರಜಾತಾಂತ್ರಿಕ ಸ್ವರೂಪ ನೀಡಿ ಭಾರತದಲ್ಲಿ ಸೇರಿಕೊಳ್ಳುವಂತೆ ಆದೇಶ ಹೊರಡಿಸಿದರು. ಮೇಲ್ನೋಟಕ್ಕೆ ನಿಜಾಮ ಭಾರತದಲ್ಲಿ ಪೂರ್ತಿಯಾಗಿ ಸೇರಿಕೊಳ್ಳುತ್ತಿರುವೆ; ವ್ಯವಸ್ಥೆಯಲ್ಲಿ ಮಾತ್ರ ತಡವಾಗುತ್ತಿದೆಯೆಂದು ತಿಳಿಸಿದನಾದರೂ ಒಳಗೇ ನಿಜಾಮ – ಪಾಕಿಸ್ತಾನ ಸರಕಾರದ ನಡುವೆ ಪತ್ರವ್ಯವಹಾರ, ಮಂತ್ರಾಲೋಚನೆ ನಡೆಯುತ್ತಿತ್ತು. ತನ್ನ ಸೈನ್ಯವನ್ನ ಬಲಗೊಳಿಸುವುದಕ್ಕಾಗಿ ಚೆಕೊಸ್ಲೋವಾಕಿಯಾದಿಂದ ಯುದ್ಧ ಸಾಮಗ್ರಿಗಳನ್ನು ಖರೀದಿಸುವ ವ್ಯಾಪಾರದ

ಮಾತುಕತೆ ನಡೆಯುತ್ತಿತ್ತು. ಈ ದಿನಗಳಲ್ಲೇ ಹೈದರಾಬಾದ್‌ನಲ್ಲಿ 'ಇತ್ತೆಹಾದ್ – ಏ – ಮುಸಲಮೀನ್' ಎಂಬೊಂದು ಉಗ್ರ ಸಾಂಪ್ರದಾಯಿಕ ಸಂಸ್ಥೆ ಸಕ್ರಿಯವಾಯಿತು. ಅದರಲ್ಲಿನ ಕೆಲವರು ಸೈನ್ಯದವರ ಹಾಗೆ ವೇಷ ತೊಡುತ್ತಿದ್ದರು. ಬಂದೂಕ, ಪಿಸ್ತೂಲ್‌ನ ಪ್ರಶಿಕ್ಷಣ ತೆಗೆದುಕೊಳ್ಳುತ್ತಿದ್ದರು, ಅವರನ್ನು ರಜ಼ಾಕಾರ್ ಅಂತ ಕರೆಯುತ್ತಿದ್ದರು. ಅವರ ನಾಯಕ ಕಾಸಿಮ್ ರಿಜ್ವೀ ಆಗಿದ್ದ, ಅವರ ಕೋಮುವಾರು ಉಗ್ರತೆ ತೀವ್ರವಾಗಿತ್ತು. ಈ ರಜಾಕಾರ್‌ಗಳು ಹೈದರಾಬಾದ್ ರಾಜ್ಯದಿಂದ ಹೊರಗೆ ತೆಲಂಗಾಣಾದಲ್ಲಿ ಕನ್ನಹಾಕುತ್ತಿದ್ದರು. ಹಳ್ಳಿ ಜನರನ್ನ ಲೂಟಿ ಮಾಡಿ, ಕೊಂದು ಆತಂಕಪಡಿಸುತ್ತಿದ್ದರು. ಭಾರತ ಸರಕಾರದ ಬಳಿ, ಅದರಲ್ಲೂ ವಿಶೇಷವಾಗಿ ಬಾಪೂಜಿ ಬಳಿ ಪ್ರತಿದಿನ ಖೂನಿಯ ಘಟನೆಗಳ ರಿಪೋರ್ಟ್ ಬರುತ್ತಿತ್ತು. ರಾಜ್ಯದ ಹಿಂದೂ ಪ್ರಜೆಗಳು ಭಯದಿಂದ ನಡುಗುತ್ತಿದ್ದರು. ಈ ರಜಾಕಾರ್ ಇತ್ತೇಹಾದಿ ಜನರು ನಿರಂತರವಾಗಿ ಹಿಂದೂಗಳನ್ನು ಕಾಫ಼ಿರ್ ಎಂದು ಕರೆಯುತ್ತಿದ್ದರು. ಹಿಂದೂಗಳನ್ನ ಬೇರುಸಹಿತ ಕಿತ್ತುಹಾಕಬೇಕು ಎಂದು ಎಲ್ಲರೆದುರಿಗೇ ಪ್ರಚಾರ ಮಾಡುತ್ತಿದ್ದರು. ವಾತಾವರಣವೆಲ್ಲ ಬಹಳ ದೂಷಿತವಾಗಿತ್ತು. ಉಗ್ರವಾಗಿದ್ದು, ಉದ್ವೇಗದಿಂದ ತುಂಬಿತ್ತು, ಯಾವಾಗ ಏನಾಗುತ್ತದೆಂದು ಹೇಳುವುದಕ್ಕಾಗುತ್ತಿರಲಿಲ್ಲ, ನಿಜ಼ಾಮ ಸ್ವತಃ ನಿರ್ಣಯಿಸುವುದಕ್ಕೂ ಸ್ವತಂತ್ರನಾಗಿರಲಿಲ್ಲ. ಎಲ್ಲಾ ಪ್ರದೇಶಗಳಲ್ಲೂ ಅರಾಜಕತೆ ಹರಡಿತ್ತು, ಕಾನೂನುಬಾಹಿರವಾದ ಘಟನೆಗಳು ಹೆಚ್ಚಾಗುತ್ತಿದ್ದವು. ಆಗ ಪಾಕಿಸ್ತಾನದಿಂದ ವಿಶೇಷ ಪ್ರತಿನಿಧಿಗಳಿಬ್ಬರು ನಿಜ಼ಾಮನನ್ನು ಭೇಟಿಯಾಗಲು ಬಂದಿದ್ದರು. ನಿಜ಼ಾಮ ಸರಕಾರಿ ಖಜಾನೆಯಿಂದ ಇಪ್ಪತ್ತು ಕೋಟಿ ರೂಪಾಯಿಗಳನ್ನು ಈ ಪ್ರತಿನಿಧಿಗಳ ಕೈಲಿ ಪಾಕಿಸ್ತಾನಕ್ಕೆ ಕಳುಹಿಸಿದ್ದ ಎಂಬ ವಿಷಯ ನಂತರದಲ್ಲಿ ತಿಳಿಯಿತು. ದೇಶ ಮತ್ತು ಹೈದರಾಬಾದ್ ಪ್ರಜೆಗಳಿಗೆ ನಿಜ಼ಾಮ ಈ ರೀತಿ ದೊಡ್ಡ ಮೋಸ ಮಾಡಿದ್ದ.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಬಹಳ ಚರ್ಚೆ ನಡೆದು ನಂತರ ಅಕ್ಟೋಬರ್ ೨೨ರಂದು ಭಾರತ ಸರಕಾರ ಒಂದು ವರ್ಷಕ್ಕಾಗಿ ತಾತ್ಕಾಲಿಕ ಒಪ್ಪಂದವನ್ನು ಸಿದ್ಧಪಡಿಸಿತು. ನಿಜ಼ಾಮ ಇದಕ್ಕೆ ಸಹಿ ಹಾಕಬಹುದೆಂಬ ಆಸೆ ಇತ್ತು, ಆದರೆ ಅವನು ಸಹಿ ಮಾಡಲಿಲ್ಲ. ಮತ್ತೆ ಅಕ್ಟೋಬರ್ ೨೫ಕ್ಕೆ ನಿಜ಼ಾಮನ ಸಲಹೆಗಾರರ ಸಮಿತಿ ಹೈದರಾಬಾದಿ ಡೆಲಿಗೇಷನ್ ದೆಹಲಿಗೆ ಹೋಗಿ ಒಪ್ಪಂದವನ್ನ ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಿದೆ ಎಂದು ಹೇಳಿತು. ಆದರೆ ಕಾರಣವಿಲ್ಲದೆ ನಿಜ಼ಾಮ ಪುನಃ ಕರಾರುಪತ್ರಕ್ಕೆ ಸಹಿ ಮಾಡಲಿಲ್ಲ ಮತ್ತು ಇತ್ತೆಹಾದಿ ಮುಸಲಮೀನ್‌ನ ೨೦,೦೦೦ ಸದಸ್ಯರು ಆ ಪ್ರತಿನಿಧಿಗಳನ್ನು ಸುತ್ತುವರಿದು ಆ ಜನರು ದೆಹಲಿಗೆ ಹೋಗದಿರುವಂತೆ ತಡೆದರು. ಈ ಎಲ್ಲಾ ಘಟನೆಗಳೂ, ಜಿನ್ನಾ ಕಾಶ್ಮೀರವನ್ನು ಪಾಕಿಸ್ಥಾನದಲ್ಲಿ ಸೇರಿಸಿಕೊಳ್ಳಬೇಕೆಂದು ಕಬಾಯಿಲಿ ಆಕ್ರಮಣಕಾರಿಗಳನ್ನ ಕಳುಹಿಸಿದ್ದುದು, ಕಾಶ್ಮೀರದ

ಸುರಕ್ಷತೆಗಾಗಿ ಭಾರತೀಯ ಸೈನ್ಯವನ್ನ ಶ್ರೀನಗರಕ್ಕೆ ಕಳುಹಿಸಿದ್ದುದು –ಇವೆಲ್ಲಾ ಒಂದೇ ದಿನಾಂಕಗಳಲ್ಲಿ ನಡೆದ ಘಟನೆಗಳು. ಈ ಘಟನಾಕ್ರಮದಿಂದ ನಿಝಾಮನಿಗೆ ಕಾಶ್ಮೀರ ಸಮಸ್ಯೆ ಕುರಿತು ಮೊದಲೇ ಸೂಚನೆ ಇತ್ತು, ಅದರ ಪರಿಣಾಮಕ್ಕಾಗಿಯೇ ನಿಝಾಮ ಕರಾರಿಗೆ ಈ ರೀತಿ ಸಹಿ ಹಾಕುವುದನ್ನು ಮುಂದೂಡುತ್ತಿದ್ದನೆಂದು ತಿಳಿಯುತ್ತದೆ.

ಆ ಕಾಲದಲ್ಲಿ ಲಾಯಕ್ ಅಲೀ ಎಂಬೊಬ್ಬ ಧೂರ್ತ ನಿಝಾಮರ ಪ್ರಧಾನ ಮಂತ್ರಿಯಾಗಿದ್ದ. ಆತ ತನ್ನ ಮಾಲೀಕನಿಗಿಂತ ಮಿಗಿಲಾಗಿ ಕಾಲಹರಣ ಮಾಡುವುದರಲ್ಲಿ ಪಾರಂಗತನಾಗಿದ್ದ. ಲಾರ್ಡ್ ಮೌಂಟ್‌ಬ್ಯಾಟನ್ ೩೦ ಜೂನ್ ೧೯೪೮ರಂದು ಭಾರತ ಬಿಟ್ಟು ಹೊರಡುವ ಮುಂಚೆ ಹೈದರಾಬಾದಿನ ಫೈಸಲಾಗಬೇಕು ಅಂತ ಬಯಸಿದ್ದರು. ಆದರೆ ಗಂಟೆಗಟ್ಟಲೆ ಚರ್ಚೆ ನಡೆದು, ಲಾಯಕ್ ಅಲೀ ಎಷ್ಟೋ ಬಾರಿ ದೆಹಲಿಗೆ ಹೋದರು, ಬಂದರು. ಆದರೆ ಏನೋ ಒಂದು ನೆಪ ಹೂಡಿ ಕರಾರಿಗೆ ಹಸ್ತಾಕ್ಷರ ಮಾಡುತ್ತಿರಲಿಲ್ಲ. ಸರದಾರ ಪಟೇಲರ ಸಚಿವ ವಿ.ಪಿ. ಮೆನನ್‌ಗೆ ತಾವು ರಝಾಕಾರರನ್ನು ಅಂಕುಶದಲ್ಲಿ ಇಡುವರೆಂದೂ, ಕರಾರು ಮಂಜೂರು ಆಗುವುದೆಂದೂ ಆಶ್ವಾಸನೆ ನೀಡಿದರು. ಆದರೆ ಸಭೆಯಲ್ಲಿ ಕಾಸಿಮ್ ರಿಝವೀನೇ ನಿಝಾಮನನ್ನು ತಡೆಹಿಡಿದು, ಆತನಿಗೆ ಕೆಟ್ಟ–ಕೆಟ್ಟ ಮಾತುಗಳನ್ನಾಡಿ, ನಂತರ ಭಾರತ ಸರಕಾರ ಕಾಶ್ಮೀರಕ್ಕೆ ಸಿಲುಕಿಕೊಂಡಿರುವವರೆಗೂ ನಾವು ರಝಾಕಾರರು ಹೈದರಾಬಾದ್‌ನ ಸ್ವಾತಂತ್ರ್ಯದ ವ್ಯವಸ್ಥೆಯನ್ನ ನೋಡಿಕೊಳ್ಳುತ್ತೇವೆಂದು ಹೇಳಿದನಂತೆ. ರಝಾಕಾರರ ಆತಂಕದಿಂದ ಹೈದರಾಬಾದ್ ರಾಜ್ಯದಲ್ಲಿ ಭಾರತೀಯ ನಾಣ್ಯ ಮತ್ತು ನೋಟುಗಳನ್ನು ಉಪಯೋಗಿಸುವುದು ಕಾನೂನುಬದ್ಧವಲ್ಲ ಎಂದು ಘೋಷಿಸಲಾಯಿತು, ರಿಝವಿ ಮತ್ತು ನಿಝಾಮ ಇಬ್ಬರೂ ಕೋಮುವಾದಿ ದಂಗೆಗಳ ನಡುವೆ ಭಾರತ ಸರಕಾರ ಎರಡು ವರ್ಷಗಳು ಕೂಡ ಉಳಿಯುವುದಿಲ್ಲ, ಎರಡು ವರ್ಷಗಳ ಅವಧಿಯಲ್ಲಿ ತಾವುಗಳು ಸೈನ್ಯವನ್ನು ಚೆನ್ನಾಗಿ ಸಜ್ಜುಗೊಳಿಸಿಕೊಂಡು ಹಿಂದೂಗಳನ್ನೂ ಅಂಕುಶದಲ್ಲಿಟ್ಟುಕೊಂಡು ದೆಹಲಿಯ ಕೆಂಪು ಕೋಟೆಯಿಂದ ಪಾಕಿಸ್ತಾನಿ ಬಾವುಟವನ್ನು ಹಾರಿಸುತ್ತೇವೆಂದುಕೊಂಡಿದ್ದರು.

ಈ ತೆರನಾದ ಭಾಷಣಗಳು ಮತ್ತು ಉಗ್ರತೆಯಿಂದ ಭಾರತ ಸರಕಾರದ ಧೈರ್ಯ ಕುಗ್ಗುತ್ತಿತ್ತು. ಸರದಾರ ಪಟೇಲರಿಗೆ ಮಾರ್ಚ್ ೫, ೧೯೪೮ರಂದು ಹೃದಯಾಘಾತವಾಗಿತ್ತು, ಅವರು ಖಾಯಿಲೆ ಇದ್ದರೂ ಏಪ್ರಿಲ್ ೧೬ರಂದು ಕೊನೆಯ ಬಾರಿ ನಿಝಾಮನೆದುರು ಭಾರತ ಸರಕಾರದ ನಾಲ್ಕು ಷರತ್ತುಗಳನ್ನೊಡ್ಡಿದರು :

– ಕಾಸಿಮ್ ರಿಝವಿಯನ್ನು ಅಂಕುಶಕ್ಕೆ ತೆಗೆದುಕೊಂಡು ರಝಾಕಾರರನ್ನು ಪ್ರತಿಬಂಧಿಸುವುದು.

- ರಾಜ್ಯದ ಕಾಂಗ್ರೆಸ್ ಕಾರ್ಯಕರ್ತರು ಮತ್ತು ನಾಯಕರನ್ನು ಜೈಲಿನಿಂದ ಮುಕ್ತಗೊಳಿಸುವುದು.
- ಎರಡೂ ಬಣಗಳ ಜನರಿಗೆ ಯೋಗ್ಯ ಪ್ರತಿನಿಧಿತ್ವ ದೊರಕುವ ಹಾಗೆ, ಸರಕಾರ ನಡೆಸಲು ಅವಕಾಶ ಸಿಗವಂತೆ ಸರಕಾರವನ್ನು ಪುನರ್ ರಚಿಸಬೇಕು.
- ಆದಷ್ಟು ಬೇಗ ಪ್ರಜಾಸತ್ತೆಯನ್ನು ಜಾರಿಗೊಳಿಸಿ, ಒಂದು ಸಮಿತಿ ರಚಿಸಿ, ರಾಜ್ಯಕ್ಕೆ ಒಳ್ಳೆಯ ಸಂವಿಧಾನ ಸಿಗುವಂತಾಗಬೇಕು.

ಈ ಸಾಧಾರಣವಾದ ಷರತ್ತುಗಳನ್ನೂ ನಿಝಾಮ ಒಪ್ಪಿಕೊಳ್ಳಲಿಲ್ಲ, ಸಹಿ ಮಾಡಲಿಲ್ಲ, ಸಣ್ಣ–ಸಣ್ಣ ತಪ್ಪುಗಳನ್ನು ಹುಡುಕಿ, ದೊಡ್ಡದು ಮಾಡಿ, ಪಿಷ್ಟಪೇಷಣದಲ್ಲೇ ಸಮಯ ಕಳೆದ. ಪ್ರತಿಯೊಂದು ಸಾರಿಯೂ ಯಾವುದಾದರೂ ಹೊಸ ಬೇಡಿಕೆಯೊಂದನ್ನು ತಂದೊಡ್ಡುವುದನ್ನ ಹೈದರಾಬಾದ್ ಸರಕಾರ ರೂಢಿಸಿಕೊಂಡಿತ್ತು. ಮೌಂಟ್‌ಬ್ಯಾಟನ್‌ರ ಪ್ರೆಸ್ ಸೆಕ್ರೆಟರಿ ಆ್ಯಲನ್ ಕ್ಯಾಂಪ್‌ಬೆಲ್ ಜೋಹನ್‌ಸನ್‌ನು ತನ್ನ ನೆನಪಿನ ದಾಖಲೆಗಳಲ್ಲಿ, ನಿಝಾಮನ ರೀತಿನೀತಿಗಳಿಂದ ಕಾಶ್ಮೀರ ಯಾವ ಮಗ್ಗುಲನ್ನು ಪಡೆಯುತ್ತದೆಯೋ ಎಂಬುದನ್ನು ಕಾಯುತ್ತ ಕುಳಿತಿದ್ದರೆಂಬುದು ಸ್ಪಷ್ಟವಾಗುತ್ತದೆಂದು ಬರೆದಿದ್ದರು. ಭಾರತ ಸರಕಾರ ಕಾಶ್ಮೀರದ ಸಮಸ್ಯೆಯನ್ನು ಪರಿಹರಿಸಲಾಗದಿದ್ದಿದ್ದರೆ ಖಂಡಿತವಾಗಿ ಹೈದರಾಬಾದ್‌ನ ರಝಾಕಾರರು ಬೇರೆಯದೊಂದು ಉತ್ಪಾತವನ್ನೇ ಎಬ್ಬಿಸುತ್ತಿದ್ದರೆಂಬುದು ಖಂಡಿತ. ಭಾರತೀಯ ಸೈನಿಕರು ಕಬಾಯಿಲಿಗಳ ಆಕ್ರಮಣವನ್ನು ತಣ್ಣಗಾಗಿಸಿದ್ದರಿಂದ ನಿಝಾಮ ಹಾಗೂ ರಝಾಕಾರರಿಗೆ ಭಾರಿ ನಿರಾಶೆಯಾಗಿತ್ತು. ನಿಝಾಮ – ರಝಾಕಾರರ ಆತಂಕದಿಂದ ರಾಜ್ಯದ ಆಮದು – ರಫ್ತು, ವ್ಯಾಪಾರ, ಅಂಚೆ – ತಾರು, ಟೆಲಿಫೋನ್, ಎಲ್ಲವೂ ನಿಷ್ಕ್ರಿಯವಾಗಿದ್ದವು. ಸಾರ್ವಜನಿಕರು ಧಾನ್ಯ – ನೀರು ಇವುಗಳ ಅಭಾವದಿಂದ ಬಹಳ ಕಷ್ಟಪಡುತ್ತಿದ್ದರು. ನಿಝಾಮ ಸ್ವಲ್ಪ ಅರ್ಥ ಮಾಡಿಕೊಳ್ಳಲಿ, ಸ್ವಲ್ಪ ಯೋಚನೆ ಮಾಡಲಿ, ಕರಾರಿಗೆ ಹಸ್ತಾಕ್ಷರ ನೀಡಲಿ ಎಂದು ಮೌಂಟ್‌ಬ್ಯಾಟನ್ನರು ಕೊನೆಯವರೆವಿಗೂ ಪ್ರಯತ್ನಪಟ್ಟರು. ಹಾಗಿಲ್ಲದಲ್ಲಿ ಎಲ್ಲ ಅವ್ಯವಸ್ಥೆಗೂ ನಿಝಾಮನೇ ಹೊಣೆಗಾರನಾಗುತ್ತಾನೆಂದು ಪ್ರಯತ್ನಿಸಿದರಾದರೂ ನಿಝಾಮ ದೆಹಲಿಗೆ ಹೋಗುವುದಕ್ಕೇ ಹೆದರುತ್ತಿದ್ದ. ಹೀಗೆ ಮೌಂಟ್‌ಬ್ಯಾಟನ್ ನಿಝಾಮನನ್ನು ಭೇಟಿಯಾಗುವ ಅವಕಾಶ ಬರಲೇ ಇಲ್ಲ. ಜೂನ್ ಕೊನೆಯಲ್ಲಿ ಮೌಂಟ್‌ಬ್ಯಾಟನ್ ಇಂಗ್ಲೆಂಡ್‌ಗೆ ಹಿಂದಿರುಗಿದರು, ಆಗ ಬಂಗಾಳದ ಗವರ್ನರ್ ಆಗಿದ್ದ ರಾಜಗೋಪಾಲಾಚಾರಿ ಭಾರತದ ಮೊದಲ ಭಾರತೀಯ ಗವರ್ನರ್ ಜನರಲ್ ಆಗಿ ನಾಮಾಂಕಿತರಾದರು. ತನ್ನ ಕಾರ್ಯಕಾಲದ ಕೊನೆಯ ದಿನದವರೆಗೂ ಮೌಂಟ್‌ಬ್ಯಾಟನ್ ನಿಝಾಮನಿಗೆ ಅರ್ಥಮಾಡಿಸಲು ಪ್ರಯತ್ನಿಸುತ್ತಲೇ ಇದ್ದರು.

ಇತಿಹಾಸದ ಚಲನೆಯನುಸಾರ ಪ್ರಜೆಗಳ ಹಿತಕ್ಕಾಗಿ ಫೈಸಲೆ ತೆಗೆದುಕೊಳ್ಳಲಿ ಎಂದು ಪ್ರಯತ್ನಿಸಿದರು. ಆದರೆ ನಿಝಾಮ ರಝಾಕಾರರ ಹಿಡಿತದಲ್ಲಿದ್ದರು, ಕಾಸಿಂ ರಿಜ್ವಿಯ ದರ್ಪ, ಕ್ಷುದ್ರ ಬುದ್ಧಿ ಸಿಲುಕುವಂಥದ್ದಾಗಿರಲಿಲ್ಲ, ಅವನು ಹೈದರಾಬಾದ್ ರಾಜ್ಯ ಮತ್ತು ಹತ್ತಿರದ ಪ್ರದೇಶಗಳ ಭಯವನ್ನು ಹರಡಿಸಿಟ್ಟಿದ್ದ. ೨೬ ನವಂಬರ್ ೧೯೪೭ ರಿಜ್ವಿ ಸಾಹೇಬ ದೆಹಲಿಯಲ್ಲಿ ಗಾಂಧೀಜಿಯನ್ನು ಭೇಟಿಮಾಡಿದ್ದರು, ತಮ್ಮ ಬಳಿಗೆ ಬಂದಿದ್ದ ಎಲ್ಲ ದೂರುಗಳನ್ನೂ ಅವರು ಸಾಕ್ಷ್ಯಾಧಾರಗಳೊಂದಿಗೆ ಬಾಪೂಜಿ ಕಾಸಿಮ್ ರಿಜ್ವಿಗೆ ಆತ ಉತ್ತರ ನೀಡಲಿ ಎಂದು ಕೊಟ್ಟುಬಿಟ್ಟಿದ್ದರು. ಆದರೆ ರಿಜ್ವಿ ಆ ರೀತಿ ಪ್ರಾಮಾಣಿಕತೆ ಅಥವಾ ನ್ಯಾಯ ನೀತಿಯನ್ನು ನಂಬುತ್ತಿರಲಿಲ್ಲ. ಕಾಸಿಮ್ ರಿಜ್ವಿ ದುರಹಂಕಾರಿ ವ್ಯಕ್ತಿಯಾಗಿದ್ದ. ಆತ ಅಹಂಕಾರದಿಂದ ಮಾರನೆಯ ದಿನ ದೆಹಲಿಯಲ್ಲಿ ಘೋಷಣೆ ಮಾಡಿ ದೆಹಲಿಯ ಕೆಂಪುಕೋಟೆಯ ಮೇಲೆ ಆಧಿಪತ್ಯ ಮಾಡಿಕೊಳ್ಳುವೆನೆಂದು ಹೇಳಿದ.

ಮೌಂಟ್‌ಬ್ಯಾಟನ್ ಹೊರಟುಹೋದ ನಂತರ ನಿಝಾಮನು ಇಂಗ್ಲೆಂಡ್‌ನ ರಾಜನಾಗಿದ್ದ ಐದನೆಯ ಜಾರ್ಜ್‌ಗೆ ಅಪೀಲು ಮಾಡಿ ಹೈದರಾಬಾದ್ ರಾಜ್ಯದ ಸ್ವಾತಂತ್ರವನ್ನು ಮನ್ನಿಸಿ ಕಾಮನ್‌ವೆಲ್ತ್ ಸದಸ್ಯತ್ವ ನೀಡಬೇಕೆಂದು ಬೇಡಿದ್ದ. ಆಗ ಇಂಗ್ಲಿಷರು ಕಾಮನ್‌ವೆಲ್ತ್‌ನ ಆಕರ್ಷಣೆಯನ್ನು ಹುಟ್ಟಿಸಿದ್ದರು, ಇಂಗ್ಲಿಷ್ ಅಧಿಕಾರಿಗಳೆಲ್ಲರೂ ಆಗ ಪಾಕಿಸ್ತಾನವನ್ನು ಇಂಗ್ಲಿಷರ ಪ್ರಾಮಾಣಿಕನಾದ ಮಿತ್ರನೆಂದು ತಿಳಿದಿದ್ದರು, ಅದು ಕಾಮನ್‌ವೆಲ್ತ್ ಸದಸ್ಯನಾಗುತ್ತದೆಂದುಕೊಂಡಿದ್ದರು. ಅವರಿಗೆ ಭಾರತ, ಭಾರತದ ಮುಖಂಡರ ಮೇಲೆ ನಂಬಿಕೆ ಇರಲಿಲ್ಲ. ಭಾರತದ ಪ್ರಜಾತಂತ್ರದ ವಿಚಾರಗಳನ್ನು ಕಂಡರೆ ಇಂಗ್ಲಿಷ್‌ನವರಿಗೆ ಭಯ. ಭಾರತೀಯ ಮುಖಂಡರು ಸಾಮಂತವಾದ – ಸಾಮ್ರಾಜ್ಯವಾದವನ್ನು ವಿರೋಧಿಸುತ್ತಾರೆಂಬ ಕಾರಣದಿಂದ ಅವರಿಗೆ ಭಾರತದ ದಕ್ಷತೆ, ಯೋಗ್ಯತೆ, ಪ್ರಾಮಾಣಿಕತೆಯ ಬಗ್ಗೆ ಗೌರವ ಇರಲಿಲ್ಲ. ಜಿನ್ನಾ ಮತ್ತು ನಿಝಾಮ ಸಾಮಂತವಾದಿ ಪದ್ಧತಿಯನ್ನು ಸಂಪೂರ್ಣವಾಗಿ ಸಮರ್ಥಿಸುತ್ತಿದ್ದರು, ಅದರಿಂದ ಅವರಿಗೆ ಇಂಗ್ಲಿಷರ ಜೊತೆ ಸರಿಹೋಗಿರಲಿಲ್ಲ. ಆಗಸ್ಟ್ ೧೫ರ ನಂತರ ಭಾರತದಲ್ಲಿ ವಿದೇಶಿ ರಾಜ್ಯದ ಅಸ್ತಿತ್ವವೇ ಮುಗಿದುಹೋಗಿತ್ತು. ಅದರಿಂದ ಐದನೆಯ ಜಾರ್ಜ್, ನಿಝಾಮನಿಗೆ ಸಹಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ, ರಝಾಕಾರರ ಉಪದ್ರವ ಹೆಚ್ಚಾಗುತ್ತಿತ್ತು, ದಕ್ಷಿಣದ ಶಾಂತಿಪ್ರಿಯ ರಾಜನ ಮೇಲೆ ಅತ್ಯಾಚಾರವೆಸಗುತ್ತಿದ್ದರು. ಕೋಮುವಾದ ಅನ್ನುವುದು ಎಂದೂ ಏಳದೆ ಇದ್ದ ಜಾಗದಲ್ಲಿಯೂ ನಿರಪರಾಧಿಗಳಾದ ಹಿಂದೂ ಪ್ರಜೆಗಳು ಮುಸಲ್ಮಾನರ ಅತ್ಯಾಚಾರಗಳಿಂದ ನರಳುತ್ತಿದ್ದರು, ಸ್ವಾತಂತ್ರ್ಯ ಸಿಕ್ಕು ಒಂದು ವರ್ಷ ಕೂಡ ಪೂರೈಸಿತ್ತು. ಸರದಾರ್ ಪಟೇಲರ ಗೃಹ ಮಂತ್ರಾಲಯ ದೊಡ್ಡ ಶೌರ್ಯ ಪ್ರದರ್ಶನ ಮಾಡಿತು, ಕೊನೆಗೆ ಸ್ಥಿತಿ ತೀರಾ ಕೆಟ್ಟು ಹೋಯಿತು. ಆಗ ೧೩ ಸೆಪ್ಟೆಂಬರ್

೧೯೪೮ರಲ್ಲಿ ಮಧ್ಯಪ್ರದೇಶ ಸರಕಾರದ ಪೊಲೀಸ್ ಹೈದರಾಬಾದ್ ರಾಜ್ಯದೊಳಕ್ಕೆ ನುಗ್ಗಿ ಸರಕಾರವನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಹಿಂದೂ–ಮುಸಲ್ಮಾನ ಎರಡೂ ಬಣಗಳ ಪ್ರಜೆಗಳು ರಝಾಕಾರರಿಂದ ಬಹಳ ಪೀಡಿತರಾಗಿದ್ದರು. ಅದರಿಂದ ರಸ್ತೆಯಲ್ಲೆಲ್ಲೂ ಯಾರೂ ಮಧ್ಯಪ್ರದೇಶದ ಪೊಲೀಸನ್ನು ವಿರೋಧಿಸಲಿಲ್ಲ ಮತ್ತು ಹೈದರಾಬಾದ್ ನಗರದಲ್ಲೂ ಸೈನಿಕ ಅಥವಾ ಸೈನ್ಯವೂ ಅವರನ್ನೆದುರಿಸಲಿಲ್ಲ. ಬಹುಶಃ ಬಡಪಾಯಿ ನಿಝಾಮ ಕೂಡ ರಝಾಕಾರರ ದಮನ, ಅವರ ಅಪಮಾನ ತರುವಂಥ ವ್ಯವಹಾರಗಳಿಂದ ಬೇಸತ್ತಿರಬೇಕು. ಅದರಿಂದಲೇ ವಾದ–ವಿವಾದ ಯಾವುದನ್ನೂ ಮಾಡದೆ ಅತ ಸ್ವತಃ ತನ್ನ ರಾಜ್ಯ ಬಿಟ್ಟುಬಿಟ್ಟ. ಈ ಪೂರ್ತಿ ಘಟನೆಯ ನಡುವೆ ಐವತ್ತು ಮಂದಿ ಕೂಡ ಗಾಯಗೊಂಡಿರಲಿಲ್ಲ. ಶಾಂತಿಯಿಂದ, ಸುಖವಾಗಿ ಮೂರು ದಿನಗಳಲ್ಲಿ ಹೈದರಾಬಾದ್ ರಾಜ್ಯ ಭಾರತದಲ್ಲಿ ವಿಲೀನಗೊಂಡಿತು.

೧೫ ಆಗಸ್ಟ್ ೧೯೪೮ರಂದು ಹೈದರಾಬಾದಿನಲ್ಲಿ ಭಾರತದ ತಿರಂಗಾ ಬಾವುಟ ಹಾರತೊಡಗಿತು ಮತ್ತು ಸ್ವತಂತ್ರ ಭಾರತದ ಸ್ವತಂತ್ರ ಪ್ರಜೆಗಳ ಸರಕಾರ ರಚಿತವಾಯಿತು, ಚುನಾವಣೆಗಳು ನಡೆದವು ಮತ್ತು ಜನರ ಸರಕಾರ ರಚಿತವಾಯಿತು. ಆದರೆ ನಿಝಾಮನ ಸರಕಾರವಿರುವವರೆಗೂ ದೇಶದಲ್ಲಿ ಒಂದು ವಿಚಿತ್ರವಾದ ಅಶಾಂತಿ ನೆಲೆಸಿತ್ತು. ೧೩ ಸೆಪ್ಟೆಂಬರ್‌ನಂದೇ ಜರ್ಬು, ಶೌರ್ಯ ಇಟ್ಟುಕೊಂಡಿದ್ದ ಕಾಸಿಮ್ ರಿಝವಿ ವ್ಯಕ್ತಿ ಬಂಧಿತನಾದ. ಲಾಲ್ ಕಿಲಾ ಮೇಲೆ ಅಧಿಕಾರ ಪಡೆಯಬೇಕೆಂದುಕೊಂಡಿದ್ದ ಆತನ ಇಚ್ಛೆಯನ್ನು ಲಾಲಕಿಲಾದ ನೆಲಮಾಳಿಗೆಯಲ್ಲಿ ಆತನನ್ನು ಬಂಧಿಸಿಡುವ ಮೂಲಕ ಸರದಾರ್ ಪಟೇಲರು, ಪೂರೈಸಿದರು. ಆತನ ಮೇಲೆ ಕೇಸ್ ನಡೆಯಿತು, ಆತನಿಗೆ ಆಜೀವ ಕಾರಾವಾಸ ವಿಧಿಸಲಾಗಿತ್ತು. ಹೀಗೆ ದೇಶದ ಕೊನೆಯ ದೇಶೀರಾಜ್ಯ ಭಾರತ ಸರಕಾರದಲ್ಲಿ ವಿಲೀನವಾಯಿತು, ಭೌಗೋಳಿಕ ಮತ್ತು ಆಳ್ವಿಕೆಯ ದೃಷ್ಟಿಯಿಂದ ದೇಶ ಸ್ವತಂತ್ರವಾಗಿತ್ತು, ಅಖಂಡವಾಗಿತ್ತು, ದೇಶದಲ್ಲಿ ಸ್ವಾಯತ್ತ ಸರಕಾರವಿತ್ತು.

* * * *

# ೩೮. ಆತ್ಮಶುದ್ಧಿ

೧೯೪೭ರ ಚಳಿಗಾಲದಲ್ಲಿ ಬಾಪೂಜಿ ಒಬ್ಬಂಟಿಯಾಗಿ, ಆಂತರಿಕವಾಗಿ ಬಹಳ ಉದಾಸರಾಗಿದ್ದರು. ಬಾದಷಾಹ ಖಾನರೊಬ್ಬರನ್ನು ಬಿಟ್ಟು ಮಿಕ್ಕ ಸ್ನೇಹಿತರೆಲ್ಲ ತಾತ್ವಿಕವಾಗಿ ಅವರನ್ನು ಬಿಟ್ಟುಬಿಟ್ಟಿದ್ದರು. ಈ ಮಿತ್ರರು ಬಾಪೂಜಿಯನ್ನು ಪ್ರಶಂಸೆ ಮಾಡುತ್ತಿದ್ದರು, ಪೂಜಿಸುತ್ತಿದ್ದರು. ಆದರೆ ಅವರ ಸಿದ್ಧಾಂತಗಳಿಂದ ಬೇರೆಯಾಗಿ ಅಧಿಕಾರದಲ್ಲಿ ತೊಡಗಿದ್ದರು. ಬಾಪೂಜಿ ಡಿಸೆಂಬರ್ ತಿಂಗಳಿನಲ್ಲಿ ಬಾದಷಹ ಖಾನನಿಗೆ, 'ಈ ಭವ್ಯಭವನದಲ್ಲಿ (ಬಿಡಲಾ ಹೌಸ್) ಪ್ರೇಮಿ ಮಿತ್ರರೊಂದಿಗಿದ್ದೇನೆ, ಆದರೆ ಹೃದಯದಲ್ಲಿ ಶಾಂತಿ ಇಲ್ಲ, ನಮ್ಮ ಜನರ ಹೃದಯದಲ್ಲಿ ಸುಪ್ತವಾಗಿರುವ ಹಿಂಸೆ ಮತ್ತು ಅಶುದ್ಧಿಯನ್ನು ದೂರಗೊಳಿಸಲು ಪ್ರಯತ್ನಿಸುತ್ತಿದ್ದೇನೆ, ಆದರೆ ಪ್ರತಿಯೊಂದೂ ದೆಹಲಿಯ ಮೇಲೆ ಆಶ್ರಿತವಾಗಿದೆ. ಈ ಪ್ರಯೋಗದಲ್ಲಿ ಅಸಫಲನಾಗಲು ಈಗ ನನ್ನಲ್ಲಿ ಧೈರ್ಯ ಉಳಿದಿಲ್ಲ, ೧೨೫ ವರ್ಷಗಳು ಬದುಕಬೇಕೆಂದಿದ್ದ ನನ್ನಿಚ್ಛೆ ಈಗ ಸತ್ತುಹೋಗಿದೆ' ಎಂದು ಪತ್ರ ಬರೆದರು.

ಕಾಂಗ್ರೆಸ್ ನಾಯಕರ ನಡುವಣ ವೈಮನಸ್ಯ, ದ್ವೇಷ ಮತ್ತು ಕೀಳು ಸ್ಪರ್ಧೆ– ಇವುಗಳನ್ನು ನೋಡಿ ಬಾಪೂಜಿಯುವರ ಅಂತರಾತ್ಮ ಚೀತ್ಕರಿಸುತ್ತಿತ್ತು. ಸುಹರಾವರ್ದಿಯನ್ನು ಸತ್ಯಾಗ್ರಹದ ದಿಕ್ಕಿನಲ್ಲಿ ಸಿದ್ಧಗೊಳಿಸುವ ಪ್ರಯತ್ನ ನಡೆದಿತ್ತು. ಆದರೆ ಅದು ವಿಫಲವಾಗಿತ್ತು. ಸುಹರಾವರ್ದಿ ಜಿನ್ನಾನ ಅನ್ಯಾಯವನ್ನು ವಿರೋಧಿಸದಾದರು. ಅದರಿಂದ ದೆಹಲಿಯಲ್ಲಿ ಅವರಿದ್ದುದು ನಿರರ್ಥಕವಾಗಿತ್ತು. ಬೈಗು–ಬೆಳಗು ನಿರಾಶ್ರಿತರ ಸಮೂಹ ಬರುತ್ತಲೇ ಇತ್ತು, ಅವರು ವಿಭ್ರಾಂತರಾಗಿ ಹೇಳುತ್ತಿದ್ದುದನ್ನು ಕೇಳಿ ಬಾಪೂಜಿ ಹೃದಯ ಬಿರಿಯುತ್ತಿತ್ತು, ಡಿಸೆಂಬರ್‌ನ ಒಂದು ರಾತ್ರಿ ಜೋರಾಗಿ ಮಳೆ ಬಂತು. ಬಾಪೂಜಿ ಮೂರು ಗಂಟೆಗೆ ಎದ್ದು ಕುಳಿತರು. 'ನಾವುಗಳಾದರೆ ಶಾಂತಿಯಿಂದ ರಜಾಯಿ ಹೊದ್ದುಕೊಂಡು ಸುಖವಾಗಿದ್ದೀವಿ. ಆದರೆ ಚಳಿಗಾಲದ ಈ ನಡುಗಿಸುವ ರಾತ್ರಿಯಲ್ಲಿ ಆ ನಿರಾಶ್ರಿತರ ಸ್ಥಿತಿ ಹೇಗಿರಬಹುದೋ ಏನೋ. ದೇಶದ ಜನ ಇಷ್ಟು ಕಷ್ಟದಲ್ಲಿರುವಾಗ ನನಗೆ ಆ ಮನೆಯಲ್ಲಿ ಇರಲು ಯಾವ ಹಕ್ಕಿದೆ' ಎಂದರು.

ಬಿಡಲಾ ಹೌಸ್ ಬಳಿಯಲ್ಲೇ ಇದ್ದ ಒಂದು ಮನೆಯಲ್ಲಿ ಕೆಲವರು ಹಿಂದೂ

ಶರಣಾರ್ಥಿಗಳಿದ್ದರು. ವಸತಿ ಸಚಿವಾಲಯ ಆ ಬಂಗ್ಲೆಯನ್ನು ಖಾಲಿ ಮಾಡಲು ಆದೇಶ ನೀಡಿತ್ತು. ಬಾಪೂಜಿ ಆ ಅಧಿಕಾರಿಗಳಿಗೆ ಬರೆದರು. 'ನೀವು ನನಗೆ ಮನೆ ಖಾಲಿ ಮಾಡಿ ಅಂತ ಏಕೆ ಹೇಳುವುದಿಲ್ಲ? ಈ ವಿಸ್ಥಾಪಿತರಾದವರಿಗೆ ಪುನಃ ಕಷ್ಟ ಕೊಡುವುದು ಅನ್ಯಾಯ, ಮಂತ್ರಿಗಳಿಗೆ ದೊಡ್ಡ ಬಂಗಲೆಗಳಿವೆ, ಅವರ ಹತ್ತಿರ ಜಾಗ ತೆಗೆದುಕೊಳ್ಳಿ, ಆದರೆ ಶರಣಾರ್ಥಿಗಳಿಗೆ ತೊಂದರೆ ಕೊಡುವುದು ಸರಿಯಲ್ಲ.' ವಸತಿ ಸಚಿವಾಲಯ ಬಾಪೂಜಿಯವರ ಆಜ್ಞೆಯನ್ನು ತಲೆಬಾಗಿ ನಿರ್ವಹಿಸಿತು, ಆದರೆ ಬಾಪೂಜಿಯವರ ಇಷ್ಟ, ಅನಿಷ್ಟವನ್ನು ಆಧಾರವಾಗಿಟ್ಟುಕೊಂಡು ಪ್ರಜಾಸತ್ತೆ ಉಳಿದುಕೊಳ್ಳುವುದು ಸರಿ ಇರಲಿಲ್ಲ. ಅಧಿಕಾರಿಗಳು, ಮಂತ್ರಿಗಳಿಗೆ ಸ್ವತಃ ನ್ಯಾಯ–ನೀತಿಯ ಕಲ್ಪನೆ ಇರಬೇಕಾಗಿತ್ತು, ಆದರೆ ಅದು ಮಾಯವಾಗಿತ್ತು.

ಆ ಸಮಯದಲ್ಲಿ ಶರಣಾರ್ಥಿಗಳ ನಡುವೆ ಇದ್ದು ಸಮಾಜ ಸೇವೆ ಮಾಡುವುದು ಜನರಿಗೆ ಒಂದು ಫ್ಯಾಷನ್ ಆಗಿಬಿಟ್ಟಿತ್ತು. ಒಳ್ಳೊಳ್ಳೆಯ ಆಭೂಷಣಗಳು, ಮುತ್ತು–ರತ್ನಗಳ ಒಡವೆಯನ್ನು ಧರಿಸಿ ಲಿಪ್‌ಸ್ಟಿಕ್ ಇತ್ಯಾದಿಗಳಿಂದ ಸಜ್ಜಿತಳಾಗಿ ಒಬ್ಬ ಧನಿಕ ಮಹಿಳೆ ಬಾಪೂಜಿ ಜೊತೆ ಸಮಾಜಸೇವೆಯ ಬಗ್ಗೆ ಚರ್ಚಿಸಲು ಬಂದಳು. ಬಾಪೂಜಿ ನಡುಗಿದರು. ಅವರ ಸ್ವಭಾವದಲ್ಲಿದ್ದ ಸಹಜವಾದ ಸಭ್ಯತೆಗೆ ಆಘಾತವಾಯಿತು, ಹೀಗೆ ಸಜ್ಜಿತರಾದ ಜನರೆದುರಿಗೆ ಬಡವರು ಪಾಪ ಏನು ಮಾತನಾಡಬಲ್ಲರು? ಅಥವಾ ಎಂಥ ಆತ್ಮೀಯತೆಯ ಆಧಾರ ಸಿಕ್ಕೀತು? ಇದಕ್ಕಿಂತ ಕೆಲಸ ಮಾಡದೇ ಇದ್ದರೆ ಒಳ್ಳೆಯದು, ಮೂರು ನಾಲ್ಕು ಜನರೇ ಸಮಾಜ ಸೇವೆ ಮಾಡಿದರೂ ಸಾಕು, ಆದರೆ ಸರಳವಾಗಿದ್ದು, ಕಷ್ಟಪಟ್ಟು ಆ ದುಃಖ ಪಡುತ್ತಿರುವವರಲ್ಲಿ ಒಬ್ಬರಾಗಿ, ಅವರ ಯಾತನೆಗಳನ್ನ ದೂರ ಮಾಡಲಿ. ಸಮಾಜ ಸೇವೆಯ ಬಲದಿಂದ ಪ್ರಪಂಚದಲ್ಲಿ ತನ್ನ ಪ್ರಭುತ್ವವನ್ನ ವೃದ್ಧಿಪಡಿಸಿಕೊಳ್ಳುವ ಪ್ರಯತ್ನ ನಡೆಯುತ್ತಲೇ ಇತ್ತು, ಅದು ತುಚ್ಛವಾದುದಾಗಿತ್ತು. ಹೀಗೆ ರತ್ನವೈಡೂರ್ಯ ಧರಿಸಿ ಬಂದ ಮಹಿಳೆಯರು ಸೇವೆಯ ಸೋಗು ಹಾಕಿಕೊಂಡಿರುವುದು ಇವತ್ತಿಗೂ ನಡೆದೇ ಇದೆ. ಇವತ್ತು ಸಾಹುಕಾರರಿಗೆ ಸಮಾಜಸೇವೆಯ ಈ 'ಶೋಷಾ' ಬಹಳ ಒಳ್ಳೆಯ ಲಾಭಕರವಾದ ಮನೋರಂಜನೆಯಾಗಿದೆ, ಅಧಿಕಾರ ವಶಪಡಿಸಿಕೊಳ್ಳಲು ಸುಖಕರವಾದ ರಾಜಮಾರ್ಗವಾಗಿದೆ.

ಆಗ ರಚನಾತ್ಮಕ ಸಂಸ್ಥೆಗಳು ಮತ್ತವರ ದಿಗ್ಗಜರು ಪರಸ್ಪರ ಕಾದಾಡುತ್ತಿದ್ದು, ಒಬ್ಬರನ್ನ ಕಂಡರೆ ಇನ್ನೊಬ್ಬರಿಗೆ ಸಹನೆ ಇರಲಿಲ್ಲ. ಕಟುವಾಗಿ ಟೀಕೆ ಮಾಡುತ್ತಿದ್ದರು. ಅವರುಗಳ ನಡುವೆ ಸಹಯೋಗ, ಸೌಹಾರ್ದದ ಕೊರತೆಯಾಗಿತ್ತು. ಬಾಪೂಜಿ ಹೇಳುತ್ತಿದ್ದರು. 'ಅಧಿಕಾರದಿಂದ ದೂರವಿರುವ ಈ ಆಧಾರ ಸಂಸ್ಥೆಗಳು ಸಹಯೋಗ ಸ್ಥಾಪಿಸಲು ಸಾಧ್ಯವಾಗುತ್ತಿರಲಿಲ್ಲವಾದರೆ ಬೇರೆಯವರ ಮೇಲೆ ಹೇಗೆ ದೋಷಾರೋಪಣೆ ಮಾಡಬಲ್ಲವು?' ರಾಜೇಂದ್ರ ಬಾಬು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು,

ಬಾಪೂಜಿ ಅವರಿಗೆ ಹೇಳಿದರು: 'ನಮ್ಮ ಕಣ್ಣೆದುರಿಗೇ ಕಾಂಗ್ರೆಸ್‌ನ ತಳಹದಿ ಕುಸಿಯುತ್ತಿದೆ. ಕಾಂಗ್ರೆಸ್ ಕಾಂತಿ ಕಳೆದುಕೊಂಡು ಒಂದು ಜೊಳ್ಳು ಸಂಸ್ಥೆಯಾಗಿ ಹೋಗಿದೆ, ನಾವು ಕಾಂಗ್ರೆಸ್ಸಿಗರು ಜನರಿಗೆ ನೀಡಿದ್ದ ಭರವಸೆಗಳನ್ನು ಪೂರೈಸಬೇಕು. ಹಾಗಿಲ್ಲವೆಂದರೆ, ನಾವು ಹಿಂದೆ ಆಡಿದ್ದ ಮಾತುಗಳೆಲ್ಲ ಶಬ್ದಾಡಂಬರವಾಗುತ್ತಷ್ಟೆ, ರಾಜಕೀಯದಲ್ಲಿ ಈ ಸಿದ್ಧಾಂತಗಳೆಲ್ಲಾ ನಡೆಯುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿ ಒಪ್ಪಿಕೊಳ್ಳಬೇಕು.' ಪಾಪ, ರಾಜೇಂದ್ರಬಾಬು ಏನುತ್ತರ ಕೊಡಲು ಸಾಧ್ಯವಿತ್ತು? ಬಾಪೂಜಿಗೆ ತಮ್ಮ ಸತ್ಯ–ಅಹಿಂಸೆಯ ಸಾಧನೆಯಲ್ಲಿ ಎಲ್ಲೋ ಏನೋ ಅಶುದ್ಧಿ ಉಳಿದುಕೊಂಡಿದೆ ಅಂತ ಅನಿಸುತ್ತಿತ್ತು. ಅದರಿಂದಲೇ ಈ ಮೂವತ್ತು ವರ್ಷಗಳ ಕಾಲ ಇದ್ದ ಹಳೆಯ ಜೊತೆಗಾರರು ದಿಕ್ಕು ತೋಚದವರಾಗುತ್ತಿದ್ದರು. ಈ ಕಾಂಗ್ರೆಸ್ ನಾಯಕರು ಮುವತ್ತು ವರ್ಷ ಸಾಧಿಸಿದ ಅಹಿಂಸೆ ಅಹಿಂಸೆಯಾಗಿರಲಿಲ್ಲ, ಸವಿನಯ ಕಾನೂನು ಭಂಗವಾಗಿತ್ತು ಅಷ್ಟೆ. ಅಹಿಂಸೆಯ ಹೀನ ಪ್ರಯೋಗವಾಗಿತ್ತಷ್ಟೆ. ಅದರಲ್ಲಿ ವೀರರ ಅಹಿಂಸೆಯ ಕೊರತೆ ಇತ್ತು. ಬಾಪೂಜಿಯ ಈ ಇಳಿವಯಸ್ಸಿನಲ್ಲಿ ದೇವರು ಕೃಪೆ ಮಾಡಿ ಅವರ ಸೈದ್ಧಾಂತಿಕವಾಗಿ ಮಾಡಿದ ತಪ್ಪನ್ನು ತಿಳಿಸಿಕೊಟ್ಟಿದ್ದೆ ಎನ್ನುವುದಷ್ಟೇ ಅವರಿಗೆ ಸಮಾಧಾನ ನೀಡಿತ್ತು. ಇನ್ನು ಮೃತ್ಯುವಿನ ಕ್ಷಣ ಬರುವವರೆಗೂ ಅವರ ಅಹಿಂಸೆ ಅಕ್ಷುಣ್ಣವಾಗಿರಲಿ ಎಂಬುದೊಂದೇ ಅವರು ಪ್ರಾರ್ಥನೆಯಾಗಿತ್ತು.

ಹತ್ತಿರದ ಈ ಘೋರ ನಿರಾಶಾದಾಯಕವಾದ ವಾತಾವರಣದಲ್ಲಿ ಬಾಪೂಜಿ ತಮ್ಮ ಸಹಜ–ಶಾಂತ ಪ್ರಸನ್ನವಾದ ಮನಸ್ಸನ್ನು ಸ್ಥಿರವಾಗಿಟ್ಟುಕೊಂಡಿದ್ದರು. ದುಃಖಿತರಾಗಿದ್ದವರೆಲ್ಲರ ದುಃಖವನ್ನು ದೂರಗೊಳಿಸುತ್ತಿದ್ದರು, ಎಲ್ಲರಿಗೂ ಧೈರ್ಯ–ನಂಬಿಕೆ ನೀಡುತ್ತಿದ್ದರು. ಕಗ್ಗತ್ತಲು ಆವರಿಸಿದ್ದ ವಿಷಾದದ ಈ ತಿಂಗಳುಗಳಲ್ಲಿ ಬಾಪೂಜಿ ಒಂದು ಅಲ್ಲಾಡದ ದೀಪಶೀಖೆಯ ಹಾಗಿದ್ದು ಭವಿಷ್ಯವನ್ನು ಸೂಚಿಸುತ್ತಿದ್ದರು. ಆದರೆ ಅಂತಹ ದೀಪಶಿಖೆ ಒಳಗೇ ಉರಿಯುತ್ತಿದ್ದರೂ ಮುಗಿಯುತ್ತಿರುತ್ತದೆ. ಬಾಪೂಜಿ ಕೂಡ ತಮ್ಮ ಅಧ್ಯಾತ್ಮದ ಶಕ್ತಿಯಿಂದ ನಿಭಾಯಿಸುತ್ತಿದ್ದರು. ಆದರೆ ಪ್ರತಿ ದಿನ ಆತ್ಮದ ಈ ಹನನದಿಂದ ಅವರು ಒಳಗಿಂದೊಳಗೇ ಕುಸಿಯುತ್ತಿದ್ದರು.

ವಿಭಜನೆಯ ವಿಭೀಷಿಕೆ ಇನ್ನೂ ಮುಗಿದಿರಲಿಲ್ಲ. ಅಲ್ಲಲ್ಲಿ ಕೋಮುವಾದದ ವಿಷ ಉಕ್ಕೇರುತ್ತಿತ್ತು. ವಿಭಜನೆಯಾದ ಮೇಲೂ ನಾಲ್ಕು ಕೋಟಿ ಮುಸಲ್ಮಾನರು ಈ ದೇಶದಲ್ಲಿ ಉಳಿದಿದ್ದರು. ಅದರ ನಾಯಕರು ಪಾಕಿಸ್ತಾನದಲ್ಲಿದ್ದರು. ಆದರೆ ಎಷ್ಟೋ ವರ್ಷಗಳಿಂದ ಪೋಷಿಸಿಕೊಂಡು ಬಂದಿದ್ದ ವಕ್ರತೆ ಕಠೋರತೆಯೊಂದಿಗೆ ಈ ಮುಸಲ್ಮಾನರು ಸಮಾಜದಲ್ಲಿ ಬೆರೆಯಲು ಸಾಧ್ಯವಾಗುತ್ತಿರಲಿಲ್ಲ. ಆ ಕಾಲದಲ್ಲಿ ವಾರಕ್ಕೆ ಮೂರು ನಾಲ್ಕು ಬಾರಿ ಮುಸ್ಲಿಂ ಮೌಲಾಗಳು ಭೇಟಿಯಾಗಲು ಬಂದು ಬಾಪೂಜಿಯ ಸಮಯ–ಶಕ್ತಿಯನ್ನು ತೆಗೆದುಕೊಳ್ಳುತ್ತಿದ್ದರು. ಎಲ್ಲರೂ ದೊಡ್ಡ–ದೊಡ್ಡ ಮಾತುಗಳನ್ನಾಡುತ್ತಿದ್ದರು, ಆದರೆ ಬಚ್ಚಿಟ್ಟುಕೊಂಡಿದ್ದ ಆಯುಧಗಳನ್ನು

ಯಾರೂ ಸಮರ್ಪಿಸುತ್ತಿರಲಿಲ್ಲ. ಇಂತಹ ಉದ್ರಿಕ್ತವಾಗಿದ್ದ ಅವಿಶ್ವಾಸದ ವಾತಾವರಣದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ತನ್ನ ಬೇರುಗಳನ್ನು ವಿಸ್ತರಿಸುತ್ತಿತ್ತು, ಮತ್ತು ಸಮಾಜದ ಅಬೋಧ ಮಧ್ಯಮ ವರ್ಗದ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಂಡಿತ್ತು. ಪ್ರತಿಯೊಂದು ದೇಶದಲ್ಲಿ, ಪ್ರತಿಯೊಂದು ಕಾಲದಲ್ಲೂ ಮಧ್ಯಮವರ್ಗ ನುಚ್ಚುನುರಿಯಾಗುತ್ತದೆ. ವಿಭಜನೆಯ ಅತಿ ದೊಡ್ಡ ಪೆಟ್ಟನ್ನು ಎದುರಿಸಿದವರೂ ಮಧ್ಯಮ ವರ್ಗದವರೇ. ರಾಷ್ಟ್ರೀಯ ಸ್ವಯಂಸೇವಕ ಸಂಘ ಅವರ ಆಕ್ರೋಶವನ್ನು ಪ್ರಚೋದಿಸಿತು, ಹಿಂದೂ ರಾಷ್ಟ್ರದ ಸ್ಥಾಪನೆ ಮತ್ತು 'ಮುಸ್ಲಿಂ ಭಾರತ ಛೋಡೊ'ನ ಘೋಷಣೆ ಒಳಗಿಂದೊಳಗೇ ಮೂಡಿಕೊಂಡಿತು. ರಾಷ್ಟ್ರೀಯ ಸ್ವಯಂಸೇವಕ ಸಂಘ ಪಾಕಿಸ್ತಾನದೊಂದಿಗೆ ಸೇಡು ತೀರಿಸಿಕೊಳ್ಳಹೊರಟಿತ್ತು. ತನ್ನ ಪ್ರಾಣವನ್ನು ಪಣವಾಗಿಟ್ಟಾದರೂ ಬಾಪೂಜಿ ಈ ಸೇಡಿನ ಬೆಂಕಿಯಿಂದ ದೇಶದ ಜನರನ್ನ ಮತ್ತು ಮುಸಲ್ಮಾನರನ್ನ ಉಳಿಸಬಯಸುತ್ತಿದ್ದರು.

ಮುಸಲ್ಮಾನರು ಬೇಕಾದಷ್ಟು ಅಪರಾಧಗಳನ್ನು ಮಾಡಿದ್ದರು, ಬಾಪೂಜಿಗೆ ಅವೆಲ್ಲವೂ ತಿಳಿದಿದ್ದವು. ಆದರೆ ಬಹು ಪ್ರಖ್ಯಾತರಾಗಿದ್ದ ಹಿಂದೂಗಳು ಔದಾರ್ಯದಿಂದ ಮುಸಲ್ಮಾನರನ್ನು ಸಮಾಜದಲ್ಲಿ ಪುನಃ ನೆಲಸುವಂತೆ ಮಾಡಬೇಕಾಗಿತ್ತು. ಪಾಕಿಸ್ತಾನ ಸರಕಾರಕ್ಕಂತೂ ಈ ನಾಲ್ಕು ಕೋಟಿ ಮುಸಲ್ಮಾನರ ಚಿಂತೆ ಇರಲೇ ಇಲ್ಲ, ಪಾಕಿಸ್ತಾನ ರಚಿತವಾದ ಮೇಲೆ ಜಿನ್ನಾ ಸಾಹಬರು ಎರಡು ಮುಸ್ಲಿಂ ಲೀಗ್‌ಗಳನ್ನು ರಚಿಸಿದ್ದರು. ಒಂದು ಪಾಕಿಸ್ತಾನದ ಲೀಗ್, ಅವರಲ್ಲಿ ಹಿಂದೂ ಯಾರೂ ಸದಸ್ಯನಾಗುವಂತಿರಲಿಲ್ಲ. ಎರಡನೆಯ ಇನ್ನೊಂದು ಲೀಗ್‌ನ್ನು ರಚಿಸಿ ಜಿನ್ನಾ ಸಾಹೇಬರು ಭಾರತವಾಸಿಗಳಿಗೆ ಉಪಹಾರವನ್ನು ಸಿದ್ಧಪಡಿಸಿದ್ದರು, ಆಗ ಬಾಪೂಜಿ ಸ್ಪಷ್ಟವಾಗಿ ಹೇಳಿದ್ದೇನೆಂದರೆ, ಭಾರತದಲ್ಲಿ ಮುಸ್ಲಿಂ ಲೀಗ್ ಒಂದು ಧಾರ್ಮಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸಬಹುದಾದರೂ ಅದರ ರಾಜಕೀಯ ಅಸ್ತಿತ್ವವೇನೂ ಇರಬಾರದು. ಸರದಾರ ಪಟೇಲರಂತೂ ಮುಸ್ಲಿಂ ಲೀಗನ್ನು ಅದುಮಿಟ್ಟಿದ್ದರು. ಆದರೆ ನಂತರದ ದಿನಗಳಲ್ಲಿ ಮುಸ್ಲಿಮರು ಮತ್ತೊಮ್ಮೆ ತಮ್ಮದೇ ರಂಗಿನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈಗಂತೂ ನಮ್ಮ ದೇಶದಲ್ಲಿ ಮುಸ್ಲಿಂ ಲೀಗ್‌ಗೆ ಪೂರ್ತಿ ಸ್ವಾತಂತ್ರ್ಯ ನೀಡಲಾಗಿದೆ.

ಈ ನಡುವೆ ಎಷ್ಟೋ ಜನ ಮುಸಲ್ಮಾನ ಅಧಿಕಾರಿಗಳು, ಅದರಲ್ಲೂ ವಿಶೇಷವಾಗಿ ಅಂಚೆ–ತಾರು ವಿಭಾಗದ ಕಾರ್ಮಿಕರು ಪಾಕಿಸ್ತಾನವನ್ನು ಬಿಟ್ಟು ಪುನಃ ಭಾರತಕ್ಕೆ ಬರಲು ಇಷ್ಟಪಡುತ್ತಿದ್ದರು. ಪಾಕಿಸ್ತಾನದ ಪ್ರಚಾರಕ್ಕೆ ಒತ್ತು ನೀಡುವುದಕ್ಕಾಗಿ ಅವರು ಹಾಗೆ ವ್ಯವಹರಿಸಿದ್ದರೆಂದೂ, ಆದರೆ ಈಗ ಅವರು ಭಾರತದಲ್ಲೇ ಇರಬಯಸುತ್ತೇವೆಂದು ಹೇಳುತ್ತಿದ್ದರು. ಆ ಮುಸ್ಲಿಂ ಅಧಿಕಾರಿಗಳು ತಾವು ಪಾಕಿಸ್ತಾನದಿಂದ ಹಿಂದಿರುಗಿ ಬಂದ ಮೇಲೆ ಭಾರತ ಸರಕಾರ ಅವರನ್ನು

ಪುನಃ ಸ್ವೀಕರಿಸುತ್ತಿಲ್ಲವೆಂದು ದುಃಖಪಡುತ್ತಿದ್ದರು, ಬಾಪೂಜಿ ಅವರಿಗೆ, 'ಭೂತಕಾಲದ ಘಟನೆಗಳನ್ನು ನೋಡಿ ಜನ ಅವರನ್ನು ನಂಬುತ್ತಿಲ್ಲ ಅಂದಾಗ, ಅವರು ಧೈರ್ಯದಿಂದ ಸಹಿಸಬೇಕು. ಈಗಲೇ ಅವರು ಕೆಲಸಕ್ಕಾಗಿ, ಅಧಿಕಾರಕ್ಕಾಗಿ ಪ್ರಯತ್ನ ಪಡಬಾರದು, ಅವರು ವಾಸ್ತವವಾಗಿ ಪ್ರಾಮಾಣಿಕರಾಗಿದ್ದು, ನಂಬಲರ್ಹರಾಗಿದ್ದರೆ, ಸಮಾಜ ಸ್ವತಃ ಅವರಿಗೆ ಸ್ಥಾನ ನೀಡುತ್ತದೆ.' ಎಷ್ಟೋ ಜನ ಮುಸಲ್ಮಾನರು ಹಿಂದೀ ಭಾಷೆಯನ್ನು ಹೊಗಳಲು ಆರಂಭಿಸಿದ್ದರು, ಅನೇಕರು ಕಾಂಗ್ರೆಸ್ ಸದಸ್ಯರಾಗಬಯಸುತ್ತಿದ್ದರು. ಬಾಪೂಜಿ ಅವರಿಗೆ 'ಇವೆಲ್ಲ ಸರಿ, ಆದರೆ ಈಗಲೇ ಇಷ್ಟು ಆತುರಪಡಬಾರದು' ಎಂದು ಹೇಳಿದರು.

೩ ಜನವರಿ ೧೯೪೮ರಂದು ನಿರಾಶ್ರಿತರಾಗಿದ್ದ ಕೆಲವು ಹಿಂದೂ ಸಿಖ್ಖರು ಮುಸಲ್ಮಾನರ ಖಾಲಿ ಮನೆಗಳನ್ನು ವಶಪಡಿಸಿಕೊಂಡರು. ಪೊಲೀಸಿನವರು ಅವರನ್ನು ತಡೆಯದಿರಲೆಂದು ಹೆಂಗಸರು ಮಕ್ಕಳನ್ನ ಮುಂದೆ ತಂದು ನಿಲ್ಲಿಸಿದರು, ಈ ಚತುರತೆ ನೋಡಿ ಬಾಪೂಜಿಗೆ ಬಹಳ ಬೇಸರವಾಯಿತು. ಆ ನಿರಾಶ್ರಿತರುಗಳಿಗೆ ಮನೆ ಬೇಕಾಗಿತ್ತು. ಅದಕ್ಕೆ ಅವರಿಗೆ ಬೇರೆ ಜಾಗ ಕೊಟ್ಟೂ ಆಗಿತ್ತು. ಆದರೆ ಅದನ್ನೆಲ್ಲಾ ಬಿಟ್ಟು ಅವರು ಮುಸ್ಲಿಮರ ಮನೆಗಳನ್ನು ಬಲವಂತವಾಗಿ ವಶಪಡಿಸಿಕೊಳ್ಳಲು ಇಷ್ಟಪಡುತ್ತಿದ್ದರು, ಅದು ತುಚ್ಛತನವಾಗಿತ್ತು, ಅತೀ ಸಣ್ಣತನ ಅದು. ಆ ದಿವಸಗಳಲ್ಲಿ ಸರದಾರ್ ಮತ್ತು ನೆಹರೂ ನಡುವೆ ವೈಚಾರಿಕ ಭಿನ್ನತೆ ಎದ್ದುಬಂದಿತ್ತು. ಸರದಾರರು ಮುಸಲ್ಮಾನ ಅಪರಾಧಿಗಳಿಗೆ ಕಠಿಣ ಸಜೆ ಕೊಡಬಯಸುತ್ತಿದ್ದರು. ಹಾಗೆಯೇ ಅವರು ಹಿಂದೂಗಳನ್ನೂ ಹತೋಟಿಯಲ್ಲಿಡುತ್ತಿದ್ದರು. ಆದರೆ ಅವರ ವಿಚಾರ ಭಿನ್ನತೆಯ ಪ್ರಭಾವ ವಾತಾವರಣ ಮತ್ತು ಆಳ್ವಿಕೆಯಲ್ಲೂ ಕಾಣಿಸತೊಡಗಿತ್ತು, ಕ್ಯಾಬಿನೆಟ್‌ನ ಅಧಿಕಾರ ಕ್ಷೇತ್ರ ಮತ್ತು ಪ್ರಧಾನ ಮಂತ್ರಿಯ ಅಧಿಕಾರ ಏನು ಎಂಬುದರ ಸ್ವರೂಪ ಇನ್ನೂ ಸ್ಪಷ್ಟವಾಗಿ ತಿಳಿದುಬಂದಿರಲಿಲ್ಲ. ಅಲ್ಲೂ ಮನಸ್ತಾಪ ಇತ್ತು. ಪಾಕಿಸ್ತಾನ ಈ ವಿಚಾರಭೇದದ ದುರುಪಯೋಗ ಪಡೆದುಕೊಳ್ಳುವ ಹಾಗಾಗದಿರಲಿ ಅಂತ ಬಾಪೂಜಿ ಹೆದರುತ್ತಿದ್ದರು. ಕೆಲವರು ಸ್ನೇಹಿತರು ಈ ವಿಚಾರಭೇದದ ವಿಷಯವನ್ನು ಲಾರ್ಡ್ ಮೌಂಟ್‌ಬ್ಯಾಟನ್‌ಗೆ ತಿಳಿಸಿಬಿಟ್ಟಿದ್ದದ್ದು ಬಾಪೂಜಿಗೆ ಮತ್ತೂ ಬೇಸರತಂದಿತ್ತು, ಲಾರ್ಡ್ ಮೌಂಟ್ ಬ್ಯಾಟನ್ ಒಳ್ಳೆಯ ಮನುಷ್ಯ ಅಂತ ಬಾಪೂಜಿ ಹೇಳುತ್ತಿದ್ದರಾದರೂ ನಮ್ಮ ಮನೆಯ ಒಳಗಿನ ಮಾತುಗಳನ್ನು ಬೇರೆಯ ಜನರಿಗೆ ಹೇಳಿದ್ದು ತಪ್ಪು. ಆ ಕಾಲದಲ್ಲೂ ಅಲ್ಲಿಲ್ಲಿನ ಮಾತುಗಳನ್ನು ಒಂದಕ್ಕೆ ನಾಕರಷ್ಟು ಮಾಡಿ, ಇಲ್ಲಿಯ ಮಾತನ್ನ ಅಲ್ಲಿ ಹೇಳುವಂತಹ ಹಳೆಯ ಅಭ್ಯಾಸ ಕಾಂಗ್ರೆಸಿಗರಿಗಿತ್ತು. ಅದರಿಂದ ವಾತಾವರಣ ಇನ್ನೂ ಹೆಚ್ಚು ಕಲುಷಿತವಾಗುತ್ತಿತ್ತು.

೧೯೪೮ರಲ್ಲಿ ಹೊಸ ವರ್ಷ ಆರಂಭವಾಯಿತು. ಆದರೆ ಬಾಪೂಜಿಯ

ವಿಷಾದ ಕಡಿಮೆಯಾಗುವುದರ ಬದಲಾಗಿ ತೀವ್ರವಾಗುತ್ತಿತ್ತು, ದೇಶ ಮಹಾಭಾರತದ ದುರ್ಯೋಧನನ ಹಾಗೆ ಧರ್ಮಮಾರ್ಗವನ್ನು ತಿಳಿದುಕೊಂಡಿದ್ದರೂ ಅದರಲ್ಲಿ ಪ್ರವೃತ್ತರಾಗುತ್ತಿರಲಿಲ್ಲ. ಅದೇ ರೀತಿ ಜನ ಅಧರ್ಮವನ್ನೂ ತಿಳಿದಿದ್ದರು, ಆದರೆ ಅದರಿಂದ ನಿವೃತ್ತರಾಗುತ್ತಿರಲಿಲ್ಲ.

**ಜಾನಾಮಿ ಧರ್ಮಂ ನ ಚಮೇವ ಪ್ರವೃತ್ತಿಃ ।**
**ಜಾನಾಮಿ ಅಧರ್ಮಂ ನ ಚಮೇವ ನಿವೃತ್ತಿಃ ॥**

ಸಿಂಧ್‌ನಿಂದ ಒಂದೇ ಸಮನಾಗಿ ಕೆಟ್ಟ ಸುದ್ದಿಗಳು ಬರುತ್ತಿದ್ದವು, ಪಾಕಿಸ್ತಾನದ ಗುಜರಾತ್ ಜಿಲ್ಲೆಯಲ್ಲಿ ನಿರಾಶ್ರಿತರುಗಳಿದ್ದ ಒಂದು ರೈಲುಗಾಡಿಯನ್ನು ತಡೆದು ಮುಸಲ್ಮಾನ ಅಧಿಕಾರಿಗಳು ಮತ್ತು ಪ್ರಜೆಗಳು ನಿಶ್ಶಸ್ತ್ರ ಹಿಂದೂ, ಸಿಖ್ ಮತ್ತು ಅವರ ಮಕ್ಕಳನ್ನು ಗಜ್ಜರಿ ಗೆಡ್ಡೆ–ಮೂಲಂಗಿ ಹಾಗೆ ಕತ್ತರಿಸಿ ಬಿಸುಟಿದ್ದರು, ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿ, ಅವರನ್ನು ಅಪಹರಿಸಿದ್ದರು. ಈ ತರಹೆಯ ಸುದ್ದಿಗಳನ್ನು ಕೇಳಿ ಬಾಪೂಜಿಯವರ ಎದೆ ನಡುಗುತ್ತಿತ್ತು. ಪಾಕಿಸ್ತಾನ ಸರಕಾರ ಇದೇ ರೀತಿ ನಡೆದರೆ ಹೇಗೆ ನಿರ್ವಹಿಸುವುದು ಎಂಬುದು ಪ್ರಮುಖ ಪ್ರಶ್ನೆಯಾಗಿತ್ತು. ಈ ಚಿಂತೆಗಳು, ಈ ವಿಷಯವಾಗಿ ತಲೆ ಕೆಡಿಸಿಕೊಳ್ಳುವುದರ ನಡುವೆ ಬಾಪೂಜಿಯವರ ಪತ್ರವ್ಯವಹಾರಕ್ಕೆ ಅಡ್ಡಿ ಉಂಟಾಗುತ್ತಿತ್ತು. ಇದರಿಂದ ಬೇಸರಗೊಂಡು ಬಾಪೂಜಿ ಬೆಳಗಿನ ಪ್ರಾರ್ಥನೆಯಾದ ನಂತರ ಅರ್ಧಗಂಟೆ ಮಲಗುತ್ತಿದ್ದುದನ್ನು ನಿಲ್ಲಿಸಿ ಪತ್ರಗಳಿಗೆ ಉತ್ತರ ನೀಡತೊಡಗಿದರು. ನೀರಿನ ಟಬ್‌ನಲ್ಲಿ ಮಲಗಿದ್ದಂತೆಯೇ ನಿದ್ದೆ ಹೋಗುತ್ತಿದ್ದುದನ್ನೂ ಬಿಟ್ಟು ಆಗ ಕೂಡ ಪತ್ರ ಬರೆಯತೊಡಗಿದರು. ಆ ದಿವಸಗಳಲ್ಲಿ ಬಾಪೂಜಿ ಮತ್ತೆ–ಮತ್ತೆ ಹೇಳುತ್ತಿದ್ದರು. 'ನಾನಂತೂ ಚಿತೆಯ ಮೇಲೆ ಮಲಗಿಸಿದ ಹೆಣ. ನನ್ನನ್ನ ಏನೂ ಕೇಳಬೇಡಿ.' ಆ ಪರಿಸ್ಥಿತಿಯಲ್ಲಿ ಸ್ನೇಹಿತರು ಅವರಿಗೆ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದರು. ಅದಕ್ಕೆ ಬಾಪೂಜಿ, ನಾನು ಕೆಲಸಗಳನ್ನ ನಿರ್ವಹಿಸಬಲ್ಲೆ. ಆದರೆ ಜನ ನನ್ನೆದುರಿಗೆ ಒಂದು ಮಾತನಾಡಿ ಹಿಂದೆ ಮತ್ತೊಂದು ಮಾತನಾಡುತ್ತಾರೆ, ಈ ಅಸತ್ಯದಿಂದ ನಾನು ಬಹಳ ಬೇಸರಗೊಂಡಿದ್ದೇನೆಂದು ನುಡಿದರು. ೧೦ ಜನವರಿಯಂದು ಹಳೆಯ ಮೌಲಾನಾ ಮಿತ್ರರು ತಮ್ಮ ದೂರುಗಳನ್ನು ಪಟ್ಟಿಮಾಡಿಕೊಂಡು ತಂದರು, ಬಾಪೂಜಿ ಅವರಿಗೆ, 'ನೀವು ಇಷ್ಟು ಧೈರ್ಯವಿಟ್ಟುಕೊಂಡಿದ್ದೀರಿ, ಇನ್ನು ನಾಲ್ಕು ದಿನ ಏನಾಗುತ್ತೋ ಕಾದು ನೋಡಿ' ಎಂದರು.

ಈ ಅನೇಕ ವಿಪತ್ತುಗಳ ನಡುವೆ ಭಾರತ–ಪಾಕಿಸ್ತಾನದ ನಡುವೆ ಹಣದ ಪ್ರಶ್ನೆ ಎದ್ದು ನಿಂತಿತ್ತು. ವಿಭಜನೆಯಾದಾಗ ಸರಕಾರದ ಖಜಾನೆಯಲ್ಲಿ ಮೂರುನೂರ

ಎಪ್ಪತ್ತೈದು ಕೋಟಿ ರೂ.ಗಳಿದ್ದವು. ಪಾಕಿಸ್ತಾನ ಆರಂಭಿಸುವುದಕ್ಕಾಗಿ ಇಪ್ಪತ್ತು ಕೋಟಿ ರೂಗಳನ್ನು ಕೊಡಲಾಗಿತ್ತು. ನಂತರ ಮಿಕ್ಕ ಅನೇಕ ಸಂಪತ್ತುಗಳ ಲೆಕ್ಕ ಹಾಕಿದ ನಂತರ ಪಾಕಿಸ್ತಾನಕ್ಕೆ ಭಾರತ ಐವತ್ತೈದು ಕೋಟಿ ರೂ.ಗಳನ್ನು ಕೊಡಬೇಕೆಂದು ನಿರ್ಣಯಿಸಲಾಗಿತ್ತು. ನವಂಬರ್ ಕೊನೆಯ ವಾರ, ಎರಡೂ ದೇಶದ ಪ್ರತಿನಿಧಿಗಳು ಅಲ್ಲಿ ಕುಳಿತಿದ್ದರು. ಭಾರತ ಆಗ ಪಾಕಿಸ್ತಾನವು ಕಾಶ್ಮೀರದ ಆಕ್ರಮಣವನ್ನು ಹಿಂತೆಗೆದುಕೊಳ್ಳುವವರೆಗೂ ಐವತ್ತೈದು ಕೋಟಿ ರೂಪಾಯಿಗಳನ್ನು ಕೊಡಲಾಗುವುದಿಲ್ಲವೆಂದು ತಿಳಿಸಿತ್ತು. ಆಗ ದೆಹಲಿಯ ಸಭಾಗೃಹದಲ್ಲಿ ಪಾಕಿಸ್ತಾನಿಗಳೂ ತಲೆ ಅಲುಗಿಸಿ ಹೂಂಗುಟ್ಟಿ ಈ ಹೇಳಿಕೆಗೆ ಒಪ್ಪಿಗೆ ಸೂಚಿಸಿದ್ದರು. ಆದರೆ ಅದನ್ನು ಲಿಖಿತವಾಗಿ ಉಲ್ಲೇಖಿಸಿರಲಿಲ್ಲ, ಬಹುಶಃ ಭಾರತೀಯ ಅಧಿಕಾರಿಗಳು ಅನುಭವಸ್ಥರಾಗಿರಲಿಲ್ಲವೆಂದು ಕಾಣುತ್ತದೆ ಅಥವಾ ಬೇಜವಾಬ್ದಾರಿತನವೋ, ಒಳಗಿಂದೊಳಗೇ ಕಾಂಗ್ರೆಸ್ ಮಂತ್ರಿಗಳನ್ನು ಅವಮಾನಗೊಳಿಸಲಿಚ್ಛಿಸುತ್ತಿದ್ದರೋ. ಅಂತೂ ಇಷ್ಟು ಮಹತ್ವದ ವಿಷಯಕ್ಕೆ ಪಾಕಿಸ್ತಾನಿಗಳಿಂದ ಅವರು ಬರಹದಲ್ಲಿ ಕರಾರು ಮಾಡಿಸಿಕೊಂಡಿರಲಿಲ್ಲ. ಒಮ್ಮೆ ಐವತ್ತೈದು ಕೋಟಿಗೆ ಒಪ್ಪಿಗೆ ಸಿಕ್ಕನಂತರ ಪಾಕಿಸ್ತಾನ ಸರಕಾರ ಐವತ್ತೈದು ಕೋಟಿ ರೂಪಾಯಿಗೆ ಒಂದೇ ಸಮನೆ ಒತ್ತಡ ಹಾಕತೊಡಗಿತು. ಅದು ಸಿಗದಿದ್ದಾಗ ಅನ್ಯಾಯ-ಅತಿಕ್ರಮಣವೆಂದು ದೂರತೊಡಗಿತು, ಕಾಶ್ಮೀರದ ಫೈಸಲೆ ಆದ ನಂತರವೇ ಪಾಕಿಸ್ತಾನ ಕಾಶ್ಮೀರದ ಮೇಲೆ ದಾಳೀ ಮಾಡುತ್ತಿತ್ತೆಂಬುದುದರಿಂದ ಪಾಕಿಸ್ತಾನ ದಾಳಿ ಮಾಡಿದ್ದ ಪರಿಸ್ಥಿತಿಯಲ್ಲಿ ಭಾರತ ಪಾಕಿಸ್ತಾನಕ್ಕೆ ಸಹಾಯ ಮಾಡುವ ಅಗತ್ಯವಿಲ್ಲ ಎಂಬ ಭಾರತದ ಮಾತು ಸರಿಯಾಗಿತ್ತು. ಆದರೆ ಪಾಕಿಸ್ತಾನದ ದುರಾಗ್ರಹ ಹೆಚ್ಚುತ್ತಲೇ ಇತ್ತು. ಸುಳ್ಳು ಹೇಳುವ ಹಳೆಯ ಅಭ್ಯಾಸ ಅದಕ್ಕಿತ್ತು. ಕ್ಷಣ ಚಿತ್ತ, ಕ್ಷಣ ಪಿತ್ತ, ಇದು ನಿಯಮ ಎಂದು ಈಗ ಹೇಳಿ ಮರುಕ್ಷಣ ಅದನ್ನು ಕಿತ್ತೊಗೆದು ನಡೆಯುತ್ತಿದ್ದರು. ಬಾಪೂಜಿ ೬ ಜನವರಿ ಲಾರ್ಡ್ ಮೌಂಟ್‌ಬ್ಯಾಟನ್ ಜೊತೆ ಈ ವಿಷಯವಾಗಿ ಚರ್ಚೆ ನಡೆಸಿದರು. ಭಾರತ ರೂಪಾಯಿ ಕೊಡದಿದ್ದರೆ ಅದರ ಮೊದಲ ಅಪಕೀರ್ತಿಯು ಕಾರ್ಯವಾಗುತ್ತದೆಂದರು ಲಾರ್ಡ್ ಮೌಂಟ್‌ಬ್ಯಾಟನ್ನರು. ಕಾನೂನುರೀತಿ ಭಾರತ ಸರಕಾರ ಸರಿಯಾಗಿತ್ತೆಂದು ಬಾಪೂಜಿಗೆ ಗೊತ್ತಿತ್ತು. ಆದರೆ ನೈತಿಕ ಮಟ್ಟದಲ್ಲಿ ಸರಕಾರಕ್ಕೆ ಕೆಟ್ಟ ಹೆಸರು ಬರುತ್ತಲಿತ್ತು, ಕಷ್ಟದ ಪರಿಸ್ಥಿತಿಯಲ್ಲಿ ನೈತಿಕತೆ ಲುಪ್ತವಾದರೆ ಆ ನೈತಿಕತೆಗೆ ಅರ್ಥವೇ ಇರುವುದಿಲ್ಲ. ಭಾರತ ಸರಕಾರ ನೈತಿಕ ಜವಾಬ್ದಾರಿಯನ್ನು ನಿರ್ವಹಿಸುವಂತೆ ಮಾಡುವುದು ಬಾಪೂಜಿಗೆ ಅಗತ್ಯವಾಗಿತ್ತು. ಐವತ್ತೈದು ಕೋಟಿಯ ಪಿಷ್ಟಪೇಷಣದಲ್ಲಿ ಬಾಪೂಜಿ ಜೀವನದುದ್ದಕ್ಕೂ ಅನುಸರಿಸಿದ್ದ ನೈತಿಕತೆಯನ್ನು ಬಿಟ್ಟುಬಿಡಲು ಸಾಧ್ಯವಾಗುತ್ತಿರಲಿಲ್ಲ.

ಇಷ್ಟೊಂದು ಜಟಿಲ ಕುಟಿಲ- ಸಮಸ್ಯೆಗಳಿರುವಾಗಲೇ ಜನವರಿ ೧೧

ರಂದು ಕೆಲವು ರಾಷ್ಟ್ರವಾದಿ ಮೌಲಾನಾಗಳು ಬಾಪೂಜಿ ಬಳಿಗೆ ಬಂದು 'ನಾವು ಹೇಗೆ ಬದುಕುವುದು? (ಇತ್ತ ಪುಲಿ–ಅತ್ತ ದರಿ) ನಾವು ಎರಡು ಕಡೆಗಳಿಗೂ ಸಲ್ಲದವರಾಗಿದ್ದೇವೆ, ಪಾಕಿಸ್ತಾನ ನಮಗೆ ಆಶ್ರಯ ಕೊಡುವುದಿಲ್ಲ, ಭಾರತದಲ್ಲಿ ಉಪೇಕ್ಷಿತರಾಗುತ್ತಿದ್ದೇವೆ, ಅವಮಾನ ಪಡಿಸುವುದನ್ನ ಸಹಿಸುವುದಕ್ಕಾಗುವುದಿಲ್ಲ ಇದಕ್ಕಿಂತ ಇಂಗ್ಲಿಷ್ ರಾಜ್ಯವೇ ಚೆನ್ನಾಗಿತ್ತು. ಗಾಂಧೀಜಿ ಹಣಕ್ಕೆ ವ್ಯವಸ್ಥೆ ಮಾಡಿಕೊಟ್ಟರೆ ವಿಲಾಯತ್‌ಗೆ ಹೊರಟು ಹೋಗ್ತೀವಿ' ಅಂದರು. ಇದನ್ನು ಕೇಳಿ ಬಾಪೂಜಿ ಸ್ತಬ್ಧಗೊಂಡರು. ಹಾಗಿದ್ದೂ ಅವರು ಹೇಳಿದರು, 'ನೀವು ರಾಷ್ಟ್ರವಾದಿಗಳಾದ ಮುಸಲ್ಮಾನರು. ನೀವೂ ಹೀಗೆ ಹೇಳ್ತೀರಾ?' ಈ ಪ್ರಶ್ನೆಗೆ ಆ ಮೌಲಾನಾಗಳು ಉತ್ತರ ಕೊಡಲಾರದಾದರು. ಬಾಪೂಜಿಯವರ ಆತ್ಮಕ್ಕೆ ಅದು ಅಂತಿಮ ಆಘಾತವಾಗಿತ್ತು. ಒಳಗಿಂದೊಳಗೇ ಇಂತಹ ಅವಿಶ್ವಾಸಮಯ ದೂಷಿತ ವಾತಾವರಣವನ್ನ ಶುದ್ಧಗೊಳಿಸುವುದಕ್ಕಾಗಿ ಆತ್ಮಬಲಿದಾನ ಒಂದೇ ಉಳಿದಿರುವ ಉಪಾಯವೆಂದು ಅವರಿಗೆ ಅನಿಸಿತು. ಜನವರಿ ೧೨ರಂದು ಬಾಪೂಜಿ ಆಮರಣ ಉಪವಾಸ ಮಾಡಬೇಕೆಂದು ನಿರ್ಣಯ ತೆಗೆದುಕೊಂಡರು. ಅವರು ಕಲ್ಕತ್ತೆಗೆ ಬಂದಾಗಿನಿಂದಲೂ ಮುಸಲ್ಮಾನರು ತರುತ್ತಿದ್ದ ದೂರುಗಳಿಗೆ ಯಾವುದೇ ಉತ್ತರ ಕೊಡಲಾಗುತ್ತಿರಲಿಲ್ಲ. ದೆಹಲಿಯಲ್ಲಿ ಈ ಮುಸಲ್ಮಾನರ ದೆಸೆಯಿಂದ ಬಾಪೂಜಿ ಸಿಂಧ್‌ನ ಹಿಂದೂಗಳ ಹತ್ತಿರ ಹೋಗಲಾಗುತ್ತಿರಲಿಲ್ಲ, ಗಡಿಯಲ್ಲಿ ಖುದಾಯೀ ಖಿದಮತ್‌ಗಾರರ ಬಳಿ ಹೋಗಬೇಕೆಂದು ಅವರಿಗೆ ಇಷ್ಟವಿತ್ತು. ಆದರೆ ದೆಹಲಿ ಅವರನ್ನ ಬಿಡುತ್ತಿರಲಿಲ್ಲ. ಅಂತಹುದರಲ್ಲಿ ಬೇರೆಯವರಿಗೆ ಅವರು ಏನು ಉಪದೇಶ ಕೊಡುವುದು? ಅವರ ಬದುಕು ದೆಹಲಿಯ ಬೆಂಕಿಯ ಜ್ವಾಲೆಗಳಲ್ಲಿ ಭಸ್ಮವಾಗುತ್ತಿತ್ತು. ಇಂತಹ ವಿಚಿತ್ರವಾದ ಕಷ್ಟದ ಪರಿಸ್ಥಿತಿಯಲ್ಲಿ ಅವರು ತಮ್ಮ ಆತ್ಮಶುದ್ಧಿ ಮಾಡಿಕೊಂಡು ದೆಹಲಿಯವರ ಪರವಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳ ಬಯಸುತ್ತಿದ್ದರು. ಆತ್ಮಶುದ್ಧಿಗೆ ಬಾಪೂಜಿ ಬಳಿ ಉಳಿದಿದ್ದುದು ಒಂದು ಮಾರ್ಗ ಅಂದರೆ ಉಪವಾಸ. ಅದು ದೈವೀಸಂಕೇತವಾಗಿತ್ತು, ಉಪವಾಸ ಮಾಡಬೇಕು ಅಂತ ನಿಶ್ಚಯಿಸಿದ ತಕ್ಷಣ ಬಾಪೂಜಿಯ ಹೃದಯದಲ್ಲಿದ್ದ ದ್ವಂದ್ವಗಳೆಲ್ಲವೂ ಮಾಯವಾಗಿ ಹೋದವು. ದೇವದಾಸ ಕಾಕಾಗೆ ಇದನ್ನ ಸಹಿಸಲಾಗಲಿಲ್ಲ. ಅವರು ಬಾಪೂಜಿಗೆ ನಿಮ್ಮ ಈ ಹೆಜ್ಜೆ ಸರಿಯಾದುದಲ್ಲ, ಈಗಲೇ ದುಡುಕುವುದು ಸರಿಯಲ್ಲ ಎಂದು ಮುಂತಾಗಿ ಪತ್ರ ಬರೆದರು. ಬಾಪೂಜಿ ತನ್ನ ಮಗನಿಗೆ ಪ್ರೀತಿಯಿಂದ ಒಂದು ಪತ್ರ ಬರೆದು 'ಈಶ್ವರನ ಸಂಕಲ್ಪ ಹಾಗಿದೆ. ಅದರಿಂದ ಇಲ್ಲಿ ಔಚಿತ್ಯದ ಪ್ರಶ್ನೆ ಏಳುವುದಿಲ್ಲ, ಸೆಪ್ಟೆಂಬರ್‌ನಿಂದಲೂ ಧೈರ್ಯ ತಂದುಕೊಂಡೇ ಇದ್ದೆನಲ್ಲಾ, ನಾನು ಮಗ ಅನ್ನುವ ಮೋಹವನ್ನು ತೊರೆದು ನಿಮ್ಮ ತಂದೆಯ ಉಪವಾಸದ ವಿಷಯವಾಗಿ ಯೋಚನೆ ಮಾಡಿನೋಡು, ಆಗ ಬಾಪೂಜಿಯ ಈ ಹೆಜ್ಜೆ ಎಷ್ಟು ಸರಿಯಾಗಿದೆ ಎಂದು ನಿನಗೇ ಅರ್ಥವಾಗುತ್ತದೆ,

ಧೈರ್ಯದಿಂದ ಎಷ್ಟು ಕೆಲಸ ಆಗಬಹುದಾಗಿತ್ತೋ, ಅಷ್ಟನ್ನು ಮಾಡಿಯಾಯಿತು, ಈಗ ದೇವರ ಬಳಿ ಶಾಂತಿ ಸಿಕ್ಕಿದೆ. ಒಂದೊಂದು ತೊಟ್ಟು ಬೀಳುತ್ತಾ ಇರುವುದಕ್ಕಿಂತ ತಕ್ಷಣಕ್ಕೆ ಸತ್ತು ಹೋಗುವುದು ಹೆಚ್ಚು ಸುಖಕರವಾಗಿರುತ್ತದೆ; ಅದೇ ಒಳ್ಳೆಯದು ಎಂದರು. ಬಾಪೂಜಿ ತಮ್ಮ ಈ ನಿರ್ಣಯವನ್ನು ಲಾರ್ಡ್ ಮಾಂಟ್‌ಬ್ಯಾಟನ್ನರಿಗೂ ತಿಳಿಸಿದರು. ವೀರ ಮೌಂಟ್‌ಬ್ಯಾಟನ್ ಈ ರೀತಿಯ ಬಲಿದಾನವನ್ನು ಗೌರವಿಸುತ್ತಿದ್ದರು, ಅವರ ಒಪ್ಪಿಗೆ ಇತ್ತು. ಬಾಪೂಜಿಗೆ ತಿಳುವಳಿಕೆ ಹೇಳುವುದರಿಂದ ಪ್ರಯೋಜನವಿಲ್ಲ ಎಂದು ಅವರ ಮಿತ್ರರಿಗೆ ಚೆನ್ನಾಗಿ ತಿಳಿದಿತ್ತು. ನಿಜವಾಗಿಯೂ ಬಾಪೂಜಿಗೆ ಇದು ಸಹಿಸಲಾಗದಂತಹ ಸ್ಥಿತಿಯಾಗಿತ್ತು. ವಿವಶತೆಯ ನಪುಂಸಕ ಸ್ಥಿತಿಯನ್ನು ಸಹಿಸಲಾಗದುದರಿಂದಲೇ ಅವರು ಈ ಹೆಜ್ಜೆಯನ್ನು ಹಿಡಿಯಬೇಕಾಯಿತು ಎಂದವರು ಹೇಳಿಬಿಟ್ಟಿದ್ದರು. ಎಲ್ಲಾ ಬಣಗಳೂ ಮನಸಾರೆ ಒಪ್ಪಂದ ಮಾಡಿಕೊಳ್ಳದಿದ್ದರೆ ತಾನು ಬದುಕಲಿಚ್ಛಿಸುವುದಿಲ್ಲವೆಂದರು, ಮುಸಲ್ಮಾನ ಮಿತ್ರರೊಡನೆ ಬಾಪೂಜಿ ಹೇಳಿದರು: 'ಮುಸಲ್ಮಾನರು ಭಯಂಕರವಾಗಿ ಅತ್ಯಾಚಾರಗಳನ್ನೆಸಗಿದ್ದಾರೆ, ಹಿಂದೂ– ಸಿಖ್ಖರು ಬಹಳ ಸಹಿಸಿದ್ದಾರೆ, ಅದರಿಂದ ಎರಡೂ ಧರ್ಮಗಳ ಶುದ್ಧಿಗೋಸ್ಕರ ಈ ಉಪವಾಸ ಅನಿವಾರ್ಯವಾಯಿತು. ಅದಿಲ್ಲದಿದ್ದರೆ ಜೀವನ ಪೂರ್ತಿ ನಾನು ಮಾಡಿದ ಕೆಲಸ ಮಣ್ಣುಪಾಲಾಗುತ್ತಿತ್ತು.'

ಉಪವಾಸ ಮಾಡುತ್ತಿದ್ದಾಗ, ಆ ದಿನಗಳಲ್ಲಿ ಹಿಂದೂ, ಮುಸಲ್ಮಾನ, ಸಿಖ್ಖ ಮುಂತಾದ ಎಲ್ಲಾ ತರಹೆಯ ಜನರೂ ಬಾಪೂಜಿ ಬಳಿಗೆ ಬರುತ್ತಿದ್ದರು. ಬಾಪೂಜಿ ಅವರಿಗೆಲ್ಲಾ ಹೇಳಿದ್ದು ಒಂದೇ ಮಾತು: 'ನೀವು ಹೃದಯದಲ್ಲಿ ಹೊಕ್ಕು ನೋಡಿ ಕಹಿಯನ್ನು ತೆಗೆದುಹಾಕಿ. ನನ್ನನ್ನು ಉಳಿಸುವುದಕ್ಕಾಗಿ ಬೂಟಾಟಿಕೆ ಮಾಡಬೇಡಿ ದೇಶವನ್ನುಳಿಸಲು ಉಪಾಯ ಮಾಡಿ.' ೧೩ ಜನವರಿ ೧೯೪೮ ರಂದು ಉಪವಾಸ ಆರಂಭಗೊಂಡಿತು. ಅದೇ ದಿನ ಪಾಕಿಸ್ತಾನದ ಗುಜರಾತ್ ನಗರದ ರೈಲ್ವೆ ಸ್ಟೇಷನ್ನಿನಲ್ಲಿ ಗಡಿನಾಡಿನಿಂದ ಬರುತ್ತಿದ್ದ ಹಿಂದೂ– ಸಿಖ್ಖ ಶರಣಾರ್ಥಿಗಳನ್ನು ಗಜ್ಜರಿ ಗೆಡ್ಡೆ–ಮೂಲಂಗಿಯ ಹಾಗೆ ಕಡಿದು ಹಾಕಿದ್ದರು, ಮತ್ತವರನ್ನು ಲೂಟಿ ಮಾಡಿ, ಮಹಿಳೆಯರನ್ನು ಅಪಹರಿಸಿದ್ದರು ಎಂಬ ಸಮಾಚಾರ ವಿವರವಾಗಿ ತಲಪಿತ್ತು. ಇಂತಹ ಸ್ಥಿತಿಯನ್ನು ವಿರೋಧಿಸುವುದಕ್ಕಾಗಿ ಬಾಪೂಜಿ ಉಪವಾಸ ಆರಂಭಿಸಿದ್ದರು, ದೆಹಲಿಯ ಮೌಲಾನಾಗಳು ಬಾಪೂಜಿಯವರ ಬಳಿಗೆ ಪುನಃ ಬಂದರು, 'ಈಗಲಾದರೂ ನಿಮಗೆ ಸಂತೋಷವಾಗಿದೆಯೇ?' ಎಂದು ಬಾಪೂಜಿ ಕೇಳಿದರು.

ಮೌಲಾನಾ, 'ಬಾಪೂಜಿ, ತಮಗೆ ಬೇಸರವಾಗಿದ್ದರೆ ಕ್ಷಮಿಸಿ' ಎಂದರು.

'ನೀವುಗಳು ಆ ಇಂಗ್ಲಿಷರ ಧಾಟಿಯಲ್ಲಿ ಮಾತನಾಡುತ್ತಿದ್ದೀರಿ, ಅವರು ಒಂದು ಕಡೆ ಒದೆಯುತ್ತಾ ಇದ್ದು, ಇನ್ನೊಂದು ಕಡೆ 'ಸಾರಿ' ಅಂತ ಹೇಳುತ್ತಾ ಇರುತ್ತಾರೆ. ಅದಿರಲಿ, ನಿಮಗೆ ವಿಲಾಯತ್‌ಗೆ ಹೋಗಲು ಅನುಕೂಲ ಕೇಳುವುದಕ್ಕೆ

ನಾಚಿಕೆಯಾಗಲಿಲ್ಲ, ಅದಕ್ಕೂ ಮೇಲೆ, ಇಂಗ್ಲಿಷರ ಕಾಲ ಇದಕ್ಕಿಂತ ಚೆನ್ನಾಗಿತ್ತು ಅನ್ನುತ್ತೀರಿ, ನಿಮ್ಮ ಮನಸ್ಸಿನಲ್ಲಿ ಇದೇ ಭಾವನೆಯನ್ನಿಟ್ಟುಕೊಂಡಿದ್ದರೆ, ದೇಶ ನಿಮ್ಮನ್ನು ಸಹಿಸಲಾಗದು : ನಾನೂ ನಿಮಗೆ ಸಹಾಯ ಮಾಡುವುದಕ್ಕಾಗುವುದಿಲ್ಲ. ಸರಕಾರಕ್ಕೆ ನಾನು ಅಪ್ರಾಮಾಣಿಕರಿಗೆ ಟಿಕೆಟ್ ಕೊಡಿ, ಅವರು ವಿಲಾಯತ್ತಿನಲ್ಲಿ ನೆಲಸುತ್ತಾರೆಂದು ಹೇಳುತ್ತೀನಿ,' ಎಂದರು.

ಸಂಜೆ ಬಾಪೂಜಿ, ಸೈನ್ಯದ ಆವಶ್ಯಕತೆ ಇಲ್ಲದಿರುವ ಹಾಗೆ ದೆಹಲಿಯಲ್ಲಿ ಶಾಂತಿ ನೆಲಸಿದಾಗ, ನಾನು ಉಪವಾಸವನ್ನು ಬಿಡುತ್ತೇನೆಂದು ಪ್ರಾರ್ಥನಾ ಸಭೆಯಲ್ಲಿ ಘೋಷಿಸಿದರು. ಉಪವಾಸದ ಮಾರನೆಯ ದಿನ ಕ್ಯಾಬಿನೆಟ್ ಸೇರಿತು ಮತ್ತು ಪಾಕಿಸ್ತಾನಕ್ಕೆ ಐವತ್ತೈದು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಿರ್ಣಯ ತೆಗೆದುಕೊಂಡಿತು. ಈ ಮಾತುಗಳನ್ನೆಲ್ಲಾ ನೋಡಿ ಗಾಂಧಿ ಮುಸಲ್ಮಾನರ ಪಕ್ಷದವರೆಂದು ಹಿಂದೂಗಳು ತಿಳಿದಿದ್ದರು. ಈ ಮುದುಕ ಸತ್ತುಹೋದರೆ ತಂಟೆ ತೀರಿಹೋಗುತ್ತದೆಂದು ಅವರುಗಳಿಗನಿಸಿತು. ಈ ತರಹೆಯ ಭಾವನೆಗಳಿಂದ ಪ್ರೇರಿತರಾಗಿ ಶರಣಾರ್ಥಿಗಳ ಒಂದು ಗುಂಪು ರಾತ್ರಿಯ ವೇಳೆ ಬಿಡಲಾ ಭವನದೆದುರು ನಿಂತು ಘೋಷಣೆಗಳನ್ನು ಕೂಗತೊಡಗಿತು. 'ರಕ್ತಕ್ಕೆ ಬದಲಾಗಿ ರಕ್ತ', 'ಗಾಂಧಿ ಸಾಯಬೇಕು' ಇತ್ಯಾದಿ. ಅದೇ ಸಮಯಕ್ಕೆ ರಾತ್ರಿ ವೇಳೆ ನೆಹರೂಜಿ ಅಲ್ಲಿಗೆ ತಲಪಿದರು, ಇದನ್ನು ಕೇಳಿ ಅವರಿಗೆ ಬಹಳ ಕೋಪ ಬಂತು, ಕಾರಿನಿಂದ ಇಳಿದು ಅವರು, 'ಗಾಂಧಿ ಸಾಯಬೇಕು ಅಂತ ಯಾರದು ಹೇಳುತ್ತಿರುವುದು? ಹಾಗೆ ಹೇಳುವವನು ನನ್ನೆದುರಿಗೆ ಬರಲಿ. ಗಾಂಧಿ ಸಾಯುವ ಮುಂಚೆ ನನ್ನನ್ನು ಸಾಯಿಸಬೇಕು' ಎಂದರು. ನೆಹರೂಜಿಯನ್ನು ನೋಡಿ ಆ ಉತ್ಪಾತಕರು ಅಲ್ಲಿಂದ ಓಡಿ ಕಣ್ಮರೆಯಾದರು.

ಉಪವಾಸದಿಂದ ಬಾಪೂಜಿಯವರ ಮನಸ್ಸು ಶಾಂತವಾಗಿದ್ದರೂ ಉದಾಸವಾಗಿತ್ತು. ಕಲ್ಕತ್ತಾ ಉಪವಾಸದ ಸಂದರ್ಭದಲ್ಲಿ ನಗು–ಹಾಸ್ಯ ನಡೆಯುತ್ತಿತ್ತು, ಈಗ ಸುಮ್ಮನೆ ರಾಮನಾಮ ಉಚ್ಚರಿಸುತ್ತಿದ್ದರು, ಒಂದು ರೀತಿಯಲ್ಲಿ ಕಲ್ಕತ್ತೆಯ ಸ್ಥಿತಿ ಸರಳವಾಗಿತ್ತು. ದೆಹಲಿಯಲ್ಲಿ ಶರಣಾರ್ಥಿಗಳಿಂದಾಗಿ ಸ್ಥಿತಿ ಜಟಿಲವಾಗಿತ್ತು. ಪ್ರಪಂಚದ ವಿವಿಧ ಭಾಗಗಳಿಂದ ಸಂದೇಶ, ಪ್ರಾರ್ಥನೆ ಮತ್ತು ಶುಭಸಂದೇಶಗಳ ಸುರಿಮಳೆಯಾಗುತ್ತಿತ್ತು. ಇಂದಿನವರೆಗೂ ಕಾಯದೇ ಆಜ಼ಂ ಪ್ರಕಾರ ಮುಸಲ್ಮಾನರ ಕಟುಶತ್ರು ಗಾಂಧಿಯಾಗಿದ್ದರು. ಈಗ ಇದ್ದಕ್ಕಿದ್ದ ಹಾಗೆ ಗಾಂಧಿ ಮುಸಲ್ಮಾನರಿಗೆ ಆತ ಅತ್ಯುತ್ತಮ ಮಿತ್ರನಾಗಿ ಕಾಣತೊಡಗಿದ್ದರು ಮತ್ತು ಅವರ ಆರೋಗ್ಯದ ಬಗ್ಗೆ ಮುಸಲ್ಮಾನರಿಗೆ ಚಿಂತೆಯಾಗುತ್ತಿತ್ತು. ಎಷ್ಟೋ ಜನ ಮೌಲ್ವಿಗಳು, ಭೋಪಾಲದ ನರೇಶ ಮತ್ತು ಹೈದರಾಬಾದಿನ ನಿಜ಼ಾಮ ಶುಭೇಚ್ಛೆಯ ಸಂದೇಶಗಳನ್ನು ಕಳುಹಿಸಿಕೊಟ್ಟಿದ್ದರು. ಬರೇಲಿಯ ಮೌಲ್ವಿಯೊಬ್ಬರು ಸಾರ್ವಜನಿಕರೆದುರು, 'ಹಿಂದೂಸ್ಥಾನ–ಪಾಕಿಸ್ತಾನಗಳ ನಡುವೆ ನಮಗಿರುವ ಒಬ್ಬನೇ ಮಿತ್ರನೆಂದರೆ

ಗಾಂಧೀಜಿಯವರು, ಪಾಕಿಸ್ತಾನದಲ್ಲಿ ನಿರ್ದೋಷಿಗಳಾಗಿದ್ದ ಹಿಂದೂ ಅತ್ಯಾಚಾರ ನಡೆಸಿದ್ದು ಅಲ್ಲಾಹನೆದುರಿಗೆ ದ್ರೋಹ. ಪಾಕಿಸ್ತಾನ ಇಂತಹ ಘಟನೆಗಳನ್ನು ನಡೆಸುವುದನ್ನು ನಿಲ್ಲಿಸದೆ ಹೋದಲ್ಲಿ ಮುಸಲ್ಮಾನರು ಪಾಕಿಸ್ತಾನದ ಜೊತೆಯನ್ನು ಬಿಟ್ಟುಬಿಡಬೇಕು ಎಂದರು. ಮೊಟ್ಟಮೊದಲ ಬಾರಿಗೆ ಒಬ್ಬ ಮುಸಲ್ಮಾನ ಮುಖಂಡ ಮುಸಲ್ಮಾನರು ನಡೆಸುತ್ತಿದ್ದ ಅನ್ಯಾಯಗಳನ್ನು ಸಾರ್ವಜನಿಕವಾಗಿ ಖಂಡಿಸಿದ್ದ ಮತ್ತು ಪಾಕಿಸ್ತಾನಕ್ಕೆ ಪ್ರತೀಕಾರ ಮಾಡುವಂತೆ ಆದೇಶ ನೀಡಿದ್ದರು. ಕೆಲವರು ಮುಸಲ್ಮಾನರು ಬಾಪೂಜಿಗೆ ಉಪವಾಸ ಬಿಡಲು ಹೇಳಿದರು. ಆಗ ಬಾಪೂಜಿ, 'ಸಿಂಧ್‌ನಲ್ಲಿ ಕರಾಚಿಯಲ್ಲಿ ಅತ್ಯಾಚಾರ ನಿಲ್ಲುವವರೆಗೂ, ಪಂಜಾಬ್ ಮತ್ತು ಗುಜರಾತ್ ರೈಲ್ವೆ ಸ್ಟೇಷನ್‌ನಂತಹ ಘಟನೆಗಳು ನಿಲ್ಲುವವರೆಗೂ ಹತ್ತು ಜನ ಗಾಂಧಿಗಳೂ ಕೂಡ ಮುಸಲ್ಮಾನರನ್ನು ಉಳಿಸಲು ಸಾಧ್ಯವಿಲ್ಲ' ಎಂದರು ಲಾಹೌರಿನಿಂದ ಮುಸಲ್ಮಾನರು ತಾರು ಕಳುಹಿಸಿ 'ಗಾಂಧೀಜಿಯವರ ಪ್ರಾಣ ಉಳಿಸಲು ನಾವೇನು ಮಾಡಬೇಕು' ಎಂದು ಕೇಳಿದ್ದರು.

ಜನವರಿ ೧೫ ಉಪವಾಸದ ಮೂರನೆಯ ದಿನ. ಆರಂಭದಲ್ಲಿ ಎರಡು ಪೌಂಡ್ ಲೆಕ್ಕದಲ್ಲಿ ಬಾಪೂಜಿಯವರ ತೂಕ ಇಳಿಯುತ್ತಿತ್ತು, ಆದರೆ ಮೂರನೆಯ ದಿವಸದಿಂದ ತೂಕ ಕುಗ್ಗುವುದು ನಿಂತುಹೋಯಿತು.

ಬಾಪೂಜಿ ಪ್ರತಿದಿವಸವೂ ೨–೩ ಕಿಲೋ ನೀರು ಕುಡಿಯುತ್ತಿದ್ದರು, ಹೆಚ್ಚೆಂದರೆ ಒಂದು ಕಿಲೋ ನೀರು ಕೂಡ ವಾಪಸ್ ಬರುತ್ತಿರಲಿಲ್ಲ. ಅಂದರೆ ಕಿಡ್ನಿ ಪೂರ್ತಿ ಕೆಲಸ ಮಾಡುತ್ತಿರಲಿಲ್ಲ ಎಂದರ್ಥ. ಜೊತೆಗೆ ದುರ್ಬಲವಾದ ಹೃದಯದ ಮೇಲೆ ಹೆಚ್ಚು ಭಾರ ಬೀಳುತ್ತಿತ್ತು. ಜಲಬಾಧೆಯಲ್ಲಿ ಅಸಿಟೋನ್ ಬರುತ್ತಿತ್ತು. ಈ ಲಕ್ಷಣಗಳೆಲ್ಲವೂ ಭಯ ಹುಟ್ಟಿಸುವಂಥವುಗಳೇ. ಕೇಥೆಟರ್‌ನಿಂದ ಕಿಡ್ನಿಯನ್ನು ಚಲನಶೀಲಗೊಳಿಸಿದರೆ ಸರಿಹೋಗುತ್ತದೆಂದು ಡಾಕ್ಟರ್ ಸಲಹೆ ನೀಡಿದರು. ಆದರೆ ಬಾಪೂಜಿ, 'ಎಲ್ಲ ದೇವರ ಕೈಯಲ್ಲಿದೆ. ಆತ ಬದುಕಿಸಬೇಕೆಂದಿದ್ದರೆ ಉಳಿದುಕೊಳ್ತೀನಿ, ಆದರೆ ಹೊರಗಿನ ಸಹಾಯ ಪಡೆದುಕೊಂಡು ದೇವರಿಗೆ ಅಗೌರವ ತೋರಿಸುವುದಿಲ್ಲ' ಅಂದರು. ಉಪವಾಸದ ಪರಿಣಾಮವನ್ನು ಯೋಚಿಸಿ ಜನರು ಜಾಗರೂಕರಾದರು. ಎಲ್ಲ ಕಡೆಗಳಲ್ಲೂ ಸಂಧಿ, ಒಡಂಬಡಿಕೆ ಮತ್ತು ಶಾಂತಿಯ ಪ್ರಯತ್ನಗಳು ನಡೆಯುತ್ತಿದ್ದವು. ಸಿಖ್ಖರ ಒಂದು ಗುಂಪು ಮೆರವಣಿಗೆ ಹೊರಟು ದಿನಪೂರ್ತಿ ಧಾರ್ಮಿಕ ಸಹಕಾರದ ಕೂಗು ಹಾಕಿ ಜನರಿಗೆ ತಿಳುವಳಿಕೆ ನೀಡುತ್ತಿತ್ತು. ಸರಹದ್ದಿನ ಶರಣಾರ್ಥಿಗಳು ಬಾಪೂಜಿ ಬಳಿಗೆ ಬಂದರು, 'ನಾವು ಬಹಳ ನೋವು ತಿಂದಿದ್ದೀವಿ, ಕಷ್ಟ ಅನುಭವಿಸಿದ್ದೇವೆ, ಆದರೆ ನಮ್ಮ ಶತ್ರುಗಳ ವಿರುದ್ಧ ನಾವು ಕಠೋರವಾಗುವುದಿಲ್ಲ. ರೋಷ ತೋರುವುದಿಲ್ಲ, ಆದರೆ ನೀವು ಮಾತ್ರ ಉಪವಾಸ ಬಿಡಬೇಕು' ಎಂದರು.

ಸುಮಾರು ಒಂದು ಲಕ್ಷ ಜನ ಸೇರಿದ್ದರು ಅವರ ಗುಂಪಿಗೆ ನೆಹರೂಜಿ

ಹೇಳಿದರು, 'ಬಾಪೂಜಿ ಇಲ್ಲ ಅಂದರೆ ದೇಶದ ಆತ್ಮ ಸತ್ತುಹೋಗುತ್ತೆ. ಬಾಪೂಜಿಯವರೇ ನಮಗೆ ಸಂತರು. ದೇಶದ ಅಂತರಾತ್ಮದ ಸಾಕಾರ ಪ್ರತೀಕ ಅವರೊಬ್ಬರೇ. ಈ ಖೂನಿ, ಅನ್ಯಾಯ ನಡೆಯುತ್ತಾ ಇತ್ತೆಂದರೆ ನಾವು ಸ್ವಾತಂತ್ರ್ಯವನ್ನ ಕಳೆದುಕೊಂಡು ಬಿಡುತ್ತೇವೆ' ಎಂದು ಹೇಳಿದರು. ಬಾಪೂಜಿ ಪ್ರಾರ್ಥನಾ ಸಭೆಯಲ್ಲಿ, 'ವಿಭಜನೆಯ ಈ ಎಲ್ಲ ನಷ್ಟಗಳಿಗೆ ಮುಸ್ಲಿಂ ಲೀಗೇ ಕಾರಣ' ಎಂದು ಸ್ಪಷ್ಟವಾಗಿ ನುಡಿದರು. ಅದಕ್ಕೆ ಕರಾಚಿಯಿಂದ ಅವರ ಪ್ರಿಯಮಿತ್ರ ಶ್ವಾಬ್ ಕುರೇಷಿಯಿಂದ ಸ್ವಲ್ಪ ರೋಷ ತುಂಬಿದ ಪತ್ರ ಬಂದಿತ್ತು. 'ಇವತ್ತಿನ ಈ ಹೆದರಿಕೆ ಉಂಟುಮಾಡುವ ಪರಿಸ್ಥಿತಿಗೆ ಪಾಕಿಸ್ತಾನ ಮತ್ತವರ ಮುಸ್ಲಿಂ ಲೀಗ್ ಕಾರಣವೆಂದು ತಿಳಿಸಿ, ಈ ಸತ್ಯವನ್ನು ಮುಚ್ಚುವುದು ಅಸತ್ಯವಾಗುತ್ತದೆ' ಎಂದು ಬಾಪೂಜಿ ಉತ್ತರ ಬರೆಸಿದರು.

ಕೆಲವರು ಉಪವಾಸ ಮಾಡಲು ಸರದಾರರು ಕಾರಣ ಅಂತ ಹೇಳಬಯಸುತ್ತಿದ್ದರು. ಸರದಾರರ ಕೆಲಸವಲ್ಲ ಎಂದು ಹೇಳಿ ಬಾಪೂಜಿ ಅದನ್ನು ಸ್ಪಷ್ಟವಾಗಿ ಖಂಡಿಸಿದರು. ಅವರು ದೇಶವನ್ನು ರಕ್ಷಿಸಲಿ, ಯಾವುದೇ ತರಹೆಯ ವಿಪತ್ತನ್ನೂ ಬರಮಾಡಿಕೊಳ್ಳದಿರಲಿ ಎಂದು ಅವರೆಂದರು. ಸರದಾರರು, ಸುಂದರವಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಸರದಾರರು ವಂಚನೆ. ಸೋಗು ಇವುಗಳನ್ನು ಸಹಿಸುತ್ತಿರಲಿಲ್ಲ. ಸರದಾರರಿಗೆ ಯಾರನ್ನು ಕುರಿತೂ ದ್ವೇಷವಿರಲಿಲ್ಲ. ಆದರೆ ಅವರು ಭಾವುಕರಾಗಿ ಮೂರ್ಖತನ ಮಾಡುತ್ತಿರಲಿಲ್ಲ. ಅವರು ಮುಸಲ್ಮಾನರಿಗೆ ಸ್ಪಷ್ಟವಾಗಿ ಎಚ್ಚರಿಕೆ ನೀಡಿ 'ಇಲ್ಲವೇ ದೇಶಕ್ಕೆ ಪ್ರಾಮಾಣಿಕರಾಗಿ ಇರಿ, ಇಲ್ಲವಾದರೆ ಪಾಕಿಸ್ತಾನಕ್ಕೆ ಹೊರಟು ಹೋಗಿ, ಎರಡೂ ಕುದುರೆಗಳ ಮೇಲೆ ಸವಾರಿ ಮಾಡಕೂಡದು' ಎಂದು ಹೇಳಿದ್ದರು. ಸರದಾರರು ಬೇಸಾಯರಾಗಿದ್ದು, ಅವರ ಸ್ಥಿತಿಯನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುತ್ತಿದ್ದರು, ಇದರಿಂದ ಬಹಳ ಜನಕ್ಕೆ ತೊಂದರೆ ಆಗುತಿತ್ತು. ಬಾಪೂಜಿ 'ನನ್ನ ಉಪವಾಸ ಗೃಹ ಸಚಿವಾಲಯವನ್ನ ಕುರಿತದ್ದಲ್ಲ, ಆದರೆ ಹಿಂದೂ ಸಿಖ್ಖರ ಬಹು ಸಂಖ್ಯಾತರೆದುರು ಮುಸಲ್ಮಾನರನ್ನು ಉಳಿಸಬೇಕೆಂದಿರುವುದಂತೂ ನಿಜ. ಅದೇ ರೀತಿ ಪಾಕಿಸ್ತಾನದಲ್ಲಿ ಹಿಂದೂ-ಸಿಖ್ಖರ ಅಲ್ಪಸಂಖ್ಯಾತರನ್ನು ಉಳಿಸುವ ಜವಾಬ್ದಾರಿ ಮುಸಲ್ಮಾನರದ್ದು, ಆದ್ದರಿಂದ ನನ್ನ ಉಪವಾಸ ಮುಸಲ್ಮಾನರ ವಿರುದ್ಧ' ಎಂದು ಸ್ಪಷ್ಟವಾಗಿ ತಿಳಿಸಿದ್ದರು.

ಉಪವಾಸದ ಮೂರನೆಯ ದಿನ ಸರಕಾರ ಪಾಕಿಸ್ತಾನಕ್ಕೆ ಐವತ್ತೈದು ಕೋಟಿ ರೂಪಾಯಿಗಳನ್ನು ಕೊಡುವುದೆಂದು ನಿರ್ಣಯ ತೆಗೆದುಕೊಂಡಿತ್ತು. ಕೆಲವು ಸಾರಿ ಕಾನೂನನ್ನೂ ಮೀರಿ ಸಮದೃಷ್ಟಿ ಇಟ್ಟುಕೊಳ್ಳಬೇಕಾಗುತ್ತದೆ. ಭಾರತ ಕೂಡ ಅದನ್ನೇ ಮಾಡಿದ್ದು. ಯಾರಾದರೂ ಒಬ್ಬರಾದರೂ ಹುಚ್ಚನ್ನ ಬಿಟ್ಟು ವಿವೇಕದಿಂದ ವ್ಯವಹರಿಸಬೇಕಾಗುತ್ತೆ, ಇಲ್ಲದಿದ್ದರೆ ಭೂಮಿ ರಸಾತಳಕ್ಕೆ ಹೋಗಿರುತ್ತಿತ್ತು. ಅದರಿಂದ ಭಾರತ ಸರಕಾರ ಸಮಗ್ರ ದೃಷ್ಟಿಯಿಂದ ಯೋಚಿಸಿ ಎರಡೂ ದೇಶಗಳ ಹಿತಕ್ಕಾಗಿ

ಈ ಉದಾರ ಕಾರ್ಯವನ್ನ ಕೈಗೊಂಡಿತ್ತು. ಸರದಾರರು ಸ್ವ ಇಚ್ಛೆಯಿಂದ ಕ್ಯಾಬಿನೆಟ್‌ನ ಈ ನಿರ್ಣಯವನ್ನು ಸ್ವಾಗತಿಸಿದರು. ಆದರೆ ಉಪವಾಸಕ್ಕೆ ಸರದಾರರನ್ನು ಕಾರಣವಾಗಿಸಿ ದೂಷಿಸುತ್ತಿದ್ದ ರೀತಿಯನ್ನು ನೋಡಿ ಸರದಾರರ ಧೈರ್ಯ ಕುಂದಿತು. ಅವರು ಬಾಪೂಜಿಗೆ ಪತ್ರಬರೆದು ಮಂತ್ರಿಮಂಡಳಕ್ಕೆ ರಾಜಿನಾಮೆ ನೀಡಿದರು. ಆದರೆ ನೆಹರೂಜಿ–ಬಾಪೂಜಿ ಇಬ್ಬರಿಗೂ ಸರದಾರರ ನೀತಿ–ಬಾಪೂ ನೀತಿಯಲ್ಲಿ ವ್ಯತ್ಯಾಸ ಇರಲಿಲ್ಲವೆಂದು ಗೊತ್ತಿತ್ತು. ಸ್ಪಷ್ಟವಾಗಿ ಮಾತನಾಡುವುದರಲ್ಲಿ ವ್ಯತ್ಯಾಸವಿತ್ತು, ಅಷ್ಟೆ. ಆ ತೆರನಾಗಿ ಸ್ಪಷ್ಟವಾಗಿ ಮಾತನಾಡುವವರು ಸಮಾಜಕ್ಕೆ ಈ ದೇಶಕ್ಕೆ ಬಹಳ ಬೇಕಾಗಿತ್ತು. ದೇಶದ ಉಳಿವು–ಅಳಿವಿನ ಸಮಸ್ಯೆಯಾಗಿದ್ದ ಆ ದಿನಗಳಲ್ಲಿ ಭಾವುಕವಾದ ಸರಳ ಶಬ್ದಗಳಿಂದ ಕೆಲಸ ನಡೆಯುತ್ತಿರಲಿಲ್ಲ.

ಉಪವಾಸದ ನಾಲ್ಕನೇ ದಿನ ನೆಹರೂಜಿ ಬಾಪೂಜಿಯ ತೂಕ ನೋಡಿದರು, ೧೦೭ ಪೌಂಡಿತ್ತು. ನಗರದ ಸ್ಥಿತಿ ಚಮತ್ಕಾರಿಕವಾಗಿ ಉತ್ತಮಗೊಳ್ಳುತ್ತಿತ್ತು, ಆದರೆ ಬಾಪೂಜಿ ಸ್ಥಿತಿ ಚಿಂತಾಜನಕವಾಗಿತ್ತು. ದೆಹಲಿ ಕಾರ್ಪೊರೇಷನ್, ಇನ್ನು ಒಂದು ವಾರದಲ್ಲಿ ಎಲ್ಲ ನಿರಾಶ್ರಿತರಿಗೂ ಒಂದಿಲ್ಲೊಂದು ಆಶ್ರಯ ನೀಡಲಾಗುತ್ತದೆಂದು ಘೋಷಿಸಿತು. ಪಟಿಯಾಲಾ ಮಹಾರಾಜ ಉಪವಾಸ ಬಿಡುವಂತೆ ಸಿಖ್ಖರ ಪರವಾಗಿ ಕೋರಿದರು. ಪಾಕಿಸ್ತಾನದಿಂದ ಬೇಕಾದಷ್ಟು ಸಂದೇಶಗಳು ಬರುತ್ತಿದ್ದವು. ಬಾಪೂಜಿ, 'ಒಳ್ಳೆಯದು, ಆದರೆ ಪಾಕಿಸ್ತಾನ ತನ್ನ ಅಪರಾಧಗಳನ್ನು ಒಪ್ಪಿಕೊಂಡು ತನ್ನ ನೀತಿಗಳನ್ನ ಬದಲಾಯಿಸದೆ ಹೋದರೆ ಅದು ಉಳಿಯುವುದಿಲ್ಲ. ನಾವು ಪಾಕಿಸ್ತಾನದ ಅಸ್ತಿತ್ವವನ್ನ ಸತ್ಯ ಅಂತ ಒಪ್ಪಿಕೊಂಡು ಬಿಟ್ಟಿದ್ದೀವಿ, ಅದರಿಂದ ಈಗ ಎರಡೂ ದೇಶಗಳು ಒಂದಾಗುವ ಪ್ರಶ್ನೆ ಇಲ್ಲವೇ ಇಲ್ಲ. ಆದರೆ ಪರಸ್ಪರ ಸಹಯೋಗ ಏರ್ಪಡದಿದ್ದರೆ ಪಾಕಿಸ್ತಾನದಲ್ಲಿ ಹಿಂದೂ–ಸಿಖ್ಖರು ಸಂರಕ್ಷಿತರಾಗಿರುವುದಿಲ್ಲ, ಆಗ ಪಾಕಿಸ್ತಾನ ಕೆಟ್ಟತನದಲ್ಲಿ ಮುಳುಗಿ ನಾಶವಾಗುತ್ತದೆ' ಎಂದರು ಬಾಪೂಜಿ.

ಬಾಪೂಜಿ ಎಲ್ಲರಿಗೂ ಹೇಳಿದರು: 'ನೀವು ನನ್ನ ಉಪವಾಸದ ಚಿಂತೆ ಬಿಟ್ಟು ಹೃದಯಗಳನ್ನ ಕೂಡಿಸುವ ಮಾರ್ಗ ಹುಡುಕಿ, ಇಲ್ಲದಿದ್ದರೆ ದೇಶಕ್ಕೂ, ಜನರಿಗೂ ಯಾರಿಗೂ ಒಳ್ಳೆಯದಾಗುವುದಿಲ್ಲ.' ಕಲ್ಕತ್ತೆಯ ಪ್ರಸಿದ್ಧ ಸಮಾಚಾರ ಪತ್ರಿಕೆಯಾಗಿದ್ದ 'ಸ್ಟೇಟ್ಸ್‌ಮನ್'ನ ಸಂಪಾದಕ ಆರ್ಥರ್ ಮೂರ್ ಅವರು ಯಾವಾಗಲೂ ಉಪವಾಸವನ್ನು ತೆಗಳುತ್ತಿದ್ದರು. ಆದರೆ ಆತ ಕೂಡ ಬಾಪೂಜಿಯವರ ಈ ಸರ್ವಶ್ರೇಷ್ಠ ಉಪವಾಸವನ್ನು ಸಮರ್ಥಿಸಿದರು. ಅಷ್ಟಲ್ಲದೆ ಆತನೂ ಬಾಪೂಜಿ ಜೊತೆ ಸಮರ್ಥಕ ಉಪವಾಸ ಕೈಗೊಂಡರು. ಬಾಪೂಜಿ ಅವರಿಗೆ, 'ಮೂರ್ ಸಾಹೇಬರು ಜನರಿಗೆ ತಿಳುವಳಿಕೆ ನೀಡುವ ಕೆಲಸ ಮಾಡಬೇಕು, ಉಪವಾಸವಂತೂ ಅಂತರಾತ್ಮದ ಕರೆಯನ್ನ ಕೇಳಿ ಕೈಗೊಳ್ಳಬೇಕು. ಉಪವಾಸ ಅಹಿಂಸೆಯ ಶ್ರೇಷ್ಠತಮ ಪ್ರತೀಕ, ಅದರಿಂದ ಪ್ರತಿಯೊಬ್ಬನೂ ಇದನ್ನ ಪ್ರಯೋಗಿಸಿದಾಗ ಬೇಜವಾಬ್ದಾರಿತನವಾಗುತ್ತೆ'

ಎಂದು ಹೇಳಿದರು. ಬಾಪೂಜಿ ತೀರಿಕೊಂಡ ನಂತರ ಅರ್ಥರ್ ಮೂರ್ ಅಹಿಂಸೆಯನ್ನು ಸಾಕ್ಷಾತ್ ದೇವರಲ್ಲಿನ ಪರಮ ಶ್ರದ್ಧೆ ಮತ್ತು ಪರಮಾರಾಧನೆಯ ಒಂದೇ ಒಂದು ಮಾರ್ಗವಾಗಿತ್ತೆಂದು ಬರೆದಿದ್ದರು.

ಜನವರಿ ೧೭ರಂದು ಬಾಪೂಜಿಯ ಸ್ಥಿತಿ ಬಹಳ ಹದಗೆಟ್ಟಿತ್ತು. ತೂಕ ಅದೇ ೧೦೭ ಪೌಂಡ್, ನಗರವೆಲ್ಲಾ ಚಿಂತಾಮಗ್ನವಾಗಿತ್ತು. ಪಟ್ಟಣದಲ್ಲಿ ಯಾರೊಬ್ಬನೂ ಅಂಗಡಿ ತೆರೆಯಲಿಲ್ಲ, ವ್ಯಾಪಾರ ಮಾಡಲಿಲ್ಲ. ಸಾವಿರಾರು ಜನಗಳ ಹಿಂದೂ–ಮುಸಲ್ಮಾನರ– ಸಿಖ್ಖರ ಮೆರವಣಿಗೆ ಹೊರಟಿತು. ಅವರು ಬಿಡಲಾ ಹೌಸ್‌ಗೆ ಬಂದರು. ನೆಹರೂಜಿ ಅವರಿಗೆ ಹೇಳಿದರು, ಬಾಪೂಜಿ ಈ ರೀತಿ ಉಪವಾಸ ಕೈಗೊಳ್ಳುವುದರಿಂದ ನಮ್ಮ ಹೃದಯಗಳಲ್ಲಿ ನೀತಿ, ನ್ಯಾಯದ ದೃಢತೆ ಹೆಚ್ಚಾಗುತ್ತದೆ; ಆಗ ದೇಶ ಸರಿಯಾದ ದಿಕ್ಕಿನಲ್ಲಿ ಮುಂದುವರಿಯುತ್ತದೆ, ಎಂದರು. ೧೮ನೆಯ ತಾರೀಕು ದೆಹಲಿ ನಗರದ ಎಲ್ಲಾ ಹೊಟೇಲುಗಳು, ರೆಸ್ಟೋರೆಂಟ್‌ಗಳು, ಢಾಬಾ ಕಾರ್ಯಕರ್ತರು ಊಟ ಬಡಿಸುವುದಿಲ್ಲವೆಂದು ಬಿಟ್ಟರು. ಗಾಂಧೀಜಿ ಉಪವಾಸ ಮಾಡುತ್ತಿದ್ದರು, ಆ ಜನ ವ್ರತ ಹಿಡಿದು ಗಾಂಧೀಜಿಗೆ ನೈತಿಕವಾಗಿ ಜೊತೆ ಕೊಡಲು ಪ್ರಯತ್ನಿಸಿದ್ದರು.

೧೩೦ ನಾಗರಿಕರ ಶಾಂತಿ ಸಮಿತಿ ನಿರಂತರವಾಗಿ ದುಡಿಯುತ್ತಿತ್ತು. ನಗರದ ನಿರಾಶ್ರಿತರುಗಳೆಲ್ಲರೂ ಕ್ಯಾಂಪ್‌ನಿಂದ ಸ್ವಪ್ರೇರಣೆಯಿಂದ 'ಇನ್ನು ದಂಗೆಗಳಾಗುವುದಿಲ್ಲ, ಅವ್ಯವಸ್ಥೆ ಆಗುವುದಿಲ್ಲ' ಎಂದು ಬರೆದುಕೊಂಡು ಪ್ರಾರ್ಥಿಸಿಕೊಂಡರು. ಜನವರಿ ೧೮ರಂದು ಬಾಪೂಜಿ ಆರೋಗ್ಯ ತೀರ ಕೆಟ್ಟುಹೋಯಿತು. ಶಾಂತಿ ಸಮಿತಿಯ ಸದಸ್ಯರು ಬರೆದುಕೊಂಡು ಬಂದ ವಿನಂತಿಯನ್ನ ಬಾಪೂಜಿಗೆ ನೀಡಿದರು. ಅದರಲ್ಲಿ ಐದು ಆಶ್ವಾಸನೆಗಳಿದ್ದವು:

(೧) ಹಿಂದೂ, ಮುಸ್ಲಿಂ, ಸಿಖ್ ಮತ್ತು ಬೇರೆ ಧರ್ಮಗಳಿಗೆ ಸೇರಿದ ನಾವು ಎಲ್ಲರೂ ಶಾಂತಿಯಿಂದ ಇರಬಯಸುತ್ತೇವೆ. ಮುಸಲ್ಮಾನರ ಪ್ರಾಣ–ಪದಾರ್ಥಗಳನ್ನು ಕಾಪಾಡುವುದು ನಮ್ಮ ಕರ್ತವ್ಯವಾಗಿದೆ. ಇನ್ನು ಮುಂದೆ ಈ ರೀತಿ ಅಶಾಂತಿ ಉಂಟಾಗುವುದಿಲ್ಲವೆಂದು ಭರವಸೆ ನೀಡುತ್ತೇವೆ.

(೨) ಖ್ವಾಜಾ ಕುತುಬುದ್ದೀನನ ವಾರ್ಷಿಕ ಜಾತ್ರೆ ಶಾಂತಿಯಿಂದ ನೆರವೇರುತ್ತದೆಂದು ಆಶ್ವಾಸನೆ ನೀಡುತ್ತೇವೆ.

(೩) ಹಿಂದೂ–ಸಿಖ್ಖರು ಯಾವ–ಯಾವ ಮಸೀದಿಗಳನ್ನು ಆಕ್ರಮಿಸಿ ಕೊಂಡಿದ್ದರೋ ಅವುಗಳನ್ನು ಹಿಂದಿರುಗಿಸಲಾಗುವುದು.

(೪) ಸಬ್ಜಿಮಂಡಿ, ಕರೋಲ್‌ಬಾಗ್, ಪಹಾಡ್‌ಗಂಜ್‌ನಲ್ಲಿ ಮುಂಚೆ ಇದ್ದ ಹಾಗೆಯೇ ಮುಸಲ್ಮಾನರು ನಡೆದಾಡಬಹುದು.

(೫) ಓಡಿಹೋಗಿದ್ದ ಮುಸಲ್ಮಾನರು ನಗರಕ್ಕೆ ಹಿಂದಿರುಗಬಹುದು, ಮೊದಲಿನ ಹಾಗೆಂಯೇ ತಮ್ಮ ಕೆಲಸ, ಉದ್ಯೋಗ ಮಾಡಿಕೊಳ್ಳಬಹುದು. ಈ ಎಲ್ಲ ವಿಷಯಗಳಲ್ಲೂ ಮುಸಲ್ಮಾನರು ಸ್ಥಿತಿ ಬೇಗ ಉತ್ತಮಗೊಳ್ಳಲು ಸಹಾಯ ಮಾಡುತ್ತೇವೆ ಎಂದು ಮಾತುಕೊಡುತ್ತೇವೆ. ನಮ್ಮ ಮಾತನ್ನು ನಂಬಿ ಗಾಂಧೀಜಿ ಉಪವಾಸ ತೊರೆಯಬೇಕೆಂದು ಬೇಡುತ್ತೇವೆ.

೧೮ ಜನವರಿ ೧೯೪೮ ರಂದು ಮಧ್ಯಾನ್ಹ ಬಿಡಲಾ ಹೌಸ್‌ನಲ್ಲಿ ಬಾಪೂಜಿಯ ಕೋಣೆ ಗಿಜಿಗುಟ್ಟಿ ತುಂಬಿತ್ತು. ಅಲ್ಲಿ ಸರದಾರ್ ಪಟೇಲ್, ನೆಹರೂಜಿ, ಮೌಲಾನಾ ಆಝಾದ್, ರಾಜೇಂದ್ರ ಬಾಬು, ಪಾಕಿಸ್ತಾನದ ಹೈಕಮೀಷನರ್ ಶಹೀದ್ ಹುಸೇನ್, ದೆಹಲಿಯ ಮೌಲ್ವಿ, ಸಿಖ್ ನೇತಾರ, ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಹಿಂದೂ ಸಭಾ ಮುಖಂಡರು, ದೆಹಲಿ ನಿಗಮದ ಅಧ್ಯಕ್ಷರು, ಉಪಾಧ್ಯಕ್ಷರು ಎಲ್ಲರೂ ಬಂದಿದ್ದರು. ರಾಜೇಂದ್ರಬಾಬು ಅಲ್ಲಿದ್ದ ಎಲ್ಲ ಸಭಾಸದರ ಪರವಾಗಿ ನಿವೇದಿಸಿಕೊಂಡರು. ಆ ದಿನ ಬೆಳಿಗ್ಗೆ ಹಣ್ಣು, ಹೂವು, ಹಾರ, ಮಿಠಾಯಿಗಳೊಂದಿಗೆ ಸಬ್ಜಿ ಮಂಡಿಯಲ್ಲಿ ನೂರ ಐವತ್ತು ಜನ ಮುಸಲ್ಮಾನರನ್ನು ಸ್ವಾಗತಿಸಲಾಯಿತೆಂದೂ ತಿಳಿಸಿದರು.

ಬಾಪೂಜಿ, 'ನಿಮ್ಮ ಮಾತುಗಳಿಂದ ನನಗೆ ನಂಬಿಕೆ ಉಂಟಾಗಿದೆ. ಆದರೆ ಉಪವಾಸ ಬಿಡಿಸುವುದಕ್ಕಾಗಿಯೇ ಈ ವಾಗ್ದಾನಗಳನ್ನು ನೀಡಿರುವುದಾದರೆ ಬಹು ದೊಡ್ಡ ತಪ್ಪು ಆಗುತ್ತದೆ. ಈ ಆಶ್ವಾಸನೆ ದೆಹಲಿಯವರೆಗಷ್ಟೇ ಸೀಮಿತಗೊಳ್ಳಬಾರದು. ಇಂದು ದೆಹಲಿಯಲ್ಲಾದದ್ದು, ದೇಶದಲ್ಲಿ ಎಲ್ಲಾ ಕಡೆಗಳಲ್ಲೂ ಆಗುತ್ತದೆ. ದೆಹಲಿ ಸರಿಹೋದರೆ ಪಾಕಿಸ್ತಾನದಲ್ಲೂ ಸ್ಥಿತಿ ಸರಿಹೋಗುತ್ತೆ. ಈ ಭರವಸೆಗಳೂ, ಆಶ್ವಾಸನೆ ಮುರಿದು ಬಿದ್ದರೆ ಇನ್ನೊಂದು ಉಪವಾಸ ಅನಿವಾರ್ಯವಾಗುತ್ತೆ' ಎಂದರು. ಆಗ ಬಾಪೂಜಿ ಆ ಮುಸಲ್ಮಾನ ಮೌಲಾನಾಗಳನ್ನು 'ಈಗ ನಿಮಗೆ ಸಂತೋಷವಾಯಿತೆ' ಎಂದು ಕೇಳಿದರು. ಜೊತೆಗೆ 'ಊರಿನಲ್ಲಿ ನಾನು ಉಪವಾಸ ಮುರಿಯಬೇಕಾದಷ್ಟು ಶಾಂತಿ ನೆಲಸಿದೆಯೇ' ಎಂದು ಕೇಳಿ, ನಂತರ, 'ಇನ್ನು ಮುಸಲ್ಮಾನರು ಭಾರತವನ್ನು ತಮ್ಮ ದೇಶ ಎಂದು ತಿಳಿದು ಪ್ರಾಮಾಣಿಕತೆಯಿಂದ ಇರುವರೆಂದು ಆಶಿಸುತ್ತೇನೆ, ಇನ್ನು ಮುಂದೆ ಯಾರೂ ಕಾಫಿರ, ಯಾರೂ ಯವನನಾಗಿರುವುದಿಲ್ಲ. ಎಲ್ಲರೂ ಒಂದೇ, ಎಲ್ಲರೂ ಸಹೋದರರು' ಎಂದು ಕೊನೆಯಲ್ಲಿ, 'ಇನ್ನು ದೆಹಲಿ ಶಾಂತವಾದರೆ, ನಾನು ಪಾಕಿಸ್ತಾನಕ್ಕೆ ಹೋಗಬಯಸುತ್ತೇನೆ' ಎಂದು ಹೇಳಿದರು. ಆಗ ಆ ಮೌಲಾನಾಗಳು, ಪಾಕಿಸ್ತಾನದ ಹೈಕಮೀಷನರ್, ಹಿಂದೂ ಮಹಾಸಭೆ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖಂಡರು ಬಾಪೂಜಿಗೆ ಆಶ್ವಾಸನೆ ನೀಡಿದರು, ಪ್ರತಿಜ್ಞೆ ಮಾಡಿದರು. ಆಗ ಮೌಲಾನಾ ಅಬ್ದುಲ್ ಕಲಾಂ ಆಝಾದ್ ಅವರು ಕಿತ್ತಳೆ

ರಸವನ್ನು ಕುಡಿಸಿದರು, ಬಾಪೂಜಿಯವರು ಆರು ದಿನಗಳ ಉಪವಾಸವನ್ನು ಮುಗಿಸಿದರು. ದೇಶ ಮತ್ತು ಪ್ರಪಂಚ ನಿರಾಳದ ಉಸಿರೆಳೆದವು. ಹುಚ್ಚಾಟ ಮುಗಿಯಿತು ಮತ್ತು ವಿವೇಕಕ್ಕೆ ಗೆಲುವು ದೊರಕಿತು. ಆಗ ನೆಹರೂಜಿಯವರ ಕಣ್ಣುಗಳಿಂದ ಕಣ್ಣೀರು ಹರಿಯುತ್ತಿತ್ತು. ಎಲ್ಲರೂ ಹೊರಟುಹೋದ ನಂತರವೂ ನೆಹರೂಜಿ ಬಾಪೂಜಿಯವರೊಡನೆ ಸ್ವಲ್ಪ ಹೊತ್ತು ಇದ್ದರು. ಬಾಪೂಜಿಯವರ ಜೊತೆ ನೆಹರೂಜಿ ಕೂಡ ಉಪವಾಸ ಮಾಡುತ್ತಿದ್ದರೆಂಬುದು ಆಗ ತಿಳಿಯಿತು. ಈ ವಿಷಯ ಯಾರಿಗೂ ತಿಳಿಯದಿರುವಂತೆ ಅವರು ವಿಶೇಷ ತಾಕೀತು ಮಾಡಿಟ್ಟಿದ್ದರು. ಮನೆಯವರಿಗೂ ಈ ವಿಷಯ ಗೊತ್ತಿರಲಿಲ್ಲ. ಈ ಪ್ರೇಮದಿಂದ ಬಾಪೂಜಿ ತನ್ನ ಸೆಕ್ರೆಟರಿಯಾಗಿದ್ದ ಪ್ಯಾರೆಲಾಲಜೀಗೆ ಒಂದು ಕೈಬರಹದ ಪತ್ರ ಕಳುಹಿಸಿಕೊಟ್ಟಿದ್ದರು. 'ಚಿರಂಜೀವ ಜವಾಹರ, ಉಪವಾಸ ತೊರೆದು ಬಹಳ ವರ್ಷ ಬದುಕಿದ್ದು ಹಿಂದ್‌ನ ಜವಾಹರನಾಗು, ಬಾಪೂ ಆಶೀರ್ವಾದ'

೧೯–೧–೪೮

ಇವೆಲ್ಲಾ ನಡೆಯುತ್ತಿರುವಾಗ ಬಾಪೂಜಿಗೆ ತಕ್ಷಣ ನೆನಪಾಗಿ ಆರ್ಥರ್ ಮೂರ್‌ಗೆ ಫೋನ್ ಸೂಚನೆ ಕಳುಹಿಸಿ ಆತ ಉಪವಾಸ ನಿಲ್ಲಿಸುವಂತಾಗಲಿ ಎಂದು ಬಯಸಿದರು. ಹಾಗಿಲ್ಲದಿದ್ದರೆ ಆತ ಖಾಯಿಲೆ ಬೀಳಬಹುದಿತ್ತು. ಪ್ಯಾರೆಲಾಲ್‌ಜೀ ಆರ್ಥರ್ ಮೂರ್‌ನೊಂದಿಗೆ ಸಂಭಾಷಣೆ ನಡೆಸಿದಾಗ, ಆರ್ಥರ್ ಮೂರ್ ತಮಗೆ ಸ್ವಲ್ಪ ಹೊತ್ತಿಗೆ ಮುಂಚೆಯೇ ಬಾಪೂಜಿ ಉಪವಾಸವನ್ನು ಮುರಿದಿರುವ ಸೂಚನೆ ಸಿಕ್ಕಿತೆಂದು, ಅದರಿಂದ ಕಾಫಿ ಮತ್ತು ಸಗಾರ್ ಕುಡಿದು ಅವರು ಆಗತಾನೆ ಉಪವಾಸ ಬಿಟ್ಟಿದ್ದರೆಂದು ತಿಳಿಯಿತು. ಬಾಪೂಜಿ ಆದೇಶವನ್ನು ಮೂರ್ ಕೇಳಲಿಲ್ಲ.

ಆ ದಿನ ಸಂಜೆ ವೇಳೆಗಾಗಲೇ ಎರಡು ಲಕ್ಷ ನಿವಾಸಿಗಳು ಪ್ರತಿಜ್ಞಾಪತ್ರಕ್ಕೆ ಸಹಿ ಹಾಕಿದ್ದರು. ಅದರ ಒಕ್ಕಣೆ, ಮುಸಲ್ಮಾನರಿಗೆ ದೇಶದಲ್ಲಿರಲು ಪೂರ್ಣವಾಗಿ ಹಕ್ಕಿದೆ ಮತ್ತು ನಾವೆಲ್ಲರೂ ಕೂಡಿಕೊಂಡು ದೇಶದ ಒಳಿತಿಗಾಗಿ ಕೆಲಸ ಮಾಡುವೆವು ಎಂದಿತ್ತು. ಎಷ್ಟೋ ನಿರಾಶ್ರಿತರ ಶಿಬಿರಗಳಲ್ಲಿ ಜನರು ಬಾಪೂಜಿಯ ಜೊತೆ ಜೊತೆಗೇ ಉಪವಾಸ ಮಾಡಿದ್ದರು. ೧೮ರ ಮಧ್ಯಾಹ್ನ ನೂರು ಮಂದಿ ಬುರ್ಖಾಧಾರಿಗಳಾಗಿದ್ದ ಮುಸಲ್ಮಾನ ಮಹಿಳೆಯರು ಬಾಪೂಜಿಯವರ ದರ್ಶನ ಪಡೆಯಲು ಬಂದರು. ಈ ಮಹಿಳೆಯರು ಕೂಡ ಉಪವಾಸವಿದ್ದವರು, ಬಾಪೂಜಿಯವರ ಉಳಿವಿಗಾಗಿ ನಿರಂತರ ಪ್ರಾರ್ಥನೆ ಸಲ್ಲಿಸಿದ್ದರು. ಬಾಪೂಜಿ ದುರ್ಬಲರಾಗಿದ್ದರು, ಆದರೂ ಆ ಮಹಿಳೆಯರನ್ನು ಭೇಟಿ ಮಾಡಿದರು. ಆ ಮಹಿಳೆಯರ ಬುರ್ಖಾ ನೋಡಿ ಬಾಪೂಜಿ 'ನೀವೆಲ್ಲರೂ ನಿಮ್ಮ ತಂದೆ, ಸಹೋದರರೆದುರಿಗೆ ಪರದೆ ಹಾಕುವುದಿಲ್ಲ, ಹಾಗಿದ್ದೂ ನನ್ನೆದುರಿಗೇಕೆ ಪರದೆ ಹಾಕಿದ್ದೀರಿ?' ಎಂದು ಕೇಳಿದರು. ತಕ್ಷಣ

ಆ ಮಹಿಳೆಯರೆಲ್ಲರೂ ಬುರ್ಖಾವನ್ನು ಸರಿಸಿದರು. ಬಾಪೂಜಿ ಅವರಿಗೆ ತಂದೆಯ ರೀತಿ ಇದ್ದರು.

ಆ ದಿನ ಸಂಜೆ ಪ್ರಾರ್ಥನಾ ಸಭೆಯಲ್ಲಿ ಬಾಪೂಜಿ ೨೦ ನಿಮಿಷಗಳ ಕಾಲ ಮಾತನಾಡಿದರು. ಗುರು ಗೋವಿಂದರ ಜನ್ಮದಿವಸದ ಶುಭ ದಿವಸದಂದು ಅವರು ಉಪವಾಸ ಮುರಿದಿದ್ದರು, ಇದು ಶುಭ ಲಕ್ಷಣವಾಗಿತ್ತು. ಈಗ ಹಳೆಯದನ್ನೆಲ್ಲಾ ಮರೆತು ಸಹಕಾರ ಮತ್ತು ಸ್ನೇಹದಿಂದ ಇರಬೇಕು, ಹೃದಯದೊಳಗಿರುವ ರಾಕ್ಷಸ (ಶೈತಾನ)ನನ್ನು ತೊಡೆದು ಹಾಕಿದಾಗ ಮಾತ್ರ ಈಶ್ವರ ಭಕ್ತಿ ಸಾಧ್ಯವಾಗುತ್ತದೆ, ಹಿಂದೂ-ಸಿಖ್ಖರು ಕುರಾನ್ ಓದಬೇಕು. ಅದೇ ರೀತಿ ಮುಸಲ್ಮಾನರು ಗೀತೆಯನ್ನು ಓದಿ ಅರ್ಥ ಮಾಡಿಕೊಳ್ಳಬೇಕು. ಕಲ್ಲುಗಳಲ್ಲಿ ಭಗವಂತ ವಾಸಮಾಡುವುದಿಲ್ಲವೆಂದರೆ ಕುರಾನ್, ಗ್ರಂಥ ಸಾಹಿಬ್‌ನಲ್ಲಿ ಮತ್ತು ಗೀತೆಯಲ್ಲೂ ಭಗವಂತ ವಾಸಮಾಡುವುದಿಲ್ಲ. ಪುಸ್ತಕಗಳು ಕೂಡ ಒಂದು ರೀತಿಯಲ್ಲಿ ಮೂರ್ತಿಪೂಜೆಯೇ; ಸಹಿಷ್ಣುತೆ ಮತ್ತು ಆದರ-ಗೌರವದ ಸಮಾನ ಭಾವನೆಯಿಂದಲೇ ಸಮಾಜ ಪ್ರಗತಿ ಸಾಧಿಸುತ್ತದೆ. ಪ್ರಪಂಚದ ಪ್ರತಿಯೊಂದು ದೇಶದ ನಾಯಕರುಗಳ ಕಡೆಯಿಂದ ತಾರುಗಳು ಬರುತ್ತಿದ್ದವು. ಅದರಲ್ಲೂ ವಿಶೇಷವಾಗಿ ಆಫ್ರಿಕಾ, ಏಷ್ಯಾ ದೇಶಗಳಿಗೆ ಈ ಉಪವಾಸ ಅವರ ಪ್ರಯತ್ನ, ಆಸೆ, ಅಭಿಲಾಷೆಗಳ ಪ್ರತೀಕವಾಗಿತ್ತು. ಆಫ್ರಿಕಾ, ಏಷ್ಯಾ ಮಹಾದ್ವೀಪಗಳ ಕೋಟ್ಯಂತರ ಬಾಯಿಲ್ಲದ ಬಡವರನ್ನು ಸ್ವತಃ ಹೇಳಲಾಗದ ಜನರನ್ನು ಗಾಂಧೀಜಿ ಸರಿಯಾಗಿ ಅರ್ಥಮಾಡಿಕೊಂಡು, ಅದಕ್ಕೂ ಮಿಗಿಲಾಗಿ ಮಾಡಿತೋರಿಸುತ್ತಿದ್ದರು. ಉಪವಾಸದ ಈ ಮಹಾಯಜ್ಞ ನಿರ್ವೀರ್ಯನಾದವನ ಕೊನೆಯ ಬೇಡಿಕೆಯಾಗಿರಲಿಲ್ಲ, ಕೋಟ್ಯಂತರ ಬಡಜನರು ಯಾವುದಕ್ಕೂ ಬಾರದವರಾಗಿರ ಬಹುದಾದರೂ ಶಕ್ತಿಹೀನರಾಗಿರುವುದಿಲ್ಲ. ಅವರಲ್ಲಿ ಅಮೋಘವಾದ ಸಾಮೂಹಿಕ ಶಕ್ತಿ ಇರುತ್ತದೆ. ಅದೇ ರೀತಿ ಬಾಪೂಜಿಯ ಉಪವಾಸ ಕೂಡ ಅಸಹಾಯಕತೆಯ ಉಪವಾಸವಾಗಿರಲಿಲ್ಲ. ೧೯೪೮ರ ಜನವರಿಯಲ್ಲಿ ಅವರಿಗಿದ್ದ ಪ್ರಭುತ್ವದಿಂದ ಅವರು ಇಡಿಯ ಭಾರತ ಸರಕಾರದ ಎಲ್ಲ ಮಹಿಮರೂ ಅವರ ಒಂದು ಮಾತನ್ನೇ ಆಜ್ಞೆಯೆಂದು ತಲೆಬಾಗಿ ಸ್ವೀಕರಿಸುತ್ತಿದ್ದರು. ಆದರೆ ಬಾಪೂಜಿ ಆ ತೆರನಾದ ಸ್ಥೂಲ ಭೌತಿಕ ಶಕ್ತಿಯಲ್ಲ, ಅದಕ್ಕೆ ಬದಲಾಗಿ ಆಧ್ಯಾತ್ಮಿಕ ಶಕ್ತಿಯಲ್ಲಿ ನಂಬಿಕೆ ಇಟ್ಟಿದ್ದರು. ದೇವರು ಮನುಷ್ಯರ ಶರೀರವನ್ನು ಚಿಕ್ಕದು-ದೊಡ್ಡದು, ದುರ್ಬಲ- ಶಕ್ತಿಶಾಲಿಗಳು, ಕರಿಯ-ಬಿಳಿಯ ಹೀಗೆ ರಚಿಸಿದ್ದರೂ, ಅದರೊಳಗಿರುವ ಆತ್ಮ ಎಲ್ಲರಿಗೂ ಸಮಾನವಾಗಿರುತ್ತದೆ, ಅಷ್ಟೇ ಚಿಕ್ಕ, ಅಷ್ಟೇ ಸೂಕ್ಷ್ಮ, ಅಷ್ಟೇ ದಿವ್ಯವಾಗಿದ್ದು ಬ್ರಹ್ಮನ ಪ್ರತೀಕವಾಗಿರುತ್ತದೆ.

ಬಾಪೂಜಿ ಸ್ವತಃ ಈ ಆಧ್ಯಾತ್ಮಿಕ ಶಕ್ತಿಯನ್ನು ಸಾಧನೆಗೈದು, ದೇಶವಾಸಿಗಳೆಲ್ಲರಿಗೂ ಸಾಧನೆ ಮಾಡಿಸುತ್ತಿದ್ದರು. ಮಾಡಿಸಬಯಸುತ್ತಿದ್ದರು

ಅದರಿಂದಲೇ ಆಧ್ಯಾತ್ಮಿಕ ಶಕ್ತಿಯಿಂದ ರೂಪಿತವಾದ ಸತ್ಯಾಗ್ರಹದಿಂದ ಸ್ವಾತಂತ್ರ್ಯ ಸಿಕ್ಕಿತ್ತು, ಆದ್ದರಿಂದ ಬಾಪೂಜಿಯ ಉಪವಾಸ ಶರೀರದ ಬಲಿದಾನಕ್ಕಿಂತ ಹೆಚ್ಚಾಗಿ, ಅವರ ಆತ್ಮದ ಆಹುತಿಯಾಗಿತ್ತು, ಅದಕ್ಕಿಂತ ಹೆಚ್ಚು ಶ್ರೇಷ್ಠವಾದುದು ಮತ್ತಾವುದಿತ್ತು? ಲಂಡನ್‌ನ 'ನ್ಯೂಸ್ ಕ್ರಾನಿಕಲ್'ನಲ್ಲಿ ಈ ಆಧ್ಯಾತ್ಮಿಕ ಶಕ್ತಿಯ ಎದುರು ಅಣು ಬಾಂಬ್ ಕೂಡ ಕ್ಷುದ್ರವಾಗುತ್ತದೆ. ಇದು ಮನುಷ್ಯನ ಬುದ್ಧಿ ಮತ್ತು ಸಾಹಸದ ಉತ್ಪತ್ತಿ, ಆದರೆ ಮನುಷ್ಯನ ಕೃತಿ ಮನುಷ್ಯನಿಗಿಂತ ಶ್ರೇಷ್ಠವೆಂದಿಗೂ ಆಗಲಾರದು, ಆದ್ದರಿಂದ ಇಂದು ಅಣುಬಾಂಬಿನ ಈ ಯುಗದಲ್ಲೂ ಮಾನವ ಶ್ರೇಷ್ಠನೇ ಎಂಬುದನ್ನು ಬಾಪೂಜಿ ತಮ್ಮ ಉಪವಾಸದಿಂದ ಸಿದ್ಧಪಡಿಸಿ ತೋರಿದ್ದಾರೆ. ಅವರ ಉತ್ಸರ್ಗದಿಂದ ಮಾನವ ಸಂಹಾರ ನಿಂತಿದೆ. ಮತ್ತು ಪಾಶವಿಕತೆಯ ನಡುವೆ ಕೂಡ ದಿವ್ಯತೆ ಶಾಶ್ವತವಾಗಿದೆ' ಎಂದು ಬರೆದಿತ್ತು. ಪ್ರಪಂಚದ ಸಮಸ್ತ ಜನರ ಹೃದಯಗಳಲ್ಲೂ ಇಂತಹ ಭಾವನೆಗಳೇ ಏಳುತ್ತಿದ್ದವು. ಆದುದರಿಂದ ಬಾಪೂಜಿಯ ಉಪವಾಸ ತೀರಿದ ಮೇಲೆ ಎಲ್ಲ ಜನರ ಹೃದಯಗಳಲ್ಲೂ ಒಂದು ಉತ್ಸವದ ಆನಂದ ಲಹರಿಯೇ ಹರಿಯಿತು.

* * * *

# ೩೯. ಹೇ ರಾಮ್ !

ವಿಭಜನೆಯ ನಂತರ ಕಂಡುಬಂದ ಕೋಮುವಾದದ ವಿಷ ಅಸಹ್ಯಕರವಾಗಿತ್ತು. ಆಗ ಬಾಪೂಜಿಗೆ ಉಪವಾಸ ಒಂದೇ ಉಳಿದಿದ್ದ ಉಪಾಯ. ಆ ವಿಷಪೂರಿತ ವಾತಾವರಣದಲ್ಲಿ ಜನರ ವಿವೇಕ ಹಾಳಾಗಿತ್ತು. ಬಾಪೂಜಿಯ ಧರ್ಮ–ನೀತಿಯ ಮಾತು ಯಾರೂ ಕೇಳುತ್ತಿರಲಿಲ್ಲ. ತನ್ನ ಅಸಹಾಯಕ ನಪುಂಸಕತೆ ಅವರನ್ನು ಕಾಡಿಸುತ್ತಿತ್ತು, ಅದು ಉಪವಾಸದ ಪುನೀತ ಆತ್ಮಬಲಿದಾನದಿಂದ ಮಾತ್ರ ದೂರವಾಗಬಹುದಿತ್ತು. ಆದ್ದರಿಂದ ಬಾಪೂಜಿ ೧೩ ಜನವರಿ ೧೯೪೮ರಂದು ಆಮರಣ ಉಪವಾಸ ಆರಂಭಿಸಿ, ದೇವರ ಕೃಪೆಗೆ ತನ್ನನ್ನೊಡ್ಡಿದ್ದರು. ೧೬ ಜನವರಿ ಯಂದು ಮೀರಾ ಬಹನ್‌ಗೆ ಬಾಪೂಜಿ ಒಂದು ಪತ್ರ ಬರೆದು, 'ಇದು ತನ್ನ (ನನ್ನ) ಅತಿ ಶ್ರೇಷ್ಠವಾದ ಉಪವಾಸ, ಪರಿಣಾಮ ಏನಾಗುತ್ತದೆಂದು ಗೊತ್ತಿರಲಿಲ್ಲವೆಂದೂ, ಆದರೆ ಅದು ಈಶ್ವರಾಧೀನವಾಗಿದೆ' ಎಂದು ತಿಳಿಸಿದ್ದರು. ಉಪವಾಸದಲ್ಲಿದ್ದಾಗ ತನ್ನೊಬ್ಬ ಮಿತ್ರನಿಗೆ ಬಾಪೂಜಿ ತನಗೇ ಉಪವಾಸ ಮಾಡುವುದು ಇಷ್ಟವೆಂದೇನಿಲ್ಲ' ಎಂದು ತಿಳಿಸಿದ್ದರು. ಆದರೆ ಈ ಬಾರಿಯ ಉಪವಾಸದಲ್ಲಿ ಒಂದು ವಿಶೇಷವಿತ್ತು. ಪ್ರತಿಯೊಂದು ಬಾರಿ ಉಪವಾಸ ಮಾಡಿದಾಗಲೂ ಪರಿಣಾಮದ ಬಗ್ಗೆ ತಿಳಿಯುವ ಕುತೂಹಲ ಇರುತ್ತಿತ್ತು. ಈ ಬಾರಿ ಮುಂದೇನಾಗಬಹುದೆಂಬ ಪ್ರಶ್ನೆಯೇ ಅವರಿಗೆ ಉಳಿದಿರಲಿಲ್ಲ. ಆದುದರಿಂದ ಬಾಪೂಜಿ ಪೂರ್ತಿ ಉತ್ಸುಕತೆಯಿಂದ ಹೊರಗಾಗಿ, ಪ್ರಭುಸಮರ್ಪಿತರಾಗಿದ್ದರು. ಆದುದರಿಂದ ಶರೀರಕ್ಕೆ ಏನಾಗುತ್ತಿತ್ತು, ಈ ವಿಷಯವಾಗಿಯೂ ಆಸಕ್ತಿ ಉಳಿದಿರಲಿಲ್ಲ.

ಈ ಬಾರಿಯ ಇನ್ನೊಂದು ವಿಶೇಷವೆಂದರೆ ದೆಹಲಿ ಅಥವಾ ದೇಶ ಮಾತ್ರ ಸ್ತಂಭಿತಗೊಂಡು ಬಾಪೂಜಿಯವರ ಪ್ರಾಣ ಉಳಿಸಲೆಂದು ಪ್ರಾರ್ಥನೆ ಮಾಡದೆ ವಿಶ್ವದ ಎಲ್ಲೆಡೆಯಿಂದ ದೃಷ್ಟಿ ಅವರ ಕಡೆ ಕೇಂದ್ರಿತವಾಗಿತ್ತು, ಎಲ್ಲರೂ ಗಳಿಗೆಗಳನ್ನು ಎಣಿಸುತ್ತಿದ್ದರು. ಆಫ್ರಿಕಾ ಮತ್ತು ಏಷ್ಯಾದ ದೇಶಗಳಿಗಂತೂ ತಮ್ಮ ಭವಿಷ್ಯವೇ ತಕ್ಕಡಿಯಲ್ಲಿ ತೂಗುತ್ತಿದೆ ಎಂದನಿಸುತ್ತಿತ್ತು. ಸಾವಿರಾರು ಮಂದಿ ಬಾಪೂಜಿಯನ್ನು ನೋಡಿಲ್ಲದ, ಕೇಳಿಲ್ಲದವರ ಹೃದಯದ ಮಿಡಿತ ನಿಂತುಹೋಗಿತ್ತು. ಆದುದರಿಂದಲೇ ೧೮ ಜನವರಿ ೧೯೪೮ರಂದು ಮಧ್ಯಾಹ್ನ ೧೨ ಗಂಟೆ ೪೫ ನಿಮಿಷಗಳಾದ ನಂತರ ಅವರು ಉಪವಾಸ ಮುರಿದಾಗ ಎಲ್ಲರಿಗೂ ಪ್ರಾಣದಲ್ಲಿ ಪ್ರಾಣ

ಬಂದಂತಾಯಿತು, ಗಾಢಾಂಧಕಾರದ ನಡುವೆ ಶಾಶ್ವತವಾದ ಪ್ರಕಾಶ ವಿಜಯ ಪಡೆದಂಥ ಅನುಭವವಾಗಿತ್ತು. ಆದ್ದರಿಂದ ಈ ಆಟಮ್ ಬಾಂಬಿನ ಪ್ರಪಂಚದಲ್ಲೂ ಮಾನವೀಯತೆಯ ಮಹತ್ತು ಸ್ಥಿರವಾಗಿಯೇ ಇತ್ತು, ಈ ಆತ್ಮ ಬಲಿದಾನದ ಸಫಲವಾದ ಪೂರ್ಣಾಹುತಿ ಏಷ್ಯಾ ಮತ್ತು ಆಫ್ರಿಕಾದ ಗುಲಾಮ ದೇಶಗಳಿಗೆ ಆಸೆ ಮೂಡಿಸಿ ಪ್ರೋತ್ಸಾಹ ನೀಡಿತ್ತು, ಹಿಂಸೆಯ ಬೇರೆ ಬೇರೆ ಸಾಧನಗಳೆದುರು ಅಹಿಂಸೆ ವಿಜಯಿಯಾಗಿತ್ತು. ಬಾಪೂಜಿ ಪ್ರಪಂಚದ ದೇಶಗಳಿಗಾಗಿ ದೀಪಸ್ತಂಭವಾದರು. ಬರ್ಬರತೆಯಿಂದ ಆವರಿಸಿಕೊಂಡಿದ್ದ ಕತ್ತಲಿನಲ್ಲಿ ಜನರಿಗೆ ಮಾರ್ಗ ತೋರುತ್ತಿತ್ತು, ಇಂಗ್ಲೆಂಡ್ ಮತ್ತು ಅಮೆರಿಕಾದ ಪತ್ರಿಕೆಗಳು ಕೂಡ ಸಂಪಾದಕೀಯ ಬರೆದು ಬಾಪೂಜಿಯ ಸಾಧನೆಯನ್ನು ಅಭಿನಂದಿಸಿದ್ದವು.

ಗಾಂಧೀಜಿ ಬ್ರಿಟಿಷ್ ಸರಕಾರವನ್ನು ವಿರೋಧಿಸಿ ಸತ್ಯಾಗ್ರಹ ಮಾಡಿದ್ದವರು, ಸ್ವಾತಂತ್ರ್ಯ ಸಿಕ್ಕ ನಂತರ ಅಹಿಂಸೆ ಮತ್ತು ಸತ್ಯಕ್ಕಾಗಿ ಗಾಂಧಿ ತನ್ನ ದೇಶವಾಸಿಗಳೆದುರು ಕೂಡ ಈ ಅಮೋಘವಾದ ಅಸ್ತ್ರವನ್ನು ಪ್ರಯೋಗಿಸಬಲ್ಲರೆಂದು ವಿದೇಶದ ಪತ್ರಕರ್ತರುಗಳಿಗನಿಸಿತ್ತು. ಹಿಂಸೆ ಮತ್ತು ದ್ವೇಷದ ಕೊಳ್ಳದಲ್ಲಿ ಬೀಳುತ್ತಿದ್ದ ಮಾನವೀಯತೆಯನ್ನು ತನ್ನ ಆಧ್ಯಾತ್ಮಿಕ ಶಕ್ತಿಯಿಂದ ಉಳಿಸಬಲ್ಲರೆಂದೆನಿಸಿತ್ತು.

ಈ ದೇಹಯಜ್ಞದ ಕೀರ್ತಿಕಾರಿ ಪೂರ್ಣಾಹುತಿಯಾಯಿತದರೂ ಕಿಡ್ನಿ ಮತ್ತು ಲಿವರ್ ಘಾತಗೊಂಡವು. ಕಲ್ಕತ್ತಾ ಉಪವಾಸದ ಸಂದರ್ಭದಲ್ಲೇ ಅವರಿಗೆ ಈ ತೊಂದರೆ ಶುರುವಾಗಿತ್ತು. ಆದರೆ ಬಾಪೂಜಿ ವಿಪತ್ತುಗಳನ್ನ ತೆಗೆದುಕೊಳ್ಳುತ್ತಲೇ ಹೋದರು. ಪ್ರತಿಯೊಂದು ಬಾರಿಯೂ ನಷ್ಟವಾಗದೆ ಅಂತಹ ಪರೀಕ್ಷೆಯಿಂದ ಹೊರಗಾಗಿದ್ದರು, ಈಗ ಕೂಡ ಅವರು ಪೂರ್ತಿ ಆರೋಗ್ಯ ಸಂಪಾದಿಸಿಕೊಳ್ಳುತ್ತಾರೆಂಬ ನಂಬಿಕೆ ನಮಗೆಲ್ಲರಿಗೂ ಇತ್ತು, ಈಗ ಅವರ ಎಂಬತ್ತನೆಯ ವರ್ಷ ನಡೆಯುತ್ತಿತ್ತು. ಆ ದೃಷ್ಟಿಯಿಂದ ನೋಡಿದಾಗ ಅವರ ಆರೋಗ್ಯ, ಸ್ಫೂರ್ತಿ, ಪ್ರತಿಯೊಂದು ಅಂಗ ಕೂಡ ತೀವ್ರವಾಗಿ ಕ್ರಿಯಾತ್ಮಕವಾಗಿದ್ದವು, ಎಲ್ಲೂ ವೃದ್ಧಾಪ್ಯದ ಶಿಥಿಲತೆ ಬಂದಿರಲಿಲ್ಲ, ಈ ವಯಸ್ಸಿನಲ್ಲೂ ಅವರ ಬುದ್ಧಿ ಪ್ರಖರವಾಗಿತ್ತು, ತಾರ್ಕಿಕವಾಗಿತ್ತು. ಪ್ರತಿದಿನವೂ ೨೦ ರಿಂದ ೨೨ ಗಂಟೆಕಾಲ ನಿರಂತರವಾಗಿ ತಲ್ಲೀನರಾಗಿ ಜಟಿಲವಾದ ಸಮಸ್ಯೆಗಳ ವಿಷಯವಾಗಿ ಚಿಂತನ ಮನನ ನಡೆಸುತ್ತಿದ್ದರು, ಚರ್ಚೆ ಮಾಡುತ್ತಿದ್ದರು. ಕೊನೆಯ ಪಕ್ಷ ಮೂರು–ನಾಲ್ಕು ಜನ ಸೆಕ್ರೆಟರಿಗಳನ್ನು ನಿರಂತರವಾಗಿ ಕೆಲಸದಲ್ಲಿ ತೊಡಗಿಸುವಷ್ಟು ಪತ್ರವ್ಯವಹಾರ ನಡೆಸುತ್ತಿದ್ದರು. ಇಷ್ಟೊಂದು ಪುರಸೊತ್ತಿಲ್ಲದ ಕಾರ್ಯಗಳನ್ನು ಮಾಡುತ್ತಿರುವಾಗಲೂ ಅವರ ಮುಖದ ನಗು, ಹೃದಯವನ್ನು ಮುಟ್ಟುವಂಥ ಸಹೃದಯತೆ ಎಂದೂ ಮಾಯವಾಗಲಿಲ್ಲ ಅದರಲ್ಲಿ ಕೊರತೆ ಬರಲಿಲ್ಲ. ಅವರಿಗೆ ಯಾರು ಚಿಕ್ಕವರಾಗಲಿ, ದೊಡ್ಡವರು ಎಂದಾಗಲಿ ಇರಲಿಲ್ಲ. ಹಾಗೆಯೇ ಮಹತ್ವವಿಲ್ಲದ್ದು ಕೂಡ ಯಾವುದೂ ಇರಲಿಲ್ಲ.

ಅವರಿಗೆ ಜೀವನದ ಪ್ರತಿಯೊಂದು ಕ್ಷೇತ್ರವೂ ದೈವೀ ಸಾಧನೆಯ ಪ್ರಯೋಗವಾಗಿತ್ತು, ಆಧ್ಯಾತ್ಮಿಕ ಸಾಧನೆಯಾಗಿತ್ತು. ಅದರಿಂದ ಅವರು ಮಾಡಿದ್ದೆಲ್ಲಾ ಭಿನ್ನವಾಗದ ಅರ್ಚನೆಯಾಗಿ ಬಿಡುತ್ತಿತ್ತು. ಈ ತರಹ ಆಧ್ಯಾತ್ಮಿಕ ಅರ್ಚನೆಯ ಕಾಂತಿಯಿಂದ ಕೂಡಿದ ನಿನಾದ ಅವರ ತನು–ಮನದ ಕಾಂತಿಯನ್ನು ಪ್ರಕಾಶಗೊಳಿಸಿಟ್ಟಿರುತ್ತಿತ್ತು. ನಮ್ಮೆಲ್ಲರಲ್ಲೂ ಬ್ರಹ್ಮನ ಅಂಶವಿದೆ, ಆದರೆ ಅವರಲ್ಲಿ ಸ್ವಲ್ಪ ಹೆಚ್ಚಾಗಿತ್ತು ಅಂತ ಹೇಳಿ ಸೃಷ್ಟಿಕರ್ತ ಪಕ್ಷಪಾತಿಯಾಗಿದ್ದ. ಅವನ ಮೇಲೆ ನಾನು ಆರೋಪ ಹೊರಿಸುವುದಿಲ್ಲ. ಆದರೆ ಬಾಪೂಜಿಯ ಅಂತರಾತ್ಮದಲ್ಲಿದ್ದ ದೇವರು ಸದಾ ಜಾಗೃತನಾಗಿದ್ದು, ಪ್ರಕಾಶ ಬೀರುತ್ತಿದ್ದ; ಅದು ಅವರ ಸಂಪೂರ್ಣ ವ್ಯಕ್ತಿತ್ವದಲ್ಲಿ ಆವರಿಸಿಕೊಂಡಿರುತ್ತಿತ್ತು, ಆದ್ದರಿಂದ ನಾಲ್ಕಾರು ಕ್ಷಣಗಳ ಕಾಲ ಅವರ ಸಾನ್ನಿಧ್ಯ ಪಡೆದವರು ಕೂಡ ಸದಾ ಕಾಲ ಅವರ ವ್ಯಕ್ತಿಯಾಗಿಬಿಡುತ್ತಿದ್ದರು. ಅದರಿಂದ ಅವರು ಮಾಡುತ್ತಿದ್ದ ಯಾವ ಕೆಲಸವೂ ನಿರರ್ಥಕವಾಗುತ್ತಿರಲಿಲ್ಲ, ಪ್ರಯೋಜನವಿಲ್ಲದ್ದಾಗುತ್ತಿರಲಿಲ್ಲ. ಈ ರೀತಿ ಶಕ್ತಿ ಮತ್ತು ಭಾವನೆಗಳನ್ನು ಸಂಗ್ರಹಿಸಿ ಸದುಪಯೋಗಪಡಿಸಿಕೊಂಡಿದ್ದರಿಂದ ಅವರ ಸಾಮರ್ಥ್ಯ ಎರಡರಷ್ಟು ಹೆಚ್ಚಾಗಿತ್ತು. ಈ ಉಪವಾಸ ಅವರ ಆಧ್ಯಾತ್ಮಿಕ ತಪಸ್ಸನ್ನು ಮತ್ತೂ ತೀಕ್ಷ್ಣವಾಗಿ ಮಾಡಿ ಉಜ್ವಲಗೊಳಿಸಿತ್ತು. ಅವರ ಕೀರ್ತಿ ಪ್ರಪಂಚದಲ್ಲೆಲ್ಲಾ ಹರಡಿತ್ತು.

ಬಾಪೂಜಿ ಈಗ ಮತ್ತೇನು ಮಾಡಿಯಾರು ಎಂದು ಎಲ್ಲರೂ ಯೋಚಿಸುತ್ತಿದ್ದರು. ಪಾಕಿಸ್ತಾನಕ್ಕೆ ಹೋಗಿ ಅಲ್ಲಿ ಕೂಡ ಕಲ್ಕತ್ತಾ ಮತ್ತು ದೆಹಲಿಯ ರೀತಿಯಲ್ಲಿ ಚಮತ್ಕಾರ ಮಾಡಬಹುದೇನು? ಬಾಪೂಜಿ ಇನ್ನು ದೇಶದ ಚೌಕಟ್ಟನ್ನ ಮೀರಿ ಪ್ರಪಂಚದ ವೇದಿಕೆಯಲ್ಲಿ ಕೆಲಸ ಮಾಡಬೇಕೆಂದು ಕೆಲವರು ಮಿತ್ರರು ಬಯಸುತ್ತಿದ್ದರು. ಭಾರತದಲ್ಲಿ ತಮ್ಮ ಪ್ರಯೋಗಗಳನ್ನು ಮಾಡಿ ಅವು ಇಲ್ಲಿ ಪರಿಣಾಮಕಾರಿಯಾಗಿ ಫಲಕೊಟ್ಟ ನಂತರ ಬೇರೆ ದೇಶಗಳಿಗೆ ಉಪದೇಶ ಕೊಡಲು ಯೋಚಿಸಬಹುದೆಂದು ಬಾಪೂಜಿ ದೃಢವಾಗಿ ನಂಬಿದ್ದವರು. ಬಾಪೂಜಿ ಬಳಿ ಕಾರ್ಯಕ್ರಮಗಳಿಗೆ ಕೊರತೆ ಇರಲಿಲ್ಲ. ಇಲ್ಲಿಯವರೆಗೂ ಅವರು ವಿದೇಶೀ ಆಳ್ವಿಕೆಯನ್ನು ವಿರೋಧಿಸುವುದಕ್ಕಾಗಿ ದೇಶದ ಜನರನ್ನು ಎಚ್ಚರಿಸುವ ಕೆಲಸ ಮಾಡಿದ್ದರು. ಅವರು ಈಗ ಮತ್ತೊಮ್ಮೆ ದೇಶ ಪೂರ್ತಿ ಸುತ್ತಿ ರೈತರು ಮತ್ತು ಹಳ್ಳಿಯ ಬಡಜನರಿಗೆ ಸ್ವಾತಂತ್ರ್ಯದ ಜವಾಬ್ದಾರಿ ಏನು ಅಂತ ಕಲಿಸಿ, ದೇಶದ ಪ್ರಜೆಯ (ನಾಗರಿಕ) ನಿಜವಾದ ಗೌರವ ಪಡೆಯುವಂತೆ ಮಾಡಬೇಕೆಂದು ಬಯಸುತ್ತಿದ್ದರು. ರೈತನಿಗೆ ಅವನ ಅಧಿಕಾರಗಳೇನು, ಕರ್ತವ್ಯಗಳೇನು ಅಂತ ತಿಳಿದರೆ ಅವನನ್ನ ಶೋಷಿಸುವುದು ನಿಲ್ಲುತ್ತದೆ, ಆಗ ಸ್ವಾತಂತ್ರ್ಯದ ಲಾಭ ಎಲ್ಲರಿಗೂ ಸಿಗುವಂತಾಗುತ್ತದೆ. ಇನ್ನೊಂದು, ಬಾಪೂಜಿ ಈ ದೇಶದ ಯುವಕರಿಗೂ ಆಹ್ವಾನ ಕೊಟ್ಟಿದ್ದರು. ಅದು ಸಫಲವಾಗಿತ್ತು, ಸ್ವಾತಂತ್ರ್ಯ ಸಿಗುವವರೆಗೂ ಅದರ ಉಪಯೋಗವಾಯ್ತು, ಆದರೆ ಅಸಹಕಾರ ಚಳವಳಿಯ ಯುವಕರೆಲ್ಲಾ ಈಗ

ಮುದುಕರಾಗಿ ಬಿಟ್ಟಿದ್ದರು. ಅದರಿಂದ ಈಗ ಸ್ವಾತಂತ್ರ್ಯ ಸಿಕ್ಕ ನಂತರದ ಯುವಕರನ್ನು ರಚನಾತ್ಮಕ ಕಾರ್ಯಕ್ರಮಗಳಲ್ಲಿ ತೊಡಗಿಸಲು ತರಬೇತಿ ನೀಡಬೇಕು ಎಂಬುದು ಬಾಪೂಜಿಯ ಯೋಜನೆಯಾಗಿತ್ತು. ಅದರಿಂದ ಅವರುಗಳು ಮುಂದೆ ಜವಾಬ್ದಾರಿಗಳನ್ನು ಹೊರುವುದಕ್ಕೆ ಸುಸಜ್ಜಿತರಾಗಬಹುದು ಅನ್ನುವ ಉದ್ದೇಶವಿತ್ತು. ಮೂರನೆಯದಾಗಿ, ಬಾಪೂಜಿ ಮಾಡಬೇಕೆಂದಿದ್ದ ಅತಿ ಮಹತ್ವದ ಕೆಲಸ ಅಂದರೆ ಅವರು ದೇಶದ ರಾಜಕೀಯವನ್ನು ಸುವ್ಯವಸ್ಥಿತಗೊಳಿಸಿ, ಅದ್ಕಕಾಗಿ ಹೊಸ ದಿಕ್ಕು ನೀಡಲು ಚಿಂತಿಸುವುದಾಗಿತ್ತು.

ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದಕ್ಕಿಂತ ಹೆಚ್ಚಾಗಿ ರಾಷ್ಟ್ರದ ನವನಿರ್ಮಾಣ ನೂರು ಪಟ್ಟು ಮಹತ್ವದ ಕೆಲಸವಾಗಿತ್ತು. ಆ ರೀತಿಯ ನವನಿರ್ಮಾಣಕ್ಕಾಗಿ ಅಗತ್ಯವಾಗಿದ್ದ ಜನರ ಸ್ವಾತಂತ್ರ್ಯ, ಪ್ರಖರವಾದ ನೈತಿಕತೆ ಇನ್ನೂ ಬೆಳೆದಿರಲಿಲ್ಲ. ಇತ್ತೀಚಿನ ಕೆಲವು ವರ್ಷಗಳಲ್ಲಿ ಬಾಪೂಜಿ ಸಾಮಾಜಿಕ ಹಾಗೂ ರಾಜಕೀಯ ಜೀವನದ ಚರಿತ್ರಹೀನತೆಯನ್ನ ಅರಿತುಕೊಂಡಿದ್ದರು, ಸ್ವಾತಂತ್ರ್ಯದ ಸಿಕ್ಕುಗಳಲ್ಲಿ ಸಿಲುಕಿಕೊಂಡವರು ಮೂಲರೂಪವಾಗಿ ಈ ದಿಕ್ಕಿನಲ್ಲಿ ಗಮನ ಹರಿಸುವುದಕ್ಕೆ ಆಗಿರಲಿಲ್ಲ. ತನ್ನ ಜೀವನದ ಸಂಧ್ಯಾಕಾಲದಲ್ಲಿ ಕೂಡ ಅವರು ಗಹನವಾದ ಗಂಭೀರ ಕಾರ್ಯಗಳಿಗೋಸ್ಕರ ಅಹಿಂಸಾತ್ಮಕ ಆಂದೋಳನವನ್ನು ಆರಂಭ ಮಾಡುವ ಯೋಗ್ಯತೆ ಮತ್ತು ಧೈರ್ಯವನ್ನಿಟ್ಟುಕೊಂಡಿದ್ದರು. ಅವರು ಯುವಕರ ಮಧ್ಯೆ ಕೆಲಸ ಮಾಡಬೇಕೆಂದು ಉತ್ಸುಕರಾಗಿದ್ದರು, ಆದರೆ ಹಿಂದೂ ಮಹಾಸಭೆ ಮತ್ತು ಅದರ ಮುಖಂಡರಿಗೆ ಗಾಂಧೀಜಿ ಈ ತರಹ ರಾಷ್ಟ್ರ ನಿರ್ಮಾಣದ ಕೆಲಸ ಮಾಡುವುದು ಇಷ್ಟವಿರಲಿಲ್ಲವೆಂದು ಕಾಣುತ್ತದೆ.

ಉಪವಾಸ ಮುಗಿದು ಎರಡು ದಿನಗಳಾದ ಮೇಲೆ ೨೦ ಜನವರಿ ೧೯೪೮ ರಂದು ಬಿಡಲಾ ಹೌಸ್‌ನ ಪ್ರಾರ್ಥನಾ ಸಭೆಯಲ್ಲಿ ಸ್ಫೋಟ ಕೇಳಿಸಿದಾಗ ಕೆಲವರು ಹೆದರಿ ಗಲಾಟೆ ಮಾಡಿ ಏಳಲಾರಂಭಿಸಿದರು. ಬಾಪೂಜಿ ಅವರನ್ನು ತಡೆದು ಶಾಂತಗೊಳಿಸಿದರು. ಪ್ರಾರ್ಥನೆ ಮುಗಿದ ನಂತರ, ಮದನಲಾಲ ಪಾಹದಾ ಎಂಬೊಬ್ಬ ಇಪ್ಪತ್ತೈದು ವರ್ಷದ ಯುವಕ ಗಾಂಧೀಜಿಗೆ ತಗುಲಲಿ ಎಂದು ಬಾಂಬ್ ಎಸೆದಿದ್ದನೆಂದು ತಿಳಿಯಿತು. ಮದನಲಾಲನ ಜೇಬಿನಿಂದ ಒಂದು ಗ್ರೆನೇಡ್ ಕೂಡ ವಶಪಡಿಸಿಕೊಂಡಿದ್ದರು. ಬಾಂಬ್ ಹತ್ತಿರದಲ್ಲಿ ಸ್ಫೋಟಗೊಂಡಿದ್ದರೆ ಏನಾಗಬಹುದಿತ್ತೋ ಗೊತ್ತಿಲ್ಲ.

ಆದರೆ ಮದನಲಾಲನ ಮುಖದ ಮೇಲೆ ಪಶ್ಚಾತ್ತಾಪದ ಕುರುಹೂ ಇರಲಿಲ್ಲ. ಮೊದಲು ಯಾರೋ ಉದ್ವಿಗ್ನನಾದ ಶರಣಾರ್ಥಿಯ ಹುಚ್ಚುತನವೆಂದು ಭಾವಿಸಿದರು. ದೆಹಲಿಯ ಜನರು ಮಾಡಿದ ತಪ್ಪಿನ ಪರಿಣಾಮ ಇದು ಎಂದರು ಬಾಪೂಜಿ, ಪ್ರತಿಜ್ಞೆ ಮಾಡಿಯಾದ ಮೇಲೆ ನಿಜವಾಗಿಯೂ ಅವರ ಹೃದಯದಲ್ಲಿದ್ದ ಕಟು

ಭಾವನೆಗಳು ದೂರವಾಗಿದ್ದಿದ್ದರೆ ಮದನಲಾಲನಂತಹ ದಾರಿ ತಪ್ಪಿದ ಯುವಕರು ಸರಿಯಾದ ಮಾರ್ಗ ಯಾವುದು ಎಂದು ಅರ್ಥ ಮಾಡಿಕೊಳ್ಳುತ್ತಿದ್ದರು. ಮಾರನೆಯ ದಿನ ಪ್ರಾರ್ಥನಾ ಸಭೆಯಲ್ಲಿ ಬಾಪೂಜಿ ಜನರಿಗೆ, 'ಇಂಥ ಒಂದು ಬಾಂಬಷ್ಟೇ ಅಲ್ಲ, ಬಾಂಬುಗಳ ಸುರಿಮಳೆಯಾದರೂ ಶಾಂತರಾಗಿರುವ ಸ್ವಭಾವವನ್ನು ಜನ ರೂಢಿಸಿಕೊಳ್ಳಬೇಕು' ಎಂದು ಹೇಳಿದರು. ಮದನಲಾಲನನ್ನು ಮುಂದೂಡಿ ಅವನ ಬೆನ್ನಡಿಯಲ್ಲಿದ್ದವರಿಗೆ, ಈ ರೀತಿ ತಪ್ಪುಮಾರ್ಗ ಹಿಡಿಯಬಾರದೆಂದು ಹಿತವಚನ ಹೇಳಿದರು, ಬಾಂಬಿನಿಂದ ಹಿಂದೂವನ್ನು ಉಳಿಸಲಾಗುವುದಿಲ್ಲ ಎಂದರು.

ಈ ಬಾಂಬಿನ ಘಟನೆ ಒಂದು ವ್ಯವಸ್ಥಿತವಾದ ಷಡ್ಯಂತ್ರದ ಸರಣಿಯಾಗಿತ್ತು. ಪುಣೆಯಲ್ಲಿ 'ಹಿಂದೂರಾಷ್ಟ್ರ' ಎಂಬೊಂದು ಸಮಾಚಾರ ಪತ್ರಿಕೆಯ ಸಂಪಾದಕ ವಿನಾಯಕ ಗೋಡ್ಸೆ ಮತ್ತು ಆತನ ಮ್ಯಾನೇಜರ್ ನಾರಾಯಣ ಆಪ್ಟೆಯ ಯೋಜನೆ ಇದಾಗಿತ್ತು. ಆಯುಧಗಳ ಅಂಗಡಿಯ ದಿಗಂಬರ ಬಾಡಗೆ ಮತ್ತು ದಿಗಂಬರ ಗೋಡ್ಸೆ ಕರಕರೆ ಮತ್ತು ಮದನಲಾಲ ಇವರೆಲ್ಲಾ ಜೊತೆಗಾರರು. ಮದನಲಾಲ ಒಬ್ಬನ್ನು ಬಿಟ್ಟು ಮಿಕ್ಕವರೆಲ್ಲರೂ ಹಿಂದೂ ಮಹಾಸಭೆಯ ಸದಸ್ಯರಾಗಿದ್ದವರು, ಮಹಾರಾಷ್ಟ್ರದಲ್ಲಿ ಮೊದಲಿನಿಂದಲೂ ಹಿಂದೂರಾಷ್ಟ್ರವಾದ ಜೋರಾಗಿತ್ತು. ಅವರ ತ್ಯಾಗ, ಬಲಿದಾನ, ನಿಷ್ಠೆ ರಾಷ್ಟ್ರಪ್ರೇಮ ಉತ್ಕಟವಾಗಿತ್ತು. ಮಹಾರಾಷ್ಟ್ರದಲ್ಲಿ ಆ ಒಣ ಭೂಮಿಯ ವಿಶೇಷತೆಯೋ ಏನೋ, ಆ ಜನರಲ್ಲಿ ಜೀವನ, ರಾಜಕೀಯ ಎರಡನ್ನು ಕುರಿತಾಗಿ ಕೂಡ ಒಂದು ರೀತಿಯ ಸಂದೇಹದಿಂದ ಕೂಡಿ ಅಸಂತೋಷ, ಕಟು ಭಾವನೆ ಇರುತ್ತಿತ್ತು. ಬಾಪೂಜಿ ಅದಕ್ಕೆ ವಿರುದ್ಧ, ಪ್ರತಿಯೊಬ್ಬರ ವಿಷಯವಾಗಿಯೂ ಶ್ರದ್ಧೆ–ನಂಬಿಕೆ ಇಟ್ಟುಕೊಳ್ಳುತ್ತಿದ್ದರು, ಸಮಾಜದಲ್ಲಿ ಸತ್ವಗುಣವನ್ನು ಆಧಾರವಾಗಿಟ್ಟು ಕೊಂಡು ಕೆಲಸ ಮಾಡುತ್ತಿದ್ದರು. ಅವರಲ್ಲಿ ಇನ್ನೂ ಒಂದು, ಗಾಂಧಿಯ ಉತ್ಥಾನದಲ್ಲಿ ತಿಲಕ್ ಮತ್ತು ಮಹಾರಾಷ್ಟ್ರದ ಮಹತ್ವ ಕಡಿಮೆಯಾಯಿತು ಅನ್ನುವ ಭಾವನೆ ಬೇರೆ ಇತ್ತು. ಅವರುಗಳಿಗೆ ಬಾಪೂಜಿಯ ಅಹಿಂಸೆ, ನೇತೃತ್ವ ನಪುಂಸಕವಾದದ್ದೆನಿಸುತ್ತಿತ್ತು. ಅದರಿಂದ ಕಳೆದ ೨೫ ವರ್ಷಗಳಿಂದ ಒಂದೇ ಸಮನೆ ಬಾಪೂಜಿಯನ್ನ ಟೀಕಿಸುತ್ತಲೇ ಇದ್ದರು. ಇಷ್ಟಾಗಿಯೂ ಮಹಾರಾಷ್ಟ್ರದ ಶ್ರೀಸಾಮಾನ್ಯ ಬಾಪೂಜಿ ಕುರಿತು ಸಮರ್ಪಿತನಾಗಿದ್ದು ಇವರಿಗೆ ಇನ್ನೂ ದುಃಖ ಉಂಟುಮಾಡಿತ್ತು. ಈ ಹಿಂದೂ ಮಹಾಸಭೆಯ ಸನಾತನ ಬ್ರಾಹ್ಮಣರು ೧೯೩೪ರಲ್ಲಿ ಬಾಪೂಜಿ ಮತ್ತು ಮೋಟೀಬಾರ ಮೋಟಾರ ಮೇಲೆ ಬಾಂಬ್ ಎಸೆಯಲು ಪ್ರಯತ್ನಪಟ್ಟಿದ್ದರು. ಆ ಅಸಫಲ ಪ್ರಯೋಗವಾದ ಮೇಲೆ ಹತ್ತು ವರ್ಷಗಳಲ್ಲಿ ಅವರ ಸಣ್ಣತನ ಹೆಚ್ಚಾಗಿ ಅವರು ಈವಾಗ ಟಾರ್ಗೆಟ್ ಅಭ್ಯಾಸ ಮಾಡಿ ಪಿಸ್ತೂಲ್ ಅಭ್ಯಾಸದಲ್ಲಿ ಸಾಕಷ್ಟು ಕೈಚಳಕ ಸಂಪಾದಿಸಿಕೊಂಡಿದ್ದರು.

ದೆಹಲಿಯಲ್ಲಿ ಬಾಪೂಜಿ ಶಾಂತಿಯನ್ನು ನೆಲೆಗೊಳಿಸಿದ್ದರಿಂದ ಈ ಜನ ಸ್ವಲ್ಪ

ನಿರಾಶರಾಗಿದ್ದರು, ಅದರಿಂದ ಈ ಜನ ಬಾಪೂಜಿಯನ್ನು ಮುಗಿಸಿಬಿಡಬೇಕೆಂದು ನಿಶ್ಚಯಿಸಿದರು. ಪಾಕಿಸ್ತಾನಕ್ಕೆ ಐವತ್ತೈದು ಕೋಟಿ ರೂಪಾಯಿ ಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದರಿಂದ ಬೆಂಕಿಗೆ ತುಪ್ಪ ಸುರಿದ ಹಾಗಾಯಿತು. ಪಂಜಾಬ್, ಕಾಶ್ಮೀರದ ಅತ್ಯಾಚಾರ, ಬಲಾತ್ಕಾರದ ಘಟನೆಗಳು ನಿಜವಾಗಿ ರಾಕ್ಷಸೀಕೃತ್ಯಗಳಾಗಿದ್ದವು. ಜೊತೆಗೆ ಹಿಂದೂ ಮಹಾಸಭೆಯವರು ಜನರನ್ನು ಉದ್ರೇಕಗೊಳಿಸುವುದಕ್ಕೆ ಅದನ್ನು ಉಪಯೋಗಿಸಿಕೊಂಡರು. ವಿಭಜನೆಯಾದ ನಂತರ ಲಕ್ಷಾಂತರ ಮಂದಿ ವಿಸ್ಥಾಪಿತರಿಗೆ ಹಿಂದೂ ಮಹಾಸಭಾ ಆಯುಧಗಳನ್ನು ಹಂಚಿದ್ದಿತು, ಉತ್ತೇಜಿಸಿದ್ದಿತು, ಮದನಲಾಲ ಕೂಡ ಹಾಗೆ ಉತ್ತೇಜಿತನಾಗಿದ್ದ ಒಬ್ಬ ನಿರಾಶ್ರಿತನಾಗಿದ್ದ. ಅವನು ಬಂದು ಜೋರುಮಾಡಿ ಮಸೀದಿಯನ್ನು ವಶಕ್ಕೆ ತೆಗೆದುಕೊಂಡಿದ್ದ, ನಂತರ ಕರಕರೆಗೆ ಸಹಾಯಕನಾಗಿ ಈ ತರಹೆಯ ಕೆಲಸಗಳನ್ನು ಮಾಡುತ್ತಿದ್ದ. ೧೦ ಜನವರಿ ೧೯೪೮ರಂದು ನಾಥೂರಾಮ್ ಗೋಡ್ಸೆ, ಆಪ್ಟೆ, ಬಾಡಗೆಯ ಅಂಗಡಿಯಲ್ಲಿ ಪಿಸ್ತೂಲು, ಗ್ರೇನೇಡ್ ಕೊಂಡುಕೊಳ್ಳಲುಹೋದರು, ಬಾಕಿ ಸಾಮಾನು ಸಿಕ್ಕಿತು, ಆದರೆ ಪಿಸ್ತೂಲು ಸಿಗಲಿಲ್ಲ. ೧೩ ಜನವರಿಯಂದು ನಾಥೂರಾಮ್ ತನ್ನ ಎರಡು ಇನ್‌ಶೂರೆನ್ಸ್ ಪಾಲಿಸಿಗಳನ್ನ ಆಪ್ಟೆಯ ಹೆಂಡತಿ ಮತ್ತು ತನ್ನ ಅಣ್ಣ ಗೋಪಾಲ ಗೋಡ್ಸೆಯ ಹೆಸರಿಗೆ ಬರೆಸಿದ್ದ. ಬೊಂಬಾಯಲ್ಲಿ ರಿವಾಲ್ವರ್ ಕೊಳ್ಳಲು ಪ್ರಯತ್ನಿಸಿದ, ಸಫಲನಾಗಲಿಲ್ಲ. ಅವರಿಬ್ಬರೂ ಸುಳ್ಳು ಹೆಸರು ಬರೆಸಿ ೧೭ ಜನವರಿ ಪ್ಲೇನ್‌ನಲ್ಲಿ ದೆಹಲಿಗೆ ಹೋಗಲು ಟಿಕೆಟ್ ಕೊಂಡರು. ೧೫ ಜನವರಿ ಅವರಿಬ್ಬರೂ, ಬಾಡಗೆಯನ್ನೂ ದೆಹಲಿಗೆ ಬರುವಂತೆ ಸಿದ್ಧಪಡಿಸಿಕೊಂಡಿದ್ದರು. ೧೭ ಜನವರಿಯಂದು ಅವರೆಲ್ಲಾ ಸಾವರ್‌ಕರ್ ಅವರನ್ನು ಭೇಟಿ ಮಾಡಲು ಹೋಗಿದ್ದರೆಂದು ಬಾಡಗೆ ತಿಳಿಸಿದ್ದರೂ ಅಲ್ಲಿಂದ ಹಿಂದಿರುಗಿ ಸಾವರ್‌ಕರ್ ಅವರು ಗೋಡ್ಸೆ ಮತ್ತು ಆಪ್ಟೆಗೆ 'ಯಶಸ್ವೀ ಭವ' ಎಂದು ಆಶೀರ್ವಾದ ನೀಡಿದರೆಂದು ಆಪ್ಟೆ ಬಾಡಗೆಗೆ ತಿಳಿಸಿದರು. ೧೭ ಜನವರಿಯಂದು ಪುನಃ ರಿವಾಲ್ವರ್ ಪಡೆಯಲು ಪ್ರಯತ್ನಿಸಿದರು, ಆದರೆ ಬೊಂಬಾಯಿಯ ವರ್ತಕರು ಸಹಕಾರ ನೀಡಲಿಲ್ಲ. ೧೮ ಜನವರಿಯಂದು ಎಲ್ಲರೂ ದೆಹಲಿಯಲ್ಲಿ ಕೂಡಿಕೊಂಡರು. ೨೦ ಜನವರಿಯಂದು ಬೆಳಗಿನ ಹೊತ್ತಿನಲ್ಲಿ ಬಿಡಲಾ ಹೌಸ್ ಹಿಂದಿನ ಭಾಗವನ್ನು ಪರಿಶೀಲನೆ ಮಾಡಿದರು ಮತ್ತು ಹಿಂದೂ ಮಹಾಸಭಾಭವನದ ಹಿಂದೆ ಕಾಡಿನಲ್ಲಿ ಟಾರ್ಗೆಟ್ ಪ್ರ್ಯಾಕ್ಟೀಸ್ ಕೂಡ ಮಾಡಿದರು. ಮದನಲಾಲ ಬಾಂಬ್ ಹಾಕಿ ಎಲ್ಲರ ಗಮನ ಸೆಳೆಯುತ್ತಾನೆಂದೂ ಬಾಡಗೆ ಬಾಪೂಜಿ ಮೇಲೆ ಹ್ಯಾಂ ಗ್ರೆನೇಡ್ ಕೈಬಾಂಬು ಹಾಕುವನೆಂಬುದೂ ಯೋಜನೆಯಾಗಿತ್ತು. ಆ ಕೋಲಾಹಲ ಇರುವಾಗ ತಾವು ಓಡಿ ಹೋಗುವುದೆಂದು ಯೋಜನೆ ಹಾಕಿದ್ದರು, ಅದಕ್ಕೆ ಟ್ಯಾಕ್ಸಿಯನ್ನೂ ಸಿದ್ಧಪಡಿಸಿಟ್ಟುಕೊಂಡಿದ್ದರು. ಆದರೆ ಕೊನೆಯ ವೇಳೆ ಬಾಡಗೆ ಧೈರ್ಯ ಕಳೆದುಕೊಂಡ. ಅವನು ತನ್ನ ನೌಕರನನ್ನು

ಕರೆದುಕೊಂಡು ನೇರವಾಗಿ ಸ್ಟೇಷನ್ನಿನಿಂದ ಪುಣೆಗೆ ಹೊರಟುಹೋದ. ನಾಥೂರಾಮ್ ಗೋಡ್ಸೆ ಮತ್ತು ಮದನಲಾಲನನ್ನು ಅಲ್ಲೇ ಬಿಟ್ಟು, ನೇರವಾಗಿ ಕಾನಪುರಕ್ಕೆ ಹೊರಟುಹೋದ. ಮೊದಲ ಗುರಿ ಹಾಳಾಯಿತು.

ಜನವರಿ ೨೬ರಂದು ಬೊಂಬಾಯಲ್ಲಿ ಪಿಸ್ತೂಲನ್ನು ಪಡೆಯಲು ಪ್ರಯತ್ನಿಸಿದರು, ಆದರೆ ಚತುರ ಅಂಗಡಿಯವನಾಗಿದ್ದ ದೀಕ್ಷಿತನಿಗೆ ಗೋಡ್ಸೆ ಮತ್ತು ಅವನ ಉದ್ದೇಶಗಳು ಸರಿಯೆಂದೆನಿಸಲಿಲ್ಲ. ನಿರಾಶ್ರಿತರುಗಳಿಗೆ ಆಯುಧಗಳನ್ನು ಕೊಡುವ ಮಾತು ಸರಿಯಾಗಿತ್ತಾದರೂ ಪಿಸ್ತೂಲಿನ ಕೆಲಸ ಅಪಾಯಕಾರಿಯಾಗಿತ್ತು. ಕೊನೆಗೆ ಗ್ವಾಲಿಯರ್‌ನ ದಂಡವತೆ ಜಗದೀಶ ಪ್ರಸಾದ ಗೋಯಲ್‌ನಿಂದ ಐದು ನೂರು ರೂಪಾಯಿ ಕೊಟ್ಟು ಖರೀದಿಸಿ ಏಳು ಗುಂಡುಗಳಿರುವ ಒಂದು ಪಿಸ್ತೂಲನ್ನು ನಾಥೂರಾಮ್ ಗೋಡ್ಸೆಗೆ ಆತನ ಕಾರ್ಯ ಸುಗಮವಾಗಿ ಸುಲಭವಾಗಿ ಪೂರೈಸಲೆಂದು ಕೊಟ್ಟ. ಬಾಂಬ್ ಸ್ಫೋಟಗೊಂಡ ನಂತರ ಬೊಂಬಾಯಿಯ ರುಯ್ಯಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಜಗದೀಶಚಂದ್ರ ಜೈನ್ ಅವರು ಬೊಂಬಾಯಿಯ ಮುಖ್ಯಮಂತ್ರಿಗಳಾಗಿದ್ದ ಬಿ.ಜಿ. ಖೇರ್ ಅವರಿಗೆ, ಮದನಲಾಲನನ್ನು ಅವರು ಬಲ್ಲರೆಂದೂ, ಅವನು ಗಾಂಧೀಜಿಯವರನ್ನು ಕೊಲ್ಲಬೇಕೆಂಬ ಷಡ್ಯಂತ್ರ ಕುರಿತಂತೆ ಮಾತನಾಡುತ್ತಿದ್ದನೆಂದೂ ತಿಳಿಸಿದರು. ಆತ ಮದನಲಾಲನ ಮಿತ್ರರುಗಳ ಹೆಸರನ್ನು ಕೂಡ ತಿಳಿಸಿದ್ದರು. ಬೊಂಬಾಯಿ ಸರಕಾರ ಈ ಸಮಾಚಾರವನ್ನು ಕೇಂದ್ರ ಸರಕಾರದ ಗೃಹ ಮಂತ್ರಾಲಯಕ್ಕೆ ಕಳುಹಿಸಿಕೊಟ್ಟಿತ್ತು. ಸರದಾರ್ ಪಟೇಲರು ಬಂದೂಕಧಾರಿಗಳಾದ ರಕ್ಷಕರನ್ನು ಬಾಪೂಜಿ ಜೊತೆ ಇಡಬೇಕೆಂದು ಬಯಸಿದರು, ಪ್ರಾರ್ಥನಾ ಸಭೆಗೆ ಬರುವವರ ತಪಾಸಣೆ ನಡೆಸಬೇಕೆಂದು ಇಚ್ಛಿಸಿದರು. ಆದರೆ ಬಾಪೂಜಿ, 'ಬಂದೂಕದ ಆಶ್ರಯದಲ್ಲಿ ಮಾಡುವ ಪ್ರಾರ್ಥನೆ ಪ್ರಾರ್ಥನೆಯಾಗುವುದಿಲ್ಲ, ಆ ಸಮಯದಲ್ಲಿ ಎಲ್ಲರೂ ಭಗವಂತನ ಆಶ್ರಯದಲ್ಲಿರುತ್ತಾರೆ' ಎಂದು ಹೇಳಿ 'ಬಂದೂಕು ಹಿಡಿದ ರಕ್ಷಣೆ ಪಡೆಯುವುದು ದೇವರ ಬಗ್ಗೆ ಅಗೌರವ ತೋರಿದಂತೆ, ಅಪಹಾಸ್ಯ ಮಾಡಿದ ಹಾಗೆ ಅಯೋಗ್ಯವಾದ ಮಾತು ಆಗುತ್ತದೆ' ಎಂದರು. ಈ ಸ್ಪಷ್ಟ ನಿರ್ಣಯವಾದ ನಂತರ ಸರದಾರರು ಏನೂ ಮಾಡಲಾರದಾದರು. ಆದರೂ ಯೋಚಿಸಲೇಬೇಕಾಗಿದ್ದ ವಿಷಯ, ಭಾರತ ಸರಕಾರಕ್ಕೆ ಸಂಚು ಹೂಡಲಿರುವವರ ಹೆಸರುಗಳು ತಿಳಿದಿದ್ದ ನಂತರ ಪೋಲೀಸು ಅವರನ್ನೇಕೆ ಹಿಡಿಯಲಾಗಲಿಲ್ಲ? ದೆಹಲಿಯ ಪೋಲೀಸ್ ತಂತ್ರ ಅಷ್ಟು ಕೆಳಮಟ್ಟದ್ದಾಗಿದ್ದು, ತಿಳಿದಿದ್ದೂ ಕೂಡ ಈ ಸಂಚುಕೋರರರನ್ನು ಹುಡುಕಲು ಪ್ರಯತ್ನಿಸಲೇ ಇಲ್ಲ ಎಂಬ ಮಾತನ್ನು ಒಪ್ಪಲೇ ಬೇಕು. ಆಪ್ಟೆ ಮತ್ತು ನಾಥೂರಾಮ್ ಗೋಡ್ಸೆ ತಮ್ಮ ಕುಟಿಲ ಯೋಜನೆಯನ್ನು ಸಾಧಿಸಿದರು, ಹಿಂದೂ ಮಹಾಸಭಾದ ದೆಹಲಿ, ನಾಗಪುರ ಮತ್ತು ಪುಣೆ ಕೇಂದ್ರಗಳಲ್ಲಿ ಶುಭಸಂವಾದಕ್ಕಾಗಿ ಕಾಯುತ್ತಿದ್ದರು ಮತ್ತು ಶುಭ ಸಮಾಚಾರ ಸಿಕ್ಕ ನಂತರ

ಮಿಠಾಯಿ ಹಂಚಿದ್ದರು.

ಉಪವಾಸ ಮುಗಿದ ನಾಲ್ಕನೆಯ ದಿನ ಬಾಪೂಜಿ ಶರಣಾರ್ಥಿಗಳಿಗೆ ನೆರವು ನೀಡುವ ಕೆಲಸವನ್ನು ಪುನಃ ಆರಂಭಿಸಿಕೊಂಡರು. ಸಾವಿರಾರು ಮಹಿಳೆಯರನ್ನು ಅಪಹರಿಸಲಾಗಿತ್ತು, ಅವರನ್ನು ಪುನಃ ಹುಡುಕುವ ಕೆಲಸವನ್ನು ಮೃದುಲಾ ಬಹನ್ ಸಾರಾಭಾಯಿ ಮಾಡತೊಡಗಿದರು ಮತ್ತು ಪಶ್ಚಿಮ ಪಂಜಾಬಿನ ಬವಾಲಪುರದಲ್ಲಿ ನವಾಬನ ಬಳಿ ಹಿಂದೂ ಶರಣಾರ್ಥಿಗಳ ಸುರಕ್ಷತೆಗಾಗಿ ಡಾ॥ ಸುಶೀಲಾ ನಯ್ಯರ್ ಅವರನ್ನು ಕಳುಹಿಸಿದ್ದರು. ಬಾಪೂಜಿ ಸ್ವತಃ ಪಾಕಿಸ್ತಾನಕ್ಕೆ ಹೋಗಿ ಅಲ್ಲಿ ಅಲ್ಪ ಸಂಖ್ಯಾತ ಹಿಂದೂಗಳಿಗೆ ಸಹಾಯ ಮಾಡಬೇಕೆಂದು ಇಚ್ಛಿಸಿದರು. ಮೊದಲು ಕರಾಚಿಗೆ ಹೋಗಿ ಅಲ್ಲಿನ ಸಿಂಧಿಗಳಿಗೆ ಸಹಾಯ ಮಾಡಬೇಕೆಂದು, ನಂತರ ಗಡಿನಾಡಿಗೆ ಹೋಗಿ ಬಾದಷಾಹ ಖಾನ್‌ನನ್ನು ಭೇಟಿಯಾಗಿ, ಖುದಾಯಿ ಖಿದಮತ್‌ಗಾರರಿಗೆ ಸಹಾಯ ಮಾಡಿ ಕೊನೆಯಲ್ಲಿ ಲಾಹೌರಿಗೆ ಹೋಗಬೇಕೆಂದಿದ್ದರು. ಪಾಕಿಸ್ತಾನದ ಮುಸಲ್ಮಾನ ಅವರನ್ನು ನೋಡಿ, ಅವರನ್ನು ಕೇಳಿಸಿಕೊಂಡಾಗ ಸತ್ಯವೇನೆಂದು ಅರ್ಥಮಾಡಿಕೊಳ್ಳುವನೆಂದವರು ನಂಬಿದ್ದರು. ಬಾಪೂಜಿ ಹಿಂದೂ–ಮುಸಲ್ಮಾನರ ಎರಡೂ ಬಣಗಳ ಮಿತ್ರರಾಗಿದ್ದರು. ಸತ್ಯ ಅರ್ಥವಾದ ನಂತರ ಪಾಕಿಸ್ತಾನದಲ್ಲಿ ಮುಸಲ್ಮಾನರು ತಮ್ಮ ಪಶುಸದೃಶ ವ್ಯವಹಾರವನ್ನು ತ್ಯಜಿಸುತ್ತಾರೆಂದು ಬಾಪೂಜಿಗೆ ನಂಬಿಕೆ ಇತ್ತು. ಬಾಪೂಜಿ ಒಮ್ಮೆ ಪಾಕಿಸ್ತಾನಕ್ಕೆ ಬಂದರೆ ಖಂಡಿತ ಐವತ್ತು ಮೈಲು ಉದ್ದ ಹಿಂದೂ ಸಿಕ್ಖರ ಗುಂಪು ಭಾರತಕ್ಕೆ ಹಿಂದಿರುಗುತ್ತದೆಂದೂ, ಆಗ ಎರಡೂ ದೇಶಗಳಲ್ಲಿ ಪುನಃ ಶಾಂತಿ ನೆಲೆಗೊಳ್ಳುವುದೆಂದೂ ಬಾಪೂಜಿಯ ಒಬ್ಬ ಪಾಕಿಸ್ತಾನದ ಮುಸ್ಲಿಂ ಮಿತ್ರ ನಂಬಿದ್ದರು. ಬಾಪೂಜಿ ಕೂಡ ಈ ಭಗೀರಥ ಕಾರ್ಯವನ್ನು ಮಾಡಬಲ್ಲೆನೆಂಬ ಉತ್ಸಾಹ, ಆಕಾಂಕ್ಷೆ ಇಟ್ಟುಕೊಂಡಿದ್ದರು. ಆದ್ದರಿಂದಲೇ ಅವರು ಭಾರತದಲ್ಲಿ ವಿಸ್ಥಾಪಿತರಾಗಿದ್ದ ಮುಸಲ್ಮಾನರನ್ನು ಹಿಂದಕ್ಕೆ ಕರೆಸಬೇಕೆಂದು ಪಟ್ಟುಹಿಡಿದಿದ್ದರು.

ಆದರೆ ಈ ಮಧ್ಯೆ ಅವರು ಸೇವಾಗ್ರಾಮಕ್ಕೆ ಹೋಗಲೇಬೇಕಾಗಿತ್ತು. ಎರಡೂವರೆ ವರ್ಷಗಳಿಂದಲೂ ಸೇವಾಗ್ರಾಮ ಬಿಟ್ಟುಹೋಗಿತ್ತು, ೨೫ ಜನವರಿಯಂದು ಬಾಪೂಜಿ ತನ್ನ ಮೌಲಾನಾ ಮಿತ್ರರೊಂದಿಗೆ ದೆಹಲಿ ಬಿಟ್ಟು ಹೊರಡುವ ವಿಷಯವಾಗಿ ಮಾತನಾಡಿದರು. ಬಾಪೂಜಿ ಅವರಿಗೆ ತಾನು ಮುಸಲ್ಮಾನರ ಒಪ್ಪಿಗೆ ಪಡೆಯದೆ ಸೇವಾಗ್ರಾಮಕ್ಕೆ ಹೋಗುವುದಿಲ್ಲವೆಂದು ಆಶ್ವಾಸನೆ ನೀಡಿದರು. ೨೬ ಜನವರಿ ಸ್ವಾತಂತ್ರ್ಯದ ಭವ್ಯವಾದ ಸಮಾರಂಭ ಜರುಗಿತು. ಆದರೆ ಬಾಪೂಜಿಗೆ ಈ ಆಡಂಬರ ಇಷ್ಟವಾಗಲಿಲ್ಲ. ಬಡದೇಶ, ತನ್ನ ದುಪ್ಪಟಿ ಎಷ್ಟಿದೆಯೋ ಅಷ್ಟರವರೆಗೆ ಕಾಲು ಚಾಚಬೇಕು. ಈ ರೀತಿ ಬಡವರ ಹಣವನ್ನು ತೋರಿಕೆಗಾಗಿ ಹಾಳುಮಾಡಬಾರದು.

ಆ ದಿನಗಳಲ್ಲೇ ಭಾಷಾವಾರು ಪ್ರಾಂತಗಳ ಮಾತು ಕೂಡ ನಡೆಯುತ್ತಿತ್ತು. ಸಾಂಸ್ಕೃತಿಕ ವಿಕಾಸದಲ್ಲಿ ಭಾಷೆ ಪ್ರಮುಖ ಪಾತ್ರವಹಿಸುತ್ತದೆಂಬ ಕಾರಣಕ್ಕೆ ಕಾಂಗ್ರೆಸ್ ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಾಂತೀಯ ಭಾಷೆಗಳಿಗೆ ಒತ್ತುಕೊಟ್ಟಿತ್ತು. ಭಾಷೆಯ ಹೆಸರಿನಲ್ಲಿ ದೇಶ ಇನ್ನೊಮ್ಮೆ ವಿಭಜನೆಗೊಳ್ಳುವುದು ಬಾಪೂಜಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಭಾಷಾವಾರು ಪ್ರಾಂತಗಳ ರಚನೆಯಿಂದ ದೇಶದ ಜನರು ಏಕತೆಯನ್ನು ಮರೆತು ಕ್ಷೇತ್ರೀಯ ಸಂಕೀರ್ಣತೆಯ ನೀರಹೊಂಡದಲ್ಲಿ ಮುಳುಗುತ್ತಾರಾದ್ದರಿಂದ ದೇಶದ ಸ್ವಾತಂತ್ರ್ಯಕ್ಕೆ ಇದು ಘಾತಕವಾಗಿರುತ್ತದೆಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು.

೨೭ ಜನವರಿಯಂದು ಬಾಪೂಜಿ ಫೂಲ್‌ವಾಲ್‌ಗೆ ಹೋಗುವಾಗ ಮೆಹರೌಲಿ ಬಳಿ ಖ್ವಾಜಾ ಸೈಯದ್ ಕುತುಬುದ್ದೀನ್ ಬಖ್ತಿಯಾರ್‌ನ ದರಗಾಹ್‌ಗೆ ಹೋದರು. ನೂರಾರು ವರ್ಷಗಳಿಂದಲೂ ಅಲ್ಲಿ ಜಾತ್ರೆಯಾಗುತ್ತದೆ ಮತ್ತು ಹಿಂದೂ, ಮುಸಲ್ಮಾನ ಸಿಖ್ಖರೆಲ್ಲರಿಗೂ ಈ ಸೂಫಿ ಸಂಥನ ದರಗಾಹ್ ಕುರಿತು ಗೌರವವಿತ್ತು. ಉಪವಾಸ ತೀರಿಸುವಾಗ ಈ ಶರತ್ತು ಇತ್ತು. ಈ ವರ್ಷ ಕೂಡ ಉತ್ಸವ ತೊಂದರೆ ಇಲ್ಲದೆ ಜರುಗಬಿಡಬೇಕು ಎಂದಿತ್ತು. ದರಗಾಹ್‌ದ ಅಮೃತಶಿಲೆಯ ಜಾಲರಿಯನ್ನ ಹುಚ್ಚು ಜನ ಮಧ್ಯೆ–ಮಧ್ಯೆ ಒಡೆದುಹಾಕಿದ್ದರು, ಅದನ್ನು ನೋಡಿ ಯಾವ ತಿಳವಳಿಕಸ್ಥನಿಗೂ ದುಃಖವಾಗುತ್ತಿತ್ತು. ಬಾಪೂಜಿಗೂ ಅದನ್ನು ನೋಡಿ ದುಃಖವಾಯಿತು. ನಿಟ್ಟುಸಿರು ಬಿಟ್ಟು ಅವರು ಹೇಳಿದರು: ‘ಪಾಕಿಸ್ತಾನದಲ್ಲೂ ಇದೇ ರೀತಿ ಹಿಂದೂ–ಸಿಖ್ ಮಂದಿರಗಳನ್ನು ಹಾಳು ಮಾಡಿರಬಹುದು!’ ಆದರೆ ಆ ದಿನದ ಕೋಮು ಉತ್ಸವವನ್ನು ನೋಡಿ, ಒಗ್ಗಟ್ಟನ್ನು ನೋಡಿ ಎಲ್ಲರಿಗೂ ಸಂತೋಷವಾಗಿತ್ತು. ಹಿಂದೂ, ಸಿಖ್ಖ್ ಮುಸಲ್ಮಾನ ಸ್ವಯಂಸೇವಕರು ಬೆನ್ನಿಗೆ ಬೆನ್ನು ಕೊಟ್ಟು ಜನರನ್ನು ಸ್ವಾಗತಿಸುತ್ತಿದ್ದರು. ಹಿಂದೂ–ಸಿಖ್ ಮಹಿಳೆಯರು ನಿಶ್ಚಿಂತೆಯಾಗಿ ಜಾತ್ರೆಯಲ್ಲಿ ಸುತ್ತಾಡುತ್ತಿದ್ದರು. ಒಂದು ವಾರದ ಹಿಂದೆ ಇದ್ದ ದೆಹಲಿ ಇದೇ ಆಗಿತ್ತು ಅಂತ ನಂಬಿಕೆ ಬರುತ್ತಿರಲಿಲ್ಲ.

೨೯ ಜನವರಿ ಮಧ್ಯಾಹ್ನ ಬನ್ನೂನಿಂದ ಓಡಿ ಬಂದ ನಿರಾಶ್ರಿತರುಗಳು ಬಾಪೂಜಿಯನ್ನು ಭೇಟಿಯಾಗಲು ಬಂದರು. ಗುಜರಾತ್ ಸ್ಟೇಷನ್‌ನಲ್ಲಿ ಈ ಜನರ ಟ್ರೈನನ್ನೇ ಲೂಟಿ ಮಾಡಿದ್ದಿದ್ದು. ಅದರಲ್ಲಿ ಒಬ್ಬ ಬಾಪೂಜಿಗೆ, ‘ನೀವು ಈಗ ವಿಶ್ರಾಂತಿ ತೆಗೆದುಕೊಳ್ಳಿ, ನೀವು ನಮ್ಮನ್ನ ಪೂರ್ತಿ ಹಾಳು ಮಾಡಿದ್ದೀರಿ, ನಿಮ್ಮಿಂದ ಸಾಕಷ್ಟು ನಷ್ಟವಾಗಿದೆ. ನಮ್ಮ ಮೇಲೆ ದಯೆ ತೋರಿ ಇನ್ನು ನೀವು ಹಿಮಾಲಯಕ್ಕೆ ಹೊರಟು ಹೋಗಿ’ ಎಂದ. ಬಾಪೂಜಿ ಪ್ರಾರ್ಥನಾ ಸಭೆಯಲ್ಲಿ ಇದನ್ನು ಉಲ್ಲೇಖಿಸಿ ಹೇಳಿದರು: ‘ದೆಹಲಿಯಲ್ಲಿರುವ ಇಷ್ಟೊಂದು ದುಃಖಿತ ಜನರನ್ನು ಬಿಟ್ಟು ನಾನು ಹಿಮಾಲಯಕ್ಕೆ ಹೇಗೆ ಹೋಗಲಿ’ ಎಂದರು. ೨೯ ಜನವರಿಯಂದು ಬಹಳ ಕೆಲಸಗಳಿದ್ದವು. ಬಾಪೂಜಿ, ‘ನನಗೆ ಬಹಳ ಆಯಾಸವಾಗಿದೆ. ತಲೆ ಸುತ್ತುತ್ತಿದೆ,

ಆದರೂ ಕಾಂಗ್ರೆಸ್‌ನ ಸಂವಿಧಾನವನ್ನು ಸಿದ್ಧಪಡಿಸಲೇ ಬೇಕಾಗಿದೆ' ಎಂದು ಹೇಳಿದರು. ಸ್ವಾತಂತ್ರ್ಯಾನಂತರ ಕಾಂಗ್ರೆಸ್‌ನ ಸ್ವರೂಪ, ಉದ್ದೇಶಗಳು ಬೇರೆಯಾಗಬೇಕೆಂಬ ದೃಷ್ಟಿಯಿಂದ ಕಾಂಗ್ರೆಸ್‌ಗಾಗಿ ಹೊಸ ಸಂವಿಧಾನವನ್ನು ಸಿದ್ಧಪಡಿಸತೊಡಗಿದರು.

ಶುಕ್ರವಾರ ೩೦ ಜನವರಿಯ ದಿನ ಬೆಳಗಾಯಿತು. ಎಂದಿನಂತೆ ಗಾಂಧೀಜಿ ಬ್ರಾಹ್ಮೀ ಮುಹೂರ್ತದಲ್ಲಿ ೩ ಗಂಟೆ ೩೦ ನಿಮಿಷಗಳಿಗೆ ಎದ್ದರು. ಪ್ರಾರ್ಥನೆಯಾದ ನಂತರ ಪತ್ರಗಳನ್ನು ಬರೆಯತೊಡಗಿದರು. ಉಪವಾಸದ ನಂತರದ ದೌರ್ಬಲ್ಯ ದೂರವಾಗಿರಲಿಲ್ಲ. ಆದರೆ ಕೆಲಸಗಳು ಎಳೆಯುತ್ತಲಿದ್ದವು. ಆರೋಗ್ಯದ ಸ್ಥಿತಿ ಅಷ್ಟು ಸರಿಯೆನಿಸಲಿಲ್ಲ, ಅದರಿಂದ ಬೆಳಿಗ್ಗೆ ಸುತ್ತಾಡಲು ಹೋಗಲಿಲ್ಲ, ಕೊಠಡಿಯಲ್ಲೇ ಸ್ವಲ್ಪ ಅಲ್ಲಿ–ಇಲ್ಲಿ ಸುತ್ತಾಡಿದರು. ಆಗ ಮನು ಸುತ್ತಾಡಲು ಹೋಗದೆ ಲವಂಗವನ್ನು ಕುಟ್ಟುತ್ತಿದ್ದಳು. ರಾತ್ರಿ ಕೆಮ್ಮಲು ಬಂದಾಗ ಬೆಲ್ಲ ಲವಂಗದ ಪುಡಿಯನ್ನು ಬಾಯಲ್ಲಿಟ್ಟುಕೊಂಡರೆ ಬಾಪೂಜಿಗೆ ಸ್ವಲ್ಪ ಸರಿಹೋಗುತ್ತಿತ್ತು. ಇದನ್ನು ನೋಡಿ ಬಾಪೂಜಿ, 'ರಾತ್ರಿ ವೇಳೆಗೆ ಏನಾಗುತ್ತದೆಯೋ ಯಾರಿಗೆ ಗೊತ್ತು. ನಾನು ಬದುಕಿರುತ್ತೀನೋ ಇಲ್ಲವೋ! ರಾತ್ರಿ ನಾನು ಬದುಕಿದ್ದರೆ, ಆಗ ನೀನು ಲವಂಗ ಕುಟ್ಟುವಿಯಂತೆ' ಎಂದರು. ಸ್ವಲ್ಪ ಹೊತ್ತಾದ ನಂತರ ರಾತ್ರಿ ಸಿದ್ಧಪಡಿಸಿದ್ದ ಕಾಂಗ್ರೆಸ್ ಸಂವಿಧಾನದ ಕರಡನ್ನು ಪ್ಯಾರೇಲಾಲಜೀ ಕೈಗೆ ಕೊಟ್ಟು, 'ಇದನ್ನು ನೋಡು, ಏನಾದರೂ ಬಿಟ್ಟು ಹೋಗಿದ್ದರೆ ಪೂರ್ತಿ ಮಾಡು, ಬಹಳ ಆಯಾಸಗೊಂಡಾಗ ನಾನಿದನ್ನು ಸಿದ್ಧಪಡಿಸಿದ್ದೇನೆ' ಎಂದರು. ಮಾಲೀಸು ಮಾಡಿಸಿಕೊಳ್ಳುತ್ತಿರುವಾಗ ಅಂದರು, 'ಕೃಷಿ ಸಚಿವಾಲಯ ಆಹಾರ ಧಾನ್ಯಗಳ ಕೊರತೆ ಇದೆ ಅಂತ ಏಕೆ ಹೆದರುತ್ತಿದೆ ನನಗೆ ಅರ್ಥವಾಗುತ್ತಾ ಇಲ್ಲ. ಮದ್ರಾಸ್ ಪ್ರಾಂತದಲ್ಲಂತೂ ಪ್ರಕೃತಿ ಅಪಾರವಾಗಿ ಕೃಪೆ ತೋರಿದೆ. ತೆಂಗು, ಕಡಲೆಕಾಯಿ, ಬಾಳೆಹಣ್ಣು, ಮರಗೆಣಸು, ಮುಂತಾದ ಎಷ್ಟೋ ಕಂದಮೂಲ ಫಲಗಳಿವೆ. ಜನ ದೇವರು ಕೊಟ್ಟು ಪದಾರ್ಥಗಳನ್ನು ಪೂರ್ತಿ ಉಪಯೋಗಿಸಿಕೊಂಡರೆ ಈ ರೀತಿ ಧಾನ್ಯಕ್ಕೆ ಭಿಕ್ಷೆ ಬೇಡಬೇಕಾಗುವುದಿಲ್ಲ' ಎಂದರು.

ಸ್ನಾನ ಮಾಡಿದ ನಂತರ ಬಾಪೂಜಿಗೆ ಬಹಳ ಉಲ್ಲಾಸ ಮೂಡಿತು. ಶರೀರದ ಜಡತೆ ದೂರವಾಯಿತು, ಸ್ಫೂರ್ತಿ ಬಂತು. ಆಗ ಹಿಂದೂ ಮಹಾಸಭೆಯ ಅಧ್ಯಕ್ಷರಾಗಿದ್ದವರು ಡಾ॥ ಶ್ಯಾಮಾಪ್ರಸಾದ ಮುಖರ್ಜಿಯವರು. ಅವರು ಕೇಂದ್ರ ಮಂತ್ರಿ ಮಂಡಳದ ಸದಸ್ಯರಾಗಿದ್ದರು. ೨೯ ಜನವರಿಯಂದು ಬಾಪೂಜಿ ಪ್ಯಾರೆಲಾಲಜೀಯನ್ನು ಡಾ॥ ಮುಖರ್ಜಿ ಬಳಿಗೆ ಕಳುಹಿಸಿ ಹಿಂದೂ ಮಹಾಸಭೆಯ ಕಾರ್ಯಕರ್ತರು ಬಹಳ ಉತ್ತೇಜಿಸುವ ಭಾಷಣ ಮಾಡಿ ಕಾಂಗ್ರೆಸ್ ಮುಖಂಡರ ಹೆಸರು ಹೇಳಿ ಕೊಲ್ಲುವ ಮಾತು ಆಡ್ತಾರೆ. ಡಾ॥ ಮುಖರ್ಜಿ ಅವರಂಥ ಮುಖಂಡರು ಜನರನ್ನ ಉದ್ರೇಕಿಸುವಂಥ ಭಾಷಣಗಳನ್ನು ತಡೆದರೆ ಸರಿಹೋಗುತ್ತೆ ಅಂತ ಹೇಳಿ

ಕಳುಹಿಸಿದ್ದರು. ಡಾ॥ ಮುಖರ್ಜಿ ಸ್ಪಷ್ಟವಾಗಿ ಹೌದೆಂದು ಹೇಳಲಿಲ್ಲ, ಆ ಮಾತನ್ನು ಮರೆಸಿಬಿಟ್ಟರು. ಈ ಮಾತುಗಳು ಎಷ್ಟು ಗಂಭೀರವಾದುವೆಂಬ, ಅವರ ಸಂಸ್ಥೆಯಲ್ಲಿ ಎಂತಹ ದಾರುಣವಾದ ದುಷ್ಪರಿಣಾಮಗಳ ಸಿದ್ಧತೆ ನಡೆಯುತ್ತಿತ್ತೆಂಬುದರ ಕಲ್ಪನೆ ಅವರಿಗೆ ಇರಲಿಲ್ಲವೆನಿಸುತ್ತದೆ. ಪ್ಯಾರೆಲಾಲ್‌ಜೀ ನೋವಾಖಲಿಗೆ ಹಿಂದಿರುಗಬೇಕೆಂದಿದ್ದರು.

ಆದರೆ ಬಾಪೂಜಿ ಅವರನ್ನ ತಡೆದರು. 'ನಾನು ಸೇವಾಗ್ರಾಮಕ್ಕೆ ಹೋದಮೇಲೆ ಹೋಗುವಿರಂತೆ, ನಾನು ಪಾಕಿಸ್ತಾನಕ್ಕೆ ಹೊರಟಾಗ ನನ್ನ ಜೊತೆಗೆ ನೀವೂ ಬನ್ನಿ', ಎಂದರು.

ಹತ್ತೂವರೆಗಂಟೆಗೆ ಬಾಪೂಜಿ ಬಂಗಾಳಿ ಅಭ್ಯಾಸ ಮಾಡಿದರು. ಮಧ್ಯಾನ್ಹ ಮೌಲಾನಾಗಳು ಬಂದರು. ಬಾಪೂಜಿ, 'ನಾನು ಸರಿಯಾದ ಸಮಯಕ್ಕೆ ಸೇವಾಗ್ರಾಮಕ್ಕೆ ಹೋಗದಿದ್ದರೆ ಮಿಕ್ಕ ಕಾರ್ಯಕ್ರಮಗಳೆಲ್ಲಾ ಏರುಪೇರಾಗುತ್ತವೆ. ೧೪ ಫೆಬ್ರವರಿಯ ವೇಳೆಗೆ ಹಿಂದಿರುಗಿ ಬರಬೇಕು. ಆಮೇಲೆ ಪಾಕಿಸ್ತಾನಕ್ಕೆ ಹೋಗಲು ಸರಿಹೋಗುತ್ತೆ. ಆದರೆ ಇಲ್ಲಿಂದ ಸೇವಾಗ್ರಾಮಕ್ಕೆ ಹೊರಡುವುದಕ್ಕಾಗುತ್ತೋ ಇಲ್ಲವೋ ಅಂತ ಹೇಳುವುದು ಕಷ್ಟ, ಎಲ್ಲವೂ ದೇವರ ಕೈಲಿದೆ' ಎಂದರು.

ಮೌಲಾನ 'ನೀವು ಹೋಗಿ, ನೀವಿಲ್ಲದಿದ್ದಾಗ ದೆಹಲಿ ಹೇಗಿರುತ್ತದೆಂದೂ ತಿಳಿಯುತ್ತದೆ, ನೀವು ಹೋದಲ್ಲೆಲ್ಲಾ ನಮ್ಮ ಕೆಲಸವನ್ನೇ ಮಾಡ್ತಿರುತ್ತೀರಿ ಅಂತ ನಮ್ಮ ನಂಬಿಕೆ' ಎಂದರು.

ಯಾರೋ ಕೇಳಿದರು, 'ತಾರು ಕಳುಹಿಸಿ ಸೇವಾಗ್ರಾಮಕ್ಕೆ ಸೂಚನೆ ನೀಡಿದರೆ?'

ಬಾಪೂಜಿ, 'ಸುಮ್ಮನೆ ಹಣ ಏಕೆ ಹಾಳು ಮಾಡುತ್ತೀರಿ? ಇವತ್ತು ಸಂಜೆ ಪ್ರಾರ್ಥನೆಯಲ್ಲಿ ನಾನು ಘೋಷಣೆ ಮಾಡಿದರೆ, ನಾನು ತಲಪುವುದಕ್ಕೂ ಮೊದಲೇ ಪತ್ರಿಕೆಗಳ ಮೂಲಕ ಸೇವಾಗ್ರಾಮಕ್ಕೆ ಸುದ್ದಿ ತಲಪುತ್ತೆ' ಅಂದರು.

ಮಧ್ಯಾನ್ಹ ಎರಡು ಗಂಟೆಗೆ ಒಬ್ಬ ಪತ್ರಕರ್ತ ಕೇಳಿದ, 'ನೀವು ಫೆಬ್ರವರಿ ೧ನೇ ತಾರೀಕು ಸೇವಾಗ್ರಾಮಕ್ಕೆ ಹೋಗುತ್ತಿರುವಿರಂತೆ, ನಿಜವೇನು?'

ಬಾಪೂಜಿ, 'ಯಾರು ಹೇಳಿದರು?' ಎಂದರು.

ಗಾಂಧೀಜಿಯವರ ಪ್ರಶ್ನೆಗೆ ಉತ್ತರ ನೀಡುತ್ತಾ ಪತ್ರಕರ್ತ ಹೇಳಿದರು: 'ಪತ್ರಿಕೆಗಳಲ್ಲಿ ಮುದ್ರಿತವಾಗಿದೆ.'

ಬಾಪೂಜಿ ಉತ್ತರ ನೀಡಿದರು, 'ಪತ್ರಿಕೆಗಳಲ್ಲಿ ಗಾಂಧೀಜಿ ಫೆಬ್ರವರಿ ೧ರಂದು ಸೇವಾಗ್ರಾಮಕ್ಕೆ ಹೋಗುತ್ತಿದ್ದಾರೆಂದು ಸುದ್ದಿ ಇರುವುದು ನಿಜ, ಆದರೆ ಆ ಗಾಂಧಿ ಯಾರೋ ನನಗೆ ಗೊತ್ತಿಲ್ಲ' ಎಂದರು.

ನಾಲ್ಕು ಗಂಟೆಗೆ ಸರದಾರ್ ಪಟೇಲರು ಬಾಪೂಜಿಯನ್ನು ಭೇಟಿಯಾಗಲು ಬಂದರು, ಗಂಭೀರವಾಗಿ ಚರ್ಚೆ ನಡೆಸಿದರು. ಸರದಾರರು ಸರಕಾರದಿಂದ ಹೊರಗೆ

ಬರಲಿಷ್ಟಪಡುತ್ತಿದ್ದರು. ಬಾಪೂಜಿಯವರು, 'ಮೊದಲು ನಾನು ಕೂಡ ಇದೇ ಸರದಾರ್, ನೆಹರೂ ಇಬ್ಬರೂ ಹೊರಕ್ಕೆ ಬರಬೇಕು ಎಂದು ಯೋಚಿಸುತ್ತಿದ್ದೆ, ಆದರೆ ಈಗ ಇಬ್ಬರೂ ಸರಕಾರದಲ್ಲಿರಬೇಕೆಂದು ಸ್ಪಷ್ಟವಾಗಿ ಅನಿಸುತ್ತಿದೆ. ಈ ಸಂದರ್ಭದಲ್ಲಿ ಬೇರೆಯಾದರೆ ಅನರ್ಥ ಘಟಿಸುತ್ತದೆ, ಪ್ರಾರ್ಥನೆಯಲ್ಲೂ ಇದನ್ನೇ ಹೇಳುವವನಿದ್ದೆನೆಂದೂ' ಹೇಳಿದರು. 'ಆವಶ್ಯಕತೆ ಬಿದ್ದಲ್ಲಿ ನಿಮ್ಮಿಬ್ಬರ ಮತಭೇದ ದೂರವಾಗಲೆಂದು ನಾನು ಸೇವಾಗ್ರಾಮಕ್ಕೆ ಹೋಗುವುದನ್ನೂ ನಿಲ್ಲಿಸುತ್ತೇನೆ' ಎಂದರು. ಸರದಾರರಿಗೆ ಅವರು ನೀಡಿದ ಅಂತಿಮ ಆದೇಶ ಇದಾಗಿತ್ತು, ಅದಾದನಂತರ ವಿಚಾರ ಭೇದಗಳೆಷ್ಟೋ ಬಂದುವಾದರೂ ಸರದಾರರು ಸ್ವಪ್ನದಲ್ಲೂ ನೆಹರೂರವರ ಜೊತೆ ಬಿಡಲಿಲ್ಲ, ಕೊನೆಯವರೆಗೂ ಅವರಿಬ್ಬರೂ ಪರಸ್ಪರ ಸಮರ್ಪಿತರಾಗಿದ್ದರು. ಸರದಾರರೊಂದಿಗೆ ಮಾತನಾಡುವಾಗ ಸಮಯ ಓಡುತ್ತಿತ್ತು. ಪ್ರಾರ್ಥನೆಗೆ ಸಮಯವಾಯಿತು. ಬಾಪೂಜಿ, 'ನಾನಿನ್ನು ಪ್ರಾರ್ಥನೆಗಾಗಿ ಧಾವಿಸುತ್ತೇನೆ' ಎಂದರು.

ಆ ವೇಳೆಗೆ ಯಾರೋ, 'ಕಾಠಿಯಾವಾಡದಿಂದ ಇಬ್ಬರು ಕಾರ್ಯಕರ್ತರು ಭೇಟಿಯಾಗಲು ಬಂದಿದ್ದಾರೆ' ಎಂದು ಹೇಳಿದರು, ಬಾಪೂಜಿ ಹೇಳಿದರು, 'ಪ್ರಾರ್ಥನೆಯಾದ ನಂತರ ಬರಲು ಹೇಳು, ಬದುಕಿದ್ದರೆ ಭೇಟಿಯಾಗುತ್ತೇನೆ' ಎಂದರು.

ಬಾಪೂಜಿ ಪ್ರಾರ್ಥನೆಗೆ ಎಂದೂ ತಡ ಮಾಡಲು ಇಷ್ಟಪಡುತ್ತಿರಲಿಲ್ಲ. ಆದರೆ ಆ ದಿವಸ ಐದು–ಹತ್ತು ನಿಮಿಷ ತಡವಾಗಿತ್ತು. ಬಾತ್‌ರೂಂಗೆ ಹೋಗಿ ಕೈಕಾಲು ತೊಳೆದುಕೊಂಡು ಸ್ವಚ್ಛಗೊಂಡು ಬಾಪೂಜಿ ಪ್ರಾರ್ಥನೆಗೆ ಹೋದರು. ಬಾಪೂಜಿ ಬಹಳ ಬೇಗ ನಡೆಯಬಲ್ಲವರಾಗಿದ್ದರು. ಆ ದಿನ ಹೊತ್ತಾಗುತ್ತಿತ್ತಾದ್ದರಿಂದ ಧಾವಿಸುತ್ತಾ ಪ್ರಾರ್ಥನಾ ಭೂಮಿಯನ್ನು ತಲಪಿದರು. ಅಲ್ಲಿ ಕುಳಿತಿದ್ದ ಗುಂಪು ಬಾಪೂಜಿಗೆ ಅಭಿವಾದನೆ ಸಲ್ಲಿಸುವುದಕ್ಕಾಗಿ ಎದ್ದು ನಿಂತುಕೊಂಡಿತು. ಜನ ಸ್ವಲ್ಪ–ಸ್ವಲ್ಪ ಜರುಗಿ ಬಾಪೂಜಿಗೆ ಹೋಗಲು ಜಾಗ ಮಾಡಿಕೊಟ್ಟರು. ಬಾಪೂಜಿ ಕೂಡ ಎರಡೂ ಕೈ ಜೋಡಿಸಿ ಅವರಿಗೆ ನಮಸ್ಕಾರ ಮಾಡಿದರು. ಅಷ್ಟರಲ್ಲೇ ಯಾರೋ ಒಬ್ಬ ನೂಕುನುಗ್ಗಲು ಮಾಡುತ್ತಾ ಗುಂಪನ್ನು ಒಡೆದು ಅಲ್ಲಿಗೆ ಬಂದ. ಅವನು ಬಾಪೂಜಿಯ ಚರಣಗಳಲ್ಲಿ ಬೀಳುತ್ತಿರುವ ಹಾಗೆ ಅನಿಸಿತು, ಬಾಪೂಜಿ ಕಾಲು ಮುಟ್ಟಿಸಿಕೊಳ್ಳಲು ಸ್ವಲ್ಪವೂ ಇಷ್ಟಪಡುತ್ತಿರಲಿಲ್ಲ. ದೇವರ ಚರಣ ಸ್ಪರ್ಶವೊಂದೇ ಮಾಡಬೇಕು, ಮನುಷ್ಯನಾಗಿ ಬೇರೊಬ್ಬ ಮನುಷ್ಯನ ಕಾಲು ಮುಟ್ಟುವುದು ಈಶ್ವರನ ಎದುರಿಗೆ ಅಹಂಕಾರ ಎಸಗಿದ ಹಾಗೆ ಆಗುತ್ತದೆ. ಆದುದರಿಂದ ಜೊತೆಯಲ್ಲಿ ನಡೆಯುತ್ತಿದ್ದ ಮನು ಬಹನ್ ಕೈ ಅಗಲಿಸಿ ತಲೆ ಬಾಗುತ್ತಿದ್ದ ಆ ಮನುಷ್ಯನನ್ನು ತಡೆಯಲೆಳಸಿದಳು. ಆದರೆ ಆ ಮನುಷ್ಯ ಮನು ಬಹನನ್ನು ನೂಕಿ ಆಕೆಯನ್ನು ದೂಡಿದ, ನಮಸ್ಕಾರ

ಮಾಡುತ್ತಾ ಮುಗಿದ ಕೈಗಳಲ್ಲಿ ಪಿಸ್ತೂಲಿನ ಮೂರು ಗುಂಡುಗಳನ್ನು ಹೊರಡಿಸಿದ. ಮೊದಲ ಗುಂಡಿಗೆ ಬಾಪೂಜಿಯ ಕಾಲುಗಳು ಅಲುಗಾಡಿದವು. ಎರಡನೆಯ ಗುಂಡಿಗೆ ಬಾಪೂಜಿ 'ಹೇ ರಾಮ್!' ಎಂದು ಹೇಳಿ ಕೆಳಗೆ ಉರುಳಿದರು, ಮೂರನೆಯ ಗುಂಡಿನ ಅಗತ್ಯವಿರಲೇ ಇಲ್ಲ. ಆದರೆ ನಾಥೂರಾಮ್ ಗೋಡ್ಸೆ ಸರಿಯಾಗಿ ಕೆಲಸ ಮಾಡುವ ಅಭ್ಯಾಸವಿದ್ದ ವ್ಯಕ್ತಿ, ಆದುದರಿಂದ ಮೂರನೆಯ ಗುಂಡು ಹಾರಿಸಿ ಗಾಂಧಿ ಬದುಕದಿರುವಂತೆ ಗಟ್ಟಿ ಮಾಡಿಕೊಂಡ. ಬಾಪೂಜಿ ಭೂಮಿಯ ಮೇಲೆ ಉರುಳಿದ ನಂತರ ಜನರಿಗೆ ಏನೋ ಅಚಾತುರ್ಯ ಜರುಗಿತೆಂದು ತಿಳಿಯಿತು. ಬಾಪೂಜಿಯ ಬಿಳಿ ಸ್ವಚ್ಛವಾದ ಬಟ್ಟೆಯ ಮೇಲೆ ರಕ್ತವರ್ಣದ ಕುಸುಮದಂತೆ ಕಲೆ ಹರಡತೊಡಗಿತು, ಜನ ಡಾಕ್ಟರನ್ನು ಕರೆಕಳುಹಲಿಚ್ಛಿಸಿದರು. ಆದರೆ ಬಾಪೂಜಿಯವರ ಪ್ರಾಣಪಕ್ಷಿ ಯಾರನ್ನೂ ಕಾಯದೆ 'ಹೇ ರಾಮ್!' ನ ಅನಾದಿ ಘೋಷದೊಂದಿಗೆ ಪರಮಾತ್ಮನಲ್ಲಿ ಲೀನವಾಗಿ ಹೋಗಿತ್ತು. ಅಹಿಂಸೆ ಮತ್ತು ಸತ್ಯಕ್ಕಾಗಿ ಬಲಿದಾನದ ಉತ್ಕರ್ಷಪಡೆದು ಅವರು ಮುಕ್ತರಾಗಿದ್ದರು, ಜೀವನದುದ್ದಕ್ಕೂ ಮಾಡಿದ ಅವರ ಸಾಧನೆ ಸಫಲವಾಗಿತ್ತು, ಭಾರತವರ್ಷದ ಸ್ವರ್ಣಿಮ ನಕ್ಷತ್ರ ಎಂದೆಂದಿಗೂ ಅಸ್ತವಾಗಿ ಹೋಯಿತು.

* * * *

# ೪೦. ಕೊನೆಯ ಬೀಳ್ಕೊಡುಗೆ

ನಮ್ಮ ದೇಶದಲ್ಲಿ ಪ್ರಾರ್ಥನೆ ಮಾಡುವಾಗ ಒಂದು ನಿಮಿಷಕಾಲ ಮೌನವಿರುವ ಪದ್ಧತಿ ಇದೆ, 'ಹೇ ರಾಮ್!' ಎಂಬ ನಿಃಶ್ವಾಸದೊಂದಿಗೆ ಅಹಿಂಸೆಯ ಆ ಅಪ್ರತಿಮ ಪೂಜಾರಿ ಕೆಳಗೆ ಬೀಳುತ್ತಿದ್ದುದನ್ನು ನೋಡಿ ಅಲ್ಲಿದ್ದ ಪ್ರಾರ್ಥನೆಯ ಸಭಾಸದರೆಲ್ಲರೂ ಒಂದು ನಿಮಿಷ ಸ್ತಬ್ಧರಾದರು. ಅವರ ಧ್ವನಿ ತುಟಿಗಳ ಮೇಲೇ ಚಲಿಸಿ ನಿಃಶಬ್ದವಾಯಿತು. ವೈವಸ್ವತ ಮನುವಿನ ಒಬ್ಬ ಪುತ್ರನ ಅಕ್ಷಯ ಆತ್ಮಕ್ಕೆ ಅಭಿವಾದನೆ ಸಲ್ಲಿಸುವುದು ಸೂರ್ಯದೇವನಿಗೆ ಅಗತ್ಯವಾಗಿತ್ತು. ಸಾವಿರಾರು ವರ್ಷಗಳಲ್ಲಿ ಯಾವಾಗಲಾದರೊಮ್ಮೆ ಅಂತಹ ಪುಣ್ಯಾತ್ಮನ ಆಗಮನವಾಗುತ್ತದೆ, ಭೂಮಿಯ ಮೇಲೆ ಈ ಪುಣ್ಯಾತ್ಮನ ಕಾರ್ಯಕಲಾಪಗಳು ಮುಗಿದಿದ್ದವು. ಭಗವಾನ್ ಆದಿತ್ಯನಿಗೂ, ಈ ಮನುಷ್ಯರು ಎಂತಹ ಮೂರ್ಖರು, ದೇವದೂತನನ್ನೇ ಕೊಲೆಮಾಡಿಬಿಟ್ಟರಲ್ಲಾ ಎಂದೆನಿಸಿರಬಹುದು. ಆದರೆ ಕೊಲೆ, ಕಡಿ, ಕಾದಾಡುವುದು, ಜಗಳವಾಡುವುದು ಪ್ರೀತಿಸುವುದು, ಹುಟ್ಟುವುದು ಇವೆಲ್ಲವೂ ಅನಂತ ಕಾಲದಿಂದ ಮಾನವ ಪ್ರಕೃತಿಯಲ್ಲಿ ಇರುವ ಗುಣಗಳೇ. ಆದ್ದರಿಂದ ಗಾಂಧೀಜಿಯಂತಹ ಪವಿತ್ರಾತ್ಮನನ್ನು ತನ್ನ ದಿವ್ಯತೆಯಲ್ಲಿ ಕೂಡಿಸಿಕೊಂಡು ಮೋಕ್ಷ ನೀಡುವುದು ಆ ಸವಿತಾನಾರಾಯಣನ ಶಾಶ್ವತ ಕರ್ತವ್ಯವಾಗಿತ್ತು.

ಒಂದು ಕ್ಷಣಕಾಲ ವಿಮೂಢರಾಗಿದ್ದ ಜನ ಎಚ್ಚೆತ್ತರು. ಆ ವೇಳೆಗೆ ಎಲ್ಲವೂ ಮುಗಿದುಹೋಗಿತ್ತು. ದೇಶದ ಜನರಲ್ಲಿದ್ದ ಒಂದೇ ಒಂದು ಅಮೂಲ್ಯ ಸಂಪತ್ತು ಮುಗಿದುಹೋಗಿತ್ತು. ಆಗ ಚೀತ್ಕಾರ ಗಲಾಟೆ ಶುರುವಾಯಿತು ಕೊಲೆಗಾರನನ್ನ ಜನ ಅಲ್ಲೆ ಹಿಡಿದುಕೊಂಡರು. ಆ ಕಾಪುರುಷ, ನೀಚ, ಹಂತಕನನ್ನು ಪೋಲೀಸರ ವಶಕ್ಕೆ ಒಪ್ಪಿಸಿದರು. ವಿದ್ಯುತ್ತಿನ ವೇಗದಲ್ಲಿ ಈ ನಂಬಲಾಗದ ದುಷ್ಕೃತ್ಯದ ಸುದ್ದಿ ದೆಹಲಿಯಲ್ಲಿ, ದೇಶದಲ್ಲಿ ಹರಡಿತು. ದೆಹಲಿಯಲ್ಲಂತೂ ಹಾಹಾಕಾರ ಎದ್ದಿತು, ಸರದಾರ ಪಟೇಲರಿನ್ನೂ ತಮ್ಮ ಮನೆಗೆ ತಲಪಿರಲೂ ಇಲ್ಲ, ವಾಪಸ್ ಬಿಡಲಾ ಹೌಸ್‌ಗೆ ಹಿಂದಿರುಗಿ ಬಂದರು. ಅವರು ಶೋಕವಿಹ್ವಲರಾಗಿದ್ದರು, ಆದರೆ 'ವಜ್ರಾದಪಿ ಕಠೋರ, ಮೃದೂನಿ ಕುಸುಮಾದಪಿ' ಲೋಹ ಪುರುಷನ ಶೋಕ ಕೊನೆ ಇಲ್ಲದ್ದಾಗಿತ್ತು, ಅವರಿಗಾಗಿ ಕಣ್ಣೀರು ಸುರಿಸುವ ಸುಖ ಕೂಡ ಭಾಗ್ಯದಲ್ಲಿರಲಿಲ್ಲ, ಆದರೆ ಪರಮ ಪ್ರೇಮಿ ಗಾಂಧೀಸಮರ್ಪಿತ ಸರದಾರರ ತೀವ್ರ ಶೋಕ ನಿಃಶಬ್ದವಾಗಿ ಚೀತ್ಕಾರ

ಮಾಡುತ್ತಿತ್ತು. ಇದು ಅವರ ಗಂಭೀರವಾದ ಮುಖದಲ್ಲಿ ಎದ್ದು ಕಾಣುತ್ತಿತ್ತು. ನೆಹರೂಜಿ ಬಂದರು. ಈ ಮಹಾಪಾತಕವನ್ನ ಮೊದಲು ಅರ್ಥ ಮಾಡಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ, ಕಲ್ಪಿಸಲಾಗದ ಸತ್ಯ ಕಣ್ಣೆದುರು ನಿಂತಾಗ ಬಾಪೂಜಿಯ ಪಂಚೆಯಲ್ಲಿ ಮುಖವಿಟ್ಟು ಅತ್ತರು. ದೇವದಾಸ ಕಾಕಾ ಬಂದರು, ತನ್ನ ತಂದೆಯ ನಿಶ್ಚೇಷ್ಟ ಶರೀರದ ಮೇಲೆ ರಕ್ತನೋಡಿ ಬಾಪೂಜಿಯ ತೊಡೆಯ ಮೇಲೆ ತಲೆಇಟ್ಟು ಬಿಕ್ಕಿ-ಬಿಕ್ಕಿ ಅತ್ತರು. ಲಾರ್ಡ್ ಮೌಂಡ್‌ಬ್ಯಾಟನ್ ಅದೇ ದಿನ ಮಧ್ಯಾಹ್ನ ಮದ್ರಾಸಿನಿಂದ ಹಿಂದಿರುಗಿದ್ದರು. ಮೌಂಟ್‌ಬ್ಯಾಟನ್‌ರು ಬಿಡಲಾ ಹೌಸ್ ತಲಪಿದಾಗ ದುಃಖದಿಂದ ಸಂತಪ್ತರಾದ ಜನರ ಗುಂಪು ಕೂಡಿಕೊಂಡಿತ್ತು, ಬಿಡಲಾ ಹೌಸ್ ಒಳಕ್ಕೆ ಬರುವುದೇ ಕಷ್ಟವಾಗಿತ್ತು. ಯಾರೋ ಒಬ್ಬ ಯುವಕ 'ಇದು ಮುಸಲ್ಮಾನರ ಕೆಲಸ' ಎಂದು ಕಿರುಚಿದ, ಮೌಂಟ್‌ಬ್ಯಾಟನ್‌ಗೆ ಹಿಂದೀ ಬರುತ್ತಿರಲಿಲ್ಲ. ಆದರೂ ಈ ವಾಕ್ಯವನ್ನು ಅರ್ಥಮಾಡಿಕೊಂಡರು. ಅವರು ತಕ್ಷಣ ಬುದ್ಧಿ ಉಪಯೋಗಿಸಿ ಹೇಳಿದರು: 'ಬೇವಕೂಫ್, ಅವನು ಹಿಂದೂ ಅಂತ ಎಲ್ಲರಿಗೂ ಗೊತ್ತಿದೆ.' ಗವರ್ನರ್ ಜನರಲ್ ಜೊತೆಯಲ್ಲಿದ್ದ ಎ.ಡಿ.ಸಿ 'ಅವನು ಹಿಂದೂ ಅಂತ ನಿಮಗೆ ಹೇಗೆ ಗೊತ್ತು?' ಎಂದು ಕೇಳಿದ. ಮೌಂಟ್‌ಬ್ಯಾಟನ್, 'ಅವನು ಹಿಂದೂ ಆಗಿರಲೇ ಬೇಕು. ಮುಸಲ್ಮಾನ ಆದ ಅಂದರೆ ನಾವೆಲ್ಲರೂ ಪೂರ್ತಿ ನಾಶವಾಗಿ ಹೋಗುತ್ತೇವೆ' ಅಂದರು.

ಪಂಡಿತ ನೆಹರೂ ಕೋಪದಿಂದ ಏನು ಮಾಡಬೇಕೆಂಬುದೂ ತೋಚದೆ ಒಂದು ಮೂಲೆಯಲ್ಲಿ ಕುರ್ಚಿಯ ಮೇಲೆ ಕುಳಿತಿದ್ದರು. ಹೇಗೆ, ಏನು ಮಾಡುವುದು ಎಂಬ ಚಿಂತೆಯಲ್ಲೇ ಮುಳುಗಿದ್ದರು. ಅಷ್ಟರಲ್ಲಿ ಅವರು ತಟಕ್ಕನೆ ಎದ್ದು ಕುಳಿತರು, 'ಏನು ಮಾಡಬೇಕು ಅಂತ ಬಾಪೂಜಿಯನ್ನು ಕೇಳ್ತೀನಿ, ಇರು' ಅಂತ ಅವರಿಗನ್ನಿಸಿತು. ಆದರೆ ಅಲ್ಲಿ ಬಾಪೂ ಎಲ್ಲಿದ್ದರು? ಪರಮ ಶಾಂತಿಯ ದಿವ್ಯಪ್ರಭೆಯೊಂದಿಗೆ ಬಾಪೂಜಿಯ ಪ್ರಾರ್ಥಿವ ಶರೀರ ಮಾತ್ರ ಅಲ್ಲಿತ್ತು, ಈಗ ಆ ಸುಂದರ ಮಧುರ ಧ್ವನಿ ಎಂದೆಂದಿಗೂ ಮೌನವಾಗಿತ್ತು. ಆ ಮುಚ್ಚಿದ ಕಣ್ಣುಗಳಲ್ಲಿ ಹಾಸ್ಯ ಎಲ್ಲೋ ಕಳೆದುಹೋಗಿತ್ತು. ನೆಹರೂಜಿ ತಮ್ಮ ಸಹಚರ ಸರದಾರರ ಕಡೆ ನೋಡಿದರು. ಇಬ್ಬರೂ ಏನೂ ಹೇಳಲಾರದಾದರು. ಆದರೆ ಒಬ್ಬರನ್ನೊಬ್ಬರು ತಬ್ಬಿಕೊಂಡರು. ಶಬ್ದಗಳ ಮೂಲಕ ಪ್ರಕಟವಾಗದಿದ್ದ ಮೂಕಸಂವೇದನೆ ಪರಸ್ಪರ ಅಂಗ-ಪ್ರತ್ಯಂಗಗಳಲ್ಲಿ ಪ್ರಕಟವಾಯಿತು. ತಂದೆಯ ಹಾಗಿದ್ದ ಬಾಪೂಜಿ ಇದ್ದಾಗ ಇಬ್ಬರು ಮಹಾರಥಿಕರಿಗೂ ಮನಸ್ತಾಪ ಮಾಡಿಕೊಳ್ಳುವ ಹಕ್ಕಿತ್ತು, ವೈಚಾರಿಕ ಮತಭೇದಗಳನ್ನಿಟ್ಟುಕೊಳ್ಳುವ ಹಕ್ಕಿತ್ತು. ವಾತ್ಸಲ್ಯ ತುಂಬಿದ್ದ ತಂದೆಯ ನೆರಳಲ್ಲಿ ಮಕ್ಕಳು ಈ ಅಬೋಧತೆಯ ಆನಂದ ಕೂಡ ಪಡಬಹುದಾಗಿತ್ತು. ಆದರೆ ಈಗ ಬಾಪೂ ಇಲ್ಲವಾಗಿದ್ದರು. ಮನಸ್ತಾಪ ಬಂದಾಗ ಅವರ ಮನ ಒಲಿಸಲು ಯಾರೂ ಉಳಿದೇ ಇರಲಿಲ್ಲ. ಈಗ ಒಂಟಿಯಾಗಿ ಪ್ರಪಂಚದ ಜಟಿಲವಾದ ಜವಾಬ್ದಾರಿಗಳನ್ನು ಹೊರಬೇಕಾಗಿತ್ತು, ಆಗ ಇಬ್ಬರು

ಮಿತ್ರರೂ ಮಾತನಾಡದೆಯೇ ಜೊತೆಗೂಡಿ ದೇಶದ ಅತಿ ಭಾರದ ನೊಗವನ್ನು ತಮ್ಮ ಬೆನ್ನ ಮೇಲೆ ಹೊತ್ತು, ಇಬ್ಬರೂ ಒಂದಾಗಿ ಆ ಜವಾಬ್ದಾರಿಯನ್ನು ನಿರ್ವಹಿಸಿದರು. ಆ ರಾತ್ರಿ ಇಬ್ಬರೂ ಆಲ್ ಇಂಡಿಯಾ ರೇಡಿಯೋ ಮೂಲಕ ದೇಶ ಮತ್ತು ಪ್ರಪಂಚವನ್ನು ಸಂಬೋಧಿಸಿದರು.

ಪರಿವಾರದ ಪೂರ್ವಿಕರು ಮತ್ತು ಪ್ರೇಮದಿಂದ ಕೂಡಿದ ದೊಡ್ಡಣ್ಣನ ಹಾಗೆ ಮೌಂಟ್‌ಬ್ಯಾಟನ್‌ರು ಅಂತ್ಯಸಂಸ್ಕಾರದ ಸಂಪೂರ್ಣ ವ್ಯವಸ್ಥೆಯನ್ನು ತಾವೇ ಹೊತ್ತರು. ಲೆನಿನ್ ಹಾಗೆ ಮುಂಬರುವ ಪೀಳಿಗೆಗಳಿಗಾಗಿ ಬಾಪೂಜಿಯ ಶರೀರವನ್ನು ಸುರಕ್ಷಿತವಾಗಿಟ್ಟಿರಬೇಕೆಂದು ಮೌಂಟ್‌ಬ್ಯಾಟನ್ ಇಷ್ಟಪಟ್ಟರು. ಆದರೆ ಅದು ಹಿಂದೂಧರ್ಮಕ್ಕೆ ವಿರುದ್ಧವಾಗಿತ್ತು. ಜೊತೆಗೆ ತನ್ನ ಮೃತ್ಯು ಎಲ್ಲೇ ಆಗಲಿ, ಅಲ್ಲೇ ಅದರ ದಹನ ಕ್ರಿಯೆಯನ್ನು ಮುಗಿಸಬೇಕೆಂದು ಬಾಪೂಜಿ  ಕಠಿಣವಾಗಿ ಹೇಳಿದ್ದರು, ಪೂರ್ತಿ ಸಮಾಜ ಅವರ ಆಪ್ತಜನರಾಗಿತ್ತು. ಆದ್ದರಿಂದ ಯಾರನ್ನೂ ಕಾಯಲಿಲ್ಲ, ಇಲ್ಲದಿದ್ದರೆ ಸತ್ತನಂತರವೂ ಅವರಾತ್ಮ ತನ್ನ ಸಹಚರರನ್ನು ನಿಂದಿಸುತ್ತಿರುತ್ತದೆಯೆಂದು. ಕೊನೆಗೆ ಮಾರನೆಯ ದಿನ ೩೧ ಜನವರಿ ೧೯೪೮ರಂದು ಅವರ ಪಾರ್ಥಿವ ಶರೀರದ ಅಗ್ನಿ ಸಂಸ್ಕಾರಕ್ಕೆ ವ್ಯವಸ್ಥೆ ಮಾಡಿದರು. ಮೌಂಟ್‌ಬ್ಯಾಟನ್ನರು ಭಾರತ ಸರಕಾರದ ವಿಮಾನವನ್ನು ನಾಗಪುರಕ್ಕೆ ಕಳುಹಿಸಿ ನಮ್ಮ ತಂದೆ, ತಾಯಿ ಮತ್ತು ನನ್ನ ತಮ್ಮ ಕನು ಮತ್ತು ತಂಗಿ ಉಷಾ ಇವರುಗಳನ್ನು ದೆಹಲಿಗೆ ಕರೆಸಿಕೊಂಡರು. ಅವರು ಬೆಳಗಾಗುವುದಕ್ಕೆ ಮುಂಚೆ ದೆಹಲಿಗೆ ತಲಪಿದರು. ನಾನು ಬನಾರಸ್‌ನಲ್ಲಿ ಓದುತ್ತಿದ್ದೆ. ಬಾತ್‌ರೂಮ್‌ನಲ್ಲಿ ನುಗ್ಗಿ ನಾಲ್ಕೈದು ದಿನಗಳ ಬಟ್ಟೆಯನ್ನು ಛಪ್–ಛಪ್ ಅಂತ ಒಗೆಯುತ್ತಿದ್ದೆ. ಯಾರೋ ಜೋರಾಗಿ ನನ್ನ ಬಾಗಿಲು ತೆಗೆಸಿದರು. ಸಮಾಚಾರ ನೀಡಿದರು ನಾನು, 'ಸುಳ್ಳಿರಬೇಕು, ಹಾಗಾಗಿರಲು ಸಾಧ್ಯವಿಲ್ಲ' ಅಂದೆ. ಆದರೆ ಬನಾರಸ್ ಹಾಸ್ಟೆಲ್‌ನ ಒಂದೇ ಒಂದು ರೇಡಿಯೋನಲ್ಲಿ ಬರುತ್ತಿದ್ದ ಶೋಕಸಂಗೀತವು ನನ್ನನ್ನು ಸುಳ್ಳಾಗಿಸಿತು. ಡಾ॥ ರಾಧಾಕೃಷ್ಣನ್ ನಮ್ಮ ಕುಲಪತಿಗಳಾಗಿದ್ದರು. ಅವರು ನನ್ನ ಪೋಷಕರಾಗಿದ್ದರು. ನನ್ನನ್ನು ಭೇಟಿಯಾಗಲು ಹಾಸ್ಟೆಲ್ಲಿಗೆ ಬಂದರು. ಅವರು ಒಬ್ಬ ಸಭ್ಯ ವ್ಯಕ್ತಿಯನ್ನು ಜೊತೆ ಮಾಡಿ ಟ್ರೈನ್‌ನಲ್ಲಿ ದೆಹಲಿಗೆ ಕಳುಹಿಸಿದರು. ಭಾರತ ಸರಕಾರದ ವಿಮಾನ ಲಕ್ನೋದಿಂದ ಸರೋಜಿನಿ ನಾಯ್ಡುರವರನ್ನು ಕರೆತರಲು ಹೋಗಿತ್ತು. ದೆಹಲಿ ತಲುಪುವುದು ಕಷ್ಟವಾಗಿತ್ತು. ನಾನು ಯಾವಾಗ, ಎಲ್ಲಿ, ಹೇಗೆ, ಯಾರ ಜೊತೆ ಟ್ರೈನಿನಲ್ಲಿ ತಲುಪಿದೆನೋ ನನಗೊಂದೂ ಗೊತ್ತಿಲ್ಲ. ಯಂತ್ರದ ಹಾಗೆ ಓಡಾಡುತ್ತಿದ್ದೆ. ನಾನು ಸಂವೇದನೆಯನ್ನೇ ಕಳೆದುಕೊಂಡಿದ್ದೆ, ಅಳಲಿಲ್ಲ, ಏನೂ ಹೇಳಲಿಲ್ಲ, ಮಾರನೆಯ ದಿನ ಟ್ರೈನ್ ಯಮುನಾ ಬ್ರಿಜ್ ಮೇಲೆ ನಿಂತಿತು. ಗುಂಪಿನ ನಡುವೆ ಹೋಗಿ ಬರುವುದು ಅಸಾಧ್ಯವಾಗಿತ್ತು. ನಾನು ನಡೆದುಕೊಂಡೇ ಹೊರಟೆ. ಎಲ್ಲಿ ಹೋಗಬೇಕೆಂದೂ ಗೊತ್ತಿರಲಿಲ್ಲ. ಒಂದು

ಗಂಟೆಯ ಕಾಲ ಹಾಗೂ ಹೀಗೂ ಹಳ್ಳ-ತಿಟ್ಟಿನ ನಡುವೆ ಭಯಂಕರವಾದ ಜನಜಂಗುಳಿಯ, ಆ ಜನಪ್ರವಾಹದ ನಡುವೆ ನಾನೂ ಎಲ್ಲೋ ಹೋಗುತ್ತಿದ್ದೆ. ರಾಜಘಾಟ್‌ನಲ್ಲಿ ಸೇರಿದ್ದ ಜನರ ಗುಂಪಿನಲ್ಲಿ ನುಗ್ಗಿ ಮುಂದುವರಿಯುವುದು ಕೂಡ ಅಸಾಧ್ಯವಾಗಿತ್ತು. ಆದರೆ ಒಮ್ಮೊಮ್ಮೆ ತೀವ್ರ ವಿಷಾದದಿಂದ ಉಂಟಾದ ನಿರಾಶೆಯಲ್ಲಿ ಅದ್ಭುತವಾದ ಸಾಹಸ ಮೂಡುತ್ತದೆ. ನಾನು ಕೂಡ ಆ ಮಾನವಲೋಕದ ಗಟ್ಟಿ ಗೋಡೆಯೊಳಕ್ಕೆ ನುಗ್ಗಿದೆ. ಕಾಲುಗಳ ನಡುವೆ ಸ್ವಲ್ಪ ಜಾಗಸಿಗುತ್ತಿತ್ತು ಎಂದು ನಾನು ನೋಡಿದೆ. ಕೆಳಗೆ ಬಾಗಿ ಕಾಲುಹಾಕುತ್ತಾ ಹೊರಟು ಹೋದೆ. ಎಲ್ಲಾದರೂ ಬಿದ್ದಿದ್ದರೆ, ಸಮತೋಲನವನ್ನ ಕಳೆದುಕೊಂಡಿದ್ದರೆ, ಲಕ್ಷಾಂತರ ಚಪ್ಪಲಿಗಳ ತುಳಿತಕ್ಕೆ ಒಳಗಾಗಿ ನಾನಿಲ್ಲವಾಗುತ್ತಿದ್ದುದಂತೂ ಖಂಡಿತ. ಆದರೆ ನನಗೆ ಆ ಅಪಾಯದ ಕಡೆ ಗಮನವಿರಲಿಲ್ಲ, ಕೊನೆಗೂ ಚಿತೆಯ ಹತ್ತಿರದ ಭಾಗಕ್ಕೆ ತಲಪಿದೆ. ಅಲ್ಲಿ ನೆಹರೂಜಿ ಮತ್ತು ಸರದಾರರು ನನ್ನನ್ನು ಗುರುತಿಸಿದರು. ಮೌಂಟ್‌ಬ್ಯಾಟನ್ನರು ಅಲ್ಲೇ ಕುಳಿತಿದ್ದರು, ಆಗ ದೇವದಾಸ ಕಾಕಾ ಕಾಣಿಸಿದರು, ಅವರು ನನ್ನನ್ನು ತಬ್ಬಿಕೊಂಡು ನಮ್ಮ ತಂದೆಯ ಬಳಿಗೆ ಕರೆದೊಯ್ದರು, ತಂದೆ ಚಿತೆಯ ಬಳಿ ನಿಂತಿದ್ದರು, ಒಬ್ಬ ಪುರೋಹಿತರು ಅವರಿಗೆ ಕಪಾಲ ಕ್ರಿಯೆ ಮಾಡುವುದನ್ನು ಹೇಳಿಕೊಡುತ್ತಿದ್ದರು. ಆ ಜ್ವಾಲೆಯಿಂದ ಕೂಡಿದ ಚಿತೆಯ ನಡುವೆ ಇನ್ನೂ ಬಾಪೂಜಿಯ ಶರೀರದ ರೂಪುರೇಷೆಗಳು ಕಾಣಿಸುತ್ತಿದ್ದವು. ಮ್ಲಾನವದನರಾದ ನನ್ನ ತಂದೆಯ ದೃಢವಾದ ಮುಖ ಒಣಗಿ ಕಾಂತಿಹೀನವಾಗುತ್ತಿತ್ತು. ದೇವದಾಸ ಕಾಕಾ ಅಂತೂ ತೀವ್ರವಾದ ದುಃಖದಿಂದ ಕೂಡಿ ಗಂಭೀರವಾಗಿದ್ದರು. ನಮ್ಮ ತಂದೆ ಮಾತನಾಡದೆ ನನ್ನನ್ನು ತಬ್ಬಿಕೊಂಡರು. ಸಂವೇದನಾಶೂನ್ಯವಾಗಿದ್ದ ನನ್ನ ಹೃದಯ ಈಗ ಕರಗಿ ಕಣ್ಣಿಂದ ಹರಿದು ಹೊರಟಿತು. ಪ್ರಪಂಚದಲ್ಲಿ ನಾವೀಗ ಒಂಟಿಯಾಗಿದ್ದೆವು.

ನಂತರ ದೇವದಾಸ ಕಾಕಾ ಮತ್ತು ಲಕ್ಷ್ಮೀ ಕಾಕಿ ಇಬ್ಬರೂ ಬಾಪೂಜಿಯ ಮೃತ ಶರೀರಕ್ಕೆ ಸ್ನಾನ ಮಾಡಿಸುತ್ತಾರೆಂದು ಕೇಳಿದ್ದೆ. ಗುಂಡಿನ ಗಾಯವನ್ನು ನೋಡಲಾಗುತ್ತಿರಲಿಲ್ಲ. ಆ ಮಿಂಚುತ್ತಿದ್ದ ಕೋಮಲವಾದ ಚರ್ಮ ರಕ್ತ ಮತ್ತು ಮಣ್ಣಿಂದ ತೊಯ್ದಿತ್ತು, ಅದನ್ನು ಸ್ವಚ್ಛಗೊಳಿಸಿದೆವು. ಆದರೆ ಗಾಯದಿಂದ ನೋವಾಗದಿರಲೆಂದು ಅನಿಸುತ್ತಿತ್ತು, ಶರೀರ ಇನ್ನೂ ಒಣಗಿ ಕಟ್ಟಿಗೆಯಂತಾಗಿರಲಿಲ್ಲ, ಅದರಿಂದ ಸ್ನಾನ ಮಾಡಿಸುವುದು ಹೆಚ್ಚು ಕಷ್ಟವಾಗಲಿಲ್ಲ. ಅವರ ದೇಹಕ್ಕೆ ಚಂದನ ಲೇಪ ಮಾಡಿದರು, ಸ್ವಚ್ಛವಾದ ಖಾದಿ ಬಟ್ಟೆಗಳ ನಡುವೆ ಮಲಗಿಸಿದರು, ಆ ಶಾಂತ ಉದಾಸ ಮುಖದಲ್ಲಿ ಕ್ಷಮೆ, ಕರುಣೆ ಹೊರಮೂಡುತ್ತಿತ್ತು. ಭಯಂಕರವಾದ ಚಳಿಯ ರಾತ್ರಿಯಲ್ಲೂ ಶೋಕಮಗ್ನರಾಗಿ, ಹಸಿವು ಬಾಯಾರಿಕೆಯಿಂದ ಕೂಡಿದ ಬಡ, ಅರ್ಧನಗ್ನರಾಗಿದ್ದ ಜನ ಬಾಪೂಜಿಯ ದರ್ಶನಕ್ಕಾಗಿ ಬಿಡಲಾಹೌಸ್‌ಗೆ ನುಗ್ಗಿ ಬಂದಿದ್ದರು. ಒಮ್ಮೊಮ್ಮೆ 'ಮಹಾತ್ಮಾ ಗಾಂಧಿ ಕೀ ಜಯ್' ಎಂಬ ಧ್ವನಿ ಕೇಳಿಸುತ್ತಿತ್ತು,

ಆದರೆ ಹೆಚ್ಚಾಗಿ ಅಳು, ಅಳುವಿನ ಬಿಕ್ಕು, ಅಯ್ಯೋ ಎನ ಧ್ವನಿ– ಇವು ವಾತಾವರಣವನ್ನು ಸುಡುತ್ತಿದ್ದವು. ರಾತ್ರಿಯೆಲ್ಲಾ ದರ್ಶನಾರ್ಥಿಗಳ ಗುಂಪು ಬಂದು ಹೋಗುತ್ತಿತ್ತು. ಅಂದು ರಾತ್ರಿ ದೇಶದಲ್ಲಿ ಯಾರೂ ಬಹುಶಃ ನಿದ್ದೆ ಮಾಡಿರಲಿಲ್ಲ.

ಮಾರನೆಯ ದಿನ ಹನ್ನೊಂದೂವರೆ ಗಂಟೆಗೆ ಅಂತಿಮ ಯಾತ್ರೆ ಶುರುವಾಯಿತು. ಸೈನ್ಯದ ಒಂದು ದೊಡ್ಡ ಟ್ರಕ್ ಹೂ ಮತ್ತು ಬಾವುಟಗಳಿಂದ ತುಂಬಿ ಹೋಗಿತ್ತು, ಅದರ ಮೇಲೆ ತಿರಂಗಾ ಝಂಡಾದಲ್ಲಿ ಬಾಪೂಜಿಯ ಶರೀರವನ್ನು ಸುತ್ತಿಟ್ಟಿದ್ದರು. ಮಣಗಟ್ಟಲೆ ಹೂಗಳು ಟ್ರಕ್ಕನ್ನು ತುಂಬಿದ್ದವು, ಒಂದು ಕಡೆ ಸರದಾರ್ ಕುಳಿತಿದ್ದರು, ಮತ್ತೊಂದು ಕಡೆ ನನ್ನ ತಂದೆ, ಎದುರಿಗೆ ಕಾಕಾ ಮತ್ತು ಜವಾಹರಲಾಲಜೀ ನಿಂತಿದ್ದರು. ಆ ಟ್ರಕ್‌ನ ಇಂಜಿನನ್ನು ಒಮ್ಮೆಯೂ ನಡೆಸಬೇಕಾಗಲಿಲ್ಲ. ಗಟ್ಟಿಯಾಗಿದ್ದ ಒಳ್ಳೆ ದಪ್ಪವಾಗಿದ್ದ ನಾಲ್ಕು ಹಗ್ಗಗಳ ಮೂಲಕ ಪದಾತಿ ಸೈನ್ಯ, ವಾಯುಸೈನ್ಯ ಮತ್ತು ನೌಕಾ ಸೈನ್ಯದ ಎರಡು ನೂರು ಸೈನಿಕರು ಆ ವಿಶಾಲವಾದ ಅರ್ಥಿಯನ್ನು ಎಳೆಯುತ್ತಿದ್ದರು. ೪೦೦೦ ಸೈನಿಕರು, ೧೦೦೦ ಪೋಲಿಸ್ ಸಿಪಾಯಿಗಳು, ೧೦೦೦ ನೌಕಾದಳದ ಸೈನಿಕರು ಅರ್ಥಿಯ ಹಿಂದೆ–ಮುಂದೆ ನಡೆಯುತ್ತಿದ್ದರು. ಎದುರಿಗೆ ಗವರ್ನರ್ ಜನರಲ್‌ರ ರಕ್ಷಾದಳ ನಡೆಯುತ್ತಿತ್ತು. ಇಂಡಿಯಾ ಗೇಟ್ ಅಥವಾ ರಾಜಪಥ ಎಲ್ಲಿತ್ತು ಎಂದು ತಿಳಿಯುತ್ತಿರಲಿಲ್ಲ. ಎಲ್ಲಾ ಜಾಗಗಳಲ್ಲೂ ಜನ ಗಿಜಿಗಿಜಿ ತುಂಬಿದ್ದರು. ಸುಮಾರು ಹತ್ತು ಲಕ್ಷಕ್ಕೂ ಹೆಚ್ಚಿನ ಗುಂಪಿತ್ತು. ನಾಲ್ಕೂವರೆ ಗಂಟೆಗೆ ಅರ್ಥಿ ರಾಜಘಾಟನ್ನು ತಲಪಿತು. ಬಹಳ ಕಷ್ಟಪಟ್ಟು ಜನರನ್ನು ಹತೋಟಿಗೆ ತಂದರು. ೧೫ ಮಣ ಶ್ರೀಗಂಧದ ಸೌದೆ, ನಾಲ್ಕು ಮಣ ತುಪ್ಪ, ಎರಡು ಮಣ ಹವನ ಸಾಮಗ್ರಿ, ಧೂಪ, ಅಗರಬತ್ತಿ, ಒಂದು ಮಣ ತೆಂಗಿನಕಾಯಿ ಮತ್ತು ೧೫ ಕಿಲೊ ಕರ್ಪೂರ ಚಿತೆಯ ಜಾಗದಲ್ಲಿ ಸಂಗ್ರಹಿಸಿದ್ದರು. ಚೀಣಾದ ರಾಜದೂತ ವರಿಷ್ಠರಾಗಿದ್ದರಾದ್ದರಿಂದ ಅವರಿಂದ ಆರಂಭಿಸಿ, ಎಲ್ಲಾ ರಾಜದೂತರೂ ಬಾಪೂಜಿಯ ಮೃತದೇಹದ ಮೇಲೆ ಹೂ ಹಾಕಿದರು, ಆಗ ತಿರಂಗಾ ಝಂಡಾವನ್ನು ಸರಿಸಿದರು. ದೇವದಾಸ ಕಾಕಾ ಮತ್ತು ನಮ್ಮ ತಂದೆ ಆ ಪ್ರಿಯ ಶರೀರದ ಮೇಲೆ ಹೃದಯವನ್ನು ಗಟ್ಟಿ ಮಾಡಿಕೊಂಡು ಶ್ರೀಗಂಧದ ಸೌದೆಯನ್ನಿಟ್ಟರು, ಚಿತೆ ಸಿದ್ಧವಾಯಿತು, ಆಗ ವೈದಿಕ ಮಂತ್ರೋಚ್ಚಾರಣೆಯೊಂದಿಗೆ ನಮ್ಮ ತಂದೆ ರಾಮದಾಸ ಗಾಂಧಿ ಅಗ್ನಿಸಂಸ್ಕಾರವನ್ನು ನೆರವೇರಿಸಿದರು. ಎಲ್ಲರೂ ಒಂದು ನಿಮಿಷದ ಮೌನ ಶ್ರದ್ಧಾಂಜಲಿ ಅರ್ಪಿಸಿದರು. ಚಿತೆಯ ಕೆಂಪು–ಹಳದಿ ಮಿಶ್ರಿತವಾದ ಜ್ವಾಲೆ ಆಕಾಶವನ್ನು ಮುಟ್ಟತೊಡಗಿದಾಗ ಈ ಮಾನವ ಲೋಕ, 'ಮಹಾತ್ಮಾಗಾಂಧಿ ಕೀ ಜೈ,' ಘೋಷ ಮಾಡಿತ್ತು, ಅಥವಾ ದುಃಖಿತ ಹೃದಯಗಳು ಚೀತ್ಕಾರ ಮಾಡಿದ್ದುವು? ಅಗರಬತ್ತಿ ಧೂಪದ ಶ್ರೀಗಂಧ ಮಿಶ್ರಿತ ಸುಗಂಧ ಮೈಲುಗಳ ದೂರದವರೆಗೂ ಹರಡಿತ್ತು. ಶ್ಮಶಾನ ಭೂಮಿ

ದೇವಸ್ಥಾನದಂತೆ ಮಂಗಳವಾಗಿ ಪವಿತ್ರವಾಯಿತು. ಈ ಅಂತ್ಯ ಕ್ರಿಯೆ ಬಾಪೂಜಿಯ ಪಾರ್ಥಿವ ಶರೀರವನ್ನು ಭಸ್ಮಗೊಳಿಸಿತು. ಬಾಪೂಜಿ ಪಂಚಮಹಾಭೂತದಲ್ಲಿ ವಿಲೀನರಾದರು. 'ಅಸತೋ ಮಾ ಸದ್ಗಮಯ, ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ'ದ ವೈದಿಕ ಅರ್ಚನೆಯ ತುತ್ತತುದಿಯನ್ನು ಮುಟ್ಟಿತು. ನಾವೆಲ್ಲರೂ ನಮ್ಮ ಶೂನ್ಯವಾದ ಹೃದಯ ಮತ್ತು ಒಣಗಿದ ಕಣ್ಣುಗಳನ್ನು ಹೊತ್ತು ಮನೆಗೆ ಹಿಂದಿರುಗಿದೆವು. ಆದರೆ ದೇಶದ ಚೈತನ್ಯ ಅಲ್ಲೇ ರಾಜಘಾಟ್‌ನಲ್ಲೇ ಬಿದ್ದುಹೋಗಿತ್ತು. ಎರಡು ದಿನಗಳ ನಂತರ ನಮ್ಮ ತಂದೆ ಮತ್ತು ಕಾಕಾ ಮನೆಯ ಮಗ ರಾಮೂ ಮೋಹನ, ಕಾನ್ಹಾ ಮತ್ತು ಮಿಕ್ಕ ಹತ್ತಿರದ ಜೊತೆಗಾರರೊಂದಿಗೆ ರಾಜಘಾಟ್‌ಗೆ ಹೋದರು. ಮತ್ತು ಉಳಿದಿದ್ದ ಅಸ್ಥಿಯಾ ಹೂಗಳನ್ನೂ ಸಂಗ್ರಹಿಸಿ ತಂದರು. ಬಾಪೂಜಿ ಸಮಸ್ತ ದೇಶಕ್ಕೆ ಸೇರಿದ್ದವರು, ಆದ್ದರಿಂದ ಎಲ್ಲಾ ದೊಡ್ಡ ನಗರಗಳು, ಪ್ರಸಿದ್ಧ ನದಿಗಳು ಮತ್ತು ಸರೋವರಗಳಲ್ಲಿ ಬಾಪೂಜಿಯ ಅಸ್ಥಿಗಳನ್ನು ವಿಸರ್ಜಿಸಲು ತಾಮ್ರಕಲಶಗಳನ್ನು ತಲುಪಿಸಲಾಯಿತು. ಪ್ರಮುಖವಾದ ಅಸ್ಥಿಕಲಶವನ್ನು ಹನ್ನೆರಡನೆಯ ದಿನ ಸ್ಪೆಷಲ್ ಟ್ರೈನ್‌ನಿಂದ ಅಲಹಾಬಾದಿಗೆ ಕೊಂಡೊಯ್ದರು. ಅಲ್ಲೇ ಅಜ್ಜಿಯ ಅಸ್ಥಿಗಳನ್ನೂ ವಿಸರ್ಜಿಸಲಾಗಿತ್ತು. ಅಲ್ಲೇ ಸಾವಿರಾರು ವರ್ಷಗಳಿಂದ ಅಸಂಖ್ಯ ಹಿಂದೂಗಳು ಅವಶೇಷವನ್ನು ಪಯಸ್ವಿನೀ ಗಂಗಾ-ಯಮುನೆ ಮತ್ತು ಅಂತಃಸಲಿಲೆ ಸರಸ್ವತಿಯ ತ್ರಿವೇಣಿ ಸಂಗಮದಲ್ಲಿ ಹರಿಸಿಬಿಡುತ್ತಿದ್ದರು. ಕೊನೆಯಲ್ಲದು ಸಮುದ್ರಕ್ಕೆ ಸೇರುತ್ತಿತ್ತು. ರಾಜ ಅಥವಾ ಬಡವ, ಸಾಧು ಅಥವಾ ಲೂಟಿಕೋರ, ಬಡವ ಅಥವಾ ಸಾಹುಕಾರ, ಸ್ತ್ರೀ-ಪುರುಷ ಎಂಬ ಭೇದ ಮರೆತು ತಾಯಿ ಎಲ್ಲರಿಗೂ ಸಮಾನವಾಗಿ ತನ್ನ ಎದೆಯಲ್ಲಿ ಜಾಗ ನೀಡುತ್ತಾ ಬಂದಿದ್ದಾಳೆ. ಆ ಪುಣ್ಯಸಲಿಲೆ ಪ್ರಯಾಗರಾಜದ ಸಂಗಮಕ್ಕೆ ಬಾಪೂಜಿಯವರ ಅವಶೇಷಗಳನ್ನು ನಾವು ತೆಗೆದುಕೊಂಡು ಹೋದೆವು. ರೈಲುಗಾಡಿಯ ಮೂರನೆ ದರ್ಜೆಯ ಬೋಗಿಗಳೆಲ್ಲಾ ಕಿಕ್ಕಿರಿದು ತುಂಬಿದ್ದವು. ಇಡೀ ಪ್ರಯಾಣದ ಕಾಲದಲ್ಲಿ ರಾಮಧುನ್, ಗೀತಾಪಾಠ, ಕುರಾನ್ ಮತ್ತು ಸುಖಮಣಿ ಸಾಹಬ್ ಗ್ರಂಥ ಪಠನ ವಾಚನ ಜರುಗಿತು. ಇಲ್ಲೇ ನಾನು ಮೊದಲ ಬಾರಿ ಸಿಖ್ ಗ್ರಂಥಿಗಳಿಂದ 'ಗ್ರಂಥ ಸಾಹಬ್'ನ ವಾಚನ ಮತ್ತು ವಾಹೇ ಗುರೂಜಿಯ ಧುನ್ ಅನ್ನು ಕೇಳಿದ್ದು. ಟ್ರೈನ್‌ನ ಮಾರ್ಗದಲ್ಲಿ ಎರಡೂ ಕಡೆ ದೂರ-ದೂರದ ಹಳ್ಳಿಗಳಿಂದ ಜನ ಕಲಶದ ದರ್ಶನ ಮಾಡಲೆಂದೇ ಆ ತೀವ್ರವಾಗಿದ್ದ ಚಳಿಯಲ್ಲಿಯೂ ನಿಂತಿದ್ದರು. ಎಲ್ಲರ ಕಣ್ಣುಗಳಿಂದಲೂ ಕಣ್ಣೀರು ಸುರಿಯುತ್ತಿತ್ತು. ಬೆಳಿಗ್ಗೆ ಒಂಬತ್ತು ಗಂಟೆಗೆ ಅಲಹಾಬಾದ್ ಸ್ಟೇಷನ್‌ನಲ್ಲಿ ಉತ್ತರ-ಪ್ರದೇಶದ ಗವರ್ನರ್ ಸರೋಜಿನಿ ನಾಯ್ಡು, ನಮ್ಮ ತಾಯಿ ನಿಂತಿದ್ದರು. ಜವಾಹರಲಾಲಜೀ, ಸರದಾರ್ ಮತ್ತು ಮೌಂಟ್ ಬ್ಯಾಟನ್‌ರೂ ವಿಮಾನದಿಂದ ಅಲ್ಲಿ ತಲುಪಿ ಬಾಪೂಜಿಯ ಅಂತಿಮ ಸ್ವಾಗತಕ್ಕಾಗಿ ನಿಂತಿದ್ದರು. ಅಲಹಾಬಾದಿನ

ಪೂರ್ತಿ ವ್ಯವಸ್ಥೆ ನಮ್ಮ ತಾಯಿಯೇ ಸ್ವತಃ ಮಾಡಿಸಿದ್ದರು, ಆ ಪರಾಕ್ರಮಿ ರೋಗಿ ವೃದ್ಧೆಯ ಉಜ್ವಲ ಹಾಸ್ಯ ಅಂದು ಎಲ್ಲೋ ಕಳೆದು ಹೋಗಿತ್ತು.

ಸಂಗಮ ತಲಪುವ ಮಾರ್ಗದಲ್ಲಿ ಅಸ್ಥಿಕಲಶ ಎರಡು ನಿಮಿಷಗಳ ಕಾಲ ಚರ್ಚ್ ಮುಂದೆ ನಿಂತಿತ್ತು. ಅಲ್ಲಿಂದ ಬಾಪೂಜಿಯ ಪ್ರಿಯಭಜನೆ 'ಲೀಡ್ ಕೈಂಡ್ಲೀ ಲೈಟ್,' 'ಪ್ರೇಮಿಲ ಜ್ಯೋತಿ'ಯ ಸ್ವರ ವಾತಾವರಣವನ್ನು ಮೆದುಗೊಳಿಸುತ್ತಿತ್ತು. ಸಂಗಮದಲ್ಲಿ ಅಸ್ಥಿಕಲಶವನ್ನು ಆ ಹೂಗಳಿಂದ ಮುಚ್ಚಿ ಟ್ರಕ್‌ನಿಂದ ಹೂಗಳಿಂದ ಅಲಂಕೃತವಾದ ಒಂದು 'ಡೆಕ್' (ನೀರಿನಲ್ಲೂ ಚಲಿಸುವಂತಹದು) ಮೇಲೆ ಇಡಲಾಯಿತು. ನಮ್ಮ ತಂದೆ, ಚಿಕ್ಕಪ್ಪ, ಸರದಾರ್ ದಾದಾ, ಪಂಡಿತಜೀ, ಮೌಂಟ್‌ಬ್ಯಾಟನ್ ಮುಂತಾದವರು ಅದರಲ್ಲಿ ಕುಳಿತರು. ನಮ್ಮ ತಂದೆಯ ತೊಡೆಯ ಮೇಲೆ ಅಸ್ಥಿಕಲಶವಿತ್ತು, ನಾನೂ ಆ ಡೆಕ್‌ನಲ್ಲಿ ತಂದೆ ಮತ್ತು ಚಿಕ್ಕಪ್ಪನ ಜೊತೆ ಇದ್ದೆ. ಡೆಕ್ ತರಹದ ಮೋಟರ್ ಬೋಟ್ ನಮ್ಮನ್ನು ಕರೆದುಕೊಂಡು ಸಂಗಮದ ಮಧ್ಯಸ್ಥಲಕ್ಕೆ ತಲಪಿತು. ಮೋಟರ್ ಬೋಟ್ ಚಲಿಸಿದಾಗ ಅದರ ಇಂಜನ್ ಬಹಳ ಬಿಸಿಯಾಗುತ್ತದೆ. ಆ ಬೋಟ್‌ನಲ್ಲಿ ನಾವು ಇಷ್ಟೊಂದು ಜನ ಕುಳಿತಿದ್ದೆವಾದ್ದರಿಂದ ಮೌಂಟ್‌ಬ್ಯಾಟನ್, ನಮ್ಮ ತಂದೆ, ಕಾಕಾ ಮತ್ತು ಪಂಡಿತಜೀ ನೇರವಾಗಿ ಇಂಜನ್ ಮೇಲೇ ಕುಳಿತಿದ್ದರು, ನನ್ನ ಬರಿಗಾಲಿಗೆ ಆ ಶಾಖವನ್ನ ತಡೆಯುವುದಕ್ಕಾಗುತ್ತಿರಲಿಲ್ಲ. ಒಮ್ಮೆ ಈ ಕಾಲು, ಇನ್ನೊಮ್ಮೆ ಆ ಕಾಲು ಹೀಗೆ ನಾನು ಜಾರುತ್ತಾ ಇದ್ದೆ. ಮೌಂಟ್‌ಬ್ಯಾಟನ್, ಪಂಡಿತಜೀ, ನಮ್ಮ ತಂದೆ ಮತ್ತು ಕಾಕಾ ನಾಲ್ಕೂ ಜನ ತಮ್ಮ ಬಿಳಿ ಬಣ್ಣ, ಕೋಮಲವಾದ ರೋಝಾ ಬಣ್ಣದ ಹೆಜ್ಜೆಗಳನ್ನು ಆ ಕಾದ ಮೋಟರ್ ಬೋಟ್ ಮೇಲೆ ಇಟ್ಟು ನಿಶ್ಚಲವಾಗಿ ನಿಂತಿದ್ದನ್ನು ನಾನು ಆಗ ನೋಡಿದೆ. ಅವರ ಕಾಲುಗಳು ಸುಡುತ್ತಿದ್ದಿರಬೇಕಲ್ಲವೇ? ಅವರೆಲ್ಲರ ಶಿಸ್ತು, ಸಂಯಮ ಅದ್ಭುತವಾದುದಾಗಿತ್ತು. ಯಾರೊಬ್ಬರೂ ಒಂದು ಬಾರಿಯಾದರೂ ಹೆಜ್ಜೆಯನ್ನ ಮೇಲಕ್ಕೆತ್ತಲಿಲ್ಲ. ಮೌಂಟ್ ಬ್ಯಾಟನ್‌ರ ಕಾಲುಗಳಲ್ಲಿ ಖಂಡಿತ ಬೊಬ್ಬೆಗಳು ಬಂದಿರಬೇಕು. ಆದರೆ ನಾಲ್ಕು ಜನರಲ್ಲಿ ಯಾರೊಬ್ಬರೂ ಉಫ್ ಅಂತ ಕೂಡ ಅಂದಿರಲಿಲ್ಲ. ಸಂಗಮದ ಮಧ್ಯದಲ್ಲಿ ಶ್ವೇತ–ಧವಳ ಗಂಗಾ ಮತ್ತು ನೀಲ–ಶ್ಯಾಮಲ ಯಮುನಾ ಜಲ ಸೇರುವ ಜಾಗದಲ್ಲಿ ಕಾಕಾ, ತಂದೆ ಮತ್ತು ಜವಾಹರಲಾಲಜೀ ಅವರು ಅಸ್ಥಿಗಳನ್ನು ವಿಸರ್ಜಿಸಿದರು. ನೆಹರೂಜಿ ನಮ್ಮ ಪರಿವಾರದಲ್ಲಿ ಎಲ್ಲರಿಗಿಂತ ದೊಡ್ಡ ದೊಡ್ಡಪ್ಪ ಆಗಿದ್ದರು, ಬಾಪೂಜಿಯ ಅಸ್ಥಿವಿಸರ್ಜಿಸುವ ಅಧಿಕಾರ ಅವರಿಗಿತ್ತು. ಅಸ್ಥಿಗಳು ಬೀಳುತ್ತಿದ್ದಾಗ ನಾನು ನನ್ನ ಕೈಗಳನ್ನು ಅದರ ಕೆಳಗೆ ಒಡ್ಡಿದ್ದೆ ಅಸ್ಥಿಗಳನ್ನು ಕದಿಯಬೇಕೆಂಬ ಉದ್ದೇಶವೇನೂ ಇರಲಿಲ್ಲವಾದರೂ ಕೊನೆಯ ಬಾರಿ ನನ್ನ ಅಜ್ಜನ ಪಾರ್ಥಿವ ಅಂಶವನ್ನು ಮುಟ್ಟಿ ಕೃತಕೃತ್ಯಳಾಗಬೇಕೆಂಬ ಬಯಕೆ ಇದ್ದುದು

ನಿಜ. ಸುಮಾರು ಮುವತ್ತು ಲಕ್ಷ ಮಂದಿ ಸಂಗಮದಲ್ಲಿ ಉಪಸ್ಥಿತರಾಗಿದ್ದರು. ಬಾಪೂಜಿ ಎಲ್ಲರಿಗೂ ತಂದೆ ಆಗಿದ್ದವರು, ಅವರಿಗೆ ತರ್ಪಣ ಕೊಡುವುದು ದೇಶದ ಜನರಿಗೆ ಪುಣ್ಯದ ಕೆಲಸವಾಗಿತ್ತು, ಆದ್ದರಿಂದ ವಿಸರ್ಜನ ಕಾರ್ಯದಲ್ಲಿ ಎಲ್ಲ ಭಾರತೀಯರೂ ಒಂದಿಲ್ಲ ಒಂದು ರೀತಿಯಲ್ಲಿ ಅಲ್ಲಿಗೆ ಬಂದಿದ್ದರು.

ಅಸ್ಥಿ ವಿಸರ್ಜನೆಯಾದ ನಂತರ ಜವಾಹರಲಾಲಜೀ ನಮ್ಮನ್ನೆಲ್ಲಾ ಆನಂದ ಭವನಕ್ಕೆ ಕರೆದುಕೊಂಡು ಹೋದರು. ಅಲ್ಲಿ ಇಂದಿರಾಜೀ ನಮಗೆಲ್ಲ ಸ್ನಾನಕ್ಕೆ ವ್ಯವಸ್ಥೆ ಮಾಡಿದರು. ನಾವು ಸ್ವಲ್ಪ ತಿಂದೆವು ಮತ್ತು ಕಾಕಾ, ಕಾಕಿ ಮತ್ತು ನಮ್ಮ ತಂದೆ ದೆಹಲಿಗೆ ಹಿಂದಿರುಗತೊಡಗಿದರು. ನಾನು ಬನಾರಸ್‌ಗೆ ಹೋಗಬೇಕಾಗಿತ್ತು, ಅದರಿಂದ ನನ್ನ ಮಾರ್ಗ ಬೇರೆಯದಾಗಿತ್ತು. ಈ ಬಾರಿ ತಂದೆ, ಮತ್ತು ಕಾಕಾನನ್ನು ಬೀಳ್ಕೊಡುವಾಗ ಮನಸ್ಸಿಗೆ ಕಷ್ಟವಾಯಿತು, ಈ ಗಹನವಾದ ಸಂಸಾರಸಾಗರದಲ್ಲಿ ನನ್ನ ಪುಟ್ಟ ದೋಣಿ ಅದೊಂಟಿಯಾಗಿತ್ತು. ನಾನು ನನ್ನ ಪರಿವಾರದಲ್ಲಿ ಎಲ್ಲರಿಗಿಂತ ಏಕಾಂತ ಪ್ರಿಯೆಯಾದ, ಸುಂದರವಾಗಿಲ್ಲದ, ಅಕುಶಲ, ತಿಳುವಳಿಕೆ ಇಲ್ಲದ ಹುಡುಗಿ ಎಂಬ ಕಾರಣದಿಂದ ನಾನು ತಾತನ ಜೊತೆ ಜಗಳ ಮಾಡಿ ಬನಾರಸ್ ಹಿಂದೂ ವಿಶ್ವ ವಿದ್ಯಾಲಯದಲ್ಲಿ ಓದುವುದಕ್ಕಾಗಿ ಹೋಗಿದ್ದೆ. ಬಿ.ಎ. ಪಾಸ್ ಮಾಡಿ ಮಹಾದೇವ ಕಾಕಾ ಹಾಗೆ ಸುಶಿಕ್ಷಿತಳಾಗಿ ನಾನು ಕೂಡ ಬಾಪೂಜಿ ಸೆಕ್ರೆಟರಿ ಆಗಬೇಕೆಂದು ಆಸೆ ಪಟ್ಟಿದ್ದೆ. ಬಾಪೂಜಿ ಕೊನೆಯ ನಾಲ್ಕು ವರ್ಷಗಳಲ್ಲಿ ಪ್ರತಿಯೊಂದು ಸಂದರ್ಭದಲ್ಲೂ ನನಗೆ ತರಬೇತಿ ಕೊಡಬೇಕು ಅವರ ಜೊತೆ ನಾನು ಕೆಲಸ ಮಾಡಲಿ ಅಂತ ನನ್ನನ್ನ ತಮ್ಮ ಹತ್ತಿರ ಕರೆಸಿಕೊಂಡಿದ್ದರು. ಆದರೆ ನಾನು ಮೂರ್ಖಬುದ್ಧಿಯವಳೂ, ಕಾಲೇಜಿನ ಡಿಗ್ರಿ ಬಿಟ್ಟರೆ ನನ್ನ ಉದ್ಧಾರ ಆಗಲ್ಲ ಅಂತ ತಿಳಿದುಕೊಂಡು ಪ್ರತಿಯೊಂದು ಬಾರಿಯೂ ಅವರ ಪ್ರಸ್ತಾಪವನ್ನು ನಾನು ಮುಂದೂಡುತ್ತಿದ್ದೆ. 'ಒಂದು ಸಾರಿ ಬಿ.ಎ. ಆಗಿಬಿಟ್ಟರೆ ಆಮೇಲೆ ನಿಮಗೆ ಜೀವನಪೂರ್ತಿ ಸಮರ್ಪಿತಳಾಗಿರುತ್ತೇನೆ. ನಿಮ್ಮ ಕೆಲಸ ಮಾಡ್ತೀನಿ. ಕೆಲಸ ಮತ್ತು ಪ್ರಪಂಚದ ಮೋಹಕ್ಕೆ ಬೀಳುವುದಿಲ್ಲ' ಅಂತ ಹೇಳ್ತಾನೇ ಇದ್ದುಬಿಟ್ಟೆ. ನಮ್ಮಜ್ಜನದು ತುಂಬಾ ಉದಾರ ಮನಸ್ಸು. ಅವರು ನನ್ನ ಅಬೋಧ ಮನಸ್ಸನ್ನು ಅಪಹಾಸ್ಯ ಮಾಡಲಿಲ್ಲ. ನನಗೆ ಪ್ರೀತಿಯನ್ನೇ ಕೊಟ್ಟರು. ನಾನು ಮೂರ್ಖಳು, ಇತಿಹಾಸ ಓಡಿಕೊಂಡು ಹೋಗತ್ತಾ ಇದೆ, ನನಗಾಗಿ ಕಾಲಚಕ್ರ ನಿಲ್ಲುತ್ತಿರಲಿಲ್ಲ. ನನ್ನ ವಯಸ್ಸಾದ ಅಜ್ಜ ಯಾವಾಗಲಾದರೂ ಹೊರಟು ಹೋಗಬಹುದು ಅಂತ ಅರ್ಥ ಮಾಡಿಕೊಳ್ಳಲಿಲ್ಲ. ನಮಗಷ್ಟೇ ಅಲ್ಲ, ದೇಶದಲ್ಲಿ ಯಾರಿಗೂ ಬಾಪೂಜಿ ಒಂದು ದಿನ ಹೊರಟುಬಿಡುತ್ತಾರೆ ಅಂತ ಅನಿಸುತ್ತಲೇ ಇರಲಿಲ್ಲ, ನಾವು ನಮ್ಮ ದೇಶದ ಬಾಪೂ ಅವರ ಪೈತೃಕ ಪ್ರೀತಿಯಿಂದ ವಂಚಿತರಾಗ್ತೀವಿ ಅಂತ ಅನಿಸುತ್ತ ಇರಲಿಲ್ಲ. ನಮ್ಮಜ್ಜ ಶಾಶ್ವತವಾಗಿರುತ್ತಾರೆ ಅನ್ನುವ ಭ್ರಮೆಯಲ್ಲಿ ನನಗೆ ಏನೂ ತಿಳಿಯುತ್ತಿರಲಿಲ್ಲ. ಅವರಿಲ್ಲದ ಜೀವನದ ಕಲ್ಪನೆ ನನಗಿರಲಿಲ್ಲ. ನಾನು ಬಿ.ಎ. ಪಾಸು ಮಾಡಿಕೊಂಡು ಬಾಪೂಜಿಗೆ ನನ್ನ ಸಮರ್ಪಣೆ–ಸ್ಫೂರ್ತಿಯಿಂದ

ಅವರನ್ನ ಚಕಿತಗೊಳಿಸುತ್ತೀನಿ, ಚಿಕ್ಕಂದಿನ ಎಲ್ಲಾ ನೋವು, ಸಮಾಜದ ತಿರಸ್ಕಾರ ಇದನ್ನೆಲ್ಲಾ ಒಂದೇ ಏಟಿಗೆ ಕಿತ್ತೊಗೆದು ಬಿಡ್ತೀನಿ ಅಂತ ಭಾವಿಸಿದ್ದೆ. ಇಡೀ ಪರಿವಾರದಲ್ಲಿ ನಾನೇ ಎಲ್ಲರಿಗಿಂತ ಹೆಚ್ಚು ಓದಿ ಬರೆದವಳು ಅಂತ ಬೇರೆ ಮನಸ್ಸಿನಲ್ಲಿತ್ತು. ನಮ್ಮ ತಂದೆ, ನಮ್ಮ ಚಿಕ್ಕಪ್ಪನೂ ಓದಿದವರಾಗಿರಲಿಲ್ಲ. ಸ್ಕೂಲಿಗೆ ಹೋಗಿಯೇ ಇರಲಿಲ್ಲ ಅವರಿಗೇನು ಗೊತ್ತು, ಪರೀಕ್ಷೆ ಅನ್ನುವುದು ಎಂಥ ಭಯಂಕರವಾದ ವಸ್ತು ಅಂತ, ನನ್ನ ತಂದೆಯಾದರೋ ಕೇವಲ ಮೆಟ್ರಿಕ್ ಪಾಸು ಮಾಡಿದ್ದವರು, ಎಂಥ ದಯನೀಯವಾದ ಅಹಂಕಾರ ! ಎಂಥ ಘೋರ ಅಜ್ಞಾನ ! ಅಹಂಕಾರದ ಆ ಮಹಾಪಾತಕದಿಂದ ಒಂದೇ ಒಂದು ವಸ್ತುವಿನಿಂದಾಗಿ ನನಗೆ ಮುಕ್ತಿ ಸಿಕ್ಕಿತ್ತು– ಅದು ಹೇಳತೀರದಷ್ಟು ಪ್ರೀತಿ ದೊರೆತಿತ್ತು; ಮತ್ತು ಸಮರ್ಪಿತಳಾಗುವ ಯೋಗ್ಯತೆಯಾಗಿತ್ತು, ಆದರೆ ಮನಸ್ಸಿನ ಗುಡಿ ಗೋಪುರ ಮನಸ್ಸಿನಲ್ಲೇ ಉಳಿದು ಹೋಯಿತು. ನಾನು ಖಾಲಿಯಾಗಿ ಹೋದೆ, ಅಪ್ಪ–ಕಾಕಾ ಹೊರಟುಹೋದರು. ಇಂದಿರಾಜಿ ನನಗೆ ತನ್ನ ಪಾಪೂನ ಕೊಠಡಿಯನ್ನ ಮಲಗಲು–ಇರಲು ಕೊಟ್ಟರು. ಮಿಕ್ಕ ಕೊಠಡಿಗಳಲ್ಲೆಲ್ಲಾ ಅತಿಥಿಗಳು ತುಂಬಿರುತ್ತಿದ್ದರು. ಅದರಿಂದ ಜವಾಹರ ಲಾಲಜೀ ಕೊಠಡಿಯಲ್ಲಿ ನಾನು ಮಲಗಲು ವ್ಯವಸ್ಥೆ ಮಾಡಿದರು. ನಾನು ಆಯಾಸದಿಂದ ತೀರ ದಣಿದಿದ್ದೆ, ಆದರೆ ರಾತ್ರಿ ಒಂದು ಗಂಟೆಯವರೆಗೂ ಅಲೆದಲೆದು ಪಂಡಿತಜೀಯ ಕೊಠಡಿಯನ್ನು ಪೂರ್ತಿ ನೋಡಿದೆ, ಟೇಬಲ್‌ನ ಗಾಜಿನ ಕೆಳಗೆ ಫೋಟೋ ಮತ್ತು ಸುಭಾಷಿತಗಳನ್ನು ನೋಡಿ ಓದಿದೆ, ಪುಸ್ತಕಗಳಿಂದ ತುಂಬಿದ್ದ ಗಾಜಿನ ಬೀರುಗಳು, ಅವನ್ನೂ ತೆರೆದು ನೋಡಿದೆ. ಎಲ್ಲೂ ಬೀಗ ಹಾಕಿರಲಿಲ್ಲ. ನಾನು ಎಲ್ಲವನ್ನೂ ನೋಡಿ ಮನಸ್ಸಿನಲ್ಲಿ ಅವನ್ನು ಸ್ಥಿರಗೊಳಿಸಿದೆ, ಬಾತ್‌ರೂಮ್‌ನಲ್ಲಿ ರಾತ್ರಿ ಪುನಃ ತಣ್ಣೀರಿನಲ್ಲಿ ಸ್ನಾನ ಮಾಡಿದೆ. ನಂತರ ಒಂದು ಸಾದಾ ಮಂಚದ ಮೇಲೆ ಮಲಗಿದೆ. ಬೆಳಿಗ್ಗೆ ಇಂದಿರಾಜೀಯ ಮಕ್ಕಳ ಜೊತೆ ಅವರು ನನಗೆ ಒಳ್ಳೆಯ ಪೂರ್ಣ ಉಪಾಹಾರವನ್ನು ನೀಡಿದರು, ತಿನ್ನುವ ಇಚ್ಛೆ ಇರಲಿಲ್ಲ, ಆದರೆ ಅವರು ಬಲವಂತ ಮಾಡಿ ಹಾಲು ಮತ್ತು ಅಲಹಾಬಾದಿನ ಚಿಕ್ಕ ಕುರಂ ಅನ್ನುವ ಜಿಲೇಬಿಯ ತಿಂಡಿ ನೀಡಿದರು. ಟೋಸ್ಟ್–ಬೆಣ್ಣೆ, ಜಾಮ್ ಇದ್ದೇ ಇತ್ತು, ಕೆಲವು ಹಣ್ಣುಗಳೂ ಇದ್ದವು. ಆದರೆ ಹಾಲು–ಜಲೇಬಿಯ ಉಪಾಹಾರ ಒಳ್ಳೆಯದು ಅದರಿಂದ ಅರ್ಧ ತಲೆನೋವು ದೂರವಾಗುತ್ತೆ ಅಂತ ನಾನು ಆ ದಿನ ಇಂದಿರಾಜೀಯಿಂದ ಕಲಿತೆ. ಅವರು ಬಹಳ ಪ್ರೀತಿಯಿಂದ ನನಗಾಗಿ ಒಂದು ಮೋಟರುಗಾಡಿ ತರಿಸಿ ನನ್ನನ್ನು ಹಿಂದಕ್ಕೆ ಬನಾರಸ್‌ನಲ್ಲಿನ ನನ್ನ ಹಾಸ್ಟೆಲ್‌ಗೆ ಕಳುಹಿಸಿಕೊಟ್ಟರು.

ಫೆಬ್ರವರಿಯ ತೀವ್ರವಾದ ಚಳಿಯಲ್ಲಿ ನಾನು ನನ್ನ ಶಾಲನ್ನು ಅಲ್ಲೇ ಮರೆತು ಬಂದಿದ್ದೆ. ಆದರೆ ಹದಿನೆಂಟು ವರ್ಷದ ಹರೆಯದಲ್ಲಿ ಚಳೀ ಹೆಚ್ಚು ತಾಕುವುದಿಲ್ಲ. ಬನಾರಸ್‌ಗೆ ಹೋದ ನಂತರ ಬಾಪೂಜಿ ಇನ್ನು ನಮ್ಮ ನಡುವೆ ಇಲ್ಲ ಅಂತ

ನನಗನಿಸಲೇ ಇಲ್ಲ, ನಿರಂತರವಾಗಿ ಅವರ ಜೊತೆ ಇರುವ ಅಭ್ಯಾಸ ನನಗಿರಲೇ ಇಲ್ಲ. ಆದರೆ ಹತ್ತು–ಹದಿನೈದು ದಿನಗಳಿಗೊಮ್ಮೆ ಅವರ ಪತ್ರ ಸಿಗುವ ಅಭ್ಯಾಸವಿತ್ತು, ನಾನು ಆಗಾಗ್ಗೆ ಬಾಪೂಜಿ ಪತ್ರ ಏಕೆ ಬರುತ್ತಿಲ್ಲವೆಂದು ಕಾದು ಕುಳಿತಿರುತ್ತಿದ್ದೆ. ಆದರೆ ಈಗ ಆ ರೀತಿಯಲ್ಲಿ ಕುಡಿಕೆಯಲ್ಲಿ ಸಮುದ್ರವನ್ನು ತುಂಬುತ್ತಿದ್ದ ಅಜ್ಜಿ ಇರಲಿಲ್ಲ, ಅವರಿದ್ದಾಗ, ಎಷ್ಟೇ ಪುರಸೊತ್ತು ಇಲ್ಲದಿದ್ದಾಗಲೂ ನನ್ನ ಪತ್ರಕ್ಕೆ ಉತ್ತರ ನೀಡುತ್ತಿದ್ದರು. ನಾನಂತೂ ತೀರ ಪೆದ್ದು. ಮಧ್ಯದಲ್ಲಿ ಒಂದೊಂದು ಸಾರಿ ಬೈಗುಳ ಕೂಡ ಸಿಗುತ್ತಿತ್ತು, ಆದರೆ ಆ ಸಂಪೂರ್ಣ ಪ್ರೇಮದ ರತ್ನಾಕರ(ಸಾಗರ)ದಲ್ಲಿ ಆ ಬೈಗಳು ಸ್ಫೂರ್ತಿ ನೀಡುವ ಅಲೆಗಳ ಹಾಗಿತ್ತು, ನನಗೆ ಆಗಿಂದಾಗ್ಯೆ ಮಾರ್ಗದರ್ಶನ ಸಿಗುತ್ತಿತ್ತು. ಆ ಬೈಗುಳ ಕಟುವಾಗಿರುತ್ತಿರಲಿಲ್ಲವಾದ್ದರಿಂದ ಬೈಗುಳ ಕೂಡ ಮಧುರವಾಗಿರುತ್ತಿತ್ತು.

ಬಾಪೂಜಿಯ ಸಾವಿನಿಂದ ಹಿಂದೂ ಮಹಾಸಭೆಗೆ ಏನು ಸಿಕ್ಕಿತು ಅಂತ ನಾನು ಎಷ್ಟೋ ಸಾರಿ ಯೋಚಿಸುತ್ತೇನೆ. ಸಾವರ್‌ಕರ್ ಅಂತೂ ಬಹಳ ಪರಾಕ್ರಮಿಯಾಗಿದ್ದ ವ್ಯಕ್ತಿ, ಅವರಿಗೆ ಭಾರತದ ಬಗ್ಗೆ ಅನುರಾಗವಿತ್ತು, ಹಿಂದೂ ಧರ್ಮದ ಬಗ್ಗೆ ನಿಷ್ಠೆ ಇತ್ತು, ಇಷ್ಟೆಲ್ಲಾ ಆಗಿದ್ದೂ ಭಾರತ ಭೂಮಿಗಾಗಿಯೇ ಸಮರ್ಪಿತನಾಗಿದ್ದ ಒಬ್ಬ ಸೇವಕನನ್ನ ಅವರು ಕೊಲ್ಲಿಸಿದ್ದು ಏಕೆ? ಭಾರತ ಭೂಮಿ ಇಷ್ಟೊಂದು ವಿಶಾಲವಾಗಿದೆ. ಅದರಲ್ಲಿ ಸಮಾನ ಯೋಗ್ಯತೆ ಇಟ್ಟುಕೊಂಡ ಅನೇಕರು ಸೇವಕರನ್ನು ನಿಭಾಯಿಸಬಹುದಾಗಿತ್ತು.

ಈ ತ್ಯಾಗದಿಂದ ಹಿಂದೂಧರ್ಮದ ನಮ್ಮ ದೇಶ ಉಳಿದುಕೊಂಡಿದೆಯೇನು? ಇನ್ನೇನೂ ಮಾಡುವುದಕ್ಕಾಗದಿದ್ದರೂ ಬಾಪೂಜಿ ದೇಶದಲ್ಲಿ ಎಲ್ಲಾ ಕಡೆಗೆ ಹೋಗುತ್ತಿದ್ದರು, ಹೋಗಿ ದೇಶದ ಜನರಿಗೆ, ಇನ್ನೇನೂ ಇಲ್ಲವೆಂದರೂ ನಾಗರಿಕನ ಕರ್ತವ್ಯ ಕುರಿತ ವ್ಯವಹಾರವನ್ನು ಕಲಿಸುತ್ತಿದ್ದರು; ಯುವಕರಿಗೆ ಭವಿಷ್ಯದ ಜವಾಬ್ದಾರಿ ಹೊರುವ ಶಿಕ್ಷಣ ನೀಡುತ್ತಿದ್ದರು; ದೇಶಸೇವೆಯ ಮಾರ್ಗದಲ್ಲಿ ಆ ಯುವಕರನ್ನು ಮುಂದಕ್ಕೆ ತರುತ್ತಿದ್ದರು, ಅಥವಾ ರಾಜಕೀಯದ ಸರಿಯಾದ ದಿಕ್ಕು ಇದು ಅಂತ ತಿಳಿಸುವುದಕ್ಕೆ ಅವರಿಗೆ ಅವಕಾಶ ಸಿಗುತ್ತಿತ್ತು, ಅದರಿಂದ ಕಾಂಗ್ರೆಸ್ ಸಂಸ್ಥೆಯ ಸ್ವರೂಪ ಬದಲಾಗಿ ದೇಶದಲ್ಲಿ ನಿಜವಾದ ಗಣತಂತ್ರ ಸ್ಥಾಪನೆ ಆಗುವಂತೆ ಅದನ್ನು ಆರಂಭಿಸುತ್ತಿದ್ದರು. ಕೊನೆಯಲ್ಲಿ ಪಾಕಿಸ್ತಾನಕ್ಕೆ ಹೋಗಿ ಅಲ್ಲಿ ದೀನರು, ದುಃಖಿತರು, ಸಂತಪ್ತರೂ, ಹಾಳಾಗಿರುವವರೂ ಆದ ಹಿಂದೂ–ಸಿಖ್ಖರಿಗೆ ಆಶ್ವಾಸನೆ ನೀಡುತ್ತಿದ್ದರು. ಧೈರ್ಯ, ಆಸೆ ನೀಡಿ ಪ್ರೇರಣೆ ನೀಡುತ್ತಿದ್ದರು, ಅದರಿಂದ ಈ ದೇಶ ಮತ್ತು ಹಿಂದೂಗಳ ಒಂದು ದೊಡ್ಡ ಕೆಲಸ ನೆರವೇರುತ್ತಿತ್ತು. ಇದರಲ್ಲಿ ತಪ್ಪೇನಾಗಿದ್ದು, ಬಾಪೂಜಿಯನ್ನೇ ಮುಗಿಸಿಬಿಡಬೇಕು ಅನ್ನುವ ಆತುರ ಏಕೆ ಬೇಕಾಗಿತ್ತು?

ಬಾಪೂಜಿಯವರ ಎಲ್ಲಾ ಯೋಜನೆಗಳು, ವಿಚಾರಗಳು, ಆಯೋಜನೆ,

ಕಾರ್ಯಕ್ರಮಗಳು ಎಲ್ಲರಿಗೂ ತಿಳಿದಿರುತ್ತಿದ್ದವು. ಅವರಂತೂ ಪಾಕಿಸ್ತಾನಕ್ಕೆ ಹೋಗಲು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು. ಕಾಂಗ್ರೆಸ್‌ಗೆ ಹೊಸ ಸಂವಿಧಾನವನ್ನು ಸಿದ್ಧಪಡಿಸುತ್ತಿದ್ದರು. ಯುವಕರು, ದೇಶದ ಜನರಿಗೆ ಸ್ವಾತಂತ್ರ್ಯದ ನಿಜವಾದ ಜವಾಬ್ದಾರಿ ಕುರಿತು ಎಚ್ಚರ ನೀಡುತ್ತಿದ್ದರು. ಇದನ್ನೆಲ್ಲಾ ಇಡೀ ದೇಶ ಪ್ರತಿ ದಿನದ ಪ್ರಾರ್ಥನಾ ಸಭೆಯಲ್ಲಿ ಕೇಳುತ್ತಿತ್ತು, ತಿಳಿದುಕೊಳ್ಳುತ್ತಿತ್ತು, ಅರ್ಥ ಮಾಡಿಕೊಳ್ಳುತ್ತಿತ್ತು. ಅಲ್ಲಿ ಏನೂ ಮುಚ್ಚು ಮರೆ ಇರಲಿಲ್ಲ. ಹಾಗಿದ್ದಾಗ ಪೊಟರೆಯಲ್ಲಿ ಅವಿತಿಟ್ಟುಕೊಂಡು ಇಂತಹ ನಿಂದ್ಯ ಕಾರ್ಯವನ್ನ ಮಾಡುವಂಥ ಪರಿಸ್ಥಿತಿ ಇವರಿಗೇಕೆ ಬಂತು? ನಾಥೂರಾಮ್ ಗೋಡ್ಸೆಯನ್ನೇಕೆ ದೂಷಿಸೋಣ? ಅವನಂತೂ ತನ್ನ ಬುದ್ಧಿ–ಆತ್ಮ ಎರಡನ್ನೂ ಶೈತಾನನ ಹತ್ತಿರ ಗಿರವಿ ಇಟ್ಟುಬಿಟ್ಟಿದ್ದ. ನಾಥೂರಾಮ್ ಗೋಡ್ಸೆಗಿಂತ ಬಾಡಗೆ ಹೆಚ್ಚು ಬುದ್ಧಿವಂತ. ಆದರೂ ಸರಿಯಾದ ಸಮಯದಲ್ಲಿ ಅವನ ಅಂತರಾತ್ಮ ಅವನಿಗೆ ಮೋಸಮಾಡಲಿಲ್ಲ. ಅದರಿಂದ ಐಹಿಕವಾಗಿ, ಪಾರಮಾರ್ಥಿಕ ದೃಷ್ಟಿಯಿಂದಲೂ ಆತ ಉಳಿದುಕೊಂಡು. ಸಂತ ತುಕಾರಾಮರದ್ದು ಒಂದು ಪ್ರಸಿದ್ಧವಾದ ಅಭಂಗ್ ಇದೆ, 'ಜೇಕಾರಂಜ್‌ಲೆ, ಗಾಂಜ್‌ಲೇ, ತ್ಯೋಸಿ ಮ್ಹಣೇ ಜೋ ಆಪುಲೇ, ತೋಚಿ ಸಾಧು, ಓಳಖಾವಾ, ದೇವ ತೇಥೆಂಚೀ ಜಾಣಾವಾ'. ಬಾಪೂಜಿ ತುಕಾರಾಮನ ಈ ವ್ಯಾಖ್ಯಾನದ ಅರ್ಥದಲ್ಲಿ ಅಲ್ಲೇ ರಜ್ಞಾಲೇ ಗಾಂಜ್‌ಲೇ. ದೀನರೂ, ದುಃಖಿತರೊಂದಿಗೆ ತಾದಾತ್ಮ್ಯ ರಚಿಸಿಕೊಂಡು ಅವರ ಸೇವೆಯನ್ನು ಮಾಡುತ್ತಿದ್ದರು. ಅಲ್ಲಿ ಎಲ್ಲಿ ತಪ್ಪು ಆಗಿ ಹೋಯಿತು, ಬಾಪೂಜಿಯ ನೂರು ವರ್ಷವನ್ನೇ ಮುಗಿಸಿಬಿಡಬಹುದೆಂದು ಗಾಬರಿಗೊಂಡರು. ನನಗೆ ಈ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ ಅರೆ ! ಆದರೆ ನಾನು ಇದೇನನ್ನು ಬರೆಯುತ್ತಿದ್ದೇನೆ.

ತೀವ್ರವಾಗಿ ಯೋಚಿಸಿ ನೋಡಿದರೆ ನಾಥೂರಾಮ ಗೋಡ್ಸೆ ನಿಮಿತ್ತವಾಗಿದ್ದ, ಅಷ್ಟೆ, ಆತನ ಕೈಯಿಂದ ಗುಂಡು ಹಾರಿ ಆ ಮಹಾತ್ಮನ ಜೀವನವನ್ನ ಮುಗಿಸಿಬಿಟ್ಟಿತು. ಅದಕ್ಕೆ ಏತಕ್ಕೆ ಸಿಟ್ಟು ಮಾಡಿಕೊಳ್ಳಬೇಕು? ದೈವಸೃಷ್ಟಿಯಲ್ಲಿ ಈ ಘಟನೆ ರೂಪಿತವಾಗಿತ್ತು. ಅದಕ್ಕೆ ಯಾರೂ ದೋಷಿಗಳಲ್ಲ, ಅನಾದಿ ಬ್ರಹ್ಮ ನಮ್ಮೆಲ್ಲರಲ್ಲಿ ಇರುವವನವನೊಬ್ಬನೇ, ಅವನಂತೂ ಅಕ್ಷಯನಾಗಿದ್ದಾನೆ. ನಿಜವಾಗಿ ನೋಡಿದರೆ ಬಾಪೂಜಿ ಸಾವಿಗೆ ಅವರ ಪ್ರೇಮಿಗಳು, ಮಿತ್ರರು ಕಾರಣರಾಗಿದ್ದರು. ಬಾಪೂಜಿಯ ಜೊತೆಗಾರರ ಅಹಿಂಸೆ ಮೇಲ್ಪದರದಲ್ಲಿತ್ತು, ಸ್ವಾರ್ಥಿಗಳಾಗಿದ್ದರು, ಸ್ವಾತಂತ್ರ್ಯ ಸಿಕ್ಕ ತಕ್ಷಣ ಅವರ ಹೃದಯದಲ್ಲಿ ಅದುಮಿಕೊಂಡಿದ್ದ ಹಿಂಸೆ ಒಡೆದುಕೊಂಡು ಬಂದಿತ್ತು, ಅದಕ್ಕೆ ಈ ಜಘನ್ಯ ಪರಿಣಾಮ ಆಗಲೇಬೇಕಾಗಿತ್ತು. ಇಂಗ್ಲಿಷಿನಲ್ಲಿ ಒಂದು ಗಾದೆ ಇದೆ. ಮಹಾತ್ಮರಾದ ಜನರಿಗೆ, ಶಿಷ್ಯರೂ, ಅನುಯಾಯಿಗಳನ್ನು ಕೊಟ್ಟು ದೇವರು ದಂಡಿಸುತ್ತಾನಂತೆ. ಈ ಸಹಚರರು ಮಾಡಿದ ಸಾಮೂಹಿಕ ಪಾತಕ ಬಾಪೂಜಿಯನ್ನೇ ಮುಗಿಸಿಬಿಟ್ಟಿತು. ಈ ಕಾರಣಗಳಿಂದೆಲ್ಲಾ ಬಾಪೂಜಿಯ ಜಿಜೀವಿಷೆ ಮುಗಿದೇ ಹೋಗಿತ್ತು. ಆಗ ಗೋಡ್ಸೆ

ಬಾಪೂಜಿ ಮೇಲೆ ಗುಂಡು ಹಾರಿಸಿ ಅವರ ಮೇಲೆ ಕೃಪೆ ಮಾಡಿದ್ದ, ಇನ್ನೊಂದು ಸಾರಿ ಅನಿಸುತ್ತೆ, ಜೀವನವಿಡೀ ವ್ಯಸ್ತರಾಗಿದ್ದುಕೊಂಡು ಪ್ರವೃತ್ತಿಯಿಂದ ಕೂಡಿದ್ದ ಜೀವನದ ನಂತರ ಬಾಪೂಜಿಗೆ ಮಂಚದ ಮೇಲೆ ಮಲಗಿಕೊಂಡು ಶಕ್ತಿಹೀನನಾಗಿ, ರೋಗಿಯಾಗಿ ಸಾಯುವುದಕ್ಕಂತೂ ಇಷ್ಟವಾಗುತ್ತಿರಲಿಲ್ಲ. ಅವರಿಗೆ ಈ ಪುಟ್ಟ ಗುಂಡು ತಗುಲಿ ಸ್ವಚ್ಛವಾದ ಸಾವೇ ಯೋಗ್ಯವಾಗಿದ್ದುದು, ಜೀವನಕಾಲದಲ್ಲಿ ಪೂರ್ತ ಸತ್ಯ–ಅಹಿಂಸೆಯ ಪೂಜಾರಿಯಾಗಿದ್ದಾತನ ಸಾಧನೆಗಾಗಿ ಸಿಕ್ಕ ಸಿದ್ಧಿ ಇದಾಗಿತ್ತು, ಅಹಿಂಸೆಯ ತಪಸ್ಸಿನಲ್ಲಿ ಜೀವನವನ್ನೇ ಕಳೆದಾತ ಗುಂಡೇಟು ತಿಂದು, 'ಹೇ ರಾಮ್'ನ ಜೊತೆಗೆ ಮೃತ್ಯುವನ್ನು ಆಲಿಂಗಿಸಿದ್ದು ಬಾಪೂಜಿಯ ಆಯುಸ್ಸಿನ ಭವ್ಯವಾದ ಅಂತಿಮ ಆಹುತಿಯಾಗಿತ್ತು. ತನ್ನ ಪ್ರಾಣ ಕೊಟ್ಟು ಅವರು ಶಾಶ್ವತ ಅಹಿಂಸೆಗೆ ಬೆಲೆ ತೆತ್ತಿದ್ದರು. ಅದರಿಂದ ಅವರ ಹತ್ಯೆಯಲ್ಲಿ ಶೋಕಕ್ಕೆ ಅಳವಿರಲಿಲ್ಲ. ನಾನು ಬಹಳ ಭಾಗ್ಯಶಾಲಿ, ನನ್ನ ಜೀವನದ ಹದಿನೆಂಟು ವರ್ಷಗಳವರೆಗೆ ಆ ಪುಣ್ಯಪ್ರತಾಪಿ ಪಿತಾಮಹನ ನೆರಳೂ ನನಗೆ ಸಿಕ್ಕಿತ್ತು, ಇದಕ್ಕೆ ಇನ್ನೂ ಹೆಚ್ಚು ಆಸೆಪಟ್ಟಿದರೆ ಆ ಸಾಧುವಿನ ಮೊಮ್ಮಗಳಿಗೆ ಅನುರೂಪವಾಗಿರುತ್ತಿರಲಿಲ್ಲ.

ಕೆಲವು ಸಾರಿ ಜನ ಕೆಲವು ಸಂಘಟನೆಗಳನ್ನು ಕುರಿತು ಸಾಂಪ್ರದಾಯಿಕವೆಂದು ಆರೋಪಿಸುತ್ತಾರೆ. ನಾವೆಲ್ಲರೂ ಈ ದೇಶದ 'ಕೋಮುವಾದ'ದ ಕೀಟಗಳು ಅಂತ ನನಗನಿಸುತ್ತದೆ. ಕಾಂಗ್ರೆಸ್ ಪಾರ್ಟಿ ಮೇಲ್ನೋಟಕ್ಕೆ ಏನೇ ಹೇಳಿದರೂ ಕೋಮುವಾದವನ್ನೇ ಸಮರ್ಥಿಸುತ್ತದೆ. ದೇಶದ ಎಲ್ಲಾ ಮುಖಂಡರೂ ಈ ದೋಷದಿಂದ ಮುಕ್ತರಾಗದವರೇ. ದಲಿತರು, ಬ್ಯಾಕ್‌ವರ್ಡ್, ಯಾದವ, ಅಹೀರ್, ಜಾಟ, ರಾಜಪೂತ್, ಬ್ರಾಹ್ಮಣ, ಕಾಯಸ್ಥ, ಬನಿಯಾ ಅದೆಷ್ಟು ರೀತಿಯ, ಎಷ್ಟು ಗುಂಪುಗಳು, ಅದೆಷ್ಟು ಸಾಂಸ್ಕೃತಿಕ ಪದರಗಳೋ. ದೇಶ ಈ ಸವರ್ಣ, ದಲಿತರ ಕೊಚ್ಚೆಯಿಂದ ಮೇಲಕ್ಕೆ ಏಳುವುದೇ ಇಲ್ಲವೇ? ಈ ಜಾತೀಯ ಭೇದ ಭಾವದ ನಡುವೆ ಸಮಾಜ ನಮ್ಮ ಜನರೆದುರೇ ಯುದ್ಧಕ್ಕೆ ಸಿದ್ಧವಾಗಿ ನಿಂತಿದೆಯೇ? ನಮ್ಮ ಸಣ್ಣಪುಟ್ಟ ಅರಿಯದ ಮಕ್ಕಳ ಗತಿ ಏನಾಗಬೇಕು? ಯಾರ ಬಳಿ ಆರಕ್ಷಣೆ ಕೇಳಬೇಕು? ಅವರಿಗೆ ಆಶ್ರಯ ಎಲ್ಲಿ ಸಿಗಬೇಕು? ಇದರಿಂದ ಎಲ್ಲೂ ಮುಕ್ತಿ ಸಿಗುವ ಹಾಗೆ ಕಾಣುವುದಿಲ್ಲ.

ನಮ್ಮ ಕೋರ್ಟು ಗಾಂಧಿಯ ಹಂತಕನಿಗೆ ಗಲ್ಲು ಶಿಕ್ಷೆ ವಿಧಿಸಿ, ರಕ್ತಕ್ಕೆ ಬದಲಾಗಿ ರಕ್ತವನ್ನು ಹರಿಸಿತು. ಆದರೆ ಇದರಿಂದ ಪ್ರಾಯಶ್ಚಿತ್ತವಾಗಲಿಲ್ಲ. ನಾಥೂರಾಮ್ ಗೋಡ್ಸೆಗೆ ಮೃತ್ಯದಂಡ ವಿಧಿಸಿ ನಾವು ಪ್ರಾಯಶ್ಚಿತ್ತದ ಅವಕಾಶವನ್ನು ಕಳೆದುಕೊಂಡೆವು, ನಮ್ಮ ತಂದೆ ಸರದಾರ ಪಟೇಲರಿಗೆ ಬರೆದು ಗೋಡ್ಸೆಗೆ ಗಲ್ಲು ಶಿಕ್ಷೆ ವಿಧಿಸುವುದರಿಂದ ಬಾಪೂಜಿ ಜೀವನದುದ್ದ ಸಾಧಿಸಿದ್ದ ಸಾಧನೆ ವಿಫಲವಾಗುತ್ತದೆಂದು ತಿಳಿಸಿದ್ದರು. ಆದರೆ ಕಾಂಗ್ರೆಸ್ ಪಾರ್ಟಿ ತನ್ನ ಸಾಂಪ್ರದಾಯಿಕತೆ

ಮತ್ತು ಹಿಂಸೆಯನ್ನು ಮರೆಸುವುದಕ್ಕಾಗಿ ಹಂತಕನನ್ನು ಬೇಗ ಮುಗಿಸಿ ಗಾಂಧಿಯ ಸತ್ಯ–ಅಹಿಂಸೆಯಿಂದ ಮುಕ್ತಿ ಪಡೆಯಬಯಸುತ್ತಿತ್ತು. ಆತ್ಮಚಿಂತನೆ ನಡೆಸಿ ಪ್ರಾಯಶ್ಚಿತ್ತ ಭಾವನೆಯಿಂದ ಈ ಸಾಮೂಹಿಕ ತಪ್ಪನ್ನು ಸರಿಪಡಿಸಲು ಯಾರೂ ಇಚ್ಛಿಸಿರಲಿಲ್ಲ.

ಕಾಂಗ್ರೆಸ್ ಪಕ್ಷದ ಹೆಸರು ಕೆಡಿಸಿ ನಾನು ನನ್ನ ಕಟುವಾದ ಭಾವನೆಗಳನ್ನು, ನಿರಾಶೆಯನ್ನು ಪ್ರಕಟಪಡಿಸುತ್ತಿದ್ದೇನೆಂದು ಓದುಗರಿಗನಿಸಬಹುದು, ಆದರೆ ನಾನು ನಿರಾಧಾರವಾಗಿ ದೋಷಾರೋಪಣೆ ಮಾಡುತ್ತಿಲ್ಲ. ಕಾಂಗ್ರೆಸ್ ಮುಖಂಡರು ನಿಜವಾಗಿ ತಮ್ಮ ಮಹಾತ್ಮನ ಬಗ್ಗೆ ಗೌರವ ಇಟ್ಟುಕೊಂಡಿದ್ದರೆ ಗಾಂಧೀಜಿ ಕೊನೆಯ ರಾತ್ರಿ ಸಿದ್ಧಪಡಿಸಿದ್ದ ಹೊಸ ಸಂವಿಧಾನವನ್ನು ಕಾಂಗ್ರೆಸ್ ಪಕ್ಷ ಸ್ವೀಕರಿಸಬಹುದಾಗಿತ್ತು, ಕಾಂಗ್ರೆಸ್‌ನ ರಾಜಕೀಯ ಸ್ವರೂಪವನ್ನು ಬದಲಾಯಿಸಬಹುದಿತ್ತು, ಶ್ರದ್ಧಾಂಜಲಿ ಮತ್ತು ಸ್ಮಾರಕಗಳನ್ನು ರಚಿಸಲು ಒಂದು ರೀತಿಯಲ್ಲಿ ಸ್ಪರ್ಧೆ ಏರ್ಪಟ್ಟಿತಾದರೂ ಯಾರೊಬ್ಬರಾದರೂ ಬಾಪೂಜಿ ರಚಿಸಿದ್ದ ಆ ಸಂವಿಧಾನವನ್ನು ಕುರಿತು ಉಲ್ಲೇಖಿಸಲೂ ಇಲ್ಲ. ಅದಾದನಂತರ ಮನಸ್ಸು ಹಗುರ ಮಾಡಿಕೊಳ್ಳುವ ಮಾತುಗಳಾದವು, ಗಾಂಧೀಜಿಗೆ ಅಗ್ನಿದಾಹ ನೀಡಿ ನಾಯಕರು ಮುಕ್ತರಾದರು. ಆಗ ಯಾವ ಅಡ್ಡಿ–ಆತಂಕವಿಲ್ಲದೆ ಸ್ವಾರ್ಥ ಸಿದ್ಧಿಸಿಕೊಳ್ಳಲು ರಾಜಮಾರ್ಗ ತೆರೆದಂತಾಯಿತು, ನಾಥೂರಾಮ್ ಗೋಡ್ಸೆಯನ್ನು ದೂಷಿಸುವುದು ಸರಿಯಲ್ಲವೆಂದು ಯೋಜಿಸಿದಾಗ ನನ್ನ ಮನಸ್ಸಿಗೆ ಸಮಾಧಾನಸಿಗುತ್ತದೆ. ಅದರಿಂದ ಹಿಂದೂ ಮಹಾಸಭೆಯ ಜನರ ಬಗ್ಗೆ ನನ್ನ ಮನಸ್ಸಿನಲ್ಲಿ ಎಲ್ಲೂ ಸ್ವಲ್ಪ ಕೋಪವೂ ಇಲ್ಲ, ಆದರೆ ಪೂರ್ತಿ ನಿರರ್ಥಕವಾದ ಈ ಬಲಿದಾನದ ಶಿಕ್ಷೆಯನ್ನು ನಾವು ದೇಶವಾಸಿಗಳೆಲ್ಲರೂ ಅನುಭವಿಸುತ್ತಿದ್ದೇವೆ ಎಂದು ಖಂಡಿತ ಅನಿಸುತ್ತದೆ. ಮಹಾಭಾರತದಲ್ಲಿ ದ್ರೋಣಾಚಾರ್ಯರ ಮಗ ಅಶ್ವತ್ಥಾಮ ಬಹಳ ವೀರನಾಗಿದ್ದನೆಂದು ಒಂದು ಕತೆ ಇದೆ. ಅವನು ತನ್ನ ತಾಯಿಯ ಹೊಟ್ಟೆಯಿಂದಲೇ ಹಣೆಯ ಮೇಲೆ ಉತ್ಕೃಷ್ಟವಾದ ಮಣಿ–ಮಣಿ ಪೂರಿತ ಜ್ಞಾನವನ್ನು ಹೊತ್ತುಕೊಂಡು ಹುಟ್ಟಿದ್ದನಂತೆ. ಕ್ರೋಧದ ಅವಿವೇಕದಲ್ಲಿ ವಿಶೇಷ ಮೂರ್ಖನಾಗಿ ಅವನು ಪಾಂಚಾಲಿಯ ಐದೂ ಜನ ಮಕ್ಕಳನ್ನು ಅವರು ಮಲಗಿರುವಾಗ ಕೊಂದುಹಾಕಿದ್ದ. ಆ ಕ್ಷಣದಿಂದ ಅವನ ಮಣಿಮಯ ಜ್ಞಾನ ನಿಸ್ತೇಜವಾಯಿತು. ಅವನು ಮಣಿವಿಹೀನನಾಗಿ ಎಲ್ಲೆಲ್ಲೂ ಅಲೆಯುತ್ತಿದ್ದಾನಂತೆ. ಇವತ್ತು ಕೂಡ ಅಶ್ವತ್ಥಾಮ ಅಲೆಯುತ್ತಲೇ ಇದ್ದಾನೆ ಅಂತ ಹೇಳ್ತಾರೆ, ಅಂತಹ ನೀಚ ಕರ್ಮಕ್ಕೆ ಎಲ್ಲೂ ಕ್ಷಮೆ ಇಲ್ಲ. ನಾಥೂರಾಮ ಗೋಡ್ಸೆ ಮೂರ್ತಿವತ್ತಾದ ಕರುಣೆಯನ್ನೇ ಕೊಂದಿದ್ದ. ಅದರಿಂದಲೇ ಬಹುಶಃ ನಾವೆಲ್ಲರೂ ಈ ಕ್ಷಮಾಹೀನ ಸಮಾಜದಲ್ಲಿ ಆ ಜಘನ್ಯ ಅಪರಾಧದ ಸಜೆಯನ್ನು ಅನುಭವಿಸುತ್ತಿದ್ದೇವೆ, ಅನುಭವಿಸುತ್ತಲೇ ಇರುತ್ತೇವೆ ಕೂಡ.

ಸಾವಿರಾರು ವರ್ಷಗಳಿಗೂ ಮೊದಲು ಯಮುನಾ ತೀರದ ವೃಂದಾವನವಾಸಿಗಳು ನಂದನಂದನ ಮುರಳೀಧರ ಮೋಹನನ ಅಂತ್ಯ ಕಾಠಿಯಾವಾಡದ ಸಮುದ್ರತೀರದಲ್ಲಿ, ಸೋಮನಾಥ ಮಂದಿರದ ಹಿಂದೆ ಕಾಡಿನಲ್ಲಿ ಒಬ್ಬ ಬೇಡನಿಂದ ಆದುದನ್ನು ನೋಡಿದ್ದರು. ಯದುನಂದನ ಶ್ರೀ ಮಧುಸೂದನನ ಚರಣಗಳ ರಕ್ತವರ್ಣದ ಕಾಂತಿಯನ್ನು ಮೂರ್ಖ ಪಶುವಿನ ಎದೆ ಎಂದು ಭಾವಿಸಿದ. ಆ ವ್ಯಾಧ ಬಿಟ್ಟ ಬಾಣವೊಂದು ಪುರುಷೋತ್ತಮ ಯೋಗೇಶ್ವರ ಶ್ರೀಕೃಷ್ಣನ ಇಹಲೀಲೆಯನ್ನು ಮುಗಿಸಿಬಿಟ್ಟಿತು. ಆಗಿನಿಂದ ಅರಬ್ಬಿಸಾಗರದ ಯಮುನಾತೀರದ ಈ ಋಣ ಉಳಿದುಕೊಂಡು ಬಂದಿತ್ತು. ಅದರಿಂದ ಬಹುಶಃ ಅರಬ್ಬಿಸಾಗರದ ನೀಲಿಬಣ್ಣದ ನೊರೆಯಿಂದ ಕೂಡಿದ ಅಲೆಗಳ ಈ ಮುದ್ದಿನ ಕುವರ, ಪೋರ್‌ಬಂದರಿನ ಪುತ್ರನಾದ ಮೋಹನದಾಸ ಗಾಂಧಿಯು ಯಮುನೆಯ ತೀರದಲ್ಲಿ ತನ್ನ ಪ್ರಾಣಕೊಟ್ಟು ಆ ಹಳೆಯ ಋಣವನ್ನು ತೀರಿಸಿದ್ದ. ರತ್ನಾಕರದ ಒಂದೊಂದು ನೀರಿನ ಕಣವೂ ಮಗನನ್ನು ಕಳೆದುಕೊಂಡು ರೋದಿಸುತ್ತಿತ್ತು. ಯಮುನಾ ನದಿ ತನ್ನ ಧೀರ–ಗಂಭೀರ ವೇಗದೊಂದಿಗೆ ಹರಿದು ಹೋಗುತ್ತಿತ್ತು, ಆದರೆ ಭಾರತವರ್ಷದ ಆಕಾಶ ಶೂನ್ಯವಾಗಿ ಪರಿಣಮಿಸುತ್ತಿತ್ತು. ಶೂನ್ಯವೇ ಆಗಿಬಿಟ್ಟಿತ್ತು.

* * * *

# ೪೧. ನಮ್ಮ ಪಿತ್ರಾರ್ಜಿತ ಸಂಪತ್ತು

ವಿರಾಸತ್ ಅನ್ನುವ ಶಬ್ದಕ್ಕೆ ಒಂದು ವಿಸ್ತೃತ ಹಾಗೂ ಸೂಕ್ಷ್ಮವಾದ ಅರ್ಥ ಇದೆ. ಹಣ, ಸಂಪತ್ತು, ಮನೆ ಮುಂತಾದ ಸ್ಥಿರ ಆಸ್ತಿ ಅಲ್ಲದೆ, ಸಂಸ್ಕಾರ ಮತ್ತು ಭಾವನೆಯ ಸೂಕ್ಷ್ಮದಾಯ ಅದರಲ್ಲಿ ಸೇರಿಕೊಂಡಿರುತ್ತದೆ. ಈ ಸಂಸ್ಕಾರಗಳು ನಮ್ಮ ಬುದ್ಧಿಯೊಳಗೆ ಅವ್ಯಕ್ತವಾಗಿ ಹುದುಗಿಕೊಂಡಿರುತ್ತವೆ, ಇಷ್ಟಪಟ್ಟರೂ ನಾವು ಅದನ್ನು ತೆಗೆದುಹಾಕಲಾಗುವುದಿಲ್ಲ. ಆ ತರಹ ಸರ್ವವ್ಯಾಪಕವಾಗಿರುವ ನೈತಿಕ ಪೈತೃಕ ಸಂಪತ್ತು ನಮ್ಮ ದೇಶಕ್ಕೆಲ್ಲಾ ಹಳೆಯ ಕಾಲದಿಂದಲೂ ಸಿಕ್ಕಿದೆ, ಬಾಪೂಜಿ ಕೂಡ ಅದಕ್ಕೆ ಸಹಕಾರ ನೀಡಿದ್ದಾರೆ. ಇಂತಹ ಶ್ರೇಷ್ಠ ಸಂಸ್ಕಾರದ ಶ್ರೇಷ್ಠ ಪಿತ್ರಾರ್ಜಿತರಾಗಿ ನಾವು ಹದಿಮೂರು ಜನ ಮೊಮ್ಮಕ್ಕಳು ಮಾತ್ರ ಆ ಅಧಿಕಾರ ಪಡೆದಿದ್ದೇವೆ ಎಂದು ಹೇಳುವುದು ತೀವ್ರ ಅಹಂಕಾರ, ಮದಾಂಧತೆಯ ತುತ್ತತುದಿ ಆಗುತ್ತೆ. ಬಾಪೂಜಿ ಇಡೀ ರಾಷ್ಟ್ರಕ್ಕೆ ಸೇರಿದವರು, ಅವರ ವಿಚಾರಗಳನ್ನು ಅರ್ಥ ಮಾಡಿಕೊಂಡು ತನ್ನದಾಗಿಸಿಕೊಂಡವರು ಬಾಪೂಜಿಯ ಮಾನಸಪುತ್ರರಾಗುತ್ತಾರೆ, ಆ ಕ್ಷಣದಿಂದ ಆ ಅಪರಿಚಿತ ವ್ಯಕ್ತಿ ದೇಶ ಕಾಲದ ಎಲ್ಲೆಗಳಿಂದ ಹೊರತಾಗಿ ಬಾಪೂಜಿ ಬಿಟ್ಟುಹೋದ ಈ ಸಂಪತ್ತಿನ ಹಕ್ಕು ಪಡೆಯುತ್ತಾನೆ. ಬಾಪೂಜಿ ತನಗಾಗಿ, ತನ್ನ ಪರಿವಾರದ ಸದಸ್ಯರಿಗಾಗಿ ಯಾವ ರೀತಿಯ ಐಹಿಕ ಸಂಪತ್ತನ್ನೂ ಬಿಟ್ಟುಹೋಗಿಲ್ಲ. ೧೯೦೬ ರಲ್ಲಿ ಮೂವತ್ತೇಳನೆಯ ವಯಸ್ಸಿನಲ್ಲಿ ಬಾಪೂಜಿ ಬ್ರಹ್ಮಚರ್ಯ ವ್ರತವನ್ನು ಕೈಗೊಂಡರು, ಆ ಕ್ಷಣದಿಂದ ಐಚ್ಛಿಕ ಸನ್ಯಾಸ ತೆಗೆದುಕೊಂಡು ತನ್ನನ್ನು ಸಮಾಜಸೇವೆಗಾಗಿ ಅರ್ಪಿಸಿಕೊಂಡಿದ್ದರು. ಅದರಿಂದ ಗಾಂಧೀಜಿ ಬಿಟ್ಟು ಹೋದ ವಿರಾಸತ್ತನ್ನು ನಾವು ಈ ಚರ್ಮದ ಕಣ್ಣುಗಳಿಂದ ನೋಡಲಾಗುವುದಿಲ್ಲ. ಆ ವಿರಾಸತ್ತನ್ನು ಹುಡುಕುವುದಕ್ಕಾಗಿ ನಾವು ಮನಸ್ಸಿನ ಆಳದಲ್ಲಿ ಕುಳಿತು ಅರಸಿಕೊಳ್ಳಬೇಕಾಗುತ್ತದೆ, ಮತ್ತಾಗ ಆ ವಿರಾಸತ್ತನ್ನು ಈ ದೇಶದ ಎಂಬತ್ತು ಕೋಟಿ ಜನ ತನ್ನ ರೋಮಗಳಲ್ಲಿ ಕಂಡುಕೊಳ್ಳುತ್ತಾರೆ. ನಮ್ಮ ದೇಶದ ನಾಲ್ಕು ಸಾವಿರ ವರ್ಷಗಳ ನಿರಂತರವಾದ ಇತಿಹಾಸದ ಗಾಥೆಯಲ್ಲಿ ಈ ವಿರಾಸತ್ತಿನ ವಿರಾಟ್‌ದರ್ಶನ ಸಿಗುತ್ತದೆ. ಅದರ ಸಂಕ್ಷಿಪ್ತಸಾರ ಶ್ರೀಮದ್ ಭಗವದ್ಗೀತೆಯಲ್ಲಿ ಸಿಗುತ್ತದೆ. ಈ ಹಳೆಯ, ಮರೆತ ವಿರಾಸತ್ತಿನ ಕಡೆ ದೇಶವಾಸಿಗಳ ಗಮನವನ್ನು ಜಾಗೃತಗೊಳಿಸುವ ಮಹತ್ಕಾರ್ಯವನ್ನು ಬಾಪೂಜಿ ಮಾಡಿದ್ದರು. ಈ ವಿರಾಸತ್ತೇ ಪ್ರತಿಯೊಬ್ಬ ಭಾರತೀಯನ ಸತ್ವವಾಗಿದೆ. ಯಾವುದೊಂದು

ಸಮಾಜ ಕೂಡ ತನ್ನ ವಿರಾಸತ್ತನ್ನು ಮರೆತು ದಾರಿ ತಪ್ಪಿದಾಗ ಅವನ ಪತನ ಆರಂಭವಾಗುತ್ತದೆ. ಈ ವಿರಾಸತ್ತನ್ನು ನಾವು ಉಪೇಕ್ಷಿಸಿದ್ದರಿಂದ ಆ ಅಪರಾಧದ ಫಲವಾಗಿ ನಾವು ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಗುಲಾಮರಾಗಿಬಿಟ್ಟಿದ್ದೆವು. ಯಾವ ದೇಶವಾದರೂ ತನ್ನ ಸತ್ವವನ್ನು ಮರೆತಾಗ, ಅದರ ಮೇಲೆ ಹೊರಗಿನವರು ಆಕ್ರಮಣ ಮಾಡಿ ತಮ್ಮ ವಶಕ್ಕವರು ತೆಗೆದುಕೊಂಡರೆ ಅದರಲ್ಲಿ ಆಶ್ಚರ್ಯ ಪಡಬೇಕಾದದ್ದೇನೂ ಇಲ್ಲ. ಬಾಪೂಜಿ ಈ ಸೂಕ್ಷ್ಮವಾದ, ಮೂಲತತ್ವವನ್ನು ಗುರುತಿಸಿ ಅದನ್ನು ಹೃದ್ಗತಗೊಳಿಸಿಕೊಂಡು, ತನ್ನ ಆಚರಣೆಯಲ್ಲಿ ಸಿದ್ಧಗೊಳಿಸಿ ಭಾರತ ದೇಶದ ಈ ವಿರಾಸತ್ತು ಪ್ರತಿಯೊಬ್ಬ ನಾಗರಿಕನಿಗೂ ಸಹಜಸಾಧ್ಯವೆಂದು ತೋರಿಸಿ ಈ ವಿರಾಸತ್ತನ್ನು ನಾವು ಯಾರೂ ತಿರಸ್ಕರಿಸಲಾಗುವುದಿಲ್ಲ. ಅದು ನಮ್ಮ ರಕ್ತದಲ್ಲಿ, ಅಂತರಾತ್ಮದಲ್ಲಿ ಅಡಗಿಕೊಂಡಿದೆ. ಅದರಿಂದ ನಮಗೆ ಮುಕ್ತಿ ಇಲ್ಲ, ದೇಶವಾಸಿಗಳು ತಮ್ಮ ಈ ವಿರಾಸತ್ತನ್ನು ಅರ್ಥ ಮಾಡಿಕೊಂಡು ಒಪ್ಪಿಕೊಂಡ ದಿನದಿಂದ ಆ ಕ್ಷಣದಿಂದ ಗುಲಾಮಗಿರಿಯನ್ನು ಝಾಡಿಸಿ ನಮ್ಮ ದೇಶ ಎದ್ದು ನಿಂತುಕೊಂಡಿತ್ತು, ಮುವತ್ತು ವರ್ಷಗಳ ಚಿಕ್ಕ ಅವಧಿಯಲ್ಲಿ ನೂರ ಐವತ್ತು ವರ್ಷಗಳಿಂದ ಕಳೆದುಕೊಂಡಿದ್ದ ಸ್ವಾತಂತ್ರ್ಯ ನಮಗೆ ಪುನಃ ಸಿಕ್ಕಿತ್ತು.

ಗಾಂಧೀಜಿ ದೇಶಕ್ಕೆ ಸ್ವಾತಂತ್ರ್ಯವನ್ನ ಕೊಡಿಸಿದರು ಎಂದು ಎಷ್ಟೋ ಜನ ಹೇಳುತ್ತಿರುತ್ತಾರೆ. ಗಾಂಧೀಜಿ ಸ್ವತಃ ಇದನ್ನ ಮೊದಲು ಖಂಡಿಸುತ್ತಿದ್ದರು, ಸ್ವಾತಂತ್ರ್ಯ ಅನ್ನುವುದು ಅಂಗಡಿಯಲ್ಲಿ ಕೊಂಡು ಬೇರೆಯವರಿಗೆ ದಾನ ಮಾಡುವಂಥ ಸಾಮಾನ್ಯ ಪದಾರ್ಥವಲ್ಲ. ಅದನ್ನು ಸಂಪಾದಿಸಿಕೊಳ್ಳಬೇಕಾಗುತ್ತದೆ, ಅದನ್ನು ಪ್ರತಿಯೊಬ್ಬ ಮನುಷ್ಯನೂ ಸ್ವತಃ ಸಂಪಾದಿಸಿಕೊಳ್ಳಬೇಕಾಗುತ್ತೆ, ಅದರಿಂದ ನಮ್ಮ ಸ್ವಾತಂತ್ರ್ಯ ೧೯೧೭ ರಿಂದ ೧೯೪೭ರವರೆಗೆ ದೇಶದ ಎಲ್ಲ ಜನರೂ ಪರಿಶ್ರಮಪಟ್ಟಿದ್ದರ ಫಲವಾಗಿ ಸಿಕ್ಕಿದೆ. ಈ ಭಗೀರಥ ಪ್ರಯತ್ನದಲ್ಲಿ ಗಾಂಧೀಜಿ ಖಂಡಿತ ದಿಕ್ಕು ತೋರಿಸಿದರು. ಮೂವತ್ತೆರಡು ವರ್ಷಗಳ ಕಾಲ ಸತತವಾಗಿ ರಾತ್ರಿ ಬೆಳಿಗ್ಗೆ ಕಠಿಣ ತಪಸ್ಸನ್ನಾಚರಿಸಿ ಬಡ ಹಿಂದುಳಿದ ಜನರಿಗೆ ಮುಂದಾಳತ್ವ ನೀಡಿದರು, ಸ್ವಾತಂತ್ರ್ಯಕ್ಕಾಗಿ ಅವರನ್ನು ಪ್ರಚೋದಿಸುತ್ತಿದ್ದರು, ನೂರೈವತ್ತು ವರ್ಷಗಳ ಪರಾಧೀನತೆ ನಮ್ಮ ದೇಶದ ಸತ್ವವನ್ನು ಹೀರಿತ್ತು, ನಾವು ಕಾಂತಿಹೀನರಾಗಿ ಸೋತು ಪದದಲಿತರಾಗಿದ್ದೆವು. ಆ ನಿರಾಶೆ ಮತ್ತು ವಿವಶತೆಯ ಕೊಳ್ಳದಲ್ಲಿ ಬಾಪೂಜಿ ದೇಶದ ಜನರ ಆತ್ಮ ವಿಶ್ವಾಸವನ್ನು ಜಾಗ್ರತಗೊಳಿಸಿದ್ದರು. ಇದು ಅವರ ಕೊಡುಗೆಯೇ ಆಗಿತ್ತು.

೧೮೮೫ರಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ ರಚನೆಯಾಗಿತ್ತು. ಆದರೆ ೧೯೧೫ರ ವರೆಗೂ ಈ ಸಂಸ್ಥೆಯಲ್ಲಿ ಅಂತಹ ಜೀವವೇನೂ ಇರಲಿಲ್ಲ. ಕೆಲವರು ಓದಿಬರೆದವರು ಮತ್ತು ಕೆಲವರು ಶ್ರೀಮಂತರು ಸಾರ್ವಜನಿಕ ಹಬ್ಬದ ಹಾಗೆ ವರ್ಷಕ್ಕೆ ಒಂದು ಸಾರಿ ಸೇರುವುದಕ್ಕೆ ಅದೊಂದು ವೇದಿಕೆಯಾಗಿತ್ತು, ಅಷ್ಟೆ.

ಗೋಖಲೆ ಮತ್ತು ತಿಲಕ್ ಅದನ್ನು ಪ್ರಭಾವಶಾಲಿಯಗಿಸುವುದಕ್ಕೆ ಇಷ್ಟಪಡುತ್ತಿದ್ದರು. ಆದರೆ ಇಬ್ಬರೂ ಅಕಾಲಮೃತ್ಯುವಿಗೀಡಾದರು, ಅದರಿಂದ ಸಂಸ್ಥೆಯನ್ನು ಬಲಗೊಳಿಸುವುದಕ್ಕೆ ವಿಘ್ನ ಒದಗಿತ್ತು. ಸೌಭಾಗ್ಯವಶಾತ್ ಈ ಇಬ್ಬರು ಮುಖಂಡರಿಗೂ ಗಾಂಧಿಯ ನಿಷ್ಠೆ ಮತ್ತು ಕರ್ಮಠತೆ ಬಗ್ಗೆ ಪೂರ್ತಿ ಗೌರವವಿತ್ತು. ಅದರಿಂದ ಗೋಖಲೆ ಗಾಂಧಿಯನ್ನು ಆಫ್ರಿಕಾದಿಂದ ಸ್ವದೇಶಕ್ಕೆ ಕರೆತಂದಿದ್ದರು. ಬಾಪೂಜಿ ಸ್ವದೇಶಕ್ಕೆ ಹಿಂದಿರುಗಿದ ಒಂದು–ಒಂದೂವರೆ ತಿಂಗಳಲ್ಲೇ ಗೋಖಲೆ ತೀರಿಕೊಂಡರು. ಆದರೆ ಈ ಆರು ವಾರಗಳ ಚಿಕ್ಕ ಅವಧಿಯಲ್ಲಿ ಅವರು ಗಾಂಧಿಗೆ ದೇಶದ ಆತ್ಮವನ್ನು ಅರ್ಥ ಮಾಡುಕೊಳ್ಳುವ ಮೂಲಮಂತ್ರವನ್ನ ನೀಡಿದ್ದರು. ಗೋಖಲೆಯವರು ತೀರಿಕೊಂಡನಂತರ ಗಾಂಧಿ ಲೋಕಮಾನ್ಯರ ನೇತೃತ್ವದಲ್ಲಿ ಕಾಂಗ್ರೆಸ್ ಜೊತೆ ಕೆಲಸ ಮಾಡಲಾರಂಭಿಸಿದರು, ತಿಲಕರ ಒತ್ತಾಯದ ಮೇರೆಗೆ ಬಾಪೂಜಿ ಕಾಂಗ್ರೆಸ್ ಸಂವಿಧಾನವನ್ನು ರಚಿಸಿದರು. ತಿಲಕರ ಚರಣಗಳಲ್ಲಿ ಕುಳಿತು ದೇಶಸೇವೆಯನ್ನು ಮಾಡಬೇಕೆಂದು ಬಾಪೂಜಿ ಬಯಸಿದ್ದರಾದರೂ ಸ್ವಾತಂತ್ರ್ಯ ಜನ್ಮಸಿದ್ಧವಾದ ಅಧಿಕಾರ ಅನ್ನುವುದನ್ನು ಪ್ರತಿಪಾದಿಸಿದನಂತರ ತಕ್ಷಣವೇ ಲೋಕಮಾನ್ಯರು ತೀರಿಕೊಂಡರು. ಆಗ ಗಾಂಧೀಜಿ ಕಾಂಗ್ರೆಸ್ಸನ್ನು ನಿರ್ವಹಿಸಬೇಕಾಯಿತು. ಸತ್ಯಾಗ್ರಹ ಮತ್ತು ಅಹಿಂಸೆಯ ಮಾರ್ಗದಿಂದ ಗಾಂಧೀಜಿ ಆ ಶಿಥಿಲವಾಗಿದ್ದ ಸಂಸ್ಥೆಯನ್ನ ತೇಜಸ್ವಿಯಾಗಿಸಿದರು, ಆಗ ದೇಶದ ಆ ಒಂದೇ ಸಂಸ್ಥೆ ಬ್ರಿಟಿಷ್ ಸರಕಾರಕ್ಕೆ ಸವಾಲನ್ನೊಡ್ಡಿ ಜನತಾ ಜನಾರ್ದನರನ್ನು ಸಂಘಟಿಸಿ ಅವರಲ್ಲಿ ಸುಪ್ತವಾಗಿದ್ದ ಪ್ರತಾಪವನ್ನು ಪ್ರಕಟಗೊಳಿಸಿದ್ದರು,

೧೯೧೫ರಲ್ಲಿ ಬಾಪೂಜಿಯ ಆತ್ಮಬಲ ಸಾಕಷ್ಟೇ ದೃಢವಾಗಿದ್ದಿರಬೇಕು, ಅದಕ್ಕೆ ಒಂದು ಸಾಮಾನ್ಯವಾದದ್ದಾದರೂ ಸರಿಯಾದ್ದೊಂದು ಪುರಾವೆ ಇದೆ. ಇಷ್ಟು ವರ್ಷಗಳು ವಿದೇಶದಲ್ಲಿದ್ದು ಸಫಲವಾಗಿ ಬ್ಯಾರಿಸ್ಟ್ರಿ ಮಾಡಿದ್ದರೂ ಬಾಪೂಜಿ ಆತ್ಮಸಮ್ಮಾನ, ನಂಬಿಕೆ ಎಷ್ಟರಮಟ್ಟಿಗೆ ಇತ್ತೆಂದರೆ ೧೯೧೫ರಲ್ಲಿ ಅವರು ಬ್ರಿಟನ್ನಿನಿಂದ ಭಾರತಕ್ಕೆ ಹಿಂದಿರುಗಿದಾಗ ಬಾಪೂಜಿ ಬಹಳ ಯೋಚಿಸಿ ನಂತರ ಅವರು ಇಂಗ್ಲಿಷ್ ಸೂಟ್–ಬೂಟನ್ನ ಟೊಳ್ಳುತನ ತ್ಯಜಿಸಿ, ಕಠಿಯಾವಾಡಿ ರೈತನ ಉಡುಪನ್ನು ಧರಿಸುವುದು ಒಳ್ಳೆಯದೆಂದು ನಿರ್ಧರಿಸಿದರು. ೧೯೧೫ರಲ್ಲಿ ವಿಲಾಯತಿನ ಫ್ಯಾಷನ್‌ನಿಂದ ಆವೃತರಾಗಿದ್ದ ಬೊಂಬಾಯಿಯ ಧುರಂಧರ ಮುಖಂಡರ ನಡುವೆ ಕೂಡ ಬಾಪೂಜಿ ತನ್ನ ಕಠಿಯಾವಾಡಿ ವೇಷಭೂಷಣಗಳನ್ನು ತೊರೆಯಲಿಲ್ಲ. ಸ್ವದೇಶಕ್ಕೆ ಹಿಂದಿರುಗಿದ ನಂತರ ಬಾಪೂಜಿ ಮೋಟಿಬಾ ಜೊತೆ ನಟೇಶನ್‌ರನ್ನು ಭೇಟಿಯಾಗಲು ಮದ್ರಾಸ್‌ಗೆ ಹೋಗಿದ್ದರು. ಎಗ್‌ಮೋರ್ ಸ್ಟೇಷನ್‌ನಲ್ಲಿ ನಟೇಶನ್ ಗಾಂಧಿಯನ್ನು ಹುಡುಕುತ್ತಿದ್ದರು. ಆದರೆ ಮಧ್ಯಮ ವರ್ಗದ ಗುಜರಾತಿ ಬನಿಯಾನ ಉಡುಪಿನಲ್ಲಿ ನಟೇಷನ್ ಬಾಪೂಜಿಯನ್ನು ಗುರುತಿಸಲಾರದಾದರು. ಬಾಪೂಜಿ

ಮತ್ತು ಮೋಟಿಬಾ ಇಬ್ಬರಿಗೂ ಪುಣ್ಯವಶಾತ್ ತಮಿಳು ಮಾತನಾಡಬರುತ್ತಿತ್ತು, ಅದರಿಂದ ಅವರಿಬ್ಬರೂ ಜಟಕಾಗಾಡಿಯನ್ನು ತೆಗೆದುಕೊಂಡು ನಟೇಶನ್ ಮನೆ ತಲಪಿದ್ದರು. ಇದೊಂದು ಪುಟ್ಟ ಘಟನೆ, ಆದರೆ ಇದರಿಂದ ಎರಡು ವಿಷಯ ಸ್ಪಷ್ಟವಾಗುತ್ತದೆ. ಒಂದು ಪರದೇಶಿಗಳನ್ನು ನಕಲು ಮಾಡುವುದನ್ನು ಬಿಟ್ಟು ದೇಶದ ಆತ್ಮಸಮ್ಮಾನವನ್ನು ಜಾಗೃತಗೊಳಿಸುವುದಕ್ಕೆ ದೇಶದ ಉಡುಪು ಬಹು ದೊಡ್ಡ ಪ್ರತೀಕವಾಗುತ್ತೆ ಅನ್ನುವುದು ಬಾಪೂಜಿಗೆ ಗೊತ್ತಿತ್ತು. ಎರಡನೆಯದಾಗಿ, ಬೇರೆಯವರು ಹಾಸ್ಯ ಮಾಡುತ್ತಾರೆ ಎಂದು, ಮತ್ತು ಅವರ ಅಭಿಪ್ರಾಯಗಳಿಂದ ಹೊರತಾಗಿ ತನ್ನ ವಿಚಾರಗಳನ್ನು, ಆದರ್ಶಗಳನ್ನು ಒಬ್ಬಂಟಿಯಾಗಿ ಇಟ್ಟುಕೊಂಡು ಬದುಕಬಲ್ಲೆನೆಂಬ ಆತ್ಮವಿಶ್ವಾಸ ಅವರಿಗಿತ್ತು. ಆ ಎರಡು ಗುಣಗಳಿಂದಾಗಿ ದೇಶದ ಬಡಜನ ಬಾಪೂಜಿಯ ಪ್ರಖರತೆಯನ್ನು ಅರಿತುಕೊಂಡು ಅವರ ಅಪೂರ್ವವಾದ ಮುಖಂಡತ್ವವನ್ನು ಒಪ್ಪಿಕೊಂಡರು.

ಈ ರೀತಿ ಪ್ರಖರವಾದ ಆತ್ಮವಿಶ್ವಾಸ ಇರಬೇಕು ಅಂದರೆ ಅಂತರಾತ್ಮ ನಿರ್ಭಯವಾಗಿರಬೇಕಾದ್ದು ಬಹಳ ಅಗತ್ಯ. ಕಾಡಿನ ರಾಜ ಸಿಂಹ ನಿರ್ಭಯವಾಗಿ ಒಂಟಿಯಾಗಿ ನಡೆದಾಡುತ್ತೆ, ಹೆದರಿಕೊಳ್ಳುವ ಮನುಷ್ಯನಿಗೆ ಒಂಟಿಯಾಗಿ ನಡೆದಾಡುವ ಧೈರ್ಯ ಇರುವುದಿಲ್ಲ. ಆಡು-ಕುರಿಗಳು ಹೆದರಿಕೆಯಿಂದ ಸಮೂಹದಲ್ಲಿ ತುಂಬಿಕೊಳ್ಳುತ್ತಿರುತ್ತವೆ. ನಾವು ದೇಶವಾಸಿಗಳು ಕೂಡ ಆಳುವವನ ಆತಂಕ, ಆಕ್ರಮಣಕಾರಿಗಳ ಹೆದರಿಕೆಯಿಂದ ಆಡು-ಕುರಿಗಳ ಹಾಗೆ ಪ್ರಭಾಹೀನರಾಗಿದ್ದೆವು, ಜನರ ಹೃದಯದಲ್ಲಿ ನೆಲಸಿದ್ದ ಈ ಕೊಲೆಗಡುಕ ಪೌರುಷಹೀನವಾದ ಭಯವನ್ನು ಬಾಪೂಜಿ ತೆಗೆದೋಡಿಸಿದ್ದರು. ಇದು ಅವರ ದೊಡ್ಡ ಕೊಡುಗೆಯಾಗಿತ್ತು, ಒಮ್ಮೆ ಲಕ್ಷ್ಯ ಏನೆಂಬುದು ತಿಳಿದ ಮೇಲೆ ಹೆದರಲು ಕಾರಣ ಇರುವುದೇ ಇಲ್ಲ. ಉದ್ದೇಶ ಸರಿಯಾಗಿದ್ದ ಮೇಲೆ ಹೆದರುವುದೆಲ್ಲಿ ಬಂತು? ಸಾಯುವುದು ಬದುಕುವುದು ದೇವರ ಕೈಲಿದೆ, ಅದರಿಂದ ನಮಗೆ ಸರಿ ಅನಿಸಿದ್ದಕ್ಕಾಗಿ ನಿರ್ಭಯತೆ. ಧೈರ್ಯವಂತನಾದವನು ಸಾಮಾನ್ಯವಾಗಿ ತಪ್ಪು ಕೆಲಸ ಮಾಡುವುದಿಲ್ಲ. ನಾವು ಸುಳ್ಳು-ವಂಚನೆ ಮಾಡುವುದಕ್ಕೂ ಕಾರಣವೇನು ಅಂದರೆ ಒಳಗಿಂದ ನಾವು ತಗ್ಗಿರುತ್ತೇವೆ, ಹೆದರಿರುತ್ತೇವೆ, ಒಂದು ಸಾರಿ ಪುಕ್ಕಲುತನ ದೂರವಾಯಿತೆಂದರೆ ನ್ಯಾಯ, ನೀತಿ, ಸತ್ಯವಂತಿಕೆಯ ಮಾರ್ಗವನ್ನು ನಮ್ಮದಾಗಿಸಿಕೊಳ್ಳಲು ಕಷ್ಟವಾಗುವುದಿಲ್ಲ. ಸಹಜ ಸ್ವಭಾವದಿಂದ ಪ್ರಾಮಾಣಿಕತೆ ಮತ್ತು ನ್ಯಾಯವನ್ನು ಪರಿಪಾಲಿಸುತ್ತಿರುತ್ತೇವೆ, ಆದ್ದರಿಂದ ಸತ್ಯಾಚರಣೆಗೆ ನಿರ್ಭಯತೆ ಬೇಕೇ ಬೇಕು.

ಬಾಪೂಜಿಯವರ ಜೀವನವೆಲ್ಲಾ ಸತ್ಯಶೋಧನೆಯಲ್ಲಿ ಕಳೆದಿತ್ತು. ಅವರಿಗೆ ಸತ್ಯದರ್ಶನವೆಂದರೆ ಈಶ್ವರ ಸಾಕ್ಷಾತ್ಕಾರ ಎಂದರ್ಥ ಬರುತ್ತಿತ್ತು. ತನ್ನ ದೇಶದ ಅಸಂಖ್ಯ ದೀನ-ದಲಿತರಲ್ಲಿ ಅವರು ತಮ್ಮ ಪರಮೇಶ್ವರನನ್ನು ಕಂಡಿದ್ದರು,

ದರಿದ್ರನಾರಾಯಣನ ಸೇವೆಯನ್ನು ಅವರು ಬೈಗು–ಬೆಳಗು ಆರಾಧಿಸುತ್ತಿದ್ದರು, ಬಡವರ ಸೇವೆಯಲ್ಲಿ ಸತ್ಯದ ರೂಪದಲ್ಲಿ ಈಶ್ವರ ಪ್ರಾಪ್ತಿಯಾಗುತ್ತೆ, ಈ ರಹಸ್ಯವನ್ನು ಬಾಪೂಜಿ ತಮ್ಮದಾಗಿಸಿಕೊಂಡಿದ್ದರು ಮತ್ತು ತನ್ನ ಜೊತೆಗಾರರಿಗೂ ಅದನ್ನೇ ಕಲಿಸಿದ್ದರು. ಸತ್ಯವನ್ನು ಶೋಧಿಸುವುದು ಬಾಪೂಜಿಯ ವಿಶೇಷವಾಗಿತ್ತು ಎಂದೇನಲ್ಲ, ವೈವಸ್ವತ ಮನುವಿನ ಕಾಲದಿಂದಲೂ ಸತ್ಯದ ಶೋಧನೆ ನಡೆಯುತ್ತಲೇ ಇದೆ. ಪ್ರತಿಯೊಂದು ಕಾಲದಲ್ಲೂ ಮಂತ್ರದ್ರಷ್ಟಾರರು ಸತ್ಯದ ಹಿರಣ್ಯಮುಖವನ್ನು ತೆರೆದು ತೋರಿಸಬಯಸಿದ್ದಾರೆ, ಎಷ್ಟೋ ಜನರು ಸತ್ಯದರ್ಶನವನ್ನು ಪಡೆದೂ ಇದ್ದರು. ಆದರೆ ಇಂತಹ ಪ್ರಯೋಗಗಳು ಸೀಮಿತವಾಗಿದ್ದವು, ಮತ್ತು ಈ ಪ್ರಯೋಗಗಳ ಪ್ರಸಾರ ವ್ಯಾಪಕವಾಗಿರಲಿಲ್ಲ. ದಟ್ಟವಾದ ಕಾಡು ಅಥವಾ ದೊಡ್ಡ ಪರ್ವತದ ಗುಹೆಗಳಲ್ಲಿ ಇದರ ಪ್ರಯೋಗಗಳಾಗಿದ್ದವು. ಅದರಿಂದ ಅವುಗಳ ಗೂಢರಹಸ್ಯವೂ ಸಾಮಾನ್ಯ ಮನುಷ್ಯನವರೆಗೂ ತಲುಪಿರಲಿಲ್ಲ. ವಿಶ್ವದ ಇತಿಹಾಸದಲ್ಲಿ ಬಾಪೂಜಿ ಮೊದಲ ಬಾರಿ ಕೋಟ್ಯಂತರ ಜನರನ್ನು ತನ್ನೊಂದಿಗೆ ಕರೆದುಕೊಂಡು ಸತ್ಯವನ್ನು ಸಫಲವಾಗಿ ಪ್ರಯೋಗಿಸಿದರು. ಇಪತ್ತು ವರ್ಷಗಳ ಕಾಲ ಬಾಪೂಜಿ ದಕ್ಷಿಣ ಆಫ್ರಿಕಾದಲ್ಲಿ ಸತ್ಯಸಾಧನೆ ಮಾಡುತ್ತಿದ್ದರು. ಆನಂತರದಲ್ಲಿ ಮೂವತ್ತೈದು ವರ್ಷಗಳವರೆಗೆ ತನ್ನ ದೇಶದಲ್ಲಿ ಅದೇ ಆರಾಧನೆಯನ್ನು ಮುಂದುವರಿಸಿದ್ದರು. ಆ ಸತ್ಯಶೋಧನೆಯಲ್ಲೇ ಅವರು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಕಾರ್ಯ ಮಾಡಿದರು, ಗುಲಾಮಗಿರಿಯ ಹಳ್ಳದಲ್ಲಿ ಸತ್ಯಸಾಧನೆ ಸಾಧ್ಯವಾಗುತ್ತಿರಲಿಲ್ಲ.

ದಕ್ಷಿಣ ಆಫ್ರಿಕಾದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ೨೫ ಪೌಂಡ್‌ನ ಅಮಾನವೀಯ ಟ್ಯಾಕ್ಸ್ ಇತ್ತು, ಅದನ್ನು ತೆಗೆಸಿಹಾಕಿದ್ದರು, ಏಷ್ಯಾಟಿಕ್ ಕಚೇರಿಯ ಹಂತಕ ಕಾನೂನುಗಳನ್ನು ದೂರಗೊಳಿಸಿದ್ದರು. ಬಾಪೂಜಿ ತಾವು ವಿಷಯವನ್ನರಿಯದೆ, ಗಾಳಿಯ ಮಾತು ಕೇಳಿ ಅಥವಾ ಬೇರೆಯವರ ಅಭಿಪ್ರಾಯದ ಮೇಲೆ ಯಾವ ಕೆಲಸವನ್ನೂ ಕೈಗೊಳ್ಳುತ್ತಿರಲಿಲ್ಲವಾದ್ದರಿಂದ ಇಷ್ಟೆಲ್ಲಾ ಮಾಡಲು ಸಾಧ್ಯವಾಯಿತು. ಪ್ರತಿಯೊಂದು ಸಮಸ್ಯೆಯನ್ನೂ ಚೆನ್ನಾಗಿ ಅರ್ಥಮಾಡಿಕೊಂಡು ಅದಕ್ಕೆ ಸಂಬಂಧಪಟ್ಟ ಕಾನೂನನ್ನು ಅಭ್ಯಾಸ ಮಾಡಿ ಬಾಪೂಜಿ ಅನ್ಯಾಯದಿಂದ ಕೂಡಿದ್ದ ಕಾನೂನನ್ನು ಶಾಂತಿಯಿಂದ ವಿರೋಧಿಸಿದ್ದರು. ಅವರು ಎರಡು ಪಕ್ಷಗಳನ್ನೂ ಕೇಳಿ ಅರ್ಥಮಾಡಿಕೊಳ್ಳುತ್ತಿದ್ದರು ಮತ್ತು ಅವುಗಳ ನಡುವಣ ಸೂಕ್ಷ್ಮ–ಶುದ್ಧ ಸತ್ಯವನ್ನು ತಿಳಿದುಕೊಂಡು ನಂತರವೇ ಬಾಪೂಜಿ ಸಂತುಲಿತವಾದ ಕಾರ್ಯಕೈಗೊಳ್ಳುತ್ತಿದ್ದರು. ಒಮ್ಮೆ ಸತ್ಯವನ್ನು ಸ್ಥಿರಪಡಿಸಿಕೊಂಡ ನಂತರ ಬಾಪೂಜಿ ತಮ್ಮ ಸತ್ಯಾಗ್ರಹದಲ್ಲಿ ಅಚಲರಾಗಿರುತ್ತಿದ್ದರು. ತಮ್ಮ ಗುರಿಸಾಧನೆಗಾಗಿ ಸಾಯಲೂ ಸಿದ್ಧವಾಗಿರುತ್ತಿದ್ದರು. ಶತ್ರುವಿಗೂ ಅನ್ಯಾಯ ಮಾಡುತ್ತಿರಲಿಲ್ಲ. ಮತ್ತು ಅವನ ಅನುಕೂಲ–ಅನಾನುಕೂಲವನ್ನು ಅರ್ಥ ಮಾಡಿಕೊಂಡು ನ್ಯಾಯೋಚಿತವಾಗಿ ಕಾರ್ಯ

ಕೈಗೊಳ್ಳುತ್ತಿದ್ದರು. ಇದು ಬಾಪೂಜಿಯ ಕಾರ್ಯಶೈಲಿಯ ರಹಸ್ಯವಾಗಿತ್ತು.

೧೯೧೭ರಲ್ಲಿ ಬಿಹಾರ ಬಹಳ ಕೆಟ್ಟು ಸ್ಥಿತಿಯಲ್ಲಿತ್ತು. ಒಂದು ಕಡೆ ಜಾಗೀರದಾರಿ ಪದ್ಧತಿ. ಮತ್ತೊಂದು ಕಡೆ ವಿದೇಶಿ ಆಳ್ವಿಕೆ ಅತ್ಯಾಚಾರಿ ಸರಕಾರ, ಹೀಗೆ ಎರಡು ದಂಡೆಗಳಲ್ಲಿ ಬಿಹಾರ ಸಾಯುತ್ತಿತ್ತು. ಹೀಗೆ ಹಿಂದುಳಿದ, ಹಿಂಜರಿದ ಜನರನ್ನ ಇಟ್ಟುಕೊಂಡು ಬಾಪೂಜಿ ಚಂಪಾರಣದ ಸತ್ಯಾಗ್ರಹ ನಡೆಸಿದ್ದರು. ಬಿಹಾರಿಗಳು ದೀನರು–ಹೀನರಾಗಿ ಕಂಡರೂ ಅವರ ಬುದ್ಧಿ ಮಾತ್ರ ವಿಲಕ್ಷಣವಾಗಿತ್ತು. ಬಿಹಾರದಲ್ಲಿ ಹೆಸರುವಾಸಿಯಾಗಿದ್ದ ವಕೀಲರು ಬಾಪೂಜಿ ಜೊತೆ ಕುಳಿತು ತೀವ್ರವಾಗಿ ಮೂಲ ಚರ್ಚೆ ನಡೆಸಿ ಸತ್ಯಾಗ್ರಹದ ಮೀಮಾಂಸೆಯನ್ನು ಅರ್ಥಮಾಡಿಕೊಂಡಿದ್ದರು, ನಂತರದಲ್ಲಿ ತಮ್ಮನ್ನು ಅರ್ಪಿಸಿಕೊಂಡು ಬಾಪೂಜಿಯ ಶ್ರೇಷ್ಠ ಸಹಚರರಾದರು. ಚಂಪಾರಣದ ನೀಲಿ ಉದ್ಯೋಗದ ಸತ್ಯಾಗ್ರಹ ಸತ್ಯಾಸತ್ಯದ ವಿಜಯದ ಶ್ರೇಷ್ಠ ಉದಾಹರಣೆಯಾಗಿತ್ತು. ಚಂಪಾರಣದ ಸತ್ಯಾಗ್ರಹದ ಮಾಧ್ಯಮದಿಂದ ಬಾಪೂಜಿ ದೇಶವಾಸಿಗಳಿಗೆ ಸತ್ಯಕ್ಕಾಗಿ ಹೊಡೆದಾಡುವುದು ಕಾನೂನುಬಾಹಿರವಾಗುವುದಿಲ್ಲ ಎಂದು ತಿಳಿಸಿದ್ದರು. ಬಿಹಾರದ ಕೃಷಿ ಕಾರ್ಮಿಕರು ಮತ್ತು ರೈತರ ಬೇಡಿಕೆ ನ್ಯಾಯೋಚಿತವಾಗಿತ್ತು, ಸತ್ಯಾಗ್ರಹ ಅದಕ್ಕೆ ಸರಿಯಾದ ತಾರ್ಕಿಕ ಮಾರ್ಗವಾಗಿತ್ತು, ಅದು ಸಫಲವಾಯಿತು ಕೂಡ. ಸತ್ಯಾಗ್ರಹದಲ್ಲಿ ಕೋಪ, ಹಿಂಸೆಗೆ ಅವಕಾಶವಿರುವುದಿಲ್ಲ, ಯಾವುದೇ ಮಾತು, ಬೇಡಿಕೆ ಸರಿಯಾಗಿದ್ದಲ್ಲಿ ಅದಕ್ಕಾಗಿ ಕೋಪ ಮಾಡಿಕೊಳ್ಳುವ ಅಗತ್ಯವಿರುವುದಿಲ್ಲ ಎಂದು ಗಾಂಧೀಜಿ ದೃಢವಾಗಿ ನಂಬಿದ್ದರು. ಸತ್ಯದೆದುರು ಕೋಪ ನಿರರ್ಥಕವಾಗುತ್ತದೆ. ನಮ್ಮ ಬೇಡಿಕೆಗಳು ತಪ್ಪಾಗಿದ್ದರೆ ಕೋಪ ಖಂಡಿತ ಮಾಡಿಕೊಳ್ಳಬಾರದು. ಈ ಸತ್ಯಾಗ್ರಹದ ಸಾಧನ ಅಹಿಂಸೆಯೇ ಆಗಿರಲು ಸಾಧ್ಯ ಸತ್ಯಕ್ಕೆ ಆಯುಧಗಳ ಕ್ಷುದ್ರ ಸಾಧನದ ಅಗತ್ಯ ಇರುವುದೇ ಇಲ್ಲ, ವಾಸ್ತವವಾಗಿ ಆಯುಧಗಳ ಬೆಂಬಲಪಡೆದು ಸತ್ಯವನ್ನು ಸಾಧಿಸಲಾಗುವುದಿಲ್ಲ. ಆದುದರಿಂದ ಸತ್ಯಾಗ್ರಹದಲ್ಲಿ ಅಹಿಂಸಕ ಪ್ರತೀಕಾರ ಅನಿವಾರ್ಯವಾಗುತ್ತದೆ.

ಅಹಿಂಸಾತ್ಮಕ ಆಂದೋಲನಕ್ಕೆ ಮತ್ತೊಂದು ಮೂಲಭೂತ ಕಾರಣವೂ ಇದೆ. ನಮ್ಮ ವಿಶಾಲದೇಶ ವಿವಿಧತೆಯಿಂದ ಕೂಡಿದೆ. ಇಲ್ಲಿ ಅನೇಕ ಜಾತಿ, ಅನೇಕ ಧರ್ಮಗಳು, ಅನೇಕ ರೀತಿ ನೀತಿಗಳು ಇವೆ. ಆದರೆ ಇವುಗಳ ಮೇಲ್ನೋಟದ ಒಳಗೆ ವಾಸಿಸುವ ದೇಶದ ಆತ್ಮ ಒಂದೇ ಆಗಿದೆ. ದೇಶದಲ್ಲಿ ವಿಸಂವಾದದಿಂದ ಉಳಿಯುವ ಒಂದೇ ಒಂದು ಸಫಲ ಉಪಾಯ ಅಹಿಂಸಾತ್ಮಕ ಆಂದೋಳನವಾಗಿತ್ತು. ಇಲ್ಲದಿದ್ದರೆ ಹಿಂಸೆಯ ವಿರೋಧಾಭಾಸದಲ್ಲಂತೂ ದೇಶ ತೀವ್ರವಾಗಿ ಘಾಸಿಗೊಂಡು ಚಿಂದಿಯಾಗುತ್ತಿತ್ತು ಮತು ದಾಸ್ಯದ ಬೇಡಿಗಳು ಮತ್ತೂ ಸೆಟೆದುಕೊಳ್ಳುತ್ತಿದ್ದವು. ಆದ್ದರಿಂದ ನಮ್ಮ ದೇಶದ ಸಂದರ್ಭದಲ್ಲಿ ಅಹಿಂಸೆ ಪರಮ ಆವಶ್ಯಕ ಸಾಧನವಾಗುತ್ತದೆ. ಅಹಿಂಸೆ ದುರ್ಬಲನ ಸಾಧನವಲ್ಲ, ವಾಸ್ತವವಾಗಿ

ಧೈರ್ಯಶಾಲಿಗಳೇ ಅಹಿಂಸೆಯ ಪ್ರಯೋಗಮಾಡಬಲ್ಲರು. ಕಾಪುರುಷನ ಹೃದಯದ ಮಿಡಿತ ಆಯುಧದ ಶಬ್ದದಿಂದ ಮರೆಯಾಗಬಲ್ಲದು, ಬಂದೂಕದ ಗುಂಡಿನ ಬಲದಿಂದ ಜನ ಪರಾಕ್ರಮಿಗಳಾಗಬಲ್ಲರು, ಆದರೆ ಆ ಪರಾಕ್ರಮ ಕ್ಷಣಭಂಗುರವಾಗಿರುತ್ತದೆ. ಪಿಸ್ತೂಲಿನ ಮದ್ದು ಮುಗಿದ ತಕ್ಷಣ ಧೈರ್ಯವೆಲ್ಲಾ ಮಾಯವಾಗುತ್ತದೆ. ಅಹಿಂಸಕ ಸತ್ಯಾಗ್ರಹಿ, ಅವನು ತನ್ನ ಪ್ರತಿಜ್ಞೆಗಾಗಿ ಸಾಯುವುದಕ್ಕೂ ಸಿದ್ಧವಾಗಿರುತ್ತಾನಾದ್ದರಿಂದ ಅವನು ನಿಃಶಸ್ತ್ರನಾಗಿ ತೀವ್ರ ನಿರ್ಭೀತತೆ ತೋರಲು ಸಾಧ್ಯವಾಗುತ್ತದೆ, ಸಾಯುವುದಕ್ಕೆ ತಯಾರಿರುವವನನ್ನು ಪ್ರಪಂಚದ ಯಾವ ಶಕ್ತಿಯೂ ಹೆದರಿಸಲಾಗದು, ಅವನಿಂದ ಏನನ್ನೂ ಕಸಿದುಕೊಳ್ಳಲಾರದು. ನಮ್ಮ ಹುಟ್ಟು, ಸಾವು ಎರಡರ ಸಮಯ ಕೂಡ ಎರಡೂ ಸುನಿಶ್ಚಿತವಾಗಿರುತ್ತವೆ. ಅದರಿಂದ ಹೆದರಲು ಕಾರಣವೇ ಇಲ್ಲ. ಸಾಯಲೇಬೇಕು, ಆದರೆ ಸಾವು ಬರುವುದಕ್ಕೆ ಮುಂಚೆಯೇ ಹೆದರಿಕೊಂಡು ಚೂರು–ಚೂರೇ ಏಕೆ ಸಾಯುತ್ತಿರಬೇಕು? ಹೆದರುಪುಕ್ಕಲನ ಪ್ರತಿಯೊಂದು ಕ್ಷಣ ಕೂಡ ಸಾವಿನ ಭಯದಿಂದ ಕೂಡಿರುತ್ತದೆ, ಅಸಹ್ಯವಾಗಿರುತ್ತದೆ, ಆದ್ದರಿಂದ ಅಹಿಂಸಕ ಸತ್ಯಾಗ್ರಹ ಹೇಡಿಗಳ ಸಾಧನವಲ್ಲ, ವಾಸ್ತವವಾಗಿ ಧೈರ್ಯಶಾಲಿಯಾಗಿರುವವರೇ ಅಹಿಂಸೆಯನ್ನು ಆಚರಿಸಬಲ್ಲ. ಬಾಪೂಜಿ ಸತ್ಯಾಗ್ರಹದ ಈ ಮೀಮಾಂಸೆಯನ್ನು ನಾಲ್ಕಾರು ಜನಕ್ಕೆ, ಅಥವಾ ಹತ್ತಿಪ್ಪತ್ತು ಜನರಿಗೆ ಮಾತ್ರ ನೀಡಲಿಲ್ಲ, ಅವರು ನಲವತ್ತು ಕೋಟಿ ಭಾರತೀಯರಿಗೆ ಈ ಮಾತು ತಿಳಿಸಿಕೊಟ್ಟಿದ್ದರು. ಆಗ ಆ ದೀನ–ಹೀನ ಭಾರತವಾಸಿ ಎದೆಎತ್ತಿ ಸಾಯಲು ಸಿದ್ಧನಾದ, ಅವನೆದುರು ಬ್ರಿಟಿಷ್ ಸಾಮ್ರಾಜ್ಯದ ಸಿಡಿಮದ್ದುಗಳೂ ನಿಷ್ಫಲವಾದವು. ಆ ಶುದ್ಧ ನಿರ್ಭೀತತೆ ಐಷಾರಾಮದಿಂದ ಅಥವಾ ಬೇಜವಾಬ್ದಾರಿತನ ಇದ್ದಲ್ಲಿ ಬೆಳೆಯಲಾರದು, ಅದಕ್ಕಾಗಿ ನಿರಂತರ ಎಚ್ಚರವಾಗಿರಬೇಕಾಗುತ್ತದೆ.

ಸತ್ಯಾಗ್ರಹಿಯು ನಿರಂತರವಾಗಿ ಸಾಧನೆ ಸಿದ್ಧಿಸಲೆಂದು ಪ್ರಯತ್ನ ಮಾಡುತ್ತಿರಬೇಕಾಗುತ್ತದೆ. ಸ್ವಲ್ಪ ಅಜಾಗರೂಕನಾದರೂ ಪ್ರಖರತೆ ಮುಗಿದು ಹೋಗುತ್ತದೆ, ಅನಿರೀಕ್ಷಿತ ಭಯ ನಮ್ಮ ಕತ್ತು ಹಿಚುಕುತ್ತದೆ. ಆದುದರಿಂದ ನಿರ್ಭೀತತೆಯ ಸುಖ ಸಿಗಲು ಜಾಗೃತನಾಗಿರಬೇಕಾದುದು ಅನಿವಾರ್ಯವಾಗುತ್ತದೆ, ಶಿಸ್ತಿನಿಂದಲೇ ಅಂತಹ ಕರ್ಮಠವಾದ ಸಹನಶೀಲತೆ ಬರುತ್ತದೆ. ಪ್ರತಿಯೊಂದು ಸಂದರ್ಭದಲ್ಲೂ ಬಾಪೂಜಿ ಈ ಶಿಸ್ತು ಮತ್ತು ಸಹನಶೀಲತೆಯನ್ನು ಪುನರುಚ್ಚರಿಸಿ ಅದಕ್ಕಾಗಿ ಆಗ್ರಹಪಡಿಸಿದರು. ಸಹನಶೀಲತೆ ಮತ್ತು ಸಂಯಮಕ್ಕಾಗಿ ತ್ಯಾಗ, ಬಲಿದಾನ ಅಗತ್ಯವಾಗುತ್ತದೆ, ಸರಳತೆಯನ್ನು ತಮ್ಮದಾಗಿಸಿಕೊಳ್ಳದಿದ್ದರೆ ವೈರಾಗ್ಯ ಸ್ಥಿರವಾಗುವುದಿಲ್ಲ, ದಿನಗಳು ಕಳೆದಂತೆ ಅವರ ಮಾತಿನ ಸತ್ಯ ಈಗ ಅರ್ಥವಾಗುತ್ತಿದೆ. ನಮ್ಮ ಆಸೆ–ಪರಿಗ್ರಹ ಹೆಚ್ಚಾದಾಗ ತ್ಯಾಗ, ಬಲಿದಾನದ ಭಾವನೆಯಲ್ಲಿ ಕೊರತೆಯಾಗುತ್ತದೆ. ಆ ಹಂತದಲ್ಲಿ ಶಿಸ್ತು, ಸಹನಶೀಲತೆ ಮತ್ತು ಕರ್ಮಠತೆ ಕುಂಠಿತವಾಗುತ್ತದೆ, ಆ ಸ್ಥಿತಿಯಲ್ಲಿ

ನಿರ್ಭಯವಾಗಿ ವಿರೋಧಿಸಲು ಕಷ್ಟವಾಗುತ್ತದೆ. ಅನ್ಯಾಯದ ಪ್ರತೀಕಾರಕ್ಕೆ ಸಿದ್ಧವಾಗದ ಜನರ ಸ್ವಾತಂತ್ರ್ಯ ಸಹಜವಾಗಿ ಲುಪ್ತವಾಗುತ್ತದೆ. ವಾಸ್ತವವಾಗಿ, ಅನ್ಯಾಯ ಮತ್ತು ಅನೀತಿಯಿಂದ ಸಮಾಧಾನಪಡುವ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಯೋಗ್ಯನಾಗುತ್ತಾನೆ, ಗುಲಾಮಗಿರಿ ಅವನ ಕತ್ತುಹಿಚಕುತ್ತದೆ. ಸ್ವಾಭಿಮಾನವನ್ನಿಟ್ಟುಕೊಂಡು ಸ್ವಾತಂತ್ರ್ಯ ಬಯಸುವ ವ್ಯಕ್ತಿ ನಿರ್ಭೀತ, ಸಾಹಸಿಯಾಗಿರುವುದು ಮೊಟ್ಟಮೊದಲ ಅವಶ್ಯಕತೆಯಾಗಿರುತ್ತದೆ. ಆದುದರಿಂದಲೇ ಬಾಪೂಜಿ ದೇಶದ ಮಹಿಳೆಯರಿಗೆ, ನಿಮ್ಮ ಶೀಲ ಗೌರವ ಉಳಿಸಿಕೊಳ್ಳಲು ಖೂನಿ ಮಾಡುವುದು ಕೂಡ ತಪ್ಪಾಗುವುದಿಲ್ಲ, ಆದರೆ ಹಾಗಿಲ್ಲದೆ ಬದುಕುವುದು ಮಹಾಪಾತಕವಾಗುತ್ತದೆಂದು ಹೇಳುತ್ತಿದ್ದರು. ಒಂದು ಬಾರಿ ಧೈರ್ಯವಂತನಾದರೆ ಹಿಂಸೆಯ ಉಪಯೋಗ ಇರುವುದೇ ಇಲ್ಲ. ನಿರ್ಭೀತನಾದ ಸತ್ಯಾಗ್ರಹಿ ರಾಜದಂಡ, ಕಾನೂನು ರೀತಿ ಬಂಧನ, ಕೆಟ್ಟ ಹೆಸರು, ಸಮಾಜದ ಬಹಿಷ್ಕಾರ ಇತ್ಯಾದಿಗಳಿಗೆ ಹೆದರುವುದಿಲ್ಲ. ವಾಸ್ತವವಾಗಿ ಆ ರೀತಿಯ ಬಂಧನ, ಶಿಕ್ಷೆ ಸತ್ಯಾಗ್ರಹಿಯ ಶೌರ್ಯವನ್ನು ಹೆಚ್ಚಿಸುತ್ತವೆ. ಭಾಷಣ, ಪಿಷ್ಟಪೇಷಣ ಅಥವಾ ಪುಸ್ತಕಗಳ ಮೂಲಕ ಅಹಿಂಸಕ ಪರಾಕ್ರಮವನ್ನು ಕಲಿಸುವುದಿಲ್ಲ. ಸಮಾಜದ ಕಠೋರ ದೃಷ್ಟಿಯ ಎದುರಿಗೆ ಕಠೋರ ವಾಸ್ತವದ ಭೂಮಿಯ ಮೇಲೆ ಬಾಪೂಜಿ ಈ ಸರಳವಾದ, ಶುದ್ಧ ಅಹಿಂಸೆಯ ಶಸ್ತ್ರವನ್ನು ಪ್ರತಿಪಾದಿಸಿದ್ದರು. ದೇಶವಾಸಿಗಳು ಆ ನಿರ್ಭಯ ಅಹಿಂಸೆಯನ್ನು ತಮ್ಮದಾಗಿಸಿಕೊಂಡರು. ಈ ತೆರನಾದ ಅಹಿಂಸಕ ಕ್ರಾಂತಿಯಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತ್ತು.

ಈ ಅಪೂರ್ವವಾದ ಕ್ರಾಂತಿಯ ಮೂಲ ಮಂತ್ರವೆಂದರೆ ಸತ್ಯಾಗ್ರಹ, ದೇವರು ಮತ್ತು ಸತ್ಯ ಎರಡೂ ಒಂದೇ ಎಂದು ಒಪ್ಪಿಕೊಂಡ ನಂತರ ಸತ್ಯಾಗ್ರಹ ಒಂದೇ ಮಾರ್ಗ. ದೇವರನ್ನು ಪಡೆಯಲು ಸತ್ಯಾಗ್ರಹ ಆವಶ್ಯಕ ಮತ್ತು ಅದರ ಮಾಧ್ಯಮ ಅಹಿಂಸೆ. ಸತ್ಯಾಗ್ರಹದ ಮುಖಾಂತರವೇ ರಾಜಕೀಯ, ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ದೂಷಣೆಗಳು ದೂರವಾಗುತ್ತವೆ. ಸತ್ಯಾಗ್ರಹದ ಪ್ರಯೋಗ ಪೂರೈಸುವುದಕ್ಕೆ ಮೊದಲೇ ಯಾರೋ ಹುಚ್ಚ ಗಾಂಧೀಜಿಗೆ ಗುಂಡು ಸಿಡಿಸಿದ, ಆದ್ದರಿಂದ ಸತ್ಯಾಗ್ರಹದ ಈ ಶೋಧನೆ ಈಗಲೂ ಅಪೂರ್ಣವಾಗಿಯೇ ಇದೆ. ಆ ಶೋಧನೆ ಪೂರೈಸಿದಾಗ ಸಮಾಜವಾದ ಸಾಕಾರಗೊಳ್ಳುತ್ತದೆ, ಸರ್ವೋದಯ ಆವಿಷ್ಕೃತವಾಗುತ್ತದೆ. ಸತ್ಯಾಗ್ರಹ ಧರ್ಮದ ಹೋರಾಟ, ಧರ್ಮ ಅಂದರೆ ಸಂಕೀರ್ಣವಾದ ಜಾತಿ–ಮತ ಅಲ್ಲ, ರೂಢಿಗತವಾದ ವಿಧಿ–ವಿಧಾನವನ್ನು ಪಾಲಿಸುವುದಲ್ಲ, ಕರ್ತವ್ಯಪಾಲನೆಯಾಗಿರುತ್ತದೆ., ಅಂತಹ ಧರ್ಮದ ಹೋರಾಟವನ್ನು ಹುಡುಕಬೇಕಾಗುವುದಿಲ್ಲ. ಅದು ಸ್ವತಃ ಎದುರಿಗೆ ಬರುತ್ತದೆ. ಅದರಲ್ಲಿ ನಾಯಕ, ನೇತಾರ ಅಥವಾ ಅವನ ನೇತೃತ್ವದ ಅಗತ್ಯ ಕೂಡ ಕಡಿಮೆಯೇ ಇರುತ್ತದೆ. ಸತ್ಯಾಗ್ರಹದಲ್ಲಿ ಮುಚ್ಚಿಡುವಂಥದ್ದೇನೂ ಇರುವುದಿಲ್ಲ, ಅಥವಾ ಅದಕ್ಕಾಗಿ ಯಾವ ಪೂರ್ವಸಿದ್ಧತೆಯ ಅಗತ್ಯ ಕೂಡ ಇರುವುದಿಲ್ಲ.

ಅದು ಸತ್ಯವನ್ನು ಕೇಂದ್ರಬಿಂದುವಾಗಿಟ್ಟುಕೊಂಡು ನೈತಿಕ ಸಾಹಸದ ಆಧಾರದ ಮೇಲೆ ನಡೆಯುತ್ತದೆ. ಆದ್ದರಿಂದ ಸತ್ಯಾಗ್ರಹದ ಸೋಪಾನಗಳು ಸ್ವತಃ ನಿರ್ಮಿತವಾಗುತ್ತವೆ ಮತ್ತು ಪ್ರಕಟವಾಗುತ್ತವೆ. ಸತ್ಯಾಗ್ರಹದ ಅತಿ ಚಿಕ್ಕ ಸೈನಿಕ ಕೂಡ ತನ್ನ ಕರ್ತವ್ಯವೇನೆಂಬುದನ್ನು ಸ್ವತಃ ಅರಿತುಕೊಳ್ಳುತ್ತಾನೆ, ಅವನಿಗೆ ಯಾರ ನಿರೀಕ್ಷಣೆ ಅಥವಾ ಅಂಕೆ ಅಗತ್ಯವಾಗುವುದಿಲ್ಲ. ಅವನು ಸ್ವತಃ ಶಿಸ್ತನ್ನು ಪಾಲಿಸುತ್ತಾನೆ. ಅವನನ್ನು ಯಾರು ಆಳುತ್ತಾರೆ ಆಗ ಲಕ್ಷ್ಯ ಪೂರೈಸುತ್ತದೆ. ಸಫಲತೆ ಸಿಗುವ ಸಾಧ್ಯತೆ ಇರುತ್ತದೆ, ಆದರೆ, ಆ ವಿಜಯ ನಿರ್ದಂಶಕವೂ ಹಾಗೂ ನಿರ್ವಿಕಾರವೂ ಆಗಿರುತ್ತದೆ, ಇಂತಹ ಸಫಲತೆಯೆದುರು ಮಾನಹಾನಿ ಅಥವಾ ಅಪಕೀರ್ತಿ ಎಂಬುದಿರುವುದಿಲ್ಲ. ಅದರಿಂದ ಪರಾಜಯದ ಕಟುತೆ ಬಾರದಂತೆ ಎರಡೂ ಪಕ್ಷಗಳು ಉಳಿಯುತ್ತವೆ. ಪ್ರತಿ ದಿನದ ಜೀವನದಲ್ಲಿ ಈ ರೀತಿಯ ಸತ್ಯಾಗ್ರಹದ ಅವಕಾಶಗಳು ಬರುವುದು ಹೇಗೆ ಅನ್ನುವುದರ ಹೊಚ್ಚ ಹೊಸ ಅನುಭವ ಇದೀಗ ಆಯಿತು. ಸ್ವಲ್ಪ ಸಂಕೋಚದಿಂದಲೇ ಅದನ್ನು ವರ್ಣಿಸುತ್ತಿದ್ದೇನೆ. ಆದರೆ ಇಂತಹ ಘಟನೆಗಳು ಪ್ರತಿದಿನ ನಡೆಯುತ್ತಲಿವೆ, ಅದನ್ನು ನಿರಾಕರಿಸಬೇಕಾದ್ದು ಯುವಪೀಳಿಗೆಯ ಕರ್ತವ್ಯವೆಂದು ನಂಬುತ್ತೇನೆ. ಆದ್ದರಿಂದಲೇ ವೈಯಕ್ತಿಕ ಅನುಭವಗಳನ್ನು ವರ್ಣಿಸಲು ಧೈರ್ಯ ವಹಿಸುತ್ತಿದ್ದೇನೆ.

ನಮ್ಮ ಮಗ ರಾಮ್ ಹತ್ತು ದಿನಗಳ ರಜೆ ಪಡೆದು ಕಾಬೂಲಿಗೆ ಬಂದಿದ್ದ. ದೆಹಲಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಿಕ್ಕ ಪ್ರಯಾಣಿಕರ ಜೊತೆ ರಾಮ್ ಕೂಡಾ ನಿಂತಿದ್ದ. ಸುರಕ್ಷಾ ತಪಾಸಣೆ ನಡೆದ ನಂತರ ಅಲ್ಲಿ ಕೆಲವು ನೌಕರರು ಕೇರಳದ ಇಬ್ಬರು ಯುವ ಪ್ರಯಾಣಿಕರ ಮೇಲೆ ಜೋರು ಮಾಡತೊಡಗಿದರು. ಇಬ್ಬರೂ ಹುಡುಗರ ಪಾಸ್‌ಪೋರ್ಟ್ ಕಸಿದುಕೊಂಡು ಕೇರಳದಿಂದ ಕಾಬೂಲಿಗೆ ಹೋಗಲು ಹಣ ಎಲ್ಲಿಂದ ಬಂತೆಂದು ಕೇಳತೊಡಗಿದರು. ಸುರಕ್ಷತಾ ಸಿಬ್ಬಂದಿಯಿಂದ ಆತಂಕಿತರಾಗಿ ಆ ಇಬ್ಬರೂ ಕೇರಳದ ಯುವಕರು ಗಾಬರಿಗೊಂಡರು. ಆಗ ರಾಮ್ ಪರೀಕ್ಷಣಾ ಅಧಿಕಾರಿಗಳನ್ನು ತಡೆದು, 'ನಿಮ್ಮ ಕೆಲಸ ಸುರಕ್ಷಣಾ ತಪಾಸಣೆ ನಡೆಸುವುದು, ಟಿಕೆಟ್ ಹಣ ಎಲ್ಲಿಂದ ಬಂತು ಎಂದು ಕೇಳಲು ನಿಮಗೆ ಅಧಿಕಾರವಿಲ್ಲ' ಎಂದ. ರಾಮ್‌ನ ದೃಢತೆಯ ಎದುರು ಆ ಅಧಿಕಾರಿಗಳು ಕೇರಳದ ಪ್ರಯಾಣಿಕರಿಗೆ ಮುಂದೆ ಹೋಗಬಿಟ್ಟರು, ಇಲ್ಲದಿದ್ದರೆ ಅವರಿಂದ ಬಿಡಿಸಿಕೊಳ್ಳಲು ಲಂಚ ಕೊಡಬೇಕಾದ್ದು ಅವರಿಗೆ ಅನಿವಾರ್ಯವಾಗುತ್ತಿತ್ತು. ಸ್ವಲ್ಪಹೊತ್ತಿನ ನಂತರ ವಿಮಾನ ನಿಲ್ದಾಣದ ಅಧಿಕಾರಿಯೊಬ್ಬ ಡ್ಯೂಟಿಫ್ರೀ ಅಂಗಡಿಯಿಂದ ಹೆಂಡದ ಬಾಟ್ಲಿ ತರಲು ರಾಮ್‌ಗೆ ಡಾಲರ್ ಕೊಡಲು ಪ್ರಯತ್ನಿಸಿದ. ರಾಮ್ 'ನಾನು ಈ ಕೆಲಸ ಮಾಡಲಾರೆ' ಎಂದ. 'ಯಾಕೆ ಧೈರ್ಯ ಇಲ್ಲವೇನು? ಬಹಳ ಹೆದರಿಕೆಯಾಗುತ್ತದೇನು?' ಎಂದೆಲ್ಲಾ ಹೇಳಿ ಆ ಅಧಿಕಾರಿ ರಾಮ್‌ನನ್ನು ಛೇಡಿಸಿದ. ಈ ತೆರನಾದ ದೂಷಣೆಯನ್ನು ಗಮನಿಸದೆ ರಾಮ್ ಹೇಳಿದ, 'ಇಲ್ಲ,

ಆ ರೀತಿಯದೇನೂ ಇಲ್ಲ, ಆದರೆ ನಾನು ಆ ರೀತಿಯ ಕೆಲಸವನ್ನು ಮಾಡುವುದಿಲ್ಲ.' ಬಹುಶಃ ಒಂದೇ ದಿನ ಈ ಎರಡು ಅನುಭವಗಳಾದದ್ದು ಸಾಕಾಗಲಿಲ್ಲವೆಂದು ತೋರುತ್ತದೆ. ಅದರಿಂದ ಸ್ವಲ್ಪ ಹೊತ್ತಿನ ನಂತರ, ಒಬ್ಬ ಪುಷ್ಟನಾಗಿದ್ದ ಅಮೆರಿಕಾ ನೌಸೇನೆಯ ಸೈನಿಕ ಭಾರತೀಯ ಕಸ್ಟಮ್ ಅಧಿಕಾರಿಯ ಜೊತೆ ವಿವಾದ ಮಾಡಿ, ಆ ಕಸ್ಟಮ್ ಅಧಿಕಾರಿಯ ಕೈಕಾಲು ಮುರಿದುಬಿಡುವೆನೆಂದು ಬೆದರಿಕೆ ಹಾಕುತ್ತಿದ್ದ. ಒಬ್ಬ ವಿದೇಶಿ ಪ್ರಯಾಣಿಕ ತನ್ನ ಎಲ್ಲೆಯನ್ನು ಮೀರಿ ಬಿಳಿ ತೊಗಲಿನ ಅಹಂಕಾರದಲ್ಲಿ ಭಾರತೀಯ ಕಾನೂನನ್ನು ಉಲ್ಲಂಘಿಸುವುದರ ಜೊತೆಗೆ ಭಾರತೀಯ ನೌಕರನನ್ನು ಅಪಮಾನಗೊಳಿಸಿ, ಅವನನ್ನು ಹೆದರಿಸಿ, ಬೆದರಿಕೆ ನೀಡಿದ್ದು ರಾಮ್‌ಗೆ ಸಹಿಸಲಿಲ್ಲ. ಆಗ ರಾಮ್ ಆ ಪುಷ್ಟ ಅಮೆರಿಕನ್‌ಗೆ ದೃಢವಾಗಿ ಹೇಳಿದ: 'ಈ ನೌಕರ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾನೆ. ಆ ಪರಿಸ್ಥಿತಿಯಲ್ಲಿ ನೀನು ಅವನಿಗೆ ವ್ಯರ್ಥವಾಗಿ ಬೆದರಿಕೆ ಏಕೆ ಹಾಕುತ್ತಿದ್ದೀಯೆ?' ಅಮೆರಿಕನ್ ಪ್ರಯಾಣಿಕನಿಗೆ ಆಶ್ಚರ್ಯವಾಯಿತು. ಅವನು ಮಾತನಾಡದೆ ಆ ಜಾಗದಿಂದ ಹೊರಟುಹೋದ. ಈ ಮೂರೂ ಚಿಕ್ಕ ಘಟನೆಗಳೇ ಆದರೂ ಬಹಳ ಮಹತ್ವದವು: ಎರಡರಲ್ಲಿ ಅನ್ಯಾಯವನ್ನು ಶಾಂತವಾಗಿ ದೃಢವಾಗಿ ವಿರೋಧಿಸಿದ್ದು, ಒಂದರಲ್ಲಿ ಅನೀತಿಗೆ ಅಸಹಕಾರ ತೋರಿಸಿದ್ದು. ಘಟನೆಗಳು ತೀರಾ ನಗಣ್ಯವಾಗಿದ್ದವು, ಸ್ವತಂತ್ರದೇಶದ ಯುವಕರು ಜಾಗೃತರಾಗಿದ್ದು ಧೈರ್ಯದಿಂದ ಅನ್ಯಾಯ–ಅನೀತಿಯನ್ನು ವಿರೋಧಿಸದಿದ್ದರೆ ಸಮಾಜದಲ್ಲಿ ಶಾಂತಿ, ಕಾನೂನು ವ್ಯವಸ್ಥೆ ಸ್ಥಿರವಾಗಿರುವುದಿಲ್ಲ. ಸರಕಾರಿ ನೌಕರರ ಭ್ರಷ್ಟಾಚಾರದಿಂದ ಉಳಿಯುವುದಕ್ಕಾಗಿ ದೇಶದ ಪ್ರತಿಯೊಬ್ಬ ನಾಗರಿಕನೂ ಎಚ್ಚರಿಕೆಯಿಂದ ನಿಯಮ ಮತ್ತು ಕರ್ತವ್ಯ ಪಾಲಿಸಬೇಕು, ಅನ್ಯಾಯವನ್ನು ವಿರೋಧಿಸಬೇಕು. ಆ ತೆರನಾದ ಅಹಿಂಸಾತ್ಮಕ ವಿರೋಧವನ್ನು ಸತ್ಯಾಗ್ರಹವೆಂದು ಕರೆಯುತ್ತಾರೆ. ಇದೇ ಬಾಪೂಜಿಯವರ ಕೊಡುಗೆ.

ಇಂತಹ ಸತ್ಯಾಗ್ರಹ ಮಾಡುವುದು ಬಹಳ ಸುಲಭ, ಅದಕ್ಕೆ ಬಹಳ ಕಡಿಮೆ ಹಣ ಬೇಕಾಗುತ್ತದೆ. ಸರಿಯಾದ ಸತ್ಯಾಗ್ರಹ ಅನ್ನುವುದು ತಪ್ಪಾಗುತ್ತದೆ, ಆದರೂ ನಾನು ಅದನ್ನ ಬಳಸುತ್ತಿದ್ದೇನೆ. ಇವತ್ತಿನ ಯುಗದಲ್ಲಿ ಸತ್ಯಾಗ್ರಹದ ಲೇಬಲ್ ಅಡಿಯಲ್ಲಿ ಅನೇಕ ಅಸತ್ಯವಾದ ಆಚರಣೆಗಳು ನಡೆಯುತ್ತಿವೆ. ಸತ್ಯಾಗ್ರಹದಲ್ಲಿ ಹಣ, ಹಣ ಕೊಟ್ಟು ಖರೀದಿಸಿದ ಸಾಧನ–ಸಾಮಗ್ರಿಗಳ ಅಗತ್ಯ ಇರುವುದು ಬಹಳ ಕಡಿಮೆ. ಇದು ಸತ್ಯಾಗ್ರಹದ ನಿಜವಾದ ಲಕ್ಷಣ. ಚಂಪಾರಣ್ಯದಲ್ಲಿ ನಡೆದ ಎಲ್ಲಾ ಸತ್ಯಾಗ್ರಹಗಳ ಒಟ್ಟು ಖರ್ಚು ಮೂರು ಸಾವಿರ ರೂಪಾಯಿಗಳಿಗಿಂತ ಕಡಿಮೆಯಾಗಿತ್ತು. ಹಾಗೆ ನೋಡಿದರೆ ಆ ಕಾಲದಲ್ಲಿ ಒಬ್ಬ ವಕೀಲ ಮತ್ತು ಒಬ್ಬ ಬ್ಯಾರಿಸ್ಟರನ ಸಲಹೆ ತೆಗೆದುಕೊಳ್ಳುವುದಕ್ಕೆ ಹತ್ತು ಸಾವಿರ ರೂಪಾಯಿ ಫೀಸ್ ತೆಗೆದುಕೊಳ್ಳುತ್ತಿದ್ದರು. ಸತ್ಯಾಗ್ರಹ ದುಬಾರಿಯಾದರೆ ಸಾಮಾನ್ಯ ಜನರು ಅದನ್ನು

ಜಾರಿಗೆ ತರಲಾಗುವುದಿಲ್ಲ, ಸ್ವಇಚ್ಛೆ ಮತ್ತು ಸಾಮಾನ್ಯ ಖರ್ಚಿನಲ್ಲಿ ಸಮಾಜ ಸತ್ಯಾಗ್ರಹ ಮಾಡುವುದಕ್ಕಾಗದಿದ್ದರೆ, ಆಗ ಟ್ರಕ್‌ಗಳಲ್ಲಿ ತುಂಬಿ ಬಾಡಿಗೆಯ ಜನರನ್ನು ತರಬೇಕಾಗುತ್ತದೆ. ಅವರಿಗೆ ನಿಷ್ಠೆ ಇರುವುದಿಲ್ಲವಾದ್ದರಿಂದ ಸತ್ಯಾಗ್ರಹವನ್ನು ಅವರು ನಿಷ್ಫಲಗೊಳಿಸುತ್ತಾರೆ, ಅದಕ್ಕೂ ಮುಂದೆ ಅದನ್ನ ವಿಕೃತಗೊಳಿಸುತ್ತಾರೆ. ಸತ್ಯ–ಅಹಿಂಸೆಯ ಢೋಂಗಿ ನಡೆಯುವುದಿಲ್ಲ, ಅಂತಹ ಅಹಂಕಾರದ ಸತ್ಯಾಗ್ರಹ ವಿಫಲಗೊಳ್ಳುತ್ತದೆ ಮತ್ತು ಅಂತಹ ಸಂದರ್ಭದಲ್ಲಿ ಅದು ಮುರಿದುಹೋಗಿ ಲಕ್ಷ್ಯ ಕೂಡ ಪೂರೈಸುವುದಿಲ್ಲ. ಸತ್ಯಾಗ್ರಹದಲ್ಲಿ ಅದರದ್ದೇ ಒಂದು ಕಂಪ್ಯೂಟರ್ ಒಳಗೊಂಡಿರುತ್ತದೆ, ಸತ್ಯ ಕ್ಷಯಿಸಿದಂತೆ ಸತ್ಯಾಗ್ರಹದ ಪರಿಣಾಮವೂ ಕಡಿಮೆಯಾಗಿ ನಂತರ ದುರ್ಬಲವಾಗುತ್ತದೆ, ಸತ್ಯದಿಂದ ದೂರವಾಗಿ ಸತ್ಯಾಗ್ರಹದ ಒಳ್ಳೆಯ ಫಲ ಉಳಿಯುವುದಿಲ್ಲ, ಕೊಳೆತುಹೋಗುತ್ತದೆ.

ನಾನು ಸ್ವಲ್ಪ ವಿಸ್ತಾರವಾಗಿ ಸತ್ಯ, ಅಹಿಂಸೆ, ಸೇವೆ, ತ್ಯಾಗ, ಬಲಿದಾನ, ಶಿಸ್ತು, ಸರಳತೆ, ಮತ್ತು ಕರ್ಮಠತೆಯನ್ನ ವರ್ಣಿಸಿದ್ದೇನೆ. ಬಾಪೂಜಿ ಇವೆಲ್ಲದರ ಗೂಢ ತತ್ವಗಳನ್ನು ಅತಿ ಸರಳ ಹಾಗೂ ಸುಬೋಧವಾಗಿ ತಿಳಿಸುತ್ತಿದ್ದರು, ಅದರಿಂದ ಈ ದೇಶದ ಕಡುಬಡವ, ಅವಿದ್ಯಾವಂತ ಆದಿವಾಸಿ ಕೂಡ ಅವರ ಮಾತನ್ನು ಅರ್ಥ ಮಾಡಿಕೊಳ್ಳುತ್ತಿದ್ದ, ಅದನ್ನು ಅನುಸರಿಸುತ್ತಿದ್ದ ನಾವು ಈ ದಿನಗಳಲ್ಲಿ ದೊಡ್ಡ–ದೊಡ್ಡ ಭಾಷಣ ಮತ್ತು ಜಟಿಲವಾದ ವಾದ–ವಿವಾದಗಳನ್ನು ಕೇಳಿಸಿಕೊಳ್ಳುತ್ತೇವೆ, ಎಷ್ಟೋ ಸಾರಿ ಅದರ ತಲೆ–ಬುಡ ಒಂದೂ ಅರ್ಥವಾಗುವುದಿಲ್ಲ. ಒಂದೇ ವಿಷಯಕ್ಕೆ ಬೇರೆ–ಬೇರೆ ಅರ್ಥ ರಚಿಸುತ್ತಾರೆ. ಬಾಪೂಜಿಯವರ ಮಾತು, ವಿಚಾರಗಳನ್ನು ಕುರಿತು ಎಂದೂ ಎಲ್ಲೂ ವಿವಾದ ಏಳಲೇ ಇಲ್ಲ. ಅವರ ಭಾಷೆ ಎಲ್ಲೂ ಜಟಿಲವಾಗಿರುತ್ತಿರಲಿಲ್ಲ. ಜೀವನದ ಮಹಾನ್ ಸತ್ಯಗಳು ಸರಳವಾಗಿರುತ್ತವೆ, ಬಾಪೂಜಿ ಈ ಆದಿಸತ್ಯಗಳಿಗೆ ಸರಳವಾಗಿ ಪ್ರಚಲಿತ ಭಾಷೆಯಲ್ಲಿ ಸರಳವಾದ ಭಾಷೆಯಲ್ಲಿ ವಿಶ್ಲೇಷಣೆ ನೀಡಿದರು, ಅದರಿಂದ ದೇಶದ ಜನರು ಅವರಲ್ಲಿ ರಕ್ತಗತವಾಗಿದ್ದ ಸಂಸ್ಕಾರ ಗುಣದ ಸಹಾಯದಿಂದ ಈ ಮೌಲ್ಯಗಳನ್ನು ಗ್ರಹಿಸಿದ್ದರು. ಬಾಪೂಜಿ ಎಂದೂ ಯಾವ ಕೆಲಸವನ್ನೂ ಪ್ರಚಾರಕ್ಕಾಗಿ, ಪ್ರಸಾರವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಲಿಲ್ಲ. ಪ್ರಚಾರಕ್ಕಾಗಿ ಅವರ ಆತ್ಮಕಥೆಯನ್ನೂ ಬರೆಯಲಿಲ್ಲ. ಸತ್ಯ–ಸಾಧನೆಯ ನಡುವೆ ಪಡೆದ ಅಮೂಲ್ಯ ಅನುಭವಗಳ ಶೃಂಖಲೆಯ ಹಾಗಿದೆ ಅವರ ಆತ್ಮಕಥೆ. ಬಾಪೂಜಿ ಸ್ವಯಂಪೂರ್ಣರಾಗಿದ್ದವರು, ಪಾರಂಗತರಾಗಿದ್ದವರು ಎಂದು ಕೂಡ ಸಾಧಿಸಿದವರಲ್ಲ. ಅವರ ಆತ್ಮಕಥೆಯಲ್ಲಿ ಸಾಮಾನ್ಯ ಮನುಷ್ಯನ ವಾಸ್ತವಿಕ ಜೀವನದಲ್ಲಿ ಸತ್ಯದ ಪರೀಕ್ಷೆ ಆಗುವ ರೀತಿಯನ್ನು ಕುರಿತು ನೇರ ಸರಳವಾದ ಪ್ರಾಮಾಣಿಕ ವರ್ಣನೆ ಇದೆ.

ಆಚಾರ್ಯ ಕೃಪಲಾನಿಯವರು, 'ಬಾಪೂಜಿ ಅಮೋಘವಾದ ವ್ಯಕ್ತಿ ಏನಲ್ಲ,

ಅವರು ತಪ್ಪು ಮಾಡುವುದೇ ಇಲ್ಲ ಅಂತ ಏನಿಲ್ಲ' ಎಂದು ಹೇಳುತ್ತಿದ್ದರು. ಅವರು ಬೇಕಾದಷ್ಟು ತಪ್ಪುಗಳನ್ನೇ ಮಾಡುತ್ತಿದ್ದರು. ಆದರೆ ಆ ತಪ್ಪುಗಳಲ್ಲೆಲ್ಲಾ ಬಾಪೂಜಿ ಬಹಳ ಶುದ್ಧವಾಗಿ, ಸತ್ಯವಾಗಿ ಇರುತ್ತಿದ್ದರು. ಕಾಂಗ್ರೆಸ್ ನೇತಾರರು ತಮ್ಮ ಶ್ರೇಷ್ಠ ನಿರ್ಣಯಗಳ ಬಗ್ಗೆ ಕೂಡ ಅವರಷ್ಟು ಸರಿಯಾಗಿರುತ್ತಿರಲಿಲ್ಲ. ಬಾಪೂಜಿ ವಿಶೇಷತೆ ಏನಿತ್ತು ಅಂದರೆ ಅವರು ಬೇರೆಯವರ ತಪ್ಪುಗಳನ್ನು ನೋಡುತ್ತಿರಲಿಲ್ಲ, ಹಾಗೂ ತಮ್ಮ ತಪ್ಪುಗಳನ್ನು ಸಾವಿರ ಪಟ್ಟು ಹೆಚ್ಚು ಇರುವ ಹಾಗೆ ಹೇಳುತ್ತಿದ್ದರು. ಆದ್ದರಿಂದ ಬಾಪೂಜಿಯ ಹಿಮಾಲಯದಂಥ ತಪ್ಪಿನಿಂದಲೂ ದೇಶಕ್ಕೆ ಹಾನಿ ಉಂಟಾಗಲಿಲ್ಲ. ಬಾಪೂಜಿ, ಶುದ್ಧಹೃದಯದಿಂದ ಮೂಡಿದ ತಪ್ಪು ಕೂಡ ಆಶೀರ್ವಾದ ರೂಪದ್ದಾಗಬಹುದು ಎನ್ನುತ್ತಿದ್ದರು. ನಮ್ಮ ಯೋಗ್ಯತೆ–ಅಯೋಗ್ಯತೆಗಳು ಕೂಡ ಭಗವಂತನ ಅನುಕಂಪೆಯಾಗಿರುತ್ತವೆ, ಯಾರಾದರೂ ಉತ್ಕೃಷ್ಟನಾದ ವ್ಯಕ್ತಿ ತನ್ನೆಲ್ಲ ಶ್ರೇಷ್ಠತೆಯೊಂದಿಗೆ ದೇಶ ಸೇವೆ ಮಾಡುವಾಗ ಅಸಫಲನಾಗಬಹುದು. ಕೊನೆಗಂತೂ ಅವಿದ್ಯಾವಂತನಾದ ಹಳ್ಳಿಗನಿಗೆ ಅಪೂರ್ಣರಾಗಿದ್ದ ಬಾಪೂಜಿ ಜೊತೆ ಹೆಚ್ಚು ಆತ್ಮೀಯತೆ ಇತ್ತು. ಶ್ರೇಷ್ಠತೆ ಎದುರು ಆ ಬಡಪಾಯಿ ದೇಶವಾಸಿ ಹೆದರಿ ದೂರ ಓಡಿಹೋಗುತ್ತಿದ್ದ. ಬಾಪೂಜಿ ಸತ್ಯಾಗ್ರಹವನ್ನು ವಿಜ್ಞಾನದ ಪ್ರಯೋಗವೆಂದು ಹೇಳುತ್ತಿದ್ದರು, ಅದರೊಳಗೆ ಸ್ವಲ್ಪ ಕಲಬೆರಕೆ ಮಾಡಿದರೂ, ತಪ್ಪು ಮಾಡಿದರೂ ವೈಜ್ಞಾನಿಕ ಪ್ರಯೋಗಗಳು ಅಸಫಲವಾಗುವ ಹಾಗೆ ಸತ್ಯಾಗ್ರಹದ ಪ್ರಯೋಗದಲ್ಲಿಯೂ ಪೂರ್ಣ ಶುದ್ಧತೆ ಬೇಕಾಗುತ್ತದೆ, ಆಗ ಅದರಿಂದ ಹೆಚ್ಚು ಪರಿಣಾಮ ಸಿಗುತ್ತದೆ ಎನ್ನುತ್ತಿದ್ದರು. ಕೊಲಂಬಸ್ ಹಾಗೆ ಬಾಪೂಜಿ ಕೂಡ ಸತ್ಯಾಗ್ರಹ ವಿಜ್ಞಾನದ ಅನ್ವೇಷಕರಾಗಿದ್ದರು, ಒಮ್ಮೆ ಯಾವಾಗಲಾದರೂ ತಪ್ಪಾದರೂ ದಿಕ್ಕು ಸರಿಯಾಗಿರುತ್ತಿತ್ತು ಮತ್ತು ಸತ್ಯಾಗ್ರಹದ ಹಿನ್ನೆಲೆ ತರ್ಕಸಂಗತವಾಗಿದ್ದು ಬಲವಾಗಿರುತ್ತಿತ್ತು. ಅದರ ಸಾಕ್ಷಿಯಾಗಿ ನೋಡಿದಾಗ, ನೂರ ಐವತ್ತು ವರ್ಷಗಳ ಗುಲಾಮಗಿರಿಯನ್ನು ನಿರಸ್ತ್ರರಾಗಿದ್ದ ನಲವತ್ತು ಕೋಟಿ ನಾಗರಿಕರು ಸೋಲಿಸಿಬಿಟ್ಟಿದ್ದರು.

* * * *

# ೪೨. ವಿರಾಸತ್ತಿನ ವ್ಯಾಖ್ಯೆ

ಸಾರ್ವಜನಿಕರ ಹಣವನ್ನು ಇವನು–ಅವನು ತಿಂದನೆಂದು ಹೇಳುವ ಮಾತುಗಳು ಇತ್ತೀಚೆಗೆ ಸಾಕಷ್ಟು ಕೇಳಿ ಬರುತ್ತವೆ. ಸಾರ್ವಜನಿಕ ಹಣವನ್ನು ಗುಳುಂ ಮಾಡದ ಯಾವೊಂದು ಸಂಸ್ಥೆ ಕೂಡ ಇಂದು ದೇಶದಲ್ಲಿ ಇಲ್ಲ. ಒಂದು ಕಾಲದಲ್ಲಿ ಭಯಂಕರ ಬಡತನ ಎದುರಿಸುತ್ತಿದ್ದ ದೇಶದ ಜನ ಕೂಡ ಚಂದಾ ಕೊಡಲು ಹಿಂದೆ–ಮುಂದೆ ನೋಡುತ್ತಿರಲಿಲ್ಲ. ನನ್ನ ಹಣ ಸದುಪಯೋಗವಾಗುತ್ತದೆ ಅಂತ ಅವನಿಗೆ ಒಂದು ನಂಬಿಕೆ ಇರುತ್ತಿತ್ತು. ಯಾರೂ ಅದನ್ನು ಹಾಳುಮಾಡುವುದಿಲ್ಲ, ಕಷ್ಟಪಟ್ಟು ಸಂಪಾದಿಸಿರುವ ಹಣದ ದುರುಪಯೋಗವಾಗಲ್ಲ ಎಂಬ ನಂಬಿಕೆ ಇರುತ್ತಿತ್ತು. ಈ ನಂಬಿಕೆಯಿಂದ ಪ್ರೇರಿತರಾಗಿ ತೀರ ದುಃಸ್ಥಿತಿಯಲ್ಲಿದ್ದ ಭಿಕಾರಿ ಕೂಡ ಬಿಹಾರದ ದಂಗೆಯಲ್ಲಿ ಸಿಲುಕಿದ್ದ ಜನರಿಗೆ ಪರಿಹಾರ ಒದಗಿಸುವುದಕ್ಕೋಸ್ಕರ ದಿನವಿಡೀ ಭಿಕ್ಷೆ ಬೇಡಿ ಬಂದ ಹಣವನ್ನು ದಾನವಾಗಿ ನೀಡಿದ್ದ. ಬಾಪೂಜಿಯಂತೂ ಅತಿ ಹೆಚ್ಚಾಗಿ ಚಂದಾ ಸಂಗ್ರಹಿಸುವವರಲ್ಲಿ ಒಬ್ಬರಾಗಿದ್ದರು, ತನ್ನ ದೇಶದಲ್ಲಿ ದರಿದ್ರರಾಗಿದ್ದ ಜನರು ದಾನ ನೀಡುತ್ತಿದ್ದರೆ ಮಹಾತ್ಮಾಜಿಗೆ ಆ ಹಣವನ್ನು ಸ್ವೀಕರಿಸುವಾಗ ಪುಣ್ಯದ ಭಾವನೆ ಬರುತ್ತಿತ್ತು. ಬಾಪೂಜಿ ತಮ್ಮ ಜೀವನದಲ್ಲಿ ಎಷ್ಟೋ ಫಂಡ್ಸ್ ಸಂಗ್ರಹಿಸಿದರು: ಜಲಿಯನ್‌ವಾಲಾ ಫಂಡ್, ತಿಲಕ್ ಸ್ವರಾಜ್ ಫಂಡ್, ದೇಶಬಂಧು ಫಂಡ್, ಖಾದಿ ಫಂಡ್. ಕೊನೆಗೆ ಹರಿಜನ ಫಂಡ್‌ಗಂತೂ ಅವರು ತೀರಿಕೊಳ್ಳುವವರೆಗೂ, ತೀರಿಕೊಂಡ ಮೇಲೆ ಅವರ ಅಗ್ನಿಸಂಸ್ಕಾರ ಆಗುತ್ತಿದ್ದಾಗಲೂ ಜಮಾ ಆಗುತ್ತಲೇ ಇತ್ತು. ಬಾಪೂಜಿ ತರಹ ಬೇರೊಬ್ಬ ಬನಿಯಾ ಇರಲಿಲ್ಲ ಅನ್ನಬಹುದು. ಒಂದೊಂದು ಚಿಕ್ಕಾಸನ್ನೂ ಹಿಡಿದಿಡುತ್ತಿದ್ದರು. ಆದರೆ ಆ ಕಾಸು ಹಣವೆಲ್ಲಾ ದೇಶಸೇವೆಗಾಗಿ ಖರ್ಚಾಗುತ್ತಿತ್ತು, ತಮಗಾಗಿ ಅಲ್ಲ.

ಸಾರ್ವಜನಿಕರ ಒಂದು ಪೈಸಾ ಹಾಳಾದರೂ ಬಾಪೂಜಿಗೆ ದುಃಖವಾಗುತ್ತಿತ್ತು ಅನ್ನುವುದಕ್ಕೆ ಎಷ್ಟೋ ಉದಾಹರಣೆಗಳಿವೆ. ಯಾರಾದರೂ ಆ ಪೈಸಾ ಕಳೆದು ಬಿಟ್ಟರೆ ಬಾಪೂಜಿ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಸ್ವತಃ ಉಪವಾಸ ಮಾಡುತ್ತಿದ್ದರು. ಊಟವಾದ ನಂತರ ಅರ್ಧ ಲವಂಗ ತಿನ್ನಲು ಅವರು ಇಷ್ಟಪಡುತ್ತಿದ್ದರು. ಮಾರನೆಯ ದಿನ ಅದೇ ಮಿಕ್ಕ ಅರ್ಧ ಲವಂಗವೇ ಬೇಕೆನ್ನುತ್ತಿದ್ದರು. ಅದನ್ನು ಯಾರಾದರೂ ಹಾಳುಮಾಡಿಬಿಟ್ಟರೆ ಎಂಬ ಉದ್ದೇಶ ಅವರಿಗೆ. ಅವರು ವೈಯಕ್ತಿಕವಾಗಿ ಮತ್ತು

ಸಾರ್ವಜನಿಕ ಮಿತವ್ಯಯವನ್ನು ಬಹಳ ಜಾಗರೂಕತೆಯಿಂದ ನಿರ್ವಹಿಸುತ್ತಿದ್ದರು. ಈ ವಿಷಯ ಕುರಿತು ಬಾಪೂಜಿ ನಮ್ಮ ತಂದೆಗೆ ಬರೆದೊಂದು ಪತ್ರ ಈ ಸಂದರ್ಭಕ್ಕೆ ಸರಿ ಹೋಂದುತ್ತದೆ

**ಸಾಬರಮತಿ ಆಶ್ರಮ**

೭-೧೦-೨೮

ಚಿರಂಜೀವ ರಾಮದಾಸ,

ಹೆಸರಿಗೆ ಮಾತ್ರ ನಿನ್ನ ಪತ್ರಗಳು ಬರುತ್ತವೆ, ಸರದಾರ್‌ರಿಂದ ನಿನ್ನ ಜ್ವರದ ವಿಷಯ ತಿಳಿಯಿತು. ಗಾಯದಿಂದ ಜ್ವರ ಬಂದಿಲ್ಲ ಅನ್ನುವುದಾದರೆ ಏನೂ ತೊಂದರೆ ಇಲ್ಲ. ನೀನು ಒಂದು ಆಣೆ ಉಳಿಸಿದ್ದು ಒಳ್ಳೆಯದಾಯಿತು. ಆದರೆ ಮಣೀಲಾಲನಿಗೆ ಪತ್ರ ಕಳುಹಿಸುವುದಕ್ಕಾಗಿ ವಿನಾಕಾರಣ ನನ್ನ ತಪ್ಪಿನಿಂದಾಗಿ ಒಂದು ಆಣೆ ವ್ಯರ್ಥವಾಗಿ ಹೋಯಿತು. ಅಂದರೆ ಚರಖಾದಿಂದ ನೂಲು ತೆಗೆದಯುವವಳ ಒಂದು ದಿನದ ಮಜೂರಿ ಮುಳುಗಿಹೋಯಿತು ಅಂತ ಅರ್ಥ. ಅದಕ್ಕೆ ಪ್ರಾಯಶ್ಚಿತ್ತ ಇಲ್ಲ, ಸ್ವತಃ ಸಾಯದೆ ಯಾರೂ ಸ್ವರ್ಗಕ್ಕೆ ಹೋಗುವುದಿಲ್ಲ. ಬೇರೊಬ್ಬನಿಂದ ಪ್ರಾಯಶ್ಚಿತ್ತವನ್ನು ಮಾಡಿಸಲು ಆಗುವುದಿಲ್ಲ. ಅದನ್ನು ನಾನೇ ಮಾಡಬೇಕಾಗಿದೆ. ಪಾಪಕ್ಕೆ ಪ್ರಾಯಶ್ಚಿತ್ತ ಮಾಡುವುದು ಎಂದರೆ ಮತ್ತೆ ಅಂಥ ಪಾಪವನ್ನು, ತಪ್ಪನ್ನು ಮತ್ತೆಂದೂ ಮಾಡದಿರುವುದು. ತಪ್ಪಾಗಿಬಿಟ್ಟರೆ, ಅದರಿಂದ ತಪ್ಪಿಸಿಕೊಳ್ಳದೆ ಉಪಾಯವನ್ನು ಅರಸಬೇಕು. ಅದನ್ನು ಹುಡುಕಿಟ್ಟಿದ್ದೀನಿ. ಅದು ಎಷ್ಟರಮಟ್ಟಿಗೆ ಫಲಕಾರಿಯಾಗುತ್ತೋ ನೋಡಬೇಕು.

**– ಬಾಪೂಜಿಯ ಆಶೀರ್ವಾದ**

ಒಂದಾಣೆ ಹಾಳಾಯಿತೆಂದು ಇಷ್ಟರ ಮಟ್ಟಿಗೆ ಜಾಗರೂಕನಾಗಿ ಮನುಷ್ಯ ಚಿಂತಿಸಿದಾಗ, ಸಮಾಜ ಖಂಡಿತವಾಗಿ ಅವನನ್ನು ನಂಬುತ್ತದೆ ಅನ್ನುವುದರಲ್ಲಿ ಸಂಶಯವಿಲ್ಲ. ಬಾಪೂಜಿ ರಾಜಕೀಯ ಸ್ವಾತಂತ್ರ್ಯ, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ ಹಾಗೂ ಆಧ್ಯಾತ್ಮಿಕ ಸಾಧನೆಯನ್ನು ಒಟ್ಟೊಟ್ಟಿಗೇ ನಿರ್ವಹಿಸಿದ್ದರು. ಆದ್ದರಿಂದ ಅವರ ಹತ್ತಿರ ಎಲ್ಲಾ ತರಹೆಯ ವ್ಯಕ್ತಿತ್ವದ ಜನ ಬಂದರು, ಬಾಪೂಜಿ ಆಗಿಬಿಟ್ಟರು. ವಿನೋಬಾಜೀಗೆ ಚಿಕ್ಕಂದಿನಿಂದ ಹಿಮಾಲಯದ ತತ್ವಜ್ಞಾನಿಗಳ ಮತ್ತು ಬಂಗಾಳದ ಸಸ್ಯಶ್ಯಾಮಲಾ ಭೂಮಿಯಲ್ಲಿ ಮೂಡಿದ ಕ್ರಾಂತಿಕಾರಿಗಳ ಬಗ್ಗೆ ಆಕರ್ಷಣೆ ಇತ್ತು. ಅವರಿಗೆ ಈ ಎರಡೂ ವಸ್ತುಗಳು ಒಟ್ಟಿಗೇ ಬಾಪೂಜಿ ಬಳಿ ದೊರಕಿದವು. ಮುಮುಕ್ಷುವಿನ (ಮೋಕ್ಷಪಡೆಯಲಿಚ್ಛಿಸುವವನ) ಸಹನೆಯ ಶಾಂತಿ ಮತ್ತು ಸ್ವಾತಂತ್ರ್ಯದ ಕ್ರಾಂತಿ ಎರಡರ ಸಮನ್ವಯ ವಿನೋಬಾ ಅವರಿಗೆ ಬಾಪೂಜಿಯವರ ಚರಣಗಳಲ್ಲಿ ದೊರಕಿದವು. ಆದುದರಿಂದ ಆ ವಿಲಕ್ಷಣ ಋಷಿ ವಿನೋಬಾ ಬಾಪೂ ಮಯವಾಗಿ ಬಿಟ್ಟಿದ್ದರು.

ಬಾಪೂಜಿ ನುಡಿದದ್ದನ್ನೆಲ್ಲಾ ಮಾಡಿ ತೋರಿಸಿದರು. ಅವರ ಬಳಿ ಯಾವೊಂದು ವಿಶಿಷ್ಟವಾದ ಸಂದೇಶ ಇಲ್ಲವೆಂದವರು ಹೇಳುತ್ತಿದ್ದರು. ಅವರು ಪೈಗಂಬರ ಅಥವಾ ಮಸೀಹಾ (ದೇವದೂತ) ಆಗಿರಲಿಲ್ಲ, ಅವರು ಒಬ್ಬ ಸಾಮಾನ್ಯ ಮನುಷ್ಯರಾಗಿದ್ದರು, ದೇವರ ಸಾಧಕ ಮತ್ತು ಭಕ್ತರ ದಾಸಾನುದಾಸರಾಗಿದ್ದರು. ಅವರ ಜೀವನವೇ ಅವರ ಸಂದೇಶವಾಗಿತ್ತು. ಅವರ ಹೃದಯದಲ್ಲಿದ್ದುದು ಅವರ ಮಾತಿನಲ್ಲಿ ಮೂಡುತ್ತಿತ್ತು, ಮತ್ತದೇ ಬಾಹ್ಯಜೀವನದಲ್ಲಿ ಸಾಕಾರಗೊಳ್ಳುತ್ತಿತ್ತು. ಅವರ ಈ ವಿಶೇಷತೆಯನ್ನು ನೋಡಿ ಪ್ರಪಂಚ ಚಕಿತವಾಗಿತ್ತು. ಬಾಪೂಜಿ ಯಾವಾಗಲೂ ತನ್ನನ್ನು ಅಪೂರ್ಣವೆಂದೇ ಭಾವಿಸಿದ್ದರು. ಅವರು ಸುಳ್ಳು ಹೇಳುತ್ತಲೇ ಇರಲಿಲ್ಲ, ಅದರಿಂದ ಅವರು ಕೂಡ ಮಿಕ್ಕ ಸಾಮಾನ್ಯ ಜನರ ಹಾಗೆಯೇ ಅಪೂರ್ಣವಾಗಿದ್ದವರೆಂದು ತಿಳಿಯೋಣ. ಇಂದು ಅನೇಕ ಮಂದಿ ಮಹಾಪುರುಷರು ತಮ್ಮ ಬಗೆಗೆ ವಿಶೇಷ ಗೌರವ ಇಟ್ಟುಕೊಂಡಿರುತ್ತಾರೆ. ಅವರು ತಾವು ಮುಕ್ತರಾದ ಪೂರ್ಣಪುರುಷರೆಂದು ಪ್ರಕಟಪಡಿಸುತ್ತಾರೆ. ಜೊತೆಗೆ ತಮ್ಮನ್ನ ಭಗವಂತ, ಮಹರ್ಷಿ ಎಂದು ಹೇಳಿಕೊಂಡು ಭಕ್ತರ ಮೂಲಕ ಆ ರೀತಿ ಪ್ರಚಾರ–ಪ್ರಸಾರ ಮಾಡಿಸಿ ಕೊಳ್ಳುತ್ತಾರೆ, ಅಲ್ಲದೆ ಭಗವಾನ್ ಅಂತ ಕರೆಸಿಕೊಳ್ಳುತ್ತಾರೆ. ಬಾಪೂಜಿ ಹಾಗೆಂದೂ ಹೇಳಿಕೊಳ್ಳಲಿಲ್ಲ. ಅವರು ಕರ್ಮಯೋಗಿ ಮಹಾಪುರುಷರಾಗಿದ್ದವರು. ಪ್ರತಿದಿನ ಎರಡು ಸಾರಿ ಇಪ್ಪತ್ತು ನಿಮಿಷ ಪ್ರಾರ್ಥನೆ ಮಾಡುತ್ತಿದ್ದರು. ಮಿಕ್ಕ ಸಮಯ ನಿರಂತರವಾಗಿ ಕೆಲಸದಲ್ಲಿ ತೊಡಗಿರುತ್ತಿದ್ದರು. ಸಮಾಜಸೇವೆಯೇ ಅವರ ಧ್ಯಾನ, ಸಮಾಧಿ, ಮೆಡಿಟೇಷನ್ ಅಥವಾ ಸಾಧನೆ ಆಗಿತ್ತು. ಸಮಾಜ ಮತ್ತು ರಾಜಕೀಯದ ಪ್ರತಿಕ್ಷಣದ ಸಮಸ್ಯೆಗಳನ್ನು ಬಿಡಿಸುತ್ತಿದ್ದರು, ಹೃದಯದಲ್ಲಿ ಅಪೂರ್ವ ಶಾಂತಿಯನ್ನು ನೆಲೆಗೊಳಿಸಿದ್ದರು. ಗೀತೆಯ ಎರಡನೆಯ ಅಧ್ಯಾಯದಲ್ಲಿ ಭಗವಾನ್ ಶ್ರೀಕೃಷ್ಣ ಧನುರ್ಧಾರಿ ಅರ್ಜುನನಿಗೆ ಸ್ಥಿತಪ್ರಜ್ಞನಾದ ಮನುಷ್ಯನ ವ್ಯಾಖ್ಯಾನ ಮಾಡಿದ್ದಾರೆ. ನಾನು ಮೊಮ್ಮಗಳು, ಅತಿಶಯೋಕ್ತಿ ಮಾಡುತ್ತಿರುವುದನ್ನು ಕ್ಷಮಿಸಬೇಕು. ಗೀತೆಯಲ್ಲಿ ವರ್ಣಿಸಿರುವ ಸ್ಥಿತಪ್ರಜ್ಞನ ಅನಾಸಕ್ತಿಯ ಸಾಕ್ಷಾತ್ ಆಚರಣೆಯನ್ನು ನಾವು ಬಾಪೂಜಿಯಲ್ಲಿ ಕಾಣಬಹುದು.

ದೊಡ್ಡವರ ಎದುರಿನಲ್ಲಿ ಚಿಕ್ಕವರು ಕುಗ್ಗಿ ಹಿಂದೆ ಸರಿಯುವಂತಾಗಿ, ಅವರ ವಿಕಾಸಕ್ಕೆ ಅದರಿಂದ ತಡೆಯಾಗುವುದಾದರೆ ಅವರು ಮಹಾಪುರುಷರೆನ್ನಿಸಿಕೊಳ್ಳಲಾಗದು. ಮಹಾಪುರುಷನಾದವನು ಬಹಳ ಉದಾರಿಯಾಗಿದ್ದು, ತನ್ನ ವಾತ್ಸಲ್ಯ ನೀಡಿ, ಸಮಾಜವನ್ನು ಊರ್ಧ್ವಗಾಮಿಯಾಗಿಸಬೇಕು. (ಮೇಲಕ್ಕೆತ್ತಬೇಕು) ಗೋಕುಲದಲ್ಲಿದ್ದ ನಂದಪುತ್ರ ಕೃಷ್ಣ ಕನ್ಹೈಯಾ ಅತಿವೃಷ್ಟಿಯಾಗುತ್ತಿದ್ದಾಗ ಗೋವರ್ಧನ ಪರ್ವತವನ್ನೇ ಎತ್ತಿ ಹಿಡಿದಿದ್ದ, ಸಮಾಜ ಮತ್ತು ಹಸುಗಳನ್ನು ಮೇಘಗಳ ಪ್ರಳಯದಿಂದ ಉಳಿಸಿದ್ದ. ಇದು ಪುರಾಣಕಥೆ. ನಮ್ಮ ತರ್ಕಬುದ್ಧಿ ಅಂಥ ತಥ್ಯಗಳನ್ನು

ಸ್ವೀಕರಿಸದಿರಬಹುದು. ಆದರೆ ಇಂದಿನ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಮಹಾತ್ಮಾ ಗಾಂಧಿ ಅರ್ಧನಗ್ನ, ಅಜ್ಞಾನಿ ಮತ್ತು ಬಡರೈತರ ಸಹಾಯದಿಂದ ಇಷ್ಟು ದೊಡ್ಡ ದೇಶವನ್ನು ಸ್ವತಂತ್ರಗೊಳಿಸಿದ್ದರು. ಹಿಂದುಳಿದ, ಪತಿತ ಜನರನ್ನೂ ಸತ್ಯಾಗ್ರಹದ ಪ್ರಶಸ್ತ ಸೈನಿಕರನ್ನಾಗಿ ಮಾಡುವ ಉಪಾಯ ಬಾಪೂಜಿಗೆ ಸಿಕ್ಕಿತ್ತು ಎಂಬುದು ಈ ಮಾತಿನಿಂದ ತಿಳಿದುಬರುತ್ತದೆ. ಅವರಿಗೆ ಯಾರೂ ನಿಕೃಷ್ಟ ಎಂದಿರಲಿಲ್ಲ, ಯಾರೂ ಕೆಲಸಕ್ಕೆ ಬಾರದವನಾಗಿರಲಿಲ್ಲ. ಸ್ವಾತಂತ್ರ್ಯದ ಮಹಾಯಜ್ಞದಲ್ಲಿ ಎಲ್ಲರ ಉಪಯೋಗವಿತ್ತು. ಬಾಪೂಜಿಯ ಸಂಸರ್ಗ ಸಿಕ್ಕಿ ವ್ಯಕ್ತಿ ಚಿನ್ನದಂತಾಗುತ್ತಾನೆ, ಪ್ರಖರನಾದ ಸ್ವತಂತ್ರತೆಯ ಸೈನಿಕನಾಗುತ್ತಾನೆಂದು ಆಚಾರ್ಯ ಕೃಪಲಾನಿ ಹೇಳುತ್ತಿದ್ದರು. ಯಾವುದೇ ವ್ಯಕ್ತಿ ಹಾಗೂ ಯೋಜನೆ ಬಾಪೂಜಿ ಸ್ಪರ್ಶದಿಂದ ಅಪ್ರತ್ಯಾಶಿತವಾಗಿ ಸಫಲವಾಗುತ್ತಿತ್ತು. ಅವರ ಈ ಯೋಗ್ಯತೆಯನ್ನು ಮಾಯ–ಮಂತ್ರ ದುರ್ಬೋಧ ರಹಸ್ಯವೆಂದು ಭಾವಿಸಿ ಅದನ್ನು ನಿರಾಕರಿಸಬಾರದು. ಬಾಪೂಜಿ ಹೃದಯದಲ್ಲಿ ಮನುಷ್ಯರಾದವರೆಲ್ಲರನ್ನೂ ಕುರಿತು ಸಹಾನುಭೂತಿ ಇತ್ತು. ಯಾರ ತಪ್ಪುಗಳನ್ನು ನೋಡಿದಾಗಲೂ ಅವರಿಗೆ ತಮ್ಮ ತಪ್ಪುಗಳು ನೆನಪಾಗುತ್ತಿದ್ದವು, ಧೈರ್ಯ ಸಹಾನುಭೂತಿಯಿಂದ ಅಂತಹ ಜನರನ್ನು ಸಮಾಧಾನಪಡಿಸುತ್ತಿದ್ದರು. ಸರಿಯಾದ ಮಾರ್ಗಕ್ಕೆ, ಸತ್ಯವನ್ನಾಚರಿಸುವುದಕ್ಕೆ ಆಧಾರ ನೀಡುತ್ತಿದ್ದರು, ಅವರ ಅನಪೇಕ್ಷಿತ ಔದಾರ್ಯದಿಂದಾಗಿ ಜನ ಬಾಪೂಜಿಯನ್ನು ಮಹಾನ್ ಮನಸ್ಸಿನವರೆಂದು ಭಾವಿಸಿ ತಂದೆಯ ಹಾಗೆ ಅವರ ಬಳಿ ಸಮರ್ಪಿತರಾಗುತ್ತಿದ್ದರು.

ಕೆಲವರು ಬಾಪೂಜಿಯ ಅಹಿಂಸೆ ಮತ್ತು ಸತ್ಯಾಗ್ರಹ ಸಫಲವಾಯಿತೆನ್ನುತ್ತಾರೆ. ಎದುರಾಳಿಗಳು ಇಂಗ್ಲಿಷರು, ಅವರು ತಮ್ಮ ಸೌಜನ್ಯ, ಹೃದಯವಂತಿಕೆ, ನ್ಯಾಯ ಪೂರ್ಣ ಸಮಾನತೆಗಾಗಿ ಹೆಸರು ಗಳಿಸಿದ್ದವರು. ಇಂಗ್ಲಿಷರಿಗೆ ಬದಲಾಗಿ ಹಿಟ್ಲರನೋ, ಮುಸೋಲಿನಿಯೋ ಭಾರತ ದೇಶವನ್ನು ಆಳುತ್ತಿದ್ದಿದ್ದರೆ ಬಾಪೂಜಿಯವರ ಸತ್ಯಾಗ್ರಹ ವ್ಯರ್ಥವಾಗುತ್ತಿತ್ತು, ಕಾನ್‌ಸೆಂಟ್ರೇಷನ್ ಕ್ಯಾಂಪ್‌ನಲ್ಲಿ ಬಾಪೂಜಿ ಕತೆ ಮುಗಿದು ಹೋಗಿರುತ್ತಿತ್ತು. ಬಾಪೂಜಿಗೆ ಇಂಗ್ಲಿಷರ ಸಾಮಾಜಿಕ ವ್ಯವಸ್ಥೆ, ಸ್ವಚ್ಛತೆ, ಶಿಸ್ತು, ಚಟುವಟಿಕೆ ಮತ್ತು ಸ್ವದೇಶಪ್ರೇಮದ ಬಗ್ಗೆ ಗೌರವವಿತ್ತು. ಅದರಿಂದ ಇಂಗ್ಲಿಷರು ಮತ್ತು ಹಿಟ್ಲರ್ ನಡುವೆ ಭೂಮ್ಯಾಕಾಶಗಳಷ್ಟು ಅಂತರವಿತ್ತೆಂದು ಭಾವಿಸುವುದೂ ತಪ್ಪಾಗುತ್ತದೆ. ಸಾಮ್ರಾಜ್ಯವಾದದಲ್ಲಿ ಇಬ್ಬರೂ ಒಬ್ಬರೊಬ್ಬರ ಪ್ರತಿಕೃತಿಗಳೇ ಆಗಿದ್ದರು. ವಸಾಹತುಗಳನ್ನು ರಚಿಸುವಾಗ ಇಂಗ್ಲಿಷರ ಕ್ರೌರ್ಯ ಮತ್ತು ಕುಟಿಲತೆಯ ಅನೇಕ ಇತಿಹಾಸ ಪ್ರಮಾಣ ನೀಡುವ ಕತೆಗಳಿವೆ. ಆದರೆ ಇದು ಹೋಲಿಕೆಯ ಪ್ರಶ್ನೆಯಲ್ಲ. ಬಾಪೂಜಿ ಸತ್ಯಶೋಧಕರಾಗಿದ್ದವರು. ಅಸಫಲವಾಗುವುದನ್ನು ಸತ್ಯವೆಂದು ಹೇಗೆ ಹೇಳುವುದು, ಹಿಟ್ಲರ್ ಎದುರು ಬತ್ತಿಹೋಗುವುದೆಂಥ ಸತ್ಯ! ಸತ್ಯವೆಂದರೆ ಎಂತಹ ಪರಿಸ್ಥಿತಿಯಲ್ಲೂ ಶಾಶ್ವತವಾಗಿರುತ್ತದೆ, ಶಾಶ್ವತವಾಗಿರಬೇಕು. ಸತ್ಯಾಗ್ರಹ ಯಾವ

ಅಧಿಕಾರದ ದಯೆ, ದಾನದ ಮೇಲೆ ಆಶ್ರಿತವಾಗಿರುವುದಿಲ್ಲ. ಸತ್ಯಾಗ್ರಹ ಸ್ವಯಂಪ್ರೇರಿತವಾಗಿ– ಸ್ವಯಂ, ಪೋಷಿತವಾಗಿರುತ್ತದೆ. ಅಹಿಂಸೆಯ ಉಪಾಸಕನಿಗೆ ಮನುಷ್ಯ ಸ್ವಭಾವದ ಸಮತೆ, ಪ್ರೇಮದ ಅಮೋಘ ಶಕ್ತಿಯಲ್ಲಿ ದೃಢನಂಬಿಕೆ ಇರುತ್ತದೆ. ಅಹಿಂಸಕ ಸತ್ಯಾಗ್ರಹಿ ದೇವರನ್ನು ದೃಢವಾಗಿ ನಂಬುತ್ತಾನೆ. ತನ್ನ ಶ್ರದ್ಧೆಯಿಂದಾಗಿ ಆತನಲ್ಲಿ ಅದಮನೀಯ ಸಾಹಸ ಇರುತ್ತದೆ ಹಾಗೂ ಅವನು ತನ್ನ ವಿರೋಧಿಗಳನ್ನು ತೀವ್ರವಾಗಿ ವಿರೋಧಿಸುತ್ತಾನೆ. ಅಹಿಂಸಕವಾಗಿ ವಿರೋಧಿಸುವುದರಲ್ಲಿ ಅಪರಿಮಿತವಾಗಿ ಶಕ್ತಿ ಇರುತ್ತದೆ. ಮೇಲ್ನೋಟಕ್ಕದು ದುರ್ಬಲವಾಗಿ ಕಂಡು ಎದುರಾಳಿ ಭ್ರಮೆಗೊಳ್ಳುತ್ತಾನೆ. ಹಿಂಸೆಯಿಂದ ಹುಟ್ಟಿದ ಶೌರ್ಯ ಕೆಲಕಾಲ ಆತಂಕಗೊಳಿಸುತ್ತದಾದರೂ ಅದು ಕ್ಷಣಿಕವಾಗಿರುತ್ತದೆ. ಇತಿಹಾಸದ ಚಂಗೇಜ಼್ ಖಾನ್, ಹಿಟ್ಲರ್, ಮುಸೋಲಿನಿ, ಸ್ಟಾಲಿನ್ನರ ಹಿಂಸೆ ಇಂದು ಕೊನೆಗಂಡಿದೆ, ಆದರೆ ಭಗವಾನ್ ಬುದ್ಧನ ಮಹಾಕರುಣೆ ಮತ್ತು ಪ್ರೇಮದ ಸಂದೇಶ ಇಂದಿಗೂ ಶಾಶ್ವತವಾಗಿದೆ. ಎರಡು ಸಾವಿರ ವರ್ಷಗಳ ನಂತರವೂ ಬಿಹಾರದ ಗೃದ್ಧ್ರಕೂಟ ಪರ್ವತದ ಮೇಲೆ ನೀಡಿದ ತಥಾಗತನ ಸದ್ಧರ್ಮ ಪುಂಡರಿಕಾ ಪ್ರವಚನ ಇವತ್ತಿಗೂ ಅಷ್ಟೇ ಪ್ರಖರವಾಗಿದ್ದು ಪ್ರಭಾವಶಾಲಿಯಾಗಿದೆ.

ರೋಮ್‌ನ ಸಾಮ್ರಾಜ್ಯದ ಕಾಲದಲ್ಲಿ ಏಸುಕ್ರಿಸ್ತನ ವಿರುದ್ಧ ತೀವ್ರ ತಿರಸ್ಕಾರವಿತ್ತು. ರೋಮನ್ ಸಾಮ್ರಾಟ ನೀರೋ ಆ ನಿಶ್ಶಸ್ತ್ರ ಕ್ರಿಶ್ಚಿಯನ್ನರನ್ನು, ಹಸಿದ ಸಿಂಹಗಳೆದುರು ಬಿಸಾಡಿಸುತ್ತಿದ್ದ ಹಾಗೂ ಅವರ ಅನುಯಾಯಿಗಳನ್ನು ತೀವ್ರ ನಿರ್ದಯತೆಯಿಂದ ಕ್ರೂರವಾಗಿ ಕತ್ತರಿಸುತ್ತಿದ್ದರು, ಸಾಯಿಸುತ್ತಿದ್ದರು. ನೀರೋ ಆ ಸಾಧುಗಳನ್ನು ದ್ವೇಷಿಸುತ್ತಿದ್ದ, ಅವರನ್ನು ನಿರ್ಮೂಲಗೊಳಿಸಬೇಕೆಂಬ ಹಠ ಅವನಿಗಿತ್ತು. ಆದಿಯುಗದಲ್ಲಿ ಕ್ರಿಶ್ಚಿಯನ್ನರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದರು. ಹಾಗಾಗಿ ಅವರು ಸಾಮ್ರಾಟನನ್ನು ಎದುರಿಸಲಾರದಾಗಿದ್ದರು. ಆದರೆ ಕೊನೆಗೂ ನೀರೋ ತೀರಿಕೊಂಡ, ಏಸುಕ್ರಿಸ್ತನ ಅನುಯಾಯಿಗಳು ಬದುಕಿಕೊಂಡರು ಮತ್ತು ಪ್ರಪಂಚದಲ್ಲಿ ಹರಡಿಕೊಂಡರು, ಕ್ರೈಸ್ತ ಹುತಾತ್ಮನ ಮುಖದ ಕಾಂತಿ, ಅವನ ಮಧುರಸ್ಮಿತ ಮತ್ತು ಕರುಣೆಯಿಂದ ಕೂಡಿದ ಕಣ್ಣುಗಳು ಕ್ರೂರಿಗಳಾದ ರೋಮನ್ ಸೈನಿಕರನ್ನು ಬುಡಸಹಿತ ಅಲುಗಾಡಿಸಿದ್ದವು. ಮೊದಲಂತೂ ಈ ಶಸ್ತ್ರಧರಿಸಿದ್ದ ರೋಮನ್ ಸೈನಿಕರು ಅಂತಹ ಅಹಿಂಸೆಯನ್ನು ನೋಡಿ ದಿಕ್ಕಿಲ್ಲದಂತಾದರು, ನಂತರ ಕುಪಿತರಾದರು, ಕೊನೆಗೆ ತಮ್ಮ ಆತ್ಮವಿಶ್ವಾಸವನ್ನೇ ಕಳೆದುಕೊಂಡರು. ಈ ಸೂಕ್ಷ್ಮವಾದ ಪ್ರೇಮದಿಂದ ತೊಯ್ದು ಅಹಿಂಸೆ ಎದುರು ರೋಮನ್ ವಿಜೇತರು ಸೋತರು. ಇತಿಹಾಸದ ಈ ಕತೆಯನ್ನು ಇಂದು ಜನ ಒಪ್ಪದೆ ಹೋಗಬಹುದು, ಆದರೆ ನಮ್ಮ ಈ ಯುಗದ ಪ್ರಸಿದ್ಧ ವೈಜ್ಞಾನಿಕ ಚಾರ್ಲ್ಸ್ ಡಾರ್ವಿನ್, ಹಾಗೂ ನಂತರದಲ್ಲಿ ಜರ್ಮನ್ ರಾಜಕುಮಾರ ಕ್ರೊಪೋಟಕಿನ್ ಮತ್ತು ಕೊನರೇಡ್ ಲಾರೆಂಜ್ ಹೇಳುವ ಹಾಗೆ ಪ್ರಾಣಿ ಜಗತ್ತಿನಲ್ಲಿ

ಅಹಿಂಸೆಗೆ ಸ್ಥಾನವಿದೆ ಮತ್ತು ಪಶು ಸಂತತಿಗಳು ಒಂದಕ್ಕೊಂದು ಆಧಾರವಾಗಿದ್ದುಕೊಂಡೇ ಉಳಿದಿವೆ. ಲಾರೆಂಜ್ ಹೇಳುವ ಹಾಗೆ ಪ್ರಾಣಿ ಜಗತ್ತಿನಲ್ಲಿ ಕೊನೆಯಲ್ಲಿ ದುರ್ಬಲವಾದ ಪಶುವೇ ಉಳಿದುಕೊಳ್ಳುತ್ತದೆ, ರಕ್ತಪಿಪಾಸುವಾದ ತೋಳ ಅಥವಾ ಹುಂಜದ ಹೊಡೆದಾಟದಲ್ಲಿ ಪ್ರತಿಪಕ್ಷದ್ದು ತನ್ನ ಕುತ್ತಿಗೆಯನ್ನು ಬಗ್ಗಿಸಿದಾಗ ವಿಜಯಿಯಾದ ಪ್ರಾಣಿ ಹೊಡೆಯುವುದನ್ನು ನಿಲ್ಲಿಸಿ ಬಿಡುತ್ತದೆಯಂತೆ. ಇಷ್ಟವಿದ್ದರೂ ಪರಾಜಿತ ಪಶುವನ್ನದು ಹೊಡೆಯುಹೋಗುವುದಿಲ್ಲ, ಹೃದಯದೊಳಗೊಂದು ಅವ್ಯಕ್ತವಾದ ಸಹಾನುಭೂತಿ ಇರುತ್ತದಾದ್ದರಿಂದ ಅಹಿಂಸೆಯೆದುರು ಅದು ಸೋತು, ಆಯುಧವನ್ನು ಬಿಸುಟುಬಿಡುತ್ತದೆ. ಅದಕ್ಕೂ ಮುಂದೆ, ನಮ್ಮ ಮಾನವ ಪ್ರಪಂಚದ ಎರಡನೆ ವಿಶ್ವಯುದ್ಧ ನಡೆದ ಸಂದರ್ಭದಲ್ಲಿ ಬಾಪೂಜಿ ಅಹಿಂಸಾತ್ಮಕ ಸತ್ಯಾಗ್ರಹದಿಂದ ಸಂಗ್ರಾಮದಲ್ಲಿ ವಿಜಯ ಬೇಗ ಸಾಧಿಸಬಹುದೆಂದು ದೃಢವಾಗಿ ನಂಬಿದ್ದರು. ಹಿಂಸಾತ್ಮಕ ಯುದ್ಧದಿಂದ ಮಹಾನಾಶವಾಗುವುದು ತಪ್ಪಿ ಪ್ರಪಂಚ ಮಹಾನಾಶವಾಗದಂತೆ ಉಳಿಯಬಹುದಾಗಿತ್ತು. ಶಸ್ತ್ರಾಸ್ತ್ರಗಳೊಡನೆ ಯುದ್ಧ ನಡೆದಾಗ ಸಾವಿರಾರು ಸೈನಿಕರು ಸಾಯುತ್ತಾರೆ, ಅಹಿಂಸಾತ್ಮಕ ಆಂದೋಳನದಲ್ಲಿ ಕೆಲವರು ಹುತಾತ್ಮರಾಗುತ್ತಾರೆ. ಯುದ್ಧದ ಮೂಲ ಲಕ್ಷಣ ಇದಾದರೂ ಅಹಿಂಸಾತ್ಮಕ ಯುದ್ಧದಲ್ಲಿ ಅತಿ ಕಡಿಮೆ ನಷ್ಟ ಸಂಭವಿಸುತ್ತದೆ. ಜೊತೆಗೆ ನಂತರದ ಕಟು ಭಾವನೆ ಅಥವಾ ವಿಷಪೂರಿತವಾದ ವೈಮನಸ್ಯ ಸ್ವಲ್ಪವೂ ಇರುವುದಿಲ್ಲ.

ಬಾಪೂಜಿ ಬಿಟ್ಟುಹೋದ ಆಸ್ತಿಯನ್ನು ಉಳಿಸಲು ನಾನು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ. ನಾವು ತೀವ್ರವಾಗಿ ಆಲೋಚಿಸಿ ನೋಡಿದಾಗ, ಈ ತರಹ ಪ್ರಶ್ನೆಗಳನ್ನ ಕೇಳುವವರು ಯಾರು ಅಂದರೆ, ಕಷ್ಟಬಂದ ಸಮಯದಲ್ಲಿ ಗಾಂಧಿಯನ್ನು ನೆನಪು ಮಾಡಿಕೊಂಡು, ನಂತರ ತಮ್ಮ ಮನರಂಜನೆಗಾಗಿ ಔದಾರ್ಯದ ನಾಟಕ ಮಾಡಿಕೊಂಡು, ಈ ಯುಗದಲ್ಲಿ, ಇವತ್ತಿನ ಪರಿಸ್ಥಿತಿಯಲ್ಲಿ ಗಾಂಧಿ ವಿಚಾರಗಳನ್ನು ಚಾಲನೆಗೆ ತರುವುದಕ್ಕಾಗುವುದಿಲ್ಲ, ಗಾಂಧೀದರ್ಶನ ಈಗ ಉಪಯೋಗಕ್ಕೆ ಬಾರದ್ದು, ಅದು ಅನುಪಯುಕ್ತವಾಗಿ ಹೋಗಿದೆ ಅಂತ ಹೇಳುವ ಜನ. ಅವರ ತರ್ಕದ ಮೂಲದಲ್ಲೇ ಒಂದು ತಪ್ಪು ಅಡಗಿರುತ್ತದೆ, ಹಾಗೆ ಯೋಚಿಸುವವರು ಗಾಂಧಿಯನ್ನು ಒಂದು ಔಷಧಿ ಅಂತ ತಿಳಿದುಕೊಂಡಿರುತ್ತಾರೆ, ಕಾಹಿಲೆ ಬಂದಾಗ ಆಂಟಿಬಾಯೊಟಿಕ್ ಮಾತ್ರೆಗಳನ್ನು ನುಂಗುವ ಹಾಗೆ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುತ್ತದೆಂದು ತಿಳಿದುಕೊಂಡಿರುತ್ತಾರೆ. ಬಾಪೂಜಿಯ ವಿಚಾರಗಳು ತಲೆನೋವಿಗೆ ತಿಂದು ನೋವು ದೂರ ಮಾಡುವ ಗುಳಿಗೆಗಳಲ್ಲ, ಅದು ಯೋಚಿಸುವ ವಿಶಿಷ್ಟಶೈಲಿ, ಮನುಷ್ಯನ ಜೀವನದ ಮೇಲೆ ಪೂರ್ತಿಯಾಗಿ ಪ್ರಭಾವ ಬೀರುತ್ತದೆ. ಇದು ಒಂದು ಜೀವನದರ್ಶನ, ನಮ್ಮ ಜೀವನವನ್ನು ಯಾವಾಗಲೂ ಹುರಿದುಂಬಿಸುವಂಥದ್ದು. ಜೀವನದ

ಪ್ರತಿಯೊಂದು ಸಮಸ್ಯೆಗೂ ಅದು ದಿಕ್ಕು ತೋರಿಸುತ್ತದೆ. ಸಹಜವಾಗಿ ಕಷ್ಟಬಂದಾಗ ಗಾಂಧೀ ಬಲವನ್ನು ಆಹ್ವಾನಿಸಿದರೆ ಹೆಚ್ಚೇನೂ ಲಾಭವಾಗುವುದಿಲ್ಲ. ಸತ್ಯಾಗ್ರಹದ ಅಂಥ ಶಕ್ತಿಯನ್ನು ಬಾಡಿಗೆಗೆ ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ, ಹೊರಗಿನಿಂದ ಹೊರಿಸುವುದಕ್ಕೂ ಆಗುವುದಿಲ್ಲ. ಇದ್ದಕ್ಕಿದ್ದಂತೆ ಅದನ್ನು ಚಾಲನೆಗೆ ತರಲೂ ಸಾಧ್ಯವಿಲ್ಲ, ಸತ್ಯದ ದರ್ಶನಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಯೂ ಆತ್ಮಚಿಂತನೆ ನಡೆಸಿ ತನ್ನ ಸತ್ಯವನ್ನು ನಿರ್ಧರಿಸಬೇಕಾಗುತ್ತದೆ. ಯಾವ ಜೊತೆಗಾರನೂ, ಮಂತ್ರದ್ರಷ್ಟಾರನೂ ನಮಗೆ ಅಷ್ಟಿಷ್ಟು ಸಹಾಯ ಮಾಡಬಹುದೇ ಹೊರತು ಜೀವನದ ಪ್ರಶ್ನೆಗಳಿಗೆ ನಾವೇ ಉತ್ತರವನ್ನು ಯೋಚಿಸಬೇಕಾಗುತ್ತದೆ, ನಮ್ಮ ಜೀವನ ಹೇಗಿರಬೇಕು ಎಂದು ನಾವು ಇಷ್ಟಪಡುತ್ತೇವೆ; ಆ ಸಂದರ್ಭದಲ್ಲಿ ಪಾರಿವಾರಿಕ, ಸಾಮಾಜಿಕ ಮತ್ತು ರಾಷ್ಟ್ರೀಯ ಪರಿಸರ ಹೇಗಿರಬೇಕು ಅನ್ನುವುದನ್ನು ಕುರಿತು ಪ್ರತಿಯೊಬ್ಬ ನಾಗರಿಕನೂ, ಜಾಗೃತ ವ್ಯಕ್ತಿಯೂ ಯೋಚಿಸಬೇಕು, ಹಾಗೆ ಯೋಚಿಸಿದಾಗ ಮಾತ್ರ ಬಾಪೂಜಿ ನೀಡಿರುವ ಆಸ್ತಿಯನ್ನು ನಾವು ಸರಿಯಾಗಿ ಉಪಯೋಗಿಸಲು ಸಾಧ್ಯವಾಗುತ್ತದೆ. ಈ ಸಂಪತ್ತನ್ನು ನಾವು ನಿರಂತರವಾಗಿ ಅನುಸರಿಸದಿದ್ದರೆ ಅದರ ಶಕ್ತಿ ಕುಂದಿಹೋಗುತ್ತದೆ, ಜೊತೆಗೆ ನಮ್ಮ ಶಕ್ತಿ (ಯೋಗ್ಯತೆ) ಮತ್ತು ವ್ಯಕ್ತಿತ್ವ ತುಕ್ಕು ಹಿಡಿದು ದುರ್ಬಲವಾಗುತ್ತದೆ. ಈ ಸ್ಥಿತಿಯಲ್ಲಿ ಬಾಪೂಜಿಯವರ ಸತ್ಯಾಗ್ರಹ ಮತ್ತು ಅಹಿಂಸೆ ಅಸಫಲವಾಗುತ್ತೆ, ಬಾಪೂಜಿ ನೀಡಿರುವ ಈ ಆಸ್ತಿಯನ್ನ ಪ್ರತಿದಿವಸವೂ ಜಾರಿಗೆ ತಂದಾಗ ಮಾತ್ರ ಅದರ ಶಕ್ತಿ ತೇಜಸ್ವಿಯಾಗಿರುತ್ತದೆ. ಅಜಾಗರೂಕತೆಯಿಂದ ಅದರ ಬ್ಯಾಟರಿ ಡೌನ್ ಆಗಿ ಸರಿಯಾದ ಸಮಯದಲ್ಲಿ ನಾವು ನಿರಾಶೆಗೊಳ್ಳುತ್ತೇವೆ. ಆದ್ದರಿಂದ ಬಾಪೂಜಿಯ ಆಸ್ತಿ ಪೆಟ್ಟಿಗೆಯಲ್ಲಿ ಮುಚ್ಚಿಡುವಂತಹುದಲ್ಲ.

ಬಾಪೂಜಿ ಬಿಟ್ಟುಹೋಗಿರುವ ಆಸ್ತಿಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಜ್ಞಾನಿಯಾಗಬೇಕಾದ ಅಗತ್ಯವೇನೂ ಇಲ್ಲ. ಅದನ್ನ ಚಾಲ್ತಿಯಲ್ಲಿ ತರುವುದಕ್ಕೆ ಸಾಧು ಮಹಾತ್ಮನಾಗುವ ಅಗತ್ಯ ಕೂಡ ಇಲ್ಲ ಅನ್ನುವುದು ಅದರ ವಿಶೇಷತೆ. ಅದರ ಫಿಲಾಸಫಿ ಅಂಥ ಗೂಢವಾದದ್ದು ಕೂಡ ಅಲ್ಲ, ಅದನ್ನ ಅರ್ಥ ಮಾಡಿಕೊಳ್ಳುವುದಕ್ಕೆ ಗ್ರಂಥಗಳ ಅಗತ್ಯವಿಲ್ಲ. ಅದನ್ನ ಸಹಜವಾಗಿ ಪಡೆದುಕೊಳ್ಳಬಹುದು. ಸಾಧಾರಣ ಮನುಷ್ಯ ಕೂಡ ಅದನ್ನ ಸ್ವತಃ ಅರ್ಥಮಾಡಿಕೊಳ್ಳಬಹುದು, ಆಚರಿಸಬಹುದು. ಸಮಾಜದ ಪ್ರತಿಯೊಂದು ವರ್ಗ, ಪ್ರತಿಯೊಂದು ವೃತ್ತಿಗೆ ಸೇರಿದ ಜನ ಈ ಸಿದ್ಧಾಂತಗಳನ್ನು ಜಾರಿಗೊಳಿಸಬಹುದು. ರೈತ, ಕಾರ್ಮಿಕ, ವ್ಯಾಪಾರಿ, ವಕೀಲ, ವಿದ್ಯಾರ್ಥಿ, ಶಿಕ್ಷಕ, ಉದ್ಯೋಗಪತಿ, ಬಂಡವಾಳಗಾರ, ರಾಜಕೀಯತಜ್ಞ, ಅಥವಾ ಶಾಸಕ, ಕವಿ, ಚಿತ್ರಕಾರ (ಕಲೆಗಾರ), ನರ್ತಕ ಎಲ್ಲರೂ ತಮ್ಮ ಕ್ಷೇತ್ರಗಳಲ್ಲಿ ಬಾಪೂಜಿಯ ಕೊಡುಗೆಯನ್ನು ಸರಳವಾಗಿ ಉಪಯೋಗಿಸಿಕೊಳ್ಳಬಹುದು. ಪ್ರತಿಯೊಬ್ಬ ಮನುಷ್ಯನೂ ತನ್ನಿಷ್ಟದ ಮತ್ತು ಪುರುಷಾರ್ಥದ ಕ್ಷೇತ್ರಗಳಲ್ಲಿ ಹೇಗಿರಬೇಕು ಎಂಬುದನ್ನು

ಬಾಪೂಜಿ ತನ್ನ ಸ್ವಂತ ಜೀವನದ ಮುಖಾಂತರ ಜನರಿಗೆ ತಿಳಿಸಿಕೊಟ್ಟಿದ್ದರು. ಬಾಪೂಜಿಯ ಜೀವನ ಕಾಲದಲ್ಲಿ ರೈತ, ಕಾರ್ಮಿಕ, ಸಮಾಜ ಸುಧಾರಕ, ವಕೀಲ, ಕಾನೂನು, ಶಿಕ್ಷಣ, ಚಿಂತನೆ, ರಚನಾತ್ಮಕ ಕಾರ್ಯಕ್ರಮಗಳು, ಧರ್ಮ, ವರ್ಗಕಲಹ ಮುಂತಾದ ಎಲ್ಲ ಪ್ರಶ್ನೆಗಳಿಗೂ ಸತ್ಯ–ಅಹಿಂಸೆಯನ್ನು ಅಳತೆಗೋಲನ್ನಾಗಿಟ್ಟುಕೊಂಡು, ಸಿದ್ಧಾಂತಗಳು ವ್ಯವಹಾರಿಕವಲ್ಲ, ಅವನ್ನು ಆಚರಣೆಗೆ ತರಲಾಗುವುದಿಲ್ಲವೆಂದು ಹೇಳುವುದು ಸರಿಯಲ್ಲ. ಬಾಪೂಜಿ ಖಾದಿಯ ಅಷ್ಟು ದೊಡ್ಡ ಉದ್ಯೋಗವನ್ನು ಸುಂದರವಾಗಿ ನಡೆಸಿದರು, ದೇಶದಲ್ಲೆಲ್ಲೆಡೆ ಖಾದಿ ಭಂಡಾರಗಳನ್ನು ತೆರೆಸಿ ಬಟ್ಟೆ ವ್ಯಾಪಾರ ಮಾಡಿದರು. ಅದರಿಂದ ನಮ್ಮ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಅವರು ಸ್ವತಃ ಪ್ರಯೋಗ ಮಾಡಿ ಸತ್ಯ–ಅಹಿಂಸೆಯ ಅಳತೆಗೋಲನ್ನು ಸಿದ್ಧಪಡಿಸಿದ್ದರು. ಗಾಂಧೀಜಿಯ ಸತ್ಯ – ಅಹಿಂಸೆಯಿಂದ ರಾಜಕೀಯ ನಡೆಯುವುದಿಲ್ಲವೆಂದು ಎಷ್ಟೋ ಜನ ರಾಜನೀತಿಜ್ಞರು ಹೇಳುತ್ತಾರೆ. ಬಾಪೂಜಿಯವರ ರಾಜನೀತಿಯಿಂದಲೇ ನಮಗೆ ಸ್ವಾತಂತ್ರ್ಯ ಸಿಕ್ಕಿತು ಅನ್ನುವುದು ಕೂಡ ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಅವರು ಸತ್ಯ–ಅಹಿಂಸೆಗಾಗಿ ಪಟ್ಟುಹಿಡಿದಿದ್ದರಿಂದ ಮೂವತ್ತು ವರ್ಷಗಳಲ್ಲಿ ನಮಗೆ ಸ್ವಾತಂತ್ರ್ಯ ಕೊಡಿಸಿಕೊಟ್ಟಿದ್ದರು, ಇಲ್ಲದಿದ್ದರೆ ನಾವು ಇವತ್ತಿಗೂ ಸ್ವಾತಂತ್ರ್ಯ ಚಳವಳಿಯಲ್ಲೇ ಮುಳುಗಿರಬೇಕಾಗುತ್ತಿತ್ತೇನೋ, ಸ್ವಾತಂತ್ರ್ಯ ಸಿಕ್ಕಿರುತ್ತಲೇ ಇಲ್ಲವೇನೋ. ವಿಭಜನೆಯ ವೇಳೆಯ ಕೋಮುವಾರು ವೈಮನಸ್ಯವನ್ನು ಬಾಪೂಜಿ ಕಲ್ಕತ್ತಾ, ದೆಹಲಿ, ಬಿಹಾರ, ಪಂಜಾಬ್‌ನಲ್ಲಿ ಶಾಂತಗೊಳಿಸಿದರು. ಆದರೆ ವಿಭಜನೆಯ ಭಯಂಕರತೆಯಿಂದ ನಾವು ಉಳಿಯಲಾಗಲಿಲ್ಲ. ಆದುದರಿಂದ ಸ್ವಾತಂತ್ರ್ಯಾನಂತರ ನಾವು ವಿಕಾಸಗೊಳ್ಳಲು ಅವಕಾಶ ಸಿಕ್ಕಿತು. ಇವತ್ತಿಗೂ ಸಾಮಾಜಿಕ ಅವ್ಯವಸ್ಥೆ, ಆತಂಕವಾದ ಮತ್ತು ಕೋಮುವಾರು ಅಸಹಿಷ್ಣುತೆ ಇವುಗಳು ೧೯೪೭ರ ನಂತರದ ದಿನಗಳ ಹಾಗೆ ಇದ್ದಿದ್ದರೆ ದೇಶದ ಸರಕಾರ ಆರ್ಥಿಕವಾಗಿ ಔದ್ಯೋಗಿಕವಾಗಿ ಪ್ರಗತಿ ಸಾಧಿಸಲಾಗುತ್ತಿರಲಿಲ್ಲ. ಆರಂಭದ ೩೦ ವರ್ಷಗಳಲ್ಲಿ ನೆಲಸಿದ್ದ ಸಾಮಾಜಿಕ ಶಾಂತಿಗೆ ಬಾಪೂಜಿಯ ಸತ್ಯಾಗ್ರಹ ಮತ್ತು ಅಹಿಂಸಕ ರಚನಾತ್ಮಕ ವಿಚಾರಗಳೇ ಕಾರಣವಾಗಿದ್ದವು.

ಇಂದು ನಮ್ಮ ದೇಶ ಕೋಮುವಾರು ದಂಗೆಗಳಲ್ಲಿ ಸಿಲುಕಿಕೊಂಡಿದೆ. ನಾವು ಮತ್ತು ನಮ್ಮ ಸರಕಾರ ಪೊಲೀಸು, ಸೈನ್ಯದ ಸಹಾಯ ತೆಗೆದುಕೊಂಡು ಕೋಮುವಾದದ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುತ್ತಿದ್ದೇವೆ. ಪಂಜಾಬ್‌ನಲ್ಲಿ ರಿಬೆರೊ ಮತ್ತು ಸರಹದ್ದಿನ ಸೀಮಾ ಸುರಕ್ಷಾ ದಳದ ಪೊಲೀಸ್ ರಕ್ಷಾದಳ ವ್ಯವಸ್ಥೆಗೊಂಡಿದೆ, ಗುಜರಾತ್‌ನಲ್ಲಿ ಕೋಮುವಾರು ಅಶಾಂತಿಯುನ್ನು ದೂರಗೊಳಿಸಲು ಅಲ್ಲಿಯ ಮುಖ್ಯಮಂತ್ರಿಗಳು ಒಂದು ಸೈನ್ಯದ ಹಾಗೆಯೇ ಇರುವ ಪೊಲೀಸ್ ಫೋರ್ಸನ್ನು ರಚಿಸಲು ಆದೇಶ ನೀಡಿದ್ದಾರೆ. ಪಾಕಿಸ್ತಾನದ

ಜೊತೆ ಗಡಿಯ ಚರ್ಚೆ ಕುರಿತು ಒಂದು ಉದ್ದನೆಯ ದಸ್ತಾವೇಜನ್ನು ಸಿದ್ಧಪಡಿಸಿ ದೂರದರ್ಶನದ ಕ್ಯಾಮರಾದೆದುರು ಸಹಿ ಮಾಡುತ್ತಿದ್ದಾರೆ. ಪೊಲೀಸ್– ಸೈನ್ಯದ ಸಹಾಯದಿಂದ ಸಾಮಾಜಿಕ ಪ್ರಶ್ನೆಗಳು ಇತ್ಯರ್ಥವಾಗುವುದಾದರೆ ಬಾಪೂಜಿಗೆ ಅಷ್ಟೊಂದು ತಲೆ ಕೆಡಿಸಿಕೊಳ್ಳುವ ಅಗತ್ಯ ಇರುತ್ತಿರಲೇ ಇಲ್ಲ. ಬಿರ್ಲಾ, ಟಾಟಾ, ಡಾಲಮಿಂಯಾರ ಹಣದಿಂದ ತುಪಾಕಿಗಳನ್ನು ಖರೀದಿಸಿ ನಾವು ಸ್ವತಂತ್ರರಾಗಬಹುದಿತ್ತು, ಪೊಲೀಸ್ ತಂಡ ಶಾಂತಿ ಸ್ಥಾಪಿಸುವಂತಿದ್ದರೆ ದೇಶದ ಸಮಸ್ಯೆಗಳೆಲ್ಲವೂ ಪರಿಹಾರವಾಗಬೇಕಿತ್ತು, ಆದರೆ ಪೊಲೀಸ್ ದಳದಿಂದ ಸಾಮಾಜಿಕ ವೈಮನಸ್ಯ ದೂರವಾಗುವುದಿಲ್ಲ. ಪೊಲೀಸ್ ಹಿಂಸೆ ಮತ್ತು ದೌರ್ಜನ್ಯದಿಂದ ಸಾಧಾರಣ ಸಮಸ್ಯೆ ಕೂಡ ರಣವಾಗುತ್ತಿದೆ, ಅದು ದೇಶವನ್ನು ಹಾಳುಮಾಡುತ್ತದೆಂಬ ಅಪಾಯ ಎದ್ದು ನಿಂತಿದೆ. ಪಂಜಾಬ್, ಗುಜರಾತ್, ಅಸ್ಸಾಂ, ಕರ್ನಾಟಕ ಎಲ್ಲ ಕಡೆಗಳಲ್ಲೂ ನಮ್ಮ ದೇಶದ ಜನ ವಾಸವಾಗಿದ್ದಾರೆ. ಅವರ ಕಷ್ಟ, ನೋವು, ಆಕಾಂಕ್ಷೆಗಳು ಮತ್ತು ಅವರದ್ದೇ ಅಭ್ಯಾಸಗಳೂ ಇವೆ. ಶಾಂತಿಯಿಂದ ಕುಳಿತು ಒಪ್ಪಂದದಿಂದ ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು. ಈ ಕೆಲಸವನ್ನು ಸರಕಾರಕ್ಕಿಂತ ಹೆಚ್ಚಾಗಿ ಸಮಾಜಸುಧಾರಕರು, ಸಮಾಜ ಸೇವಕರು, ರಚನಾತ್ಮಕ ಕಾರ್ಯಕರ್ತರು ಮಾಡುತ್ತಾರೆ.

ಬಾಪೂಜಿಯವರ ಕಾಲದಲ್ಲಿ ಪ್ರತಿಯೊಬ್ಬ ನಾಯಕನೂ ರಾಜಕೀಯದಲ್ಲಿದ್ದರೂ ಅವರ ತಳಪಾಯ ರಚನಾತ್ಮಕ ಕಾರ್ಯಗಳನ್ನಾಧರಿಸಿರುತ್ತಿದ್ದವು. ಆದ್ದರಿಂದ ಕಾಂಗ್ರೆಸ್ ನಾಯಕರು ಸಮಾಜವನ್ನು ಪ್ರಭಾವಗೊಳಿಸುತ್ತಿದ್ದರು. ಇವತ್ತಿಗೂ ಬಾಪೂಜಿ ನೀಡಿರುವ ಸಂಪತ್ತನ್ನು ಗಮನದಲ್ಲಿರಿಸಿಕೊಂಡು ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದಾಗ ಈ ಪ್ರಶ್ನೆಗಳೆಲ್ಲವೂ ದೂರವಾಗಿ ದೇಶ ಹಾಳಾಗದೆ ಉಳಿಯಬಹುದು. ಅಂತಹ ಗಾಯವನ್ನು ನಮ್ಮದಾಗಿಸಿಕೊಂಡಾಗ ಅನ್ಯಾಯ ಮತ್ತು ಶೋಷಣೆಯಿಂದ ನಮ್ಮನ್ನು ರಕ್ಷಿಸಿಕೊಳ್ಳಬಹುದು. ಆಗ ಇಂದಿನ ಜಟಿಲ ಜೀವನ ಸ್ವಲ್ಪ ಹೆಚ್ಚು ಸರಳ, ಸಹಜ, ಸುಖಕರವಾಗಿ, ಗೌರವದಿಂದ ಕೂಡುತ್ತದೆ. ಇಲ್ಲಿ ಒಂದು ಎಚ್ಚರಿಕೆಯ ಅಗತ್ಯವಿದೆ, ಎಷ್ಟೋ ಜನ ದುರಾಗ್ರಹವನ್ನು ಸತ್ಯಾಗ್ರಹವೆಂದು ತಿಳಿದುಕೊಳ್ಳುತ್ತಾರೆ, ಸತ್ಯಾಗ್ರಹದಲ್ಲಿ ತನ್ನ ತಪ್ಪನ್ನು ಅರಿತುಕೊಂಡು ನಮ್ರನಾಗಿ ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಾನೆ. ನಿಜವಾದ ಸತ್ಯಾಗ್ರಹಿಯಲ್ಲಿ ಹಿಂಸೆ ಕ್ರೋಧ ಇರುವುದಿಲ್ಲ ಮತ್ತು ಅವನಿಡುವ ಹೆಜ್ಜೆ ಸ್ವಾಂತಃಸುಖಾಯವಾಗಿರುವುದಿಲ್ಲ. ದೇಶ ಮತ್ತು ಸಮಾಜ ಹಿತಕ್ಕಾಗಿ ಸತ್ಯಾಗ್ರಹ ಮಾಡಲಾಗುತ್ತದೆ, ವ್ಯಕ್ತಿಗತ ಸ್ವಾರ್ಥಕ್ಕಾಗಿ ಮಾಡುವುದಿಲ್ಲ, ಇಂತಹ ಶಕ್ತಿಯನ್ನು ಈ ರೀತಿ ಅರ್ಥಮಾಡಿಕೊಳ್ಳಲು ಆತ್ಮಚಿಂತನೆ ಅಗತ್ಯವಾಗುತ್ತದೆ ಮತ್ತದು ಹೊಸ ಆವಿಷ್ಕಾರವೇನಲ್ಲ. ನೂರಾರು ವರ್ಷಗಳಿಂದ ಭಾರತೀಯ ದರ್ಶನ ಪ್ರತಿಯೊಬ್ಬ ನಾಗರಿಕನಿಗೂ ಸ್ವತಃ ಚಿಂತನೆ ನಡಿಸಿ ಮಾರ್ಗವನ್ನು

ನಿರ್ಧರಿಸುವ ಕ್ರಮವನ್ನು ನೀಡಿದೆ. ಸಾವಿರಾರು ವರ್ಷಗಳಿಂದಲೂ ಬಂದಿರುವ ಅಡಚಣೆ, ಆಕ್ರಮಣಗಳು ಮತ್ತು ಅತ್ಯಾಚಾರಗಳ ನಡುವೆ ನಮ್ಮ ಭಾರತೀಯ ಸಂಸ್ಕೃತಿ ಇಂದಿಗೂ ಉಳಿದುಕೊಂಡಿರುವುದೇ ಇದಕ್ಕೆ ಸಾಕ್ಷಿ. ತೀರ ಅಜ್ಞಾನಿಯಾದ ಬಾಯಿಬಡುಕನಲ್ಲೂ ಭಾರತೀಯ ಸಂಸ್ಕೃತಿಯ ಅಭಿಜಾತ್ಯ ಹುದುಗಿಕೊಂಡಿದೆ, ಆದ್ದರಿಂದ ಇಷ್ಟೊಂದು ಅವಹೇಳನೆ, ಉಪೇಕ್ಷೆ, ಅಜಾಗರೂಕತೆ, ಹಳೆಯ ವಿಚಾರಗಳನ್ನಿಟ್ಟುಕೊಂಡು, ವಿಕೃತಿಗಳಿದ್ದೂ ನಮ್ಮ ಸಂಸ್ಕೃತಿ ಉಳಿದುಕೊಂಡಿದೆ. ಇದೇ ನಮ್ಮ ಪರಂಪರಾಗತವಾದ ಆಸ್ತಿ. ಬಾಪೂಜಿ ಇದನ್ನು ಗುಡಿಸಿ–ಸಾರಿಸಿ ದೇಶದ ಜನರಿಗೆ ಕೊಟ್ಟಿದ್ದರು. ನಾವು ಈ ಪರಂಪರಾಗತವಾದ ಆಸ್ತಿಯನ್ನು ಮರೆತುಬಿಟ್ಟರೆ, ಇದನ್ನು ಗುರುತಿಸದಿದ್ದರೆ, ಇದನ್ನು ನಮ್ಮದಾಗಿಸಿಕೊಳ್ಳದಿದ್ದರೆ ತಪ್ಪಾಗುತ್ತದೆ. ಬಾಪೂಜಿ ನೀಡಿದ ಈ ಪೈತೃಕ ಸಂಪತ್ತು ವಿದೇಶಗಳಲ್ಲಿ ಮಾತ್ರ ಸಿಗುವಂತಾಗುತ್ತದೆ. ನಾವು ಭಾರತೀಯರು ನಮ್ಮ ಮನೆಯ ಆಸ್ತಿಯನ್ನಂತೂ ಕಳೆದುಕೊಳ್ಳುವುದರ ಜೊತೆಗೆ ಹರಿದುಹಂಚಿಹೋಗುತ್ತೇವೆ. ಅದಕ್ಕಿಂತ ಹೆಚ್ಚಿನ ದುರ್ಭಾಗ್ಯ ಇನ್ನೆಲ್ಲೂ ಇರಲಾರದು.

ಇಂದು ಎಲ್ಲ ಕಡೆಗಳಲ್ಲೂ ಮೌನ, ಉದಾಸಭಾವನೆ, ಉದ್ವೇಗ, ನಿರಾಶೆಯ ಕೂಗು ಕೇಳಿಸುತ್ತಿದೆ. ದೇಶದ ಎಲ್ಲಾ ಮೂಲೆಗಳಿಂದಲೂ ಅಶಾಂತಿ ಮತ್ತು ಅವ್ಯವಸ್ಥೆಯ ಸಮಾಚಾರಗಳು ಸಿಗುತ್ತವೆ, ಕಾಳಸಂತೆ ಹೆಚ್ಚುತ್ತಿದೆ, ಬಡತನವೂ ತೀವ್ರವಾಗಿ ಹರಡುತ್ತಿದೆ, ಕೆಲವರು ಶ್ರೀಮಂತರಾಗಿದ್ದಾರೆ. ಹೆಚ್ಚು ಮಂದಿ ಮಧ್ಯಮ ದರ್ಜೆಯಿಂದಲೂ ಕೆಳಕ್ಕುರುಳಿ ಆರ್ಥಿಕ ತೊಂದರೆಗಳಲ್ಲಿ ತೊಳಲುತ್ತಿದ್ದಾರೆ. ಸಹಿಷ್ಣುತೆ, ಸಹೃದಯತೆ, ಸಹಕಾರ, ಸಹಯೋಗ, ಸಹಾನುಭೂತಿ ಇವು ಸುಮಾರು ಹೊರಟೇಹೋಗಿವೆ. ನೆರೆ–ಹೊರೆಯವರು ಕೋಮುವಾದದ ನಿರಂಕುಶ ಜ್ವಾಲೆಯಲ್ಲಿ ಸಿಲುಕಿ ಹಾಕಿಕೊಂಡಿದ್ದಾರೆ. ಈ ಎಲ್ಲಾ ವಿಪತ್ತಿನ ದೋಷಕ್ಕೆ ಸರಕಾರದ ಆಳುವ ವ್ಯವಸ್ಥೆಯನ್ನು ಗುರಿಪಡಿಸುವುದು ಸುಲಭೋಪಾಯ. ಸರಕಾರವನ್ನು ಟೀಕಿಸಿ ನಾವು ನಮ್ಮ ಹೃದಯವನ್ನು ಹಗುರಪಡಿಸಿಕೊಳ್ಳುತ್ತೇವೆ, ನಾವು ನಾಗರಿಕರು ಏನೂ ಮಾಡುವಂತಿಲ್ಲ ಎನ್ನುತ್ತೇವೆ, ಏನು ಮಾಡಬಹುದು ! ಆದರೆ ಗಮನಿಸಿ, ಶಾಂತಿಯಿಂದ ಯೋಚಿಸಿದಾಗ ನಮ್ಮ ಮನಸ್ಸಿನ ದ್ವೇಷ ಮತ್ತು ಸಾಮೂಹಿಕ ದೂಷಣೆಯಿಂದ ನಾವೆಲ್ಲರೂ ದುಃಖಿತರಾಗಿದ್ದೇವೆ. ಪ್ರತಿಯೊಂದು ಕಾಲದ ಪ್ರತಿಯೊಂದು ಸಮಾಜವೂ ತನಗೆ ಯೋಗ್ಯವಾದ ಸರಕಾರವನ್ನು ಪಡೆಯುತ್ತದೆ. ನಮ್ಮ ಸರಕಾರ ಭ್ರಷ್ಟವಾಗಿದ್ದರೆ, ಅಯೋಗ್ಯವಾಗಿದ್ದರೆ, ಅದಕ್ಕೆ ನಾವೇ ಜವಾಬ್ದಾರಿ. ನಾವು ನಮಗೇ ಅಪ್ರಾಮಾಣಿಕರಾದರೆ ಯಾವ ಸರಕಾರವೂ ನಮ್ಮನ್ನು ಭ್ರಷ್ಟಾಚಾರದಿಂದ ಉಳಿಸಲಾಗುವುದಿಲ್ಲ. ನಾವು ದುರಾಸೆಗೆಬಿದ್ದು ಸಂಯಮ, ತ್ಯಾಗ, ಬಲಿದಾನವನ್ನು ಮರೆತರೆ ಪ್ರಪಂಚ ನಮ್ಮನ್ನು ಲೂಟಿ ಮಾಡುತ್ತದೆ. ನಮ್ಮ ಸರಕಾರ ನಮ್ಮನ್ನೂ ಇನ್ನೂ ಹೆಚ್ಚಾಗಿ ಹೊಸಕಿಹಾಕುತ್ತದೆ.

ಬಾಪೂಜಿ ನಮಗೆ ಧೈರ್ಯವಾಗಿರುವುದನ್ನು ಕಲಿಸಿದ್ದರು. ನಮಗೆ ಉತ್ತರಾಧಿಕಾರಿತ್ವದಲ್ಲಿ ಅನ್ಯಾಯ, ಅನೀತಿಯನ್ನು ವಿರೋಧಿಸಲು ಧೈರ್ಯ ಕೊಟ್ಟಿದ್ದರು. ಆದರೆ ತಕ್ಷಣ ಆಸ್ತಿವಂತರಾಗಬೇಕೆಂಬ ದುರಾಸೆಯಿಂದ ನಾವು ಅನೀತಿಯ ಮಾರ್ಗದಲ್ಲಿ ಮುನ್ನಡೆದಿದ್ದೇವೆ. ಅದರಿಂದ ನಾವು ಅನ್ಯಾಯ ಸಹಿಸುತ್ತಿರುತ್ತೇವೆ. ಲೋಭಿಯಾದವನು ಯಾವಾಗಲೂ ಹೇಡಿಯಾಗಿರುತ್ತಾನೆ, ಇಂತಹ ಪುಕ್ಕಲತನಕ್ಕೆ ಯಾವ ಉಪಾಯವೂ ಇರಲು ಸಾಧ್ಯವಿಲ್ಲ. ಇಂದಿನ ಸಮಾಜ ಬಾಪೂಜಿಯ ಹೆಸರನ್ನು ಹೊಗಳುತ್ತದೆ, ಆದರೆ ಅವರು ಸೂಚಿಸಿರುವ ಮಾರ್ಗದಲ್ಲಿ ನಡೆಯಲು ಸಿದ್ಧವಿಲ್ಲ. ನಾವು ಬಾಪೂಜಿಯ ಪ್ರತಿಮೆ, ಚಿತ್ರವನ್ನು ಅನಾವರಣಗೊಳಿಸುತ್ತೇವೆ, ಕೃತಾರ್ಥರಾಗುತ್ತೇವೆ. ರಸ್ತೆ, ಸೇತುವೆ, ಭವನ, ಕಟ್ಟಡ, ನಗರ, ಗಲ್ಲಿ, ಮೂಲೆ ಎಲ್ಲವನ್ನೂ ಗಾಂಧಿಮಾರ್ಗ, ಗಾಂಧಿನಗರ, ಗಾಂಧಿಧಾಮ, ಗಾಂಧಿಬ್ರಿಜ್ ಎಂದು ಹೆಸರಿಸಿ ಸಂತೋಷಪಟ್ಟುಕೊಳ್ಳುತ್ತೇವೆ, ರಾಷ್ಟ್ರಪಿತನಿಗೆ ಗೌರವ ಸಲ್ಲಿಸಿದೆವು ಎಂದುಕೊಳ್ಳುತ್ತೇವೆ. ಒಂದು ಕಾರ್ಯಕ್ರಮ ನಡೆಸಿಬಿಟ್ಟು ನಾವು ನಿಶ್ಚಿಂತರಾಗಿಬಿಡುತ್ತೇವೆ, ಬಾಪೂಜಿಯ ಪ್ರತಿಮೆ ಮಾಡಿಸಿ ಅವರಿಗೆ ಒಂದು ಸ್ಥೂಲವಾದ ಅಮೃತಶಿಲೆಯ ಸ್ವರೂಪ ನೀಡುವುದು ಅವರನ್ನು ಮರೆಸುವ ಪ್ರಥಮ ಸೋಪಾನವಾಗುತ್ತದೆ. ಹಾರ–ತೋರಣ, ಫೋಟೋ, ಚಿತ್ರ, ಪ್ರತಿಮೆಗಳ ಬಗ್ಗೆ ಬಾಪೂಜಿಗೆ ಬಹಳ ತಿರಸ್ಕಾರವಿತ್ತು. ಪ್ರತಿಮೆ ಸ್ಥಾಪಿಸಿ ನಾವು ಅವರಿಗೆ ಅನಾದರ, ಅಪಮಾನ ಮಾಡುತ್ತೇವೆ, ಅವರನ್ನು ಮರೆಸಿ ಬಿಡಲು ಸ್ವತಂತ್ರರಾಗುತ್ತೇವೆ. ಅದಕ್ಕೆ ವಿರುದ್ಧವಾಗಿ ಸರಳ, ನಿಶ್ಚಲ, ಶ್ರದ್ಧೆಗೆ ಸ್ಥೂಲವಾದ ಫೋಟೋ, ಚಿತ್ರದ ಆಧಾರ ಬೇಕಾಗುವುದಿಲ್ಲ. ವಿಚಾರಗಳಲ್ಲಿ ಬಹಳ ಶಕ್ತಿ ಇರುತ್ತದೆ, ಅವು ಸೂಕ್ಷ್ಮ ರೂಪದಿಂದ ನಿರಂತರವಾಗಿ ನಮ್ಮ ಚೈತನ್ಯದೊಂದಿಗೆ ಗುದ್ದಾಡುತ್ತಿರುತ್ತವೆ, ಕ್ರಾಂತಿಕಾರಿ ಮಾತು ಮತ್ತು ವಿಚಾರಗಳ ನಿನಾದ ಸ್ವತಃ ಜನರ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿರುತ್ತದೆ ಮತ್ತು ಮನಸ್ಸಿನ ಪದರದಲ್ಲಿ ಪ್ರಕಟವಾಗುತ್ತಿರುತ್ತದೆ. ಇಂತಹ ಅಮೋಘವಾದ ಮಾರ್ಗವನ್ನು ತೊರೆದು ಮಣ್ಣಿನ ಪ್ರತಿಮೆಗೆ ಸಮರ್ಪಿತರಾಗುವ ಆವಶ್ಯಕತೆ ನಮಗಿರಬಾರದು.

ಇವತ್ತಿನ ವಿಷಮ ಪರಿಸ್ಥಿತಿಯನ್ನು ನೋಡಿ ಕೆಲವರು ನಿರಾಶಾವಾದಿಗಳು, ಭಾರತವಾಸಿಗಳು ಏನೂ ಮಾಡಲಾರರು. ದೇಶ ಹಾಳಾಗಿಹೋಗುತ್ತದೆ, ಹರಿದು ಹಂಚಿಹೋಗುತ್ತದೆ, ಶಕ್ತಿಶಾಲಿ ದೇಶಗಳ ಕೈದಾಳವಾಗಿ ಅವ್ಯಕ್ತ ಅಧೀನತೆಯ ಪಾಶದಲ್ಲಿ ಸಿಲುಕಿಕೊಳ್ಳುತ್ತದೆ ಎಂದೆಲ್ಲಾ ಹೇಳುತ್ತಾರೆ. ಅವರಿಗೆ ದೂರದೃಷ್ಟಿ ಇರಬಹುದು. ಭವಿಷ್ಯವನ್ನು ನೋಡಬಲ್ಲರೇನೋ. ನಾನೊಬ್ಬ ಮೂರು ಮಕ್ಕಳ ತಾಯಿ ಅಷ್ಟೆ, ನನಗೆ ನನ್ನ ಈ ಮೂರು ಮಕ್ಕಳ ಭವಿಷ್ಯದ ಬಗ್ಗೆ ಗಮನವಿದೆ, ನಮ್ಮ ಮಕ್ಕಳು ತಮ್ಮ ಪುರುಷಾರ್ಥದಿಂದ ಪ್ರಗತಿ ಸಾಧಿಸಿ ಮುಂದಕ್ಕೆ ಬರುತ್ತಾರೆಂಬ ನಂಬಿಕೆ ಇದೆ. ಇಂತಹ ವಿಕಾಸ ಸಾಧಿಸಲು ಅವರು ವಿದೇಶದಲ್ಲಿ ವಾಸ ಮಾಡುವ

ಅಗತ್ಯವಿದೆಯೆಂದು ನನಗನಿಸುವುದಿಲ್ಲ. ನಮ್ಮ ದೇಶದಲ್ಲೂ ಪ್ರಗತಿ ಸಾಧಿಸಲು ಸಾಧ್ಯ ಅಂತ ಅನ್ನುವುದು ನನ್ನ ಅಭಿಪ್ರಾಯ. ಅದರಿಂದ ನನ್ನ ದೇಶ ಮತ್ತು ದೇಶದ ಜನರ ವಿಷಯವಾಗಿ ನನ್ನ ಮನಸ್ಸಿನಲ್ಲಿ ನಿರಾಶೆ ಇಲ್ಲ. ಸಾಮಾನ್ಯವಾಗಿ ಜನ ಏಟು ತಿಂದು ಎದ್ದು ನಿಂತೇ ನಿಲ್ಲುತ್ತಾರೆ, ಇವತ್ತಿನ ಭಾರತೀಯ ಯುವಕ ಸಮರ್ಥನಾಗಿದ್ದಾನೆ. ಅವಕಾಶ ಬಂದಾಗ ಅವನು ಪರಿಸ್ಥಿತಿಯ ಜೊತೆ ಹೋರಾಡಬಲ್ಲ, ಇಲ್ಲಿಯವರೆವಿಗಂತೂ ನಮ್ಮ ಸ್ವಾತಂತ್ರ್ಯ ಸುರಕ್ಷಿತವಾಗಿದೆ. ಆದರೆ ಎಷ್ಟು ದಿವಸ ಕಾಲ ನಿರ್ವಿಘ್ನವಾಗಿ ಸುರಕ್ಷಿತವಾಗಿರುತ್ತದೆ ಅನ್ನುವುದು ಪ್ರಶ್ನೆ. ದೇಶದ ಸ್ವಾತಂತ್ರ್ಯ, ಅಖಂಡತೆಯ ಬಗ್ಗೆ ಹೆಚ್ಚು ನಿರ್ಲಕ್ಷ್ಯ ಮಾಡುವ ಹಾಗಿಲ್ಲ, ನಾವು ಆತ್ಮ ಚಿಂತನೆ ಮಾಡಿ ರಾಷ್ಟ್ರಪಿತ ನೀಡಿರುವ ಪೈತೃಕದಾಯವನ್ನು ಹುಡುಕೋಣ. ಅದನ್ನು ಆಚರಿಸೋಣ.

ಸಂಕ್ಷಿಪ್ತವಾಗಿ, ಬಾಪೂಜಿ ನೀಡಿರುವ ದಾಯದಲ್ಲಿ ಕೆಳಗೆ ನೀಡಿರುವ ನಿಧಿ ಇದೆ. ಅದನ್ನು ಆಚರಣೆಗೆ ತಂದರೆ ನಮ್ಮ ಅನೇಕ ಕಷ್ಟಗಳು, ತೊಂದರೆಗಳು ದೂರವಾಗಬಲ್ಲವು–

– ಅನ್ಯಾಯ ಮತ್ತು ಅನೀತಿಗಳಿಗೆ ಕೈಹಾಕಬಾರದು ಮತ್ತು ಕಂಡಾಗ ಅವುಗಳನ್ನು ವಿರೋಧಿಸಬೇಕು, ಅನ್ಯಾಯಕ್ಕೆ ಶರಣಾಗುವುದು ಅಧರ್ಮ.
– ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ಮತ್ತು ಪಾರಿವಾರಿಕ, ವೈಯಕ್ತಿಕ, ರಾಜಕೀಯ ಎಲ್ಲಾ ತೆರನಾದ ಭ್ರಷ್ಟಾಚಾರವನ್ನೂ ವಿರೋಧಿಸಿ ಅದರೆದುರು ಸತ್ಯಾಗ್ರಹ ಮಾಡುವುದು, ಹಾಗಿಲ್ಲದಲ್ಲಿ ಇಂದಿನ ಭ್ರಷ್ಟಾಚಾರ ನಮ್ಮನ್ನು ನುಂಗಿಹಾಕುತ್ತದೆ.
– ಶ್ರಮವನ್ನು ಗೌರವಿಸುವುದು, ಯಾವುದೇ ಕೆಲಸವನ್ನು ಮಾಡಿದರೂ ಅದನ್ನು ಶ್ರೇಷ್ಠ ರೀತಿಯಲ್ಲಿ ಮಾಡಬೇಕು. ಆಲಸ್ಯ ಮತ್ತು ಬೇಜವಾಬ್ದಾರಿತನ ಅಪ್ರಾಮಾಣಿಕತೆಯಾಗುತ್ತದೆ, ಕಳ್ಳತನವಾಗುತ್ತದೆ.
– ಪಾರಿಶ್ರಮಿಕ ಅಥವಾ ಮೂಲ್ಯ ಪಡೆದಿರುವುದಕ್ಕೆ ಅನುಗುಣವಾಗಿ ಬೆಲೆ ತೀರಿಸಬೇಕು. ಆರ್ಥಿಕ, ಸಾಮಾಜಿಕ, ರಾಜಕೀಯ, ಭಾವನಾತ್ಮಕ ಯಾವುದೇ ಮೂಲ್ಯ ಅದಾಗಿರಬಹುದು. ಹಾಗಾಗದಿದ್ದಾಗ ಸಾಮಾಜಿಕ ಕಳ್ಳತನದ ಸರಣಿ ಶುರುವಾಗಿ ಕೊನೆಗೆ ಸ್ವತಃ ಕಳ್ಳತನವಾಗಿ ಪರಿಣಮಿಸುತ್ತದೆ.
– ನಾವು ಪ್ರಜಾಸತ್ತೆಯ ನಾಗರಿಕರು. ಅದರ ಜೊತೆಗೆ ಬಲಶಾಲಿಯಾದ ಪ್ರಜಾಸತ್ತೆಗೆ ಜಾಗೃತನಾದ ಕಾವಲುಗಾರ ಕೂಡ ಆಗಿರಲೇಬೇಕಾಗುತ್ತದೆ. ಬೇಜವಾಬ್ದಾರಿಯಿಂದ ಪ್ರಜಾತಂತ್ರಕ್ಕೆ ಬದಲು ಸರ್ವಾಧಿಕಾರದ ರಾಕ್ಷಸ ಬಂದು ನಮ್ಮ ಕತ್ತು ಹಿಚುಕುತ್ತಾನೆ, ಕರ್ತವ್ಯಚ್ಯುತನಾದಾಗ ಸಿಗುವ ದಂಡ ಗುಲಾಮಗಿರಿ,

- ಸಮಾಜದ ಕೊನೆಯ ಮನುಷ್ಯನ ಮಾನ, ಮರ್ಯಾದೆ, ಸಮಯ, ಶಕ್ತಿಯನ್ನು ರಕ್ಷಿಸುವುದು ಆವಶ್ಯಕ, ಇಲ್ಲದಿದ್ದರೆ ಸ್ವಾತಂತ್ರ್ಯ ಅಪೂರ್ಣವಾಗುತ್ತದೆ.
- ಸಾಧನ ಶುದ್ಧವಾಗಿರದೆ ಲಕ್ಷ್ಯ ಪೂರೈಸಲು ಸಾಧ್ಯವಿಲ್ಲ, ಹಿಂಸೆಯಿಂದ ಪ್ರತಿಹಿಂಸೆ ಹೆಚ್ಚಾಗುತ್ತದೆ ಮತ್ತು ವಿಕಾಸ ನಿಂತುಹೋಗುತ್ತದೆ.
- ಇದನ್ನು ಪಡೆಯುವುದಕ್ಕಾಗಿ ಸಹನೆ, ಪ್ರಯತ್ನ, ಪ್ರಾಮಾಣಿಕತೆ, ತ್ಯಾಗ ಮತ್ತು ಶಿಸ್ತು ಅಗತ್ಯ. ಅದನ್ನು ಅಧಿಕಾರದಿಂದ ಹೊರಿಸಲಾಗುವುದಿಲ್ಲ, ಇವೆಲ್ಲವನ್ನೂ ನಾಗರಿಕನ ಸ್ವಂತ ಪ್ರೇರಣೆಯಿಂದಲೇ ಸಂಪಾದಿಸಬಹುದು.
- ಈ ಮೂಲ ಮೂಲ್ಯಗಳನ್ನು ಪಾಲಿಸಲು ಮತ್ತು ಅವುಗಳನ್ನು ರಕ್ಷಿಸಲು ಧೈರ್ಯಶಾಲಿಗಳಾಗಬೇಕು. ದೇವರನ್ನು ಬಿಟ್ಟು ಯಾವುದೇ ಭೌತಿಕ ಆಳ್ವಿಕೆಗೆ ಹೆದರುವುದು ಮನುಷ್ಯ– ಗೌರವಕ್ಕೆ ಅವಮಾನ, ಈಶ್ವರದ್ರೋಹ.
- ಅನುಮಾನ ಬಂದಾಗ, ಕೋಟ್ಯಂತರ ಬಡವರ ಆವಶ್ಯಕತೆಯನ್ನು ಕುರಿತು ಚಿಂತಿಸಿದಾಗ ಮಾರ್ಗ ಗೋಚರಿಸುತ್ತದೆ, ಸ್ಪಷ್ಟವಾಗುತ್ತದೆ.
- ದೇಶದ ವಿಕಾಸ ಮತ್ತು ಸುರಕ್ಷತೆಯಲ್ಲಿ ಭಾರತವಾಸಿಗಳ ವೈಯಕ್ತಿಕ ಲಾಭ ಮತ್ತು ಸ್ವಾರ್ಥ ಕೂಡಿಕೊಂಡಿರುತ್ತದೆ. ದೇಶದ್ರೋಹ ಅಸಹ್ಯವಾದುದು, ಇಲ್ಲದಿದ್ದರೆ ನಾವು ನಮ್ಮ ಹತ್ಯೆ ಮಾಡಿಕೊಳ್ಳುತ್ತೇವೆ.

ಈ ಪಟ್ಟಿ ಇನ್ನೂ ಬೇಕಾದಷ್ಟು ಉದ್ದ ಆಗಬಲ್ಲದು, ಆದರೆ ಇಷ್ಟು ವಿಷಯಗಳನ್ನು ನಾವು ಸಾಮೂಹಿಕವಾಗಿ, ವೈಯಕ್ತಿಕವಾಗಿ ವಿಚಾರ ಮಾಡಿದರೆ, ಪರಿಪಾಲಿಸಿದರೆ, ಬಾಪೂಜಿ ನೀಡಿರುವ ಪೈತೃಕದಾಯದ ವೈಭವ ಇನ್ನೂ ಹೆಚ್ಚು ಸ್ವಯಂಪ್ರಕಾಶವಾಗಿ ಮಿನುಗಬಲ್ಲದು. ನಾವು ಬಹಳ ಕಷ್ಟಪಟ್ಟು ಸ್ವಾತಂತ್ರ್ಯ ಪಡೆದಿದ್ದೇವೆ, ಅದನ್ನು ಸಾಕಾರಗೊಳಿಸಲು ಬಾಪೂಜಿಯ ಕೊಡುಗೆ ಅಪಾರವಾಗಿತ್ತು, ನಾವು ಸ್ವತಂತ್ರರಾಗಿರುವ ಯೋಗ್ಯತೆ ಹೊಂದಿದ್ದೇವೆಂದರೆ ನಾವೆಲ್ಲರೂ ರಾಷ್ಟ್ರಪಿತನ ಆಸ್ತಿಗೂ ಹಕ್ಕುದಾರರೇ. ಇದು ಸ್ಪಷ್ಟವಾಯಿತೆಂದರೆ ಬಾಪೂಜಿಯವರ ಬಲಿದಾನ ಸಾರ್ಥಕವಾಗುತ್ತದೆ, ಮತ್ತು ವೈತರಣಿಯಾಚೆಯಿಂದಲೂ ಅವರ ಅಂತರಾತ್ಮ ನಮಗೆ ಬಲ ನೀಡುತ್ತದೆ. ಕೊನೆಗೂ ಬಾಪೂಜಿ ಯಾವ ಹೊಸ ಧರ್ಮವನ್ನಂತೂ ರಚಿಸಲಿಲ್ಲ, ಎಲ್ಲ ಧರ್ಮಗಳ ಶಾಶ್ವತ ಸಾರವನ್ನು ಬಾಪೂಜಿ ಪುನರಾವರ್ತಿಸಿದರು. ಅದನ್ನು ಸಂಗ್ರಹಿಸಿ ಸಮಾಜದಲ್ಲಿ ಅದರ ಪ್ರಚಾರ ಮಾಡಿದರು. ಅವರು ಮಾಡಿದ ಧರ್ಮ ಪ್ರಚಾರ ಮತ್ತು ಕ್ರಾಂತಿಯ ಸ್ವರೂಪ ಬೇರೆಯದೇ. ಆದುದರಿಂದ ನಾವು ಬಾಪೂಜಿಯ ಕೊಡುಗೆಯನ್ನು ಸಾಧಾರಣ ಆವರಣದಲ್ಲಿ ಕುಳ್ಳಿರಿಸಿ ಅರ್ಥಮಾಡಿಕೊಳ್ಳಲಾಗುವುದಿಲ್ಲ. ಬಾಪೂಜಿ ನಮಗೆ ಮೂಲ ವಿಚಾರಗಳನ್ನು ನೀಡಿದ್ದಾರೆ, ನಮ್ಮ ಸಂಸ್ಕಾರಗಳನ್ನು ದೃಢಪಡಿಸಿದ್ದಾರೆ. ಈಗ ಮುಂದಿನ ಚಿಂತನ, ಮನನ ಮಾಡುವ ಕೆಲಸ ನಮ್ಮದು.

ಎಷ್ಟೋ ಜನ ಪರಂಪರಾವಾದಿ ಗಾಂಧೀವಾದದ ಗುತ್ತಿಗೆದಾರರು ಬಾಪೂಜಿ ಏನು ಮಾಡುತ್ತಿದ್ದರು, ಏನು ಹೇಳುತ್ತಿದ್ದರು ಅಥವಾ ಹೇಗೆ ಕುಳಿತುಕೊಳ್ಳುತ್ತಿದ್ದರು, ಏಳುತ್ತಿದ್ದರು, ಬಟ್ಟೆ ಉಡುತ್ತಿದ್ದರು ಎಂದು ಅವರ ಅನುಕರಣೆ ಮಾಡುತ್ತಾರೆ, ಅಥವಾ ಅಂಧಾನುಕರಣೆ ಮಾಡುತ್ತಾರೆ. ಇವೆಲ್ಲಾ ಅಭ್ಯಾಸಗಳೂ ತಪ್ಪು, ಬಾಪೂಜಿಗೆ ಅನ್ಯಾಯ ಮಾಡಿದಂತಾಗುತ್ತದೆ, ಕೊನೆಯಲ್ಲಿ ವಾದ–ವಿವಾದಕ್ಕೆ ಎಡೆಗೊಟ್ಟು ಗಾಂಧಿ ಸತ್ತುಹೋಗುತ್ತಾನೆ. ಇಂದಿನ ಯುವಪೀಳಿಗೆ ಬಯಸಿದ್ದೇ ಆದರೆ, ಗಾಂಧೀಜಿಯ ಕೊಡುಗೆಯನ್ನು ಆಚರಣೆಗೆ ತರಬಹುದು, ಅದನ್ನು ಬಹಳ ವೃದ್ಧಿಸಬಹುದು. ಕೊನೆಗಂತೂ ಗಾಂಧೀಜಿ ನಮ್ಮಂತಹ ಒಬ್ಬ ಸಾಧಾರಣ ಮನುಷ್ಯನೇ ಆಗಿದ್ದರಲ್ಲ, ಅವರು ತಮ್ಮ ಜೀವನದಲ್ಲಿ ನಿರ್ಭಯರಾಗಿದ್ದು ಸತ್ಯದ ಪ್ರಯೋಗ ಮಾಡಬಲ್ಲವರಾಗಿದ್ದರೆ, ನಾವೂ ಆ ಪದ್ಧತಿಯನ್ನು ಬೆಳೆಸುವ ಯೋಗ್ಯತೆ ಪಡೆದಿದ್ದೇವೆ ಮತ್ತು ಇದೇ ಗಾಂಧೀ ಕೊಡುಗೆಯ ನಿಜವಾದ ಉಪಯೋಗವಾದೀತು.

* * * *